ಬಿ. ಎಂ. ಶ್ರೀ.

ವಿ. ಸೀ.

ತವೀನದಲಿರತಿ । ದೊರಕಲರಿಯದೆಹಲವುಜನ್ಮಂ । ಕರದಸಂಚಿತಪುಣ್ಯವಿಲ್ಲದೆಮುನಿಪಕೇಳೆಂದ ॥ ೧೮ ॥ ತನ್ನಕಥೆಗಳಕೇಳು
ವಾಸಂ । ಪನ್ನಭಾಗ್ಯರಹೃದಯಕಮಲದ । ಕರ್ನಿಕೆಯಮನೆಮಾಡಿಪುಣ್ಯಶ್ರವಣಕೀರ್ತನನು । ಪನ್ನಗಾರಿಧ್ವಜನಘೌಘವ।
ಪಾರ್ನವಕೆವಡಬಾಮುಖಾನಳ । ಸಂನಿಭನುತಾನೈಸಲೇಸಂಪನ್ನನಹನೆಂದ ॥ ೧೯ ॥ ಬಳಿಕನಿರ್ಮಳಚಿತ್ತದಲಿಹರಿ । ನೆಲಸಿರಲು
ತಚ್ಚರಣದಲಿನಿ । ಶ್ಚಲವೆನಿಪನಿಜಭಕ್ತಿಸಂಭವಿಸುವುದುದೃಢವೆನಲು ॥ ಗಳಿತರಾಗದ್ವೇಷನಾತ್ಮನ । ನೆಲೆಯನರಿದರಿದರಿದುಮು
ಕುತಿಗೆ । ಸಲುವರಿಂತುಟೆಸಕಲವೇದಪುರಾಣಮತವೆಂದ ॥ ೨೦ ॥ ಭಾಗವತವೆಂಬೀಪುರಾಣದ । ಲಾಗಮಂಗಳಸಾರವನುಶುಕ।
ಯೋಗಿಗುಪದೇಶಿಸಿದನಾತನಶೇಷವಿಷಯದಲಿ ॥ ರಾಗಲವವಿಲ್ಲದೆಪರಿಕ್ಷಿತ । ಗಾಗಿಕರುಣಿಸುತಿರಲುಕೇಳಿದೆ । ನಾಗರುವರಧಿದ್ಯೈ
ವವೆನಿಸುವಶುಕನನುಜ್ಞೆಯಲಿ ॥ ೨೧ ॥ ಮುಕುತಿಗದರಿಂಮೂಲಸಾಧನ । ವಕೃತಕಾಚ್ಯುತಭಕ್ತಿಭಕ್ತಿಗೆ । ಸುಕೃತವಹಸಾ
ಧನವಲಾಹರಿಮಹಿಮಾಕಥಾಶ್ರವಣ ॥ ಸಕಲಸಿದ್ಧಿಗೆಸಾಧುಸಂಗತಿ । ವಿಕಳವಲ್ಲದವಿಪುಳಸಾಧನ । ಪಕಟಸಾಧನವರಿಯದಜ್ಞರು
ತೊಳಲುತಿಹರೆಂದ ॥ ೨೨ ॥ ಸೂತನಿಂತೆನಲಾಮಹಾಮುನಿ । ಜಾತದೊಳಗತ್ಯಧಿಕಗುಣವಿಖ್ಯಾತನಾಶೌನಕನುಹರಿಮಹಿಮಾ
ಮೃತಾಬ್ಧಿಯಲಿ ॥ ಪ್ರೀತಿಯಿಂದೋಲಾಡಬೇಕೆಂ । ಬಾತುರಾಂತಃಕರಣರಸಪುಳ । ಕಾತಿಶಯಸಂಫಲಿತವೆಂದನು ರೋಮಹ
ರ್ಷಣಿಗೆ ॥ ೨೩ ॥ ಲೀಲೆಯಿಂದವತರಿಸಿಸುರನರ । ಜಾಲತಿರ್ಯಗ್ಜಾತಿಯಲಿಶಿರಿ । ಲೋಲನೊಲಿದಾಡುವನುಲೋಕಹಿತಕ್ಕೆತನು
ವಿಡಿದು ॥ ಪಾಲಿಸುವನೋರಂತೆಪೇಳುವ । ಕೇಳುವುಪಪನ್ನರನುಪರಮಕೃ । ಪಾಳುಕೃಪೆಮಾಡುವನುನಿತ್ಯಾತುಮನುನಿಜ
ಪದವ ॥ ೨೪ ॥

ಪೀಠಿಕಾ ಸಂಧಿ ಒಕ್ಕಂ ಪದನು [illegible] ಮಂಗಳಮಸ್ತು.

ಎರಡನೆಯ ಸಂಧಿ.

ದೇವರ ಅವತಾರಗಳ ವರ್ಣನೆ.

ಸೂಚನೆ ॥ ಘೋರತಾಪತ್ರಯಪಾರಾ । ವಾರಪಾರಾಯಣವೆನಿಪ್ಪವ । ತಾರಕಥೆಯನುಸೂತನಭಿವರ್ಣಿಸಿದ
ನಚ್ಯುತನ ॥ ... ...

ಪದನು ॥ ಏಕನದ್ವಯನಮಳನಪಗತ । ಶೋಕನಕ್ರಿಯನಜನವಿಕ್ರಿಯ । ನಾಕೃತಿಪ್ರತ್ಯಯವಿದೂರನುಪರಮಪೂರು
ಷ ॥ ಲೋಕಸೃಷ್ಟಿಗೆಸಂಸ್ಥಿತಿಗೆಮಗು । ಳಾಕರಣೆಗೆವಿರಿಂಚಿವಿಷ್ಣುಶಿ । ವಾಖ್ಯಸಂಜ್ಞಾಭೇದವನುಧರಿಸಿದನುಕೇಳೆಂದ ॥ ೧ ॥
ಧಿಯಲಿನಿಜಯೋಗನಿದ್ರಾ । ಲಲನೆಗಭಿಮುಖನಾಗಿಪವಡಿಸಿ । ನಳಿನದೃಶನಿರೆನಾಭಿನಳಿನದಲುದಯಿಸಿದನಜನು ॥ ಸಲಹುವಾ
ದಾವನಾತನೆ । ತಿಳಿದುನೋಡಲುಶುದ್ಧಸತ್ವದ । ಬಳಿಕೆಯಲಿನಾನಾವತಾರದಬೀಜಕೇಳೆಂದ ॥ ೨ ॥ ಆದಿಯಲಿಸನಕಾದಿಯೋ
। ಳಾದನಮಳಬ್ರಹ್ಮಚರ್ಯವ । ನಾದರಿಸಿದನುಬಳಿಕಯಜ್ಞವರಾಹರೂಪಿನಲಿ ॥ ಮೇದಿನಿಯನೆತ್ತಿದನುಕಾತ್ತಿದ । ನಾದಿದೈತ್ಯ
ಕಲಿದುನಾರದ । ನಾದನೊರೆದನುಬಳಿಕಶಾಶ್ವತತಂತ್ರವನುಧರೆಗೆ ॥ ೩ ॥ ತಪದಲಖಿಳೇಂದ್ರಿಯಗಣವನಾ । ಕ್ಷಪಿಸಿನರನಾ
ಯಣಾಖ್ಯೆಯ । ಲುಪಚಿತವಮಾಡಿದನುನಾಲ್ಕರಲೈದರಲಿಜನಿಸಿ ॥ ಕಪಿಲನಾದನುಸಾಂಖ್ಯತತ್ವದ । ಕೃಪೆಯಮಾಡಿದನಾತ್ಮ
ಜಗದ । ನಿಪುಣತೆಯನಾರನೆಯಲರುಪಿದನತ್ರಿಸುತನೆನಿಸಿ ॥ ೪ ॥ ಆಮಹಾತ್ಮನುಯೋಗ್ಯನೆನಿಸಿಮ । ಹಾಮನುವನೇಳರಲಿ
ದ್ಧನು । ಗೋಮಿನೀಶನುವೃಷಭವೆಸರಲಿಯೋಗಿಚರಿಯೆಯನಾ ॥ ಪ್ರೇಮದಲಿನಡಸಿದನುಸುಜನ । ಕ್ಷೇಮದಲಿಪೃಥುವಾಗಿ
ನು । ಭೂಮಿಯನುಕೇಳೆಂಟನೆಯಲೊಂಭತ್ತನೆಯಲೆಂದ ॥ ೫ ॥ ಧರಿಸಿಮತ್ಸ್ಯಾಕೃತಿಯಲಾಂತನು । ಧರೆಯನುರುಶೈಂ
ದಲಿಹಂ । ದರಮಹಾದ್ರಿಗೆಬೆನ್ನನಿತ್ತನುಕೂರ್ಮರೂಪದಲಿ ॥ ಶರಧಿಯೊಳಗುದಿಸಿದನುಧನ್ವಂ । ತರಿಯೆನಿಸಿಸುಧೆವಿಡಿದುಹರಿ
ತ್ರರಲಿಹನ್ನೊಂದರಲಿ ಹನ್ನೆರಡರಲಿಕೇಳೆಂದ ॥ ೬ ॥ ನಾರಿಯಾದನುಸುರತತಿಗೆಹದಿ । ಮೂರರಲಿಸೇರಿಸಲುಸುಧೆಯನು ।
ರಹರಿಯಾಗಿಸಲಹಿದನಾತ್ಮಕಿಂಕರನ ॥ ಧಾರುಣಿಯದಾನವನುಬೇಡಲು । ದ್ವಾರಪಾಲಕನಾದಬಲಿಗವ । ತಾರಹದಿನಾಲ್ಕ
ದಿನೈದರಲಿಕೇಳೆಂದ ॥ ೭ ॥ ಪರಶುರಾಮಾಖ್ಯೆಯಲಿಕೊಂದನು । ದುರುಳದುಷ್ಟಕ್ಷತ್ರಿಯರನವ । ತರಿಸಿಹದಿನಾರನೆಯ
ತ್ತಿಂದುಸೂಳಿನಲಿ ॥ ಧರೆಗೆವೇದವ್ಯಾಸನೆನವಿ । ಸ್ತರಿಸಿಪುರುಷಾರ್ಥವನುಹದಿನೇ । ಳರಲಿವೇದಪುರಾಣಶಾಸ್ತ್ರಂಗಳನು
ದ ॥ ೮ ॥ ದೇವಕಾರ್ಯವಮಾಡಲೋಸುಗ । ರಾವಣನಕುಲಸಹಿತತಡೆಗಡಿ । ದಾವಿಗಡನನುಜನನುರಾಘವನಾಗಿರಕ್ಷಿ
[illegible] ॥ ಶೆಲುಹದಿನೆಂಟು[illegible] । ದೇವಕೀದೇವಿಯುರಿಗಾವಸು । ದೇವಗಂದುದಿಸಿದನುಮೇಲವತಾರವೆರಡರಲಿ [illegible]
ಮುಕೃಷ್ಣರುಶುಭ್ರಮೇಘ । ಶ್ಯಾಮ[illegible]ರುದಿಸಿಮುರಿದರು । ಭೂಮಿಭಾರಾಯುತದ[illegible] ॥ ೧೦ ॥
ನುಜನಿಸಿದಪನಾ । ಗಾಮಿಕಾಲದ[illegible]ಲನಿ । ನಾಮನೆನಿಸಲುಬುದ್ಧನಿಪ್ಪತ್ತೊಂದನೆಯಲೆಂದ ॥ ೧೧ ॥

ಧ್ಯಾಂಶಕದಲ । ಸ್ಖಲಿತವಿಕ್ರಮವಿಷ್ಣುಕೀರ್ತಿಯು । ಲಲನೆಯುಲಿಸಲೆಕಲ್ಕಿನಾಮದಲುದಿಸಿಕಲಿಯುಗದ ॥ ಖಳನೃಪರಸಹ್ಮರಿಸಿ
ಧರ್ಮವ । ನೆಲೆಗೊಳಿಸಿಕೃತಯುಗವಸಲೆಕೈ । ಗೊಳಿಸಿಗೋದ್ವಿಜದೇವಕುಲವನುಸಲಹಿದಪನೆಂದ ॥ ೧೧ ॥ ಜಗದುದರನವ
ತಾರಸಂಖ್ಯೆಯು । ಬಗೆಯುಬಲ್ಲವರಾರುಭೂಪಾ। ಶುಗಳನಭ್ರದತಾರೆಗಳನಾಸಾರಬಿಂದುಗಳ ॥ ತೆಗದುಲೆಕ್ಕಿಸಬಹುದುಭೃಗ್ವಾ।
ದಿಗಳುಸುರನರವರರುಮನ್ವಾ । ದಿಗಳುಹರಿಯಂಶಾಂಶಸಂಭವರಿವರುಕೇಳೆಂದ ॥ ೧೨ ॥ ಇವರುಕೆಲರಂಶದಲಿಕಲೆಗಳ । ಲವ
ತರಿಸಿದವರಿವರೊಳಗೆಯಾ । ದವಶಿರೋಮಣಿಕೃಷ್ಣನಾಸಾಕ್ಷಾತವಿಷ್ಣುವಲ ॥ ದಿವಿಜರಿಪುಗಳುಹೆಚ್ಚಿದರೆಮುರಿ । ದವರನಾಶ್ರಿ
ತದೇವಗೋದ್ವಿಜ । ನಿವಹವನುನೆರೆಸಲಹುವನುಯುಗಯುಗದಲವತರಿಸಿ ॥ ೧೩ ॥ ಮುರಹರನಮಂಗಳವೆನಿಪ್ಪೀ । ಪರಮಜ
ನ್ಮರಹಸ್ಯವಿದನಾ। ದರದಲೋದುವನಾವನುದಯಾಸ್ತಮಯಸಮಯದಲಿ ॥ ಧರೆಯೊಳಾವನುಕೇಳುವನುದು । ಸ್ತರವೆನಿಪದುಃ
ಖಾಂಬುಧಿಯನು । ತ್ತರಿಸಿನಿಜಸಾಂಬ್ರಾಜ್ಯಪದದಲಿನಿಲುವರನರೆಂದ ॥ ೧೪ ॥ ಪರಮಪುರುಷೋತ್ತಮನಲೀಲಾ । ಚರಿತವಿದ
ನಾರರಿವರಜಭವ । ಸುರಮುನೀಂದ್ರರಿಗರಿದಲೈನಿರ್ಮಾಯೆಯುಲಿಹರಿಯು ॥ ಚರಣಯುಗಳಸರೋಜಭಕತಿಯು । ಪರಿಮಳ
ವನೋರಂತ್ರಬಿಡದಾ । ದರಿಸಬಲ್ಲಮಹಾತ್ಮನರಿವನುಮುನಿಪಕೇಳೆಂದ ॥ ೧೫ ॥ ಅವರೆಧನ್ಯರುಪೂರ್ವಪುಣ್ಯರು । ಭುವನಹದಿ
ನಾಲ್ಕರಲಿದೇವ । ಪ್ರವರಮಣಿಮಕುಟೋಪಲಾಲಿತಪಾದಪೀಠವನು ॥ ಅವಿರಳಾತ್ಮರತಿಯಿಂದನಿಜಭಾ । ವವನುಮಾಳ್ಪವರಾ
ರವರುನೆರೆ । ಭವದಬೇಗೆಯುಭವಣಿಗೆಗೆಬಹರಲ್ಲಕೇಳೆಂದ । ೧೬ । ವೇದಸನ್ಮತವಿದುಪುರಾಣವಿ । ದಾದಿಪುರುಷಚರಿತ್ರವಿದರೊ
ಳು । ವಾದುಗುಟ್ಟದೆಕೇಳ್ದರೈಚಿತ್ತಾವಧಾನದಲಿ ॥ ಬಾದರಾಯಣನಂತರಂಗದ । ಭೇದವನುಕಳೆದಮೃತವಿದನಾ । ಸ್ವಾದಿಸದ
ರರಿಗೆಸುನಿಶ್ಚಯವಿಲ್ಲಗತಿಯೆಂದ ॥ ೧೭ ॥ ಭಾಗವತವೆಂಬೀಪುರಾಣವ । ನಾಗಮಂಗಳಸಾರವನುಶುಕ । ಯೋಗಿಗುಪದೇಶಿಸಿದ
ನಾತನಶೇಷವಿಷಯದಲಿ ॥ ರಾಗಲವವಿಲ್ಲದಪರೀಕ್ಷಿತ । ಗಾಗಿಕರುಣಿಸುತಿರಲುಕೇಳಿದ । ನಾಗರುವರಧಿದೈವವೆನಿಸುವಶುಕನನು
ಜ್ಞೆಯಲಿ । ೧೮ ॥ ಅನಶನವ್ರತದಲಿಪರೀಕ್ಷಿತ । ಜನಪನಿರೆಭಾಗೀರಥಿಯಪಾ । ವನವೆನಿಸಿದುತ್ತರದಿಶಾಕೂಲದಲಿಪರಿವರಿಸಿ ॥
ಮುನಿನಿಕರನೆರದಿರಲುಕರುಣಾ । ವನಧಿವೇದವ್ಯಾಸನಂದನ । ನನುಪಮಂಗಭಿವರ್ಣಿಸಿದನಿದನಧಿಕಕರುಣದಲಿ ॥ ೧೯ ॥ ಅಧ್ಯ
ಯನವಾಯ್ತೆನಗೆಸುಕೃತದ । ಸಿದ್ಧಿಯಿಂತುಟೆಭೂಪ್ರಕರುಣರ । ಸಾಬ್ಧಿಯಲ್ಲಾಮುನಿಕುಲಾಗ್ರಣಿಮೂಢಜೀವರನು ॥ ಉದ್ಧ
ರಿಸಿದನಲ್ಲೈಮಹೀಪತಿ । ಬದ್ಧಕರಪುಟನಾಗಿಪರಮ । ಶ್ರದ್ಧೆಯಲಿಕೇಳಿದನುಬಹಳಪುರಾಣಸಂಹಿತೆಯ ॥ ೨೦ ॥ ಶೃತಿಗಳೈದವು
ಹೇಳಲೆನ್ನಯ । ಮತಿಗೆಗೋಚರವಹುದೆಗುರುಶೀ । ಕ್ಷಿತದಬಲದಲಿತನ್ನಮತಿಗೋಚರಿಸಿದಂದದಲಿ ॥ ಹಿತವೆನಲುಹರಿಗುಣಚರಿ
ತ್ರಾ । ಮೃತಭರಿತಭಾಗವತವರಸಂ । ಹಿತೆಯನೊರೆವೆನುಕೇಳಿರೈಚಿತ್ತಾವಧಾನದಲಿ ॥ ೨೧ ॥ ಮುಕುತಿಗದರಿಂಮೂಲಸಾಧನ।
ಸುಕೃತವಾಚ್ಯುತಭಕ್ತಿಭಕತಿಗೆ । ಸುಕರವಹಸಾಧನವಲಾಹರಿಗುಣಕಥಾಶ್ರವಣ ॥ ಸಕಲಸಿದ್ಧಿಗೆಸಾಧುಸಂಗತಿ । ವಿಕಳರಲ್ಲದ
ವಿಮಳಸಾಧನ । ವಕಟಸಾರವನರಿಯದಜ್ಞರುತೊಳಲುತಿಹರೆಂದ ॥ ೨೨ ॥ ಸೂತನಿಂತೆನಲಾಮಹಾಮುನಿ । ಜಾತದೊಳಗ
ತ್ಯಧಿಕಗುಣವಿ । ಖ್ಯಾತನಾಶೌನಕನುಹರಿಮಹಿಮಾಮೃತಾಬ್ಧಿಯಲಿ ॥ ಪ್ರೀತಿಯಿಂದೋಲಾಡಬೇಕೆಂ। ಬಾತುರಾಂತಃಕರಣರಸ
ಪುಳ । ಕಾತಿಶಯಸಂಪನ್ನನೆಂದನುರೋಮಹರುಷಣಿಗ ॥ ೨೩ ॥ ಲೇಸುಮಾಡಿದೆತಂದೆತಂನಭಿ । ಲಾಷೆಯನೆಸೂಚಿಸಿದೆವೇದ।
ವ್ಯಾಸಮುನಿಕಂಠೀರವನಲಾಪರಮಗುರುನಿನಗೆ ॥ ಏಸುಧನ್ಯರೊಶಿವಶಿವಾವಿಂ । ನೇಸುಜನ್ಮಾಂತರದಸುಕೃತದ । ರಾಶಿತಮ
ಗಿಂದಿನಲಿಮಾಣದೆಫಲಿತವಾಯ್ತೆಂದ ॥ ೨೪ ॥ ಆವಯುಗದಲಿರಚಿಸಿದನುತಾ । ನಾವುನೈಪ್ರೇರಕಪುರಾಕೃತ। ಕೋವಿದನೆಕಾರಣ
ವದೇನುಪುರಾಣಸಂಹಿತೆಗೆ ॥ ಭಾವಿಸಲುವಿಷಯಪ್ರಯೋಜನ । ವಾವುದದನೆಲ್ಲವನುಪರಮಾಕೃ । ಪಾವಲೋಕನದಿಂದಕರುಣಿ
ಸಬೇಹುದೆಮಗೆಂದ ॥ ೨೫ ॥ ಕರುಣಿಸೈಜನನಾಥಗಂತಃ । ಕರಣಭೇದವಿದೆತ್ತಣಿಂದಾ । ಯ್ತರಿದಲಾತನುಧರ್ಮವಕಟಂ
ನಾರಜಿಳಲಿಸದೊ ॥ ಪರಿಹರಿಸಿತೆಂತೀಪುರಾಣದ । ಪರಮತತ್ವರಹಸ್ಯವಿದನೆಮ । ಗೊರೆಯಬಹುದಭಿವರ್ಣಿಸೈಶ್ರದ್ಧಾನ್ವಿತರಿ
ಗೆಂದ ॥ ೨೬ ॥ ಅನಶನವ್ರತದಲಿಪರೀಕ್ಷಿತ । ಜನಪತಿಗೆಕಾರಣವದೇನೈ । ದನುಜಹರನಕಟಾಕ್ಷವೀಕ್ಷಾಪಾತ್ರಭೂತನಲೈ ॥
ಮುನಿಪನತಿದುರ್ಲಭನಲೈದರು । ಶನಕೆಪುಣ್ಯಾಧಿಕರಿಗಲ್ಲದೆ । ಜನಿಸಲರಿವುದೆತತ್ಪದಾಂಬುಜಸಂಗಸುಖವೆಂದ ॥ ೨೭ ॥ ಅರಿ
ದಲಾಮಾನುಷ್ಯವದರೊಳ । ಗರಿದುಭಾರತವರುಷಸಂಭವ । ವರಿದುಮತ್ತದರೊಳಗೆವಿಪ್ರತೆಯಾಚಡದರೊಳಗೆ ॥ ಹರಿಪರಾಯ
ಣರೆನಿಪಸತ್ಪುರು । ಷರಲಿಸಂಗತತನ್ಮುಖೋದ್ಗತ । ಹರಿಕಥಾಮೃತಪಾನವತಿದುರ್ಲಭವಲಾಯೆಂದ ॥ ೨೮ ॥ ಎಂದಡಾಮು
ನಿವಚನಜನಿತಮು । ಕುಂದಪದಸಂಹಿತೆಯಪರಮಾ । ನಂದರಸಪುಳಕದಲಿಮುಳುಗಿದಚಿತ್ತವೃತ್ತಿಯಲಿ ॥ ಎಂದನಾಸೂತನು
[illegible]ಕರ । ನಸಿದಲ್ಲವಂದಿತಚಾರುಚರಣ । ದ್ವಂದ್ವವೇದವ್ಯಾಸಮುನಿಗಭಿನಮಿಸಿಹರ [illegible] । ೨೯ ॥ ಜನಿಸಿದಾಗಳೆವಿಧಿಗೆ
[illegible]ದು ॥ ಮುನಿಪರಾಶರಸೂನುಕರೆಯ
[illegible] । ಘನವಿರಹತಾಪದಲಿಪುತ್ರಾಯೆಂದು [illegible]
[illegible]ರಮಟ್ಟುಗಳನೋ । ಯೆನಿಸಿದಾಸಕಲಾತ್ಮಶುಕಯೋಗಿಗೆನ [illegible]ಂಬೆ ॥ ೩೦ ॥ ಸ್ವಾನುಭವಸಂಸಿದ್ಧ

ಜವಿ । ಜ್ಞಾನದೀಪವೆನಿಪ್ಪನಿಗಮಶಿ । ರೋನಿತಾಂತರಹಸ್ಯವೇದಪುರಾಣಸಂಹಿತೆಯ ॥ ಜ್ಞಾನಸಾಧಕರೆನಿಸಬಹಳ । ಜ್ಞಾನತಿ
ಮಿರಾಂಧರಿಗೆಕರುಣಿಸಿ । ದಾನಿಖಿಳಮುನಿವಂದ್ಯಶುಕಮುನಿಪದಕೆಶರಣೆಂದ ॥ ೩೧ ॥ ಎಂದುಸೂತನುಗುರುಪದಾಬ್ಜ । ದ್ವಂ
ದ್ವವನುಮನದೊಳಗೆನೆನದಖಿ । ವಂದಿಸುತವಿಘ್ನೇಶವಾಗ್ದೇವಿಯರಿಗಭಿನಮಿಸಿ ॥ ನಿಂದುನಿತ್ಯಾತುಮನನಿಜಪದ । ದ್ವಂದ್ವದಲಿ
ಮನಮುಳುಗಿಮುಗುಳುರೆ । ಕಂದೆರದುತೊಡಗಿದನುಮುನಿಸಂಪ್ರಶ್ನೆಗುತ್ತರವ ॥ ... ॥ ೩೨ ॥

ಅಂತು ಸಂಧಿ ೨ಕ್ಕಂ ಪದನು ೭೭ಕ್ಕ ಮಂಗಳಮಸ್ತು,

ಮೂರನೆಯ ಸಂಧಿ.

ನಾರದರು ವ್ಯಾಸರಿಗೆ ಬೋಧಿಸಿದ್ದು.

ಸೂಚನೆ ॥ ವಿದಿತಜೀವದಯಾಪರನುನಾ । ರದನುವೇದವ್ಯಾಸಮುನಿಪನ । ಹೃದಯದಜ್ಞಾನಾಂಧ
ಕಾರವಕಳದುಬೋಧಿಸಿದ ॥ ... ...

ಪದನು ॥ ದ್ವಾಪರದಮೊದಲಲಿಮಹಾಮುನಿ । ದ್ವೀಪವೇದವ್ಯಾಸನುದಿಸಿದ । ನಾಪರಾಶರಋಷಿಗೆಲೋಕಹಿತೈಕವಿಗ್ರ
ಹನು ॥ ಆಪರಮಋಷಿಸತ್ಯವತಿಯಲಿ । ತಾಪಸಾಂಗದಲೀಲೆಮಿಗೆಲ । ಶ್ರೀಪತಿಯಪರಮಾಂಶಸಪ್ತದಶಾವತಾರದಲಿ ॥ ೧ ॥
ತ್ರಿದಶವಂದಿತನೊಂದುದಿನವರ । ನದಿಸರಸ್ವತಿಯವರಭಾಗದ । ಬದರಿಕಾಶ್ರಮದೊಳಗೆಲೋಕಹಿತೈಕಚಿಂತೆಯಲಿ ॥ ಸದಮ
ಳಾಂತಃಕರಣನೇಕಾಂ । ಗದಲಿಕುಳ್ಳಿರಲಖಿಳಜೀವರ । ಹೃದಯದಜ್ಞಾನಾನುಬಂಧಭ್ರಾಂತಿಯನುಕಂಡ ॥ ೨ ॥ ಕಂಡುಭವ
ತಾಪದಲಿಹೊದಕುಳಿ । ಗೊಂಡುಮೊರಳುವದೇಹಿಗಳಗೆ । ಳ್ಮಂಡೆಯನಮಾಯಾವಿನಿರ್ಮಿತವೈಪರೀತ್ಯವನು ॥ ಹಿಂಡುವೆ
ನುಮಾಯೆಯನುಮಾಮ । ಗಂಡುಗೆಡಿಸಿದಳಕಟೆನುತಕೈ । ಕೊಂಡುಲೋಕಹಿತಾರ್ಥದೀಕ್ಷಿತನಾದನಾಮುನಿಪ ॥ ೩ ॥ ಶ್ರುತಿ
ಮಹಾರಾಶಿಗಳುಮಾನುಷ । ಮತಿಗಗಮ್ಯವೆನುತ್ತಮತಿಸಂ । ಸ್ಮೃತವೆನಲುಮಾಡಿದನುಶಾಖಾಭೇದವನುತೆಗದು ॥ ಹಿತವಲಾ
ತ್ರೈವರ್ಣಿಕದಸು । ಸ್ಥಿತಿಗೆಮಿಕ್ಕಮನುಷ್ಯರಿಂಗನು । ಚಿತವೆನುತಭಾರತಪುರಾಣಂಗಳನುವಿರಚಿಸಿದ ॥ ೪ ॥ ನಡದುಭೂತಹಿ
ತಾರ್ಥದಲಿತಂ । ನೊಡಲುಸವದುದುಸವೆಯದೆನ್ನಯ । ಜಡತೆಮನದೊಳಗಕಟಶಿವಶಿವರುಜೆಮಹೌಷಧದ ॥ ಗಿಡವಹಿಡಿದಂ
ತಾಯ್ತುದುಗುಡದ । ಕಡಲಲದ್ದುದುಚಿತ್ತತಿಳಿವಿನ । ತಡಿಗೆಚಾಚುವರಾರೆನುತಮರುಗುತ್ತಕುಳ್ಳಿರ್ದ ॥ ೫ ॥ ಮೊದಲಲಾಚಾ
ರೋಪದೇಶದ । ವಿದಿತಪಟುಧರ್ಮದಲಿನಡೆತ । ಪ್ಪದುಹುತಾಶನಭಕುತಿಯಲಿಬಾಹಿರನುತಾನಲ್ಲಾ ॥ ಪದುಮಮಿತ್ರನಸೇವೆಗಾ
ನಲ । ಸಿದವನಲ್ಲಾಮ್ನಾಯಶಾಸ್ತ್ರದ । ಸದಮಳಧ್ಯಯನದಲಿಕೊರತೆಗಳಿಲ್ಲತನಗೆಂದ ॥ ೬ ॥ ಕುಂದುಹೆಚ್ಚುಗಳಿಲ್ಲಸಂಧ್ಯಾ ।
ವಂದನದನಿಯಮದಲಿಲೋಕ । ದ್ವಂದ್ವಹಿತಸಾಧನದಕರ್ಮದಲಿಲ್ಲವಿಕಳತನ ॥ ಕಂದುಕಸರಿಕೆಮನದಲೆನ್ನನು । ಬಂದಿವಿಡಿದಿ
ದೆಭಾಪ್ರುವಿಧಿಕೃತ । ವೆಂದಡೆನ್ನನುನೆಗುವರರಿವುಳ್ಳವರುಹಾಯೆಂದ ॥ ೭ ॥ ಭಾರತವ್ಯಾಜದಲಿವೇದದ । ಸಾರವನುಪೌರಾಣದ
ಲಿವಿ । ಸ್ತಾರವೆನಲರುಹಿದೆನುಸಕಲಜಗದ್ಧಿತಾರ್ಥದಲಿ ॥ ಆರುತನ್ನಂದದಜಗದ್ಧಿತ । ಕಾರಿಗಳುತನ್ನಂತೆಚಿತ್ತವಿ । ಕಾರಿಗಳುಶಿವ
ಶಿವಶಿವಾಯನಮಶ್ಶಿವಾಯೆಂದ ॥ ೮ ॥ ಇಂತುತನ್ನಯಮನದತಮದ । ಧ್ವಾಂತವನುಕಾಣಿಸದೆಮನದಲಿ । ಚಿಂತಿಸುತತಾನೀವಿ
ಚಾರಿಸೆಮುನಿಕುಲೋತ್ತಮನು ॥ ದಂತಿಕೆನಸಿನಕುಳಿಯೊಳಗೆಬಿ । ದ್ದಂತೆಬಹುಚಿಂತೆಯಲಿಮಾಯಾ । ಭ್ರಾಂತಿಯಲಿಬಿಗಿವಡದ
ವೊಲುಕುಳ್ಳಿರ್ದದುಗುಡದಲಿ ॥ ೯ ॥ ಇರಲುತೋರಿದುದೊಂದುತೇಜದ । ಹೊರಳಿಹುರಿಗೊಂಡಭ್ರದಲಿದಿನ । ಕರಸಹಸ್ರದಕಾಂ
ತಿಗಳಕಾಲುವೆಯಕಡಲಂತೆ ॥ ದುರಿತವಾರ್ಶೀವೈರಿಭವಭಯ । ಗರಳಗಾರುಡಧಾರಿವಿಶ್ವಂ । ಭರಭಕುತಿಸಂಸಾರಿನಾರದನೆಸೆದನ
ಭ್ರದಲಿ ॥ ೧೦ ॥ ಎಡದಕೈಯ್ಯವಿಪಂಚಿಯಲಿನಯ । ವಡದಹರಿನಾಮಾಮೃತವಕಿವಿ । ಗುಡಿತೆಯಲಿಕುಡಿಕುಡಿದುಕೊಬ್ಬಿದರೋ
ಮಹರುಷದಲಿ ॥ ಒಡಲತ್ರೊನದಾಡುತ್ತಮುಂದಡಿ । ಯಿಡುತಭೂತಹಿತಾರ್ಥದಲಿಬಿಡು । ಜಡೆಯಬಹಳಬ್ರಹ್ಮವಿದ್ಯಾಮೂರ್ತಿ
ನಡೆತಂದ ॥ ೧೧ ॥ ನೊಸಲತಿಲಕದಕೆದರಿದಳಕದ । ನಸುದೆರದಲೋಚನದಬೊಮ್ಮದ । ಬೆಸುಗೆಯಲಿಬಿಗಿವಡದಚೇತನಕರ
ಣವೃತ್ತಿಗಳ ॥ ಬಿಸಿರುಹಾಕ್ಷದಮಾಲೆತೊಳಶಿಯ । ಹೊಸನನೆನೆಯದಂಡೆಗಳಮುನಿಪತಿ । ವಸುಧೆಗಗ್ಗದಪುಣ್ಯಫಲಕೈಗೂಡಲಿಳಿ
ತಂದ ॥ ೧೨ ॥ ಅಯಿಳಿವತೇಜವನುಕಾಣುತ । ರಾಯವೇದವ್ಯಾಸಮುನಿನಾ । ರಾಯಣಧ್ಯಾನದಲಿನಾರದನೆಂದುನೆರೆತಿಳಿದು ॥
ಅಯಿತನ್ನಯಬಯಕೆಬೇಸರು । ಬೀಯ್ಯವಾಯ್ತೆನೆನುತಲಾನಿ । ರ್ಮಾಯನೆದ್ದನುಮುಕುಳಿತಾಂಜಲಿಶಿಷ್ಯಜನಸಹಿತ ॥ ೧೩ ॥
ಆಸನವನೊಲಿದಿತ್ತುತೇಜೋ । ರಾಶಿಯಂಘ್ರಿಗೆನಮಿಸಿವೇದ । ವ್ಯಾಸಮುನಿಕೈಮುಗಿದುಭಜಿಸುತ್ತಿರಲುಭಕುತಿಯಲಿ ॥ ಲೇಸು
ಮಾಡಿದೆಸಾಕಿದೇತಕೆ । ವೈಶಿಕದಉಪಚಾರಬಾಯನು । ತಾಸನದಹೊರೆಯಲ್ಲಿಕುಳ್ಳಿರಿಸಿದನುಕೈವಿಡಿದು ॥ ೧೪ ॥ ಕುಶಲವೇನಿ

ಸ್ವಾತ್ಮನಂತ । ವಿಷಯಸುಖಸರ್ತಿಯೊಬರಿಮರ್ಮುಖ । ವಿಷಯವರ್ತಿಯೊನೀಮಹಾಭಾರತದಕರ್ತೃವಲ ॥ ವಸುಧೆಗದ್ಭುತ
ವಾಯ್ತುಹಿತವಾ । ಯ್ತುಸಮಸಾಹಸನಾದೆಮತ್ತೆಯು । ಮುಸುಡುದುಂಮಾನವನುತಳದಂತಿರ್ದುದೇಕೆಂದ ॥ ೧೫ ॥ ಜಗದಕಂ
ಗಳಕತ್ತಲೆಯುಮು । ತ್ರಿಗೆಯುಗೆಗಸುವತೀವ್ರತೇಜದ । ಗಗನಮಣಿಮಂಡಲವನಂಡಲಿಯುತ್ತಲಾಶಿಖಿರ ॥ ನಗೆಯುಳಾನಿನ
ಗಿಂದುನೀನೆ । ದುಗುಡವನುತಾಳಿದಡೆತಿಳುಹುವ । ಬಗೆಯುಬಲ್ಲಮಹಾತ್ಮರಾರ್ಯ್ರತಂದೆಹೇಳೆಂದ ॥ ೧೬ ॥ ಉಂಟುತನ್ನಯಮನದ
ಮರವೆಯು । ಗಂಟುಮರೆಯಾಕಿನ್ನುನಗುವವ । ರೆಂಟುಮಡಿಸಗಲದಕೆನಾಚಿದಡಹುದೆಪರಿಹಾರ ॥ ವೆಂಟಣಿಸಿನಿಜನ್ಮೈಮನಸ್ಯದ ।
ಗಂಟಲನುಮುರಿವಡವನೀಮಡಿ । ನಂಟರಿರಲಿನ್ನಂಜೆನೆಂದನು ಮುನಿಮುನೀಶ್ವರಗೆ ॥ ೧೭ ॥ ಕರುಣಿಸ್ಯೆಕಾರಣವನೆಂನ
ಯು । ಕರಣಕಲುಷವಿದನ್ಯರಿಗೆಗೋ । ಚರಿಸಲರಿಯದು ವಿಷ್ಣುನಾಭಿಸರೋಜಭವಭವರು ॥ ಪರಮಶ್ಯೈಷ್ಣವಧರ್ಮಶೀ
ಷ್ಠಾ । ಗುರುವಲಾಮಾಜಗದಸಚರಾ । ಚರದಚೇತನಸಾಕ್ಷಿನಿಸಗಜ್ಞಾನವಿಲ್ಲೆಂದ ॥ ೧೮ ॥ ಎನಲುನಸುನಗೆವೆಳಗಿನಲಿ
ಮುನಿ । ಮನದಕತ್ತಲೆತೆರಳಕೆಗೆನುಡಿ । ದನುನಯಜ್ಞನುಕಾರದಾಂಕನುತಿಳಿಯೆಹಿತವೆನಲು ॥ ಮುನಿಲಲಾಮನೆಕೇಳು
ನೀನೆನ । ದನಿತುಲೋಕಹಿತಾರ್ಥವೆಂನಯು । ಮನಕೆಬಾರದುಸಜ್ಜನಾಭಿಪ್ರಾಯವಲ್ಲೆಂದ ॥ ೧೯ ॥ ಅಕ್ಕಟಕಟಾಬರಿದೆಬ
ಯಲಿಗೆ । ತುಕ್ಕಿದೆಯಲಾತಂದೆಲೋಕರು । ತಕ್ಕಿಸಾಧನವೆಂದುಪರ್ವತ್ರಯವನೀನೊರೆಯು ॥ ತಕ್ಕುಧೈವರ್ನಿಸದೆಸುರಕುಲ ।
ಚಕ್ರವರ್ತಿಯಕೀರ್ತಿಯನುಬಳ್ಳ । ಮಿಕ್ಕವೇದಪುರಾಣಶಾಸ್ತ್ರದಲೇನುಫಲವೆಂದ ॥ ೨೦ ॥ ಹೇಳುತಿದೆಲಾತಾನೆನಿಂನಯು । ಮೇ
ಲುಮುಸುಕಿನದುಗುಡಚಿತ್ತದ । ತಾಳ್ಕೆಯಕಾಲಾಟಧರ್ಮಾರ್ಥಾದಿಸಾಧನವ ॥ ಹೇಳಿದಂದದಲಮುಳಲಕ್ಷ್ಮೀ । ಲೋಲಚಾರಿ
ತ್ರವನುಲೋಕಕೆ । ಹೇಳುವಡೆವಂಚನೆಯುದುಪ್ರ್ವತನಿಷ್ಠೆಯಾಯ್ತೆಂದ ॥ ೨೧ ॥ ಏನನೋದಿದಡೇನುಶಾಸ್ತ್ರವ । ನೇನಕೇಳಿದ
ಡೇನುಹರಿಮಹ । ಮಾನುವರ್ನನೆಯಿಲ್ಲದಾಕಾವ್ಯದಲಿಫಲವೇನು ॥ ಏನುಹಿತವೀಜಗಕೆನೀನಿಂ । ನೇನಮಾಡಿದೆತಂದೆನಿನ್ನಲಿ ।
ನೀನ್ಭಾವಿಸಿಕೊಂಡುಬಯಲಭ್ರಾಂತಿಬೇಡೆಂದ ॥ ೨೨ ॥ ಕೇಳಿದಡೆಮಾತಕದಮೂಲೋ । ನ್ಮೂಲನವಲಾಕೇಳಿಮನದೊ
ಳ । ಗಾಲಿಸಿದರೆಡೆಗೊಂಡತಾಪತ್ರಯಕೆಪರಿಹಾರ ॥ ನಾಲಿಗೆಯಕೊನೆಗೊಂಮೆನಾಮದ । ಘಾಳಿನಸುಸೊಂಕಿದಡೆಕಾಲ । ವ್ಯಾಳ
ವಿಷವೀರ್ಯೋಪಶಮಗಾರುಡವಲಾಯೆಂದ ॥ ೨೩ ॥ ನವರಸಾಲಂಕಾರಲಕ್ಷಣ । ಸವನಿಸಲಿಮೇಣುಳಿಯಲಘವನ । ಪವನಮಿ
ತ್ರಚರಿತ್ರಪಾತ್ರಪವಿತ್ರವೆನಿಸಿದಡೆ ॥ ಕವಿತೆಗಿದುಮೇಫಲವಲಾಮಿ । ಕ್ಕವರವರ್ನನೆವಿಫಲವಾಯಸ । ನಿವಹನಿರ್ಮಿತತೀರ್ಥಹಂ
ಸನಿಸೇವ್ಯವಲ್ಲೆಂದ ॥ ೨೪ ॥ ಶ್ಲೋಕವಂದರೊಳಿರಲಿದೋಷವ । ನೇಕವದರೊಳಗೊಡನೊಡನೆಲೋ । ಕೈಕನಾಥನದಿವ್ಯ
ಮಂಗಳನಾಮವೆಸದಿರಲು ॥ ಸಾಕಲಾಸರ್ವಾರ್ಥಸಿದ್ಧಿಗೆ । ಲೋಕಲೋಚನನಿರಲುತಿಮಿರಾ । ನೀಕವೇಗುವುದಿಲ್ಲವಾಗಿದ್ದೇ
ನುಫಲವೆಂದ ॥ ೨೫ ॥ ಶ್ರೀನಿವಾಸಪದಾಬ್ಜಭಕುತಿವಿ । ಹೀನವಾದರೆವಿಮಳಸಂಪಿ । ಜ್ಞಾನದಲಿಸಹಿತಿಲ್ಲಫಲಪರಮಾರ್ಥವಿಂನ
ಳಿದ ॥ ಸ್ನಾನಹೋಮತಪೋವ್ರತಾನು । ಷ್ಠಾನಕೃತ್ಯದವಿಫಲತೆಯನಿಂ । ನೇನಹೇಳುವೆನಿಹಪರಕೆಹರಿಭಕುತಿಹಿತವೆಂದ ॥ ೨೬ ॥
ಪತಿಪದಾಂಬುಜಭಕುತಿಸುಪತಿ । ವ್ರತೆಯರಿಗೆಯಿಹಪರದಸೌಖ್ಯ । ಸ್ಥಿತಿಗೆಕಾರಣವಲ್ಲದನ್ಯಥವುಂಟೆಪುರುಷಾರ್ಥ ॥ ಕ್ಷಿತಿಯ
ಮೂಢಮನುಷ್ಯರಿಂಗ । ಚ್ಯುತಪದಾಂಬುಜಭಕುತಿಯಲ್ಲದೆ । ಗತಿಯದೇನ್ಯೈತಂದೆಬೇರೆನಾಣೆಹೇಳೆಂದ ॥ ೨೭ ॥ ಮೂಢರಿಗೆ
ಮೂರ್ಖರಿಗೆಯೋಗಾ । ರೂಢರಿಗೆಶ್ವಾರರಿಗೆಕರ್ಮ । ಪ್ರೌಢರಿಗೆಪಂಡಿತರಿಗಜ್ಞರಿಗಾಗಮಜ್ಞರಿಗೆ ॥ ಗೂಢಮಂತ್ರಿಕರಿಂಗೆ
ಮಂತ್ರದ । ಗಾಢಗರ್ವಿತರಿಂಗೆವಿಷ್ಣುವೆ । ರೂಢಿಗಗ್ಗದದೈವವೆಂದನುಮುನಿಗೆಮುನಿರಾಯ ॥ ೨೮ ॥ ಬಲ್ಲಿರಿದನೆಲ್ಲವನುಕವಿಗ
ಳ । ಬಲ್ಲಹನೆನಿನಗಿಂದುಬಿಂಣಿಪ । ರಿಲ್ಲಲ್ಯೆಸರ್ವಜ್ಞರಾಯನೆನಿನೆಬಲ್ಲ್ಯೆಸೆ ॥ ಸೊಲ್ಲನೊಂದನುಸೂಚಿಸಿದೆನಿದ । ರಲ್ಲಿಹಿತವೀಜಗ
ಕೆಸಂಶಯ । ವಿಲ್ಲವೇದಪುರಾಣಶಾಸ್ತ್ರಸಮಗ್ರತೆಯಲೆಂದ ॥ ೨೯ ॥ ತಿಳಿದುನೋಡ್ದೈನೀನೆನಿಂನಲಿ । ಜಲಜನ್ನಶನವತಾರವೆಂಬು
ದ । ನಿಳೆಗೆಪರಮಹಿತಾರ್ಥಸಾಧನವಾಗಿತನುವಿಡಿದು ॥ ಬಳಿಕಿದೇದೊಂದಾಯ್ತುಭವಭಯ । ಜಲಧಿಪತಿತರಿಗೀವ್ರದ್ವೈನಿಜ ।
ಲಲಿತಚರಿತಕರಾವಲಂಬನವೆಂದನಾಮುನಿಪ ॥ ೩೦ ॥ ಲೇಸುಧರ್ಮಹಿತಾರ್ಥವೆಂದೇ । ಶಾಶಿಸಿದೆನೀನರ್ಥಕಾಮಾ । ಭ್ಯಾಸವ
ನುಸಹಜಾನುಶಕ್ತರಿಗೊರೆದುಕೆಡಿಸಿದೆಲ ॥ ವ್ಯಾಸವಚನವಿದೆಂದುಸಲವಿ । ಶ್ವಾಸಿಸಿತುಜಗವಿಂನಿಡನುಹೊರ । ಬೀಸಲರಿವುದೆಲೋ
ಕಕಂಟಕನಾದೆನೀನೆಂದ ॥ ೩೧ ॥ ಅರುತಂನಂದದಲಿವಿದ್ಯಾ । ಪಾರದರ್ಶಿಗಳಾತ್ಮಸುಖಸಂ । ಸಾರಧರ್ಮನಿವೃತ್ತಿಯಿಂದಹುದೆಂ
ದುಬಲ್ಲವರು ॥ ಸಾರವೆನಿಪಚ್ಯುತನಚರಣಸ । ರೋರುಹದಸೌಗಂಧಸುಧೆಯನು । ಘೋರತಾಪತ್ರಿತಯತಪ್ತರಿಗೆರೆಯಬೇಕೆಂ
ದ ॥ ೩೨ ॥ ಬಿಟ್ಟುನಿಜಧರ್ಮವನುಹರಿಪದ । ವಿಷ್ಟರವನಾಶ್ರೈಸಿಮಗುಳೆಡೆ । ವಟ್ಟಿಯಲಿತನುಪತನವಾದಡೆಯೋಗವಿಚ್ಯುತ
ರು ॥ ಕೆಟ್ಟರಾರುಂಟ್ಯೆಸಧರ್ಮದ । ಬಟ್ಟೆಯಲಿನೆರೆನಡೆದುಹರಿಯನು । ಮುಟ್ಟದವರಿಂಗಾವುದಿಹಪರಸೌಖ್ಯವಾಯ್ತೆಂದ ॥ ೩೩ ॥
ದೇವಲೋಕಂಗಳಲಿಪಾತಾ । ಳಾವಳಿಯಲೋರಂತೆತೊಳಲುವ । ಜೀವರಿಂಗಾವುದುಸುದುರ್ಲಭವದಕೆಯತ್ನವನು ॥ ಕೋ
ವಿದನೆಮಾಡೂದುಮತ್ತಂ । ತೀವಿಷಯಸುಖದುಃಖದಂತಿರೆ । ದೈವವಶದಲಿಬಹುದಯತ್ನದಲೆಂದನಾಮುನಿಪ ॥ ೩೪ ॥ ಹರಿ

ಪರಾಯಣರನ್ವರಂಪದ | ಉರುಳುವರೆದುರ್ಗತಿಗೆವಿಷ್ಣು | ಸ್ಮರಣೆಮನದೊಳಗಿರಲುಮಾಯಾಭ್ರಾಂತಿಹೊದ್ದದಲ್ಲಿ || ಸುರ
ರೊಡನೆಸುಖದಿಂದಸಲೆಸಂ | ಚರಿಸಿಕೀರಿಮಂತ್ರರಲಿತತ್ವ | ಜ್ಞರಲಿಮೇಣುದುಭವಪಿತಿಲ್ಲದುವಿಮುಕ್ತರಹರೆಂದ ||೩೫||
ಈತ್ರದರ್ಥವಿಚಾರವೆನಗನು | ಭೂತವಾಯ್ತೆಲೆಮುನಿಪಬಂದೆನ | ತೀತಭವದಲಿಶಾಪನಿರ್ಮಿತಶೂದ್ರಯೋನಿಯಲಿ || ಮಾತೆ
ಗೊಬ್ಬನೆಮಗನುತಂನನು | ನೀತಿವಿದೆಕಳುಹಿದಳುಯೋಗಿ | ವ್ರಾತಶಿಶ್ರೂಷೆಗೆಸಮಾಹಿತ್ವನಾದೆನಾನೆಂದ ||೩೬|| ಚಾಪಳವನೆ
ರೆತ್ತೊರದುಕಳದೆನು | ಕೋಪಮದಮತ್ಸರವನಾತ್ರಿಣಿ | ಧೋಪಕರಣವನುಳಿದುತೆನಗನುವರ್ತಿಯಾಗಿರಲು || ಆಪರಮಯೋ
ಗಿಗಳಕೃಪೆತನ | ಗೋಪಳಾದಳುಭವಭಯದಕೃತ | ಪಾಪಬಂಧನನ್ವೈದೆಬಿಟ್ಟುದುಮುನಿಪಕೇಳೆಂದ ||೩೭|| ವಿಪ್ರನರಶೇಷೆ
ಯಲಿತಾನಿಂ | ತಪ್ರವಾದದಲಿರಲುಕೆರದುಮು | ಖಪ್ರಸಾದವನಿಕ್ಕಿದರುತನಗೊಂದುಸಮಯದಲಿ || ತತ್ಪ್ರಭಾವದಲವರಚರ
ಣದ | ಲಪ್ರಮಾಣಭ್ರಾಂತಿಬೀತುದು | ಸುಪ್ರತಿಷ್ಠಿತನಾದೆನೆಲೆಮುನಿನಾಥಕೇಳೆಂದ ||೩೮|| ಇಂತುಚಾತುರ್ಮಾಸ್ಯದೊಳಗೋ |
ರಂತೆಮಾಡುತ್ತಿರಲುಲಕ್ಷ್ಮೀ | ಕಾಂತಗುಣಚಾರಿತ್ರನನುಕೇಳಿದೆನನುಜ್ಞೆಯಲಿ || ಸಂತವಾದುದುವಿಷಯಭೋಗ | ಭ್ರಾಂತಿಬೀ
ತುದುಹರಿಪದಾಬ್ಜದ | ಚಿಂತೆಯಲಿಬೇರೊಂದನರಿಯದುತಂನಮನವೆಂದ ||೩೯|| ತೀರಿತವರಿಗೆನಿಯಮಪವರಲಿ | ತೀತನೆ
ನಗಭಿಲಾಷೆಕೃಷ್ಣಕೆ | ಥಾರಸಾಯನಪಾನಪರನಾನಂದಧಾತ್ರಿಯಲಿ || ಬೇರುವರಿದುದುಚಿತ್ತವೃತ್ತಿಯ | ನಾರುಕಂಜರುಕೃಷ್ಣ
ಮಾಂಭ್ರಸ | ರೋರುಹದ್ವಯವಿರಹವಿಹ್ವಲನಾದೆನಾನೆಂದ ||೪೦|| ಈಪರಿಯಲೆಂನಿರವನಂತ | ಸ್ತಾಪವನುಕಾಣುತ್ತಪರಮ
ಕೃ | ಪಾಪರರುಹೋಗುತ್ತಹಸುಳೆಗೆಹಿತವಿದೆಂದೆನಗೆ || ಶ್ರೀಪತಿಪ್ರತಿಪಂನವಿಜ್ಞಾ | ನೋಪದೇಶವನಿತ್ತುಚಿತ್ತದ | ತಾಪವನು
ಬೆಂಕೊಂಡುಬಿಜಯಂಗೈದರವರೆಂದ ||೪೧|| ಅರಿದೆನಾನದರಿಂದಮಾಯೆಯ | ಹೊರಿಗೆಯನುಪರನಾತ್ಮತತ್ವದ | ನಿರಿಗೆಯ
ನುಜಗವೆಂನೆಳಗೆಜಗದೊಳಗೆತಾನೆಂಬ || ಮರವೆಮರೆಯಾಯ್ತೆಂಬನುರವೆಯ | ಮರದುನೆರೆಮುಕ್ತಾಭಿಮಾನವ | ಮುರಿದು
ತನ್ಮಯನಾಗಿಚರಿಸುತ್ತಿಹೆನುನಾನೆಂದ ||೪೨|| ಎಂದಡಿಂತೆಂದನುಪರಾಶರ | ನಂದನನುಕೇಳುತ್ತಪರಮಾ | ನಂದರಸದಲಿಮು
ಳುಗಿಮುನಿಕುಲಕೌಸ್ತುಭಂಗೆರಗಿ || ಹಿಂದಣಾಜನ್ಮದವಿವೇಕವಿ | ದೆಂದುನಿನಗೆಂತಾಯ್ತುಸಡವಳಿ | ಯಂದವೆಂತುಪದೇಶಕು
ತ್ತರಕಾಲಹೇಳೆಂದ ||೪೩|| ಆದತನಧರಿಸನಪಮನೆಮೋ | ಲಾದವೃತ್ತಾಂತವನುಬಹಳದ | ಯೋದಧಿಗಳೆನಗಿತ್ತುವಿಜ್ಞಾ
ನೋಪದೇಶವನು || ಹೋದರನರಾಕಸ್ಮಿಕದಲೆನ | ಗಾದುದಿತ್ತಲುಮಾತೃರಕ್ಷಾ | ಭೇದಕರ್ದಮದೊಳಗೆಬಿದ್ದುದುತಂನಮನ
ವೆಂದ ||೪೪|| ತನಗೆಲೋಗೆರಶೀವೆತಂನಯ | ಜನನಿಗೆಂನೆಯರಕ್ಷೆಯರದರ | ಮೊನೆಗಣೆಯಪ್ರಾಯದಲಿಮರುಗುತ್ತೇಳೆನು
ತಿರಲು || ಧನವಿಹೀನೆಯನಾಥೆಗೋದೊ | ಹನಕೆಹೋಗುತಮೆಟ್ಟಿದಳುಪ | ರ್ವನನುಮಾಡಿದಳುಸರ್ಪದಂಶಿಕೆಯಾಗಿಕೇಳೆಂದ||
ಪರುಷನ್ವೈದರಲಾಯ್ತುತಾಯಿಗೆ | ಮರಣಕೇಳೆಲೆಮುನಿಪತಾನೆಂ | ಟರದನರಿಯೆನುದೇಶಕಾಲವಿಶೇಷವಿಷಯದಲಿ || ಕರಣಪಾ
ಟವವಿಲ್ಲತಂನನು | ಹೊರವಬಾಂಧವರಿಲ್ಲಜನ್ಮಾಂ | ತರಸುಕೃತಕರ್ಮಾನುರಕ್ಷಿತನಾದೆನಾನೆಂದ ||೪೬|| ಅಹಹಬದುಕಿದೆನೀಶ್ವ
ರಾನು | ಗ್ರಹವಲಾತನಗೆನುತಸಲೆಸಂ | ನಿಹಿತವಾದುದುಬುದ್ಧಿನಿರ್ಮಳಯೋಗಮಾರ್ಗದಲಿ || ಗೃಹವನುಳಿದೆನುಕುಹಕಿಗಳ
ಸಂ | ಗ್ರಹವತೊರದೆನುವಿಷ್ಣುಮಾಯೆಯ | ಮಹಿಮೆಯೆಂದರಿದಲ್ಲಿರದೆಹೊರಹೊಂಟೆನಾನೆಂದ ||೪೭|| ಬಿಟ್ಟುನಡದೆನುಘನನ
ದೀವನ | ಪಟ್ಟಣಗ್ರಾಮೋಪಶಲ್ಯದ | ಘಟ್ಟಬೆಟ್ಟಂಗಳನುಬಹುದೇಶಂಗಳನುಕಳದು || ನಟ್ಟಡವಿಯೊಕ್ಕೆನುಮಹೋರಗ | ದು
ಷ್ಟಮೃಗಶಾರ್ದೂಲಭೀಕರ | ವಿಟ್ಟದೆಮತರುಗುಲ್ಮಕೀಚಕವೇತ್ರಗಹ್ವರವ ||೪೮|| ಹಸಿವುನೀರಡಿಕೆಯಲಿತನುತು | ಟ್ಟಿಸಿ
ತುತುಟಯೊಣಗಿದುದುತುಡುಕುವ | ಬಿಸಿಲಝಳದಲಿಬಹಳಮಾರ್ಗಶ್ರಮದಭಾರದಲಿ || ಬಸವಳಿದುಬರತೊಂದುನದಿಯಲಿ |
ಮುಸುಡುಕೈಕಾಲ್ಗಳನುತೊಳದೆನು | ಬಸುರುತುಂಬಲುಕುಡಿದೆನುದಕವನೆಂದನಾಮುನಿಪ ||೪೯|| ಪರಿಹೃತಶ್ರಮನಾಗಿಕುಳ್ಳಿ |
ರ್ದರುನದೀತೀರದಲಿವಿಶ್ವಂ | ಭರನಮಂಗಳಮೂರ್ತಿಯನುಮನದೊಳಗೆಸೆರೆವಿಡಿದು || ಎರಡುದೋರದಭಕ್ತಿಸುಖದಲಿ | ಕರಗಿ
ತನ್ಮಯನಾಗಿಸಲೆಮೈ | ಮರದುಭಕುತಿಸುಖಕ್ಕೆಸಂಮುಖನಾಯ್ತುಮನವೆಂದ ||೫೦|| ಏನನೆಂಬೆನುವಿಷ್ಣುಮೂರ್ತಿ | ಧ್ಯಾನಸುಖ
ಸಾಂಬ್ರಾಜ್ಯಪದದೊಳ | ಗಾನುಮಯ್ಯಾನುತ್ತಪುಳಕಾಶ್ರುಗಳಲೆಸದಿರಲು || ಧ್ಯಾನದರುಶಿತಮೂರ್ತಿಯಂತ | ರ್ಧಾನವಪಡೆದು
ದುಕ್ಕೈಗೆಬಂದನಿ | ಧಾನತಪ್ಪಿದವೋಲುಕಳವಳಿಪಿದೆನುತಾನೆಂದ ||೫೧|| ಮತ್ತೆಮುಂನಿನವೋಲುನಿರ್ಮಳ | ಚಿತ್ತದಲಿಕುಳ್ಳಿ
ರ್ದಹೃದಯದ | ಲುತ್ತಮಶ್ಲೋಕನನರಸಿಕಾಣದೆವನಾಂತದಲಿ || ಹೆತ್ತತಾಯ್ಪಸುಳೆಯನುಬಿಟ್ಟಂ | ತತ್ತನಡವಿಯುಲಾರನಾಥಂ |
ಗುತ್ತರವನೀವವರೆನುತಹಂಬಲಿಸಿದೆಸೆದೆಸೆಗೆ ||೫೨|| ಅಡವಿಯಲಿಶಿಶುವೊರಲುತಿರೆಹೆ | ತ್ತೊಡಲುಮರುಗುವವೋಲುಸಪತಿ
ಯ | ರೊಡಲುಮರುಗದಲೈದಯಾಂಬುಧಿಭಕ್ತವತ್ಸಲನು || ನುಡಿದನಶರೀರೋಕ್ತಿಯಲಿಮೈ | ಗೊಡೆನುನಿನಗೀಜನ್ಮದಲಿಕಂ |
ಗೆಡೆದಿರುತ್ತರಭವದಲೆಂನನುಕಾಣಬಹುದೆಂದ ||೫೩|| ಅಂಜಬೇಡೆಲೆಮಗನೆಮಾಯೆಯ | ಮಂಜುಕಾಡದುತಂನಚಿಂತೆಯ |
ಕಂಜಸಖನಿರೆನಿನ್ನನೆಂದೇತೋರಿದೆನುನಿನಗೆ || ರಂಜಿಸುವನಿಜಮೂರ್ತಿಯನುಪಿಮಿ | ಪಂಜರನುತಾನೆನುತಸೋಕ್ತಿಸು | ಧಾಂಜನನ

ನಿತ್ತನುವಿವೇಕವಿಲೋಚನಭ್ರಮೆಗೆ ॥ ೫೪ ॥ ನುಡಿಯನಾಲಿಸುತವನಿಯಾಲಿತಂ । ನೊಡಲನೀಡಾಡಿದನುಪುಳಕದ । ಗುಡಿಯಕಟ್ಟಿದನಕ್ಷಿಯುಗಳದಪೂರ್ಣಕಳಶದಲಿ ॥ ಸೊಡರುಕಂನಡಿನಿಜವಿವೇಕಂ । ಬಡೆದನುನಬುದ್ಧಿಗಳನಲುತಾ । ನೊಡೆಯನಾಜ್ಞೆಯನಿದಿರುಗೊಂಡೆನುಮುನಿಪಕೇಳೆಂದ ॥ ೫೫ ॥ ಬಳಿಕಶೇಷವಿಶೇಷವಿಷಯಾ । ವಳಿಯಲಿಚ್ಛೆಯತೊರೆದುಸುಕೃತ್ಯವಿ । ನೊಲುಮೆಯನುಪಾರುತ್ತಹರಿಚಿಂತೆಯಲಿತಾನಿರಲು ॥ ಘಳಿಲನೈತಂದುದುಕೃತಾಂತನ । ಬಳಗವಿಂಚಿನಪ್ರೋಲುತಃನದ । ನುಳಿದೆನಾಂತೆನುಶುದ್ಧವೈಷ್ಣವತನುವನಿಡನೆಂದ ॥ ೫೬ ॥ ಇರಲಿರಲುನುತ್ತಂತ್ರೆಕಾಲಾಂ । ತರದಲಳಿದುದುಭುವನವೂರಂ । ಬುರುಹಭವಪಡಿಸಿದನುದಧಿಯುಲಾತನುದರದಲಿ ॥ ಬೆರಸಿಹೊಕ್ಕನುಲೋಕದೊಡನಿರ । ಲಿರಲುಸಾವಿರಯುಗದಕಡೆಗವ । ತರಿಸಿದನುಬಳಿಕಾತನುಶ್ವಾಸದಲಿಕೇಳೆಂದ ॥ ೫೭ ॥ ಬಳಿಕತಾಸಲ್ಲಿಂದಮೇಲ । ಸ್ಖಲಿತನಾದೆನುಲೋಕಹದಿನಾ । ಲ್ಕೊಳಗುಹೊರಗೆಂಬದೆವಿಹಾರಸ್ಥನವಾಯ್ತೆನಗೆ ॥ ಜಲಜಗೃಹನೀವೀಣೆಯನುತನಿ । ಗೊಲಿದುಕೃಪೆಮಾಡಿದನುನಿಜಮಂ । ಗಳಚರಿತ್ರಕಥಾಸುಗಾಯಕನೆಂದುಪತಿಕರಿಸಿ ॥ ೫೮ ॥ ತಂದೆಕೇಳದುಭುತವನಾನಾ । ನಂದಪರವಶನಾಗಿನಿಡುಸರ । ದಿಂದತನ್ನನುಪಾಡಲೆನ್ನನುಕರದನಿವನೆಂದ ॥ ಬಂದುಬಂದಡಿಗಡಿಗೆತನ್ನಯ । ಮುಂದೆನಿಂದಿರ್ದವನಭಯವೆನ । ಲೆಂದಡಿನಿತೂವಿಷ್ಣುಭಕ್ತರಸಂಗಫಲವೆಂದ ॥ ೫೯ ॥ ಇಂತುವೈಷ್ಣವಸಂಗಲಬ್ಧ । ಕಾಂತಕೀರ್ತಿಶ್ರವಣಫಲದಿನ । ನಂತಸೈಶ್ವರ್ಯವನುನಿಜವಿಜ್ಞಾನವೈಭವವ ॥ ಅಂತರಾಂತಕರಹಿತವೆನಿಸಜ । ನ್ಮಾಂತರಪ್ರಣೆಯವನುನೆರೆಕೆಡ । ದಂತೆಪಡೆದೆನುವಿಷ್ಣುಭಕ್ತಿಗಸಾಧ್ಯವೇನೆಂದ ॥ ೬೦ ॥ ಈಸಕಲಧರ್ಮದಲಿಹರಿಪರಿ । ತೋಷಕಾರಣವಾವುದದುವೇ । ಲೇಸುಹೃದಯವಿಶುದ್ಧಿಹರಿಪದಭಕುತಿಕಾರಣವು ॥ ಆಸಮಗ್ರವೆನಿಪ್ಪಭಕುತಿಗೆ । ದಾಪಿಸವ್ಯಜ್ಞಾನಸಿದ್ಧಿಪ । ರಾಶರಾತ್ಮಜಕೇಳಿದೈಕ್ರಮಯೋಗಸದವೆಂದ ॥ ೬೧ ॥ ಅವುದಾಗಲಿಕರ್ಮವೆಂಬುದು । ಜೀವಸಂಶ್ರತಿಹೇತುಮತ್ತದು । ಮಾನನತೆಯನುಮಾಳ್ಪುದಚ್ಯುತನಲಿಸಮರ್ಪಿಸಲು ॥ ಜೀವರನುಬಂಧಿಸದುಮುಟ್ಟದು । ದೇವದೇವನಪದವನೆಡೆಯಲಿ । ಭಾವಿಸಲುತಂನಿಂದತಾನೆವಿನಾಶವಹುದೆಂದ ॥ ೬೨ ॥ ದರ್ಪದಲಿಬೆಂಬತ್ತಿಬಿಡದೈ । ತಪ್ಪಭೀಕರಕಾಲಸಾಂಜ್ಞಕ । ಸರ್ಪಮುಖದಲಿಬಿದ್ದುಸಾವಮನುಷ್ಯರಾಯತವ ॥ ತಪ್ಪಿಸೈನೀನಲ್ಲದನ್ಯರಿ । ಗೊಪ್ಪಲರಿವುದೆತಂದೆಕೃತಸಂ । ಕಲ್ಪನಾಗೀಕ್ಷಣದಿತಂನಭಿಮತವಸಲಿಸೆಂದ ॥ ೬೩ ॥ ಹೇಳಿದೆನುತಾಪತ್ರಯೋಗ । ವ್ಯಾಳವಿಷಜಾಂಗುಲಿಕವನುಶಿರಿ । ಲೋಲನಮಳಚರಿತ್ರಗುಣನಾಮಾಮೃತವನೆರೆದು ॥ ಪಾಲಿಸೈಭವಭಜ್ಞಮತಿಗಳ । ಕೇಳಿದಿಟವನುಮಾಡದೆನುತವೆ । ಬೀಳುಕೊಂಡನುನಾರದನುನಾರಾಯಣಾಯೆನುತ ॥ ೬೪ ॥ ಆಯಶೋನಿಧಿನೋಡನೋಡಲು । ವಾಯುಪಥದಲಿಸಕಲಜೀವನಿ । ಕಾಯನಿಜಬಾಂಧವನುತಾಪತ್ರಿತಯತಸ್ತರಿಗೆ ॥ ಗಾಯಕೋತ್ತಮತಂತ್ರಿಯಲಿನಾ । ರಾಯಣನನಾಮಾಮೃತೈಕರ । ಸಾಯನವಬೀರುತ್ತಬಿಜಯಂಗೈದನೊಲವಿನಲಿ ॥ ೬೫ ॥ ಧನ್ಯರಾರ್ಸ್ನರಪರಮಮುನಿಪನೀ । ಧನ್ಯರೀಭುವನದೊಳುಭಾಪುರೆ । ಪಂನಗಾರಿಧ್ವಜನಚರಣಸರೋಜಭಕುತಿಯಲಿ ॥ ಸಂನಹಿತರಿಂನಾರುಮಾಯೆಯ । ಗಂನಗತಕವಗೆಲುವುಪಾಯವ । ವರ್ನಿಸುವರಾವಮಳನಿತ್ಯಾತುಮನನಿಒಪದವ ॥ … … … … … ॥ ೬೬ ॥

ಅಂತು ಸಂಧಿ ೩ಕ್ಕಂ ಪದನು ೧೫೪ಕ್ಕಂ ಮಂಗಳಮಸ್ತು

ನಾಲ್ಕನೆಯ ಸಂಧಿ.

ಸೂಚನೆ ॥ ಭಕುತಿಯೋಗಕ್ಷೇಮನಿರ್ವಾ । ಹಕನುತಾನೆಂಬೀಪ್ರತಿಜ್ಞೆಯ । ಪ್ರಕಟವಾಗಲುಸೆಲಹಿದನು
ಹರಿಪಾಂಡುನಂದನರ ॥ … … …

ಪದನು ॥ ಸೂತಹೇಳ್ದೈವಿಮಳಗುಣನಿ । ಖ್ಯಾತವೇದವ್ಯಾಸನಂತ । ರ್ಜಾತಜಾಡ್ಯದಜವನಿಕೆಯಮರೆಗಳದುನಾರದನು ॥ ಭೂತಹಿತವಿಗ್ರಹನುಸದಭಿ । ಪ್ರೀತವನುತಿಳುಹಿದರೆಕೇಳ್ದವಿ । ಧೂತಸಂಶಯನೇನನೆಗಳ್ದನದನುಹೇಳೆಂದ ॥ ೧ ॥ ಎನಲುಶೌನಕಕೇಳ್ದನಾರದ । ಮುನಿಲಲಾಮನುಹೋಗಲಿತ್ತಲು । ನೆನದುಕುಳ್ಳಿರ್ದನುಸಮಾಧಿಸ್ಥಿತಿಯಲಾಮುನಿಪ ॥ ದನುಜರಿಪುಪದಭಕುತಿನಿರ್ಮಳ । ವೆನಿಪದಂತಃಕರಣದಲಿಕಂ । ಡನುಚರಾಚರಜೀವಸಂಕ್ಲೇಶದಪರಂಪರೆಯ ॥ ೨ ॥ ಮಾಯೆಯನುಮಾಯೇಶನಹನಾ । ರಾಯಣನನಾಮಾಯೆಯಲಿನಿ । ರ್ದಾಯದಿಂದೊಳಬಿದ್ದುತೊಳಲುವಜೀವರಾಶಿಗಳ ॥ ಕಾಯಕಾರಾಗಾರದಿರವನು । ಮಾಯೆಯನುತಲೆದೂಗಿಗೆಲುವಡು । ಪಾಯವಿದಕೇನೆಂದುಮಗುಳ್ವಿಚಾರಪರನಾದ ॥ ೩ ॥ ಮತ್ತೆಕಂಡನುನೋಡಿನಿರ್ಮಳ । ಚಿತ್ತದಲಿಮಾಯಾಗುಣದದು । ರ್ವೃತ್ತವನುಮಾಣಿಸುವಸಾಕ್ಷಾದ್ವಿಷ್ಣುಭಕ್ತಿಯನು ॥ ಹೆತ್ತತಾಯಿರಲಿನ್ನುಶಿಶುಗಳಿ । ಗೆತ್ತಣದುಪರಿಭವವಿದನ್ನಘ । ಕತ್ತಲೆಯೊಳಿರ್ದಮಳಮಾಣಿಕವಾದುದದರಿಂದ ॥ ೪ ॥ ಅಹಹೆಶಿವಶಿವವಿಷ್ಣುಭಕ್ತಿಯ । ಮಹಿಮೆತಾಯ್ಗೆಸಮಾನವೆಂದೆನ । ಬಹುದುಕಟ್ಟುವಳನ್ವೆಮಾಯಾಪಾಶದಲಿಮಗನ ॥ ವಿಹಿತಜನನಗಳೊಂದುಜನ್ಮ ।

ಕ್ಕಹುದುದುರ್ಲಭವಿಡದು ಬೆನ್ನಲಿ। ಬಹವಿಮುಕ್ತಿಯನೀವಭಕುತಿಗದಾರುಸರಿಯೆಂದ ॥೫॥ ಇಂತುಭಾವಿಸಿನೋಡಿತಿಳಿದಾ।
ಕೌತುಕದಮಾಯಾಗುಣದವಿ। ಭ್ರಾಂತಿಯನುಜೀವರಿಗೆಹಿತವಹವಿಷ್ಣುಭಕುತಿಯನು ॥ ಸಂತವಹುದದರಿಂದಜೀವರ। ಚಿಂತೆ
ಬಿಡುವುದೆನುತ್ತಶಾಂತ। ಸ್ವಾಂತನಾದನು ಕೂಡಗಿದನುಭಾಗವತಸಂಹಿತೆಯ ॥೬॥ ಎತ್ತಣೊಲುಮೆಯದೀಪ್ರಪಂಚೋ। ತ್ಪ
ತ್ತಿವಿಲಯಸ್ಥಾನವೇದವ। ನಿತ್ಯನಾವನಜಂಗಮಾವನನರಿಯರೀಬುಧರು ॥ ಮೃತ್ತಿಕೆಯಘಟದಂತೆಹುಸಿಗುಣ। ವೃತ್ತಿಯಾವನ
ಲಾಸ್ಯಸಂವಿ। ತ್ಸ್ವರೂಪಪರಾಪರೈಕಧ್ಯಾನಪರನಾದ ॥೭॥ ವಿವರಿಸುವೆನಿದರೊಳಗೆನಿಃಕೈ। ತವವೆನಿಪನಿಜಧರ್ಮವನುವಾ।
ಸ್ತವವೆನಿಪವಸ್ತುವನುನಿರ್ಮತ್ಸರಿಗರರಿವಂತೆ ॥ ಶ್ರವಣಮಾತ್ರದಲಖಿಳಲೋಕದ। ವಿವಿಧತಾಪದ್ರುಮದಬೇರನು। ರವಿಗೆತ್ತೋ
ರ್ಪುದಮಾಳ್ಪುದಿದಕೈವಲ್ಯಸಂಪದವ ॥೮॥ ಹೇಳದರೆಪುರುಷಾರ್ಥಭಾಜನ। ಕೇಳಧಿಕದಿಂದೊಮ್ಮೆಮನುಜರು। ಕೇಳದರೆ
ಕೃತಕೃತ್ಯರಹರೆಂದೆಂಬುದಚ್ಚರಿಯೆ ॥ ಕೇಳಲನುಗ್ಗದವರಮನದೊಳ। ಗಾಲಯವಮಾಡುವನುಲಕ್ಷ್ಮೀ। ಲೋಲನಾಕ್ಷಣಕೀ
ಪುರಾಣಪ್ರವರಸಂಹಿತೆಯ ॥೯॥ ವಿಷಮವೇದಮಹಾಸುರದ್ರುಮ। ವೆಸವಭಾಗವತಾಖ್ಯಫಲವಿದು। ವಸುಮತಿಗೆಶುಕಮುಖ
ಸರೋರುಹಗಳಿತವಾಯ್ತಿದೆಲ ॥ ರಸಿಕರಿರಭಾವುಕರಿರಾಸೇ। ವಿಸುವುದೊಡಲುಳ್ಳನ್ನಕಕಟಾ। ಹಸಿತಿಹಂಗೆನಿಧಾನಬರೆತಿರಿದು
ಣ್ಣಲೇಕೆಂದ ॥೧೦॥ ಕೇಳಿರೈಸುಕೃತಿಗಳುಕಾಲನ। ದಾಳಿಯಲಿಧೃತಿಗೆಡದೆಕರ್ಮದ। ಕೋಳದಲಿಕಾಳ್ಪುಳದುಸಾಯದೆಕಾಮ
ಬಾಡಜನ ॥ ಜ್ವಾಲೆಗೊಳಗಾಗದೆಭವೋಗ್ರ। ವ್ಯಾಳಮುಖದಲಿಶಿಲುಕದೀಸಿರಿ। ಲೋಲಲೀಲಾಚರಿತನಾಮಾಮೃತವನಿದ
ನೆಂದ ॥೧೧॥ ಇಂತುಲೋಕಹಿತೈಕನಿಯತ। ಸ್ವಾಂತಚೇಷ್ಟಿತನಾದಮುನಿವೇ। ದಾಂತಸಾಗರಸಾರಸಂಗ್ರಹವೆನಲುವಿರಚಿಸಿದ॥
ಕಂತುಪಿತಪದಭಕ್ತಿಭವದು। ಃಖಾಂತಕರವೆಂದರಿಯದವರರಿ। ವಂತೆವಿಸ್ತರಿಸಿದನುಭಾಗವತಾಖ್ಯಸಂಹಿತೆಯ ॥೧೨॥ ಸಕಲ
ಧರ್ಮಂಗಳಲಿಶಾಸ್ತ್ರ। ಪ್ರಕರದಲಿನಿಸ್ಸಾರವೆಂದಾ। ಸಕತಿಯನುನೆರೆತೊರೆದುತತ್ವಜ್ಞಾನಪರನಾಗಿ ॥ ಯಾಕುತಿಸಾಮ್ರಾ
ಜ್ಯದಲಿಸರ್ವಾ। ತ್ಮಕನೆನಿಸಿನೆರೆನಿಂದನಿಜಸುತ। ಶುಕನಕರೆದುಪದೇಶಿಸಿದನಿದನಾಮಹಾಮುನಿಪ ॥೧೩॥ ಯಾಕೆತನಗೆಪುರಾ
ಣಶಾಸ್ತ್ರ। ನೀಕಸಂಗ್ರಹವೆಂಬಶುಕನನು। ಸೋಕಿಶೆಳದುದುನಿಜದಲಡಗಿದಚಿತ್ತವೃತ್ತಿಯನು ॥ ಶ್ಲೋಕವೊಂದಧ್ಯಾಯವೊಂ
ದೇ। ಸಾಕೆನುತಧರ್ಮವನುಸಕಲವ। ನಾಕೃತಜ್ಞನುಕಲಿತನಾಭಾಗವತಸಂಹಿತೆಯ ॥೧೪॥ ಆರಮನವೆಳಸದುಮುಕುಂದನ।
ಚಾರುಲೀಲಾಲಲಿತಚರಿತಸು। ಧಾರಸಾಸ್ವಾದನದಪರಮಾನಂದದನುಭವಕೆ ॥ ಆರುಶುಕನಿಂದಧಿಕರಾತ್ಮವಿ। ಚಾರದಗದಸ್ವಾಂ
ತರಿದರೊಳು। ಬೇರುವರಿದಂಕುರಿತವಾಯ್ತಾಖ್ಯಾನಭೂಮಿಯಲಿ ॥೧೫॥ ಆಮಹಾತ್ಮನಶೇಷಲೋಕ। ಕ್ಷೇಮಕರವೆಂದೆನೆ
ಪರೀಕ್ಷಿತ। ಭೂಮಿಪತಿಗುಪದೇಶಿಸಿದನದನಶನವ್ರತಿಗೆ ॥ ವ್ಯೋಮಗಂಗಾತಟದದಕ್ಷಿಣ। ಭೂಮಿಯಲಿನೆರೆದಖಿಳಸುಜನ।
ಸ್ತೋಮಕೇಳಲುಮರಣಭಯವನುಬಿಡಿಸಿಬೋಧಿಸಿದ ॥೧೬॥ ಎನಲದಾರಿಂದಾಯ್ತುಮರಣದ। ಜನಿತಭಯವಕಟಾಪರೀಕ್ಷಿತ।
ಜನಪತಿಗೆವಿಸ್ತರಿಸಬೇಹುದುಕಾರಣವನೆನಗೆ ॥ ಮುನಿಶುಕೃಪೆಯಿಂದಾವಗತಿಸಂ। ಜನಿತವಾಯ್ತಿದನೆಲ್ಲವನುಪೊ। ವನವೆನಿಪ

ಭಾರತದ ಪ್ರಸಂಗ ವಿಚಾರ.

ತಜ್ಜನ್ಮಕರ್ಮಂಗಳನುಹೇಳೆಂದ ॥೧೭॥ ಕೇಳುಶೌನಕಭಾರತದಬಲು। ಗಾಳಿಗದಲ್ಲೈಹಿಕದಗತಿಯನು। ಬೀಳುಕೊಳ್ಳಲತಿ
ರಥರುಭೀಮನಗದೆಯಘಾಳಿಯಲಿ ॥ ಬೀಳಲುಗ್ರಾಜಿಯಲಿಕುರುಭೂ। ಪಾಲನಶ್ವತ್ಥಾಮನರಿಜನು। ಬಾಲಕರನಿರುಳಕಪಟಪಂ
ಚದ್ರೌಪದೀಸುತರ ॥೧೮॥ ತಲೆಗಳನುಕಾಣುತ್ತಕುರುಕುಲ। ತಿಲಕನುಳಿದನುಕಾಯವನುಯಿಸಾ। ಕೊಳುಗುಳವನೇನೆಂಬೆ
ನಾದ್ರೌಪದಿಯಶೋಕವನು ॥ ತಿಳಿದನರ್ಜುನನಸುರರಿಪುವಿನ। ಲಲಿತಪದದಲಿನಮಿಸಿಕೊಂಡನು। ಬಿಲುಸರಳನಸುರಾರಿಸಹಿ
ತೇರಿದನುಮಣಿರಥವ ॥೧೯॥ ತಲೆಗೆತಲೆಯನುಕೊಂಬೆನೆಲವೋ। ಕುಲಗೆಡುಕನಿಲ್ಲೆನುತಪಾರ್ಥನು। ಬಳಿಸಲಿಸಬೆಂಬತ್ತಿಬಿ
ಡದ್ಯೈತರಲುಕೋಪದಲಿ। ತ್ರೊಲಗಿರಥಸಹಿತೋಡಿದನುಕಳ। ವಳಿಗನೀಕ್ಷಿಸಿದೂರದಲಿಮೂ। ದಲಿಸುತಸುರಾರಾತಿಹರಿಪಿದನ
ರ್ಜುನನರಥವ ॥೨೦॥ ಮುಟ್ಟಬರೆಬರೆಸಂಕಟಕೆಬ್ಬೆ। ಚಿಟ್ಟದಿವ್ಯಮಹಾಸ್ತ್ರಸನುಕಂ। ಗೆಟ್ಟಜೀವಿಸುವಾಸೆಯಲಿವಿಪ್ರೋತ್ತ
ಮನುತಿರುಗಿ ॥ ಸುಟ್ಟುಕಳೆಸುರವಾಲಸುತನನು। ಕೊಟ್ಟನಾಹುತಿನಿನಗೆನುತಬೊ। ಬ್ಬಿಟ್ಟುಕೋಪದಿಚಾಪದಲಿತೆಗದೆಚ್ಚನ
ರ್ಜುನನ ॥೨೧॥ ತೆಗೆದೆಸಲುದಿವ್ಯಾಸ್ತ್ರಧಗಧಗ। ಭುಗುಭುಗಿಲುಭೋರೆಂದುದಶದಿ। ಕ್ಕುಗಳನಂಬರತಳವನವನಿಯನಾವರಿ
ಸುತಿರಲು ॥ ತೆಗೆದುಹಾಯ್ದುವುಸುರವಿಮಾನಾ। ಳಿಗಳುಭಯದಿಂದಿತ್ತಲರ್ಜುನ। ನಗಧರನಪದಕೆರಗಿಬಿನ್ನಹಮಾಡಿದನುನಡುಗಿ॥
ಏನಿದೇನೈಕೃಷ್ಣಜಗದವ। ಸಾನವೋಕಲ್ಪಾಂತಹರನಕ್ಕ। ಶಾನುಗಂಣಿನಕಿಚ್ಚೊಕಾಲಾಂತಕನಬಾಯ್ದುರಿಯೊ ॥ ಏನುಹೇಳೈ
ತಹುದುಪಾಂಡವ। ಹಾನಿವೃದ್ಧಿಗಳಾರದಕಟಾ। ಮಾನವೇಕೈಕೃಷ್ಣಭಕತರರಲೆಂದನಾಪಾರ್ಥ ॥೨೨॥ ಎನಲುನಕ್ಕನುಕೃ
ಷ್ಣನಾತನ। ಮನದವೈಕಲ್ಯವನುಭಕುತಿಯ। ಘನತೆಯನುಕಾಣುತ್ತಬೆದರದಿರೆನುತಕೈನೆಗಹಿ ॥ ಕನಲಿದಶ್ವತ್ಥಾಮನೆಚ್ಚನು।

ಘಾನಮುಪಾಸ್ರ್ಯಜ್ಮಾಸ್ತ್ರವನು ಗ | ಪನುಪಮುಬ್ರಹ್ಮಾಸ್ತ್ರದಿಂದವೆಬುಕಳವಮಾರ್ಗಣವ || ೨೪ || ಎಂದಶಚ್ಯುತನಂಘ್ರಿಕಮಲ | ದ್ವಂದಸಲಿವೈಯಿಕ್ಕಿ ನುಬಲ | ವಂದುತೊಳಲದನುಕಾಲುವೊಗವನುಗಿಂಡಿಯುದಕದಲಿ || ನಿಂದುವುನದಲಿದಿವ್ಯಶರವನು | ವಂದಿಸುತದಿಪ್ರಸರವನವುರಿದೋ | ಗೆಂದುಕೋಪಾಟೋಪದಲಿಕೆಗದೆಚ್ಚ ಪಾರ್ಥ || ೨೫ || ಕಾಡಿದವುಸರಳೆರಡುತಂವೊಳು | ಕಾದುದಬುಜಭವಾಂಡವಿಸ್ಫುಲ | ನಾಧನಜನಳನಾಯ್ತು ಜಗಕಿಂದಿನಲಿಪಾಯೆನುತ || ಬೀದಿವರಿದಭ್ರದಲಿಜೆಸೆಯುಲಿ | ಮೇದಿನಿಯುಸಾಗರದಸಲಿಲವ | ಸೇದಿಸುಳಿದುಭಯಾಸ್ತ್ರವಹ್ನಿಜ್ವಾಲೆಯೊಘೋಂಪಿಸಿತು || ೨೬ || ಜರಲುಕಂಡನುಕೃಷ್ಣ ನಕಟಕಟ | ಜುರಿದುದಭುಜಭವಾಂಡವೆಂಬ | ಸ್ಮರನಜೀಳುತವಾರ್ಥಬಾಣದ್ವಯವಬೇಗದಲಿ || ಮರಳೆತ್ರೆಗೆಹನೆಯದಶಾಸಸಂ | ಹರಿಸಲರಿಯುನುಭಾರತದಸಂ | ಗರಕೆತೊಡಗಿದನಸ್ತ್ರಲೋಭದಲೆಂದನರ್ಜುನನಗೆ || ೨೭ || ಎನಲುಜೀಯ್ಯಾಹೆಸಾದೆನುತ | ರ್ಜುನನುಸಂಹರಿಸಿದನುಸರಳೆರ | ಡರನುಶಿಶುದ್ರೋಹಿಯನುಕಟ್ಟಿದನಟ್ಟಿಹಿಡಿದೆಳದು || ಮುನಿದುಬೀಡಿಕೆಗೊಯ್ದು ಕೊಲುವೆನು | ವನಿತೆಯರವುಂಬೆಂಬನವನನು | ದನುಜರಿಪುಜರದೀಗಳಂತಿರೆಕೆಂದುಕೆಳೆಯೆಂದ || ೨೮ || ಕೊಂದವನಕೊಲ್ಲದಡೆಕೊಲ್ಲಿಸಿ | ಕೊಂದುದೇಕೊಳೆಶುದಿ ಕೊಲೆತನ | ಗೆಂದುತಪ್ಪಿದರಕಟನವನನುಘೋರನರಕದಲಿ || ಕೊಂದನದರಿಂದವನುಶುದ್ಧನು | ಕೊಂದನಿವನಘವಿಲ್ಲಕೆಲ್ಲಿ | ಕೊಂದವನನಿರುಳಕಟನಿದ್ರಾಭರದಬಾಲಕರ || ೨೯ || ಕೊಲಬಹುದೆಪಾರುವನನವಧರಿ | ಸೆಲೆಪುರಾಂತಕಧರ್ಮತತ್ವದ | ನೆಲೆಯನೀನರಿವಂತಬೇರಿನ್ನಾರುಬಲ್ಲವರು || ಕೊಲಬಹುದುಧೃತಶಸ್ತ್ರನಾದಡೆ | ಕ್ರೀಲುವೆನೆಂತಾಚಾರ್ಯಸುತನನು | ತಿಳಿದುಪೇಳ್ವೆನೆನುತ್ತ ಬೀಡಿಕೆಗಾಗಿನಡೆತಂದ || ೩೦ || ಬಿಡುಬಿಡೆಂದಳುದ್ರೌಪದಸುತೆಸತಿ | ನುಡಿದುದೇಲೇಸೆಂದನವನಿಪ | ಸಡಿಲಿಸೆಂದರುಬಿಗುಹನಾವಮಾದ್ರೀಕುಮಾರಕರು || ಘುಡುಘುಡಿಸಿದನುಭೀಮನಿವನನು | ಕಡಿದುಡಾಕಿನಿಯುರಿಗೆತಾನುಣ | ಬಡಿಸುವೆನುನೀವೇಕೆತಾನಿಹೆನೆನುತಘರ್ಜಿಸಿದ || ೩೧ ||

ಶ್ರೀ ಕೃಷ್ಣಾಯಪರಬ್ರಹ್ಮಣೇನಮಃ.

ಎನಲಿಸೆಂಕೃಷ್ಣಯೆನೆತಂ | ನನುವನೀದ್ರೌಪದಿಯಮನವನು | ಜನಪತಿಯುವಚನವನುಮಾದ್ರೀತನಯರಭಿಮತವ || ಅನಿಲಸುತನಿಷ್ಟವನುಸಲಿಸೆಂ | ದೆನಲುಶಳದನಡಾಯುಧವನಾ | ತನಶಿರದಲಾಮಣಿಮುಕುಟಸಹಿತಿಳುಹೆಸಿರಿಮುಡಿಯ || ೩೨ || ನೀಗಿದಾಶಿರಿಮುಡಿಯುನೀತಲೆ | ಹೋಗದುಳಿದುದೆಲಾಭವಾತಕ | ಹೋಗೆನುತಹೆಡಗ್ಗೆಯ್ಯನಾತನಬಂಧವನುಕಡಿದು || ಬಾಗಿಲನು ಹೊರವಡಿಸಿಪೋಗ್ಯೆ | ಪೋಗಿಬಾಗಿದುದೇಕೆತಲೆಯನೆ | ಮೃಗನಂತಿರೆಬೊಳತಲೆಯದುರಾತ್ಮಹೊರವಂಟ | ೩೩ | ಭೂಸುರಾಧಮವೀರರಿಗೆತಾ | ನ್ಯೆಸೆತಲೆತಪ್ಪಿದರೆಮೂಡಿತ | ಕೇಶಬಂಧದಲವರಸರ್ವಸ್ವಾಪಹಾರದಲಿ || ದೇಶವನುಹೊರವಡಿಸಿಕಳವುದು | ದೋಷಿಗಳನಲ್ಲದೆಶರೀರದ | ಘಾಸಿಗವರೊಳಗಾಗರೆಂದರುಧರ್ಮಕೋವಿದರು || ೩೪ || ಪುತ್ರಶೋಕಾತುರರುಪಾಂಡವ | ರಿತ್ತಲವರಿಗೆಪೂರ್ಧ್ವದೈಹಿಕ | ಕೃತ್ಯವನುಮಾಡಿದರುಶ್ರವದಹನಾದಿಸಂಸ್ಕೃತಿಯ || ಮತ್ತೆಮುಡಿದಾಜ್ಞಾತಿಗಳಿಗುದ | ಕಾರ್ತೆಗಳಿಗೆತಿಲೋಕಕಾದಿಯ | ನಿತ್ತರಾಪಾಂಡವರುಕೌರವನಾರಿಯರುಸಹಿತ || ೩೫ || ದ್ರುಪದಸುತೆನೋಡಿತ್ತ ಕೌರವ | ನೃಪನರಸಿಯನುರಾಣಿವಾಸದ | ಗುಪಿತಸಂಚಾರವನುಹಾಹಾರವದದುಗ್ಘಡವ || ನೃಪನನುಜದುಶ್ಯಾಸನಾದಿಗ | ಳಪರಿಮಿತವನಿತಾಸಹಸ್ರದ | ವಿಪ್ರುಳತರವಿಭ್ರಮಗಳನುನೋಡೆಂದನಸುರಾರಿ || ೩೬ || ಹೊಡದಭೀಮನಗದೆಯಘಾಯದ | ಲುಡಿದತ್ತೊಡೆತೊಳುಗಳಪತಿಗಳ | ನಡಿಗಡಿಕೆತಕ್ಕೈಸಿಹಾಯೆಂದೊರಲಿಬಸವಳಿದು || ಬಿಡುಮುಡಿಯಬಿರುಪ್ರೊಯ್ಲ ಬಸುರಿನ | ಕಡಲಿಡುವಕಂಬನಿಯುರೋಗದನ | ವಿಡುವರಭಸದವೈರಿವಧುಗಳನಿತ್ತ ನೋಡೆಂದ || ೩೭ || ತೊಟ್ಟಯಲಿಕೆಡದೆಂನಕಾಲವಿ | ದುಷ್ಟದುಶ್ಯಾಸನನುಸೆಳಕ್ಕಿದ | ಬಿಟ್ಟಮುಡಿವೆರಸಕಟಹೊರಳುತ್ತಿರಲುನಿನಗಂದು || ಕಟ್ಟಮುಡಿಯನುವೈರಿವಧುಗಳು | ಕೆಟ್ಟರಿಂದರಿತ್ರೋಪದೆನೆಂದಾ | ಕೊಟ್ಟಭಾಷೆಗೆಭಂಗವಿಲ್ಲಲೆತಂಗಿನೋಡೆಂದ || ೩೮ || ಎಂದುಧೃತರಾಷ್ಟ್ರನನುಮಗುಳ್ದು | ತಂದುವಿದುರನನಾಗಕುಬಲಾ | ನಂದನೆಯನಾಕುಂತಿಯನುಪಾಂಚಾಲನಂದನೆಯ || ಸಂದಕೌರವನಿಕರನಾರೀ | ವೃಂದವನುಸಂತೈಸಿಮುನಿಮುಖ | ದಿಂದಸಂಶ್ರುತಿಧರ್ಮವನುತಿಳುಹಿದನುಮುರವೈರಿ || ೩೯ || ಮರುಳೆಕೌರವನಿಕರನಾಹರಿ | ಚರಣಕಮಲಪರಾಗಪಾವನ | ಸುರನದೀಸಲಿಲದಲಿಮಿಂದುವಿಶೋಕರೆಂದೆನಿಸಿ || ಮರಳಿದರುನಿಜಪುರಕೆಬಳಿಕಾ | ವರಯುಧಿಷ್ಠಿರನೃಪತಿಯನುಕರ | ಳ್ಬರಿಸಿದನುಪೀಳಗೆಯಸಿಂಹಾಸನದಲಸುರಾರಿ || ೪೦ || ಹದುಳವಿಹುದೆಂನಾಣೆಗಳನಿಂ | ಮುದಯವೆಂಮಭ್ಯುದಯವೆನುತ | ಪ್ಪಿದನುಧರ್ಮಜಭೀಮಫಲುಗುಣಯಮಳರನುಕರದು || ಸುದತಿಯರಸಂತೈಸಿಕರುಣಾ | ಸ್ಪದನುನಿಜಪುರಗಮನದುದ್ಯೋಗ | ಗದಲಿಸಾತ್ಯಕಿಯುದ್ಧವರುಸಹಿತೇರಿದನುರಥವ || ೪೧ || ಪುರವಹೊರವಡಲಿತ್ತಲಂತಃ | ಪುರದಕೋಳಾಹಳದರೋದನ | ಗುರುಮಹಾರಭಸವನುಕೇಳಿದನಿತ್ತಲುತ್ತರೆಯ || ಮುರಹರತ್ರಾಹೀಶಕರುಣಾ | ಕರಪರಿತ್ರಾಯಸ್ವವಿಶ್ವಂ | ಭರಪತಿತ್ರಾಯಸ್ವಪರಮೇಶ್ವರಪರಿತ್ರಾಹಿ || ೪೨ || ಎನುತನಡುಗಿವಿರಾಟನೃಪನಂ | ದನೆಮಹಾಸ್ತ್ರಜ್ವಾಲೆಯಲಿನಿಜ | ತನುಬಳಲಿಬಸವಳಿದುನೀವ್ರದಾವಳಿಯಂತೆ || ವನಿತೆಕೆಟ್ಟೆನುಕೆಟ್ಟೆನಾರೈ | ತನಗೆಗತಿನೀನಲ್ಲದನ್ಯವ | ನೆನುತಬಿದ್ದಳುಬಂದುಮುರಹರನಂಘ್ರಿ

ಕಮಲದಲಿ ॥೪೩॥ ಚುಂಬಿಸುತ್ತಿದೆಬಾಣತಂನನು । ಬೆಂಬಿಡದೆಬಳಿಸಲಿಸಿನಿಂನನು । ನಂಬಿದವರಿಂಗಿಲ್ಲಲೈಭವಭಯದಸಂತಾಪ । ಎಂಬೆನೇನನುತಂನಬದುಕಿನ । ಹಂಬಲೆನಗಿನಿತಿಲ್ಲಬಸುರೊಳ । ಗಂಬುಜೊಗದಂಡದಲಿಕಾವುದೆನುತ್ತಹೊರಳ್ವದಳು ॥೪೪॥ ಅತ್ತಲಾಸಮುಖದಲಿಭಕ್ತರ । ನೆತ್ತಿಹರಿಕಾರುಣ್ಯದಳತೆಯ । ವಿಸ್ತರಿಸಿತೋರ್ಪಂತೆಪಾಂಡವರ್ಯವರಭಿಮುಖಕೆ ॥ ಮೃತ್ಯುಬಾಯ್ತೆರದಂತೆಧಗಧಗಿ । ಸುತ್ತಗಗನಾಂಗಣವನಾವರಿ । ಸುತ್ತಕವಿದೈತಂದವಂಬುಗಳೈವರಿಂಗೈದು ॥೪೫॥ ಎಲೆಲೆಚಿತ್ರದಮಾರಿಯೆನುತಾ । ಪೊಳಲಜನಕಳವಳಿಸೆಪಾಂಡವ । ರಳುಕದಭಿಮುಖರಾದರೊಡ್ಡಿದರಸ್ತ್ರಶಸ್ತ್ರದಲಿ ॥ ತೊಲಗಿನಿಂಮಲಿಹರಿಯದೆನಗಸ । ದಳನಬಾಣವಿದೆನುತಮುರರಿಪು । ಸೆಳೆದನುರುಧಾರಾವಿರಾಜಿತವರಸುದರ್ಶನವ ॥೪೬॥ ಅಂಜಬೇಡೆಲೆತಾಯೆಪಾಂಡವ । ರಂಜದಿರಿಪರಿವಾರಪುರಜನ । ವಂಜಲೇತಕೆತಾನಿರಲುನಿರ್ಭಯವಲ್ತೆನಿಮಗೆ ॥ ಸಂಜೆಗತ್ತಲೆಸೂರ್ಯಲೋಕದ । ಕಂಜವನದವಿಲಾಸಲಕ್ಷ್ಮಿಯ । ನೆಂಜಲಿಸುವನೆಕಂನಭಕ್ತರನೆಂದನಸುರಾರಿ ॥೪೭॥ ರಕ್ಷಿಸೂದೆಂನಾಜ್ಞೆಗಳನುವಿ । ಪಕ್ಷಶರಜಾಲವನುನೀನೆರೆ । ಭಕ್ಷಿಸೆನುತಸುರಾರಿನೇಮಿಸಿದನುಸುದರ್ಶನಕೆ ॥ ಅಕ್ಷಮತೆಯಲಿಹೊಕ್ಕನಬಲೆಯ । ಕುಕ್ಷಿಯನುಗಬೆಯಿಂದಗರ್ಭದ । ರಕ್ಷೆಯನುರಚಿಸಿದನುವೈರಿಮಹಾಸ್ತ್ರವನುಜರದು ॥೪೮॥ ಮುರಿದಕುರುಳ್ಗಳನೊಂಕಿದಳಕದ । ಸಿರಿಮುಡಿಯಮಣಿಮಕುಟದುಜ್ವಲ । ದರಳುಗಂಗಳಕರ್ಣಲಂಬಿತಮಕರಕುಂಡಲದ ॥ ಕೊರಳಪದಕದಕೌಸ್ತುಭದಪೇ । ರುವದಬೆರಳುಂಗರದಪೀತಾಂ । ಬರದಮಂಗಳಮೂರ್ತಿಯಲಿರಂಜಿಸಿದನುದರದಲಿ ॥೪೯॥ ಚಾರುದೀರ್ಘಚತುರ್ಭುಜದದೈ । ತ್ಯಾರಿಯನುಕಾಣುತ್ತತಂನಯ । ಸಾರೆಸುಳಿವಮಹಾತ್ಮನಾತನುಕುಧರಗರ್ಭಕನು ॥ ಘೋರತರದುಃಖವನುಮರದನು । ದಾರಭಾಗ್ಯದನಿಧಿಮುಕುಂದನ । ಮೂರುತಿಯನೀಕ್ಷಿಸುತಲಿರ್ದನುಕೂಡೆಮುರಿಮುರಿದು ॥೫೦॥ ಉರಿದುದುರಿಬಳಲಿತ್ತುಬಳಲಿಕೆ । ಮರಣಭಯಮೃತವಾಯ್ತುಮೋಘದ । ಗುರುತನೂಜನಬಾಣವದುನಿರ್ವಾಹಗಂಡುದಲೈ ॥ ಹರಿಪರಾಯಣರಧಿಕಬಲರೆಂ । ದಿರದೆಸಾರುವಧರೆಗೆತಂನಯ । ಬಿರುದಿನಸ್ತಂಭದವೊಲಿರದೋವಿದನುಬಾಲಕನ ॥೫೧॥ ಇಂತುಕುಂತೀತನಯರನುತ । ತ್ಸಂತತಿಯನಿದನುಳಿಯದಂತೆಕೃ । ತಾಂತವಶದಲಿಕೊಡುವೆನೆಂದಾದ್ರೋಣಸುತನಿರಲು ॥ ಚಿಂತೆಬೇರೊಂದಾಯ್ತುದೈವದ । ಚಿಂತೆಯದನಾರರಿವರಾಶ್ರೀ । ಕಾಂತನಿತ್ಯಾತುಮನಕರುಣದಭೃತ್ಯವರ್ಗದಲಿ ॥ ... ... ॥೫೨॥

ಅಂತು ಸಂಧಿ ೪ಕ್ಕಂ ಪದನು ೨೫೦ಕ್ಕೆ ಮಂಗಳಮಸ್ತು.

ಐದನೆಯ ಸಂಧಿ.

ಭೀಷ್ಮನಿರ್ಯಾಣದ ಕಥಾಸಂಗತಿ.

ಸೂಚನೆ॥ ಪರಮಧರ್ಮರಹಸ್ಯವನುವಿ । ಸ್ತರಿಸಿತಿಳುಹಿಯುಧಿಷ್ಠಿರನನಘ । ಹರನನಭಿವರ್ಣಿಸುತನಿಜ
ದಲಿನಿಂದನಾಭೀಷ್ಮ ॥ ... ...

ಪದನು ॥ ಕೇಳುಶವುನಕಕೃಷ್ಣರಾಯನ । ಲೀಲೆಯನುಪಾಂಡವರನಾಶ್ರಿತ । ಜಾಲವನುಸಂತೈಸಿಪುರಜನಪರಿಜನವ ಸೊಲ್ಲಿದು ॥ ಬೀಳುಕೊಟ್ಟಡರಿದನುರಥವನು । ಮೇಳವಿಸಿದವುಜಡಿವಘನನಿ । ಸ್ಸಾಳಭೇರಿಯಶಂಖತೂರ್ಯಮೃದಂಗಕಹಳೆಗಳು ॥೧॥ ಬಂದಳಲ್ಲಿಗೆಕುಂತಿತಂನಯ । ನಂದನರುದ್ರೌಪದಿಸಹಿತಗೋ । ವಿಂದದರುಶನವಿರಹಕಾತುರೆಯಾಗಿಸಂಭ್ರಮಿಸಿ । ಇಂದುದಿನಬಲವಿಲ್ಲಹೋಗದಿ । ರೆಂದುಹರಿತಂದಾರಥಾಶ್ವದ । ಮುಂದೆಮಾರ್ಗದೊಳಡ್ಡಬಿದ್ದಳುಕೃಷ್ಣನಿದಿರಿನಲಿ ॥೨॥ ಜಯನಮೋಜಗದಾದಿಪೂರುಷ । ಜಯನಮೋಜಗದೀಶ್ವರೇಶ್ವರ । ಜಯನಮೋಜಿತಮಾಯಜಗದಾತ್ಮಕದುರಾಲಕ್ಷ್ಯ ॥ ಜಯನಮೋಮಾಯಾವಿಮೋಹನ । ಜಯನಮೋಮಾನುಷವಿಡಂಬನ । ಜಯನಮೋನಿಜಕೀರ್ತಿಭಾವಿತಭಕ್ತಿವಿಸ್ತಾರ ॥೩॥ ಪೊಡಮಡುವೆನೆಲೆಕೃಷ್ಣನಿನಗಾ । ಪೊಡಮಡುವೆನೆವಾಸುದೇವನೆ । ಪೊಡಮಡುವೆನೆಲೆದೇವಕೀನಂದನನೆನಿನಗಾನು ॥ ಪೊಡಮಡುವೆನೆಲೆಕಮಲನಾಭನೆ । ಪೊಡಮಡುವೆನೆಲೆಕಮಲನೇತ್ರನೆ । ಪೊಡಮಡುವೆನೆಲೆನಂದಗೋಪಕುಮಾರಗೋವಿಂದ ॥೪॥ ದೇವನೀಧಟಮನುಜತನದಲಿ । ಜೀವರನುಮೋಹಿಸುತನಿಜಮಾ । ಯಾವಿಹಾರದಜವನಿಕೆಯಮರೆಗೊಂಡುನರ್ತಿಸಲು ॥ ಆವನರಿವನುನಿಂನಮಹಿಮಾ । ಶ್ರೀವಿಲಾಸದಪರಮವಿಭವವ । ನಾವಿರಿಂಚಿಭವಾದಿಗಳ್ಗರಿದೆಂದಳಾಕುಂತಿ ॥೫॥ ದೇವಕಂಸಾಸುರನಸೆರೆಮನೆ । ಗಾವಲೊಳುಸಂಕ್ಲೇಶಪಡುವಾ । ದೇವಕೀದೇವಿಯನುನೀನೆರೆಕಾಯಿದಂದದಲಿ ॥ ಓವಿದೈನಂಮುವನುಪರಮಕೃ । ಪಾವಲೋಕನದಿಂದವಿಷಜಲ । ಪಾವಕಾದಿವಿಪತ್ಪರಂಪರವೆಂದಳಾಕುಂತಿ ॥೬॥ ಖಳರುಸಭೆಯಲಿನಾಣುಗೆಡಿಸಿದ । ರೆಲೆಮುರಾಂತಕರಕ್ಷಿಸೆನೆನೀ । ಸುಳುಹಿದೆಯಲೈಕೃಷ್ಣತಂನಭಿಮಾನದುಂನತಿಯ ॥ ಸಲಹಿದವರಾರಂದಿನಾಬಲು । ಹಳುಪದಾಪತ್ತಿನಲಿವೀರರ । ಕೊಳುಗುಳದಕೋಲಾಹಳದದಿವ್ಯಾಸ್ತ್ರಬಾಧೆಯಲಿ ॥೭॥ ಬೆಂದುಹೋಗದವರೈಸಲೇನಾ । ವಂದುಮತ್ತೀಗಾಢತರಗುರು । ನಂದನಾಸ್ತ್ರಜ್ವಾಲೆ

ಯಲಿನೀನಲ್ಲದುಳಿದವರು । ತಂದೆತಾವವರುಂಟೆತನಯರು । ನಂದನರುಸಹಿತೀಕುಟುಂಬವ । ದಿಂದುನಿಂನುದರದಲಿಜನಿಸಿಹುದೆಂದ
ಳಾಕುಂತಿ ॥೮॥ ಬರಲಿತನಗೆವಿಪತ್ತುಗಳುದು । ಸ್ತರವೆನಿಪನಿನ್ನಂಘ್ರಿಕಮಲದ । ದರುಶನವುತನಗಹುದಲೈಬಂದಾವಿಪತ್ತಿನಲಿ ॥
ನಿರತಿಶಯಸುಖವೆನಗೆಮೇಣದು । ದೊರಕದಿರ್ದಡೆಕಾಣಲರಿವೆನೆ । ಪರಮಮಂಗಳವೆನಿಪನಿನ್ನಯದಿವ್ಯಮೂರುತಿಯ ॥೯॥ ಜನೆ
ಯಲಾಪಿರಿತವಮಗೆನಿನ್ನಂ । ಘ್ರಿಗಳತೋರಿಸಲರಿಯದಕಟಾ । ಬಗವಡಿದುನೇಸಕಲಸುಖಜೀವನದಫಲವೆಮಗೆ ॥ ಅಗಲಲಾರೆಪ್ರನಿ
ನ್ನಶಿರಿಪದ । ಯುಗವನಿದನಷ್ಟಾಂಗವಿಧಯೋ । ಗಿಗಳುಸಹಿತರಸುತ್ತಕಾಣರುವರಸಮಾಧಿಯಲಿ ॥೧೦॥ ಧನವಲಾನಿರವಧಿಕನಿ
ಷ್ಕಿಂ । ಚನರಿಗಿದುರಾಗಾದಿಮಾಯಾ । ಜನಿತಗುಣವೃತ್ತಿಯನುಹೊಂದದದೆಮರವಹೊಸಬನಲ ॥ ನೆನವನಿಜಭಕ್ತನನುಸಲಹಲು ।
ತನುವಿಡಿದುದೇವಕಿಯಬಸುರಲಿ । ಜನನರಹಿತನೆಜನಿಸಿದೆಯಲೈಯೆಂದಳಾಕುಂತಿ ॥೧೧॥ ಕೆಲರುವಸುದೇವಂಗೆದೇವಕಿ । ಗೊಲಿ
ಗುಜನಿಸಿದೆಕೊಟ್ಟವರವನು । ಸಲಿಸಲೋಸುಗವೆಂದುಕೆಲರೀಭೂಮಿಭಾರವನು ॥ ಕಳೆಯಲೋಸುಗಬೇಡಿಕೊಂಡನು । ನಳಿ
ನಸಂಭವನೆಂಬರೀಭವ । ಜಲಧಿಪತಿತರಕಾಯಲೋಸುಗವೆಂದುಕೆಲಕೆಲರು ॥೧೨॥ ಮುನಿಮನಕೆಮೈಗೊಡದಮೋಹ । ವಿಭ್ರ
ನಲಿಸಿಲುಕದಪರಕೆಪರವೆಂ । ದೆನಿಸಿದಾಪರಮಾತ್ಮನೀನಿಂದೊಲಿದುತನುವಿಡಿದು ॥ ಜನಿಸಿದಂದದಲಿರಲುಮಾನುಷ । ವೆನಿಸಿನಿಜ
ಕೀರ್ತಿಯನುಹೊಗಳುತ । ಮನುಜರಕುತ್ತೋಭಯವನೈದುವರೆಂದಳಾಕುಂತಿ ॥೧೩॥ ಏನನೆಂಬೆನುಯೋಗಿಹೃದಯ । ಧ್ಯಾನ
ರೂಪನೆನಿಪ್ಪನಿಜದಸೆ । ಘಾಡತನವನುಬಿಟ್ಟುಗೋಚರಿಸಿದೆಯಲೈತನಗೆ ॥ ಆನರಿವೆನೆಂತಿದನುನಿಜಲೀಲಾನುಭಾವವನಧಿಕಕರು
ಣಾಂ । ಭೋನಿಧಿಯಲೈಕೃಷ್ಣಭಕ್ತರೊಳೆಂದಳಾಕುಂತಿ ॥೧೪॥ ದೇವನಿಮ್ಮಡಿಯಧಿಕತರಕರುಣಾವಲೋಕನವಿಷಯವಹದೇ ।
ಶಾವಳಿಗಳೀಗಿಡುಮರಂಗಳುಗಿರಿನದೀನಿವಹ ॥ ಒಪ್ಪುಬಹಳಸಮೃದ್ಧಿಯಲಿಸಂ । ಜೀವಿಸುತ್ತಿವೆನಿಜಪದಾಂಕಿತ । ಪಾವನವನೀತ
ಳವೆನಿಸುತಿವೆಯೆಂದಳಾಕುಂತಿ ॥೧೫॥ ಈಗಲೀಸವಸಮೃದ್ಧಿತಮಗಿಂ । ನಾಗಲರಿವುದೆನಿನ್ನಚರಣವಿ । ಯೋಗದಲಿಜೀವಿಸುವೆಂ
ತ್ತೈದೇವನೀನುಳಿಯೆ ॥ ಹೋಗುನೀನಮ್ಮಸುಗಳನುಚರ । ರಾಗಲಾಗದೆಕೃಷ್ಣಕರುಣಾ । ಸಾಗರನೆಗತಿಯಾವುದೈನಮಗೆಂದಳಾ
ಕುಂತಿ ॥೧೬॥ ದೇವನೀನಿರಲಿತ್ತಲಾವಸು । ದೇವದೇವಕಿಯಾದಿಯಾದರು । ಜೀವಿಗಳುಗತಜೀವರಲ್ಲಾನಿನ್ನಕಾಣದಡೆ ॥ ಏನೆನಾ
ನೆರಡೆರನತುವೆದುಃ । ಖಾವಲಂಬನವಾಯ್ತುತನಗಿಂ । ನಾವಪರಿಯಲಿಜೀವಿಸಲಿಬಹುದೆಂದಳಾಕುಂತಿ ॥೧೭॥ ಸಿಲುಕಿದೆನೆಲಾಕೃ
ಷ್ಣಮೋಹದ । ಬಲೆಯೊಳಗೆಯಾದವರುಪಾಂಡವ । ರೆಳಲಿಗರುತನಗೆಂಬತೀವ್ರಸ್ನೇಹಪಾಶದಲಿ ॥ ಉಳಿಯೆನಿನ್ನೊಬ್ಬನಲಿನೀ
ನೇ । ಸಲೆಕರುಣಿಕೊಡುಗೀಗಳೇನಿ । ಶ್ಚಲನಿಜಾಂಘ್ರಿಸರೋಜಭಕ್ತಿಯನೆಂದಳಾಕುಂತಿ ॥೧೮॥ ಜಯಜನಾರ್ದನಕೃಷ್ಣವಿ
ಷ್ಣು । ಪ್ರಿಯಯದೂತ್ತಮದುಷ್ಟರಾಜಾ । ನ್ವಯವಿನಾಶಮುರಂತವೀರ್ಯಮುಕುಂದಮುರವೈರಿ ॥ ಜಯಸುರದ್ವಿಜಧೇನುರಕ್ಷಾ ।
ಪಯವಸಂಗ್ರಹಯೋಗಿವಂದಿತ । ಜಯಯೆನುತಕೈಮುಗಿದುತಲೆವಾಗಿದಳುಹರಿಪದಕೆ ॥೧೯॥ ನಗುತನುಡಿದನಿದೇನುನೀ
ನೀ । ಬಗೆಯಮಾಡಿದೆಸಾಕಿದೇತಕೆ । ಬಗೆಯಬಯಕೆಯಸಲಿಸಿದೆನುಬಾಯೆನುತಕೈವಿಡಿದು ॥ ಮುಗುಳೆರಥದಿಂದಿಳಿದುಕರುಣಾ ।
ಳುಗಳದೇವ[illegible]ಕ್ಕನಾಗಜ । ನಗರಿಯನುಸುರಸೂತಮಾಗಧವಂದಿಜನಸಹಿತ ॥೨೦॥ ಬಂದುದಿನೆಮುರವೈರಿಕುಂತೀ ।
ನಂದನರನೊಲಿದಪ್ಪಿನಾರೀ । ವೃಂದವನುಸಂತೈಸಿಗಮನೋದ್ಯೋಗದಲಿಪುರಕೆ ॥ ಸ್ಯಂದನವನಡರುತ್ತಲಿರಲೈ । ತಂದುವಿರಹಾಂ
ಧತೆಯಲಾಯಮ । ನಂದನನುಮುಂದಡ್ಡಬಿದ್ದನುರಥದಮಾರ್ಗದಲಿ ॥೨೧॥ ತಡದುಗಥನನುನಯನಜಲವನು । ಮಿಡಿದುಪುತ್ರಂ
ದನುಕೃಷ್ಣನೆಂದನು । ಕಡೆಗಣಿಸಿಹೋಗದಿರುನಿಂಮಡಿಗಳಿಗೆಪಾಪ್ರನೆಯ ॥ ಹಿಡಿದುಬದುಕುವೆನೇಕೆರಾಜ್ಯದ । ತೊಡಕನೆಲ್ಲನು
ಜೀವನವನುಳಿ । ದೊಡಲುವರ್ತಿಸಲರಿವುದೇರಾಜೋಪಭೋಗದಲಿ ॥೨೨॥ ಅರಕೆಕಾಣವುಮುನಿಮನಂಗಳು । ನಿರುಗೆಯ
ನುನಿಂಮಡಿಯಮಹಿಮೆಯ । ನೊರಲಿಕಾಣವುಕಡೆಯನಾಶ್ರುತಿಕೋಟಿಗಳುಪೊಗಳಿ ॥ ಮರೆಯಮಾತ್ರೇನಖಿಳಜಗವನು । ನೆರೆ
ಸೃಜಿಸಿರಕ್ಷಿಸುವಮತ್ತದ । ನೊರಗಿಸುವಮಾಯಾವಿನೋದದವಸ್ತುನೀನೆಂದ ॥೨೩॥ ದೇವನಿಂಮಡಿಯಂಘ್ರಿಕಮಲದ । ಸೇವೆ
ಸನಕಾದಿಗಳಿಗಿಲ್ಲವು । ಗಾವತಪದಸಮಗ್ರತೆಯೊಜನ್ಮಾಂತರಾರ್ಜಿತದ ॥ ಅವತಪದರೆನೆಲಸಪ್ರೇಮ । ತ್ತೀವಿಯೋಗವನಿತ್ತ
ದಕಟೆಂ । ನೇವೆನೆಂತೈಕೃಷ್ಣಬದುಕುವೆನೆಂದನವನೀಶ ॥೨೪॥ ಬಂಧುಹತ್ಯಾಪಾಪವೆಂನನು । ಬಂಧಿಸಿತಲೈಕೃಷ್ಣಕರುಣಾ ।
ಸಿಂಧುನೀಹೇಳುವುದೈಪರಿಹಾರವಿಂನಿದಕೆ ॥ ಅಂಧನಾದೆನುರಾಜ್ಯಲಕ್ಷ್ಮಿಯ । ಬಂಧುರದಲೋಭದಲಿಕೌಸ್ತುಭ । ಕಂಧರನೆ
ಕೃಪೆಮಾಡುತನಗಿಂನೇನುಗತಿಯೆಂದ ॥೨೫॥ ತುರುಗಮೇಧದಲಖಿಳಪಾಪವ । ಪರಿಭವಿಸಬಹುದೆಂಬಮಾತ್ರಂ । ನೊರೆನೆಬಾ
ರಸುಪಂಕವನುಪಂಕದಲಿಸುರೆಯುಂಡ ॥ ಸುರೆಯಲಾದಮಹಾಘಾತನುಪರಿ । ಹರಿಸಬಹುದೇಕೃಷ್ಣಬಿದ್ದೆಸು । ನರಕಸಾಗರದೊ
ಳಗೆತಾನೆನುತೆರಗಿದನುಪದಕೆ ॥೨೬॥ ಏಳದೇನೆಂನಾನೆಮಗುಲ । ಮೇಳವಿಸಿತೇಧರೆಗೆನುತಸಿರಿ । ಲೋಲನೆತ್ತಿದನಾಯುಧಿ
ಷ್ಠಿರನೃಪನಮಸ್ತಕವ ॥ ಹೇಳುಹೇಳೇನಾಯ್ತುಪಾತಕ । ದೂಳಿಗದಮಾತುಗಳನಕಟವಿ । ಶಾಲಮತಿಯಾದೈಮಹಾದೇವೆಂದನಸು
ರಾರಿ ॥೨೭॥ ನಗುತವೇದವ್ಯಾಸಧೌಮ್ಯಾ । ದಿಗಳಮೊಗವನುನೋಡಲವರು । ಕ್ತಿಗಳುಪನ್ಯಾಸದಲಿತಿಳಿಯದುಮತಿಮುಹಿ

ಪತಿಯು ದುಗುಡವನು ಕಾಣುತ್ತ ಗಂಗೆಯ । ಮಗನಮಾತಿನಲಲ್ಲದೀತನ । ಬಗೆಯಬೇಸರುಬೀಯ್ಯದೇಳೇಳೆಂದನಸುರಾರಿ ॥ ೨೮ ॥
ಮುಂಚೆದಿವ್ಯರಥಾಗ್ರದಲಿಯಮ । ನಂದನನುಸ್ಯಂದನದನಾತನ । ಹಿಂದೆಭೀಮನುಭೀಮಸೇನನರಥದಬಳಿಸಲಿ ॥ ಒಂದುರಥ
ದಲಿಕೃಷ್ಣಪಾರ್ಥರು । ಸಂದರವರೊತ್ತಿನಲಿಮಾದ್ರೀ । ನಂದನರುಬರಲೆಸದನವನಿಪನಧಿಕವಿಭವದಲಿ ॥ ೨೯ ॥ ಪರಶುರಾಮ
ವಸಿಷ್ಠಗಾರ್ಗ್ಯಾಂ । ಗಿರಸಗೌತಮಕಣ್ವಕೌಶಿಕ । ವರಸುದರ್ಶನಕಾಶ್ಯಪೇಂದ್ರಪ್ರಭೃತಿಬೃಹದಶ್ವ ॥ ಭರತಭಾರದ್ವಾಜಪ
ರ್ವತ । ಪರಮಮುನಿಶುಕಬಾದರಾಯಣ । ಇರದೆನೆರೆದುದುನಾರದಾದಿಸಮಸ್ತಮುನಿನಿಕರ ॥ ೩೦ ॥ ತವತವಗೆನಿಜಶಿಷ್ಯ
ಜನಸಹಿ । ತನಿಯಗಲಿಕೆಭೀಷ್ಮನವಸಾ । ನವನುನೋಡಲುದೇವಋಷಿರಾಜರ್ಷಿವಿಪ್ರರುಷಿ ॥ ನಿವಹವೈತರೆದೂರದಲಿಪಾಂ
ಡವರುಕಂಡರುಧರೆಗೆಜಾರಿದ । ರವಿಯಪೊಲುತೊಳತೊಳಗಿಬೆಳಗುವಭೀಷ್ಮನಂಘ್ರಿಗಳ ॥ ೩೧ ॥ ಚರಣದಲಿತಲೆವಾಗಿಪಾಂ
ಡವ । ಇರದೆಕುಳ್ಳಿರಲಖಿಳಜನಬಂ । ದೆರಗಿಕಂಡುದುಭೀಷ್ಮನಂಘ್ರಿದ್ವಯಸರೋರುಹವ ॥ ಅರಳಚುತ್ತಕಂಗಳನುಮೆಲ್ಲನೆ ।
ನೆರದಋಷಿಗಳನೋಡಿಪುಳಕೋ । ತ್ಕರದಪರಮಾನಂದರಸದಲಿಮುಳುಗಿದನುಭೀಷ್ಮ ॥ ೩೨ ॥ ಮನದಲಭ್ಯುತ್ಥಾನಮೊದಲಾ ।
ದನಿತುವನುವಿಸ್ತರಿಸಿಬಳಿಕಾ । ದನುಜವೈರಿಯಪರಮಮಂಗಳದಿವ್ಯಮೂರ್ತಿಯನು ॥ ಮನದಲಾಲಿಂಗಿಸುತತತ್ಪದ । ವನರು
ಹವನೆನೆನೆನೆದುಹರುಷದ । ವನಧಿಯೊಳಗೋಲಾಡುತಿರ್ದನುಭೀಷ್ಮನಡಿಗಡಿಗೆ ॥ ೩೩ ॥ ನೋಡಿದನುಪಾಂಡವರನಂಜಲಿ ।
ಗೂಡಿತಲೆವಾಗುತ್ತಲಿರೆಕಡೆ । ಗೋಡಿವರಿವನುರಾಗಜಲಪರಿಲುಳಿತನೇತ್ರದಲಿ ॥ ಹೇಡರಾದಿರೆಕೃಷ್ಣನಾಮದ । ಜೋಡುನಿಮ್ಮ
ನುರಕ್ಷಿಸುತ್ತಿರೆ । ಲೋಡುಕುಳಿತನವೇಕೆದುರಿತದಶಸ್ತ್ರಹತಿಗೆಂದ ॥ ೩೪ ॥ ಯಾಕೆಧರ್ಮಜನಿನಗೆಚಿತ್ತ । ವ್ಯಾಕುಲತೆಯನ್ಯಾ
ಯಬಿಡುಬಿಡು । ಶೋಕಮೋಹಂಗಳನುನಿಜಜನಹತ್ಯನಿನಗೆಂದು ॥ ಏಕನಾತ್ಮನನಂತನೆಂಬುವ । ವೇಕದೃಷ್ಟಿಯಮಾಡಿಮುಂ
ದಾ । ಗೀಕುದೃಷ್ಟಿಯಮಾರುಗೊಂಡೆಯೊಮಗನೆನೀನೆಂದ ॥ ೩೫ ॥ ಕುಂತಿಗಾದುದುದುಃಖಕಡೆಪರಿ । ಯಂತಬಳಲಿದಳಕಟ
ನಿಮ್ಮಿ । ಸಂತತಿಯುದೆಶೆಯಿಂದಕಾಲಾಧೀನವೆಂದರಿಯ ॥ ಸಂತವಡಿಸಲುಚಿಂತೆವಡಿಸಲ । ನಂತನೊಬ್ಬನೆಹೇತುವಾತನ । ಚಿಂತಿ
ತವನಿನ್ನವನರಿವನುಭೂಪಕೇಳೆಂದ ॥ ೩೬ ॥ ಕಾಲವಶದಿಂದೀಚರಾಚರ । ಜಾಲವಿದುಪವನಾಂತರಿತಮೇ । ಘಾಳಿಯಂದದಲ
ಕಟಸುಖದುಃಖಾನುಭವದೊಳಗೆ ॥ ಆಳುತಿಹುದರಿವಂತಲೀಶ್ವರ । ಲೀಲೆಯೆಂದರಿದದಜೆನೀನನು । ಕೂಲದಲಿನಡೆಮಾಡುರಾ
ಜ್ಯವನೆಂದನಾಭೀಷ್ಮ ॥ ೩೭ ॥ ಈತನರಿಜಾಸಕಲಭುವನ । ವ್ರಾತನನುನಿರ್ಮಿಸುವನಿಲಿಸುವ । ಘಾತಿಸುವಸಂಗ್ರಹದಗುಣ
ಮೂರ್ತಿತ್ರಯಾತ್ಮಕನು ॥ ಈತನಖಿಳಾತ್ಮಕಕರಣಾಸಾ । ಕ್ಷಾತನಾರಾಯಣನುಯದುಕುಲ । ಜಾತನೆನಿಸಿವಿಮೋಹಿಸುವನೀಜ
ಗವನಿದನೆಂದ ॥ ೩೮ ॥ ಈತನಧಿಕಮಹಾನುಭಾವವ । ಭೂತನಾಥನುಬಲ್ಲನಾಸಾ । ಕ್ಷಾತನಾರದನರಿವನಾಕಪಿಲಾಖ್ಯಮುನಿ
ಬಲ್ಲ ॥ ಈತನನುಸಖನೆಂದುಪ್ರಿಯನೆಂ । ದೀತವಾವನಮಗನೆನುತ್ತವೆ । ಸೂತಕರ್ಮವಮಾಡಿಸಿದೆಲಾಭೂಪನೀನೆಂದ ॥ ೩೯ ॥
ನಿಮ್ಮನಾಡಿದವಜ್ಞೆಯನುನಿರ । ಹಮ್ಮನಲಿರಂಜಿಸುವವಿಮಳ । ಬ್ರಹ್ಮರೂಪನೆಬಗೆಯನರಿವನುಭೃತ್ಯವರ್ಗದಲಿ ॥ ಕರ್ಮದೂ
ರನುಕಾಲದಧರನು । ನಿರ್ಮಮನುನಿರವದ್ಯನೀನ್ಯೈ । ಷಮ್ಯವಿಕ್ಲೀಮಗನೆನೀನಿದಕಂಜಬೇಡೆಂದ ॥ ೪೦ ॥ ಧರಣಿಪತಿನೋಡೀ
ಮುರಾರಿಯ । ಪರಮಲೀಲೆಯನೇನನೆಂಬೆನು । ಭರಿತಜೀವರಕೊಲುವವರಭಕ್ತಾನುಕಂಪಿತವ ॥ ಮರಣಕಾಲದಲಾವನಂಘ್ರಿ
ಸ್ಮರಣೆಸನಕಾದ್ಯರಿಗಗೋಚರ । ವರಸುತಿಲ್ಲಿಗೆತಾನೆಬಿಜಯಂಗೈದನಿದೆಯೆಂದ ॥ ೪೧ ॥ ಆವನಂಘ್ರಿಧ್ಯಾನದಲಿಸಂ । ಜೀವಿಸುವ
ರೀಮುನಿವರರು । ತಾವನೊಬ್ಬನಸಮನಾಶನವಖಿಳಪಾತಕದ ॥ ಆವಿರಿಂಚಿಭವೇಂದ್ರಮುಖ್ಯಸು । ರಾವಳೀದರುಶನಪ
ದೂರನ । ನಾವಜನ್ಮಾಂತರದತಪದಲಿಕಂಡೆನಾನೆಂದ ॥ ೪೨ ॥ ಗೋಚರಿಸಿದೈಕೃಷ್ಣಕರುಣಾ । ವೀಚಿಗಳನವನಿಧಿಯೆತನ್ನನು ।
ನೀಚನಿವನೆಂದೆನದೆಮುನಿನಿಕರಜನಸಹಿತ ॥ ಶ್ರೀಚರಣಸನ್ನಿಧಿಯಲಸನನು । ರೋಚಿಸುವೆನನವರತತನ್ನಯ । ಲೋಚ
ನಂಗಳಲಗಲದಿರಬೇಕೆಂದನಾಭೀಷ್ಮ ॥ ೪೩ ॥ ಸಿರಿಮೊಗದನಸುನಗೆಯಕೆಂಪೆಸೆ । ವರಳುಗಂಗಳದಂತಪಙ್ಕ್ತಿಯ । ಕೊರಳಕೌಂ
ಸ್ತುಭಹಾರಮಣಿಮಳಮಕರಕುಂಡಲದ ॥ ಉರದಶಿರಿವಕ್ಷದಸುನಾಭದ । ಮೆರವಕಾಂಚೀಧಾಮಪೀತಾಂ । ಬರದಮಂಗಳಮೂ
ರ್ತಿಯಲಿಗೋಚರಿಸಬೇಕೆಂದ ॥ ೪೪ ॥ ಇಂತುಹರಿಪದಕಮಲನಿಯುತ । ಸ್ವಾಂತದಲಿಗಾಂಗೇಯನಿರಲುಕೃ । ತಾಂತಸುತತಲೆ
ವಾಗಿಧರ್ಮರಹಸ್ಯಸಂಗತಿಯ ॥ ತಿಂಥಿಣಿಯಮುನಿನಿಕರಕೇಳಲು । ಸಂತತಿಪ್ರಿಯಬಂಧುಹತ್ಯಾ । ಭ್ರಾಂತಿಪರಿಹಾರಾರ್ಥದಲಿ
ಬೆಸಗೊಂಡರಿಂತೆಂದ ॥ ೪೫ ॥ ಧರ್ಮವನುಪುರುಷರಿಗೆನಾರೀ । ಧರ್ಮವನುವರ್ಣಾಶ್ರಮಂಗಳ । ಧರ್ಮವನುನಾನಾವಿಧಾನದ
ದಾನಧರ್ಮವನು ॥ ಧರ್ಮವನುನೃಪಕುಲದಮೋಕ್ಷದ । ಧರ್ಮವನುವಿಧಿವಿಹಿತಭಗವ । ದ್ಧರ್ಮವನುಸಂಕ್ಷೇಪವಿಸ್ತಾರದಲಿ
ವಿವರಿಸಿದ ॥ ೪೬ ॥ ಹೇಳಿದನುಧರ್ಮಾರ್ಥಕಾಮವಿ । ಶಾಲಮೋಕ್ಷೋಪಾಯವನುತ । ನ್ಮೂಲರಾಗವಿರಾಗಸೋಪಾಧಿಕದಧರ್ಮ
ವನು ॥ ಹೇಳಲಾಖ್ಯಾನೇತಿಹಾಸವಿ । ಶಾಲಸಂಗತಿಗಳಲಿಬಂದುದು । ಕಾಲದಿಚ್ಛಾಮರಣಮುನಿಮತದುತ್ತರಾಯಣದ ॥ ೪೭ ॥

ಇರಲಿರಲುಗಾಂಗೇಯನುಪಸಂ | ಹರಿಸಿದನುಮಾತುಗಳನಗಲಿಕೆ | ಹರಿವಮನವನುತೆಗೆದುಮುನಿವಂದಿತನಚರಣದಲಿ || ಇರಿಸಿತನ್ಮಯನಾಗಿಕಂಗಳ | ನರೆದೆರೆದುಮುಂದಿರ್ದಕೃಷ್ಣನ | ಪರಮಮಂಗಳದಿವ್ಯಮೂರ್ತಿಧ್ಯಾನಪರನಾದ || ೪೮ || ಇರಲುಕಂಡನುನೋಡಿಮನದಲಿ | ವರಚತುರ್ಭುಜಮೂರ್ತಿಯನುಕಂ | ಣ್ಣಿರದುಕಾಡೆನುಮುಂದೆನಿಂದಚತುರ್ಭುಜಾಕೃತಿಯ || ಮರೆದನಸ್ತ್ರವ್ಯಥೆಯನಾಕ್ಷಣ | ತೆರಳತಿಂದ್ರಿಯವೃತ್ತಿಯಲಿಮುರ | ಹರನನಭಿವರ್ಣಿಸಿದನವಸಾನದಲಿಕಲಿಭೀಷ್ಮ || ೪೯ || ತ್ರಿಜಗವನುಮೋಹಿಸುವನೀಲಾಂ | ಬುಜನಿಕಾಶನವಬುದದಳಕೆ | ವಜನುಘನತರರಾಜಸೂನದಗ್ರೀವಮುಖಾಂಬುಜದ || ಭುಜಚತುಷ್ಟಯಪೀನವಕ್ಷದ | ಸುಜನಸೇವಿತಪಾದಪದುಮದ | ವಿಜಯಸಖನಲಿಮತಿಸುನಿಶ್ಚಲವಕ್ಕೆತನಗೆಂದ || ೫೦ || ತುರುಗಖುರಧೂಳಿಯಲಿಮೆರೆವಲ | ಗುರುಳುಗಳಮುಖಕಮಲಕಾಂತಿಯು | ಧುರದಮುನ್ನಾಳುಗಳಭಾಳದಬೆವರಬಿಂದುಗಳ | ಭರದಲಾನೆಚ್ಚಂಬುಕವಚವ | ಹರಿದುಶೀಳಿದದಿವ್ಯಗಾತ್ರದ | ಪರಮಮಂಗಳಮೂರ್ತಿಯಲಿನಿಲಿಸೆಂನಮನವನೆಂದ || ೫೧ || ಹಿಡಿಯೆನೆಸ್ತ್ರವನೆಂಬಭಾಷೆಯ | ಬಿಡಿಸಲೆಂದವಘಡಿಸಲೆಂನನು | ಕಡಿದುಬಿಸುಡುವೆನೆಂದುಕೋಪಾಟೋಪದಲಿಜವದಿ || ತುಡುಕಿದನುಚಕ್ರವನುಭಕ್ತನ | ನುಡಿಯೆನುಡಿತನಗೆನುತಮರಳ್ದ | ನೊಡೆನೆರಸುಗಭಾಷೆಗೀಡಿಯೆಳೆಂವನುನನೆಂದ || ೫೨ || ತುರುಗವನುಚಪ್ಪರಿಸಿಮ್ಮೆಗಳ | ನೊರಸಿರಥದಲಿಹೂಡಿನಿಂದಿರೆ | ಕರದಚಂಮಟಿಗೆಯಲಿನೊರನೆಡಗೈಯವಾಘೆಯಲಿ || ಧುರಕೆನಡೆನಡೆಪಾರ್ಥಯಂಬ | ಬ್ಬರದರಣಸಿರಿವಂತನೆಂಬೀ | ನರನರಥದಕುಟುಂಬಿಯಲಿಮನವಾಗಲೆನಗೆಂದ || ೫೩ || ಸಕಲಸಚರಾಜಗದವ್ಯಾ | ಪಕನುಸಕಲಾಧ್ಯಕ್ಷನಾತನು | **ಸಕಲಜೀವರಜೀವಚೇತನರೂಪನದ್ವಯನು** || ಸಕಲಮಾಯಾಧೀಶಮಾಯಾ | ತ್ಮಕನೆನಿಸುವಿತನಲಿನಿರ್ಗತ | ಸಕಲಜೀವಭ್ರಾಂತಿಯಲಿಬೆರೆಸುವೆನುತಾನೆಂದ || ೫೪ || ಎನುತಮನದಲಿಕಂಗಳಲಿಮಾ | ಕಿನಲಿಕೃಷ್ಣನದಿವ್ಯಮೂರ್ತಿಯ | ನೆನೆದುನಡೆನೋಡುತ್ತಹೊಗಳುತತತ್ವರೂಪದಲಿ || ಮನವಳಿದುಕಣ್ಮುಚ್ಚಿಕಂಠ | ಧ್ವನಿಯುಡಗಿತನ್ಮಯನೆನಿಸಿಚಿ | ದ್ಘನಸನಾನಂದೈಕ್ಯಪದದಲಿನಿಂದನಾಭೀಷ್ಮ || ೫೫ || ಆಸಮಯದಲಿಭೀಷ್ಮನಂತ | ಶ್ವಾಸಗತಿಯನುಕಂಡುಮುನಿಮಾ | ರಾಸಿಯಿದ್ದುದನುಡಿಯಮೌನದಬಿಗಿದಬೆರಗಿನಲಿ || ಲೇಸುಲೇಸೆಲೆಭೀಷ್ಮಯನುತಾ | ಕಾಶಸುಮನೋವೃಷ್ಟಿದುಂದುಭಿ | ಘೋಷವೆಸದುದುಸಿದ್ಧವಿದ್ಯಾಧರವಿಮಾನದಲಿ || ೫೬ || ಅಗಲಿದೆಯಲಾಯೆನುತಪಾಂಡವ | ರೊಗುಮಿಗೆಯದುಗುಡದಲಿದಹನಾ | ದಿಗಳನಿಪಸಂಸ್ಕಾರವನುಮಾಡಿದರುಭೀಷ್ಮಂಗೆ || ಹೊಗಳುತೈತಹೆವರಮುನೀಂದ್ರರ | ಬಗೆಯಬಯಕೆಯನಿತ್ತುಕರುಣಾ | ಳುಗಳದೇವನುಹಸ್ತಿನಾಪುರಿಗಾಗಿನಡೆತಂದ || ೫೭ || ಬಂದುಕುಂತೀನಂದನರುಸಹಿ | ತಂದುಧೃತರಾಷ್ಟ್ರಾದಿಬಾಂಧವ | ವೃಂದದನುಮತದಿಂದಪಟ್ಟವಕಟ್ಟಿಕುಳ್ಳಿರಿಸಿ || ಸಂದಪೇಜನಪುರಜನಕ್ಕಾ | ನಂದನಿತ್ತಾತ್ಮಕನಪದದನು | ಕುಂದನಿತ್ತನುಸಂತವಿಸಿದನುಧರ್ಮನಂದನನ || ... ... || ೫೮ ||

ಅಂತು ಸಂಧಿ ೫ಕ್ಕಂ ಪದನು ೨೮೮ಕ್ಕೆ ಮಂಗಳಮಸ್ತು.

ಆರನೇ ಸಂಧಿ.

ಕೃಷ್ಣನು ದ್ವಾರಕಿಗೆ ಬಿಜಯಂಗೈದ ಕಥೆ.

ಸೂಚನೆ || ಸಂತವಿಸಿಪಾಂಡವರನಾಕುರು | ಸಂತತಿಯತಲೆಗಯ್ದುಲಕ್ಷ್ಮೀ | ಕಾಂತಬಿಜಯಂಗೈದು
ಹೊಕ್ಕನುದ್ವಾರಕಾಪುರವ || ... ...

ಪದನು || ಕೇಳುಶೌನಕಕೃಷ್ಣರಾಯನ | ಲೀಲೆಯನುಬ್ರಹ್ಮಾಂಡಕೋಟಿಗ | ಳಾಳುತ್ತೇಳುತ್ತಿಹವದಾವನರೋಮಕೂಪದಲಿ || ಮೇಳೆಸಿಮಾತೆಗಳಲ್ಲಪಾಂಡವ | ರಾಳುತನಗಿಂತಿತ್ತಲಿವದಿರ | ನೋಲಗಿಸುವನುಲೀಲೆಯಂತುಟೊಶಿವಶಿವಾಯೆಂದ || ೧ || ಅಳದಡಿಲ್ಲಿವಿಷಾದಜಗವಿದು | ಬೆಳೆದಡಿಲ್ಲತಿಹರುಷವಗಲಿಕೆ | ಹೊಳೆದುಸುಳಿದಾಡಿದರೆಮಮತಾಮಾತ್ರತನಗಿಲ್ಲ || ಅಳಿದರಳಿವೆನುಪಾಂಡವರುಮೈ | ವೆಳದಡಾಮೈವೆಳವೆನವರ | ಜ್ವಲಚರಿತ್ರನದೆನ್ನಸುಚರಿತವೆಂಬನನವರತ || ೨ || ಮಾಡಿದನುರಾಜ್ಯವನನುಜರೊಡ | ಗೂಡಿಕಾಣಿಸಿಕೊಂಡುಪುರಜನ | ನಾಡುಬೀಡುಗಳನುಸಮಸ್ತಪಸಾಯ್ತಪರಿಜನವ || ಪ್ರಾಭಿಸರಿವಾರವನುನಾಯಕ | ವಾಡಿಗಳಗವರವರಿಗುಚಿತವ | ಮಾಡಿಪತಿಕರಿಸಿದನುಹರಿಮುತದಿಂದಯದುಸೂನು || ೩ || ಸುರನದೀನಂದನನಸೂಕ್ತಿಯ | ಲಿರದೆಮುತ್ತೀಕೃಷ್ಣರಾಯನ | ಸಿರಿವಚನಸಂಪನ್ನತತ್ವಜ್ಞಾನಸಿದ್ಧಿಯಲಿ || ಧರಣಿಪತಿನಿರ್ಧೂತಚಿತ್ತ | ಜ್ವರನೆನಿಸಿತಮ್ಮಂದಿರೊಡನೀ | ಧರೆಯಸಾಂಬ್ರಾಜ್ಯದಧುರಂಧರನಾಗಿರಂಜಿಸಿದ || ೪ || ಬಂದುಕಾಣಿಕೆವಿಡಿದುಬಾಗಿಲ | ಮುಂದೆನಿಂದಿಹರಾಯರಾಯರ | ವೃಂದವದುಕಡೆಯಿಲ್ಲಕಂಡುಚಿತದಲಿಹೊರವಡುವ || ಮಂದಿಗೆಡೆನೆರದಿಲ್ಲತಂಡಯ | ಹಿಂದುಮುಂದೋಲಗಿಸಸಲುಗೆಯ | ಸಂದಮಕುಟೇಶ್ವರರಗಣನೆಯದಿರಿವರಾರೆಂದ || ೫ || ಅಷ್ಟದಿಕ್ಪಾಲಕರುಕಾಣಿಕೆ |

ಗೊಟ್ಟುಕೊಂಡರುಧರ್ಮಜನಹರಿ । ವಿಷ್ಟರವನಿಂನಾವುದರಿಡವನೀಶನಂಘ್ರಿಗಳ ॥ ಮುಟ್ಟಿಹೊಡವಡುಸಲುಗೆತಮಗಳ । ವಟ್ಟ
ದೆಂಮಂದದಸುನಾಥರು । ಸೃಷ್ಟಿಯೊಳಗಿಲ್ಲೆನುತಲಿರ್ದುದುಭೂಪಸಂದೋಹ ॥ ೬ ॥ ನೆನೆದಡಾಕ್ಷಣಬಹುದುಮಳೆಸುರ । ಪನೆ
ಸವಾಹಿತಸೇವೆಯುದುಕಿೞ । ಲ್ಲನುಕ್ರಶಾಂತನಕಾಲದಲಿತಜ್ಜನಪದದಜನವ ॥ ವನಧಿವಾರಿಯನಡಕಿಸುವನರ । ಮನೆಗೆಬೇಡಿದ
ವಸ್ತುವನುಕೊಡು । ವನುಕುಬೇರನುಧನದವೆಸರನ್ವರ್ಥವಾಯ್ತೆಂದ ॥ ೭ ॥ ಕಾಮಿತಾರ್ಥವನೀವನಂದಿನ । ಭೂಮಿಬಿತ್ತದೆನಿ
ಜಸುವಸ್ತು । ಸ್ತೋಮವನುನೆರೆಕೊಡುವವದ್ರಿನದೀವನಾದಿಗಳು ॥ ಗೋಮಹಿಷ್ಯಾದಿಕದರಸತ । ದ್ಭೂಮಿಗಳುಕೆಸರಾದವಾ
ರಘು । ರಾಮರಾಜ್ಯವದೆನಿಸಿತಂದಿನಧರ್ಮಸುತರಾಜ್ಯ ॥ ೮ । ಆಧಿಗಳಭಯವಿಲ್ಲಘೋರ । ವ್ಯಾಧಿಗಳಭಯವಿಲ್ಲಶತ್ರುವಿ ।
ರೋಧಿಗಳಭಯವಿಲ್ಲವಾರ್ತಾಶ್ರವಣಮಾನಿಲ್ಲ ॥ ಬಾಧಿಸುವದೈವಾತ್ಮಭೂತದ । ಬಾಧೆಗಳಭಯವಿಲ್ಲಸಂತತ । ಸಾಧುಸಜ್ಜನ
ರಿಂದಮೆರೆದುದುಪಾಂಡುಸುತರಾಜ್ಯ ॥ ೯ ॥ ನೊಂದೆವೆಂಬವರಿಲ್ಲರುಳದಲಿ । ಬೆಂದೆವೆಂಬವರಿಲ್ಲಹಸಿದ್ಯೆ । ಕಂದೆವೆಂಬವರಿ
ಲ್ಲಬೇಡಿದಡೀಯ್ಯದವರಿಲ್ಲ ॥ ದಂಡುಗದಭಯವಿಲ್ಲಚೋರರ । ಬಂದಿಕಾರರಬಾಧೆಯಿಲ್ಲಾ । ನಂದಜೀವಿಗಳಲ್ಲದಿಲ್ಲಾನೃಪನ
ರಾಜ್ಯದಲಿ ॥ ೧೦ ॥ ಸ್ವರ್ಗಕಾಮುಕರಿಲ್ಲಮೋಣಪ । ವರ್ಗಕಾಮುಕರಿಲ್ಲಬಳ್ಳಿಕೀ । ವರ್ಗಮೂರರವಾರ್ತೆತದನುಷ್ಠಾನಮುಂ
ದಿಲ್ಲ । ನಿರ್ಗತಾಹಪ್ರ್ಯಾಹನೃಪಸಂ । ಸರ್ಗವಿಡುಭವಭವಸಹಸ್ರದ । ವರ್ಗದಲಿಸಂಭವಿಸಬೇಕೆಂಬುದುಜನವ್ರಾತ ॥ ೧೧ ॥
ಸಾಲದೇಬದುಕಕಟಪಾಂಡವ । ರೋಲಗದೊಳರೆಘಳಿಗೆಮಾತ್ರದ । ಬಾಳ್ಕೆಗೆಸರಿಬಹುದೆಸುರಪನ ಮೇಣಾಕಮಲಜನ ॥
ಆಲಯದಸುಖಕೃಷ್ಣವಿರಹಿತ । ಕಾಲವಿಲ್ಲದರೊಳಗೆನುತಜನ । ಜಾಲಕೈವಾರಿಸಲುಮೆರೆದುದುಪಾಂಡುಸುತರಾಜ್ಯ ॥ ೧೨ ॥
ಇಂತುಪೃಥ್ವೀರಾಜ್ಯಲಕ್ಷ್ಮೀ । ಕಾಂತನನುಪತಿಕರಿಸಿಲಕ್ಷ್ಮೀ । ಕಾಂತನಾಕುರುರಾಜತೇಜದಗದ್ದುಗೆಯಮೇಲೆ ॥ ಅಂತಕಾ
ತ್ಮಜನಿರಲುರಾಯರ । ಹಂತಿತಲೆವಾಗುತಿರೆಕಂಡುಮು । ರಾಂತಕನುಸಂತೋಷಪುಳಕಿತನಾದನಡಿಗಡಿಗೆ ॥ ೧೩ ॥ ಸಂದವೀ
ಪರಿಹಲವುತಿಂಗಳು । ಮಂದರಾದ್ರಿಧರಂಗೆಕುಂತೀ । ನಂದರಸ್ವಸ್ನೇಹಮಯಪಾಶಾನುಬಂಧದಲಿ ॥ ಒಂದುದಿನನಿಜಪುರಿಗೆಸಾರ
ಥಿ । ಗೆಂದನೆಲವೋಹೂಡುನಿಜಸು । ಸ್ಯಂದನವನಿದೆಗಮನವೆಂದನುದಾನವಧ್ವಂಸಿ ॥ ೧೪ ॥ ತಿಳುಹಿನಿಜಕಾರ್ಯವನುಬಾಂಧವ ।
ಬಳಗವನುಸಂತೈಸಿನೀವುಂ । ಮಳ್ಳಿಸಲಾಗದುಕಿರಿದುದಿನಕೈತಹೆನುತಾನೆನುತ ॥ ಕೆಲರಿಗೆರಗಿದನಪ್ಪಿದನುಕೆಲ । ಕೆಲರನುಚಿತೋ
ಕ್ತಿಯಲಿಮಾನಿಸಿ । ನಿಲಿಸಿರಾಜಾಲಯವನಸುರಾರಾತಿಹೊರವಂಟ ॥ ೧೫ ॥ ಏರಿದನುಮುರವೈರಿರಥವನು । ಜಾರಿಸುಂಮಾನದ
ಲಿವೆಥೆಕಾ । ಹೇರಿದವುಕ್ರಿಷ್ಣಾಂಘ್ರಿವಿಕಳವಿಯೋಗವಹ್ನಿಯಲಿ ॥ ಮೀರಿದವುನಯನಾಂಬುಮಿಗೆಬಾ । ಯಾರಿದರುಬಾಂಧವರು
ಪರಿಜನ । ಮೋರುಗುಡಿಸುತ್ತಿರ್ದದಾಪಾಂಡವರಪುರಲಕ್ಷ್ಮಿ ॥ ೧೬ ॥ ಕದಡಿದುದುಮನಕುಂತಿಗಾದ್ರೌ । ಪದಿಸುಭದ್ರಾದ್ಯ
ಖಿಳಬಾಂಧವ । ಸುದತಿಯರುಗಾಂಧಾರಿಮುಖ್ಯನೃಪಾಲನಂದನೆಯು ॥ ವಿದುರಧೃತರಾಷ್ಟ್ರರಯುಯುತ್ಸುವ । ವದನವಣಗಿತು
ದೌಮ್ಯಕೃಪಮುಖ । ರೆದೆವಿದಾರಿತವಾಯ್ತುವಿಶ್ವಂಭರನವಿರಹದಲಿ ॥ ೧೭ ॥ ಎಂತುಸೈರಿಸಲರಿವರಕಟಾ । ಕುಂತಿದೇವಿಯುರಾ
ಕುಮಾರರ । ಕಾಂತೆಯರುಮುರಹರನವಿರಹದತೀವ್ರದುಃಖದಲಿ ॥ ಹಂತಿಯೊಳಗೊಡನೂಟದೊಡನೆಯ । ಮಂತ್ರಸಂಭಾಷಣೆ
ಗಳೆಂಬಿವ । ನೆಂತುಮರವರುಬಿಡುವರೆಂತ್ಯೆಪಾಂಡುನಂದನರು ॥ ೧೮ ॥ ಕೇಳ್ದರುಬಿಡಲರಿಯರಾತನ । ಲೀಲೆಯನುಲವಮಾ
ತ್ರವನುಕಂ । ಣಾಲಿಯಲಿಕಂಡವರುಬಿಡುವರದೆಂತುಮುರಹರನ ॥ ಆಲಯವಹೊರವಡುತನಾರೀ । ಜಾಲವನುನಿಲಿಸಿದನುಕಂ
ಗಳು । ಕೇಳದೊಡನೈತರಲುಹೊರವಂಟನುನೃಪಾಲಯವ ॥ ೧೯ ॥ ಹಿಂಗಿದರುನಾರಿಯರುಕಂಗಳು । ಹಿಂಗಿದವುಮನವೊಂದೆ
ವಡದೇ । ಕಾಂಗದಲಿಬಿಗಿದುದುಮುರಾಂತಕನಂಘ್ರಿಕಮಲವನು ॥ ಅಂಗಜನಪಿತನೊಲವಿನಲಿರಾ । ಜಾಂಗಣಕೆಬರಲಿತ್ತಲಾಹ್ವ
ದ । ಯಾಂಗಣದಿಕಾಣುತ್ತಲಿರ್ದರುರಾಜಮಹಿಳೆಯರು ॥ ೨೦ ॥ ಮೊಳಗಿದವುನಿಸ್ಸಾಳರವಮಂ । ಗಳವೆನಲುಭೇರೀಮೃದಂ
ಗಾ । ವಳಿಗಳಾಪಟುಪಟಹದುಂದುಭಿಶಂಖಕಹಳೆಗಳು ॥ ಲಲಿತವೀಣಾವೇಣುವಿಪ್ರಾ । ವಳಿಯಮಂತ್ರಂಗಳಸುಘೋಷದ ।
ಕಳಕಳದೆಲಸುರಾರಿಬಂದನುರಾಜಮಾರ್ಗದಲಿ ॥ ೨೧ ॥ ಮಿಕ್ಕುಹೊಗಳುವಸೂತಮಾಗಧ । ರಿಕ್ಕವಿಸೆಕಂಕಣದಕೈಗಳ । ಲಿಕ್ಕೆ
ಲದಿಕ್ಕೆನೆಗಹಿಹೊಗಳುವಭಟ್ಟರೋಳಿಗಳ ॥ ಅಕ್ಕಜದಲಂದಡಿಗಡಿಗೆತೆಗ । ದಕ್ಕಿಗಳಭಿಮಂತ್ರಿಸಿದುದಾ । ಲೆಕ್ಕವಿಲ್ಲದವಿಪ್ರಕುಲ
ವೈತಂದುಬೊಗ್ಗಿನಲಿ ॥ ೨೨ ॥ ಮುರವಿರೋಧಿಯತ್ರೋಟಿಕಂಸಾ । ಸುರಕೃತಾಂತನತ್ರೋಟಿಸಾಲ್ವನ । ಶಿರವನೊಡವನತ್ರೋ
ಟಿನರಕಾಂತನಬಲುದೋಟಿ ॥ ಪರಮಪುರುಷನತ್ರೋಟಿಲೋಕೋ । ತ್ತರವಿಹಾರನತ್ರೋಟಿಬೇಡಿಂ । ದಿರದೆಸಾರಿದವಡಿಗಡಿ
ಗೆಸೂಳಗಿಪಕಹಳೆಗಳು ॥ ೨೩ ॥ ಪನಸೆಂಬೆನುಗಗನಗಮನವಿ । ಮಾನದಲಿತದ್ಧೃಷ್ಟಸುರಸುಮ । ನೋನಿರಂತರವರ್ಷದಲಿ
ಮುಳುಗಿತ್ತುನೋಹರದ ॥ ಆನೆಗಳಕುದುರೆಗಳತೇರ್ಗಳ । ಮಾನನಿಧಿಗಳತ್ವರಿತಕಲ್ಪಾಂ । ಬೋನಿಧಿಯಬಹಳತೆಯಲದ್ದುದು
ಧರಣಿಸಿಮುಷದಲಿ ॥ ೨೪ ॥ ಉತ್ತಮಾಂಗದಮೇಲೆಹಾವುಗೆ । ಪೊತ್ತುನಡದನುಭೂಪನಮಳ । ಛತ್ರವನುನೆಗಹಿದನುಫಲುಗುಣ
ಭೀಮಚಾಮರವ ॥ ಮತ್ತೆಯಮಳರುಹಸೆಪಸೀಗುರಿ । ಪೊತ್ತುನಡದರುದಿವ್ಯವ್ಯಜನಗ । ಳತ್ತಲುದ್ಧವಸಾತ್ಯಕಿಗಳೊಪ್ಪಿದರು

ಬಳಸಿನಲಿ ॥ ೨೫ ॥ ಮಾಮೇಯವಮಾಡಿಂಗಳಲಿಪುರ | ವನಿತೆಯರು ನೆರೆದೀಕ್ಷಿಸಿದರಾ | ಮುನಿಮನೋಹರನವನಿನಿರ್ಗತದು
ಷ್ಕಹದರುಹುದು ॥ ತನತನಗೆ ಪ್ರಾಂಜಲಿಯನಿ | ತ್ತನಿಬರೊಬ್ಬರಿಗೆಕೃಷ್ಣನ | ನನಿತುಜನವದಕೇಳಲೆಬ್ಬವರ್ಣಿಸಿದರೊಲವಿ
ನಲಿ ॥ ೨೬ ॥ ಈತಕಾಣಿರೆಸಕಲಭುವನ | ವ್ರಾತಪರದೇವತೆಯನಿಪನಾ | ಖ್ಯಾತನಾರಾಯಣನುಸತ್ವಗುಣಾನುಗತಿಯೆಂಬ |
ಜಾತನಂತಿರೆಯಖಿಳಭುವನ | ವ್ರಾತವನುರಕ್ಷಿಸಲುನಿಜನಿ | ರ್ಧೂತಮಾಯಾತಿಮಿರನಾಗಿಹನಾತನೋಡೀತ ॥ ೨೭ ॥ ಅವನಿ
ಚಕ್ರಯಲೀಚರಾಚರ | ಜೀವಸೃಷ್ಟಿವಿಧಾನವೀನಿಗ | ಮಾವಳಿಗಳೀಧರ್ಮಶಾಸ್ತ್ರಪುರಾಣರಾಶಿಗಳು ॥ ಆವನಿಂದಾದವುರಜೋ
ಗುಣ | ಭಾವಿತಾತ್ಮಕನಾತನೊಡನನು | ಜೀವಿಗಳುಸುರಲೋಕಪಾಲಕರಾತನೋಡೀತ ॥ ೨೮ ॥ ಕಣ್ಣಾದೆರೆದರೆಕೇಳದಿಕೇ
ಳಿ | ಮಣ್ಣಹುಡಿಯಹುದೀಪ್ರಪಂಚದ | ಬಣ್ಣಿಗೆಯಭುವನಾವಳಿಗಳವೃತಾಮಸಾಂಗದಲಿ ॥ ಗಣ್ಯವೇತಾನಿದರೊಳಗೆನಿ |
ರ್ಗಣ್ಯನೆನಿಸಿದಡುಳಿವಳೊಬ್ಬಳು | ಹೆಣ್ಣುಕಡೆಗಾವನಲಿಲಯಸುಳಿವಾತನೋಡೀತ ॥ ೨೯ ॥ ದುಷ್ಟರಾಜಸಮೂಹಶಾಸ್ತ್ರದ |
ಕಟ್ಟೆಯನುಕೆಡೆಯೆಱದುಧರ್ಮದ | ಬಿಟ್ಟಹುಲುಮೊಡಿದಡೆದನುಗ್ರಹದಿಕ್ಕೃಷ್ಟಿಯಲಿ ॥ ಹುಟ್ಟುಸಾವಿನಜೀವರಿಗೆವೈ | ಗೊಟ್ಟ
ಯುಗಯುಗಗಳಲಿಸಲಿವಸ | ದಿಟ್ಟದೇವತೆಯೆನಿಸಿಕೊಂಬಮಹಾತ್ಮನೋಡೀತ ॥ ೩೦ ॥ ಅವಭವದಲಿಭಜಿಸಿದರೊಮಸು |
ದೇವದೇವಕಿಯರುಮಹಾದೇ | ವವ್ರತದಲಿಪಡೆದರೋಶಿವಶಿವಕುಮಾರಕನ ॥ ಆವಪೂರ್ವಾನೇಕಜನ್ಮಶ | ತಾವಳೀಸಂಚಿತ
ಸಮಗ್ರತ | ಪೋವಿಭೂತಿಯಫಲಿತವಾಯಿತ್ತನನಧೂಜನಕೆ ॥ ೩೧ ॥ ಆವನೊಬ್ಬನವದವನಾನಿಗ | ಮಾವಳಿಯಶಿರಗಳಲಿವಿಜಿ
ತಮ | ನೋವಿಳಾಸರೆನಿಪ್ಪವರಯೋಗಿಗಳಮನದೊಳಗೆ ॥ ಭಾವಿಸುವರನವರತತ್ಪದ | ಸೇವಕರುತಾವೆಂಬಹೆಂಮೆಗೆ | ಜೀವಿ
ಸುವರುತ್ತಕ್ಕಳಭಕುತಿಯುಳ್ಳಾತನೋಡೀತ ॥ ೩೨ ॥ ಕೆಳದಿಕೇಳಾತಾಯೆಧರಣೀ | ತಳಕೆತಿಲಕಮಲಾಕುಶಸ್ಥಳ | ಸಲೆಜನ್ಮಂ
ಗಳವೆನಿಪ್ಪೀಕೃಷ್ಣನಂಘ್ರಿಗಳ ॥ ತಳೆದವಜ್ರವನಂಕುಶಧ್ವಜ | ಲಲಿತರೇಖೆಗಳೆಸೆವಹಜ್ಜೆಯ | ತಳೆಯಲಾಂತುಮಹಾತ್ಮರಂತೆಸೆ
ದಿರ್ಪಳನವರತ ॥ ೩೩ ॥ ಈತನೊಪ್ಪುಸನಾಮಪಾತಕ | ಘಾತಕವಮಾಡುವುದಲಾಸಾ | ಖ್ಯಾತುಕಂಡವರೇಸುಧನ್ಯರೊ
ಸಾಂಸೃಷ್ಟಿಯಲಿ ॥ ಘಾತಪಾತಕರಾವತಾಸಖಿ | ಸೋತವೀಕ್ಷಣಮನಗಳೀತನ | ಮಾತುಮಾಕುತಿಗೆಹೇತುವೆಂದುದುಪರವ
ಧೂನಿನಹ ॥ ೩೪ ॥ ಇಂತುತಂನನುಹೊಗಳುವಾಪುರ | ಕಾಂತೆಯರನುಡಿಗಳಿಗೆಮನದಲಿ | ಸಂತಸವಮಾಡುತ್ತಸಸ್ಮಿತನಯನ
ನುಡಿವವರ ॥ ಹಂತಿಯನುಮೋಹಿತ್ತಮುನಿಸ್ತ್ರಗ | ಯಾಂತರಂಗನಿವಾಸಲಕ್ಷ್ಮೀ | ಕಾಂತನುತ್ಸವದಿಂದಹಸ್ತಿನಪುರವಹೊರ
ವಂಟ ॥ ೩೫ ॥ ನಿಲ್ಲಿರೈಪುರವಾಸಿಗಳುನೀವ್ | ನಿಲ್ಲಿರೈಪರಿವಾರವೆಲ್ಲವು | ನಿಲ್ಲಿರೈಪರಿಜನಪಸಾಯಸಮಸ್ತಸಂದೋಹ ॥
ನಿಲ್ಲಿರೈಪಾಂಡವರುವಿಪ್ರರು | ನಿಲ್ಲಿರೈಮಾಗಧರುಸೂತರು | ನಿಲ್ಲಿರೈವಂದಿಗಳುನೀವೆಂನೆಂದನಸುರಾರಿ ॥ ೩೬ ॥ ದೂರನಾರ್ಗ
ಪನವಿಳಜನಪರಿ | ವಾರಸಹಿತಾಪಾಂಡವರುನಿಜ | ಚಾರುಚರಣವಭಜಿಸುತೈತರೆಕಂಡಕರುಣದಲಿ ॥ ತೇರನಿಳಿದಪ್ಪಿದನುಪಾಂ
ಡುಕು | ಮಾರವಿದುರಾಖ್ಯಖಿಳರಾಪರಿ | ವಾರವನುಸಂತೈಸಿಮರಳಿಚಿದನುಮುರಧ್ವಂಸಿ ॥ ೩೭ ॥ ಅಂಗರಕ್ಷೆಗೆಕಳುಹಿದನುಚ
ತು | ರಂಗಬಲವನುಧರ್ಮನಂದನ | ನಂಗರಕ್ಷೆಯದಾರದೋಶಿವಶಿವಜಗತ್ರಯದ ॥ ಮಂಗಳಾತ್ಮಕನೊಲವಿನಲಿಚತು | ರಂಗ
ಸಹಿತೈದಿದನುಬಹುದೇ | ಶಂಗಳನುಕಳ್ದಿತ್ತಲಾನತಗೋರ್ಲಿದುಹರಿಯಂದು ॥ ೩೮ ॥ ಅಲ್ಲಿಗಲ್ಲಿಗೆದೇಶದೇಶದೊ | ಳುಳ್ಳನಸು
ಪನಿತ್ತುಪೃಥ್ವೀ | ಪಲ್ಲಭರುಕಂಡುಚಿತದಲಿಸತ್ತುಕರಿಸಿವಿನಯದಲಿ ॥ ಸಲ್ಲಲಿತಸೌಭಾಗ್ಯಲಕ್ಷ್ಮಿಯ | ವಲ್ಲಭನಮೂರುತಿಯನಾ
ಜಗ | ವೆಲ್ಲಕಂಡುಚಿತದಲಿಪ್ರೋಲಾಡಿದುದುತಮತಮಗೆ ॥ ೩೯ ॥ ನೆಟ್ಟನಾಪಾಂಡವರಪಟ್ಟಣ | ತೊಟ್ಟಪರವೋತ್ಸವಸಹಿತ
ವಿಧಿ | ಪಟ್ಟಣವಸೇಮಾಡಿದನೊಮಾರ್ಗವನುಮನವಲಿದು ॥ ಬಿಟ್ಟಯಲಿತೆರಹಿಲ್ಲಕಾಣಿಕೆ | ಯೊಟ್ಟಲಿನವರವಸ್ತುಗಳತಲೆ |
ಮುಟ್ಟನೋಡುವಜನದನೆರವಿಗಳೊಳಗೆನಡೆತಂದ ॥ ೪೦ ॥ ಬಳಲಿದವುಕುದುರೆಗಳುರಥವನು | ನಿಲಿಸುನಾಳೆಪುರಪ್ರವೇಶವ |
ನೆಲವೊಮಾಡುವೆವೆಂದುದಾರುಕನೊಡನೆಹರಿಬೆಸಸೆ ॥ ನಿಲಿಸಿದನುರವಿಯಸ್ತಗಿರಿಯಿಂ | ದಿಳಿವುತಿರಲಾಗರ್ತದೊಳುಬಲ | ಜಲ
ಧಿಬಿಟ್ಟುದುಬಳಸಿನಲಿಸಾತ್ಯಕಿಯಸೇನೆಯಲಿ ॥ ೪೧ ॥ ಬಿಸಿಲಬಿಳುಪನುತಾರೆಗಳವಂ | ಚಿಸಿದಡಾತಾರಕಿಗಳನುನಿ | ರ್ಮಿಸಿದ
ಕನುಲೋದ್ಭವನಮಿರುಗುವಕಾಯಕಾಂತಿಯನು ॥ ಕುಸುಬಿಕೊಂಡವ್ರೊಹೇಳೆನಲುರವಿ | ರಸನೆಗಳುಕೆಂಪಾಯ್ತುವಿಧಿತಾ |
ಮಸಪಥಾಳಿಯಕವಿಸದಿರನೆಸೆಸಂಜೆರಂಜಿಸಿತು ॥ ೪೨ ॥ ಇಳಿದನಸುರಾರಾತಿರಥದಿಂ | ದಿಳೆಗೆಕೈಕೊಡಲುದ್ಧವನುವರ | ಸಲಿಲ
ದಲಿಮಾಡಿದನುಸಂಧ್ಯಾವಂದನಾದಿಗಳ ॥ ಬಳಿಕನಿತ್ಯಾತ್ಮಕಸ್ವರೂಪದ | ನೆಲೆಯಭಾವಿಸಿಭೋಜನವನಾ | ಜಲರುಹಾಕ್ಷನುಮಾ
ಡಿಶಿರಿಮಂಚದಲಿಪವಡಿಸಿದಾ ॥ ... ... ॥ ೪೩ ॥

ಅಂತು ಸಂಧಿ ೭ಕ್ಕಂ ಪದನು ೩೦೦ಕ್ಕೆ ಮಂಗಳಮಸ್ತು.

ಏಳನೆಯ ಸಂಧಿ.

ಶ್ರೀಕೃಷ್ಣನ ದ್ವಾರಕಾಪುರಿ ಪ್ರವೇಶ.

ಸೂಚನೆ ॥ ಹೊಕ್ಕನಸುರಾರಾತಿಪರಿಜನ । ಧಿಕ್ಕರಿಸೆನರವಾದ್ಯರವದಶ । ದಿಕ್ಕುಗಳನಾವರಿಸಲಂದಾ
ದ್ವಾರಕಾಪುರಿಯ ॥ ... ...

ಪದನು ॥ ಓಲಗಕೆಹರಿಚಕ್ರದಿಂಗಡ । ಲಾಲಯದಕಡೆಯಿಂದಬಹಪರಿ । ಓಲೆಸತ್ಪ್ರಾಚೀದಿಗಾಂಗನೆಕಿವಿಯಲಿಟ್ಟಸವ ॥
ವಾಜಿಯೇರವಿರಥದಮಿರುಗುವ । ಗಾಲಿಯೇಯನಲುದಯಶೈಲದ । ಮೇಲೆತಲೆದೋರಿದನುರವಿಕೀರಿದನುಕತ್ತಲೆಯ ॥ ೧ ॥
ಉದಯದಲಿಮಂಗಳಮಹಾರವ । ಪದಗುತಿರೆನಿಜಚರಣಕರತಳ । ವದನಕಮಲವತೊಳೆದುಸಂಧ್ಯಾವಂದನವಮಾಡಿ ॥ ಮುದ
ದಲಾನಿಜರಾಜ್ಯದಾನಾ । ರ್ಥದಸಮಸ್ತಪ್ರಜೆಗಳಾನಂ । ದದಲಿಮುಳುಗಲುನೋಳ್ಪಿದನುಶಂಖವನುಮುರವೈರಿ ॥ ೨ ॥ ಕರಕ
ಮಲಮುಖಕಮಲಮಧ್ಯ । ಸ್ಫುರದಮಣಿಮಯನೆಸವಕಾಂತಿಯ । ಪರಮಶೋಭೆಯನಾಂತುನಿರ್ಮಲಪಾಂಚಜನ್ಯವನು ॥
ಭರಿತಬಹಳಧ್ವನಿಯಲಂಜನ । ಗಿರಿಯತುದಿಯಲಿಮೆರೆವಕಮಲಾ । ಕರದೊಳೊಪ್ಪುವರಾಜಹಂಸೆಯವೊಲುರಂಜಿಸಿತು ॥ ೩ ॥
ಘನಭಯಾಪಹವೆನಿಪಶಂಖದ । ರವವನಾಲಿಸುತಾಕ್ಷಣನೆಜೀ । ವವನುಪಡೆದವರೇಳುವಂದದಲೆದ್ದುಸಂಭ್ರಮಿಸಿ ॥ ತವತವಗೆ
ಹರಿಗಾಬತನಕೋ । ತ್ಸವದಲಾನರ್ತಾವನಿಯಜನ । ನಿವಹಬಂದುದುನಮಿಸಿಕಂಡುದುಕೃಷ್ಣನಂಘ್ರಿಗಳ ॥ ೪ ॥ ಮಳೆಸುರಿಯೆ
ಬಹನದಿಗಳುಕ್ಕುವ । ಸಲಿಲಸಂಪತ್ತಿನಲಿಘನತರ । ಜಲನಿಧಿಯನೈತಂದುಕೂಡುವವೊಲುಜನನಿವಹ ॥ ಲಲಿತಶಂಖಧ್ವನಿಗೆವಿ
ರಪಾ । ನಲನಬೇಗೆಗಳಡಗಿಹರಿಪದ । ಜಲರುಹವನೈತಂದುಕಂಡುದುವಿದಿತವಿಭವದಲಿ ॥ ೫ ॥ ಜಯಜಗನ್ಮಂಗಳಮಹೋದ
ಯ । ಜಯಜಗಜ್ಜೀವನಜಗನ್ಮಯ । ಜಯಜಗಜ್ಜನ್ಮಾದಿಸಂಕ್ಲೇಶಾಪಹಾರಿಜಯ ॥ ಜಯಜಗತ್ಕಂಟಕಸುರವ್ಯಯ । ಜಯಜ
ಯಾಪರ್ಜಿತಧನಂಜಯ । ಜಯನಿರಾಮಯನಾಮನಿರ್ಜಿತಕಾಲಕರ್ಮಜಯ ॥ ೬ ॥ ತಾಯನಗಲಿದಶಿಶುನಿಕರದೊಡ । ಲಾ
ಯಸಕೆನರ್ಮಡಿಯನಲುಮೇ । ಘಾಯುಗಳುಬದುಕಿದಡೆಫಲವೇನಿಂದುಪರಿಯಂತ ॥ ಜೀಯಜೀವಾತುಮನನುಳಿದೀ । ಕಾಯ
ಕರಣಂಗಳಿಗೆಚೇಷ್ಟೆ । ಮಾಯವಾವುದೆನುತ್ತಮೈಯಿಕ್ಕಿದುದುಜನನಿವಹ ॥ ೭ ॥ ನಗೆಹಿದಭಯಕರಾಗ್ರದಲಿನೆಸು । ನಗೆಯ
ನೋಟದಲೆತ್ತಿಕರುಣಾ । ಳುಗಳದೇವನುಸಂತವಿಟ್ಟನುಸನ್ನುತರನೊಲಿದು ॥ ಅಗಧರನುಸಂತೋಷದಲಿನಿಜ । ನಗರಿಗೈತರುತಿ
ರಲುದೂತಾ । ಳಿಗಳುಹರಿದರುಮುಂದೆಕೈಸೂರೆಗಳತವಕದಲಿ ॥ ೮ ॥ ದೇವನಿದೆಯಿದೆಬಂದನನುಗತೆ । ದೇವನಿದೆಯಿದೆಬಂದ
ಜೀವಿಜ । ನೀವದೇವರದೇವನಿಯಿದೆಬಂದನಿದೆಬಂದ ॥ ಹೂವಲಿಯಪುರರಚನೆಗಳಸಂ । ಭಾವನೆಯನೆಸಗುವುದೆನುತವಸು ।
ದೇವನೋಲಗಕಾಗಿಬಂದುದುವಂದಿಸಂದೋಹ ॥ ೯ ॥ ಹೆಚ್ಚಿದನುಪುಳಕದಲಿಕೆಂಗಳು । ಮುಚ್ಚಿದವುಹರುಷಾಶ್ರುಪೂರದ । ಉ
ಚ್ಚ್ರಿತಾಗಮನೈಕವಾರ್ತಾಶ್ರವಣಮಾತ್ರದಲಿ ॥ ಬಿಚ್ಚಿಬೀಸಾಡಿದನುದೂತರಿ । ಗೊಚ್ಚತವಸಭಿಜನದಹರುಷದ । ಹೆಚ್ಚುಗೆಯ
ಲೆದ್ದನುಸುಸಂಭ್ರಮದಿಂದವಸುದೇವ ॥ ೧೦ ॥ ಏನನೆಂಬೆನುರಾಮಕಾಮುಗ । ದಾಸಿರುದ್ಧಾದ್ಯೈತಿರಥರುಹರಿ । ಸೂನುಗಳುಸಂ
ಬಂಧಿಸಾತ್ವತವೀರರುತ್ಸವದ ॥ ಮಾನಿನಿಯರೊಸಗೆಗಳಭಾಜನ । ಮಾನಸಯನಂಗಳನುಬಸುಬುಮ । ಹಾನಗರನೆರದಿದಿರುನ
ಡದುದುನಿಮಿಷಮಾತ್ರದಲಿ ॥ ೧೧ ॥ ಕಟ್ಟುಗುಡಿತೋರಣಗಳನುಹೊಸ । ಪಟ್ಟೆಯಲಿಪಟ್ಟಾವಳಿಯಮೇ । ಲ್ಕಟ್ಟುಬಿಗಿಯಲಿಕ
ಳಸಕನ್ನಡಿವಾದ್ಯರಭಸದಲಿ ॥ ಕೊಟ್ಟುಗೆಯರೈತರುವತೇರ್ಗಳ । ಥಟ್ಟುಹೊರವಡಲಾನೆಕುದುರೆಗ । ಳೊಟ್ಟಿಗಳಮೇಲಿರಿಸು
ಭೇರಿಯನೆನುತಹೊರವಂಟ ॥ ೧೨ ॥ ಜಡಿವಘನನಿಸ್ಸಾಳಭೇರಿಗ । ಳೆಡೆಗಲಿಪಿಕೊಂಬುಗಳಬಿಡದು । ಘ್ಘಡಿಪಬಿರುದಿನಕಹಳೆ
ಗಳರವವೇಣುನಿಸ್ವನದ ॥ ಜಡಿವಪಟಹಮೃದಂಗಘಂಟೆಗ । ಳಡಿದಶಂಖಮಹಾನಿನಾದವ । ಗಡಬಡಿಕೆಘಲ್ಲಿಸಿದುದಬುಜಭವಾಂ
ಡಮಂಡಲವ ॥ ೧೩ ॥ ಸೂತಮಾಗಧವಂದಿಗಳಸಂ । ಖ್ಯಾತವಿಕ್ರಮಪಾಠಕರಮಹಿ । ಮಾತಿಶಯಗಾಯಕರವರ್ತನನಾಟ್ಯ
ಕೋವಿದರ ॥ ಚಾತುರಿಯನರಿವವರಭಟ್ಟರ । ಜಾತಿಹಾಸ್ಯವಿಶಾರದರಜನ । ಜಾತವೆಯ್ದುದುದಾನೆಕುದುರೆಯಮೇಲೆಸಂದಣಿಸಿ ॥
ತೇರುಗಳನೇರಿದರುಮೆರವು । ಪ್ಪರತಿಯಸೊಡರುಗಳತಳಿಗೆಯ । ವಾರನಾರೀನಿವಹವೆತ್ತಿದಕಳಸಕನ್ನಡಿಯ ॥ ಚಾರುವದನದ
ಚಪಲನಯನದ । ಚಾರುದುರುಬಿನಜಡಿವಮೊಲೆಗಳ । ಮಾರಲಗುಗಾತಿಯರುನಡೆದರುಕೂಡೆಸಂದಣಿಸಿ ॥ ೧೪ ॥ ಅಗ್ರದಲಿ
ರಥವೇರಿವಸುದೇ । ವೋಗ್ರಸೇನಕ್ರೂರರಾಮರು । ದಗ್ರತೇಜೋನಿಧಿಗಳೈದಿದರಾನೆಕುದುರೆಯಲಿ ॥ ವಿಗ್ರಹಾಧಿಕವೀರಸು
ಕುಮಾ । ರಾಗ್ರಣಿಪ್ರದ್ಯುಮ್ನಮುಖ್ಯರು । ಸುಗ್ರಯೆದುನಾಯಕರವಂಗಡವೆಯ್ದಿತೊಗ್ಗಿನಲಿ ॥ ೧೫ ॥ ದೇವದೇವನದರುಶನ
ಕೆಳೂ । ದೇವವರರೆಯ್ದಿದರುಮಂತ್ರದ । ಜಾವಡಿಯನಾಲಗೆಯದ್ರುತದೂರ್ವಾಕ್ಷತಾಂಕುರದ ॥ ಅವಿಮಾನಾವಳಿಯಲೊಸರು

ವ । ಹೂವಳೆಯಭೂಸುರಸಮಗ್ರನು । ಜಾವಿಭವದಿಂದಿದಿರುಗೊಂಡರು ಕಮಲಲೋಚನನ ॥ ೧೭ ॥ ದೂರದಲಿ ಕಾಣುತ್ತ ಹರಿ
ಹೊಂ । ದೇರನಿಳಿದೈತಂದವನಿಗೆ । ಚಾರುಚರಣಸ್ಪರ್ಶಪರಮಾನಂದವನುಕೊಡುವ ॥ ಶೌರಿತಲೆವಾಗಿದನುತಂದೆಗೆ । ಗೌರ
ವದಲಂದುಗ್ರಸೇನಾ । ಕ್ರೂರರಾಮಪ್ರಭೃತಿವಿಪ್ರಾವಳಿಗೆಕೈಮುಗಿದ ॥ ೧೮ ॥ ಉಂನತೋಂನ್ನತಮಹಿಮನಾಸ । ನ್ಮಾನ್ಯರನು
ಸತ್ಕರಿಸಿಬಳಿದ । ನೈಂನ್ಯಕರಸಂಗ್ರಹಣಸುಸ್ಮಿತಮಧುರಸೂಕ್ತಿಯಲಿ ॥ ಎಂನವರಂನಿಸದಾದನೆಂದುರೆ । ಭಿಂನವಾದವರಿಲ್ಲನರವ
ನು । ಪಾರ್ನವದಲೆಸೆದಿಪ್ಪಹಿಂಸೋತ್ತಮರುಮೊದಲಾಗಿ ॥ ೧೯ ॥ ಎರಗಿತನಗಿದಿರಾಗಿತಲೆಗಳ । ತುರುಗಿದಂಜಲಿಗಳಲಿಜನವ್ಯೂ
ನುರದುಮೂರ್ತಿಸುಧಾರಸಾಸ್ವಾದನದನಿಜಸುಖದ ॥ ಸೆರೆವಿಡಿದುಕಂಗಳಲಿಬೇರೊಂ । ದರಿಯದಿರಲೊಪ್ಪುವಕರಾಗ್ರದ । ಸೆರ
ಗುಮೋರಿಪುರಾರಿನಗುತೇರಿದನುಮಣಿರಥವ ॥ ೨೦ ॥ ಪುರದವನಲಕ್ಷ್ಮಿಯನುಕಮಲಾ । ಕರದಕಳಹಂಸೆಗಳಗತಿಯನು ।
ಮೆರೆವತುಂಬಿಯಗೀತವನುಕೋಗಿಲೆಯಸುಸ್ವನದ ॥ ಭರಿತಫಲಭಾರದಲಿಕಾಸುವೆಂ । ತ್ಕರದಬೆರಗಿದಕಲ್ಪತರುಗಳ । ಥರಥರ
ದತಲೆವಾಗುಗಳನೀಕ್ಷಿಸುತನಡೆತಂದ ॥ ೨೧ ॥ ಬಂದುಸುಮುಹೂರ್ತದಲಿಭೂಸುರ । ವೃಂದದಾಶೀರ್ವಾದಘೋಷದ । ಒಂದು
ಮುರರಿಪುಹೊಕ್ಕನಾದ್ವಾರಾವತೀಪುರವ ॥ ವಂದಿಗಳಮಾಗಧರಸೂತರ । ವೃಂದಕೈವಾರಿಗಳನೊಳಗುವ । ದುಂದುಭಿಯಭೇರಿಗಳ
ಕಹಳಾವಾದ್ಯರಭಸದಲಿ ॥ ೨೨ ॥ ಪುರದಗೋಪುರಮಾರ್ಗದಲಿಥರ । ಥರದಲೊಪ್ಪುವಚಿತ್ರರಚನೆಯ । ಪರಿಪರಿಯತೋರಣದ
ಮುಕ್ತಾಫಲದಶೋಭೆಗಳ ॥ ವರಪತಾಕಾವಳಿಯವಸನೋ । ತ್ಕರನಿವಾರಿತಸೂರ್ಯರಶ್ಮಿಯ । ಹರಹುಗಳಪುರಲಕ್ಷ್ಮಿಯನು
ನೋಡುತ್ತನಡೆತಂದ ॥ ೨೩ ॥ ಮನೆಮನೆಯಬಾಗಿಲಲಿನಿಲಿಸಿದ । ತೆನೆವೆರೆಸಿದಿಕ್ಷುಗಳಹೊರೆಗಳ । ಗೊನೆವೆರೆಸಿರಂಜಿಸುವರಂ
ಭಾಪೂಗಪತ್ರಗಳ ॥ ಕನಕಕಲಶದಕಂನಡಿಯಸೊಡ । ರಿನನಿವಾಳಿಯಕಂನೆಯರಸಂ । ಜನಿತಸಂಭ್ರಮಗಳನುಹರಿನೋಡುತ್ತನ
ಡೆತಂದ ॥ ೨೪ ॥ ಪ್ರೋವಲಿಯಬೀದಿಗಳಬಹುವ । ರ್ನವಲ್ಲಿಯಕೃತರಂಗವಲ್ಲಿಯ । ಪೋಪನಾಂಕುರಲಾಜೆದಧಿದೂರ್ವಾಕ್ಷತಾವ
ಳಿಯ ॥ ಗಾವಳಿಯಚೊಪ್ಪುವಪುರಪ್ರಮು । ದಾವಳಿಯಜೊಂದಳಿಗೆಗಳವ । ಟ್ಟಾವಳಿಯನೀರಾಜನವನೀಕ್ಷಿಸುತನಡೆತಂದ ॥ ೨೫ ॥
ದೇವದೇವನನೀಕ್ಷಿಸಲುಯದು । ದೇವಿಯರುಹರಿದೇರಿದರುಹ । ರ್ಮ್ಯಾವಳಿಯಮಣಿಕಾಳ್ತವರುಗಂಗಳನುಬೇಸಾಡಿ ॥ ಆವಕೆಲಸ
ದಲಿದ್ದರದನಾ । ವಾವವಿಧದಲಿಬಿಟ್ಟುಹರಿವದ । ನಾವಲೋಕನಪರಮಸುಖಪರವಶೆಯರೆಂಬೆನಿಸಿ ॥ ೨೬ ॥ ಆವಮೋಹನಶಕ್ತಿ
ಯೋಮೇ । ಣಾವಗುಣಸಂಪತ್ತಿಯೋತಾ । ನಾವಲೋಕಾಕರುಷಣದಸೌಭಾಗ್ಯಸಂಪದವೋ ॥ ಆವನರಿವನುಶಿವಶಿವಾಶ್ರೀ ।
ದೇವಿಯರುಮನಸೋತುಮೋಕ್ಷದ । ರಾವನಂಗೋಪಾಂಗಲಕ್ಷ್ಮಿಗೆಸವತಿಯೆಂದೆನಿಸಿ ॥ ೨೭ ॥ ತೋಳುಗಳನಾಶ್ರೈಸಿದರುದಿಗು ।
ಪಾಲಕರುಯೋಗಿಗಳದಾವನ । ಕಾಲುವಿಡಿದೇಕೆಲವರೀಸಂಸಾರಸಾಗರವ ॥ ಶ್ರೀಲತಾಂಗಿಯರಾವನಂಗದ । ಮೇಲೆಮನೆಯಾವ
ನಮುಜಾಬ್ಜದಿ । ಶಾಲಮುಖರಸಪಾನಭೋಜನವಾಯ್ತುಕಂಗಳಿಗೆ ॥ ೨೮ ॥ ಪಲ್ಲವದಸತ್ತಿಗೆಯನಭದಲಿ । ಚೆಲ್ಲಿಚಲಿಸುವಚಾ
ಮರಂಗಳ । ಘಲ್ಲಣಿಯಝಲ್ಲರಿಯಬಹಳಧ್ವಜಪತಾಕೆಗಳ ॥ ನಿಲ್ಲದಮರರುಸುರಿವಸುರಸವ । ಮಲ್ಲಿಗೆಯಮೊಗ್ಗೆಗಳಮಳೆಯ
ಲಿ । ಫುಲ್ಲನಾಭನಮೂರ್ತಿಮಿಗೆರಂಜಿಸಿತುಮೂಜಗಕೆ ॥ ೨೯ ॥ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ ॥
ಒಡನಿರಲಿಬೇಲಿರಲಿಹಿಂದಟ್ಟಿ । ಯಿಡುವಕಂಗಳಕಾಣೆನಾಜಗ । ದೊಡೆಯನಂಗೋಪಾಂಗಶೋಭಾಮೃತರಸಾಯನವ ॥ ಕುಡಿ
ಕುಡಿದುತೇಗಿದಪ್ರುನೀಗಿದ । ರೊಡನೊಡನೆಸಾಕೆಂಬುಬುದ್ಧಿಯ । ಕಡೆಯಕಾಣದೆಕಡಲಲೋಲಾಡಿತ್ತುತಳತಂತ್ರ ॥ ೩೦ ॥ ನಿಲ್ಲಿ
ರೈಸಾಮಂತಪ್ರಮುಖ್ಯೀ । ವಲ್ಲಭರುಜನಪದನಿವಾಸರು । ನಿಲ್ಲಿರೈನೆರೆನಿಲ್ಲಿರೈನಿಜವೀರಪರಿವಾರ ॥ ನಿಲ್ಲಿರೈಪುರವಾಸಿಗಳುನೀವ್ ।
ನಿಲ್ಲಿರೈಯದುವೀರರೆಲ್ಲರು । ನಿಲ್ಲಿರೈನೀವೆನುತಹೊಕ್ಕನುರಾಜಮಂದಿರವ ॥ ೩೧ ॥ ದೇವಮುನಿನುತಚರಣನಂದಾ । ದೇವ
ಕೀದೇವಿಯರಪದರಾ । ಜೀವದಲಿತಲೆವಾಗಿಪೊಡವಡಲೆತ್ತಿಮಸ್ತಕನ ॥ ದೇವದೇವನೆಬಾಸಮಸ್ತರ । ಕಾವದೇವನೆಬಾರೆಹೊತಂ
ನಯ । ಜೀವಜೀವನೆಬಾಯೆನುತತೆಗೆದಪ್ಪಿದಳುಮಗನ ॥ ೩೨ ॥ ಒಸೆದುತೊಡೆಯಲಿಕುಳ್ಳಿರಿಸಿಕೊಂ । ಡೊಸಗೆಮಿಗೆತಕ್ಕೈ
ಸಿಕಂಗಳ । ಸೋರಿಸುವಾನಂದಾಶ್ರುಗಳಲಭಿಷೇಕವನುಮಾಡಿ ॥ ನಸುನಗೆಯಮುಡಿವರ್ಗದಲಿಮಾನ । ದೆಸೆವಗುಣಗಂಧದಲಿಸತಿಸಂ
ತಸನಪರಮಾನಂದದಲಿಪೂಜಿಸಿದರಂದ್ಯಷೆಯ ॥ ೩೩ ॥ ಬೀಳುಕೊಂಡಲ್ಲಿಂದಲಕ್ಷ್ಮೀ । ಲೋಲನೆಪ್ಪುವತಂನನಿಜರಾ । ಜಾಲ
ಯವನೈತಂದುಹೊಕ್ಕನುವಿವಿಧವಿಭವದಲಿ ॥ ಮೇಳವರಹದಿನಾರುಸಾವಿರ । ಬಾಲಕಿಯರರಮನೆಗಳನೇಕವಿ । ಶಾಲಲಕ್ಷ್ಮಿಯ
ಮಾಳಿಗಳಪರಿಭವನನೀಕ್ಷಿಸುತ ॥ ೩೪ ॥ ಇರಲೊಡನೆತಂತಮ್ಮಬೇನನ । ದಲಸನನುದೂರದಲಿಕಂಡು । ಬ್ಬರದಪುಳಕೋತ್ಕ
ರುಷದಲಿಮನಸುಉಗಿಸಂಭ್ರಮಿಸಿ ॥ ಸುರಿವಸುಖಬಾಷ್ಪವನುಲಜ್ಜಾ । ಭರದಲೆಸರುವಕಂಗಳಿಂದಲಿ । ಪರಮಪುರುಷನನಿದಿ
ರುಗೊಂಡಪ್ಪಿದರುಕಮಲಮುಗೆ ॥ ೩೫ ॥ ಕೆಲಸಮಕ್ಕಳನೆತ್ತಿಕೊಂಡಾ । ಸಲುಗೆಯಲಿಪೊದ್ದಿದರುಹರಿಯನು । ಕೆಲರುಕಂಗಳಲ
ಪ್ಪಿದರುಹೃದಯದಲಿಕೆಲಕೆಲರು ॥ ಚೆಲಿಸಲರಿಯರುಕೆಲರುಮನಸಿ । ಟ್ಟಳೆಯನಂಗುಟದಿಂದಬರೆವುತ । ಹಲವುಭಾವದಭಂಗಿಗ
ಳಲಂಗನೆಯರೊಪ್ಪಿದರು ॥ ೩೬ ॥ ಇಳೆಯನೆಯಲಿಪೋಣಾದೂರದ । ಲಿರಲಹರ್ನಿಶವವರಿಗಾಕ್ಯೇ । ಶ್ವರನಚರಣಸ್ಮರಣೆಸು

ಷ್ಣುಪ್ರಮುಖಭುವನಾಧೀಶ್ವರೇಶ್ವರರು || ಅನಿಖಿಳಜನನಿವಹವೇಕ | ಸ್ಥಾನವಾಯ್ತುತ್ಸಾಹವರಸಿ | ನ್ಮಾನದಲಿಸಕಲೇಶನೆಸ
ದನುವಿದಿತವಿಭವದಲಿ ||೫೬|| ನಗೆಮೊಗದಕೆಂಜೆಡೆಯಭಾಳದ | ಮುಗಿದನಯನದಶಶಿಕಳೆಯಭಾ | ಸಿಗದಫಣಿಕುಂಡಲದ
ಭಾಸುರಮಕುಟಮಣಿಗಣದ || ಸ್ಥಗಿತಶೂಲಕಪಾಲಮೃಗಡಮ | ರುಗದಲೊಪ್ಪುವತೋಳುಗಳಪುಲಿ | ದೊಗಲದಿವ್ಯಾಂಬರದ
ಲಖಿಳೇಶ್ವರನುರಂಜಿಸಿದ ||೫೭|| ಭಾಸಿಗದಮಾಕ್ತಿಕದಲೊಪ್ಪುವ | ಕೇಶಬಂಧದಮೆರವಮದನಶ | ರಾಸನವನೇಡಿಸುವಹುಬ್ಬಿನ
ಲಕ್ರಿಯಲೋಚನದ || ಭೂಸುರಸ್ಮಿತವದನಮಧುರವಿ | ಳಾಸದಧರದದಂತಪಂಕ್ತಿಯ | ಲೀಶನೆಡದೊಡೆಯಲ್ಲಿಮೆರದರುಗಾರಿ
ದೇವಿಯರು ||೫೮|| ಒಸಗೆತಳ್ಳಿತ್ತುದುಸಕಲಭುವನ | ಪ್ರಸರದಲಿಪರಿತೋಷಜಲನಿಧಿ | ಮುಸುಕಿಮೂಡಿದುದಖಿಳಸಚರಾಚರ
ದಚೇತನವ || ವಸುಧೆಬೆಳದುದುಬಿತ್ತದಭಿಕಾಂ | ಕ್ಷಿಸಿದಫಲವನುಪರಮಮಂಗಳ | ದೆಸಕದೇಳ್ಗೆಗೆಹೊಗಳಲರಿದಾಯ್ತುತ್ತರೋ
ತ್ತರವ ||೫೯|| ಕೌರನಾಗ್ರಣಿಕೇಳುತಾರಕ | ವೈರಿಕಾಲಾಂತರಕೆಬಳ್ಳಿಕಕಾ | ಮಾರನುದಿಸಿದನುತ್ತರೋತ್ತರವಾಯ್ತುಸುರರು
ದಯ || ಭೂರಿಹರುಷವತಳ್ದರಖಿಳಮ | ನೋರಥಾವಾಪ್ತಿಯಲಿಮೇನಕಿ | ಧಾರುಣೀಧರರಸೆವಸೌಖ್ಯದಸಾರವಿಭವದಲಿ ||
ಇದುಮಹಾಮಂಗಳಮಹೋದಯ | ವಿದುಮನೋರಥಸಿದ್ಧಿಕರವಿಂ | ತಿದುಸದಾನಂದಾನುಭವಸಾಧನದಸಾಕಾರ || ಇದುಸ
ದಾಯುಃಕೀರ್ತಿಪುಣ್ಯ | ಪ್ರದಧನಪ್ರದವಖಿಳವಿದ್ಯಾ | ಪ್ರದವಿದೇಗಿರಿಜಾವಿವಾಹಮಹೇಶಚಾರಿತ್ರ ||೬೧|| ಪರಮತತ್ವರಹ
ಸ್ಯವಹಶಿವ | ಚರಿತೆಯಿದನಾದರದಲೋದುವ | ಧರೆಯಲಭಿವರ್ನಿಸುವಕೇಳುವಪುಣ್ಯಪುರುಷರನು || ಹಿರಿದುತಂನವರೆಂದುಸೆರೆ
ಪತಿ | ಕರಿಪಿನಿತ್ಯಾತುಮಮಹೇಶ್ವರ | ನುರುದಯಾನಿಧಿಮಾಳ್ಪನಿಹಪರಸೌಖ್ಯಸಂಪದವ || … … ||೬೨||

ಇಂತು ಸಂಧಿ ೫ಕ್ಕಂ ಪದನು ೨೫೭ ರಕ್ಕೆ ಮಂಗಳಮಸ್ತು.

ಆರನೆಯ ಸಂಧಿ.

ಧ್ರುವನು ತಪಸ್ಸಿಗೆ ಹೊರಟದ್ದು.

ಸೂಚನೆ || ಧ್ರುವಗತಿಯನಾರ್ಚಿಸುವಭರದಲಿ | ಧ್ರುವನುನಾರದಮುನಿಪನುಪದೇ | ಶವನುಮನದಲಿಧರಿಸಿ
ಹೊರವಂಟನುತಪೋವನಕೆ || … … …

ಪದನು || ವಿದುರಕೇಳ್ಸೈಸಕಲಲೋಕಾ | ಭ್ಯುದಯನಿಶ್ರೇಯಸದಗತಿಗೀ | ಮೊದಲಸಾಧನವೆನಿಪಮನುವಂಶದಪರಂ
ಪರೆಯ || ಸುದತಿಯರಸಂತಾನವನುಹೇ | ಆದೆನುತತ್ಪುತ್ರೋಪಲಾಲಿತ | ಪದಮಳೋರುಚರಿತ್ರವನುಹೇಳುವೆನುಕೇಳೆಂ

ದ॥೧॥ಆಮುದಾಮನುವನಿತೆಶತರೂ । ಪಾಮಹಾಸತಿಸಕಲಭುವನ । ಕ್ಷೇಮಕಾರಣವಿಗ್ರಹರನಾತ್ಮಜರನಿಬ್ಬರನು ॥ ಭೂ
ಮಿಪಾವನಚರಿತರನುಲ । ಪ್ರೇಮನೋಹರನಂಶಜರನಾ । ಭೂಮಿಪತಿಗಳುಪರಮಪುಣ್ಯಶ್ಲೋಕರೆನಿಪವರ ॥ ೨ ॥
ಮಾನವೇಂದ್ರಪ್ರಿಯವ್ರತಾಂಕರೋ । ತ್ತಾನಪಾದರೆನಿಪ್ಪಹೆಸರಲಿ । ಮಾನಸಿದ್ಧಿಗಳುಮೆರೆದರತಿಶಯತೀವ್ರತೇಜದಲಿ ॥ ಮಾನಿನಿ
ಯರಿಬ್ಬರುಸುನೀತಿಮ । ಹಾನಿತಂಬಿನಿಸುರುಚಿಯೆನಲು । ತ್ತಾನಪಾದನೃಪಾಲನರಸಿಯರೆಸೆದರೀಧರೆಗೆ ॥ ೩ ॥ ಹಿರಿಯಪಟ್ಟದ
ರಾಣಿನೃಪತಿಗೆ । ಪರಸುನೀತಿಲತಾಂಗಿಕಿರಿಯಳು । ಸುರುಚಿಮೋಹದರಮಣಿತತ್ಸುತನುತ್ತಮಾಹ್ವಯನು॥ವರಕುಮಾರಕನಗ್ರರ
ಮಣಿಗೆ । ಪರಮಭಾಗವತಾಂಕಧ್ರುವನವ । ತರಿಸಿದನುಬಳಿಕುತ್ತರೋತ್ತರವಾಯ್ತುನೃಪನುದಯ ॥ ೪ ॥ ಪೊಡವಿಪತಿಯೊಂದು
ದಿನತಂನಯ । ತೊಡೆಯಮೇಲುತ್ತಮನನಾಡಿಸು । ತ್ತೊಡನೆಸುರುಚಿಯನೋಲಗದಲಿಕುಳ್ಳಿರಲುಸಭೆಯೊಳಗೆ ॥ ಬತನೆಕುಳ್ಳಹೆನ
ಪ್ಪತಂನನು । ತೊಡೆಯನೇರಿಸಿಕೊಳ್ಳೆನುತಲಾ । ಪ್ಪಿಡಿದುಕಂಬನಿದುಂಬಿಕಾಡಿದನಂದುಧ್ರುವನಳುತ ॥ ೫ ॥ ಎತ್ತಿಕೋತಂನುವ
ನುತೊಡೆಗೆನು । ತತ್ತಕಾಡುವಶಿಶುವನಾಭೂ । ಪೋತ್ತಮನುಕಾಣುತ್ತಕಾಣದವೊಲುಪೇಕ್ಷೆಯಲಿ ॥ ಉತ್ತಮನತಾಯಸ್ಸುರು
ಚಿಮುನಿದಪ । ಳೆತ್ತಿಕೊಂಡಡೆನುತ್ತಸಂಶಯ । ಚಿತ್ತನಿರಲಾಲಲನೆನುಡಿದಳುಜರೆದುಬಾಲಕನ ॥ ೬ ॥ ಏರುವರೆಸಿಂಹಾಸನಕೆನೀ
ನಾರುಹೋಗೆಲೆಹೋಹೆತಂನಕು । ಮಾರಕಂತೀರವನಪೊಲುಸೌಭಾಗ್ಯನೇನೀನು ॥ ಆರಿಗಳುವೆವ್ಯಥಾಮನೋವ್ಯಥೆ । ಯಾ
ರುನೀನೆಂದರಿಯೆಹೆತ್ತವ । ಳಾರುಹೇಳಾನಲ್ಲಲೇನಿನಗೆಂದಳಾಸುರುಚಿ ॥ ೭ ॥ ತರಳನೀನಿದನರಿಯೆನೃಪನಿ । ಷ್ಟರವನೇರುವಡೆಂನ
ಬಸುರಲಿ । ಮರಳಿಜನಿಸುವವೊಲುಸಾಧಿಸುಬಹಳಪುಣ್ಯವನು ॥ ಪರಮಪುರುಷನನೊಲಿಸಿತಪದಲಿ । ವರಿಸುಮೋಣೀಪರವಸೇ
ತಕೆ । ಕರುಣವನುನೀತ್ರೋರಿಬಳಲುವೆಯೆಂದಳುರೆಜರೆದು ॥ ೮ ॥ ಹೇಳುನಿಂಮಪ್ಪೆಗೆಸಿಧನವ । ಕೇಳುನಡೆನೀನರಿಯದಿರ್ದ
ಡೆ । ಬಾಲಕನಲಾಮೋಣದಲ್ಲದಡುತ್ತಮನಪದವ ॥ ಓಲಗಿಸಿಕೊಂಡಿಹುದುಕೊಡುವನನು । ಜೋಳವಾಳಿಯನೆನುತಧ್ರುವನನು ।
ಬಾಲೆಭಂಗಿಸಿನುಡಿದನೂಕಿದಳಧಿಕಗರ್ವದಲಿ ॥ ೯ ॥ ತಂದೆಯವಮಾನದಮನೋವ್ಯಥೆ । ಯೊಂದುಮತ್ತಾಸವತಿತಾಯ್ಟರ ।
ದೆಂಡಮಾತಿನಬಾಣಹತಿಯಿಂತೆರಡುಘಾಯದಲಿ ॥ ನೊಂದುಬಾಲಕನಕಟತಂನಯ । ತಂದೆನೋಡುತ್ತಿರಲುನೊಂದಹಿ । ಯಂದದ
ಲಿಬಿಸುಸುಯ್ದುಳುತ್ತಲಿಂದಹೋರವಂಟ ॥ ೧೦ ॥ ನಡುಗುವಧರಶೋಕಜಲಕಡ । ಲಿಡುವಕಂಗಳಮನದಮೂರ್ಛೆಯ । ಕ
ಡುಗುದಿವಕೋಪಾನಲನಲಟಕಟಸುವವಯವದ ॥ ಎಡರುಬೀಳುತ್ತೇಳುತುರೆಬ । ಬಿಡುತಬಿಕ್ಕುತಬಿರಿವ್ರುತೀಕ್ಷೆಸು । ತ್ರೆಡ
ಬಲನನೈತಂದನಾನಿಜಜನನಿಯಿದ್ದೆಡೆಗೆ ॥ ೧೧ ॥ ಏನಿದೇನಾಯ್ತೆಂನತಂದೆಗಿ । ದೇನುಹೇಳೆಂನರಸಹೇಳಾ । ರೇನಮಾಡಿದರೆಂನ
ಮರಿಯಮಾನೆಯನುಹೇಳೆನುತ ॥ ಮಾನಿನಿಯರಥಿದೇವಿಯಾನಿಜ । ಸೂನುವನುತಕ್ಕೈಸಿಹೇಳೆನು । ತಾನನದಕಂಬನಿಯನೊರಸಿ
ದಳೆರಡುಕೈಗಳಲಿ ॥ ೧೨ ॥ ಅಂಕದಲಿಕುಳ್ಳಿರಿಸಿಕೊಂಡಾ । ಪಂಕಜಾನನೆಹೇಳುಮನದಾ । ತಂಕವಾರಿಂದಾಯ್ತುನಿನಗೆನಲು
ಸುರದಳುತಿರಲು ॥ ಶಂಕಿಸುವಸತಿಗೆಂದರೆಡಬಲ । ವೆಂಕಡವರಾಸುರುಚಿನೋಡಿದ । ಬಿಂಕದುಕ್ತಿಯಬಿರುಬನಾಬಹುವಿಧಸರಾಭ
ವವ ॥೧೩॥ ಕೇಳಿದಾಗಳೆಸವತಿಯಿಂದಕೆ । ರಾಳವಚನದಖಡುಗಹತಿಯಲಿ । ಬಾಲೆಬಿದ್ದಳುಬಾಳೆಕಾಳುರಿಗೊಂಡುಕೆಡುವಂತೆ ॥
ಲೋಲಲೋಚನೆಬಾಷ್ಪಸಲಿಲೋ । ನ್ಮೀಲಿತೇಕ್ಷಣೆಶೋಕವಹ್ನಿ । ಜ್ವಾಲೆಯಲಿತನುಬೆಂದುಹೊರಳಿದಳಬಲೆಬಿಸುಸುಯ್ದು ॥
ಮಗಗೆಸುರುಚಿಯಮಾತುಧಿಟದು । ಭರ್ಗೆಯಬಸುರಲಿಜನಿಸಿಸವತಿಯ । ಮಗನವೊಲುನೃಪಾಸನಕೆಯೋಗ್ಯನೆವಿಚಾರಿಸಲು ।
ಬಗವಡಿಂನೆಗವೆಂನಮೊಲೆವಾ । ಲುಗಳನುಂಡೇಬೆಳೆದೆನಿಂನನು । ಜಗದುಪತಿಮಾನಿಸುವನೆಂತೆಂದಳಲಿಗಳುತರಳೆ ॥ ೧೫ ॥ ನಾ
ಚುವನುನಿಂಮ್ಮೈಯನೆಂನನು । ನೀಚೆಯನುತಂನರಶಿಯಂಬಡೆ । ವಾಚಿಕಕೆಸಹಿತಧಿಕಪಾಪಿಯಜಠರದಲಿಜನಿಸಿ ॥ ಗೋಚರಕೆ
ನೀಹೋದಡುಚಿತವ । ನಾಚರಿಸುವನದೆಂತುಮಮತೆಗೆ । ಯಾಚಕನುನೀನಾದೆಯೆಂದಳಲಿದಳುಲಲಿತಾಂಗಿ ॥೧೬॥ ಏಕೆತಾನೆಲೆ
ಮಗನೆಧರಣಿಪ । ನೇಕೆನೀನೆಂನುದರದಲಿಬರ । ಲೇಕೆಭಂಗಿಸಲೇಕೆಸವತಿಸರೋಷಗರ್ವದಲಿ ॥ ಯಾಕೆವಿಧಿತನ್ನನುನಿರಂತರ ।
ಶೋಕಮಯಸಾಗರದಲದ್ದಲ । ದೇಕೆನುತತಕ್ಕೈಸಿಮಗನನುಹಲುಬಿದಳುತರಳೆ ॥ ೧೭ ॥ ತಂದೆಲೋಗರುಮಾಡಿದರುನಿನ ।
ಗೆಂದುಬಗೆಯದಿರಹಿತವನುಬಳಿ । ಸಂದುಬಿಡದೂಡುವದಲೈಕೃತಕರ್ಮಜೀವರಿಗೆ ॥ ಇಂದುಸುರುಚಿಸಗರ್ವದಲಿನಿನ । ಗೆಂದಡೇನ
ದುತವಗೆಹಿತವೆಲೆ । ಕಂಡವುಚ್ಚರಿಸದಿರುಗುಣಕೆಂದಳುಸರೋಜಮುಖಿ ॥ ೧೮ ॥ ಬೇಡಿಯಿಲ್ಲದೆಸುರುಚಿಯಂದುದ । ಮಾಡು
ಹೋಗೆಲೆಮಗನೆಪರರಿಗೆ । ಕೇಡಚಿಂತಿಸಬೇಡಭಜಿಸುಮುರಾಂತಕನಪದವ ॥ ಕಾಡೊಳಗೆನಾನತ್ತಡೆಂನನು । ಬೇಡವಾಹ
ಬವರಕಾಣೆನು । ಬೇಡಿದಿಷ್ಟವನೀವನಚ್ಯುತನೆಂದಳಬುಜಾಕ್ಷಿ ॥ ೧೯ ॥ ಉತ್ತಮನಪದವಿಯನುಬಯಸುವ । ಡುತ್ತಮೋತ್ತ
ಮನಂಘ್ರಿಯನುಧೃಢ । ಚಿತ್ತದಲಿನೆರೆನಂಬಿಭಜಿಸೆಲೆಮಗನೆಪೂರ್ವದಲಿ ॥ ಸತ್ಯಸಂಕಲ್ಪದಲಿಭಜಿಸಿದ । ಡತ್ಯಧಿಕವಹಪಾರಮೇ
ಷ್ಠ್ಯವ । ನಿತ್ತನಾಪರಮೇಷ್ಠಿಗಾವನುಮಗನೆಕರುಣದಲಿ ॥ ೨೦ ॥ ಮನುವಳಾಮುತ್ತ್ಯೆಯನಾತನ । ವಿನುತಪಾವನಪಾದಪ
ದ್ಮವ । ನನವರತಶ್ರದ್ಧತಸುನಿರ್ಮಳಭಾವಭಕ್ತಿಯಲಿ ॥ ನೆನೆದುಸಾಂವ್ರಾಜ್ಯೋಪಭೋಗವ । ನನುಪಮಸ್ವರ್ಗಾಪವರ್ಗದ ।

ಘನಸುಖವನಾರ್ಜಿಸಿದನೂರ್ಜಿತಸತ್ವಶುದ್ಧಿಯಲಿ ॥ ೨೧ ॥ ಆವನಾಜ್ಞೆಯುಲಂಜಿರವಿಶಶಿ । ಪಾವಕಾಂತಕವಾಯುಸಕಲಸು । ರಾವಳೀನಾಥರುಸವನುಹಿತಪ್ರತ್ಯೃಭಾವದಲಿ ॥ ಸೇವಿಸುವರಾವನಪದಾಬ್ಜವ । ಜೀವಿಸುವರನವರತನೀನಾ । ದೇವಸೇವನನೊಲಿಸುವಡೆನಿರ್ವಿಘ್ನವೆನೆನುಗನೆ ॥ ೨೨ ॥ ಅನ್ಯರಿಂದೊಲಿಸುಕೊಂಬಾ । ಮನ್ನಣೆಯುಮಹಲಕ್ಷ್ಮಿಯಾವನ । ಬೆನ್ನಬಿಡದೊಲ್ದಿಸುವಳುಗತಪಾದಪಂಕಜವ ॥ ನಿನ್ನದುಃಖವಕಳವನ್ನೈವವ । ನನ್ನನನುನಾಕಾಣೆನಧಿಕಕ್ಕೆ । ಪೂರ್ಣವನಕಾಲ್ವಿಡಿಕೃತಜ್ಞನನೆಂದಳಬುಜಾಕ್ಷಿ ॥ ೨೩ ॥ ಎಂತುಭಜಿಸುವೆಮಗನೆಲಕ್ಷ್ಮೀ । ಕಾಂತನನುನೆರೆಹಿತವೃಷ್ಟಿಷೇಳ । ನೆಂತುಸ್ಥೈರಿಸಿವಹಾಳ್ದೆತಪವನುತನುವಿನಾಯಸವ ॥ ಎಂತುನೀನಿಂಹರೆಯದಲಿವಿಪಿ । ನಾಂತವಾಸದಲಿಹಶಿಶುವನಾ । ನೆಂತುಕಾಣದೆಜೀವಿಸುವೆನೆಂದಳಲಿದಳುತರಳೆ ॥ ೨೪ ॥ ಬಿಸಿಲತಂಗೆಯನಾನರಿಯದೆ । ಹಸುಳೆಸಾಯಲಿತಪದನೆವದಲಿ । ವಸುಧೆತನ್ನವಮಗಂಗೆನಿಷ್ಕಂಟಕದಲಹುದೆಂದು ॥ ಶಶಿವದನೆಹೇಳಿದಡೆನಿಜಮತಿ । ವಿಷಮನೆಂದಾಯ್ತೆನುತಬಸುರನು । ಹೊಸಹೊಸದುಹೊರಳ್ದಳುಬಾಯಾರಳ್ದಳುಲಲಿತಾಂಗಿ ॥ ೨೫ ॥ ಯಾಕೆಸಡದೆನುಮಗಳೆನಡವಿಗೆ । ನೂಕಲೆಂದೀಹರೆಯದಲಿತಪ । ವೇಕೆತಾನೇಕೀಸುದುಸ್ಥಿತಿಯಿರವ್ರತನಗೇಕೆ ॥ ಏಕೆವಿಧಿಯೆನ್ನೃಥಾನವಾನದ । ಶೋಕವನ್ನಿಗೆತನ್ನನೊಡ್ಡಿದೆ । ಯಾಕೆಬಾರದುಸಾವೆನುತತೆಗೆದಪ್ಪಿದಳುಮಗನ ॥ ೨೬ ॥ ಅಳಲಿಘಡವೇನವ್ವಕೊಲುವಡೆ । ಸಲಹುವಡೆಮುರನ್ಯರಿಯಲ್ಲಿದೆ । ಕೊಲುವಕಾವಸಮರ್ಥರಾರೆಲೆತಾಯೆಜಠರದಲಿ ॥ ಸಲಹಿದವರಾರಂತನೀನೆರೆ । ಸಲಹುವನುನೀನಂಜದಿರುತಾ । ಕೆಲವುದಿನದೊಳಗೈತಹೆನುನೋಡೆನುತಹೊರವಂಟ ॥ ೨೭ ॥ ಕಲುನೆಲಕೆಕಾಲೂರುತಳುಕುತ । ಬಳುಕುತಡವಿಗೆಹೋಹಮಗನನು । ಲಲನೆನೋಡುತನಿಂದಳುರಿಯಲಿಬೆಂದಲತೆಯಂತೆ ॥ ಎಲೆಜಗನ್ಮಯಕೃಷ್ಣಜನವ । ತ್ಸಲದಯಾನಿಧಿನೀನಲಾದು । ರ್ಬಲರಿಗಧನರಿಗಶರಣರಿಗಬಲರಿಗೆಗತಿಯೆನುತ ॥ ೨೮ ॥ ಮನೆಯಹೊರವಂಟರ್ಭಕನುನಿಜ । ಜನನಿಯಸುಬೀಳ್ಕೊಂಡುನಡೆದನು । ಮನದಧೃತಿಯಲಿಶೋಕಮೋಹಕ್ರೋಧವನುಜರೆದು ॥ ದನುಜಹರನನುಘೋರತಪದಿಂ । ದನುಸರಿಸಿಲೋಕೋತ್ತರದಪದ । ವನುಪಡೆವಡಾವುದುತದಿಷ್ಟಸ್ಥಾನವೆಂದೆನುತ ॥ ೨೯ ॥ ಆಸಕಲಪರಿವಾರಪುರಜನ । ದೇಶಜನತಮತನುಗೆಮರುಗಿದು । ದಾಶಿಶುವಿನಂಘವಣೆಗಾಯಾಸದಪರಂಪರೆಗೆ ॥ ನೇಸರನುಕಂಡರಿಯನರಿಯನು । ದೇಶಕಾಲವಿಭಾಗವನುಲಕ್ಷ್ಮೀಶನೊಲವೀತಂಗೆಸುಲಭವೆಶಿವಾಯೆನುತ ॥ ೩೦ ॥ ಏನನೆಂಬೆನುಘನನದೀಗಿರಿ । ಕಾನನಂಗಳಕಳಿದುನಡೆದನು । ಮಾನನಿಧಿಮುಂಕೊಂಡುಬರೆಬರೆಮುಂದೆದೂರದಲಿ ॥ ಭಾನುಶಶಿಪಾವಕಸಹಸ್ರಸ । ಮಾನತೇಜದತತ್ವವಿದ್ಯಾ । ದಾನಿನಾರದಮುನಿಪನೆಂದಿದಿರಾಗಿನಡೆತಂದ ॥ ೩೧ ॥ ಕಂಡನಿದಿರಲಿಶಿಶುವನಾತನ । ಮಂಡೆಯುಲಿಕ್ಕೆಯಿಟ್ಟುತ್ತೆಗದಾ । ಖಂಡಲಾರ್ಚಿತಚರಣನಪ್ಪಿದನೆರಡುಕೈದಣಿಯೆ ॥ ದಂಡಿಸುವರೇತನುವನವನೀ । ಮಂಡಲಾತ್ಮಜಯೆನುತಮುನಿಬೆಸ । ಗೊಂಡನೇತಕೆಬಳಲುತಿಲ್ಲಿಗೆಬಂದೆನೀನೆಂದ ॥ ೩೨ ॥ ಬದುಕಿದೆನುತಂನಯನನೋರಥ । ದುದಯವಿದೆಲಾಭಾಪ್ರುಮರ್ಘಮುನಿ । ಪದಯುಗಳದರುಶನವಯತ್ನದಲಾಯ್ತುತನಗೆನುತ ॥ ಪದದಲೊಡಲನುನಿಡಿದನುದಂ । ಡದವೊಲೊಪ್ಪಿನೆಕೈಮುಗಿದುಮುನಿ । ವದನವನುನೋಡುತ್ತಬಿನ್ನಹಮಾಡಿದನುಹದನ ॥ ೩೩ ॥ ತೊಡೆಯಮೇಲುತ್ತಮನುಕುಳ್ಳಿರೆ । ಲೊಡನೆಕುಳ್ಳಿರೆಹೆಂದುತಂದೆಗೆ । ಕಡುಗರುಣವನುತೋರಿಕಾಡಿಯಳುತ್ತಿರಲುಕಂಡು ॥ ಜಡಿದುನೂಕಿದಳುತ್ತಮನತಾಯ್ । ನುಡಿಯದಡಿಯಲಿನೃಪನಪೀಠವ । ನಡರುವರೆನೀನಾರುಸಾರೆಲೆಬಣಗೆಹೋಗೆಂದ ॥ ೩೪ ॥ ರಾಜಸಿಂಹಾಸನವನೇರುವ । ತೇಜವನುಬಯಸುಪಡಂಭಜಿಸಂ । ಭೋಜನೇತ್ರನನೆನ್ನೊಬಸುರಲಿಮತ್ತೆಮಗನಾಗಿ ॥ ನೀಜನಿಸುಹೋಗೆನಲವಜ್ಞೆಗೆ । ಭಾಜನನುತಾನಾಗಿಪೂಜಿಸು । ವೋಜೆಯನುನಾನರಿಯೆನಿತ್ತಲುಬಂದೆನಾನೆಂದ ॥ ೩೫ ॥ ಎಂತುತನಗೆಲೆಮುನಿಪಲಕ್ಷ್ಮೀ । ಕಾಂತನೊಲವಹುದಲ್ಪಕಾಲದ । ಲಿಂತುಕರುಣಿಸಬೇಹುದೆಂನಯಭಾಗ್ಯನೇತನವ ॥ ಮುಂಕೈಕೊಂಡಪ್ರೊಲುಬಂದೆವು । ಹಂತಮರ್ಘಭಾಪಾವುದೇಜ । ನ್ಮಾಂತರಾರ್ಜಿತಸುಕೃತವೆಂದೆರಗಿದನುಚರಣದಲಿ ॥ ೩೬ ॥ ಎತ್ತಿದನುನಸುನಗುತಶಿಶುವಿನ । ಮಸ್ತಕವನಾಪ್ರತರನೊಲಿ । ದೆತ್ತವಂತಿರೆನೆಗಹಿತೊಡೆಯಲಿಳೆಗದುಕುಳ್ಳಿರಿಸಿ ॥ ನೆತ್ತಿಯುರುವಾಸನಿಸಿನಯನಜ । ಲೋತ್ತರದನಸ್ನೇಹವಚನದ । ಉತ್ತಮಾಂಗವತೂಗುತಿಂತೆಂದನುನೃಪಾತ್ಮಜಗೆ ॥ ೩೭ ॥ ಆಹಹಶಿವಶಿವವಿಷ್ಣುಮಾಯೆಯು । ಮಹಿಮೆದುಸ್ತರವೆಂಬುದನುಸಂ । ನಹಿತವಾಗಿಯೆಕಂಡೆನೈಹರಹರವುಹಾದೇವ ॥ ಸಹಸವೆಂತ.ಟೆಹಸುಳೆಭೇದ । ಗ್ರಹಕೆಮೈಚಾಚಿದನಲಾನಿ । ರ್ವಹಿಸಲರಿವನೆಘೋರತಪದಗುರಂತದುಸ್ಥಿತಿಯ ॥ ಹಾಲಹಸುಳೆಯನಿಂತುಭಂಗಿಸಿ । ಬೀಳಜಡಿದಡವಿಯನುಹೊಗಿಸುವ । ಕಾಳಮುಂಡೆಯನೇನನೆಂಬೆನುಸುರುಚಿಯಂಬುವಳ ॥ ಹೇಳಲೇಕಿಂನವನಿಪನದು । ಸ್ಶೀಲವನುನಿಂಮವ್ವೆನಿಂನನು । ಬೀಳುಕೊಟ್ಟಳೆಬಹಳಕಾನನಕೆಂದುಬಿಸುಸುಯ್ದ ॥ ೩೯ ॥ ಎಂತುನೀನೆಲೆಮಗನೆಲಕ್ಷ್ಮೀ । ಕಾಂತನನುಮೆಚ್ಚಿಸುವೆಘನವಿಪಿ । ನಾಂತರದಲೆಂತೊಬ್ಬನಿಹೆಖಗಮೃಗಭಯಂಕರದ ॥ ಎಂತುನೀಸ್ಥೈರಿಸುವೆತಪದೊಳ । ಗೆಂತುಯೋಗಿಮನೋವಿದೂರನ । ನೆಂತುಕಂಡಪೆಬರಿದೆಬಳಲದೆಮಗನೆನಡೆಯಂದ ॥ ೪೦ ॥ ಹಲವುಜನ್ಮದ

ತಪದಲಾವನ | ನೊಲಿಸಲರಿಯರು ತಾಪಸರುನೀ | ನೊಲಿಸುವಂದವದೆಂತುದುರ್ಲಭದಲಿಮನೋರಥವ || ಒಳಸುವರೆನಿಜದೇ
ಹನಕ್ತಿಯು | ನೆಲೆಯನರಿಯದೆಹಸುಳೆಮಾವಿನ | ಫಲವನರ್ಥಿಸುವಂತೆವಿಫಲವಿದೆಂದನಾಮುನಿಪ || ೪೧ || ಎಂತ್ರಾಟೀಶ್ವರನೊ
ಲವಿನಲಿಬಹು | ದಂತುಟಿಲ್ಲದೆಬಯಸಿಮನದಲಿ | ಚಿಂತಿಸಿದಡೆತಿಳಿಸುಪದಾರ್ಥದಸಿದ್ಧಿತನಗಹುದೆ || ಸಂತಭಿರುಸುರುಗದಿರುಸಾಕಿ
ದ | ರಂತವನುನೀನರಿಯೆತನುಬಲ | ವಂತನಾದಂದಿಂಗೆಪೂಜಿಸಬಹುದುನಡೆಯೆಂದ || ೪೨ || ಅಹುದುಮುನಿಪಪರಾರ್ಥಕೃತ
ವೀ | ಗ್ರಹವಲಾನಿಂಮಡಿಗಳೆಂದುದು | ವಿಹಿತವಾತ್ಮಜ್ಞಾನನಿಷ್ಠನವಗಾತುಹುಸಿಯಹುದೆ || ಬಹಳಕರುಣಾಸಿಂಧುನೀನೆನ | ಗಿ
ಹಪರಕೆಹಿತಸಾಧನಾನು | ಗ್ರಹವಮಾಡಿದೆಮನಕೆಸಂತಸವಾಯ್ತುತನಗೆಂದ || ೪೩ || ಎಡದೇನುಸವತಿತಾಯವ | ಚೋಗು
ರಂತಾಗ್ನಿಯಲಿತಂನೆದೆ | ಕಾದುದದರೊಳುನಿಂನವಚನಾಮೃತದಬಿಂದುಗಳು || ನಾಡಲರಿಯೆನುವ್ರಂನನುಸದವಿ | ಷಾದಪಡೆಗದು
ಹತಿಗೆಕೈನೆಲ | ಹಾದುದೀರಾಜಸದಮನವಿದುಮುನಿಪಕೇಳೆಂದ || ೪೪ || ಮುನಿಪಬಿಂನಹಬಹಳಕರುಣಾ | ವನಧಿಗಳುನಿಮ್ಮಂ
ದದವರಾ | ರಿನಿತುಜಗದಲಿಸಕಲವಿಬುಧಮುನೀಂದ್ರನಿಕರದಲಿ || ದನುಜಹರನನುಕಂಡೆನಿಂನೇ | ನನುಸನುನೆನಿಂಮಡಿಗಳೀ
ಲೋ | ಚನಕೆಗೋಚರವಾಗಲಾಯ್ತುಕೃತಾರ್ಥವೆನಗೆಂದ || ೪೫ || ಇಂದುಹಸುಳೆಸಮರ್ಥನಲ್ಲದ | ಮುಂದೆಸಾಧಿಸಿಕೊಂಬೆನೆಂ
ದಡೆ | ತಂದೆಬಿಂನಹಮಾಡಲಂಜುವೆನೊಡಲುಶಾಶ್ವತವೆ || ಸಂದಹೆಂಪುರನಂತ್ರೆಬದುಕಿದೆ | ನೆಂದಡೆದುಫಲವಿಲ್ಲಲೈಗೋ | ವಿಂದ
ನೊಲವಳವಡದೀಜೀವನವಿದೇಕೆಂದ || ೪೬ || ಮುಂನಸುರನರಲೋಕಪಾಲರು | ಪಂನಗಾಧೀಶ್ವರರುಸಾಧಿಸ | ದುನ್ನತೋ
ನ್ನತಪದವನಾರೋಹಿಸುವಮನವೆನಗೆ || ಅನ್ಯರೈಶ್ವರ್ಯವನುಪದವನು | ಯಿಂನುಬಯಸೆನವನಲ್ಲಬಹಳ | ಕೃಪಾರ್ಣವನೆಕರುಣಿ
ಸುವುದಾವುದುಪಾಯವೆನಗೆಂದ || ೪೭ || ಛಲವುಮಾತ್ರೇಕಾನುನಿಂಮಡಿ | ಗಳಿಗೆಶಿಶುನೀವಾವಪರಿಯಲಿ | ಕಲಿಸಿದುದನಾಚರಿ
ಸಿಶುದ್ಧನುಜ್ಞಾನಿವೃದ್ಧಿಗಳು || ಸಲೆಸಮಸ್ತವದೆಲ್ಲನಿಂಮದು | ನಳಿನದೃಶನಿತ್ಯಾತುಮನಪದ | ನೇನವನುತೋರಿಸುವುದೆಂದೆರ
ಗಿದನುಮುನಿಪದಕೆ || ... ... || ೪೮ ||

ಅಂತು ಸಂಧಿ ೬ಕ್ಕಂ ಪದನು ೪೮೬ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

ಧ್ರುವನು ತಪಸ್ಸುಮಾಡಿದ್ದು.

ಸೂಚನೆ || ದೇವಮುನಿಯುಪದೇಶದಲಿನರ | ದೇವನಂದನನರ್ಚಿಸಿದನಾ | ದೇವದೇವನಚರಣಕಮಲವ
ನಧಿಕಭಕುತಿಯಲಿ || ... ...

ಪದನು || ವಿದುರಕೇಳಾನೃಪಕುಮಾರನ | ಹೃದಯಸಂತಸ್ತಾಪವಗುನಾ | ರದನುಕೇಳುತಹರುಷಜಲಪರಿಲುಳಿತನೇ
ತ್ರದಲಿ || ಸದಮಳನನಪ್ಪಿದನುಕರುಣಾ | ಸ್ಪದನಲಾಕೇಳಾದಡೆಲೆನೃಪ | ವದನದರ್ಪಣನಿಜಮನೋರಥಕರನನಿದನೆಂದ || ೧ ||
ತಾಯಿಹೇಳಿದಮಾರ್ಗವೇನಿ | ಶ್ರೇಯಸಕೆನಿಂನಿಷ್ಟಸಿದ್ಧಿಗು | ಪಾಯಕೇಳೆಲೆಮಗನೆಭಜಿಸುಮುರಾಂತಕನಪದವ || ಆಯಿತ್ತೆಂದ
ರಿನಿಜಮನೋಭಿ | ಪ್ರಾಯಸಿದ್ಧಿದಯಾವನಧಿನಾ | ರಾಯಣನಲಾಬಲ್ಲಿಕೆದುರ್ಲಭವಿಲ್ಲಕೇಳೆಂದ || ೨ || ಶ್ರೀಕೃಷ್ಣಾಯನಮಃ
ಆದಡವಧರಿಸೆಲೆಮಗನೆಜಗ | ದಾದಿಸ್ಯೆವನೆನಿಪ್ಪಬಹಳದ | ಯೋದಧಿಯನೊಲಿಸುವಡೆತತ್ಪೂಜಾವಿಧಾನವನು || ವೇದಸಿದ್ಧವೆ
ನಿಪ್ಪಮಂತ್ರವ | ನಾದರಿಸಿತದ್ಧ್ಯಾನತತ್ವವಿ | ಭೇದವನುಸಂಕ್ಷೇಪದಲಿಹೇಳುವೆನುಕೇಳೆಂದ || ೩ || ನೃಪಕುಮಾರಶಿರೋಮಣಿ
ಯೆಕೇ | ಳುಪಚರಿಸುವರೆಜಗದುಪತಿಯನು | ಜಪಿಸುವಿಮಳದ್ವಾದಶಾಕ್ಷರಮೂಲಮಂತ್ರವನು || ನಿಪುಣಮತಿಭಜಿಸುತ್ತದಿನ
ವೇ | ಳಪಗವಿಸಲಾಬೇಚರರಕಂ | ಡಪೆಮನೋರಥಸಿದ್ಧಿದುರ್ಲಭವಿಲ್ಲಕೇಳೆಂದ || ೪ || ಲೇಸೆನಿಸಯಮನಿಯಮನಿಷ್ಠೆಯು |
ಲಾಸನವನಳವಡಿಸಿವಿಜಿತ | ಶ್ವಾಸನಾಗಿಂದ್ರಿಯಗಣವನಪಹರಿಸಿಕಾಳ್ಗಿದರ್ || ವಾಸುದೇವನಚರಣಕಮಲವಿ | ಳಾಸಲಕ್ಷ್ಮಿಯು
ನಮಳಹೃದಯಾ | ವಾಸದಲಿಭಾವಿಸುನಿರಂತರಭಕುತಿಭಾವದಲಿ || ೫ || ಯಸುಳುಗಂಗಳದಂತಪಂಕ್ತಿಯು | ನಸುನಗೆಯಬಿಂ
ಬಾಧರದ್ಯುತಿ | ಯಸವಗಲ್ಲದಗಂಡಮಂಡಿತಮಕರಕುಂಡಲದ || ನೊಸಲತಿಲಕದಕೊಂಕಿದಳಕದ | ಕುಸುರಿಗಳಮಣಿಗಣದಮ
ಕುಟದ | ಲಸಿಪಮುಕ್ತಾಹಾರಮಣಿಕೇಯೂರಕಂಕಣದ || ೬ || ಕೊರಳಮಣಿಕೌಸ್ತುಭಮಹದ್ಯುತಿ | ಭರಿತವಕ್ಷಸ್ಥಳದಲ
ಕ್ಷ್ಮಿಯು | ಪರಿವಸಿತವನೆಮಾಲಿಗಳಸಿರಿವತ್ಸಲಾಂಛನದ || ಕರಚತುಷ್ಟದದೀಪ್ತಚಕ್ರಾಂ | ಬುರುಹಶಂಖಗದಾಪ್ರಭಾಭಾ | ಸು
ರಸಿಗಂತದದಿವ್ಯಮೂರ್ತಿಯಬಿಡದೆನೆನೆಯೆಂದ || ೭ || ಮೆರವಪೀತಾಂಬರದಮೊನೆಮುಂ | ಜೆರಗಿನಡಿಗೆಯಸುಪ್ರಸನ್ನಾಂ |
ಬುರುಹವದನದಮೆರವಕಾರುಣ್ಯಾಮೃತೇಕ್ಷಣದ || ಅರಸಿಕರುವನುತಾಯಿಮನದಲಿ | ಮರುಗಿರಕ್ಷಿಸುವಂತೆಭಕುತರ | ನರಸಿ
ಸಲಹುವಭೃತ್ಯಸಂಸಾರಿಯನುನೆನೆಯೆಂದ || ೮ || ವೇದ್ಯವಹವಿಷ್ವ್ರರ್ಚನೋಚಿತ | ಸಾಧನಂಗಳಸಂಪದದಲಾ | ರಾಧಿಸುವು

ದೆಸೆಮಗನೆಸಚರಾಚರಜಗನ್ಮಯನ || ಬಾಧಿಸದೆಜೀವರನುಕಾಮ | ಕ್ರೋಧವರ್ಜಿತನಾಗಿತನದಲಿ | ಮಾಧವಂಗೆಪ್ರಿಯನೆ
ನಿಪತುಳಸೀದಳಂಗಳಲಿ || ೯ || ದ್ರವ್ಯಮಯವಹಪೂಜೆಮೊದಲಲಿ | ಸೇವ್ಯವದರಿಂಮೇಲೆಭಾವ | ದ್ರವ್ಯದಲಿಪೂಜೆಸಹಸ್ರಗು
ಣಾವಧಿಕವೆನಲು || ನಿರ್ವ್ಯಳೀಕದಲಿಂತುಸಶ್ರೀ | ತವ್ಯವನುತಜ್ಜನ್ಮಕರ್ಮವ | ನವ್ಯವಸ್ತ್ರೀದದಲಿಭಾವಿಸುತಿಹುದುಕೇಳೆಂ
ದ || ೧೦ || ಮಧುಮಥನಂಘ್ರಿಯನುಪೂಜಿಸು | ವಿಧಿವಿಹಿತಮಾರ್ಗದಲಿತಪ್ಪದೆ | ಮಧುವನಕೆನೀಹೋಗುಹರಿಪದಮಾಪನಸ್ಥ
ಳಕೆ || ವಿಧೃತಪಾತಕವೆನಿಪಯಮುನೆಯ | ಸುಧೆಸಮವಹಪುಣ್ಯಜಲದಲಿ | ವಿಧಿಗಳನವಿರಚಿಸುಮನೋರಥವಹುದುನಡೆ
ಯಿಂದ || ೧೧ || ಸಿದ್ಧಿಸಲಿನಿಂನಿಷ್ಟಫಲಸ | ಶ್ರದ್ಧೆಯಲಿನೆರೆಭಜಿಸುಹೋಗೆಲೆ ಬುದ್ಧಿವಂತನೆಕಾಣಬಹುದಂಬಿದಿರುಮುರಹರನ ||
ಶ್ರದ್ಧೆಯುಳ್ಳಂಗಖಿಳಸೌಖ್ಯಸ | ಮೃದ್ಧಿಗಳುಸೇರುವವುವಿಗತ | ಶ್ರದ್ಧನಾದಂಗಿಹಪರದಸುಖವಿಲ್ಲಕೇಳೆಂದ | ೧೨ || ನಡೆಮಗನೆ
ಮೈದೋರುವನುಜಗ | ದೊಡೆಯನೆನುತಕೃಪಾವನಧಿತಳೆ | ದಡವಿಮುನಿಕಾರುಣ್ಯದಲಿತಂನುವನುಬೀಳ್ಕೊಳಿಸೆ || ಅಡಿಗೆರ
ಗಿಬಲವಂದುಮುನಿಪನ | ಬಿಡಲರಿಯದುಂಮುಳಿಸುತೊಯ್ಯನೆ | ಪೊಡವಿಪಾಲಕುಮಾರನೈತಂದನುತಪೋವನಕೆ || ೧೩ || ಬೆರೆ
ಳಮೂಗಿನಲೀಕ್ಷಿಸುತನೃಪ | ವರಕುಮಾರನಗಮನವನುಕಡು | ಗರುಣಿಹೆತ್ತವರಾವಕಲುಹೃದಯರೊಮಾಜಾಬೇಪ || ಪರಿಕಿ
ಸುವೆನಿದನೆನುತಭೂಪನ | ಪುರಕೆಬಿಜಯಂಗೈದನಮರಾ | ಸುರನಮಸ್ಕೃತಚರಣನಾನಾರಾಯಣಾಹ್ವಯೆನುತ || ೧೪ || ಧರಣಿ
ಪತಿದೂರದಲಿಕಾಣುತ | ವರಮುನಿಪನಾಗಮನವನುಹರ | ಹರಮಹಾದೇವಾಯ್ತುಲಾತಂನಯಮನೋರಥದ || ಪರಮಸಿದ್ಧಿ
ಯೆನುತ್ತಮುಕುಳಿತ | ಕರಸರೋರುಹನಾಗಿನೃಪವಿ | ಷ್ಟರವನಿಳಿದಂದಿದಿರುಗೊಂಡನುಸಕಲಜನಸಹಿತ | ೧೫ || ಆಸುರರ್ಷಿ
ಪ್ರವರನಾಧರ | ಣೀಶನುಪಚಾರವನುಕೈಕೊಳು | ತಾಸನದಲುಪವಿಷ್ಟನಾಗಿಸುಖೋಪವಿಷ್ಟನನು || ಲೇಸೆನಿಸೆನಸವಸ್ತುಪುರ
ಜನ | ದೇಶಜನಪರಿವಾರನಿಕರಕೆ | ಮಾಪಿತೇತಕೆವದನಲಕ್ಷ್ಮಿಯೆನುತ್ತಬೆಸಗೊಂಡ || ೧೬ || ಬೆಸಗೊಳಲುಶೋಕಾನಲನನೆ |
ಬ್ಬಿಸಿದವೋಲಾಯ್ತವನಿಪಾಲನ | ಬಸುರನಾವರಿಸಿತುಶೋಕಾಶ್ರುಗಳುಕಂಗಳಲಿ || ಬಸರಿದವುಪುತ್ರಾನುರಾಗ | ವ್ಯಸನಿಬಿಸು
ಸುಯ್ಯುತ್ತಮುನಿಪದ | ವಿಸರುಹಕೆತಲೆವಾಗಿಬಿಂನಹಮಾಡಿದನುಹದನ || ೧೭ || ಏನನೆಂಬೆನುಮುನಿಪಮನದ | ಜ್ಞಾನವನು
ಚಿತ್ತವಿಸುಪುಣ್ಯವಿ | ಹೀನನಾದೆನಲಾನಿಜಾನ್ವಯತಿಲಕನೆಂದೆನಿಪ || ಸೂನುವನುಹೊರವಡಿಸಿಕಳದೆನು | ಕಾನನಕೆಕಾರು
ಣ್ಯವಿಲ್ಲದ | ನಾನನಪನೀಕ್ಷಿಸುವಿರೇತಕೆಪಾಪಿತಾನೆಂದ || ೧೮ || ಅಕಟತಂನಂದದದುರಾತ್ಮರು | ವಿಕಳಮತಿಗಳದಾರನಿಜ
ಬಾ | ಲಕನನ್ನೈದೇವರುಷದಲಿಸುಕುಮಾರಕಾಯನನು || ಸುಕೃತಹೀನನುನೂಕಿದೆನಲಾ | ಚಕಿತನನುಕಾನನಕೆಪುಣ್ಯಾ | ತ್ಮ
ಕನೆನಿಂನದನೇನನೆಂಬೆನುತಂನದುಷ್ಕೃತವ || ೧೯ || ಬಿಸಿಲಬೇಗೆಯಬೇಸರನುಸೈ | ರಿಸುವನೆಂತರ್ಭಕನುವನದಲಿ | ಹಸಿವು
ತೃಷೆಯಲಿಬಳಲಿನಿದ್ರೆಯಭರದಲಿರೆವನದ || ಹಸಿದಹುಲಿಕರಡಿಗಳುತಿಂನವೆ | ಶಿಶುವನಾನಿಂನೆಂದುಕಂಡಪೆ | ನುಸುರುವೆಣನನು
ಮಾತನಾಡಿಸಬೇಡನೀವೆಂದ || ೨೦ || ತೊಡೆಯನೇರಲುಬಂದಮಗನನು | ಮಡದಿಮಾತಕಿಬೈದುಭಂಗಿಸಿ | ಜಡಿದುನೂಕಲು
ನೋಡುತಿದ್ದೆನುಕಾಣದವನಂತೆ || ನಡೆವೆಣನನಿಂನೇನಕೇಳುವೆ | ಕೆಡಿಸಿದುದುವಿಧಿತಂನನಾರಿಗೆ | ನುಡಿವೆನೆಂನಮನೋವ್ಯಥೆಯ
ನಿದನೆಂದುಬಿಸುಸುಯ್ದ || ೨೧ || ಎನಲುನಕ್ಕನುಮುನಿಪನಾರಿಗೆ | ಜನಪಮರುಗುವೆದೈವದಿಚ್ಛೆಯ | ನನುಸರಿಸಿಜೀವಿಸುವುದ
ಳವುದುಜೀವಜಾತವಿದು || ನಿನಗೆನೀವಿಭುವಾಗಿಚಿಂತಿಸು | ತನಯನಸುರಿಗೆಬರಿದೆತ್ರಿಜಗ | ಜ್ಜನನಿಯಿಕ್ಕಿದಮುದ್ದಿನಲಿಮರುಳಾ
ಗಬೇಡೆಂದ || ೨೨ || ವಾಯುವಶದಲಿನಡವಮೇಘನಿ | ಕಾಯದಂತಿರಲಖಿಳಜೀವನಿ | ಕಾಯವನುಭಯಶೋಕಸುಖದುಃ
ಖಾನುಭವಗಳಲಿ || ಶ್ರೀಯವಲ್ಲಭನೆಂದೆನಿಪನಾ | ರಾಯಣನೆನಡಸುವನುಕೊಲ್ಲಲು | ಕಾಯಲಿಕೆಕಮಲಾಕ್ಷನಲ್ಲದೆಬೇರೆದಾರೆಂ
ದ || ೨೩ || ಮರುಗದಿರುಸಂತವಿರುನಾನೀ | ಬರುತಕಂಡೆನುನಿಂನಮಗನನು | ಮುರವಿರೋಧಿಯನೊಲಿಸಿತಪದಲಿಭಾವಭ
ಕ್ತಿಯಲಿ || ನಿರುತವಿಷ್ಟಾರ್ಥವನುಲೋಕೋ | ತ್ತರದಪದವನುಪಡೆದುತಳುವದೆ | ಕಿರಿದುದಿನಕೈತಹನುಶಿಶುಕೇಳೆಂದನಾಮು
ನಿಪ || ೨೪ || ಸಂತವಿಹುದೀಲೋಕವೀಶ್ವರ | ತಂತ್ರವೆಂದರಿದಳಲಬೇಡೆನು | ತಂತರಿಕ್ಷವನಡರಿದನುಸುರಮುನಿನಿಜೇಚ್ಛೆಯ
ಲಿ || ಕೊಂತಮಾರುಮೊನೆಗಂಡವೊಲುಭೂ | ಕಾಂತನನುದಿನನಿಜಕುಮಾರನೆ | ಚಿಂತೆಯಲೆನಿರ್ವಿಣ್ಣನಾದನುನಿಖಿಳಭೋಗದ
ಲಿ || ೨೫ || ಇತ್ತಲಾನೃಪನಿರಲುನಿಜಸುತ | ಚಿತ್ತದಲಿನೃಪತನಯನಾಹರಿ | ಚಿತ್ತದಲಿಸಾರಿದನುಯಮುನಾತೀರಮಧುವನವ ||
ಉತ್ತಮೋತ್ತಮನಂಘ್ರಿಕಮಲಪ | ವಿತ್ರಪುಣ್ಯಸ್ಥಳದಮುನಿಕುಲ | ಮುಕ್ತಿದಾಯಕಸಲಿಲಸಾರನದೀಗಿರೀಂದ್ರಮನ || ೨೬ ||
ನಿಂದನದರೊಳುತಪಕೆಜಗದಘ | ವೃಂದವಿಚ್ಛೇದನವೆನಿಪಕಾ | ಳಿಂದಿಯಮಳಪವಿತ್ರಪುಣ್ಯಾಮೃತಜಲಾಂತರದಲಿ || ಮಿಂದುನಿ
ರ್ಮಳಹೃದಯಕಮಲದ | ಮಂದಿರದಲಾರಾಧಿಸಿದನರ | ವಿಂದನಾಭನಚರಣಕಮಲವನಮಳಭಕ್ತಿಯಲಿ || ೨೭ || ಮೊದಲಲು
ಪವಾಸದಲಿರಾತ್ರಿಯ | ನೊದದುಕಳದನುಮಾಸವೊಂದನು | ಬದರಿಫಲದಾಹಾರದಿಂದವೆಮೂರುದಿನಕೊಂಮೆ || ಸದಮಳನು
ಮಾಸದ್ವಯವನಾ | ರುದಿನಕೊಂಮೆವಿಸೀರ್ಣಪರ್ಣದ | ಉದರಪೋಷಣಮಾಡಿಪೂಜಿಸಿದನುಜಗನ್ಮಯನ || ೨೮ || ಮತ್ತೆ

ಮಾಸತ್ರಯವನದನೊಂ । ಭತ್ತುದಿನಕೊಂಮ್ಮೊಮ್ಮೆಜಲವನು । ತಾತ್ತುಗೊಂಡುಪಚರಿಸಿದನುಜಗದೇಕವಲ್ಲಭನ ॥ ಚಿತ್ತದಲಿ ಭಾವಿಸುವಮಾಸವ । ನುತ್ತರಿಸಿದನುನಾಲ್ಕನಾನೃಪ । ಪುತ್ರನನಿಲಾಹಾರದಲಿಹಂನೆರಡುದಿನಕೊಂಮ್ಮೆ ॥ ೨೯ ॥ ಬಳಿಕವಿಗತಾಹಾರದಲಿನೃಪ । ಕುಲಜನೊಂದೇಪಾದದಲಿನಿಂ । ದೊಲಿದುದುಲುಕದೆನಾತನಾಡದೆನೀಲುವೊಸವಾಗಿ । ಚಲಿಸದಚಲಸಮಾನಸಂಸ್ಥಿತಿ । ಯಲಿತಪೋಯೋಗಪ್ರಭಾವ್ಯೋ । ಜ್ವಲಿಭುವನನುಬೀಳುಕೊಟ್ಟನುಮಾಸಪಂಚಕನ ॥ ೩೦ ॥ ಓರುಗುಡಿಸಿದುದವನಿರಾಜಕು । ಮಾರಕಂಠೀರವನುತ್ರುದಿಗಾ । ಲೂರಿನಿಂದಾಡೆಶೆಗೆಸಾಗರಶೈಲವನಸಹಿತ ॥ ವಾರುಧಿಯಮಧ್ಯದಲಿದಿಗ್ಗಜ । ನೀರಿನಿಂವಾನಾವೆಯಂತಿರೆ । ಕೌರವಾಗ್ರಣಿಕೇಳುಶಿಶುವಿನತಪದಸಂಸ್ಥಿತಿಯು ॥ ೩೧ ॥ ಮತ್ತೆಕೇಳೈವಿದುರಶಿಶುವಿನ । ಚಿತ್ತದಲಿಜಗದುದರನಹೆಪ್ಪುರು । ಷೋತ್ತಮನನೊಳಕೊಂಡುತದ್ಧ್ಯಾನೈಕನಿಷ್ಠೆಯಲಿ ॥ ಕೆತ್ತಪವನದ್ವಾರದಲಿಭಟ್ಟಿ । ಸುತ್ತಿರಲುಮೂರುಲೋಕವುಬ್ಬಸ । ದೆತ್ತುದಂತಶ್ವಾಸರೋಧನಿರೋಧವನುತಳೆದು ॥ ೩೨ ॥ ಏನನೆಂಬೆನುನೃಪಸುತನಸುಂ । ಮಾನವನುಸಚರಾಚರದಗುಂ । ಮಾನವನುಕಾಣುತ್ತಸಕಲಾಮರರದುಸ್ಥಿತಿಯು ॥ ಏನಿದೆತ್ತಣದೆನುತಸುರಪತಿ । ತಾನರಿತೆನಂಜದಿರಿಹೋಗು । ತ್ತಾನಪಾದನಸುಗನತಪವನುಕೆಡಿಸಿನೀವೆಂದ ॥ ೩೩ ॥ ಅರಿಯನರ್ಭಕನೀಸುರಶ್ರೀ । ಯರವಿವೇಕಹವಿಳಾಸವಿಭ್ರಮ । ದಿರವನಿದರಲಿಹೋಗದಾಕ್ಷಣತಪದಸಂತಾಪ ॥ ಪರಿಪರಿಯವಿಘ್ನಾಯತವನಾ । ಚರಿಸಿಹೋಗಿಯೆನುತ್ತಬೆಸಸಲು । ಪರಿಜನಕೆಪರಿತೋಷದಲಿನಡೆತಂದುದಾಕ್ಷಣಕೆ ॥ ಬೀಸಿದುದುಬಿರುಘಾಳಿಕತ್ತಲೆ । ಸೂಸಿದುದುದೆಸೆದೆಸೆಗೆನೀಸರು । ಮಾಸಿದುದುಕೆಂಧೂಳಿಕಂಗೆಡಿಸಿತ್ತುಮೂಜಗವ ॥ ಅಸುರದಲವಗಡಿಸಿದರುಮಾಂ । ಸಾಶನರುಹುಲಿಕರಡಿಗಳುಧರ । ಣೀಶನಂದನನಿದಿರಿನಲಿನೂಕಿದವುಸಂದಣಿಸಿ ॥ ೩೪ ॥ ಕಾಸಿದನುರವಿಕರಸಹಸ್ರವ । ಸೂಸಿಶಿಶುವಿನನೆತ್ತಿಯನುನೆರೆ । ಬೀಸಿದುದುಬಿರುಘಾಳಿನೆರೆಕೆಂಧೂಳಿಯನುಕವಿಸಿ ॥ ಪೋಷಿಸರವಸಾರ್ಭಕನಕೊರಳಿ । ಪಾಶವನುಬಿಗಿದೆಳೆದನಾಮ । ರಾಶಿಯನುಕವಿಸಿದನುಯಮದಂಡದಲಿರ್ಥುಡಿಸಿದ ॥ ೩೫ ॥ ಬಿಸಿಲರ್ಥುಳಬೆಳದಿಂಗಳಾದುದು । ನಸುಬೆಮರನಾಲಿಸಿತುಘಾಳಿಯು । ಗಸಣಿಹರಿದುದುಪಾಶಸೈಸರಿಸಿತ್ತುಕಡಲೇಳು ॥ ಜಸವಳಿದನಂತಕನುನಿರುಪಮ । ಶಿಶುವನೆಬ್ಬಿಸಲಾರದಳಲಿದು । ಕುಸುಮನಾಭನಕರುಣದಳಕೆಗಿದಾವಘನವೆಂದ ॥ ೩೬ ॥ ಆಗಲೇನಾಯಿತ್ತಗಕಾಬೆವ್ರು । ಯೋಗಪ್ರುರುಷನನೆಲೆಯನಿದನೆಂ । ದಾಗಲೇಹೊತ್ತಿಕ್ಕಿಪ್ರಜ್ವಲಿಸಿದುದುಪಾಜ್ಞೆಯಲಿ ॥ ಯೋಗನಿಷ್ಠೆಯನೋಡಬಡಿವನಿ । ಭರ್ಗಧೇಯರನೇನನೆಂಬೆನು । ಬೇಗಮುಸುಕಿದದಾವನಾಂತರಕವನಮಧ್ಯದಲಿ ॥ ೩೭ ॥ ಕಾಳುಗಿಚ್ಚೆತ್ತಂದುಕವಿದುದು । ಮೇಲೆನಾಲುಕುದೆಸೆಗೆಘನಮೇ । ಘಾಳಿಮುಸುಕಿದುದೆರಗಿದವುಬರಸಿಡಿಲುಮಳೆಸಹಿತ ॥ ಅಲಿಗಲ್ಲಂತಾದುದುರಿಯುಭ । ಘಾಳವದುಬರಸಿಡಿಲುಗಳುಹೂ । ಮಾಲೆಯಾದವ್ರುಮುರಿದುದಮರಾಧೀಶನಂಗನಣೆ ॥ ೩೮ ॥ ಇರದೆಕವಿದವ್ರುಗೆನಿಕರಧರೆ । ಬಿರಿಯಲೊಂಬೆಶೆಗೊಂಗೆಸೆಗೆಬಾ । ಯ್ದರದುಕವಿದುದುಮುಂದೆಶಾಕಿನಿಡಾಕಿನೀನಿವಹ ॥ ಅರಿಯನದನೇನುಮನುಬಾಲಕ । ಸೆರೆವಿಡಿದುಸುರಮಂತ್ರವನುಕಂ । ದೆರೆಯಲಿರಲೈತಂದಳಂದುಸುನೀತಿಸುತನೆಡೆಗೆ ॥ ೪೦ ॥ ಕೇಳುಮಗನೇಸಾಕುತಪವಿದು । ಕಾಲವಿದುಶುಭವಲ್ಲನೋಳ್ಪಡೆ । ಬಾಲಕನಲಾಕ್ಷ್ರಮನೆನೀನೀಕಾನನಾಂತದಲಿ ॥ ತಾಳಲಾಪ್ಪೆಹಸಿವ್ರುತೃಷೆಗಳ । ನೇಳುಧಿಟವಲ್ಲವನಿಮನ್ನಾಯ । ಮಾಳ್ಪರಕ್ಷ್ನೆಬಾಯೆನುತಕರೆದಳುಕುಮಾರಕನ ॥ ೪೧ ॥ ಇತ್ತನೋಡೆಲೆನುಗನೆದೈಶ್ವರ । ವೆತ್ತಮಾಭೀಕರವೆನಿಸಿದು । ವೃತ್ತಸಿಂಹವ್ಯಾಘ್ರಶಶಿನರೆಂದುನಿಂನುವನು ॥ ಮತ್ತೆಕವಿತರುತಿವೆಯಲಕಾ । ಣುತ್ತಬದುಕುನೆನೆಂತುತಾನೆನು । ತತ್ತಳರ್ಭಕನಿದಿರಲಂಗಲೆಕರುಣವನುತೋರಿ ॥ ೪೨ ॥ ಅವನಿಪತಿಹೊರವಡಿಸಿಕಳದನು । ಸವತಿನಕಿರಳೆಂನನಡವಿಗೆ । ಜವಪಳಿವ್ರುತ್ರಕಂಡೆನರಸುತನಿನಸಿಸ್ಥಿಧಿಗೆ ॥ ಹವಣಿಸಿನ್ನೀತಪವನೀಖಳ । ನಿವಹಕೊಲ್ಲದಮುನ್ನಸುಕ್ಷೇ । ಮನನುಮಾಡೆನಗಾರುಗತಿಯೆಂದಳಲಿದಳುತರಳೆ ॥ ಎಂದಳುತ್ತಿರೆಹರಿಪದಾಬ್ಜ । ದ್ವಂದ್ವವನುಮನದೊಳಗೆಮರೆಯದೆ । ಕಂದೆರದುನೋಡಿದನುತಾಯನುಕಾಣದಿದಿರಿನಲಿ । ನಿಂದುಭಾವಿಸುತಿರಲುಕವಿಕವಿ । ಯೆಂದೆನುತದಾನವರದೈತ್ಯರ । ಸ್ತೋಮಕವಿತರೆಕಂಡನುಗ್ರವ್ಯಾಘ್ರಕುಲಸಹಿತ ॥ ೪೪ ॥ ಅಟ್ಟಿಕೊಲಬೈತಹಗುಲಾತ್ಮರ । ಘಟ್ಟನದನೀಕ್ಷಿಸುತಚಲಿಸದೆ । ದುಷ್ಟಮರ್ದನನಂಘ್ರಿಯನುನೆನೆವ್ರುತಶಿಶುವಿರಲು ॥ ಮುಟ್ಟಲಂಪುವೆಮರಳಿದವುಕಂ । ಣಿಟ್ಟುನೋಡುವಡಂಜಿಯಂತವ್ರು । ಸೃಷ್ಟಿಯೊಡೆಯನದಾಸರೊಡನೆಲೆವಿದುರಕೇಳೆಂದ ॥ ೪೫ ॥ ಅರಿಯನೇನುವನುಬಾಲಕ । ನರಗುರಿಗಳುಪಚಾರವನುಮ್ಯೆ । ಮರೆದುಮುನಿವಂದಿತನಚರಣವನಪ್ಪಿಮನದೊಳಗೆ ॥ ಸೆರೆವಿಡಿದುಭಕುತಿಯನುಕರುವಿನ । ಲೆರಗಿಸಿದಪುತ್ಥಳಿಯವ್ರೋಲೆ । ಜ್ಜರಿಯದರಿವಿನಲಡಗಿಬೇರೆನಿಸದೆಸಮಾಧಿಯಲಿ ॥ ೪೬ ॥ ಹರಿಯಸುತಿಸುತಪರಿಯಪ್ರಾರ್ಥಿಸು । ತುರುವಣಿಸಿಮನಹರಿಯೊಳಡಗಿರೆ । ವರದಮಾನಲನೊಳಗೆಹದಿವ್ರುಬೀವಶಿವಾಯಂದು ॥ ಸಿರೆವನೊಲದನುಖಿಂದ್ರುಬೆರಗಿನ । ಭರವಸವಕೈಕೊಂಡುನೋಡು । ತ್ತಿರಲುಮಗವೀಲೋಕದಲಿಸರಿಯಂಜಿತಾಪಸರ ॥ ೪೭ ॥ ಮುಸುಕಿದುರುಳುಪತಿಯುಮನಭೆಯು । ರಸದಲದನೇನೆಂಬೆನುಸುರು । ಬ್ಬಸದಗೆಯನುಕೆಟ್ಟುದೇಕಾಳಾಯ್ತುಸಂನಾಹ ॥ ಉಸುರುವೆನುತಾನಾರಿಗೀನೀ । ಶಿಶುವಿನಪರಾಧವನುನೆರೆಭಂ । ಗಿಸಿತಲಾತನಗಾಯತ್ತನಾಚಿಕೆವಮಾನಹೋಯ್ತೆಂದ ॥ ೪೮ ॥ ಹೇಳುವೆನುಹರಿ

ಗಿಪನುತಂನನು । ಪಾಲಿಸುಪರಿಂನಾರುಪರಮುಕ್ತ್ಯ । ಪಾಳುಭಕ್ತಾಭೀಷ್ಟದಾನವರೇಂಥಿಹೇರಗಾಗಿ ॥ ಬಾಲಕನೆಬಲುತಪದನಿ
ಷ್ಠೆಯು । ಕೀಲಕಳಚುವರಿತ್ತೆನುತಸುರ । ಜಾಲಸಹಿತ್ಯೈತಂದನಿರದಿಂಗಡಲಕಡಿಗಾಗೀ ॥ ೪೯ ॥ ದೇವದೇವಾಧಿಪನನುಸ್ಮೃತ ।
ದೇವದೇವಾಧೀಶಪೂಜಿತ । ದೇವದೇವಮಹೇಶಸಂಸ್ತುತದೇವಸೇವೇಶ ॥ ದೇವಶರಣಾಗೆನುತಸಾಷ್ಟಾಂ । ಗಾವನತಿಯಲಿಪೊ
ಗಳುತಿರಲಾ । ದೇವನಾರಾಯಣನುನ್ಯೈನೊರಿದನುಸುರಸಭೆಗೆ ॥ ೫೦ ॥ ಕಾಣುತವೆತನುಕಪನುಗೆವಿಬುಧ । ಶ್ರೇಣಿಯೆದ್ದುರಾಜ
ಯಾಯುತತಧೃತ । ಪಾಣಿರಲ್ಲನವುಕೊಳವುಸ್ತಕರಾಗಿತಲೆವಾಗಿ ॥ ಕ್ಷೋಣಿಯಲಿವ್ಯಯಿಕ್ಕಿಗಡದ । ವಾಣಿಯಲಿಬಿಂಸ್ಯೆಸಲಾ
ತ್ಮ । ಪ್ರಾಣನೋಧನನಾಲಿಸುತ್ತಿಂತೆಂದನಸುರಾರಿ ॥ ೫೧ ॥ ಏಳಿನೀಂನಂಜದಿರಿತಂದಿರಿ । ಬಾಲಕನಬಲುತಪದವೆಳವಿಗೆ । ಯಾ
ಳಗನನೆಂನಲ್ಲಿಗುಸುರುಬ್ಬುಸದುಸ್ಥಿತಿಯು । ಬೀಳುಗೊಳಿಸುವೆನಕಪತಂನಲಿ । ನೋಳವಿಪಿನಿಜಚಿತ್ತವನುಹಲ । ಕಾಲಕಪವನು
ಚರಿಪಿಬಳಲಿದನೆಂದನಸುರಾರಿ ॥ ೫೨ ॥ ಅಯಿತಿಂನೇನಿದಕೆಬರಿದೇ । ಬಾಯಬಿಡುವಿರಿಕರುವಿನಲ್ಲಿಗೆ । ತಾಯಿಹೋಸಡೆನೇಡಿ
ಕೇಳಲೇಕಿದಕೆನೀವೆನುತ ॥ ಮಾಯೆಯರಸನುಕರುಣದಲಿಸುರ । ರಾಯನೊದಲಾದಖಿಳವಿಬುಧನಿ । ಕಾಯವನುನಿತ್ಯಾತ್ಮ
ನಾರಾಯಣನುಬೀಳ್ಕೊಟ್ಟ ॥ ... ... ॥ ೫೩ ॥

ಅಂತು ಸಂಧಿ ೭ಕ್ಕಂ ಪದನು ೪೭೭ಕ್ಕೆ ಮಂಗಳಮಸ್ತು.

ಎಂಟನೆಯ ಸಂಧಿ.

ಧ್ರುವಂಗೆ ವರವ ಕೊಟ್ಟದ್ದು.

ಸೂಚನೆ ॥ ಪರಮಕರುಣಾಸಿಂಧುಸಂನುತ । ಶರಣಜನನಿಜಬಂಧುಜಾಲನ । ಪೊರೆಗೆಬಿಜಯಂಗೈದ
ನಿತ್ತನುಕರುಣದಲಿವರವ ॥ ... ...

ಪದನು ॥ ವಿದುರ ಕೇಳ್ಸಂತವಿಪಿಕಳು । ಹಿದನುಸುರರನುಭೃತ್ಯವಾಕ್ಸ । ಲ್ಯದಲಿಪರವಶನಾಗಿಕರುವನುನೆನೆದತಾಯಾಂ
ತ್ರೆ ॥ ಉದರದೊಳಗುರಿನುಸಗಿಕಡುಮೋ । ಹದಲಿಕರುಣಾಸಿಂಧುವಿನತಳು । ವಿದೆನಲಾಯನುತಿರದೆಗರುಡನನೇರಿಬೊರವಂ
ಟ ॥ ೧ ॥ ನೂಕಿದವ್ರುಸುರವರವಿಮಾನಾ । ನೀಕತಳ್ತುದುಕೊಡೆಚಮರಾ । ನೀಕವೆತ್ತಿದಸತ್ತಿಗೆಗಳಂಬರವನಾವರಿಸೆ ॥ ಲೋಕ
ಪತಿಗಳುಭಜಿಸುತ್ತಿರ । ಲಾಕ್ಷ್ಮಿಮಾನಿಧಿಸಕಲಜನಸಹಿ । ತಾಕುವರನಬೊರೆಗೆಬಿಜಯಂಗೈದನೊಲವಿನಲಿ ॥ ೨ ॥ ಅರಿಯನ
ದನಾಬಾಲಕನುನ್ಯೈ । ಮರೆದುನುನದಲಿಹರಿಪದಾಬ್ಜವ । ಸೆರೆವಿಡಿದುಬೇರೊಂದನರಿಯದೆಯೋಗನಿಷ್ಠೆಯಲಿ ॥ ಇರಲುಮಿಂ
ಚಿನವ್ರೋಲುಪೊಳಹೊಳ । ದರತುದಂತರ್ಧಾನರಸಕಂ । ಡೆರದುಕಂಡನುಮುಂದೆನಿಂದಮುಕುಂದನಾಕೃತಿಯ ॥ ೩ ॥ ಎದ್ದನೀ
ಕ್ಷಿಸುತನೆಭಯಾಬ್ಧಿಯ । ಲದ್ದಕಂಗಳಹರುಷರಸದಸ । ಮುದ್ರದೊಳಗೋಲಾಡುತುಂನತಪುಳಕಭಾರದಲಿ ॥ ಭದ್ರಕಾಯನು
ನೆಸದುಮುದಿತ್ರೋಂ । ನಿದ್ರವದನನುದಂಡದಂತಿರೆ । ಬಿದ್ದನಚ್ಯುತನಂಘ್ರಿಯಲಿಜಯಜಯತುಜಯಮೆನುತ ॥ ೪ ॥ ನಿಂದುಕೈಗ
ಳುಮುಗಿದುನೃಪಕುಲ । ನಂದನನುತಲೆವಾಗಿತಂನಯ । ಮುಂದೆನಿಜಸಂಸ್ತುತಿಸುವಂದವನರಿಯದಪಡಿಸೆ ॥ ಮಂದಹಾಸದಲ
ರ್ಧಕನಮನ । ದಂದವನುಕಾಣುತ್ತಕೃಪೆಯಿಂ । ದಂದುಶ್ರುತಿಮಯಶಂಖವನುಮುಟ್ಟಿಸಿದತಾನ್ಮುಖವ ॥ ೫ ॥ ವೇದಮಯವ
ಹಪಾಂಚಜನ್ಯವ । ನಾದಯಾನಿಧಿಮುಟ್ಟಿಸಲುಮುಖ । ಕಾದುದಾಪಿರ್ಭಾನವಾವಾಗ್ದೇವಿಗಾಕ್ಷಣದಿ ॥ ಆದರದಲವಗತಪರಾ
ತ್ಮವಿ । ಭೇದಸಂಸ್ಥಿಯಲಿಂತುಮುದದಲಿ । ಮೇದಿನೀಶಕುಮಾರನಭಿವರ್ನಿಸಿದನಚ್ಯುತನ ॥ ೬ ॥ ಉತ್ತಮೋತ್ತಮನೀನಲಾ
ವಾ । ಸ್ತೃತ್ತಿಗಳಿಗಾಧಾರವೆಂತ್ಯೈ । ವಿಸ್ತರಿಸುವೆನುತಾನದಾವಂಗದಲಿಗುಣಗಣವ ॥ ಹಸ್ತಚರಣಶ್ರವಣವೊದಲಾ । ದಿತ್ತರದಶ
ರಣಾವಳೀಮತಿ । ವೃತ್ತಿಸಾಕ್ಷಿಗೆವಾಳ್ಪುದೆಂಪೊಡವಂಟೆನಾನೆಂದ ॥ ೭ ॥ ಪುರುಷಮೂಲಪ್ರಕೃತಿಮಹದಾ । ದ್ಯರುತಭೂಹಂ
ಕಾರದಂತಃ । ಕರಣಭೂತೇಂದ್ರಿಯವಿಕಾರವಿಚಿತ್ರಶಕ್ತಿಗಳ ॥ ಪರಿವಿಡಿಯಮಾಯಾಗುಣೇಂತ್ತರ । ದಿರವಿನಲಿಪುರುಷಾವಧಾ
ನವ । ಧರಿಸಿನಾನಸ್ವದಲಿಮೆರವವನರಿವನಾರೆಂದ ॥ ೮ ॥ ದೇವನೀನೊಲಿದಿತ್ತಜಲ್ಲದೆ । ಜೀವರಿಗೆಪರಮಾರ್ಥತತ್ವವ । ಗಾವ
ಬೋಧವಿದಹುದೆಮಾಯಾಗುಣವಿಮೂಢರಿಗೆ ॥ ಆವನಿಷ್ಕೃತವಿದನುಮರೆವನು । ದೇವಭವದೀಯಾಂಘ್ರಿಕಮಲಕ । ರಾವಲಂ
ಬನವಿದನುತತ್ವಜ್ಞಾನಮಾರ್ಗದಲಿ ॥ ೯ ॥ ಕಲ್ಪತರುವನುಭಜಿಸಿಬಾಹಿರ । ರಲ್ಪಸುಖವನುಬಯಸುವಂತೆವಿ । ಕಲ್ಪಮತಿಗಳು
ಭುಕ್ತಿಮುಕ್ತಿಸುಖಪ್ರದಾಯಕನ ॥ ಸ್ವಲ್ಪಕಾಲಸುಖಕ್ಕೆಸುಜನಾ । ಕಲ್ಪಮಹಿಮನಭಜಿಸಿಬೇಡುವ । ನಲ್ಪಮಾಯಾಮೋಹಿತ
ರಕೇನೆಂಬೆನಾನೆಂದ ॥ ೧೦ ॥ ದೇವನಿಂಮಡಿದಾವರೆಯಕಡು । ಸೇವೆಯಲಿಮೇಣೀವಿವರ್ಜನ । ಜೀವನವೆನಿಪ್ಪಮಳದಿವ್ಯಕ
ಥಶ್ರವಣದಿಂದ ॥ ಆವಸುಖವಹುದದುಜನಿಸದಾ । ಕೇವಲಬ್ರಹ್ಮದಲಿಕಾಲಮು । ಖಾವಳೀಡಾಮರರಪದವಿಯಮತಿಗಳೇಕೆಂ

ದ ॥ ೧೧ ॥ ನಿನಗಿನ್ನಿಗಿಳಿವೇವನಿಂನನು । ನೆನೆವನಿಜಪದಭಕ್ತರೆಂಬುದ । ನನುಭವಿಸಿದೆನು ಕಂಡೆನ ನ ರದಮಹಾಮುನಿಪ ॥
ಅನುಪಮಾನುಗ್ರಹದಲಂದುದು । ತನಗಿದೇನರಕರುಣವೀವುದ । ವನಜದರಶನನಲ್ಲದೆ ತಾನಾರು ಹೇಳೆಂದ ॥ ೧೨ ॥ ಅದುನಿ
ಮಿತ್ತವಶೇಷಪುರುಷಾ । ರ್ಥದವೆನಿಪ ನಿಜಭಾಗವತ ಸಂ । ಗದಲಿ ನಿಲಿಸೆನುವನು ದೇವಭವತ್ಕಥಾಮೃತದ ॥ ಸದಿಯು ಬೋಲಾಡು
ತ್ತ ಸಂತಸೋ । ಷದಲಿ ಕಳೆವೆನು ಕಾಲಕರ್ಮವ । ನೊದೆದು ದುಸ್ತರವೆನಿಪ ಭವಬಂಧುವನು ತಾನೆಂದ ॥ ೧೩ ॥ ಮರಸುವುದು ತನು
ಭಾವವನು ನೆರೆ । ಮರಸುವುದು ಸುತದಾರಗೃಹವನು । ಮರಸುವುದು ಪಶುಕೋಶಪರಿಜನರಾಜ್ಯಸಂಪದವ ॥ ಮರಸುವುದು ಭಾ
ಗವತಸಂಗ । ಕ್ಕೆರಗಿನಿಜಪದಕಮಲಮಧುಮಧು । ಕರನೆನಿಪ ನಿರುಪಮಿತಸುಖದೀಲೋಕವಿಭ್ರಮವ ॥ ೧೪ ॥ ತಂದೆ ತಾಯ್ಮೊ
ದಲಾದ ಬಾಂಧವ । ವೃಂದದಲಿ ಫಲವೇನು ನಿಂನವ । ರೊಂದು ನಿಮಿಷದ ಸಂಗಸಾಲದೆ ಸುಖಪರಂಪರೆಗೆ ॥ ಬೆಂದಸಂಸಾರಕ್ಕೆ ಹೇ
ತುಗ । ಳೆಂದ ಪವರಂತಿರಲಿ ದೇವಮು । ಕುಂದಕರುಣಿಸು ನಿಂನವರ ಸಂಗವನು ತನಗೆಂದ ॥ ೧೫ ॥ ಹೆತ್ತವರು ಹಸುಳೆಯನು ತಂನ
ನು । ಮೃತ್ಯುವಿನಕೈವಶಕೆ ಕೊಡಲಾ । ರೆತ್ತಿಕೊಂಡವರೀಭಯಂಕರಕಾನನಾಂತದಲಿ ॥ ಸತ್ತವನಲಾ ವಿಷ್ಣುಕೋಟಿಯ । ನುತ್ತರಿ
ಸಿಭವದೀಯ ಕೃಪೆಯಲಿ । ಮತ್ತೆ ದೇವರ ಚರಣಕಮಲವ ಕಂಡೆನಾನೆಂದ ॥ ೧೬ ॥ ಹಲವು ಜನ್ಮದ ಯೋಗಸಿದ್ಧರು । ನೆರೆಯ ನರಿ
ಯರು ತಾಪಸರು ಬಸ । ವಳಿವೃತ್ತಿದೆಫಲಮೂಲಪವನಾಹಾರನಿಷ್ಠೆಯಲಿ ॥ ಬಲಿಸಲರಿಯರು ಹೋದಹಜ್ಜೆಯ । ಹೊಲಬನರಿಯ
ರು ಕರ್ಮಿಗಳು ಕಂ । ಗಳಿಗೆಗೋಚರವಾಗಲಾವವಿಶಿಷ್ಟನಾನೆಂದ ॥ ೧೭ ॥ ಇತ್ತರದ ನಿಜರೂಪದೊಳಗೀ । ಭೃತ್ಯವಾತ್ಸಲ್ಯದ
ಲಿವಡಿಜಾ । ವೃತ್ತಿಗಳಿಗಾಶ್ರಯವೆನಿಪ ವಾಕ್ಕೃತಿಯ ನರಿವಂತೆ ॥ ನಿತ್ಯಶುದ್ಧವಿಬುದ್ಧನಹವರ । ತತ್ವ ಪನು ತಾನರಿಯೆ ನಿಂದ್ರಿಯ ।
ವೃತ್ತಿಗಳು ಸುಟ್ಟದಸದಾನಂದೈಕವಿಗ್ರಹನ ॥ ೧೮ ॥ ತಂನ ಹವಣಿಂ ಸಕಲಜಗವಿಂ । ಮುಂನದೇವರ ನಾಭಿಕಮಲದೊ । ತ್ಪಂನನೆ
ನಿಸುವ ಕಮಲಭವನೊದಲಾಗಿ ಮಹಿಮೆಯನು ॥ ವರ್ಣಿಸುವಡಕ್ಷಮವಲಾವಿ । ಷ್ಣೋರ್ನುಕಂಶ್ರುತಿವಚನಸಂಪ್ರತಿ । ಪಂನಮಹಿ
ಮನನಂತುಪೊಗಳುವೆನರಿವೆನೆಂದೆಂದ ॥ ೧೯ ॥ ಪ್ರೌಢವಡುವಡಾಬಲ್ಲೆನೆಂಬೀ । ನುಡಿಗೆ ನೀನೆಪ್ರೇರಕನು ತಂ । ನೊಡಲಿನಸುವಿಗೆ
ಚೇತನಕೆಚೈತನ್ಯಕಾಧಾರ ॥ ಕಡುಗಿ ಹಸುಳೆಗೆ ಹಿತವನಾಹೊ । ತ್ತೊಡಲು ಮಾಳ್ಪವೊಲೆನಗಭೀಷ್ಟವ । ನೊಡೆಯನೀನೆಬಲ್ಲೆ ಯಿ
ನುತೆರಗಿದನು ಚರಣದಲಿ ॥ ೨೦ ॥ ಅರಿತನೇಳೇಳೆಲೆಮಗನೆಮನ । ದರಿಕೆಯನು ಸಲಿಸಿದೆನು ಬಾಯೆನು । ತೆರಗಿ ನೆಗಹಿದವಪ್ಪಿಗ
ನುಕೈದಣಿಯೆ ಬಾಲಕನ ॥ ನೆರೆ ಮಹಾಕ್ಷಪದಿಂದ ತನುವನು । ಬರಿದೆ ಬಳಲಿಸಿದ್ಯೆಯೆನುತವಂ । ದೆರಗ ಹೊದಿಸಿದನೆತ್ತಿ ತೊಡೆಯಲಿ
ತೆಗದು ಕುಳ್ಳಿರಿಸಿ ॥ ೨೧ ॥ ಅಡಿಗಡಿಗೆ ಮೈದಡವಿ ಹುಡಿಯನು । ತೊಡೆದು ಮೆಲ್ಲಲವಿಂದ ಮೆಲ್ಲನೆ । ನುಡಿಪನನುರಾಗಾಶ್ರುಪೂರಿ
ತನಯನದಲಿನೋಡಿ ॥ ತಡೆಯದಿತ್ತೆನು ತಂದೆ ಕಾಲನ । ಖಡುಗಹತಿಗೊಳಗಾಗದಾರಿಗೆ । ಕೊಡದಪದವನು ಪರಮಭಾಗ್ಯಾಧಿಕ
ನೆನಿಸೆನೆಂದ ॥ ೨೨ ॥ ದೃಷ್ಟಿಗೋಚರವಲ್ಲದಾರಿಂ । ಗೊಟ್ಟವಿಸಲರಿದಮಳಲೋಕದ । ಸೃಷ್ಟಿಗತಿಶಯವದರಲಾಧಿವ್ಯಾಧಿವೊದ
ಲಾದ ॥ ಮುಟ್ಟದೀತನು ಭರ್ಮತೇಜದ । ಘಟ್ಟಯೆನಿಸುವತಂನ ಪದವನು । ಕೊಟ್ಟೆ ನಂಜದಿರಾಯುವಂತನೆನಿನಗೆ ತಾನೆಂದ ॥ ೨೩ ॥
ದುರ್ಲಭವದನ್ಯರಿಗೆ ಕೇಳೆಲೆ । ವಲ್ಲಭನೆ ತಾರಾಗ್ರಹಾವಳಿ । ಗೆಲ್ಲ ತಾನಾಧಾರವೀರವಿಶಶಿಗಳೊಳಗಾಗಿ ॥ ನಿಲ್ಲದಪಸವ್ಯದಲಿ ತಿರುಗು
ವ । ರುಲ್ಲಸಿತತೇಜೋನಿಧಿಗಳಾ । ನಲ್ಲದಂನವರಲ್ಲದದರೊಳಗಿಲ್ಲಕೇಳೆಂದ ॥ ೨೪ ॥ ತೊಳಲುವುದು ಭಯಗೊಂಡು ಸುರಮುನಿ ।
ಕುಲವದನವರತಾವು ಪದೊಂದನು । ತೊಳಲುನಕ್ಷತ್ರಗಳಂತೆಮೇಟಿಯಕಂಭವನು ಬಳಸಿ ॥ ಸಲಿಸಿದೆನು ನಿನಗಿದನು ರಾಜ್ಯವ । ನೊ
ಲಿದು ಭೋಗಿಸಿ ಸಲಹಿಧರೆಯನು । ಬಳಿಕ ಬಹೆ ತಾಕರಸಿಕೊಂಬೆನು ಮಗನೆ ಕೇಳೆಂದ ॥ ೨೫ ॥ ತಂದೆ ತಪವನು ಚರಿಸಲಡವಿಗೆ ।
ಸಂದ ಬಳಿಕಾವನಿಯ ರಾಜ್ಯಕೆ । ನಿಂದಡಲ್ಲದೆ ನಿನಗೆ ಹರಿಯ ಪ್ರಣ್ಯಫಲಭೋಗ ॥ ಕಂದ ಕೇಳುತ್ತಮನ ಯಕ್ಷರು । ಕೊಂದಪರ
ಸೋಮಗನವಮಾರ್ಗವ । ಬೆಂದು ಹೋಹಳು ತಾಯಿ ಸುರುಚಿ ಮಹಾದವಾಗ್ನಿಯಲಿ ॥ ೨೬ ॥ ಆರನೆನಬೇಡವನಿಗಿಪ್ಪ । ತ್ತಾರು
ಸಾವಿರವರುಷ ವಿಭುವಾ । ಗೇರಿ ಸಿಂಹಾಸನವನಾಳು ಸಮಸ್ತರಾಜ್ಯವನು ॥ ಜಾರಿಸೈಶ್ವರ್ಯವನು ಮನವನು । ಬೇರಿರಿಸಿ ತಂನೊ
ಳನೆಸುತಿಯೆಡೆ । ಯಾರದಂತ್ರೆಂನ ಮೇಳಚರಿತವ ಕೇಳುತಿಹುದೆಂದ ॥ ೨೭ ॥ ಪರಮಪುಣ್ಯಶ್ಲೋಕವೆಸರನು । ಧರಿಸಿ ಪಾವನಕೀ
ರ್ತಿಯನುಮಿ । ಸ್ತರಿಸಿ ಪೂಜಿಸಿಬಹಳವರಮಖದಿಂದ ತಂನುವನು ॥ ಮರಳುದಲಿ ಮಗುಳಿಲ್ಲದೆಂನಯ । ಪರಮಪುಣ್ಯಸ್ಥಾನವನು
ನೀ । ನಿರದೆ ಪಡೆನೆಯನುತ್ತ ಪರಮಕೃಪಾಳುನೇಮಿಸಿದ ॥ ೨೮ ॥ ನಡೆಮಗನೆ ಪುರಕೆಂದು ನೇಮಿಸೆ । ನುಡಿಯ ಕೇಳುತ ಕಾಲ
ಮೇಲೆಡೆ । ಗೆಡದು ಹೊರಳಿದನರ್ಭಕನು ನಯನಾಶ್ರುಜಲಪೂರಗಲು ॥ ಬಿಡದಲಾರಾಜ್ಯೋಪಭೋಗದ । ತೊಡಕು ತಂನನು ದೇ
ವನೇಮವ । ಕೊಡದಿರಂಜುವೆನಗಲಿಕೆಯ ಮಾತಾಡಬೇಡೆಂದ ॥ ೨೯ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.
ಎನಲು ತೆಗೆದಪ್ಪಿದನು ತಂನನು । ಮನದೊಳಗೆ ಭಾವಿಸಿ ನಿರಂತರ । ನೆನೆದು ಸುಖಿಸುತ್ತಿಹುದು ನಿರ್ಮಲಮತಿಯಲಿರಾಜ್ಯದಲಿ ॥ ತನ
ವಿರಲಿ ಮನವೆಂನಪದಯುಗ । ವನಜದಲಿ ವರ್ತಿಸಲಿ ಹೋಗಾ । ದಿನಹಲವು ಕಾಡದಿರು ತಂನನು ಮಗನೆ ನೀನೆಂದ ॥ ೩೦ ॥ ಹಾ
ವೃದ್ಧಿಗಳ್ಳದೆ ತಂನದು । ನೀನಿದಕೆ ಚಿಂತಿಸದಿರೆನುತಕ್ಕೆ । ಪಾಸುರಂ ಚಿತ್ತಹೃದಯನಾ ಬಾಲಕನ ಮೈದಡವಿ ॥ ಮಾನನಿಧಿಕುಳ್ಳಿರಿ

ಧರೆಯಲಿ । ಮಾನವೇಂದ್ರನಶಿಶುವನಂತ । ಧ್ರುವನಗತಿಯನುನೆನೆದನಮರಾನೀಕಕೈಮುಗಿಯೆ ॥ ೩೧ ॥ ಬಿಟ್ಟುಹೋಗಲು
ಕಾಣದವನಿಗೆ । ಧಟ್ಟಿಗೆಡದನುನೃಪಕುಮಾರಕ । ನಟ್ಟಡವಿಯಲಿತಾಯನಗಲಿದಹಸುಳೆಯಂದದಲಿ ॥ ಬಟ್ಟೆಯಲಿಮುನಿವಚನ
ವನುಕಿವಿ । ಗೊಟ್ಟುಕೇಳದೆಮರುಳುತನದಲಿ । ಕೆಟ್ಟೆನಕಟಕಟಾಮನೋರಥವಿಫಲವಾಯ್ತೆಂದ ॥ ೩೨ ॥ ಅಂಬರವನಡರ್ದ
ಗದೇವನ । ಹಂಬಲಿಸಿಹಳವಿಸಿದನಾನಾ । ನಂಬುಜೋದರನಿರವನಂಘ್ರಿಗಡಿಗಡಿಗೆನೆನೆನೆನೆದು ॥ ತುಂಬಿದಂಬುಧಿಯಂತೆಪೊಡವಿಲೋ
ಳ್ತುಂಬಿದನುದೈವವನೆನಲುಧೃವ । ವೆಂಬಮೃತಸಾಗರದವಾಪಿಯನಚನಬಿಂದುಗಳ ॥ ೩೩ ॥ ದೇವಬಂದನುಭಕ್ತರಿಷ್ಟವ । ನೀ
ಪಬಂದನುತಂನನೆನೆವರ । ಜೀವಬಂದನುಪ್ರಾಣಿಚೇತನದಿವ್ಯರತ್ನವನೆ ॥ ಭಾವಭೇಧವನರಿಯದಾತ್ಮಾ । ಭಾವಶುದ್ಧನುಬಂದ
ನಿದೆಕ್ಕೃ । ಪಾವನಧಿಶುದ್ಧಾತ್ಮಸಲಹುವೆನೆಂದುಮರಳಿದನು ॥ ೩೪ ॥ ಬಂದನಿದೆಯಿದೆಕಂಗಳಿದಿರಲಿ । ನಿಂದನಿದೆಯಿದೆತಂನಸಲ
ಹುವೆ । ನೆಂದುಅಭಯವಕೊಡುವಜಗದಾನಂದವಾಯನಿದೆ ॥ ಎಂದುಹಂಬಲಿಸುವನುತಂನನು । ನಿಂದುಬಿಗಿಯಪ್ಪಿದವನದೆ
ಯದೆ । ಕುಂದದವಯಸಮೂರ್ತಿಕೈವಿಡಿದೆತ್ತುತಿಹನೆಂಬ ॥ ೩೫ ॥ ದಂದುಗದಹರಿಸ್ಮರಣೆಯಲಿಮನ । ವೊಂದುಗೂಡಿದಧೃವ
ನುನಾನದ । ರಂದವನುನಿನಗೇನನುಸುರುವೆಹರಿಯಮಹಿಮೆಗಳ ॥ ಕಂದತಾನೇಬಲ್ಲಬಾಲಕ । ನಂದವನುತಾಬಂದುರಪ್ರಿಸಿ ।
ಬಂದರಿಕೆಯಾದನಿತುವನುವಿಸ್ತರಿಪೆನೆನೋಡೆಂದ ॥ ೩೬ ॥ ಕುರುಕುಲಾಗ್ರಣಿಕೇಳುಹರಿಪದ । ಶರಣಜನದನುರಾಗತಾನೀ । ಪರಿ
ಕಣಾಬೇರೊಂದನೊಲ್ಲರುತತ್ಪದಾಂಬುಜದ ॥ ಹೊರೆಯಲಧಿಕಾನಂದದಿಂದಿ । ಪ್ಪಿರವನಲ್ಲದೆಬಯಸಿಲೋಕಾಂ । ತರದಸುಖವ
ನುಮೇಣುನಿರುಪಮಭೋಗಸಂಪದವ ॥ ೩೭ ॥ ಧರಣಿಪಾಲಕುಮಾರನಾಹರಿ । ಚರಣಕಮಲವಿಯೋಗಚಿಂತಾ । ತುರನುತ
ನ್ನಲಿತಾನೆಹದುಳಿಸಿಕೊಂಡುನಿಜಮನವ ॥ ಪರಮಸಂತಾಪವನುನೆರೆಪರಿ । ಹರಿಸಿತಧ್ಯಾನಾನುರಂಜಿತ । ಕರಣಸೌಖ್ಯದಸಿದ್ಧಿ
ಯಲಿಮರಳಿದನುನಿಜಪುರಕೆ ॥ ೩೮ ॥ ಪುರದಹೊರವಳೆಯದಲಿಬರುತಿರೆ । ವರಕುಮಾರಕನಾಗಮನವನು । ಹರಿದುದೂತರು
ಪರಮಸಂತೋಷದಲಿಬಿಂನವಿಸೆ ॥ ಧರಣಿಪತಿಕೇಳುತ್ತನಿಜಸುತ । ದರುಶನವಿದೆಂತೆನಗೆಪಾಪಿಗೆ । ದೊರಕಲರಿವುದೆಸಾಕುದೂತ
ರವಮಾತುಹುಸಿಯಂದ ॥ ೩೯ ॥ ಬಂದನಲ್ಲಿಗೆನಾರದಾಂಕನು । ನಿಂದಿರೇಳೆಲೆಭೂಪಮಗನೀ । ಬಂದನಿದೆಹುಸಿಯಲ್ಲಸಂಶಯವಿ
ಲ್ಲಕೇಳೆನಲು ॥ ಮಿಂದನಾನಂದಾಶ್ರುಜಲದಲಿ । ಮಂದಹಾಸದಮುಡಿಯನುಟ್ಟನು । ಬಂದುದೂತರಿಗಂಗಚಿತ್ತವನಿತ್ತುಕೈಮುಗಿ
ದ ॥ ೪೦ ॥ ಹೊಂಗಿದುದುತನುಪುಳಕದಲಿಮುನಿ । ಪುಂಗವನಪದಕೆರಗಿದನುಹೊ । ಯ್ಡಂಗುರವನೆನುತೆದ್ದನೆಡಬಲವಂಕವನು
ನೋಡಿ ॥ ಅಂಗನೆಯರ್ತೈತರಲಿಬರಲು । ತುಂಗಗಜಘಟೆಕಳಸಕಂನಡಿ । ಮಂಗಳದಸಂಮೇಳವೆಸೆಯಲೆನುತ್ತಹೊರವಂಟ ॥
ಭೂರಿಮಂಗಳರವದಘನಗಂ । ಭೀರಭೇರೀರಭಸದಲಿಕಹ । ಳಾರವದಕಳಕಳದಲವನೀಸುರರಘೋಷದಲಿ ॥ ಪೌರಜನವಾದೇ
ಶಜನಪರಿ । ವಾರದಲಿಕರಿತುರುಗರಥನಾ । ಕಾರವದಲೆಂಣ್ದೆಸೆಗಳೊಂದಾಯ್ತೆಂದುನಿಮಿಷದಲಿ ॥ ೪೨ ॥ ದೂರದಲಿಕಾಣುತ್ತ
ನೃಪತಿಕು । ಮಾರರತ್ನವನಶ್ರುಜಲಪರಿ । ಪೂರಿತಾಕ್ಷನೆಮುಳುಗಿದನುಪುಳಕಾಮೃತಾಬ್ಧಿಯಲಿ ॥ ತೇರನಿಳಿದಪ್ಪಿದನುಹರಿಪ
ದ । ಚಾರುಗಾತ್ರಸ್ಪರುಶಪೂತಶ । ರೀರನನುನೃಪನತ್ತಸುರದಲಿತೆಗೆದುತಕ್ಕೈಸಿ ॥ ೪೩ ॥ ಹರಿಯುರದಸಿರಿಗಂಧಕುಂಕುಮ ।
ಪರಿಲುಳಿತಪುಣ್ಯಾಂಗಪಾದನ । ನರನನುರದಲಿಧರಿಸಿಮೂರ್ಧ್ನಾಘ್ರಾಣವನುಮಾಡಿ । ಸುರಿವಸುಖಬಾಷ್ಪದಲಿಶಿಶುವಿನ । ಶಿರವ
ನಾಡಿದನಧಿಕಹರುಷೋ । ತ್ಕರುಷದಲಿಮನಮುಳುಗಿಹೊಂಪುಳಿಯೋದನಡಿಗಡಿಗೆ ॥ ೪೪ ॥ ತಂದೆಯಂಘ್ರಿಗೆನಮಿಸಿತಾಯಿಗೆ ।
ವಂದಿಸಲುತೆಗೆದೆತ್ತಿತಂನಯ । ನಂದನನನಪ್ಪಿದಳುಹರುಷಾಮೃತದಪುಳಕದಲಿ ॥ ಹೊಂದಿದಸುಬಂದಂತೆವಿರಹದ । ದಂದುಗವನೀ
ಡಾಡಿಪರಮಾ । ನಂದದಲಿಮುಳುಗಿದಳುಮರೆದಳುಲೋಕವಿಭ್ರಮವ ॥ ೪೫ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.
ತೊರೆದಮೊಲೆಗಳಲಪ್ಪಿಸುಡಿದಳು । ಪುರವಹೊರವಂಟಾರುತಿಂಗಳು । ತರುಣನೀನೆಂತಿರ್ದೆಘೋರಾರಣ್ಯಮಧ್ಯದಲಿ ॥ ಸಿರಿಯ
ರಸನೆಂತೊಲಿದನೇಂಪರಿ । ಚರಿಸಿತಪದಲಿಮೆಚ್ಚಿಸಿದೆಹೇ । ಳರಸಹೇಳೆನ್ನಾಣೆಹೇಳೆನುತಪ್ಪಿದಳುಮಗನ ॥ ೪೬ ॥ ಅವುದರಿದೆಲೆತಾಯಿ
ತನಗೀ । ದೇವಋಷಿಹೊಣೆಕಾರನಾಗಿರ । ಲಾವಿಪಿನವಂತರ್ಭವನವಾಯ್ತಾಮುರಾಂತಕನ । ಸೇವೆತಪವದುಲೀಲೆಯಾಯ್ತುಮ ।
ನೋವಿದೂರನುಸುಲಭನಾದನು । ದೇವಲೋಕಕ್ಕಧಿಕವಹಪದವಾಯ್ತುತನಗೆಂದ ॥ ೪೭ ॥ ಎಂದುಜನನಿಗೆಸುರುಚಿಯಂಘ್ರಿಗೆ ।
ಬಂದುತಲೆವಾಗಿದಡೆಜೀವಿಸು । ಕಂದಹಲಕಾಲೆನುತಹರಸಿದಳಪ್ಪಿಬಾಲಕನ ॥ ಎಂದಡೇನದ್ಭುತನೆದೇವಮು । ಕುಂದನೊಲಿದಡೆಸ
ಕಲಸುರನರ । ವೃಂದದೊಲವೊಡಗೂಡುವುದುತಡವಿಲ್ಲಕೇಳೆಂದ ॥ ೪೮ ॥ ತೆಗದುಬಿಗಿಯಪ್ಪಿದರುಹರುಷಾ । ಶ್ರುಗಳಲೊಬ್ಬೊ
ಬ್ಬರನುಕಾಣು । ತ್ತಗಲಿದಸುಬಂದಂತೆಸುರುಚಿಸುನೀತಿನಂದನರು ॥ ಹೊಗಳಿದುದುಪರಿವಾರಪರಿಜನ । ನಗರಜನವಾಭಾಗ್ಯ
ವಂತೆಯ । ಮಗನಮಹಿಮೆಯನಾಮಹಾಸಾಮರ್ಥ್ಯಸಂಪದವ ॥ ೪೯ ॥ ಎಂತುಟೋಹರಹರಸುನೀತಿಭ । ವಾಂತರದಲಾರ್ಜಿಸಿದ
ಸುಕೃತವ । ದೆಂತುಟೋಪೂರ್ವಾಚರಿತಪುರುಷೋತ್ತಮಪ್ರೀತಿ ॥ ಅಂತಕನಮುಖವೆನಿಪಘನವಿಪಿ । ನಾಂತದಲಿಬದುಕಿರ್ದಕಂ
ದನ । ದೆಂತುಕಂಡಳೊಯೆನುತಕೊಂಡಾಡಿದುದುತಮತಮಗೆ ॥ ೫೦ ॥ ಆದುದುತ್ಸವವಖಿಳಜನಹರು । ಷೋದಧಿಗಪೂರ್ಣೇಂದು

ಸೋನಿಭ । ನಂದನಾಧ್ರುವನೇನೆನೆಂಬೆನುಜನದ ಸಂಭ್ರಮವ ॥ ಮೇದಿನಿಯುಬ್ಬಲಿಭೇರಿ । ನಾದವೆಸೆದುದುಮತ್ತಳಿತ್ರಾದಧಿಕ ॥ ಜಾ ದವನನಿಗೆಪುಷ್ಪವೃಷ್ಟಿಜಯಧ್ವನಿಗಳೆಸೆಯೆ । ೫೧ ॥ ಬಾಲಕನನುತ್ಸವದಲಾನೆಯ । ಮೇಲೆನಿಪಕಾಳ್ಯರಿಸಿಕೊಂಡಾ । ಲೋಲ ಲೋಚನೆಸಹಿತಸಂತೋಷದಲಿನಿಜಪುರಕೆ ॥ ಲಾಲಿಸುತಸುರಸೂತಮಾಗಧ । ಜಾಲದೆಡಬಲವಂಕದೊಸಗೆಯ । ಮೇಳವಣೆಯಲಿ ಮೊಳಗಿದನುಜನಜಲಧಿಕೈಮುಗಿಯೆ ॥ ೫೨ ॥ ವಸುಧೆಗಜರಥತುರುಗಪತ್ತಿ । ಪ್ರಸರಮಯವಂಬರಸುರೋತ್ತಮ । ವಿಸರಮಯ ದೆಸೆಗಳುಪತಾಕಚ್ಛತ್ರಚಮರಮಯ ॥ ಹೆಸರಿಡುವಕವಿಯಾವನದನು । ಲ್ಲಸಿತಪರಮೋತ್ಸವದರಹಿಯಲಿ । ವಸುಮತೀಪತಿ ಪುರಕೆಪರಿತೋಷದಲಿನಡೆತಂದ ॥ ೫೩ ॥ ಮನೆಮನೆಯಬಾಗಿಲಲಿಬೆಳಗುವ । ಕನಕಕಳಶದಕನ್ನಡಿಯರಂ । ಜನದವನಮಾಲೆಗಳ ತೊಳಗುವಮಕರತೋರಣದ ॥ ತೆನೆವೆರಸಿದಿಕ್ಷುಗಳಹೊರೆಗಳ । ಗೊನೆವೆರಸಿಶೋಭಿಸುವಕದಳಿಯ । ಜನಿತಮಂಗಳರಚನೆಯಲಿ ಮೆರೆದುದುಮಹಾನಗರ ॥ ೫೪ ॥ ಅಗರುಕುಂಕುಮಚಂದನದವಾ । ರಿಗಳಛಳೆಯುದಸಾರದಲಿಮಘ । ಮಘಿಪಬೀದಿಯಬಹಳಚ ಪ್ಪರರಾಜಬೀದಿಗಳ ॥ ಸೊಗಯಿಸುವಹೂವಲಿಯಹೊಸಪ । ಟ್ಟೆಗಳಗುಡಿಗಳಮೆರವಮೇಲ್ಕ । ಟ್ಟುಗಳಪಟ್ಟಾವಳಿಯಲಂದೆಸ ದುದುಮಹಾನಗರ ॥ ೫೫ ॥ ಹೊಕ್ಕನಾಪುರವರವನವನಿಪ । ನಿಕ್ಕಲಿಸಲಂದಖಿಳಜನಕಂ । ಡಕ್ಕಜದಲಬಲೆಯರುರಾಜಕುಮಾ ರಕೌಂಸ್ತುಭನ ॥ ಮಕ್ಕಳನುಪಡೆವಡೆಸುನೀತಿಗೆ । ತಕ್ಕದಲ್ಲದೊಡೊಲಕೇಡಿನ । ಮಕ್ಕಳೇತಕೆಬಾಲೆಯಂದುದುಹರಸಿತಮಾತೆ ಮಗೆ ॥ ೫೬ ॥ ಅನಿಮಿಷಾಲಕುಮಾರನಾಪಿತೃ । ಭವನವನುಪರಿಜನದಪರಮೋ । ತ್ಸವದಲಂದೈತಂದುಹೊಕ್ಕನುವಿದಿತವಿಭವ ದಲಿ ॥ ವಿವಿಧರತ್ನಪ್ರಕರಕನಕ । ಪ್ರವರರಚನೆಯಬಹಳಕಾಂತಿಯ । ದಿವಿಜರಾಜಾಲಯಕೆಮಿಗಿಲಹರಾಜಮಂದಿರವ ॥ ೫೭ ॥ ನೇಸರಿನಹಂಗಿಲ್ಲರತ್ನದ । ರಾಸಿಬೆಳಗುವಡಡಕೆಲಿನಮೊಲು । ಮಾಸುಮಂಚಂಗಳಲಿದಂತಸುವರ್ಣನಿರ್ಮಿತದ ॥ ಲೇಸೆನಿಪಗೃಹ ಪರಿಕರದರ । ತ್ನಾಸನಾಧಿಕಗಳಲಿಮೆರವಾ । ವಾಸದಲಿನೃಪತನೆಯನೆಸೆದನುವಿದಿತವೈಭವದಲಿ ॥ ೫೮ ॥ ಕಾಮಿತಾರ್ಥವನೀವ ಬಜೆಳವ । ಹಾಮರದ್ರುಮಗಳಲಿಮೆರವಾ । ರಾಮಶೋಭೆಯವಾಪಿಗಳಸೋಪಾನರಚನೆಯಲಿ ॥ ಅಮಹಾಭವನದಲಿಭುವನ । ಸ್ತೋಮನುತಚಾರಿತ್ರನೆಸೆದನು । ಭೂಮಿಪಾಲನಪರಮಸೌಖ್ಯದಸಿದ್ಧಿಯಂದದಲಿ ॥ ೫೯ ॥ ದೇವರಾಜನವೋಲುಬಹಳನು । ಹಾವಿಭೂತಿಗಳೊಲವಿನಲಿನರ । ದೇವನಂದನನೆಸೆದನತಿಶಯಭೋಗಸೌಖ್ಯದಲಿ ॥ ದೇವತತಿನುತಪರಮಮಂಗಳ । ಪಾವನಾ ಮಳಚರಿತನವನತ । ದೇವನಿತ್ಯಾತುಮಮುಕುಂದವರಪ್ರಸಾದದಲಿ ॥ ... ... ॥ ೬೦ ॥

ಅಂತು ಸಂಧಿ ೮ಕ್ಕಂ ಪದನು ೪೨೪ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

ಧ್ರುವರಾಜ್ಯ ಪಟ್ಟಾಭಿಷೇಕ.

ಸೂಚನೆ ॥ ಸುರನರೋರಗಲೋಕಮೂರರ । ಸಿರಿಯನಿರದನುಭವಿಸಿಲೋಕೋ । ತ್ತರದಪದದಲಿನಿಂ
ದನಾಧ್ರುವನಧಿಕತೇಜದಲಿ ॥ ... ...

ಪದನು ॥ ಏನನೆಂಬೆನುವಿದುರವಿಷ್ಣು । ಕ್ಷೋಣಿನೊಲಿದಂಗಾವುದರಿದು ; ತ್ರಾಣವಾದನ್ನೃಪಾಲಮೌಳಿಯಸೌಖ್ಯಸಂಪದವ ॥ ಅನಿಖಿಳದಿಕ್ಪಾಲರಾಜ್ಞಾ । ಧೀನವರ್ತಿಗಳಾದರವನಿಯ । ಮಾನನಿಧಿಗಳನಾತನಾಡಲದೇಕೆವಶವಾಯ್ತು ॥ ೧ ॥ ಸುತನ ಸಿರಿಯನುನೋಡಿದಣಿಯನು । ಸುತನಗುಣವನು ಪಾಡಿದಣಿಯನು । ಸುತನವಾರ್ತೆಯಕೇಳದಣಿಯವ್ರಕಿವಿಗಳವನಿಪನ ॥ ಸುತನಸೌಭಾಗ್ಯವನುನಿಜನರ । ಸುತನಸೌಜನ್ಯವನುವಿಸ್ತರಿ । ಸುತನರಾಧಿಪನಮಮಮರೆದನುರಾಜ್ಯವಿಭ್ರಮವ ॥ ೨ ॥ ಇರಲಿರಲುಯುವ್ವನದಸಿರಿಯಂ । ಕುರಿಸೆಖಿಳಜನಾನುರಾಗಂ । ಕುರದವೋಲಾಶಿಂಶುಮಾರನುಪ್ರಜೇಶ್ವರನ ॥ ಪರಸುತೆ ಭ್ರಮಿಯೆಂಬನಾರೀ । ಪರುಶವನುಪರಿಣಯನಮಾಡಿದ । ನರಸನಾತ್ಮಕುಮಾರಕೌಂಸ್ತುಭಗಧಿಕವಿಭವದಲಿ ॥ ೩ ॥ ಮತ್ತೆ ಕಾಲಾಂತರಕೆಸಿಜಸುತ । ವೃತ್ತಗುಣಮಾಧುರ್ಯರಂಜಿತ । ಚಿತ್ತವೆನಿಸುವಸಕಲಪೌರಪ್ರಕೃತಿಪರಿಜನದ ॥ ಅತ್ಯಧಿಕಸಂಪ್ರೀತಿಯನುಕಾ । ಣುತ್ತಸಂತೊಸದಲಿ ಜರಾಜ್ಯಯ । ಮತ್ತಕಾಸಿನಿಮುದುವೆಯಾಗಿರೆಕಂಡನವನೀಶ ॥ ೪ ॥ ಸಾಕೇತನಗೀವಿಷಯವಿಭ್ರಮ । ವೇಕೆತನಗಿನರಾಜ್ಯವಾಜಗ । ದೇಕನಾಥನಪದವಲಾಸ್ಥಿರರಾಜ್ಯವೆಂದೆನುತ ॥ ಆಕುಮಾರನನಿರಿಸಿಸಹಜವಿ । ವೇಕದಲಿವಿಧ್ವಸ್ತಕರ್ಮ । ನೀಕನೆನಿಸಿವಿಮುಕ್ತಿಪದದಲಿನಿಂದನವನೀಶ ॥ ೫ ॥ ತಂದೆನಿಖಿಳಾವನಿಯರಾಜ್ಯವ । ನಂದುತನಗಿತ್ತದಪಿತೊಗಳರ । ವಿಂದನಾಭನಭಕ್ತನಾಧ್ರುವನೊಲಿದುರಾಜ್ಯದಲಿ ॥ ನಿಂದನಖಿಳಾವನಿಗೆಪರಮಾ । ನಂದಕರನೆಂದೆನಿಸಿತಂನಯ । ತಂದೆಗತಿಶಯನಾಗಿರಂಜಿಸಿದನುಜಗತ್ರಯವ ॥ ೬ ॥ ಸಲಹಿದನುಧರ್ಮದಲಿಧರೆಯನು । ಜಲಜನೈಶನಾಜ್ಞಾಪಿಸಿದವೋಲು । ಅಲಘುಮತಿಸನುವಿಲ್ಲಿಪನವುರನೈರಿಚರಣದಲಿ ॥ ಸಚಿಸಮಾಹಿತವಾಗಲಾಗುಣ । ಜಲಧಿನಿಜಚಾರಿತ್ರದಲಿನೃಪ । ಕುಲಸದಾಚಾರ

ವನುರಕ್ಷಿಸುವಂತೆನ್ನೃಪನೆಸೆದ ॥ ೭ ॥ ಭ್ರಮಿಯೆನಿಸಿಪ ಭಾರ್ಯೆಯಾಲಿವಳಾಯಾ | ಧ್ರುವನುವಿನೋದದಿನಿಬ್ಬರುದಿಸಿದ | ರಮಳಚರಿತರು
ಕಲ್ಪವತ್ಸರರೆಂಬವರಸುತರು ॥ ವಿಮಳನುತ್ಕಲನೆಂಬನೊಬ್ಬನು | ಸುಮತಿಕೇಳಿಳೆಯೆಂಬಳಲಿನಿ | ರ್ಮಮನುಜನಿಸಿದನಾಧ್ರುವಂ
ಗಾವರಿಪುತ್ರಿಯಲಿ ॥ ೮ ॥ ಒಂದುದಿನಮೃಗಯಾವಿಹಾರಾ | ನಂದದಲಿವನದೊಳಗೆಸುರುಚಿಯ | ನಂದನನುಸುಳಿದಾಡು
ತಿರಲಾಹಿಮವದಲುತ್ತಮನ ॥ ಕೊಂದನೊಬ್ಬನುಯಕ್ಷನಾತನ | ಹಿಂದುಗೊಂಡರಸುತ್ತಹೋಗುತ | ಹೊಂದಿದಳುಕಾಳ್ಗುರಿಯೊಳುತ್ತ
ಮನನ್ನೆವಿಪಿನದಲಿ ॥ ೯ ॥ ಅಪಿರಮಾರ್ಗವನರಸುತಡವಿಗೆ | ಧ್ರುವನೃಪಾಲಕನೈದಿದನುಬಲಿಂ | ದವನುಯಕ್ಷನುಕೊಲುವನಾ
ಯಕ್ಷೇಶ್ವರನನೆನುತ ॥ ಭುವನಜನದವಸಾನವಂದಿನ | ಭವನವೋಲತ್ಯಧಿಕವಹರೋಪ | ಷವನುತಳೆದನುವಮಾನನಿಧಿಸಂಗರಕೆಹೊ
ರಪಂಟ ॥ ೧೦ ॥ ಧೀರನೇಕಾಂಗದಲಿದಿವ್ಯಮ | ಹಾರಥವನೈದಿದನುಸುರವಕು | ಬೇರಪುರವನುಮುಂದಹಿಮಗಿರಿಪಾರ್ಶ್ವದಲಿ
ಕಾಡು ॥ ದೂರದಿಂದದೆಶಂಖವನುರಿಪು | ಭೂರಿಭೀಕರನೆನಲುಮೊಳಗಿದ | ನಾರಘಟೆಯಲಿಕುಹಕಿಧನುವನುನಿಂದಸಿದಿರಾಗಿ ॥
ಕೇಳಿದಾಗಳಶಂಖರವವನು | ಬಾಲವನುಕಡಿದುರಗನಿಕರದ | ಪೋಲುಕವಿದುದುಕೂಡೆಯಕ್ಷೇಶ್ವರನಪರಿವಾರ ॥ ಶೂಲಮು
ದ್ಗರಬಹುಗಟಾಪಕ | ರಾಲಸಂಮೇಳಸದಚಿತ್ರಿದ | ತೋಳುಗಳಬಲುಕ್ರೋಧಿಗಾರರುಕ್ರೂಢಗಿದರುರಣವ ॥ ೧೧ ॥ ಇರದೆಕವಿ
ತಹಭಟರನೊಬ್ಬೊ | ಬ್ಬರನುಮೂರ್ಮೂರುಶರದಲಿಕರವಮಾ | ರರಲಿಕೀಲಿಸಿದನುಲಲಾಟವನಾಹವಾಗ್ರದಲಿ ॥ ಮುರಿಯಲೆಚ್ಚನುಮುಂ
ದೆಚ್ಚಣಿಯ | ಲುರುವಣಿದಗಜಘಟೆಯನಸುಗಳು | ತೆರಳಲೆಚ್ಚನುತುರಗವನುರಥಗಳನುಕಡೆಯೆಚ್ಚ ॥ ೧೨ ॥ ಕಡಿಪಡೆದಚ
ತುರಂಗವನುಮೇ | ಲಡಪಿಡುಳಿಡುಳಿದಾಪವಕೆಸಾ | ಲಿತುವಕಲ್ಪಾಂತಾಂಬುಧಿಯಮಾರಾಂಕದತಿಬಲರೆ ॥ ಇಡಿದಮುತ್ತಿಗೆಯಿಂ
ಬಿಪಲಾಪೆ | ಗ್ಗಡಲನೊಬ್ಬನೆವೀರನೃತ್ತದ | ವಡಬಶಿಖಿಗಾಹುತಿಯಮಾಡಿದನೊಂದುನಿಮಿಷದಲಿ ॥ ೧೩ ॥ ವಿಗಡಸಮರೋ
ದ್ಯೋಗದಲಿಬಲ | ದೆಗಲುಹಾಯ್ತುದುರ್ಮ್ಮತ್ಸ್ಯವಿನತಾ | ಳಿಗೆಗೆತುತ್ತುಗಳಾದವೈಹಾಯೆನುತನಿಜಪುರಕೆ ॥ ನಗುತನೃಪನಿಲ್ಲಿ
ಸುತಿರಲುಹೊ | ಣಿಗರುಕವಿದುದುಮತ್ತೆಪ್ರಳಯದ | ಮುಗಿಲಮೇಘದಂತೆವೆಂಟಣಿಸಿದರುರಿಪುಭಟನ ॥ ೧೪ ॥ ಮಲಗಡ
ಲೊಳಗದ್ದಮಂದರ | ಶೈಲವೋಲ್ಕಲ್ಪಾಂತವಹ್ನಿಯ | ನೋಲೈಸುಕಿದಕವಾಲಜಾಂಡಕಟಾಹಮಂಡಲವೊ ॥ ಕಾಳಗದಕಲಿ
ನೃಪನೊನ್ನಪತಿಗೆ | ಮೇಲುಮುಸುಕಿನಮಾಡಿಗೆಯುಕರ | ಜಾಲವೋಲ್ಹರಜರಮಹಾದ್ಭುತವಾಯ್ತುಸಂಗ್ರಾಮ ॥ ೧೫ ॥ ಅದ್ದ
ನಕಟಕಟಹಿತಸ್ಯೆನ್ಯಸಿ | ಮುದ್ರದೊಳಗಪನಿಪನೆನುತಡೆಸೆ | ಮುದ್ದನುಂಡೆಂತಳಲುತಿರಲ್ಪ್ರಣದಲರಿಬಲವ ॥ ಛದ್ರಭುಜಬಲ
ನಾದುರ್ಕವಿದೆಸ | ಲಿದ್ದತೋಳ್ಮಾಹಿಂತನಗಲಿಕೆ | ಹದ್ದುಬಡಿದಂದದಲಿಕಡಿದುರುಳಿದವುಶರಜಾಲ ॥ ೧೬ ॥ ತೆಗದುನಿಂದುದು
ಮತ್ತೆಪರಬಲ | ನಗುತನಿಂದನುನೃಪತಿಕೆಂಸಗೆ | ತೆಗಡಮುಷ್ಟಿಯಬಳ್ಳಿಯದೃಷ್ಟಿಯವೀರನಾಹವಕೆ ॥ ಹೊಗುವಮಾರಾರರಿಗೊಂ
ಡಪ್ರೋನ್ನಾರೆ | ದೆಗದಕಾಲನದಂಡವೋನರೆ | ಬಗಿದನ್ನಪಕೆಳೆದಂಡವೊಹಾಯೆನುತಜನಬೆದರೆ ॥ ೧೭ ॥ ಧರಣಿಪತಿಪೋಗ
ಲಮಾಯಿಹಿಕರ | ಪುರವನಾಹೊರವಳೆಯದಲಿಸಿಂ | ದಿರಲುಸಾರಥಿಯೊಡನೆಸಮರದಮಾತನಾಡಿಸುತ ॥ ಕರೆಳುಹರಿದೆದೆಯೊಡ
ದುಕ್ಕಾನ್ಗಳು | ಜರಿದುಮೈಮುಳಿಕೊತ್ತಬಾಣದ | ಭರದಲೈದಿದರೊಡೆಯನೋಲಗದೆಡೆಭಟನಿಕರ ॥ ೧೮ ॥ ಜಯಬಿಂನಹಸ
ಮರದಲಿನಾ | ರಾಯಣನೆನಿಂದವನುಹೊಗುವಡೆ | ತಾಯಬಸುರೆಡೆಗೊಕ್ಕುದಾವುದುದೆಸೆಯಪರಿವಾರ ॥ ಬೀಯವಾದುದುಬಹಳ
ಸೇನಾ | ನಾಯಕರುಲಯವಾಯ್ತುಬದುಕುವ | ಪಾಯವಿಂನೆಮಗಾವುದೆಂದರುರಾಜರಾಜಂಗೆ ॥ ೨೦ ॥ ನಾಕುಸಾಕೆಲೆಭಂಡ
ರಿಜನರ | ನೇಕೆನೀವೇಕೀವಿಧಿಗೆಬರೆ | ಲೇಕೆಭಂಗಿಸಿತ್ತೆಮರ್ಯಾದಮನವರರಣಭೀತಿ ॥ ಲೋಕವೇಹನವೆನಿಪಮಾಯಾನೀ
ಕವನುಕವಿಸೆಂದುಕಿಂನರ | ರಾಕೆವಾಳನುಬೆಸಸಿದನುಮಾಯಾಪಿಶಾಚರ ॥ ೨೧ ॥ ಶಂಕಿಸುತಮಾಯಾವಿಗಳುಮಾ | ರಾಂಕ
ಜೊಗಲರಿದೆನುತಭೂಪತಿ | ಬಿಂಕದಲಿಸಾರಥಿಗೆಸಮರದಮಾತನಾಡುತಿರೆ ॥ ಬೊಂಕೆವಲುಕಲ್ಪಾಂತರುದ್ರನ | ಹೂಂಕೃತಿಯ
ವೋಲೆಸೆವಬಹಳಭ | ಯಂಕರಧ್ವನಿಕೇಳಿಬಂದುದುನೃಪತಿಗಾಕ್ಷಣಕೆ ॥ ೨೨ ॥ ದೆಸೆದೆಸೆಗೆಕೆಂಧೂಳಿಗಗನವ | ಮುಸುಕಿದು
ದುಘನಮೇಘವಭ್ರದ | ಬಸುರನಾನರಿಸಿದವುಸಿಡಿಲುಗಳಿರದೆಮಾಯೆಗಳು ॥ ಮಿಸುಪಮಿಂಚಿನಬಳ್ಳಿಗಳುಲಂ | ಬಿಸಿದವಾಕ್ಷಣ
ದೊಳಗೆಕರೆದುದು | ಕಿಸುಕುಳದಮಳೆಧರೆಗೆಕತ್ತಲೆಯಾಯ್ತುನಿಮಿಷದಲಿ ॥ ೨೩ ॥ ಗಿರಿಗಳುದಿರಿದವಭ್ರದಿಂದಿಳೆ | ಗುರುಕಬಂ
ಧಾನೀಕಬಿದ್ದುದು | ಕರಡಿಪುಲಿಪಂದಿಗಳುಕಾಡಾನೆಗಳುಕವಿತರಲು ॥ ಉರಿವಕಂಗಳವಿಷಮಧೂಮಾಂ | ಕುರದವದನದದೆಸೆಗ
ಳಲಿಹೊಂ | ಕರಿಸುವುರಗಾನೀಕಕವಿದುದುನೃಪನಸಮ್ಮುಖಕೆ ॥ ೨೪ ॥ ಪರಿಘಮುಸಲಮುಸುಂಡಿಗಳಮು | ದ್ಗರಮಹಾಪಾ
ಷಾಣಶಸ್ತ್ರೌಘ | ತ್ಕರದಮಳೆಮೋಹರಿಸಿತೆಂಕ್ಟೆಸೆಗಂಬುರಾಶಿಗಳು ॥ ಧರಣಿಯನುಮುಳುಗಿಸಿದವತಿಭೀ | ಕರಮಹೋರ್ಮಿ
ಭುಜಾಪಗೂಢಾಂ | ಬರಗಿರಿದ್ರುಮದೆಸೆಯದೇಕಾರ್ಣವದರಭಸದಲಿ ॥ ೨೫ ॥ ಅದ್ದವೋಲಾಯ್ತಳೆರಸಾತಳ | ಕಿದ್ದಿರಿಕೆಯಲಿ
ಮೇರುಮೇಲಡ | ಬಿದ್ದವೋಲಾಯ್ತೀನನೆಂಬೆಸುಮಾನವೇಶ್ವರನ ॥ ಕಡ್ಡದಸುರರವಮಾಯೆಕುಳ್ಳಿಯಲಿ | ಬಿದ್ದುದೋಮಾನವ

ಮಹಾಹವ | ಭೃಗಜನೆಂದೊರಲುತಿರ್ದುದುಸಕಲಜನನಿವಹ || ೨೬ || ಮುಂದುಗೆಟ್ಟನಲ ಮಹಾನೃಪ | ನೆಂದುನಭದಲಿ
ನೋಳ್ಪಮುನಿಜನ | ನೃಪನೆಚ್ಚರಿಸಿಹದುಮಹಾಯಾಮಮುದ್ರಿತಾತ್ಮಕನ || ತಂದೆನಿನೆಮಹಾನಸೆಯಿದೇತಕೆ | ದಂದುಗಕ್ಕೊಳಗಾದೆ
ದೇವನು | ಕೊಂದನಿರೆನಿರ್ಭಯನಲಾನಿಜಶರಣರಿಂಗೆನುತ || ೨೭ || ಮೃತ್ಯುವನುಕೆಡೆಯೊದೆವರಾಹವ | ದೈತ್ಯಗರದುಸ್ತರಭ
ಯಾಬ್ಧಿಯ | ನುತ್ತರಿಸುವರುನಾಮಮಾತ್ರದನಾನೆಯಾನುನೆನೆದು || ಪತ್ತಣದುತತ್ತ್ವದತಲ್ಲನ | ಭಕ್ತರಿಗೆಮಹಾಯಾಸವಿನೋದವಿ |
ಪತ್ತುಬಾಧಿಸಲರಿವುದೆಂತೆಂದರುನ್ನತೋಂತ್ತಮಗೆ || ೨೮ || ಎನಲುಕೇಳುತಬೇಚರದಮುನಿ | ಜನದವಿನುಳ್ಳೋಕ್ತಿಯನುಕಡೆ
ಗಂ | ಡಿನಲಿಕೈಕೊಳುತಾನನಾಪ್ರಸರೋನನುತೊಳದು || ಜನವನಾಕ್ಷಣದೊಳನಿವಂದಿಸಿ | ಮನದೊಳನಾರಾಯಣಾ
ಸ್ತ್ರನ | ನನುವರಕೆತುಡುಕಿದನುಕೆಗದನುತ್ತಿರದಿನಲಿಕೊಟಿಸಿ || ೨೯ || ಆಹಹನಾರಾಯಣಮಹಾಸ್ತ್ರದ | ಬಹಳತೇಜದಕಕ್ಕೆ
ಗಳವಿ | ಗ್ರಹಕೆನಿಲುವವನೆಕೊಂಡನವುಂನನೆಮುರಿದುದಿಂಡವಣೆ || ಕುಹಕಿಗಳಮಾಯಗಳತಿವಿರಕೆ | ವಿಹಿತನಾಥದುರಾರು
ಕರುಣಸಂ | ನಿಹಿತನಾಗಲುಸಕಲಜೀವಕ್ಕೆಶಕೆಡುವಂತೆ || ೩೦ || ಎಸಲುದಿವ್ಯಮಹಾಸ್ತ್ರವದುರ್ಧರ | ಬಿಸಿಧೂಮಜ್ವಾ
ಲೆಗಗನವ | ಮುಸುಕಿದುದುನೋಡಿರಿಸಿದೆಸೆಗಳಸುರನೊಡ್ಡೆಕಿವಿದು || ಋಷಿಶರದನುಖದಿಂದಹೊರವಂ | ಟಿಸನುತ್ತೇಜದತಿ
ಪ್ರಧಾರೆಯು | ದೋಷಮುಸೆಡುಕೊಗರಂಬುಕವಿದುದುಖಳರನೋಡಿಹರಕೆ || ೩೧ || ಬಿಟ್ಟವನುಕಾಲಚಕ್ರಕವಿಕವಿ | ದಟ್ಟಸುಡು
ವಂತಿಹಿತಸುಭಟರ | ಥಟ್ಟನಾಕಿದವಸ್ತ್ರಮುಖನಿರ್ಜಿತಶರವ್ರಾತ || ಬಿಟ್ಟಗವೃಕದಿಕದಿಂಬಳಿಗಳ | ನಟ್ಟಗಳನೊರಂಗ್ರಾಲ
ನ | ಕೊಟ್ಟಿಗೆಗಳಡೆಮಾಡಿದಪ್ರಬಾಡಿದವುಬಳಸಂದು || ೩೨ || ಬಂದನಲ್ಲಿನಮುದಯಾಪರ | ನಂದುನೊಂವುಗನೆಡೆಗೆಹೋ
ಹೋ | ಕಂದಕೊಲ್ಲದಿರಕಟಯಕ್ಷರನಾತ್ಮಸತ್ಪುರನು || ಮುಂದಮುಕಿಗಳಪ್ರೋಲುಮುನಿದುವು | ಕುಂದಭಕ್ತರಭೇದಬುದ್ಧಿಗೆ |
ಸಂದುಕೊಲಪರಜೀವಜಾತವನಧಿಕರೋಷದಲಿ || ೩೩ || ಕೋಪವನುಬಿಡುಮಗನೆನಿನಗೆಕ್ಕೈ | ತಾಪರಾಧವೆಯಕ್ಷರಿಲವಿ
ದು | ಪಾಪಜನ್ಮಸ್ಥನವರಿದಾಕೋಪಜೀವರಿಗೆ || ತಾಪಸರಸಾತ್ವಿಕಮಹಾವ್ರತ | ಕೋಪವಾರಿಂದಹುದುಹೇಳಲಿ | ಭೂಪ
ಬರಿದೇಪರರಹಿಂಸೆಪವಿತ್ರವಲ್ಲೆಂದ || ೩೪ || ಒಬ್ಬನೇಕೊಂದಾತಸತ್ತ್ವ | ನೊಬ್ಬನೇನಿಂನಾತಕೊಲೆಯಿದು | ಸರ್ಬರಿಂಗಾಯ್ತು
ಕಟಯೋಗ್ಯನೆವಿಷ್ಣುಭಕ್ತರಿಗೆ || ಸರ್ಬಭೂತದಯಾಪರರಿಗಘ | ಗರ್ಬಗಜಪಂಚಾಸ್ಯರಿಗೆಕ | ರ್ತಬ್ಯನ್ಯೆಕುಲಕೀರ್ತಿಗುಣವ
ರ್ಧನನೆಹೇಳೆಂದ || ೩೫ || ಭೂತದಯೆಯಿಂದೊರೆಸಿನೀನಿಖಿ | ಳಾತುಮನನೆಲೆಮಗನೆಸರ್ವಪ | ದಾತಿಶಯವಹಪದವಪಡೆ
ಯಲಾಪರೋಕ್ಷದಲಿ || ಪಾತಕವಲಾಮತ್ತನನವರೆ | ಭೂತವ್ಯೆರವನಾಮುಕುಂದ | ಪ್ರೀತಿವರ್ಧನವೆನಿಸನೈಷ್ಠಧರ್ಮವಲ್ಲೆಂ
ದ || ೩೬ || ನಿಂನಡೆಸೆಯಿಂದೆಂನಕುಲವಿದು | ಮಾನ್ಯವಾಯ್ತುಲೆಮಗನೆಧರೆಯಲಿ | ನಿಂನಹೋಲುವರುಂಟೆಪುಣ್ಯಶ್ಲೋಕರಾದ
ವರು || ತಂನವಾತನಿದೊಂದನಾಲಿಸಿ | ಮಂನಿಸೆನಲುಪಿತಾಮಹೋಕ್ತಿಗೆ | ಸಂನತಾಂಜಲಿಮಾಳ್ದರಥದೊಳಗಿರಿಸಿದನುಧನುವ |
ಕ್ಷಮಿಸುಪ್ರಭುಮಾಯಾವಿನೋದ | ಭ್ರಮಿತನಪರಾಧವನುನಿರಹಂ | ಮಮತೆಯಲಿನಿಂಮಡಿಗಳೀಕ್ಷಿಸದೀಸುದುರ್ಮತಿಗೆ || ಸು
ಮತಿಯನುಕರುಣಿಸಿದಿರಾರ್ಯ | ಕ್ರಮನುತಾನೇಯನುತನುನುಪದ | ಕಮಲದಲಿಮೈಯಿಕ್ಕಿದನುಪರಿಜನವಮಂನಿಸಿದ || ೩೮ ||
ಬೀಳುಕೊಟ್ಟನುಹರಸಿಮೊಂಮನ | ಮಾಳ್ಪಯನುಯಕ್ಷ್ಯೆರ್ಗಿಸಿದರಮುಕ್ತ | ಮಾಳುಕಳುಹಿಕೊಂಡನಖಿಳಮುನೀಶ್ವರರುಸಹಿತ ||
ಆಲಯಕೆಬಳಕಿತ್ತಲಾನೃಪ | ಮಾಳ್ಪಮಣಿನಿರ್ವೈರನಾದುದ | ನಾಲಿಸುತಸಂತೋಷದಿಂದಕುಬೇರನೈತಂದ || ೩೯ || ಕೆಂ
ಡೆದಮರಸಿಂಧಂಗಳಲಿಭ | ವತಗಿದುದುಚಾರಣರುಕಿಂನರ | ರೊಡನೆಕ್ಯೆವಾರಿಸುತಬರೆನಿಧಿನೆಲನಸುಗ್ಗಿಸಿ | ಸಹಗರದಪೈತಂ
ದತಂದಾ | ಪೃತಸುನೀಪ್ರಿಸುತನೃಪನಿಳಿ | ದಡಿಗೆರಗಲಪ್ಪಿದನುಮಂನಿಸಿದನುಮಹೀಪತಿಯ || ೪೦ || ನುಡಿದನೆಲೆಭೂಮಿ
ಲನಂಶದ | ಕೊಡವೆಮೆಚ್ಚಿದೆನಾನುತಂನವ | ರೊಡಲಿಸಿದವೈರವನುಮರದೆಯಲಾಪಿತಾಮಹನ || ನುಡಿಯಕೇಳುತಕೇಳುತನೆ
ಜನ | ಪೊಡೆಸುತಹಸ್ತೈಷ್ಠನರಧರ್ಮನ | ನಡದುತೋರುವವೀರನಲ್ಲಾತಂದೆನೀನೆಂದ || ೪೧ || ಕೊಂದನನುನೀನಲ್ಲಯಕ್ಷ
ರ | ನ್ನಂದವನುನಿಂದಾತನನುಧಿಟ | ಕೊಂದನರುತಾವಲ್ಲಯಕ್ಷರುನೆರೆವಿಚಾರಿಸಲು || ಕೊಂದುದಿಕ್ತಂಡವನುಶ್ರೈವನೆ | ಹಿಂದೆಮಾ
ಡಿದಕರ್ಮರೂಪದ | ಲಿಂದುಕೊಲುವವರಾರುಕೊಲಿಸುವರಾರುಹೇಳೆಂದ || ೪೨ || ಮೆಚ್ಚಿದೆನುಬೇಡೊಂದುವರವನು | ನೆ
ಚ್ಚಿನಪ್ರಿಯಭಕ್ತನಹನೀ | ನಚ್ಯುತಂಗದರಿಂದಮಾನ್ಯನಲಾಜಗತ್ರಯಕೆ || ಬೆಚ್ಚದಿರುಮನದರಿಕೆಯನುನುಡಿ | ಗಚ್ಚರಿಕಸಂಪ
ನಮುಕುತಿಯು | ನೆಚ್ಚವನೀಕೊಂಡೆಯೆಂಬುದಕೇಳ್ವೆನಾನೆಂದ || ೪೩ || ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ.
ಎಂದುತೈವಿಟರರ್ಥಿಸಲುನೃಪ | ನಂದನನುತಲೆವಾಗಿಬೇಡಿ | ನೊಂದುವರವೆನಗಿಲ್ಲಹರಿಪದಯುಗಳಕಮಲದಲಿ || ಕುಂದದಂ
ತಿರೆಭಕ್ತಿಯನುದಯೆ | ಯಿಂದಕರುಣಿಸೆನ್ಕೆಕೊಟ್ಟನು | ತಂದೆಯೆನುತವನೆನದದಂತರ್ಧಾನವನುಧನದ || ೪೪ || ನುರಳಿದ
ನುಸಿಜಪುರಕೆಬಳಿಕಾ | ಧರಣಿಪತಿಪರಿತೋಷದಲಿಶೇ | ಚರವಧೂವದನೋಪವನಿರ್ತವಿಜಯಶುಭಚರಿತ || ನೆರೆದಿದಿರುಗೊಂ
ಡಖಿಳದೇಜನ | ಪುರಜನದಮಂಗಳಮಹೋತ್ಸವ | ಗುರವಣಿಯುತ್ಕೈತಂದುಹೊಕ್ಕನುರಾಜಮಂದಿರವ || ೪೫ || ಏನನೆಂತೆ

ನುಭ್ರವನರಾಜ್ಯನ । ಪ್ರೀನಲಕ್ಷ್ಮಿಯುನನುಪಮವಲಾ । ದಾನವಾಂತಕನೊಲಿದಡರಿದೇನಮರಪತಿಸಹಿತ ॥ ಮಾನಸಿಧಿಯಾಜ್ಞೆಯಲಿನಡದನ । ಮಾನಸಂಪಂನಿಕೆಯುನಿಜಸುಖ । ದಾಸಿನಿತ್ಯಾತುಮನನೆನೆವುತಸಲಹಿದನುಧರೆಯ ॥ ... ॥ ೪೬ ॥

ಅಂತು ಸಂಧಿ ೯ಕ್ಕಂ ಪದನು ೪೬ ಕ್ಕೆ ಮಂಗಳಮಸ್ತು.

ಹತ್ತನೆಯ ಸಂಧಿ.

ಧ್ರುವಗೆ ಧ್ರುವಪದ ಪ್ರಾಪ್ತಿಯಾದದ್ದು.

ಸೂಚನೆ ॥ ಧ್ರುವಗತಿಯನ್ನೈದಿದನುಬಳ್ಳಿಕಾ । ಧ್ರುವನಖಿಳಸಂಸಾರಸುಖವ । ಧ್ರುವವಿದೆಂದಚ್ಯುತನಕಿಂಕರ
ರೊಡನೆನೆಲವಿನಲಿ ॥ ... ...

ಪದನು ॥ ವ್ಯಾಸನಂದನಚಿತ್ತವಿಮಲ । ಕ್ಷ್ಮೇಶನೊಲಿವಿನದಾಸನಹಧರ । ಣೀಶನಮಳಚರಿತ್ರವನುನಿರುಪಮಪವಿತ್ರವನು ॥ ಶಾಶಿಸುತ್ರಸದ್ಧರ್ಮಹರಿಪರಿ । ತೋಷಕರವೆಂದೆಲ್ಲರಿಗೆಕರು । ಣಾಸಮುದ್ರನುನಡದಾತೋರುತ್ತಿರ್ದನೀಧರೆಗೆ ॥ ೧ ॥ ಯಜ್ಞಪತಿಯನುಪೂಜಿಸಿದನುರು । ಯಜ್ಞಮುಖದಲಿತದ್ವಿಧಾನಾ । ದ್ಯಜ್ಞಜನಸಂತರ್ಪಣೋಚಿತದಾನಮಾನದಲಿ ॥ ಅಜ್ಞರನುತಜ್ಞರನುವಿನಿತಾ । ವಜ್ಞನಖಿಳದೊಳೊಬ್ಬನೇಶ್ವೇ । ತ್ರಜ್ಞನಚ್ಯುತನೆಂದುಮಂನಿಸುತಿರ್ದನವನೀಶ ॥ ೨ ॥ ಕಂಡನಾತಂನೊಳಗೆಬರಿಯನು । ಕಂಡನಖಿಳದೊಳೊಳಗುಹೊರಗಾ । ಖಂಡಲಾದಿಸುರೌಘಸೇವಿತಪಾದಪೀಠನನು ॥ ಕಂತನಪರೋಕ್ಷಾನುಭವದಲಿ । ಕಂಡೆನೆಂಬಾಬಗೆಯಸಗಿಚಿದ । ಖಂಡವಿಗ್ರಹಮಾತ್ರತಾನಾಗಿರ್ದನವನೀಶ ॥ ೩ ॥ ತಂದೆಸುತರನುಸಲಹುವಂತರ । ವಿಂದನಾಭನಭಕ್ತನಖಿಳ । ನಂದಸಿದ್ಧಿಯನಿತ್ತುತಂನಯರಾಜ್ಯದಪ್ರಜೆಗೆ ॥ ತಂಬೆಗತಿಶಯನಾಗಿಸಲಹಿದ । ನಿಂದಿರಾಪತಿತುಷ್ಟಿಕರವೆನ । ಗೆಂದುಸರ್ವಂವಿಷ್ಣುಮಯವೆನುತಿರ್ದನಾಭೂಪ ॥ ೪ ॥ ಹರಿಪರಾಯಣರಂಘ್ರಿಗೆರಗುತ । ಹರಿಕಥಾಶ್ರವಣದಲಿಕರಗುತ । ಹರಿಯನೆನೆವವರೆಡರುಗಳನಾರೈದುಮರುಗುತ್ತ ॥ ಹರಿಗುಣಸ್ತುತಿಗಳನುಮಾಡುತ । ಹರಿಯೊಲವನನವರತಬೇಡುತ । ಹರಿಯಹಂಬಲಿಸುತ್ತರಾಜ್ಯವಮಾಡಿದನುಭೂಪ ॥ ೫ ॥ ಧರೆಯನಿಪ್ಪತ್ತಾರುಸಾವಿರ । ವರುಷಪರಿಯಂತೊಲಿದುಪಾಲಿಸಿ । ಹರಿಸಿದನುಪುಣ್ಯವನುವಿಷಯಾಯೋಪಭೋಗದಲಿ ॥ ಚರಿಸಿವಿಷ್ಣುವ್ರತಗಳನುಪರಿ । ಹರಿಸಿದನುಪಾಪವನುಜನ್ಮಂ । ತರದಕೃತನಿಜಪುಣ್ಯಪಾಪವನಿಂತುನೃಪಜರೆದ ॥ ೬ ॥ ಬಳ್ಳಿಕನೃಪನಖಿಳಾವನೀಮಂ । ಡಲದಪರಿಪಾಲನದಪಟ್ಟವ । ಸಲಿಸಿದನುನಿಜಸುತಗೆಸಲೆಸಪ್ತಾಂಗಸಂಪದವ ॥ ಅಳಿವೊಶಲಸಂಸಾರಸುಖವ । ಧ್ರುವವಲಾಸ್ಥಿರರಾಜ್ಯಪದದಲಿ । ನಿಲುವೆನಚಲಿತನಾಗಿತಾನೆಂದೆನುತಹೊರವಂಟ ॥ ೭ ॥ ಕಾಯವಾನೆಂದೆಂಬಡಿದುಪರ । ಕೀಯರೇತ್ರೋಜನಿತಕಾಲನ । ಬಾಯಿಗೆತ್ತಿದತುತ್ತುಸುಸ್ಥಿರವಲ್ಲಶುಚಿಯಲ್ಲ ॥ ನಾಯಿನರಿಹುಲಿಕಾಗೆಹದ್ದಿನ । ಬೀಯವಿದಕುಪಯೋಗ್ಯವಾದವು । ಹೇಯವಹವಿಷಯಂಗಳೇತಕೆಶಿವಶಿವಾಯೆಂದ ॥ ೮ ॥ ಎಂನದೆಂನದೆನುತ್ತಕನಸಿನ । ಪೊಂನ್ನಕೈಯಲಿಪಿಡಿದುಬದುಕಿದೆ । ನಿನ್ನುಬಡತನವಿಲ್ಲತನಗೆಂದೆಂಬಧಮನಂತೆ ॥ ಮಂನಿಸುತಸುತದಾರಗೃಹಕೋ । ಶೋಂನತೋಂನತರಾಜ್ಯಸಿರಿಯಿದು । ನಂನಿನಿಶ್ಚಯವೆಂದುಕೆಡುವುದಿದೇಕೆಜಗವೆಂದ ॥ ೯ ॥ ಒಬ್ಬನೇಜನಿಸುವನುಸಾವಾ । ಗೊಬ್ಬನೇಕೃತಪುಣ್ಯಪಾಪವ । ನಿರ್ಬಹಿಸಿನಡವಾಗಲೊಬ್ಬನೆಪಾರಲೌಕಿಕಕೆ ॥ ಒಬ್ಬನೇಹರಹರನಿರರ್ಥಕೆ । ಸರ್ಬಜನಪಶುಭೃತ್ಯಬಾಂಧವ । ರೂರ್ಬಿಯದುತನಗೆಂಬಮಮತೆಯಲೇನುಫಲವೆಂದ ॥ ೧೦ ॥ ಹಲವುಜನ್ಮಾಂತರದಸುಕೃತದ । ಫಲವಲಾನರಜನ್ಮವೀಭವ । ಜಲಧಿಯನುದಾಂಟುವರಿಗೆರವಿನನಾವೆದೇಹವಿದು ॥ ಕಳವುದೆಡೆಯಲ್ಲಿಹರಿಪದ । ಜಲರುಹದನಿಜಜನ್ಮಭೂಮಿಗೆ । ಬಳ್ಳಿಕಬುಯಸಿದಡಿಟ್ಟನುತಹೊಕ್ಕನುತಪೋವನವ ॥ ೧೧ ॥ ವಿದುರಕೇಳೆಡೆಗಾಲಹುಡಿಯನು । ಬಿದಿರಿಬಿಸುಡುವಪೋಲುಸಕಲವ । ನೊದೆದುನಡೆದನುಕುಳಿಯುದಾಂಟಿದಭದ್ರಗಜದಂತೆ ॥ ಹೃದಯಕಮಲದಕರ್ನಿಕೆಯಮು । ಧ್ಯದಲಿಸಕಲದಲಾಮುಕುಂದನ । ಪದವನೇಭಾವಿಸುತಹೊಕ್ಕನುಬದರಿಕಾಶ್ರಮವ ॥ ೧೨ ॥ ನಿಂದನದರೊಳುರಾಜರುಷಿಕುಲ । ವಂದಿತನುನಿಜದೇಹಯಾತ್ರೆಗೆ । ಕಂದಮೂಲಫಲಾದಿಗಳನುಪಭೋಗಿಸುತನಿಜದ ॥ ಅಂದವನುದನುಜಾರಿಚರಣ । ದ್ವಂದ್ವಭಕುತಿಸುಧಾರಸಾಶಯ । ದಿಂದನಿರ್ಮಳಪಾದವನುಮನದೊಳಗೆಭಾವಿಸುತ ॥ ೧೩ ॥ ಯಮವನರಿದಳವಡಿಸಿಯೋಗ । ಕ್ಷಮನೆನಿಪ್ಪಾಸನವನಿತರ । ಭ್ರಮೆಗೆಬಿಡದಿಂದ್ರಿಯವನನಿಲಾಯಾಮವನುಮಾಡಿ ॥ ಸುಮತಿನಿರ್ಮಳನುನಡಲೆಪ್ಪಿರೆ । ಕಮಲನಾಭನದಿವ್ಯಸಿರಿಪದ । ಕಮಲವನುಧರಿಸಿದನುನಿರುಪಮಭಾವಭಕುತಿಯಲಿ ॥ ೧೪ ॥ ಹಂಬಲಿಸುತಡಿಗಡಿಗೆಹರಿಯಂ । ದೆಂಬವಾರ್ತೆಗೆಬಸಿದುಬೀಳುತ । ನಂಬಿನೆನೆವರತಾಯಿಮನೆಯನನೆನೆದುಸುಖಿಸುತ್ತ ॥ ಅಂಬರವನೀಕ್ಷಿಸುತಘನಬಾ । ಷ್ಪಾಂಬುಮುಕುಳಿತನಯನನಿತರದ । ಹಂಬಲನುನೆರೆಮರೆದನಾಹರಿಚರಣಚಿಂತೆಯಲಿ ॥ ೧೫ ॥ ತಾಯಸರಸುತ್ತರಸುತೆಳೆಗರು । ಬಾಯಬಿಡುವಂತವನಿಪತಿನಾ । ರಾಯಣನನೆನೆನೆನೆದುನೆನೆದೇರಂತೆ

ಹಂಬಲಿಸಿ ॥ ಕಾಯಚೇಷ್ಟೆಯಮರೆದಮೋಕ್ಷೋ । ಪಾಯವೆನಗೆಂತೆನುತಯೋಗಿ । ಧ್ಯೇಯನಂಘ್ರಿಸರೋಜಮಕರಂದೈಕ
ಲೋಭದಲಿ ॥ ೧೬ ॥ ಇಳಿದುದೊಂದುವಿಮಾನವಾಕ್ಷಣ । ಬೆಳಗೆದಶದಿಕ್ಕುಗಳನಂಬರ । ತಳವನಾವರಿಸುತ್ತಹೊಳಹೊಳ
ಹೊಳೆವಕಾಂತಿಯಲಿ ॥ ಜಲಜಮಿತ್ರನತೇಜವನುಮು । ಕ್ಕಳಿಸಿನೋಳ್ಪರಕಂಗಳನುಜ । ಕ್ಕಳಿಸಿಬೆಳಗುವಪೂರ್ಣಶಶಿಮಂಡ
ಲದವೋಲಿಳಿಗೆ ॥ ೧೭ ॥ ಕಂಡನದರೊಳಗಿಬ್ಬರನುಮಾ । ರ್ತಾಂಡಮಂಡಲಸಂನಿಭಾಮಳ । ಕುಂಡಲದಕೇಯೂರಕಂಕಣರ
ತ್ನಭೂಷಣದ ॥ ಪುಂಡರೀಕದಳೇಕ್ಷಣರನು । ದ್ದಂಡತೇಜದಮೃದುವದನಶಶಿ । ಮಂಡಲದಮಂದಸ್ಮಿತಾಲಂಕೃತಮುಖದ್ಯುತಿ
ಯ ॥ ೧೮ ॥ ಚಾರುದೀರ್ಘಚತುರ್ಭುಜದಸುಕು । ಮಾರಗಾತ್ರದಪೀತವಸ್ತ್ರದ । ಚಾರುಮಕುಟಾಲಂಕೃತಾಮಳನೀಲಕುಂ
ತಳದ ॥ ಚಾರುಹಾಸಮರೀಚಿಗಳಹದಿ । ನಾರುಹರೆಯದಯುವ್ವನದದೈ । ತ್ಯಾರಿಯನುಹೋಲುವಮಹಾತ್ಮರಕಂಡನವನೀಶ ॥
ಗಡೆಯಲವನಿಯನೂರಿಸುಸ್ಮಿತ । ವದನರಿರಲೀಕ್ಷಿಸುತನೃಪನೆ । ದ್ದುದಿತಸಂತೋಷದಲಿಭಯಭಕ್ತಿಗಳಭಾರದಲಿ ॥ ಪದುಮನಾ
ಭನನೀಮದಲಿಪಾ । ರ್ಷದವರಲ್ಲಾಬಂದರೆಂದೆನು । ತಿದಿರುಗೊಂಡನುಧರೆಗೆಮಿಗೆವೊಯ್ಯಿಕ್ಕುತವನೀಶ ॥ ೨೦ ॥ ಹರಿಮುಕುಂ
ದಮುನಿಪ್ರಿಯಾಚ್ಯುತ । ಧರಣಿಧರವಾರಾಹವಿಶ್ವಂ । ಭರವಿರಿಂಚಿಸ್ತುತವಿಹಾರವರೇಣ್ಯವಿಶ್ವೇಶ ॥ ಪರಮಕರುಣಾಸಿಂಧುಪ
ರಮೇ । ಶ್ವರಯೆನುತನಾಮಾವಳಿಯನು । ಚ್ಚರಿಸುತಡಿಗಡಿಗಂಘ್ರಿಯಲಿವೊಯ್ಯಿಕ್ಕಿದನುಭೂಪ ॥ ೨೧ ॥ ಪೇಳದೇನೈತಂದೆಯ
ನುತಕೈ । ಮುಗಳನೆಗಹಿದರುನೃಪಕುಲ । ಮೌಳಿಯನುತೆಕ್ಕೈಸಿವೊಯ್ಯನುಡಿದವಿಕರುಣದಲಿ ॥ ಕೇಳುಭೂಪಾಲಾಗ್ರ
ಣಿಯೆನಿಸುವಿ । ಶಾಲಭಾಗ್ಯದಕಣಿಯೆಲಕ್ಷ್ಮೀ । ಲೋಲನೊಲವಿನಗಣಿಯೆಕೇಳೆಂದರುಮಹೀಪತಿಗೆ ॥ ೨೨ ॥ ಧರಣಿಪತಿಕೇ
ಳೈದುವರುಷದ । ಬರಿಹಸುಳೆತನದಂದುಮೆಚ್ಚಿಸಿ । ಪರಮಪುರುಷನಪದವಪಡೆದೆಯಲೈಸುದುರ್ಲಭವ ॥ ಪರಮಕರುಣಾಸಿಂ
ಧುನಿಂನನು । ಕರೆಯಟ್ಟಿದನೆಂಮನಾಮುರ । ಹರನವರ್ಗಳುಬಂದವರುನಾವೆಂದರವನಿಪಗೆ ॥ ೨೩ ॥ ಏರುದಿವ್ಯವಿಮಾನವ
ನುಮರ । ದೇರಲರಿದಿದನಮರಪತಿಸಹ । ತೋರುಗುಡಿಸದುಕಾಲಕರ್ಮಾದಿಗಳಘೋಲ್ಲಣೆಗೆ ॥ ಏರಲಟ್ಟಿದನಿದನುನಿನಗಾ । ಮೂ
ರುಲೋಕಾಧೀಶ್ವರನುಹೊಣೆ । ಗಾರನಲ್ಲಾನಿಜಮನೋರಥಕೆಂದರವನಿಪಗೆ ॥ ೨೪ ॥ ಅಚ್ಯುತನಕಿಂಕರರನುಡಿಯನು । ನ
ಚ್ಚಿನಾಳ್ವಾಲಿಸುತಪುಳಕದ । ಹೆಚ್ಚುಗೆಯಲೋಲಾಡಿದನುನಯನಾಂಬುಪೂರದಲಿ ॥ ಅಚ್ಚರಿಯಲಾವೇದವಾವನ । ನುಚ್ಚರಿಸೆಕಾ
ಣಿಸದಮಹಿಮೆಯ । ನೆಚ್ಚರಿತನೆಂತೆಂನನಾವಿಶಿಷ್ಟನಾತೆಂದ ॥ ೨೫ ॥ ಅಹುದುಮತ್ತೇನಲ್ಲದಿದ್ದರೆ । ಬಹಳಭಾಗ್ಯಾಧಿಕನೆತಂ
ನೊಳ । ಗಿಹವಸ್ಥಿರಚರಾಚರಬ್ರಹ್ಮಾಂಡಕೋಟಿಗಳು ॥ ವಿಹಿತವದರೊಳುಭಕ್ತರನೆಸೆಂ । ಗ್ರಹಿಪಯೋಗಕ್ಷೇಮವನುನಿ । ರ್ವ
ಹಿಸುವುದುಲೀಲಾವಿಡಂಬವೆಂದರವನಿಪಗೆ ॥ ೨೬ ॥ ಬಳಿಕವಮಂಗಳಸೂಕ್ತದಲಿಮುನಿ । ಕುಲಸಹಿತಸಂತೋಷದಲಿನೃಪ । ಕು
ಲಲಲಾಮಂಗುತ್ಸವದಲಭಿಷೇಕವನುಮಾಡಿ ॥ ಘಳಿಯನುಡಿಸಿದರಮಳರತ್ನಾ । ವಳಿಯದಿವ್ಯಮಹಾವಿಭೂಷಣ । ಗಳನುತ್ತೊಡಿ
ಸಿದರಮರರುಘೇಯೆಂದಂಬರದಲುಲಿಯೆ ॥ ೨೭ ॥ ಆವಿಮಾನಪ್ರವರವನುನೃಪ । ದೇವನಂದರ್ಚಿಸಿದನಮರವ । ರಾವಳಿಗೆಕೈ
ಮುಗಿದುವಿಪ್ರೋತ್ತಮರಿಗಭಿನಮಿಸಿ ॥ ಮುನಿಬಲವಂದೆರಗಿದನುವಸು । ದೇವನಂದನಭೃತ್ಯರಿಗೆಬಳಿ । ಕಾವಿಮಾನವನೇರ
ಲುದ್ಯೋಗಿಸಿದನೊಲವಿನಲಿ ॥ ೨೮ ॥ ಅವನಿಪದಸಮೃದ್ಧಿಯೋಮೇ । ಣಾವಯೋಗದಸಿದ್ಧಿಯೋಮಹ । ದೇವಮರ್ತ್ಯಶ
ರೀರವದನಿಮುಷಾರ್ಧಮಾತ್ರದಲಿ ॥ ಆವಿಮಾನವನೇರಲಾನರ । ದೇವನುದ್ಯೋಗಿಸುತಿರಲುದಿ । ವ್ಯಾವಯವಸಂಪಂನಮಾ
ಗುರುತೀವ್ರತೇಜದಲಿ ॥ ೨೯ ॥ ಬೆಸಿನುತನಭದೊಳಗೆಬೆಳಗಿದ । ವಾಸವನುಯದಲಿದುಂದುಭಿಗಳಾ । ಕಾಶಚಾರಿಗಳಾಡಿದ
ರುಬೊಡುತಲಿನುಡಿನೆಗಳ ॥ ನೇಸರನುಮುಸುಕಿತಾವಿಮಾನದ । ಬೀಸಿಯುಬಹುರತ್ನಕಾಂತಿಗ । ಳೇಸುಧನ್ಯನೊಯೆನುತ
ಕೊಂಡಾಡಿದುದುಸುರನಿಕರ ॥ ೩೦ ॥ ಒಸಗೆವರೆಗಳವಡಿಗಡಿಗೆಬಾ । ರಿಸುತಹೂಮಳೆಗರೆವಕೈವಾ । ರಿಸುವಕೀರ್ತಿಯನುಗ್ಗ
ಡಿಸುವ್ರೋರಂತ್ರಿಬಂಣಿಸುವ ॥ ಹೆಸರಿಸಿದಗಂಧರ್ವಕಿಂನರ । ವಿಸರಮಾಗಧವಂದಿಗಳುಮೇ । ಪ್ಪಿಸಿತುನಾರದನಪ್ರಮಂಡಲದೊ
ಳಗೆನಲಿನಾದೆ ॥ ೩೧ ॥ ಏರೆನಾನೊಬ್ಬನೆವಿಮಾನವ । ನಾರುಮಡಿಬಳಲಿದಳುಸುಗತಿಯ । ತೋರಿದಳಲಾಜನನಿದೀನಾನಾಥೆಯ
ನುಬಿಟ್ಟು ॥ ಬೇರೆಪದವಿಯನೊಲ್ಲೆತಾನೀ । ದೇರಲರಿಯೆನುಸಕಲಜನನೈ । ದೇರಲಾಗದೆತಂನೊಡನೆಕೃಪೆಮಾಡಬೇಕೆಂದ ॥
ಸ್ವರ್ಗಲೋಕದವೋಲಖಿಳಜೀ । ವರ್ಗಸುಲಭವೆವಿಷ್ಣುಪದವದ । ವರ್ಗವಲ್ಲಾತಂದೆಪಡೆವಡೆಸುಕೃತದುಷ್ಕೃತವ ॥ ಅರ್ಗ
ಳವಕೆಡಿಯೆಹೊಸೆಯದಚ್ಯುತ । ವರ್ಗವೇಸಲೆಮೂಢರಿಗೆನೃಪ । ಮೊಗ್ಗಿಮುರಹರನಂಘ್ರಿದರುಶನವೆಂದರವನಿಪಗೆ ॥ ೩೩ ॥
ಆದಡೇನೊಂದಿಹುದುವೈಷ್ಣವ । ನಾದನಿಂನೊಡನಾವನೆವದಿಂ । ದಾದಡೊಂದಿದವರ್ಗಸುಗತಿಸುಖೋಪಲಭ್ಯವಲೆ ॥ ಮೇದಿ
ನೀವಲ್ಲಭನೆಬಹಳದ । ಟೋದಧಿಯೆನಿಂನಿಷ್ಟವನುಕಮ । ಲೋದರನೆಕರುಣಿಸುವನೆಲ್ಲರಿಗೆಂದರವರಂದು ॥ ೩೪ ॥ ದನುಜ
ಹರನಾಜ್ಞಾಪಿಸಿದನೊ । ಬ್ಬನೆತರಲೆಂದೀವಿಮಾನವ । ನಿನಗೆಕಳುಹಿದಡಾಯ್ತೆಜನನಿಗೆಸುಗತಿನಿಂನಿಂದ ॥ ತನಯರನುನೆರೆ
ಪಡೆವಡೀನಿಜ । ಜನನಿಯಂತಿರೆಪಡೆವುದಾಯು । ವ್ವನದಕೇಡಿನಮಕ್ಕಳೇತಕ್ಕೆಂದರನುಪಮನ ॥ ೩೫ ॥ ಬರಲಿನಿಂನಯಜನನಿ

ವಿಶ್ವಂ | ಭರನಭವನಕ್ಕೆ ನುತಹರಿಕಿಂ | ಕರರು ನೆನೆಯಲು ಬಂದಳೆಂದು ಸುನೀತಿಸುತನೆಡೆಗೆ || ಸುರರು ಭಾವಿನಲೇರಿಸಿದನಾ | ದರದಲನ್ವಯನಾ ವಿಮಾನವ | ಹರುಷವಿಂಗಲೇರಿದನು ನಡೆದರು ನಾಲ್ವರೊಂದಾಗಿ || ೩೬ || ಸುರರಪದವಿಯನಿತ್ತು ಪರಿಜನ | ಪುರಜನಕೆ ಪರಿತೋಷವಲಿ ಹರಿ | ಪುರಕೆ ನಡೆದನು ನೃಪತಿ ನಂದಸುನಂದರೊಡನೊಲಿದು || ಸುರನರೋರಗಖೇಚರರಕಿಂ | ನರರ ಮಂಗಳವಿತಾನಪಥದಲಿ | ಭರಿತವಾದುದು ಧೃವನ ವಿಷ್ಣುಪದಾನುಯಾತ್ರೆಯಲಿ || ೩೭ || ಧರೆಮರುಗತ್ಯೈದಿದನು ನೃಪನಂ | ಬರವನಾ ಸ್ವರ್ಗವನು ಕಳೆದು | ತ್ತರಿಸಿ ನಡೆದನು ಮೇಲೆ ಮೇಲೆ ಮಹಜ್ಜನಸ್ಥಿತಿಗೆ || ಬೆರಸಿದನು ತಾರಾಗ್ರಹಾವಳಿ | ಯಿರವನಾ ಋಷಿಲೋಕವನು ಕಳೆ | ದರಸನೈದಿದನಾ ಮಹಾವೈಷ್ಣವನಿಜಸ್ಥಿತಿಗೆ || ೩೮ || ಲೋಕಲೋಕಂಗಳಲಿ ನೆರದಾ | ಲೋಕಜನ ತನತನಗೆ ಪುಣ್ಯ | ಶ್ಲೋಕನು ಶಾಶ್ವಯೆ ಧ್ರುವನ ಸಾನವ ಸೂರ್ಯಭಾವಿನುತ || ತ್ರೈಲೋಕಿ ಪುಷ್ಪಾಂಜಲಿಯ ಮಳೆ ಸುರರಾ | ನೀಕಕ್ಕೈವಾರಿಸಲು ನೃಪಕರಿ | ಲೋಕವನು ನಿಜಲೋಕವಾಗಿರಸೈದಿದನು ಕಳೆದು || ೩೯ | ಕೋಪಮದಮತ್ಸರವನುಳಿದನು | ರೂಪಚೇಷ್ಟಿತರಖಿಳಭೂಷದ | ಯತಿಪರರ ನಿರ್ಮಳರು ನಿಜಗುಣರತ್ನಭೂಷಿತರು || ಶ್ರೀಪತಿಯ ಬಾಂಧವರು ಸುಜನಜ | ನೋಪಕಾರಿಗಳಖಿಳಭುವನಕೆ | ದೀಪವೆನಿಸುವ ಪದವನೆಲ್ಲರು ಪಡೆದರಿದರೆಂದ || ೪೦ || ಹೇಳಿದನು ಬಳಿಕಾ ನೃಪಾನ್ವಯ | ಮೌಳಿಮಣಿ ಮಾಹಾತ್ಮ್ಯವನುತ | ನ್ಮಾಲಸಿದ್ಧಿಕ್ರಮವನಾನಾರದಮಹಾಮುನಿಪ || ಪೇಳಿಗೆಯ ಪುಣ್ಯಾತ್ಮರಹ ಭೂ | ಪಾಲರಿಗೆ ಹರಿಗುಣಕಥಾಮೃತ | ಲೋಲಹೃದಯರಿಗಾ ಪ್ರಚೇತಸ್ಸುಗಳಿಗಿದನೊಲಿದು || ೪೧ || ಆ ನರದೇವೋತ್ತಮನು ಮೇ | ಣಾ ದೇವೋತ್ತಮನು ಬಹುಜ | ನ್ಮಾವಳೀಸಂಚಿತತಪಃಸಾಮರ್ಥ್ಯಪೂರ್ಣವನು || ಆವನೈಧೃವನಂತೆ ಧನ್ಯರ | ದೇವನೆಂತು ಕೃತಾರ್ಥರೀ ಭುವ | ನಾವಳಿಯೊಳೆಂದೊಲಿದು ಕೊಂಡಾಡಿದನು ಮುನಿನಾಥ || ೪೨ || ವರುಷವೈದರಲಾಯುತ್ತಲಾ ನಿಜ | ಗುರುವ ಘೋರವಾಗ್ಬಾಣವನು ಪರಿ | ಹರಿಸಿ ಚಾಪಲ್ಯವನು ಬಹುವಿಧಬಾಲಕೇಳಿಯಲಿ || ಪುರವ ಹೊರವಂಟರ್ಭಕನು ನೆರೆ | ಬರುತ ತಂನಮುಳೋಕ್ತಿಯನು ನಿಜ | ಶಿರದೊಳಾಂತಚ್ಯುತನನೊಲಿಸಿದನಾರು ತಿಂಗಳಲಿ || ೪೩ || ಎಂದು ನೃಪತಿಗೆ ಮುನಿಪನಧಿಕಾ | ನಂದದಲಿ ಪೇಳಿದನು ನೃಪಕುಲ | ನಂದನನ ಚಾರಿತ್ರವನು ಪಾತಕಪವಿತ್ರವನು | ತಂದೆ ನಿನಗಾನರುಪಿದೆನು ಗೋ | ವಿಂದತುಷ್ಟಿಪ್ರದವನಾಶ್ರಿತ | ವೃಂದಪುಷ್ಟಿಪ್ರದವನಾ ನೆಲೆ ವಿದುರ ಕೇಳೆಂದ || ೪೪ || ಇದು ಮಹಾಮಂಗಳ ಸುಖಪ್ರದ | ವಿದು ಮಹಾಪುಣ್ಯಾದಧನಪ್ರದ | ವಿದು ಮಹಾಯುಃಕೀರ್ತಿಕರ ವಿದು ಸೌಮನಸ್ಯಕರ || ಇದು ಮಹಾಸ್ವಸ್ತ್ಯಯನ ಸುಮತಿ | ಪ್ರದವಿದೆಲ್ಲರ ವಾಂಛಿತಾರ್ಥ | ಪ್ರದವಿದೇ ಸ್ವರ್ಗಾಪವರ್ಗಪ್ರದವಲಾಯೆಂದ || ೪೫ || ವಿದಿತವೈಷ್ಣವನಮಳಚರಿತವ | ನಿದನು ಸುಶ್ರದ್ಧೆಯಲಿ ನೆರೆ ಕೇ | ಳಿದಡೆ ಕೈಗೂಡದು ಕಾಮಿತ ಸಕಲಸಿದ್ಧಿಗಳ || ಇದೆಯಲಾ ಶ್ರದ್ಧಾದಿಗುಣಕಂ | ಪದವನೀವುದು ಸುಪ್ರಯತನಾ | ಗಿದನು ನೆರೆಕೀರ್ತಿಸಿದಡಮಳದ್ವಿಜಸಭಾಗ್ರದಲಿ || ೪೬ || ಭಕ್ತಿಮುಕ್ತಿಪ್ರದವಿದಚ್ಯುತ | ಭಕ್ತಶುಭಚಾರಿತ್ರಕಥೆಯನು | ಭಕ್ತಿವರ್ಧನವಿದನು ಕೇಳ್ವುದೆ ಪುಣ್ಯಕಾಲದಲಿ || ಭಕ್ತಿಯಲಿ ಪೇಳುದು ಶ್ರದ್ಧಾ | ಯುಕ್ತರಿಗೆ ಸಿದ್ಧಿಸುವವಂತು ಯ | ಥೋಕ್ತಫಲ ನಿತ್ಯಾತ್ಮಜಗದೀಶ್ವರನ ಕರುಣದಲಿ || || ೪೭ ||

ಅಂತು ಸಂಧಿ ೧೦ಕ್ಕಂ ಪದನು ೫೦೮ಕ್ಕೆ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

ಸೂಚನೆ || ಧೃವನವಂಶಪರಂಪರೆಯಲು | ದ್ಭವಿಸಿದನು ಪೃಥುನೃಪತಿ ಪುಣ್ಯ | ಶ್ರವಣಕೀರ್ತನನಂಶದಲಿ
ವೇನಾವನೀಶಂಗೆ || ... ...

ಪದನು || ವಿದುರನ ಮೈತ್ರೇಯಮುನಿಪನ | ಸದಮಳೋಕ್ತಿಯನಾಲಿಸುತ ಹಿ | ಗ್ಗಿದನು ಹರಿಪದಭಕ್ತನಾ ಧೃವಚರಿತ್ರೆಯನು ಕೇಳಿ || ಕಡಡಿಸುದು ಮನಕಂಗಳಲಿ ತೋ | ರಿದುದು ತನಿ ಬಾಷ್ಪಾಂಬು ಹಿಡಿದನು | ಹೃದಯದಲಿ ಹರಿಪದಸರೋಜವನೇಕಚಿತ್ತದಲಿ || ೧ || ಎರದನ್ಮೃತಪವಿಯಾದಡಾರುಂ | ಟಿರಗದವರೆಲೆ ಮುನಿಪ ಬಯಕೆಯ | ನರಿದು ಭಜಿಸಲು ಬಲ್ಲ ಭಾವುಕರಾರು ನಿಂನ್ನಂತೆ || ಅರಿಯದವರಿಂಗಾತ್ಮವಿದ್ಯೆಯ | ನರುಹಿಸುವರಾರವರಿಗಚ್ಯುತ | ನೆರಗುವನಲಾ ಬಿಡದೆ ಸಕಲಸುರೇಶ್ವರರುಸಹಿತ || ೨ || ಪ್ರಣತನಾದನು ಮುನಿಪ ಕೇಳಿದು | ದಣಿಯದೆಂನಯ ಚಿತ್ತ ನಾರಾ | ಯಣಪರಾಯಣರಮಳ ಚರಿತಾಮೃತವ ಸವಿಸವಿದು || ಹೊಣೆಯಲಾ ನೀನೆನಗೆ ನರಹರಿ | ಗುಣಕಥಾಪೀಯೂಷಸಿದ್ಧಿಗೆ | ಗುಣನಿಧಿಯೆ ಗುರುವರನೆ ಕೃಪೆಮಾಡೆಂದನಾ ವಿದುರ || ೩ || ಆರವಂಶೋದ್ಭವರು ಮೇಣವ | ರಾರ ಸುತರು ಸುಬುದ್ಧಿಗಳದಾ | ತಾರ ಹೇಳೆನಗಾ ಪ್ರಚೇತಸ್ಸುಗಳನಿಪ್ಪವರು || ನಾರದಾಂಕನ ಕರುಣವವರಿಗೆ | ಸೇರಿತೆಂದಿಯಲಾ ಮುಕುಂದೋ | ದಾರಗುಣಕಥನಪ್ರಸಂಗವ ಕರುಣಿಸುವುದೆಂದ || ೪ || ಲೇಸನಾಡಿದೆ ವಿದುರ ವೇದ | ವ್ಯಾಸನಂದನ ನೀನಲಾ ನಿಂ | ನಾ ಸರೀಜಗದಘಸಮುದ್ರವನೀಂಟದ ಹೆಗಡಲ || ಏಸು ಧನ್ಯನೋ ನಿಂನೊಡನೆ ಸಂ | ಭಾಷಣೆಗೆ

ದೊರೆಗೊಂಡುದೀಲ । ಪೆರ್ಮೆಯೀಶನಪರೋಕ್ಷದಲಿತನಗಿಂತೆಂದನಾಮುನಿಪ ॥೫॥ ಅವಧರಿಸುಧ್ರುವವಂಶಜರಸಂ । ಭವದತತ್ಸಂ
ತತಿಯನದನೇ । ವಿವರಿಸುವೆನರಿವಂತೆಪುಣ್ಯಶ್ಲೋಕರುದ್ಭವವ ॥ ಧ್ರುವನಮಗನುತ್ಕಲನುಜಗವ । ಧ್ರುವವಿದೆಂದರಿದೊಲ್ಲದೀ
ರಾ । ಜ್ಯವನುನಿಂದನುವೀಕ್ಷಿಸಾವತ್ಸರಾಜ್ಯದಲಿಕೇಳೆಂದ ॥೬॥ ಬಳಿಕವತ್ಸರನೆಂಬವನುನೆರೆ । ಸಲಹಿದನುರಾಜ್ಯವನುತತ್ಸು
ತ । ನಿಳೆಗಧೀಶ್ವರನಾದನಾಪುಷ್ಪಾರ್ಣನೆಂಬವನು ॥ ಸಲಹಿದಪನಾವ್ಯುಷ್ಟಿಯೆಂಬವ । ನಲಘುವಿಕ್ರಮಸರ್ವತೇಜಸ । ನೊಲಿ
ದುಚಕ್ಷುಸ್ಸೆಂಬಸುತನಾಸರ್ವತೇಜಸಗೆ ॥೭॥ ಹೆಸರಿಸಿದನಾಚಕ್ಷುವಿಗಬಾ । ಪ್ಪಾಷನೆನಿಸುವನಾಮವನುವಿಗೆ । ರಸನುಬ
ಳಿಕುಲ್ಯಾಂಕತತ್ಸುತನಂಗನೆಂಬವನು ॥ ವಸುಮತಿಗಧಿಪನಾದನಾತನ, ಶಿಶುವದನವೇನಾಖ್ಯನೃಪನನು । ಬಸುರಲಾಂತುಸುನೀ
ತೆಯೆಡದಳುಪಾಪಚೇಷ್ಟಿತನ ॥೮॥ ಕೊಂದರಾಪಾಪಿಯನುಬಳಿಕ್ಕೆ । ತಂದುಬುದ್ಧಿಯದೇಹಋಷಿಗಳು । ಮಂದಮತಿಕೇಳದಡೆ
ವಾಗ್ವಜ್ರಪ್ರಹಾರದಲಿ ॥ ಎಂದಡೆಂತ್ಯಮುನಿಪಸುರತರು । ವೃಂದದಲಿಕಾಸರಿಕನಾಯ್ತುದ । ನಿಂದುವಿಸ್ತರವಾಗಿಹೇಳೆನಲೆಂದನಾ
ಮುನಿಪ ॥೯॥ ಹೆತ್ತತಾಯಿಸುನೀತಿಯೆಂಬಳು । ಮೃತ್ಯುವಿನಮಗಳಾದಕಾರಣ । ಮುತ್ತಯನಮೃತ್ಯುಶೀಲವಾದುದುಬಳಿಕವನೊಮ್ಮ
ಗಗೆ ॥ ಮೃತ್ಯುವೇಮುಜ್ಜೇಶ್ವರಾಕೃತಿ । ವೆತ್ತುಜನಿಸಿದವೋಲುಜನಿಸಿದ । ಸುತನವಾಂಗನೃಪಂಗವೇನಾಹ್ವಯನುಕೇಳೆಂದ ।
ಬಾಲಕೇಳಿಯಮಲಾಡುತೊಡನೆಯ । ಬಾಲಕರನೆಲ್ಲರನುಕೊಂದನು । ಕಾಲನಾದನುನೃಪತಿತಂನಯರಾಜ್ಯದಪ್ರಜೆಗೆ ॥ ಹೋಲಿ
ಸುವಡಿಲ್ಲಂಗನೃಪತಿಯು । ಮೇಲೆಬಿದ್ದದಕೀರ್ತಿಸುತನೋ । ಶೂಲವೋತನಗೆಂದೆರುತ್ತುಂಮಳಿಸಿದನುಭೂಪ ॥೧೧॥ ಪುತ್ರ
ನಾಗದಮುಂನಪುಣ್ಯಜ । ರಿತ್ರನೆನಿಸಿದೆನಿಂದುವರದುಷ್ಪುತ್ರನಾದಂದಿಂದವೇಲಾಯ್ತುನಗೆಪರಿತಾಪ ॥ ಪುತ್ರರಿಲ್ಲದವರ್ಗಳೀಕೃ
ತ । ಕೃತ್ಯರೇತಕೆತಂನವೋಲುದು । ಷ್ಪುತ್ರಜನನವಕಾಂಬದುಃಖವಿದಿಲ್ಲಲಾಯೆಂದ ॥೧೨॥ ಹೋದನಾನೃಪನಾಮನೋನಿ ।
ವೇದದಲಿಹೊರವಂಟುಮನೆಯನು । ಭೇದಿಸದವೋಲಿರುಳುಪುತ್ರಕೃತಾನುತಾಪದಲಿ ॥ ಆದರಿಸಿತಪದಿಂದಪಡದನು । ವೇದ
ವೇದ್ಯನಪದವನಾತನ । ಹೋದಹೆಜ್ಜೆಯಕಾಣದರಸಿದುದಖಿಳಜನವೆಂದ ॥೧೩॥ ಕಾಣದಾತನನರಸಿಸಕಲ । ಕ್ಷೋಣಿಪಮಂಡ
ಲದೊಳಗೆಬಳಿಕಾ । ಪ್ರಾಣಗೇಡಿಯಮಾಡಿದರುಪಾಲಕನನೀಧರೆಗೆ ॥ ಮಾಣಿಸಿದನೂರೊಳಗೆವಿಪ್ರ । ಶ್ರೇಣಿಗಳನವರಪರಧರ್ಮ
ವ । ನಾಣೆಘೋಷಣೆಯಿಂದತಂನನೆಭಜಿಸೀವೆಂದ ॥೧೪॥ ನಿಂದನೋನೃಪನಖಿಳರಾಜ್ಯವ । ಕೊಂದನೋಹರಹರಮಹಾದೇ
ವೊಂದುವನುನೆರೆಮಾಡಲೀಸನುವರ್ಣಧರ್ಮವನು ॥ ನಿಂದೆಗಾರನೊಮೇಣುಲೋಕದ । ಬಂದಿಗಾರನೊಯೆನುತಜನಘೋ ।
ಳೆಂದುದಾವೇನಾವನೀಪಾಲಕನರಾಜ್ಯದಲಿ ॥೧೫॥ ಜಪಿಸುವೇನನೃಪಾಲಮಂತ್ರವ । ನುಪಚರಿಸುವೆನಾಖ್ಯೆಪ್ಯೆವವ । ನಪರಿ
ಮಿತತೇಜೋನಿಧಿಗೆಮಾಡಿರೆಮಹಕ್ರತುವ ॥ ನೃಪನಿರಲುಹರಿಹರವಿರಿಂಚಾ । ದ್ಯಪಸರರನರ್ಚಿಸಲದೇಕೆನು । ತಪರದಲಿಡಂ
ಗುರದಧನಿಥಾವರಿಸಿತವನಿಯಲಿ ॥೧೬॥ ಕೆಟ್ಟುದವನಿಯಧರ್ಮಧರ್ಮದ । ಒಟ್ಟಿಕಾಪದಮಾಯ್ತುತ್ರಿದಶರ । ಹೊಟ್ಟೆಗಳುನ
ಸುರಾಯ್ತುಬೀತುದುದ್ಯೆವಗುರುಭೀತಿ ॥ ನೆಟ್ಟನವೇನಾವನೀಶನು । ಪಟ್ಟವನುಧರಿಸಲುಧರಿತ್ರಿಗೆ । ಮೆಟ್ಟಿದುದುಕಲಿಕಾಲ
ಡಂಬಾದಿಗಳಬಲಸಹಿತ ॥೧೭॥ ವೇನನೋಮೇಣವನಿಪಾಲ । ಶ್ವಾನನೋಕೃತಪುಣ್ಯಲೇಶವಿ । ಹೀನನೋಮಡುಹಿದಪೆನೃ
ಪನನುರಾಜ್ಯಕತ್ವದಲಿ ॥ ಹಾನಿಯಾಯ್ತುರಡಂಗದಲಿಧರೆ । ಗೇನಿದಕೆಕರ್ತವ್ಯವೆನುತನು । ಮಾನಿಸಿದರಾಸಪ್ತಋಷಿಗಳುತಂಮೊ
ಳೊಂದಾಗಿ ॥೧೮॥ ಬುದ್ಧಿಯಲಿನೃಪನಂತರಂಗದ । ಶುದ್ಧಿಯನುನೆರೆಮಾಡಿನೋಳ್ಪವ । ಬದ್ಧನಾದಡೆಕಾಂಬನಲ್ಲಿಗೆತಕ್ಕುಪಾ
ಯವನು ॥ ಶ್ರದ್ಧೆಯಲಿಕೇಳ್ದಡೆಮುನೀಶ್ವರರ । ಸಿದ್ಧಿಯಹುದದುತಪ್ಪಿದಡೆದು । ರ್ಬುದ್ಧಿತಾನೇಕೆತುವನೆನುತ್ತೈತಂದರರಮನೆಗೆ ॥
ಬರಲುನೃಪನಾಸನವನಿತ್ತುಪ । ಚರಿಸಿದನುವಿನಯದಲಿಲೋಕದ । ಪರಿಯನನುಕರಿಸಿದನುಸುದಿನದ ವಿನಯಪರನಂತೆ ॥ ನೆರ
ದುಬಂದಿರಿದೇನೆನಲುಮುನಿ । ವರರುಬದುಕುವಬುದ್ಧಿಯನುನೃಪ । ಗೊರೆದರಾನೃಪವಂಶಸಂಮತಧರ್ಮಸಂಗತಿಯು ॥೨೦॥
ಎಲೆಭೂಪಮಹಾನೃಪಾನ್ವಯ । ತಿಲಕಕೇಳಿಯಧರ್ಮತತ್ವದ । ನೆಲೆಯನಿಹಪರಲೋಕಸುಖಸಂಪತ್ತಿಕಾರಣದ ॥ ಸಲೆ
ನಿಜಾಯುಃಕೀರ್ತಿವಂಶಾ । ವಳಿವಿವರ್ಧನವಾಜನಾರ್ದನ । ನೊಲವಹುದುಚಿತ್ತವಿಸುವಜನವನೆಂದರವನಿಪನೆ ॥೨೧॥ ಮನ
ವಚನಕಾಯಂಗಳಂದವೆ । ಜನಪನಿರ್ಮಳನಾಗಿಮಾಳ್ಪುದು । ಮನವಲಿದುವರ್ಣಾಶ್ರಮಾದಿಯಥೋಕ್ತಧರ್ಮವನು ॥ ನಿನ
ಗೆಹಿತವಹಪರಕೆಮೇಣಿರ । ದನುಪಮಾವಳನೇಕ್ಷಿಸದವಿಗೆ । ವಿನುತಸಾಧನವನಸಚಿತ್ತ್ಯಸೆಂದರವನಿಪನೆ ॥೨೨॥
ಜಗವರಕ್ಷಿಸಬೆಂದುಚೆಂರಾ । ದಿನಳಬಾಧೆಗಳಾಗದಂತಿರೆ । ಜಗದುಪತಿನಾರಾಯಣನೆಜನಿಸುವನುಮಗನಾಗಿ ॥ ಬಗದುನೋ
ಳ್ಪಡೆನಿನಗೆನೀನೇ । ಹಗೆಯನಿಸಬೇಡಾತನಾಜ್ಞೆಯ । ಮಗನೆವಿಗಾರದಿರಕಟಧರ್ಮಪಥೋಪರೋಧದಲಿ ॥೨೩॥ ಧರ್ಮ
ವೇಧರ್ಮಾರ್ಥಸಾಧನ । ಧರ್ಮವೇಕಾಮಾರ್ಥಸಾಧನ । ಧರ್ಮವೇಮೋಕ್ಷೈಕಸಾಧನವಖಿಳಜೀವರಿಗೆ ॥ ಧರ್ಮನನುಮ
ದಾಗಿಕೆಡಿಸಿವಿ । ಕರ್ಮದಲಿಕಾಲಿಡದಿರಿದುನೃಪ । ಧರ್ಮಧರ್ಮಪದೈಕರಕ್ಷಣವೆಂದರವನಿಪನೆ ॥೨೪॥ ಧರ್ಮವಳಿದಡೆರಾಜ್ಯ
ವಳಿವುದು । ಧರ್ಮದೆಡೆನೈಶ್ವರ್ಯವಳಿವುದು । ಧರ್ಮವಳಿದಡೆನೃಪತಿಗಾಯುಃಕೀರ್ತಿತೊಲಗೂದು ॥ ಧರ್ಮದಲಿನಡೆ

ಪನಡೆಯಲಿ । ಧರ್ಮಪಥದಲಿ ರಾಷ್ಟ್ರಮತಿಯನ । ಧರ್ಮದಲಿ ಕಾಲಿಡದಿರಿದು ಹರಿತುಷ್ಟಿನಿನಗೆಂದ ॥ ೨೫ ॥ ವಿತ್ತಲೋಭವಿಹೀ
ನವಾಗಿಯ । ಥೋಕ್ತಕರವನು ಕೊಂಡು ಚೋರರಾ । ನರ್ಥಬಾಧೆಗಳಾಗದಂತಿರ ಸಲಹಿ ರಾಜ್ಯವನು ॥ ಮೃತ್ಯುವನು ಗೆಲುವರು ಕ
ಣಾಪುರು । ಷೋತ್ತಮನ ಕಾರುಣ್ಯದಲಿ ನಿನ । ಗೆತ್ತಣಿಂದೈತಂದುದೀ ಮತಿಯಿಂದರವನಿಪಗೆ ॥ ೨೬ ॥ ಹರಿಯೊಲಿದಡೆ ತಮಗನೆ
ಬಳಿಕೇ । ನರಿದು ಕಾಮಿತಸಿದ್ಧಿ ತನಯ । ಕರತಳಸ್ಥವಲಾ ವಿಚಾರಿಸದಳಿದು ಧರ್ಮವನು ॥ ನರಕದೊಳಗಾಳುವರು ಕೇಳೆಲೆ ।
ಮರುಳುಭೂಪಯೆನುತ್ತ ಬೋಧಿಸ । ಲರಸನಂದಾ ಪರಮಋಷಿಗಳಿಗೆಂದನುರೆ ಮುನಿದು ॥ ೨೭ ॥ ಬಿಟ್ಟಕಂಗಳಲವನಿಪತಿ
ಮತಿ । ಗೆಟ್ಟು ನುಡಿವರೆ ಮುನಿಗಳೀ ಪರಿ । ಸೃಷ್ಟಿವಿಲಯಸ್ಥಾನಕರ್ತರ್ವಲಾ ನೃಪೋತ್ತಮನು ॥ ಬಿಟ್ಟು ಪತಿಯನು ಜಾರನಲಿ ಮೈ ।
ಗೊಟ್ಟನತಪಪತಿವ್ರತೆಗೆಸಂ । ಪಿಸ್ತರಾದಿರಿ ಸಾಕು ಹಿರಿಯರು ಹೋಗಿನೀವೆಂದ ॥ ೨೮ ॥ ರಾಮನಾನೆಂದಿರುತಲಾನಾ । ರಾ
ಯಣನು ಗಡ ಕೊಂಬವನು ಬರಿ । ಬಾಯಿನವನೀಯಜ್ಞ ಇಜ್ಞದ ಭಾಗಭೋಗವನು ॥ ಬಾಯ ತೋಡಾ ಬಂಣಿಸುವ ಹರಿ । ನಾಯಕ
ದಭೂತಾಟಕಿವಿಗಿನಿ । ತಾಯಿತೇಳೀಳಸುಕನಿಂದಿಸಿ ನುಡಿದನಾ ಭೂಪ ॥ ೨೯ ॥ ತಿಳಿದು ದುಭ್ರಮೆಯೊನಕೆಯೆನುತಾ । ತಲೆಗೆಳು
ತ್ತುವೆನೆಂಬಗಾಥೆಯು । ನೆಲೆಯಿದಾಯ್ತೆನುತ್ತೊಬ್ಬರೊಬ್ಬರನೀಕ್ಷಿಸುತ ನಗುತ ॥ ಪ್ರಳಯದಂದಿನರುದ್ರನಂತು । ಜ್ವಲಮಹಾ
ಕ್ರೋಧಾಗ್ನಿಯನು ಕಂ । ಗಳಲಿ ತಳೆದರು ಋಷಿಗಳಾ ಹರಿನಿಂದೆಯನು ಕೇಳಿ ॥ ೩೦ ॥ ತೊಲತೊಲಗು ಸಿಂಹಾಸನವನಿಳಿ । ಯಿಳಿ
ಯೆನುತ ರೋಷದಲಿ ನಿಂದಿ । ದ್ವಲಘುಮಹಿಮರು ನೋಡಿದರು ಹುಂಕಾರದಲಿ ನೃಪನ ॥ ತಲೆಯನೂರಿ ಧರಾತಳಕೆ ಖಳ । ತಿಲಕ ಬಿದ್ದ
ನು ಜೀವವಾಕ್ಷಣ । ದೊಳಗೆ ನೃಪನನು ಬೀಳುಗೊಂಡುದು ಸಕಲಜನ ಬೆದರೆ ॥ ೩೧ ॥ ಸತ್ತನವನಿಪನವನಿಪಾಲನ । ಹೆತ್ತತಾಯಿ
ಸುನೀತೆ ಹೆಣನನು । ಹೊತ್ತು ತೈಲದ ಡೋಣಿಯೊಳಗಿರಿಸಿದಳು ಯೋಗದಲಿ ॥ ಅತ್ತಲಾ ಋಷಿನಿವಹವಾಶ್ರಮ । ದತ್ತ ತೆರಳಿದಡಿರ
ದೆಚೋರರ । ಮೊತ್ತ ವಾವರಿಸಿದ ವಗಾಜಿಕವಾದದವನಿಯಲಿ ॥ ೩೨ ॥ ಮತ್ತೆ ಕೆಲವು ದಿನಕ್ಕೆ ಮುನಿಕುಲ । ಸತ್ತಮರು ತಂಮೊಳ
ಗೆಧರೆಯಾ । ಪತ್ತನೀಕ್ಷಿಸಿ ಮರುಗಿ ಚೋರಪ್ರಳಯಮಾಯ್ತೆನುತ ॥ ಸತ್ತವನ ತೊಡೆಯಿರದಡನೆರೆ ಮಥಿ । ಸುತ್ತಿರಲು ವರಾಯುಕನೆ
ನಿವದು । ಮೃತ್ತನೊಬ್ಬನು ಜನಿಸಿದನು ವಿಕೃತಾಕೃತಿಯಧರಿಸಿ ॥ ೩೩ ॥ ಕ್ರೋದಕೆಂಡದಕಾಯಕಾಂತಿಯ । ಲಾದರಿಸಿತನಗೇ
ನುರಾಗದಬಲೆಗೆಬಿದ್ದನು | ಮಾನನಿಧಿಗೃಹಕೋಶಬಲಸಪ್ತಾಂಗವೆನಗೆಂದು || ಮಾನಿನೀಭುಜದಂಡತಲ್ಪಾ | ಧೀನನಾಗುತಪೇ
ಶಕಾರಸ | ಮಾನನಾಗಿನೃಪಾಲನಿದ್ದನುಬಹುಕುಟುಂಬದಲಿ ||೫|| ಇರೆವಯೋಮಧ್ಯವನುನೆರೆಪರಿ|ಹರಿಸಿದುದುನೃಪನಿರಲುಯೌ
ವ್ವನ | ತೆರಳಿದುದುಜರೆಕಾಲಕಂನಿಕೆಧರೆಯಲೆಡೆಯಾಡಿ || ಪರನನರಸುತದೇಶದೇಶಾಂ | ತರದೊಳಗೆತೊಳಲುತ್ತ ತಂನನು | ಬರು
ತಕಂಡಳುಮಾರ್ಗದಲಿಮದನಾಂಧೆಕೇಳೆಂದ || ೬ || ಕಂಡಬಲೆಕೈಗೈದುಬೇಡಿದ | ಳೆಂಡಲೆದುಕಾಡಿದಳುಮುನಿಪತಿ | ಗಂಡನಾಗೆ
ನಗೆಂದುಸಹಜಬ್ರಹ್ಮಚಾರಿಯನು || ಹೆಂಡಿರಾರಾನಾರುಪೋಗೆಲೆ | ಭಂಡೆಯೆನೆತಂನೊಡನೆಮುನಿದಾ | ಮುಂಡೆಕೊಟ್ಟಳುಶಾಪ
ವನುತಂನಿಷ್ಟವನೆಯೆಂದ ||೭|| ತ್ರೊಳಲುತಿರುನೀನಖಿಳಭುವನಾ | ವಳಿಗಳೊಳುಮನೆಮುಕ್ಕಳೆಂಬುದ | ನೆಲವಕಾಣದೆಹೋಗೆನು
ತಹೋದಳುಜರಾವನಿತೆ || ಬಳಿಕಯವನೇಶ್ವರನಸಂನಿಧಿ | ಗೊಲಿದುಭಯನೆಂಬಾತನನುಸತಿ | ವಲಿಸಿದಳುವರನಾಗುತನಗೆನ
ಲೆಂದನವಳೊಡನೆ || ೮ || ಮಾಣುಮಾಣೆನಗಾಗದಾಗದು | ಕಾಣೆನಾನನ್ಯರನುನಿಂನೀ | ಪ್ರಾಣನಾಥರನತಿಸುದುರ್ಭಗೆನೀ
ನಲಾಜಗಕೆ || ಜಾಣತನವಲ್ಲಿದುಸನುಸ |ಕ್ಷೋಣಿಯೊಳಗುಳ್ಳಖಿಳಜನವನು | ಕಾಣದಂತುಪಭೋಗಿಸುವದೇಮಂತ್ರನಿನಗೆಂದ||
ತಂಗಿಯಾಗಿರುತನಗೆತರುಣಿಲ | ತಾಂಗಿತಂನೊಡಹುಟ್ಟಿದವಳತಿ | ಭಂಗನೀಪ್ರಜ್ವಾರನೆಂಬವನತಿಸುದುಸ್ಸಹನು || ಕಂಗೆಡದಿ
ರಿದೆನಿನಗೆನಿಜಚತು | ರಂಗಬಲಕಂಡವರನುಗಿದಾ | ಲಿಂಗಿಸೆನುತಾಜ್ಞಾಪಿಸಿದನಂಗನೆಗೆಯವನೇಶ || ೧೦ || ಬೋಧಿಸಿದಳಹು
ದೆಂದಳಂಗನೆ | ಬಾಧಿಸಲುಮೂಜಗವನಾಧಿ | ವ್ಯಾಧಿಗಳನಿಪ್ಪಾಯವನುಬಲಸಹಿತಭುವನದಲಿ || ಸಾಧಿಸಿದಳೆಲ್ಲರನುಪುರುಷನಿ |
ಷೇಧವಿಲ್ಲದೆಜೀವಜಾತನಿ | ರೋಧಕಾರಿಣಿಬಂದಳಬಲೆಪುರಂಜನನಪುರಕೆ || ೧೧ || ಸುತ್ತಿಬಂದುಪುರಂಜನನಪುರ | ದೊತ್ತಿ
ನಲಿಮಾಳೆಯುವಬಿಟ್ಟುದು | ಮತ್ತಕಾಶಿನಿಯಾಜ್ಞೆಯಲಿಯವನೇಶಪರಿವಾರ || ಒತ್ತಿಹೊಕ್ಕುದುಕೊಡೆಪುರದೊಂ | ಭತ್ತುಬಾಗಿಲ
ನುರಗನೊಬ್ಬನೆ | ಕೆತ್ತುನಿಂದನುಕಾಳಗದಭಾರಣೆಗೆಘನವಾಯ್ತು || ೧೨ || ತ್ರಪಭಿಮಾನಪುರಂಜನನಕಂ | ಡುದರದಲಿಸಂತಾ
ಪವನುತಾ | ಳ್ದನುಬಹುವಿಧಚಿಂತೆಯಲಿಪರಿವಾರಜನಸಹಿತ || ಕುದಿದುಕಾಲಾತ್ಮಜೆಯಕಾಲಾ | ಟದಲಿತನುವಶವಳಿದುನಾನಾಂ|
ಗದಲಿಬಹುಸಂಕ್ಲೇಶಭಾಜನನಾದನಡಿಗಡಿಗೆ || ೧೩ || ಅರಸನರಿಯದಪೂರ್ವಲುಗಂಧ | ರ್ವರವರರೂಥಿನಿಮುಂನಲೇತ | ತ್ವರ
ವನಾವರಿಸಿದ್ದುದಾಕಾಲಾಭಿಧಾನದಲಿ || ವರುಷಜನನಾಯಕಾರಗಂಧ | ರ್ವರದಿನಾವಳಿಸೈನಿಕದಕಾ | ರಿರುಳಗಂಧರ್ವಿಯರಬಲ
ಮೋಹರಿಸಿದುದುಪುರಕೆ || ೧೪ || ಓರ್ವರೋರ್ವರಬಳಿಯಲಿಹನಂ|ಧರ್ವಗಂಧರ್ವಿಯರಗಣನೆಯು | ನಿರ್ವಹಿಸುವವರಾರು
ಷಷ್ಟ್ಯುತ್ತರಶತತ್ರಯದ || ಸರ್ವಮಾಸತ್ರಯನವೆಂಬಚ | ತುರ್ಬಲದಪಡೆಕಾಲನೆಂಬವ | ಸರ್ವದಳಪತಿಚಂಡವೇಗನ್ನಪಾಲನ್ನೆ

ತಂದ ॥೧೫॥ ಮೇಲುಮುತ್ತಿಗೆಯಾಯ್ತು ಯವನರ । ಧಾಳಿಗಂಧರ್ವರ್ವಳಿಯುಮಂ । ಧಾಳಿಗುರಗಾಧಿಪತಿಯೊಬ್ಬ ಸೇನಿಂದಸಿ
ದಿರಾಗಿ ॥ ಕಾಳಗಕೆ ತಾನರಿಯನಾಭೂ । ಪಾಲನರ್ಧಾಯುಷ್ಯಪರಿಯಂ । ತೇಳಧಿಪನನುಮಾಡಿವ್ಯೈಮರದಿದ್ದನುಬ್ಬಿನಲಿ ॥೧೬॥
ಅರಿತನೊಯ್ಯನೆ ಕಾಲಕಂನಿಕೆ । ಬರಲು ಯವನೇಶ್ವರನ ಬಲನೈ । ತರಲು ಬಳಿಕನುಭವಕೆ ಬಂದುದು ಭಂಗವವನಿಪಗೆ ॥ ಒರಸಿ ಪೂರ್ವ
ದ್ವಾರಪಂಚಕ । ಭರವನಿಳುಹಿತು ದಕ್ಷಿಣೋತ್ತರ । ದೆರಡುಬಾಗಿಲ ಮಾತು ನೃಪತಿಗೆ ಕೇಳಲರಿದಾಯ್ತು ॥ ೧೭ ॥ ನೋಡಲಕ್ಷ
ಮನಾದನಹಿತರ । ಬೀಡಿಕೆಯ ಸಂಭ್ರಮಗಳನುವಸಾ । ತಾಡಲಲಸಿದನಾತ್ಮನು ಸುರುಬ್ಬಸದ ದುಸ್ಥಿತಿಯ ॥ ತೀಡುವಾಮೋದವನು
ಮರೆದನು । ಜೋಡಿನಾಗಿಲ ಜೋಕೆಗೆಟ್ಟಿಡೆ । ಯಾಡಲಂತಃಪುರದಲಿದ್ದನು ಬಹಳ ಚಿಂತೆಯಲಿ ॥ ೧೮ ॥ ಕೆತ್ತನೇಳು ಕವಾಟಬಾ
ಗಿಲ । ಹತ್ತಿಳವರಡಗಿದರು ತೆರದುದು । ಯಿತ್ತಲತ್ತಣ ಕಡೆಯ ಬಾಗಿಲಲಾದುದೆಡೆಯಾಟ ॥ ಮೃತ್ಯುವಿನ ತಂಗಿಯ ಮದುವೆಮನ ।
ಕಿತ್ತು ದಂಶಸ್ಥಾಪವನು ತಳೆ । ಯೊತ್ತುತಿದ್ದನು ನಾಗನೊಬ್ಬನೆ ವೈರಿಬಲದೊಳಗೆ ॥ ೧೯ ॥ ನಡವಪರಿಜನವುಮಂ ನಿನಂತಿರೆ । ನಡ
ಯ ಬೊಡಲಿಂಗಿಲ್ಲದೊಬ್ಬರ । ನುಡಿಯನೊಬ್ಬರು ಸೈರಿಸರು ತಂವೊಳಗೆ ಮತಭೇದ ॥ ಒಡಲಿಪಿತ ಭಂಡಾರಸವದುದು । ಕುಡಿವನೀ
ರೊಳಗಿಲ್ಲ ಮಿಗೆ ಹೊರ । ವಡುವಡರಿದಾಯ್ತೀನನೆಂಬೆನು ನೃಪನ ದುಸ್ಥಿತಿಯ ॥ ೨೦ ॥ ಹೊರಗೆ ಬಹ ಧನವಿಲ್ಲ ರಾಜ್ಯವ । ನಿರಿದರಹಿ
ತರು ಸೂರೆವೋದುದು । ಪುರದ ಧನಪೊಳಯಿಂಕೆ ಕಾಲಿ ಹುತಿದುರ್ದರಿಸೇನೆ ॥ ನೆರವಣಿಗೆಯ ಕುಟುಂಬರಕ್ಷಿಸ । ಲರಿವೆನಾನೆಂತಿದ
ನುಹಾಯೆಂ । ದೊರಲುತಿದ್ದನು ಮೊಗವನೀಕ್ಷಿಪಿ ನಿಜಸತೀಸುತರ ॥ ೨೧ ॥ ತಾನಳಿಯೆ ಗತಿಯಾವುದೆಂನಯ । ಮಾನಿನಿಗೆ ತಂನೊ
ಡನೆ ಸಂದರೆ । ದೀನರಿಗೆ ಗತಿಯಿಲ್ಲ ನಿಂದಡೆ ಮೇಲದೇನಹುದೊ ॥ ಹೀನಭಾಗ್ಯನೆಲಾಯೆನುತ ದುಂ । ಮಾನದಲಿ ಚಿಂತಿಸಿ ಕುಟುಂಬ ।
ಧ್ಯಾನತತ್ಪರನಾಗಿ ಮರುಗುತ್ತಿರ್ದನವನೀಶ ॥ ೨೨ ॥ ಹಂದಿಯನು ಹುಲಿ ತರುಬಿದಂತಾ । ಯ್ತಂದು ಭಗನಗ್ರಜನು ಮೇಲ್ವೈ ।
ತಂದನಾ ಪ್ರಜ್ವಾರನಕಟ ಪುರಂಜನನ ಪುರಕೆ ॥ ಬೆಂದುದಾ ಪುರವಿಭವ ವಾಹನ । ಬಂದಪುರವಿದು ಸಕಲ ಪುರಜನ । ವೃಂದಸಹಿತ ಪು
ರಂಜನನನಂಬಿಪಿತು ಮರುಕೊಳಿಸಿ ॥ ೨೩ ॥ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ ॥
ಬೆಚ್ಚಿ ಬೆದರು ಸಹುಜ್ಞಿಯನು ಕಾ । ಳ್ಗಚ್ಚು ಕವಿದರೆ ಕಂಡುಲುಬ್ಧಕ । ನೆಚ್ಚವ್ರೋಲಾ ನೃಪನ ಬಹಳ ವಿಪತ್ಪರಂಪರೆಯ ॥ ಹೆಚ್ಚುಗೆ
ಯ ಪೇರಾಳ ಶೋಕದ । ಕಿಚ್ಚಿನಲಿ ಬೇವುತ್ತಿರಲು ಭಯ । ನೊಚ್ಚತಾಲಿಂಗಿಸಿದನಂದು ಪುರಂಜನನನವನ ॥ ೨೪ ॥ ಅರುವಿನಲಿ
ಮರವೆಯಲಿ ಮನವಿಂಗೆ । ಮರುಗಿ ಸಂಸಾರಾನುಯಾತ್ರೆಗೆ । ತೆರಪುಗಾಣನುಪದ್ರವದ ಬಹುವಿಧ ಪರಾಭವಕೆ ॥ ತೊರೆದನಿತ್ತಣ
ಚಿಂತೆಯನುಮ್ಮ್ಯ । ಪುರದು ಮಾವನ ಮನೆಯ ಕಾಬೊಂ । ದರಿಕೆ ಘನವಾಯ್ತಾದು ಹೊರವಂಟನು ನಿಜಾಲಯವ ॥ ೨೫ ॥ ಪುರ
ಪಹೊರನಂಟುರಗಪತಿಪ್ಪ್ಯೆ । ಸೆರಿಸಿನು ಯವನೇಶನೈತರೆ । ಧರೆಗೆ ಸರಿಯಾಯ್ತೀನನೆಂಬೆನು ಪುರವದಾಕ್ಷಣಕೆ ॥ ಅರಸನೊಡನೈ
ದಿದುದು ಪರಿಜನ । ಪುರಜನದ ಸಂದೋಹನಡದುದು । ನರಕಗತಿಗೆ ಪುರಂಜನನು ನೃಪಪಾರವಶ್ಯದಲಿ ॥ ೨೬ ॥ ಯಾತನೆಗಳನಿತ
ನಿತು ಕರ್ಮ । ವ್ರಾತನಿರ್ಮಿತನಾದವನಿತರೊ । ಳಾಂತು ಭೋಗಿಸಿದನು ನಿಜಾರ್ಜಿತ ಪಾತಕದ ಫಲವ ॥ ನಾತು ಹಲವರಲೇನು
ಸಿಂನಂ । ತಾತನೊಬ್ಬನು ಸವನಸಾಲದಲಿ । ಘಾತಿಸಿದ ಪಶುನಿಕರ ಕಾಹುತಿಯಾಗಿ ಕೇಳೆಂದ ॥ ೨೭ ॥ ತಂನವನಿತಾಧ್ಯಾನದಿಂದು ।
ತ್ಪಂನನಾದನು ವನಿತೆಯಹಾಗಿನ್ನ । ಪಾಸ್ವ್ಯದಲೀ ಧರೆಯಮೇಲೆ ಪುರಂಜನನು ಬಳಿಕ ॥ ಮಂನಿಸುತ ವೈದರ್ಭವೆಸರಲಿ । ಕನ್ಯೆಯ
ನು ಪಾಂಡ್ಯೇಶನಾಥೆಯ । ನುಂನತೋರು ಪರಾಕ್ರಮನು ಧರಿಸಿದನು ವಧುವಾಗಿ ॥ ೨೮ ॥ ಜನಿಸಿದರು ಸುತರಾಕೆಯಲಿ ತ । ಜ್ಜನ
ಪತಿಗೆ ಬಹುಕಾಲ ರಾಜ್ಯವ । ನನುಭವಿಸಿದನು ಪುತ್ರಪೌತ್ರಕಳತ್ರ ಜನಸಹಿತ ॥ ವನಿತೆಸಹಿತ ತಪೋವನಕೆ ಬಳಿ । ಕನುಪಮನು ಸೇ
ರಿದನು ರಾಜ್ಯವ । ಘನತರೈಶ್ವರ್ಯವನು ಸೇರಿಸಿ ತಂನಪುತ್ರರಿಗೆ ॥ ೨೯ ॥ ಯೋಗರಾಜ್ಯವನನುಭವಿಸಿ ನಿಜ । ಯೋಗನಿಷೆಯ
ಲಸದೇಹ । ತ್ಯಾಗವನು ಮಾಡಿದನು ಬಳಿಕಾಕ್ಷಿತಿಪನಿರಲಿರಲು ॥ ಆಗುಣಾಂಬುಧಿಯರಿಯಳದನನು । ರಾಗದಲಿ ಶುಶ್ರೂಷೆಯನು
ಸಕ । ಲಾಗಮೋಕ್ತವಿಧಾನದಲಿ ವೈದರ್ಭಿ ವಿರಚಿಸುತ ॥ ೩೦ ॥ ಎಂದಿನಂತಿರೆ ಯೋಗನಿಷ್ಠೆಯ । ದೆಂದು ಪತಿಭಕ್ತಿಯನು ಮಾಡು ।
ತ್ತಿಂದುಮುಖಿ ತದ್ವ್ರತವನಾಚರಿಸಿದಳು ಮೈಮರೆದು ॥ ಒಂದುದಿನ ತತ್ಪಾದಕಮಲ । ದ್ವಂದ್ವವನು ಪೂಜಿಸುತ ಕಂಡಳು । ಹೊಂದಿ
ದುದನ ಕಟಕಟೆನುತ ಕೆಡದಳು ಧರಾತಳಕೆ ॥ ೩೧ ॥ ಹಾವಿಧಿಯೆ ಹಾನಾಥ ಹಾನರ । ದೇವಕುಲಕಾಂಸುಭದಲಕ್ಷ್ಮಿಯೆ । ಹಾವಧೂ
ವದನೋತ್ಪಲಾಮೃತಕಿರಣ ನಿಜರಮಣ ॥ ಭಾವಿಪೆಯೆ ತನುವಿದು ನಿಜಾಪ್ರ್ರವ । ನೀವನಾಂತರದೊಳಗೆ ಬಿಸುಟೆಂ । ನಾವಗತಿಯ
ನುಕಂಡೆಯೆನೆ ಗೆಂದಳಲಿದಳು ತರಳೆ ॥ ೩೨ ॥ ಸಾವೆನೊಡನೆಂದೆಂಬರಗ್ನಿಯ । ನೀವವರು ತನಗಿಲ್ಲ ಪರಿಜನ । ಜೀವಿಸುವೆನೆಂದ
ರ್ಥಕಾಯವ ಕೆಡಿಸುರಗಿಯಂತೆ ॥ ಹಾವಿಧಿಯೆ ಹಾವರನೆ ಹಾಧರ । ಣೀವರನೆ ಬಹಿರಂಗದೆಂನಯ । ಜೀವನವೆ ಹಾಯೆಂದು ಮಿಗೆ ಪಳ
ವಿಸಿದಳು ಬಾಷ್ಪ ॥ ೩೩ ॥ ಅಡವಿಯೊಳು ಕಂಗೆಟ್ಟು ಕಂಬನಿ । ಗಡಲೊಳೊರಲುತ್ತೊರಲು ಪಬಲೆಯ । ನಿಡುಸರವನಾಲಿಸುತ
ಬಂದನು ಪೂರ್ವಜನ್ಮದಲಿ ॥ ಒಡರಿಸಿದ ಸಖಿಯೊಬ್ಬನೆಲೆಯೆಲೆ । ಜಡವನಿತೆ ನೀನಾರಿಗಾಬಾಯ್ಬಿಡುವೆ ಹೋ ಹೋ ಮಾಣು ಮಾಣು
ವಿಚಾರವುಂಟೆಂದ ॥ ೩೪ ॥ ಎಂದಡೊಯ್ಯನೆ ನುಡಿದಳಾರ್ಯ । ತಂದೆ ನೀನೆನಗೇಕೆ ಳಲಬೇ । ಡೆಂದೆ ಹೇಳಾ ಕಾರಣವನಾವ್ರೂರು ನಿನಗೆ

ನಲು ॥ ಎಂದನಾತನುನಗುತಕಡುಕೃಪೆ | ಯಿಂದಕಮಲಾನನೆಗೆಸಖಿಯಾ | ನಿಂದುಮುಖಿಪೂರ್ವರೊಂದೆನಿನಗೆನಗೆಂದನಾವಿಪ್ರ ॥೩೫॥ ಸುದತಿನೀನುಪುರಂಜನನುಪೂ | ರ್ವದಲಿವಿಜ್ಞಾತಾಖ್ಯನಾಗಿಂ | ತುದಿಸಿಸೌಖ್ಯದಲಿರುತಿರಲುನೀನೊಂದುಕಾಲದಲಿ ॥ ಮುದಮುಖನುಮರದೆಂನನೇಕಾಂ | ಗದಲಿಹಿಮಗಿರಿದಕ್ಷಿಣದಪೂ | ರ್ವದಲಿಹೋಗುತಕಂಡೆಮಾಯಾವಧುವನೀನೆಂದ ॥ ೩೬ ॥ ಆಕೆಯೊಡನಿರುತೊಂದುಪುರದಲ | ನೇಕಪರಿಜನಸಹಿತಸುಖಿನೀ | ನೇಕರಾಜ್ಯವನಾಳುತಿದ್ದೆಮಹಾನುಭವಿಯಂತೆ ॥ ಏಕೆಬಾರದುಕೇಡುನಿನಗವಿ | ವೇಕಿಗಖಿಳಕುಟುಂಬಮಮತಾ | ವ್ಯಾಕುಲಂಗೆಕುಬುದ್ಧಿಗಾತ್ಮಜ್ಞಾನಹೀನಂಗೆ ॥ ೩೭ ॥ ಅಟ್ಟಹೊಯ್ದರುಯವನರಾಪುರ | ದಷ್ಟವಿಧಭೋಗವನುಕಾಲನ | ಧಟ್ಟನೂಕಿದುದುರುಹಿಡನುಪ್ರಜ್ವಾರನಾವರಿಸಿ ॥ ಮುಟ್ಟಿಬಂದನುಹಿರಿಯೊಡೆಯನದ | ಬಿಟ್ಟುತದ್ವನಿತಾವಿರಹರೂ | ಹಿಟ್ಟುನಿಂನನುಹೆಂಣುಮಾಡಿದುದಂಣಕೇಳೆಂಹೆ ॥೩೮॥ ಆರುನೀನೆಂದರಿಯೆಮಡಿದವ | ನಾರುತಾನೆಂದರಿಯೆಬರಿದೇ | ನಾರಿನೀನಿಂದಳುವೆಮಲಯಧ್ವಜನೆಪತಿಯೆಂದು ॥ ಭೂರಿಮಮತೆಯದಲ್ಲದಾತ್ಮವಿ | ಚಾರಮಾರ್ಗವಿದಲ್ಲನೋಡಾ | ಸಾರತತ್ವಜ್ಞಾನದೃಷ್ಟಿಯಲೆಂದನಾವಿಪ್ರ ॥೩೯॥ ಇಬ್ಬರಿಂಗೂರೊಂದೆಮನೆಯೊಂ | ದಿಬ್ಬರಿಗೆತನುವೊಂದೆಮನವೊಂ | ದಿಬ್ಬರಿಗೆತಲೆಯೊಂದೆನೀತಿಯದೊಂದೆನಿಜವೊಂದೆ ॥ ಇಬ್ಬರಿಂಗೆಂಬುದನುತಿಳಿದಡೆ | ಸರ್ಬರಿಂಗೆಸಮಾನಬೋಧೆಯ | ದೊಬ್ಬನನುಕುರಿತಲ್ಲದಿಲ್ಲಲತಾಂಗಿಕೇಳೆಂದ ॥ ೪೦ ॥ ನಿತ್ಯಸುಖಪರಿಪೂರ್ಣಸತ್ಯ | ಜ್ಞಪ್ತಿಮಾತ್ರವೆನಿಪ್ಪನಿಜವನು | ತತ್ವದಿಂದವಿಚಾರಿಸದದೇಹಾತ್ಮಬುದ್ಧಿಯಲಿ ॥ ಮೃತ್ಯುವಿನವಶವಾಗಿಕೆಡುವರು | ಮರ್ತ್ಯರಿದನೇತಿಳಿದವರುಕೃತ | ಕೃತ್ಯರೆಂದೆಚ್ಚರಿಸಿದನುಪೂರ್ವದಪುರಂಜನನ ॥ ೪೧ ॥ ಎಂದಡಂತವರ್ಣನವಿವೇಕದಿ | ಕಂದೆರದುನೋಡಿದಳುಕಂಡಳು | ಮುಂದೆನಿಂದಂತರನನಿಜವನುತಂನನಿಜವೆಂದು ॥ ಇಂದುಮುಖಿಸುಖಿಯಾಗಿಕನಸನು | ಕಂದೆರದುಮರದಂತೆಪರಮಾ | ನಂದಪದದಲಿನಿಂದಳಧಿರನುಮರದುಮನವಳಿದು ॥ ೪೨ ॥ ಭೂಪನೀನೀಪರಿಯಲರಿವಿನ | ದೀಪವನುನೆರೆಬೆಳಗಿಸುಪಥವ | ಶಾಪಥವನೀತಿಳಿದುತತ್ವಜ್ಞೋಪದೇಶದಲಿ ॥ ಲೋಪವನುಪರಿಹರಿಸಿಕರ್ಮಕ | ಲಾಪವನುಕೆಡೆಯೊದೆದುಸಂವಿ | ದ್ರೂಪನಾತ್ಮನನರಿದುಸುಖಿಯಾಗೆಂದನಾಮುನಿಪ ॥ ೪೩ ॥ ಇದುಮುಕುಂದನಭಕ್ತಿನಿರ್ಮಲ | ಹೃದಯರೆನಿಪಮಹಾತ್ಮರಿಂಗ | ಲ್ಲದೆನೃಪೋತ್ತಮಸುಲಭವಲ್ಲನಿಜಾನುಭವಸೌಖ್ಯ ॥ ಸದಮಳನೆಕೇಳಾಮುಕುಂದನ | ಪದವನೇಮರೆಯೊಗುವುದಖಿಳಾಂ | ಗದಲಿಮುಕುತಿಯನೊಲುವಡೆದನುಭೂಪತಿಗೆಮುನಿಪ ॥ ೪೪ ॥ ತೋರುವುದುಹುಸಿಯಾಗಿಕರ್ಮವ | ನಾರಿಗೋಸುಗಮಾಳ್ಪಸಾಧನ | ಪಾರಲೌಕಿಕಕೆಂಬಡಳಿಯದೆಲೋಕವಿದರಂತೆ ॥ ಸಾರವಲ್ಲೆಲೆಭೂಪಭುವನಾ | ಧಾರಮೂರುತಿವಾಸುದೇವನ | ಚಾರುಚರಣವನರಸಮರೆಯದಿರೆಂದನಾಭೂಪ ॥ ೪೫ ॥ ಎಂದಡಾಮುನಿವರನಚರಣ | ದ್ವಂದ್ವದಲಿಮೈಯಿಕ್ಕಿನೃಪನಾ | ನಂದಜಲದಭಿಷೇಕವನುಮಾಡಿದನುಮುನಿಪದಕೆ ॥ ಸಂದುದೀಪರಿನಿರುಮಡಿಗಳಿಂ | ಗೆಂದುತತ್ವಜ್ಞಾನಸುಖದಲಿ | ನಿಂದನವನಿಪನಖಿಳರಾಜ್ಯದಮಮತೆಯನುಮರದು ॥ ೪೬ ॥ ತಿಳಿದುದೈನಿಜವೆನುತಭೂಪನ | ತಲೆದಡವಿಸುಖಿಯಾಗೆನುತಮುನಿ | ಕುಲಲಲಾಮನುಬೀಳುಗೊಟ್ಟಡರಿದನುಸುರಪಥವ ॥ ಬಳಿಕಸುತರಿಗೆರಾಜ್ಯವನುಕೈ | ಕೊಳಿಸಿಕಪಿಲಾಶ್ರಮಕೆಮುನಿಕುಲ | ತಿಲಕನೈದಿದನೈದಿದನುಯೋಗದಲಿನಿಜಗತಿಯ ॥ ೪೭ ॥ ಹೇಳಿದೆನುತಾನೆಲೆವಿದುರಭೂ | ಪಾಲನನುಳಚರಿತ್ರವನುಮುನಿ | ಮೌಳಿಮಣಿಭೂಷಣನಸೂಕ್ತಿಸುಧಾರಹಸ್ಯವನು ॥ ಹೇಳಲಾಗದುನಾಸ್ತಿಕರಿಗಿದ | ನಾಳಿಗೊಂಬದುರಾತ್ಮರಿಗೆದು | ಶ್ಶೀಲರಿಗೆಕೃತಪುಣ್ಯಹೀನರಿಗೆಂದನಾಮುನಿಪ ॥ ೪೮ ॥ ಶ್ರದ್ಧೆಯಿಂದವೆಹೇಳುವದುಸ | ಛ್ರದ್ಧೆಯಿಂದವೆಕೇಳುವುದುಸು | ಶ್ರದ್ಧೆಯುಳ್ಳವನಾವನಾಗಲಿಯೋಗ್ಯನೀಕಥೆಗೆ ॥ ಬುದ್ಧಿಶುದ್ಧಿಗೆಪರಮಸಾಧನ | ಸಿದ್ಧಿಸುವುದಿಷ್ಟಾರ್ಥವಹಭವ | ಬದ್ಧರಿಗೆಕರುಣಿಸುವುದೀನಿತ್ಯಾತ್ಮನಿಜಪದವ ॥ ॥ ೪೯ ॥

ಅಂತು ಸಂಧಿ ೧೮ಕ್ಕಂ ಪದನು ೭೭೧ಕ್ಕೆ ಮಂಗಳಮಸ್ತು.

ಹತ್ತೊಂಭತ್ತನೆಯ ಸಂಧಿ.

ಸೂಚನೆ ॥ ಭಜಿಸಿದರುಭುವನಾಧಿಪತಿಯನು | ನಿಜಮನೋರಥಸಿದ್ಧಿಯಲಿಭೂ | ಭುಜರುಸಲಹಿದರವ
ನಿಯನುನಿಜರಾಜತೇಜದಲಿ ॥ ... ...

ಪದನು ॥ ವಿದುರಕೇಳ್ವೈಮಾರ್ಗದಲಿಶಿವ | ಪದಪಯೋಜದಪರಮಕೃಪೆಯನು | ಸದಮಳರುಪಡದಾಪ್ರಚೇತಸ್ಸುಗಳುಪಶ್ಚಿಮದ ॥ ಉದಧಿಯನುಹೊಕ್ಕುಗ್ರತಪದಲಿ | ಪದುಮನಾಭನಪಾದಕಮಲವ | ಹೃದಯದಲಿಭಾವಿಸುತನಿಂದರುನಿಜಕುಮಾರಕರು ॥ ೧ ॥ ಹತ್ತುಸಾವಿರವರುಷಪರಿಯಂ | ತುತ್ತಮನುಜಪಯಜ್ಞದಲಿಪುರು | ಷೋತ್ತಮನಪಾವನಪದಾಬ್ಜವಿಳಾಸಲಕ್ಷ್ಮಿಯನು ॥ ಚಿತ್ತದಲಿಕಡೆದೂರ್ಧ್ವಮುಖವಾ | ಗೆತ್ತಿನಿಡುದೋಳ್ಗಳನುನೆರೆಭಜಿ | ಸುತ್ತಿರಲುಕರುಣಾಳುಮೈದೋರಿದನು

ನೃಪರಿಂಗೆ ॥ ೨ ॥ ಸತ್ತಿಗೆಯಚಾಮರಸತಿಯರ । ಮೊತ್ತದೆಡಬಲದಮರಪತಿಗಳ । ಮೊತ್ತ ಪಾಡುವಸೂತಮಾಗಧವಂದಿಗಳ ಮೊತ್ತ ॥ ಎತ್ತನೋಡಿದಡಮರವಧುಗಳ । ಮೊತ್ತ ಜಯಜಯವೆಂಬಮುನಿಗಳ । ಮೊತ್ತನೇಂ ಸ್ಫದ್ದೆಸೆಗಾವರಿಸಿಳಿಸಿದನುಮುರಧ್ವಂಸಿ ॥ ೩ ॥ ಭೂರಿಭೇರೀರವದಗಗನದ । ಚಾರುದಿವ್ಯವಿಮಾನತತಿಗಳ । ಭಾರಣೆಯಬಹುಭದ್ರವಾದ್ಯದಪುಷ್ಪವೃಷ್ಟಿಗಳ ॥ ಆರತಿಯಪರಿಪರಿಯತಳಿಗೆಗ । ಳೋರಣದಕಂನೆಯರನಿಜಪರಿ । ವಾರಶೋಭೆಯಲಂದುಮೆರೆದನುದಾನವಧ್ವಂಸಿ ॥ ೪ ॥ ಗರುಡಕರತಳವಿಹಿತ್ರನಿಜಪದ । ಸರಸಿಜದತಗ್ಬಾಹುಕಂಧರ । ಪರಿಲಸಜ್ಜಾನೂರುಚಾರುನಿತಂಬಮಂಡಲದ ॥ ಕರತಳೋದ್ಧೃತಶಂಖಚಕ್ರಾಂ । ಬುರುಹಗದೆಗಳವಿಮಳಪೀತಾಂ । ಬರದಕಾಂತಿಗಳೆಸೆಯಲೆಸೆದನುದಾನವಧ್ವಂಸಿ ॥ ೫ ॥ ಹತ್ತುದೆಸೆಗಳತಿಮಿರವನುಕೆಡೆ । ಕುತ್ತವಂಗಚ್ಛವಿಯಕಂಗಳ । ಸುತ್ತುವೆಳಗಿನಸೂರ್ಯಕೋಟಿಸಮಾನತೇಜಗಳ ॥ ಉತ್ತಮಾಮಳರತ್ನಮಕುಟದ । ಮೌಕ್ತಿಕದಕುಂಡಲದಮಣಿಗಳ । ದೀಪ್ತಿಗಳಕಾಂತಿಯಲಿಮಿಗೆರಂಜಿಸಿದನಸುರಾರಿ ॥ ೬ ॥ ಕಂಡನಿದಿರಲಿಕಮಲನಾಭನ । ಪುಂಡರೀಕದ್ಯುತಿನಿಜಾಂಘ್ರಿಯ । ಮಂಡಲದನೂಪುರದತನುಕಾಂತಿಯಲಿಮನಮುಳುಗಿ ॥ ದಂಡದಂತಿರೆನೋಡಿನಿಜದೋ । ರ್ದಂಡವನುಮ್ಮೆಯಿಕ್ಕಿದರುಭೂ । ಮಂಡಲೇಶಾತ್ಮಜರುಜಯಜಯಜಯತುಜಯಯೆನುತ ॥ ೭ ॥ ನೋಡಿದರುನಯನಾಮೃತಾಬ್ಧಿಯ । ರೂಢಿಸಿದಮೂರ್ತಿಯನುಪುಳಕದ । ಜೋಡಿಯಲಿಜೋಲಿದುದುತನುಸುಖಪಾರವಶ್ಯದಲಿ ॥ ನೋಡಲರಿದೆನೆಕಂಗಳಲಿಕಡೆ । ಗೋಡಿವರಿವಾನಂದಜಲದಲಿ । ಮೂಡಿಮುಳುಗಾಡಿದರುರಾಜಕುಮಾರರಡಿಗಡಿಗೆ ॥ ೮ ॥ ಶ್ರೀಕೃಷ್ಣಾಯನಮಃ. ಏಳಿರೈನಿಂಮಿಷ್ಟವನುನೀವ್ । ಪೇಳಿರೈಹಲಕಾಲತಪದಲಿ । ಬಾಲಕರುಬಳಲಿದಿರಲಾನಿಜಪಿತೃನಿವೇಶದಲಿ ॥ ಶೀಲವಂತರುಮತವಿಭೇದವ । ತಾಳದೊಂದೇಬುದ್ಧಿಯಲಿತಂ । ನೋಲಗವಮಾಡಿದಿರಿಮೆಚ್ಚಿದೆನೆಂದನಸುರಾರಿ ॥ ೯ ॥ ಅರಿತೆನಾನೆಲೆಮಕ್ಕಳಿರಮನ । ದರಿಕೆಯನುಪ್ರಮ್ಲೋಚೆಯಿಂದವ । ತರಿಸಿದಳುಕಂಡುವಿಗೆಕಮಲಾನನೆಮಹಾವನಿತೆ ॥ ಅರಸಿಯಹಳೆಲ್ಲರಿಗೆಪಾವನ । ಚರಿತ್ರೆಸುಪತಿವ್ರತೆಯನಿತ್ತೆನು । ಧರಣಿಪಾಲಕುಮಾರರಿರನಿಮಗೆಂದನಸುರಾರಿ ॥ ೧೦ ॥ ದಿವ್ಯಶತಲಕ್ಷಾಬ್ಧಿಪರಿಯಂ । ತೂರ್ವಿಯನುಪಮಭೋಗವನುನೀವ್ । ಸರ್ವರನುಭವಿಸುವುದುಸತಿಸಹಿತೈಕಮತ್ಯದಲಿ ॥ ದಿವ್ಯಭೋಗಂಗಳನುತಂನನು । ನಿರ್ಗಹಿದೋಲವಿನಲಿಭೋಗಿಸಿ । ಸರ್ವವಿಷಯವಿರಕ್ತರಹುದಲ್ಲಿಂದಮೇಲೆಂದ ॥ ೧೧ ॥ ಎಂನಮಹಿಮೆಯನೊಲಿದುಕೀರ್ತಿಸು । ತೆಂನಮಹಿಮೆಯನೊಲಿದುಕೇಳು । ತ್ತೆಂನನೇಧ್ಯಾನಿಸುತಸರ್ವಂವಿಷ್ಣುಮಯವೆಂದು ॥ ಎಂನವರಸಂಗದಲಿರಮಿಸು । ತ್ತೆಂನವರನೀವಾಗಿಸುಖಿಸು । ತ್ತೆಂನಸಾಯುಜ್ಯವನುಕಡೆಗೈದುವಿರಿನೀವೆಂದ ॥ ೧೨ ॥ ಚಿಂತೆಬೇಡೆಲೆಮಕ್ಕಳಿರನಿಜ । ಚಿಂತೆಯುಳ್ಳಡೆಬಳ್ಳಕೆಮಾಯಾ । ಭ್ರಾಂತಿಮಾಡೂದೇನುಮನೆಯೋನಡವಿಯೆಂದೇನು ॥ ಸಂತತಾತ್ಮಧ್ಯಾನದಲಿನಿಂ । ಮಂತರಂಗವಿದಿರಲಾತನುತಾನೆಂತುಮೋಕ್ಷವೆಲ್ಲಿದ್ದಡೇನದಕಂಜಬೇಡೆಂದ ॥ ೧೩ ॥ ಧ್ಯಾನವೆಂನೊಳಗಿಲ್ಲದಿದ್ದಡೆ । ಮಾನನಿಧಿಗಳರಡವಿಯೊಳಗಿ । ದ್ದೇನುಮನೆವಾರ್ತೆಯೊಳಗಿದ್ದಳವಸುಖವೇನು ॥ ಹಾನಿಹಿಂಗದುಜೀವರಿಗೆಮ । ಧ್ಯಾನವುಳ್ಳಡೆಸಕಲವೆಂನ । ಸ್ಥಾನವಹುದೆಲ್ಲಿದ್ದಡವರೇಂಧನ್ಯತಮರೆಂದ ॥ ೧೪ ॥ ಇಂತುಕರುಣಾವನಧಿಲಕ್ಷ್ಮೀ । ಕಾಂತನಾಜ್ಞಾಪಿಸುತಿರಲುನೃಪ । ಸಂತತಿಗಳಾಲಿಸುತತತ್ತ್ವಗುಣ್ಯಸೂಕ್ತಿಗಳ ॥ ಸಂತತಾಮೃತಧಾರೆಗಳನೋ । ರಂತೆಕಿವಿಗುಡಿತೆಯಲಿಸವಿಸವಿ । ದಂತವಿಲ್ಲದಸುಖಸಮುದ್ರದಲದ್ದರಡಿಗಡಿಗೆ ॥ ೧೫ ॥ ದೇವನಿಂಮೀಯಂಘ್ರಿಕಮಲಯು । ಗಾವಲೋಕನಪುಣ್ಯವಿದುಗೌ । ರೀವರಾನುಗ್ರಹದಕಾರುಣ್ಯದಲಿತಮಗಾಯ್ತು ॥ ಈವುದನುದಿನನೆನಪಭಕ್ತಜ । ನಾವಳಿಯಸಂಗವನುವರವಿದು । ಜೀವನದಫಲವೆಮಗಿದೇಯೆಂದರುನೃಪಾತ್ಮಜರು ॥ ೧೬ ॥ ಸ್ವರ್ಗವಿದರೊಂದೊರೆಗೆಬಾರದು । ವರ್ಗಮೂರಣೆಯಿಲ್ಲನೀಣಸೆ । ವರ್ಗಸರಿಯಿಲ್ಲೆಮಗೆಕಾಣೆವುತತ್ಸಮಾನವನು ॥ ನಿರ್ಗತಾವಿದ್ಯಾಪ್ರಭನೆನಿಜ । ವರ್ಗವೆನಿಸುವನಿಂನವರಸಂ । ಸರ್ಗವನುಭವಭವಸಹಸ್ರದೊಳೀವುದೊಲಿದೆಮಗೆ ॥ ೧೭ ॥ ಜಯನಮೋಸ್ತುಮಹಾಮಹಿಮ್ನೇ । ಜಯನಮೋಸ್ತುಸಹಸ್ರನಾಮ್ನೇ । ಜಯನಮೋಸ್ತುನಮೋಸ್ತುವಿಗತಾವದ್ಯನಿಜಧಾಮ್ನೇ ॥ ಜಯನಮೋನಿರ್ಗಮಿತಸೀಮ್ನೇ । ಜಯನಮೋನಿಸ್ತೀರ್ಣಸಾಮ್ನೇ । ಜಯನಮೋಸ್ತುನಮೋಸ್ತುನಿಜಭಕ್ತಾವಳಿಪ್ರೇಮ್ನೇ ॥ ೧೮ ॥ ಎನುತನಿಜಚರಣಾರವಿಂದದ । ಲನುಪಮರುಮ್ಮೆಯಿಕ್ಕಿಪುಳಕಿತ । ತನುಗಳೀಕ್ಷಿಸುತಿರಲುನಿಜಮಂಗಳಮುಖಾಂಬುಜವ ॥ ದನುಜಹರನಡಿಗಡಿಗೆಕರುಣಾ । ವನಧಿಯಲಿಮ್ಮನುಳುಗಿನೃಪನಂ । ದನರನಪ್ಪಿದನೊಲಿದುನಿಜಭಕ್ತಾನುರಾಗದಲಿ ॥ ೧೯ ॥ ನಡೆವುದೆಲೆಮಕ್ಕಳಿರನೀವೆಂ । ದೊಡೆಯನಾಜ್ಞಾಪಿಸುತಗರುಡನ । ನಡರಿದನುಪರಿಜನದಪರಮೋತ್ಸಹದರಹಿಮಿಗಲು ॥ ತಡೆಯದಂತರ್ಧಾನಗತಿವು । ಘ್ನಡಿವಸುರನರನಿಕರಜಯರವ । ದೊಡನೆಬಿಜಯಂಗೈದನಾನೃಪತನಯರೀಕ್ಷಿಸಲು ॥ ೨೦ ॥ ಬಳಿಕನೃಪನಂದನರುಸಾಗರ । ಸಲಿಲವನುಹೊರವಂಟುನೋಡಿದ । ರಿಳೆಯನಾದರಿಸಿದಮಹಾದ್ರುಮಗುಲ್ಮಲತೆಗಳನು ॥ ನೆಲನನದ್ದುವಪ್ರೋಲುಗಗನಾಂ । ಗಣಕೆಬೆಳೆದಿರೆಕಂಡುಕೋಪಾ । ನಳನನುಗುಳ್ದರುಗ್ರಮುಖನಾಸಾಗ್ರವಿವರದಲಿ ॥ ೨೧ ॥ ಹೆರನಹೆಣ್ಣಿಗೆಬಿಚ್ಚಿಳೆಯನಿದನಾ । ವರಿಸುತುಮಂತುರೆಬೆಳೆದಹೆಂ । ಮರನನಾಗಿಹುಬಳ್ಳಿಗಳನುರುಹಿತ್ತುನೆಂತಣಿಸಿ ॥ ಧರಣಿಸರಕೋಪಾಗ್ನಿಯಜನಂ । ಬು

ರುಹಭವನೀಕ್ಷಿಸುತಭುವನವ । ನುರುಹದಿರರೆಂದಿಳುಹನವನಿಗೆಮುನಿಸುರರುಸಹಿತ ॥ ೨೨ ॥ ಸಾಕುಸಾಕುರುಹದಿರಿವೃಕ್ಷಾ ।
ನೀಕವನುಪ್ರಮ್ಲೋಚೆಯೆಂಬಳು । ನೂಕಿದಳುಮುನಿವೀರ್ಯವನುತೆಗೆದಡವಿಗಲ್ಲಿಂದ ॥ ಈಕೆಬೆಳೆದಳುವೃಕ್ಷಕಂನಿಕೆ । ಲೋ
ಕದೊಳಗತಿಚೆಲುವೆವಧುವಹ । ಳೀಕೆನಿಮಗೆಂದಿತ್ತು ಸಂತವಿಸಿದನುನೃಪವರರ ॥ ೨೩ ॥ ಮದುವೆಯಾಗಿರಲಾನೃಪಾಲರಿ । ಗುದಿ
ಸಿದನುದಕ್ಷಾಖ್ಯನಾಕೆಯ । ಉದುಭವನನದನೇನನೆಂಬೆನುರಾಜ್ಯಸಂಪದವ ॥ ವಿಧಿತಭೋಗಂಗಳನುನಿರ್ಮಳ । ಹೃದಯರನು
ಭವಿಸುತ್ತ ಹರಿಪದ । ಪದುಮವನುಭಾವಿಸುತಸಲಹಿದರವನಿಮಂಡಲವ ॥ ೨೪ ॥ ಬಂದನಲ್ಲಿಗೆಸಕಲಸುರನರ । ವಂದ್ಯಪಾವನ
ಪಾದಕಮಲ । ದ್ವಂದ್ವವೆನಿಪಮುನೀಶ್ವರನುನಾರದನುನೃಪನೆಡೆಗೆ ॥ ಮಂದಿರಕೆಬರಲಿದಿರುಗೊಂಡಾ । ನಂದದಲಿಮೈಯಿಕ್ಕಿನೃಪ
ಕುಲ । ನಂದನರುಪತಿಕರಿಸಿದರುಸಚರಾಚರಪ್ರಭುವ ॥ ೨೫ ॥ ಅಹಹಧನ್ಯರಲಾಭವಾಂತರ । ವಿಹಿತಪುಣ್ಯವ್ರಾತಫಲಸಂ । ನ
ಹಿತವಾಯ್ತು ನಗಲ್ಲದಡೆನಿಂಮಡಿಗಳಾಗಮನ ॥ ಅಹುದೆಸಂಸಾರಾಬ್ಧಿತಪ್ತರ । ಗೃಹಕೆದೇವಜನಾರ್ದನಾನು । ಗ್ರಹವಿದೋ
ರೆಂತೆಂದುಕೊಂಡಾಡಿದರುಮುನಿಪತಿಯ ॥ ೨೬ ॥ ಇವೆಯಲಾಸಂಸಾರತಾಪಾ । ರ್ಣವನಿಮಜ್ಜಜನಪ್ರಬೋಧ । ಪ್ಲವಗಳತಿದು
ಸ್ತರಭವಾಂಧತಮಿಶ್ರ ಸಂತತಿಗೆ ॥ ರವಿಗಳಿವೆಯೆನುತಂಘ್ರಿಕಮಲದ । ಲವನಿಪರುಹೊರಳುತ್ತ ಭವತಾ । ಪವನುಪರಿಹರಿಸುತ್ತ
ಬಿಂನಹವಮಾಡಿದರುಮುನಿಗೆ ॥ ೨೭ ॥ ಗತಿಯಲಾನಿಂಮಡಿಗಳೀಭವ । ಪತಿತರಿಗೆನಮಗಂದುಲಕ್ಷ್ಮೀ । ಪತಿದಯಾನಿಧಿಕರುಣಿ
ಸಿದವಿಜ್ಞಾನದೃಷ್ಟಿಯಲಿ ॥ ಮತಿವಿಭೇದಭ್ರಾಂತಿವಿಷಯಾ । ರತಿಯುನ್ಮೈಲೆಬಿದ್ದುದೆಲೆಮುನಿ । ಪತಿಯೆಕರುಣಿಸೆನಲ್ಕೆನಗುತಿಂ
ತೆಂದನಾಮುನಿಪ ॥ ೨೮ ॥ ಆವುದೈಜನಿಸಿದ್ದುದಕೆಫಲ । ವಾವುದೈಬದುಕಿದ್ದುದಕೆಫಲ । ವಾವುದೈವಿಧ್ಯುಕ್ತಕರ್ಮಾಚರಣೆಗಳಿ
ಗೆಫಲ ॥ ಆವುದಾಯುಷ್ಯಕ್ಕೆಫಲವೇ । ಲಾವುದೈವಾಗ್ವೃತ್ತಿಗಳವಸು । ದೇವನಂದನಭಕುತಿಯಲ್ಲದೆಬೇರೆಫಲವೆಂದ ॥ ೨೯ ॥
ಫಲವಲಾವರ್ಣತ್ರಯುಕ್ತಿಯ । ಫಲವಲಾಸತ್ಕರ್ಮನಿಷ್ಠೆಗೆ । ಫಲವಲಾವೇದಾಂತದರ್ಥವಿಚಾರಸಂಸ್ಥಿತಿಗೆ ॥ ಫಲವಲಾವರಸಾಂ
ಖ್ಯಯೋಗಾ । ವಳಿಗಿದೇಶ್ವೈಕ್ಯಾರ್ಥವಿವೆಲಾ । ಜಲಜನಾಭನನಾಮಕೀರ್ತನವೆಂದನಾಮುನಿಪ ॥ ೩೦ ॥ ಉದಧಿಪರಿಯಂತಲ್ಲಪೆ
ಲ್ಲಾ । ನದಿಗಳಿಗೆಗತಿಯುಂಟೆಮತಿಭೇ । ದದಲಿಸಾರುವವೇದಶಾಸ್ತ್ರಪುರಾಣತತಿಗಳಿಗೆ ॥ ಪದುಮನಾಭನನುಳಿದುಬೇರಾ । ಸ್ಪದ
ವದಾವುದುತಿಳಿದುನೋಳ್ಪಡೆ । ಚಿದುಘನಾನಂದೈಕವಸ್ತುವೆಯಲ್ಲದಿಲ್ಲೆಂದ ॥ ೩೧ ॥ ಮರನಮೊದಲಿಂಗೆರೆದುದಕವಾ । ಮರನಘನ
ಶಾಖೋಪಶಾಖೋ । ತ್ಕರಗಳಿಗೆಸಂತುಷ್ಟಿಯನುಕೊಡುವಂತೆಹರಿಪದಕೆ ॥ ನರರುಮಾಡಿದಪೂಜೆಸಚರಾ । ಚರಶತಬ್ರಹ್ಮಾಂಡ
ಕೋಟಿಗೆ । ಪರಮತುಷ್ಟಿಯನೀವುದೆಂದನುಮುನಿನೃಪಾಲಂಗೆ ॥ ೩೨ ॥ ಗಗನದಲಿಗಗನವನುಹೊದ್ದದೆ । ಮುಗಿಲಕತ್ತಲೆತೋ
ರಿಮುಗುಳಾ । ಗಗನದೊಳಗಳಿವಂತೆಕಮಲಭವಾಂಡಕೋಟಿಗಳು ॥ ತ್ರಿಗುಣಮಯವೆನೆತೋರಿಕೆಡುವವು । ಮಗುಳೆಪರಮಾ
ತ್ಮನಲಿತಿಳಿದಂ । ದಗಧರನಲೀಲಾವಿಡಂಬವನರಿವರಾರೆಂದ ॥ ೩೩ ॥ ಕಾಯಶುದ್ಧಿಯಮಾಡಿಮನದಲಿ । ಮಾಯೆಯಿಲ್ಲದೆಭಜಿ
ಸುವುದುನಾ । ರಾಯಣನಪದಕಮಲಯುಗಳಪರಾಗವನುಬಿಡದೆ ॥ ರಾಯರಿರಬಳಿಕಾವುದೈನಿ । ಶ್ರೇಯಸಕ್ಕವಧರಿಸುವಡೆನಿ
ಜ । ಮಾಯೆಯರಸನಭಕುತಿಮುಕುತಿಗೆಮುಖ್ಯಪಥವೆಂದ ॥ ೩೪ ॥ ಭೂತದಯೆಯನುಮಾಡಿಭುವನ । ವ್ರಾತಪತಿಯಂಘ್ರಿ
ಯನುಭಜಿಸುವು । ದೋತುತದ್ಗುಣನಾಮಕೀರ್ತನವೆಂಬಪಥವಿಡಿದು ॥ ಸೇತುವಿದುಸಂಸಾರಶರಧಿಗೆ । ಮಾತುಹಲವರಲೇನು
ಫಲವಾ । ಭೂತದಯೆಯಿಂದಲ್ಲದಚ್ಯುತತುಷ್ಟಿಯಿಲ್ಲೆಂದ ॥ ೩೫ ॥ ರುದ್ರನುಪದೇಶಿಸಿದನುಡಿತಾ । ಭದ್ರವದುಸಂಸಾರವೆಂಬಸ ।
ಮುದ್ರವನುದಾಂಟುವಡೆಮುಖ್ಯೋಪಾಯವಿದುನಿಮಗೆ ॥ ಅದ್ರಿಧರನಂಘ್ರಿಯನುಮಾಯಾ । ನಿದ್ರೆಯಲಿಮೈಮರೆಯದಂತೆ ।
ಮುದ್ರಿತಾತ್ಮರುನೆನೆದುನೆರೆಸುಖಿಯಾಗಿನೀವೆಂದ ॥ ೩೬ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ.
ಎಂದಡಾಮುನಿಪನಪದಾಬ್ಜ । ದ್ವಂದದಲಿಮಣಿಮಕುಟನಿಕರವ । ಸಂದಣಿಸಿಚಾಚಿದರುಸಕಲಧರಾತಳೇಶ್ವರರು ॥ ತಂದೆನಿಂಮ
ಡಿಯಿಂದಪರಮಾ । ನಂದಪದವಾಯ್ತೆಮಗೆನುತಮುನಿ । ವಂದ್ಯನನುಮಂನಿಸಿದರುಂನತಭಾವಭಕ್ತಿಯಲಿ ॥ ೩೭ ॥ ಬೀಳುಕೊ
ಟ್ಟನುಮುನಿಪನಾನೃಪ । ಮೌಳಿಗಳನೆಗಹುತ್ತ ಲಕ್ಷ್ಮೀ । ಲೋಲನನುಕೀರ್ತಿಸುತಬಿಜಯಂಗೈದನಂಬರಕೆ ॥ ಆಲಿಗಳಲನುಗ
ಮಿಸಿದರುಭೂ । ಪಾಲಕರುಬಳಿಕಖಿಳರಾಜ್ಯದ । ಪಾಲನೆಯನೊಲಿದಿರಿಸಿದರುನಿಜಪುತ್ರನಲಿಸಹಿತ ॥ ೩೮ ॥ ಬಳಿಕಪಡುವಣ
ಸಾಗರದತಡಿ । ಗಲಘುಭುಜಬಲರೈದಿದರುನಿ । ರ್ಮಳಮನೋಭಾವದಲಿನಿಂದರುಯೋಗನಿಷ್ಠೆಯಲಿ ॥ ನಳಿನನಾಭಪದಾಬ್ಜನ
ನುಹೃ । ಜ್ಜಲಜದಲಿಭಾವಿಸುತನಿಂದರು । ನೆಲೆಗೊಳಿಸಿತದ್ಭಾವಭಾವಿತಯೋಗರಾಜ್ಯದಲಿ ॥ ೩೯ ॥ ಹೇಳಿದೆನುನಿನಗಿಂತುಕು
ರುಕುಲ । ಮೌಳಿಮಣಿಯುತ್ಥಾನಪಾದನೃ । ಪಾಲಪುಣ್ಯಚರಿತ್ರವಂಶೋದ್ಭವನೃಪೋತ್ತಮರ ॥ ಪೀಳಿಗೆಯನಿದನೊಲಿದುಲ
ಕ್ಷ್ಮೀ । ಲೋಲಪದಯುಗಭಕ್ತಜನದವಿ । ಶಾಲಪುಣ್ಯಚರಿತ್ರವನುಸಂಕ್ಷೇಪದಿಂದೊಲಿದು ॥ ೪೦ ॥ ಧನ್ಯನಾದೆನುಮುನಿವರನೆ
ಕರು । ಣಾರ್ಣವನೆನಿಂಮಡಿಯಸೂಕ್ತಿಸು । ಧಾರ್ಣವದಲೋಲಾಡಿಗೆಲಿದೆನುಭವದಬೇಗೆಗಳ ॥ ಸಂನಿಹಿತನಾದೆನುಮುಕುಂದ
ಪ । ದೋಂನತಸ್ಥಾನದಲಿತಂನಿಂ । ಧನ್ಯರಾರುಕೃತಾರ್ಥರೆಂದೆರಗಿದರುಮುನಿಪನಿಗೆ ॥ ೪೧ ॥ ವಿದುರನಾಮೈತ್ರೇಯಮುನಿ

ಪನ । ಪದಯುಗವಬೀಳ್ಕೊಂಡುಹರಿಪದ । ಪದುಮವನುಪಲ್ಲಟಿಸದಂತರ್ಭಾವನಿಷ್ಠೆಯಲಿ ॥ ಸದಮಳನುಪಾಂಡವರುಕ
ರವ । ರುದಿತಸಹಜಪ್ರೇಮದಲಿಗಮಿ । ಸಿದನುಹರಿಪದಭಕ್ತಿಗುಣನಿಧಿಹಸ್ತಿನಾಪುರಕೆ ॥ ೪೨ ॥ ಇದುಪರಮಮಂಗಳಮಹೋ
ದಯ । ವಿದುರನಾರಾಯಣಪರಾಯಣ । ರುದಿತಪುಣ್ಯಚರಿತ್ರವಿದನೋದುವಮಹಾತ್ಮರಿಗೆ ॥ ಮುದದಲಿದನಾಲಿಸುವಪುಣ್ಯಾ
ಸ್ಪದರೆನಿಪಮರ್ತ್ಯರನುನೃಪಸಂ । ಪದವನೀವನುದೇವನಿತ್ಯಾತುಮನುನಿಜಸುಖವ ॥ ... ॥ ೪೩ ॥

ಅಂತು ಸಂಧಿ ೨೯ಕ್ಕಂ ಪದನು ೯೨೮ಕ್ಕೆ ಮಂಗಳಮಸ್ತು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಚತುರ್ಥಸ್ಕಂಧಸ್ಸಮಾಪ್ತಃ

ನಾಲ್ಕನೇ ಸ್ಕಂಧ ಸಂಪೂರ್ಣವು.

ಕನ್ನಡ ಭಾಗವತ ಪಂಚಮ ಸ್ಕಂಧ ಪ್ರಾರಂಭವು

ಸೂಚನೆ॥ ಧೀರವೀರನಶೇಷಗುಣಗಣಂ । ಭೀರನೊಪ್ಪಿದನಾಪ್ರಿಯವ್ರತ । ಧಾರುಣೀಪತಿರಾಜ್ಯದಲಿ
ನಿಜಯೋಗನಿಷ್ಠೆಯಲಿ ॥ ... ...

ಪದನು ॥ ಭೂಮಿಪತಿಕೇಳಾಪ್ರಿಯವ್ರತ । ನಾಮನಾಮನುತನೆಯನಖಿಳ । ಕ್ಷೇಮಕಾರಣಮೂರ್ತಿವಿಶ್ರುತಪುಣ್ಯಗು
ಕೀರ್ತಿ ॥ ಸೋಮಸಂನಿಭನಖಿಳತಾಪ । ಸ್ತೋಮತಪ್ತರಿಗಾತ್ಮಸುಖವಿ । ಶ್ರಾಮನೆಸದನುನಿಖಿಳವಿಷಯವಿರಾಗವರನಾದ ॥ ೧
ಸುರಮುನಿಪನುಪದೇಶದಲಿಮುರ । ಹರಪದಾಂಬುಜಭಕ್ತಿಸುಖಬಂ । ಧುರಮಹಾಸಾಂಬ್ರಾಜ್ಯಭೋಗೋಪೇತನಖಿಳದಲಿ
ವಿರತನಾದನಶೇಷರಾಜ್ಯದ । ಧುರವನೊಲ್ಲದೆತಂದೆಯಾಜ್ಞೆಯ । ನರಸುಮಗನುಲ್ಲಂಘಿಸಿದನೆರೆಯದೆನಿಜೇಚ್ಛೆಯಲಿ ॥ ೨ ॥ ಇ
ಲಖಿಳಮುನಿವರರುಸಹಿತಂ । ಬುರುಹಭವನೈತಂದನಲ್ಲಿಗೆ । ಸುರನರೋರುಗಗೀತಪುಣ್ಯಚರಿತ್ರನೊಲವಿನಲಿ ॥ ಅರಸಕೇಳ್ದ
ಲದಸಿದ್ಧೇ । ಶ್ವರರಸನಕಾದ್ಯಖಿಳಯೋಗೀ । ಶ್ವರರನಾರದಮುಖ್ಯರೋಲಗದೊಳಗೆನಡೆತಂದ ॥ ೩ ॥ ಮೆರೆವವಾಹನರಾ
ಹಂಸೆಯ । ಮಿರುಪಕಾಂತಿಯಚಾರುಹೇಮಾಂ । ಬುರುಹನಿಜನಿಭಗಾತ್ರಶೋಭೆಯಸಾರಸೌಭಗದ ॥ ಪರಮವಿಭವದಪಾ
ಮೇಷ್ಠ್ಯದ । ಸಿರಿಯನಿರುಗೆಯಲಖಿಳಭುವನೇ । ಶ್ವರನುಬಿಜಯಂಗೈದನಾನಿಜನಂದನನಹೊರೆಗೆ ॥ ೪ ॥ ಆಮಹಾವಿಭವದ
ಲೋಕಪಿ । ತಾಮಹನುಬರಲಿದಿರುಗೊಂಡುಸ । ನಾಮನೆರಗಿದನಂಘ್ರಿಯುಗಳದಲಾತ್ಮಜರುಸಹಿತ ॥ ಭೂಮಿಪತಿಮನುಮನ
ವಿನಖಿಳ । ಕ್ಷೇಮವನುಕೇಳುತ್ತನುಡಿದನು । ತಾಮರಸಭವನಾಪ್ರಿಯವ್ರತನೊಡನೆಕುಳ್ಳಿರ್ದು ॥ ೫ ॥ ಮಗನೆಮಡುವೆಯ
ನೊಲ್ಲದೇತ । ಕೈಕೊಗಡಿಹುವೆಗಾರ್ಹಸ್ಥ್ಯವನುಮರು । ಳುಗಳೆನಾವೆಲ್ಲವರುನೀನತಿಬುದ್ಧಿವಂತನಲ ॥ ಜಗಪುದರನಾಜ್ಞೆಯು
ನಾವೀ । ಜಗದಸೃಷ್ಟಿವಿಧಾನಕೃತ್ಯ । ಕೈಕೊಗದುಮತ್ತದನಾಚರಿಸದಿರಬಹುದೆಹೇಳೆಂದ ॥ ೬ ॥ ಒಡಲದಂಡಿಸಿಮುಕುತಿಸುಖ
ನು । ಪಡವೆನೆಂಬುದುಘೋರಯಾತನೆ । ಪಡುವಜೀವರಿಗಾಗದೇತಕೆಮುಕುತಿರಾಜೆಗಳಲಿ ॥ ಕಡುನಿರಾಹಾರದಲಿಸಲೆಸುಖ । ಗ
ಣವನುನೆರೆತೊರದುಸಿದ್ಧಿಯ । ಪತನಡೀಹಾವ್ರುಗಳುಮಾಡಿದಪಾಪವೇನೆಂದ ॥ ೭ ॥ ಚಿತ್ತಶುದ್ಧಿಗಳಿಲ್ಲದೀಜಲ । ವೃತ್ತಿಕೆಗಳ
ದೊಡಲತೊಳದುವಿ । ಮುಕ್ತಿಪಡದಡೆಕೇಳುಮಗನೆನಿರಂತರಾಯದಲಿ ॥ ನಿತ್ಯವಾಜಲದೊಳಗೆಮೀನಾ । ವೃತ್ತಿಕೆಗಳೊಳಗು
ಜೀವರ । ಮೊತ್ತಮುಕುತಿಯಪಡೆಯುವೇತಕೆತಂದೆಹೇಳೆಂದ ॥ ೮ ॥ ಮಡದಿಮನೆಮನವಾರ್ತೆಮಕ್ಕಳ । ಗಡಣಯೇನೊಯಿ
ಬರಿಯಂ । ದೊಡಲದ್ವೈಸಲೆಯೆಂಬಡಾತ್ಮಜ್ಞಾನಶೂನ್ಯರಿಗೆ ॥ ಬಿಡುವದೇಭವಬಂಧಕೆಲ್ಲರ । ಗಡಣಕಿದುವೇಬೀಜಕೊಂಬನು
ಕಡಿದುಬಿಸುಟರೆಬೇರುಮರನಂಕುರಿಸದಿರದೆಂದ ॥ ೯ ॥ ತಂನನಿಜವನುನೆರೆತಿಳದುನಾ । ಹಂಮಮತೆಯಂದುಳಿದುಸುಖಪರಿ
ಪೂರ್ಣನೆನಿಸುವದಲ್ಲದೀಮೋಗರೆಯುಮಮತೆಯಲಿ ॥ ಭಂನವಿದುಬಿಡಲರಿಯದಾತ್ಮನ । ನನ್ಯನದ್ವಯನಕ್ರಿಯನುಪರಿ । ಪೂನ

ನೇತರೊಳೊಂದದಮಳಜ್ಞಪ್ತಿಮಯನೆಂದ ||೧೦|| ತೊರದರೇನಾಹಂಮಮತೆಯಂ | ದರಿದವರುದೇಹದಲಿಮನದಲಿ | ಕೊರ
ದರಲ್ಲದೆತ್ರದಭಿಮಾನವನೆಲ್ಲಹುಸಿಯೆಂದು || ಇರಿವುದಾವುದುಸುರಗಿಯೋಮೇ | ಣೊರೆಯೊತಂನಿದಿರಂತರಂಗವ | ನರಿವರೈಸಂ
ಸಾರಪೊರಗಿಲ್ಲೆಂದನಬುಜಭವ ||೧೧|| ಹುತ್ತದಲಿವಿಷವಿಹುದೊಮೇಣಹಿ | ವಕ್ತ್ರದಲಿವಿಷವಿಹುದೊಹೊರಗಣ | ಪುತ್ರಮಿ
ತ್ರಕಳತ್ರಬಾಂಧವವರ್ಗದೊಳಗಿಹುದೊ || ಉತ್ತಮನೆಭವಬಂಧತಂನಯ | ಚಿತ್ತದೊಳಗಿಹುದೋವಿಚಾರಿಸ | ಲೆತ್ತಣದುವೈ
ರಾಗ್ಯನಿನಗೆಲೆಮಗನೆಹೇಳೆಂದ ||೧೨|| ಪ್ರಾರಬುಧಭೋಗವನುಗೆಲುವಡ | ದಾರವಶವೆಲೆಮಗನೆಕೈಟಭ | ವೈರಿಯಿಕ್ಕಿದ
ಗಂಟುಮುಕ್ತರುಸಹಿತಬಿಡಲರಿದು || ಹಾರುತಿಹುದವಸಾನಪರಿಯಂ | ತಾರನೆನುತವೆನೆಂನಧನ್ಯಶ | ರೀರದಂತೀಕ್ಷಿಸುವುದನಹಂ
ಮಮತೆಯಿಂದೆಂದ ||೧೩|| ತನುಸಮಾಹಿತವಾದಡೆನಗೀ | ತನುಸುದುಸ್ಥಿತವಾದಡೇನೀ | ತನುವನರಿದಾತ್ಮಂಗೆತನುವಿನಧರ್ಮ
ವೆಂತಹುದು || ಕನಸಿನಲಿನಾನತ್ವವನುಕಂ | ಡನುಭವಿಸಿದಂತಿದ್ದುಕಣ್ದೆರೆ | ದನುಭವಿಸುವನದೆಂತುಕೋರ್ಕೆಯನೆಂದನಬುಜ
ಭವ ||೧೪|| ದಾಹಕವೆನಿಪ್ಪಗ್ನಿದಾಹ್ಯಸ | ಮೂಹನೆಂತ್ತೆಂದೆಂಬುದದುಹುಸಿ | ದೇಹಕಾರಣಪ್ರಾಣಚೇತನಸಾಕ್ಷಿಯೆನಿಪಾತ್ಮ ||
ದೇಹವಹನೇಮಗನೆಮಾಯಾ | ಮೋಹದಲಿತದ್ಧರ್ಮಕರ್ಮಸ | ಮೂಹಸಂಗಿಯವೋಲುತೋರುತ್ತಿಹನುಕೇಳೆಂದ ||೧೫||
ಪಂಚಭೂತಾತ್ಮಕವಲಾಪ್ರ | ಪಂಚಕಪ್ರತಿಭಾವಿಸಿದರೊಳು | ಪಂಚಭೂತವಿಕಾರದಲಿಸಂಚರಿಸಿತೋರ್ಪೊಡಲ || ಸಂಚರಿಸಿ
ದಡೆಸಾಕ್ಷಿಚೇತನ | ಪಂಚವಿಂಶಕನಾತ್ಮನರಿದುವಿ | ಸಂಚಿಸುವನೈಮುಂನಿನಂತಿರೆಯೆಂದನಬುಜಭವ ||೧೬|| ಮೊದಲಸಾಧನ
ವಿದುಮುಮುಕ್ಷ | ತ್ವದಲಿಮೇಣಾವಿವೇಕದಭ್ಯಾ | ಸದಲಿರಕ್ತನಾದಂಗೆವಿಷಯಂಗಳಲಿವೈರಾಗ್ಯ || ವಿಧಿಸುವದುಹೊರನಲ್ಲನಿಜ
ಸುಖ | ಪದದಲನುದನುಭವಿಗೆವೈರಾ | ಗ್ಯದಲಿಫಲವೇನಖಿಳಭೂತದಯಾಪರರಿಗೆಂಬ ||೧೭|| ಮಗನೆಕೇಳರಿದಂದೆವಶವ |
ರ್ತಿಗಳಲಾತನುಕರಣನಿಕರವ | ತಗದುಸಂಕ್ಲೇಶಿಸುವನೇಧಿಟನಿಜವನರಿದವನು || ಜಗದುಪತಿಹರಿಯುಂತೆನಿಜಲೀ | ಲೆಗಳಲಾ
ಡುವೆನೊಲಿದಪರಿಯಲಿ | ಬಗವನರ್ಭಕನಂತೆನಿರಹಂಕಾರತೆಯಲೆಂದ ||೧೮|| ಬೆಳದಕೈದ್ಯಲಿಕಸನೆಗದಡದು | ಬಳಿಕಕೆ
ಡುವುದೆತತ್ವವಿದ್ಯೆಯು | ತಿಳಿವಿಕೆಯುಹುಸಿಯೆಂದುಕಂಡಡೆಹಾನಿಯೇತನಗೆ || ಹಳುವದಲಿಯಿದ್ದೇನುಧಿಟಮನೆ | ಯೊಳಗೆತಾನಿ
ದ್ದೇನುತನುವಿನ | ಬಳಿಯತೊಡಕಿಲ್ಲದಮಹಾತ್ಮಂಗೆಂದನಬುಜಭವ ||೧೯|| ಈವಿಷಯದಾರತಿಬಿಡದೆಕರ | ಣಾವಳಿಗಳೊ
ಡಗೂಡಿಮೇಣಾತ | ಪೋವನದಲಿದ್ದೇನುತಂನಯಮನೆಯಲಿದ್ದೇನು || ಭಾವಮಾತ್ರವೆಬಂಧಮೋಕ್ಷಗ | ಳಾವಲಂಬನವಲ್ಲ
ದುಳ್ಳದಂ | ತೀವಿಡಂಬನದಿಂದಫಲವೇನುಂಟುಹೇಳೆಂದ ||೨೦|| ತಾನಿರೆನೆಮೇಣಪ್ರಜೇಶ್ವರ | ರೇನರಿಯದಜ್ಞಾನಿಗಳವಿ |
ಜ್ಞಾನಶೂನ್ಯನೆನಿಂನಪಿತನೆಲೆಮಗನೆನಿಂನಂತೆ || ಜ್ಞಾನಿಗಳುಹಲರಿಂತುಟಖಿಳಫ | ಲಾನುರಾಗವನುಳಿದುನಡವರು | ದಾನವಾಂ
ತಕನಾಜ್ಞೆಯಲಿಲೋಕೈಕರಕ್ಷೆಯಲಿ ||೨೧|| ಚಿಂತೆಬೇಡೆಲೆಮಗನೆಲಕ್ಷ್ಮೀ | ಕಾಂತತುಷ್ಟಿಪ್ರದವಿದೆನಗ | ತ್ಯಂತಹಿತನಿಂ
ನ್ನಯ್ಯನಿಗೆನೆರೆಮಾಳ್ಪಶುಶ್ರೂಷೆ || ಸಂತವಿರುಸುಖಿಯಾಗುರಾಜ್ಯಾ | ನಂತರದಲಿವಿಮುಕ್ತನಹುದೆನು | ತಂತರಿಕ್ಷವನಡರಿದನು
ಸಂತವಿಸಿನೃಪಸುತನ ||೨೨|| ನಳಿನಭವನಾಜ್ಞೆಯನುತಂನಯ | ತಲೆಯಲಾಂತುಸಮಸ್ತಧರಣೀ | ತಳದರಾಜ್ಯದಧುರವ
ನಂಗೀಕರಿಸಿಪಿತನೊಲವ || ಸಲಿಸಿನಾರದಮುನಿಮತದಲ | ಸ್ಖಲಿತಸಾಹಸನೊಪ್ಪಿದನುವರ | ಲಲನೆಬರ್ಹಿಸ್ಮತಿಯವೈವಾಹಿಕವಿ
ಧಾನದಲಿ ||೨೩|| ಪರಮಪುಣ್ಯಚರಿತ್ರನೆಸೆದನು | ಪರಮಧಾರ್ಮಿಕನಾಪ್ರಿಯವ್ರತ | ಧರಣಿಪಾಲಕನಮರರಾಜಸಮಾನತೇ
ಜದಲಿ || ಹರಿಪರಾಯಣರೆನಿಸಿಲೋಕೋ | ತ್ತರಮಹಾವಿಭವದಲಿಧರಣೀ | ಸುರರಮತದಲಿಸಲಹಿದನುನಿಜಯೋಗದಲಿಧರೆ
ಯ ||೨೪|| ಅರಸಕೇಳೇನರಿದುವಿಶ್ವಂ | ಭರನೊಲಿದಮರ್ತ್ಯರಿಗೆರಾತ್ರಿಯ | ನಿರದೆದಿನವನುಮಾಡಲುದ್ಯೋಗಿಸಿದನವನೀಶ |
ನರರಿಗರ್ಧಾಯುಷ್ಯನಿದ್ರೆಯು | ಪರದಲಂಧತಮಿಸ್ರದಲಿನೆರೆ | ಕರಗಿಹೋಯ್ತುಕಟಕಟನಿಷ್ಫಲವಾಯ್ತಲಾಯೆಂದ ||೨೫||
ನರಜನುಮವತಿದುರ್ಲಭವಲಾ | ಧರೆಯುವಿದುಶತಕೋಟಿಜನ್ಮಂ | ತರಕೆದೊರಕೊದಾದಡೆಂತಧ್ರುವವೆನಿಪ್ಪೊಡಲ || ಪದಿಪರಿ
ಯಗೃಹಕೃತ್ಯದಲಿಪರಿ | ಹರಿಸಿದಿನವನುರಾತ್ರಿಯನುಮ್ಮ | ಮರಸುನೂಕಿದಡೇನುಫಲವಾಯ್ತೆಂದನವನೀಶ ||೨೬|| ನಳಿನ
ಸಖನಿಚ್ಛೆಯಲಿಬರೆಕ | ತ್ತಲೆಯಲಾಮೇಣಿದಕೆಮೇರುವ | ಬಳಸಿಮೇಣಿಚ್ಛೆಯಲಿಬರೆಕತ್ತಲೆಯದಾದೆಸೆಗೆ || ಬಳಿಸಲಿಸಿಸತ್ಕ
ರ್ಮನಿಷ್ಠರ | ಬಳಲಿಸೂಡನುಕಾಣುತಿಹುದೆನ | ಗೆಲವುಧರ್ಮವಿದಲ್ಲರಥವನುಹೂಡುಬೇಗೆಂದ ||೨೭|| ಎಂದುತೇಜೋ
ಮಯನೆನಿಪಸು | ಸ್ಯಂದನವನಿದನೇರಿನೃಪನರ | ವಿಂದಸಖನಲಿಹರುಡಿಸುವವೋಲ್ಮೇರುಶೈಲವನು || ಬಂದೆಸೆಗೆರವಿಬರಲುತಾ
ಪ್ಪ | ತ್ತೊಂದೆಸೆಗೆರವಿಪ್ರಭೆಗೆಸರಿಮಿಗಿ | ಲೆಂದೆನಲುತಿರುಗಿದನುತೀವ್ರತರಪ್ರಭಾವದಲಿ ||೨೮|| ಏಳುದಿನಪರಿಯಂತಧರ
ಣೀ | ಪಾಲಕುಲಕೌಸ್ತುಭನುಲಕ್ಷ್ಮೀ | ಲೋಲನೊಲವಿನದಾಸನಮರಾದ್ರಿಯನುಬಲಗೊಂಡು || ಕಾಲನನುಜವಗೆಡಿಸಿತಿರು
ಗಿದ | ದೇಳುಸಾವಿರಕಲ್ಪನೆಗಳಾ | ಗಾಲಿಗಳಧಟ್ಟಣೆಯಲಾದವುನೃಪತಿಕೇಳೆಂದ ||೨೯|| ಆನೃಪೋತ್ತಮನಿಂದಮುನ್ನಂ |

ಬೋನಿಧಿಗಳೇಳಲ್ಲಮೇಣಿಃ । ಸ್ಥಾನಭೇದವಿದಿಲ್ಲಸಪ್ತದ್ವೀಪಸಂಜ್ಞಿತಪ ।। ಏನನೆಂಬೆನುಹರಿಪದಾಬ್ಜ । ಧ್ಯಾನಲಬ್ಧಗುಣಪ್ರಭಾವರಿ । ಗೇನರಿದುತದ್ರೂಪರಾಗಿಹರೆಂದನಾಮುನಿಪ ।।೩೦।। ಕ್ಷಿತಿಪಕೇಳ್ಬೈವಿಶ್ವಕರ್ಮನ । ಸುತೆಮದುವೆಯಾಗಿರಲುಬರ್ಹಿಷ್ಮತಿಯೆನಿಪವಧುವಾನೃಪೋತ್ತಮಗಾತ್ಮಸಮರೆನಿಪ ।। ಸುತರುಸಂಭವಿಸಿದರುಗುಣಗಣ । ಯುತರುದಶಸಂಖ್ಯೆಯಲಿಪುತ್ರ । ತ್ರಿತಯಮತ್ತೊಬ್ಬಳಲಿಜನಿಸಿದರತುಳಬಲಯುತರು ।।೩೧।। ದಶಕದೊಳಗಾಗ್ನೀಂದ್ರಹಿರಿಯನು । ಪೆಸರಿಸಿದನದರೊಳಗೆಮೂವರು । ವಿಷಯನಿಸ್ಪೃಹರಾದರಾತ್ಮಜ್ಞಾನದೃಷ್ಟಿಯಲಿ ।। ಅಸಮವೀರನುಕಲಿಸೆನಾಮನು । ಶಿಷುವಸನಸಂಜ್ಞಿತರುಮತ್ತೀ । ಶಿವದನೆಗುತ್ತಮನುತಾಪಸರೈವತಾಖ್ಯಯರು ।। ೩೨ ।। ಇವರುಮೂವರುಮನುಗಳೆನಿಸುವ । ರವನಿಯಲಿಸಂಪಂನವಿಕ್ರಮ । ರಿವರಚರಿತವನೆರದಪೆನುಕೇಳೆಲೆಮಹೀಪತಿಯೆ ।। ಭುವನಪತಿಬಳಿಕಖಿಳಸತ್ಕ । ರ್ಮವನುಫಲನಿಸ್ಪೃಹತೆಯಲಿಸಂ । ಗವನುಳಿದುಪರಮೇಶ್ವರಾರ್ಪಿತನಾಗಿವಿರಚಿಸಿದ ।।೩೩।। ಸರ್ಬಲೋಕನಮಸ್ಕೃತನುಜಿತ । ಗರ್ಭನೆನಿಸಿಯಥೋಕ್ತಕರ್ಮೋದ । ಊರ್ಬಿಯನುರಕ್ಷಿಸಿದನಕ್ಷಯಕೀರ್ತಿಗುಣನಿಧಿ ।। ನಿರ್ಬಹಿಸಿದನುವರುಷಹನ್ನೊಂ । ದರ್ಬುದವನಾತ್ಮೇಚ್ಛೆಯಿಂದವೆ । ಪರ್ಬತಪ್ರತಿಮಾನನೆಸದನುರಾಜ್ಯಭೋಗದಲಿ ।।೩೪।। ದ್ವೀಪವೇಳರೊಳಾತ್ಮಭವರನು । ಭೂಪನಿರಿಸಿದನಂದುನಿಜಕುಲ । ದೀಪರನುಜಂಭಾದಿಗಳೊಳಗ್ನೀಂದ್ರಮೊದಲಾದ ।। ಅಪರಮಮುನಿನಾರದನಪೂ । ರ್ವೋಪದೇಶದೊಳಖಿಳವಿಷಯಕ । ಳಾಪನಿಸ್ಪೃಹನಾಗಿನಿಂದನುಯೋಗರಾಜ್ಯದಲಿ ।।೩೫।। ಇತರರಾಗವಿರಾಗವೆರಡರ । ಗತಿಯಗುಣದೋಷಾವಲಂಬನ । ಮತಿವಿಭೇದವನುಳಿದುತತ್ವಜ್ಞಾನನಿಷ್ಠೆಯಲಿ ।। ಕ್ಷಿತಿಪನೋಲಾಡುತ್ತವಸ್ಥಾ । ತ್ರಿತಯಸಾಕ್ಷಿಯೆನಿಪ್ಪತುರ್ಯವ । ನತಿಗಮಿಸಿನಿತ್ಯಾತ್ಮಸುಖಮಯನಾದನವನೀಶ ।। ... ... ।।೩೬।।

ಪ್ರಥಮಸಂಧಿ ಸಮಾಪ್ತ ಮಂಗಳಮಸ್ತು.

ಎರಡನೆಯ ಸಂಧಿ

ಸೂಚನೆ ।। ಪಾಲಿಸಿದನಾಗ್ನೀಂದ್ರಧರಣೀ । ಪಾಲಕನುಧರ್ಮದಲಿಧರೆಯನು । ಶೀಲವಂತರದೇವನಾತ್ಮ
ಸಹೋದರರಸಹಿತ ।। ... ...

ಪದನು ।। ಅರಸಕೇಳಾಗ್ನೀಂದ್ರನಾದನು । ಧರಣಿಪತಿಬಳಿಕಾಪ್ರಿಯವ್ರತ । ವರತನಯನರಸಾಗಿಜಂಬೂದ್ವೀಪಮೇದಿನಿಗೆ ।। ಅರಸನಾಪ್ಲಕ್ಷಾಖ್ಯತದನಂ । ತರಮಹಾದ್ವೀಪಕ್ಕೆತದನಂ । ತರನುನಿಲಲಂದಿರ್ದಜಿಹ್ಮನೃಪಾಲನೋವಿನಲಿ ।। ೧ ।। ವಿಧಿತತದನಂತರಕುಶದ್ವೀ । ಪದಲಿತದನಂತರನುಭೂಪಾಂ । ಗದಲಿನಿಂದನುಯಜ್ಞಬಾಹುಹಿರಣ್ಯರೇತಸನು ।। ಅದರಿನಿಚ್ಛೆಯಬಹಳಭೂಭಾ । ಗದಲಿಶಾಖಾಖ್ಯದಲಿಕ್ರೌಂಚಾ । ಖ್ಯದಲಿಘೃತಪೃಷ್ಠಾಂಕನಿರಲಾದ್ವೀಪಪತಿಯಾಗಿ ।।೨।। ಭೂತಳಾಧಿಪಕೇಳುವರಮೇ । ಧಾತಿಥಿಯೆನಿಪ್ಪಾತನಾದ್ವೀ । ಪಾತಿಶಯಶಾಲ್ಮಲಿಗೆಪತಿಪುಷ್ಕರವೆನಿಪ್ಪದಕೆ ।। ವೀತಿಹೋತ್ರನುವಿಭುವೆನಲುವಿ । ಖ್ಯಾತರಾದರಲಾಪ್ರಿಯವ್ರತ । ಜಾತರೆಸೆದರುಸಪ್ತಭೂಭಾಗಾಧಿಪತ್ಯದಲಿ ।।೩।। ಹಿರಿಯಮಗನಾಗ್ನೀಂದ್ರನಂಗೀ । ಕರಿಸಿದನುಪಿತಲೋಕವನದಲಿ । ಚರಿಸಿದನುತಪವನುಸರೋರುಹಸಂಭವನನೋಡಿ ।। ಇರಲುತದಭಿಪ್ರಾಯವನುಸರ । ಸಿರುಹಸಂಭವನೋಲಗದಲೊ । ಪ್ಸಿರಲುಪಾಡುವವರವನಿತೆಗಿಂತೆಂದನಪ್ಸರೆಗೆ ।। ೪ ।। ಮಗಳೆಪೋಗಾಗ್ನೀಂಧ್ರಭೂಪನ । ತಗಹತೆಗಸುಲತಾಂಗಿನಿಂನನು । ಮಿಗುವವನಿತೆಯರಿಲ್ಲರೂಪುಗುಣಪ್ರಭಾವದಲಿ ।। ಬಗೆಯಬಯಕೆಯನೀವುದೆನೆಕೈ । ಮುಗಿದುದೇವರಚಿತ್ತವೃತ್ತಿಗೆ । ಸೊಗಸನೀವೆನೆನುತ್ತಬಂದಳುನೃಪನಸಂನಿಧಿಗೆ ।।೫।। ಇಳಿದಳವನಿಗೆದೇವಲೋಕದ । ಚೆಲುವಿಕೆಯಸೌಭಾಗ್ಯಲಕ್ಷ್ಮಿಯೆಯಿಳಿವವೊಲುನೃಪಪೂರ್ವಚಿತ್ತಿಯೆನಿಪ್ಪವರವನಿತೆ ।। ಸುಳಿದಳಾನೃಪನಾಶ್ರಮದವನ । ದೊಳಗೆಭೂಪನತಪದಸಿದ್ಧಿಯೆ । ಸುಳಿವವೊಲೊಡಲಿಟ್ಟದಿವ್ಯಾಂಗನೆಯವೇಷದಲಿ ।। ೬ ।। ಸೋಕಿದನಿಲನನಂದಗೆಡಿಸಿದ । ಳಾಕೃತಿಯಪರಿಮಳದಲಂಗನೆ । ಪೂತನಾದಪುಗಿಳಿಗಳಬಳಿಯಕಳರವಂಗಳಲಿ ।। ನಾಕವನಿತೆಯನಯನಕಾಂತಿನಿ । ರಾಕುಳಸೆಹರಿಣೀಕುಳವನಿಂ । ತಾಕರಿಸಿದಳುಚಾರುವನಲಕ್ಷ್ಮಿಯನುಚಪಲಾಕ್ಷಿ ।। ೭ ।।

ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ.

ಒಡದಳಬುಜದಲಕ್ಷ್ಮಿಯನುನ । ಕಿದಳುಕರಿಕರಶೋಭೆಯನುಮಿ । ರಿದಳುಶೈಲನಿತಂಬವನುನವಕೇತಕೀದಳವ ।। ಕದಳಿಗಳನಾಕ್ರಮಿಸಿತಳಿರ್ಗಳ । ಮದವನಪಹರಿಸುತ್ತಕುಂದದ । ಮುಗುಳುಗಳನೇಡಿಸುತನಗುತ್ಯೆತಂದಳಬುಜಾಕ್ಷಿ ।। ೮ ।। ಎರಡುಬರಿಕೈಗಳಲಿಕಾಮಾಂ । ಧರನುಕಂಗೆಡಿಸುವಪಾಹಾಮದ । ಕರಿಯೊದ್ವೀಪದದ್ವೀಪವೋಮದನನಮತಂಗಜವೊ ।। ಉರದಕುಂಭಸ್ಥಳದಪೋಸವಿ । ಕ್ಕರಿಯೆಪಟುವಿಟಷ್ಟದಯವೇಹನ । ವತಿಯೊಯೆನಲ್ಕೈತಂದಳಂಗನೆನೃಪನಸಂನಿಧಿಗೆ ।। ೯ ।। ಭೂರಿಭೂಷಣನೂಪುರಝುಣ । ತ್ಕಾರವನುಕೇಳುತ್ತಮೆಲ್ಲನೆ । ಧಾರುಣೀಪತಿಕಣ್ದೆರೆದುಮುಂದಿರ್ದಕಾಮಿನಿಯ ।। ಚಾರುರೂಪವ

ಕಂಡುಕಾಮನ । ಕೊರಲಗುಗೊಂಡಂಗಜನಪರಿ । ಮಾರಜಧಿದೇವತೆಯೊಡನೆಜಡನಾಗುತ್ತಿಂತೆಂದ ॥ ೧೦ ॥ ಆರುನೀನೆಲೆಮುನಿಪಘನಕಾಂ । ತಾರನಲಿನಿನಗೇನುಕಾರ್ಯವ । ದಾರಮಗಳೂರಾವುದೇತಕೆಬಂದೆನೀನೆಡಕೆ ॥ ಭೂರಿಮಾಯಾನ್ವಿಭವಜಸಾ । ಕಾರವೋನೀನಿರವುಲೋಕದ । ಲಾರಪರಿಯಲ್ಲಿತಿವಿಚಿತ್ರವಿದೆಂದನವನೀಶ ॥ ೧೧ ॥ ಬಿಲ್ಲುಗಳವೇಕೆರಡುತ್ರೆಬ್ಬುಗ । ಳಲ್ಲಿಕೂರಂಬುಗಳೆರಡುಕಣ್ಣೆ । ಯಿಲ್ಲವವುಗರಿಗಟ್ಟುವರೆಮೊನೆಯುಂಬಿನಿದ್ದೆಸೆಗೆ ॥ ಕೊಲ್ಲದಾರನುತಾಕಿಡಡೆಮುನಿ । ವಲ್ಲಭನೆತಂನಖಿಳಭಾರವಿ । ದೆಲ್ಲನಿಂನಡನಾಥನನುಕೈಗಾಯಬೇಕೆಂದ ॥ ೧೨ ॥ ಅರಿವರುನಿಜಶಿಷ್ಯಜನಪರಿ । ವಾರಕೈವಾರಿಸುವುದಾಶ್ರುತಿ । ಸಾರಶರಹಸ್ಯವನುಪಾಡುವರಾರುತಾನಿವರು ॥ ಚಾರುಕಬಳ್ಳೋದ್ಗತಸುಮನೋ । ಧಾರೆಗಳಬಳಸಲುವಸೇವಕ । ರಾರುಮುನಿಕುಲವಂದ್ಯಮನದಂತಸ್ಥವೇನೆಂದ ॥ ೧೩ ॥ ಆಡಲಂಮೆನುನಿಂದರವಕೆ । ಗೋರ್ಡುಗಳಕಮನಿಯ್ಯಾಕೆಯನಿದ । ನೋಡಿದವರೆದೆಬಿರಿವುತಿದೆತಾಗಿದಡದೇನಹುದೊ ॥ ಕೂಡೆಮುತ್ತಿದಕೆಸರುಪರಿಮಳ । ತೀಡುತಿದೆಲಾದೆಸೆದೆಸೆಗೆಪೊಸ । ನಾಡಪರಿವಿಡಿಪರಮಮುನಿಪತಿಪೇಳದೇನೆಂದ ॥ ೧೪ ॥ ತೀವಿಕೊಂಡಿಹುದೇನುಕೋಡ್ಗಳೊ । ನಾವಿದನುಕಂಡರಿಯೆವೆತ್ತಿದ । ಜೀವಹೋನುವನೋಡದೀಬಡವನಲಿಬಲುಮೊರೆಯ ॥ ಭಾವಿಸುವಡಾಧಾರಬಲವುಂ । ಟೋವೊಮರದೆನುಮರದೆನರಿಯದೆ । ತಾವುತವಣೆಯಗುರುಲಘುತ್ವವನೆಂದನವನೀಶ ॥ ೧೫ ॥ ಆವದೇಶದವಲ್ಕಲಂಗಳು । ದಾವದೇಶದಬರ್ಹಿಗಳುತಾ । ನಾವದೇಶದಲುಳ್ಳವೇಖಲೆಹೇಳುಹೊಸಪರಿಯ ॥ ಆವದೇಶದಋಷಿಯೊನೀನಿಹ । ಠಾವಪೇಳೆಲೆಮುನಿಪತಂನೆಯ । ಭಾವನೋಹನಮಾಯ್ತುದಕೆನೆಚ್ಚಿದೆನುತಾನೆಂದ ॥ ೧೬ ॥ ಮನಕೆಬಂದುದುನಿಂನತಪವಿದು । ತನುವಿನಾಯಸವಿಲ್ಲಕಂಡವ । ರೆನಗೆತನಗೆಂದರ್ಥಿಸುವರಜ್ಞಾನಿಗಳುಸಹಿತ ॥ ಮುನಿಪತಂನನುಕೂಡಿಕೊಳ್ಳೀ । ಘನತಪೋವ್ರತನಿಷ್ಠೆಗಾವುದು । ತನಗೆವಿಧಿಕರ್ತವ್ಯವೆಂಬುದಕರುಣಿಸೂದೆಂದ ॥ ೧೭ ॥ ನುಡಿಯುತಿದೆಹಂಸೆಗಳುನಿಂನಯ । ನುಡಿಯಕೇಳನುತಂನಕಿವಿಗಳು । ಕುಡಿತೆಯಲಿಸುರಿಸುಧೆಯನಡಗಲಿತಂನತನುತಾಪ ॥ ಕಡೆಗಣಿಸದಿರುಮುನಿಪನಿಂನಯ । ನಡೆಯಿದೆಂನಯತಪಕೆವಿಘ್ನವ । ನೊಡರಿಸುತ್ತಿದೆಹೊತ್ತುಗಳೆಯದಿರೆಂದನವನೀಶ ॥ ೧೮ ॥ ಮೃದುವದನಗಂಧವನುತುಂಬಿಗ । ಳದಿರುಗೊಳುತಿದೆತಂನವೊಲುನಿಜ । ಪದುಮವನಗಂಧವನುಸ್ಮರಿಸದೇಕಚಿತ್ತದಲಿ ॥ ಒದೆದುಬಿಸುಡದಿರಾಶ್ರಿತರನೆಲೆ । ಸದಮಳನೆಸಂಪಂನಕರುಣಾ । ಹೃದಯರಿಗೆಪರಹಿತವಲಾಕರ್ತವ್ಯತರವೆಂದ ॥ ೧೯ ॥ ಸಾಕಿಕೇಳೆಲೆಮುನಿಪನಿಂನಾ । ಲೋಕನವಿದೆಂನಂತರಂಗವ । ನೋಕರಿಸುತಿದೆನಿಜತಪಸ್ಸಾಮರ್ಥ್ಯವೇನರಿದೊ ॥ ಏಕವಾಸದಲಿರದಡೆಂನನು । ನೊಕಲರಿಯದುದಿನವನೊಂದನು । ಲೋಕದಲಿಸತ್ಸಂಗವತಿದುರ್ಲಭವಲಾಯೆಂದ ॥ ೨೦ ॥ ಎಂದುಕಾಮಾತುರತೆಯಲಿನೃಪ । ನಂದನನುಮರುಳಾಗಿಬಹುವಿಧ । ದಿಂದಸಂಕಲ್ಪಿಸಿಸರೋರುಹಮುಖಿಯರೂಪವನು ॥ ಸಂದನಬಲೆಯವಶಕೆಬಳಿಕಾ । ಯಿಂದುಮುಖಿತದ್ರೂಪಗುಣಗಳಿ । ಗಂದುತದ್ವಶೆಯಾದಳಾಯ್ತುನುವಾಡವಿಬ್ಬರಿಗೆ ॥ ೨೧ ॥ ಕ್ಷಿತಿಪನಿಂತಪ್ಸರೆಯಲಯುತಾ । ಯುತವರುಷಪರ್ಯಂತಕೂಡಿ । ದ್ದತುಳಬಲನುಪಭೋಗಿಸಿದನೀಲಕ್ಷಯೋಜನದ ॥ ಕ್ಷಿತಿಯಸುಖಭೋಗಂಗಳನುಸಂ । ಮತಸಮಗ್ರೈಶ್ವರ್ಯದಲಿವರ । ಸುತರನುತ್ಪಾದಿಸಿದನಾತ್ಮಸಮಾನವಿಕ್ರಮರ ॥ ೨೨ ॥ ನಾಭಿಮುಖ್ಯರನಾತ್ಮಭವರವ । ರಾಭನಲಿಕಿಂಪುರುಷಹರಿವರು । ಷಾಭಿಧಾನೆಯಿಳಾವೃತರುರಮ್ಯಕಹಿರಣ್ಮಯರು ॥ ಶೋಭಿಸುವರವನಿಯಲಿವೈರಿಮ । ದೇಭಕಂಟಕರವರುನ್ವೈರಿ । ಕ್ಷೋಭಕರುಭದ್ರಾಶ್ವಸಂಜ್ಞಿತಕೇತುಮಾಲಕರು ॥ ೨೩ ॥ ಸುರವನಿತೆಸುತಸಂಭವಾನಂ । ತರದಲವರಿಗೆಕಾಯಬಲವನು । ಕರುಣಿಸಿದಳೈದಿದಳುಬಳಿಕಮಹೇಂದ್ರನೋಲಗಕೆ ॥ ಧರಣಿಪತಿತದ್ವಿರಹದುಃಖಾ । ತುರನುತತ್ಸಾಧನವೆನಿಪ್ಪ । ಧ್ವರವವಿರಚಿಸಿಸುರವಧೂಸಾಲೋಕ್ಯವನುಪಡೆದ ॥ ೨೪ ॥ ವರುಷಪತಿಗಳುಬಳಿಕತಂದೆಯ । ಮರಣಸಮನಂತರದಲೆಸೆದರು । ಧರೆಯನವಖಂಡವನುತಂಮೊಳಗೇಕಮತದಲ್ಲಿ ॥ ಸ್ಥಿರವೆನಲುಸಲಹಿದರುಪೃಥ್ವೀ । ಶ್ವರರುಪುಣ್ಯಚರಿತ್ರರಚ್ಯುತ । ಚರಣಶರಣರುನಿಕಲಧರ್ಮಪಥೈಕರಕ್ಷಕರು ॥ ೨೫ ॥ ಪುತ್ರಕಾಮೇಷ್ಟಿಯನುನಾಭಿನೃ । ಪೋತ್ತಮನುಮಾಡಿದನುಬಳಿಕಾ । ಮತ್ತಕಾಶಿನಿಮೇರುದೇವಿಯೆನಿಪ್ಪಸತಿಸಹಿತ ॥ ಋತ್ವಿಜರುಋಷಿವರರುನಿರ್ಮಳ । ಚಿತ್ತವೃತ್ತಿಯಲಾಮುಕುಂದನ । ಮೂರ್ತಿಯನುಸೆರೆವಿಡಿದುಮಂತ್ರಿಸಿದರುಮಹಾಹುತಿಯ ॥ ೨೬ ॥ ಏನನೆಂಬೆನುರುತ್ವಿಜರುಮಂ । ತ್ರಾನುಭಾವದಸಿದ್ಧಿಯನುಯಜ । ಮಾನನಂತಃಶುದ್ಧಿಯನುಹರಹರಮಹಾದೇವ ॥ ಧ್ಯಾನಮಂಗಳದಿವ್ಯಮೂರ್ತಿವಿ । ಧಾನವನುತೋರಿಸಿದನೊಲಿದಾ । ದಾನವಾಂತಕನಖಿಳಸುರನರನಿಕರಕೈಮುಗಿಯೆ ॥ ೨೭ ॥ ಹಾರಕುಂಡಲಮಕುಟಮಣಿಕೇ । ಯೂರಕಂಕಣಕೌಸ್ತುಭದ್ಯುತಿ । ಚಾರುವಕ್ಷಸ್ಥಳದವರಸಿರಿವತ್ಸಲಾಂಛನದ ॥ ವೀರಮುದ್ರಿಕೆಗಳಕರೋಗ್ರೋ । ದಾರದಿವ್ಯಾಯುಧಗಳಲಿವರ । ವಾರಿಜದಬಳಗೈಯ್ಯಲಸುರಾಂತಕನುರಂಜಿಸಿದ ॥ ನೀಲಮೇಘಚ್ಛವಿಯದೀಪ್ತಿವಿ । ಶಾಲಭಾಳದಕುಂತಳದವನ । ಮಾಲೆಗಳಮಂದಸ್ಮಿತೋದ್ಭಾಸಿತಮುಖಾಂಬುಜದ ॥ ಭ್ರೂಲತೆಯಚಲಕಮಲದಳಸುವಿ । ಶಾಲನೇತ್ರದದಂತಪಂಕ್ತಿಯ । ಘಾಳದಧರಾರುಣಿಮೆರೆಯೆರಂಜಿಸಿದನಸುರಾರಿ ॥ ೨೮ ॥ ಪೀತಕೌಶೇಯಾಂಬರದಪರಿ । ಪೀತಮಣಿಮುಖಚಿಯನೂಪುರ । ಜಾತಶೋಭೆಯಚರಣನಖಶಶಿಮಂಡಲಪ್ರಭೆಯ ॥ ಧ್ಯಾತೃಹೃದ

ಯತವಿಸ್ಫುರವಿಯನು | ಭೂತಭುವನದಕರ್ತೃವನುಸ | ರ್ವಾತಿಶಯಸುಂದರದನಿಧಿಯನುಕಂಡುದಖಿಳಜನ || ೩೦ || ಹೀನಧ ನರಿದಿರಾಗಿಬಹಳನಿ | ಧಾನವನುಕಂಡಂದದಲಿಯಜ | ಮಾನಸಹಿತಾಋತ್ವಿಜರುಕಾಣುತ್ತತವಕವಗೆ || ದಾನವಾಂತಕನಂಘ್ರಿಕ ಮಲವ | ನೇನನೆಂಬೆನುಮುಸುಕಿದರುಪರಿ | ವೀನವಾಗ್ವೃತ್ತಿಗಳುಭಯರಸಭರಿತಗಾತ್ರದಲಿ || ೩೧ || ಜಯನಮೋಸ್ತುನ ಮೋಸ್ತುಭುವನಾ | ಶ್ರಯನಮೋಸ್ತುನಮೋಸ್ತುಲಕ್ಷ್ಮೀ | ಪ್ರಿಯನಮೋಸ್ತುನಮೋಸ್ತುನಾಮತ್ರಯಜಗತ್ರಯನೆ || ಜಯ ನಮೋಸ್ತುನಮೋಸ್ತುಭಕ್ತಾ | ಶ್ರಯನಮೋಸ್ತುನಮೋಸ್ತುದುರಿತ | ಕ್ಷಯನಮೋಸ್ತುನಮೋಸ್ತುಯೆನುತ್ತೆರಗಿದುದುಬುಧನಿವ ಹ || ೩೨ || ದೇವನಿಂಮಡಿಯಂಘ್ರಿಕಮಲಯು | ಗಾವಲೋಕನಭಾಗ್ಯವಿದುನಮ | ಗಾವಜನ್ಮಾಂತರಸಹಸ್ರಾರ್ಜಿತಕ್ರತತಪಃಫ ಲವೊ || ಆವಕರುಣಾನಿಧಿಯೊನಿಂಮಡಿ | ಗಾವಧನ್ಯರೊನಾವಕಟರಾ | ಜೀವಲೋಚನಯೆನುತಮೈಯಿಕ್ಕಿದರುಋತ್ವಿಜರು || ಎದ್ದುಕೈಗಳಮುಗಿದುಬಾಷ್ಪಜ | ಲಾರ್ದ್ರನಯನರುನಳಿನನಾಭನ | ಮುದ್ದುಮೊಗವನುನೋಡಿದರುಪುಳಕದಲಿಮೈಮರೆದು || ಗದ್ಯಪದ್ಯಂಗಳಲಿಮುನಿಜನ | ಹೃದ್ಯನನುಸ್ತುತಿಸುತ್ತಮನದೊಳ | ಗಿದ್ದುದನುಬಿಂನೈಸಿದರುಭುವನಾಧಿನಾಥಂಗೆ || ೩೪ || ರೂ ಪಿಯೊಡೆಯನನೊಲಿಸಿಬಡವರು | ಬೇಡಲರಿಯದೆಭಾಗ್ಯಹೀನರು | ಕಾಡನರ್ಥಿಸುವಂತೆನಿತ್ಯಸುಖಪ್ರದಾಯಕನ || ನೋಡ ಲಿಂದ್ರಿಯವಿಷಯಕೋಸುಗ | ಮಾಡುವರುಭಕುತಿಯನುಮೂಢರು | ಕಾಡಮರನೆಂನವೆಕಪಿವ್ರಜಕಲ್ಪಭೂರುಹವ || ೩೫ || ಪುತ್ರರಿಲ್ಲದೆದೇವರೆಂದಡ | ಪುತ್ರನನುಮನದೊಳಗೆಕಾಮಿಸಿ | ಪುತ್ರಕಾಮೇಷ್ಟಿಯನುಮಾಡಿದನಾನೃಪಾಲಕನು || ಚಿತ್ತವಿಸುವೆ ದುಚಿನುಮಯನೆನಿನ | ಗೆತ್ತಲಾದಭ್ಯರ್ಥಿಸುವವರ | ವೆತ್ತಲಿದುಭಾಪುರೆದುರಾತ್ಮರದಾರುತಂಮಂತೆ || ೩೬ || ಕ್ಷಮಿಸುವದು ಮಾಯಾವಿಮೋಹ | ಭ್ರಮಿತರಪರಾಧವನುಮಹದ | ಕ್ರಮವಲಾಲೋಕೈಕದೈವದದೈವವನುಭಜಿಸಿ || ಕುಹುತಿಗಳುನಾವೇ ನಬೇಡಿದೆ | ವಮಮದೂರುವಗ್ರಹಗೃಹೀತರ | ನಮರನುತಕೈಗಾಯಬೇಕೆಂದೆರಗಿದರುಪದಕೆ || ೩೭ || ಎತ್ತಿದನುನಸುನ ಗುತನೃಪರನು | ಋತ್ವಿಜರನಾನಿಖಿಳಜನಕೇ | ಳುತ್ತಿರಲುಕಾರುಣ್ಯಮಧುರಾಮೃತರಸೋಕ್ತಿಯಲಿ || ಸತ್ಯಸಂಕಲ್ಪರಿರಭೂ ಸುರ | ಸತ್ತಮರಿರೇನೆಂದಿರೈಕೃತ | ಕೃತ್ಯರಿರದುರ್ಲಭವಬೇಡಿದಿರೆಂದನಸುರಾರಿ || ೩೮ || ಅವನ್ಯೈಧಿಟಕೆಂನಹೋಲುವ | ದೇ ವನೀತ್ರಿಜಗದೊಳುಪುತ್ರನ | ನೀವೆನಾನೆಂತೆಂನಹೋಲುವಮಗನ್ನೃಪೋತ್ತಮಗೆ || ಭಾವಿಸದೆಬೇಡುವರೆನೀವಾ | ನಾವನೆಂಬುದ ನರಿಯಿರ್ದ್ಯವೇ | ದಾವಳಿಗಳ್ಗೆನಿಮ್ಮಮೂರ್ತಿಗಳೆಂದನಸುರಾರಿ || ೩೯ || ಎನ್ನಮುಖವೀವಿಪ್ರಕುಲವಿದು | ನಂನಿನೀವದರಿಂದನುಡಿ ದದು | ತಂನನುಡಿಪುಸಿಯಾಗಲರಿಯದುನಿಮ್ಮಸಂಕಲ್ಪ || ಅನ್ಯರೆನಗೆಣೆಯಿಲ್ಲನಾನು | ತ್ಪನ್ನನಹೆನೀತನಲಿಯೆನುತಕೃ | ಪಾರ್ನ ವನುಕರುಣಿಸಿದನಮರಾವಳಿಯುಘೋಷಿಯೆನಲು || ೪೦ || ಮುರಹರನನುಡಿಗೇಳುತಂಘ್ರಿಯೊ | ಳೆರಗಿದರುಋತ್ವಿಜರುನಾವೆಂ | ತರಿವೆವೆಲೆದೇವಾದಿದೇವಭವತ್ಪದಾಂಬುಜವ | ನಿರುಗೆಯನುನಾನಾಪ್ರಕಾರದ | ಲೊರಲಿಕಾಣವುವೇದಮುನಿಮನ | ದರಕೆಯುಡ ಗದುಭವನಭವಾರ್ಜಿತಯೋಗಮಾಯೆಯಲಿ || ೪೧ || ಅರಿಯೆವಜ್ಞಾನಿಗಳುದೇವರ | ನಿರುಗೆಯನುಬಹುವೇದಶಾಸ್ತ್ರದ | ಹೊರೆ ಯಹೊತ್ತಡೆಕತ್ತೆಕಸ್ತೂರಿಯನುಪರಿಮಳವ || ಅರಿಯಲರಿವುದೆದೇವನಿಂಮಡಿ | ಯರಿವಕೃಪೆದೊರಕೊಳ್ಳದೀಮೈ | ಗರೆಯವೇ ದಜ್ಞರಿಗೆವೇದ್ಯನೆವಿಮಳನಿಜತತ್ವ || ೪೨ || ಪರಮತತ್ವಜ್ಞಾನಸಿದ್ಧಿಗೆ | ಪರಮಸಾಧನವಿದೆಯಲಾದೇ | ವರಪದಾಂಬುಜಭಕ್ತಿ ನಾಮಾಮೃತಕಥಾಶ್ರವಣ || ಜರೆಯಲಾಪತ್ತಿನಲಿದುಸ್ಸಹ | ಮರಣಭಯದುಃಖದಲಿನಾವು ; ಸ್ಮರಣೆಯನುಕೃಪೆಮಾಡಬೇಕೆಂ ದೆರಗಿದರುಪದಕೆ || ೪೩ || ಏಳಿರೈಸಲಿಸಿದೆನುಮನದವಿ | ಶಾಲಸಂಕಲ್ಪವನುಲಕ್ಷ್ಮೀ | ಲೋಲನಾಯಜಮಾನಋತ್ವಿನ್ಮುನಿಸಭಾಸ ದಲಿ || ಜಾಳವನುಸಂತವಿಸಿಪರಮಕೃ | ಪಾಳುನಿತ್ಯಾತುಮನುಗರುಡನ | ಮೇಲೆವಿಜಯಂಗೈದನಿಜವೈಕುಂಠಪುರವರಕೆ || ೪೪ ||

ಅಂತು ಸಂಧಿ ೨ಕ್ಕಂ ಪದನು ೭೦ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ || ಕಂಸಹರನಾನಾಭಿರಾಯನ | ವಂಶದಿಂದವತರಿಸಿಭವವಿ | ಧ್ವಂಸನದನಿಜಯೋಗಮಾರ್ಗವ
ನರುಹಿದನುಧರೆಗೆ || … … …

ಪದನು || ಅರಸಕೇಳೈನಾಭಿಚಕ್ರೇ | ಶ್ವರನಭಾಗ್ಯೋದಯವನಾಭೂ | ಸುರರಕಾರುಣ್ಯವನುತತ್ಸಾಮರ್ಥ್ಯಸಂಪ ವ || ಸುರವರಾರ್ಚಿತಚರಣನಾನೃಪ | ವರನಬಸುರಲಿಲೀಲೆಯಿಂದವ | ತರಿಸಿದನುಮಗನಾಗಿಮುನಿಜನವಂದ್ಯನೊಲವಿನಲಿ ಆಸಮಯದಲಿಬಾರಿಸಿದವಾ | ಕಾಶದಲಿದುಂದುಭಿಗಳವನಿಗೆ | ಸೂಸಿದವುಘನಪುಷ್ಪವೃಷ್ಟಿಜಯಧ್ವನಿಗಳೊಡನೆ || ಭೂಸುರರ ಹುಮಂತ್ರದಾಶೀ | ರ್ವಾದವೆಸೆದುದುಪರಮಸುಖವಾ | ರಾಶಿಯೊಳಗೋಲಾಡುತಿರ್ದುದುಸಕಲಜನನಿವಹ || ೨ || ಶಿಶುವಿನೆ ಪ್ಪುವಪಾದತಳದಲಿ | ವಿಸರುಹಧ್ವಜವಜ್ರಲಾಂಛನ | ವೆಸವಭಗವಲ್ಲಕ್ಷಣದಸಾರೂಪ್ಯಸಂಪದವ || ವಸುಮತೀಪತಿಕಂಡುಹ

ಷ । ಪ್ರಸರದಲಿಮುಳುಗಿದನುಮಗನನು । ವೃಷಭವೆಸರೀತಂಗೆಯೋಗ್ಯವದೆಂದುವಿರಚಿಸಿದ ॥ ೩ ॥ ವೀರ್ಯದಲಿಶೌರ್ಯದಲಿಘನ
ಗಂ । ಭೀರದಲಿವಿಕ್ರಮಗಳಲಿಮಾ । ಧುರ್ಯದಲಿಮಹಿಮೆಯಲಿಬಹಳೌದಾರ್ಯಗುಣಗಳಲಿ ॥ ಸ್ಥೈರ್ಯದಲಿಧೈರ್ಯದಲಿಪರಮೈ ।
ಶ್ವರ್ಯದಲಿಕೀರ್ತಿಯಲಿಸಲೆಸೌಂ । ದರ್ಯದಲಿರಂಜಿಸುವಮಗನನುಕಂಡನವನೀಶ ॥ ೪ ॥ ಅಕಟಪುಣ್ಯವೆಭಾಪುಭಾಗ್ಯವೆ । ಸಕಳ
ಪುತ್ರಕಳತ್ರವಿಷಯಾ । ಸಕತಿಯನುನೆರೆಬಿಟ್ಟುಯೋಗಿಗಳಾವನಂಘ್ರಿಯಲಿ ॥ ಸುಕೃತಕಾರಣನೆರೆಯಖಿಳಾ । ತ್ಮಕನೆತನಗಿಂ
ದೊಲಿದುಪುತ್ರಾ । ತ್ಮಕನೆನ್ನ್ಯದೋರಿದೆಯಲ್ತೆಶಿವಶಿವಶಿವಾಯೆಂದ ॥ ೫ ॥ ಶಿವಶಿವೊಡಲನುಸುಡುವಪಥ್ಯಾಂ । ನವೆಮಹೌಷಧ
ವಾದಪೊಲೆನ । ಗವಿರಳಾನಂದಾಂಬುನಿಧಿನಿಜಪುತ್ರರೂಪದಲಿ ॥ ಭವಿಸಿದನಲ್ತೆಬಳಿಕೆಕರುಣಾ । ರ್ಣವನಲಾತಂನತುಳಭಾಗ್ಯ
ನ । ಹವಣಿಸುವರಾರೆನುತಪೊಂಪುಳಿಯೋದನವನೀಶ ॥ ೬ ॥ ನೆಲನುಸವೆಯಲುಹೂಡಿದಾನೇ । ಗಿಲಿನವೋಯೆನೆಕೆಸವೃತಾನೇ ।
ಬೆಳದಕೈಯ್ಯಾದಂತೆಹೇಯುನೆನಿಪ್ಪಸಂಸಾರ ॥ ಸುಲಭಸುಖಫಲವಾಯ್ತುಭಾಪುರೆ । ಭಲರೆಭಾಗ್ಯವೆಮನದರಾಗ । ಸ್ಥಳವೆನಿಪ
ಸುಕನೇಸುರಾರ್ಚಿತನಾದನೆನಗೆಂದ ॥ ೭ ॥ ಎನುತನಾಭಿನೃಪಾಲನಾನಿಜ । ತನಯನನುಲಾಲಿಸುತತಂನಯು । ಮನದೊಳಗೆ
ಮುರಹರನನೆನೆಸುತಲಂದುಭಾವಿಸುತ ॥ ದಿನವನರೆನಿಮುಷಾರ್ಧದಂತಿರ । ಲನವರತತದ್ಧ್ಯಾನತತ್ಕೀ । ರ್ತನೆಗಳಲಿನೂಕಿದನು
ತತ್ಸ್ವರೂಪಪ್ರಸಂಗದಲಿ ॥ ೮ ॥ ವಾಲೆಬಂದುದುಬಳಿಕನಾಭಿನೃ । ಪಾಲನಲ್ಲಿಗೆಮೋಕ್ಷರಾಜ್ಯವಿ । ಶಾಲಸೌಖ್ಯದಪೀಳಿಗೆಯಪಿ
ಹ್ಮಾಸನಸ್ಥಿತಿಗೆ ॥ ಆಲಿಸುತರಾಜ್ಯವನುಪುತ್ರನ । ಮೇಲಿರಿಸಿಸಂತೋಷದಲಿನಿಜ । ಲೋಲಲೋಚನೆಸಹಿತಹೊಕ್ಕನುಬದರಿಕಾ
ಶ್ರಮವ ॥ ೯ ॥ ಅಲ್ಲಿನರನಾರಾಯಣರಪದ । ಪಲ್ಲವವನೋಲಗಿಸುತಪ್ರತಿ । ಮಲ್ಲನೆಸೆದನುದಗ್ರಯೋಗಾಭ್ಯಾಸನಿಷ್ಠೆಯಲಿ ॥
ಉಲ್ಲಸಿತವಿಜ್ಞಾನಜಿತಕೈ । ವಲ್ಯನೈದಿದನಂದುಲಕ್ಷುಮಿ । ವಲ್ಲಭನಸಾಂಬ್ರಾಜ್ಯಸಾಯುಜ್ಯೈಕಸಂಪದವ ॥ ೧೦ ॥ ಅರಸಕೇ
ಳೈವೃಷಭದೇವನ । ಪರಮಮಂಗಳವನಿಪವಿಮಳಾ । ಚರಿತವನುನಿಶ್ಶೇಷಭವತಾಪಾಭಿಚರಿತವನು ॥ ಧರೆಯೊಳಧಿಕನೆನಿಪ್ಪ
ಭಾರತ । ವರುಷವನುನೆಲೆಗೊಳಿಸಿಧರ್ಮದ । ಸರಣಿತಪ್ಪದೆನಡಸಿದನುನಿಜರಾಜ್ಯದಪ್ರಜೆಯ ॥ ೧೧ ॥ ಇರಲುಕೇಳದುಭುತ
ವನೃಷಭೇ । ಶ್ವರನೆನಿಪಸಾಕ್ಷಾತವಿಷ್ಣುವೆ । ನರನೆನಿಸಿನೃಪಲಾಂಛನದಲೀಲೆಗಳಲೆಸೆದಿರಲು ॥ ಹುರುಡಿಸುತದೇವೇಂದ್ರನಾತ
ನ । ವರುಷದಲಿಫಲಕಾಲಮಳೆಯನು । ಕರೆಯದಾಸರುಬೇಸರೆನುಹೊಡಿದನುಮೇದಿನಿಗೆ ॥ ೧೨ ॥ ವಸುಧೆನೀರಸವಾದುದೊರ
ತೆಗ । ಳೊಸರದಾದವುಗಾಹಿಸಿತುಬಿರು । ಬಿಸಿಲಬೇಗೆಯುಬಿಂಕಸಚರಾಚರಜೀವರಿಗೆ ॥ ಹೆಸರಿಸಲುಜಲವಿರಿತವೆನುತ । ಟ್ಟಸಿ
ತಸಕಲಪ್ರಾಣಿಗಳಿಗಾ । ಗಸದಲಾದುದುವೃಷ್ಟಿಪುಷ್ಟಿಗಳಿಲ್ಲದವನಿಯಲಿ ॥ ೧೩ ॥ ಒರಲಿದುಗುಜನನಿವಹವೆದೆಬಾ । ಯರಿತುಬ
ಸವಳಿದಖಿಳಸಚರಾ । ಚರನಿರೋಧವನೇನನೆಂಬೆನುಭುವನದಲ್ಲಣವ ॥ ಮರುಗಿದನುಮನದೊಳಗೆಜನದಾ । ಸರನುಬೇಸರನೀ
ಕ್ಷಿಸುತಧಿಟ । ಕರಿಯದಂತಿರೆವೃಷಭದೇವನೃಪಾಲನಾಲಿಸಿದ ॥ ೧೪ ॥ ಕಂಡನನುಪಮಮಹಿಮನದನಾ । ಖಂಡಲನದುಶ್ಚೇಷ್ಟೆಯ
ನುಖತಿ । ಗೊಂಡನಕಟಕಟೇಕೆತನಗೆಂನೊಡನೆಮಾತ್ಸರ್ಯ ॥ ಚೆಂಡಿಯೋನೋಡುವೆನೆನುತ್ತು । ದ್ದಂಡವಿಕ್ರಮನಾಕ್ಷಣವೆಘನ ।
ಮಂಡಲವನಾಯೋಗಸಾಮರ್ಥ್ಯದಲಿನಿರ್ಮಿಸಿದ ॥ ೧೫ ॥ ಸುರಿದುದಾಕಸ್ಮಿಕದಮಳೆಯಂ । ಬರನಡದುಸುರಿವಂತೆಜಲಸಾ ।
ಗರವೊಧರೆಯಕ್ಷಮಪ್ರೋಕ್ಷೀಮವೊಜಗತ್ರಯದ ॥ ಪರಮಹರುಷವೊಮೋಣುಧಾರಾ । ವರುಷವೋಪೇಳೆನಲುಸಚರಾ । ಚ
ರಕೆಮಂಗಳವಾಯ್ತುಯಿಂಗಳವಾಯ್ತುಸುರಪತಿಗೆ ॥ ೧೬ ॥ ಅದನುಕಾಣುತ್ತಮರಪತಿನಡು । ಗಿದನುಭಯದಲಿತಂನೊಡೆಯನ
ಹೆ । ಪದುಮನಾಭನೆತಾನಲಾಹರಹರಮಹಾದೇವ ॥ ಉದಿಸಿದನುನರನಾಗಿತಾನೀ । ಹದನನರಿಯದೆತಪ್ಪಿದೆನಲಾ । ಮದವಿಕ
ಳತನದಿಂದಕೆಟ್ಟೆನೆನುತ್ತಚಿಂತಿಸಿದ ॥ ೧೭ ॥ ಮಂನಿಸುತತಪ್ಪಾಯ್ತುಲಾಕರು । ಣಾರ್ಣವನಮರೆಯೊಗುವೆನೆನುತವೆ । ತಂನಮ
ಗಳನುತಪ್ಪದಂಡವಿತೆಂದುಭೂಪತಿಗೆ ॥ ಸಂನುತನುತಂದಿತ್ತುಮನದಲಿ । ಧನ್ಯನಾದೆನೆನುತ್ತಬಳಿಕತ । ದಂನತಾನುಗ್ರಹದಸಿದ್ಧಿ
ಯನೈದಿದನುದಿವವ ॥ ೧೮ ॥ ಇಂದ್ರದತ್ತಜಯಂತಿಯೆಂಬವ । ಳಂದುಮುಖಿಯಲಿಜನಿಸಿದರುಸುತ । ರಂದುನೂರ್ವರುತನಗೆಸ
ರಿಮಿಗಿಲೆನಿಸಿರೂಪದಲಿ ॥ ಸಂದವಿಕ್ರಮಗುಣಗಳಲಿಜನ । ವಂದ್ಯರೆಸೆದರುಭರತನಾಜನ । ವೃಂದದಲಿಹಿರಿಯಾತನೆಲೆಜನನಾಥ
ಕೇಳೆಂದ ॥ ೧೯ ॥ ಆಭರತನಿಂಮುಂನವಿರತಜ । ನಾಭವೆಸರೆಳೆಭೂಪಬಳಿಕನೃ । ಪಾಭಿಧಾನದಲಾಯ್ತುಭಾರತವೆಂದುಹೆಸರಿದಕೆ ॥
ತ್ರಿಭುವನವಿಖ್ಯಾತಮಹಾತ್ಮನ । ವೈಭವವನದನೇನನೆಂಬೆನು । ನಾಭಿಸುತನಿಂತೆಸೆದನಧಿಕಸಮಗ್ರತೇಜದಲಿ ॥ ೨೦ ॥ ಭರತ
ನನುಜರುಪರಮಯೋಗೀ । ಶ್ವರರೆನಿಸಿಲೋಕೈಕವಿಖ್ಯಾತ । ಪರಮಪುಣ್ಯಚರಿತ್ರರೀಸಂಸಾರವಿಷಯದಲಿ ॥ ವಿರತರಾದರುಕ
ವಿಹರಿಪ್ರಮು । ಖರುವಿದಿತವನಸಂಖ್ಯೆಯಲಿವಿ । ಸ್ತರಿಸುವೆನುವಸುದೇವನಾರದರುಕ್ತಿಯಲಿಮೇಲೆ ॥ ೨೧ ॥ ಖ್ಯಾತರಾದರುಪು
ತ್ರರೇಕಾ । ಶೀತಿಸಂಖ್ಯೆಯಲಗ್ನಿಹೋತ್ರವಿ । ಧೂತಪಾತಕವಿಪ್ರರಾದರುತಂದೆಯಾಜ್ಞೆಯಲಿ ॥ ಭೂತಳದನವಖಂಡಮಂಡಲ ।
ಜಾತರಕ್ಷಾಭಾರಸ್ಸರತ । ಭ್ರಾತೃಗಳಿಗೊಂಭತ್ತುಮಂದಿಗೆವಿಹಿತವಾಯ್ತೆಂದ ॥ ೨೨ ॥ ಇಂತುಸಕಲಜಗದ್ಧಿತಾರ್ಥೈ । ಕಾಂತ

ವಿಗ್ರಹರೆನಿಪಸುತರುಜ | ಯಂತಿಯಲಿಜನಿಸಿದರಲ್ಲೈಜಗದೀಶನಂಗೆ ॥ ಶಾಂತಹೃದಯರುಸಕಲಮಾಯಾ | ಭ್ರಾಂತಿದೂರರು
ಹರಿಚರಣವಿ | ಶ್ರಾಂತಚೇತೋವೃತ್ತಿಗಳುಬೆಳಗಿದರುಮಾಜಗವ ॥ ೨೩ ॥ ಒಂದುದಿನಸತ್ರದಲಿನೆರೆದು | ಮಂಡಿಭೂಮಂ
ಡಲದಖಿಳಜನ | ವೃಂದಮುನಿಜನದೇಶಜನನಾನಾದಿಗಂತಜನ ॥ ಸಂದಣಿಸಿಸಭೆಯೊಳಗಿಸುರನರ | ವೃಂದವಾವೃಷಭಾಂಕನಾನಿ
ಜ | ನಂದನರಿಗಿಂತೆಂದನಖಿಳಜಗದ್ಧಿತಾರ್ಥದಲಿ ॥ ೨೪ ॥ ಕೇಳಿರೈಮಕ್ಕಳಿರತನುವಿದು | ಗಾಳಿಗೊಡ್ಡಿದಸೊಡರುನೀರಜ |
ಜಾಲದೊಡ್ಡಣೆಸುರಧನುವಿನಾಕಾರಸ್ವಪ್ನಸಿರಿ ॥ ನಾಲಿಗೆಯಮಧುಮರ್ಕಟನಪೂ | ಮಾಲೆಮಂಜಿನಮಡುಮನೋರಥ | ಬೇ
ಳಗೆಯಸಿರಿಶಾಶ್ವತವಿದಲ್ಲೆಂದನವನೀಶ ॥ ೨೫ ॥ ಹಲವುಜನ್ಮಾಂತರದಸುಕೃತದ | ಫಲವಲಾನರಜನ್ಮಮೋಕ್ಷದ | ಬೆಳೆವನಿದ
ರೊಳುಪಡೆಯಲೆಂದಾರ್ಜಿಸಿನ್ನಕಾಯದಲಿ ॥ ಎಲವೊವಿಷಯಸುಖಕ್ಕೆತನುವನು | ಬಳಲಿದರೆಸುಖವೇನುನಾಯ್ನರಿ | ಗಳನೆವರ
ರಿಂಗಾವುದಂತರವೆಂದನವನೀಶ ॥ ೨೬ ॥ ಹಸಿದುಹಲವೂರೊಳಗೆತಿರಿತಂ | ದಸನದೊಳುಗುಂಬಾಗನಾಯಿದ್ದು | ಬ್ಬಿಸಿದಪ್ರೋಲಾಯು
ಕಟಬಹುಜನ್ಮಾಂತರಾರ್ಜಿತದ ॥ ಅಸಮಸುಕೃತಫಲಂಗಳಲಿಮಾ | ನಸಜನುಮವನುಪಡದುಬಹುವಿಧ | ವಿಷಯದಾಸಕತಿಯ
ಲಿಕೆಟ್ಟುದುಶಿವಶಿವಾಯೆಂದ ॥ ೨೭ ॥ ಜನನಮರಣವ್ಯಾಧಿಭಯಸಂ | ಜನಿತದುಃಖವಗೆಲುವುಪಾಯವ | ನೆನೆಯದಧ್ರುವವೆನಿಸಿದ
ಮಾನುಷ್ಯವನುನೆರೆಪಡೆದು ॥ ತನುವಿನಿಚ್ಛೆಗೆಸಂದಡಾವುದು | ತನಗೆಹಿತವಾತ್ಮಂಗೆಕರಮಂದ | ನನಿತುವನುಹಸುಕಾಡಿದಬೊ
ಡೆಯಂಗುಳಿವುದೇನೆಂದ ॥ ೨೮ ॥ ನೆಟ್ಟನೀಸಂಸಾರದುಃಖದ | ಒಟ್ಟಿಯನುಗೆಲಲೆಂದುನೆರೆಬೆಲೆ | ಗೊಟ್ಟುಸುಕೃತವನೀಮನು
ಷ್ಯಶರೀರವನುಪಡೆದು ॥ ಕಷ್ಟವಿಷಯಂಗಳಿಗೆಸಲೆವ್ಯ | ಗೊಟ್ಟಡೀಚಂದನದಕೊರಡನು | ಸುಟ್ಟುಬೂದಿಯಪೊಸಿಕೊಂಬಂ
ತಹುದುಕೇಳೆಂದ ॥ ೨೯ ॥ ಅದುನಿಮಿತ್ತವಿಶೇಷಪುರುಷಾ | ರ್ಥದವೆನಿಪನರಜನ್ಮದೊರಕೊಂ | ಡಿದರೊಳಗೆವ್ಯಾಮರದುಪೋ
ಗದೆನಿಜಹಿತಾರ್ಥವನು ॥ ಸದಮಳರಿರಾಚರಿಸುವುದುದೇ | ಹದಲಹಂಮಮತೆಯನುಳಿದುಮೋ | ಕ್ಷದಪದವನಿದರಿಳಿದುಸಲು
ವುದುಭವವನಿದನೆಂದ ॥ ೩೦ ॥ ಪರಿಕಿಸಲುತತ್ಸಂಗಮುಕುತಿಗೆ | ಪರಮಪದವೆನಿಸೂದುಸದಮಳ | ಚರಿತರಿರಚಿತ್ತೈಸುವದು
ಗುರ್ಜನರಸಹವಾಸ ॥ ನರಕಪಥವೆಂದೆನಿಪುದೆರಡರ | ಪರಿಯನಿದನರಿವಂತೆನೆರೆವಿ | ಸ್ತರಿಸುವೆನುಭವಬಂಧಮೋಕ್ಷಸುಖೈಕ
ಸಾಧನವ ॥ ೩೧ ॥ ಸರ್ವಜನಹಿತಕಾರಿಗಳುಜಿತ | ಗರ್ವರಕ್ರೋಧಿಗಳುಸಲೆಸಾ | ರ್ವಿಕಪ್ರಕೃತಿಗಳುಪುಣ್ಯಚರಿತ್ರರಖಿಳ
ದಲಿ ॥ ಗುರ್ವನುಗ್ರಹಪರರುಶಾಂತರು | ನಿರ್ವಿಕಾರರುನಿಜವಿವೇಕಿಗ | ಳೂರ್ವಿಪಾವನಮೂರ್ತಿಗಳುಸತ್ಪುರುಷರಿವರೆಂದ ॥
ಸುಕೃತದುಷ್ಕೃತವೆಂಬಕರ್ಮ | ಪ್ರಕರಸಹಿತೆಲ್ಲವನುಸರ್ವಾ | ತ್ಮಕನೆನಿಪ್ಪನಲಿಸಮರ್ಪಿಸಿಸರ್ವಭಾರವನು ॥ ಅಕುಟಿ
ಲಾತ್ಮಕರಾಗಿನಿಜಪದ | ಭಕುತರನುವಡಲಾಗಿನಿರಹಂ | ಪ್ರಕೃತಿಯಲಿಜೀವಿಸುವಸಂತರೆಸತ್ಪುರುಷರೆಂದ ॥ ೩೩ ॥ ಕನಸಿ
ನಂತಿರೆತೋರ್ಪತೋರ್ಕೆಯ | ನನಿತರೊಳುಸುತದಾರಗೃಹಪಶು | ಧನವೆನಿಪ್ಪಖಿಳದಲಿನಿರ್ಮಮರಾಗಿಮನದೊಳಗೆ ॥ ತನು
ವಿನಿಚ್ಛೆಗೆಸಲ್ಲದೆಂನಲಿ | ಜನಿತಭಕುತಿಯಸಾಮ್ಯದಲಿನಿಜ | ದನುಭವಿಗಳೆನಿಪಾತ್ಮನಿಷ್ಠರೆಸತ್ಪುರುಷರೆಂದ ॥ ೩೪ ॥
ಕೆಡುವೊಡಲನಾನೆಂದುಮಕ್ಕಳು | ಮಡದಿಮನೆಮನೆವಾರ್ತೆಯೆಂಬೀ | ಗಡಣಸುಸ್ಥಿರವೆಂದುಯಿದೆಪುರುಷಾರ್ಥತನಗೆಂದು |
ಬಿಡದೆಹಂಮಮತೆಯಲಿಮರಿಚಯ | ಮಡುವಿನೊಳಗೋಲಾಡಿತೃಪ್ತಿಯ | ತಡಿಯಕಾಣದಕಷ್ಟಮತಿಗಳೆಕಾಪುರುಷರೆಂದ ॥ ೩೫ ॥
ಸ್ತ್ರೀಣರತಿಚಪಳರುದುರಂತ | ಪ್ರಾಣಿಗಳುಹಿಂಸಾಕ್ಷಕರುಸಂ | ಕ್ಷೀಣಪುಣ್ಯರುದೈವಹೀನರುಮತಿವಿದೂಷಕರು ॥ ಕ್ಷೋಣಿ
ಭಾರಾಯಕರುನಿಷ್ಠುರ | ಪಾಣಿಗಳುವಿಷಯೋಪಭೋಗ | ಪ್ರೀಣಿತಾತ್ಮರಕರ್ಮನಿಷ್ಠರುಕಾಪುರುಷರೆಂದ ॥ ೩೬ ॥ ಸತ್ಪುರು
ಷನಿಂದಕರುಹೀನಾ | ಶ್ರುತರುಡಾಂಬಿಕರಖಿಳಪಾಪಾ | ಸ್ವಿತರುಪೈಶೂನ್ಯಪ್ರವೀಣರುವಿಷಯಲೋಲುಪರು ॥ ಮತಿವಿಹೀನ
ರುನಾಸ್ತಿಕರುಸೈ | ಕೃತಕರಷ್ಠಾಂತಕಬಿಡಾಲ | ವ್ರತಬಕವ್ರತತತ್ಪರರುಕಾಪುರುಷರಿವರೆಂದ ॥ ೩೭ ॥ ಸ್ವಾರ್ಥವಿವರಲಿಸಂಗ
ಖಿಳಾ | ನರ್ಥಕರವೆಂದರಿದುಜನಗಮ | ತೀರ್ಥವೆನಿಸುವಸತ್ಪುರುಷರಲಿಸಂಗವನುಮಾಡಿ ॥ ಅರ್ಥಿಸುವುದರ್ಚಿಸುವುದಖಿಳ
ಸ್ವಾರ್ಥಸಾಧನವೆಂದರಿದುಪುರು | ಷಾರ್ಥವಿದರಿಂದಧಿಕವಿಲ್ಲವಿಚಾರಿಸುವುದೆಂದ ॥ ೩೮ ॥ ಎಂನಗುಣಕಥನವನುಕೇಳು | ತೆ
ನಭಕ್ತರಸಂಗದೊಳಗಿರು | ತೆಂನನೇಧ್ಯಾನಿಸುತಕೀರ್ತಿಸುತೆಂನನಾಮವನು ॥ ಎಂನನೇವಂದಿಸುತಭಜಿಸು | ತ್ತೆಂನಲಧಿಕಪ್ರೇ
ಮಯುತನಾ | ಗೆಂನಮಯವಾಗಖಿಳಜಗವನುಕಾಬುದಿದನೆಂದ ॥ ೩೯ ॥ ಇಲ್ಲತಂನಿಂದನ್ಯದೇವತೆ | ಯಿಲ್ಲತಂನಿಂದಧಿಕಬಾಂ
ಧವ | ರಿಲ್ಲತಂನಿಂದಧಿಕಲೋಕಹಿತಾರ್ಥಕಾರಿಗಳು ॥ ಇಲ್ಲತಾನೇತಾನುಳಿಯೆಜಗ | ವಿಲ್ಲಚೇತನವಿಲ್ಲನಿಜಮಾ | ಯೋಲ್ಲಸಿತ
ದ್ಭ್ರಾಂತಿಯಿಂದವೆತೋರುತಿಹುದೆಂದ ॥ ೪೦ ॥ ಬಿಡದುಮಾಯಾಬಂಧಹುಟ್ಟುತ | ಮಡಿವುತೀಪರಿತಂನನರಿಯದೆ | ಕೆಡುವುದಿ
ಜಗವಕಟತಾಪತ್ರಯದಬೇಗೆಯಲಿ ॥ ಕಡೆಗೆತಂನಯಭಕುತಿಬಂಧವ | ಬಿಡಿಸಿಜೀವರನೀಭವಾಬ್ಧಿಯ | ತಡಿಗೆಚಾಚುವುದಾ
ವಿದ್ಯೆಯೆನಿಪ್ಪನಾವೆಯಲಿ ॥ ೪೧ ॥ ನಿರುತವೀಪರಮಾರ್ಥಪಥವಿದು | ಗುರುಮುಖದಲಲ್ಲದೆನಿಜೇಚ್ಛೆಗೆ | ದೊರಕಲರಿಯದು
ಭವಭವಾಂತರಪುಣ್ಯಹೀನರಿಗೆ ॥ ಪರಿಕಿಪಡೆಗುರುರೂಪದಲಿಜೀ | ವರಿಗೆಭವಸಂಕ್ಲೇಶಮೋಕ್ಷವ | ಕರುಣಿಸಲುತಾನನನಿ

ಲಿಸಂಚರಿಸುತಿಹೆನೆಂದ ॥೪೨॥ ಪರಮತತ್ವರಹಸ್ಯವನುವಿ । ಸ್ತರಿಸಿಭವಭಯದುಃಖವನುಪರಿ । ಹರಿಸಿನಿಜಚರಣೋಪಸಂಗ
ರನಿಪ್ಪಶಿಷ್ಯರನು ॥ ಕೊರಳಲಿಕ್ಕಿದಕಾಲಪಾಶವ । ನಿರದೆಕರಿದುವಿಮುಕ್ತಿಸುಖದೊಳ । ಗಿರಿಸಬಲ್ಲದಯಾಪರನೆಗುರುವರನುಕೇ
ಳೆಂದ ॥೪೩॥ ಅಂಧಕನಕೈವಿಡಿದುಮಾರ್ಗವ । ನಂಧಕನುನಡವಂತೆಮಾಯಾ । ಬಂಧನಕ್ಕೊಳಗಾದಗುರುಶಿಷ್ಯರನುಸಂಗ್ರ
ಹಿಸಿ ॥ ಬಂಧವನುಬಿಡಿಸುವೆನುಚಿತಭವ । ಬಂಧನನುನಿರ್ಮಮನುಕರುಣಾ । ಬಾಂಧವನುಭೂತೋಪಕಾರಕ್ಷನುನುಕೇಳೆಂ
ದ ॥೪೪॥ ತಂದೆಸುತರನುಶಿಷ್ಯರನುಗುರು । ನಂದನರಿಗೀಪರಿಯಲಭಯಾ । ನಂದಪದವೆನಿಪೆಂನಸಾಕ್ಷಾತ್ಕಾರಸಾಧನವ ॥
ಅಂದವನುತಿಳುಹೂದುಅಗರಣ । ವೃಂದವನುಕರ್ಮದಲಿಯೋಚಿಸಿ । ದಂದುಗಂಬಡಿಸೂದುಬುಧರಿಗೆಯೋಗ್ಯವಲ್ಲೆಂದ ॥೪೫॥
ಬಲ್ಲವರುಬೋಧಿಸುವರೆಂತರಿ । ವಿಲ್ಲದವರಿಗೆಕರ್ಮವನುಕೈ । ವಲ್ಯಪದವಮುಕ್ತರಿಗೆಕರುಣಿಸಿದಾತ್ಮವಿದ್ಯೆಯನು ॥ ಬಲ್ಲಿತನಬ
ಳಿಕೆಲ್ಲಿಯದುಕಂ । ಣಿಲ್ಲದವರಿಂಗಡವಿಯನುಕಂ । ಣಾಳ್ವರುತುಬ್ಬವರೆಮಾರ್ಗಜ್ಞಾನಹೀನರಿಗೆ ॥೪೬॥ ಆತನೇಗುರುತಂ
ದೆತಾಯಧಿಪ । ಆತನೆಬಾಂಧವನುಸಖಸುತ । ನಾತನೇಪ್ರಿಯಮಿತ್ರನಾತ್ಮಜನಿಷ್ಟಪರದೈವ ॥ ಘಾತಿಸುವದುಸ್ಸಹಕೃತಾಂತನ ।
ಭೀತಿಯನುನೆರೆಬಿಡಿಸಿಮುಕುತಿಸು । ಖಾತಿಶಯಪದದೊಳಗೆನಿಲಿಸಲುಬಲ್ಲಡವನೆಂದ ॥೪೭॥ ಉತ್ತಮಸ್ಥಾವರಕೆಜಂಗಮ ।
ವುತ್ತಮರಿರಸರೀಸೃಪಾದಿಗ । ಳುತ್ತಮಂಗಳುಪಕ್ಷಿಗಳುಪಶುಗಳುಪರಂಪರೆಯು ॥ ಉತ್ತಮರುಮಾನವರುದಾನವ । ರುತ್ತಮ
ರುಗಂಧರ್ವರವರಿಂ । ಗುತ್ತಮರುಸುರರಾಸುರೇಶ್ವರರವರಿಗುತ್ತಮರು ॥೪೮॥ ಉತ್ತಮರುದಕ್ಷಾದಿಗಳುಸುರ । ಸತ್ತಮರಿರ
ವರಿಂಗೆಕಮಲಜ । ನುತ್ತಮನುಪರಮೇಶ್ವರನುಭಾವಿಸುವಡುತ್ತಮನು ॥ ಉತ್ತಮರುತಾನಿನಿಬರಿಂಗೆನೆ । ಗುತ್ತಮರುವರವಿ
ಪ್ರರವರಿಂ । ಗುತ್ತಮರನಾನರಿಯೆನೀಸಚರಾಚರದಲೆಂದ ॥೪೯॥ ಉತ್ತಮರುವೇದಾಂಗರದರೊಳು । ವುತ್ತಮರುವೇದಾರ್ಥ
ವಿತ್ತುಗ । ಳುತ್ತಮರುತದ್ವಿಹಿತಕರ್ಮವಿಧಾನತತ್ಪರರು ॥ ಉತ್ತಮರುನಿಸ್ಸಂಗರದರೊಳ । ಗುತ್ತಮರುವೇದಾಂತವಿತ್ತುಗ । ಳು
ತ್ತಮರುಸಾಕ್ಷಾತ್ಕೃತಾನಂದಾನುಭವರೆಂದ ॥೫೦॥ ಉತ್ತಮರನಾರಾಣೆನವರಿಂ । ಗುತ್ತಮೋತ್ತಮರವರಮುಖದಲಿ ।
ತುತ್ತುಗೊಂಬರಿಗಗ್ನಿಹೋತ್ರದಲಿಲ್ಲಪರಿತೋಷ ॥ ತತ್ವಶುದ್ಧಿಯನರ್ಥಿಸುವಡವ । ರುತ್ತಮಾಂಘ್ರಿಯಸೇವೆಕೊಡುವದು । ಭು
ಕ್ತಿಮುಕ್ತಿಸುಖಂಗಳನುಸಂದೇಹವಿಲ್ಲೆಂದ ॥೫೧॥ ಬಲ್ಲನಿದನೀಭರತನಿವನೀ । ವೆಲ್ಲರೂಭಜಿಸೂದುರಕ್ಷಿಪು । ದೆಲ್ಲರೀಪ್ರಜೆಗ
ಳನುವಿಪ್ರಮತಾನುಸಾರದಲಿ ॥ ಬಲ್ಲರೀಶುಶ್ರೂಷೆತನಗತಿ । ಯಾಳ್ವರಸಚ್ಚರಣಯುಗಳದ । ಪಲ್ಲವನೋಲಗಿಸಿಕೊಂಡಿಹುದೇ
ನುತಕರುಣಿಸಿದ ॥೫೨॥ ಪೊರಗೊಳಗೆಮೇಣಖಿಳಸಚರಾ । ಚರದೊಳಗೆನೀವೆಂನನಿಜವನೆ । ಬೆರಸಿಕಾಂಬುದುಪೂರ್ಣಚೈ
ತಂನ್ಯೈಕರಸವೆಂದು ॥ ನಿರುತವಿದುತಾನೀವುಮಾಡುವ । ನಿರುಪಮಿತಶುಶ್ರೂಷೆತನಗೆಂ । ದುರುದಯಾಪರನಿತ್ತುನಿತ್ಯಾತ್ಮವ
ನುನೇಮಿಸಿದ ॥ ... ॥ ಶ್ರೀ ಕೃಷ್ಣಾಯನಮಃ ॥ ... ॥೫೩॥

ಅಂತು ಸಂಧಿ ೩ಕ್ಕಂ ಪದನು ೧೩೩ಕ್ಕೆ ಮಂಗಳಮಸ್ತು.

ನಾಲ್ಕನೆಯ ಸಂಧಿ

ಸೂಚನೆ ॥ ಯೋಗಮಾರ್ಗಚರಿತವನುವರ । ಯೋಗಿಗಳಿಗುಪದೇಶಿಸುತನಿಜ । ಯೋಗಸುಖಸಾಂ
ಬ್ರಾಜ್ಯಪದದಲಿನಿಂದನಾವೃಷಭ ॥ ... ...

ಪದನು ॥ ಅರಸಕೇಳಾತ್ಮಜರಿಗಿಹಪರ । ಪರಮಸುಖಸಾಧನವನೊರೆದನು । ಧರೆಗೆಹಿತವೆನಲಾವೃಷಭನಾತ್ಮಾವಗಮ
ಪದವ ॥ ಪರಮಮಂಗಳಮೂರ್ತಿವಿಶ್ರುತ । ಧರಣಿಪಾವನಕೀರ್ತಿಧರೆಯಲಿ । ಭರತನಲಿಪಟ್ಟಾಭಿಷೇಕವನಾಡಿಸೇರಿಸಿದ ॥೧॥
ಉಳಿದನಿಹಪರಲೋಕವೆರಡರ । ಬಳಿಕೆಯನುಬಾಹ್ಯೇಂದ್ರಿಯಂದಳ । ದುಳವಜರದನುವಿಷಮವಿಷಯವಿಷೋಪಭೋಗದಲಿ ॥
ಎಳಸುವಂತಃಕರಣನಿಕರವ । ಕಳೆದುಸಹಜಾನಂದಮಯನಿಜ । ಸುಲಭಸುಖವನುತೋರಿಸಂತವಿಸಿದನುತನುಮನವ ॥೨॥
ಒಳಗೆತನನಿಧಿಸುಲಭವಾಗಿರೆ । ತೊಳೆಯಲೇತಕೆಜರಗನಾತ್ಮನ । ನೆಲೆಯನರಿದನುಭವಿಗೆಕರಣೇಂದ್ರಿಯದಗೋಚರದ ॥ ಬಳಿ
ಯಹಂಗೇಕಕಟಕರ್ಮದ । ಫಲವೆನಿಪಲೋಕಾಂತರದಸುಖ । ಕೆಳಸುವನೆಕಡುತುಚ್ಛದಿರವಿಂಗರಸಕೇಳೆಂದ ॥೩॥ ಅಭಯ
ವನುಸಲೆಸರ್ವಭೂತ । ಪ್ರಭವನೆಲ್ಲರಿಗಿತ್ತುಕಾಯುವ । ನುಭಯಕರಣಕಲಾಪವನುಮನದಿಚ್ಛೆಯಲಿನಿಲಿಸಿ ॥ ತ್ರಿಭುವನಾರಾಧಿತ
ಸುಕರಣ । ಕ್ಷುಭಿತಮನವನುಬಳಿಕಬುದ್ಧಿಯ । ವಿಭವದಲಿನಿಲಿಸಿದನುಸತ್ವಗುಣಾನುರೋಧದಲಿ ॥೪॥ ಹಿಡಿದುಮೌನವ್ರತ
ವನೆಲ್ಲರ । ಗಡಣವನುನೆರೆತೊರೆದುಕಂಡೊಡೆ । ಜಡನೊಮೂಕನೊಬಧಿರನೋಬಾಹಿರನೊಯೆಂಬಂತೆ ॥ ಒಡಲಹತ್ತಿದಮಂಣು
ಮೈಲಗೆ । ಮುಡಿಯಜೀರ್ಣಾಂಬರದಕೆದರಿದ । ನಿಡುಗುರುಳಕಮನೀಯನೆಸದನುಯೋಗನಿಷ್ಠೆಯಲಿ ॥೫॥ ಸಂಕಲೆಯಮುರಿ
ದುಡಿದುಕಂಭವ । ನಂಕುಶವನಸಬಡಿದುಬಹನಿ । ಸ್ಸಂಕಮದಗಜದಂತೆಮಮತೆಯಪಾಶವನುಹರಿದು ॥ ಬಿಂಕದೊಡಲಿಂದ್ರಿಯ

ನಿಬಂಧದ | ಸುಕೃತಿಯನೀಡಾಡಿವಿಧಿಗಳ | ಕಿಂಕರತೆಯನುಮೀರಿನಡೆದನುಯೋಗಮಾರ್ಗದಲಿ || ೬ || ಪುರವರಗ್ರಾಮಾಕ
ರಾಶ್ರಮ | ಗಿರಿನದೀಸಾಗರಶಿಬಿರಮಂ | ದಿರವನವ್ರಜಘೋಷಖರ್ವಟಖೇಟಮೊದಲಾದ || ಪರಿಪರಿಯಜನವಾಸನಿಕರದೊ |
ಳಿರುಳುಹಗಲಾಸಾರಹಿಮವೆಂ | ದಿರದೆಮಾವನಮೂರ್ತಿಸುಳಿದಾಡಿದನುಧರೆಯೊಳಗೆ || ೭ || ತತ್ತ್ವದಾವಾಸಿಗಳೆನಿಪದು | ವೃತ್ತ
ರೀತನಕಂಡುಮರುಳನೊ | ಮತ್ತನೋಜಡನೋವಿಕಾರಿಯೊಯೆನುತತಮತಮಗೆ || ಬೆತ್ತಲೆಯಬಿಡುದಲೆಯಬೊಂಮಜ |
ಪ್ರಸ್ಥಳಿಯನಾವರಿಸಿಸಲೆಬೆಂ | ಬತ್ತಿಕಾಡುತ್ತಿರ್ದುದೆಲೆನೀನಾರುಪೇಳೆನುತ || ೮ || ಬಿಡದೆಕೈವರೆಗುಟ್ಟಿಕಾಡುವ | ರೊಡೆಯ
ರಿಲ್ಲದಯೋಗಿಯನುತಾ | ನೊಡೆಯನಿಕರಬ್ರಹ್ಮವಿದರಿಗೆತನಗವಿಂನಾರು || ಒಡೆಯರಕಟಾಪಾಪನಿಷ್ಠರ | ಜಡರತಾಡನತರ್ಜ
ನಂಗಳ | ಗೊಡಲಧರ್ಮವಿದೆಂದುನೋಡನುನುಡಿಯನವಧೂತ || ೯ || ಮತ್ತಗಜನೊಣಗಳಿಗೆಧಿಟಕ್ಕೈ | ಯೆತ್ತುವುದೆಸಾಗರ
ಕೆನೊಂಜಿನ | ಮುತ್ತಿಗೆಯಬೇನಹುದುಪರಿಭವವಕಟಸುರಗಿರಿಗೆ || ಒತ್ತುಗಾರನೆಪವನನಜ್ಞವ | ಮೊತ್ತಪರಿಭವಿಸಿದಡೆಯೋ
ಗಿಯ | ಚಿತ್ತಚಂಚಲವಹುದೆಯಂದರಿವಂತೆವಿಹರಿಸಿದ || ೧೦ || ಆರುನೀನೆಂದಲ್ಲಿಗಲ್ಲಿಗೆ | ಭೂರಿವಿಜ್ಞಾನಾಂಬುಧಿಯನವಿ |
ಚಾರಿಗಳನುಡಿಯದಡೆಗರ್ವಿಕನೆಂದುಬಹುವಿಧದ || ಘೋರಯಾತನೆಪಡಿಸುವರುನಿಜ | ಧೀರವೀರನುಯೋಗಿಗಳದಾ | ತಾರ
ನನ್ಯಶರೀರದುಃಖದವೋಲುನೆರೆಕಂಡ || ೧೧ || ಉಸುರದಡೆಮೇಲುಗುಳುವರುಪೀ | ಡಿಸುವರಿಡುವರುಕಾಡುವರುಮೂ |
ತ್ರಿಸುವರಜ್ಞಾನಿಗಳುಹುಡಿಯನುಹೊಯ್ಯುದುಕಂಣೊಳಗೆ || ಘಸಣಿಗೊಳಿಸುವರಕಟಕಟದು | ವ್ಯಸನಿಗಳುದುಶ್ಚೇಷ್ಟಿಕನಸಿನ |
ವಿಷಯದಂತಿರೆತೋರ್ಕೆಬಾಧಕವಾಗಿಮುನಿವರಗೆ || ೧೨ || ಅಕಟಕೆಲರದರೊಳಗಭಾಗ್ಯಾ | ಧಿಕರುಕಾರಣಪುರುಷನೆಂದತಿ |
ಭಕುತಿಯಲಿವೈದೊಳದುದಿವ್ಯಾಂಬರವನೊಸದುಡಿಸಿ || ಮಕುಟಕುಂಡಲಹಾರಮಣಿಮು | ದ್ರಿಕೆಯನೊಪ್ಪಿರೆಕೊಡಿಸಿಸುಜನ |
ಪ್ರಕರವಂದ್ಯನನರ್ಚಿಸುವರವಮಳಾಸನಾದಿಯಲಿ || ೧೩ || ಬಂಧುಗಳವೋಲಖಿಳಜನನಿಜ | ಬಂಧುವನುಸತ್ಕರಿಸುವರುಗುಣ |
ಗಂಧರಹಿತನತನುವಿನಲಿಕಸ್ತೂರಿಕುಂಕುಮದ || ಗಂಧವನುಲೇಪನವಮಾಳ್ಪರ | ನಿಂದನಜ್ಯೋತಿಗೆಶರೀರನಿ | ಬಂಧನದಸತ್ತ್ವಾ
ರನೀರಾಜನವರಚಿಸುವರು || ೧೪ || ಒಸದುದಿವ್ಯಾಸನವನಿತ್ತ | ರ್ಚಿಸಿಸುರಾರ್ಚಿತಚರಣನನುಷಡು | ರಸದಪರಮಾಂನವ
ನುಮುಂದುಣಬಡಿಸಿಪೊಡವಡಲು || ಉಸುರದೇಪ್ರತಿಮೆಯವೊಲಿರಲೀ | ಕ್ಷಿಸುತಕೆಲರೂಡುವರುಹರಹರ | ಶಿಶುಗಳಂಗೂಡು
ವವೊಲಾತ್ಮಸುಖೈಕವಿಗ್ರಹಗೆ || ೧೫ || ಕಾಡಿದರೆಖಳರಕಟಸಜ್ಜನ | ರೂಡಿದಡೆಸುಖದುಃಖವನುಸರಿ | ಮಾಡಿಕಂಡನುಕೆಲದ
ಲಿದ್ದೀಕ್ಷಿಸುವಪೆರರಂತೆ || ಕೂಡದಗಲದವಿಶ್ವತೋಮುಖ | ನಾಡುತಿರ್ದನುಶಿವಶಿವೆಂತುಟೊ | ರೂಡಿಗನುಪಮನಂಪ್ರಸಂಸ್ಪ
ರುಶನದಪಾವನಕೆ || ೧೬ || ವಿವಿಧಬುದ್ಬುದನಿಕರವೇಕಾ | ರ್ಣವದಕಡೆಯಲಿತೋರಿತಂಮೊಳು | ಬವರಿಸಿದಡಳಿದಡೆಮಹಾ
ರ್ಣವವಳಿಯದಂತಂತೆ || ಅವಿರಳಜ್ಞಾನಾಮೃತಾಬ್ಧಿಗೆ | ಸವನಿಸುವದಂತೇಕದೇಶೋ | ದ್ಭವವಿಕೃತಿಕನುಧರ್ಮವೆಂಬಂತಿರ್ದ
ನವಧೂತ || ೧೭ || ಹುಲ್ಲಮೇವುತಹಸುವಿನಂತಿರೆ | ಹುಲ್ಲೆಯಂತಡವಿಯಲಿಚರಿಸು | ತ್ತಲ್ಲಿಗಲ್ಲಿಗೆಬಲಿಗಳನುಕಾಗೆಗಳವೋ
ಲುಣುತ || ಬಲ್ಲವನುಜಡನಂತೆತನುಬಲ | ವುಳ್ಳವನುಮೇಣಬಲನಂತಿರೆ | ನಿಲ್ಲದೊಲಿದಂದದಲಿಚರಿಸುತ್ತಿರ್ದನವನಿಯಲಿ || ೧೮ ||
ಕಾಕಮೃಗಗೋಚರಿಯೆಯಲಿಜಗ | ದೇಕವಂದಿತನಿಂತುನಡದಂ | ಗೀಕರಿಸಿದನುಮಾಣದಿಂತಜಗರವ್ರತಸ್ಥಿತಿಯ || ಏಕದೇಶ
ನಿವಾಸಶಯನನಿ | ರಾಕುಳಿತನೆನಿಸದನುನಿಜಾತ್ಮವಿ | ವೇಕಿಗಳದಾತಾರನಾಹಾರವನುನೆರೆತೊರೆದು || ೧೯ || ಮಲಗಿದಲ್ಲಿಗೆಬಂ
ದಶನವ | ನೊಲಿದುಕೈಕೊಳುತಿಲ್ಲದಿದ್ದಡೆ | ಹಲವುದಿನಪರಿಯಂತನಾಹಾರದಲಿಸೈರಿಸುತ || ಲಲಿತಪರಮಾನಂದದನುಭವ | ಸು
ಲಭಸಾಮ್ರಾಜ್ಯೋಪಭೋಗ | ಸ್ಖಲಿತನಿರ್ದನುವೀತನಿದ್ರನುಮಲಗಿಧರಣಿಯಲಿ || ೨೦ || ಅಲ್ಲಿಯೇವಿಷ್ಟಮೂತ್ರಸು |
ತಲ್ಲಿಯಾರೋಗಿಸುತಮಲಗಿ | ದ್ದಲ್ಲಿಯೇಪಾನಾದಿಕರ್ಮಂಗಳನುವಿರಚಿಸುತ || ಬಲ್ಲರಾರದನಕಟಕಟಬಕ್ಕೈ | ವಲ್ಯನಾಥನಲೀ
ಯನುತಂ | ನಲ್ಲತಾನಿಂತಾಡುತಿರ್ದನುನಿಜವಿನೋದದಲಿ || ೨೧ || ಏಸುಘನವೋಶಿವಶಿವಾಯೋ | ಗೀಶವಂದ್ಯನನುಹುವೆ
ನಂತ್ರಪು | ರೀಷಪಾವನಗಂಧವಹನಾನೂರುಯೋಜನದ || ದೇಶವನುಮಘಮಘಿಸಿಪರಿಮಳ | ಸೂಸಿದುದುದೆಸೆದೆಸೆಗೆತತ್ತ
ದ್ದೇಶಜನಬೆರಗಾಗಿರಿಸಿದನುವಿವಿಧಲೀಲೆಯಲಿ || ೨೨ || ಇಂತುಸಾಕ್ಷಾತ್ಕೃತನಿಜಾತ್ಮನಿ | ರಂತರಾನಂದಾನುಭವವಿ | ಶ್ರಾಂ
ತಮತಿತಂನೊಳಗೆತಾನೊಲಿದಾಡುತಿರಲಿರಲು || ಸಂತತಾಷ್ಟೈಶ್ವರ್ಯಗತಿಗಳು | ಮುಂತೆಬಂದೋಲಗಿಸುತೀಕ್ಷಿಸು | ತಂತರಾಯ
ವಿದೆಂದುಳಿದವಣಿಮಾದಿಸಿದ್ಧಿಗಳು || ೨೩ || ಎಂದಡಾಮುನಿಪತಿಗೆನೃಪನಿಂ | ತೆಂದನೆಲೆಮುನಿನಾಥವರಮಾ | ನಂದನಿಧಿನಿರ
ಯನೆನಿಸುವವೃಷಭದೇವನಲಿ || ಬಂದಲರಿವುದೆಮಾಯೆತದ್ಗುಣ | ವೃಂದವಿದುತಾನಲ್ಲಹುಸಿಕನ | ಸೆಂದರಿದಧೀರಂಗೆವಿರತಿಯ
ದೇಕೆತನಗೆಂದ || ೨೪ || ನೆಟ್ಟಕರಗಿದಬೀಜವಂಣೊಳ | ಗಿಟ್ಟಡದುಮುಂನಿನವೋಲಂಕುರ | ಹುಟ್ಟಲರಿವುದೆತೋರ್ಪಮಾ
ಯಾಗುಣದತನುಧರ್ಮ || ಮುಟ್ಟಲರಿವುದೆಯೋಗಿಯನುಚೇ | ರ್ಪಟ್ಟುಹುಸಿಯಂದರಿದಧೀರನು | ಬಿಟ್ಟನೆಂತೈಶ್ವರ್ಯಗತಿಗಳ
ನೆಂದಡಿಂತೆಂದ || ೨೫ || ಗಾರುಡವನಾಬಲ್ಲನೆನುತವು | ಘೋರಗನಮೈಮೇಳಸುಖವೇ | ಧಾರುಣೀಪತಿಯೆವೃಥಾಮಾಕಾ

ಭಿಮಾನದಲಿ ॥ ಆರುವಿಶ್ವಾಸಿಸುವರೀವೈ | ಕಾರಿಕದಮನವಿದನೆನುತ್ತಾ | ಧೀರವೀರನುಬಲ್ಲವರಿಗಿದನರುಪುವಂತಿರ್ದ ॥ ೨೬ ॥
ಬಲ್ಲೆನಾನೌಷಧವನೆಂದುಣ | ಬಲ್ಲನೈಪಥ್ಯೈಕತನಾಂನವ | ನಿಲ್ಲಿಹುಸಿಮಾಯಾಪ್ರಪಂಚವಿದೆಂದುನೆರೆತಿಳಿದು ॥ ನಿಲ್ಲದಾನಂದಾನು
ಭವಪದ | ದಲ್ಲಿಸಾಕ್ಷಾತ್ಕರಿಸಿತನುಮನ | ತಲ್ಲಯವನೈದುವನನಂಬುವುದುಚಿತವಲ್ಲೆಂದ ॥ ೨೭ ॥ ನಿರ್ವಳಿತದಲ್ಲನವರತಕ |
ರ್ತವ್ಯವಿತರವಿರಕ್ತಿಮುನಿಜನ | ಸೇವ್ಯನಂತದರಿಂಮಹದೈಶ್ವರ್ಯಸಿದ್ಧಿಗಳ ॥ ಭವ್ಯಸುಖದೌಪಾಧಿಕವಿದೆಂ | ದವ್ಯಯನುಮೈ
ಗೊಡದೆವಿಸ್ರ | ಸ್ತವ್ಯವಿದೆಯನುತಾಡುತಿರ್ದನುಸೌಖ್ಯನಿಷ್ಠೆಯಲಿ ॥ ೨೮ ॥ ಅರಸಕೇಳೈಮೌನಿವೈಯ್ಯಾ | ಕರಣರೆಂದೀತೆರ
ದಯೋಗಿಗ | ಳರದೆನೀತಿಕ್ರಿಯೆಯಖಿಳವನೆಲ್ಲಹೊರಗೆಂದು ॥ ಬೆರಸದೇತರರೊಳೊಬ್ಬನೇಸಂ | ಚರಿಸುವಾತನೆಮೌನಿಯಲ್ಲ
ವ | ಬೆರಪಿತಾನೆಂಬವನೆವೈಯ್ಯಾಕರಣನಿವನೆಂದ ॥ ೨೯ ॥ ಆರವಸ್ಥೆಗಳಾತ್ಮವಿದ್ಯೆಯ | ಧೀರರಿಗೆಕೇಳರಸಮೌನಿಗೆ | ಮೂರು
ಬಾಲೋನ್ಮತ್ತರಂತೆಪಿಶಾಚನೆಂಬಂತೆ ॥ ಮೂರುವೈಯಾಕರಣಯೋಗಿಗೆ | ತೋರುವನುವರಕರ್ಮಿಯಂತಿರೆ | ತೋರುವನುಧಿಟ
ಯೋಗಿಯಂತ್ರವಿಮೂಢನಂತಿರಲು ॥ ೩೦ ॥ ವಾದುಗುಟ್ಟನಶೇಷಶಾಸ್ತ್ರವ | ನಾದರಿಸನುಪಪಂನಶಿಷ್ಯರ | ಭೇದವನುಭಾವಿಪ
ಡೆಕೊಡನುಪದೇಶವನುಮೌನಿ ॥ ವೇದಶಿರದರ್ಥವನುತಿಳಿದ | ಗಾರ್ದಡುಪದೇಶಿಸುವನಧಿಕದ | ಯೋದಧಿಯೆನಿಪ್ಪಾತವೈ
ಯ್ಯಾಕರಣನವನೆಂದ ॥ ೩೧ ॥ ಲೋಕಹಿತವಿಗ್ರಹನಖಿಳಜಗ | ದೇಕನಾಥನುಮೌನಿಯೊಲುವೈ | ಯ್ಯಾಕರಣಯೋಗಿಯೊಲು
ವಿವಿಧವಿಚಿತ್ರಲೀಲೆಯಲಿ ॥ ಆಕೃತಿಯಗುಣವೃತ್ತಿಗಳನುನಿ | ರಾಕರಿಸಿನಿಜಯೋಗಿಪದವವಿ | ವೇಕಿಗಳಿಗುಪದೇಶಿಸುವೊಲಿಂ
ತಿರ್ದನವಧೂತ ॥ ೩೨ ॥ ರಾಗವಿಲ್ಲೇತರರೊಳುಮೇಣಾವಿ | ರಾಗವಿಲ್ಲಾರೂಢಪದದಲಿ | ಯೋಗಿಗಳದಾತಾರನಖಿಳಸಮಾನ
ಬುದ್ಧಿಯಲಿ ॥ ಆಗುಹೋಗೆಂಬುದನುಕಾನುವಿನ | ತಾಗುಬಾಗೆಂಬುದನುಕಾಣದೆ | ಮೇಗರೆಯುಮಮತೆಯಲಿಸಾಕ್ಷಿಯೊಲಿರ್ದನ
ಖಿಳದಲಿ ॥ ೩೩ ॥ ಮಂಜುಮುಸುಕಿದರವಿಯೊಹೊಗೆಯಲಿ | ರಂಜಿಸುವಹುತವಹನೊಮಾಯೆಯ | ಪಂಜರದಪರಮಾತ್ಮನೋ
ಹರಹರಮಹಾದೇವ ॥ ವ್ಯಂಜಿಸುವಸರ್ವಾಂಗಲಕ್ಷ್ಮಿಯ | ಕಂಜನಯನನಕೋಮಲಾಕೃತಿ | ರಂಜಿಸಿತುಮೂಜಗಕೆಜಂಗಮ
ತೀರ್ಥವೆಂದೆನಿಸಿ ॥ ೩೪ ॥ ಭೂಶಯನದಲಿಕೆಲವುದಿನವನು | ಹಾಸುಮಂಚಂಗಳಲಿಕೆಲವನು | ಮಾಸಿದಂಬರದಿಂದಕೆಲವನುದಿವ್ಯ
ವಸ್ತ್ರದಲಿ ॥ ಆಸನದಮೇಲೊಂಮೆಭದ್ರಗ | ಜಾಸನದಮೇಲೊಂಮೆವರಯೋ | ಗೀಶವಂದ್ಯನಮೂರ್ತಿರಂಜಿಸುತಿರ್ದುದವನಿ
ಯಲಿ | ಕೆಲವುದಿನವುಪವಾಸದಲಿಕೆಲ | ಕೆಲವುದಿನಕಂದಾಶನಗಳಲಿ | ಕೆಲವುದಿವ್ಯಾಮೃತರಸಾಂನವಿಶಿಷ್ಟಭೋಗದಲಿ ॥ ಕೆಲವುದಿನ
ಮಲಿನಾಂಗದಲಿದಿನ | ಕೆಲವುಮಂಗಳಮಜ್ಜನಂಗಳ | ಲಲಿತವೈಭವಗಳಲಿಸಂದವುಸುರವರಾರ್ಚಿತಗೆ ॥ ೩೬ ॥ ರವಿಯವೊಲುತ
ನುಕರಣಚೇಷ್ಟಾ | ನಿವಹಸಾಕ್ಷಿಸ್ವದಲಿಬೇಸುವ | ಪವನನಂತಿರೆಸಕಲಸಂಗವಿಹೀನವೃತ್ತಿಯಲಿ ॥ ಅವನಿಯಂತಖಿಳಾಶ್ರಯತ್ವ
ದ | ಲವಯಮಾಂಭಸದಲಿಪಾವಕ | ನವಯವೊಲುಪರಿಪೂರ್ಣವೊಪ್ಪುವಗಗನದಂತಿರ್ದ ॥ ೩೭ ॥ ವಾಸನಾಮಾತ್ರದಲಿತನುಬ
ಹು | ದೇಶದೇಶಂಗಳಲಿತೊಳಲಿದ | ದೈಸರಲಿತಾನರಿಯನನುಸಂಧಾನತನಗಿಲ್ಲ ॥ ಏಸುಘನವೋನಿತ್ಯಸುಖಮಾ | ರಾಶಿಯೇ
ತಾನಾಗಿತುರ್ಯಾ | ವಾಸದಲಿನಸುನಿದ್ದುಮುಂಕೊಳುತಿರ್ದನೆಚ್ಚರದೆ ॥ ೩೮ ॥ ಇರೆಯದೃಚ್ಛೆಯಲಾಮಹಾತ್ಮನು | ಬರುತಕ
ರ್ನಾಟವನುಕಳಿದು | ತ್ತರದಿಶಾಮುಖದಿಂದಟೆಂಕಣದೆಸೆಯಕೊಂಕಣಕೆ ॥ ಪರಮಪಾವನಮೂರ್ತಿಬಂದನು | ಬರುತಕುಟಜಾ
ಚಳನುಕಂಡವ | ರುರುಭವಶ್ರಮಹರವಮಾಪುತತದ್ವನಾಂತರಕೆ ॥ ೩೯ ॥ ಬೆಟ್ಟವನುತಿರುಗುತ್ತಬಾಯೊಳ | ಗಿಟ್ಟುಕೊಂಡಂ
ದಶ್ಮಕಬಳವ | ನುಟ್ಟದನುಮರದಂತೆತನುವನುಮರದುನಿಜಸುಖದ ॥ ಘಟ್ಟಯಾಗಿರೆಕಾಳುಗಿಚ್ಚೊಂ | ದಟ್ಟಬಂದಾವನವಸು
ಡುತವೆ | ಸುಟ್ಟುದಾತ್ರನದೇಹವನುಪರಿಪೂರ್ಣಮಯನಾಡ ॥ ೪೦ ॥ ಆತನಾಚರಿತ್ರವನುಕೇಳ್ದು | ಭೂತಳಾಧಿಪನರುಹನೆಂಬ
ವ | ನಾತನಂತಿರೆನಡೆಯಲೆಂದೊಲಿದಂತೆತಾನಡದು ॥ ಪಾತಕನುಕಲಿಯುಗದದೋಷ | ವ್ರಾತಭಾಜನನಾದಪಾಷಂ | ಡಾತಿಶ
ಯಪಥಕವನುಗುರುವಹನರಸಕೇಳೆಂದ ॥ ೪೧ ॥ ನೀಚರಾತ್ಮಜ್ಞಾನಶೂನ್ಯರು | ಸೂಚಕರುಪರದೋಷರಸಜ್ಞ | ನಾಚಮನರ
ವ್ರತರುವೇದಾಚಾರನಿಂದಕರು ॥ ಶೌಚಹೀನರುಡಾಂಬಿಕರುನಿಂ | ದಾಚರಿತರಾಕಲಿಯುಗದದೋ | ಷೋಚಿತರುನರರಾತ
ನಿಂದತ್ತಕ್ಷುಲಹರೆಂದ ॥ ೪೨ ॥ ವೃಷಭದೇವನವೋಲುನಡದಾ | ವಸುಮತೀಶನುಕೆಟ್ಟನಾತನ | ವಿಷಯಜನಪವನಂತೆತಂತಂ
ಮ್ಮಿಚ್ಛೆಯಲಿನಡದು ॥ ವಸುಧೆಯಲಿಪಾಷಂಡಪಥವೇ | ಪಸರಿಸಿದುದವರಿಂದಹಿರಿಯರ | ವಿಷಮಚರಿತವಕಂಡುಚರಿಸುವುದು
ಚಿತವಲ್ಲೆಂದ ॥ ೪೩ ॥ ಭೂತಭವ್ಯಭವತ್ರಿಕಾಲ | ಜ್ಞಾತಪುರುಷರೊಳಾರುಸರಿವಿ | ಜ್ಞಾತತತ್ವರುವೃಷಭದೇವನೃಪಾಲನೊಂ
ದೊರೆಗೆ ॥ ಭೂತಳದೊಳೆಲೆನೃಪಪ್ರಿಯವ್ರತ | ನೇತರದೊಳರ್ಚಿಸಿದನೋಸಾ | ಖ್ಯಾತವಿಷ್ಣುವೆವಂಶಸಂಭವನಾದನಾತಂಗೆ ॥
ಅರಸಕೇಳೈವೃಷಭದೇವನ | ಪರಮಪುಣ್ಯಚರಿತ್ರಗುಣಸಾ | ಗರಸುಧಾಸಲಿಲಾವಗಾಹವೆಸಕಲಜೀವರಿಗೆ ॥ ದುರಿತಭಯಹರ
ವಾಯ್ತುಸುರಮುನಿ | ವರರದಾವನಚರಣಯುಗಳ | ಸ್ಮರಣೆಯಲಿಸಂಸಾರಭಯವನುಗೆಲುವೆದನೆಂದ ॥ ೪೫ ॥ ಪಾಪಹರವಿ

ದುಃಖಕಲುಷನಪ್ಪನು । ತಾಪಸತಪಸ್ವಿಸ್ತ್ರೀಗೆಸಲೆನಿ । ರ್ಲೇಪಕರವಿದುವಿವಿಧದಾತಕೆರಂಕಲಿಸ್ತ್ರೀಗೆ ॥ ದೀಪನೆಂಬ ವಿದುದೀಪ್ತವಿನು ಲನು । ಹೋಲಿಸನಿರ್ಧರ್ಮಂಗಳಿಗೆಲ । ಸ್ತ್ರೀಪತಿಯಭಕ್ತಿಪ್ರವರ್ಧನವರಸಕೇಳೆಂದ ॥ ೪೬ ॥ ಸಾರವೀವೇದಾಂತದರ್ಥದ । ಸಾರವಿದುಪುರಾಣದರ್ಥದ । ಸಾರವಿದುಶಾಸ್ತ್ರಾಗಮಪ್ರತಿಪಂನಸಾಧನದ ॥ ಸಾರವಿದುಪುರುಷಾರ್ಥನಿಕರದ । ಸಾರವಿದುಭಕ್ತಿಮುಕ್ತಿಗೆ । ಸಾರವೀಸಂಸಾರದೊಳಗಿದುಪೂರಕೇಳೆಂದ ॥ ೪೭ ॥ ಅವನಿದನೋದುವನುಕೇಳುವ । ನಾವನಿದಕನುಮೋದನಪ್ಪನು । ನೀವನಿಂತೀವೃಷಭಚರಿತನುಪಾಪ್ಮತಾಂಬುಧಿಗೆ ॥ ಮೂವರಿಗೆಸರಿಭುಕ್ತಿಮುಕ್ತಿಯು । ನೀವದಿದನಿತ್ಯಸ್ಥನವರನು । ಕಾವನೈಕಾರುಣ್ಯದಲಿನಿಜಪದವನೊಲಿದಿತ್ತು ॥ ... ... ॥ ೪೮ ॥

ಇಂತು ಸಂಧಿ ೪ಕ್ಕಂ ಪದನು ೧೮೩ಕ್ಕೆ ಮಂಗಳಮಸ್ತು

ಐದನೆಯ ಸಂಧಿ

ಭರತನ ಚರಿತ್ರೆ.

ಸೂಚನೆ ॥ ಭರತನಖಿಳಾವನಿಯರಾಜ್ಯವ । ಭರಿತವೆನೆಭೋಗಿಸುತಕಡೆಯಲಿ । ವಿರತನಾದನುವಿವಿಧ
ವಿಷಯಸುಖೋಪಭೋಗದಲಿ ॥ ... ...

ಪದನು । ಅರಸಕೇಳ್ವೃಷಭಚಕ್ರೀ । ಶ್ವರನವರಸುಗುಣಖಿಳಗುಣಸಾ । ಗರನಶೇಷಜನೋಪಲಾಲಿತಪುಣ್ಯಗುಣಕೀರ್ತಿ ॥ ಪರಿಸರಾಯಣನಾತ್ಮವಿದ್ಯಾ । ಪರಿಣತನುಧಾರ್ಮಿಕನುಪೃಥ್ವೀ । ಶ್ವರನೆನಿಪಸಲಹಿದನುಧರೆಯನುತಂದೆಯಾಜ್ಞೆಯಲಿ । ಒಂಚಿಸದೆನಿಜಧರ್ಮಪಥದಲಿ । ಸಂಚರಿಪಿದುದುಸಕಲಜನಸುಜ । ನಾಂಚಿತಾಂಘ್ರಿಗೆಮದುವೆಯಾಗಿರೆವಿಶ್ವರೂಪಸುತೆ ॥ ಪಂಚಜನನಿಕರೇಶ್ವರಗೆನಿಜ । ಪಂಚಜನನಿಯೆನಿಪ್ಪಸತಿಯಲಿ । ಪಂಚಸುತರುತ್ಪನ್ನರಾದರುನಾರವಿಕ್ರಮರು ॥ ಸುಮತಿಸಂಜ್ಞಿಕನುದಿಪಿತದನು । ಕ್ರಮದಿರಾಷ್ಟ್ರಭೃತಾಖ್ಯನೆನೆತ । ತ್ರ್ಯಸುದಲಮುಳಸುದರ್ಶನನುಜನಿಪಿದನುವಾರಣನು ॥ ವಿಮಳವಿಕ್ರಮಧೂಮ್ರಕೇತು । ಪ್ರಮುಖಪಂಚಕುಮಾರಕರುಕುಲ । ಕಮಲಕಮಲಪಿಯರಾಸಂಭವಿಪಿದರುಭೂಪತಿಗೆ ॥ ೩ ॥ ಭರತನೃಪನಿಂನೋಳೆಭಾರತ । ವರುಷವೆಂದಿದಕಾಯ್ತು ಲೋಕೋ । ತ್ತರಮಹಾಪ್ರಖ್ಯಾತಿವಡೆದುದುಸಕಲಭುವನದಲಿ ॥ ಅರಸಕೇಳ್ಸತ್ಕೃತ್ಯನೈದ್ಯನ । ಪರಿಯಲೇಪ್ರಜೆಗಳನುನೆರೆಪತಿ । ಕರಿಸಿನಿಜಧರ್ಮದಲಿಸಲಹಿದನಖಿಳಭೂತಳವ ॥ ೪ ॥ ಹಲವುಯಜ್ಞಂಗಳಲಿಯಜಿಸಿದ । ನಲಘುಮತಿಯಜ್ಞಾಧಿಪತಿಯನು । ನಲಿಸಮಸ್ತಚರಾಚರಾಧೀಶ್ವರನನಚ್ಯುತನ ॥ ನಲಿನನಾಭನನಾರ್ತಜನವ । ತ್ಸಲನನಾಶ್ರಿತಬಂಧುತನುನಿ । ರ್ಮಲನದಯಾಮೃತಸಿಂಧುವನುವಿಪ್ರೋತ್ತಮರುಸಹಿತ ॥ ೫ ॥ ಜಂಗಮಸ್ಥಾವರವನಾಯ । ಜ್ಞಾಂಗದೇವತೆಗಳನುಮಂತ್ರದ । ಸಂಗತಿಯನಾಸಾಧನದಸಾಮರ್ಥ್ಯಸಂಪದವ ॥ ಅಂಗಿಯಾವುರವೈರಿಯಂಗೋ । ಪಾಂಗವಖಿಳವಿಬೇಂದುಫಲದಾ । ಸಂಗವಿಲ್ಲದೆಸಕಲವನುತದ್ರೂಪವನೆಕಂಡ ॥ ೬ ॥ ಅರ್ಪಿಸಿತಲಾಬ್ರಹ್ಮದಲಿವಂ । ನರ್ಪಿಸಲದೇಶೇಂನುತಾನಿದ । ನರ್ಪಿತಾರ್ಪಣವೆಂಬುದಫಲವೆನುತ್ತಮನದೊಳಗೆ ॥ ಅರ್ಪಿಸಿದನರ್ಪಿಸದೆಜಿತಕಂ । ದರ್ಪಕನನೀಧ್ಯಾನಲಿತಂನನು । ತಪ್ಪಿಸಿದನಿಂತುಭಯಕರ್ಮನಿಬಂಧನದಪಥನ ॥ ೭ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

ಇಂತುಹರಿಪದಭಕ್ತಿಸುಖವಿ । ಶ್ರಾಂತಕರಣಾನೀಕನನುಳ । ಸ್ವಾಂತದಲಿತನ್ಮೂರ್ತಿಲಾವಣ್ಯೈಕಸಂಪದವ ॥ ಚಿಂತಿಸುತತದ್ಭಾವದಲಿನಿ । ಶ್ಚಿಂತನಿತರಸುಖೋಪಭೋಗ । ಭ್ರಾಂತಿಭಾವವನುಳಿದುತನ್ಮಯನಾದನವನೀಶ ॥ ೮ ॥ ಕ್ಷಿತಿಪನಿಂತೊಪ್ಪಿದಲವರುಷಾ । ಯುತಸಹಸ್ರವನಾತ್ಮವಿದ್ಯಾ । ಪ್ರಥುಮೆಯಂತೆಸದಿರ್ದನಾರಾಜ್ಯೋಪಭೋಗದಲಿ । ಮತಿಯುತನುರಾಜ್ಯವನುತಂನಯ । ಸುತನೆನಿಪಸುಮತಿಯಲಿಸೇರಿಸಿ । ಜಿತಮನೋವಿಭ್ರಮನುಪುಲಹಾಶ್ರಮಕೆನಡೆತಂದ ॥ ೯ ॥ ಅಲ್ಲಿಸುರವರವಂದ್ಯಪದಯುಗ । ಪಲ್ಲವನೆನಿಪ್ಪನುಳಲಕ್ಷ್ಮೀ । ವಲ್ಲಭನಸಾಂನಿಧ್ಯಗುಣಸಂಪಂನವಹರೆಂಳಗೆ ॥ ಸಲ್ಲಲಿತನದನದಿಯೊಳಗೆಕ । ಲ್ಲೊಳ್ಳಚಕ್ರಾಂಕಿತತದಾಶ್ರಯ । ವೆಲ್ಲನದಿಯುದಕದಲಿಪಾವನವರಸಕೇಳೆಂದ ॥ ೧೦ ॥ ಚಕ್ರನದಿಯಲಿಮಿಂದುಪಾತಕ । ಚಕ್ರವನುಕೆಡೆಯೊದದುತ್ರಿಭುವನ । ಚಕ್ರವರ್ತಿಯನಿಪ್ಪಸಕಲಚರಾಚರಾತ್ಮಕನ । ಚಕ್ರಪಾಣಿಯಚಾರುಪದವನು । ಪಕ್ರಮಿಸಿದನುಪೂಜಿಸಲುನೃಪ । ಚಕ್ರವರ್ತಿನಿವರ್ತಿತಾಖಿಳವಿಷಯವಿಜಿತಾರ್ಥಿ ॥ ೧೧ ॥ ಮಲ್ಲಿಗೆಯಮೊಗ್ಗೆಗಳನಮಳೋ । ತ್ಪಲ್ಲಕುಂದಪ್ರಸವದೂರ್ವಾ । ಪಲ್ಲವಾಂಕುರಪತ್ರವೆಂಬವರಿಂದಕರಿಪದಕೆ ॥ ವಲ್ಲಭೆಯನಿಪ್ಪಮಳತುಳಸೀ । ಸಲ್ಲಲಿತಪುಷ್ಪಂಗಳಲಿಭೂ । ವಲ್ಲಭನುಪೂಜಿಸಿದನಾಜಗದೇಕವಲ್ಲಭನ ॥ ೧೨ ॥ ಕಂದಮೂಲಫಲಗೋಹರಾದಿಗ । ಳಂದನೈವೇದ್ಯಾದಿಕವನಾ । ನಂದಮೂರುತಿಗಿತ್ತುತತ್ಪಾವನಪದಾಂಬುಜಕೆ ॥ ವಂದಿಸುತತದ್ಗತನುನೋವುತಿ । ಬಿಂದವಿವಿಧಸ್ತೋತ್ರವನುಸಾ । ನಂದದಲಿಪಠಿಸುತ್ತದಾಸೋಹಂಯೆನುತಿರ್ದ ॥ ೧೩ ॥ ಲಲಿತಮೂರ್ತಿಧ್ಯಾನರಸಪರಿ । ಲುಳಿತಹೃದಯಕಷಾಯನಯನೋ । ದ್ಗಳಿತಸಾಂದ್ರಾನಂದಬಾಷ್ಪವಿಶಾಲಿ

ತೇಕ್ಷಣದ ॥ ಪುಳಕಿತಾಂಗದಪೂರ್ಣಸುಖರಸ । ಜಲಧಿವಗ್ನಮನೋವಿಹಾರದ । ಸುಲಭಭಕುತಿಸುಧಾಮಹಾರ್ಣವದಂತೆನೃಪನೆಸೆದ ॥ ೧೪ ॥

ಹರಿಪದಸ್ಮೃತಿಮಾತ್ರದಲಿಮನ । ಕರಗಿವಾಗ್ವೃತ್ತಿಗಳಗರ್ಭೀ । ಕರಿಪಿದವುಗದ್ಗದರವಾಕ್ಷರಪಾರವಶ್ಯವನು ॥ ಬೆರಸಿತನ್ಮಯನಾಗಿನೃಪನಿ । ದ್ದಿರವನಾಪೂಜಾವಿಧಾನದ । ಪರಿವಿಡಿಯುಪರಾತನೆನವನೆಲ್ಲವಮರೆದುಕುಳ್ಳಿರ್ದ ॥ ೧೫ ॥

ಕಂದೆರದುಕಮಲಾಕ್ಷಮುನಿಜನ । ವಂದ್ಯಮುರಹರಮಧುವಿದಾರಿಮು । ಕುಂದಭಕ್ತಾಭೀಷ್ಟದಾನವಿನೋದಿಭವವೈರಿ ॥ ನಂದನಂದನನಾರದಾದಿಮು । ನೀಂದ್ರಸೇವಿತಪಾದಹರಿಗೋ । ವಿಂದಗೋಕುಲದರಸಯೆನುತೆಸದಿರ್ದನವನೀಶ ॥ ೧೬ ॥

ಒಂದುದಿನವರಚಕ್ರನದಿಯಲಿ । ಮಿಂದುಸಂಧ್ಯಾವಂದನವನರ । ವಿಂದಸಖನುದಯದಲಿಮಾಡುತ್ತಮಳಭಕ್ತಿಯಲಿ ॥ ನಿಂದಿರಲುನೃಪನೆಡೆಗೆಘನತೃಷೆ । ಯಿಂದಗರ್ಭಿಣಿಹರಿಣಿವಧುನಡೆ । ತಂದುದಲ್ಲಿಗೆವಿಮಳಜಲಪಾನಾಭಿಲಾಷೆಯಲಿ ॥ ೧೭ ॥

ಬಂದುದೋಮೃಗವಕಟನಾರಿಯು । ತೆಂದುದೆನೃಪವನಗೆಹರಹರ । ನಿಂದುಜಲವನುನಿಲುಕಿಕುಡಿವುತ್ತಿರಲುಮೃಗವನಿತೆ ॥ ಹಿಂದೆಬರಪಿಡಿಲೆರಗಿದಂದದ । ಲೊಂದುಸಿಂಹಧ್ವನಿಮಹಾರವ । ದಿಂದಗಿರಿಬಿರಿವಂತೆಕೇಳಲುಬಂದುದಾಕ್ಷಣಕೆ ॥ ೧೮ ॥

ಮೋರೆನೀರೊಳಗಿರಲುಕಂಗಳು । ಬೇರೆನೆದರುತ್ತಿರಲುತನುಬಾ । ಯಾರಿಬಳುಕುತ್ತಿರಲುಸಿಂಹಧ್ವನಿಯನದಕೇಳಿ ॥ ಹಾರಿದುದುಮೇಲಿಂಕ್ಕೆಶಿಶುವದು । ಜಾರಿಬಿದ್ದುದು ಜಲದೊಳಗೆಬಳಿ । ರೋರುಗುಡಿಸಲುಕಾಣುತಿರ್ದನುನೃಪತಿಸಂಕಟವ ॥ ೧೯ ॥

ನೀರೊಳಗೆಮುಳುಗಾಡುತೇಳುತ । ಧಾರುಣೀಶನಮುಂದೆಹರಿಣೀ । ದಾರಕನುಪೊನಲೊಳಗೆಹೋಗುತ್ತಿರಲುತನಿಗೆಡದು ॥ ಪ್ರಾರಬುಧನ್ವೈಚಿತ್ರಗತಿಯನ । ದಾರುಬಲ್ಲನರಕಟಕಂಡನು । ದಾರಕಾರುಣ್ಯಾಬ್ಧಿತದವಸ್ಥೆಯಮೃಗಾರ್ಭಕನ ॥ ೨೦ ॥

ಹೆತ್ತತಾಯಂದದಲಿನೃಪನದ । ನೆತ್ತಿಕೊಂಡಕಟಕಟಮೃಗಶಿಶು । ಸತ್ತುಳಿದುದಾನಿದ್ದ ಕಾರಣವಾಯ್ತು ಹೊನಲೊಳಗೆ ॥ ಇತ್ತುಬಹೆನಿದರನ್ನೆಗಿದನೆನು । ತುತ್ತರಿಸಿತೀರವನುಕಂಡನು । ಹೆತ್ತವೇದನೆಯಿಂದಮಡಿದಿರ್ದಾಮೃಗಾಂಗನೆಯು ॥ ೨೧ ॥

ಭಯದಲತಿಶಯವೆನಿಸೆನೀರಡಿ । ಕೆಯಲಿಗರ್ಭಚ್ಯುತಿಯಲಾಕ್ರಾಂ । ತಿಯಮಹಾಶ್ರಮದಿಂದಮಡಿದುದೆಶಿವಶಿವಮಹಾದೇವ ॥ ಕ್ರಿಯವೆನಲುತಾನೀಶಿಶುವಕತಿ । ಪೆಯದಿನವನಾರೈದುಹರಿಣಾ । ನ್ವಯಕೆಸೇರಿಸಿಕೊಡುವುದೇಸದ್ಧರ್ಮವೆನಗೆಂದ ॥ ೨೨ ॥

ಬಂದನಂದರವಿಂದಸಖಗಾ । ನಂದದಲಿನೃಪನಮಿಸಿಸಂಧ್ಯಾ । ವಂದನಕ್ರಿಯೆಗಳನುತತ್ಸಹಚರಿಯೆಯಲಿರಚಿಸಿ ॥ ಬಂದನಾಶ್ರಮಕಾಗಿನೃಪಕುಲ । ನಂದನನುಮನದೊಳಗೆತಕ್ಷಿಸು । ವಂದನೆಂತಿದನೆನುತತದ್ಯೋಗ್ಯೈಕಪರನಾದ ॥ ೨೩ ॥

ಮೇಯಕಲಿಸಿದನೊಯ್ಯನೊಯ್ಯನೆ । ತಾಯಿಯಿಲ್ಲದಶಿಶುಪವನದೊಳ । ಗಾಯಿದಾಯ್ದೆಳೆದಳಿರುತೃಣದೂರ್ವಾಂಕುರಾದಿಗಳ ॥ ಬಾಯೊಳಗೆಬೆರಳಿಟ್ಟುಕಲಿಸಿದ । ನಾಯಸಕ್ಕೆಲಸದೆಮಹೀಪತಿ । ದಾಯಿಗನವೋಲಿರಲುನಡೆಗಲಿಸಿದನುಮೃಗಶಿಶುವ ॥ ೨೪ ॥

ಮರೆದನಾಮುನ್ನಿನಸಮಾಧಿಯ । ನಿರುಗೆಯನುಮೃಗಶಿಶುವಿನಲಿನೃ । ಮರೆದುಮತಿಯುಸಮಾಧಿಯಲಿತತ್ಪೋಷಣಾದಿಯಲಿ । ಮರೆದನಾಹರಿಚರಣಚಿಂತೆಯ । ತೆರನತತ್ಪೂಜಾವಿಧಾನದ । ನೆರವಣಿಗೆನೆರೆಬೀಳುಕೊಂಡುದುನೃಪತಿಗಾಕ್ಷಣಕೆ ॥ ೨೫ ॥

ಹೃದ್ಯಹರಿಪದಪೂಜೆಯನುಕು । ಳ್ಳಿರ್ದುಮಾಡುತ್ತಡಿಗಡಿಗೆಯೆ । ದ್ದೆದ್ದುನೋಡುವವರಸನಾಮೃಗಬಾಲಕನಗತಿಯ ॥ ನಿದ್ರೆಗೈವುತಮಗ್ಗುಲಲಿಮೃಗ । ಭದ್ರನನುಮಲಗಿಸಿತಳಿರ್ಗಳ । ಗದ್ದುಗೆಯಲೊರಗಿಸುತನೈಮರದೊರಗುವನುಭೂಪ ॥ ೨೬ ॥

ಪದನು ॥ ಸದ್ಗುರುವೆಕೃತಕರ್ಮಭೋಗಾಂ । ತ್ಯದಲಿಬಳಿಕೇನಹರುಕರ್ಮಾ । ಸ್ಪದಶರೀರಿಗಳರಿವೆನಾವೆಂತವರಲಕ್ಷಣವ॥ ತ್ರಿದಶಗಣವಂದಿತನೆಹೇಳೆಂ । ತೊದಗುವರುಸದ್ಗತಿಗೆಕರುಣಿಪು । ದಿದವೆನಲುಕಾರುಣ್ಯನಿಧಿನಗುತೆಂದನವನಿಪಗೆ ॥೧॥ ಚಿತ್ತವಿಸುನೃಪಪಾಪಕರ್ಮವ । ನುತ್ತರಿಸಿನರಕವನುಹೊರವಂ । ಟುತ್ತಣಾವಾಸನೆಯಲಿಸ್ಥಾವರಗಳೆಂದೆನಿಸಿ ॥ ಮತ್ತೆಖಗಮೃಗಪಶುಸರೀಸೃಪ । ಸತ್ವಜಾತಿಯಲುದಿಸಿಕಡೆಯಲಿ । ಮರ್ತ್ಯರೆನಿಸುವರುಭಯಕರ್ಮದಸಾಮ್ಯದಿಂದೆಂದ ॥೨॥ ಅಂಗಹೀನವ್ಯಸನಿಪಾತಕಿ । ಸಂಗಿಸರ್ಪಾಶಂಕಿದೋಷಿಕ । ಲಿಂಗಿಕಾಮಿಪ್ರಾಣಿಹಿಂಸಕಕೋಪಿಧನಲೋಭಿ ॥ ರಂಗಜೀವಿಶ್ರುತಿಪಥವ್ಯತಿ । ಸಂಗಿರೋಗಿಸ್ವಜನವೈರಾ । ನಂಗಿಪಿಶುನಾಸಕ್ತರತಿನರಕಾಗತರೆಂದೆಂದ ॥೩॥ ಬ್ರಹ್ಮಹನುಹ್ಯಯರೋಗಿಸುರೆಯನು । ಕರ್ಮಿಕುಡಿಯಲು

ಶ್ಯಾಮದಂತನು । ಸುಂಮನನ್ಯರಕನಕವನುಕೊಂಡಾತಕುನಖಿಯಲ ॥ ರಮ್ಯಮತಿಗುರುತಲ್ಪಗನುದು । ಶ್ವರ್ಮನಹನುತ್ತಮರೆ
ನಿಂದೆಯ । ನೊಂಮೆ ಕೇಳಲುಬಧಿರನಹನವನೀಶಕೇಳೆಂದ ॥೪॥ ಸತಿಪುರುಷನಿಂದೆಯಲಿಖರನಹ । ನತಿಥಿಗಿಕ್ಕದೆಮುಂಡಡಾಡು ।
ಮರ್ಗತಿಕಪ್ರೋಲವಿಳಂಬಿಸೂರ್ಯಾಸ್ತಮಯಸಮಯದಲಿ ॥ ಅತಿಥಿಬರಲಾಶ್ರಮವಕೊಡದಡೆ । ಸತಿಯನಗಲನಾರ್ಯರಿಂಗನು ।
ಚಿತವಮಾಡಲುಬೇಡಿಪಡೆಯನುಭೂಪಕೇಳೆಂಪ ॥೫॥ ವಿತ್ತವನುವಿಶ್ವಾಸದಲಿಕೊಳ । ಲತ್ಯಧಿಕದುಃಖವನುಗುಣಸಂ । ಪತ್ತಿ
ಯಿಲ್ಲದೆತಂನನುತ್ಕರುಷಿಸಲುವಾಮನನು ॥ ಎತ್ತನೇರೆಕರೀಷಕ್ರಮಿಗೋ । ಹತ್ಯದಲಿಜಾತ್ಯಂಧನಾಗೋ । ವೃತ್ತಿನಾಶನುನಿಬಿಡ
ನಾಶನುಭೂಪಕೇಳೆಂದ ॥೬॥ ಜಾತಿಭಾರ್ಯಾಸ್ನೇಹರಹಿತನು । ಜಾತನಹಗಳಗಂಡಿಪಿಸುಣನು । ಪ್ರೀತಿವಾಶೆನುಪರರಕೃತಪಾ
ಪವನುಸೂಚಿಸಲು ॥ ಪ್ರೀತಿವಕ್ತ್ರನುಲೋಹವಿಕ್ರಯ । ದಾತನನುಮೃಗವ್ಯಾಧನಂನವ । ನಾತುರಿಪಿಮಡಕೆಯಲಿಮುಂಡವಭೃ
ತಕನಹನೆಂದ ॥೭॥ ಉಂಡನಾಡಡಭಕ್ಷ್ಯವನುನೆರೆ । ಗಂಡಮಾಲಿಜಜ್ಞಾನವನುನೆರೆ । ಕೊಂಡಡನ್ಯಾಯದಲಿಮೂಕನುಪುಸ್ತ
ಕಂಗಳನು ॥ ಕೊಂಡಡಂಧನುಪುಣ್ಯಕಥೆಯನು । ಭಂಡುಮಾಡಲುವಕ್ತ್ರನಾಶನು । ಪಂಡಿತಕ್ರಮದೂಷಕನುವಕ್ರಾಕ್ಷನಹ
ನೆಂದ ॥೮॥ ಭೂಪಕೇಳ್ಬ್ರಹ್ಮಸ್ವದೇವ । ಸ್ವಾಪಹಾರವಮಾಡಿದಾತಡು । ಪಾಪಿಮಾಂತಶನಹನುಮಿಗೆಭೃತ್ಯರನುಸಲಹದಡೆ॥
ಪಾಪಿರೋಗಾಸ್ವಿತನಹನುಶಿ । ಷ್ಟಾಪವಾದದಲಲಸನಹನ । ನ್ಯೋಪಕಾರವಿನಾಶವಿಫಲಾರಂಭನಹನೆಂದ ॥೯॥ ತಂಗಿತಾ
ಯಿನ್ನೀದರಿಯರೊಳಾತಾ । ಸಂಗಿಪಿಹಪಾತಕಿಯಬೀಜನಿ । ಜಾಂಗನೆಯನನ್ಯರಿಗೆಕೊಟ್ಟವನಹನುತೂಬರಕ ॥ ಸಂಗಿಪಿ
ದಡೆಸಗೋತ್ರಯಲಿಪಾ । ದಂಗಳೊಳುವ್ಯಾಧಿತನುಖರತುರ । ಗಂಗಳನುಗಮಿಪಿಡೆಕೇಳದುಹೇಯನಹನೆಂದ ॥೧೦॥ ಗುರು
ವಿನಾಜ್ಞೆಯವಿಚಾರಲುಭಗಂ । ಧರಿಯವಜ್ಞೆಯಮಾಡಲಂಧಕ । ನಿರದೆಮಚ್ಛರಿಸುವನುಶ್ವಾವಿಟಂಜ್ಞಮಪಹತಿಯ ॥ ಗುರುವಿ
ನಲಿಸತ್ಕಾರಿವಮಾಡಲು । ಗುರುಚರಣಸೇವೆಯನುಪೇಕ್ಷಿಸೆ । ನರನುಸೆರೆದುಷ್ಪ್ರಜ್ಞನಹನವನೀಶಕೇಳೆಂದ ॥೧೧॥ ಗುರುಗೃ
ಹೋಚಿತಕರ್ಮಶಾತ್ಯದ । ಲಿರದೆಕೃಕಲಾಸಖ್ಯನೆರಗದೆ । ಗುರುವನೆಡದಲಿಮಾಡಿನಡದಾತನುಶಿರೋರೋಗಿ ॥ ಗುರುಪಿತೃ
ಪ್ರಿಯಿಮಾತೃವೃದ್ಧಾ । ತುರರಸಲಜದೆಬಿಟ್ಟಮರ್ತ್ಯರು । ಚರಣರೋಗಿಗಳಕ್ಷ್ಮೆರೋಗಿಗಳಹರುಕೇಳೆಂದ ॥೧೨॥ ಹೊದ್ದ
ಲುರಜಸ್ವಲೆಯನಘಸಂ । ವೃದ್ಧಿಯಾತ್ಯಜನಹೆನುವಸ್ತ್ರವ । ಕದ್ದಪಾತಕಿಬಿಳಿಯವ್ಯಾಯವನಹನುಬೆಳ್ಳಿಯನು ॥ ಕದ್ದವನು
ತಕ್ಷ್ಯಲದಲಹನಾ । ದುರ್ಧರನುನೆರೆಕೂಟಸಾಕ್ಷ್ಯದ । ಲದ್ದವನುಮುಖರೋಗಿಯಹವವನೀಶಕೇಳೆಂದ ॥೧೩॥ ಪ್ರೋಡವಿದು
ಮರರಿಗೀವೆನೆಂದುದ । ಕೊಡದನರನಲ್ಪಾಯುವಹನಳ । ವಡಿಪಿದಪ್ರತ್ಯಯವಕೆಡಿಪಿದಡಾಗಲವಭ್ರಾಂತ ॥ ವೃಷನಪೂಜೆಗಿದೆ
ಸ್ನದೆನಗೆಂ । ದಡುಪತಾನೇಮುಂಬಪಾಪಿಗೆ । ಮಡಿವರಾತ್ಮಜರೀಕ್ಷಿಸುತ್ತಿರಲರಸಕೇಳೆಂದ ॥೧೪॥ ಏನಕೇಳುವೆಭೂಪಕ
ರ್ಮ । ಧೀನಭೂತದಜನನವದನೇ । ನೇನಹೇಳಲುಬಹುದುಬುದ್ಧಿವಿಹೀನಧನಹೀನ ॥ ಹೀನವಸ್ತ್ರಾಭರಣಶೋಭಾ । ಹೀನ
ಲಕ್ಷಣಹೀನಬಂಧುವಿ । ಹೀನದುಃಖರೆಲ್ಲಪಾಪವಮಾಡಿದವರೆಂದ ॥೧೫॥ ಕ್ಷಿತಿಪಕೇಳ್ದುಃಖಿತರುರಿಪುಬಾ । ಧಿತರುಕ್ಷುದಿ
ತರುತಿಕ್ಷಿತರಿಷುತಾ । ಡಿತರುಪೀಡಿತರಾರ್ತರನ್ಯಾಶ್ರಿತರುಸೇವಕರು ॥ ಅತಿಕೃಪಣದಾರಿದ್ರಶೋಕಾ । ನ್ವಿತರುದುರ್ಲಭವಿ
ಷಯಚಿಂತಾ । ನ್ವಿತರುಚಪಲರುಪಾಪಕಾರಿಗಳಿವರುಕೇಳೆಂದ ॥೧೬॥ ಧನಯುತರುಧಾರ್ಮಿಕರುದೇವಾ । ರ್ಚನರತರುವಿ
ಪ್ರಾಜ್ಞಗುರುಸ । ಜ್ಜನಸಮಾರಾಧಕರುಸರ್ವಸಮಾನಬುದ್ಧಿಗಳು ॥ ವಿನಯಗುಣಸಂಪಂನರಕ್ರೋ । ಧನರುಮೃದುವಾಣಿಗ
ಳುಕುಲಪಾ । ವನಚರಿತರಾಸ್ವರ್ಗಲೋಕಾಗತರುಕೇಳೆಂದ ॥೧೭॥ ಹರಿಪದಾಬ್ಜಪರಾಯಣರುಸ । ಚ್ಚರಿತರಾರ್ಜಿತಗುಣ
ಯುತರುಮ । ತ್ಸರವಿಹೀನರುಡಂಬರಹಿತರುಸಲೆದಯಾಪರರು ॥ ಗುರುವಚನಸಂಸ್ಥಿತರಹಿಂಸಾ । ಪರರುಶುಚಿಗಳುನಿಯಮಿ
ತಾಂತ್ರಃ । ಕರಣರುರುಗುಣಶೀಲಯುತರಾಸ್ವರ್ಗದವರೆಂದ ॥೧೮॥ ವಿಹಿತಸತ್ಕರ್ಮದಲಿಸದನು । ಗ್ರಹವಹುದುಬಳಿಕೀಶ್ವ
ರಾನು । ಗ್ರಹದಲಾತ್ಮಜ್ಞಾನವದರಿಂಕ್ಲೇಶನಿರ್ಮೋಕ್ಷ ॥ ಅಹುದುನಿಜಕೈವಲ್ಯದೇಹ । ಗ್ರಹಣವಿದುಬಳಿಕಿಲ್ಲಜಿತವಿ । ಗ್ರಹನು
ಸತ್ಯಜ್ಞಾನಸುಖಪರಿಪೂರ್ಣನಹನೆಂದ ॥೧೯॥ ಅದುನಿಮಿತ್ತಮನುಷ್ಯಜನ್ಮವು । ವಿದಿತಮುಕ್ತಿದ್ವಾರಸುದುರಾ । ಸದಮನೇಕ
ಸಹಸ್ರಜನ್ಮದಸುಕೃತವಿಲ್ಲದಡೆ ॥ ಇದುದೊರಕದಿದರೊಳಗೆಹರಿಗುರು । ಪದಯುಗಳಭಕುತಿಯಲಿಪಾಪವ । ನೊದದುನರಕ
ಕ್ಕಿಳಿಯದವನೆಕೃತಾರ್ಥಕೇಳೆಂಡ ॥೨೦॥ ಒಡಲಮೇಧ್ಯದಪಾತ್ರಮೂತ್ರದ । ಮಡುಮಹಾಧಿವ್ಯಾಧಿಗಳಕೈ । ಲೆಡೆಯಧನಚ
ರ್ಮಾಸ್ಥಿಮಾಂಸಶ್ಲೇಷ್ಮರಕ್ತಮಯ ॥ ಎಡೆರಿನಾಲಯದುಃಖಭಯದಂ । ಗಡಿಕೃತಾಂತನತುತ್ತುಚಂಚಲ । ದೆಡರುಸಾವಿನನಚ್ಚು
ನರಕಕ್ಕಿಳಿವರವರೆಂದ ॥೨೧॥ ಈಶರೀರದತುಚ್ಛಸುಖಕಳಿ । ಯಾಶೆಯನುಮಾಡುತ್ತಬಹಳ । ಕ್ಲೇಶವನುಭೋಗಿಸುವರೀ
ಪರಿನರಕಶತಗಳಲಿ ॥ ಏಸುಗಹನವ್ರೊವಿಷ್ಣುಮಾಯಾ । ಪಾಶಹರಹರಮೋಹವನುಬಿಡ । ಲೀಸದಳಲಿಸಿಬಳಲಿಸುತ್ತಿಹುದರಸ
ಕೇಳೆಂದ ॥೨೨॥ ಇದನರಿದುಸಂಸಾರದುಃಖಾ । ಸ್ಪದವೆನಿಪವಾಸನೆಯವೇಗವ । ನೊಡದುಮೋಕ್ಷಸುಖೈತಹೇತುವೆನಿಪ್ಪವಾ
ಸನೆಯ ॥ ಹೃದಯದಲಿನೆರೆಹಿಡಿದುಗುರುಪದ । ಪದುಮವನುಮರೆಯೊಕ್ಕುವೈಷ್ಣವ । ಪದವಪಡವ್ರುದುಹಿತವನೊಲುವೆಭೂ

ಪಕೇಳೆಂದ ॥೨೩॥ ಕೆಡದುಹೊವಲಲಿಹೋಹವರುಕಂ । ಗೆಡದೆತಡಿಯಮನೋಡಿಗಿಡುವನು । ಹಿಡಿದುಪಾರುವಪ್ರೋಲುನೆರೆಸಂ
ಸಾರವಾಪನೆಯು ॥ ಕಡಲೊಳಗಳುದನರರುವಾನವನು । ಬಿಡದೆವಿಷಯಭ್ರಮೆಗೆಗುರುವನು । ಹಿಡಿದುಮುಕ್ತಿಪಥಕ್ಕೆ ಸಲುವರು ।
ಭೂಪಕೇಳೆಂದ ॥ ೨೪ ॥ ತಲೆಯಹೊಡಯಿಸಿಕೊಳುತಭೋಗ । ಕ್ಕಳುಕದಾರ್ತಲೆಗಾವರವರಿಗೆ । ಹಲುಬಿಜೀವಿಸುವಂದವನು
ನೆರೆಬಯಸುವಂದದಲಿ ॥ ಕೊಲುವದುರ್ಜನಕಾಲಪಾಶವ । ಬಲ್ಲಿದಬೇಕೆಂಬವರುವಿಷಯ । ಕ್ಕಳುಹದಾಶ್ರಯಿಸೂದುಹರಿಗುರು
ಚರಣಪಂಕಜವ ॥ ೨೫ ॥ ನಂಬಿಗುರುಪದಪ್ರೊತ್ತವನುಭವ । ವೆಂಬಕಡಲನುಕಳೆದುನಿಜಪದ । ವೆಂಬಪೂರ್ಣಾನಂದಮಯ
ಸಾಮ್ರಾಜ್ಯಸೌಖ್ಯದಲಿ ॥ ಹಂಬಲಿಸುವನೆನಿಂದವನುದುಃ । ಖಾಂಬುಧಿಯದುಸ್ಥಿತಿಯನರಿಯದೆ । ತುಂಬಿತಾವರೆಯಿರಲುಸಂಪ
ಗೆಗೆರಗುವಂತೆಂದ ॥ ೨೬ ॥ ಜರೆದುನಿಜಕೃತಪುಣ್ಯಪಾಪವ । ನರಿದುಪರಮಾರ್ಥವನುವಿಷಯವ । ತೊರೆದುತತ್ವಜ್ಞಾನಜಿತ
ಪರಮಾರ್ಥಪದದೊಳಗೆ ॥ ಮರದುತನುವನುವಿಂಡಯೋಗಿಗೆ । ಹರಿವುದೈಭವಪಾಶವಡುನೇ । ಸರಲಿತಮನಿಲಬಲ್ಲುದೇಜನನಾ
ಥಕೇಳೆಂದ ॥ ೨೭ ॥ ಹರಿಶರಣರಂಜುವರೆನರಕ । ಕ್ಕರುತರಾಘವದಿದ್ದಡೆಯುತ । ಚ್ಚರಣಚಿಂತಾಜ್ವಲನದಗ್ಧವಲಾವಿಚಾರಿಸ
ಲು ॥ ಅರಸುಮಕ್ಕಳುತಪ್ಪಮಾಡಿದ । ಡರಿದುತಳವಾರರಿಗೆಶಿಕ್ಷಿಸೆ । ಲುರುದಯಾನಿಧಿಮನದಲಿರೆಪಾವನವಲಾಯೆಂದ ॥೨೮॥
ಇಂತುಹರಿಚಿಂತೆಯಲಿಕಾಲನ । ಕುಂತವನುಕೆಡೆಯೊದೆದುನರಕದ । ತಿಂಥಿಣಿಯದುಃಖವನುಮೋಣೀಭವದಭದಣಿಗೆಯ ॥ ಚಿಂ
ತೆಯಿಲ್ಲದೆಕಳೆದುಸರೆನಿ । ಶ್ಚಿಂತನಾಗಿನಿಜಾನುಭವವಿ । ಶ್ರಾಂತನಹುದೆಲೆಭೂಪನಿತ್ಯಾತುಮನೆತಾನಾಗಿ ॥ ॥ ೨೯ ॥

ಅಂತು ಸಂಧಿ ೧೨೬ಕ್ಕಂ ಪದನು ೫೭೭೬ಕ್ಕಂ ಮಂಗಳಮಸ್ತು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಂಚಮಸ್ಕಂಧಸ್ಸಮಾಪ್ತಃ.

ಐದನೇ ಸ್ಕಂಧ ಸಂಪೂರ್ಣವು.

ಕನ್ನಡ ಭಾಗವತ ಷಷ್ಟಮಸ್ಕಂಧ ಪ್ರಾರಂಭವು.

ಅಜಾಮಿಳೋಪಾಖ್ಯಾನ.

ಸೂಚನೆ ॥ ಹೇಳಿದನುಮುನಿನಾಥನಾನೃಪ । ಮೌಳಿಮಣಿಗೆಮಹಾಘನಿವಹೋ । ನ್ಮೂಲನೈಕಸಮರ್ಥ
ವಹಹರಿನಾಮನಿಷ್ಕೃತಿಯ ॥ ... ...

ಪದನು ॥ ವರಮುನಿಪಚಿತ್ತವಿಸುಮನ್ವಂ । ತರವನಾಸ್ವಾಯಂಭುವಾದ್ಯರ । ಚರಿತ್ರವನುತತ್ಪುತ್ರಪೌತ್ರಾದ್ಯಮಳಚರಿ
ತ್ರವನು ॥ ಧರೆಯಸಪ್ತದ್ವೀಪಸಾಗರ । ಗಿರಿನದೀವನವರ್ಷಭುವನಾ । ಸ್ತರಣವನುಕರುಣಿಸಿದೆಜ್ಯೋತಿಶ್ಚಕ್ರಸಂಸ್ಥಿತಿಯ ॥ ೧ ॥
ನಿಮಗಮಹಂಮದುಸಹ್ಯರುಕ । ಧರ್ಮವನುಹೇಳಿದೆಯಲ್ಲೈದು । ಷ್ಕರ್ಮನಿರ್ಮಿತನರಕದುಃಖಂಗಳನುತನಗಿಂದು ॥ ಕರ್ಮ
ಗಳೊಳಗಿಳಿವಂದವೆಂತೋ । ಕರ್ಮದೂರನೆಹೇಳುದುಃಖವ । ಹೋಗ್ವರ್ದುಸ್ತರನೆನಿಪನರಕಮಹಾರ್ಣವವನೆಂದ ॥ ೨ ॥ ಎಂ
ದೆಡೆಂದನುನೃಪತಿಗಾಮುನಿ । ಮಂದ್ಯನತಿಕರುಣದಲಿಕೇಳೆಲೆ । ಕಂದಕರ್ಮದಗತಿವಿಚಿತ್ರವತರ್ಕ್ಯವಿದುಧಿಟಕೆ ॥ ಇಂದುಕೃತಪಾ
ತಕಜೆತ್ರಿಕರಣ । ದಿಂದಪರಚಿಕಮಾಡದಿರ್ದಡೆ । ಮುಂದೆನವವರುನರಕದಲಿಮಾಡಿದಡದಿಲ್ಲೆಂದ ॥ ೩ ॥ ಮಾಡಿದಘನಿಕರಕ್ಕೆಶಾ
ಸ್ತ್ರದ । ನೋಡಿಸಮವಹಪರಚಿಂವನೆರೆ । ಮಾಡುವುದುಮೃತ್ಯುವಿನಮಾನಿಸರೈತರೆನಮುಂನ ॥ ಝಾಡಿಸುವರುಜೆಗೌಷಧವ
ನೆರೆ । ಮಾಡುವಂತೇಬಲ್ಲವರುಹೋ । ಗಾಡದಿಹಪರಸೌಖ್ಯವನುಸಂಪಾದಿಸುವರೆಂದ ॥ ೪ ॥ ಎಂದಡೆಲೆಮುನಿನಾಥಪಾತಕ ।
ವೃಂದವಿಹಪರಗಳಿಗೆಹಿತವ । ಲ್ಲೆಂದುಶಾಸ್ತ್ರಾಚಾರ್ಯಮುಖದಲಿತಿಳಿದುಮತ್ತದನು ॥ ಮುಂದುವರಿದಾಚರಿಸುವವರಿಗೆ । ತಂದೆಹೆ
ರಚಿತವುಂಟೆವಿಫಲವ । ದೆಂದುಹೇಳಿದೆಲೋಕಕುಂಜರಶೌಚದಂದದಲಿ ॥ ೫ ॥ ಅರಿಯದಾಚರಿಸಿದಡೆಪಾತಕ । ಹರಿವುದಲ್ಲದೆ

ಪಾಪಕರ್ಮನ । ನರಿದುಮಾಡಿದರುಂಟೆಪಾತಕಗಳಿಗೆಪರಿಹಾರ ॥ ಗುರುವೆಕರುಣಿಸೆನಲ್ಕೆಧರಣೀ । ಶ್ವರನವಚನಕೆನಗುತಯೋ
ಗಿಗ । ಳರಸನುಗುಳ್ದಂತೆಂದನುತ್ತರವನುಸರಾಗದಲಿ ॥ ೬ ॥ ಆರೆವರಿದನರಸಕರ್ಮದ । ಬೇರುಬೇವುದೆಬರಿಯಹೊರೆಗಳ ।
ಭೂರಿಕರ್ಮತೃಣಾಗ್ನಿಯಲಿತತ್ವಾವಗಮವೆಂಬ ॥ ಸಾರವಹ್ನಿಯಲಲ್ಲದಾತ್ಮವಿ । ಚಾರಶೂನ್ಯರಿಗಿಲ್ಲದಿಲ್ಲಧಿ । ಕಾರಕರ್ಮಗಳಲ್ಲಿ
ತತ್ವಜ್ಞಾನಿಗಳಿಗೆಂದ ॥ ೭ ॥ ಕೆಲರುಶಮೆದಮೆಸತ್ಯಶೌಚಾ । ಚಮತಪೋವ್ರತಮುಖ್ಯಸತ್ಕ್ರಿಯೆ । ಗಳಲಿಯಮನಿಯಮಾದಿ
ಯೋಗಂಗಳಲಿಕೆಲಕೆಲರು ॥ ಎಲೆಮಹೀಪತಿಕೇಳುತ್ರಿಕರಣ । ಗಳಲಿಮಾಡಿದಪಾಪಕರ್ಮಂ । ಗಳನುಸುಡುವರುಬಿದಿರವನವ
ನುಕಿಚ್ಚುಸುಡುವಂತೆ । ೮ ॥ ಮತ್ತೆಕೆಲರಘರಾಶಿಗಳನುಮ । ಹತ್ತಮರುಹರಿಚರಣಕಮಲದ । ಭಕ್ತಿಯೊಂದನೆನಂಬಿನಾರಾ
ಯಣಪರಾಯಣರು ॥ ಬಿತ್ತುಸಹಿತುರುಹುವರುಮಂಜಿನ । ಮೊತ್ತವನುಮುಂಕೊಂಡುರವಿಬಿಂ । ಬತ್ತುವಂತಿರಲಪ್ರಯುಜ್ಞದ
ಲರಸಕೇಳೆಂದ ॥ ೯ ॥ ಆಗಮದಸಂಕ್ಷಯವಘಾತ್ಮರಿ । ಗಾಗಮೋಕ್ತತಪೋವ್ರತಾವಳಿ । ಯೋಗಕರ್ಮಂಗಳಲಿನೃಪಕೇಳ
ಚ್ಯುತಾಂಘ್ರಿಯಲಿ ॥ ರಾಗರಂಜಿತಭಕ್ತಿಯಲಿವರ । ಭಾಗವತಪಾವನಪದಾಬ್ಜಪ । ರಾಗಸೇವೆಯೊಳಹವೊಲಾಗದುಮಿಕ್ಕವರ
ಲೆಂದ ॥ ೧೦ ॥ ಕ್ಷೇಮವಲ್ಲಾಮಾರ್ಗನಿತ್ಯನಿ । ರಾಮಯವಲಾಭೂಪಹರಿಪದ । ತಾಮರಸಸೇವಾಪರಾಯಣರೆನಿಪಸಾಧುಗ
ಳು ॥ ಭೂಮಿಪಾಪನರಿದರೆಳಗೆಸು । ಕ್ಷೇಮದಲಿವರ್ತಿಸುವರಾಶ್ರಿತ । ಕಾಮಧೇನುಗಳಘವಿನಾಶನರರಸಕೇಳೆಂದ ॥ ೧೧ ॥
ಹರಿಪರಾಙ್ಮುಖರೇನಮಾಡಿದ । ಡರಸಪಾವನರಹರೆಶುದ್ಧೀ । ಕರಿಸಲರಿವುದೆಸುರೆಯಕೊಡನನುಜಲದಲದ್ದಿದರೆ ॥ ವರನದಿಗಳಲಿ
ಭೂಪವಿಷ್ಣು । ಸ್ಮರಣೆಯನುಮರದೊಂಮೆಮಾಡಿದ । ದುರಿತವೈದುರಿತಂಗಳಾತದ್ಗುಣರತರಿಗೆಂದ ॥ ೧೨ ॥ ಜನಪಕೇಳರೆನಿ
ಮಿಷಕೃಷ್ಣನ । ನೆನೆಯಬಲ್ಲಸಭಾಗ್ಯರಾಯಮ । ನನುಭಯಂಕರರೆನಿಪಮೇಣಾಯಮನದೂತರನು ॥ ಕನಸಿನಲಿನೆರೆಕಾಣ
ಲರಿವರೆ । ನೆನೆಸುಬೇಡಂತಿರಲಿನಾಮದ । ಧ್ವನಿಗೆದುರಿತವ್ರಾತನಿಲುವುದೆಪಾಪಿಗಳಲೆಂದ ॥ ೧೩ ॥ ಇದರಲೊಂದಿತಿಹಾಸವುಂಟೆ
ಲೆ । ಸದಮಳನೆಚಿತ್ತೈಸುಪೂರ್ವದ । ಲುದಧಿಶಯನನಯಮನದೂತರಿಗಾಯ್ತುಸಂವಾದ ॥ ವಿದಿತಕನ್ಯಾಕುಬ್ಜದೇಶಾ । ಸ್ಪದ
ನಜಾಮಿಳನೆಂಬಭೂಸುರ । ನುದಿಸಿದಾಸೀಸಂಗದೂಷಿತನಾಗಿಯಸದಿರ್ದ ॥ ೧೪ ॥ ಕಳವಳವುಹಿಡಿಬಂದಿಜೂಜುಗ । ಳೊಳಗನತಿ
ಯನ್ಯಾಯವೆಂಬೀ । ಬಳಕೆಯಲಿಕೀಳ್ವೆಂಣೊಳೊಂದಿರೆಕಾಮವಶತೆಯಲಿ ॥ ಕಳಿದವೆಂಭತ್ತೆಂಟುವರ್ಷಂ । ಗಳಾತದೀಯನಿವಾ
ಸದಲಿಕುಲ । ವಳಿದುದಾಸಿಗೆಹತ್ತುಮಕ್ಕಳುಜನಿಸಲಿಸದಿರ್ದ ॥ ೧೫ ॥ ಕಡೆಯಶಿಶುನಾರಾಯಣಾಖ್ಯೆಯ । ವಿಡಿದುಬೆಳವುತ್ತಿರಲುಮ
ಮತೆಯ । ನೊಡರಿಸಿದನಾತನಲಿಪಾತಕಿವಿಪ್ರನನವರತ ॥ ನುಡಿಸಿಕೇಳುವನೊಂಮೆಶಿಶುವನು । ನಡಸಿನೋಡುವನೊಮ್ಮೆಬಾಲನ ।
ನುಡಿಗಳನುನಡೆಗಳನುಸಂಮತಬಾಲಲೀಲೆಗಳ ॥ ೧೬ ॥ ಊಡಿವುಡಿಶಿಶರೀರಕರ್ಮವ । ಮಾಡಿಶಿಶುವಿನರೂಪವನುನಡೆ । ನೋಡಿ
ದಣಿಯನುಸಿಲುಕಿಪುತ್ರಸ್ನೇಹಪಾಶದಲಿ ॥ ಝಾಡಿಸುವಜರೆನರೆಯವಸ್ಥೆಯ । ನೋಡನದನೊಡಲಿಗೆಕೃತಾಂತನು । ಹೂಡಿದಂಬ
ನುಕಾಣನಾಪುತ್ರಾನುರಾಗದಲಿ ॥ ೧೭ ॥ ಇಂತುಮೈಮರದಿರಲುಸನಿಹದ । ಲಂತಕನುಬರೆತಂನಶಿಶುವಿನ । ಚಿಂತೆಯೇಮೈಗರದ
ಪೋಲಳಲುತ್ತವಸೆವಳಿದು ॥ ಭ್ರಾಂತನಾಗಿಕುಟುಂಬಚಿಂತಾ । ಕ್ರಾಂತನಾಗಿರೆಕೊಲ್ಲುತಿವಿಕಡಿ । ಕುಂತದಿಂದಿಡೆನುತ್ತಬಂದರುಯ
ಮನಕಿಂಕರರು ॥ ೧೮ ॥ ಬಿಸಿಯಕೆಂಗಳಬಿಟ್ಟಬಾಯ್ಗಳ । ಮಸೆದಕುಡಿದಾಡೆಗಳಹೊಲಸಿನ । ಹೊಸದಮೀಸೆಯಬಿಗಿದಹುಬ್ಬಿನಮು
ರಿದಮೂಗುಗಳ ॥ ನೊಸಲಡೋರಿಯಬಿಂಕದುರುಗಿದ । ಮುಸುಡುಗಳಯಮದೂತರಂದಾ । ಗಸಕೆನೆಗಟಿದಪಾಶಹಸ್ತರುಬಂದ
ರಾಕ್ಷಣಕೆ ॥ ೧೯ ॥ ಪಾಶವನುಪಾತಕಿಯಕೊರಳಿಗೆ । ಬೀಸಿಬಿಗಿವುತ್ತಿರಲುಕಂಡಾ । ದೋಷಿಭಯದಲಿನಡುಗಿದೂರದಲಾಡುವರ್ಭ
ಕನ । ಅಸುರಹರರೂಪವನುಕಂಡಡ । ದೇಸುಬೆದರುವನೆನುತಕರೆದನು । ವಾಸುದೇವನಕರವವೊಲುನಾರಾಯಣಾಯೆನುತ ॥
ಕೇಳುತೊಡೆಯನನಾಮಪಾಪಿಯ । ನಾಲಿಗೆಗೆಬರೆಮರಣದಲಿಕರು । ಣಾಳುವಿನಕಿಂಕರರುಬಂದರುಕೇಳದಾಕ್ಷಣಕೆ ॥ ಬೀಳ
ಹೊಯಿಬಾಹಿರರನಾರೆಂ । ದಾಲಿಸದಬಣಗುಗಳನೆನುತವಿ । ಶಾಲಲೋಚನರಾಯಜಾಮಿಳಗಭಯವನುಕೊಡುತ ॥ ೨೧ ॥ ಮ
ಣಿಮಕುಟಕುಂಡಲಚತುರ್ಭುಜ । ರಣಿತರತ್ನಾಂಗದಕರಾಗ್ರ । ಪ್ರಣಯಮಣಿಕಂಕಣದಬೆರಳುಂಗರದಕಾಂತಿಗಳ ॥ ಗುಣಿತ
ಪೀತಾಂಬರದಚರಣ । ಕ್ವಣಿತಮಣಿನೂಪುರದನಾರಾ । ಯಣನನರನಡೆತಂದರಾಕ್ಷಣದಲಿಧರಾತಳಕೆ ॥ ೨೨ ॥ ಹಸುವನಾ
ಕುವಹುಲಿಗಳನುಸಾ । ಹಸಿಕರೆಚ್ಚಂತಾಯ್ತುವೈಷ್ಣವ । ರಸಮತೇಜವೆಸದೆದುಯಮಕಿಂತರರನಾಕ್ಷಣಕೆ ॥ ಒಸದುನೂಕಿಯ
ಜಾಮಿಳನನೆ । ಬ್ಬಿಸಿದುದಾಪಾಶವನುಹರಿದೀ । ಕ್ಷಿಸಲುಮುರಿದುದುದಂಡವನುದಂಡಾಯುಧನಭಟರ ॥ ೨೩ ॥ ಬಿಂಕದಲಿಕೆ
ಡೆನೂಕಲಾಯಮ । ಕಿಂಕರರುನಡುಗುತಜನಾರ್ದನ । ಕಿಂಕರರಿಗಿಂತೆಂದರತಿಹೇರಡಲಿನಿಂದಿರ್ದು ॥ ಶಂಕಿಸದೆನೀವೇಕೆಮುರಿ
ದಿರಿ । ಪಂಕಜಪ್ರಿಯತನಯನಾಜ್ಞಾ । ಲಂಕೃತಿಯನತಿಕ್ರಮಿಸಿನೀವಾರತುಳವಿಕ್ರಮರು ॥ ೨೪ ॥ ಈಮಹಾದ್ಭುತತೇಜವೀ
ಸುಮ । ಹಾಮನೋಹರವೆನಿಪಭೂಷಣ । ವೀಮನೋಜಾಕಾರವೀಸಂಪಂನಸೌಭಾಗ್ಯ ॥ ಈಮಹತ್ವವಿದೀಗುರುತ್ವವಿ ।
ದೀಮಹಾವಿಕ್ರಮಪರಾಕ್ರಮ । ವೀಮಹಾದೇವರಿಗುಂಟೆಂದರುಯಮಾನುಗರು ॥ ೨೫ ॥ ಕಂಡರಿಯೆವೀವಿವಿಧಭುವನೋ ।

ಪ್ರಚಂಡತೇಜೋರಾಶಿಗಳನಾ । ಖಂಡಲಾದ್ಯಮರೋತ್ತಮರೊಳಾಕಮಲಜಾದ್ಯರಲಿ ॥ ಚಂಡಚಕ್ರಗದಾಯುಧಾದ್ಯು । ದ್ದಂ
ಡವಿಭ್ರಾಜಿತ್ರಚತುರ್ಭುಜ । ಮಂಡಲರುನೀವಾರೆನಲ್ಕಿಂತೆಂದರವರೊಡನೆ ॥ ೨೬ ॥ ಧರ್ಮರಾಜನದೂತರೈನೀವ್ । ಧರ್ಮ
ರಾಜನೆನಿಂಮೊಡೆಯನಿದು । ನಿರ್ಮಳವಲಾನಿಂಮಚರಿತವಿದೇನುನೀವೆಮಗೆ ॥ ಧರ್ಮವಾವುದುಹೇಳ್ಳನಿರುತವ । ಧರ್ಮವಾ
ವುದುಹೇಳ್ಳಯನಲಾ । ಧರ್ಮರಾಜನದೂತರೆಂದರುಮಾತಿಗುತ್ತರವ ॥ ೨೭ ॥ ಆಡಲಂಮರುನುಡಿದಮಾತಿಂ । ಗಾಡಿದಡದೇ
ಸೆಂಬರೋಮೋ । ಣಾಡಿದಡೆಯುತದರ್ಥಸೂಕ್ಷ್ಮಗಳೆಲ್ಲಿಕಪ್ಪವವೊ ॥ ರೂಢಿಸಿದಭಟರೀನಿರೂಢಿಯ । ಮಾಸಲೀಯರುಧ
ರ್ಮತೇಜವ । ಖೋಡಿಗಳವವರಲ್ಲಲಾತಪ್ಪೇನುಕಂಡಿಹರೊ ॥ ೨೮ ॥ ಆಗಲಾಗಲದೇವಜನಾರ್ದನ । ನೀಗನಿಂಮಾಳ್ದ ತ
ನಲ್ಲಾ । ಭೋಗಿಶಯನನನೇಮಲೋಕಂಗಳನುಚರಿಸುವಡೆ ॥ ಆಗಮಪಕ್ಷೈಕೊಂಡುಪೆಂಮುವ । ನೀಗುವವರಾದಿರಲಿನಿಮ
ಗಾವ್ । ಲೋಗರೇನೀವ್ನುಡಿದಮಾತಿಂಗಾಡಿಕೋರುವೆವು ॥ ೨೯ ॥ ವೇದವಿಹಿತವೆಧರ್ಮವುತ್ತಾ । ವೇದನಿಂದಿತವೇಯಧ
ರ್ಮವ । ನಾದಿಯಹನಾರಾಯಣನೆವೇದಾತ್ಮಕನುಧಿಟಕೆ ॥ ವೇದವಿದರುಗಳ್ಳದರಗತಿಗಳ । ಭೇದವನುಹೇಳುತ್ತಲಿರಲದ । ನಾ
ದರಿಸಿನಾವ್ಕೇಳ್ಳಬಲ್ಲೆವುಧರ್ಮಸಭೆಯೊಳಗೆ ॥ ೩೦ ॥ ಆವುದ್ಯೈಗತಿಧರ್ಮನಿಷ್ಠರಿ । ಗಾವುದ್ಯೈಗತಿಮೇಣಧರ್ಮಫ । ಲಾವಳೀ
ಭೋಕ್ತೃಗಳಗಿಲ್ಲಾಮೇಣುಸಿಯತಿಗಳು ॥ ಜೀವರೆಲ್ಲರುಧನ್ಯರೋಕೆಲ । ರೋವಿಚಾರಿಸೆಕರ್ಮಗಳೊಳೆವ । ಗೀವಿಭೇದವ
ಹೇಳ್ಳಯನೆಕರುಣಿಸಿದರುತ್ತರವ ॥ ೩೧ ॥ ಫಲವನೀಕ್ಷೈಸದಮಳಧರ್ಮವ । ನೊಲಿದುಮಾಡಿದಪಹುದುಮುಕುತಿಯ । ಫಲವನಿ
ಟ್ಟೈಸಿಮಾಡಲಹುದಾಸ್ವರ್ಗಫಲಭೋಗ ॥ ಬಳಸಿದಡಧರ್ಮದಲಿನರಕ । ಕ್ಕೆಳವರಿಂತಿದುವೇದಸಂಮತ । ಸಲುವರೆಲ್ಲಾಗತಿಗೆಕ
ರ್ಮಗಳ್ಳೀಕ್ರಮದಲೆಂದ ॥ ೩೨ ॥ ದೋಷಯುತವಾಗಿಹವುಕರ್ಮದ । ರಾಶಿಗಳುತಾವಾವವಾಗಲಿ । ದೋಷವಿರಹಿತವಾದಕ
ರ್ಮವೆಯಿಲ್ಲಭಾವಿಸಲು ॥ ಲೇಸೆನಿಸಿದನಿಲನಲಿಧೂಮಾ । ವಾಸವಾಗದೆತ್ರಿಗುಣಕರ್ಮದ । ವಾಸವಾತ್ಮಕವಖಿಳವೆಂದರುಜುಮ
ನಕಿಂಕರರು ॥ ೩೩ ॥ ಹಲವುಮಾತೇನಾತ್ಮವಿದ್ಯೆಯ । ನುಳಿದುಮಿಕ್ಕಿನಧರ್ಮವಾವುದು । ಮಲವಿಹೀನವೆಯಲ್ಲಹಂಮಮಕಾ
ರವುಂಟಾಗಿ ॥ ಸಲೆನಿರೀಹಾತ್ಮಂಗೆಮರವೆಯ । ಬಳಕೆಯಲಿಶುಭವುಂಟೆನೀವೇ । ಕಳಲುವಿರಿಹೇಳ್ಳರಿಯನಲ್ಕೆಂದರುಮಹಾತ್ಮಕ
ರು ॥ ೩೪ ॥ ಆರುಪಾಪಿಗಳಾರುಸುಕೃತಿಗ । ಳಾರರಿವರೆರಡರವಿಭೇದವ । ನಾರುನಿಮಗೆಂದವರುನಿಷ್ಪಾಪವನುಪಾಪವನು ॥ ಸೂ
ರಿಯನಮಗನವರುಧರ್ಮವಿ । ಚಾರವುಂಟೆಂದೆಂಬಿರೇತಕೆ । ಮೀರೆದಪ್ಪಿದಿರೆನಲುನುಡಿದರುಯಮನಕಿಂಕರರು ॥ ೩೫ ॥ ಸೂ
ರಿಯಾನಲಗಗನಸೋಮಸ । ಮೀರಸಂಧ್ಯಾರಾತ್ರಿದಿವಗಳು । ಧಾರಣರುಧರ್ಮಾತ್ಮಕಾಲವೆನಿಪ್ಪಸಾಕ್ಷಿಗಳು ॥ ಸಾರಧರ್ಮಾ
ಧರ್ಮಕರ್ತೃಗ । ಳಾರವರಿಗೇಕೆಂಮಜರವಿರಿ । ಮೀರೆದಪ್ಪೆವುನಾವುನಿಶ್ಚಯವೆಂದರಾಭಟರು ॥ ೩೬ ॥ ಪಾಪಿಯುಗ್ಗಿಂಬೆಂಬಿ
ರೀತನ । ಪಾಪಕರ್ಮವನಾರರಿವರೆಲೆ । ರೂಪವಂತರಿರಾಡಿತ್ತೋರಿಸಲೇಕೆನಿಮಗಿಂದು ॥ ಕೋಪರಹಿತರಿರರಿವಡೆಯುಸಂ ।
ಕ್ಷೇಪದಲಿಹೇಳುವೆವುನಾವ್ನಿ । ರ್ಲೇಪರೆನುತಭಿವರ್ನಿಸಿದರಾದ್ವಿಜನಪಾತಕವ ॥ ೩೭ ॥ ವೃತ್ತಗುಣಸಂಪಂನನೀದ್ವಿಜ । ನು
ತ್ತಮನುಪೂರ್ವದಲಿಶಮೆದಮೆ । ಸತ್ಯಶೌಚಾಚಾರವಿದ್ಯಾವ್ರತಸಮನ್ವಿತನು ॥ ಹೆತ್ತಪಿತೃಸಂದೇಹದಲಿಸಂ । ವೃತ್ತಹೋದನುವ
ನಕೆಪುಷ್ಪಸ । ಮಿತ್ತುಫಲಕುಶೆಗಳನುತರಲೊಂದೊಂದುದಿವಸದಲಿ ॥ ೩೮ ॥ ಮರಳಹೊರೆಯನುಹೊತ್ತುಮನೆಗೈ । ತರುತ
ಕಂಡನುಕಾಮಿಯೊಬ್ಬನ । ನಿರದೆಶೂದ್ರಿಯೊಡನೆನೆರವುತ್ತಿರಲುಶೂದ್ರನನು ॥ ಸುರತವಿಶ್ವಕವಸ್ತುವಾಗಿರೆ । ಕರಗಿದುದುಮನ
ಕಾಣುತಕ್ಷಣ । ಪರವಶನುತಾನಾದನಾಕಾಮಾಗ್ನಿಯುರವಣಿಗೆ ॥ ೩೯ ॥ ತಡೆಯಲರಿಯದೆಚಿತ್ತವವಳಲಿ । ಕೊಡಕಿದುದುದಿನ
ದಿನಕೆಕಾಮನ । ಕಡುನಿರೋಧದನಿಗ್ರಹಕೆಮನಗುಂದಿವಸವಳ್ಳದು ॥ ಕೆಡಿಸಿಕುಲಧರ್ಮವನುಲಜ್ಜೆಯ । ನುಡುಗಿತತ್ಸಂಗದ
ಲಿಪಾತಕ । ವೊಡಲುಗೊಂಡಂತಿರ್ದನುಳಿದುನಿಜಾತ್ಮಬಾಂಧವರ ॥ ೪೦ ॥ ಬಿಟ್ಟನಾನಿಜಬಾಲವಧುವನು । ಕೆಟ್ಟಕಾಮಪಿಶಾಚ
ಹಿಡಿದೀ । ಕಷ್ಟಪಾತಕಿವರಪತಿವ್ರತೆಪುಣ್ಯವಂತೆಯನು ॥ ದುಷ್ಟವನಿತೆಯಪೋಷಣಕೆಗತಿ । ಗೆಟ್ಟುಪಾಪವಮಾಡಿದವನನು । ಕ
ಟ್ಟಿದರೆನೀವೇಕೆಬಂದಿರಿಪಾತಕಿಯಹೊರೆಗೆ ॥ ೪೧ ॥ ಧಿಕ್ಕರಿಸುವಿರೊನೀವುಪೂರ್ವವ । ಯುಕ್ತವ್ರತಚರಿಯೆಯಪರವ ।
ಯುಕ್ತತಾಘಂಗಳ್ಳಗೆಹರಚಿತವೆಂದುಧಿಟಕೆವ್ಮ ॥ ಹೊಕ್ಕುಜಲವನುಮಿಂದುಕೆಸರನು । ಹೊಕ್ಕದೇನದುಮಿಂದವಿಹಾಹವೆ ।
ಚಕ್ಕುಲಿಸುವುದೆಕೆಸರನಪರಕ್ರಿಯೆಯನ್ನೋಲದನು ॥ ೪೨ ॥ ಅದುನಿಮಿತ್ತಮಹಾಘರಾಶಿಗೆ । ಸದನವೆನಿಸಿದಘಾತ್ಮನೀತನ ।
ನೊದಮನರಕಂಗಳ್ಳಗೆನೂಕಿಪುನೀತನನುಮಾಡಿ ॥ ತುದಿಗೆಬಿಡುವೆವುಬರಿದೆನೀವೇ । ಕಿದಿರುಬಂದಿರನಕ್ಕೆಘನರೋ । ಷದಲಿಜಡಿ
ದಿಂತೆಂದರಾನಿತ್ಯಾತ್ಮಕಿಂಕರರು ॥ ... ... ॥ ೪೩ ॥

ಪ್ರಥಮ ಸಂಧಿ ಸಮಾಪ್ತಂ ಮಂಗಳಮಸ್ತು.

ಎರಡನೆಯ ಸಂಧಿ

ಸೂಚನೆ ॥ ಹೇಳ್ದಭಗವದ್ಧರ್ಮವನುಹರಿ । ಯಾಳುಗಳುಯಮನಾಳ್ಗನುಜರ । ದಾಲಯಕೆಕೊಂಡೊ
ಯ್ದರಜಮಿಳನನುಮುರಾಂತಕನ ॥ ... ...

ಪದನು ॥ ಹೇಳ್ದಿರಿನೀವೇನನೆಲವೋ । ಖೂಳರಿರೆಸ್ಪೈರಿಸಿದೆವೊಂಮಿಗೆ । ಬಾಲಭಾಷಿತವೆಂದುಹರಹರಧರ್ಮಸೇತುಗ
ಳ ॥ ಪಾಲಕರಸಭೆಗೊಯ್ದುಧರ್ಮದ । ಮೇಳವಣೆಯಲ್ಲದಡೆಕೊಲುವಿರೆ । ಪಾಲಕನನಿಷ್ಪಾತಕನನೆಂದರುಮಹತ್ತಮರು ॥೧॥
ಕ್ಷಿತಿಪನೇಪ್ರಜೆಗಳಿಗೆಮಾತಾ । ಪಿತೃಗಳ್ಳೇಶಿಶುಗಳಿಗೆಧರ್ಮ । ಸ್ಥಿತಿವಿಧಾಯಕರಾದವರೆಸದ್ಧರ್ಮನಿಷ್ಠರಿಗೆ ॥ ಕೃತಕವನುಬಳಸಿ
ದಡೆಹರಹರ । ಗತಿಯದಾವುದೊಪ್ರಜೆಗಳಿಗೆತಾ । ಮತಿವಿಹೀನರಿಗಾಶಿಶುಗಳಿಗೆಧರ್ಮನಿಷ್ಠರಿಗೆ ॥ ೨ ॥ ತಂನತೊಡೆಯಲಿತ
ಲೆಯನಿಟ್ಟು । ತೃಂನವಿಶ್ವಾಸದಲಿಜನವಿದು । ಮಂನಿಸುತಮಲಗಿಹುದುನಿರ್ಭಯವಾಗಿಶುಭದಿಂದ ॥ ಅಂನ್ಯನಲ್ಲೆಂದಿರ್ದಡೀ
ಪರಿ । ಬಂನಬಡಿಸುವದ್ವೈಯ್ಯನಾಥರಿ । ಗಿಂನುಗತಿಯಾವುದೊಯನುತಬಿಸುಸುಯ್ದರನುಪಮರು ॥ ೩ ॥ ತಾಯೆನುತನೆ
ರೆನಂಬಿಮೊಲೆಗಳ । ಬಾಯಲೊದಗುವಶಿಶುವನೆಂತೋ । ತಾಯಿಕೊಲುವಳುಧರ್ಮರಾಜನುತಪ್ಪುವನೆಯೆಂದು ॥ ಶ್ರೇಯ
ಸವನಾಚರಿಸಿಸೌಖ್ಯನಿ । ಕಾಯವಹುದೆಂದಿರ್ದಜೀವನಿ । ಕಾಯವನುದಂಡಿಸುವನೆಂತೋಶಿವಮಹಾದೇವ ॥ ೪ ॥ ಅರಸಿ
ನಾಚರಣೆಯಲಿಭೃತ್ಯರು । ಚರಿಸುವರುಗುರುನಡದಪರಿಯಲಿ । ನಿರುತನಡವರುಶಿಷ್ಯರವರಾಚರಿತವನುಲೋಕ ॥ ಧರದಲನು
ಸರಿಸುವುದುನೃಪನೂ । ಹಿರಿಯನೂಅದರಿಂದನಿರ್ಮಳ । ಚರಿತರಾಗಲಿಬೇಕುಲೋಕಕೆಹಿತವಬಯಸುವರೆ ॥೫॥ ಏನುತಪ್ಪಿದೆ
ಯರಿರಶಂಮೊಲ । ದೇನುಮೇಣೊಡೆಯನಲಿನಿಮಗಾ । ವೇನಮಾಡಿದೆವಘವನಾಕ್ಷೇಪಿಸಲದೇಕೆಂಮ ॥ ಏನಮಾಡಿದಡೀಮಹಾ
ಘ । ಕ್ಕೇನುಹರಚಿತವುಂಟೆಶ್ರೀಜೋ । ಭಾನುಗಳಿಗನ್ಯಾಯವೇನೆನಲೆಂದರುರೆಮುನಿದು ॥ ೬ ॥ ಬಾಯನೋಡಾಅಂಜದೆಂ
ಮೊಡ । ನಾಯತಿಕೆಯಲಿಗೆಡವಮಾಪನಿ । ಕಾಯವೇನಿದ್ದೇನಮಾಡುವವೀಮಹಾತ್ಮನಲಿ ॥ ಬೀಯ್ಯವಾದುದುಕಾಣಿರೈನಾ । ರಾ
ಯಣಾಯೆಂದಂತ್ಯಕಾಲದೆ । ಲೀಯಘಾತ್ಮನುಕರೆದನಾಗಿಯೆಪಾರವಶ್ಯದಲಿ ॥ ೭ ॥ ಬೆಂದವೀತನಜನ್ಮಕೋಟ್ಯಘ । ವೃಂದವೀ
ಹರಿನಾಮಕೀರ್ತನ । ದಿಂದಲೇಸಂದೇಹಮಾತ್ರವೆಯಿಲ್ಲಭಾವಿಸಲು ॥ ಇಂದಿವೀಜನ್ಮದಕೃತಾಘದ । ವೃಂದವಿದಿರೇಜಗವನುರು
ಹುವ । ಚಂದ್ರಮೌಳಿಯಭಾಳನಯನಾನಲಗೆತೃಣವಿದಿರೆ ॥೮॥ ದುಷ್ಟರಿರನಿಮಗಿದನುಕಾಣ್ಬದೆ । ದೃಷ್ಟಿನೆರೆಯದದೊಡೆಯ
ನಂತ । ದೃಷ್ಟಿಬೆಂಬುದೆಹೇಳನೇಹರಿನಾಮಮಹಿಮೆಗಳ ॥ ನೆಟ್ಟನಘವೇಸಾಕ್ಷಿಗಳೂನಿಂ । ವಿಷ್ಟರಹಕೃತಸಾಕ್ಷಿಗಳೊಕಂ ।
ಣಿಟ್ಟರೇತಕೆನೀವೆನುತಜರದರುದುರಾತ್ಮಕರ ॥ ೯ ॥ ಎನಲುನುಡಿದರುಯಮನಕಿಂಕರ । ರನಿತುಪಾಪಕ್ಕೆಲ್ಲಹರಚಿತ । ಜನಿತವಾ
ಯ್ತೆನಾಮವೆಂದರಲಿದುವಿಚಿತ್ರವಲ ॥ ಇನಿತಕಿನಿತಘನಿಷ್ಕೃತಿಗಳಿಂ । ದೆನಿಪನೀತಿಗಳಿಲ್ಲಲಾಯೆನೆ । ಮನದರೋಷವನಡಗಿಸು
ತ್ತಿಂತೆಂದರನುಪಮರು ॥ ೧೦ ॥ ತಂದೆತಾಯೊಡಹುಟ್ಟುವಿಪ್ರರ । ಕೊಂದವಧೆಗುರುತಲ್ಪಗಮನದಿ । ಬಂದಪಾತಕಮದ್ಯಪಾನ
ಸ್ತೇಯನೊದಲಾದ ॥ ಇಂದಿನೀಭವವಿಹಿತವಾಗಲಿ । ಹಿಂದೆಮಾಡಿದುದಾಗಲಾಯು । ವೃಂದವನುನೆರೆಸುಡುವುದೊಂದೇನಾಮವೆಂ
ಬಿವರ ॥ ೧೧ ॥ ಆವವಿಧದಲಿನಾಮವೊಂದೇ । ಪಾವನವಮಾಡುವದಘಾತ್ಮರ । ನಾವವಿಧದಲಿವೇದಚೋದಿತಕರ್ಮರಾಶಿಗಳು ॥
ಜೀವಪಾವನಮಾಡಲಾಪರೆ । ಭಾವಿಸಲುಮೇಗರೆಯಘೌಘವ । ಸೋವವಲ್ಲದೆಚಿತ್ತಶುದ್ಧಿಯನೀವವೈಧಿಟಕೆ ॥ ೧೨ ॥ ಪ್ಪಾರ
ಮುಟ್ಟದಡೊಗದತಲ್ಲದೆ । ಶೀರೆನಿರ್ಮಳವಹುದೆಮಗುಳಾ । ನೀರುಗರೆಹಿಡಿವಂತೆಕರ್ಮಂಗಳಿಗಹಂಕಾರ ॥ ಬೇರಿಳಿವುದಲ್ಲನೆಮು
ಕುಂದನ । ಚಾರುಚರಣಶ್ರವಣಕೀರ್ತನ । ದೀರಸಾಯನದಂತೆಕೊಡುವವೆಚಿತ್ತಶುದ್ಧಿಗಳ ॥ ೧೩ ॥ ಚಿತ್ತಶುದ್ಧಿಗಳಿಲ್ಲದವರಿಗೆ ।
ಮುಕ್ತಿಪಾತಕಕೆರಗುವುದುಮನ । ಚಿತ್ತಮಲವಿರೆಮಾಡಿಫಲವೇನಘಕೆನಿಷ್ಕೃತಿಯಘ । ಚಿತ್ತಮಲವನುಸುಡುವಡಾಪುರು । ಷೋ
ತ್ತಮನಗುಣಕರ್ಮನಾಮದ । ಕೀರ್ತನದಕಡುಗಿಚ್ಚಿದೊಂದೇಮುಖ್ಯವೀಜಗಕೆ ॥ ೧೪ ॥ ಅದರಿನೀತನನೊಯ್ದಮಾತಾ । ಡದ
ರೆಪಾಪಿರಿಪೋಗಿಯನೆಲಂ । ಜಿದಿರಲಿರಲಂಮದೆಕೃತಾಂತನದೂತರೆಡೆಸಾರ್ದ ॥ ಹೆದರುತೆಂದರುತಂನಕಂದನ । ನೊದರಿಕರೆದರೆ
ಮಾಪಿಪಾದವ । ನೊದೆದನೆಂತೆನೆವಿಷ್ಣುಕಿಂಕರರೆಂದರುತ್ತರವ ॥ ೧೫ ॥ ವಿದಿತಸಂಕೇತದಲಿಪರಿಹಾ । ಸ್ಯದಲಿಮರುಳಾಟದಲವ
ಜ್ಞೆಯ । ಲೊದವಿದಚ್ಯುತನಾಮನಾಲಗೆಗೊನೆಗೆಬರುತಿರಲು ॥ ಹೆದರಿಹಿಂಗುವುದಖಿಳಜನ್ಮಾ । ಸ್ಪದವೆನಿಪ್ಪಘವೆಂದುವಿದುಕೋ ।
ವಿದರಮುಕನ್ಯಮಗನಕರೆದಡೆಕೆಡದೆಯಘನಿಕರ ॥ ೧೬ ॥ ಎಡಹುತೇಳುತಬೀಳುತುದ್ಧವ । ನಡರುತಾಗುಳಸುತ್ತಕೆಂಮುತ
ಕುಡಿವುತಾಣಾತೇಗುತ್ತಸೀನುತ್ತಳುತಬಿಕ್ಕುತ್ತ ॥ ಎಡೆನೆಡೆಗೆಪರವಶತೆಯಲಿಬರೆ । ನುಡಿಗೆಹರಿಯಂಬಕ್ಷರದ್ವಯ । ಸುಡುವುದ
ಘರಾಶಿಯನುಸಂಶಯಮೇಕೆಶ್ರುತಿಸಿದ್ಧ ॥ ೧೭ ॥ ಅರಿಯಲಘಹರವೆಂದುಮೇಣಿದ । ನರಿಯದಿರಲಿಮುಕುಂದನೊಪ್ಪುವ । ಪರ
ಮನಾಂಗಳನಾಮನಾಲಗೆಗೊನೆಗೆಬರಲೊಂಮೆ ॥ ಹರಿವವೈಯಘಬಂಧನಂಗಳು । ಮರದುಕಿಚ್ಚಿನಲಿಕ್ಕಿದರೆಧಿಟ । ಉರಿಯವಿಹ
ದೇಕಾಪ್ಯನೆಂದರುಜರದುಯಮಭಟರ ॥ ೧೮ ॥ ಮರದುಮದ್ದನುಕೊಂಡಡಾರುಜೆ । ಹರಿಯದಿಹುದೇತಂನವೀರ್ಯವ । ಮರ

ಯಾವಿಹುದೈಮಂತ್ರಮರದುಚ್ಚರಿಸಿದರೆಧಿಟಕೆ ॥ ಮರದುಹರಿನಾಮವನುಕೀರ್ತಿಸೆ । ನರಗುರಿಗಳಿರೆಬೆಂದುಹೋಗದೆ । ತರಗೆಲೆ
ಯಾಕುದಿಯೊಳಗೆಬಿಸುಟಂತಘದರಾಶಿಗಳು ॥ ೧೯ ॥ ಆದಡೇಕೀಹರಿಯನಾಮವ । ನಾದರಿಸದೀಋಷಿಗಳೆಲ್ಲರು । ವೇದಸನ್ಮತವೆ
ನಿಸಿಯೇದಾನವ್ರತಾದಿಗಳ ॥ ಆದರಿಸುವರ್ನಿಸದರೀಯಘ । ಭೇದನಕೆನೀವ್‌ಹೇಳಿಯನೆಕಮು । ಲೋದರನಕಿಂಕರರುನುಡಿದ
ರಾಧರ್ಮಸಂಸ್ಥಿತಿಯ ॥ ೨೦ ॥ ಅರಿವಡಲ್ಲವಂಣಿಂಗೆಕೊಂಬರೆ । ಕರಗಸವತೊಣವುಲ್ಲಸುಡುವರೆ । ಹರನಹಣೆಗಚ್ಚೇಕೆಗುದ್ದಲಿ
ಯಹಾಕೆಸೂಚಿಯಲಿ ॥ ನಿರುತವಹಕೆಲಸಕ್ಕೆನಾಮ । ಸ್ಮರಣೆಪರಿಯಂತೇಕೆಮಿಗೆತಡು । ಕಿರಿದುಪಾಪಂಗಳಿಗೆನುತಪೇಳ್ದರುವ್ರ
ತಾದಿಗಳ ॥ ೨೧ ॥ ಪ್ರೊಕರೆನಿಸುವರಾಯಘಾತ್ಮರು । ಮಾತುಹಲವರೆಬೇನುದುರಿತ । ವ್ರತಕೆಡುವುದುಯಜ್ಞದಾನತಪೋವ್ರ
ತಾವಿಯಲಿ ॥ ಆತುಮನವೊಲಹೋಗಡದುವೇ । ಪಾತಕಕೆನೆರೆಬೀಜವಹನುವಿ । ಘಾತಿಸುವಡೀಶಾಂಘ್ರಿಸೇವೆಯೆಮುಖ್ಯವೀಜ
ಗಕೆ ॥ ೨೨ ॥ ನಿತ್ಯಶುದ್ಧನಶುದ್ಧದೇಹವ । ಹೊತ್ತುನಿರ್ಮಳನಹನೆಶೌಚಾ । ದ್ಯುತ್ತಮಕ್ರಿಯೆಗಳಲಿಕರ್ತೃತ್ವಾಭಿಮಾನದಲಿ ॥
ವರ್ತಿಸುವನಿಷ್ಕ್ರಿಯೆಗಳದರಿಂ । ದುತ್ತಮಶ್ಲೋಕನಪದಾಂಬುಜ । ಭಕ್ತಿಯನುಮಾಡುವುದೆಪರಮವಿಶುದ್ಧಿಜೀವರಿಗೆ ॥ ೨೩ ॥
ಇಲ್ಲಿವೀಧರ್ಮದಲಿಸಂಶಯ । ವುಳ್ಳಡಾನಿಂಮೊಡೆಯನಲ್ಲವ । ಬಲ್ಲನಿದರರಹಸ್ಯವನುಕೇಳುವುದುನೀವೆನುತ ॥ ಕೊಲ್ಲಡವರನುನೂ
ಕಿಬಿಸುಟರು । ಬಲ್ಲಿದನಭಟರಗಿವಕಾಲವ । ಹಲ್ಲನುದದುರೆಬಿಡಿಸಿಕೊಂಡರಜಾಮಿಳದ್ವಿಜನ ॥ ೨೪ ॥ ಮುಕ್ತಬಂಧನನಾಗಿಚೇ
ತರಿ । ಸುತ್ತನಿರ್ಭಯನಾಗಿಕಂಡೆರ । ವೃತ್ತಕಂಡನುಮುಂದೆನಿಂದಚತುರ್ಭುಜಾಕೃತಿಯ ॥ ಅತ್ಯಧಿಕತೇಜವನಜಾಮಿಳ । ಸು
ತ್ತನೋಡುವದಂಡಿಮ್ಯಿಯ್ಯಿ । ಕುಶಸಂಸ್ತುತಿಮಾಡಿದನುಜಯಜಯತುಜಯಯೆನುತ ॥ ೨೫ ॥ ಅರಳಿದುತ್ಸವದಿಂದತನುವ್ರ
ಬ್ಬರಿಸೆಭಯಭಕ್ತಿಯಲಿಮ್ಯಿಯ್ಯಿ । ಕ್ಕಿರದೆಸಂಸ್ತುತಿಗೈಯ್ಯಲೆಂದುದ್ಯೋಗಿಸುತ್ತಿರಲು ॥ ವರವಿಮಾನವತಹೆವೆನುತಕಿಂ । ಕರರು
ವಿಷ್ಣುಪುರಕ್ಕೆನಿಮಿಷಾಂ । ತರಕೆಗಮಿಸಿದರಾಯಜಾಮಿಳನೆಂದುಬೆರಗಾದ ॥ ೨೬ ॥ ಅದರಿದಾದೆಸೆಗಾಯಜಾಮಿಳ । ನೊಡಲ
ನೀಡಾಡುತ್ತಬೆರಗನು । ಹಿಡಿದುಕಂಡೆರದೇನಿದಿಂನಗಕನಸೊಮೆಸ್ಸನಸೊ ॥ ಕಡುಗಿಕೊರಳಲದಾರೆಪಾಶವ । ತೊಡಿಸಿಕೆಳ
ಯಿಂಕೆಳದದಾಡೆಯ । ದಡಿಗರಾರೋಮರಳೆಬಿಡಿಸಿದಪುಣ್ಯತರರೆಂದ ॥ ೨೭ ॥ ಅರಸಕೇಳಾವಿಷ್ಣುಯಮಕಿಂ । ಕರರಸಂವಾದ
ವನುವೈಷ್ಣವ । ಪರಮಧರ್ಮರಹಸ್ಯವನುಕೇಳುತ್ತಜಾಮಿಳನು ॥ ಪರಮವೈಷ್ಣವಸಂಗದಲಿಘನ । ಕೆರಗಿಹರಿಸೇವಭಕುತಿಸು
ಖವಂ । ಕುರಿಸಿನುಡಿದನುತಾನೆತಂನೊಳಗಾದಪರಿಭವವ ॥ ೨೮ ॥ ಅಕಟಕೆಟ್ಟೆನಲಾಮಹಾಪಾ । ತಕಕೆಘಾಜನವಾದುದೆಂನ
ಸ್ವನಿಕರಕರಣೇಂದ್ರಿಯಗಳವೃತಂಮಿಚ್ಚೆಯಲಿನಡೆದು ॥ ಪ್ರಕೃತಿಗುಣಸಂಗದಲಿಕೆಟ್ಟುದು । ಸುಕೃತವೃಷಲೀಭೋಗಪರ
ನಾ । ಸಕತಿಕೆಡಿಸಿದುದೆಂನಕುಲವನುಶಿವಶಿವಾಯೆಂದ ॥ ೨೯ ॥ ಸುಡುಸುಡೆಂನನುನೀಡ್ಯನನುಕುಲ । ಗೆಡುಕನನುಕಷ್ಟನನು
ಕಂಡವ । ರತಮುರಿದುಮೋರೆಯನುನೋಡದೆಹೋಹಪಾಪಿಯನು ॥ ಪೊಡವಿಕೂರುವುದೆಶಿವಶಿವಾಕಳು । ಗುಡಿವಕೀಳ್ಸ್ತ್ರೀಣಿ
ನಲಿಮಕ್ಕಳ । ಪಡದದೋಷಿಯನೆಂನನೆಂದನುಮರುಗಿಬಿಸುಸುಯ್ದು ॥ ೩೦ ॥ ಉಳಿದೆನುತ್ತಮಕುಲಜೆಯನುರತಿ । ಫಲವಕಾ
ಣದಬಾಲೆಯನುದು । ಷ್ಕಲಿಜೆಯನುಕೂಡಿದೆನುಮುಪ್ಪಿನತಂದೆತಾಯ್ಗಳನು ॥ ಸೆಲಹದಾದೆನುಘೋರನರಕಕೆ । ಘೆಳಸಿದೆನು
ಸಂಬಳವನಕಟಾ । ತಲೆಯಬರಹನೆಹಾವಿಧಿಯೆಹಾಯೆನುತಚಿಂತಿಸಿದ ॥ ೩೧ ॥ ಮುನ್ನಮಾಡಿದಕರ್ಮಫಲವೋ । ತನ್ನನಿಂತೀ
ವಿಧಿಗೆತಂದುದು । ಯನ್ನಪುಣ್ಯವನೇನನೆಂಬೆನುಜನ್ಮಸಂಸ್ಕಾರ ॥ ಮುನ್ನಿನಿಂಮಿಗಿಲೆನಿಸಿಮಾಡಿದು । ದುಂನತೋಂನತಭವಭ
ವಾರ್ಜಿತ । ವೆಂನಸಂಚಿತಘೆಳ್ಕೆಯೆಂಬದನರಿಯದೀಜನನ ॥ ೩೨ ॥ ಅದ್ದನಸ್ವನುನರಕದುಃಖದ । ಹೊದ್ದೆರೆಯಪೆಣನಲಿನಲಿ
ಹರಹರ । ನಿರ್ದಿಶನುತನಾಜೆನುವುದೆಕಿತನಗೆಗತಿಯೆಂನು ॥ ಕದ್ದರಾರೋಅಘಕೆಮಾದಿಸು । ತಿರ್ದರಾರೋಕಾಣೆನಾನೆನು ।
ತಿದ್ದಿಯನೋಡುತ್ತಮಿಗೆಬೆರಗಾದನಾವಿಪ್ರ ॥ ೩೩ ॥ ಇತ್ತಲಿದೆಲಾತಂನಭಾಗ್ಯದ । ಬಿತ್ತರದಬೀಸಿಗೆಯಬೆಳೆಸಿರಿ । ಕತ್ತಲೆಯ
ರವಿಕರ್ಮಕಾಂತಾರದಕೃಶಾಂತಾಗ್ನಿ ॥ ಮೃತ್ಯುಮೃತ್ಯುನುಹಾಘಮೋಘೋ । ದ್ವೃತ್ತಪವನನೆನಿಪ್ಪಯೀಹರಿ । ಕೀರ್ತನಲಿದೆಂ
ತೋಶಿವಾದೊರಕೊಂಡುದೆನಗೆಂದ ॥ ೩೪ ॥ ಇದರಲೆಂನಘರಾಶಿಕೆಟ್ಟುದು । ವಿಧಿಕಸಂಶಯವಿಲ್ಲಧಿಟವ । ಲ್ಲದಡೆತನಗೀಬುದ್ಧಿಯಿಾ
ವೈರಾಗ್ಯನೆಂತಹುದು ॥ ಉಳಿಸುವುದುದುಷ್ಕರ್ಮದವಸಾ । ನದಲಿತತ್ವಜ್ಞಾನನೆಂಬೀ । ಸದಮಳಶೃತಿವಚನಹುಸಿಯಲ್ಲೆಂದನಾ
ವಿಪ್ರ ॥ ೩೫ ॥ ಇನುಬಿತುವೆನನೆಂತುಪರಮಕ್ಕೃ । ಪಾರ್ಣವನರದಕಮಲವನುಸಾರ । ದೆಂನನೆಚ್ಚರಿಸಿದನುಹಾದೀನಾರ್ಕಬಾಂ
ಧವನ ॥ ಬೆಂನಬಿತದೀಕರಣನಿಕರವ । ನೆಂನವಶದೊಳಗಿರಿಸಿಹರಿಯಲಿ । ಶಂನಪಾವನನನುನಿಲಿಸುವೆನುತಾನೆಂದನಾವಿಪ್ರ ॥ ೩೬ ॥
ಇಂತುಜಾತಿಲಿರಾಗದಲಿನಿಜ । ಕಾಂತೆಯನುಪುತ್ರರನುತೊರದೆ । ಕಾಂತಮತಿಸಾರಿದನುಗಂಗಾದ್ವಾರದೇಶವನು ॥ ಕಂತುಪಿತ
ನಪದಾಬ್ಜಯುಗಳದ । ಚಿಂತೆಯಲಿಕುಳ್ಳಿರ್ದುವಿಷಯ । ಭ್ರಾಂತಿಯನುವಿಾರಿದನುಮುಕ್ತಾಶೇಷಸಂಗದಲಿ ॥ ೩೭ ॥ ಮೂರು
ಗುಣಮೂರೊಡಲಾತಗುಣ । ಮೂರವಸ್ಥೆಗಳೆಂಬವನುನೆರೆ । ವಿಾರಿಗುಣಗಂಧದಲ್ಲಿನಿಂದಿರ್ದಾತ್ಮನನುಜರೆದು ॥ ಓರುಗುಡಿಸದೆ

ವಿಷ್ಣುಪದದೊಳ । ಗೇರಿಸಿದನಿಜಚಿತ್ತವೃತ್ತಿಯ । ತೋರಿಕೆಯನೊಡೆಮೆಟ್ಟಿನಿಂದನು ಪರಸಮಾಧಿಯಲಿ ॥ ೩೮ ॥ ಶುದ್ಧಬುದ್ಧಿ
ಯಲನವರತಗೋ । ವರ್ಧನಾದ್ರಿಧರಾಂಘ್ರಿಯನುಸ । ಶ್ರದ್ಧೆಯಿಂನೆನೆವುತ್ತ ಕೀರ್ತಿಸುತಿರದೆಪೂಜಿಸುತ ॥ ವರ್ಧಮಾನಮನೋ
ನುರಾಗಸ । ಮೃದ್ಧಪುಳಕಾಶ್ರುಗಳಭಕುತಿಯ । ಸಿದ್ಧನೆಸಗನುಮರದುತಜ್ಜಿಂತ್ರೆಯಲಿಲೌಕಿಕವ ॥ ೩೯ ॥ ಎಂದುಕಾಣ್ಬೆನೊತಂ
ನಪೋತಕ । ವೃಂದನಾಶನಪುಣ್ಯನಾಮನ । ನೆಂದುಕಾಂಬೆನುಪರಮಕಾರುಣ್ಯೈಕವಿಗ್ರಹನ ॥ ಎಂದುಕಾಣ್ಬೆನೊತಂನಪರಮಾ ।
ನಂದನಿಧಿಯನುಭಕ್ತವತ್ಸಲ । ವೃಂದದಧಿಪ್ಯೈನವನುಭಕ್ತಾಭೀಷ್ಟದಾಯಕನ ॥ ೪೦ ॥ ಒಸದುಶಿಶುವನುಕರದಡೆಂನಯ । ಪೆಸೆ
ರಪೇಳ್ದನೆಂದುನಿಜಪೂ । ರುಷರನಟ್ಟಿಯಮನುಗರನೆಬ್ಬಿಟ್ಟಪಾತಕಿಗೆ ॥ ಅಸುವನಿತ್ತದಯಾನಿಧಿಯನೀಂ । ಪ್ರೆಸುವೆನೆಂತ್ರೋಯೆ
ನುತ್ತಚಿಂತಿಸಿ । ದೆಸೆಗೆಪಂಬಲಿಸುತ್ತಜಾಮಿಳನಂದುಕಾಳ್ಗರ್ದ ॥ ೪೧ ॥ ಇರಲಿರಲುಪೊಳಪೊಳದುದಭ್ರದ । ತಿರುಳುತಳ್ಗತಂಡ
ದಲಿಮಿಂಚಿನ । ಹೊರಳುಹೊರಿಗೊಂಡಂತೆದಶದಿಗುವಿವರವಹುಮುಸುಕಿ ॥ ಧರೆಗೆಸುರ್ಧರವೆನಲುಘನಭಾ । ಸ್ಕರನಮಂಡಲವಿಳಿ
ದಪ್ಪೋಲಂ । ಬರದಲೊಂದುವಿಮಾನವಿಳಿದುದುನಿಮಿಷಮಾತ್ರದಲಿ ॥ ೪೨ ॥ ಹರಿಮುಕುಂದಜನಾರ್ದನಚ್ಯುತ । ಪರಮಪು
ರುಷಪರಾತ್ಮಪರಮೇ । ಶ್ವರಮಹೇಶ್ವರವಂದ್ಯವಾಗೀಶ್ವರಸಮಾರಾಧ್ಯ ॥ ಸುರವರಾರ್ಚಿತಚರಣವಿಶ್ವಂ । ಭರವರೇಣ್ಯಾಧೀ
ಶಲಕ್ಷ್ಮೀ । ವರಯೆನುತವೈಷ್ಣವರುನಾಲ್ವರುಬಂದರಾಕ್ಷಣಕೆ ॥ ೪೩ ॥ ಕೇಳುತವೆಕಂಣ್ದೆರದುಕಂಡನು । ನೀಲಮೇಘಪ್ರಭೆ
ಯನವಮಣಿ । ಜಾಲಭೂಷಿತಗಾತ್ರರನುರಾಜೀವನೇತ್ರರನು ॥ ಕೋಲನೀಡಿದಪ್ಪೋಲುತನುವನು । ಕಾಲುಗಳಲೆಡೆಗೆಡಹಿ
ಹೊರಳಿದ । ನಾಲಿಸುತತನುಪುಳಕರಸದೊಳಗದ್ದನಾವಿಪ್ರ ॥ ೪೪ ॥ ಮರೆಯದೆಂನನುಮರ್ತ್ಯದೇಹದ । ಸೆರೆಯಲಿದ್ದಧಮನನು
ನಿಜವನು । ಮರದಮೂಢಾತ್ಮಂಗೆಮ್ಮದೋರಿದಿರಲ್ಕೈತನಗೆ ॥ ಕರವನರಸುವತಾಯಿಮನದಲಿ । ಮರುಗಿಪರಿತಪಪ್ಪೋಲುಕೃಪೆ
ಯನು । ನೆರದುಬಿಜಯಂಗೈದಿರೆನುತೆರಗಿದನುಚರಣದಲಿ ॥ ೪೫ ॥ ಎತ್ತಿದರುತಲೆದಡವಿನೆಚ್ಚನ । ಭೃತ್ಯನಲ್ಲಾನೀನುಪಾವನ ।
ಕೀರ್ತಿಕಳುಹಿದನೆಂಮನೇರುವಿಮಾನವಿದೆನಿನಗೆ ॥ ಮರ್ತ್ಯದೇಹವನುಳಿದುದಿವ್ಯವ । ಹೋತ್ತವಾಕೃತಿಯಾಗೆನುತಪುರು ।
ಷೋತ್ತಮನಪಾರ್ಶದರುಮ್ಮೈದಡವಿದರುಕರುಣದಲಿ ॥ ೪೬ ॥ ಎನೆಹಸಾದವೆನುತ್ತಪಾವನ । ವೆನಿಪಗಂಗಾಜಲದಲಾಳುತ । ತನು
ವನಲ್ಲಿಯೆಬಿಸುಟುದಿವ್ಯಚತುರ್ಭುಜಾಕೃತಿಯ ॥ ಅನುಪಮನುಧರಿಸಿದನುಬಲವಂ । ದನಿಮಿಷಾರಾಧಿತರಪದಯುಗ । ವನಜ
ದಲಿಮ್ಮೈಯಿಕ್ಕಿನಿಂದನುವಿನಯಪರನಾಗಿ ॥ ೪೭ ॥ ಏರಿಸಿದರಾತನನುವೈಷ್ಣವ । ರೇರಿದರುಬಳಿಕಾವಿಮಾನವ । ನಾರೆರಡುಗುಣ
ದೊಡೆಯನಿಹವೈಕುಂಠಪುರವರಕೆ ॥ ಸಾರುತ್ಯೆಯ್ದಿದರಾಮುಕುಂದನು । ದಾರನಾಮದಮಹಿಮೆಯನುಸಲೆ । ಮೂರುಲೋಕಂ
ಗಳಗಜಾಮಿಳಸಹಿತನಲವಿನಲಿ ॥ ೪೮ ॥ ಮೆರದಹರಿಪದಭಕ್ತಿಸುಧೆಯಲಿ । ಮೆರವನಾತ್ಮಜ್ಞಾನಸುಧೆಯನು । ಮೆರವಮೂರ್ತಿ
ಯುದಾರಮಂಗಳನಾಮನಾಯಕನ ॥ ಹೊರಗುವಳಗೊಂದಾದನುನ್ಮನ । ಕೆರಕವೆರೆದಂತಿರ್ದಚಿನ್ಮಯ । ನಿರವನೆರೆಯೀಕ್ಷಿಸು
ತಜಾಮಿಳವಿಪ್ರನೊಲವಿನಲಿ ॥ ೪೯ ॥ ಅರಸಕೇಳಿಂತಾಯಜಾಮಿಳ । ನಿರದೆಪಾಪದರಾಸಿಯನುನೆರೆ । ನೆರಹಿಕುಲಗೆಟ್ಟಳಿವುತಿ
ಳಿಪುತನರಕಕೂಪದಲಿ ॥ ಹರಿಯಪಾಪನಪುಣ್ಯನಾಮವ । ಮರದುಕೀರ್ತಿಸಿವಿಷ್ಣುಪದವನು । ಬೆರಸಿದನುನಿರ್ನೈಸಿದನಲಾದು
ರಿತನಿಷ್ಕೃತಿಯ ॥ ೫೦ ॥ ಇಲ್ಲಮಿಗಿಲಿದರಿಂದಪಾಪವ । ನೆಲ್ಲವನುನೆರೆಸುಡುವಸುಖಕರ । ಸಲ್ಲಲಿತಸಾಧನದುರಾತ್ಮರೆನಿಪ್ಪಪಾ
ತ್ಮರಿಗೆ ॥ ಸಲ್ಲವಿದಕೆರಗಿದವರನ್ಯ । ಕ್ಕಿಲ್ಲಮನದಲಿಮಲಿನಲಕ್ಷ್ಮೀ । ವಲ್ಲಭನಭಕ್ತರಿಗೆಸಲೆಸದ್ಭಕ್ತಭಕ್ತರಿಗೆ ॥ ೫೧ ॥ ಆವನಿ
ದನೋದುವನುಕೇಳುವ । ನಾವನೀಯಿತಿಹಾಸವನುಯಮ । ದೇವಹರಿಕಿಂಕರರಸಂವಾದದರಹಸ್ಯವನು ॥ ಆವಿಪುಳಪುಣ್ಯಾತ್ಮ
ರಿಗೆನರ । ಪಾವಲೋಕನವಿಲ್ಲಸಂತತ । ಕಾವನವರನುಕರುಣಿನಿತ್ಯಾತುಮನುಮನವೊಲಿದು ॥ ... ॥ ೫೨ ॥

ಅಂತು ಸಂಧಿ ೨ಕ್ಕಂ ಪದನು ೯೫ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಯಮನು ತನ್ನ ದೂತರಿಗೆ ಹರಿನಾಮದ ಮಹಿಮೆಯ ಹೇಳಿದ್ದು.

ಸೂಚನೆ॥ ಹೇಳಿದನುನಿಜದೂತರಿಗೆಸಿರಿ । ಲೋಲನುರುಗುಣಪುಣ್ಯನಾಮವಿ । ಶಾಲಮಾಹಾತ್ಮ್ಯವ
ನುಲೋಕರಹಿತಾರ್ಥವೆನಲಿನಜ ॥ ... ...

ಪದನು ॥ ಕರುಣಿಸೈಮುನಿನಾಥಯಮಕಿಂ । ಕರರುಭಂಗಂಬಡೆದುಹರಿಕಿಂ । ಕರರಕೈಯಲಿಬಿಸುಟಜಾಮಿಳನನುವಿಷಾ
ದದಲಿ ॥ ಮರಳಿಹೋದವರೇನನೆಂದರು । ನಿರುತತಂಮೊಡೆಯಂಗೆನಿಜದೂ । ತರಿಗೆತಾನೇನೆಂದನಾಯಮನೆಂದನವನೀಶ ॥ ೧ ॥
ಆರವಶದಲಿವರ್ತಿಸುವುದೀ । ಭೂರಿಜಗವಿದುಪುಣ್ಯಪಾಪವಿ । ಚಾರವಾರಿಂಗೀಚರಾಚರಜೀವರಾಶಿಗಳ ॥ ಆರವಿಜನಾಜ್ಞೆಯ
ನ್ನುಭಂಗಿಪ । ರಾರುಮುಂನಿತ್ತದನುಕೇಳ್ದವ । ರಾರುಹೆಠಹರಚಿತ್ರವಾಯ್ತೆನಲೆಂದನಾಮುನಿಪ ॥ ೨ ॥ ಧರಣಿಪತಿಚಿತ್ತವಿಸು

ಯಮಕಿಂ । ಕರರುಭಂಗಂಬಡೆದುಹರಿಕಿಂ । ಕರರಕೈಯ್ಯಲಿಹೋದರಾಯಮರಾಜನಿದ್ದೆಡೆಗೆ ॥ ಭರದಿಗಲುಸೆಯಮನಿಯಂಬಾ । ಪುರಕೆನೆರೆನೋಲಗದೊಳ್ಹಳ್ಳನ । ಚರಣದಲಿತಲೆವಾಗಿಬಿಂನಹಮಾಡಿದರುಹದನ ॥ ೬ ॥ ಮುಂಜರಗಸರಿಗೊಳ್ಳಿಸುತನುನವ । ರಂಜುತಳುಕುತತುಟಿಯುಗಚ್ಚು । ತ್ತಂಜುಳಿಗಳೆಂದುಗುಳ್ಕಕಂಗಳಥಾಳದುದಕದಲಿ । ರಂಜಿಸುವಯಮರಾಜನೋಲಗ । ಕಂಜನಾಭಮುಕುಂದಗಾಯ್ತ್ವ । ಗಂಜುವರಜಗಜೀವರೆಂಬೀತೊದಳುನುಡಿಗೇಳ್ದು ॥ ೪ ॥ ಯೆನಿಬರೊಡೆಯರುಜೀಯ್ಯಜೀವರಿ । ಗೆನಿಬರೋಶಾಸಕರುಗುಣಮಯ । ವೆನಿಪಪುಣ್ಯಾಪುಣ್ಯಮಿಶ್ರಕ್ರಿಯಗಳನುಮಾಳ್ಪ ॥ ಮನುಜರಿಗೆತತ್ಫಲವನೀವಡ । ದೆನಿಬರೋಸ್ವಾಮಿಗಳುಚಿತ್ತೈ । ಸೆನುತಸೀಳಿದದಂಡಪಾಶಂಗಳನುತೋರಿದರು ॥ ೭ ॥ ಹಲಬರಾಪರಶಾಸಕರುಬಳ । ಕುಳಿಯಲರಿವುದೆಲೋಕವಾರಿಂ । ಗಳವುನಾರಿಂಗುಳವುನಿಯತಿಗಳುಂಟೆಜೀವರಿಗೆ ॥ ಹಲಬರಿಗೆಹಲಬರುನಿಯಾಮಕ । ರುಳರೆನಿಪುದವಿಚಾರವಿದುಮಂ । ಡಲಪತಿಗಳ್ಗೇಕಾಧಿಪತಿಯೆಳಗಡೆಗುವಂದದಲಿ ॥ ೮ ॥ ಒಡೆಯರೊಡೆಯರೆನಿಪ್ಪರಲ್ಲವ । ರಡಗಿಹರುನಿಂನೊಳಗೆನೀಕ । ಟ್ಟೊಡೆಯರೊಡೆಯರದಾರುನಿನಗೆಲೆದೇವಭಾವಿಸಲು ॥ ನಡೆಮಲೀಸರುಲೋಕದಲಿನಿಂ । ಮಡಿಗಳಾಜ್ಞೆಯನಿಂದುನಾಲ್ವರು । ಕೆಡಿಸಿದರೆನುತ್ತೃದೆಬಿಂನಹಮಾಡಿದರುಹದನ ॥ ೯ ॥ ಕೆಟ್ಟಹಾರುವನೊಬ್ಬನನುನೆರೆ । ಕಟ್ಟಿಯಳವುತಿರಲವನುಕಂ । ಗೆಟ್ಟುಮಗನನುಕರೆಡಂಜದಿರೆನುತಹರಿತಂದು ॥ ದೃಷ್ಟಿಮೋಹನಮರ್ತಿಗಳುನೆಯ । ಗೆಟ್ಟನಾಲ್ವರುಸಿದ್ಧರಂಮನು । ಬಿಟ್ಟುಕಂಗಳಲೀಕ್ಷಿಸಿದರುರೆಜರದುಸುಡುವಂತೆ ॥ ೧೦ ॥ ಧಿಕ್ಕರಿಸಿನೋಟದಲಿಪಾಶವ । ನಿಕ್ಕಡಿಯಮಾಡಿದರುದಂಡವ । ಮುಕ್ಕರಿಕಿತೇಜದಲಿರೋಕತ್ರಯದಲವರಂತೆ ॥ ಕಕ್ಕುಲಿಶೆಗಾರರನುಕಾಣೆವು । ತಕ್ಕದಾತಕಿವಿಪ್ರನನುಹಿಂ । ದಿಕ್ಕಿಕೆಂಡರುದೇವಚಿತ್ತೈಸೆಂದರಾಭಟರು ॥ ೧೧ ॥ ಎಂದಡೆಂದನುಪಾಪಿತಾನೇ । ನೆಂದುಕರೆದನುಮಗನನವರೇ । ನೆಂದೆನುತ್ತೈತಂದರೋನೀವೇನಮಾಡಿದಿರಿ ॥ ಮಂದಮತಿಗಳರೆನಲುನಡುಗು । ತ್ತೆಂದರವರೊಡೆಯಂಗೆಬಿಂನಹ । ವೆಂದೆನುತೆಕಿಂಕರರುಸಲೆವೃತ್ತಾಂತಸಂಗತಿಯ ॥ ೧೨ ॥ ಆದಡವಧರಿಸಾದ್ವಿಜಾಧಮ । ನಾದಿಯಲಿಕೊಟ್ಟಘವನೇಸಂ । ಪಾದಿಸಿದನೀನರಕಯಾತನೆಗಳಿಗೆತಕ್ಕುದನು ॥ ಆದಡೇನವನಂತ್ಯಕಾಲದ । ಲಾದಡೆಯುಧಟವಾತ್ಮಹಿತಸಂ । ಪಾದನವಮಾಡಿದನೆಚಿತ್ತೈಸೆಂದರಾಭಟರು ॥ ಹೋಗಲೆಂಮನುಕಂಡುವಿಹ್ವಲ । ನಾಗಿಭಯದಲಿತಂನಮಗನನು । ರಾಗದಲಿನಾರಾಯಣಾಯಂದೊದರಲಾಕ್ಷಣಕೆ ॥ ಆಗಳೆನಡೆತಂದರಲ್ಲಿಗೆ । ಯೋಗನಿಧಿಗಳುಹೋಹೊಅಂಜದಿ । ರಾಗಮಜ್ಞನೆಅಂಜದಿರುಅಂಜದಿರುನೀನೆನುತ ॥ ೧೪ ॥ ಹರಿಮುಕುಂದಾನಂತಕೇಶವ । ಕರುಣಕೃಷ್ಣ ಕೃಪಾನಿಧಿಯೆಭೂ । ಧರಧರಾಧರಚಕ್ರಧರನರಸಿಂಹಯದುಸಿಂಹ ॥ ಪರಮಪುರುಷಾಚ್ಯುತಜನಾರ್ದನ । ಶರಣಜನವತ್ಸಲಸುರಾರ್ಚಿತ । ಚರಣಶರಣಾಗೆನುತಬಂದರುನಾಲ್ವರುರವಣಿಸಿ ॥ ೧೫ ॥ ಆದುದವರಿಂದಿನಿತುಭಂಗವಿ । ರೋಧಿಯಲಿನಾವ್ಮುಂನಕಾಣೆವು । ಹೋದಹೊಲಬಿಲ್ಲವರದಾರೆಂಬುದನುತಮಗಿಂದು ॥ ಆದಿಮೂರ್ತಿಯೆಬೆಸಸಬೇಕವ । ರಾದಿವೃತ್ತಾಂತವನೆನಲ್ಕದ । ನಾದರಿಸುತಿಂತೆಂದನಾರವಿನಂದನನುನಡುಗಿ ॥ ೧೬ ॥ ಏನನೆಂದರನಿಮಗೆನೀವದ । ಕೇನನೆಂದಿರಿಹೇಳಿಯನೆಲೆಲೆ । ಭಾನುನಂದನಚಿತ್ತವಿಸುಸಂವಾದವಾರ್ತೆಯನು ॥ ಏನಕಂಡಿರಿಹರಚಿತವನೀ । ಶ್ವಾನಗೆನೆಹರಿನಾಮಕೀರ್ತನ । ವೇನಿಧಾನಿಸಲಾಯ್ತುಹರಚಿತವೆಂದರವರೆಮಗೆ ॥ ೧೭ ॥ ಎನಿತಕಿನಿತರಲಹುದೆಹರಚಿತ । ವೆನಲುಸುಡುಮಾತಿರಲುತಂಮನು । ಮುನಿದುನೋಡಿದರೊಡೆಯನನುಬೆಸೆಗೊಳ್ಳಸಂಶಯವ ॥ ಇನಜನಘಹರಿಸುವನುಬಲ್ಲನು । ವಿನುತಧರ್ಮರಹಸ್ಯವನುನೀ । ವೆನಲುಬಂದೆವುದೇವಯಂದರುಕಿಂಕರರುಹದನ ॥ ೧೮ ॥ ಕೇಳುತವೆಹಿಗ್ಗಿದನುಲಕ್ಷ್ಮೀ । ಲೋಲನವರೆಂದರಿದುಕೇಳಲು । ಹೇಳಿದರೆದಾತಾರರೆಂನನುಧರ್ಮವಿದನೆಂದು ॥ ಬಾಳಕೆಗೆಫಲವಾಯ್ತುಲಕ್ಷ್ಮೀ । ಲೋಲನವರುಪರೋ[illegible]ದಲಿನೆರೆ । ಪಾಲಿಸೆದಬಾಹಿರರಬಾಳಿಕೆಗೇನುಫಲವೆಂದ ॥ ೧೯ ॥ ಮತ್ತೆಹರಿಸದಕಮಲವನುನಿಜ । ಚಿತ್ತದಲಿನೆನವುತ್ತಮಾಡಿದ । ಭೃತ್ಯರನೆರಾಧಕ್ಕೆಚಿಂತಿಸಿಸೊಯ್ದುತಂನೊಳಗೆ ॥ ಹೊತ್ತುವೆದೆಯಲಿರವಿತನೆಯನಳ । ಲುತ್ತನುಡಿದನುದೂತರಿಗೆದು । ರ್ವೃತ್ತರಿರದುರ್ಬುದ್ಧಿಗಳಿರಾಕೇಳಿರೈಯಂದ ॥ ೨೦ ॥ ಒಡೆಯನಾನೆನಗನ್ಯರಿಲ್ಲಂ । ದೊಡಲೊಡೆಯಲೊದರುವಿರಿಮೂಜಗ । ದೊಡೆಯನಖ್ಯಾತನಗೆಸಚರಾಚರಕೆಮುರವೈರಿ ॥ ಮೃಡವಿರಿಂಚಿಮಹೇಂದ್ರಮುಖ್ಯರು । ನಡವರಾವನನೇಮದಲಿಮದ । ವುಡುಗಿತಲೆಯಲಿಧರಿಸಿಕಾಲಲಿತೋರಿದುದನೆಂದ ॥ ೨೧ ॥ ಭೂತಭೂತಿಕನಿಕರವೋತ । ಪ್ರೋತವಾಗಿಹಪಾವನಲಿತ । ದ್ಭೂತಭೂತಿಕನಿಕರಸಂಸ್ಥಿತಿಜನ್ಮಲಯಗಳಿಗೆ ॥ ಹೇತುವಾವನಮಾಯೆಮಾಯಾ । ತೀತನಾವನುತಿಳಿವಿರೈನೀ । ವಾತನನುಮೂಢಾತ್ಮರೆಂದಿಂತಳಲಿದನುರವಿಜ ॥ ೨೨ ॥ ಹೇಳುವೆನುತಾನೇನನಾತನ । ಲೀಲೆಯನುಸಚರಾಚರಂಗಳ । ಜಾಲವನುಸೃಜಿಸುವನುಕಮಲಜನಾವನಾಜ್ಞೆಯಲಿ ॥ ಹೊಳುವೆನುಹಣಿಗಿಚ್ಚಿನಲಿಹರ । ನಾಳುತನದಲಿಶಕ್ರಮುಖ್ಯರು । ಪಾಲಿಸುವರೀಜಗವನಾತನೆವೊಡೆಯನೆನಗೆಂದ ॥ ೨೩ ॥ ಅಜನರಿವನಾಶಂಭುವರಿವನು । ನಿಜವನಿಂದ್ರಾಸಲಕುಬೇರರು । ಮಜಡರೀಪವನಾನವರುಣರದಾವನರಿತದಲಿ ॥ ನಿಜಿತವಿಮಿರವೆನಿಪ್ಪಸೋಮಾಂ । ಬುಜಸಖರುತಾವರಿಯರೇತಕೆ । ಸುಜಗುಜುಸುವಿರಿತಂನವಿಜ್ಞಾನಕ್ಕೆನೀವೆಂದ ॥ ೨೪ ॥

ಸತ್ವವೃದ್ಧಿಗಳಾವನೊಬ್ಬನ । ತತ್ವವನುಕಾಣಿಸಲುನೆರೆಯಲು । ಚಿತ್ತವೈಯ್ಯುದ್ದುಮೇದಮಸ್ತಕದೊಡನೆಪಡಿಸಲಿಪಿ ॥ ಪ್ರತ್ಯಗಾ
ತ್ಮನನಾತ್ಮರಿಗೆನಿಜ । ಸತ್ಯವನುಸತ್ಯಂಗಳಿಗೆಮತಿ । ವೃತ್ತಿಲಕ್ಷಿಸಲರಿವುದೈಪರಮಾತುಮನನೆಂದ ॥ ೨೫ ॥ ಒಡೆಯನೆಂಬವನೆಲ್ಲ
ರಿಗೆಕ । ಟ್ಟೊಡೆಯನಾತನುಜೀವಭೂತನು । ಜಡರಿರಾನೀವರಿಯದೊಡೆಯನೆನುತ್ತಪತಿಕರಿಪಿ ॥ ಒಡೆಯನಾಗಲುಬಲ್ಲೆನೈನರಿ ।
ಮಿಡುಕಿಜಾರಿದರೇನುಪಿಂಹಕೆ । ಪಡಿಯುಹುದೆಮೃಗರಾಜನಾಗಲುಬಲ್ಲುದೈಯೆಂದ ॥ ೨೬ ॥ ನೆರಹುಪರಮಾಣುಗಳುಮೇಕ್ಷೊಣಿ
ದೊರೆಗೆಬಹಹೇಮೋರುವಿಗೆಸುರ । ನರನುಹೋರಗಲೋಕಪಾಲಕರೊಡೆತನಂಗಳವು ॥ ದೊರೆಗೆಬಹವೈಧಿಟಕೆಪರಮೇ । ಶ್ವರ
ನನುಹಿಮೆಗೆಮೇಣುತಪ್ಪದ । ಶರಣರಂಘ್ರಿರಜಕ್ಕೆಸರಿಯಹಧೊರೆಯದಾರೆಂದ ॥ ೨೭ ॥ ಆಮುಕುಂದನಕಿಂಕರರುಹರಿ । ನಾ
ಮಧಾರಿಗಳಿಂಗೆನೆರೆಸು । ಕ್ಷೇಮವನುಮಾಡುತ್ತಲೀಲೆಯಲಾಡುತವನಿಯಲಿ ॥ ಸ್ವಾಮಿಗಳುವರ್ತಿಸುತಲಿಹರವ । ರಾಮಪಾತ್ರ
ರಾಸಲ್ವರವರಿಂ । ಭೀಮಭಾಷೊತಕಿಯಬಿಡಿಪಿದರೀಪರಿಯಲೆಂದ ॥ ೨೮ ॥ ಹರಿಪಡೇನೀಪಾಶದಂಡವ । ಮುರಿದಡೇನೀಚಿಂತೆ
ತನಗಿ । ಲ್ಲರುವತಂನಪ್ರಾಣದೊಡೆಯನಭೃತ್ಯವರ್ಗದಲಿ ॥ ಬರಿದೆಪಾಶವನಿಕ್ಕಿದಿರಿಬಲು । ಗೋರತೆಯಿದೆಲಾಮೂಢಬುದ್ಧಿಗ ।
ಳಿರಿಯದಕಟಾಕೇಡತಂದಿರಿತನಗೆನೀವೆಂದ ॥ ೨೯ ॥ ಅಮಹಾಭಾಗವತನಾಹರಿ । ನಾಮವನುಕೀರ್ತಿಸಲುಕೇಳದು । ತಾಮಸ
ರಿರಾಬದುಕಿದಿರಿನೀನಲ್ಲವಡೆಧಿಟಕೆ ॥ ಕ್ಷೇಮದಿಂದ್ಯೈತ್ರಹಿರೆಸುಲಭ । ಸ್ತೋಮಪುರಿಯನುಸೋಂಕಿಮರಳುವ । ನೈಮಜಾಮೂ
ಢರಿರಕ್ಕತಬೋಧಿಗಳುನೀವೆಂದ ॥ ೩೦ ॥ ಆದಡೆಂಮಜ್ಞಾನವಾರದು । ಭೇದಿಸುವದೊಡೆಯನದುಗುರುವಿನ । ಪಾದಕವೃಕ್ತಿರ
ಗುಪ್ರದಲಾಶಿಷ್ಯರಜ್ಞಾನ ॥ ಆದರಿಸುವೆನಗಿದಕೆಯೋಗ್ಯತೆ । ಯಾದಡುಪದೇಶಿಸುವುದಾಜಗ । ದಾದಿಮೂರ್ತಿಯಮಹಿಮೆಯ
ನುತ್ತಭಕ್ತಿಮಹಿಮೆಗಳ ॥ ೩೧ ॥ ಎಂದಡೆಂದನುದೂತರಿಗೆರವಿ । ನಂದನನುಹರಿಚರಣಕಮಲ । ದ್ವಂದ್ವವನುತದ್ಭಕ್ತಿಮಾಹಾ
ತ್ಮ್ಯವನುನೆನನೆನೆದು ॥ ಕಂದೆರೆಯದರಫೊಳಿಗೆಪರವಶಾ । ನಂದರಸಪುಳಕದಲಿಪರವಶ । ನೆಂದೆನಿಸುತಿರೊಯ್ಯನೆನಿರೀಕ್ಷಿಸುತೋಲ
ಗನನಡುವೆ ॥ ೩೨ ॥ ಕೇಳಿರೈದೂತರಿರಭೃತ್ಯರು । ಕೇಳಿರೈಹರಿಮಹಿಮೆಯನುಧಿಟ । ಹೇಳಬಲ್ಲವರಾರುಮೇಣಾಹರಿಪರಾ
ಯಣರ ॥ ಶೀಲವನುವರ್ಣಿಸುವರಾರುಮ । ರಾಳವಾಹನಮುಖ್ಯರಲಿತಾ । ನೋಲಗಿಸುವೆನುತತ್ಪದಾಬ್ಜವನೆನುತವರ್ಣಿಸಿದ ॥
ನಿತ್ಯಶುದ್ಧವಿಬುದ್ಧಸತ್ಯ । ಜ್ಞಪ್ತಿಸುಖಪರಿಪೂರ್ಣವಹಪರ । ವಸ್ತುತಾನಾಗಿಹನುತಂನಲಿತಾನೆಪರಮಾತ್ಮ ॥ ವೃತ್ತಿಕೆಯಘಟ
ದಾಕೆಮಾಯಾ । ತತ್ವಮಾಯಲ್ಲಿಂದಬಹಗುಣ । ವೃತ್ತಿಯಲಿಸಚರಾಚರಬ್ರಹ್ಮಾಂಡವಾಯ್ತೆಂದ ॥ ೩೪ ॥ ಆದರಲಾತ್ಮಹಂಕ್ರತಿ
ಯಿಪರಿ । ಪದುಮಭವರುದ್ರಾಖ್ಯರೆನಲ । ಭ್ಯುದಿತರಾದರುಸತ್ವರಜತಮವೆಂಬುಪಾಧಿಯಲಿ ॥ ಪದುಳಿಸುವಸೃಜಿಸುವಸಮಸ್ತ
ವ । ನೊದಗಿಸುವಸಂಹರಿಸುವಾಕ । ರ್ಮದಲಿಸೇರಿದರಾಮಹಾಪೂರುಷನನೇಮದಲಿ । ೩೫ ॥ ಪದುಮಭವನೆನವಪ್ರಜೇಶ್ವ
ರ । ರುದಿಪಿದರುಬಳಿಕವರಸಂತತಿ । ನದಲಿಸಸುರಾಸುರಮನುಷ್ಯಚರಾಚರವ್ರಾತ ॥ ಉದಿಪಿದವುಸುರಲೋಕಪಾಲ । ತ್ವದಲಿನಿಂ
ದರುಕೆಲರುನರಲೋ । ಕದಲಿಕೆಲರುಸುರೇಂದ್ರಮನುಮುಖ್ಯರುತದಾಜ್ಞೆಯಲಿ ॥ ೩೬ ॥ ಆತಕೊಂಡೆನುಬಲ್ಲಕತಾನೀ ।
ಪ್ರೀತಿಪಾತ್ರವಶುಭಾಶುಭ । ಜಾತಕರ್ಮಫಲಂಗಳನುಪ್ರೂಡುವೆನುಜೀವರಿಗೆ ॥ ಮಾತುಹಲವೇನಖಿಳಜೀವ । ವ್ರಾತವನುನಿ
ರ್ಮಿಸುವನಿಲಿಸುವ । ಘಾತಿಸುವಲೀಲಾವಿನೋದವನರಿವರಾರೆಂದ ॥ ೩೭ ॥ ನೋಡಲೀಸಚರಾಚರಂಗಳ । ಬೀಡಿಕೆಯಬ್ರ
ಹ್ಮಾಂಡಕೋಟಿಗ । ಳಾಡುತಿಹವಣುವಿನವೊಲಾವನರೋಮಕೂಪದಲಿ ॥ ಕೇಡನೇನೆಸಿಶ್ಚಿಸಿಹರಹರ । ಕಾಡದಿರಿನೀವಾತನವ
ರನ । ಕೂಡದಿರಿತನಗೆಂತರಂಗವ್ಯಥೆಯನಿದವೆಂದ ॥ ೩೮ ॥ ಅಸಕಲಲೋಕೈಕನಾಥನ । ದಾಸರೀತ್ರಿಜಗದಲಿಬಲ್ಲಿದ । ರೇಸ
ಪಾತಕವಿದ್ದಡೇನಾವಿಷ್ಣುಭಕ್ತರಲಿ ॥ ಶಾಶಕನುತಾನಲ್ಲವಾತರ । ಲೇಶವವರಂಗಿಲ್ಲಮನದಲಿ । ವಾಸುದೇವನಚಿಂತ್ರಿಯಿರನಿಷ್ಠಾ
ಪರವರೆಂದ ॥ ೩೯ ॥ ಶಿರೆವಿಡಿದುಮನನೊಳಗೆಕೃಷ್ಣನ । ಚರಣವನುಬಿಗಿಯಪ್ಪಿಹರುಷೋ । ತ್ಕರುಷಪುಳಕದಲುಕ್ಕಿಪರಮಾ
ನಂದಬಾಷ್ಪದಲಿ ॥ ಕರಗಿಕರುಣಾಳುವಿನಮಹಿಮೆಯ । ನಿರದೆಲೋಕಕೆಬೀರುತಿಹಸ । ತ್ಪುರುಷರೇಮೇದಿನಿಗೆಜಂಗಮತೀರ್ಥ
ರವರೇದ ॥ ೪೦ ॥ ಅವನಿಪಾವನನಹುದುವರವೈ । ಷ್ಣವರಪದತೀರ್ಥದಲಿನೀವೆಂ । ತವರಲರಸುವಿರಘವನಾದಿತ್ಯದಲಿಕತ್ತ
ಯ ॥ ಲವವಕಾಣಿಸಬಹುದೆದೇವ । ಪ್ರವರವಂದಿತಚರಣರಿಹದೇ । ಶವನುಹೋಪ್ಪದೆಬಹುದುಬಕುವಡೆಂದನಾರವಿಜ ॥ ೪೧
ಕಂಡಿರಾದರೆಧರೆಗೆಕನುವನು । ದಂಡದಂತೀಡಾಡುವುದುಬಡ । ಗಂಡನಲ್ಲೆಲವೆಲವೊವೈಷ್ಣವಗೋತ್ರಹೊರಗಾಗಿ ॥ ಹಿಂಡು
ಮನುಜಗನನವರಿಗೆ । ದಂಡಧರನಾನಲ್ಲನೀವೇ । ಕಂಡಿರಲ್ಲೆವಿಷ್ಣುಭಕ್ತರಮಹಿಮೆಗಳನೆಂದ ॥ ೪೨ ॥ ಒಡೆಯರಿಲ್ಲೆನಬ
ಹವೈಷ್ಣವ । ರೊಡೆರಕ್ಷೆಗೆವಿಷ್ಣುವಿನಗದೆ । ಬಿಡದೆಬೆಂನಲಬರುತಿಹುದುಹಗಲಿರುಳುನೀವವರ ॥ ತೊಡಕಹೊದ್ದದಿರಾವನಾ
ಲಿ । ಮೃಡಕಮಲಜಚರಿತ್ರರವರೆಂ । ದಡಿಗಳಿಗೆಮತಿಯೊಳಗಭಾವಿಸುತಿಹುದುನೀವೆಂದ ॥ ೪೩ ॥ ಅವರಮೇಲಾರೈಕೆಗಾವಿ
ಷ್ಣುವಿನಪಾರ್ಶ್ವದರಾಡುತಿಹರೀ । ಭುವನದಲಿತದ್ರೂಪಶೀಲಗುಣಾಕೃತಿಗಳೆಂದ ॥ ವಿವರಿಸುವಡರಿದವರಮಹಿಮಾ । ರ್ಣವವ
ಮರಾಸುರನಮಸ್ಕೃತ । ರವರುಭುವನಶ್ಲಾಘ್ಯಕೀರ್ತಿಗಳೆಂದನಾರವಿಜ ॥ ೪೪ ॥ ಅರಿಜಾರಿದನೀಖುಬಿಗಳ್ಗಸುರ । ವರರು

ಪನಾಥೀಶ್ವರರುನೆರೆ । ಯರಿಯರೀಸುರಸಿದ್ಧಚಾರಣಕಿಂನರಾದಿಗಳು ॥ ನರರುವರ್ನಾಶ್ರಮಸುನಿಷ್ಠಿತ । ರರಿಯರಖಿಳಾಮ್ನಾಯ
ಕೋವಿದ । ರರಿಯರೀಕರ್ಮಿಗಳುವಿದ್ಯಾವ್ರತಸಮನ್ವಿತರು ॥೪೫॥ ಅರಿವೆನಾನಜನರಿವಶಂಕರ । ನರಿವನಾಕಪಿಲಾಂಕನಾರದ।
ವರಕುಮಾರರುಬಲ್ಲರಾಪ್ರಹ್ಲಾದನಿದನರಿವ ॥ ಅರಿವನಾಮನುಭೀಷ್ಮನರಿವನು । ನಿರುತಬಲಿಶುಕಸನಕರರಿವರು । ಪರಮಧ
ರ್ಮರಹಸ್ಯವನುಹಂನಿಬ್ಬರಿವರೆಂದ ॥ ೪೬ ॥ ಅರಿಯಲರಿದನ್ಯರಿಗೆವೈಷ್ಣವ । ಪರಮಧರ್ಮರಹಸ್ಯವನುಧಿಟ । ಮರಿತವರುಸುಕೃ
ತಾರ್ಥರೈದುವರಮಳಮೋಕ್ಷವನು ॥ ಅರಿವರಾಹರಿಚರಣಸೇವಾ । ನಿರತನಿರ್ಮಳಮತಿಗಳಾಹರಿ । ಚರಣಸೇವಿತಸೇವಕರುಸಂ
ದೇಹವಿಲ್ಲೆಂದ ॥ ೪೭ ॥ ಯೋಗ್ಯರಾದರೆಕರುಣಿಸೆಂದಿರಿ । ಯೋಗ್ಯರಲ್ಲದರಾರುಮುಕುತಿಗೆ । ಯೋಗ್ಯರೀಭವಪಾಶಬದ್ಧರುಸ
ರ್ವರೆಂದೆನಲು ॥ ಯೋಗ್ಯತಿಕೆಸಶ್ರದ್ಧೆಯೊಂದೇ । ಯೋಗ್ಯತಿಕೆನೆರೆನಂಬಬಲ್ಲಡೆ । ಯೋಗ್ಯರವಧರಿಸೊದುಧರ್ಮರಹಸ್ಯಸಂಸ್ಥಿ
ತಿಯ ॥ ೪೮ ॥ ಇದುವೆಧರ್ಮರಹಸ್ಯವೀಲೋ । ಕದಲಿವೇದಪುರಾಣಸಂಮತ । ಪದುಮನಾಭನಪುಣ್ಯನಾಮಶ್ರವಣಕೀರ್ತ
ನದ ॥ ವಿದಿತಸಾಧನದಿಂದತತ್ಪದ । ಪದುಮದಲಿನೆರೆಭಕ್ತಿಯನುಮಾ । ಳ್ಪದುತದೀಯಗುಣಾನುರಂಜಿತಚಿತ್ತವೃತ್ತಿಯಲಿ ॥೪೯॥
ಪ್ರಕ್ಯಯವನಿಂನರಸಲೇಕೆಮ । ಹತ್ತಮನವರಪುಣ್ಯನಾಮದ । ಕೀರ್ತನದಮಾಹಾತ್ಮ್ಯತನುಧಿಟನೀವೆಕಂಡಿರಬೈ ॥ ಅತ್ಯಧಿ
ಕಪಾತಕಿಯಜಾಮಿಳ । ನುತ್ತರಿಸನೈಭವವನಾಕಿದ । ಮೃತ್ಯುಪಾಶವನೊದದುಹರಿಸಂಕೀರ್ತನದಲೆಂದ ॥ ೫೦ ॥ ಮನುಜರಿಗೆ
ಬಹುಜನ್ಮಸಂಚಿತ । ಘನತರಾಘವನೈದೆಸುಡುವಡೆ। ದನುಜಹರನಸ್ಮರಣೆಯಾತಕೆನಾಮಕೀರ್ತನವೆ ॥ ಎನಿತುಪಾಪವಸುಡುವ
ಜಾಮಿಳ । ನೆನಿಪಪಾತಕಿಸಹಿತಸಂಕೀ । ರ್ತನವಮಾಡಿಯೆಮುಕ್ತಿವಡೆಯನೆಪುತ್ರನನುಕರೆದು ॥ ೫೧ ॥ ಎಂದಡಾಲಿಸಿದೊರೆರಾ
ರವಿ । ನಂದನನಪದಕೆರಗಿನರಕ । ಕ್ಕಿಂದುಬಹರಿಂನಾರುಕರುಣಿಸಬೇಹುದೆಮಗೆನಲು ॥ ಎಂದನವರಿಗೆನರಕಗಾಮಿಗ । ಳಂದವ
ನುತಲ್ಲಕ್ಷಣಂಗಳ । ವೃಂದವನುನೆರೆತಿಳಿವವ್ರೋಲುಸವಿಸ್ತರದಲದನು ॥ ೫೨ ॥ ಹೇಳದಾವನಚಿಹ್ನೆಲಕ್ಷ್ಮೀ । ಲೋಲಗುಣನಾ
ಮಂಗಳನುನೆರೆ । ಕೇಳವಾವನಕಿವಿಗಳಚ್ಯುತಗುಣಚರಿತ್ರವನು ॥ ಆಲಿಸದುಮನವಾಮುಕುಂದನ । ಲೀಲೆಯನುಮರದೊಂಮೆ
ಯಘೆದು । ಸ್ಸೀಲರನುನೀವೆಳದುತಹುದೀನರಕಗತಿಗೆಂದ ॥ ೫೩ ॥ ಹರಿಗೆಹರಿಭಕ್ತರಿಗೆನುರದಾ । ಗೆರಗದಾವನಮಾಳ್ಪಹರಿಪ
ದ । ಸರಸಿಜವನರ್ಚಿಸನದಾವನಕೈಗಳಂಘ್ರಿಗಳು ॥ ಹರಿಗೃಹಕೆಹರಿಭಕ್ತಗೃಹಗಳ । ಗಿರದೆನಡೆಯುವುಕೃಷ್ಣಕೃತ್ಯವೆ । ನಿರುತ
ಮಾಡದಪಾಪಿಗಳನೆಳತಹುದುನೀವೆಂದ ॥ ೫೪ ॥ ಭಕ್ತರನುನಿಂದಿಸುವಹರಿಪದ । ಭಕ್ತರನುಬಾಧಿಸುವತತ್ಪದ । ಭಕ್ತರನುವಿ
ದ್ಯಾತಪೋಬಲಗರ್ವದಲಿಜರೆವ ॥ ಭಕ್ತಿಹೀನರನಾತ್ಮವಿದ್ಯಾ । ಶಕ್ತಿಹೀನರನೆಳದುನರಕದ । ಭುಕ್ತಿಗಿಕ್ಕುವುದೆಲವೊನೀವಿದಕಂ
ಜಬೇಡೆಂದ ॥ ೫೫ ॥ ವಿಧಿಗೆಕಿಂಕರರಾಗಿಗೃಹಪಶು । ವಧುಗಳಿಗೆವಶವಾಗಿನಾನಾ । ವಿಧಗೃಹವ್ಯಾಪಾರದಲಿಪುರುಷಾರ್ಥವನು
ಮರೆದು ॥ ಬಧಿರರಂತೆಮುಕುಂದಲೀಲಾ । ಸುಧೆಗೆಕಿವಿಗುಡದಾದುರಾತ್ಮರೆ । ನಧಮರನುವಧಿಸುತ್ತತಹುದೀನರಕಗತಿಗೆಂದ॥೫೬॥
ಲಕ್ಷಣವನಿದನರಿಯದಖಿಳಾ । ಧ್ಯಕ್ಷನವರಲಿದ್ರೋಹವನುನೀ । ವಕ್ಷಮತೆಯಲಿಮಾಡಿದಿರಿಹೊಡಿದಿರಿದುಸ್ಥಿತಿಯ ॥ ರಕ್ಷಿಸುವರಾ
ರಿನ್ನುನಂಮನು । ಪೇಕ್ಷಿಸಿದರಾತಂಮಜೀವಾ । ಪೇಕ್ಷಿತನುಪರಮಾತ್ಮನೆಂದನುದೂತರಿಗೆರವಿಜ ॥ ೫೭ ॥ ದೇವರಕ್ಷಿಸುರಕ್ಷಿ
ಸೆಂನನು । ದೇವಕರುಣಾನಿಧಿಯೆನಿಜಪದ । ಸೇವಕನಗುಣದೋಷವನುನೆರೆನೋಡದೊಲವಿನಲಿ ॥ ದೇವಚೂಡಾಮಣಿವಿರಾ
ಜಿತ । ಪಾವನಾಂಘ್ರಿಯೆರಕ್ಷಿಸೆನುತಾ । ದೇವವಂದಿತನೆರಗಿಕರುಣಾನಿಧಿಯನರ್ಥಿಸಿದ ॥ ೫೮ ॥ ಈಪರಿಯಲಾದೂತರೊಡೆ
ಯನ । ತಾಪವನುಕಾಣುತ್ತನೆರೆವಿ । ಸ್ಮಾಪಿತಾತ್ಮರುದಂಡೆದಂತಿರೆಬಿದ್ದುಕಾಳ್ಗಳಲಿ ॥ ಶ್ರೀಪತಿಯದಾಸರನುಕೇಳ್ಪೈ । ಭೂಪನೋ
ಡಿದೆವೆನುತಹಿಂಗಿದ । ತಾಪಚಾರಿಕರಾದರವರಿಂಗಂದುಮೊದಲಾಗಿ ॥ ೫೯ ॥ ಅದುನಿಮಿತ್ತೇಕಾಂತನಿಷ್ಕೃತ । ವಿದುವೆದು
ಷ್ಕೃತಕೋಟಿಗೆಂಬೀ । ವಿದಿತವಾಯ್ತಲ್ಲೈಮುಕುಂದನಕೀರ್ತನವೆಜಗಕೆ ॥ ಇದರವೋಲನ್ಯದಲಿನಿಷ್ಕೃತಿ । ಯದಿಶಲರಿಯದು
ಪಾಪಕರ್ತ್ರರು । ಹೃದಯಶುದ್ಧಿಯನೈದಲರಿಯರುಭೂಪಕೇಳೆಂದ ॥ ೬೦ ॥ ಒಂದುಭಾರಿಮುಕುಂದನಂಘ್ರಿ । ದ್ವಂದ್ವಸುಧೆಯ
ನುಸವಿದಪುರುಷನು । ಹಿಂದೆಹೆಜ್ಜೆಯನಿಡುವನೇಮಾಯಾಗುಣಂಗಳಲಿ ॥ ಹಿಂದುಗಕೆಹೇತುಗಳೆನಿಪ್ಪುದ । ಮಂದಮತಿಗಳು
ನೋಡದಕಟ । ದ್ವಂದ್ವದಲಿಮುಳುಗಾಡುತಿಹರೆಲೆಮಗನೆಕೇಳೆಂದ ॥ ೬೧ ॥ ಹೇಳಿದೆನುನಿನಗಿದನುತಾನಿದ । ಕೇಳಿದೆನಗಸ್ತ್ಯ
ನಲಿಲಕ್ಷ್ಮೀ । ಲೋಲನುರುಮಾಹಾತ್ಮ್ಯರೂಪಮಹೇತಿಹಾಸವನು ॥ ಕೇಳುವನುತಾನಾವಮರ್ತ್ಯನು । ಹೇಳುವನುಮನವ್ರೊ
ಲಿದವರ್ಗಳ । ಪಾಲಿಸುವನಿತ್ಯಾತ್ಮಗೋಪೀನಾಥನನವರತ ॥ ... ... ॥ ೬೨ ॥

ಅಂತು ಸಂಧಿ ೧೯ಕ್ಕಂ ಪದನು ೫೭೭ಕ್ಕೆ ಮಂಗಳಮಸ್ತು.

ನಾಲ್ಕನೆಯ ಸಂಧಿ.

ದಕ್ಷಬ್ರಹ್ಮನು ತಪಸ್ಸು ಮಾಡಿದ್ದು.

ಸೂಚನೆ॥ ದಕ್ಷನಾಚರಿಸಿದನುತಪವನ | ಧೋಕ್ಷಜನನೇಮದಲಿಭುವನದ | ಕುಕ್ಷಿಯನುತುಂಬಿದನುನಿ
ಜಸಂತಾನನಿಕರದಲಿ ॥ ... ...

ಪದನು ॥ ಮುನಿಪಬಿಂನಹವವಧರಿಸುನೀ | ನೆನಗೆಕರುಣಿಸಿದೈಸುರಾಸುರ | ಮನುಜರುತ್ಪತ್ತಿಯನುಖಗಮೃಗನಾಗ
ಸೃಷ್ಟಿಯನು ॥ ಮನುಪರಂಪರೆಯಿಂದಜನಿಸಿದ | ಜನಪರಮಳಚರಿತ್ರವನುಮ | ತ್ತೆನಗೆವಿಸ್ತರವಾಗಿಕರುಣಿಪುದೆಂದನಾಭೂಪ ।
ಆದಡೆಲೆಜನನಾಥಚಿತ್ತೈ | ಸಾದಿಮನುವಿನವಂಶದಲಿಸುರ | ಪಾದಪದವ್ರೋಲುದಿಸಿದನುಪ್ರಾಚೀನಬರುಹಿಷನು ॥ ಆದರಾಭೂ
ಪತಿಗೆಬಳಿಕೀ | ರೈದುಮಕ್ಕಳುಹೊಕ್ಕರವರುಮ | ಹೋದಧಿಯಮಧ್ಯವನುಪ್ರಾಚೇತಸಮಹೇಶ್ವರರು ॥ ೨ ॥ ತಪವನವರಾ
ಚರಿಸಿದರುನಿ | ಷ್ಕಪಟದಲಿಹಲಕಾಲಬಳಿಕಾ | ತಪದಸಿದ್ಧಿಯಳಿದ್ದುನಿಂದಂಬುಧಿಯತೀರದಲಿ ॥ ನೃಪರುನೋಡಿದರವನಿಯೊ
ಳಗತಿ | ವಿಪುಳವಾಗಿರೆತರುಲತಾವಳಿ | ಸುಪಥವಿಲ್ಲದುಸೃಷ್ಟಿಯನುಮಾಡುವರೆಕಮಗೆಂದ ॥ ೩ ॥ ಅರಸಕೇಳಾಶ್ಚರ್ಯವನು
ನೃಪ | ವರರಕೋಪಾಟೋಪದಿಂದವ | ತರಿಸಿದುದುಬಿರುಘಾಳಿಸಹಿತಮಹಾದವಾನಲನು ॥ ಧರೆಯಮೇಲಣತರುಗಳೆಲ್ಲವ |
ನುರುಹುಹೋಗೆಂದವರುಬೆಸಸಲು | ಹರಿದುದಗ್ನಿಯಧಾಳಿದುವ್ವಾಳಿಸುತವನದೊಳಗೆ ॥ ೪ ॥ ತರುಗಳುರಿಯಲುಕಂಡನೋ
ಷಧಿ | ಯರಸಚಂದ್ರನುಸುಟ್ಟರಾರೋ | ಧುರುಳತನವನುನಿಲಿಸುವೆನುತಾನೆನುತಭೂತಳಕೆ ॥ ಇರದೆಬಂದನುಕಂಡನಿವರಾ |
ಚರಿತವನುಕೋಪಾಗ್ನಿಯನುಪರಿ | ಹರಿಸುತಿಂತೆಂದನುಸುಧಾಕಿರಣನುಮಹೀಶಂಗೆ ॥ ೫ ॥ ಎಲಲೆಧಾರ್ಮಿಕರಿರವಿವೇಕಕೆ | ಮ
ಲಿನವಾದುದೆತಪದಫಲವಿದು | ಖಳರಸಿರಿಸಜ್ಜನರಮರುಗಿಸುವಂತೆತರುಕುಲಕೆ ॥ ಪ್ರಳಯಮಾದುದುಜಗದಸೃಷ್ಟಿಯ | ಹೊಲಬ
ದೇನೆಂದರಿಯಿರಿದನೀ | ವ್ರೊಲುವಡೆಲ್ಲವಹೇಳುವೆನುಸುಡದಿರಿತರುವ್ರಜವ ॥ ೬ ॥ ಪರಮಪುರುಷನುಸೃಜಿಸಿದಮವಿ | ಸ್ತರದಭೂ
ತಂಗಳನುಬಳಿಕೀ | ಪುರುಷರನುಸೃಜಿಸುವಡುಪಾಯವಿದೆಂದುಧರೆಯೊಳಗೆ ॥ ತರುಲತೌಷಧವೀರುದಂಗಳ | ಪರುಠವಿಸಿದನು
ಹವ್ಯಕವ್ಯೋ | ತ್ಕರವಿಶೋರ್ಜಂಗಳುವನಸ್ಪತಿಗಳಲಿಜನಿಸಿದವು ॥ ೭ ॥ ॥ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ॥
ಧರೆಯೊಳಗೆಸತ್ಪುರುಷರಂತೀ | ತರುಗಳಿಹವುಪರೋಪಕಾರಕೆ | ನಿರುತವಾಗಿಸುಪಕ್ವಫಲಪುಷ್ಪಂಗಳನುಧರಿಸಿ ॥ ದುರುಳತನ
ಬೇಡಿಂನುಮುಂನಿನ | ಪರಿಯಲಾಚರಿಸಿದಸುಮಾರ್ಗದ | ಲಿರಲುಲೇಸಲ್ಲದಡೆಸೃಜಿಸುವಡರಿದುನಿಮಗೆಂದ ॥ ೮ ॥ ಸ್ಥಿರಚರಂಗ
ಳೆನಿಪ್ಪಜಗದೊಳು | ಭರಿತಚೈತನ್ಯಾತ್ಮಕನುಹರಿ | ನಿರುತವದುಕಾರಣಸಮಸ್ತಚರಾಚರಕೆಹಿತವ ॥ ಚರಿಸಿದಡೆಪರಿತುಷ್ಟನಹ
ನಾ | ಪರಮಪುರುಷೋತ್ತಮನುಬಳಿಕೀ | ನರಿದುನಿಮಗುಂಟೆಂದುಸಂತೈಸಿದನುಭೂಮಿಪರ ॥ ೯ ॥ ತರಹರಿಸಿರೋಷವನು
ಸುಡದಿರಿ | ತರುಗಳನುತತ್ಸಂಭವೇಯನ | ಪ್ಸರಸೆಯನುಪರಿಣಯವಮಾಡಿಯೆಕೊಂಬುದೆಂದೆನುತ ॥ ಕರದುಕೊಟ್ಟನುಯುವತಿ
ಯೊಬ್ಬಳ | ನರಸುಗಳುಬಳಿಕಾಕೆಯಲಿವಿ | ಸ್ತರಿಸಿವೈವಾಹಿಕವನೈದಿದಕಶಿವಭುಸ್ಥಳಕೆ ॥ ೧೦ ॥ ಜನಿಸಿದನುಭೂಪತಿಗೆಬಳಿಕಾ |
ವನಿತೆಯಲಿದಕ್ಷಾಖ್ಯನಾತನು | ಮನುಜದಿವಿಜಾಸುರನಭಸ್ಥಳಜಲನಿವಾಸಿಗಳ ॥ ಮನದಲೇಸೃಜಿಸಿದನುಸೃಜಿಸಿ | ಟ್ಟನುಪನು
ನುನಿಜಪೌತ್ರಸಂತತಿ | ಜನಿಸಿವರ್ಧಿಸಲೆಂದುಮಿಗೆಚಿಂತಿಸಿದನಾದಕ್ಷ ॥ ೧೧ ॥ ಬಳಿಕಹೋದನುತಪಕೆವಿಂಧ್ಯಾ | ಚಲವನದಸೀ
ಮೆಯಲಿಮಾಡಿದ | ನಲಘುಮತಿಯಾಶ್ರಮವನಘಮರುಷಣವೆನಿಪ್ಪೊಂದು ॥ ಕಲುಷಹರವಹತೀರ್ಥವದರೊಳು | ಸಲಿಸುತಾ
ಸ್ನಾನಾದಿಕರ್ಮವ | ಹಲವುದಿನದುಸ್ತರದತಪದಲಿಭಜಿಸಿದನುಹರಿಯ ॥ ೧೨ ॥ ಅವನಿಪತಿಕೇಳಾತನದರೊಳು | ನವವಿಧದಭ
ಕುತಿಯನುಮಾಡುತ | ಭುವನಪಾವನನಾಮಧೇಯನರಮಳಚರಿತವನು ॥ ವಿವಿಧಮಂತ್ರಂಗಳಲಿಸ್ತುತಿಸಿದ | ನವಿರಳಧ್ಯಾನೈಕ
ನಿಷ್ಠ | ಪ್ರಣವಚಿತ್ತನುಹಂಸಗುಹ್ಯಾಖ್ಯದಲಿಮುರಹರನ ॥ ೧೩ ॥ ಶರಣುಹೊಕ್ಕೆನುದೇವನಿಂನಯ | ಚರಣವನುಸತ್ವಾದಿ
ಗುಣವಿ | ಸ್ತರಣಕಾರಣಬಂಧುವನುಗುಣಸತ್ವಬುದ್ಧಿಗಳು ॥ ಅರಿಯಲರಿಯವುಪರವಿಯನಾರಫಿ | ಕಿರಣದಿಂದರಿವಂತೆನಿಂನಿಂ
ದರಿಯಬೇಹುದುನಿಂನನಿರುಪಮವೆನಿಪರೂಪವನು ॥ ೧೪ ॥ ಅರಿಯನೀಸಖಿಯಾದಪುರುಷನು | ಪರಮಪುರುಷನೆನಿಂನಸಖ್ಯ
ವ | ನರಿವದೊಂದೇಸ್ಥಾನವಿಬ್ಬರಿಗಾದಡೆಯುಧಿಪಕೆ ॥ ಪುರವದಾನೆಂದೆಂಬಮಾಯೆಯ | ಮರುಳಲಾಶಬ್ದಾದಿಗುಣಗಳು | ಕರ
ಣನಿಕರವನರಿಯದೆಂತೊಡನಿರ್ದಡೇನೆಂದ ॥ ೧೫ ॥ ಅರಿಯೆನೆಂಬಡೆಸಕಲವಿಷಯೋ | ತ್ಕರವನೀಪ್ರಾಣೇಂದ್ರಿಯಾಂತಃ | ಕ
ರಣಕರ್ಮಂಗಳೆನುಬಲ್ಲನುಕಾಣವಾತಂನ ॥ ಅರಿಯನೀತನುನಿಂನನಕಟಾ | ಪರಿಕಿಸಲುಸರ್ವಜ್ಞನೆನಿಸಲೆ | ಭರಿತನನುಪ್ರೊ
ವಂಟೆನಾನಿನಗೆಂದನಾದಕ್ಷ ॥ ೧೬ ॥ ಸಕಲವಿಷಯಂಗಳಲಿಮನದಾ | ಸಕತಿಯನುನೆರೆಬಿಟ್ಟನೆನಹಿನೆ | ವಿಕೃತಿಯಿಲ್ಲದೆಮನವ
ನಿರ್ವಿಷಯದಲಿಜನಿಸಿದಡೆ ॥ ಪ್ರಕಟವಹುದೀನಿಂನನಿಜವಾ | ಸುಕೃತಿಗಳಿಗೇಕಾತ್ಮಭಾವದ | ಲಕುಟಿಲಾತ್ಮರಿಗಾಗಿಸಗೆಪ್ರೊ

ಪಂಟೆನಾನೆಂದ ॥ ೧೭ ॥ ಹೊಳ್ಳಹೃದಯದಮಧ್ಯದಲಿಸಂ । ಮೇಳವಡದೀನಿಂನನಿಪ್ಪ । ತ್ರೇಳುತತ್ವಂಗಳಲಿಪುದುಗಿದಾರ್ತ್ಮರೂ
ಪವನು ॥ ಶೀಲವಂತರುಕಾಬರಾತ । ತ್ವಾಳಿಯನುಬೇರ್ಪಡಿಸಿಕಾಷ್ಠದ । ಕೋಳದೊಳಗಗ್ನಿಯನುಕಾಣಿಸುವಂತೆಬುಧರೆಂದ ॥
ಅಸಕಲಕರಣಾವಳೀಗುಣ । ರಾಶಿಗಳನಪಹರಿಸಿದವರಿಗೆ । ಭಾಸುರಾನಂದಾನುಭವರೂಪಾಗಿಸಕಲದಲಿ ॥ ಹಾಸುಹೊಕ್ಕಾಗಿರ್ಪ
ಸಕಲ । ಕ್ಲೇಶನೆಂದೆನಿಪಿಪ್ಪನೀನೀ । ದೇಶಿಗನನೆಂನುವನುಕರುಣದಲೀಕ್ಷಿಸುವುದೆಂದ ॥ ೧೯ ॥ ಅರಿವೆನೆಂಬಡೆಮನಕೆವಚನಕೆ ।
ಕರಣನಿಕರಂಗಳಿಗೆಬುದ್ಧಿಗೆ । ನಿರುತಗೋಚರವಲ್ಲಗೋಚರಿಸಿದೊಡೆನಿಜವಲ್ಲ ॥ ಅರಿವೆನೆಂತೆಲೆದೇವನಿಂನಯ । ನಿರುಗೆಯನು
ಸಂವಿಶ್ವರೂಪನೆ । ಕರುಣಿಸೆನಗೆಗುಣಾವಗಮಸಂಗಮಸುಲಕ್ಷಿತನೆ ॥ ೨೦ ॥ ಮುಂನನೀನಿಹೆಯಾಗಿಜಗವು । ತ್ಪಂನವಹುದ
ಡಗುವದುಬಳಕೆಗೆ । ಹೊಂನುತೊಡವುಗಳಾದವೋಲಿಲ್ಲದಡೆಜಗವಿಲ್ಲ ॥ ಅರ್ಣವದಬುದ್ಬುದತರಂಗಮ । ಹಾರ್ಣವದಲಳಿವಂತೆ
ಸಕಲಕೆ । ನಿಂನನಿಜವೊಂದೇನಿಮಿತ್ತವಲೇಪರಬ್ರಹ್ಮ ॥ ೨೧ ॥ ಕಾದುವಡೆವಾದಿಗಳಿಗಾವನ । ನಾದಿಶಕ್ತಿಗಳಾಹವದತ । ಕ್ತೈ
ದುಗಳುತಾವಾಗಿಹವುಮತ್ತಂತೆಮತಿಗಳಿಗೆ ॥ ಭೇದಬುದ್ಧಿಯನೆಸಗಿಕೊಲುವನ । ನಾದಿಸಿದ್ಧನೆತನಗನಂತಗು । ಣೋದಧಿಯೆಗತಿ
ಯಾಗುಪರಮಾನಂದವಿಗ್ರಹನೆ ॥ ೨೨ ॥ ಅಸ್ತಿನಾಸ್ತಿಯೆನುತ್ತಜಗವನು । ವಿಸ್ತರಿಸಿಬೇರಿರಿಸಿಪೊಂದೇ । ವಸ್ತುವನುಸಂಪಾದಿ
ಸುವಯೋಗಕ್ಕೆಸಾಂಖ್ಯಕ್ಕೆ ॥ ಪ್ರಸ್ತುತಾರ್ಥವೆನಿಪ್ಪಪರತರ । ವಸ್ತುವೇನೀನೆನಗೆಕೊಡುವುದು । ನಿಸ್ತಮಿತವಿಜ್ಞಾನದೃಷ್ಟಿಯ
ನೆಂದನಾದಕ್ಷ ॥ ೨೩ ॥ ನೀನನುಗ್ರಹಿಸುತ್ತಭಕ್ತಜ । ನಾನುರಾಗದಲಂಘ್ರಿಮೂಲವ । ನಾನತರರೀಕ್ಷಣಕೆಗೋಚರವಾಳ್ಪ
ತನುವಿಡಿದು ॥ ಭಾನುವಿಲ್ಲದಜಗದಕಂಗಳ । ಗೇನುಗತಿಹೇಳೊಡೆಯಮಾಡುದ । ಯಾನಿಧಿಯೆಕಾರುಣ್ಯದೃಷ್ಟಿಯನೆಂನಮೇ
ಲೆಂದ ॥ ೨೪ ॥ ಪ್ರಾಕೃತಜ್ಞಾನದಲಿತೋರ್ಪಡ । ದಾಕೃತಿಯಲೆಲೆದೇವಬುದ್ಧಿಗ । ಣಾಕೃತಿಗೆಸಮನಾಗಿಪಾವಕನಂತೆಕಾ
ಷ್ಠದಲಿ ॥ ಏಕರೂಪನೆಕರುಣಿಸೆನಗೆವಿ । ವೇಕದೃಷ್ಟಿಯನಖಿಳನಿಗಮಾ । ನೀಕದೂರಚರಿತ್ರಶರಣಾಗೆಂದನಾದಕ್ಷ ॥ ೨೫ ॥
ಇಂತುಸಂಸ್ತುತಿಪದವಮಾಡುತ । ಚಿಂತಿಸುತಮನದೊಳಗೆಲಕ್ಷ್ಮೀ । ಕಾಂತನಂಘ್ರಿಸರೋಜವನುಭಜಿಸುತ್ತಕುಳ್ಳಿರಲು ॥ ಅಂ
ತರಂಗದಲರಿದನಾಭೂ । ಕಾಂತನಿರವನುಕೃಪೆಯಲಾಶ್ರೀ । ಕಾಂತಮೈದೋರಿದನುಸುರಕುಲನಿಕರಕೈಮುಗಿಯೆ ॥ ೨೬ ॥
ಹೊಳಹೊಳದುದಭ್ರದಲಿಥಳಥಳ । ಥಳಿಸಿಸೂರ್ಯಸಹಸ್ರಕಾಂತಿಯ । ಹೊಳಹುಹೊಸಪಾಳೆಯವಬಿಟ್ಟಂತಿರಲುದೆಸೆದೆಸೆಗೆ ॥
ಬೆಳಗುಬೆಳಗನುತಿವಿದುಪರಿಮಂ । ಡಳಿಸೆಪರಮಕೃಪಾಳುಜನವ । ತ್ಸಲನುಮೈದೋರಿದನುಸುರಮುನಿನಿಕರಫೇಯನಲು ॥
ಅಷ್ಟಬಾಹುಕರಾಗ್ರಲಾಳಿತಮ । ಹಾಷ್ಟದಿವ್ಯಾಯುಧದಸೈಕವ । ಹಾಷ್ಟರತ್ನಾವಳಿಯಮಕುಟದಮಿಳಿತರಶ್ಮಿಗಳ ॥ ಅಷ್ಟದಿಗ
ಧೀಶ್ವರರುಭಾಪೆನ । ಲಷ್ಟಮೂರ್ತಿಗಳೊಡೆಯನೊಪ್ಪಿರೆ । ಲಷ್ಟಮೂರ್ತಿಪ್ರಿಯನುಮೈದೋರಿದನುಮುನಿವರಗೆ ॥ ೨೮ ॥ ಸಿರಿ
ಮುಡಿಯನಸುನಗೆಯನಯನದ । ದರಳುಗಂಗಳಸುಪ್ರಸಂನಾಂ । ಬುರುಹವದನದದಂತಪಙ್ಕ್ತಿಯಪಲ್ಲವಾಧರದ ॥ ವರಕಪೋ
ಲದನಾಸಿಕದಭಾ । ಸುರಮಕರಕುಂಡಲದಭಾಳದ । ಕುರುಳಕಾಂತಿಯಲಂದುಕರುಣಾವನಧಿರಂಜಿಸಿದ ॥ ೨೯ ॥ ಕೊರಳಹಾರ
ದಕೌಸ್ತುಭದಪೀ । ರುರದವನಮಾಲೆಗಳಪರಿಮಳ । ಭರಿತಸಿರಿಗಂಧದಲಸಚ್ಛ್ರೀವತ್ಸಲಾಂಛನದ ॥ ಮೆರೆವನಾಭಿಯವಿಮಲ
ಪೀತಾಂ । ಬರದಕಾಂಚೀಗುಣದಚರಣಾಂ । ಬುರುಹಮಣಿಮಂಡಲದಲಂದಸುರಾರಿರಂಜಿಸಿದ ॥ ೩೦ ॥ ಕಂಕಣದಕರಗಳಲಿನಿ
ಗಳಾ । ಲಂಕೃತಿಯಮೆಲುದಳದಮದನನ । ಬಿಂಕವನುಬಿಡಿಸುವಮಹಾತ್ರೈಲೋಕ್ಯಮೋಹನದ ॥ ಶಂಕರಪ್ರಿಯಮೂರ್ತಿ
ಮುನಿಹೃ । ತ್ಪಂಕಜವನಳಿದುಡಿಸಿಪೂರ್ಣಶ । ಶಾಂಕನಂತಿರೆಸೌಮ್ಯವಿಗ್ರಹನಾಗಿರಂಜಿಸಿದ ॥ ೩೧ ॥ ನಾರದಾದಿಮುನೀಶ್ವರರ
ಪರಿ । ವಾರವೊಂದೆಸೆಗೊಂದೆಸೆಗೆನಿಜ । ಪೌರುಷದಪರಿವಾರವಾಸುರವರರಪರಿವಾರ ॥ ವಾರಿಜಾಸನರುದ್ರಮುಖಪರಿ । ವಾರ
ವೊಂದೆಸೆಗೊಂದೆಸೆಗೆಸುರ । ಚಾರಣರಪರಿವಾರಪರಿವರಿಸಿರಲುರಂಜಿಸಿದ ॥ ೩೨ ॥ ಮಣಿದುಜಯಜಯಯೆಂಬರವಸಂ । ದಣಿ
ನಮೋಸ್ತುನಮೋಸ್ತುರವಸಂ । ದಣಿಮಹಾಸ್ತುತಿಪಾಠಕರಸಂದಣಿಸುಗಾಯಕರ ॥ ಕುಣಿವಕೈವಾರಿಸುವವರಸಂ । ದಣಿನಿ
ರಂತರನೋಳ್ಪವರಸಂ । ದಣಿದಿಗಂತವನಾವರಿಸಲಸುರಾರಿರಂಜಿಸಿದ ॥ ೩೩ ॥ ಸತ್ತಿಗೆಯನೆಳಲೊಳಗೆಮಂಗಳ । ಮೂರ್ತಿಗರು
ಡನಮೇಲೆನಿಂದಿ । ರ್ದತ್ತನುಸ್ತವರವನಾಲಿಸುತವೆಕಟಾಕ್ಷದಲಿ ॥ ಕೃತ್ತಿವಾಸಾದ್ಯರನುನೋಡುತ । ಭೃತ್ಯವತ್ಸಲನಿರಲುಕಂ
ಡನು । ಚಿತ್ತದಲಿಕಾಣದೆನಿಜಾಕ್ಷಿಸಮಕ್ಷದಲಿದಕ್ಷ ॥ ೩೪ ॥ ಕಂಡುಪರಮೈಶ್ವರ್ಯಮೂರ್ತಿಯ । ದಂಡಿಯನುತನುನಡುಗಿಭಯ
ದಲಿ । ದಂಡದಂತೀಡಾಡಿದನುಕಾಯವನುಮೇದಿನಿಗೆ ॥ ಮಂಡೆಯಲಿಧರಿಸುತ್ತಕರಪುಟ । ಪುಂಡರೀಕವನೆದ್ದುಪುನರಪಿ । ಕಂ
ಡನಾಸಿತ್ಯಾತ್ಮಗೋಪೀನಾಥನಂಘ್ರಿಗಳ ॥ ... ... ॥ ೩೫ ॥

ಅಂತು ಸಂಧಿ ೪ಕ್ಕಂ ಪದನು ೧೨೩ಕ್ಕೆ ಮಂಗಳಮಸ್ತು

ಐದನೆಯ ಸಂಧಿ.

ದಕ್ಷನಿಗೆ ದೇವರು ವರವನ್ನು ಕೊಟ್ಟದ್ದು.

ಸೂಚನೆ ॥ ವರವನಿತ್ತಾ ದಕ್ಷನಿಂಗೆ । ಕರುಣದಿಚ್ಛೆಯ ತುಂಬಿ ಕರುಣಾ । ಕರನು ಬಿಜಯಂಗೈದನಂತ
ರ್ಧಾನಸಂಸ್ಥಿತಿಗೆ ॥ ... ...

ಪದನು ॥ ಅರಸ ಕೇಳಾ ದಕ್ಷನಂತಾ । ಪರಮಪುರುಷನ ದಿವ್ಯಮೂರ್ತಿಯ । ನಿರುಪಮೈಶ್ವರ್ಯವನು ಕಾಣುತ ಭಾವಭಕ್ತಿ
ಯಲಿ ॥ ಕರಗಿ ಕರುಣರಸಾಬ್ಧಿಯಲಿ ಮೈ । ಮರೆದು ಮುಳುಗಾಡುತ್ತ ಮಿಗೆ ಕಾ । ತರಿಸಿ ಸಲೆ ಸಂಭ್ರಾಂತನಾದನು ಭಯರಸಾಬ್ಧಿಯ
ಲಿ ॥ ೧ ॥ ಹೊಲಬುದಪ್ಪಿದನಾ ಮುಕುಂದನ । ಚಲುವ ಮೂರ್ತಿಯ ತೇಜದಲಿ ಕಂ । ಗಳು ನಿರಂತರ ಸುರಿವ ಸುಖಬಾಷ್ಪಾಂಬುಪೂ
ರದಲಿ ॥ ಕಳವರವನಾದಿದವು ಪುಳಕಾ । ವಳಿಯು ಸಸ್ಯವ ಬೆಳಸುವಂತಿರೆ । ಧರಣಿಯಲಿ ಕೀಲಿಸಿದ ಪೃಥ್ವಿಯಹಾದನಾ ದಕ್ಷ ॥ ೨ ॥
ಅಕ್ಷರಾತ್ಮನೆನಿಪ್ಪ ವಿಷ್ಣುವ । ನಪ್ರಗೋಚರನಾಗಿ ಕಂಡು ವಿ । ಲಕ್ಷಣಾಂಗುತ ಭಕ್ತಿಭಯಸಂತೋಷಭಾರದಲಿ ॥ ರಕ್ಷ ರಕ್ಷ ಜನಾರ್ದ
ನಾಚ್ಯುತ । ಕುಕ್ಷಿಗತಜಗದಂತ ಸಕಲಾ । ಧ್ಯಕ್ಷಯೆನುತವನಿಯಲಿ ಪುನರಪಿ ನೀಡಿದನು ತನುವ ॥ ೩ ॥ ಉಸುರಲಮ್ಮದೆ ಮುಂದೆ
ಪುಳಕ । ಪ್ರಸರ ಪರಿವೃತಗಾತ್ರನಾಗಿ । ರ್ದಸಮಭಕ್ತರ ದೇವನನು ಕಾಣುತ್ತ ಕರುಣದಲಿ ॥ ನೊಸಲ ಹಿಡಿದೆತ್ತಿದನು ನುಡಿದನು । ನ
ಸುನಗುತ ಗಂಭೀರವಚನದ । ಲಸುರರಿಪು ನೋಡುತ್ತ ನಿಜಕರುಣಾಕಟಾಕ್ಷದಲಿ ॥ ೪ ॥ ಕೇಳು ಮಗನೆಲೆ ದಕ್ಷ ನೀನು ವಿ । ಶಾಲ
ಭಾಗ್ಯನು ಸಕಲಸಿದ್ಧಿಗೆ । ಮೂಲನಹ ತಂನಂಘ್ರಿಕಮಲಪರಾಗನಿಷ್ಠೆಯಲಿ ॥ ಪಾಲಿಸಿದೈ ಚರಿಸಿ ತಪವನು । ಹೇಳಲೇತಕೆ ಸೃಷ್ಟಿ
ಕರ್ಮದ । ಮೂಲವಿದ್ಯೆಯನರಿಯದರಿ ದಿಚ್ಛೆಯಲಿ ನೀನೆಂದ ॥ ೫ ॥ ಸೃಷ್ಟಿವಿಸ್ತಾರಕ್ಕೆ ಸೃಜಿಸಿದೆ । ನಷ್ಟಮೂರ್ತಿವಿರಂಚಿಮು
ಖ್ಯರ । ನಿಷ್ಟವಿಗುತನಗೀ ವಿಭೂತಿಗಳೀ ಸಮೃದ್ಧಿಗಳು ॥ ತುಷ್ಟನಹೆ ತಾನವರಿಗೆಂನವಿ । ಶಿಷ್ಟಪರಿಚರ್ಯೆಯನು ಮಾಳ್ಪರಿ । ಗಿ
ಷ್ಟಬಾಂಧವರವರು ತನಗೆಲೆ ಮಗನೆ ಕೇಳೆಂದ ॥ ೬ ॥ ಎಂನ ಹೃದಯವೆ ತಪವು ವಿದ್ಯೆಗ । ಳೆಂನ ತನು ಕರ್ಮವೆ ನಿಜಾಕೃತಿ । ನಂನಿ
ಯಜ್ಞಾವಳಿಗಳಂಗೋಪಾಂಗವಾಗಿಹವು ॥ ತಂನ ಜೀವವೆ ಧರ್ಮ ನೋಡುವ । ಡೆಂನ ಸುಗಳೀ ಸುರರು ಭಾವಿಸ । ಲನ್ಯವಿಲ್ಲೆಲೆ
ಮಗನೆ ಸರ್ವಾತ್ಮಕನು ತಾನೆಂದ ॥ ೭ ॥ ಅಡಗಿ ಜಗವವ್ಯಕ್ತದಲಿ ಬೇ । ರ್ಪಡದೆ ಬೀಜದಲಿದ್ದ ಸಸಿಯಂ । ತುಡುಗಿ ದೀಂಶಶಿಸೂರ್ಯ
ಪಾವಕರಂಧತಾಮಸದ ॥ ಕಡಲೊಳೊಬ್ಬನೆ ಪವಡಿಸಿರಲೊ । ಗ್ಗೊಡದು ಬಳ್ಳಿಕೆಂನುದರಕಮಲದ । ನಡುವೆ ಜನಿಸಿದ ನೀಸರೋ
ಜಾಸನನು ಕೇಳೆಂದ ॥ ೮ ॥ ಬಳಿಕ ಸೃಷ್ಟಿಗೆ ತಂನ ಮತಿಯ । ಕ್ಕಳಿಸಲೆಂನಾಜ್ಞೆಯಲಿ ತಪವನು । ಬೆಳಸಿದನು ಸೃಜಿಸಿದನು ಬಳಿಕ
ನವಪ್ರಜೇಶ್ವರರ । ಕುಲದ ಪಾರಂಪರೆಯಲುದಿಸಿದ । ರೆಲಘುಮತಿಗಳು ನೀವು ಜಗವನು । ಬೆಳಸಲೋಸುಗ ಮಗನೆ ನೀನಿದ ಕಂಜ
ಜೇಡೆಂದ ॥ ೯ ॥ ಇಂನು ನೀನೀ ಸಕಲಸೃಷ್ಟಿಯ । ನುಂನತಿಯ ಮಾಡುವಡುಪಾಯವ । ನೆಂನ ಕೈಯ್ಯಲಿ ಕೇಳು ಪಂಚಜನಪ್ರ
ಜೇಶ್ವರರ ॥ ಕಂನೆಯೈಧಳೆ ಮದುವೆಯಹುದಿದು । ತಂನಭೀಷ್ಟವು ಮಿಥುನಕರ್ಮವ । ಮಂನಿಸಲು ಸಂತಾನವೃದ್ಧಿಗಳಹವು ಕೇ
ಳೆಂದ ॥ ೧೦ । ಇದುವೆ ತಂನಯ ಪೂಜೆ ಜಗದ । ಭ್ಯುದಯವನು ಮಾಡು ಪ್ರಮುದನೀ ಪ್ರೇಮದ । ಉದಿಸಿದವರಿಂನೆಲ್ಲ ಮಿಥುನೀಭೂತ
ರೆಂದೆನಿಸಿ ॥ ಉದರನನು ತುಂಬಲಿ ಜಗತ್ತ್ರಯ । ವಿದುವೆ ತಂನಯ ಲೀಲೆ ಬಲಿಯನು । ಸದಮಳನೆ ಹರಸುತ್ತಲಿರಿ ನೀವೆಂದನಸುರಾ
ರಿ ॥ ೧೧ ॥ ಎಂನನೇ ಭಾವಿಸುತ ಕೀರ್ತಿಸು । ತೆಂನನೇ ಪೂಜಿಸುತ ವಂದಿಸು । ತೆಂನ ಪುಣ್ಯಚರಿತ್ರಕಥೆಗಳನೊಲಿದು ಕೇಳುತ್ತ ॥
ಎಂನಪರನೀವಾಗಿಹುದು ಮರೆ । ದನ್ಯರಾಗದಿರೀ ಪರಿಯಲಿರೆ । ಲೆಂನನೈದುವಿರೆನುತ ಕರುಣಾನನಧಿ ನೇಮಿಸಿದ ॥ ೧೨ ॥ ಎಂದ
ನುಗ್ರಹಿಸುತ್ತ ದೇವಮು । ಕುಂದನಾ ಸುರಸಿದ್ಧಚಾರಣ । ವೃಂದಸಹಿತಾಕ್ಷಣದಲಂತರ್ಧಾನದಲಿ ನಿಲಲು ॥ ನಿಂದು ಮೈಯ್ಯಿಕ್ಕಿದ
ನು ಕಾಣದೆ । ವಂದ್ಯಚರಣಂಗಳನು ತವನಿಧಿ । ಬಂಧುತಪ್ಪಿದ ಬಡವನಂದದಲಳಲಿದನು ದಕ್ಷ ॥ ೧೩ ॥ ಬಂದನಾಶ್ರಮಕಾ ಪ್ರಜೇ
ಶತೋ । ನಂದನನು ಬಳಿಕಾಗವೆ ಕೃತ್ತದ । ಲಿಂದುವದನೆಯ ಮದುವೆಯಾದನು ಶಕ್ತಿಯಂಬವಳ ॥ ನಂದನರು ಬಳಿಕಾಕೆಯಲಿ ಪೂ
ರ್ಣೇಂದುಸಂನಿಭರುದಿಸಿದರು ತಂ । ನಂದಗವರೇ ಹತ್ತು ಸಾವಿರರರಸ ಕೇಳೆಂದ ॥ ೧೪ ॥ ಅರಸ ಕೇಳಾ ಪಾಂಚಜನ್ಯೆಯ । ವರ
ಸುತರು ಹರಿಯಶ್ವಸಂಜ್ಞಿತ । ರುದಿಸಿ ತಂದೆಯ ನೇಮವನು ನಾರಾಯಣಾಹ್ವಯದ ॥ ಸರಸಿಯಲಿ ಚರಿಸಿದರು ಸಲೆದು । ಸ್ತರವೆನಿಪ
ತಪವನು ಸಮಾಹಿತ । ಕರಣರೊಬ್ಬುದ್ಧಿಯಲಿ ಸೃಷ್ಟಿವಿಧಾನವನು ಬಯಸಿ ॥ ೧೫ ॥ ಪರಮಪಾವನತೀರ್ಥಜಲಸಂ । ಸ್ಪರ್ಶ
ನದಲಂದಖಿಳಜನ್ಮಾಂ । ತರದ ಪಾತಕಕೆಟ್ಟವೆಲ್ಲಾಕ್ಷಣದಲನಿಬರಿಗೆ । ಪರಮಹಂಸರ ಧರ್ಮದಲಿ ವಿ । ಸ್ತರಣವಾದುದು ಬುದ್ಧಿ ಬ
ಳಿಕಂ । ಬುರುಹನಾಭನಭಕ್ತನೈತಂದನು ಸರೋವರಕೆ ॥ ೧೬ ॥ ದೆಸೆದೆಸೆಯಿ ದುರಿತವನು ದುವ್ವಾ । ಳಿಸುವ ಹರಿನಾಮಾಮೃತವ
ನು । ಬ್ಬಿಸುವ ವೀಣಾರವದ ಜಡೆಗಳ ಭಾಸುರದ್ಯುತಿಯ ॥ ಎಸೆವ ತುಳಸೀಮಾಲೆಗಳ ಸುಖ । ರಸದ ಪುಳಕದ ಪಾರವಶ್ಯದ । ಕುಸು
ಮನಾಭನಭಕ್ತನೈತಂದನು ತದಾಶ್ರಮಕೆ ॥ ೧೭ ॥ ತ್ರಿದಶವಂದಿತನೈತಹುದದೂ । ರದಲಿ ಕಾಣುತ ಕೃತ್ಯವನು ಬಿಸು । ಟಿದಿರು
ಗೊಂಡಂಘ್ರಿಯಲಿ ಮೈಯ್ಯಿಕ್ಕಿರಲು ಬಾಲಕರ ॥ ಮುದದಲೆತ್ತಿದನನಿಬರನು ಕರು । ಣದಲಿ ಪಲೆದಡವುತ್ತ ಮುನಿನಾ । ರದನು ಸಯ

ಯಕೋವಿದರಿಗಂದಿದನೆಂದನೊಲವಿನಲಿ ॥ ೧೮ ॥ ಅರಸುಮಕ್ಕಳರೇನಿದೆತ್ತಣ । ಬರವುತಪವಿದು ಚಿತ್ರವಲ್ಲಾ । ಭರವಿದೇನೀ
ಪ್ರಜೆಗಳನು ನೀವೆಂತು ಸೃಜಿಸುವಿರಿ ॥ ನಿರುತ ಭೂಮಿಯ ಕಡೆಯ ಕಾಣದೆ । ಮರುಳುಮಕ್ಕಳಿರೊಬ್ಬ ಪುರುಷಂ । ಗಿರವೆನಿಪ ರಾ
ಷ್ಟ್ರವನು ಕಾಣದೆ ಬಳಲದೇಕೆಂದ ॥ ೧೯ ॥ ಮರಳಿ ಹೊರವಡದಿಪ್ಪ ಬಿಲವನು । ಮರುಳುಗಳಿರೀಕ್ಷಿಸಲು ಕಾಣದೆ । ದುರುಳೆಯೊ
ಬ್ಬಳು ಪುಂಶ್ಚಲಿಯ ಸಂತವಳ ಸಂಗದಲಿ ॥ ಪರವಶವೆನಿಪ್ಪೊಬ್ಬ ಪುರುಷನ । ನರಿವಿರೈ ಕೆಳಯಿಂ ಕೆಮೇಲಿಂ । ನೆರೆದು ಕಡೆಯಲಿ ಹರಿವ
ನದಿಯನು ಕಂಡಿರೈಯೆಂದ ॥ ೨೦ ॥ ಅದರೊಳಿಹ ಹಂಸೆಯನು ನೋಡದೆ । ಸದದುತ್ತಿರುಗುವ ಚಕ್ರವೊಂದಿಹು । ದದನು ಕಾಣದೆ
ನಿಂದು ತಂದೆಯ ಹೇಳಿಕೆಯ ದೆಂದು ॥ ವಿದಿತವಾಯ್ತೆ ತಂದೆಯಾರೆಂ । ಬುದನರಿವಿರೈ ಬರಿದೆ ತಪದಲಿ । ಕುದಿವಿರೇತಕೆ ತಂದೆಯಭಿ
ಮತವಲ್ಲದಿಹುದಕೆಂದ ॥ ೨೧ ॥ ಭೂಪ ಕೇಳಾ ಸುರಮುನೀಶ್ವರ । ನೀಪರಿಯಲಾಜ್ಞಾಪಿಸಲು ಮತಿ । ಚಾಪಳವನುಡಿದಾ ನುಡಿಗಳ
ರ್ಥವನು ನೆರೆ ನೋಡಿ । ಶ್ರೀಪತಿಯ ಪೌರುಷದ ನುಡಿವನೆ । ವೈಪರೀತ್ಯವನೆಂವೊಡನೆದು । ಷ್ಪಾಪಸಿದ್ಧಿಗೆ ಕಾರಣವಿದೆಂದರು ಕು
ಮಾರಕರು ॥ ೨೨ ॥ ಭೂಮಿಯೆಂದಡೆ ಸಕಲ ಕರ್ಮ । ಸ್ತೋಮಸಂಭವಹೇತು ದೇಹಸ । ನಾಮನೊಬ್ಬನು ಪುರುಷನದು ಮೇ
ರಾಷ್ಟ್ರಕವನೊಡೆಯ ॥ ಕ್ಷೇಮಪದವಹ ಮುಕ್ತಿ ಬಿಲವ । ದ್ರಾಮಿಗಳು ಮರಳರು ಸುನಿಶ್ಚಿತ । ಕಾಮಿನಿಯೆ ಧಿಟ ಬುದ್ಧಿ ಜೀವನೆ ಪು
ರುಷನಾಗಿಹನು ॥ ೨೩ ॥ ಮಾಯೆಯೆಂಬುದು ನದಿಯುಭಯ ಮುಖ । ದಾಯಿತದು ಸೃಷ್ಟಿಯಲಿ ಲಯದಲಿ । ಕಾಯ ಕರ್ಮಪಹ
ದವಿದ್ಯೆಯೆ ಹಂಸೆಯೆನಿಸೂದು ॥ ಈಯಶೇಷಜಗಂಗಳಲಿ ನಾ । ರಾಯಣನ ನೇಮದಲಿ ತಿರುಗುವು । ದಾಯುಷವ ತೀರಿಸುವ ಕಾಲನೆ
ಚಕ್ರವದು ನೋಡೆ ॥ ೨೪ ॥ ಪಿತನ ರೂಪವೆ ಶಾಸ್ತ್ರ ಲೋಕಕೆ । ಕೃತಕವಲ್ಲಿದು ಹೇಳುವದಭ್ಯ । ಹಿತವನದರಿಂ ಶಾಸ್ತ್ರನೆಂಬುದು ತಂ
ದೆಯನಲದರ ॥ ಮತವನರಿಯದೆ ಬರಿದೆ ಕರ್ಮ । ಪ್ರತತಿಯಲಿ ಫಲವೇನು ನೆರೆ ಸಂ । ಸೃತಿಗೆ ಕಾರಣವೊದು ನಿಶ್ಚೈಸಿದರು ಬಾಲಕರು ॥
ಇಂತು ಕೇಳವನೀಶ ನಿಮುಷವ । ದಾಂತರೊಡನಾಡಿದಡೆ ಧಿಟತಂ । ಮಂತ್ರಮಾಳ್ಪರು ಮರ್ತ್ಯರನು ದುರ್ವಿಷಯದಲಿ ಹರಿವ ॥ ಚಿಂ
ತೆಯನು ಬಿಡಿಸುವರು ಬಳಿಕವ । ರಂತರಂಗದಲಾ ಕುಮಾರರು । ಸಂತಸುಖದಲಿ ನಿಂದು ಮೈಯಿಕ್ಕಿದರು ಮುನಿಪತಿಗೆ ॥ ೨೬ ॥ ಶಿರ
ವಹಿಡಿದೆತ್ತಿದನು ಮುನಿಪತಿ । ಕರುಣದಲಿ ಬೀಳ್ಕೊಟ್ಟನಿಬರು । ಮರುಳುದರೆಯಿಲ್ಲದ ಮಹಾಪಥಕೈದಿದರು ಬಳಿಕ ॥ ಸ್ವರಮಯ
ಬಸ್ತ್ರದಲಿ ಹರಿಪದ । ಸರಸಿಜವನೋಲೈಸುತಾ ಮುನಿ । ವರನು ಬಿಜಯಂಗೈದನಖಿಳಜಗದ್ಧಿತಾರ್ಥದಲಿ ॥ ೨೭ ॥ ಜನಪ ಕೇ
ಳಾ ದಕ್ಷನಾ ನಿಜ । ತನಯರಪಕಾರವನು ಕೇಳಿದು । ಮನದೊಳಗೆ ಮರುಗಿದನು ಕಿಟ್ಟರುಪಮುನಿಯದೆಸೆಯಿಂದ ॥ ತನಯರ ಕಟಾ
ಸಂತತಿಚ್ಛೇ । ದನವ ಮಾಡಿದನೋ ವಸುವ್ರಜ । ನೆನಿಸುವುನೆ ಶೋಕಾಸ್ಪದವಲಾ ಶಿವಶಿವಾಯೆಂದ ॥ ೨೮ ॥ ಹೃದಯದಂತಸ್ತಾ
ಪದಲಿ ನೆರೆ । ಕುದಿದು ಸಲೆ ಸಂತಾನವೈರಾ । ಗ್ಯದಲಿ ನಿಸ್ಪೃಹನಾಗಿರಲು ಸಂಸಾರವಿಷಯದಲಿ ॥ ಅದನರಿತು ನಡೆತಂದನಲ್ಲಿಗೆ । ಪದು
ಮಜನು ತಿಳುಹಿದನು ಬಳಿಕವ । ಗುದಿಸಿದರು ಶಬಳಾತ್ಮಸಂಜ್ಞಿತರಾತ್ಮಸಂಭವರು ॥ ೨೯ ॥ ಅವರು ಸಾವಿರಸಂಖ್ಯೆಯೆನೆ ಸಂ । ಭ
ವಿಸಿ ಶಬಳಾಶ್ವಾಭಿಧಾನರು । ರವಿಯತೇಜದಲಿರಲು ಕಂಡತಿಹರುಷದಲಿ ದಕ್ಷ ॥ ಅವರಿಗೆಂದನು ನೀವು ಸೃಷ್ಟಿಯ । ನವಿರಳವ ಮಾ
ಡುವುದು ನಿಜಸುತ । ನಿವಹದಲಿ ಪರಮೇಶ್ವರಾಜ್ಞೆಯಿದೆಂದು ನೇಮಿಸಿದ ॥ ೩೦ ॥ ತಂದೆಯಾಜ್ಞೆಯ ಲವರು ಬಳಿಕೈ । ತಂದರವ
ನೀಪಾಲ ಕೇಳಂ । ಇಂದಿರಾಚರಿಸಿದ ನಾರಾಯಣಸರೋವರಕೆ ॥ ಇಂದಿರಾಪತಿಯಂಘ್ರಿಯನು ಮನ । ಸಂದು ಭಜಿಸುವ ವಾತನ
ರುಷದ । ಗಂದುಗವನೆಲ್ಲವನು ಸ್ಮರಿಸಿ ಮಾಡಿದರು ತಪವ ॥ ೩೧ ॥ ಅರಸ ಕೇಳಾ ದಕ್ಷಪುತ್ರರು । ನಿರುಪಮಾಷ್ಟಾಕ್ಷರದ ಮಂತ್ರವ ।
ನಿರದೆ ಜಪಿಸುತ ಭಾವಶುದ್ಧಿಯಲಿರಲು ಬಾಲಕರ ॥ ಪರಮಋಷಿ ನಾರದನು ಕಂಡನು । ಹರಿಪದಧ್ಯಾನೈಕನಿಷ್ಠಾ । ಪರಿಣತಾಂತಃ
ಕರಣರಿಗೆ ಮಾಡಿದನನುಗ್ರಹನ ॥ ೩೨ ॥ ಎಲೆಲೆ ದಕ್ಷಕುಮಾರರಿರ ನೀ । ವೊಲಿದಿರಾದಡೆ ಮೋಕ್ಷಸಿದ್ಧಿಯ । ಸುಲಭ ಸಾಮ್ರಾ
ಜ್ಯವನು ಬಿಡದಿರಿ ಭಕ್ತಿ ಭಾವವನು ॥ ಹೊಲಬು ತಪ್ಪಿದ ಬಳಿಕ ಮುಂನಿನ । ನೆಲೆಗೆ ಬಹುದರಿದಗ್ರಜರ ಬಳಿ । ಸಲುವುದಿಹಪರಸೌಖ್ಯ
ಕಾರಣನೆಂದನಾ ಮುನಿಪ ॥ ೩೩ ॥ ಎಂದು ಮುನಿ ತಿರುಗಿದನು ದಕ್ಷನ । ನಂದನರು ಹೊರವಂಟರಾಶ್ರಮ । ದಿಂದ ಬಳಿಕೈದಿದರು ತಂ
ತಂಮಗ್ರಜರ ಪಥವ ॥ ಸಂದ ವೃತ್ತಾಂತವನು ಕೇಳಿದು । ನೊಂದು ಮನದಲಿ ಮರುಗಿ ಮುನಿಪತಿ । ಕೊಂದನೋ ಹಾಯೆನುತ ಮಿಗೆ
ಚಿಂತಿಸಿದನಾ ದಕ್ಷ ॥ ೩೪ ॥ ಹರಹರೀ ಪರಿ ತಂನ ಕುಲವನು । ಹುರಿದನೋ ಹರಿಯಶ್ವಸಬಳಾ । ಶ್ವರರೊಳೊಬ್ಬರನುಳಿಯಲೀಸ
ದೆಮೊಂಮವಿದ್ಯೆಯನು ॥ ತಿರುಕಾಳಿಗಳನು ಮಾಡಿದನಲಾ । ಗೋರವನಾತಂ ನಂತ್ರೆಭಾಪಿಂ । ನರಸುಮಕ್ಕಳನೇನೆನಾನಿದಕೆಂದು
ಬಿಸುಸುಯ್ದು ॥ ೩೫ ॥ ಇಹಪರವ ಕೆಡಿಸಿದನು ಸುತರಿಗೆ । ವಿಹಿತಕರ್ಮವ ಮಾಡಲೀಸದೆ । ಕುಹಕಮುನಿ ಬೊಂಮೋಪದೇಶ
ವ ಮಾಡಿದಡದಹುದೆ ॥ ಬಹಳ ದೇವರ್ಷಿಋಣಪಿತೃಋಣ । ಸಹಿತ ಜನಿಸಿದ ಮರ್ತ್ಯರಿಗೆ ನಿ । ರ್ವಹಿಸದದರಲಿ ಮೋಕ್ಷವನು ಯೋಗ್ಯ
ತೆಯುಂಟೆಂದ ॥ ೩೬ ॥ ಇಂತೆನುತ ನಿಜಪುತ್ರಶೋಕಾ । ಕ್ರಾಂತಮತಿ ನಡೆತಂದು ನಾರದ । ನಂತಿರಕೆ ರೋಷಾಗ್ನಿಮೂರ್ಛಿತ
ನಾಗಿನೀಸೆಯುಲ ॥ ಸಂತತಿಯ ಕೆಡಿಸಿದವ ನೆಕಟವ । ದಾಂತರೊಳು ತಾ ಕಾಣೆ ನೀನಿಂ । ನಂತೆ ಕಪಟಿಯನೆಂದು ಜರಿದನು ದಕ್ಷನುರೆ

ಮುನಿದು ॥ ೩೭ ॥ ಕೊಂದೆನಿಷ್ಕಾರಣದಲೆಂನಯ । ನಂದನರನೆಲೆಪಾಪಿಹಗೆಯೇ । ನಿಂದ್ಯಮಂಸಲಿಸಿನಗೆಹರಹರವೈಷ್ಣವರ ಕುಲಕೆ ॥ ನಿಂದೆಯನುಮಾಡಿಹೆದಯಾಪರ । ರೆಂದೆನಿಸುವರುವಿಷ್ಣುಭಕ್ತರು । ಮಂದಮತಿನೀನೇನಮಾಡಿದೆಯೆಂದನಾದಕ್ಷ ॥ ಅನುಭವಿಸಲೆಂತರಿಯಲರಿವರು । ಮನುಜರೀವಿಷಯಂಗಳಲಿಯೇ । ಘನತರದಕ್ಲೇಶವನುಲೋಗರವಾಶಿನಲಿಧಿಟಕೆ ॥ ಜನಿತ ವೈರಾಗ್ಯದಲಿಫಲಸಂ । ಜನಿಸಲರಿವುದೆಕೆಡಿಸಿದೆಯಲಾ । ತನಯರನುನಿಂನಂತೆಫಲವಾದಿಗಳದಾರೆಂದ ॥ ೩೯ ॥ ಕಕ್ಕುಲಿತೆಯಾ ಕೆಂಡುಮುಂನಿನ । ಮಕ್ಕಳನುಮುನಿವೇಷರಾಕ್ಷಸ । ಮುಕ್ಕಿದೆಯಲಾಸ್ವೈರಿಸಿದೆನದನೆಂನೊಡಲಕಿಚ್ಚ ॥ ಉಕ್ಕಿಸದೆಮತ್ತಿಂದುಮೊ ಗೆಸಿದೆ । ಹಕ್ಕಲನುಹಸುಳೆಗಳನೆಂದೆವೆ । ಯಿಕ್ಕದೀಕ್ಷಿಸಿದನುಸರೋಷದತಾಂಬ್ರದೃಷ್ಟಿಯಲಿ ॥ ೪೦ ॥ ಸುಟ್ಟಿಯೆಂನನ್ವಯದವೀ ರನು । ಕೆಟ್ಟಗೊರವಯನುತ್ತಶಾಪವ । ತೊಟ್ಟನೆಲವೋಭ್ರಮಿಸುತಿರುಭುವನಾವಳಿಗಳೊಳಗೆ ॥ ನೆಟ್ಟನಿರಲುನಿವಾಸವಿಲ್ಲದೆ ದುಷ್ಟಹೋಗೆನೆತನಗೆಶಾಪವ । ಭಿಷ್ಟವಾಯ್ತೆಂದದನುನೆರೆಕೈಕೊಂಡನಾಮುನಿಪ ॥ ೪೧ ॥ ಇದೆಯಲಾವಿಜ್ಞಾನವಂತರ । ಹೃದ ಯದಂತಸ್ಸಾರವರಿಯದ । ಮದಮುಖರುನಿಂದಿಸಲಿಬ್ಬೈಯ್ಯಲಿಮೇಣುಬಾಧಿಸಲಿ ॥ ಅದನುಬಗೆಯದಶಕ್ತನಾಗಿಹ । ದಿದಿರಿಗುಪ ರೋಧವನುಸಲೆಮಾ । ಡದೆಸಮತ್ವದಲಿಹುದುಪೃಥ್ವೀಪಾಲಕೇಳೆಂದ ॥ ೪೨ ॥ ಬಳಿಕಕಮಲಜನಿಳಿದನವನಿಗೆ । ತಿಳುಹಿದನು ದಕ್ಷನನುಕರ್ಮದ । ಫಳವನರಿವವರಾರುಪೂರ್ವಭವಾಂತರಾರ್ಜಿತದ ॥ ಅಳವುಗದಯಿಸುವುದುಜಗತ್ರಯ । ಮಳಲಬೇಡಿದ ಕೆಂಶುಶೋಕವ । ತಳೆದನಾನಿತ್ಯಾತ್ಮಗೋಪೀನಾಥನಾತ್ಮಭವ ॥ ... ... ॥ ೪೩ ॥

ಅಂತು ಸಂಧಿ ೫ಕ್ಕಂ ಪದನು ೨೨೮ಕ್ಕೆ ಮಂಗಳಮಸ್ತು.

ಆರನೆಯ ಸಂಧಿ.

ದಕ್ಷನು ಪುತ್ರರನ್ನು ಪಡೆದದ್ದು.

ಸೂಚನೆ ॥ ದಕ್ಷಕಂನಿಕೆಯರಲಿಜನಿಸಿದು । ದಕ್ಷಯದಖಗಮೃಗಸುರಾಸುರ । ಯಕ್ಷಕಿಂನರಮುಖ್ಯಜನ
ಸಚರಾಚರವ್ರಾತ ॥ ... ...

ಪದನು ॥ ಅರಸಕೇಳರುವತ್ತುಕಂನಿಕೆ । ಯರುಜನಿಸಿದರುಬಳಿಕಶಕ್ತೀ । ತರುಣಿಯಲಿದಕ್ಷಂಗೆಸದ್ಗುಣರೂಪುಮುಸ್ವನದ ॥ ಪರಮವೈಭವದಿಂದಬೆಳದರು । ಕರದುಕೊಟ್ಟನುಧರ್ಮಗವರೊಳು । ಪರಸುತೆಯರನುಹತ್ತನಾಕಸ್ಯಪಗೆಹದಿಮೂರ ॥ ಒಬ್ಬಳನುತಾರ್ಕ್ಷ್ಯಂಗೆಕೊಟ್ಟನ । ನುಭ್ರತೆಯನಾದಕ್ಷತಾನಿ । ಬ್ಬಿಬ್ಬರನುಭೂತಕಕೃಶಾಶ್ವಾಂಗಿರಸರಿಗೆಕೊಟ್ಟ ॥ ಊರ್ಬಿಪತಿ ಕೇಳಾಶಶಾಂಕಗೆ । ಸರ್ಬಗುಣಸಂಪಂನೆಯರನುಸು । ಪರ್ಬಸೇವ್ಯಂಗಿತ್ತನಿಪ್ಪತ್ತೇಳುಕಂನೆಯರ ॥ ೨ ॥ ಭಾನುಲಂಬಿಮು ಹೂರ್ತವಿಶ್ವಿನ । ಪೀನರೂಪದನಸುಮರುತ್ವತಿ । ಮೀನಲೋಚನೆಜಾಮಿಸಂಕಲ್ಪಾಖ್ಯೆವರಕಕುಭೆ ॥ ಮಾನನಿಧಿಸಾಂಧ್ಯಾಖ್ಯೆ ಧರ್ಮನ । ಮಾನಿನಿಯರಿವರೊಳಗೆಭಾನುವ । ಸೂನುವೇದನುವೃಷಭನಾತಂಗಿಂದ್ರಸೇನಕರು ॥ ೩ ॥ ತನುಜನಾಲಂಬೆಯ ಸವಿದ್ಯೋ । ತ್ತನುಕಕುತ್ಸ್ನಯಯುತ್ಸ್ನಗಳುಮಾ । ನಿನಿಕಕುಭೆಸಂಕಟನಹೆತ್ತಳವಂಗೆಕೀಟಕನು ॥ ವನಿಶೆಜಾಮಿಗೆದುರ್ಗತೆ ತಿತೆ । ತ್ತನೆಯನಾಸ್ವರ್ಗಾಖ್ಯನಾತನ । ತನಯನಂದಿಯೆನಲ್ಕೆಸಾಧ್ಯಕೆಸಾಧ್ಯಗುಣವೆಂದ ॥ ೪ ॥ ತನಯರಾದರುವಿಶ್ವೆಯಲಿಸಂ । ಜನಿಸೆವಿಶ್ವೇದೇವರವನಿಗೆ । ತನಯರಿಲ್ಲಜಯೆಂತನಾದನಲಾಮರುತ್ವತಿಗೆ ॥ ಜನಿಸಿದನುಬಳಿಕವನುಪೇಂದ್ರನು । ದನುಜಹರನಂ ಶದಲಿಸಂಕ । ಲ್ಪಕನುಸಂಕಲ್ಪೆಯಲಿತತ್ಸುತನಾದನಾಕಾಮ ॥ ೫ ॥ ಮಾನವೇಶ್ವರಕೇಳುವಸುಗಳ । ಸೂನುಗಳುವಸುವಿಗೆಮು ಹೂರ್ತಗೆ । ಸೂನುಗಳುಮೌಹೂರ್ತಿಕಾಖ್ಯದಧರ್ಮಸುತರಿವರು ॥ ಸೂನುಗಳುಭೂತಂಗೆರುದ್ರರು । ಮಾನನಿಧಿಗೆಸುರೂಪೆ ಯಂಬಳ । ಲಾನುಕೋಟ್ಯದಲುದಿಸಿದರುಪರಿವಾರಗಣಸಹಿತ ॥ ೬ ॥ ಜನಪಕೇಳೈದ್ರೋಣನಾಪ್ರಾ । ಣನುಧೃತಾರ್ಕಾಗ್ನಿಗಳು ದೋಷಾ । ಖ್ಯನುಸವಸ್ತುವಿಭಾವಸುಗಳೀವಸುಗಳೆಂಟವರು ॥ ತನಯರೀಭವಶೋಕಹರುಷಾ । ದ್ಯನುಪಮರುದ್ರೋಣಂಗೆ ಪ್ರಾಣಂ । ಗನುಪಮನೆಸಹಆಯುಮುಖ್ಯರುಭೂಪಕೇಳೆಂದ ॥ ೭ ॥ ಧೃವನಸತಿಧರೆಪುರವನರ್ತನೆ । ಯಾವತಿಸಮೆತರ್ಷಕಲನ ಗ್ನಿಯ । ಯಾವತಿಧಾರೆದ್ರವಿಣಕಾರ್ಯರನುಂಟುಮಾಡಿದಳು ॥ ಭವಿಸಿದನುವ್ರೋಷಂಗಿಶಾರ್ವರಿ । ಯಾವತಿಯಲಿವರಶಿಂಶುಮಾರ ನು । ಭವಿಸಿದನುವಸ್ತುವಿಗೆಪುತ್ರನುವಿಶ್ವಕರ್ಮಾಂಕ ॥ ೮ ॥ ಉಷೆಯಲಾವ್ಯುಷ್ಟ್ಯಾದ್ಯರುವಿಭಾ । ವಸುವಿಸಿತರಷ್ಟಾವಸುಗಳು ಚ್ಛನಿಸಿತಸಂತಾನವನುಹೇಳಿದೆನೀಪ್ರಕಾರದಲಿ ॥ ವಸುಮತೀಪತಿಕೇಳುರುದ್ರರ । ಹೆಸರನಾಭೂತನಸುರೂಪಾ । ಶಶಿವದನೆಸ ಪಾದಿಸಿದಸಂತಾನಸಂಗತಿಯ ॥ ೯ ॥ ರೈವತನುಮತ್ತಜನುಭವನಾ । ದೇವನಾಮೋಗ್ರರುವೃಷಾಕಪಿ । ಪಾವನಾಜೈತಾಪದಾ ಹಿರ್ಬುಧ್ನಿಬಹುರೂಪ ॥ ಭಾವಿಸುಮಹನ್ನೆಂಬರುದ್ರರು । ದೇವಪೂಜಿತಚರಣರಾವಿ । ಭಾವವಡದರುಭೂತನಲಿಭೂಪಾಲಕೇ ಳೆಂದ ॥ ೧೦ ॥ ಅಂಗಿರಸನಲಿಪಿತೃಗಳಾಸ್ವಧೆ । ಯಂಗದಲಿಬಳಿಕಾಕೃಶಾಶ್ವನ । ಸಂಗದಿಂದರ್ಚಿಸುತಪಡೆದಳುಧೂಮಕೇತುವನು ।

ಅಂಗನೆಯರಾಕದ್ರುವಿನತೆಪ | ತಂಗಿಯಾಮಿನಿಯೆಂಬವರುತಾ | ರ್ಕ್ಷ್ಯಂಗೆಪತಂಗವನುಕೇಳ್ಪುತ್ರಸಂತತಿಯ ||೧೧|| ವಿನತೆ
ಪಡೆದಳುಗರುಡನನುವ | ತ್ತರುಣನನುಕದ್ರುವಿನಮಕ್ಕಳು | ಜನಪನಾಗರುಪಕ್ಷಿಗಳುಜನಿಸಿತುಪತಂಗಿಯಲಿ || ಜನಿಸಿ
ಶಲಭವ್ರಾತಯಾಮಿನಿ | ಗಿನಿತುತಾರ್ಕ್ಷ್ಯನವಂಶಚಂದ್ರನ | ವನಿತೆಯರುನಕ್ಷತ್ರಸಾಂಜ್ಞೆಯರರಸಕೇಳೆಂದ ||೧೨|| ಭೂಪ
ಕೇಳ್ಚಂದ್ರಂಗೆದಕ್ಷನ | ಶಾಪದಲಿಸುತರಿಲ್ಲಯಕ್ಷ್ಮ | ತಾವಹೆಯದಲಿಮತ್ತೆದಕ್ಷಕೃತಪ್ರಸಾದದಲಿ || ವ್ಯಾಪಿಸಿದನುಕಲಾಸಮೃ
ದ್ಧಿಯ | ನಾಪರಿಯಲೇಕಾಸ್ಯಪನಕುಲ | ದೀಪರನುಚಿತ್ತೈಸುಪೃಥ್ವೀಪಾಲನೀನೆಂದ ||೧೩|| ಅದಿತಿದಿತಿದನುಕಾಷ್ಟೆಸುರಸೆ
ಯ | ರುದಿತತಾಂಮ್ರೆಯರಿಷ್ಟೆಯಿಳೆಮುನಿ | ಸುಪತಿಬಳ್ಳಕ್ರೋಧವಶೆಸತಿಸುರಭಿಸರಮೆಯರು || ಸದಮಳನೆತಿಮಿಜಲಚರಂ
ಗಳ | ನೊಡವಿಸಿದಳ್ಳಾಸರಮೆಗಾಶ್ವಭ | ಪದಗಳುದುಭವಿಸಿದವುಸುರಭಿನೆಗೋಮಹಿಷನಿಚಯ ||೧೪|| ಶ್ಯೇನಗೃಧ್ರಾದಿಗಳು
ತಾಂಮ್ರೆಯ | ಸೂನುಗಳುಮುನಿಗಪ್ಸರಸೆಯರು | ಸೂನುಗಳುಸರ್ಪಂಗಳಾಕ್ರೋಧವಶೆಯೆಂಬವಳ || ಭಾನುಗಳುಭೂರುಹ
ಗಳಿಳೆಗಾ | ಸೂನುಗಳುಸುರಸೆಗೆನಿಶಾಚರ | ರೇನನೆಂಬೆನರಿಷ್ಟೆಯಲಿಗಂಧರ್ವಚಯವೆಂದ ||೧೫|| ಜನಪಕೇಳ್ಬಳ್ಳಿಕೆಕಾಸ್ಯಪ|
ಮುನಿಗೆದನುವಿನಲುದಿಸಿದರುಸುತ | ರನುಪಮಾಹವವೀರರರುವತ್ತೊಂದುಮಂದಿಗಳು || ಅನುನಯದಲವಧರಿಸುಹೇಳುವೆ |
ನನಿಬರಭಿಧಾನದಲಿಮುಖ್ಯರ | ನನುಪಮನೆತರುಮಾಯಲಾದಿತಿಸುತರಲಾನೆಂದ ||೧೬|| ಶಂಕುಶಿರನಂಬರನತಿಷ್ಟನು || ಬಿಂಕದ
ಸ್ವರ್ಭಾನುಕಪಿಲನ | ಶಂಕನರುಣಪುಲೋಮವೃಷಪರ್ವಾನುತಾಪನನು || ಅಂಕುಶನುದಿವಿಜರಿಗೆಹಯಶೀ | ರ್ಷಾಂಕೆದುರ್ಜ
ಯವಿಪ್ರಚಿತ್ತಿಕ | ಳಂಕಶೀಲಸುಧೂಮ್ರಕೇಶನುದನುವಿನಾತ್ಮಜರು ||೧೭|| ಅರಸಕೇಳುಪುಲೋಮರುಕಾಲಕೆ | ಯರನುಕಾ
ಸ್ಯಪಮುನಿಗೆಕಾಸ್ಯಪ | ಪರಿಣಯವಮಾಡಿದನುಬಳ್ಳಿಕೆವರಲ್ಲಿಜನಿಸಿದರು || ವರತನಯರರುವತ್ತುಸಾವಿರ | ಸುರರಿಪುಗಳನುತವ
ಪಿತಾಮಹ | ನೊರೆಸಿದನನ್ರೈಕಾಲಕೇಯನಿವಾತಕವಚರನು ||೧೮|| ಅವನಿಪತಿಕೇಳದಿತಿಯಲಿಸಂ | ಭವಿಸಿದರುಪುರುಷಾರ್ಯ
ಮರುಭಗ | ಸವಿತೃಧಾತೃವಿದಾತ್ರುವರುಣತ್ವಷ್ಟ್ರುಮಿತ್ರರೆನೆ || ರವಿಯುಮಕ್ರಮವೆಸರಿನಲಿಹರಿ | ಯವತರಿಸಿದನುಶಕ್ರನಾಹು
ರಿ | ಯವವಿವಸ್ವಾಯೆನಲುಬೆಳಗಿದರೀಜಗತ್ರಯವ ||೧೯|| ಕಮಲಮುಖಿಸಂಜ್ಞೆಯಲಿಜನಿಸಿದ | ನಮಳಚರಿತಶ್ರಾದ್ಧದೇ|
ವನು | ಯಮಯಮುನೆಯನೆಮಿಥುನಸಂಭವಿಸಿತ್ತುಸಂಜ್ಞೆಯಲಿ || ಕ್ರಮಿಸೆಬಡಬಾರೂಪೆಯಾಗಿರ | ಲಮಳನಾಸತ್ಯಾಭಿಧಾನಕ
ರಮರಲೋಕದವೈದ್ಯರದುಭುತರೂಪಗುಣಯುತರು ||೨೦|| ಜನಿತನಾದನವಂಗೆಛಾಯಾ | ವನಿತೆಯಲಿಸಾವರ್ಣ್ಯಮನು
ಶನಿ | ತನೆಯೆಯೊಬ್ಬಳುತಪತಿಸಂವರಣಂಗೆಶೇರಿದಳು || ತನಯರಲಿಯಮಗಮಳಋಷಿಗಳು | ತನುಜೆಸಂತತಿಭೂಮಿಲೋ
ಕದ | ಮನುಜರಾದರುವಿಪ್ರಜಾತಿಗಳವರಸಂತಾನ ||೨೧|| ನಷ್ಟಪುತ್ರನುಪೂಷನೆಂಬವ | ನಟ್ಟಹಾಸವಮಾಡಿಪಹೆಮಾಂ |
ನಷ್ಟಮೂರ್ತಿಯಕಂಡುದಕ್ಷನಯಜ್ಞದಲಿಬಳ್ಳಿಕೆ || ಭ್ರಷ್ಟದಂತೆನೆಯಾಗಿಮೆಲುವನು | ಪಿಷ್ಟವನುಕೇಳವನಿಪತಿಕುಲ | ಶಿಷ್ಟರಿವ
ರದಿತಿಯಕುಮಾರರುಲೋಕವಿಶ್ರುತರು ||೨೨|| ಅಸುರರೊಡಹುಟ್ಟಿದಳುಲೋಚನೆ | ಪೆಸರಿನವಳ್ತ್ವಷ್ಟ್ರುವಿನಸತಿ | ಬಿಸ
ಜಲೋಚನೆಹೆತ್ತಳನುಪಮವಿಶ್ವರೂಪನನು || ಎಸೆದನಿಂದ್ರಾಚಾರ್ಯನಿಲ್ಲದ | ಡಸಮತೇಜನುಸುರಗುರುತ್ವವ | ನೆಸಗಿದನುನಿ
ತ್ಯಾತ್ಮಗೋಪೀನಾಥನೊಲವಿಸಲಿ || ... ... ||೨೩||

ಅಂತು ಸಂಧಿ ೭ಕ್ಕಂ ಪದನು ೨೫೬ಕ್ಕೆ ಮಂಗಳಮಸ್ತು.

ಏಳನೆಯ ಕಥೆ.

ಇಂದ್ರನು ವಿಶ್ವರೂಪನನ್ನು ಪುರೋಹಿತನನ್ನಾಗಿ ವರಿಸಿದ್ದು.

ಸೂಚನೆ || ದೇವಗುರುವಿಲ್ಲದಡೆಸುರಪತಿ | ತಾವರೆಯಮಗನಾಜ್ಞೆಯಲಿಸಂ | ಭಾವಿಸಿದನಾವಿಶ್ವರೂಪನ
ನಮರಗುರುಪದಕೆ ... ...

ಪದನು || ಮುನಿಪಬಿಂವಹವೇನುಕಾರಣ | ವನಿಮಿಷರವರಗುರುಬೃಹಸ್ಪತಿ | ಯನುಭಜಿಸದಾವಿಶ್ವರೂಪನನೇಕೆಭಜಿ
ಸಿದನು || ವಿನುತಪೌರೋಹಿತ್ಯಕರ್ಮದ | ಲೆನಗೆನಿಂಮಡಿಬೆಸಸಬೇಕೆನೆ | ಮುನಿಕುಲಾಗ್ರಣಿನೃಪಕುಲಾಗ್ರಣಿಗೆಂದನಾಹದ
ವ ||೧|| ಅರಸಕೇಳೊಂದುದಿನಸುರಪತಿ | ಪರಮವಿಭವದಲಖಿಳವಿಬುಧೇ | ಶ್ವರರುಸಹಿತೊಡ್ಡೋಲಗವನಿತ್ತನುನಿಜಾಸನದ||
ಹೊರೆಯಲಗ್ನಿಕೃತಾಂತನಿರುರುತಿ | ವರುಣವಾಯುಕುಬೇರರೊಪ್ಪಲು | ಪರಯುವತಿಪೌಲೋಮಿಯರ್ಧಾಸನದಲೆಸದಿರ
ಲು ||೨|| ಎರಡುಪಾರ್ಶ್ವದಲೊಪ್ಪೆಸಿತಚಾ | ಮರವನಿಕ್ಕುವದಿವ್ಯವಧುಗಳ | ವರರತುನವಲಯಾಂಗದಂಗಳಝುಣತ್ಕೃತಿಯ
ಸೆಯೆ || ಸರಸವಚನದಚಪಳೆಯರುಮೋ | ಹರಿಸೆಮುತ್ತಿನಸತ್ತಿಗೆಯರ್ಝು | ಲ್ಲರಿಯನೆಳಲಿದೇವಸಮಿತಿಗಳೊಳಗೆಕುಳ್ಳಿರ್ದ ||
ಗರುಡಕಿಂನರಸಿದ್ಧವಿದ್ಯಾ | ಧರಮಹೋರಗಯಕ್ಷಗಂಧ | ರ್ವರುವಸುಗಳಾದಿತ್ಯವಿಶ್ವೇದೇವರುದ್ರಗಣ || ಪರಮಋಷಿಗಳು

ಚಾರಣರುಸಾ | ಧ್ಯರುಮರುತ್ತುಗಳಶ್ವಿನೀದೇ | ವರುಸಭಾಸ್ಥಳದೊಳಗೆರಂಜಿಸಿದರುನಿಜಾಂಗದಲಿ ||೪|| ಸುರಸೆಮೇನಕಿ
ರಂಭೆಯೂರ್ವಶಿ | ವರತಿಲೋತ್ತಮೆಮಂಜುಘೋಷಣಿ | ಸರಸಿಜಾಕ್ಷಿಘೃತಾಚಿವಿಶ್ವಾಚಿಯರೆನಿಪ್ಪವರು || ವರಕ್ರತುಸ್ಥಳಿಪುಂ
ಜಿಕಸ್ಥಳಿ | ತರುಣಿಸಹಜನ್ಯೆಯರೆಂಬ | ಸ್ವರಸೆಯರುಸಂಗೀತನೃತ್ಯಂಗಳಲಿರಂಜಿಸಿತು ||೫|| ಬಂದನಲ್ಲಿಗೆಸಕಲಸುರಕುಲ |
ವೃಂದದಾಚಾರ್ಯನುಬೃಹಸ್ಪತಿ | ಮುಂದೆನಿಂದಿರಲಾಸನಪ್ರಣಿಮಾತಸತ್ಕೃತಿಯ || ಬಂದುವನುಮಾಡದೆನಿಜಾಸನ | ದಿಂದತಾನಿ
ಳಿಯದೆಮದಾಂಧಪು | ರಂದರನುಕುಳ್ಳಿರ್ದನಾಸನದಲಿಸಗರ್ವದಲಿ ||೬|| ಧರಣಿಪತಿಕೇಳನಿಮಿಷದಸಾ | ವಿರವಿಲೋಚನದಮ
ರಪತಿಕಂ | ಗುರುವಿನಾದನುಮಾಡದಲಿಂನುಳಿದವರಮಾಡೇನು || ಗುರುಬೃಹಸ್ಪತಿಬಳಿಕಮಂಕರದ | ಪರಮನೀಜಾಂಶಕದಪ್ರೋಲಿ
ರೆ | ಸುರಪತಿಯಸಭೆಯಿಂದಹೊರವಂಟೈದಿದನುಮನೆಯ ||೭|| ಸಿರಿಯಮದವಿದೆನುತ್ತಖತಿಯಲಿ | ಗುರುನಿಜಾಲಯಕೈದಲಾ
ಕ್ಷಣ | ನೆರೆದಸಭೆಯೊಳಗೈದೆಗಜಬಜಿಸಿತ್ತುಜನನಿಕರ || ಜರೆಯಲಿಚಿತ್ತನುಮಹೇಂದ್ರನು | ಸಿರಿಯಮದತಲೆಗೇರಿಗುರುವ
ನು | ಮರದೆನಕಟಕಟೆಂದುನುಡಿದನುಸುಯ್ದುಸಭೆಯೊಳಗೆ ||೮|| ಶ್ರೀಮದೋದ್ರೇಕದಲಿಘನತರ | ತಾಮಸಪ್ರುತನಗಾ
ಯ್ತುಬರಲುನು | ಹಾಮಹಿಮುನಿದಿರೆದ್ದುಸಾಷ್ಟಾಂಗಸ್ವಾಗತೋಕ್ತಿಯಲಿ || ಸಾಮವನುಬೆಳಸದೆವೃಥಾಸು | ತ್ರಾಮತನದಲಿಬಿ
ರಕ್ತೆನಿಜಕೆವಿ | ರಾಮವಾಗದೆಮಾಣದೆಂದಳಲಿದನುಮರುಕೊಳಿಸಿ ||೯|| ಹರಿವಿರಿಂಚಾದಿಗಳುಮುನಿದಡೆ | ಪರಿಹರಿಸುವನುಭೀ
ತಿಯನುನಿಜ | ಗುರುಮುನಿದರಿಂನಾರುಕಾವವರುಂಟೆಜಗದೊಳಗೆ || ಕರುಣಿಸಿದನೆನಗಿಂದುಗರ್ವದ | ಲಿರಲುಶಾಪವಕೊಡದೆ
ಸುಂಮನೆ | ಸರಿದನಿದುತಾಗುಣವಲಾಕ್ಷಮೆಗುರುಗಳಿಂಗೆಂದ ||೧೦|| ಕಾಳುಮಾಡಿದೆನಕಟಸಭೆಯಲಿ | ಸೂಳೆಯರಸಂಗೀತವ
ನುನೆರೆ | ಕೇಳುತಿದಿರಲಿನಿಂದಗುರುವನುಕಾಣದಾದೆವಲಾ || ಬಾಲೆಯರಸಂಮೇಳವೆಂಬೀ | ಧೂಳಿಬಿದ್ದರೆಕಾಬುದೇಕಂ | ಣಾ
ಲಿಸತ್ಪುರುಷರನುಗುರುಹಿರಿಯರಮಹಾಯಂದ ||೧೧|| ಆಗಲೀಕೊರತೆಯನುತ್ತೆಗವೆಸು ಬೇಗದಲಿತಾಹೋಗಿಕರುಣಾ | ಸಾ
ಗರನಪದದಲ್ಲಿಬೀಳುವೆನೆನುತಶತಮಖನು || ಆಗಳೋಲಗಹರದುನಿಜಗೃಹ | ಕಾಗಿಬರುತಿರಲರಿತುಮನೆಯನು | ಯೋಗನಿಧಿ
ಹೊರವಂಟನಂತರ್ಧಾನಸಂಸ್ಥಿತಿಗೆ ||೧೨|| ಅರಸಿದನುದೇವೇಂದ್ರನಮರರು | ನೆರಸಿಗುರುವಿನನೆಲೆಯಕಾಣದೆ | ಮರುಗಿದ
ನುಸುರಪತಿಯದುಃಖವನಾರುಬಣ್ಣಿಪರು || ಹರದುದೀವೃತ್ತಾಂತಜಗದಲಿ | ನೆರದುದಸುರರುಕೇಳಿಶುಕ್ರನ | ಪರಮಮತದ
ಲಿಮಾಡಿದರುಸಂನಾಹವನುಭಟರು ||೧೩|| ಹರಿದುದಸುರರದಾಳಿದೆಸೆಗಳು | ಬಿರಿಯಲಮರಾವತಿಗೆಕೋಟೆಯು | ಮುರಿದು
ಹೊಕ್ಕರುಮಿಕ್ಕರಂತಃಪುರಕೆಸುರರಳುತ || ಪರಿದುದಲ್ಲಿಯದಲ್ಲಿಹಾಯ್ದು | ಸ್ವರಸೆಯರುಸಹಿತಿಲ್ಲಿಚೂಣಿಯು | ಮುರಿದುಬಿ
ಗ್ದುದುಬವರಧೊರೆಗಳಲಿದನುದೇವೇಂದ್ರ ||೧೪|| ದೇವಕಟಕಕ್ಕಿಂದುಜಯವನು | ಭಾವಿಸುವಡರಿದಿಂನುನಿಲುವಡೆ | ಠಾವ
ಕಾಣೆನುಸತ್ಯಲೋಕದೊಳಲ್ಲದಳಿದಲ್ಲಿ || ಜೀವವಿಲ್ಲದಡಾವನೈನಿ | ರ್ಜೀವರಾರೆಂದೆನುತಹೋದನು | ತಾವರೆಯಮಗನೆಡೆಗೆ
ದಿವಿಜರುಸಹಿತದೇವೇಂದ್ರ ||೧೫|| ತಂಡತಂಡದದಿವಿಜರಾಬ್ರಂ | ಹಾಂಡಪತಿಯಂಘ್ರಿಯಲಿಸೈಗೆಡೆ | ದಂಡಲೆದುಷ್ಕೃತ್ಯೇಯ
ರುಬಟೆಗಳನುಬಿಂನೈಸೆ || ಪುಂಡರೀಕಾಸನನುಕೇಳ್ದಾ | ಖಂಡಲಾದ್ಯರನೀಕ್ಷಿಸುತಕೈ | ಕೊಂಡುಕೃಪೆಯನುಸಂತವಿಸುತಿಂತೆಂ
ದನವರೊಡನೆ ||೧೬|| ಕೇಳಿರೈಸುರರೆಲ್ಲನಿಂಮನು | ಬೀಳುಕೊಂಡುದುವಿಭವವಿಂದಿನ | ಲೇಳ್ಧಿಟವನುಮಾಡಿನಿಂಮಾಚಾ
ರ್ಯನನುನೀವು || ಶೀಲವಂತರವಜ್ಞೆವಿಭವವ | ಬಾಳಲೀವುದೆನಿಂಮಹೋಲುವ | ಖೂಳರನುತಾಕಾಣೆನೆಂದನುಜರದುಸುರ
ಪತಿಯ |೧೭|| ನೋಡುನಿಂನವಿರೋಧಿಗಳುನೆರೆ | ಮಾಡಿಗುರುಭಕ್ತಿಯನುದೆಸೆಗಳ | ಝಾಡಿಸುತ್ತಿದೆಯಲಮಹಾವಿಜಯ
ಪ್ರತಾಪದಲಿ || ಕೇಡುಬಾರದೆಮಗತೆಗುರುಧಿಟ | ನೋಡಿದಡವಜ್ಞೆಯಲಿಜಯವನು | ಮಾಡುವುದುಗುರುಭಕ್ತಿಸಕಲೈಶ್ವ
ರ್ಯಸಂಪದವ ||೧೮|| ನಿಂನಲೋಕದಮಂಡೆಖಳರಿಂ | ತಂನಲೋಕಕೆಸಹಿಕೆಧಾಳಿಯು | ಕುಂನಿಗಳುಕವಿಸುವಪೊಳಲಭೃ
ಗುಮಂತ್ರಶೀಕ್ಷೆಯಲಿ || ಊನತಿಯುಳಾನೃಪತಿಗಾದ್ವಿಜ | ವರ್ಗಗೋಗೋವಿಂದಪೂಜೆಮ | ದೋಂನತನೆವಿಪರೀತವೆನೆವಿಪರೀ
ತನಹುದೆಂದ ||೧೯|| ಆದುದಾಯ್ತಿಂನೇನುನೀವಿಂ | ನಾದಡಾಶ್ರಯಿಸೂದುಗುರುವಿನ | ಹೋದಹೊಲಬರಿಯದಡೆಬಳಿಕಾವಿ
ಶ್ವರೂಪನನು || ಆದರಿಸುವುದುತ್ವಾಷ್ಟ್ರಸುತನನು | ವೇದವಿತ್ತಮನೊಂದುಕರ್ಮವ | ನೈದಿಸೇವಿಸಿದಡೆಮನೋರಥಸಿದ್ಧಿಯ
ಹುದೆಂದ ||೨೦|| ಎಂದುಕಮಲಜಕಳುಹಲವರೈ | ತಂದರಂದಾವಿಶ್ವರೂಪನ | ಮಂದಿರಕೆಬರೆಕಾಣುತಿದಿರೆದ್ದಾಸನವನಿತ್ತು ||
ವಂದಿಸಿದನಾವಿಪ್ರವರರ್ಗೆ | ತಂದಿರಿಲ್ಲಿಗದೇನುಕಾರಣ | ತಂದೆಗಳಿರೆನಗೇನುಬೆಸನನಲೆಂದರಭಿಮತವ ||೨೧|| ಮಗನೆಕೇಳತಿ
ಥಿಗಳುಬಂದೆವು | ನಿಗಮನಿಷ್ಠನೆನಿಜನಿವಾಸಕೆ | ಬಗೆಯಬಯಕೆಯನೀವುದತಿಥಿಗಳಾವುನಿನಗಿಂನು || ಸೊಗಯಿಸುವನಿಜಧರ್ಮ
ಶುಶ್ರೂ | ಷೆಗಳುಪಿತೃಗಳಿಗೆಮಗೆಚಿತ್ತವ | ದುಗುಡವನುಕಳೆಕಂದಕರುಣಿಪುದೆಂದುದಮರಗಣ ||೨೨|| ಚಿತ್ತವಿಸಲಾಚಾರ್ಯ
ನಾಗಮ | ಮೂರ್ತಿತಂದೆಪಕುಮಾರ್ಗಖನನಿಜ | ಮೂರ್ತಿವಡಹುಟ್ಟಿದನುಶಕ್ರನಮೂರ್ತಿತಾಯಧರೆಯು || ಮೂರ್ತಿಯಭ್ಯಾಗ
ತಜನವಹ್ನಿಯು | ಮೂರ್ತಿಭಗಿನಿಯುಳಾದಯಾಪರ | ಮೂರ್ತಿಧರ್ಮನಮೂರ್ತಿಯತಿಥಿಗಳೆಂದುದಮರಗಣ ||೨೩|| ಶ್ರೀ||

ಮೂರ್ತಿಭೂತನಿಕಾಯವಾತ್ಮನ । ಮೂರ್ತಿಯುದರಿಂದೆಂಮನರರಹಿ । ತಾರ್ತಿಯನುಕೆಳೆಕೆಡನಿಂಮತಪಃಪ್ರಭಾವದಲಿ ॥ ಸತ್ಯಸಂಧನೆಮಾಡುಪೌರೋ । ಹಿತ್ಯವನುಕುಂದಿಲ್ಲಕಿರಿಯರಿ । ಗುತ್ತಮರುತಲೆವಾಗಿಡದೆಕಾರ್ಯಾರ್ಥದಲಿಧಿಟಕೆ ॥ ೨೪ ॥ ನಿಷ್ಠೆಯಿಂದುನೋಡುವಡತಿಥ್ಯಾ । ಜ್ಯೇಷ್ಠನಾದವನ್ಯೆಸಲೆವಯೋ । ಜ್ಯೇಷ್ಟರಿಗೆಗುರುವಾಗಬಹುದಿಂತಿದುವೆಶ್ರುತಿಸಿದ್ಧ ॥ ಜ್ಯೇಷ್ಠನೆನಲುತಪೋಪ್ರತಾಧ್ಯನೆ । ಜ್ಯೇಷ್ಠನಾರಾಗಲಿಧಿಟಕ್ಕೆ । ನಿಷ್ಟುರವರುವಿಚಾರಿಸೆಂದನಲೆಂದನವರೊಡನೆ ॥ ೨೫ ॥ ತಂದೆಗಳಿರಾತನಯರಿಗೆಹಿತ । ವೆಂದುನುಡಿದರೆರಾಜಗುರುತನ । ನಿಂದ್ಯವಲ್ಲಾಜಗಕೆತಾನಿಂನೇನಹೇಳುವೆನು ॥ ಬಂದಿರಭ್ಯಾಗತರೆನಿಸಿಸುರ । ವಂದ್ಯರಭ್ಯರ್ಥಿಸಿದಡಾನೆ । ಲ್ಲೆಂದುನುಡಿವುದುಯೋಗ್ಯವೆಂದನುನೋಡಿಸುರವರರ ॥ ೨೬ ॥ ದುರ್ಮತಿಗಳ್ಗದನೊಲುವರಲ್ಲದೆ । ಧರ್ಮಮತಿಗಳುಸಾಧುಗಳುದು । ಷ್ಕರ್ಮಹೇತುವೆನಿಪ್ಪಪೌರೋಹಿತ್ಯವನುಧಿಟಕೆ ॥ ನೆಂಮುವರೆಮುನಿವೃತ್ತಿತಂನದು । ನಿಂಮನಡೆರಾಜಿಸುವದೆಂತೋ । ಸಾಮ್ಯನೆಂದಳಲಿದನುತಂನತಪಕ್ಷಯವೆನುತ್ತ ॥ ೨೭ ॥ ಬೇಡುವಿರಿಗಡನೀವ್ರುತಾನ । ಲ್ಲಾಡುವೆನೆನಿಂಮಿಷ್ಟವನುಕೈ । ಗೂಡಿಸುವೆನಂಜದಿರಿಪರಹಿತಕೃತ್ಯದಲಿನಡದು ॥ ಕೇಡುಬರಲಡಕಂಜೆನಂಜೆನು । ನಾಡವಮಾತುಗಳೇಕೆನುತನೆರೆ । ಮಾಡಿದನುವಿಜಯವನುವಿಬುಧಾಚಾರ್ಯನೆಂದೆನಿಸಿ ॥ ೨೮ ॥ ಅಂದುಶುಕ್ರನನಿಷ್ಠೆಯಲಿದೈ । ತ್ಯೇಂದ್ರರಾಳ್ದವಿಜಯಲಕ್ಷ್ಮಿಯ । ಸುಂದಲೆಯಹಿಡಿದೆಳದುತಂದಿತ್ತನುಸುರಾವಳಿಗೆ ॥ ಸಂದವೈಷ್ಣವವಿದ್ಯೆಯಲಿಸುರ । ವಂದ್ಯನೆಂದಾವಿಶ್ವರೂಪನು । ನಿಂದುಪೌರೋಹಿತ್ಯದಲಿಸಲಹಿದನುಸುರಕುಲವ ॥ ೨೯ ॥ ಅವನಿಪತಿಕೇಳ್ದ್ವಿಜೋತ್ತಮ । ದಿವಿಜಪತಿಗೆಸಮಸ್ತಮಂತ್ರ । ಪ್ರವರವಹನಾರಾಯಣಾಹ್ವಯದಿಂದರಂಜಿಸುವ ॥ ಕವಚವನುತ್ತೊಡಿಸಿದನುದೈತ್ಯರ । ನಿವಹವನುನೆರೆಗೆಲಿದನಂದಾ । ದಿವಿಜಪತಿನಿತ್ಯಾತ್ರಗೋಪೀನಾಥನೊಲವಿನಲಿ ॥ ... ... ॥ ೩೦ ॥

ಅಂತು ಸಂಧಿ ೭ಕ್ಕಂ ಪದನು ೨೧೮ಕ್ಕೆ ಮಂಗಳಮಸ್ತು.

ಎಂಟನೆಯ ಸಂಧಿ.

ಇಂದ್ರನಿಗೆ ನಾರಾಯಣ ಕವಚೋಪದೇಶವಾದದ್ದು.

ಸೂಚನೆ ॥ ರಾಯಮುನಿಕರುಣಿಸಿದನಾನಾ । ರಾಯಣಾಹ್ವಯಕವಚವನುಸುರ । ರಾಯಗಾಹವವಿಜಯ
ಸಿದ್ಧಿಗೆಸಾಧನವಿದೆನಲು ॥ ... ...

ಪದನು ॥ ಪ್ರಣವರೂಪನೆಹೇಳುನಾರಾ । ಯಣಕವಚವೆಂದೇನುಯೋಗ್ಯರ । ಗಣನೆಗಾಬಹುಡದರಸಾಂಗೋಪಾಂಗವನುತನಗೆ ॥ ಹೊಣೆಯಲಾನಿಂಮಡಿನಿಜಾಂಘ್ರಿ । ಪ್ರಣತರಿಗೆಸುರರಾಯನಸುರರ । ಹಣಿದನೆಂತೆನಲವನಿಪತಿಗೆಮುನೀಂದ್ರನಿಂತೆಂದ ॥ ೧ ॥ ಚಿತ್ತವಿಸುನೃಪಸುರರಪೌರೋ । ಹಿತ್ಯವನುಕೈಕೊಂಡುವಿಪ್ರಕು । ಲೋತ್ತಮನುಬೆಸಗೊಂಡಡಿಂದ್ರಂಗೆಂದನಿದನೊಲಿದು ॥ ಶತ್ರುವಿಜಯಕೆಸಾಧನವನೊರ । ವೃತ್ತನಾರಾಯಣಕವಚನಂ । ಬುತವೋತ್ತಮಮಂತ್ರವನುನೀನಪನುಕೇಳೆಂದ ॥ ೨ ॥ ತೊಳೆದುಕಾಲನೊಗಂಗಳನಾನಿ । ರ್ಮಳನೆನಿಸಿಕೊಳ್ಳದರ್ಭನಿರ್ಮ್ಯಾ । ಕುಳತೆಯಲಿಸುಪವಿತ್ರಕರನುತ್ತರದಿಶಾಮುಖನು ॥ ಸಲೆಕರಾಂಗನ್ಯಾಸಮಂತ್ರಂ । ಗಳಲಿರಕ್ಷಿತನಾಗಿಹೊಗುವುದು । ಬಲವದರಿಮಂಡಲವನೆಲೆಸುರನಾಥಕೇಳೆಂದ ॥ ೩ ॥ ಚರಣಜಾನುಯುಗಂಗಳಲಿತೊಡೆ । ಯುರದರಲಿಜಠರದಲಿಹೃದಯದ । ಉರದಲಾಸ್ಯೆಶಿರಂಗಳಲಿಸತ್ಪ್ರಣವವೆಂದೆನಿಪ ॥ ನಿರುಪಮಾಷ್ಟಾಕ್ಷರದಮಂತ್ರಾ । ಕ್ಷರಗಳನುಕ್ರಮದಿಂದತಪ್ಪದೆ । ಧರಿಸುವುದುಭೂತಾದಿಭಯಪರಿಭಯವಿನಾಶನವು ॥ ೪ ॥ ದ್ವಾದಶಾಕ್ಷರವಿದ್ಯೆಯಲಿಬಲ । ಭೇದವನೆಮಾಳ್ಪುದುಕರಂನ್ಯಾ । ಸಾದಿತವನಂಗುಲಿಗಳಂಗುಷ್ಠಪರ್ವದಲಿ ॥ ಆದಿಯದಕೋಪ್ರಣವದಂತವ । ನಾದರಿಸಲುಯಕಾರದಕ್ಷರ । ಭೇದವನುತಿಳಿದೊಂದನೊಂದನೆತಂದೆಕೇಳೆಂದ ॥ ೫ ॥ ವೀರಕೇಳಂಗದಲಿಮೊದಲೋಂ । ಕಾರವನುಹೃದಯದಲಿಶಿರದಲಿ । ಕಾರವನುಭ್ರೂಮಧ್ಯದಲ್ಲಿಷಕಾರವಮಶಿಖಿಗೆ ॥ ಸೇರಿಸುವುದುಣಕಾರವನುವೈ । ಕಾರವನುನೇತ್ರದಲಿಬಳಿಕನ । ಕಾರಸರ್ವಾಂಗದಲಿನಿಲಿಸುವುದುಮಕಾರದಲಿ ॥ ೬ ॥ ಇಂತುವಿಹಿತನ್ಯಾಸರಕ್ಷಿತ । ಶಾಂತವಿಗ್ರಹನಾಗಿವಿಷ್ಣುವ । ನಂತರಂಗದಲರಿದುತಾನೆಂಬುದನುಧಿಟದಿಂದ ॥ ಭ್ರಾಂತಿವಿರಹಿತನಾಗಿವಿದಿತಾ । ನಂತವಿದ್ಯಾಮೂರ್ತಿಬಳಿಕಾ । ಮಂತ್ರವಿದನುಚ್ಚರಿಸುವದುಹೇಳುವೆನುಕೇಳೆಂದ ॥ ೭ ॥ ಗರುಡನಂಸದಮೇಲೆಚರಣಾಂ । ಬುರುಹವೆಸೆಯಲುಶಂಖಚಕ್ರೋ । ತ್ತರಗದಾಶಾರ್ಙ್ಗದಿಚರ್ಮಾಸಿಗಳುರಂಜಿಸಲು ॥ ಧರಿಸಿಪಾಶವನಷ್ಟಭುಜದಲಿ । ಮೆರವಸಾಷ್ಟೈಶ್ವರ್ಯನೆನಿಸುವ । ಹರಿಸಕಲರಕ್ಷೆಯನುಮಾಳ್ಕನಗೊಲಿದುಕರುಣದಲಿ ॥ ೮ ॥ ರಕ್ಷಿಸುಗೆವರಮತ್ಸ್ಯನೆಂನನು । ಭಕ್ಷಿಸುವಜಲಚರಗಳಲಿನೆರೆ । ರಕ್ಷಿಸುಗೆವಾಮನನುಮೇಣೀಸ್ಥಳದಲೆಂಮವನು ॥ ರಕ್ಷಿಸುಗೆನಭದಲಿತ್ರಿವಿಕ್ರಮ । ರಕ್ಷಿಸುಗೆನರಸಿಂಹನಡವಿವಿ । ಪಕ್ಷದುರ್ಗಂಗಳಲಿಘನರೌದ್ರಾಟ್ಟಹಾಸನು

ಗ್ರಮುಖ ॥ ೯ ॥ ರಕ್ಷಿಸುಗೆಮಂತ್ರದಲಿದಂಷ್ಟ್ರೀ । ಗ್ರೀಷ್ಮಿಸುತಧರಣೀವರಾಹನು । ರಕ್ಷಿಸುಗೆದೇಶಾಂತರದಲಿರಾಮನೆಂಬು
ವನು ॥ ಲಕ್ಷ್ಮಣಾಗ್ರಜನೊಲಿದುತಂನನು । ರಕ್ಷಿಸುಗೆನಾರಾಯಣನುಕೆಮ । ಲಾಕ್ಷನಿರದಖಿಳಪ್ರಮಾದಾವಸ್ಥೆಗಳಲಿಕೊಲಿದು ॥
ರಕ್ಷಿಸುಗೆನರಹಾಸ್ಯದಲಿನೆರೆ । ರಕ್ಷಿಸುಗೆದತ್ತಾತ್ರೇಯನುಯೋ । ಗಕ್ಷಯದಲೆಂನನುವನುಯೋಗಾಧೀಶಕೋಪದಲಿ ॥ ರಕ್ಷಿಸುವನು
ಕಪಿಲಾಂಕನೆಂನನು । ರಕ್ಷಿಸುಗೆನೆರೆಕರ್ಮಬಂಧದಿ । ಮೋಕ್ಷನನುವಿರಚಿಸಿಕುಮಾರನುಕಾಮದೇವನಲಿ ॥ ೧೧ ॥ ರಕ್ಷಿಸುಗೆಹಯ
ಶಿರನುದೈವ್ಯರೋ । ಪೇಕ್ಷೆಯಲಿನಾರದನುತಂನನು । ರಕ್ಷಿಸುಗೆದೇವಾರ್ಚನೆಯವಿಘ್ನದಲಿಕೂರ್ಮನು ॥ ರಕ್ಷಿಸುಗೆನಿರಯದಲಿರೋ
ಗದಿ । ಪಕ್ಷಧನ್ವಂತರಿಮಹಾಮಾಯ । ಕುಕ್ಷಿರೋಗಂಗಳಲಿದ್ವಂದ್ವಂಗಳಲಿನೃಪಭಾಂಕ ॥ ೧೨ ॥ ರಕ್ಷಿಸುಗೆಯಜ್ಞನುಕೃತಾಂತ
ದಿ । ಪಕ್ಷಲೋಕಂಗಳಲಿಬಲನೊಲಿ । ದಕ್ಷನೆಂಗ್ರಗಣಂಗಳಲಿದುಷ್ಟಪಯೋಗದಲಿ ॥ ರಕ್ಷಿಸುಗೆವ್ಯಾಸನನುಸಲೆ । ರಕ್ಷಿಸುಗೆ
ಪಾಷಂಡಗಣದಲಿ । ರಕ್ಷಿತಾಖಿಳಬುದ್ಧನೆಂನನುಮಾಪಕರ್ಮದಲಿ ॥ ೧೩ ॥ ರಕ್ಷಿಸುಗೆಕಲಿಕಾಲಮಲದಲಿ । ಶಿಕ್ಷಿತಾಸುಳಕಲ್ಕಿ
ಮೂರುತಿ । ರಕ್ಷಿಸುಗೆಕೇಶವನುಗದೆಯಿಂದುದಯಕಾಲದಲಿ ॥ ರಕ್ಷಿಸುಗೆವರವೇಣುವಿದ್ಯಾ । ಶಿಕ್ಷಕನುಗೋವಿಂದನಾಗೋ । ರ
ಕ್ಷೆಯಾಸಂಗನುವೆನಿಪಕಾಲದಲಿಮನಪ್ರೊಲಿದು ॥ ೧೪ ॥ ರಕ್ಷಿಸುಗೆಮಧ್ಯಾಹ್ನದಲಿಕೆಮ । ಲಾಕ್ಷನಾರಾಯಣನುಚಕ್ರದ । ಲಕ್ಷ
ಯಾಧಿಕಚಾಪನಪರಾಹ್ಣದಲಿಯದುನಾಥ ॥ ರಕ್ಷಿಸುಗೆಮಾಧವನುಕಾರು । ಣ್ಯೇಕ್ಷಣದಲಸ್ತಮಯದಲಿವಿಭು । ತಾರ್ಕ್ಷ್ಯವಿಭ್ರಮನ
ರ್ಧರಾತ್ರಿಯಲಾಹೃಷೀಕೇಶ ॥ ೧೫ ॥ ರಕ್ಷಿಸುಗೆನೆರೆಪದುಮನಾಭನು । ರಕ್ಷಮೂರುತಿನಿಶಿತದಲಿನೆರೆ । ರಕ್ಷಿಸುಗೆಸಿರಿವತ್ಸಲಾಂ
ಛನನಪರರಾತ್ರಿಯಲಿ ॥ ರಕ್ಷಿಸುಗೆಪ್ರತ್ಯೂಹದಲಿರಿಪು । ಪಕ್ಷಘಾತಿಜನಾರ್ದನನುತಿಮಿ । ರಕ್ಷಯದಸಂಧ್ಯೆಯಲಿದಾಮೋದರನು
ಬಿಡದೆಂನ ॥ ೧೬ ॥ ಚಂಡಕಾಲಾನಲಸನಾ । ಖಂಡಧಾರಾಸುದರ್ಶನನೆಪರ । ಮಂಡಲವನುರುಹುರುಹುಕಾಡೋದಕಿಯೆರಿಪ್ರ
ಭಟರ ॥ ಹಿಂಡಿಹಿಳಿಹಿಳಿಯುಗ್ರವಹಕೊ । ಕ್ಕಾಂಡರಕ್ಷೋಭೂತಗಣವನು । ದಿಂಡುದರಿದರಿಚೂರ್ಣಚೂರ್ಣವಮಾಡುಖಳಕುಲ
ನ ॥ ೧೭ ॥ ಯಾತುಧಾನಪ್ರಮಥಭೂತ । ಪ್ರೇತಯಕ್ಷಬ್ರಹ್ಮರಾಕ್ಷಸ । ಮಾತೃವಿಘ್ನಪಿಶಾಚಘೋರವಿಹೋಗ್ರದೃಷ್ಟಿಗಳು ॥
ಘಾತಿಸೆಲೆಶಂಖ್ಯೇಂದ್ರಕೃಷ್ಣ । ಧ್ಮಾತರವದಲಿಕೊಲ್ಲುಕೊಲ್ಲುದು । ರಾತ್ಮಕರನೆರೆಖಡ್ಗಕರ್ಮಚಟ್ಟದಿಶಕ್ತಿಗಳ ॥ ೧೮ ॥ ಧನಗ
ಳಿಗೆಗೃಹಗಳಿಗೆಪಶುಗೋ । ಧನಗಳಿಗೆಭೃತ್ಯರಿಗೆಭಾಂಧವ । ಜನಗಳಿಗೆಪಿತೃಮಾತೃವನಿತಾವೃದ್ಧಜನಗಳಿಗೆ । ಜನಿತಭಯವೆನಿತನಿ
ತುಹರಿಗುಣ । ವಿನುತನಾಮಮಸ್ತ್ರಾದಿಸಂಕೀ । ರ್ತನದಲೋಡುಗೆಕೂಡುದೆಮಗಿಷ್ಟಾರ್ಥಸಿದ್ಧಿಗಳ ॥ ೧೯ ॥ ಗರುಡದೇವರುರಕ್ಷಿ
ಸುಗೆದು । ರ್ಧರವಿಷಾನಲಸರ್ಪವೃಶ್ಚಿಕ । ಶರಭಸಿಂಹವ್ಯಾಘ್ರಭಯದಲಿಬಹುವಿಪತ್ತಿನಲಿ ॥ ದುರಿತನಿಕರಂಗಳಲಿರಕ್ಷಿ । ತ್ಕರದೆದೇ
ಹಪ್ರಾಣಕರಣೋ । ತ್ಕರಗಳಮನುತ್ತಿಂನನಾಹರಿಪಾರ್ಷದೋತ್ತಮರು ॥ ೨೦ ॥ ಲೋಕಸೃಷ್ಟಿಸ್ಥಿತಿಲಯಂಗಳಿ । ಗೇಕಕರ್ತೃ
ಕವಹಡೆಭುವನಾ । ನೀಕವಾಜ್ಞೆಯಲಿಹಿಡಿಮೇಣಾಪರಮಪೂರುಷನ ॥ ಈಕತಿಥಸಂಕಲ್ಪವೆನಗೆನಿ । ರಾಕುಲಿತೆಯಲಿಫಲಿಸುಗಾಜ
ಗ । ದೇಕನಾಥನವಾಹನಾಯುಧಕೀರ್ತನಂಗಳಲಿ ॥ ೨೧ ॥ ದಿಕ್ಕುಗಳಲಿನೃಸಿಂಹನೊಲಿದುಮಿ । ದಿಕ್ಕುಗಳಲಂಬರದೆಪೇವನಿಯ ।
ಲಿಕ್ಕಿರಕ್ಷಿಸುಗೆಂನನೆಲ್ಲಾಭಯಸಮೂಹದಲಿ ॥ ಮುಕ್ಕುಳಿಸಿನಿಜತೇಜದಲಿಹಂ । ದ್ರೌರ್ಜಪಾವಕಕೋಟಿಯನುಹಿಂ । ದಿಕ್ಕಿಕೊ
ಳ್ಳಂಸುವನುಸಿಂಹಾರವಭಯಂಕರನು ॥ ೨೨ ॥ ಹೇಳಿದೆನುನಾರಾಯಣಾಹ್ವಯ । ಮೂಲಮಂತ್ರದಕವಚವನುರಿಪು । ಜಾ
ಲದುರಿತಾಪಂನಿವಾರಣಕಾರಣವಿದಿಳೆಗೆ ॥ ಹೇಳುವನುಮೇಣಾವನರ್ಥಿಸಿ । ಕೇಳುವನುರಿಪುರಾಜಚೋರಭ । ಯಾಳಿಯಾತ
ನಮುಟ್ಟಲಂಮುವುಶಕ್ರಕೇಳೆಂದ ॥ ೨೩ ॥ ಇದನುಧರಿಸಿದಸತ್ಪುರುಷನೋ । ಡಿದಡೆಮೇಣುಪದಾಗ್ರದಲಿಮೆ । ಟ್ಟಿದಡೆಗ
ದೋಡುವವುಬಹಳೋಪದ್ರವಂಗಳವು ॥ ವಿದಿತಭೂತಪ್ರೇತಭಯಹೊ । ದ್ದುಡುಸದಾಯುಃಕೀರ್ತಿಸೌಭಾ । ಗ್ಯದಸಮೃದ್ಧಿಯ
ನೀವುದಿದತಾಳಿದ್ದಮನುಜರಿಗೆ ॥ ೨೪ ॥ ವೀರಕೇಳೀಪರಮಮಂತ್ರದ । ಸಾರಸಾಮರ್ಥ್ಯವನುಕೌಶಿಕ । ಧಾರುಣೀಸುರನೊ
ಬ್ಬನಿದನೋರಂತೆಧರಿಸಿದ್ದು ॥ ಧೀರಮರುಧನ್ವದಲಿತಂನಶ । ರೀರವನುಬಿಡೆಬಂದನಂಬರ । ಚಾರಿಗಂಧರ್ವೋತ್ತಮನುತಾನೊ
ಮ್ಮೆಚಿತ್ರರಥ ॥ ೨೫ ॥ ಮೇಲೆಪೋಗುತಬಿದ್ದನದರೊಳು । ಮೂಲೆಘೆಂಟೆವಿಮಾನವನಿತಾ । ಜಾಲಸಹಿತೀಧರೆಗೆತಲೆಕೆಳಗಾ
ಗಿಚಿತ್ರರಥ ॥ ಕೇಳಿದನುಬಳಿಕವನುನುತ್ತಮ । ವಾಲಖಿಲ್ಯರನೇನುಗತಿಯನೆ । ಹೇಳಿದರುತಚ್ಛಲವತತ್ವವಿಹಾರಸಂಗತಿಯ ॥
ಹಾಯನಾತವಿಸ್ಮಯದಲಿಷ್ಟಿಯ । ನಾಯಿದಾಪ್ರಾಚೀಸರಸ್ವತಿ । ತೋಯದಲಿಪೊತ್ತೊಯ್ದುಹಾಯ್ಕಿದನಾದ್ವಿಜೋತ್ತಮನ ॥
ದಾಯಿಗನಪ್ರೋಲ್ಕಿಂದುಪಾವನ । ಕಾಯನಾಗಿವಿಮಾನವಿಬುಧ । ಶ್ರೀಯುರಿಂದೊಡಗೂಡಿನಡದನುಮಗುಳೆನಿಜಗತಿಗೆ ॥ ೨೬ ॥
ಧರಿಸುನೀನಿದತಂದೆಸಿಂನನು । ಪರರಿಗೀಕ್ಷಿಸಲರಿದೆನುತಭೂ । ಸುರಕುಲೋತ್ತಮನಮರಪತಿಗುಪದೇಶಿಸಿದನದನು ॥ ಧರೆಯ
ಲಾವನುಧರಿಸುವನುನರ । ವರನುನಿರ್ಭಯನಾತನಗಣಿತ । ವರಮಹಿಮನಿತ್ಯಾತ್ಮಗೋಪೀನಾಥನೊಲವಿನಲಿ ॥ ॥ ೨೭ ॥

ಅಂತು ಸಂಧಿ ೧೮೨ಕ್ಕಂ ಪದನು ೪೯೨೯ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

ದೇವರು ಇಂದ್ರನಿಗೆ ವೃತ್ರ ಸಂಹಾರೋಪಾಯವನ್ನು ತಿಳಿಸಿದ್ದು.

ಸೂಚನೆ ॥ ವೈರಿವಿಜಯೋಪಾಯವನುಬಲ । ವೈರಿಗಾಜ್ಞಾಪಿಸಿದನಾಮುರ । ವೈರಿವೃತ್ರನಭೀತಿಯಲಿ
ಸುರನಿಕರಕೆಂಗೆಡಲು ॥ ... ...

ಪದನು ॥ ಅರಸಕೇಳ್ವಿಶ್ವರೂಪನು । ಧರಿಸಿಪೌರೋಹಿತ್ಯವನುವಿ । ಸ್ತರಿಸಿದನುಪ್ರತ್ಯಕ್ಷದಲಿಸುರರಿಂಗೆಹವ್ಯವನು ॥
ಪರಜನನಿಯುಣ್ಣಂದಿರೆಂದಸು । ರರಿಗೆಕೊಟ್ಟನುಯಜ್ಞಭಾಗವ । ನಿರದೆಮಾತೃಸ್ನೇಹವಶನಾಗಿಯೆಪರೋಕ್ಷದಲಿ ॥ ೧ ॥
ಒಂದುಮುಖದಿಂದುಂಬನಂಸವ । ನೊಂದುಮುಖದಲಿಸುರೆಯನಾಮು । ತ್ತೊಂದುಮುಖದಲಿಸೋಮಪಾನವಮಾಳ್ಪನಾದ್ವಿಜನು ॥
ಸಂದವಿಂಪರಿಕೆಲವುದಿನಸುರ । ನ್ಯಂದವರಿಯದವೋಲುದೈತ್ಯರ । ವೃಂದವುಣುತಿರ್ದುದುಹವಿರ್ಭಾಗವನುನೋಸದಲಿ ॥ ೨ ॥
ಅರಿದನಾವಿಶ್ವಾಸಘಾತಕ । ದಿರವನಿಂದ್ರನುಭೇದದಿಂದಸು । ರರಿಗೆಯಜ್ಞದಹವ್ಯಭಾಗಂಗಳನುಕಡುವುದ ॥ ಎರಕೆಳುಹು
ಟ್ಟಿದೆಪಾವಿಂ । ಗರಿಜೆಪರಸಿಡಿಯನುಮಾಳ್ಪಪೆ । ದುರುಳರಿಂಗಿದುಯೋಗ್ಯವೈಹಾಯೆನುತಖತಿಗೊಂಡ ॥ ೩ ॥ ಕೆರಳಿಕಡಿದನು
ವಿಶ್ವರೂಪನ । ಥರಥರದಕೊರಳುಗಳನಿಂದ್ರನು । ಸುರೆಯನಂಸವಸೋಮಪಾನವಕೊಂಬಮುಖಗಳನು ॥ ಅರಸಕೇಳ್ಕಳ
ವಿಂಕುತಿತ್ತಿರಿ । ವರಕಪಿಂಜಳನೆಂಬಪಕ್ಷಿಗ । ಳರಿದೆಜನಿಸಿದುವಾಗಲಾದ್ವಿಜಹತ್ಯೆಸುರಪತಿಗೆ ॥ ೪ ॥ ಬಳಿಕವರುಷದಕಡೆಗೆಕೊಟ್ಟ
ನು । ಜಲಕೆವೃಕ್ಷಂಗಳಿಗೆಹೆಂಗಳಿ । ಗಿಳೆಗೆನಾಲ್ಕನುಮಾಡಿನಾಲ್ವರಿಗಾಮಹಾಘವನು ॥ ಇಳೆಯಲಿರೆಮುಂಪಾಯ್ತುಕರಿದತೆ । ಬೆಳ
ವವರನಡಕೆನೆಲವೃಕ್ಷಂ । ಗಳಿಗೆಹಗಿನೀರಾಪಕಡಿದಡೆಬೆಳವವರವೆಂದ ॥ ೫ ॥ ಹೆಂಗಳಿಗೆರಜನೆನಿಸಿತಿಂಗಳು । ತಿಂಗಳಿಗೆತೋ
ರುವುದುಪಾಪದ । ಸಂಗವೆಲ್ಲಾಹೇತುಕಾಮದವರವನಂದಿರಿಗೆ ॥ ಹಿಂಗದಾಜಲದೊಳಗೆಫೇನತ । ರಂಗವಘದಂಶಂಗದ್ರವಭಾ ।
ಯಂಗಳಾಗಿಹವರವನಿತ್ತಘಗಳನುಸೇರಿಸಿದ ॥ ೬ ॥ ಅತ್ತಲಾತ್ವಷ್ಟೃವಿನಮನವುರಿ । ಯಿತ್ತುಶೋಕಾಗ್ನಿಯಲಿತಂನಯ ।
ಪುತ್ರನಳಿವನುಕೇಳ್ಕೆರಳಿದನಿಂದ್ರನನುಕೊಲುವ ॥ ಪುತ್ರನನುಬೇಡಿದನುವಾರಣ । ಕೃತ್ಯದಲಿಹೋಮಿಸಲುಭುಗಿಭುಗಿ ।
ಸುತ್ತಜನಿಸಿದನೊಬ್ಬಸುತನಾಕುಂಡವನುಬಗಿದು ॥ ೭ ॥ ಅಂತ್ಯಕಾಲವೊನೋಣಾಜಗಕೆಕೈ । ತಾಂತನೋತ್ವಷ್ಟೃವಿನಕೋ
ಪನೆ । ಸಂತತಿಯಜನನವನುಪಡದುದೊಹರನುಹಾದೇನ ॥ ಅಂತರಿಕ್ಷವನವನಿಯನುದಿಗು । ದಂತಿಗಳನಾಕ್ರಮಿಸಿಬರಸಿಡಿ ।
ಲಂತೆಘರ್ಜಿಸುತಿರ್ದನಮರಾರಾತಿಕುಂಡದಲಿ ॥ ೮ ॥ ದಿನದಿನಕೆಕೆತಸುಮಾತ್ರಸುತ್ತಲು । ತನುವೆಳದನುರಿಹೊಡದಬಹಳಾಂ ।
ಜನಗಿರಿಯವೋಲುಗಿವಕೆಂಗೂದಲಿನಹೇರೊಡಲ ॥ ಅನಲಗಂಣಿನತೆರದರಾದಾ । ನನದದಾಡೆಯದಳ್ಳುರಿಯುಸೂ । ಯ್ಲನಭ
ಯಂಕರರೂಪನೆಸೆದನುರುದ್ರನಂಪದಲಿ ॥ ೯ ॥ ವೃತ್ತನೆನಿಸಿದನಾಭಯಂಕರ । ನೇತ್ರನೀಮೂಜಗವತ್ನಯ । ಗಾತ್ರದಿಂದಾ
ವರಿಸಿದದರಿಂದಖಿಳಭುವನದಲಿ ॥ ಕೆತ್ತುದಂಬರವಿವರದಶದಿಗು । ಭಿತ್ತಿಗಳುಜಾರಿದವುಜರಿದುಧ । ರಿತ್ರಿಪಾತಾಳವನುಹೊಕ್ಕು
ದುಭಟನಪದಹತಿಗೆ ॥ ೧೦ ॥ ಅಟ್ಟಹಾಸವಮಾಡಿದಡೆಕಂ । ಗೆಟ್ಟರಮರರುಹಳುವದಲಿಮುನಿ । ಗಟ್ಟದರುದಿಗಧಿಪರುತೆಗೆದರುಸರ
ಕೆನಾಥ್ಯವನು ॥ ಒಟ್ಟಿದಪ್ಪಿದರಿನಶಸಿಗಳವಿ । ದಿಟ್ಟರಾಖಚರರುವಿರಾಜನ । ಹೊಟ್ಟೆಯಾಮಾಯದಂತೆಬೆಳದನುಭುವನಜನಬೆ
ದರೆ ॥ ೧೧ ॥ ರಾಗವನುಮಾಡುವನುಕುಣಿವನು । ತೇಗುವನುನ್ಯೆಮುರಿವನಡಿಗಡಿ । ಗಾಗುಳಿಸುವನುಕಾಣದಾಲಸ್ಯದಲಿರಿಪು
ಭಟರ ॥ ಕೂಗಿಕರೆವನುಸುರಪತಿಯನಾ । ರೋಗಣೆಗೆಬಹುದೆನುತಮೋರುವ । ತೂಗಿತೊನದಾಡುವನುವೀರರಬೇವನುಬ್ಬಿ
ನಲಿ ॥ ೧೨ ॥ ಮೂದಲಿಸಿಕರವವನಕೊಲ್ಲೋ । ಸೇದುಜೀವವನೆನುತಸುರವರ । ರೈದೆಕಟ್ಟಿತುಕ್ಕಿದುವನಾದಿಗುವಾಲಕರುಸ
ಹಿತ ॥ ಐದೆಹಳಚಿದರಸ್ತ್ರಶಸ್ತ್ರನು । ಪೋದಧಿಯುಕವಿಸಿದಡೆನುಂಗಿದ । ನೈದೆದಿವ್ಯಾಸ್ತ್ರಂಗಳನುಬೆರಗಾದುದಮರಗಣ ॥ ೧೩ ॥
ಆಹವಾರಿಯಭಟನೆನುತಸುರ । ರಾಹವದಸವಿನೋಡಿಜೀವದ । ಮೋಹದಲಿನೊರೆಯಿಡುತಹಾಯ್ದುರುಕಮಲಜನಹೊರೆಗೆ ॥
ಶಾಹಸವಿದೆನಗಾಗದೆನುತಾ । ವ್ಯೂಹಜನಸಹಿತೈದಿದನುಪತ । ಮಾಹಿತಯನಮುಕುಂದನಿರ್ದಾಕ್ಷೀರನಾರುಧಿಗೆ ॥ ೧೪ ॥ ದಂ
ತದಂತಿರೆನವಿಸಿವಿಜದೇ । ದಂಡವನುನೀಡುತ್ತಬಿದ್ದಾ । ಖಂಡಲಾದ್ಯರುಸಹಿತದುಗ್ಧಾಂಬುಧಿಯಸಂಮುಖಕೆ ॥ ಮಂಡೆಯ
ಲಿನೆರೆಧರಿಸಿಕರಪುಟ । ಪುಂಡರೀಕವನೆದ್ದುಮುದದಲಿ । ಪುಂಡರೀಕಾಸನನುಸಂಸ್ತುತಿಮಾಡಿದನುನಲಿದು ॥ ೧೫ ॥ ಜಯಜಯಾ
ಸ್ಯುತಕೃಷ್ಣಕೇಶವ । ಜಯಜನಾರ್ದನವಿಷ್ಣುವಾಮನ । ಜಯತುಲಕ್ಷ್ಮೀನಾಥದೀನಾನಾಥಜನನಾಥ ॥ ಜಯಜಗತ್ಪಾವನಗು
ಣೋದಯ । ಜಯಜಗಜ್ಜೀವನದಯೋದಯ । ಜಯಮಹಾಮಾಯಾಮಹೇಶ್ವರಜಯನಮೋಯಂದ ॥ ೧೬ ॥ ರಕ್ಷಿಸೆಲೆ
ಜಗದೀಶ್ವರೇಶ್ವರ । ರಕ್ಷಿಸೈಪರಮೇಶ್ವರೇಶ್ವರ । ರಕ್ಷಿಸಸ್ಮದಭೀಷ್ಟನೂರುತಿಪುಣ್ಯಕೀರಿತಿಯೆ ॥ ರಕ್ಷಿಸ ಯಗುಣಮಹಾಬ್ಧಿ
ಯೆ । ರಕ್ಷಿಸಾನತಭಕ್ತಲಬ್ಧಿಯೆ । ರಕ್ಷಿಸಮರಗಣಂಗಳನುನಿಜಸುಖದಶೇವಧಿಯೆ ॥ ೧೭ ॥ ಆರುಗತಿನೀರೆನಗೆಕರುಣಾ । ವಾ

ರುಧಿಯೆನಿಂನಂಶಸಂಭವ । ರೀಋಷಿಗಳ್ಳೀಮನುಗಳ್ಳೀಸುರಲೋಕಪಾಲಕರು ॥ ಆರುತಾನೆಲೆದೇವನಾಭಿಸ । ರೋರುಹದಕರ್ಣಿ
ಕೆಯುಕೀಟವ । ಲಾರಜೋಗುಣವುಘನಾತಿನಿಂನಂಶಭವನೆಂದ ॥ ೧೮ ॥ ಮಾನಿಸಜೆನಿಜಲಾಭಸುಖಪರಿ । ಪೂರ್ಣನೆನಿಸುವ
ನಿಂನಚರಣವ । ನಂನ್ಯದೈನನಭಜಿಸಿಕಳವರೆಜೀವರೀಭವವ ॥ ನಂನಿಹಿಡಿದರೆನಾಯುಬಾಲವ । ಧರ್ಮವವನಾಂಟಿಸಲುಬಲ್ಲು
ದೆ । ಬಂನವಲ್ಲದೆಮುಗುಳೆಸಂಪ್ರತಿಮೋಕ್ಷವಿಲ್ಲೆಂದ ॥ ೧೯ ॥ ಮನುಮಹಾರ್ಣವದೊಳಗದಾರ್ಯೆ । ನೆನೆಯೆರಕ್ಷಿಸಿದವರುಜಲಚ
ರ । ತನುವಿಶಲಿಮಂದರನನಾಂತವರಾರುಮಥನದಲಿ ॥ ವನಧಿಯೆಳಗಿದ್ದಿಳೆಯನೆತ್ತಿದ । ಘನವರಾಹನದಾರುಕರುಣಾ । ವನ
ಧಿಯೊತಲೆಗಾವುದಮುರರನೆಂದನಬುಜಭವ ॥ ೨೦ ॥ ಚಿತ್ತದಲಿಮರದೊಂಮೆನೆನದಡೆ । ಮೃತ್ಯುಭಯಹಿಂಗುವುದುಜೀವರಿ । ಗು
ಪ್ತಮಾಶ್ಲೋಕನೆನಿಜಾಂಘ್ರಿಯುಭೃತ್ಯರೀಸುರರು ॥ ವೃತ್ತಭಯುದಲಿತಂನಕಾಲನು । ಸುತ್ತಿದರೆತಾಬಂದೆನೊಡೆಯುರು । ಚಿತ್ತವಿ
ಸುವುದುಬಿಂನಹವನೆಂದನುಸರೋಜಭವ ॥ ೨೧ ॥ ಎನುತಿರಲುಹೊಳೆಹೊಳೆದುಡಂಬರ । ಕನಕಮಯುವಾದಂತೆಗರುಡನ । ವಿನು
ತಕಾಂತಿಯುವಿಡಿದವಿಂಚಿನಸಜಲಘನದಂತೆ ॥ ಅನಿಮಿಷರಕಂಗಳಿಗೆಕರುಣಾ । ವನಧಿನ್ಮದೋರಿದನುಪಡುವಣ । ವನಧಿಯೊಳ
ಗಿರ್ದಂಜಬೇಡೆಂದಭಯುವನುಕೊಡುತ ॥ ೨೨ ॥ ಚಾರುನಯುವಪಸುಪ್ರಸಂಪಮು । ಖಾರವಿಂದದಸುಸ್ಮಿತಾಧರ । ಚಾರುಬಿಂಬಾ
ಧರಕಪ್ರೋಲದದಂತಪಜ್ಞ್ತಿಗಳ ॥ ಚಾರುರತ್ನಕಿರೀಟಕುಂಡಲ । ಹಾರಮಣಿಕೇಯೂರಕಂಕಣ । ಚಾರುಮೂರ್ತಿಯುಲಂದುನ್ಮ
ದೋರಿದನುಸುರಕುಲಕೆ ॥ ೨೪ ॥ ಉಟ್ಟಪೀತಾಂಬರದಮೇಲಿಳ್ಳ । ವಿಟ್ಟಮಣಿಮೇಖಲೆಯುಮುನಿಶ್ಚ । ದಿಷ್ಟರಾರಾಧಿತಪುನೋ
ಹರಸಾದಪಂಕಜದ ॥ ಸೃಷ್ಟಿವಿಲಯುಸ್ಥಾನಶಕ್ತಿಗ । ಳಟ್ಟಿದೆಸುಕೀವಕರದಿವಿಜಮು । ಹಾಷ್ಟಪಾಶದಲಂದುಅಸುರಾರಾತಿರಂಜಿಸಿದ ॥
ಸತ್ತಿಗೆಯುಚಾಮರದನೆಳಲೊಳ । ಗುತ್ತಮಶ್ಲೋಕಾಧಿಪತಿಪುರು । ಷೋತ್ತಮನುನಿಂದಿರಲುಗರುಡನಮೇಲೆದಶದಿಶೆಯ ॥ ಭಿತ್ತಿ
ಜರಿಯುಲುಶಂಖಚಕ್ರಾ । ದ್ಯುತ್ತಮಾಯುಧನಿಕರರಂಜಿಸೆ । ಲುತ್ತರೋತ್ತರಮೂರ್ತಿಯುನುನೆರೆಕಂಡುಜಮರಗಣ ॥ ೨೫ ॥
ಕಾಣುತಜಪಹಿತಖಿಳವಿಬುಧ । ಶ್ರೇಣಿಜಯಜಯಜಯತುಲಕ್ಷ್ಮೀ । ಪ್ರಾಣನಾಥನೆಜಯುಯೆನುತಭಯಭಕ್ತಿಭಾವದಲಿ ॥
ಕ್ಷೋಣಿಯುಲಿಮೈಯಿಕ್ಕಿಮುಕುಳಿತ । ಪಾಣಿಪಂಕಜರಾಗಿಗದ್ಗದ । ವಾಣಿಗಳುತಾವಾಗಿಸಂಸ್ತುತಿಮಾಡಿದರುಹರಿಯ ॥ ೨೬ ॥

ಗದ್ಯ ॥ ನಮಸ್ತೆಸ್ತು ಭಗವನ್ನಾರಾಯಣ ವಾಸುದೇವ ಆದಿಪುರುಷ ಪುರುಷೋತ್ತಮ ಮಹಾನುಭಾವ ಪರಮಮಂಗಳ ಪರಮಕಲ್ಯಾಣ ಪರಮಕಾರುಣಿಕ ಪರಮಹಂಸಪರಿವ್ರಾಜ ಪರಮಸಮಾಧಿಪರಿಭಾವಿತ ಪರಮಾತ್ಮಸ್ವರೂಪ ಪರಮೇಶ್ವರ ಪರಮಾನಂದವಿಗ್ರಹಪರಿವೃತ ವಿಶ್ವಪ್ರಪಂಚಪರಿಪ್ಲುತಾ, ಪುಣ್ಯಶ್ಲೋಕ, ಪಂಕಜನಾಭ, ಪರಮೇಷ್ಠಿವಂದ್ಯ, ಪರಮಋಷಿಗಣಪರಿಗಣಿತ ಪರಮಗುಣಗಣಮಹಾತ್ಮ್ಯ, ಮನೋಜ್ಞರೂಪ, ಮಂಗಳಪುಣ್ಯನಾಮಾ, ಮಹಾಮಹಿಮಾ, ಮಹೇಶ್ವರಪ್ರಿಯ, ಮಹೀಸಮುದ್ಧರಣ, ಮಹಾವಾರಾಹ, ತ್ರಿವಿಷ್ಟಪಾರಿಜಯ, ಪ್ರಳಯಾಮಾನ ಪರಮಪ್ರತಾಪ, ಪರಿಪ್ಲಾವಿತಬಾಹುಬಲ, ಹಿರಣ್ಯಕಶಿಪುಕಠೋರವಕ್ಷೋವಿದಾರಣ, ನಾರಸಿಂಹ, ಪಾಲಿತಭಕ್ತಸಿಂಹ, ಶ್ರೀಪತಿಕೃತತ್ರಿಭುವನ, ತ್ರಿವಿಕ್ರಮ, ತ್ರಿಣಯನಸ್ತುತ್ಯ, ತ್ರಿಗುಣಶರೀರ, ತ್ರಿವಿಧವ್ಯಾಪಾರದಕ್ಷ, ಜನಾರ್ದನ, ಜಗದೇಕನಾಥ, ಅಚಿಂತ್ಯಾತರ್ಕ್ಯರೂಪ, ಭಗವಂನಮಸ್ತೇನಮಸ್ತೇನಮಃ ॥ ಪದನು ॥ ಎಂದುಕೈಗಳುಮುಗಿದುತ್ರಿದಶರ । ಹೃಂದಹೊಗಳುತ್ತಿರಲುಪರಮಾ । ನಂದನಿಧಿಕೇಳು
ತ್ತ ಮಧುರಸ್ಮಿತಕಟಾಕ್ಷದಲಿ ॥ ತಂದೆಶಿಶುಗಳಬಿಂನಹಕೆಮನ । ಸಂದುಸಂತವಿಸುವಪೊಲಮುರರಿ । ಗೆಂದನಭ್ರಗಭೀರವಚನದಲ
ಭಯುವನುಕೊಡುತ ॥ ೨೭ ॥ ಅಂಜಬೇಡಶಿಮಗನೆಮುಕ್ಕಳ । ರಂಜದಿರಿಮೆಚ್ಚಿದೆನುನಿಂಮಿಾ । ರಂಜಿಸುವಸಂಸ್ತುತಿಗಭಯು
ಭಕ್ತಿಗಳಭಾವನೆಗೆ ॥ ಅಂಜಲೇತಕೆಶರಣಜನಭಯ । ಭಂಜನನುತಾಶಾಗಿರಲುರಿಪು । ಭಂಜನೋಪಾಯುವನುಹೇಳುವೆನೆಂದ
ನಸುರಾರಿ ॥ ೨೮ ॥ ಎಂನಚರಣಪರಾಗವನುಕಾ । ಬಂನವೇಭಯುದುಃಖಜೀವರ । ಬೆಂನಬಿಡದೀಭವಸಹಸ್ರಂಗಳಲಿಬರಿಸೂ
ದು ॥ ಎಂನಲಪಿಸಿದಾತ್ಮರತಭಯ । ಬಂನಬಡಿಸಮುಕುಂದರೀನೀ । ವೆಂನನಹಿತರಿಗಂಜಬೇಡಿಂನೆಂದನಸುರಾರಿ ॥ ೨೯ ॥
ನೀಚನನುಗೆಲಲರಿದುಬಹುನಾ । ರಾಚಶಸ್ತ್ರಾಸ್ತ್ರದಲಿಬೇಡಿದ । ಧೀಚನೆಂಬಮಹಾತಪಸ್ವಿದ್ವಿಜನದೇಹವನು ॥ ನಾಚಲಾಗದು
ಕಾರ್ಯಕೋಸುಗ । ಯಾಚಿಸುವರನ್ಯರನುಬಲಿಯುನು । ಯಾಚಿಸೆತಾನಿದಕೆಸಂಶಯುಬೇಡನೀವೆಂದ ॥ ೩೦ ॥ ಗುರುಗಳಾತಂಗ
ಪ್ಪಿಸಿದೀ । ವರುನಿಜಾಶ್ವಿಶಿರಾಖ್ಯವಿದ್ಯೆಯ । ನೊರೆದರಾತಂಗಾತನವರಿಂಗಮರತೆಯುನಿತ್ತ ॥ ನಿರುತವದರಿಂದವರುಸಹಿತಾ ।
ದರಿಸಿಬೇಡಿದಡೀವನೊಡಲನು । ಪರಮರುಷಿಧರ್ಮಜ್ಞನದರಿಂಚಿಂತೆಬೇಡೆಂದ ॥ ೩೧ ॥ ವಜ್ರವಹುದವನಸ್ಥಿಯುಲಿಭಯು ।
ವರ್ಜಿತರುನೀವಹಿರಿರಿಪುಕುಲ । ಭರ್ಜಿತೈಕಸಮರ್ಥವದುಕೊಡೆವಿಶ್ವಕರ್ಮನಲಿ ॥ ನಿರ್ಜರರಿರನೀವಂಜದಿರಿಹೋ । ನಿರ್ಜತಾಸು
ರರಾಗಿಯುಸುತಾ । ವರ್ಜಿತಾಪಾಂಗಾಮೃತೇಕ್ಷಣದಿಂದಕರುಣಿಸಿದ ॥ ೩೨ ॥ ಮತ್ತೆತಾನಿಪೆನೇಕೆನಿಮಗೀ । ಚಿತ್ತದಂತ್ರಸ್ತಾ
ಪನಿಂಮವಿ । ಪತ್ತಂನದುನಿಜಪದಾಶ್ರಿತಭಕ್ತರಸುಗಳಿಗೆ ॥ ತೆತ್ತಿಗನಲಾತಾನುತಂನನು । ಚಿತ್ತದಲಿನೆನೆವವರುಜರವರು ।
ಮೃತ್ಯುವನುಜಯಿಸುತಡರಿದನುಮುರಮಥನನಾಕ್ಷಣಕೆ ॥ ೩೩ ॥ ಆಡಗಲಸುಶೋದಂತೆಧರಣಿಯು । ಲೊಡಲನೀಡಾಡುತ್ತ

ಭುವನ | ದೊಡೆಯನಾಜ್ಞೆಯನಾಂತುಪಿರದಲಿಸುರಕುಲೋತ್ತಮರು || ಮಡಿದನಿಂನೇನಸುರನೆನುತು | ಪ್ಪಡೆದಹರುಷದಲ್ಲಿದಿ
ದರುದ್ವಿಜ | ನಡೆಸಿಗುರುನಿತ್ಯಾತ್ಮಗೋಪೀನಾಥನಾಜ್ಞೆಯಲಿ || ... ... || ೩೪ ||

ಅಂತು ಸಂಧಿ ೯ಕ್ಕಂ ಪದನು ೩೪೩ಕ್ಕೆ ಮಂಗಳಮಸ್ತು.

ಹತ್ತನೆಯ ಸಂಧಿ.

——⟨ ದೇವರಾಕ್ಷಸರ ಯುದ್ಧ. ⟩——

ಸೂಚನೆ || ಗಗನವೆಡೆನೆಡೆದಿಕ್ಕುಗಳುಮೂ | ಲೆಗಳುಬಿರಿಯಲುಹಳಚಿದರುವೈ | ರಿಗಳೊಡನೆವಿವಿಧಾ
ಸ್ತ್ರಶಸ್ತ್ರದಲಮರಸಂದೋಹ || ... ...

ಪದನು || ಅರಸಕೇಳಮರೋತ್ತಮರುಮುರ | ಹರನನೇಮದಲಶ್ವಿನೀದೇ | ವರುಸಹಿತನಡೆತಂದರಾಮುನಿವಂದ್ಯನಾ
ಶ್ರಮಕೆ || ಬರವಕಂಡಿದಿರ್ವಂದುಶಕ್ರಾ | ದ್ಯರನುಮುನಿಯುಪಚರಿಸಿಧೊರೆಗಳ | ಬರವಿದೇನೆನೆನುಡಿದರಭಿಮತಕಾರ್ಯಸಂಸ್ಥಿತಿ
ಯ || ೧ || ಕೇಳುತಲೆದೂಗಿದನುಹರುಷವಿ | ಶಾಲಮತಿಹಿಗ್ಗಿದನುಲಕ್ಷ್ಮೀ | ಲೋಲನಾಜ್ಞಾಪಿಸಿದಹದನನುತಂನೊಳಗೆತಿಳಿದು ||
ಶೀಲನಿಧಿನಗುತೆಂದನಾರಿದ | ಕೇಳುವರುದುಷ್ಕರವನಧಿಕಕೃ | ಪಾಳುಗಳುನೀವ್ನಾಮಜೀವದಲೆಂದನಾಮುನಿಪ || ೨ || ಅರಿ
ವರೆಂತ್ಯೈಪರರಸಂಕಟ | ದಿರವನರಿವರೆಬೇಡುವಿರೆಲೋ | ಗರಶರೀರವನಾರುಸೈರಿಸಬಹುದುಮೋಣಿದನು || ಧರೆಯಲಸುವಿಂದ
ತಿಶಯಪ್ರಿಯ | ತರವದಾವುದುಬೇಡಿದಡೆಕೊಡ | ಲರಿವೆನಾನೆಂತೆಂನದೇಹವನೆಂದನಾಮುನಿಪ || ೩ || ಬೇಡುವಾತನುವಿಷ್ಣು
ಗಡತಾ | ನಾಡಲಂಮೆನುಬಲಿಯದಾನವ | ಬೇಡಿಪೋತಾಳಕ್ಕೆಕೆಡಹನೆಕರುಣಿಯೆನಿಸುವಡೆ || ಬೇಡಿಸುವನ್ಮೃತಂನದೇಹವ | ಬೇ
ಡಬಂದಿರಿಪರರನೋವನು | ನೋಡದಕಟಕಟೆನಲುನುಡಿದರುಸುರರುವಿನಯದಲಿ || ೪ || ಅರಿದದಾವುದುಮುನಿಪದಧೀಚಿ | ವರ
ಗೆಪರಹಿತಜೀವಿಗಳಿಗಾ | ವರಿಯದಿರೆವಿಪನಧಿಕಕರುಣಾನಿಧಿಯಲಾನೀನು || ನಿರುತವರಿವಡೆಬೇಡುವಡೆಲೋ | ಗರನುಬೇಡಿ
ದಡೀಯ್ಯದವನೀ | ಶ್ವರನೆಕೃಪಣನೆನಲ್ಕೆನಗುತಿಂತೆಂದನಾಮುನಿಪ || ೫ || ಕೇಳಲೆಂದಾನಿದನುನಿಂಮೊಳ | ಗಾಳಿಗೊಂಡೆನು
ತಂದೆಗಳಿರಿಂ | ನೇಳಧಿಟವಲ್ಲಿತ್ತೆನೊಡಲನುಚಿಂತೆಬೇಡಿದಕೆ || ಕಾಲವಶದಲಿಕಾಯವಿದುಧಿಟ | ಹೇಳದಳಿವುದುಬರಿದೆಮಮತೆ
ಯ | ಕೋಳದಲಿಕುದಿವುತ್ತಲಿಹುದೀಜೀವಚಯವೆಂದ || ೬ || ಕೆಡುವತನುವಿದುತಾನೊಡಂಬಡ | ಪಡೆಯಜರೆನರೆಗಳಲಿತಂ
ನವ | ರೊಡವೆಯಹುದ್ದೈಬಳ್ಳಕಜೀವಾತುಮನುತ್ತೊಲಗಿದಡೆ || ಕೊಡದಡುಂಣವೆನಾಯಿನರಿಗಳು | ಸುಡುಸುಡಿದನಾನಂನಡೆಂ
ದೇ | ಬಿಡದೆಭವದಲಿಬಹದುರಾತ್ಮರಿಗೇನುಗತಿಯೆಂದ || ೭ || ಗಿಡಮರಂಗಳುಸಹಿತಪರಹಿತ | ಕೊಡಲುವಿಟ್ಟಿದಿಹವೀವವೆಂ
ದುದ | ನೊಡೆಯರಿರಕೃತಕೃತ್ಯನಲ್ಲಾತಾನುಭಾವಿಸಲು || ಕಡುಜಿಗುಪ್ಸಿತವಮರರಿಗೆತಾ | ಹಿಡಿವಕೈದುಗಳಹವುಗಡತಂ | ನೊ
ಡಲೆಲುಗಳಿಂನೇನಹೇಳುವೆನೆಂದನಾಮುನಿಪ || ೮ || || ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ ||
ಕೊಟ್ಟೆನೊಡಲನುಕೊಂಬುದೆನುಯ | ಥೇಷ್ಟವೆನುತವೆತೋರಿಕೆಯನೊಡೆ | ಮೆಟ್ಟತುರಿಯದಲಿದೂರ್ಗತದತೀತಾತ್ಮನೆಂದೆನಿಸಿ ||
ಬಿಟ್ಟನೊಡಲನುಮೇಲೆಸುಮನೋ | ವೃಷ್ಟಿಸುರಿದುದುಭಾಪೆನುತತ್ರೈ | ವಿಷ್ಟಪಾಧೀಶ್ವರರುಹೊಗಳಿದರಧಿಕಹರುಷದಲಿ || ೯ ||
ಕೊಡಿಪರವನುಕಾಯುವನುಬೀ | ಸಾಡಲದನಾವಿಶ್ವಕರ್ಮನು | ಮಾಡಿದನುಕೈದುಗಳಕಡಿಕಡಿದಸ್ಥಿಗಳನುಗಿದು || ಮಾಡಲದು
ತಾವಜ್ರವಾಯ್ತಾ | ನಾಡೊಡೆಯನಂಗೈಗೆಸಮರದ | ಜೋಡಣೆಗೆವೊಳಗಿದುಗುವಿಹಿತಾಸ್ತ್ರದಲಿಸುರನಿಕರ || ೧೦ || ಎತ್ತಿನ
ಡೆದುದುಮತ್ತೆತ್ರಿದಶರ | ವೊತ್ತವಸುರರಮೇಲೆಮೂಡಲಿ | ಸುತ್ತಪುನರಪಿಸಿಂಹನಾದವಮಾಡಿಬೊಬ್ಬಿರಿದು || ಮುತ್ತಿದರುಮು
ಗಿಲುಗಳುಗಿರಿಯನು | ಮುತ್ತುವಂತಿರಲೆಂಟುದೆಸೆಯಲಿ | ವೃತ್ತನನುವಿಬುಧೇಶ್ವರನಸಂಜ್ಞೆಯಲಿಪಟುಭಟರು || ೧೧ || ಮುಗಿ
ಲವಿದುದುಸುರಕಟಕಬಲು | ಲಗ್ಗೆಗಳಪಟುಪಟಹಭೇರೀ | ವರ್ಗನಿರ್ಗತಶಬ್ದತೂರ್ಯಮೃದಂಗರಭಸದಲಿ || ನೆಗ್ಗಿದವುದೆಸೆಗಳು
ಪತಾಕೆಗ | ಳೊಗ್ಗಿನಲಿಸತ್ತಿಗೆಯಸೆಳೆಲಲಿ | ದಿಗ್ಗಜದಲ್ಯೈದಿದನುಸುರಪತಿವಜ್ರವನುತುಡುಕಿ || ೧೨ || ಕೊಲ್ಲುಕೊಲ್ಲುಕುಠಾರತ
ನುತಿವಿ | ಹಲ್ಲನುದುರಿಸುಬ್ಯೈವವರನೆಸು | ಬಲ್ಲೆಯದಲಿಡುಸೀಳುಹೊಯಿಹೊಯಿಕರುಳನುಗಿಸುರೆರ || ನಿಲ್ಲುಶಲಭವ್ರಾತಕವಿದು
ದೆ | ಧಲ್ಲುರಿಗೆತಪ್ಪೇನೆನುತ್ತರಿ | ಮಲ್ಲನೆಡಬಲದಸುರರೆದ್ದರುಗದ್ದುಗೆಯನೊದದು || ೧೩ || ನಮುಚಿಶಂಬರಶಂಖಶಿರಜಿತ |
ಕಪಿಂತಿವೃಷಭನಪರ್ವನೆಂಬರ | ಕುಮತಿಹಯಶಿರವಿಪ್ರಚಿತ್ತಿಪುಲೋಮಶತಪರ್ವ || ಅಮಿತಬಲಹೇತಿಪ್ರಹೇತಿಗ | ಳಮರವೈರಿ
ಸುಮಾಲಿಮಾಲಿ | ಪ್ರಮುಖರೆದ್ದುದುಕೋಟಿಸಂಖ್ಯೆಯದಾನವೇಶ್ವರರು || ೧೪ || ಇಟ್ಟಮುಸಲಮುಸುಂಡಿಮುದ್ಗರ | ಪಟ್ಟಿ
ಶಪ್ರಾಸಾಸಿತೋಮರ | ವೃಷ್ಟಿಯಸುಕರವೃತ್ತಸಂವರ್ತಾಭ್ರದಂದದಲಿ || ಬೆಟ್ಟದಂಡದದೈತ್ಯಭಟರಡೆ | ಗಟ್ಟಿಹೊಯ್ದರುಜೂ

ಣಿಯನುರಣ | ವಿಟ್ಟಣಿಸಿದುದುವೀರರದಿಗುಪಾಲಕರಮೋಹರಕೆ || ೧೫ || ಅಸುರಾರಿಮಹಾಸ್ತ್ರನಿಕರದ | ಬೀಸಿಗೆಯುಬಿರುಮಳೆಯನೆದಪೊರ | ಬೀಸಿದುದುಸುರರಸ್ತ್ರಶಸ್ತ್ರಾವಳಿಯುಬಿರುಘಾಳಿ || ಕೀಸಿದವುಕಣೆಗಳಸುಕಣೆಗಳು | ಹಾಸಿಕೆಡೆದವುಧರೆಗೆಮುಟ್ಟದೆ | ವಾಸುದೇವನದಾಸರನುದುರಿತಂಗಳಂದೆದಲಿ || ೧೬ || ಅರಸಕೇಳ್ಳೈಸಮರ್ದದಾಕ್ಷ್ಯಯು | ಪರೆದಿಯುತೀರದಲಿಕಾಳಗ | ಪರಮದಾರುಣಮಾದುದಾಕ್ರೋಶಮುಖದಲಂದು || ಹರನಕಲ್ಪಾಂತಾಂತಕನಸಂ | ಗರದವ್ರೋಲಮರಾಸುರರಿಗು | ಬ್ಬರದಹಯಗಜರಥಪದಾತಿಗಳಳಿದುದಾಕ್ಷಣಕೆ || ೧೭ || ದಿವಿಜರಿಪುಗಳಬಾಣವೃಷ್ಟಿಗೆ | ದಿವಿಜನಿಕರಮಹಾಸ್ತ್ರತತಿಯಲಿ | ರನನಿಸಿತುರವಿಮಧ್ಯತೀರದವಸುರರಸ್ತ್ರಾಸ್ತ್ರ || ಅವಗಡಿಸಿದರುಮತ್ತೆಗಿರಿತರು | ನಿವಹಪಾಷಾಣಂಗಳನುಸುರ | ರವರುಕಡಿಕಡಿಮೊಟ್ಟದರುಸುರರಂಬರದಲಿರಲು || ೧೮ || ಹರಿಪರಾಯಣರೆನಿಪಸತ್ಪುರು | ಷರನುದುರ್ಜನರೇರಿಸಿದಘನ | ದುರಿತಪೋದ್ವದವ್ರೋಲುಕಡಿವಡೆದಸುರರಸ್ತ್ರಾಸ್ತ್ರ || ಧರೆಗೆಬೀಳುತ್ತಿದ್ದವೆಸೆಯಲಿ | ಸುರರಬಲವನುಮುಟ್ಟದೇನ | ಚ್ಚರಿಸದ್ಯೆವರುವಿಜಯಿಗಳಲಾಭೂಪಕೇಳೆಂದ || ೧೯ || ನೋಡಿರೈನಂಮಸ್ತ್ರಶಸ್ತ್ರದ | ಕೇಡನಕಟಾವಿಜಯಲಕ್ಷ್ಮಿಯು | ಜೋಡೆನಂಮನುಪೇಕ್ಷಿಸಿದಳಿಂದೇವನೆಂದೆನುತ || ಓಡಿದರುರಿಪುಭಟರುಬೆಂನಲಿ | ಮಾಡಿದಂಬಿನಮೊನೆಗಳಲಿಮಾ | ತಾಡಿಸದೆತಂನೊಡೆಯನನುಬೆಂನಿಕ್ಕಿಸುರಬಲಕೆ || ೨೦ || ಕಂಡನದನಾವೃತ್ರನೆಲವ್ರೋ | ಭಂಡರಿರಬಾಹಿರರಿರಾರಣ | ಪಂಡಿತರಿರಪ್ರುಶೋವಶಂಬರಶಕುನಿಮುಖ್ಯರಿರ || ಕಂಡಿರೇನನುಗತಿಯನೊಡಲಿದ | ಖಂಡಿತವೆನೀಪ್ರೋಡಿಕಾಲನ | ಖಂಡೆಯವಹಿಂದಿಕ್ಕಲಾಪಿರೆಮಾಪಿಗಳಿರೆಂದ || ೨೧ || ಅಹಹವೇಹವಿದೆಂದುಪರಿಯಂ | ತಿಹುದುಜೀವರಿಗಿದರಮುಮತೆಗೆ | ಬಹಳಸುಕೃತವಮಾಡಿದಿರಿಕೇರಿದಿರಿದುರ್ಯಶವ || ಇಹಪರದಸೌಖ್ಯಕ್ಕೆಕಾರಣ | ವಿಹಿತವೀರಣರಂಗಮರಣವು | ಬಹುಸುಕೃತರಾಸಿಗಳಫಲದಿಂದಲ್ಲದಿಲ್ಲೆಂದ || ೨೨ || ಮರಣವೆರಡೇಶ್ಲಾಘ್ಯಮಾತ್ಮನ | ನಿರುಗೆಯನನೆರೆತಿಳಿದುನಿಜದಲಿ | ಬೆರೆಸಬಿಡುವುದದೊಂದುಮತ್ರೋಂದಾಹವಾಗ್ರದಲಿ || ಪರಬಲವನೊಡೆಹಾಯ್ದುರಿಪುಭಟ | ರರಿದಕೊರಳಲಿಸಾವುದಿಂತಿದು | ಪರಮಋಷಿಮತವಕಟನೀವಿದಕಂಜಲೇಕೆಂದ || ೨೩ || ಎಂದುಕರವೃತ್ರರಲುದಾವವ | ವೃಂದವದನಾಲಿಸದೆಹಾಯ್ದುದು | ಹಿಂದೆನೋಡದೆನುಡಿಯದಾಹವದೆಡೆಗೆಶರಣೆನುತ || ಹಂದಿಗಳಿರೋಡಿದರೆಲೇಪಾ | ಯ್ತೆಂದೆನುತಭಟನೋಡುವವರನು | ಹಿಂದೆಹತ್ತುವರಿಪುಭಟರನಾಕ್ರಮಿಸುತಿಂತೆಂದ || ೨೪ || ಎಲವೊಯಿಂಮಡಿಭಂಡರಿರಭುಜ | ಬಲವಿಹೀನರಿರೋಡುವವರನು | ಬಳಿಸಲುವಬಾಹಿರರಿರಾನಿಹೆನಿತ್ತಲಾಹವಕೆ || ನಿಲುವುದೆಂನೊಡನಾಪಡವ್ವೆಯ | ಕಳ್ಳವರದಹುಳುಗಳಿರಚರಣದ | ತಳದಲೊರಸುವೆನೆನುತಹರಿದನುವೀರನಬ್ಬರಿಸಿ || ೨೫ || ಅಟ್ಟಸುರಬಲದಿದಿರಲತಿಬಲ | ನಟ್ಟಹಾಸವಮಾಡಿಗರ್ಜಿಸೆ | ಲಿಟ್ಟಕಿವಿಯಲಿತಾಗಿದಂತಾಯ್ತಮರಬಲದೊಳಗೆ || ಭಟ್ಟಗೆಡದರುವೀರರವನಿಗೆ | ಬಿಟ್ಟವಿಳೆಯನುದಿಗ್ಗಜಂಗಳು | ಹೊಟ್ಟೆಯೊಡೆದುರುಳಿದವುಗರ್ಭಂಗಳುವಧೂಜನದ || ೨೬ || ಬಿದ್ದುಹೊರಳುವಪರಬಲವನರಿಭದ್ರಗಜಪಂಚಾಸ್ಯನಲ್ಲಿಯೆ | ನಿದ್ರೆಗೈಸಿದನರದುಕಾಲಲಿತುಳಿದುಘಟ್ಟಿಸುತೆ || ಹೆದ್ದೊರೆಯುಕೊಡಿಸಿದನಂಶ್ಯದ | ರುದ್ರನಂತಿರೆಭೀಕರಾಂಗದ | ರೌದ್ರಮುಖನೋರಂತೆಕೈಯಲಿಮುಟ್ಟದರಿಬಲವ || ೨೭ || ಯಾಕೆಸಾವಿರಿಕಾಲಕೆಳಗವಿ | ವೇಕಿಗಳಿರೆನುತಮರವೀರಾ | ನೀಕವನುತುಳಿವುತ್ತತೊಲಗಿಸುತಾಹವಾಗ್ರದಲಿ || ಪಾಕಶಾಸನನೆಲ್ಲಿಸೇನಾ | ನೀಕವಾರುಧಿತಂನದಲ್ಲೈ | ನೂಕಿನೋಡುತ್ತಿಹರೆಬರಹೇಳೆನುತಸೈನೆಡದ || ೨೮ || ನಡೆತರಲುಕಾಣುತ್ತಬಾರೆಲೆ | ಕುಜುಹಿಬಾಯಿಗೆಬಂದಪರಿಯಲಿ | ಕೆಡೆದಡೇನಪುದಿತ್ತಲಿದೆಕೊಳ್ಳೆನುತರೋಷದಲಿ || ಒಡಲನಿಟ್ಟನುಭಾರಿಗದೆಯಲಿ | ಜಡಿಗನಾಡುತ್ತರಪುಕ್ಕೆಯಲಿ | ಹಿಡಿದನದನಂಬರದಲೇನಗುತಟ್ಟಹಾಸದಲಿ || ೨೯ || ಇಟ್ಟನದರಲಿಕನಲಿದಿಂದ್ರನ | ಪಟ್ಟದಾನೆಯಮಸ್ತಕವನಿದೆ | ಕೊಟ್ಟೆನೇತಕೆಪರರಧನವೆನುತಧಟನಬ್ಬರಿಸಿ || ಮೆಟ್ಟನೋಡುವನಾಟಕರುಜಗ | ಝುಟ್ಟಭಾಪುರೆಭಲರೆಯೆನೆಕಂ | ಗೆಟ್ಟದೈರಾವತಗದಾಘಾತಿಯಲಿತಲೆಪಡದು || ೩೦ || ಕುಲಿಶಗೊಂಡಮಹಾದ್ರಿಯಂತ | ಕ್ಕಳಿಸಿಜರಿದಳವಳಿದುದಿಗ್ಗಜ | ವಿಳಿಗೆಮುಂಗಾಲೂರಿಡೆಂಫಣಿಸುತ್ತವೇದನೆಗೆ || ಬಳಲಿದುದುಬಿಲ್ಲೀಳರಂತರ | ಕಳುಕಿಹಿಂಮೆಟ್ಟದುದುನೆತ್ತರ | ಮಳೆಗರವುತೇನೆಂಬೆನಮರವ್ರಾತಮನಗುಂದೆ || ವೃತ್ರನದನೀಕ್ಷಿಸುತವೈರಿವಿ | ಪತ್ತಿನಲಿಕೈದುವನುಕೊಳ್ಳದೆ | ಸತ್ಯಸಮರದಧರ್ಮವನುನೋಡುತ್ತನಿಂದಿರಲು || ವೃತ್ರರಿಪುಸೀಯುಸ್ಯಪವಾನದ | ಹಸ್ತದಲಿತಪವಿದನುಕರಿವರ | ಮಸ್ತಕವನಾಕ್ಷಣದಲೆದ್ದುದುಮೂರ್ಛೆಯನುಜರೆದು || ೩೨ || ಅರುಭಟೆಯಲಿಮಕ್ಕನಿಬೆಜಂ | ಭಾರಿಯನುಕಾಣುತ್ತವಜ್ರ | ಧಾರಭುಜವನುಸಮರಮುಖದಲಿವೃತ್ರನುರೆಮುನಿದು || ಬಾರೆಲವ್ರೊಸಂಮುಖಕಹಲ್ಯ | ಜಾರಜಾರದಿರಿಂನುಭೋಗಿಸು | ಭೂರಿಗುರುವಧೆವಿಪ್ರವಧೆಗಳಪಾತಕವನೆಂದ || ೩೩ || ವೀರನಹೆವಿಶ್ವಾಸಘಾತಿಗ | ಳಾರುನಿಂನೋಪಾದಿಪಾಪವಿ | ಹಾರಿಗಳುಗುರುವಿಪ್ರಬಂಧುವಿಘಾತಿಗಳುಧಿಟಕೆ || ತೀರುವುದುಮನದಳಲುರಕುತದ | ಧಾರೆಯಲಿನಿಂನೊಡಲಮಾಂಸದ | ಭೂರಿಬರಿಯನುಭೂತನಿಕರಕ್ಕಿತ್ತಡೆನೆಗೆಂದ || ೩೪ || ಮುಟ್ಟುವರೆಪರರಪ್ಪಯನುಮತಿ | ಗೆಟ್ಟಕೊಂದ್ಯೆಹಾರುವನನೆದೆ | ಮೆಟ್ಟನಾತನಮಾತಿನಲಿಕಟಕಟವಿಭೇದದಲಿ || ಬಿಟ್ಟುನೋಡುವುದೇನುತಂನಲಿ|

ಷ್ಟನಾದಡೆತಪದತೇಜದ । ಘಟ್ಟಿಯನುವಜ್ರವನುಕಾದಲದೇಕೆನೀನೆಂದ ॥೩೫॥ ಗೆಲುವೆಸೋಲುವೆಮೇಣುಸಮರದ । ಲೊ
ನನರಿವವರಾರುದೈವದ । ಕೆಲಸಕಿದೆಲಾಕಲಶಬಿಡುವಜ್ರವನುಶಂಕಿಸದೆ ॥ ನಳಿನನಾಭನಮಂತ್ರಶಕ್ತಿಯು । ಗೆಲುವರಾರದಕಂಡೆ
ಕೊಡಲಿದು । ಕಳಲದೇಕಲ್ಪಾಂತಪರಿಯಂತೆಂದನಸುರೇಂದ್ರ ॥೩೬॥ ಬರಲಿಜಯವೇಮೇಣುಪರಿಭವ । ಬರಲಿಲಾಭಾಲಾಭ
ಃಖೋ । ತ್ಕರಸುಖಂಗಳಬುಧರುಪಾಳ್ವರೆಹರುಷಶೋಕವನು ॥ ಸ್ಥಿರಚರಂಗಳಹಾಹೆಗಳಿಗೀ । ಶ್ವರನಲಾಸೂತ್ರಿಕನುಸುಳಿ
ದ । ಪರಿಯಲಾಡುವದಿಲ್ಲಸ್ವತಂತ್ರನವಗೆಂದ ॥೩೭॥ ಎತ್ತಲೊಲವನುವಿಷ್ಣುಸಿರಿತಾ । ನತ್ತಲೊಲವಳುಶ್ರೀಯೊಲವುತಾ ।
ತ್ತಲತ್ತಲುವಿಜಯವದುತ್ತನತ್ತಖಿಳಗುಣ ॥ ಅತ್ತಲೊಲವುಗುಣಂಗಳೊಲವಹು । ದತ್ತಲತ್ತಲುಕೀರ್ತಿಕೀರ್ತಿಯು । ದೆತ್ತ
ತ್ತಲುನರರಿಗಿಹಪರಸೌಖ್ಯವಹುದೆಂದ ॥೩೮॥ ಕಡಿದೆಯಾದರೆಶಂನತಲೆಯನು । ಪ್ರೊಡವಿಸುರನಸ್ಥಿಯಲಿಮೇಣಾ । ಕಡಲ
ನೆಯಮಹಾತ್ಮನಂನತತೇಜವನುಧಿಟಕೆ ॥ ತಡೆಯದೀಭೂತಂಗಳಿಗೆಬಲಿ । ಗೊಡುವೆನನ್ನಣನೆನಿಪ್ಪೆನೀತಕೆ । ಬಿಡೆಯದೇಸ್ಯೆ
ಜ್ರವನುನಿಷ್ಫಲವದಲ್ಲೆಂದ ॥೩೯॥ ಶಂಕೆಬೇಡೆಲೆವೀರಕಾಯದ । ಸಂಕಲೆಯಕಡಿದುಃಖತರವಹ । ಹಂಕೃತಿಯಪಾಶವ
ಹರಿದಿಹಪರವಿರಾಗದಲಿ ॥ ಅಂಕಿಪದುದೀತಂನವಮನವಾ । ತಂಕವಿಲ್ಲದನಿತ್ಯಸುಖವಹ । ಸಂಕರುಷಣಾಂಘ್ರಿಯನುನೆನೆಕವಿ
ರಾಗುನೀನೆಂದ ॥೪೦॥ ನಿರ್ಗವನುತಾನಿರಿಸಿದವೆನಪ । ವರ್ಗಪದವಿಗೆಮನವನಂಣ್ಯೆ । ಸ್ವರ್ಗವನುಜಿತಶತ್ರುವಾಗಿವಿಕಾರ
ಪವನು ॥ ನಿರ್ಗವಾಗವುವಿಲ್ಲಕೋಟ । ಸ್ವರ್ಗಸುಖವೇಣೆಯಿಲ್ಲದಾತ್ಮ । ಸ್ವರ್ಗಸುಖಸಾಂಬ್ರಾಜ್ಯವನುತ್ತನಾಂಬೆನದ
ಂದ ॥೪೧॥ ಇಲ್ಲನಿಂಮಾಲಿಕರುಣಲಕ್ಷ್ಮೀ । ವಲ್ಲಭಂಗಕಟಕಟಕೊಡುವನೆ । ಕಲ್ಲನುಪಭೋಗಿಸಲುನಿಮಗೀಸ್ವರ್ಗಸಂಜ್ಞಿ
ವ ॥ ಬಲ್ಲನೇನುವನೀಯ್ಯದಾತ್ಮನ । ನಲ್ಲದಾತ್ಮಾಶ್ರಿತರಿಗಾಕ್ಯೆ । ವಲ್ಲನಾಥನುಕೊಡುವಸುರನರಲೋಕಸಂಪದವ ॥೪೨॥
ಲಚಕ್ರಾಹತನೆನಿಸಿನೆರೆ । ಬೀಳುವಿಲೌಕಿಕಸುಖಂಗಳು । ಘೋಳಿಯೊಳಗಣಗಂಧಸುಭವೆತಂಬಿಗಳಿಗುಣಲು ॥ ಹೇಳಲತಿ
ಂಚಲಗಳಧಿಕಕ । ರಾಳದುಃಖಾಯಾಸಕರಗಳು । ಖೂಳರರ್ಥಿಸಿಬದುಕುವರುಪೆರದೇವತ್ರಯನೆಂದ ॥೪೩॥ ಮತ್ತೆನೋಡು
ಡೊಡಲುಕ್ರಿಮಿಗಳ । ಹುತ್ತಮಲಮೂತ್ರಂಗಳಾದರ । ನೆತ್ತರಿನಮಾಂಸದಮಹಾಸ್ತ್ರಜಡತವುರುವನೆ ॥ ಕುತ್ತದಂಗಡಿಕೀವಿ
ದುಃಭವ । ಮೃತ್ಯುವಿನೆಕ್ಯೆನಾಯಿನರಿಗಳ । ತುತ್ತುಬರಿದೆಯಹಂಕರಿಸಿಕೆಡುತಿಹುದುಜಗವೆಂದ ॥೪೪॥ ಲೇಸುಮಾಡಿದೆದೇವ
ರುಣಾ । ರಾಸಿಮಲ್ಲಬುದ್ಧಿಗಲಿಸೀ । ವಾಸವಂಗಾಜ್ಞಾಪಿಸಿಪೆತಂನೀಕಳೇವರವ । ಪಾಶವಿಚ್ಛೇದವಕೆನಿಜಪದ । ದಾಸರಂಘ್ರಿ
ದಾಸನೆಂದಾ । ನೇಸಂಧನ್ಯನೊಶಿವಮಹಾದೇವೆಂದನಸುರೇಂದ್ರ ॥೪೫॥ ಕರುಣಿಶೆನಗೆಲೆಕೃಷ್ಣಕರುಣಾ । ಕರಸಭಕ್ತಪ್ರಿ
ನೆಭವಭಯ । ಹರನೆನಿಂನಪದಾಂಬುಜೈಕಪರಾಯಣಾಶ್ರಿತರ ॥ ಚರಣರೆಜವನುಧರಿಸಿಬದುಕುವ । ಪರಮಪಾವನಜನ್ಮಜ
ಂ । ತರಸಹಸ್ರಂಗಳಲಿಜನಿಸಲುಬೇಹುದೆನಗೆಂದೆ ॥೪೬॥ ಒಡೆಯನಿಂನಂಘ್ರಿಯನುಮನದಲಿ । ಬಿಡದೆನೆನವುಕನಾಲಗೆಯು
। ಘೃಡಿಸಿಕೀರ್ತಿಸುತನವರತನಿಜಕಾಯಕರ್ಮದಲಿ ॥ ನಡದುಪರಿಚರಿಯನ್ನುಮಾಡುತ । ಪ್ರೊಡವಿಪಾವನರೆನಿಪನಿಂನವ ।
ಡನೆಜನಿಸುವಭೀಷ್ಟಜನ್ಮವನೀಯ್ಯಬೇಕೆಂದ ॥೪೭॥ ಸುರರಪದವನುಮೇಣುವಾಗೀ । ಶ್ವರರಪದವನುಭೋಗವತಿಯ
। ಧರೆಯಸಾಂಬ್ರಾಜ್ಯವನುಯೋಗೈಶ್ವರ್ಯಸಂಪದವ ॥ ಪರಮಪದವನುಮೇಣುತಾನಾ । ಧರಿಶೆನೀತಕೆಮುಚ್ಚುಮರೆನಿಜ ।
ರಣಕಮಲವನಲ್ಲದೇನುವನೊಲ್ಲೆನಾಶೆಂದ ॥೪೮॥ ಎರಕೆಬಲಿಯದಹಸಿಯಹಕ್ಕಿಯು । ಮರಿಗಳವ್ವೆಯಭರವಕಾಣದೆ । ಮರು
ಬಾಯ್ದಿಡುವಂತೆಗೂಡಿನಲಿದುರ್ದೆಶೆಕಳಿಗೆ ॥ ಭರದಲೆಳೆಗರುಹಸಿದುತಾಯನು ॥ ನಿರುತನೆನವಂದದಲಿಕರುಣಾ । ಕರನೆನಿಂ
ನುಕಾಣಲೆಳತಿಂತೆಂನಮನವೆಂದ ॥೪೯॥ ಪ್ರಾಣಸಮದೇಕಾಂತರದಲಾ । ಪ್ರಾಣವಲ್ಲಭನಿರಲುಮನದಲಿ । ಕಾಣಲೆಳಸು
ವೋಲುವಿಷಯಸುಖಂಗಳನುತೊರದು ॥ ಪ್ರಾಣದೊಡೆಯನೆಕೃಷ್ಣಭಕ್ತ । ಪ್ರಾಣಭೂತನೆನಿಂನಚರಣವ । ಕಾಣಲೆಳಸಿತ್ತೆಂ
ಮನವಿಂನೇನೆನಾನೆಂದ ॥೫೦॥ ಒಡೆಯನಿಂನನುತ್ತರೋರ್ಪಭಕ್ತರ । ಗಡಣವನುಸಖ್ಯರನುಕರುಣಿಸು । ಜಡಮತಿಗೆಮತಿ
ಜಾಡ್ಯಹರವನುಭವಭವದರಿನಗೆ ॥ ಮಡದಿಮನೆಮಕ್ಕಳನುತಮಗೆಂ । ಡೊಡಲುತಾವೆಂದೆಂಬಮೂರ್ಖರ । ಗಡಣವಾಗದವ್ರೋ
ಕೃಪೆಮಾಡೆಂದನಸುರೇಂದ್ರ ॥೫೧॥ ಎಂದುಕೈಗಳುಮುಗಿದುಧರೆಯಲಿ । ವಂದಿಸುತಪ್ಪೆಹಿಗ್ಗಿಚರಣ । ದ್ವಂದ್ವವನುನೆನ
ೊಡಲುನೆನೆಯಲುಬಾಷ್ಪಹರುಷದಲಿ ॥ ದಂದುಗವಮರದೆರಡುಘಳಿಗೆಮು । ಕುಂದಪದದಲಿಮುಳುಗಿಮೆಲ್ಲನೆ । ಕಂದೆರದುನಿತ್ಯಾ
ಗೋಪೀನಾಥಜಯಯೆಂದ ॥ ... ... ॥೫೨॥

ಅಂತು ಸಂಧಿ ೧೦ಕ್ಕಂ ಪದನು ೪೯೭ಕ್ಕೆ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

ವೃತ್ರಾಸುರನ ವಧೆ.

ಸೂಚನೆ ॥ ಚಂಡರಿಪುಬಲನಿಂದ್ರರಿಪುವರ । ಮಂಡಲವನರದೊಡಲನಿತ್ತು । ಖಂಡಲಾಯುಧಘಾತಿಗೈ
ದಿದನೊಲಿದುನಿಜಪದವ ॥ ... ...

ಪದನು ॥ ಇಂತುವಾಸವವೈರಿಲಕ್ಷ್ಮೀ । ಕಾಂತನನುನೆನವುತ್ತಜೀವಿತ । ದಂತ್ಯವನುನಿಶ್ಚೈಸಿಮೊಳಗುವಸಿಂಹನಾದ
ದಲಿ ॥ ಅಂತಕಾಂತಕನಂತ್ರದೇಶಿಗಳ । ಸಂತತಿಯನುರುಹುವತ್ರಿಶೂಲವ । ನಂತರಿಕ್ಷಕೆನೆಗಹಿತಿರುಹಿಟ್ಟನುಸುರಾಧಿಪನ ॥ ೧ ॥
ಉರಿದುದೋಜಗವೆನುತಖೇಚರ । ರಿರದೆಚೆಲ್ಲಿಲುದೆಶೆದೆಶೆಗೆಬೀ । ಕರಿಗಳವೃತ್ರೈತಹತ್ರಿಶೂಲವಕಂಡುಕೈಯ್ಯೊಡನೆ ॥ ಕರತಳದ
ವಜ್ರದಲಿಕಡಿದ । ಬ್ಬರಿಸಿನುತ್ತರಿಭಟನಭುಜವನು । ಹೊರಳೆಗಡಿದನುಖಾತಿಯಲಿಸುರಬಲವುಘೇಯೆನಲು ॥ ೨ ॥ ಆಯಿತಹು
ದೋವೀರಸಮರದ । ದಾಯಲೇಸಿಂನೊಂದುಕೈಯ್ಯಲಿ । ನೋಯಿಸಲುತಾನಾಪೆನೋಡೆಂದೆನುತಪರಿಘದಲಿ ॥ ಘಾಯವಿದೆಯ
ನುತೆಡೆದಕೈಯ್ಯಲಿ । ರಾಯರಿಪುಭಟನಿಟ್ಟನಮರರ । ರಾಯನನುಮತ್ತಿಭವನಾಸುರನಿಕರಕಂಗೆಡಲು ॥ ೩ ॥ ಒಡದುದಮರಾ
ಧಿಪನತಲೆಮುಸ । ಡೊಡೆನೆಗಜಪತಿಸಹಿತನೆತ್ತರ । ಕಡಲುಹರಿಯಲುನಡುಗಿನೆಗಹಿದಹಿಡಿದವಜ್ರವನು ॥ ಜಡಿದುಬಿದ್ದುದುಧರೆಗೆ
ದೈತ್ಯರು । ಗುಡಿಯಕಟ್ಟಿದರಾಯೆನುತ್ತು । ಘ್ಟಡದಭಯರೆಸೆಗಡೆನೆಲದ್ದುದುದೇವಸಂದೋಹ ॥ ೪ ॥ ಬಿದ್ದುದೋವಜ್ರವುವಿಘಾತಿ
ಯ । ಲದ್ದುದೋವಿಬುಧೇಶ್ವರನನುರೆ । ಗೆದ್ದುದೋಹರಹರಸುರಾರಾತಿಗಳಸಂಗ್ರಾಮ ॥ ಅದ್ರಿಧರನಕಟಾಕ್ಷವೇನನು । ಕದ್ದುದ
ಕಟಕಟೆನುತಘೋಳಿಡು । ತಿರ್ದುದಮರಮುನೀಶ್ವರರಸಂದೋಹವಭ್ರದಲಿ ॥ ಮರಳೆನವಜ್ರವಕೊಳ್ಳದಮರೇ । ಶ್ವರನುಮನ
ದಲಿನಾಚಿವಿಹ್ವಲ । ಕರಣನಾಗುತ್ತಿರಲುಸ್ವೈವೆರಗಾಗಿಸಮರದಲಿ ॥ ಮರುಳುಗೊಳುತಿರೆಕಂಡುದೈತ್ಯೇ । ಶ್ವರನುನುಡಿದನುನಾಚ
ಲೇಕೆಲೆ । ಧುರದವೀರನೆದೈವದಿಚ್ಛೆಯಲಿಹುದುಜಯವೆಂದ ॥ ೬ ॥ ಹಿಡಿಯಲವ್ರೊವಜ್ರವನುಕ್ರಂನನು । ಕಡಿದುಬಿಸುಡುವುದೇನು
ಧುರದಲಿ । ಮಿಡುಕನಿನಗುಂಟಾಪಡಿದಿರಾಗೇಕೆಲಜ್ಜಿಸುನೆ ॥ ಜಡತೆಯನುಬಿಡುದೈವದಿಚ್ಛೆಯ । ಲೊಡರಿಸುವುದೀಜಯಪರಾ
ಜಯ । ಮತರುನೋಕ್ಷ್ಮೈಶ್ವರ್ಯವಿದರಲಿನಿಯತಿಯಿಲ್ಲೆಂದ ॥ ೭ ॥ ಬರಲಿಶಿರಿಯೇಮೇಣಾಬಡತನ । ಬರಲಿಜಯವಪಜಯಗಳದರಲಿ ।
ಮರುಳೆಮನಗುಂದುವರೆಮಾಯೆನೆಬಲ್ಲವರುಧಿಟಕೆ ॥ ಅರಿದಭುಜದಲಿನೋಡುನಿಂನನು । ಬೆರಸುನಂನನುಕಾಯವಿದುಸು । ಸ್ಥಿರ
ವೆಧಿಟಕಲ್ಪಾಂತಪರಿಯಂತೆಂದನಸುರೇಂದ್ರ ॥ ೮ ॥ ಹಾನಿವೃದ್ಧಿಗಳ್ಳದೆದೈವಾ । ಧೀನವೆಂದರಿನೀನುಚಿತ್ತ । ಜ್ಞಾನಿಬೇಡೆಲೆವೀರಪರ
ಮೇಶ್ವರನಲೀಲೆಯಲಿ ॥ ತಾನುನೀನೀಜಗಗಳೀಶಿ । ಖಾನುಗಳುಶಂಕರಸರೋರುಹ । ಸೂನುಮುಖ್ಯವಸಖ್ಯವಾಗುತ್ತಳಿವು
ತಿಹುದೆಂದ ॥ ೯ ॥ ಆಡಿಸುವನೀಜಗವಬಿಚ್ಛೆಯ । ಮಾಡುವನುಕೃತಕರ್ಮಫಲವನು । ಝಾಡಿಸುವನಲಸಿದಡೆಕಂನಯಕಾಲಶಕ್ತಿ
ಯಲಿ ॥ ನೋಡದಜ್ಞಾನಿಗಳುಜಯವನು । ಜೋಡಿಸುವೆವಪಜಯವಪರರಿಗೆ । ಮಾತುವೆವುತಾವೆನುತಹಂಕರಿಸುವರದೇಕೆಂದ ॥
ಅದಡಾಗಲದೈವದಿಷ್ಟವ । ನಾವರಿಸುವುದುಸಮಗೆಪರುಷವಿ । ಷಾದವೇಕೆನೆಕೇಳುತಸುರಾಧಿಪನವಚನವನು ॥ ಆದರಿಸುತಮ
ರೇಂದ್ರನೆದ್ದನು । ಹೋದವಜ್ರವಕೊಂಡುನಗುತವಿ । ಷಾದವನುತಗ್ಗಿನುಡಿದನುದೈತ್ಯಪತಿಯೊಡನೆ ॥ ೧೧ ॥ ಬುದ್ಧಿಯ
ಹುದೋವೀರದಾನವ । ಸಿದ್ಧನಾದೈವಿಷ್ಣುಮಾಯಾ । ಬದ್ಧನಲ್ಲಾಜೀವಜಾತವಿದೀವಿವೇಕವಿದು ॥ ಸಿದ್ಧಿಸುವುದಾರಿಂಗೆಭಕ್ತಿ ।
ಶ್ರದ್ಧೆಶಾಂತಿತಿತಿಕ್ಷೆಸಂಬಿವು । ಯುದ್ಧದಲಿನೀಂಣಾವದೇವಂಗಹುದುಕೇಳೆಂದ ॥ ೧೨ ॥ ಎತ್ತಲೀತಾಮಸದಜನ್ಮವಿ । ಚಿತ್ತಲೀ
ಹರಿಭಕ್ತಿಸಮರವಿ । ದೆತ್ತಲೀಸಮಬುದ್ಧಿಯತ್ತಲುಸರ್ವಭೂತದಲಿ ॥ ಉತ್ತಮನೆನಿಂನಂತೆಸತ್ಕೃತ । ಕೃತ್ಯರಾರಕಟಕಟವಿಸಾ
ರಿದೆ । ಮೃತ್ಯುವನುಮತ್ತೇನುಧನ್ಯರದೇವನೀನೆಂದ ॥ ೧೩ ॥ ಅವನಚ್ಯುತಭಕ್ತನಾತನೆ । ದೇವಪತಿಯಾತನೆಧಿಟಕೇರಾ । ಜೀ
ವಸಂಭವನಾತನೇಶಂಕರನುಭಾವಿಸಲು ॥ ಈವಿವಿಧದೇವತೆಗಳೀತೀ । ರ್ಥಾವಳಿಗಳೀಸಕಲಮಾತಂ । ಗಾವುದೈದುರ್ಲಭಕೃತಾ
ರ್ಥಂಗೆಂದನಮರೇಂದ್ರ ॥ ೧೪ ॥ ತೃಣಕಿಕೊಂಬರುವಿಷ್ಣುಪದವನು । ತ್ರಿಣಯನವಿರಿಂಚಾದಿಪದವನು । ಗುಣಮಯನನುಧ್ರು
ವವನೆತ್ಯಾಯಾಸಲಭ್ಯವನು ॥ ಗಣಿಸುವರೆಪೀಯೂಷರಸದಲಿ । ಕುಣಿವವರುಕೂಪವನುನಾರಾ । ಯಣಪರಾಯಣರಾಪ್ತಕಾ
ಮರುಧನ್ಯತಮರೆಂದ ॥ ೧೫ ॥ ಎಂಪುತಂವೊಳಗೆಂದುಧುರದಲಿ । ನಿಂದುಸಂಭಾವಿಸುತಧರ್ಮವ । ನಿಂದ್ರವೃತ್ರಾಸುರರು
ಕೊಂಡರುಮತ್ತೆಕೈದುವನು ॥ ಸಂದವರಮುನಿನಿಕರಭಾಪೆನೆ । ಲಂದುಪರಿಘವನೆಡದಕೈಯಲಿ । ಕೊಂದೆನಿದಕೊಳ್ಳೆನುತಶಿರು
ಹಿಟ್ಟನುಸುರಾಧಿಪನೆ ॥ ೧೬ ॥ ಇಡಲುಸಂಮುಖವಾಗಿನಭದಲಿ । ಕಿಡಿಯಸುಗುಳುತಬರಲುಸುರಪತಿ । ಕಡಿದನಾಪರಿಘವನು
ಮೊಳಗುಪದಾನವೇಶ್ವರನ ॥ ಎಡದಕೈಯನುಕೂಡೆವಜ್ರದ । ಲೊಡನೆಸುರಬಲಮಾರಲೆರಕೆಯ । ಕಡಿದಗಿರಿಯಂತಾದನಮರಾ
ರಾತಿಸಮರದಲಿ ॥ ೧೭ ॥ ಕಡಿಯಲಿಂಮುಡಿಸಿತ್ತುಭುಜವನು । ಕಡುಹುನೆರೆಕಲ್ಪಾಂತಕಾಲದ । ಮೃಡನಪ್ರೊಲುಕಂಗಳಲಿಕಿಡಿ

ಗೆಪರುತ್ತೆಬೊಬ್ಬಿರಿದು ॥ ನಡದನಿಂದ್ರನಸಮ್ಮುಖಕೆಕಾ । ಲ್ವಡದಸುರಗಿರಿಯಂತೆವಜ್ರವ । ತೊಡುತೊಡೆಲವೋಧೀರನಿಲುನಿಲ್ಲೆನುತಸುರವೈರಿ ॥ ೧೮ ॥ ಒಂದುತುಟಿಯನುಧರೆಗೆಚಾಚಿದ । ನೊಂದನಾಕಾಶಕ್ಕೆನೆಗಹಿದ । ನಿಂದ್ರರಿಪುದಾಡೆಗಳಧಟ್ಟುರಿಸೂಸಲಡಿಗಡಿಗೆ ॥ ಬಂದನಭಿಮುಖನಾಗಿದಿಗ್ಗಜ । ನಿಂದನಾವೆಯೊಲಾಯ್ತುಧರಣಿಪು । ರಂದರಾರಿಯಪಾದಘಾತಿಯನೊಲವುತೆಡಬಲಕೆ ॥ ೧೯ ॥ ಕಂಗಳುರಿಯನುಕೆದರಲರಿಪು । ಪುಂಗವನುಹರಿತಂದನಿರ್ಜರ । ಪುಂಗಪನನಾಗಜಪನಾವಜ್ರವನುಬಲಸಹಿತ ॥ ನುಂಗಿದನುನಿಮಿಷದಲಿಹೊಟ್ಟೆಯ । ಸಂಗರಕೆಹೋಗೆನುತನೃಪಕುಲ । ಪುಂಗವನೆಕೇಳ್ ಮಹಾದೈತ್ಯೇಂದ್ರನುಬ್ಬಟೆಯ ॥ ೨೦ ॥ ಪೋದನೋಬಲವೈರಿದೈತ್ಯವ । ಹೋದರಾಶನರಾಗಿನಿರ್ಭಯ । ರಾದರೋದಾನವರುತ್ರಿದಿವವನಾಯುಕತ್ವದಲಿ ॥ ತೀದುದೋತ್ರಿದಶರುಸಹಿತಕವ । ಲೋದರನಮಂತ್ರಕ್ಕೆವರ್ಮವ । ನೀದುದೋಸಂಗ್ರಾಮಹಾಯೆನುತಿರ್ದುದಖಿಳಜನ ॥ ೨೧ ॥ ಒಡನೆಪೊಕ್ಕಮರೇಂದ್ರನಸುರನ । ದಡಿಗದೇಹದಕುಹರದಲಿತಡ ॥ ತಡವಿಕಜ್ಜಳರಾಪಿಗಳಭಿತ್ತಿಯಲಿಬಾಗಿಲನು ॥ ಕಡಿದುವಜ್ರದಲಾನೆಸಹಿತಪ । ಗಡೆಯನಲ್ಲಿಂದಿರದೆದಿವಿಜರು । ಗುಡಿಯಕಟ್ಟಲುಘರ್ಜಿಸುತಹೊರವಂಟನಾಕ್ಷಣಕೆ ॥ ೨೨ ॥ ಸಾವರೇಹರಿಚರಣಶರಣರು । ಭೂವರನೆನಾರಾಯಣಾಖ್ಯಸ । ಮಾವೃತಾಮಳಕವಚರಕ್ಷಿತನಾಗಿಬಲವೈರಿ ॥ ಜೀವಿಸಿದನಾವೃತ್ತನುದರದ । ಪಾವಕನಮುಖದಿಂದನುಂಗಿದ । ನೋವನರಿಯದೆಪುರವಹೊರವಡುವಂತೆಹೊರವಂಟ ॥ ೨೩ ॥ ಮತ್ತೆಸುರರುಘೆಯನಲುಕಡುಗನ । ಉತ್ತವಜ್ರಾಯುಧಕೆನೇಮದ । ನಿತ್ತನಾಬಲವೈರಿಸುಂಗುಪಶತ್ರುವಿನಕೊರಳ ॥ ಕತ್ತರಿಸುಹೋಗೆಂದುಕಳುಹಲು । ಸುತ್ತಿಕೊರಳನುಕಡಿದುಕೆಡಹಿದು । ದುತ್ತಮನೆಹಂನೆರಡುತಿಂಗಳ್ಗೆ ಗಾಮಹಾಭಟನ ॥ ೨೪ ॥ ಬಿದ್ದುದೋತಲೆಭಟನಸುರಬಲ । ಗೆದ್ದುದೋಸಂಗರವನಹಿತರು । ಕದ್ದರೋಪಾತಾಳಲೋಕಂಗಳನುದೆಶೆಗಳನು ॥ ಇದ್ದರೋದೇವಿಯರುಜಯಸಿರಿ । ಬದ್ಧಳೋಭಾವರರೆಭಲರೆನು । ತಿರ್ದುದಾಗಂಧರ್ವವಿದ್ಯಾಧರಜನಸ್ತೋಮ ॥ ೨೫ ॥ ಮೊಳಗಿದವುದುಂದುಭಿಮೃದಂಗಾ । ವಳಿಗಳೋರಂತಪ್ರದಲಿಮಂ । ಗಳಮಹೋತ್ಸವಗೀತನೃತ್ಯಜಯಧ್ವನಿಗಳೊಡನೆ ॥ ಇಳಿದವವನಿಗೆಪುಷ್ಪವೃಷ್ಟಿಗ । ಳಲಘುವೃತ್ತವಧಾಂತಬಿರುದಾ । ವಳಿಗಳನುಸುರಸೂತಮಾಗಧನಂದಿಜನಹೊಗಳೆ ॥ ೨೬ ॥ ಭೂತಳಾಧೀಶ್ವರನೆಕೇಳಾ । ಕೌತುಕವನಾವೃತ್ತನಾತ್ಮಜ್ಯೋತಿಹೊರವಂಟೊಡಲನಿನಮಂಡಲವನಲವೃತ್ತ ॥ ಭೂತಳವನಂಬರವನಾದಿಗು । ಜಾತವನುಬೆಳಗುತ್ತಸುಜನ । ವ್ರಾತವಿಪ್ರಸಿಸೈದಿತೀಪುನರ್ಭವದಸಂಸ್ಥಿತಿಯ ॥ ೨೭ ॥ ಅವುದೋದುರ್ಲಭದಯಾನಿಧಿ । ದೇವನಾರಾಯಣನಕಾರು । ಣ್ಯಾವಲೋಕನವೃಕ್ಷಭಕ್ತರಿಗಿಹಪರಂಗಳಲಿ ॥ ಭೂವರನೆಸಂಗ್ರಾಮಮುಖದಲಿ । ದೇವರಿಪುಸಹಿತ್ಯೈದಿದನುನಿಜ । ಭಾವದಲಿನಿತ್ಯಾತ್ಮಗೋಪೀನಾಥನಂಘ್ರಿಗಳ ॥ ... ... ॥ ೨೮ ॥

ಅಂತು ಸಂಧಿ ೧೧ಕ್ಕಂ ಪದನು ೪೨೪ಕ್ಕೆ ಮಂಗಳಮಸ್ತು.

ಹನ್ನೆರಡನೆಯ ಸಂಧಿ.

ಸೂಚನೆ ॥ ವೃತ್ರಹತ್ಯಾಪಾತಕವನಾ । ವೃತ್ರರಿಪುಪರಿಹರಿಸಿಪುಣ್ಯಚ । ರಿತ್ರನೆನಿಸಿದನಾಮುಕುಂದ ಧ್ಯಾನಪೂಜೆಯಲಿ ॥ ... ...

ಪದನು ॥ ಅವನಿಪತಿಕೇಳಸುರನಳಿಯಲು । ದಿವಕೆನಿರ್ಭಯವಾಯ್ತುಪರವೋ । ತ್ಸವದಲೋಲಾಡುತ್ತಜನಹೊಗಳ್ದುದುಸುರಪತಿಯ ॥ ಭುವನಮಂಗಳವಾಯ್ತುಸುರಮುನಿ । ನಿವಹವಾಯೆನುತಿರ್ದುದಾವಾ । ಸವನುಳಿಯದುದಳ್ಳಖಿಳಲೋಕಕ್ಕಾಯ್ತುಸುಖವೆಂದ ॥ ೧ ॥ ದೇವಪತಿಕೊರಗಾಗಿಬಳ್ಳಿಕಾ । ದೇವಋಷಿಪಿತೃನಿಕರವಾರಾ । ಜೀವಭವಭವಮುಖ್ಯರೈದಿದರಾಲಯಂಗಳಿಗೆ ॥ ಭೂವರನೆಕೇಳೆನಲುಬಿಂನಹ । ದೇವಪತಿಯಲದೇನುದುಷ್ಕೃತ । ಪಾವನಕೆಕಾರಣವನಾಜ್ಞಾಪಿಸುವುದೆನಗೆಂದ ॥ ೨ ॥ ಎಂದಡವಧರಿಸರಸವೃತ್ತನ । ಕೊಂದುಕೊಡುವುದೆನುತ್ತಸುರಮುನಿ । ವೃಂದವಭ್ಯರ್ಥಿಸಿದಡಮರಾಧಿಪನನವರೊಡನೆ ॥ ಎಂದನಿಂದ್ರನುವಿಶ್ವರೂಪನ । ಕೊಂದಪಾತಕನಾಲ್ವರಾಶ್ರಯ । ದಿಂದಹಿಂಗಿತುಪುಣ್ಯವಿಂನದನಾಡಬೇಡೆಂದ ॥ ೩ ॥ ಮಿಸುಕುವವನಾನಲ್ಲಮುಂನಿನ । ಘಸಣಿಯದುಹಿಂಗಿದುವೆಪುಣ್ಯದ । ದೆಶೆಯಲಾಮತ್ತಿಂದುಕೊಂಬವರಾರುಪಾತಕವ ॥ ಉಸುರಬೇಡೆನಲೆಂದರಂದಾ । ಋಷಿಗಳಾಸುರಪತಿಗೆಮರುಹುವೆ । ಮುಸುಡನೇತಕೆಹೇಳುವೆವುಪಾತಕವಿಘಾತಕವ ॥ ೪ ॥ ಯಾತಕಳಲುವೆತೀರ್ಥಪಾದ । ಜ್ಞಾತ್ಯವಲ್ಲಾವೃತ್ತವಧೆಗೆಪು । ನೀತನನುಮಾಡುವೆವುನಿಂನನುಯಜಿಸಿಮುರಹರನ ॥ ಅತರಿಸಬೇಡಿದಕೆಪಾತಕ । ಗೀತಕಕೆನಿಂನಿಂನುಮುರಹರ । ನಾತಗಳುನಾವಾರಿಗಂಜುವೆವೆಂದರಾದ್ವಿಜರು ॥ ೫ ॥ ಮಾತೃವಧೆಪಿತೃವಧೆಸುಪಾಪ್ತ । ಭ್ರಾತೃವಧೆಗುರುವಧೆಸಖಿಪ್ರಿಯ । ಭೂತಳಾಮರವಧೆವಧೂಗೋವಧೆಗಳೆಂಬಿವಕೆ ॥ ಖ್ಯಾತನಿಷ್ಕೃತಿಯಾವನೊಬ್ಬ

ನೆ । ಧೌತಮಂಗಳನಾಮಕೀರ್ತನೆ । ವಾತನಿರಲಘನಿಕರವೇಗುವುದೆಂದರಾದ್ವಿಜರು ॥೬॥ ಹಲವುವೆಮಾತುಗಳೀಕೆಗೋದ್ವಿಜ
ಕುಲಸಹಿತಸಚರಾಚರವನಿದ । ಕೊಲಲಭೋಜ್ಯವನುಣಲಿಪಾವನರಚ್ಯುತಾಶ್ರಿತರು ॥ ಕೊಲುವುದದರಿಂದಖಿಳಭುವನ । ಪ್ರಳ
ಯಕಾರ್ಯವಸೆಂದುಋಷಿಗಳು । ತಿಳುಹಿದರುಶತಮುಖಗೆಧರ್ಮರಹಸ್ಯಸಂಸ್ಥಿತಿಯ ॥೭॥ ಆದಡಾಗಲೆನುತ್ತಭಟನನು । ಕಾದಿ
ಕೊಂದನುತತ್ವವಿದ್ಯಾ । ಪಾದಿತಾನಂದಾನುಭವಹರಿವಿಷ್ಣುಭಕ್ತರನು ॥ ಮೇದಿನಿಗೆತಲೆಬೀಳಲಾಕ್ಷಣ । ಕಾದಳೊಬ್ಬಳುವನಿತೆಕೇ
ಳಿಲೆ । ಮೇದಿನೀಪತಿಬಂದಳಾಸುರಪತಿಯಸಂಮುಖಕೆ ॥೮॥ ಎಲವೊನಿಲುನಿಲ್ಲೆಂದೆನುತಬಳಿ । ಸಲಲುಕಂಡನುಮಾಪಿಕೆದರಿದ
ತಲೆಯನರೆಗೂದಲಿನನಡುಗುವಮೈಯ್ಯಹೊಲಸಿನಲಿ ॥ ಹೊಲಸುನಾರಲುಬಟ್ಟೆಕಂಗಳ । ಲಿಳ್ಳದಹುಬ್ಬಿನಹೊರಡುಬೇನಿನ । ಹೊ
ಲತಿಹೋಗದಿರೆನುತಬರೆದೂರದಲಿಬಲವೈರಿ ॥೯॥ ಏನಿದೆತ್ತಣಮಾರಿಬಂದುದೊ । ದಾನವನವಧೆಯನುತಕಾಸ್ಯದ । ಸೂನು
ಕಂಗಟ್ಟೋಡಿದನುಕಾತರಿಸಿದೆಶೆದೆಶೆಗೆ ॥ ಈನಿಖಿಳಲೋಕವನುತೊಳಲಿದ । ನಾನಲಾರದೆಹೋದನಂದಾ । ಮಾನಸಾಖ್ಯಸ
ರೋವರಕೆಮುರಿಮುರಿದುನೋಡುತ್ತ ॥೧೦॥ ಬೀಳನುತಹತ್ಯೆಯನುಜರದಾ । ಲೋಲಮತಿಮನೆಮಾಡಿಕಮಲದ । ನಾಳ
ದೊಳಗಡಗಿದನುಲಕ್ಷ್ಮೀವಾಸವೆಂದರಿದು ॥ ಪಾಲಿಸಿದಳಿಂದ್ರನನುಲಕ್ಷ್ಮಿಕೆ । ರಾಳಮುಟ್ಟದಪ್ರೋಲುಕಳಿಗನು । ಕಾಲವನುಬಳಿ
ಕಲ್ಲಿಸಾವಿರವರುಷಪರಿಯಂತ ॥೧೧॥ ಅರಸಿಕಾಣದೆಸುರರಸುರಪತಿ । ಯಿರವನೆಲ್ಲಾದೆಶೆಗಳಲಿವಿಗೆ । ಮರುಗುತಿರ್ದರು
ಯಾಗಭಾಗವನೊತ್ತುಹುತವಹನು ॥ ಅರಸಿಕಾಣರುಹವಿಯನುಂಣದೆ । ನೆರೆನಿರಾಹಾರದಲಿತಪವನು । ಚರಿಸುವಂತಿರ್ದನು
ಸುರಾಧಿಪನಬುಜನಾಳದಲಿ ॥೧೨॥ ಹೊದ್ದಲಂಮದೆಹೊರಗೆನೆರೆಕಾ । ದಿರ್ದದಾದ್ವಿಜಹತ್ಯನೆತ್ತರಿ । ನೊದ್ದೆಶೀರೆಯನುಟ್ಟು
ನಡುಗುತಕುತ್ಸಿತಾಂಗದಲಿ ॥ ಕದ್ದುಕಮಲದನಾಳದಲಿಮುನಿ । ಹೃದ್ಯಚರಣನೆಗತಿಯೆನುತಕು । ಳ್ಳಿರ್ದನಿಂದ್ರನುಜರೆಯಲಾ
ದ್ವಿಜಹತ್ಯೆಯುಪಟಳಕೆ ॥೧೩॥ ಅತ್ತಲಂನೆಗನೆಹುಷನೆಂಬನ್ನೃ । ಸ್ತೋತ್ರವನುಸುರರಾಜಪದವನು । ಹೊತ್ತುನಡಸುವೆನೆಂ
ದುಯೋಗತಪಃಪ್ರಭಾವದಲಿ ॥ ಹತ್ತಿದನುನಾಕವನುದುರಿತವ । ನುತ್ತರಿಸಿಮದಮುಖನುಸುರಪನ । ಮತ್ತಕಾಶಿನಿಯಿಂದಬಿದ್ದ
ನುಮತ್ತೆಭೂತಳಕೆ ॥೧೪॥ ಧಾರುಣೀಪತಿಕೇಳುಮದಲಿಂ । ನಾರಕೆಡಿಸದುಮಾಡಿಗರ್ವವಿ । ಕಾರವನುಮದದಿಂದನಹುಷನುಸ
ರ್ಪಯೋನಿಯುಳಿ ॥ ಪ್ರಾರಬುಧವಶದಿಂದಬಿದ್ದನು । ಭೂರಿತೇಜದಗಸ್ತ್ಯನಿಂದವಿ । ಕಾರಿಗಳುನರರಿಂತುಕೆಡುವರುಗರ್ವಿಸಿದ
ರೆಂದ ॥೧೫॥ ವರುಷಸಾವಿರಸಂದುದೆಂನಗ । ನೆರೆನಿರಾಶ್ರಯವಾಗಲಮರರು । ಹರಿದರಬುಜಾಸನನೆಗೆಬಿಂನಹಮಾಡಿದರುಹ
ದನ ॥ ಸರಸಿಜೋದ್ಭವನರಿದುಮಾನಸ । ಸರಸಿಗೈತಂದಮರಪತಿಯನು । ಕರೆದನಾದ್ವಿಜಹತ್ಯೆಕೆಲದಲಿನಿಂದುಕೈಮುಗಿಯೆ ॥೧೬॥
ಬಾಮಗನೆಬಾತಳೆಬಾಸು । ತ್ರಾಮಬಾಸುರಪತಿಯೆಬಾಸು । ಕ್ಷಾಮಕಾಯನೆಬಾಮಹಾತ್ಮನೆಬಾಹರಿಯೆಬಾರ ॥ ಶ್ರೀಮಹಿಳೆ
ರಕ್ಷಿತನೆಬಾಬಾ । ಕ್ಷೇಮವನುಮಾಡುವೆನುಬಾಬಿಡು । ಭೂಮಿಸುರಹತ್ಯಾಭಯವನೆನುತಿರ್ದನಬುಜಭವ ॥೧೭॥ ಆರುಕರವ
ಪರ್ವಯ್ಯಪಾಪಿಯ । ನಾರುಸಲಹುವರಿಂನುಧಿಬದ್ಧೆ । ತ್ಯಾರಿಯೋಶಂಕರನೋಮೇಣಾಸರೋಜಸಂಭವನೊ ॥ ಪ್ರೇರಿಸಿದಋ
ಷಿವರರೊಯೆನುತಾ । ಭೀರನಡುಗುತನಡುಗುತ್ತೊಯ್ಯನೆ । ಧಾರುಣೀಪತಿಕೇಳುಮೈದೋರಿದನುಕಮಲಜಗೆ ॥೧೮॥ ಅಂಜ
ಬೇಡೆಲೆಮಗನೆಕರವವ । ಕಂಜನಾಭನಮಗನುಪ್ರೊರಮಡು । ಪಂಜರವಲಾಪರಮಪುರುಷನಭಕ್ತಿಭಕ್ತರಿಗೆ ॥ ಕುಂಜರಾರಿಯ
ನಕಟನಾಯಿಗ । ಳಂಜಿಸುವವೇಬ್ರಹ್ಮಹತ್ಯವಿ । ದೆಂಜಲಿಸದೇಳೆನಲುಹೊರವಂಟನುಸರೋವರವ ॥೧೯॥ ಯಜಿಸಿದನುಬಳಿಕ
ಶ್ವಮೇಧದ । ಲಜಸುರಾರ್ಚಿತಚಾರುಚರಣಾಂ । ಬುಜನನಾದ್ವಿಜಹತ್ಯೆಯನುಕೆಡೆಯೊದೆಯನುತ್ತವೆನು ॥ ದ್ವಿಜರುಪಾವನಕೀ
ರ್ತಿಯನುಸಲೆ । ವಿಜಯವಾಯ್ತಮರಾಧಿಪತಿಗಾ । ನ್ನಜಿನವದುಹಿಂಗಿತ್ತುಮಂಗಳವಾಯ್ತುಮೂಜಗಕೆ ॥೨೦॥ ಅತ್ತಲಬುಜಾ
ಸನನುಗಮನವ । ಚಿತ್ತವಿಸಿದನುಬಂದುಹೊಕ್ಕನು । ವೃತ್ರರಿಪುನಿಜಪುರವನುಂನತವಾದ್ಯರಭಸದಲಿ ॥ ಉತ್ತಮದ್ವಿಜರವರಿಗಾ
ಶ್ರಮ । ದತ್ತಲಾದುದುಗಮನನವರಿದೇ । ನುತ್ತಮಶ್ಲೋಕಾಶ್ರಿತಾಶ್ರಿತರಿಂಗೆಹೇಳೆಂದ ॥೨೧॥ ಒರಲೆನಾನೆಲೆಭೂಪವೃತ್ರಾ ।
ಸುರನವಧೋರ್ಜಿತದಿವಿಜವಿಜಯವ । ನೊರೆದೆನಾಪುಣ್ಯಾತ್ಮವೃತ್ರಾಸುರನವೋಕ್ಷನನು ॥ ನಿರುತವಿದಕೇಳುವರಿಗಾಯುಃ ।
ಕರಯಶಸ್ಕರವಚ್ಯುತಾಂಘ್ರಿಯ । ನುರುತರಾಮಳಭಕ್ತಿಕರವಭ್ಯುದಯಕರವೆಂದ ॥೨೨॥ ಅವನಿದನೋದುವನುಕೇಳುವ ।
ನಾವನುತ್ತಮಕಾಲದಲಿಸ । ದ್ಭಾವಸಶ್ರದ್ಧಾದಿಗುಣಸಂಪಂನನೆಂದೆನಿಸಿ ॥ ತಾವನವರಮಪಕಲದುಷ್ಕ । ರ್ಮಾವಳಿಯನಪಹರಿಸಿಧ
ರಣೀ । ದೇವನುತನಿತ್ಯಾತ್ಮಗೋಪೀನಾಥನೊಲವಿನಲಿ ॥ … … … ॥೨೩॥

ಅಂತು ಸಂಧಿ ೨೩ಕ್ಕೆ ೧ ಪದನು ೪೪೫೭ಕ್ಕೆ ಮಂಗಳಮಸ್ತು.

ಹದಿಮೂರನೆಯ ಸಂಧಿ.

ಚಿತ್ರಕೇತುವು ತಪಸ್ಸು ಮಾಡಿ ಈಶ್ವರಾನುಗ್ರಹವನ್ನು ಹೊಂದಿದ್ದು.

ಸೂಚನೆ ॥ ಪುತ್ರಶೋಕಾತುರನೆನಿಸಿನೃಪ । ಚಿತ್ರಕೇತುಸಮಸ್ತವಿಷಯಾವಿ । ರಕ್ತನಾದನುಬಳಿಕಪಡ
ದನುಮಹದನುಗ್ರಹವ ॥ ... ...

ಪದನು ॥ ಚಿತ್ತವಿಸುಮುನಿನಾಥಸಹಜರ । ಜಿಷ್ಣುಮಸ್ವಾಭಾವಿಕದದು । ವೃತ್ರತ್ವತ್ರಾಸುರಗದೆಂತ್ರೋಹರಿಪದಾಬ್ಜ ದಲಿ । ಭಕ್ತಿಸಂಭವಿಸಿತ್ತು ನಿರ್ಮಲ । ಸತ್ವಗುಣಜಾತರಿಗೆದುರ್ಲಭ । ವೃತ್ತಮಗೆಪೂರ್ವದಲಿಮಾಡಿದಪುಣ್ಯವೇನೆಂದ ॥೧॥ ಧರೆಯಧೂಳಿಗಳಿಂಗೆಮಿಗಿಲೀ । ಚರವಚರನೆಂದೆಂಬಜೀವ್ರೋ । ತ್ಕರಗಳದರೊಳಗೆತ್ತಲಾನೊಬ್ಬಂಗೆಲೇಸೆನಿಸಿ ॥ ದೊರಕುವದುಮತಿಕೆಲಬರದರೊಳು । ಪರಮನೋಕ್ಷೇಚ್ಛೆಗಳಹರುಸಾ । ವಿರಮುಮುಕ್ಷುಗಳೊಳಗೆಕೆಲಬರುಮುಕ್ತರಹರೆಂದ ॥೨॥ ಮತ್ತೆ ಮುಕ್ತರಕೋಟಿಗಳನನು । ರಕ್ತನಾರಾಯಣಪರಾಯಣ । ನತ್ಯಧಿಕದುರ್ಲಭನಲಾಶಾಂತಾಖಿಳೇಂದ್ರಿಯನು ॥ ವೃತ್ತನಾಡಿದನಾರೊಳಾರುಮ । ಹತ್ತಮನೆಪಾಪಿಷ್ಠನತಿದು । ವೃತ್ತನೆತ್ತಲುಹರಿಭಕುತಿತಾನೆತ್ತಲಕಟೆಂದ ॥೩॥ ವೀರಶಿರಿತ್ತಲೆದೂಗಿಸಿತುಜಂ । ಭಾರಿಮುಖ್ಯರನಾತ್ಮತತ್ವವಿ । ಚಾರಮತಿಮೆಚ್ಚಿಸಿತುಸನಕಾದಿಗಳನಾಹರಿಯ ॥ ಚಾರುಪದಯುಗಭಕ್ತಿಸೆಳೆದುದು । ನಾರದಾದ್ಯರಮುನವನಸುರನ । ಭೂರಿಭಾಗ್ಯವದೇನೆನಲುನಗುತೆಂದನಾಮುನಿಪ ॥೪॥ ಲೇಸನಾಡಿದೆಸಂಶಯಾಕ್ರಾ । ವಾಸವಹುದೆಲೆ ಭೂಪಕೇಳತಿ । ಹಾಸವನುದುಸ್ತರಮಹಾಘಧ್ವಾಂತನಾಶನವ ॥ ವ್ಯಾಸನಾರದದೇವಲಾಖ್ಯಮು । ನೀಶರಲಿಕೇಳಿದೆನುಸಂಶಯ । ದೋಷಹರವೆನಲೊರವನವಧರಿಸೆಂದನಾಮುನಿಪ ॥೫॥ ಧಾರುಣೀಪತಿಯಾದನೊಬ್ಬನು । ಶೂರಶೇನಂಗಳಿಗೆಜಂಗಮ । ಪಾರಿಜಾದತವೋಲುನಿಖಿಳಾಭೀಷ್ಟದಾನದಲಿ ॥ ಭೂರಿಗುಣನಿಧಿಪೂರ್ಣಕೀರ್ತಿಯ । ದಾರತೇಜೋವನಧಿಯೆನಿಸುವ । ಪಾರಮೈಶ್ವರ್ಯದವಿಭವದಲಿರಂಜಿಸಿದನವನಿಯಲಿ ॥೬॥ ಚಿತ್ತದಿಳೆಕಾಮಿತಪದಾರ್ಥವ । ನಿತ್ತುದಣಿಯಳುಜೀವಜಾತಕೆ । ಹೆತ್ತತಂದೆಯವೋಲುಹಿತಕರವಾಗಿನೃಪನಿರಲು ॥ ಉತ್ತಮಾಂಗನೆವರಕ್ಕೃತದ್ಯುತಿ । ಮತ್ತೆನೃಪತಿಗೆಕೋಟಿಸಂಖ್ಯೆಯ । ಮತ್ತಕಾಸಿನಿಯರುಶರೀರಾರ್ಧೆಯರುರಂಜಿಸಿತು ॥೭॥ ಮಕ್ಕಳಿನಿಬರೊಳಿಲ್ಲದವನಿಪ । ಚಕ್ರವರ್ತಿಯಸಾರಹೃದಯವ । ಹೊಕ್ಕುದಂತಸಾಮ್ರಾಜ್ಯಸುಖೋಪಭೋಗವನು ॥ ಒಕ್ಕನದನೆಲ್ಲವನುಚಿಂತೆಗೆ । ಶಿಕ್ಕಿದುದುಮನಮುಖಲಕ್ಷ್ಮಿಯಿಂದೆ । ನಿಕ್ಕಿರಳುಬೇಳಾಗುತಿರ್ದನುಭೂಪನಡಿಗಡಿಗೆ ॥೮॥ ಹಸಿದವನಹದಗೊಳಲುಬಲ್ಲರೆ । ಶಶಿವದನೆಯರುಮೇಣುಭೂಷಣ । ವಸನವನಮಾಲಾನುಲೇಪನಚಂದನಾದಿಗಳು ॥ ಅಸಮಸಂತಾನವನುಬಯಸುವ । ವಸುಮತೀಪತಿಗುಳಿದವಿಷಯ । ಪ್ರಸರದಲಿಸುಖವಾಗದಾಯಿತುಭೂಪಕೇಳೆಂದ ॥೯॥ ಚಿಂತಿಸುತನೃಪನಿರ್ದನಂದಾ । ಸಂತತಿಯನನವರತತತ್ವವ । ಚಿಂತಿಸುವಬುಧರಂತೆಬಾಹ್ಯಾರ್ಥವನು ಭಾವಿಸದೆ ॥ ಅಂತವಿಲ್ಲದದುಃಖಜಲಧಿಯ । ಲಿಂತುಮುಳುಗಿರಲೊಂದುದಿನವರಿ । ದಂತರಿಕ್ಷವನಿಳಿದನಂಗಿರಮುನಿನಿಜೇಚ್ಛೆಯಲಿ ॥೧೦॥ ದೂರದಲಿಮುನಿಪತಿಯಬರವನು । ದಾಳಮತಿಕಾಣುತ್ತನಿಜಪರಿ । ವಾರಸಹಿತ್ತಿದಿರೆದ್ದುಸಾಷ್ಟಾಂಗಸ್ವಾಗತೋಕ್ತಿಯಲಿ ॥ ಭೂರಮಣನಾಸನವನಿತ್ತು ಪ । ಚಾರವನುನೆರೆಮಾಡಿಹರುಷದ । ಭಾರದಲಿಮೈಯಿಕ್ಕಿದನುಮುನಿಪತಿಯಚರಣದಲಿ ॥ ಎತ್ತಿದನುಮುನಿನೃಪನಮಕುಟದ । ಮಸ್ತಕವಹಿಡಿದೇಳುಕುಳ್ಳಿರು । ಹತ್ತಿರೆಲೆಭೂಪಾಲಚೂಡಾಮಣಿಯೆನಿಸೆನೃಪದ ॥ ಸ್ವಸ್ತಿಯೈಸುಖವೈಸುತಾಪ್ತಕ । ಳತ್ರಪರಿಜನಬಂಧುಜನಸ । ದ್ಭೃತ್ಯಜನಗಣಕೆಂದುಬೆಸಗೊಂಡನುಮಹೀಪತಿಯ ॥೧೨॥ ಹಿತನೆನಡವೈರಾಜ್ಯದಪ್ರಜೆ । ಗಿತರನಾಜ್ಞೆಯಳೈಸ್ವಧರ್ಮ । ಕ್ಷಿತಿಗೆಕಾಮಕ್ರೋಧಲೋಭಾನ್ವಿತಸುನೀನೆನಿಸಿ ॥ ಮತಿಗೆವೈಲಗೆಯಿಲ್ಲವೈನಿಜ । ಸುತರುಪಶವರ್ತಿಗಳೆಹೇಳೆನು । ತತುಳಮತಿಯರಿದರಿದುಬೆಸಗೊಂಡನುಮಹೀಪತಿಯ ॥೧೩॥ ಆನನೆದಶಿರಿಮುನಿನಂತಿರ । ದೇನುಹೇಳೈಮಗನೆಚಿತ್ತ । ಜ್ಞಾನಿಹೇಳೆಂನಾಪೆಹೇಳೆನರಸಹೇಳೆನುತ ॥ ಮಾನನಿಧಿಕೇಳಕ್ಕೆವಿಹ್ವಲ । ಮಾನಸನುತಲೆವಾಗಿಮುನಿಕುಲ । ಭಾನುವಿಗೆಬಿಂನಹವಮಾಡಿದನಂತರವ್ಯಥೆಯ ॥೧೪॥ ಎಲ್ಲವೆನಗುಂಟೆಲೆಮಹಾತ್ಮರೆ । ಬಲ್ಲಹನೆನಿಂನಂತ್ರೆನೆರೆಕೃಪೆ । ಯಳ್ಳವರದಾರಾರ್ತದಲಿಸಚರಾಚರಂಗಳಲಿ ॥ ಇಲ್ಲಮಕ್ಕಳುತನಗದೊಂದೆದೆ । ದಲ್ಲಣವಲಾಪಿತೃರುಣಕೆಹರು । ವಿಲ್ಲರಾಜ್ಯಕ್ಕೊಡೆಯರಿಲ್ಲಿಂನೇವೆನಾನೆಂದೆ ॥೧೫॥ ಅರಿಯದಿರ್ದವೆನಲ್ಲನೀನಿದ । ನುರುವತತ್ವಜ್ಞಾನಿನಿನಗಾ । ನೊರವೆನೇನನುಬಲ್ಲೆಸಚರಾಚರಮನೋಗತವ ॥ ದೊರಕಿದುದುತಂನಿಷ್ಟಫಲವಿಂ । ನಿರದೆಬಿದ್ದೆನುಶೋಕದೊಳಗು । ದ್ಧರಿಸುವುದುಕಾರುಣ್ಯನಿಧಿಕೈಗಾಯಬೇಕೆಂದ ॥೧೬॥ ಧರಣಿಪತಿಯಿಂತೆನೆಲುಕಾಣುತ । ಶಿರವತೂಗಿದನಕಟದುಃಖವ । ಪರಿಹರಿಸಲೆಂದೆಂತುಕೊಡುವೆನುದುಃಖಹೇತುವನು । ಮರೆಳುನೃಪನರಿಯದಿಡೆತಾನದ । ನರಿತಪತ್ಯವಶಿಶುವನೀವೆನೆ । ನಿರುತಬೇಡಿದಡೇನುತಂನೊಳಗೆಂದನಾಮುನಿಪ ॥೧೭॥ ಉರಿಯಲುರಿನಂದುವುದೆರೋಗವ । ಪರಿಹರಿಸುವುದೆರೋಗಿವಿಷಯೋ । ತ್ಕರಗಳಿಂದೀ

ವಿಷಯೋತ್ಕೃಷ್ಟಕ್ಲೇಶವಡಗುವುದೆ ॥ ಮರುಳನೃಪನೀಕೆಡುವೊಡಲನ । ಶ್ವರಸುಖಕೆನಶ್ವರವನಕಟಾ । ನೆರವಬೇಡುವನೇನಮಾಡಲುಬಹುದುತಾನೆಂದ ॥ ೧೮ ॥ ಅನುಭವಿಸಿದವರಲ್ಲದರಿವರೆ । ಮನುಜರೀವಿಷಯಂಗಳಿಂದಹ । ಘನತರಕ್ಲೇಶವನುಕಾಣಲಿಭೂವರಂಗಿದನು ॥ ತನಯರಹಫಲವಿಲ್ಲನೃಪತಿಗೆ । ತನಗೆಕೊಡದಿಹುದುಚಿತವಲ್ಲೆಂ । ದೆನುತಕೊಟ್ಟನುಪುತ್ರಕಾಮದಪಿಂಡವನುಪಡೆದು ॥ ೧೯ ॥ ಕೊಟ್ಟನಾಮುನಿಭೂಮಿಪಾಲನ । ಪಟ್ಟದರಸಿಗೆಪಿಂಡವನುಮಗ । ಹುಟ್ಟುವನುಸಲೆಹರುಷಶೋಕಪ್ರದನುತಾನೆನಿಸಿ ॥ ಸೃಷ್ಟಿಪತಿನಿಗ್ನುತನಮುನಿಬೀ । ಳ್ಕೊಟ್ಟುಬ್ರಹ್ಮನಮಗನುಹಾಯ್ದನು । ದೃಷ್ಟಿಗೋಚರವಲ್ಲದಂತರ್ಧಾನಸಂಸ್ಥಿತಿಗೆ ॥ ೨೦ ॥ ಧರಿಸಿದಳುಗರ್ಭವನುಭೂಪನ । ಹಿರಿಯರಸಿಹೃದಯದಲಿತಾಪವ । ಧರಿಸಿದರುಮಿಕ್ಕವರುರಾಣಿಯರಂದುಮೊದಲಾಗಿ ॥ ಇರಲಿರಲುಸಿತಪಕ್ಷಚಂದ್ರನ । ಪರಿಯಲಾಶಿಶುಬೆಳೆದುದಾಪಂ । ಕರುಹಮುಖಿಸತದಳುಕುಮಾರನನತಿಮನೋಹರನ ॥ ೨೧ ॥ ಚಿತ್ರಕೇತುವಿಗಾಯ್ತುಹರುಷವಿ । ಚಿತ್ರಕೇತುವಿನಂತೆಜನಿಸಲು । ಪುತ್ರನನುಮಿಂದಮಳವಸ್ತ್ರವಿಭೂಷಣವಧರಿಸಿ ॥ ಪುತ್ರನನುನೋಡಿದನುಪುಳಕಿತ । ಗಾತ್ರನಾಗಳೆಹರಸಿಕೊಟ್ಟನು । ಧಾತ್ರಿಯಮರರಿಗುರುಕನಕಮಣಿವಸನಭೂಷಣವ ॥ ೨೨ ॥ ಜೋಯಿಸರಬೆಸಗೊಂಡನಾಯು । ರ್ದಾಯವನುನೋಡಿದರುಲಗ್ನವ । ನಾಯಿತಾಕೇತುದಯಪಂಚಮದಲ್ಲಿರವಿಜನನ ॥ ಜೇಯಚಿತ್ತೃಪೀತನೇಕ । ಲ್ಪಾಯುಸುಖಿಯಹನೆನುತಮಾತಿನ । ಮಾಯೆಯಲಿಮರಳಿದರುಸೂಚಿಸಿಜಾತಕದಫಲವ ॥ ೨೩ ॥ ಕೇಳುಸೌಭದ್ರೇಯಸುತಸುತ । ನೇಳಿಗೆಯನನವರತನೋಡಿವಿ । ಶಾಲಮತಿನೃಪಚಿತ್ರಕೇತುವಿನುತ್ಸವದಮನವ । ಬೀಳಲಿಳೆಗಿಳಿಯಿತ್ತುಮಮತೆಯ । ಕೀಲುಬಲುಹಾತರ್ಭಕನಮೇ । ಲಾಲಿಸನುಮತ್ತೊಂದನರಿಯನುಮಗನಮೋಹದಲಿ ॥ ೨೪ ॥ ಬಡವನತಿಸಾಹಸದಲಾರ್ಜಿಸಿ । ಪಡೆದಧನವನುಮೋಹದಲಿಬ । ಚ್ಚಿಸುವನದನೇತ್ರೆಗದುನೋಡುತಸುಖಿಸುವಂದದಲಿ । ಅಡಿಗಡಿಗೆನೆರದೋಲಗವೃತಂ । ನೊಡನೆನಿಂದಿರೆಧಿಗಿಲನೆದ್ದಾ । ಪೊಡವಿಪತಿಶಿಶುಲೀಲೆಯನುನೋಡುಸನುಹರುಷದಲಿ ॥ ೨೫ ॥ ದಂಪತಿಗಳಾಶಿಶುಹಸಿದಡಾ । ಕಂಪಿಸುವಡುಂಡಾಗಲುಂಬರು । ತಂಪುತಮಗಿದೆನುತ್ತತೆಗೆತೆಗೆದುರದಲಪ್ಪುವರು ॥ ಬೆಂಪುದುರ್ಧರವಾಯ್ತುಸಲಹುವ । ಲಂಪುರನೆಕೊನೆಯೊಯ್ತುನೆತ್ತಿಯ । ಕಂಪನಾಘ್ರಾಣಿಸುವರುರೆಚುಂಬಿಸುವರಾನನವ ॥ ಆಕೃತಗ್ಯುತಿಸತಿಯಮೇಲತಿ । ರೇಕವಾದುದುಮೋಹನೃಪತಿಗ । ನೇಕರಾಣೀವಾಸವಿರ್ದುದುಹಿಡಿದುಮತ್ಸರವ ॥ ವ್ಯಾಕುಲೆಯರೊಂದಾಗಿನುಡಿದರು । ಶೋಕಸಂತಪ್ತೆಯರುತಂಮೊಳ । ಗೇಕಮತಿಯನುಮಾಡಿತಮಗಂದಾದಪರಿಭವವ ॥ ೨೬ ॥ ಕಂಡಿತಾನೀವೆಲ್ಲಮುನಿಪತಿ । ಪಿಂಡವನುತ್ತೊಡೆಲದನುನೃಪತಿಯ । ನಂಡಲದುತಮಗೊಬ್ಬರಿಂಗೆಯುಕೊಡದೆಗರ್ವದಲಿ ॥ ಉಂಡಳೊಬ್ಬಳೆಮಗನಪಡೆದಳು । ಲಂಡೆನಾವೇನುಳಿದರೆಲ್ಲರು । ಹೆಂಡಿರರರಲ್ಲಾನೃಪತಿಗೆಂದಳಲಿನರಾಮತ್ಸರಿಸಿ ॥ ೨೮ ॥ ಮಕ್ಕಳಿಲ್ಲದದುಃಖವೊಂದೆರ । ಡಕ್ರನಲಿಮಗನಾಗಲಾಕೆಯ । ತಕ್ಕೆಯಲಿನೃಪನಿಹುದುಮೂರುಸಪತ್ನಿಗರ್ವದಲಿ ॥ ಲೆಕ್ಕಿಸಳವಜ್ಞೆಯಲಿನಮ್ಮನು । ನಕ್ಕುಹಲವನುಹೇಳಿಫಲವೇ । ನಿಕ್ಕಿದನುಸೆರೆಗಳಲಿನಂಮನೆನುತ್ತಹಲುಬಿದರು ॥ ೨೯ ॥ ಪುತ್ರವಂತೆಯಮಾನೆಯಸಲುಗೆಯ । ತೊತ್ತಿಯರಸುಖವುಂಟೆತೊತ್ತಿರು । ಕೃತ್ಯದವಸಾನದಲಿಪಡೆದರಲಾಮಹಾಸುಖವ ॥ ಮತ್ತೆಬಹುಮಾತೇಕೆತೊತ್ತಿರ । ತೊತ್ತಿರೆಂದತತ್ತಬಾರದು । ಮೃತ್ಯುತಮಗೇಕೆನುತಮರುಗಿಪರೆಂದುಮರುಕೊಳಿಸಿ ॥ ೩೦ ॥ ಭ್ರಷ್ಟಮತಿಗಳುವೈರತಾಪಾ । ವಿಷ್ಟೆಯರುಮರುಗುತ್ತಮಿಗೆಕಂ । ಗೆಟ್ಟುನೋಡದೆಪಾಪಕರ್ಮವಿದೆಂಬುದನುಧಿಟಕೆ ॥ ಕೊಟ್ಟರಾಶಿಶುವಿಂಗೆವಿಷವನು । ಮುಟ್ಟಿದಂಗೈಬೇಯಲೆಂದಾ । ದುಷ್ಟೆಯರುದುರ್ಭಗೆಯರತಿದಾರುಣಚರಿತ್ರೆಯರು ॥ ೩೧ ॥ ಬೀಳುಕೊಂಡುದುಜೀವಗರಳದ । ಘೋಳಸೋಂಕಲುತನುವಕೊಟ್ಟಿಲ । ಬಾಲಕನುಕಡುನಿದ್ದೆಗೈದನುತಾಯಿಮೋಹದಲಿ ॥ ಏಳನೇತಕ್ಕಿಂನುಭಯಕೂಲ । ಪಾಲಕನುಕಡುಹಸಿದನೆಂದಾ । ಬಾಲೆಬೆಸಸಿದಳಂದುದಾಸಿಗೆಮಗನತಾಯೆನುತ ॥ ೩೨ ॥ ತರಳೆಹೋದಳುನೋಡಿಕಂಡಳು । ಮರುಳಿದಾಲಿಯಬಿಟ್ಟಕಂಗಳ । ಕೊರಗಿದಧರದಕಂದಿದಾನನಕಾಂತಿಗಳಬಲಿದ ॥ ಕೊರಳಕೊಂಕಿನಶಿಶುವನಾಕ್ಷಣ । ಮರಿಯೊಳಗೆನಿಂದಂತೆಬಿದ್ದಳು । ಧರೆಗೆಶಿಶುವನುಹಿಡಿದುಕೊಂಡೊರಲುತ್ತಬಸವಳಿದು ॥ ೩೩ ॥ ಏನಿದೆತ್ತಣಮಾರಿಯನುತಾ । ಮಾನಿನಿಯಹುಯ್ಯಲನುಕೇಳುತ । ಸೂನುವಿಂಗೇನಾಯ್ತೊಕೆಟ್ಟೆನೆನುತ್ತಕಳವಳಿಸಿ ॥ ತಾನೆಹರಿತಂದಬಲೆಕಂಡಳು । ಮಾನನಿಧಿನಿರ್ಜೀವನಾಗಿರ । ಲಾನಿತಂಬಿನಿಬಿದ್ದಳೊರಲುತಧರೆಗೆಮೂರ್ಛೆಯಲಿ ॥ ೩೪ ॥ ಅಡವಿಯಲಿಲತೆಕಾಳುಗಿಚ್ಚಿನ । ನಡುವೆಸಿಕ್ಕಿದವೋಲುಮಾನಿನಿ । ಮಡಿದಶಿಶುವನುನೋಡಿಶೋಕಾಗ್ನಿಯಲಿತನುಬೆಂದು ॥ ಪೊಡವಿಯಲಿಹೊರಳಿದಳುಕರತಳ । ಮೊಡೆಯಲುರವನುಹೊಯ್ದುಕೊಳುತವೆ । ಸಡಿಲಿದುಡೆಮಣಿಭೂಷಣಂಗಳಲಬಲೆಮೈಮರೆದು ॥ ೩೫ ॥ ಒರಲುವಬಲೆಯಧನಿಯನಂತಃ । ಪುರದಜನಕೇಳುತ್ತಿದೇನೋ । ಧರೆಯಲಿಲ್ಲದಪೂರ್ವವಾಯ್ತೆಂದಿರದೆಹರಿತಂದು ॥ ಬೆರಸಿದರುಶೋಕಕ್ಕೆಶೋಕವ । ನೆರವನೀವವೊಲಾಕೃತಘ್ನೆಯ । ರೊರಲುತ್ತೈತಂದೊಡನೆಕೆಡೆದರುಬರಿದೆಹಳವಿಸುತ ॥ ೩೬ ॥ ಹರಿದರೋಲಗದವನಿಪಾಲನ । ಚರಣದಲಿಮೈಮಿಕ್ಕಿದೂತರು । ಹೊರಳುತಿರಲೇನಾಯ್ತುಹೇಳಿಯನಕ್ಕೆಸುರಪದವ ॥ ತರುಣನೈದಿದನೆನಲುಕೇಳು । ತ್ತರಿಹೊಡದಸುರತರು

ವಿನಂತಾ । ಧರಣಿಪತಿಮೇದಿನಿಗೆಬಿದ್ದನುಬಿಗಿದುಮೂರ್ಛೆಯಲಿ ॥ ೩೭ ॥ ವಾಲಗದಜನಸಹಿತಪೃಥ್ವೀ । ಪಾಲನೆಡಹುತಬೀಳುತಳಲು । ತ್ತಾಲಯಕೆನಡೆತಂದುಕಂಡನುಮಡಿದಬಾಲಕನ ॥ ಕಾಲಕೆಳಗಡೆಗೆಡಗುಬಹಳ । ಜ್ವಾಲೆಯೊಳುಬಿದ್ದಂತೆಹೊರಳ್ವದ । ನೇಳಗೆಯುಸುತಶೋಕಸಂತಾಪದಲಿತನುಮುಳುಗಿ ॥ ೩೮ ॥ ವಾರುಧಿಯತೂಬುಚ್ಚಿದಂತಾ । ಪಾರಪರಿಜನದೇಶಜನಪರಿ । ವಾರಜನವಾಬಾಲವನಿತಾವೃದ್ಧಜನಸಹಿತ ॥ ಮೇರೆದಪ್ಪಿದುದರಮನೆಯಲಡ । ನಾರುಸಂತೈಸುವರುಕೇಳುವ । ರಾರೆದನುಘನಶೋಕದೇಕಾರ್ಣವದಲೊರಲಾಯ್ತು ॥ ೩೯ ॥ ಇರಲುಭೂಪನದುಃಖವನುತ । ತ್ಪರಿಜನದಪುರಜನದತಾಪವ । ನರಪಿರಾಣಿತಮುಂದೆಮಲಗಿದ್ದರ್ಭಕನುಹೆಣನ ॥ ತರಳೆತಕ್ಕೈಸುತ್ತಧರೆಯಲಿ । ಹೊರಳುತೊಡರುತಹಳವಿಸಿದಳ । ಬ್ಬರದಸುತಶೋಕಗಲಿನುರ್ಬ್ಬೆಯಾಗಿಮನಮರುಗಿ ॥ ೪೦ ॥ ಇಂತುಕಡುಶೋಕದಲಿಭೂಪನ । ಕಾಂತೆಬಾಯುರಳುತ್ತಮೃತಕೋ । ಪಾಂತಗಲಿಪಾಯೆನುತಹಂಮೈಸುತ್ತವಸವಳಿಯೆ ॥ ಕೊಂತವೆದೆಯನುಕೊಂಡವೊಲುಭೂ । ಕಾಂತನಾಪರಿವಾರಪುರಜನ । ಸಂತತಿಗಳೋಲಾಡುತಿರ್ದುದುಶೋಕಜಲಧಿಯಲಿ ॥ ೪೧ ॥ ಇರಲುಬಾಡಿದಸಸಿಗೆಹೆಮ್ಮಳೆ । ಗರೆದವೊಲಸುಹೋದವರಹೊರ । ಗಿರದೆಸ್ಮೃತಸಂಜೀವನಿಯಬರವಿನವೋಭ್ರದಲಿ ॥ ಸುರವರಾರಾಧಿತರುಗಗನೇ । ಚರರುಹೊಗಳಲುರಾಯಕೇಳಾಂ । ಗಿರಸನಾರದರಿಳಿದರಾಲಿಸುತಾಕ್ಷಣದಲಿಳೆಗೆ ॥ ೪೨ ॥ ಪೊಡವಿಪಾಲನಪುತ್ರಶೋಕದ । ನಡುಗಡಲದಾಂಟಿಸಲುಬಹಸಂ । ಗಡದನಾವೆಗಳಂತೆನಾರಾಯಣಪರಾಯಣರು ॥ ಇಡಿದತನುಕಾಂತಿಯಲಿರವಿಕರ । ಕುಡಿತೆಗೊಳಲುಮಹಾನುಭಾವರು । ತಡೆಯದೈತಂದರುನೃಪಾಲನರಾಜಮಂದಿರಕೆ ॥ ೪೩ ॥ ಬಂದುಹೊಕ್ಕನುನೃಪನಶೋಕದ । ಮಂದಿರವನಿಕ್ಕೆಲದಲೊರಲುವ । ಮಂದಿಗಭಯವಕೊಡುತಕರೆತಳಕಮಲವನುನೆಗಹಿ ॥ ಬಂದುಚರಣದಲೆರಗುವವರನು । ನಿಂದುಹರಸುತರಪ್ರೈಸಲಿನಲ । ವಿಂದನೆರೆನಿತ್ಯಾಕುಮನುಗೋಪೀನಾಥಯೆಂದೆನುತ ॥ … … … … … ॥ ೪೪ ॥

ಅಂತು ಸಂಧಿ ೧೩ಕ್ಕಂ ಪದನು ೪೯೯ಕ್ಕಂ ಮಂಗಳಮಸ್ತು.

ಹದಿನಾಲ್ಕನೆಯ ಸಂಧಿ.

ಸೂಚನೆ ॥ ಚಿತ್ರಕೇತುಮಹಾಮುನೀಶ್ವರ । ರಿತ್ತಮಂತ್ರಾನುಗ್ರಹವಭಜಿ । ಸುತ್ತಕಂಡನನಂತನಂಘ್ರಿ
ಸರೋಜವಿಷ್ಟರವ ॥ … … … …

ಪದನು ॥ ಅರಸಕೇಳಾಚಿತ್ರಕೇತುವಿ । ನರಮನೆಯಹೊಕ್ಕಂತೆಕಂಡರು । ವರಮುನಿಗಳಾಹೆಣನಬಳಿಯಲಿಹೆಣನವೋಲಿರ್ದ ॥ ಧರಣಿಪತಿಯನುರಾಣಿಯನುತ । ತ್ಪರಿಜನವಪುರಜನವಘನಸಾ । ಗರದವೋಲೊರಲುತ್ತಹೊರಳುತ್ತಿರಲುಬಳಿಸಿನಲಿ ॥ ಪಳಿದೇನೈಭೂಪಮಾಯಾ । ಜಾಲದಲಿಮತಿಸಿಲುಕಿಬರಿದೇ । ಬೀಳುಗೊಂಡೈಧೀರವೀರರಿಗಳಲುವುದುಪಥವೆ ॥ ಬಾಲಕನುತಾನಾರುನೀನಾ । ರಾಲಿಸದೆಸಂಸಾರಧರ್ಮವ । ನೋಲಗಿಸುವೈಹೆಣನನೆನುತೆಚ್ಚರಿಸಿದರುನೃಪನ ॥ ೨ ॥ ಆರುನೀವೆಲೆತಂದೆಗಳಿರದ । ಯಾರಸಾಂಬುಧಿಗಳಿರಪರಹಿತ । ಕಾರಿಗಳಿರೇತಕ್ಕೆಬಂದಿರಿಪಾತಕಿಯಹೊರೆಗೆ ॥ ಆರನಾಥಂಗಿಂಸುಗತಿಸಂ । ಸಾರಧರ್ಮವೆನಿಪ್ಪುದೇನೆನು । ತ್ತೋರೆಗಂಣಿಲಿನೋಡಿಕಂಡನುವರಮುನೀಶ್ವರರ ॥ ೩ ॥ ಕಂಗಳನುತೆರೆದೊಯ್ಯನೆದ್ದರಿ । ಭಂಗನಾಮುನಿವರರಚರಣಯು । ಗಂಗಳಲಿಮೈಯಿಕ್ಕಿಹೊರಳುತ್ತಶ್ರುಪೂರದಲಿ ॥ ಕಂಗೆಡುತ್ತಿರಲೀಕ್ಷಿಸುತನೃಪ । ಪುಂಗವಂಗಿದನೆಂದನೇಳೆನು । ತಾಂಗಿರಸನಾಶೋಕಸಾಗರಜನನಮಧ್ಯದಲಿ ॥ ೪ ॥ ಅಂದುನಿಂನರಮನೆಗೆಬಂದೀ । ಕಂದನನುಕೊಟ್ಟಾತತಾನೆಲೆ । ತಂದೆಸಂತಾನಾರ್ಥಿಯಾದುದರಾಗ್ರಹವಕಂಡು ॥ ಬಂದುದದುನೀನನುಭವಿಸೆಹೊ । ಲ್ಲೆಂದುನಾತಿನಲೆಂದಡಹುದೈ । ತಂದೆತಾಯಿಗಳಂಗೆಮಕ್ಕಳುಮಾಳ್ಪಸುಖವೆಂದ ॥ ೫ ॥ ಆರಿಗಾರೈಸುಖವಮಾಳ್ಪರ । ದಾರಿಗಾರೈಯಳಲಿಗರುಸಂ । ಸಾರವೀಶ್ವರತಂತ್ರವಲ್ಲೈತಂದೆಭಾವಿಸಲು ॥ ಆರಿಗಾರಾತ್ಮಜರುತಂದೆಯ । ದಾರಿಗಾರೈಜೀವಲೋಕವಿ । ಚಾರವಿಲ್ಲದೆಕೆಡುವನೀನಾರೆಂದನಾಮುನಿಪ ॥ ಬಂದೆನಾನೀತತ್ವವಿದ್ಯೆಯ । ನಂದೆಯುಪದೇಶಿಸಲುನಿನಗೀ । ದಂದುಗಡಲಭಿಲಾಷೆಯಾಗಿರ್ದುದನುಕಾಣುತ್ತ ॥ ತಂದೆಕೊಡುವೆನುಹರುಷಶೋಕವ । ನೆಂದುಹೇಳೆನೆಮರದುಮತ್ತದ । ನಿಂದುಶೋಕಿಸುವೈಯನಲುಮಗುಳೆಂದನಾಭೂಪ ॥ ೬ ॥ ಮರದೆನಾನೈಯಾರುನೀನಂ । ಗಿರನೊವೃಷಭನೊನಾರದನೊಆ । ಸುರಿಯೊಕಪಿಲನೊಭೃಗುವೊಸನಕನೊಮೇಣ್ಸನಂದನನೊ ॥ ಪರಶುರಾಮನೊದೇವಲನೊಶ್ರುತಿ । ಶಿರನೊತ್ರಿತನೊವಶಿಷ್ಠಅಷಂತ । ಮರಕನೋದೂರ್ವಾಸವ್ಯಾಸನೊಶುಕನೊನೀನೆಂದ ॥ ೭ ॥ ರಾಯಮುನಿರೋಮಶನೊಮಾರ್ಕಂ । ಡೇಯನೋಗೌತಮನೊದತ್ತಾ । ತ್ರೇಯನೊಆರುಣಿಯೊಚವನನೊಮೇಣ್ಪತಂಜಲಿನೊ ॥ ಅಯಶೋನಿಧಿಯಾಜ್ಞವಲ್ಕ್ಯನೊ । ಆಯತಿಶ್ರುತದೇವನೊಮೈ । ತ್ರೇಯನೋಕೌಶಲನೊಗಾಲವನೊತ್ರಿತಧ್ವಜನೊ ॥

ಜಾತಕರ್ಣನೊಪಂಚಶಿರನೋ | ಖ್ಯಾತಮುನಿವರರಿವರುಮೊದಲಾ | ದಾತಗಳುಸಂಚರಿಸುತಿಹರೀಲೋಕಹಿತವಾಗಿ || ಅತಗ
ಳೊಳಾರ್ಯೈಯ್ಯನಿಂಮಡಿ | ಯಿತನಾರುಮಹಾತ್ಮಕಂಗಳು | ಸೋತವೀಪ್ರಿಸಲೆನುತಚರಣದಲೆರಗಿದನುಭೂಪ || ೧೦ || ಎತ್ತಿದ
ನುನಸುನಗುತಭೂಪನ | ಮಸ್ತಕವನಾಯಾಂಗಿರಸನುಸು | ರೋತ್ತಮಾರ್ಚಿತಚರಣನೀತನುನಾರದಪ್ರತಿಪ || ಪುತ್ರಶೋಕಾ
ಗ್ನಿಯಲಿನೀಬೇ | ವುತ್ತಿರಲುತಚ್ಛಾಂತಿಕರವಹ | ತತ್ವವಿದ್ಯೆಯನೀಯ್ಯಲೆಂದೈತಂದೆವಾವೆಂದ ||೧೧|| ಹರಿಬವಾರದುತಂದೆ
ಹರಿಪದ | ಶರಣಜನದಾಯಾಸನೋಡು | ತ್ತಿರಬಹುದೆಹರಿಭಕ್ತರಾದವರರಿತುಪೇಕ್ಷೆಸುಲಿ || ಪರಿಭವಕೆನೆಲೆಯಾಗಬೇಡೆಲೆ |
ಪರಮಭಾಗ್ಯಾಧಿಕನೆನೀನಿದ | ಕರುಹನಲ್ಲಿಂದರಿದುತಿಳುಹಲುಬಂದೆವಾವೆಂದ || ೧೨ || ಆರುಶಿಶುವಿಗೆನೀನುಶಿಶುವಿನ | ಗಾರು
ಬರಿದೆವಿವೇಕವಿಲ್ಲದೆ | ಘೋರಸಹಸಂಸಾರಮಾಯಾದುಃಖದೊಳುಮುಳುಗಿ || ವೀರಕೇಳೈತಿಳಿದುನೋಡೆಲೆ | ರೀರಪ್ರೋತಾತ್ಮ
ನೊನಿಜಾತ್ಮಜ | ನಾರುಹೇಳೀಯುರಡರೊಳಗೆನಿಜಾತ್ಮಜನೆಯೆಂದ || ೧೩ || | ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ||
ವೀರಕಾಣುತ್ತೇತಕಳುವೆ | ಶರೀರವಾತ್ಮಜನಾದದಾತ್ಮನ | ನಾರುಕಂಡವರಾತ್ಮನಾತ್ಮಜನೆಂಬಡಿದಿರಿನಲಿ || ಆರುಕಾಣದವಸ್ತು
ಕಾಣದ | ಡಾರಳುವರಡಕೆರಡರಲಿಮಮ | ಕಾರಮುಂನವೆಯಿಲ್ಲಶೋಕವಿದೇಕೆನಿನಗೆಂದ || ೧೪ || ಹಳೆಯನುಳಿದುಹೊಸದು
ದಾತನು | ಬಳಸುವಂತಿರೆಜೀರ್ಣದೇಹವ | ನುಳಿದುಜೀವನುಧರಿಸುವನುಮತ್ತೊಂದುದೇಹವನು || ಅಳಿದದೊಡಲಳುವಿಲ್ಲದಾ
ತುಮ | ನಳಿಯಲರಿವನೆಬರಿದೆಮಾಯೆಗೆ | ಹೊಲಬುಗೆಟ್ಟಳುತ್ತಲಿಹುದೀಮೂಢಜನವೆಂದ || ೧೫ || ಹೇಳದಳುವೀಪರಿಯಲೀ
ಗೃಹ | ಲಲನೆಪಶುಧನಕೋಶರಾಜ್ಯ | ಮಳಸುಹೃಜ್ಜನಬಂಧುಜನಪರಿವಾರಭೃತ್ಯಜನ || ಸಲೆವಿನಶ್ವರವಖಿಳವಿಷಯಾ | ನಳಿ
ಯಿದೆಂತೆಂಪಳಿಯದಾತ್ಮನ | ನೆಲೆಯನರಿದುವಿಶೋಕನಾಗೆಲೆತಂದೆನೀನೆಂದ || ೧೬ || ಶೋಕಮೋಹಭಯಾಪಹಂಗಳ | ಲೇಕೆ
ಮಮಕರಿಸುವೆವ್ಯಥಾಸ್ವ | ಪ್ನಾಕೃತಿಯುವೋಲಳಿದುಹೋಹಶರೀರಸುಖಗಳಲಿ || ಶೋಕಿಸಿದಡೈತಹನೆಧಿಪಪರ | ಲೋಕಕೈದಿ
ದಮಗನುಮನದವಿ | ವೇಕವಾಯೆಗೆಮಾರುವೋದುದೆಮಗನೆನಿನಗೆಂದ || ೧೭ || ಅದುನಿಮಿತ್ತಧ್ಯವಪ್ರದುಃಖ | ಪ್ರದವಿದಾ
ತ್ಮಂಗಿದರಸಂಸಾ | ರದಲಿನಾನಾಯೋನಿಜನನಕ್ಲೇಶಸಂತಾಪ || ಉದಿಸುವುದುತಿಳಿವಂನೆಗಾತ್ಮನ | ಪದವನದರಿಂದರಿತುಶೋ
ಕಾ | ಸ್ಪದವೆನಿಪವಿಷಯದಲಿಬಿಡುಮೋಹವನುನೀನೆಂದ || ೧೮ || ಘೋರಸಂಸಾರವಿದುತರೋರ್ಪ್ರದು | ಭೂರಿಮಮಕಾರದಲಿ
ಮಮತೆಯ | ತೂರಿದರೆಬಳಿಕಿಲ್ಲನಿರಹಂಮಮನುತಾನಾಗಿ || ತೋರಬಲ್ಲುದೆಸುಪತಿಮೂರ್ಛೆಯ | ಲಾರುಕಂಡರಹಂಮಮತೆ
ಗಳು | ಜಾರಿರಲುಮುಕ್ತಂಗೆದುಃಖವದಿಲ್ಲಕೇಳೆಂದ || ೧೯ || ತೆಂನಲಿದ್ದಂನಗವೆತಂನರ | ನಂನ್ಯರಿಗೆಕೊಡಲಂನ್ಯರದುಮಗು |
ಳನ್ಯರನ್ಯರಿಗೀಯ್ಯಲವರದರದುವೆತಾನೆನಿಸಿ || ಹೊಂನುಸುಳಿದಾಡುವವೊಲಾತ್ಮನು | ನಿಂನವನೊತಂನವನೊವೊಡಲು | ಕ್ಷೆಂ
ನೆಗವರಿವರಿಂಗೆಮಮತೆಗೆವಿಷಯನಹನೆಂದ || ೨೦ || ಭೂರಮಣಕೇಳ್ಭೋಜನೆಂಬಮಹೀ | ರಮಣನೊಬ್ಬನುಕನಸಿನ
ಲಿ | ವೈರಿಬಲವಾವರಿಸಿನಿಜಬಲವಾಹನಂಗಳನು || ಸೂರೆಗೊಂಡುಸುಧನವನುರುಭಂ | ಡಾರವನುರಾಜ್ಯವನುತಂನಯ | ನಾರಿ
ಯರನಾಕ್ರಮಿಸಿತಂನನುಕೊಂದುದನುಕಂಡ || ೨೧ || ಕಂಡುಮೈ್ಮನಟನೆಡುಗಿಧರೆಯಲಿ | ದಿಂಡುಗೆಡೆದನುಮಂಚದಿಂದೆಡೆ |
ಗೊಂಡಸಂತಾಪದಲಿಕಳವಳಸುತ್ತಕಂದೆರದು || ಕಂಡನೀಪರಿನೆನಸಿನಂನಯ | ಖಂಡಶಿರಿಯಿದುಕಾಲಚಕ್ರಾ | ಖಂಡಿತವಲಾ
ಯೆನುತಬಿಸುಟನುರಾಜಸಂಪದವ || ೨೨ || ಬಿಟ್ಟುಹೆಂಡಿರುಮಕ್ಕಳನುಗಡಿ | ಗೆಟ್ಟಭಂಡಾರವನುರಾಜ್ಯದ | ಪಟ್ಟದೈಶ್ವರ್ಯವ
ನುಮಾನುಷವೆನಿಪಭೋಗವನು || ನೆಟ್ಟನೀಕನಸಿನವೊಲೆಂದಳ | ವಟ್ಟವೈರಾಗ್ಯದಲಿಸುಡುಸುಡು | ಕಷ್ಟವಿಷಯವನೆನುತ
ಹೊರವಂಟನುನಿಜಾಲಯವ || ೨೩ || ದಂದ್ವವನುಕೆಡೆಯೊದೆದುವಿಷಯದ | ದಂಡುಗವನೀಡಾಡಿಪರಮಾ | ನಂದಪದದಲಿನಿಂದು
ನಿಶ್ಚಯವಾಗಿಸುಖಿಯಾಗಿ || ಸಂದನಪುನರ್ಭವಕೆಭೋಜನೃ | ಪೇಂದ್ರನಿದಿರನುಮರೆದುಚಿನುಮಯ | ನೆಂದೆನಿಸಿಕಳೆವರವನು
ಳಿದುನೃಪಾಲಕೇಳೆಂದ || ೨೪ || ಅರಸನೀನದರಿಂದಮಾಯಾ | ವಿರಚಿತಭ್ರಾಂತಿಯನುನೆರೆಪರಿ | ಹರಿಸಿತನುವಾನೆಂಬಗೃಹಪ
ಶುಪುತ್ರರೆಸೆಗೆಂಬ || ಮರುಳುತನವನುಬಿಟ್ಟುಹರಿಪದ | ಸರಸಿರುಹಮರೆಯೊಕ್ಕುನಿಜಸುಖ | ಭರಿತನಾಗೆಂದವನಿಪತಿಯನುತಿ
ಳುಹಿದಮುನಿಪ || ೨೫ || ಇರಲುನಾರದಮುನಿಪನಾನೃಪ | ವರನೆತತ್ಪರಿವಾರಪುರಜನ | ಪರಿಜನದಶೋಕವನುಕಾಣುತ
ಪರಮಹರುಷದಲಿ || ಕರದನಾಜೀವಾತ್ಮನನುಕಳೆ | ವರವಹಿಡಿನಿಜಮಾತೃಪಿತೃಗಳ | ನಿರದೆಸಂತವಿಶೀಳುನಿಂದಿರೆನುತ್ತನೇಮಿ
ಸಿದ || ೨೬ || ಅರಸಕೇಳೆಂತುಟೆಮಹಾತ್ಮನ | ನಿರುಪಮಾಜ್ಞಾಶಕ್ತಿತನುಜೇ | ತರಿಸುತಸುಪಸರಿಸಿತುಕರಚರಣಂಗಳಾಕ್ಷಣ
ಕೆ || ಅರಳಿದುದುಮುಖಕಮಲನೋಡುವ | ನೆರವಿಬೆರಗಾಗುತ್ತಲಿರೆಕಂ | ದೆರದುಕುಳ್ಳಿರ್ದನುಕುಮಾರನುಕೊಡೆಮೈಮುರಿ
ದು || ೨೭ || ಜಗವ್ರುಘೇಯಂದುದುಮಹಾದ್ಭುತ | ತಗದುದಂತರ್ಮಾನವವೊಗವನು | ನಗಹಿನೋಡುವನಟ್ಟನೋಟದತ್ರೂನ
ವಮಾಳ್ಗಗಳ || ಮಗುವಿನಾಳಾಪವನುಕೇಳ್ಪಲು | ಬಗಿದುಕವಿವಜನಾಘವನುಯೇ | ಗಿಗಳರಸನಿಲಿಸುತ್ತಮಾತಾಡಿಸಿದನಾ
ಶುವ || ೨೮ || ನೋಡುನಿಂನಯತಂದೆಯನುಮಾ | ತಾಡುತಾಯನುಸಂತವಿಸುನೆರೆ | ಬಾಡುತಿದೆಜನನಿವಹನಿಂನಗಲಿಕೆಯ

ಬೇಗೆಯಲಿ ॥ ನಾಡಸಂಪತ್ತೈಶ್ವರ್ಯರಾಜ್ಯವ । ಮಾಡುಬಾಂಧವರಿಂಗೆದುಃಖವ । ಮಾಡದಿರುಸಂತವಿರುನೀನೆನಲೆಂದನಾಮುನಿ
ಪ ॥ ೨೯ ॥ ಆರುಹೇಳ್ವೆಮುನಿಪತಂದೆಯು । ದಾರುತಾಯ್ಧಿಟಬಂಧುಜನವೇಂ । ದಾರಸಂತವಮಾಡುವೆನುತಾನಾರರಾಜ್ಯವಿದು॥
ಆರುತಾನಿವರಿಂಗೆಸಲೆಸಂ । ಸಾರಚಕ್ರದಯೋನಿಶತದಲಿ । ಭೂರಿಕೃತಕರ್ಮದಲಿತಿರುಗುವತಾನದಾರೆಂದ ॥ ೩೦ ॥ ದೇವಮು
ನಿಚಿತ್ತವಿಸುತನಗಿವ । ರಾವಜನ್ಮದತಾಯಿತಂದೆಗ। ಳಾವಜನ್ಮದಬಂಧುಗಳುಬಹುಯೋನಿಶತಗಳಲಿ ॥ ದೈವವಶದಲಿತಿರುಗುವೀ
ಜೀ । ವಾವಳಿಗಳಲಿಮಮಕರಿಸಬಹು । ದಾವನೆಂನವರನ್ಯರೆಂದಲೆಮುನಿಪಹೇಳೆಂದ ॥ ೩೧ ॥ ಎಲ್ಲಿತಾನೇಯೀಸುದಿನವಿಹ। ನಲ್ಲಿ
ಹುಮಮತೆಯುವೈಸುದಿನವಹುಂ । ನಿಲ್ಲಬಳಿಕಿಲ್ಲವರಿಗಾತ್ಮನಿಗಾತ್ಮನವರೊಳಗೆ ॥ ಬಲ್ಲಿದನಲಾಕಾಲನೀಜಗ । ವೆಲ್ಲಪನುತಂಸೃಷ್ಟಿಯಲಿ
ನಿಂ । ದಲ್ಲಿನಿಲಲೀಸನುಸದಾತಿರುಗಿಸುತಲಿಹನೆಂದ ॥ ೩೨ ॥ ನಿತ್ಯನವ್ಯಯನೇಕನಕ್ರಿಯ । ನತ್ಯಧಿಕಸೂಕ್ಷ್ಮನನಿಂದ್ರಿಯ। ವ್ಯತ್ತಿ
ಗವ್ಯನನನ್ಯನಮಳಾನಂದಸನುಮಾತ್ರ ॥ ಹೊತ್ತುತನುಭೂವವನುಭವದಲಿ । ಸತ್ತುಹುಟ್ಟುತಹುಟ್ಟಿಸಾವುತ। ತತ್ವವನುತಿಳಿವಂ
ನೆಗಾತ್ಮನುತೊಳಲುತಿಹನೆಂದ ॥ ೩೩ ॥ ಎಲ್ಲತಾನೇತಿಳಿದಡನ್ಯರೆ । ಯಿಲ್ಲಪ್ರಿಯಹಿತಬಾಂಧವರುತನ । ಗಿಲ್ಲಪಿತೃಮಾತೃಗಳುಸಹ
ಜಸಖಿಪ್ರಿಯಾತ್ಮಜರು ॥ ಎಲ್ಲಮಾಯೋಪಾಧಿಭೇದವಿ। ದಲ್ಲದಾಳಿದಂಶಂಗಳೇನೊ । ಇಲ್ಲಕೆನಸಿನವಿಕೃತಿಗಳವೊಲೆಂದನಾಜೀವ॥
ಧನ್ಯನಾದೆನುಮುನಿಪವರಮುಖ್ಯ । ಮಾನ್ಯವನೆನಿಂಮಡಿಯಚರಣದ । ಸಂನಿಧಿಯದರೊಳನದಭಾಗ್ಯವಿದಾಯಿತಲಾತನಗೆ ॥ ಉಂ
ನತೋಂನತಗತಿಗೆತಾನುಪ । ಸಂನನಾದೆನುಬೀಳುಕೊಡುವುದು । ತಂನನೆನುತ್ತೈದಿದನುಜೀವಾತುಮನುನಿಜಗತಿಗೆ ॥ ೩೫ ॥
ಎನಲುಜೀವನನುಡಿಗೆಜನಪತಿ । ಜನನಿಪರಿಜನಪೌರಜನತನ । ತನಗೆವಿಸ್ಮಿತರಾಗಿಮರೆದರುಬಹಳಶೋಕವನು ॥ ಇನಿತುಬು
ದ್ಧಿವಿವೇಕಶಿಶುವಿಗೆ । ಜನಿಸಿತೇಮುಗ್ಧಭಾವನಮಗೀ । ಮನದಮಮತಾಭ್ರಾಂತಿಬಿಡದೆಂದುದುಜನಸ್ತೋಮ ॥ ೩೬ ॥ ಬಂದು
ಮುನಿವರರಂಘ್ರಿಕಮಲ । ದ್ವಂದ್ವದಲಿಮೈಯಿಕ್ಕಿದರುಜನ । ವೃಂದನಮಗಿಂನೇನುಗತಿಕರುಣಿಸುವುದೀಭವದ ॥ ದಂದುಗವಕ
ಳವಂದವೆಮಗೆಂ । ತೆಂದುಬಿಂನಹಮಾಡಲವರನು । ಮಂದಹಾಸದಲೆತ್ತಿಸಂತವಿಸಿದರುಪರಿಜನವ ॥ ೩೬ ॥ ನೆನವುತಿಹುದೆಲ್ಲವರು
ಕರುಣಾ । ವನಧಿಯನುನೀವೆನುತಬಳಿಕಾ । ವನಿತೆಯರಿಗೆಮಹಾಘನಿಷ್ಕೃತಿಯು ॥ ಮುನಿಗಳುಪದೇಶಿಶಿದರಂದಾ । ಜನಪನನು
ಕರದೇಳುಪುತ್ರನ । ತನುವಸಂಸ್ಕರಿಸೀಗಳಂತಿರೆವಿಂದುಬಹುದೆಂದ ॥ ೩೮ ॥ ಎದ್ದನಾಸುತಶೋಕಸಾಗರ । ಕರ್ದಮದಲೊಡೆ
ಬಿದ್ದಭೂಪತಿ । ಭದ್ರಗಜದಂದದಲಿಪುರಜನಪರಿಜನವುಸಹಿತ ॥ ಕದ್ದುಹೋದವನೊಡಲನಾವಿಧಿ । ವಿದ್ಯಮಾನದಲಾಚರಿಸಿಜನ।
ಹೃದ್ಯಸಂಸ್ಕಾರದಲಿಸೇರಿಸಿದರುಸರಾಗದಲಿ ॥ ೩೯ ॥ ವಿಂದುಪರಿಜನಸಹಿತವರಕಾ । ಳಿಂದಿಜಲದಲಿದೇವರುಷಿಮುನಿ । ವೃಂದ
ವನುತರ್ಪಿಸಿಮುನೀಶ್ವರರಂಘ್ರಿಕಮಲದಲಿ ॥ ಬಂದುಮೈಯಿಕ್ಕಿದನುತಂನನು । ತಂದೆಗಳುರುದ್ಧರಿಸಬೇಹುದು । ಮಂದಮತಿ
ಯನೆನುತ್ತಬಿಂನಹಮಾಡಿದನುಭೂಪ ॥ ೪೦ ॥ ಅರರೆಧನ್ಯನುತಾನಲಾಗೋ। ಚರವೆನಿಂಮಡಿಹಲವುಜನ್ಮಾಂ । ತರದಪರಮೇ
ಶ್ವರನಪೂಜಾಫಲವಿದಲ್ಲಡೆ ॥ ದೊರಕಲರಿವುದೆನಿಂಮಕರುಣವೆ । ಹರಣವೆನಗಿಂನಾವುದರಿದೆಂ । ದರಸನಂಘ್ರಿಗೆತನುವನೀಡಾಡಿದ
ನುಮುನಿವರರ ॥ ೪೧ ॥ ಎತ್ತಿದರುಕೈನೀಡಿಭೂಪನ । ಮಸ್ತಕವನೇಳೇಳುನಿರ್ಮಳ । ಚಿತ್ತನಾದೈಬಾಮಗನೆಬಾತಂದೆಯೆ
ನುತ ॥ ಹತ್ತಿರಕೆಕರದೊಂದುವಿದ್ಯೆಯ । ನಿತ್ತಪೆವುಕೊಳ್ಳೆನುತಕರುಣಾ । ಮೂರ್ತಿಗಳುಕರುಣಿಸಿದರುತ್ತಮಮಂತ್ರವನುಸ್ವ
ಪಗೆ ॥ ೪೨ ॥ ಪೊಡವಡುವೆನೆಲೆವಾಸುದೇವನೆ । ಪೊಡವಡುವೆಪ್ರದ್ಯುಮ್ನನಿನಗಾಂ । ಪೊಡವಡುವೆನನಿರುದ್ಧಸಂಕರುಷಣನೆನಿ
ನಗಾನು ॥ ಪೊಡವಡುವೆವಿಜ್ಞಾನಮೂರ್ತನೆ । ಪೊಡವಡುವೆನಾನಂದಮೂರ್ತಿಯೆ । ಪೊಡವಡುವೆನೆಲೆಯಾತ್ಮರತನೆನಿವೃತ್ತವಿ
ಭ್ರಮನೆ ॥ ೪೩ ॥ ಪೊಡವಡುವೆನಾನಂದದನುಭವ । ದೊಡಲೆದೂರೀಕೃತಷಡೂರ್ಮಿಯೆ । ಪೊಡವಡುವೆನಿಂದ್ರಿಯಗಣೇಶನೆವ
ರಮಹೋತ್ತಮನೆ ॥ ಪೊಡವಡುವೆನಾನಂದಶಕ್ತಿಯೆ । ಪೊಡವಡುವೆನೈಶ್ವರ್ಯಮೂರ್ತಿಯೆ । ಪೊಡವಡುವೆನೆಲೆಪರಮನೋವಾ
ಗ್ವೃತ್ತಿಲಕ್ಷಿತನೆ ॥ ೪೪ ॥ ಪೊಡವಡುವೆನುದ್ಭವಲಯಸ್ಥಿತಿ । ಗೊಡೆಯನೇಮಾಜಗದಕರ್ತೃವೆ । ಪೊಡವಡುವೆನಿಖಿಳಾತ್ಮನೇ
ಪರಬ್ರಹ್ಮವಿಗ್ರಹನೆ ॥ ಪೊಡವಡುವೆನಿಂದ್ರಿಯಗಣಂಗಳ । ಗಡಣಹೊದ್ದದಹೊರೆಯದಾತ್ಮನೆ। ಪೊಡವಡುವೆನಿಂದ್ರಿಯಮನೋ
ಬುದ್ಧಿಗಳಚೇತನನೆ ॥ ... ... ॥ ೪೫ ॥

ಮಂತ್ರ ॥ ಓಂನಮೋಭಗವತೇ ವಾಸುದೇವಾಯ, ಮಹಾಪುರುಷಾಯ, ಮಹಾವಿಭೂತಿಪತಯೇ, ಸಕಲಸಾತ್ವತಪರಿ
ವೃಢನಿಕರ ಕರಕಮಲ ಕುಟ್ಮಲೋಪಲಾಲಿತ ಚರಣಾರವಿಂದಯುಗಳ ಪರಮೇಷ್ಠಿ ನಮಸ್ತೇನಮಸ್ತೇನಮಸ್ತೆ ॥

ಪದನು ॥ ಇಂತುಭಜಿಸುತಮಂತ್ರವನುಭೂ । ಕಾಂತಮನದಲಿವಾಸುದೇವನ । ನಂತಗುಣಗಣದಿವ್ಯಮಂಗಳಮೂರ್ತಿ
ಯನುಬಿಡದೆ ॥ ಚಿಂತಿಸುವುದೆಲೆಮಗನೆಮಗನನು । ಚಿಂತಿಸುವಮನದಿಂದಲಕ್ಷ್ಮೀ । ಕಾಂತನೀವನಭೀಷ್ಟಸಿದ್ಧಿಯನೆಂದನಾಮು
ನಿಪ ॥ ೪೬ ॥ ಕೆಡುವವಿಷಯಸುಖಕ್ಕೆಮನವನು । ಕೊಡದೆಕೆಡದಾನಂದವಿಗ್ರಹ । ನಡಿಗಳನುನೆನವುತ್ತಲಿರುನಿರಪೇಕ್ಷೆಯಿಂದೆ
ನುತ ॥ ಪೊಡವಿಪತಿಯನುಸಂತವಿಶಿತಲೆ । ದಡವಿಸುಖಿಯಾಗೆನುತನಾರದ । ನಡರಿದನುಸುರಪಥವನಾಂಗಿರಸಮುನಿಪನುಸಹಿತ ॥

ಪುತ್ರಶೋಕಸಂತಾಪವನದಿ। ಸುತ್ತರಿಷಿಮುನಿವರರ ಕೃಪೆಯಲಿ। ಚಿತ್ರಕೇತು ತದುಕ್ತಮಂತ್ರಂಗಳನು ಜಪಿಸುತ್ತ॥ ಸಪ್ತರಾತ್ರಿಗಳತಿಗವಿಸೆ ಭೂ। ಪೋತ್ತಮನು ಕಂಡನು ಮಹೋರಗ। ಮೂರ್ತಿಯ ಹನಿತ್ಯಾತ್ಮಗೋಪೀನಾಥನಂಘ್ರಿಗಳ॥ ॥೪೮॥

ಅಂತು ಸಂಧಿ ೧೮ಕ್ಕಂ ಪದನು ೫೩೨ಕ್ಕೆ ಮಂಗಳಮಸ್ತು.

ಹದಿನೈದನೆಯ ಸಂಧಿ.

ಸೂಚನೆ॥ ಶಂಕರನವಲ್ಲಭೆಯ ಶಾಪವ। ಶಂಕೆಯಿಲ್ಲದೆ ಧರಿಸಿ ಪಡೆದನು। ಸಂಕರುಷಣನದಾಸನಾಸುರಜನ್ಮದಲಿ ನಿಜವ॥ ... ...

ಪದನು॥ ಅರಸ ಕೇಳೀನರಿದು ವಿಶ್ವಂ। ಭರನೊಲಿದ ಮರ್ತ್ಯರಿಗೆ ತತ್ಪದ। ಶರಣರೊಲವೊದಗೂಡಿದಾತದ್ಭೃತ್ಯಭೃತ್ಯರಿಗೆ॥ ಪರಮಋಷಿಗಳನುಗ್ರಹವನೆರೆ। ಧರಿಸಿ ಭಜಿಸುತ್ತೇಳುದಿನಕಾ। ಧರಣಿಪತಿ ಸಂಕರುಷಣನ ಪದಕಮಲವನು ಕಂಡ॥೧॥ ನೀಲದಿವ್ಯಾಂಬರದ ಚಾರುಮೃ। ಣಾಳಕಾಂತಿಯ ಸುಪ್ರಸನ್ನವಿ। ಶಾಲನಯನದ ದಂತಪಙ್ಕ್ತಿಯ ಕೋಮಲಾಧರದ॥ ಸ್ಥೂಲರತ್ನಾಂಗದ ಕಿರೀಟದ। ಮೌಳಿರತ್ನಾಳಿಗಳಲೀಪಾ। ತಾಳವಿವರಂಗಳನು ಬೆಳಗುವನಂತನನು ಕಂಡ॥೨॥ ಹಾರಕಂಕಣಕುಂಡಲಂಗಳು। ದಾರತೇಜದ ತೋಳುಗಳಗಂ। ಭೀರನಾಭಿಯ ರತ್ನಕಾಂಚೀವಲಯಭೂಷಣದ॥ ಚಾರುಚರಣಾಂಬುಜದ ಭಕ್ತರ। ಭೂರಿಭಾಗ್ಯದ ನಿಧಿಯನಾ। ಪರಿವಾರಸಿದ್ಧೇಶ್ವರರ ಸಭೆಗಳೆಸೆವುತಿರೆ ಕಂಡ॥೩॥ ಅಸಮಸೌಹಾರ್ದದಲಿ ನಿಜಪದ। ವಿಸರುಹದ ಸೀತಂಗಳನು ಪೂ। ಜಿಸುವುರಗಕನ್ನೆಯರನಾ ನಿಜಭಕ್ತಸಂತತಿಯ॥ ಒಸದು ಕರುಣಾಪಾಂಗದಿಂದೀ। ಕ್ಷಿಸುತ ಸುರವರಮಧ್ಯದಲಿರಂ। ಜಿಸುವ ವಿಮಲಬ್ರಹ್ಮವಿದ್ಯಾಮೂರ್ತಿಯನು ಕಂಡ॥೪॥ ಪರಮಮಂತ್ರವ ಧರಿಸಿ ವಿದ್ಯಾ। ಧರಪತಿತ್ವವ ಪಡೆದು ಪರಮೇ। ಶ್ವರನೆನಿಪ ಸಂಕರುಷಣನ ಪದಕಮಲವನು ಕಂಡು॥ ಕರಗಿದನು ಕರಮುಕುಳಮುದ್ರಿತ। ಶಿರನೆನಿಸಿ ಜಯಜಯಕೃಪಾಸಾ। ಗರನೆ ಜಯಜಯನುತ್ತೊಡಲನೀಡಾಡಿದನು ಧರಣಿಯಲಿ॥೫॥ ಅಡಿಗಡಿಗೆ ಕೈಯೆತ್ತಿ ಜಯಜಯನು। ತ್ತೊಡಲನೀಡಾಡುತ್ತ ಧರಣಿಗೆ। ಕಡಲಿಡುವ ನಯನಾವೃತಾನಂದಾಶ್ರುಪೂರದಲಿ॥ ಅಡಿಗಳನು ನಾದಿದನು ಪುಳಕಂ। ಬಡೆದು ಕೊಬ್ಬಿದ ಕೊರಳ ಶರೆಯಲಿ। ನುಡಿಯಡಗಿ ಮೈಮರೆದು ತನ್ಮಯನಾದನವನೀಶ॥೬॥ ನೋಡಲರಿದಾಯ್ತೊಗುವ ಬಾಷ್ಪದ। ಮೂಡಿಗೆಯ ಕಂಗಳಲಿ ಸಂಸ್ತುತಿ। ಮಾಡಲರಿದಾಯ್ತಾಸ್ಖಲಿತಾಕ್ಷರಲುಪ್ತವಚನದಲಿ॥ ನೀಡಿ ತೋಳ್ಗಳಲಪ್ಪಿ ಪದವನು। ಕೂಡೆ ಕಂಗಳಜಲವನೊರಸುತ। ಚಾಡಿಬಳುಕುತ್ತಿರ್ದನೀಕ್ಷಿಸಿ ತನ್ಮುಖಾಂಬುಜವ॥೭॥ ನಿಂದು ನೃಪಕುಲತಿಲಕ ಸೊಯ್ಯನೆ। ತಂದೆಯಿದಿರರ್ಭಕನವೋಲಾ। ನಂದಪರವಶನಾಗಿ ತರಹರಿಸುತ್ತ ಕೈಮುಗಿದು॥ ಕಂಡಣಿಯಕನುನೀಯ ಮೂರ್ತಿಯ। ಯಂದವನು ನೋಡುತ್ತ ಸುರವರ। ವಂದ್ಯನಂಘ್ರಿಯ ಸಂಸ್ತುತಿಯ ಮಾಡಿದನು ಮನವೊಲಿದು॥೮॥ ಜಯಜಯಾಶೇಷಾಶ್ರಯಾಂಘ್ರಿಯೆ। ಜಯಜಯಾಶ್ರಿತಭವಹರಾಂಘ್ರಿಯೆ। ಜಯ ಸುರಾಸುರಪೂಜಿತನೆ ಸಜ್ಜನಸಭಾಜಿತನೆ॥ ಜಯ ಮನೋಹರದಿವ್ಯಮೂರ್ತಿಯೆ। ಜಯಜಯಾಹವಪುಣ್ಯಮೂರ್ತಿಯೆ। ಜಯತು ಜಯಜಯಜಯ ನಮೋಸ್ತು ನಮೋಸ್ತು ತೇಯೆಂದ॥೯॥ ಸ್ತೋತ್ರದೀಪನವಾರಿಗವರಿಗೆ। ಸ್ತೋತ್ರ ನೀನೆಸೆ ದೇವದೇವನೆ। ಸ್ತೋತ್ರರಾಪರು ನಿನಗೆ ನಿನ್ನಯ ಗುಣಗಣಂಗಳಿಗೆ॥ ಆತುವ ನಿನ್ನೇಧ್ಯನನು ಮಾಳ್ಪರಿ। ಗಾತುಮಪ್ರಸನೀನಪ್ಪಪರ। ಮಾತುಮನೆ ನಿನ್ನಂತೆ ಭಕ್ತಪ್ರಿಯರದಾರೆಂದ॥೧೦॥ ಜಗದುದಯಸಂಸ್ಥಾನರಕ್ಷಾ। ದಿಗಳು ನಿನ್ನಯ ವಿಭವಮಾತ್ರೀ। ಜಗವ ಸೃಜಿಸುವ ವಿಶ್ವಸೃಕ್ಕುಗಳಂತಭೂತನಲ॥ ಬಗವಡಾವೇವೊಡೆಯರೆಂಜೇ। ಜಗಕೆ ಪೃಥುಗಭಿಮಾನದಲಿ ಮರುಳುಗಳು ನೀವಿರಲೊಡೆಯರುಂಟೇ ಬೇರೆ ಜಗಕೆಂದ॥೧೧॥ ॥ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ॥

ಆದಿಮಧ್ಯಾಂತಂಗಳಿಲ್ಲದ। ನಾದಿಮೂರುತಿ ನೀನೆ ಪರಮಾ। ಣ್ವಾದಿ ಪರಮಮಹತ್ತು ಕಡೆಯಾದೀಜಗತ್ರಯಕೆ॥ ಆದಿಮಧ್ಯಾಂತಂಗಳಾಮಹ। ದಾದಿ ವಿಶ್ವವು ನೀನೆ ತುದಿನೊಡ। ಲಾದವಸ್ತುವೆ ಮಧ್ಯವಲ್ಲದೆ ಬೇರೆ ದೇನೆಂದ॥೧೨॥ ದಶಗುಣೋತ್ತರವೆನಿಪ ತತ್ವ। ಪ್ರಸರವೇಳೋರಂತೆ ಪರಿವೇಷ್ಟಿಸಿದ ಜಾಂಡಕಟಾಹಕೋಟಿಗಳಾವನುದರದಲಿ॥ ನುಸಿಗಳಂತಿಹವದು ನಿಮಿತ್ತವೆ। ಪೆಸರು ಪಡೆದುದನಂತನೆಂಬೀ। ಹೆಸರು ನಿನ್ನಡಿಯಲ್ಲದಾರಿಂಗಳವಡುವುದೆಂದ॥೧೩॥ ಪರಮಪುರುಷನೆ ನಿನ್ನ ಭಜಿಸದೆ। ಬರಿದೆ ಭಜಿಸುವರಿತರದೈವವ। ನುರುವಿಷಯಕಾಮಿಗಳು ಕೆಡುವೊಡಲಳಿಸುಖಕ್ಕೆಳಸಿ॥ ನೆರೆ ಸಕಾಮದಲಾದರೆಯುದೇ। ವರಭಜನೆ ಮೋಕ್ಷಕ್ಕೆ ಕಾರಣ। ಹುರಿದ ಸೊಕ್ಕಿದ ಬೀಜವಂಕುರಿಸುವುದದೆಂತೆಂದ॥೧೪॥ ಅಂದೆ ನಿಜಪದಭಕತರಖಿಳ। ದ್ವಂದ್ವವನು ಗೆಲಿದವರು ನೀನೊಲಿ। ದಿಂದು ಕೃಪೆ ಮಾಡಿಹೆ ಮಹಾಭಾಗವತಧರ್ಮವನು॥ ದಂದುಗಂಬಡುತಿಹುದು ಜಗವದ। ರಂದವನು ತಿಳಿಯದೆ ಮೃಥಾಶ್ರಮ। ದಿಂದ ವಿಷಮಮತಿಪ್ರಚೋದಿತಧರ್ಮವನು ಮಾಡಿ॥೧೫॥ ದೇಹಭಾವವ ಬಿಡದೆ ಭೂತ। ದ್ರೋಹದಲಿ ವಿರಚಿಸಿದ ಧರ್ಮವ। ದೈಹಿಕಾಮುಷ್ಮಿಕದಲಾವಶ್ರೇಮಕರವಹುದು॥ ದೇಹಗಳಲೇಕಾತ್ಮತೆಯಲು। ದ್ವಾಹಿಸುವ ನಿನ್ನವರವೊ

ಲಾ। ಬಾಹಿರರುನೆರೆಕೆಳ್ಳಯಲರಿವರೆಭವವನಿದನೆಂದ ॥೧೬॥ ದುರಿತಸಂಕ್ಷಯವಾಯ್ತುದೇವರ। ಚರಣಕಮಲವಕಂಡೆತನ
ಗೀ। ತರಳಮತಿಗೆಂದೆಂಬುದೇನಚ್ಚರಿಯೆಮರದೊಂಮೆ॥ ನಿರುತಪುಲ್ಕಸನಾಗಲಾವನ। ಪರಮಮಂಗಳಪುಣ್ಯನಾಮವ। ನಿರ
ದೆಕೇಳ್ದಡಿಂಭವಾಬ್ಧಿಯಕಳೆವನವನೆಂನ ॥೧೭॥ ಸುಲಭನ್ನೆನಿಂಮಡಿಯದರುಶನ। ಹಲವುಜನ್ಮಾಂತರದಸುಕೃತದ। ಫಲ
ವದಲ್ಲದೆಮೂಢಮತಿಮಾದೆನನೆಭಾವಿಸಲು ॥ ನಳಿನದೃಶನಿಂನಂಘ್ರಿಕಮಲದ। ಸಲುಗೆವಂತನೆನಿಪ್ಪನಾರದ। ನೊಲವಿನಲಿಸಂಭ
ವಿಸಿತ್ರೆಂದನುಕೈಗಳನುಮುಗಿದು ॥೧೮॥ ಉಸುರುಮಾಗಳುಕಮಲಜಾದಿಗ। ಳುಸುರುವರುನಿಂನೊಡನೆಸುರವರ। ಋಷಿಗ
ಳೆಂತೆಯನೆನಿಂನರಿಯಲಿಂಕರಣವೃತ್ತಿಗಳು ॥ ವಿಷಯನಿಕರವನರಿವವೆರಿಶಿಂ। ರುಷಸಹಸ್ರನೆಸಾಸವೆಯಪೋಲು। ವಸುಧೆತೋಂ
ರ್ಕಲಿದೇಂವನಿಂನೊಂದೆಂಫಣಾಗ್ರದಲಿ ॥೧೯॥ ಅನಿನಗೆತಾಮಾಳ್ಪಬಿಂನಹ। ವೇನುಸರ್ವಾತ್ಮಕನೆಸರ್ವ। ಜ್ಞಾನಮಯವಿಗ್ರ
ಹನೆಸರ್ವಜಗತ್ಪ್ರವರ್ತಕನೆ॥ ಏನುಹಿತವೆನಗೆಂಬುದನುಧಿಟ। ನೀಂನೆಮಾಳ್ಪುದೆನುತ್ತವದದಲಿ। ಮಾನನಿಧಿಮೈಯಿಕ್ಕಿದನುಕೈಗಾ
ವುದೆಂದೆನುತ ॥೨೦॥ ನಿಂದಿರೇಳೆಲೆಮಗನೆನೃಪಕುಲ। ನಂದನನೆಸಂಸಿದ್ಧನಾದೆ। ವಂದ್ಯಚರಣಾಂಗಿರಸನಾರದರಿತ್ತವಿದ್ಯೆಯಲಿ।
ಸಂದೆವಿದ್ಯಾಧರಪದಕೆಮ। ತ್ತಿಂದುತಂನನುಕಂಡೆಯಿಂನಿಂ। ದಂದುಗದಸಂಸಾರಭಯವನುಕಳೆದೆನೀನೆಂದ ॥೨೧॥ ಎಂನೊ
ಳಗೆಸಕಲವನುಸಕಲರ। ಲೆಂನನೆಂನನುಸಕಲದಲಿನೆರೆ। ನಿಂನಲಾನಿಂನುವನುಸಕಲವೆನಿಪ್ಪತಂನಿಂದ ॥ ಭಿಂನವಲ್ಲೆಂದರಿದುಪರ
ಮಸು। ಜ್ಞಾನವನುತಾನಾಗಿಸಂಸಾ। ರಾರ್ನವವನುತ್ತರಿಸಿನಿಜದಲಿನಿಲ್ಲುನೀನೆಂದ ॥೨೨॥ ಅರಿಯದೆಂಮನುತಂಮನಿಜ
ವೆಂ। ದೆರಗಿವಿಷಯಸುಖಕ್ಕೆದುಃಖದ। ತೊರೆಯಲಾಳುತಮುಳುಗುತಜ್ಞಾನಾಂಧಕಾರದಲಿ ॥ ಬರಿದೆಕೆಡುವುದುಜನನಮರ
ಣಾಂತರದಲೆಂನನುತಂಮನಿಜವೆಂ। ದರಿದಡೀಸಂಸಾರಿಗಳುನಿರ್ಭಯರಲಾಯಂದ ॥೨೩॥ ಈಶತನುವನುಬಿಸುಟುದಾಸೀ।
ದಾಸಿನಾದಂತಮಳಸುಖವಾ। ರಾಸಿಯೆನಿಸುವತಂನನರಿಯದೆಸಲೆಸುಖೇಚ್ಛೆಯಲಿ ॥ ಕಾಶಿಸುಪವಿಧಿಗಳ್ಗೆಸೆರಗನು। ಹಾಸಿದುಃ
ಖಂಬಡುವಜಗವಿಂ। ನೇಸುಮಾಯಾಗುಣವಿಮೂಢಪ್ರೊನೃಪಕೇಳೆಂದ ॥೨೪॥ ಜ್ಞಾನವಿಜ್ಞಾನಂಗಳಗೆನರ। ಯೋನಿಯ
ಲಿಸಂಭವಿಸುವಂತವಿ। ಯೋನಿಗಳಸಂಭವಸಹಸ್ರಂಗಳಲಿಜನಿಸುವವೆ ॥ ಈನರರುಮತಿಗೆಟ್ಟುವಿಷಯ। ಧ್ಯಾನದಲಿಬಳಿಕಕಟ
ಮರುಗಿದ। ಡೇನಹುದುಸಂಮೂಢರಾಗೆಯತ್ತೊಳಲುತಿಹರೆಂದ ॥೨೫॥ ಅದುನಿಮಿತ್ತ್ಯಧ್ರುವವೆನಿಸಿದುಃ। ಖದವೆನಿಪವಿಷಯಾ
ಭಿಲಾಷೆಯ। ನೊದೆದುತತ್ವವಿಚಾರದಲಿನಿಜಭಕ್ತಿಯೋಗದಲಿ ॥ ಹೃದಯಶುದ್ಧಿಯಪಡೆದುವಿಜ್ಞಾ। ನದಲಿಸುಸ್ಥಿರನಾಗಿನಿಲ್ಲೆತೆ।
ಸದನುಳನೆಬಳಿಕೆಂನನೈದುವೆಚಿಂತೆಬೇಡೆಂದ ॥೨೬॥ ನಿದ್ರೆಗೈವವನೊಡಲಧರ್ಮವ। ಹೊದ್ದನೆಂದಡೆಕರಣವನುನಿಡು। ನಿದ್ರೆ
ಗೈಸಿನಿಜಾನುಭವದಲಿನಿಂದನರಯೋಗಿ ॥ ಹೊದ್ದಲರಿವನೆಕಾಯಧರ್ಮವ। ನದ್ವಯಾನಂದಾವ್ಯಕ್ತೋಂನತ। ಭದ್ರಪೀಠನೆ.
ಕೇಡನಿತರರಪೋಲುಹೇಳೆಂದ ॥೨೭॥ ಎಚ್ಚರಿತನಿದ್ರೆಯನುನೆನಹಿಂ। ಗೆಚ್ಚರನುನಿದ್ರೆಯನುಬೆರಸಿಯೆ। ಬಿಚ್ಚಿಬೇರೆಂದೆ
ನಿಸಿತನುಭಯಸಾಕ್ಷಿಯೆಂದೆನಿಪ ॥ ಅಚ್ಚರಿಯಪರಿಕಿಸುವಡದುವೆಯು। ಸಚ್ಚಿದಾನಂದಾತ್ಮಪದವದ। ನೊಚ್ಚತರಿದನುಭವಿಸು
ತಿಹುದೆಲೆಮಗನೆಕೇಳೆಂದ ॥೨೮॥ ಇಂತುನಿಜವನುತಿಳಿದುಮಾಯಾ। ಭ್ರಾಂತಿಯನುನೆರೆಕಳೆದುಶಾಂತ। ಸ್ವಾಂತನಾಗಿನಿಜಾಂ
ಘ್ರಿಕಮಲಧ್ಯಾನಪರನಾಗಿ ॥ ಸಂತಸುಖದಲಿನಿಲ್ಲೆನುತ್ತೆ। ಕಾಂತಭಕ್ತನನೊಲಿದುಬೀಳ್ಕೊ। ಟ್ಟಂತರಾತ್ಮನುನಿಂದನಂತರ್ಧಾ
ನಸುಸ್ಥಿಯಲಿ ॥೨೯॥ ಅಡವಿಯಲಿಬಿಟ್ಟರ್ಭಕನತಾ। ಯಡಗಿದಂತಾಯ್ತವನಿಪಗೆಜಗ। ದೊಡೆಯನಂತರ್ಧಾನದಲಿನಿಲೆಕಾ
ಣದಾದೆಸೆಗೆ ॥ ಒಡಲನೀಡಾಡಿನುಕೈಮುಗಿ। ದೊಡೆಯನೀನೇಗತಿಯೆನುತಬಳಿ। ಕಡರಿದನುವಿದ್ಯಾಧರೇಂದ್ರವಿಮಾನವನು
ನಲಿದು ॥೩೦॥ ದೇವಲೋಕಂಗಳಲಿಪಾತಾ। ಳಾವಳಿಗಳಲಿಧರೆಯಪುಣ್ಯಾವ। ನಾವಳಿಗಳಲಿಸುರವವಿಭವಪ್ರೋದ್ಯಾನವನಗ
ಳಲಿ ॥ ಭೂವರನುವಿದ್ಯಾಧರಸ್ತ್ರೀ। ಸೇವಿತನುತಾನಾಗಿಚರಿಸಿದ। ನಾವಿಮಾನಪ್ರವರದಲಿಸಂಪಂನವಿಭವದಲಿ ॥೩೧॥ ವಿದಿ
ತಸಾವಿರಕೋಟಿವರುಷವ। ಬದುಕಿದನುತನುಕರಣಬಲಗುಂ। ದದೆಸಮಗ್ರೈಶ್ವರ್ಯಭಕ್ತಿಜ್ಞಾನಯುತನಾಗಿ ॥ ತ್ರಿದಶವನಿತಾಗೀಂ
ತಹರಿಗುಣ। ದುದಯವನುಕೇಳುತ್ತಹಲವಂ। ಗದಲಿರಮಿಸುತ್ತಿರ್ದನಾಹರಿಭಕ್ತನೊಲವಿನಲಿ ॥೩೨॥ ಭಾನುತೇಜದವಿಷ್ಣು
ವಿತ್ತವಿ। ಮಾನದಲಿಸುರವಂದಿಗೀತಮ। ಹಾನುಭಾವನುಭುವನದಲಿನಲಿದಾಡುತೊಂದುದಿನ ॥ ಮಾನನಿಧಿಗಮಿಸುತ್ತಕಂಪನ।
ನೂನತೇಜೋನಿಧಿಯೆನಿಸುವೀಂ। ಶಾನನನುಸುರಸಿದ್ಧಚಾರಣಸೇವಿತಾಂಘ್ರಿಯನು ॥೩೩॥ ನೆರದಸಭೆಯಲಿದೇವಿಯನುತೊ।
ಳ್ಳಿರಿಸಿಕೊಂಡಂಕದಲಿಪರಮೇ। ಶ್ವರನುವಾಮಭುಜಾಗ್ರದಲಿತಕ್ಕೈಸಿಕುಳ್ಳಿರಲು ॥ ಪರಮಶಿವನನುಕಂಡುನಕ್ಕನು। ನಿರು
ತವರಿಯದೆತನ್ಮಹಿತ್ವವ। ನಿರದೆನುಡಿದನುಗರ್ವದಲಿಭೂಪತಿಪರಾಭವಿಸಿ ॥೩೪॥ ಈತಪರಮೇಶ್ವರನುಗಡಸಾ। ಕ್ಷಾತಧರ್ಮಾ
ಧರ್ಮಪದನಿಂ। ನೀತಗಡಲೋಕಕ್ಕೆಸೀಕ್ಷಾಗುರುವಲಾಧಿಟಕೆ ॥ ಈತಪೋನಿಧಿಗಳಸಭಾಗ್ರದ। ಲೇತಕೀಸುವಿಕಾರವೀವಿಪ।
ರೀತಚರಿತವಿದೇತಕೆಂದನುನಿಂದುಸಭೆಯೊಳಗೆ ॥೩೫॥ ಯಾಕೆಜಡೆಗಳುಭಸ್ಮಧಾರಣ। ವೇಕೆತೀವ್ರತಪಃಪ್ರಭಾವನಿ। ದೇಂ

ಕೆಮತ್ತೀಸಭೆಯೊಳಾಲಿಂಗಿಸಿನಿಜಾಂಗನೆಯ ॥ ಯಾಕಿಹನುಲೌಕಿಕನವೋಲಿವ । ನೇಕಿಯೀಧರಿಸುವನುಸತಿಯನು । ಲೌಕಿಕರು
ಸಹಿತಾರುಮಿಲ್ಲದವಿಜನದೊಳಗೆಂದ ॥ ೩೬ ॥ ನಿರ್ಜನವೆನೋಡುವಡೆಸಭೆಯಿದು । ಲಜ್ಜೆಯಿಲ್ಲದೆತ್ರೊಡೆಯಮೇಲಿಂ । ತಬ್ಬಿನದನೆ
ಯುಧರಿಸಿಕುಳ್ಳಿರಬಹುದೆಯೆನುತಿರಲು ॥ ದುರ್ಜನರನಿಂದೆಯನುಕೊಂಬರೆ । ಸಜ್ಜನರುಕನುಭಾವವನುನೆರೆ । ವರ್ಜಿಸಿದಪರ
ಮಾತ್ಮನಿದ್ದನುಕೇಳದವನಂತೆ ॥ ೩೭ ॥ ನಸುನಗುತಪರಮೇಶ್ವರನುಲೆ । ಕ್ಕಿಸದೆಕುಳ್ಳಿರಲದನುಕೇಳು । ಪ್ತಸಮಸಭೆನಾತಾ
ತವಿದುರ್ದಡಿಕಿವಿಗಳನುಮುಚ್ಚಿ ॥ ಮಸಗಿದಳುಗಿರಿರಾಜಸುತೆಕೆಂ । ಪೆಸವಕಂಗಳಕಾಂತಿಗಳುಝಳ । ಪಿಸಲುನುಡಿದಳುಜರದು
ವಿದ್ಯಾಧರಜನೇಶ್ವರನ ॥ ೩೮ ॥ ಒಡೆಯನೇಜಗಕಿವನುಲೋಕ । ಕ್ಕೊಡೆಯರಹಪರಮೇಷ್ಠಿಮುಖ್ಯರು । ನುಡಿಯಲಂಜುವ
ರಮಮುಲೋಕಾಧೀಶ್ವರನಗತಿಯ ॥ ಜಡನೊಮರುಳನೊಪಾಪನಮದತಲೆ । ಗಡರಿದಮನೋಪಾಪಿನಂಮನ । ನುಡಿವನೇಕೀದು
ಷ್ಟನೆಂದಳುಶೈಲರಾಜಸುತೆ ॥ ೩೯ ॥ ಅರಿಯರೇಭೃಗುನಾರದಾದಿಗ । ಳರಿಯರೇಮನುಮುಖ್ಯರಿವರೇ । ನರಿಯರೇಕಪಿಲನು
ಕುಮಾರನುವರಮುನೀಶ್ವರನು ॥ ಅರಿಯರಿದನಿಂನವರಪರಮೇ । ಶ್ವರನದುಷ್ಟಮರ್ಮವನುನಿಶ್ಚಯ । ಪರಿದನೀಕ್ಷತ್ರಪಶದನಂ
ದಳುಸರೋಜಮುಖಿ ॥ ೪೦ ॥ ಯೋಗಿಗಳದಾವನಪದಾಬ್ಜದ । ರಾಗವನುಹೃದಯದಲಿನೆನದನು । ರಾಗದಹಸಾನವನುಕಾ
ಣರುಮಹಿಮೆಯನುಹೊಗಳಿ ॥ ಆಗಮಂಗಳುಸಪದಮಾನಿಜ । ಯೋಗನಿಧಿಗಳುನಿಂದಿಸೀನಿ । ಭಾಗಧೇಯನದೇಕೆಕೆಡುವೆ
ನೊಯಂದಳಾಗಿರಿಜೆ ॥ ೪೧ ॥ ಮಂಗಳಕೆಮಂಗಳವದಾವನ । ಭಂಗಮಂಗಳಚರಿತಗುಣನಾ । ಮಂಗಲತ್ರೈಲೋಕ್ಯದಘಕು
ಲಪಾವನಂಗಳನೆ ॥ ಸಂಗಿಯಲ್ಲಾಶಿವನುಶಿವಶಿವ । ಭಂಗಿಸಿದನೀಪಾಪಿವೈಷ್ಣವ । ರಂಗವೇಕಿವನೇಕೆಯೋಗ್ಯನೆಯೆಂದಳಬು
ಜಾಕ್ಷಿ ॥ ೪೨ ॥ ಕರಗುವರುವೈಷ್ಣವರದಾವನ । ಚರಿತವನುನೆನನೆನೆದುವೈಷ್ಣವ । ಚರಿತವನುನೆನವುತ್ತಕರಗುವನಾವನಾತ
ನನು ॥ ಜರವನೆಂತ್ರೋಬಹಳದರ್ಪ । ಜ್ವರಗೃಹೀತಂಗೌಷಧವನಾ । ನರವನೀಗಳೆಯನುತಕಿಡಿಖಿಡಿಯಾದಳಂದಗಜೆ ॥ ೪೩ ॥
ದರ್ಪವಿದುಧಿಟಸೇರಲರಿವುದೆ । ಸರ್ಪರಾಜಮಹಾಶಯನನೊಳ । ಗೊಪ್ಪಿಸಿದತನುಮನವನುಳ್ಳಮಹಾತ್ಮವರ್ಗದಲಿ ॥ ತಪ್ಪದಾ
ಸುರಯೋನಿಜನನದ । ದೊಪ್ಪುವುದುನಿನಗದುನಿಮಿತ್ತಲೆ । ತಪ್ಪುಗಾರನೆಬೀಳಧೋಗತಿಗೆಂದಳುರೆಮುನಿದು ॥ ೪೪ ॥ ಮುಂ
ದೆನಿನಗೀಬುದ್ಧಿಸಜ್ಜನ । ವೃಂದದಲಿಸಂಭವಿಸದಿರಲೆಂ । ದಿಂದುಮುಖಿಶಾಪವನುಕೊಟ್ಟಳನುಗ್ರಹವಮಾಡಿ ॥ ಅಂದದನುಕೇಳು
ತ್ತನೃಪಕುಲ । ನಂದನನುಮದವುತುಗಿಚರಣ । ದ್ವಂದ್ವದಲಿನಮಿಸಿದನುದಿವ್ಯವಿಮಾನದಿಂದಿಳಿದು ॥ ೪೫ ॥ ತಾಯೆತಪ್ಪಾ
ಯ್ತಾರುಗೆಲುವರು । ಮಾಯೆಯನುನಿಂಮಡಿಯನುಡಿಯನು । ದಾಯವಲ್ಲಾತಂನಪೂರ್ವಭವಾಂತರಾರ್ಜಿತದ ॥ ಅಯಿತ್ತೆನ
ಗಿದನುಗ್ರಹದತರು । ಮಾಯುಶಾಪವಿದೆನುತಹಿಡಿದನು । ಮಾಯೆಯಿಲ್ಲದೆಶಾಪವನುತಂಮಂಜಲಿಯಲೊಲಿದು ॥ ೪೬ ॥ ಆರು
ಕಾರುಣವವ್ಯಾಜೀವರ । ಘೋರದುಃಖಸುಖಾಪಜಯಜಯ । ಭೂರಿಲಾಭಾಲಾಭಶಾಪಾನುಗ್ರಹಂಗಳಗೆ ॥ ಪ್ರಾರಬುಧಕರ್ಮಾ
ನುಕೂಲ । ಪ್ರೇರಕನುಪರಮಾತ್ಮನಾತನ । ದಾರುಮಾಡುವುದಾವುದೆಂದನುನೃಪತಿವಿನೆಯದಲಿ ॥ ೪೭ ॥ ಬೀಳುಕೊಂಡ
ನುನೃಪಸುರಶ್ರೀ । ಜಾಲಸಹಿತವಿಮಾನದಲಿಶಶಿ । ಮೌಳಿನುಡಿದನುಬಳಿಕತಂನರ್ಧಾಂಗಿಗನುನಯವ ॥ ಬಾಲೆಕಂಡೆಯಲಾಮ
ಹಾತ್ಮರ । ಶೀಲಪನುಬಂದೆಡರಿನಲಿಬೆಂ । ಬೀಳುವರೆಬಾಹಿರರವೋಲೆಲೆಕಾಂತೆಕೇಳೆಂದ ॥ ೪೮ ॥ ಎತ್ತಣದುಭವಪವರಿಗಾಪ್ರ
ರು । ಷೋತ್ತಮನದಾಸರಿಗೆಸುಖದುಃ । ಖೋತ್ತರದಸಂಸಾರಧರ್ಮಕ್ಕಂಜುವರೆಧಿಟಕೆ ॥ ಮೃತ್ಯುಜೀವಿತ್ರಯರದರಲಿಸಮ ।
ಚಿತ್ತರಕುತೋಭಯರುಕಾಲನ । ಮಸ್ತಕವನೊದದಾಡುತಿಹರೆಲೆಕಾಂತೆಕೇಳೆಂದ ॥ ೪೯ ॥ ಶಾಂತನೀತನುದನುಜಹರನೀ ।
ಕಾಂತಭಕ್ತನುತಂನವೋಲಲೆ । ಕಾಂತೆವಿಸ್ಮಯಬೇತನನಿಗೀವಿಷ್ಣುಭಕ್ತರಲಿ ॥ ಸಂತವಿರುನೀನೆನುತಚಿತ್ತ । ಭ್ರಾಂತಿಯನು
ನೆರೆಕಳೆದುತಿಳುಹಿದ । ನಂತರಾಂತಕನಖಿಳಪರಿಜನಪಾರಿಷದಜನವ ॥ ೫೦ ॥ ಪೊಡವಿಪತಿಕೇಳಂತುಶಾಪವ । ಹಿಡಿದುಭೂಪತಿ
ಮರಳಿಶಾಪವ । ಕೊಡದೆಸಲಿಸಾಮರ್ಥ್ಯವುಂಟಾದಡೆಯುಸ್ವೈರಣೆಯ ॥ ತಡೆದುಭಾಗವತೋತ್ತಮನುಜಗ । ದೊಡತಿಯನುಬೀ
ಳ್ಕೊಂಡುಗಗನವ । ನಡರಿದನುತಾನದುಮಹಾತ್ಮರನಿಜವಲಾಯಂದ ॥ ೫೧ ॥ ಚಿತ್ರಕೇತುನೃಪಾಲನಿಂತುವಿ । ಚಿತ್ರಯೋಗೈ
ಶ್ವರ್ಯಸಿದ್ಧಿಯ । ನುತ್ತಮನೆನೆರೆಪಡೆದುಮಗುಳಂಬಿಕೆಯಶಾಪದಲಿ ॥ ವೃತ್ರನೆನಿಸಿಯೆಜನಿಸಿದಜ್ರನಿ । ವೃತ್ತಕಾಯನುಕೂಡಿದ
ನುಪುರು । ಷೋತ್ತಮನನಾಹವದಲಭಿವರ್ನಿಸುತಕೇಳೆಂದ ॥ ೫೨ ॥ ಭೂವರನೆಹೇಳಿದೆನುನಿನಗೀ । ಪಾವನಾಖ್ಯಾನವನುಹರಿ
ಪದ । ಸೇವಕರಮಹಿಮೆಯನುಕತ್ತ್ವಸಾಮರ್ಥ್ಯಸಂಪದವ ॥ ಆವನಿದನೋದುವನುಕೇಳುವ । ನಾವನಾಪುಣ್ಯಾತ್ಮರನುನೆರೆ
ಕಾವನಾನಿತ್ಯಾತ್ಮಗೋಪೀನಾಥನನವರತ ॥ ... ... ॥ ೫೩ ॥

ಅಂತು ಸಂಧಿ ೧೨ಕ್ಕಂ ಪದನು ೫೯೩ಕ್ಕೆ ಮಂಗಳಮಸ್ತು.

ಹದಿನಾರನೆಯ ಸಂಧಿ.

ಸಪ್ತಮರುತ್ತುಗಳ ಉತ್ಪತ್ತಿ.

ಸೂಚನೆ॥ ವಿದಿತನಯರೇಕೋನಪಂಚಾ। ಶತಮರುತ್ತುಗಳುದ್ಭವಿಸಿಸುರ। ಪತಿಯಶೇರುನೆಯಾಗಿ ನಿಂದರುಸುಂದರಮರರ್ಕೆಗೆ॥ ... ...

ಪದನು॥ ಅವನಿಪತಿಚಿತ್ತವಿಸುಬಳಿಕಾ। ಸವಿತೃವಿನಸತಿಶಕ್ತಿಯಲಿಸಂ। ಭವಿಸಿದರುಸಾವಿತ್ರಿಸುವ್ಯಾಹೃತಿಗಳಖಿಳ॥ ಸವನಭೇದಂಗಳನುಬಗೆಸಂ। ಭವಿಸಿದರುಸಿದ್ಧಿಯಲಿಮಹಿಮ। ಪ್ರವರರಾಭೃಗುವಿಭುಗಳಾತಿಸ್ಸಿಂಬಸತಿಸಹಿತ॥೧॥ ಇರೆ ಪುರಸ್ತ್ಯಾಂಗಿಗಳುಕ್ರಿಯೆಯಲಿ। ವರವಿಧಾತೃವಿಗೆನೆಲುವರುಣಗೆ। ಚರುಷಣಿಯಲಾಭೃಗುಮಗುಳೆವಾಲ್ಮೀಕಿವರಯೋಗಿ॥ ವರುಣನಲಿವಾಲ್ಮೀಕದಿಂದವ। ತರಿಸಿದನುಕುಂಭದಲಿಮಿತ್ರಾ॥ ವರುಣವೀರ್ಯದಲಂದಗಸ್ತ್ಯನುವರವಸಿಷ್ಠಾಂಕ॥೨॥ ಮಿತ್ರನಾರೇವತಿಯಲುತ್ಸ್ನಾ। ಗೋತ್ರರಾತ್ಮಜರನುಪಡೆದನಾ। ವೃತ್ರರಿಪುಶಚಿಯಲಿಜಯಂತನುವೃಷಭಮೀಢುಶರ॥ ಮತ್ತರುಕ್ರಮನೆಂಬವಾಮನ। ಮೂರ್ತಿಗೆಯುಬೃಹಶ್ಲೋಕನುದಿಸಲು। ಕೀರ್ತಿಯಲಿಹೇಳುವೆನುಮೇಣಾಕಥೆಯನಿನಗೆಂದ॥೩॥ ಹೇಳುವೆನುದೈತ್ಯೇಶುರನ್ವಯ। ದೇಳಿಗೆಯನಾಕಶ್ಯಪನಸತಿ। ಲೋಲಲೋಚನೆದಿತಿಹಿರಣ್ಯಕಶಿಪುಹಿರಣ್ಯಾಕ್ಷ॥ ಬೀಳಲಿಬ್ಬರುಮಕ್ಕಳಾಸುರ। ಪಾಲಸಾಪ್ಲೀರ್ಗ್ರಾಹಿಲಪ್ರೈಮೀ। ಲೋಲನಾಹವದೊಳಗೆಮರುಗಿದಳಬಲೆಮರುಕೊಳಿಸಿ॥೪॥ ಕೊಲಿಸಿದನಲಾಪಾಪಿವಿಷ್ಣುವ। ನಿಳುಹಿಧರಣಿಗೆತಂನಮಕ್ಕಳ। ನೇಳ್ವೊಲಸುಖಕೋಸುಗೊಡಪುಟ್ಟದರನತಿಬಲರ॥ ಅಳಲನಂತ್ರೋಮರನೆನವನನು। ಕೊಲಿಸಿದಲ್ಲದೆನಿದ್ರೆಬಾರದು। ಕೊಲುವಮಗನನುಪಡವೆನೆಂದಳುಕಾಂತೆಮನದೊಳಗೆ॥೫॥ ಭಜಿಸಿದಳುನಿಜಪತಿಯಸಾದಾಂ। ಬುಜವನೇಕಶ್ರದ್ಧೆಯಿಂದಂ। ಬುಜವದನೆಸುರಪತಿಯಕೊಲುವಕುಮಾರನನುಪಡವೆ॥ ನಿಜಮನೋಮಂದಿರನಿಗೂಢ। ಪ್ರಜನದಲಿಚರಿಸುತ್ತವಿಮಲ। ದ್ವಿಜಕುಲಾಗ್ರಣಿಕಂಡುನಗುತಿಂತೆಂದನಂಗನೆಗೆ॥೬॥ ಮೆಚ್ಚಿದೆನುಮೆಚ್ಚಿದೆನುಸದ್ಗುಣ। ಸಚ್ಚರಿತ್ರೆಮರೆಯಾಕೆಮಾರಿದೆ। ನೊಚ್ಚತಂನನುನಿನಗೆತಂನೀಪ್ರಾಣವಲ್ಲಭೆಗೆ॥ ಅಚ್ಚುಗವದೇನಬಲೆವರವನು। ಮೆಚ್ಚುದುದನೀಬೇಡಿಕೊಳ್ಳೆನ। ಲಿಚ್ಚರಿಸದಕಟಕಟಬಳಲಿದೆಯಂದನಾಮುನಿಪ॥೭॥ ಸತಿಯರಿಗೆದುರ್ಲಭವದಾವುದು। ಪತಿಪದಾಂಬುಜಭಕ್ತಿಯರಿಗೀ। ಕ್ಷಿತಿಯೊಳಗೆಪರದೈವವಲ್ಲಾಪತಿವಿಚಾರಿಸಲು॥ ಪತಿಪರೂಪನುಸತಿಗೆಮಾತಾ। ಪಿತೃಪರೂಪನುಸುತರಿಗಂತ। ಚ್ಯುತನೆಹಲವಂಗದಲಿನರರಿಗೆಪೂಜ್ಯತಮನೆಂದ॥೮॥ ಅದುನಿಮಿತ್ತಂಗನೆಯರಾಪತಿ। ಪದಪಯೋಜವನಾಮುಕುಂದನ। ಪದವೆನುತನೆರೆಭಜಿಸಿಪಡವರುನಿಜಮನೋರಥವ॥ ಸುಪತಿನಿಸ್ಸಂತಾರುನಿರ್ಮಳ। ಹೃದಯದಲಿಪತಿಭಕ್ತಿಯರುಬೇ। ಡಿದುದನೀವೆನುಹೇಳುಹೇಳೆಲೆಕಾಂತೆಹೇಳೆಂದ॥೯॥ ಎಂದಡೆಂದಳುಮುನಿದನಿಂಮಡಿ। ಗಿಂದುತಾನಿಜಭಕ್ತಿಯಾದಡೆ। ದೊಂದುವರವನುಬೇಡುವೆನುಕೃಪೆಯುಳ್ಳಡಬಲೆಯಲಿ॥ ಇಂದ್ರನನುಕೊಲುವೊಬ್ಬಮಗನನು। ವಂದ್ಯಚರಣನೆಕೊಡುವುದೆನಲಾ। ಯೆಂದುಮುಖಿಗಿಂತೆಂದನಧಿಕಮನೋವಿಷಾದದಲಿ॥೧೦॥ ಏನುಹೇಳನಗೆಲಗೆಹೇಳೇ। ನೇನಬೇಡಿದೆವರನನಾವುದ। ನೇನನಕಟಾಮುಸುಕಿನೊಳಗಿದ್ದಿರಿದೆಗೇತನ್ನ॥ ಜೇನುತುಪ್ಪವತೊಡದುವಿಷವನು। ಮಾನಿನಿಯೆಮೆಲಿಸಿದೆಯಲಾತಾ। ನೇನಹೇಳುವೆನಿದಕೆನುತಬಿಸುಸುಯ್ದನಾಮುನಿಪ॥೧೧॥ ಮೂಢನೀನೆಂದೆಂಬನೋಧಿಟ। ಮೂಢನಾನೆಂದೆಂಬೆಸೋನಿಜ। ಗೂಢಕಿಲ್ಬಿಷೆಯರಲಿವಿಶ್ವಾಸಿಸುನಪಾಪಿಯನು॥ ರೂಢಿಯೊರುಪುದೆನರಕಗತಿಗವ। ಗೂಢನಾದೆನುಹರಹರೆಂನಲಿ। ಗಾಢವಾಯ್ತುಜ್ಞನವಿದಕಿಂನೇಪೆನಾನೆಂದ। ಮೊಗವನೋಡಿದಡಿಂದುನಿಭವಾ। ಕುಗಳಕೇಳಿದಡಮೃತನಿಭನೆನ। ಹುಗಳನೋಡಿದಡಸಿಲತಾಧಾರಾಪ್ರತಾಪಸಿಭಾ॥ ತ್ರೋಗಲುಹರಿಯದವೋಲುಜೀವನ। ತ್ರಿಗಪಕಾಹಕಶ್ರೀಯರ್ಯ್ಯರಲಿನಂ। ಬುಗೆಯಮಾಳ್ಪವರಿಂದಧಿಕಪಾತಕಿಗಳಿಲ್ಲೆಂದ॥೧೩॥ ಏಕಬುದ್ಧಿಯಲಿರ್ದಜೀವಾ। ನೀಕವನುನೆರೆಕಂಡುಬುದ್ಧಿ। ವ್ಯಾಕುಲತೆಯನುಮಾಡಲೆಂದಜನಂಗನಾಜನನ॥ ಲೋಕಸಂಮತವೆನಲುಸೃಜಿಸಿದ। ನಾಕರಿಸಿತ್ರೀಮಾಯೆತಂನವಿ। ವೇಕವನುವಿಧಿಕೃತವಿಮಾರುವರಾರುಹೇಳೆಂದ॥೧೪॥ ಆರನಾಗಲಿಕೊಲುವರೆಬತೆಯ। ರಾರನಾಗಲಿಕೊಲಿಸುವರುಮೇ। ಣಾರುಹಿತವರುಬಾಂಧವರುಗುರುದೈವವೆನಿಪವರು॥ ಘೋರೆಯರಿಗಕಟಕಟಪಾಪನೆ। ವೀರಸುರಪತಿವರನನಾನೀ। ನಾರಿಗಿತ್ತೆಂಬೆನೇಹಾಯೆನುತಚಿಂತಿಸಿದ॥೧೫॥ ದೈವವೇಕಾರಣವಲಾಕೈ। ಗಾವಪೆಯಕೊಲುವಡೆಯುಚಿಂತೆಯಿ। ದಾವುದೀವೆನೆನುತ್ತಮಿಡಿದನುತಂನಸತಿಯೊಡನೆ॥ ದೇವಪತಿಯನುಕೊಲುವಮಗನನು। ದೇವಿಪಡವಡೆವರುಷಪರಿಯಂ। ತೋವಿನಡಸುವುದೊಂದುವ್ರತವನುಕೇಳುನೀನೆಂದ॥೧೬॥ ಆದಡದರವಿಧಾನವನುವಿ। ದ್ಯೋದಧಿಯೆಬೆಸಸೆನಲುಗೂಢವಿ। ಷಾದದಲಿಸತಿಗೆಂದನಂಗನೆಕೇಳುನೀನಿದನು॥ ಮೇದಿನೀಸುರನರರನುಜ್ಞೆಯ। ಲಾದರಿಸಿಭಜಿಸೊದುದುಗ್ಧಮ। ಹೋದಧಿಯನಂದನೆಯನಾಮುರಹರಪದಾಂಬುಜವ॥೧೭॥ ಶಶಿವದನೆಹಿಂಸೆಯನುಭೂತ। ಪ್ರಸರದಲಿವರ್ಜಿಸುವುದುಳಿದಾ। ವಿಷವನುಚ್ಛಿಷ್ಟವನುಶೂದ್ರಾವೃತವನಶುಚಿಯನು॥ ಕುಸುಮಿತಶ್ರೀದುಷ್ಟನನುವೆ। ರ್ಜಿಸುವುದಂನವನುದ

ಕವನುಸೇ | ವಿಸುವುದನುಚಿತವೆಂಜಲಿಯುಬೆರೆಕಾಂತೆಕೇಳೆಂದ ॥ ೧೮ ॥ ನುಡಿಯಲಾಗದುಹುಸಿಯನುಗುರನು | ಕಡಿಯಲಾಗ
ದುವಿಶಾಪ್ಯಲಾಗದು | ಮಡುವಿನಲಿದುರ್ಜನರಲಿರಲಾಗದುಕುವಸ್ತ್ರವನು ॥ ಉಡುವುದನುಚಿತಪರರಮುಡಿದುದ | ಮುಡಿ
ವುದನುಚಿತಹಲವುಮಾತನು | ನುಡಿವುದನುಚಿತಮಲಿನೆಯಾಗಿಹುದುಚಿತವಲ್ಲೆಂದ ॥ ೧೯ ॥ ಬಿಟ್ಟನುಂಡೆಯುಬೆರಡುಸಂಜೆಯು |
ಲಿಷ್ಟವಲ್ಲಿಹುದಬಿಸಿಜಲವನು | ಮುಟ್ಟದುಚ್ಛಿಷ್ಟಂಗದಿಂದಿಹುದುಚಿತವೇಯಲ್ಲ ॥ ಇಷ್ಟದಲ್ಲದೆಮಸುಕಹೊರಗಡಿ | ಯಿಟ್ಟ
ದೋಹುದೆಪಾಪವನಿನಿ | ಮುಟ್ಟಲಾಗದಮಂಗಳದ್ರವ್ಯವನುಕೇಳೆಂದ ॥ ೨೦ ॥ ಭದ್ರಕಾಲನುತ್ರೊಳೆಯುದಿಹುದಘ | ಪ್ರೊದ್ದ
ಗ ಲಬಿಸವಡಿಸುವುದಘ | ನಿದ್ರೆಗೈಯ್ಯದಿರುತ್ತರಾಪರದೆಶೆಗೆತಲೆಯಾಗಿ ॥ ಹೊದ್ದದಿರುಮತ್ತಲ್ಲಿಲೋಗರ | ಲೆದ್ದಿಹುದುಸಂಧ್ಯೆ
ಗಳಲುಬೆಲನ | ವದ್ವೆಮಲಗಿರಬೇಡಮೇಣ್ಣಬೇಡನೀನೆಂದ ॥ ೨೧ ॥ ಮಿಂದುಮಡಿಗಳನುಟ್ಟುಮಂಗಳ | ದಿಂದಸಂಯುತೆ
ಯಾಗಿಮೇಣೆಗ್ಗೆ | ಮಿಂದನನುಪೂಜಿಸುವುದುಂಣಪಮುಂನವಿಪ್ರರನು ॥ ಬಂದಿಸುತನಿಜಪತಿಯನಾಗೋ | ಮಿಂದನೆಂಬೇನೆನವು
ತಬ್ಬವ | ನೊಂದನುತ್ತರಿಸಿದಡೆನಿಂನಭಿಮತವದಹುದೆಂದ ॥ ೨೨ ॥ ಪುಂಸವನವೆಂಬೀವ್ರತಕ್ಕೆ | ಧ್ವಂಸವಾದಡೆಬಳಿಕವೈರಿ |
ಧ್ವಂಸಕರನುದಿಸುವನುಮಗನೆಲೆಕಾಂತೆನೀನಿದಕೆ ॥ ಸಂಶಯವಮಾಡದಿರುದೋಗಾ | ಶಂಶಿತಾರ್ಥದಸಿದ್ಧಿನಿನಗೆಲೆ | ವಂಶವ
ರ್ಧನೆತಪ್ಪದೆಂದನುದಿತಿಗೆಮುನಿನಾಥ ॥ ೨೩ ॥ ಎನೆಹಸಾದವೆನುತ್ತಪತಿಯನು | ವನಿತೆಬೀಳ್ಕೊಂಡಾಮಹಾವ್ರತ | ವನುವ
ಪಾಸತಿಚರಿಸಿದಳುಧರಿಸಿದಳುಗರ್ಭವನು | ಜನಪಕೇಳದನರಿತುಸಂಕ್ರಂ | ದನನುಮನದಲಿಸೊಯ್ದುಚಿಂತಿಸಿ | ನೆನೆದುದಿತಿಯಾ
ಶ್ರಮಕೆಬಂದನುಮನದಖತಿಯಲಿ ॥ ೨೪ ॥ ಸೇವೆಯನುಮಾಡಿದನುಸುರಪತಿ | ಜೀವದಭಿಲಾಷೆಯಲಿತಂನಯ | ಭಾವವನು
ನೆರೆಮರಸಿಸಹಜವಿನೀತನಂದದಲಿ ॥ ಆವಿಪುಳವಿಷ್ಣುವ್ರತದಭಾ | ಗಾವಸರವನುಹಾರುತಿರ್ದನು | ಕೋವಿದನಪೊಲಬಲೆಯಾ
ಗ್ರಮನೋಗತಸ್ಥಿತಿಯ ॥ ೨೫ ॥ ವರಸಮಿತ್ಕುಶಪತ್ರಪುಷ್ಪಾಂ | ಕುರವತಂದೀವುತ್ತತಾಯಿಗೆ | ಪರಿಚರಿಯೆಯನುಮಾಡುತಿರ್ದನು
ಕಪಟಭಾವದಲಿ ॥ ಹರಿಣಪಧುವನುವ್ಯಾಧನಿಂದುಪ | ಚರಿಸುವಂತಿರೆಕೆರಹನೀಪ್ರಿಸು | ತರಿವಿಜಯನಳಲುತ್ತಲಿರ್ದನುಕಾಣದ
ವಸರವ ॥ ೨೬ ॥ ಬಾಲೆತಾನೊಂದುದಿನಸಂಧ್ಯಾ | ಕಾಲದಲಿಕೃಶಗಾತ್ರೆಕ್ರೊಳೆಯದೆ | ಕಾಲುಮೊಗವನಶೌಚದಲಿಮಾಡಿದಳುನಿ
ದ್ರ್ರಮನು ॥ ಅಲಿಸದೆವಿಧಿವಶವನದನಾ | ಲೋಲಮತಿಕಾಣುತ್ತಹೊಕ್ಕನು | ವೇಳೆಯಿದುತನಗೆನುತಬಸುರನುಯೋಗಶಕ್ತಿ
ಯಲಿ ॥ ೨೭ ॥ ಬಿಡದೆಗರ್ಭವಹೊಕ್ಕುಜಠರವ | ಕಡಿದನಿರದೇಳಾಗಿಬಸುರಲಿ | ಮಿಡುಕುತಿರಲದುಮಾರಿಸಾಯಲೆನುತ್ತ
ಲೋಂಪೋಂದ ॥ ಕಡಿದನೇಳೇಳಾಗಿವಜ್ರದ | ಲೊಡನೊಡನೆಕಡಿತುಗಳುಬಾಯನು | ಬಿಡುತಿರಲುಸ್ಮೈರಿಸುವುದೆನುತನೆಸವರಿದ
ನುಕ್ಕಲೆಯ ॥ ೨೮ ॥ ಕೊಲ್ಲದಿರುಕೊಲ್ಲದಿರುಹೋಹೋ | ಬಲ್ಲಿದನುನೀನಹೆವಿರೋಧಿಗ | ಳಲ್ಲನಿಂನವರಾವುನಿಂನೊಡವುಟ್ಟಿದ
ವರೆಸಲು ॥ ಕೊಲ್ಲೆನಂಜದಿರಂಜದಿರಿಬಹು | ದೆಲ್ಲವರುನೀವೆನುತದಿವಿಜರ | ಬಲ್ಲಹನುಹೊರವಂಟನಲ್ಲಿಂದರ್ಭಕರುಸಹಿತ ॥ ೨೯ ॥
ದೆಸೆಗಳನುಬೆಳಗುತ್ತತೇಜೋ | ವಿಸರದಲಿಮಾಸವನಸಹಿತಬಹು | ವಿಸಜಸಖರಂತಿರಲುಮಾವನಮೂರ್ತಿಗಳುಮುಂದೆ ॥ ಶಶಿವ
ದನೆಕಂಡೆರಡುಕಂಡಳು | ಹೊಸಬರಿವರಾರಾರಮಕ್ಕಳು | ಹುಸಿಯಸಲ್ಲವನೆನಗೆಹೇಳೆನಲೆಂದನಮರೇಂದ್ರ ॥ ೩೦ ॥ ಬೆಂಸವಿ
ಸಲಂಜುವೆನುನಿಂಮಡಿ | ತಂನಕೊಲುವರ್ಭಕನಪಡೆವೊಂ | ದುಂನತಾಭಿಪ್ರಾಯದಲಿಚರಿಸುವುದನಿದನರಿತು ॥ ದುರ್ನಯವ
ಮಾಡಿದೆನುತಾಯೆಕ್ಕೆ | ಮಾರ್ನವೆಯಲಾನೀನುಸುವ್ರತ | ಭಿಂನವಾಗಲುಹೊಕ್ಕುಗರ್ಭವಕಡಿದೆನಾನೆಂದ ॥ ೩೧ ॥ ಸಾಯಲಾರ
ದೆಸಿಂನಗರ್ಭವ | ನೋಯಿಸಿದೆನತಿಪಾಪಿತಂನನು | ಕಾಯಬೇಹುದುಜೀವನದಕಕ್ಕುಲಿತೆಗಾರನನು ॥ ತಾಯೆನಿಂಮಡಿಗಾನು
ಶರಣ್ಯಂ | ನ್ಯಾಯಕಾರಿವಿಚಾರಿಸಲುನಾ | ರಾಯಣನೆಗರ್ಭವನುಕಾಯಿದನೇನವಮರೇಂದ್ರ ॥ ೩೨ ॥ ಭಕ್ತರಿಗೆಕೇಡುಂಟೆನೆನ
ದರೆ | ಮೃತ್ಯುಭಯಹಿಂಗುವುದುಗಡಪುರು | ಷೋತ್ತಮನನೋಲಗಿಸಿದೆಯಭಾವರುಷಪರಿಯಂತ ॥ ಉತ್ತಮಾಂಗನೆವಿಫಲವ
ಹುದೆನು | ರುತ್ತುಗಳುಜನಿಸಿದರುನಿರ್ಮಲ | ಚಿತ್ತವಹುದಿಂನೆನುತಹಿಡಿದನುಜನನಿಯಂಘ್ರಿಗಳ ॥ ೩೩ ॥ ಚಿಂತೆಹೋಯ್ತೆಲೆಮಗ
ಕೇಳ್ | ತಂನಂತರಂಗದಲಖಿಳವೀಶ್ವರ | ತಂತ್ರವಲ್ಲತಂದೆತಪ್ಪೇನೆನುತತಲೆದಡವಿ ॥ ಕಾಂತೆಕೆಳುಹಲುಬೇಡಿಕೊಂಡಾ | ಸಂ
ತತಿಗಳ್ಪಡೆಗೂಡಿಸುವಪತಿ | ಸಂತಸದಲ್ಯೈದಿದನುದಿವವನುದೇವಜನಸಹಿತ ॥ ೩೪ ॥ ಪೊಡವಿಪತಿಕೇಳ್ವಿಷ್ಣುಭಕ್ತರು | ಕೆಡುವ
ರೇಕತಿಕುಗಳುಜೀವವ | ಪಡೆವುನೀನಿಂನಂತೆದೆಕ್ರೋಣಸುತಾಸ್ತ್ರಬಾಧೆಯಲಿ ॥ ಪಡೆದರಮರತ್ವವನುಸುರಪತಿ | ಯೊಡನೆಸುಖ
ದಿಂದಿರ್ದರಾರನು | ಕೆಡಿಸಲಾರುಸಮರ್ಥರೀಶಾಧೀಶಜನವೆಂದ ॥ ೩೫ ॥ ಉತ್ತಮನೆಹೇಳ್ವೆನುನಿನಗೆಮ | ರುತ್ತುಗಳವಂಗ
ಳವೆನಿಸಿದು | ತೃಪ್ತಿಯನುಹರಿಚರಣಭಕುತಿಸುಜೋಪವತ್ತಿಯನು ॥ ಮೃತ್ಯುಭಯಹರವಿದುಸದಾಮಾ | ಕೀರ್ತಿಕರವಭ್ಯುದ
ಯಕರವಿದು | ತತ್ವನಿಧಿನಿತ್ಯಾತ್ಮಗೋಪೀನಾಥನೊಲವಿನಲಿ ॥ … … ॥ ೩೬ ॥

ಅಂತು ಸಂಧಿ ೧೮ಕ್ಕಂ ಪದನು ೭೩೬ಕ್ಕೆ ಮಂಗಳಮಹಾ.

ಹದಿನೇಳನೆಯ ಸಂಧಿ.

ಸೂಚನೆ ॥ ಕ್ಷಿತಿಗೆಹಿತವಹಪುಂಸವನಸಂ । ಗತಮಹಾವಿಷ್ಣುವ್ರತವನಾಕ್ಷಿತಿ । ಪತಿಗೆಮುನಿನಾಥನಭಿ
ವರ್ಣಿಸಿದನೊಲವಿನಲಿ ॥ ... ...

ಪದನು ॥ ಮುನಿಪಕರುಣಿಸುಪುಂಸವನವೆಂ । ಬನುಪಮವ್ರತಲಕ್ಷಣವನಿಂ । ದೆನಗೆವಿಹಿತವಿಧಾನವನುವಿಸ್ತರದಲೆಂದೆ
ನಲು ॥ ಜನಪತಿಗೆಹೇಳಿದನುಕರುಣಾ । ವನಧಿಕೊಂಡಾಡುತ್ತಭೂಪನ । ವಿನಯಗುಣಮಾಧುರ್ಯವನುನಿರುಪಮಮಹಾವ್ರತ
ವ ॥ ೧ ॥ ಚರಿಸುವುದುಮಾರ್ಗಶಿರಮಾಸದ । ಲರಸಸಿತಪಕ್ಷೇಲಿಸತಿಮುತ । ವೆರಸಿಕೇಳಿಮರುತ್ತುಗಳಜನ್ಮವನುವರವನಿತೆ ॥
ಸಿರಿಯನಾಶ್ರೀಪತಿಯಚರಣಾಂ । ಬುರುಹವನುಪೂಜಿಸುವುದವನೀ । ಸುರರನುಜ್ಞೆಯಲುದಯದಲಿಸುಸ್ನಾತೆಯೆಂದೆನಿಸಿ ॥ ೨ ॥
ಧರಿಸಿವಿಮಲಾಂಬರಗಳೆರಡನು । ಕರಚರಣದಂತಾಂಗಮಲವನು । ಪರಿಹರಿಸಿಶುಚಿಯಾಗಿನಿರ್ಮಲಭಾವಭಕುತಿಯಲಿ ॥ ಪರ
ಮಪುರುಷನಪೂಜೆಯನುವಿ । ಸ್ತರದಲಾಚರಿಸುವುದುಮಂತ್ರೋ । ಚ್ಚರಣೆಯನುಮಾಡುತ್ತಪಾದ್ಯಾರ್ಘ್ಯಾದಿಕಂಗಳಲಿ ॥ ೩ ॥
ಓಂನಮೋನಿರಪೇಕ್ಷನಿರ್ಗುಣ । ಪೂರ್ಣಕಾಮನಮೋಸ್ತುತೇಸುಮ । ಹೋಂನತೋರುವಿಭೂತಿಪತಯೆನಮೋನಮಸ್ತೇಸ್ತು ॥
ಸಂನತರಸಂಕಲ್ಪಸಿದ್ಧಿಯೆ । ಸಂನುತನೆಸಂಸಾರಘೋರವ । ಹಾರ್ಣವೋತ್ತಾರಕನೆಜಯಜಯಜಯನಮಸ್ತೇಸ್ತು ॥ ೪ ॥ ಪ್ರೀ
ತೆಯಾಗೆಲೆಲಕ್ಷ್ಮಿತ್ರಿಜಗ । ನ್ಮಾತೆತ್ರಿಭುವನವಂದ್ಯೆಜಯಸ । ಖ್ಯಾತವಿಷ್ಣುಪ್ರಿಯೆಮಹಾಭಗವತಿಮಹಾಮಾಯೆ ॥ ಖ್ಯಾತಿಕೀ
ರ್ತಿಮಹಾಪುರುಷಲ । ಕ್ಷ್ಮಾತಿಶಯಸಂಪಂನೆಸದಭಿ । ಪ್ರೀತಿಸಿದ್ಧಿಯನೆನಗೆಮಾಳ್ಪುದುಬೇಡುವೆನುನಮಿಸಿ ॥ ॥ ೫ ॥
ಮಂತ್ರ ॥ ಓಂನಮೋಭಗವತೆ, ಮಹಾಪುರುಷಾಯ, ಮಹಾನುಭಾವಾಯ, ಮಹಾವಿಭೂತಿಪತಯೆ, ಬಲಿಮುಪಹರಾಣೀತಿ ॥
ಪದನು ॥ ಎಂದುಪಾದ್ಯಾರ್ಘ್ಯಾಚಮನವೊದ । ಲಂದವಡದೀರೆಂಟುಸತ್ಕೃತಿ । ಯಿಂದಪೂಜಿಸಿಶೇಷಹವಿಯನುಹೋ
ಮವನುಮುಂನ ॥ ಎಂದುಮಂತ್ರವನನಲನಂಗನೆ । ಯಿಂದಸಂಯೋಜಿಸಿಘೃತಾರ್ಕವ । ನೆಂದೆನಲುಮಾಡುವುದುಹಂನೆರಡಾ
ಹುತಿಗಳಿಂದ ॥ ೬ ॥ ಮಾಡಿನೈವೇದ್ಯವನುತೋಳ್ಗಳ । ನೀಡಿದಂಡದವೋಲೊಡಲನೀ । ಡಾಡಿತ್ರಿಜಗಜ್ಜನಕಜನನಿಯರಂಘ್ರಿಕ
ಮಲದಲಿ ॥ ಕೊಡೆಕೈಗಳಮುಗಿದುಸಂಸ್ತುತಿ । ಮಾಡುವುದುಭಕುತಿಯಲಿಜಗವನು ; ಮಾಡುವುದುಪೂರ್ವೋಕ್ತಮಂತ್ರವಹ
ತ್ತುಸೇಳೆನಲು ॥ ೭ ॥ ಪರಮಪುರುಷೋತ್ತಮನೆಜಯಜಯ । ಸರಸಿಜೋದ್ಭವಮಾಯೆಪರಮೇ । ಶ್ವರಿದುರವ್ಯಯಮಹಿಮ
ಮೂಲಪ್ರಕೃತಿರೂಪಿಣಿಯೆ ॥ ಭರಿತಯಜ್ಞಾತ್ಮಕನೆಯಜ್ಞೇ । ಶ್ವರನೆಜಯಜಯಯಜ್ಞವಿದ್ಯೆ । ವರದಮೂರ್ತಿಯೆಜಯಮ
ಹಾಲಕ್ಷ್ಮಿಯೆನಮೋಜಯತು ॥ ೮ ॥ ದೇವನೀನೇದೇಹಿಯನಿಸುವ । ಜೀವರೂಪನುಭೋಕ್ತೃರೂಪನು । ದೇವಿನೀನೇ
ದೇಹಕರಣಸುಖಾದಿರೂಪೆಯಲ ॥ ದೇವನೀನೇಪ್ರತ್ಯಗಾತ್ಮನು । ದೇವಿನೀನೇನಾಮರೂಪಗು । ಣಾವಳೀರೂಪಿಣಿನಮೋಜ
ಯಜಯನಮೋಜಯತು ॥ ೯ ॥ ನೀವೆಜಗದೀಶ್ವರರುವರದರು । ನೀವೆಪರಮೇಷ್ಠಿಗಳುಭಕ್ತಜ । ನಾವಳೀಸಂಸಾರಿಕರುಸ
ದ್ಭಕ್ತದೇಹಿಕರು ॥ ನೀವುತಂನಮನೋಗತಾರ್ಥವ । ನೀವುದೊಲಿದೆಲೆತಂದೆತಾಯೆಮ । ಹಾವಿಭುಗಳಿರಕೊಂಬುದುಪಹಾರವ
ನುನೀವೊಲಿದು ॥ ೧೦ ॥ ಎಂದುಸಂಸ್ತುತಿಮಾಡಿಪರಮಾ । ನಂದಮೂರುತಿಲಕ್ಷ್ಮಿಸಹಿತಮು । ಕುಂದನನುಬೇರಿರಿಸಿಬಳಿಕುಪ
ಹಾರವನುಸಲಿಸಿ ॥ ಕುಂದನಾಚಮನವನುಕೊಟ್ಟಲ । ವಿಂದಮುಗುಳರ್ಚಿಸುವುದಾಸ್ತುತಿ । ವಂದನೆಗಳನುಮಾಳ್ಪುದಾಘ್ರಾಣಿಸಿನಿ
ವೇದಿಕನ ॥ ೧೧ ॥ ಸತಿಮುಗುಳ್ಪೂಜಿಸುವುದೊಲಿದ । ಚ್ಯುತನನೆಂದುದಯದೊಳುತಂನಯ । ಪತಿಯಭಾವಿಸಿಮಾಡುವುದು
ಶುಶ್ರೂಷಣಾದಿಕವ ॥ ಸತಿಗಶಕ್ತತೆಯಾದಡಿದನಾ । ಪತಿಸಮಾಚರಿಸುವುದುವನಿತಾ । ಕೃತವದಹುದೇಕಾರ್ಥಭಾಗಿಗಳವರಲಾ
ಯೆಂದ ॥ ೧೨ ॥ ಭಂಗವಾಗದವೋಲುನಡಸುವು । ದಂಗನೆಮಹಾವ್ರತವನಿಷ್ಟಫ । ಲಂಗಳನುಸಾಧಿಸುವಡಾಪತಿಸಹಿತಭೂ
ಸುರರ ॥ ಅಂಗನೆಯರನುಗಂಧಪುಷ್ಪಾಂ । ನಂಗಳಲಿಭೂಷಣಗಳಲಿರಮೆ । ಶಾರ್ಙ್ಗಧರರೆಂದರ್ಚಿಸುವುದನುದಿನಸುಬುದ್ಧಿಯಲಿ ॥
ಬಸದುಪೂಜಿಸಿತಂನನುದ್ವಾ । ಸಿಸುವುದಾಶ್ರೀಪತಿಯನಿದಿರಲಿ । ಶಶಿವದನೆತಾನುಂಬುದಾವಿಷ್ಣುಪ್ರಸಾದವನು ॥ ಅಸಮಹೃದ
ಯವಿಶುದ್ಧಿಗೋಸುಗ । ವಸುಮತೀಪತಿಕೇಳುತಂನಭಿ । ಲಷಿತಫಲಸಿದ್ಧಿಗೆಮಹೋಸುತೆಯಾಗಿಮೌನದಲಿ ॥ ೧೪ ॥ ಚರಿಸಿಮಾ
ಸದ್ವಾದಶವನು । ತ್ವರಿಸಿವತುಷವನಬಲೆತದನಂ । ತರದಕಾರ್ತಿಕಮಾಸದಾಪಕ್ರಮಿತದಿವಸದಲಿ ॥ ತರಣಿಯುದಯದಲೆದ್ದು
ವಿಂದಾ । ದರದಲರ್ಚಿಸಿದಾಮುಕುಂದನ । ಚರಣವನುಮುಂನಿನವಿಧಾನದಲರಸಕೇಳೆಂದ ॥ ೧೫ ॥ ಕ್ಷೀರಪಕ್ವಾಹುತಿಯಲಾ
ಜ್ಯಾ । ಪೂರಯುತವೆನೆಪಾಕಯಜ್ಞೇ । ದ್ಧಾರವಿಧಿಯಲಿಹೋಮಿಸುವುದಗ್ನಿಯಲಿಹಂನೆರಡ ॥ ನಾರಿಸಹಿತಾಪತಿಚರಿಸುವುದು ।
ಬಾರಹದ್ವಿಜರಿಂಗೆಭೋಜನ । ಭೂರಿಭೂಷಣವಸನತಿಲದಾನಾದಿಸತ್ಕೃತಿಯ ॥ ೧೬ ॥ ತುಷ್ಟಿವಡಿಸೀದ್ವಿಜರನಖಿಳಾ । ಭೀಷ್ಟ
ದಾನಂಗಳಲಿಬಳಿಕವಿ । ಶಿಷ್ಟಮಂತ್ರಾಕ್ಷತೆಗಳನುಕೈಕೊಂಡುಭಕ್ತಿಯಲಿ ॥ ತುಷ್ಟನಾದಾಚಾರ್ಯನನುಮುಂ । ದಿಟ್ಟುಕೊಂಡಾದ್ವಿ

ಜರನುಜ್ಞೆಯ | ಶಿಷ್ಟಬಂಧುಗಳೊಡನೆಮಾಳ್ಪುದುಭೋಜನವನೊಲಿದು || ೧೭ || ಶೇಷವನುನಿಜಪತ್ನಿಗೀವುದು | ವಾಸುದೇ
ವರಮಾಂಘ್ರಿಕಮಲೋ | ಪಾಸನಾಫಲಸಿದ್ಧಿಕರವನುಸೌಭಗಪ್ರದವ || ಲೇಸೆನಿಸಸಂತಾನಕರವನು | ದೋಷಹರವನುಸಡ
ವಳಾಲ | ಕ್ಷ್ಮೀಶನೊಲವನುವನಿತೆಯುಂಡುಮನೋರಥದಫಲವ || ೧೮ || ಪುರುಷರಿದನಾಚರಿಸಿಪಡೆವರು | ಸಿರಿಯನಾಯು
ಷ್ಯವನುಸತಿಯರು | ಚರಿಸಿದರೆಸೌಭಾಗ್ಯವನುಪತಿಯಾಯುವನುಸುತರ || ಚರಿಸಿಕಂನಿಕೆಲಕ್ಷಣಾನ್ವಿತ | ವರನಪಡೆವಳುಸುತ
ರುಟಾಳದ | ಸರಸಿಜಾನನೆಜೀವಸುಖರನುಸಕಲಸಂಪದವ || ೧೯ || ಪುಷ್ಟಿಕರವಿದುಕೃಶತನುಗಳಿಗೆ | ಪುಷ್ಟಿಕರವಿದುರೋಗಿ
ಗಳಿಗೆವಿ | ನಷ್ಟಕರವಘನಿಕರಕೂಪಂಗಳಲಿಪತಿತರಿಗೆ || ಇಷ್ಟಗತಿಕರಕೇಳಿದರೆಸಂ | ತುಷ್ಟಿಕರಪಿತೃಗಳಿಗಸಲೆಪರಿ | ತುಷ್ಟಿಕ
ರದೇವತೆಗಳಿಗೆಪಠಿಸಿದರೆಕರ್ಮದಲಿ || ೨೦ || ಆವನಿದನೋದುವನುಕೇಳುವ | ನಾವನೀವ್ರತಮಹಿಮೆಯನುಮರು | ದಾವಳಿಯ
ಜನ್ಮವನುಪುಣ್ಯಾಖ್ಯಾಯಿತೆಯನಿದನು || ಈವನವರಿಂಗಿಷ್ಟವನುಹೋ | ಮಾವಸಾನದಲಗ್ನಿಲಕ್ಷ್ಮೀ | ದೇವಿವರನಿತ್ಯಾತ್ಮಗೋ
ಪೀನಾಥನೊಲವಿನಲಿ || ... ಶ್ರೀ ಕೃಷ್ಣಾಯನಮಃ ... || ೨೧ ||

ಅಂತು ಸಂಧಿ ೩೨ಕ್ಕಂ ಪದನು ೬೫೩ಕ್ಕೆ ಮಂಗಳಮಸ್ತು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಟಮಸ್ಕಂಧಸ್ಸಮಾಪ್ತಃ

ಆರನೇ ಸ್ಕಂಧ ಸಂಪೂರ್ಣವು.

ಬೃಂದಾವನಾಂತ ಸಂಚಾರಿಣೇನಮಃ.

ಕನ್ನಡ ಭಾಗವತ ಸಪ್ತಮಸ್ಕಂಧ ಪ್ರಾರಂಭವು

ಶಿಶುಪಾಲನ ವಧೆ.

ಸೂಚನೆ|| ದೇವಋಷಿಕುಲಮೌಳಿಮಣಿನರ | ದೇವಕುಲಕೌಸ್ತುಭಯುಧಿಷ್ಠಿರ| ದೇವಋಷಿವರ್ಣಿಸಿ
ದನಧ್ವರಮುಖದಲಚ್ಯುತನ || ... ...

ಪದನು|| ವರಮುನಿಪಕರುಣಿಸುವುದೆನಗೆ | ಜ್ವರಿಮುಕುಂದನಲೀಲೆಸರ್ವೇ | ಶ್ವರನುಸರ್ವಾತ್ಮಕನುಸರ್ವಾಧಾರತಾ
ನಾಗಿ || ಸುರರುತನ್ನವರೆಂದುನೆರೆಪತಿ | ಕರಿಸಿಪರರೆಂದಸುರರನುಸಂ | ಹರಿಸುವೀಮತಿಭೇದವೆಂತುಪಸಂನವಾಯ್ತೆಂದ || ೧ ||
ಅರಿಯಬಾರದುಮುನಿಪತನಗಿದ | ವರಿವವೊಲುವಿಸ್ತರಿಸುವುದುಬೇ | ಸರವೆಬಹಳಕೃಪಾನಿಧಿಯಲಾನಿಮ್ಮಚರಣವಿದು || ಅರಿ
ಯದವರಿಗೆಆತ್ಮವಿದ್ಯೆಯ | ನರುಪುವದರಿಂದಧಿಕಪುಣ್ಯದ | ನೆರವಣಿಗೆಬೇರಾವುದೆನಲಿಂತೆಂದನಾಮುನಿಪ || ೨ || ಲೇಸನಾದಿ
ದಭೂಪಕಾಯ | ಕ್ಲೇಶವನುನೋಡುವರೆಬೋಧೆಗೆ | ಬೇಸರುವರೇಬಲ್ಲವರುಸಚರಾಚರಂಗಳಲಿ || ವಾಸುದೇವನಲಾವಿಚಾರಿ
ಸ | ಲೀಸಮಸ್ತವಿದೆನುತವೇದ | ವ್ಯಾಸಮುನಿಯನುನೆನೆದುತನ್ಮಯನಾಗುತಿಂತೆಂದ || ೩ || ಸತ್ವರಜತಮವೆಂಬವಿಪ್ರುರಾ |
ಜೋತ್ತಮನೆಮಾಯಾಗುಣಂಗಳು | ವೃತ್ತಿಕೆಯಘಟದಂತೆತೋರ್ಪವುಸತ್ಯರೂಪದಲಿ || ಸತ್ವವೃತ್ತಿಯಲಮರರಿಂಗು | ತ್ಪತ್ತಿ
ಯಹುದುರಜಸ್ತಮೋಗುಣ | ದತ್ಯಧಿಕದಿಂದಸುರರುದ್ಭವವರಸಕೇಳೆಂದ || ೪ || ಸುರರುವಿಜಯಿಗಳರಸಸತ್ವೋ | ತ್ಕರುಷದ
ಲಿವಿಪರೀತನಸುರರಿ | ಗೊರವಡಿತರೋತ್ಕರುಷದಲಿಜಯವಸುರಸಂತತಿಗೆ || ಸುರರಿಗದುವಿಪರೀತವಪ್ಪುದಂ | ಶರಡಾತಮ್ಮೊಳು
ಕಾದಿಕಡಿದಡೆ | ಹೊರೆಯನೆಂದದರೊಳಗೆಗುಣರಹಿತಾತ್ಮನೋಡೆಂದ || ೫ || ಸತ್ವಗುಣನದುಪಾಧಿಯಾಗಿಪ್ಪ | ದುತ್ತಮೋತ್ತ
ಮವಿಷ್ಣುವಿಗೆನಿಜ | ತತ್ವಸಾಕ್ಷಾತ್ಕಾರವದರಿಂದಪ್ಪುದುಜೀವರಿಗೆ || ಎತ್ತಲೊಲವುದುಸತ್ಯವದರದ | ರತ್ತಲೊಲವುದುದೈವದ್ವೈ
ಷವ | ದೆತ್ತಲೊಲವುದುವಿಜಯವತ್ತಲನೃಪತಿಕೇಳೆಂದ || ೬ || ಈಸಮಾಹಿತಮತದಲೊಂದಿತಿ | ಹಾಸವುಂಟೆಲೆಭೂಪಸಂಶಯ |
ದೋಷದುರ್ಗದುರಂತದುಃಖೋತ್ತಾರಕರವೆನಿಪ || ವಾಸುದೇವಚರಿತ್ರಗುಣಶೀ | ಯಾಷಭಾವಿತತತ್ವದಾಂಬುಜ | ದಾಸರ
ಮಾಳಚರಿತ್ರಗರ್ಭಿತವರಸಕೇಳೆಂದ || ೭ || ರಾಜಸೂಯಮಹಾಧ್ವರವನರಿ | ರಾಜಗಜಪಂಚಾನನನುಸುರ | ರಾಜವಿಭವಾಧಿ

ಕೆಮಹಾವಿಭವದಲಿನೆರೆರಚಿಸಿ ॥ ರಾಜಮಾನಮುಕುಂದಚರಣಾಂ | ಭೋಜದತ್ತಾರ್ಪಣಯುಧಿಷ್ಠಿರ | ರಾಜನೆಸೆದನುಸಕಲ ಸುರನರಭೂಪಜನಸಹಿತ ॥೮॥ ಆಮಹಾಧ್ವರದಗ್ರಪೂಜಾ | ಕಾಮುಕನುಶಿಶುಪಾಲನಾಲ | ಪ್ರೇಮಮನೋರಮನೊಡನೆ ಮತ್ಸರಿಸುತ್ತ ಸಭೆಯೊಳಗೆ ॥ ತಾಮಸನುನಿಂದಿಸಿಮುಕುಂದನ | ಧಾಮವನುಪಡೆದುದನುಕಾಣುತ | ಭೂಮಿಪತಿಬೆಸಗೊಂಡ ಸನಾರದಮಹಾಮುನಿಯ ॥೯॥ ಆಹಶಿವಶಿವಬಹಳಜನ್ಮ | ವ್ಯೂಹಚಿಂತಿತಯೋಗನಿಷ್ಠರು | ಗಾಹುಗೊಳ್ಳದಗರುವಜ್ಜೈವನ ನಕಟನಿಂದಿಸುತ ॥ ಹೊರವೆಮುಕ್ತಿಗೆಸಂದನಾಕಡು | ಬಾಹಿರನುಹರಹರಮಹಾದ್ಭುತ | ವೀಹದನನೆಲೆಮುನಿಪಕರುಣಿಸಬೇಹು ದೆನಗೆಂದ ॥೧೦॥ ಮುಟ್ಟಲರಿಯದೆವೇದಶತವಿಂ | ಗೊಟ್ಟಮರಳನಹೋದಹೆಜ್ಜೆಯ | ಬಟ್ಟೆಗಾಣವುಯೋಗಿಪಕ್ಷ್ವಮಸಂಗ ಳೀಹರಿಯ ॥ ಹುಟ್ಟಿದಾದಿನದಂದುಮೊದಲೀ | ದುಷ್ಟನೀಶಿಶುಪಾಲನಿಂನೆಗ | ನೆಟ್ಟನೇನಿಂದಿಸಿವಿಮುಕ್ತಿಗೆಸಂದನೆಂತೆಂದ ॥೧೧॥ ಐದಿಪಾವನುತಪಭಯಮಾರ್ಗದ | ಕೈದುಕಾರರುಕಾಣಲರಿಯರು | ವೈದಿಕೋಕ್ತವಿಧಾನತತ್ವದಲಾವನಂಘ್ರಿಯನು ॥ ಈದುರಾ ತ್ಮಕನೆಂತುಮುಕ್ತಿಯ | ನೈದಿದನೊಭಾರವನುಕೃಷ್ಣನ | ಬೈದಡಲ್ಲದೆಮುಕ್ತಿಯಾಗದೆಮುನಿಪಹೇಳೆಂದ ॥೧೨॥ ಏನನೀಯ ಚ್ಯುತನನಿಂದಿಸು | ತೇನಕಂಡೆನುವಿಲಯಘೋರಾಂ | ಭೋನಿಧಿಯಲಾಳನೆಮಹಾದೇವಿಯಘಾತ್ಮಕನು ॥ ತಾನಿದೆಂತೈಮುನಿಪ ತತ್ವ | ಜ್ಞಾನಿಗಳವೊಲುಭಕುತಿಮಾಳ್ಪಮ | ಹಾನುಭಾವನವೊಲುಮುಕ್ತಿಗೆಸಂದನಿವನೆಂದ ॥೧೩॥ ನಾಲಿಗೆಯಮೇಲಕಟಮಾ ನಿಪತಿ | ಹೇಳೆನಗೆಯದುಕೃಷ್ಣದುರ್ಮತಿ | ಬೀಳನೆಂತಕಟಶಿವಶಿವತಿದುಷ್ಟರದುರ್ಗತಿಗೆ ॥ ಆಳನೆಂತೈಘೋರದುಃಖದಿ | ಕಾಲನ ರಕಾರ್ಣವದಲೀಶಿಶು | ಪಾಲಕನುಮೋಕ್ಷಾಂತನಕ್ತನುಕರುಣಿಸುವುದೆಂದ ॥೧೪॥ ಅರಸಕೇಳೆಂದಾಯುಧಿಷ್ಠಿರ | ಧರಣಿಪಾಲ ನನುನಡಸಂಶಯ | ದಿರವನಾಲಿಸುತಾಮಹಾಸಭೆಯೈದೆಕೇಳುತಿರೆ ॥ ಮುರಹರನಪದಯುಗಕೆಮುಕುಳಿತ | ಕರಸರೋರುಹನಾ ಗಿಮುಂಗಳ | ಚರಿತವನುಪಾಡಿದನುಪರಮಾನಂದದಲಿಮುನಿಪ ॥೧೫॥ ಕೇಳುಧರ್ಮಜನೆರೆದಸಭ್ಯರು | ಕೇಳಿರೈವಿಪ್ರೋತ್ತ ಮರುನೆರೆ | ಕೇಳಿರೈಭೂಪೋತ್ತಮರುಸಕಲಾಶ್ರಮೋತ್ತಮರು ॥ ಕೇಳಿರೈಕಮಲಾಕ್ಷನಮಳವಿ | ಶಾಲಚಾರಿತ್ರವನುಸಂಶಯ | ಲೋಲಚಿತ್ತರುಕೇಳುವುದುಶಿಶುಪಾಲಸಂಗತಿಯ ॥೧೬॥ ಸ್ತುತಿಗೆನಿಂದೆಗೆಪರಿಭವಕೆಸ | ತ್ಕೃತಿಗೆಸರ್ವೋಪದ್ರವಕೆಕ | ಲ್ಪಿತವಲಾತನುವಿದುನಿಜಾತ್ಮಜ್ಞಾನದಹಾನಿಯಲಿ ॥ ಮತಿಗೆತೋರ್ಪುದುಕದ್ರಹಿತನ | ಚ್ಯುತನುತನಗೀನಿಂದೆಮೋಣಿ | ಸ್ತುತಿ ಗಳುಂಟೇಸರ್ವಚೇತನಸಾಕ್ಷಿರೂಪಂಗೆ ॥೧೭॥ ಇದುಸಕಲಜೀವರಿಗೆಮಮತಾ | ಸ್ಪದವೆನಿಸಿತೋರುವದುಸಂಸ್ಕೃತಿ | ವಿದಿತವಿದೆಲಾ ದಂಡಪಾರುಷ್ಯಂಗಳಂತಂತೆ ॥ ಇದಿರೆನಿಸಿತೋರ್ಪೊಡಲಲಾನಂ | ಬುದನೃಪೋತ್ತಮಸಕಲದುಃಖಾ | ಸ್ಪದವಿದಲ್ಲಖಿಳಾತ್ಮಕಂಗ ಭಿಧಾನಶೂನ್ಯಂಗೆ ॥೧೮॥ ತನುರಹಿತನದ್ವಯನಖಂಡಿತ | ನನುಭವಾನಂದೈಕವಿಗ್ರಹ | ನೆನುಭವಿಸುವನದೆಂತಹಂಕೃತಿಶೂನ್ಯ ನೀತೋರ್ಪ ॥ ಜನನಮರಣಸ್ಥಿತಿಪರಾಭವ | ಜನಿತಸಂಕ್ಲೇಶವನುಮಾಣದೆ | ತನುವಿದಾನೆಂಬಜ್ಞನಂತಿರವರಸಕೇಳೆಂದ ॥ ಅದುನಿಮಿತ್ತಖಿಳಾತ್ಮನಲಿಮಾ | ಳ್ಪದುಮನೋವೃತ್ತಿಯನುನಿರ್ವೈ | ರದಲಿಭಯದಲಿಭಕ್ತಿಯಲಿವೈರಾಗ್ಯಬಂಧದಲಿ ॥ ವಿದಿತ ಕಾಮಾಸಕ್ತಿಯಲಿಮೋ | ಹದಲಿಬಂದುಸ್ನೇಹದಲಿಲೋ | ಭದಲಿತತ್ಪರನೆನಿಸುವುದೆಪುರುಷಾರ್ಥಕೇಳೆಂದ ॥೨೦॥ ವೈರಭಾವ ದಲಚ್ಯುತಾತ್ಮತೆ | ಸೇರುವಂತಿರೆಭಕುತಿಯಲಿಧಿಟ | ಸೇರಲರಿಯದುಮುಕ್ತಿಕೇಳೈಭೂಪಭಾವಿಸಲು ॥ ವೈರಭಯದಲಿನೆನಹುಪೇ ಶ | ಸ್ಕಾರಿಯನುನೃಪಕೇಳದೈಸಂ | ಸಾರಿಯಾಗನೆತತ್ವರೂಪಧ್ಯಾನಮಾತ್ರದಲಿ ॥೨೧॥ ಎಂದಡಾವುದುಚಿತ್ರವೀಗೋ | ವಿಂದನಮಳಪದಾರವಿಂದ | ದ್ವಂದ್ವವನುವೈರದಲಿಕಾಮಕ್ರೋಧಲೋಭದಲಿ ॥ ಒಂದುನೆವದಲಿನೆನೆದುಮುಕ್ತಿಗೆ | ಸಂದವರು ಹಲರುಂಟುದಾನವ | ವೃಂದದಲಿದೈತ್ಯರಲಿದುಷ್ಟನೃಪಾಲರೊಳಗೆಂದ ॥೨೨॥ ಕಾಮದಲಿಗೋಪಿಯರುಸಹಜ | ಪ್ರೇಮದಲಿ ಯಾದವರುಬಂಧು | ಪ್ರೇಮದಲಿನೀವರಸನಾವೀಭಕ್ತಿಯೋಗದಲಿ ॥ ಭೂಮಿಪತಿಭಯದಿಂದಕಂಸನೆ | ನಾಮನಿಂತೊಂದೊಂ ದುನೆವದಿಂ | ದೀಮುಕುಂದನನೆನೆದುಯೋಗ್ಯತೆಪಡೆದರಿವರೆಂದ ॥೨೩॥ ಆವನೊಬ್ಬಲ್ಲೈವರೊಳಗೆವೆ | ನಾವನೀಪತಿನೋ ಳ್ಪಡೀರಾ | ಜೀವನಾಭನನಾವಪರಿಯಿಂದಾದಡನವರತ ॥ ಭಾವಿಸಿದವನೆಯಲ್ಲತದ್ಗತ | ಭಾವದಲಿಮುರಹರನಪದವನು | ಭಾ ವಿಸುವುದೇಭವವಿನಾಶನವರಸಕೇಳೆಂದ ॥೨೪॥ ಆದಿಯಲಿಭೂಪತಿಗಳೀಕನು | ಲೋದರನಪಾರುಷದಮುಖ್ಯರು | ಚೇದಿ ಭೂಪತಿದಂತವಕ್ತ್ರರುವಿಪ್ರಶಾಪದಲಿ ॥ ಆದರೀಪರಿವಿಷ್ಣುಪದದಿಂ | ದೂದಿದುರುನಿಜಕರ್ಮಗತಿವರ | ಮೇದಿನೀಪತಿಕೇಳೆನ ಲ್ಕಿಂತೆಂದನಾಭೂಪ ॥೨೫॥ ಏನಿದೇನೈಮುನಿಪಕರ್ಮವಿ | ಹೀನರಿಗೆಭವವೆಂತುಬಂದುದು | ಹಾನಿಯಲ್ಲಾಹರಿಪರಾಯಣರಿ ಗೆಮಹಾದೇವ ॥ ಆನಿದನುಹೇಳೆಂತುನಂಬುವೆ | ನೀನಿಖಿಳಜನವಿಂತಿದನುಸನು | ಮಾನಿಸುವುದಕಟಕಟವಿಸ್ಮಯವಾಯ್ತಲಾಯೆಂ ದ ॥೨೬॥ ಆರುಕೊಟ್ಟರುಶಾಪವನುತಾ | ವಾರುಹೆಸರೇನೀಮುಕುಂದನ | ಪಾರುಷದರೆಂದೆನಿಸುವರುವೈಕುಂಠವಾಸಿಗಳು | ಸೇರಿದರುದುರ್ಗತಿಗೆಹರಹರ | ಚಾರುಪದಸೇವಕರುಯೀವಿಧಿ | ವೈರದಲಿಬೈದರಿಗೆಮುಕುತಿಯೆಶಿವಶಿವಾಯೆಂದ ॥೨೭॥ ಕಾಲ ಪಾಶವಹರಿದುಕರ್ಮದ | ಕೋಳವನುಕಿಡಿಯೊದೆದುತನುಕರ | ಣಾಳಿಗಳಕೈವೊಯ್ದುಮಾಲಾವಿದ್ಯೆಯನುಜರೆದು ॥ ಮೇಳೆನಿ

ಭರ್ಗಯವೆನಿಪಲಕ್ಷ್ಮೀ । ಲೋಲಪದದಲಿನಿಂದುಪಾರ್ಶದ । ಮಾಳ್ಗಗಳುತಾವೆಂತುಜನಿಸಿದರೆಂದಡಿಂತೆಂದ ॥ ೨೮ ॥ ಅಹುದು
ಸಂಶಯಹೇತುವುಂಟೆರೆ । ಮಹಿಮನಿಂನಯಮಾಕಾತಸ್ಸದ । ಮಹದತಿಕ್ರಮವೇನಮಾಡದುಕೇಳುಭೂಪತಿಯೆ ॥ ದೃಹಿಣನಂ
ದನರೊಂದುದಿನನಿಜ । ಮಹಿಮರೀಸನಕಾದಿಗಳುವಿ । ಗ್ರಹವಿದೂರರುಹೋದರಾವೈಕುಂಠಪುರವರಕೆ ॥ ೨೯ ॥ ಹೊಕ್ಕರ
ವರ್ಯೆದಾರುವರುಷದ । ಮಕ್ಕಳಂತಿರೆಸಕಲಲೋಕವ । ನೊಕ್ಕಲಿಕ್ಕುವಕಾಲನನುಕಳದಾಮಹಾತ್ಮಕರು ॥ ಅರ್ಕಕೋಟಿಪ್ರಭ
ರುಬಾಗಿಲ । ಮಿಕ್ಕುಹಲವನುಮುಂದೆಬರುತಿರ । ಲಿಕ್ಕೆಲದಜಯವಿಜಯರವರನುತಡೆದರವರೆಂದ ॥ ೩೦ ॥ ಬಾಲರಿವರಾರೆನುತ
ಬೆತ್ತದ । ಕೋಲನಡ್ಡೈಸಿದರೆಯಿವದಿರ । ಮೇಲೆಬಿದ್ದುದುಕೋಪಕಾನುಕ್ರೋಧವರ್ಜಿತರ ॥ ಕೇಳುನೃಪಕೃಷ್ಣಾಂಘ್ರಿಕಮಲ
ವಿ । ಶಾಲದರುಶನಸೌಖ್ಯಸಿದ್ಧಿಗೆ । ಹೇಳುವಿಘ್ನವಮಾಡಲಾರಿಗೆಸಮತೆಯಹುದೆಂದ ॥ ೩೧ ॥ ಪೋಗಿನೀವೆಲೆತರಳರಿರನಿ ।
ಭರ್ಗಗಧೇಯರಿದಿಲ್ಲಿನಿಮಗಿಂ । ಲಗದಿಳವುದುಕೆಳಗೆಮಹದಾಸುರವೆನಿಪಗತಿಗೆ ॥ ಯೋಗಿಗಳುನಾವೆಂಮತಡವವ । ರಾಗಿನಿಂ
ದಿರೆಯನಲುಪದದಲಿ । ಬಾಗಿತಪ್ಪಿದೆವೆನಲುಕೊಟ್ಟರುಮೋಕ್ಷವನುನೆಗುಳೆ ॥ ೩೨ ॥ ಮೂರುಜನ್ಮಾಂತರಕೆನೀವೀ । ದೇರು
ವದುಮತ್ತಿದಕೆನುಡಿಗಳು । ಜಾರಲರಿಯದುಭೀತಿಬೇಡೆನೆಬಿದ್ದರಲ್ಲಿಂದ ॥ ನೀರೆದಿತಿಧರಿಸಿದಳುಗರ್ಭವ । ನೋರುಗುಡಿಸಲುಭು
ವನಸುರಕುಲ । ಸೂರೆಗಾರರುಜನಿಸಿದರುದಿತಿನಂದನರುಧರೆಗೆ ॥ ೩೩ ॥ ನೃಪಹಿರಣ್ಯಾಕ್ಷನುಹಿರಣ್ಯಕ । ಶಿಪುವೆನಲುಹದಿನಾಲ್ಕು
ಲೋಕವ । ನಪರಿಮಿತವಿಕ್ರಮರುಭೋಗಿಸಿದರುನಿಜೇಚ್ಛೆಯಲಿ ॥ ವಿಪುಳಬಳರನುಕೊಂದನೀನಿ । ಷ್ಕೃಪವರಾಹನೃಸಿಂಹ
ರೂಪದ । ಉಪಶೃತಾಭಯದಾನದಲಿಮುರವೈರಿಕೇಳೆಂದ ॥ ೩೪ ॥ ಆದುರಾತ್ಮಹಿರಣ್ಯಕಶಿಪುನಿ । ಜೋದರೋದ್ಭವವೆ
ನಿಸುವಪ್ರಹ್ಲಾ । ದನನುಕೊಲಲೆಂದುವಿವಿಧೋಪಾಯವನುರಚಿಸಿ ॥ ಈದಯಾನಿಧಿನಿಜಶರಣನಂ । ದಾದರಿಸಿಕಂಭದಲಿನರಹ
ರಿ । ಯಾದನುಗ್ರಾವೇಶದಲಿಭೂಪಾಲಕೇಳೆಂದ ॥ ೩೫ ॥ ಬಲ್ಲಿದರುಹರಿಶರಣರೆಂಬುದ । ನಲ್ಲಿಕಂಡೆನುಭೂಪರಕ್ಕಸ । ರಳ್ಳಿಯನು
ಹಾಯ್ಸಿದರೆಸಬಳದಮೊನೆಗಳೇಮುರಿದು ॥ ಚಲ್ಲಿದವುವಿಷವಮೃತವಾಯ್ತುರಿ । ಗೊಳ್ಳಿಸೀತಳವಾಯಿತೀತನ । ಶೆಲ್ಲಗರಕೊನೆ
ಕೊಂದುದಸುರನದಾನವೇಶ್ವರನ ॥ ೩೬ ॥ ಬಳಿಕರಾವಣಕುಂಭಕರ್ಣರೋ । ಜ್ವಲಿತನಾಮದಲುದಿಸಿದರುವರ । ಲಲನೆಕೈಕಸೆಯು
ದರದಲಿವಿಶ್ರವಗೆಸುತರಾಗಿ ॥ ಇಳೆದುರಾಘವನಾಗಿಕೊಂದನು । ಖಳರನುಗ್ರಾಹವದಮೊಖದಲಿ । ಜಲಜನಾಭನುಭೂರಿಭೂತ
ಮಾತ್ರಕಂಟಕರ ॥ ೩೭ ॥ ರಾಯನೀನೀಕಥೆಯಮಾರ್ಗಂ । ದೇಯನಲಿಕೇಳಿದೆಯೆಕಮಲದ । ಳಾಯತಾಕ್ಷನರಾಘವೇಂದ್ರ
ನಪುಣ್ಯಚರಿತವನು ॥ ಈಯುಗದಲೆಭೂಪನಿನ್ನಯ । ತಾಯಿತಂಗಿಗೆಸುತರೆನಿಸಿಮ । ತ್ತೀಯಶೋನಿಧಿಯನುಜರುದ್ಭವಿಸಿದ
ರುಕೇಳೆಂದ ॥ ೩೮ ॥ ಮೂರನೆಯಭವವಾಯ್ತುಚಕ್ರದ । ಲೂರಿದನುಗಂಟಲನುನಿಜಗತಿ । ಗೇರಿಸಿದನಾತ್ಮಾನುಜರಜಯವಿಜಯ
ಸಂಜ್ಞಕರ ॥ ವೀರಕೇಳೀನಳಿನಲೋಚನ । ನಾರುಮುಡಿಹಂಗಿಗನುಭಕ್ತರಿ । ಗೋರುಗುಡಿಸಿದಡೊಕ್ಕಡುಡುಗುವನವರಬೆಂ
ಬಿಡದೆ ॥ ೩೯ ॥ ಎಂದಡಾಮುನಿಪತಿಯಚರಣ । ದ್ವಂದ್ವದಲಿತಲೆವಾಗಿಕುರುಕುಲ । ನಂದನನುಪುಳಕಾಶ್ರುಪೂರದಭಾರದಲಿ
ಕುಸಿದು ॥ ನಿಂದುಬಿಂನಹಮಾಡಿದನುಮುನಿ । ವಂದ್ಯಕರುಣಿಸಬೇಹುದೆನಗಾ । ತಂದೆಮಕ್ಕಳವೈರವಘಪರಿಯಂತಲೆನಗೆಂದ ॥
ಮಕ್ಕಳೆಂದೆರೆಮರುಗಿಜೀವನ । ನಿಕ್ಕುವುದೆಲಾಲೋಕಮತ್ತಾ । ಮಕ್ಕಳುತ್ತಮರಾದಡಾವುದುಹಾನಿಹೆತ್ತರಿಗೆ ॥ ಇಕ್ಕಿದನೆಗರಿ
ಮಾಡಿಮಾರಿಗೆ । ಮಕ್ಕಳಾಟಕೆಯೋಸುರಾರಿಗೆ । ಹೊಕ್ಕದೋತಲೆಯೊಳಗೆಮರುಳೆಲೆಮುನಿಪಹೇಳೆಂದ ॥ ೪೧ ॥ ತಂದೆಕೊಲುವ
ರೆಸುತರುಜೀವಿಸಾ । ವಂದವೆಂತೆಲೆಮುನಿಪಮನದಲಿ । ಸಂದೇಹಕ್ಕೆಡೆಮಾತುತಿದೆಯೇಶ್ರದ್ಧೆಯಾತಣಕೆ ॥ ಕೊಂದನೋಕೊಲಲೆಂ
ದುಮನವನು । ತಂದೆನೋಕರುಣಿಸುವುದೀಗೋ । ವಿಂದನೇನರಸಿಂಹನಾದನೆಶಿವಶಿವಾಯೆಂದ ॥ ೪೨ ॥ ಕರುಣಿಸೈಮುನಿನಾಥ
ವಿಶ್ವಂ । ಭರನವಿಮಳಚರಿತ್ರಸುಧೆಯನು । ದುರಿತದುಃಖಜ್ವರಗೃಹೀತಂಗೌಷಧವನೆನಗೆ ॥ ಪರಮಭಾಗವತಶ್ರೋತ್ರಮನಶುಭ ।
ಚರಿತವನುತಿಳಿವಂದದಲಿವಿ । ಸ್ತರಿಸಬೇಕೆಂದೆರಗಿದನುಸತ್ಯಾತ್ಮನಿಷ್ಠಂಗೆ ॥ … … ॥ ೪೩ ॥

ಪ್ರಥಮ ಸಂಧಿ ಸಮಾಪ್ತ ಮಂಗಳಮಸ್ತು.

ಎರಡನೆಯ ಸಂಧಿ.

ಹಿರಣ್ಯಕಶ್ಯಪು ಬ್ರಹ್ಮನಲ್ಲಿ ವರವ ಪಡೆದದ್ದು.

ಸೂಚನೆ ॥ ವೈರಿಗಜಪಂಚಾನನನುರಣ । ಧೀರದೇವರದೇವನಾಸುರ । ವೈರಿಪಡದನುಪದುಮಭವನಲಿ
ನಿಜಮನೋರಥವ ॥ … … … …

ಪದನು ॥ ಅರಸಕೇಳಚ್ಯುತನಲೀಲಾ । ಚರಿತವನುತದ್ಭಕ್ತಜನಸು । ಚ್ಚರಿತವನುಸಕಲಾಘಸಂಚಯಸಾರಸಾಧನವ ॥
ಸುರವಿರೋಧಿನಿಜಾನುಜನನೀ । ಮುರಹರನುವಾರಾಹದಲಿಕೊಲ । ಲುರಿಕಳಿತುದರದಲ್ಲಿನಿಂದೋಲಗದಲಿಂತೆಂದ ॥ ೧ ॥

ತೀಡಿದನುಕರತಳವನಡಿಗಡಿ | ಗಾಡುಗಚ್ಚಿದನನುಜನೆಳ್ಳವಿನ | ಕೇಸರಾ... ...ಗಳಲಿತನಿಗಿಡಿಯ || ದಾಡೆಗಳುದಳ್ಳು
ರಿಯನುಗುಳಲು | ನೋಡಿದಾದೆಸೆಹೊಗೆವುಸಗಿದುದು | ರೂ... ...ಗ... ...ಂಬರ
ಶಕುನಿವಾಸೇ | ಜ್ವಲತಿ... ...ಕ್ಷಿಗತ ...ಕ್ಷೇತ್ರೇ ...ಸುಳ
ಕೆತಾಹಂದಿವುಲಕ್ಷತಿ | ... ...ಳಿ
ದಿಚ್ಚೆ ...ತೆ

ಶ್ರೀಕೃಷ್ಣ ಪರಬ್ರಹ್ಮಣೇನಮಃ.

ಕನ್ನಡ ಭಾಗವತ ಪ್ರಥಮಸ್ಕಂಧ ಪ್ರಾರಂಭವು.

ಪದನು || ಶ್ರೀಗಣಾಧೀಶ್ವರನುಸನ್ನುತ | ಯೋಗಭೋಗಫಲಪ್ರದಾಯಕ | ನೀಗೆವುಗೆಯಿಷ್ಟಾರ್ಥವನುನಿರ್ವಿಘ್ನದಾಯಕ
|| ಭೋಗಿಭೋಗವಿಭೂಷಣನುಸಕ | ಲಾಗಮೈಕಸ್ತುತ್ಯಗುಣಗಣ | ಸಾಗರನುಕಾರುಣ್ಯನಿಧಿವಿಘ್ನೇಶನೊಲವಿನಲಿ ||೧|| ಅಭ
...ವರದಜಪಾಕ್ಷವಾಲಾ | ನಿಭೃತಪುಸ್ತಕಹಸ್ತೆಸುರಿಯಜ | ಯಭವವಂದಿತೆತ್ರಿಭುವನೇಶ್ವರಿಸಾಧುಸಂಪನ್ನೆ || ಶುಭಫಲಪ್ರ
...ವಾಳ್ಕೆವಾಚೋ | ವಿಭವವನುನವುಗೊಲಿದುಕಾರು | ಣ್ಯಭರಕೊಡುವುದುಸರಸಿಜೋದ್ಭವನರಸಿವಾಗ್ದೇವೀ ||೨|| ಎರಡು
...ೀಳನವಿಷ್ಣುವುುಖವಂ | ದೆರಲಿಮೆರವಬ್ರಹ್ಮನೊಸಲಲಿ | ಉರಿನಯನನವಂದಿಲ್ಲದಾಸಾಕ್ಷಾತಪರಮಶಿವ || ಧರೆಯಜೀವ್ಯರ
...ನವುರಣಾಂ | ಕುರಕುಠಾರವಿಹಾರವಿದ್ಯಾ | ಶರಧಿನೇಡವ್ಯಾಸಮುನಿವಾಳ್ಕೆವುಗೆಸನ್ಮತಿಯ ||೩|| ಶ್ರೀವರನುಶಾಶ್ವತನ
ಳವೇ | ದಾವಳೀಸಂಸ್ತುತ್ಯನವಿತಗು | ಣಾವಲಂಬನನಂಬುಜೋದ್ಭವಮುಖ್ಯಸುರವಂದ್ಯ || ದೇವದೇವನಶೇಷಧರಣೀ|
...ವಗೋದ್ವಿಜರಕ್ಷಣಾರ್ಥಕೃ | ತಾವತಾರನುವಾಳ್ಕೆಯೋಗಕ್ಷೇಮವನುನವುಗೆ ||೪|| ನತಸುರಾಸುರಮೌಳಿರತ್ನ | ಪ್ರ
...ತಿಪರಿಣಧ್ವಾಂಘ್ರಿಕರುಣಾ | ಮೃತವುಹೋದಧಿಪರವುಶಕ್ತಿಲತಾವಿತಾನಾಢ್ಯ || ಶ್ರಿತಜನಾಯಾಥೇಷ್ಟಫಲಪ್ರೂ | ರಿತನಿ
...ಂಘ್ರಿಧ್ಯಾನಗೌರೀ | ಪತಿಸುರದ್ರುವುನೀಗೆನವುಗಿಷ್ಟಾರ್ಥಸತ್ಫಲವ ||೫|| ವೃತ್ತಗುಣಸಂಪಂನನ...ಳರ | ಘೂತ್ರವು
...ರಾವುನಾದನಿ | ವರ್ತಿಶಾಪಹೃತಾಘನಾತ್ಮಗೃಹೈಕವಿಶ್ರಾಂತ || ಮೃತ್ಯುಗಜಮರ್ದನನುವಾಳ್ಕೆಕ | ವಿಶ್ವವನಸಂಚಾರಿನಿ
...ರ್ಗಳ | ಚಿತ್ತವನುವಾಲ್ಮೀಕಿಮುನಿಕಂಠೀರವನುನವುಗೆ ||೬|| ಜನಿಸಿದಾಗಳೆವಿಧಿಗೆಕಿಂಕರ | ನೆನಿಸದೆಲ್ಲವನುಳಿದುಪೋಗ
... | ಘನವಿರಹತಾಪದಲಿಪುತ್ರಾಯನುತಬಳ್ಳಿಸಂದು || ಮುನಿಪರಾಶರಸೂನುಕರೆಯಲು | ವನದನಿಡುವುರವುಂಡಿಗಳನೋ|
...ನಿಸಿದಾಶುಕಯೋಗಿಗಾನುನವೋನವೋಯೆಂಬೆ ||೭|| ನಿಗವುಕಲ್ಪವುಹಾದ್ರುವುದಶಾ | ಖೆಗಳತುದಿಯಲಿತೋರ್ಪನರ
...ಗೆ | ಬಗೆಯಬಾರದಪರವುತತ್ವಾಮೃತರಸಾಯನವ || ಸೊಗಯಿಸುವಭಾಗವತಫಲವನು | ತೆಗದುಯಿದುಯುಂದಿತ್ತಕರುಣಾ|
...ಗಳದೇವನುಶುಕನುವಾಳ್ಕೆಶುಭೋದಯುವನವುಗೆ ||೮|| ಭಾಗವತದರ್ಥವನುಸಂಗ್ರಹ | ವಾಗಿಬಲ್ಲಂದದಲಿವಿಷಯವಿ| ಭಾ
ವನುತತ್ವಪ್ರಯೋಜನಜನಿತಸಿದ್ಧಿಯನು || ರಾಗದಿಂದರುಪುವೆನುಭವಭಯ | ರೋಗಹರೆವುದೆನಲ್ಕೆವಾಳ್ಕೆವು | ಹಾಗು
...ಕಾವ್ಯಸಾರಥ್ಯವನುಸಜ್ಜನರು ||೯|| ಕಂನಡದಕೃತಿಯುಂಡವಜ್ಞಾ | ಪಂನರಾಗದಿರಕಟದರ್ಪಣ | ಕಂನಡಿಯಿದೆಂದೆಂ
...ರತ್ರೆಯಕಟದಕೆ || ತಂನವುುಖಸಂದರುಶನಪ್ರತಿ | ಪಂನಫಲಹರಿಗುಣದವುಹಿಮೆಯ | ವರ್ನನೆಗೆಕುಂದೇನು
ತಾ... ...ತಿಯ ||೧೦|| ಎಲ್ಲಿಹರಿಗುಣಗಣದವರ್ನನೆ | ಇಲ್ಲದನ್ಯಥಬರೆಯೆಕಾವ್ಯದ | ಬಲ್ಲತನದೊಡ್ಡವಣೆಗಳಗಾಲವಿ
ವರಾತ್ರ... || ಇಲ್ಲವೇದವ್ಯಾಸಮುನಿವುತ | ವಲ್ಲಪ್ರಾಲೇಯದಲಿಪದ್ಮಿನಿ | ಸಲ್ಲದಂತಿದರೊಳಗೆವೆುರೆಯ...ಗಳನೇ | ಡಿಸು
ದೊಂದೆ... ಹರಿಗುಣಸ್ತುತಿಹರಿಪದಾಂಬುಜ | ಶರಣಜನಸಂಕೀರ್ತನಸ್ತುತಿ | ಹ...ನನಿಸರ್ವಾನರ್ಥಕಾರಣ | ವುನವಿ
... || ವುನವನದಬೇರಿರಿಸಿನೋಡಾ | ನಿನಗೆ
ತೋರ್ಪುದದ...ಲ್ಲಲಿತ | ಪರತರಾನಂದಾನುಭವವಿನಿ | ತಿರದೆವಿಸ್ತರವೆನೆ... ...ುರಾರಿ ||೧೯|| ವುರೆವುದೀಸಕಲವನುವುನದಲಿ|
ವುರೆವುದಾವುತಿಯೊಳಗೆವುನವನು | ವುರೆವುದಾ...ನಾದಿಸಿದ್ಧಾಷ್ಟಾಂಗಯೆ...ದಲಿವುತಿಯ | ವುರೆದುದನುನೆರೆವುರೆದುಬೇರೊಂ|
...ರಿಯದಿರವನುಸಹಜವದರೊಳು | ವುರೆವೆಯಲ್ಲರಿವಿಲ್ಲಖಂಡಿತನಾತ್ಮನೋಡೆಂದ ||೨೦|| ಈಸವಾಹಿತವುತದಲೊಂದಿತಿ|

ರ್ಭಯಾವೆನಿಪಲಕ್ಷ್ಮೀ । ಲೋಲಕ… …ದ । ಮಾಳ್ಪಗಳುತಾವೆಂತುಜನಿಸಿದರೆಂದಡಿಂತೆಂದ ॥ ೨೮ ॥ ಆಹುದು
ಸಂಕ… …ವ… …ಹದತಿಕ್ರಮವೇನವಾಡದುಕೇಳುಭೂಪತಿಯೆ ॥ ದ್ರುಹಿಣನಂ
ದನ… …ದರಾವ್ಯೆಕುಂಠ… …ವರಕೆ ॥ ೨೯ ॥ ಹೊಕ್ಕರ
… ॥ ಅರ್ಕಕೋಟಿಪ್ರಭ
…ನೆನುತ

ಕನ್ನಡ ಭಾಗವತ.

ಪೀಠಿಕಾ ಸಂಧಿ.

ಸೂತರು ಶೌನಕಾದಿಗಳಿಗೆ ಭಾಗವತವ ಹೇಳಿದ್ದು.

ಸೂಚನೆ ॥ ಸೂತನರುಹಿದಸರ್ವಗುಣವಿ । ಖ್ಯಾತಶೌನಕಮುಖ್ಯಮುನಿಗಳಿ । ಗೋತುಪರನು
ರಹಸ್ಯವಹಭಾಗವತಸಂಹಿತೆಯ ॥ … … …

ಪದನು ॥ ಶೌನಕಾದಿಮುನೀಶ್ವರರುನಿ । ರ್ಮಾನಮದಮತ್ಸರರುನತಸುರ । ಧೇನುಗಳುತಾವಾಗಿಬಂದರುನೈಮಿಶಾ
ಯದಾ ॥ ಕಾನನದಲಚ್ಯುತಕಥಾಮೃತ । ಪಾನಪರಿಲೋಲುಪರುಕಲಿಯುವ । ಸ್ಥಾನಪರಿಯಂತರವಮಹಾಧ್ವರದೀಕ್ಷೆಯನುಧರಿಸಿ
ಬಂದನಲ್ಲಿಗೆರೋಮಹರ್ಷಣ । ನಂದನನುತತ್ಸಮಾತಿಹೃದಯಾ । ನಂದನನುಸೂತಾಖ್ಯನಾತನನಾಗವೋಕ್ಷದಲಿ ॥ ವಂದಿ
ತವೈಷ್ಣವಪದಾಂಬುಜ । ಸಂದರುಶನವುಬಹಳಭಾಗ್ಯದ । ಕಣ್ದೆರವೆನೆತಮಗೆನುತಕೊಂಡಾಡಿದುದುಮುನಿನಿಕರ ॥ ೨ ॥ ಸೂತ
ನುಚಿಸಗೊಂಡುದ ಮುನಿ । ಜಾತವೇದವ್ಯಾಸಮುನಿವಿ । ಖ್ಯಾತನಾತನಶಿಷ್ಯನಲ್ಲಾ ನೀನುಜಗವರಿಯೆ ॥ ಸೇತಿಹಾಸಪುರಾ
ಣಾಸ್ತ್ರ । ತೀತತತ್ವರಹಸ್ಯವನುನೀ । ನಾತನೊಲವಿನಲರಿವಪ್ರೌಲುಪರೆತಿಲ್ಲಬಲ್ಲವರು ॥ ೩ ॥ ಆಸಮಸ್ತಪುರಾಣಶಾಸ್ತ್ರವ
ಹಾಸಮುದ್ರದಸಾರವನುನೀ । ವಾಸದೊಳಗುದ್ಧರಿಸಿಕೃಪೆಮಾಡುವುದುಕಲಿಮಲದ ॥ ದೋಷಸಿಂಧುವನುತ್ತರಿಸಡಾ । ಯಾಸ
ಲ್ಪದಪತ್ಥವನೆವಗುಪ । ದೇಶಿಸುವುದೆಂದಾಗಸಭೆಯೊಳುಶೌನಕನುನುಡಿದ ॥ ೪ ॥ ಮಂದಭಾಗ್ಯರಲಾಮನುಷ್ಯರು । ಮಂದಮ
ತಿಗಳಲಾವೃಥಶ್ರಮ । ದಿಂದಮಂದೋದ್ಯೋಗಿಗಳಪುರುಷಾರ್ಥವಿಷಯದಲಿ ॥ ಇಂದಿನೀಯುಗದೊಳಗೆಕಾಲನ । ಬಂದಿಯಾ
ಕಳಚುವಉಪಾಯವ । ನೊಂದನೇನಿಶ್ಚೈಸಿಕರುಣಿಸಬೇಹುದೆಮಗೆಂದ ॥ ೫ ॥ ಹೇಳುವಡೆಮನವಿಲ್ಲವೊದಲಲಿ । ಕೇಳು
ದೆರೆಹಿಲ್ಲಹೇಳತ । ನಾಲಿಸುವಡವಧಾನವಿಲ್ಲೀಮೂಢಮರ್ತ್ಯರಿಗೆ ॥ ಹೇಳಬಲ್ಲವರಿಲ್ಲಹಿತವನು । ಹೇಳಿದರೆಕೇಳ್ವದನನುಷ್ಠಿ
ಶೀಲವಂತರಕಾಣೆನಿಂದಿನವರ್ತಮಾನದಲಿ ॥ ೬ ॥ ಶ್ರವಣಮಾತ್ರದಲಖಿಳಜೀವರ । ಭವದಬೇಗೆಯಬೇಸರಿನಬೇ । ಜವ
ಬಿಸಿಮಾಡುವಮೋಕ್ಷೋಪಾಯದಸಮಗ್ರತೆಯ ॥ ವಿವರಿಸೈಶ್ರೋತವ್ಯವಹಶಾ । ಸ್ತ್ರವನನಂತವನೋದುವಡೆಕೇಳುವಡೆಕಲಿ
ಲಖಂಡಿತಾತ್ಮರಿಗರಿದೆಲಾಯೆಂದ ॥ ೭ ॥ ಮತ್ತೆ ಕೇಳೆಲೆಮನದಸಂಶಯ । ದೊತ್ತುಬೇರಿದೆರಾಮಕೃಷ್ಣರು । ಮರ್ತ್ಯವೇಷದಲ
ಟಿತದಲೆಸಗಿದರುಗಡಧರೆಗೆ ॥ ಎತ್ತಲಾಪರದೈವವೀನರ । ರೆತ್ತದೇವಕಿಯುದರಕುಹರವಿ । ದೆತ್ತಲಬುಜಭವಾಂಡಕೋಟಿಗಳೆ
ಲುದರದಲಿ ॥ ೮ ॥ ಕರುಣಿಸೈಕಾರುಣ್ಯಸಿಂಧುವಿ । ನುರುಚರಿತ್ರಾಮೃತವನಾ… । ಜ್ವರಿತರಿಗೆಜಂಗಮಮಹಾಮೃತಪಾನಸಿ
ಯಾನು ॥ ಧರೆಗೆಪರಮಹಿತಾರ್ಥವನುವಿ । ಸ್ತರಿಸಬೇಹುದುಬೇಡಿಕೊಂಬೆನು । ಪರಹಿತೈಕಸ್ವಾರ್ಥರಲ್ಲಾಸತ್ಪುರುಷರೆಂದ ॥ ೯
ಸತ್ರಯಾಗವ್ಯಾಜದಿಂದೀ । ಕತ್ರವಾದೆವುವಿಮಳವಿಷ್ಣು । ಕ್ಷೇತ್ರವಿದುರೊಳಗಿಲ್ಲಕೈಕಲಿಮಲದಕಾಲಾಟ ॥ ಚಿತ್ರವದರಿಂಮೀ
ಪುಣ್ಯಜ । ರಿತ್ರನಿಂನಯಬರವುಸ್ಸೈವಿಕ । ಸೂತ್ರವಲ್ಲದೊಡೆಂತುಸಂಭವಿಸುವುದುನಮಗೆಂದ ॥ ೧೦ ॥ ಸೂತನೀಪರಿಪರ
ರುಷಿಸಂ । ಜಾತಸಂಪ್ರಶ್ನದಲಿಸಲೆಸತಿ । ಪ್ರೀತಿಸಂನುತಪುಳಕರಸದಲಿಮಾಡಿಮುಳುಗಾಡಿ ॥ ಖ್ಯಾತರಾದರುಧೀಕೃತಾರ್ಥರು
ಭೂತಹಿತದಲಿಹಿರಿಯರೆಂಬೀ । ಮಾತುಪುಸಿಯಲ್ಲೆಂದುಕೊಂಡಾಡಿದರುಮುನಿವರರು ॥ ೧೧ ॥ ಘೋರತರವೆಂದೆನಿಸಿದೀಸಂ
ಸಾರದುಸ್ಸಹದುಃಖತರುವಿನ । ಬೇರಬಿಸಿಲಿಗೆತೋರ್ಪದಾವನನಾಮಮರನೆನಲು ॥ ಅರನಾವಲ್ಲಭನಲೀಲೋ । ದಾರಪುಣ
…ನುವಿ । ಸ್ತಾರವೆನಲವತಾರಭೇದವನುಸುರುವೆನುಯೆಂದ ॥ ೧೨ ॥ ಕೇಳಿರೈಮುನಿನಿಕರವೆಂನಯ । ಬಾಲಭಾಷಿತ…
…ದ… …ಕುಂದಕಥಾಪ್ರಸಂಗದಲಿ ॥ ಸೋಲದವರಾರೆಂದುಹರಿಗುಣ । ಲೀಲೆಗಳಲಾಲಿಸ್ಯಲಷ್ಟಿ…
…ಳಗಾಗಿ ॥ ೧೩ ॥ ಲೇಸನೇಬೆಸಗೊಂಡರೆಂನಬಿ । …

ಸೂಚನೆ ॥ ವೈರಿಗಜಸಂಚಾನನನುರಣ । ಘನುಸಪುರಾಣಶಾಸ್ತ್ರವು । ಹಾಸವ…
ನಿಜಮನೋರಥವ ॥ …ದಲಿವಿಷ್ಣ । ಕ್ಷೇನಗ… … …

ಪದನು ॥ ಅರಸಕೇಳಚ್ಯುತನಲೀಲಾ । ಚರಿತವನುತದ್ಭಕ್ತಜನಸು । ಚ್ಚರಿತವನುಸಕಲಾಘಸಂಚಯಸಾರಸಾಧನವ ॥
ಸುರವಿರೋಧಿನಿಜಾನುಜನನೀ । ಮುರಹರನುವಾರಾಹದಲಿಕೊಲ । ಲುರಿಕಳಕುದರದಲ್ಲಿನಿಂದೋಲಗದಲಿಂತೆಂದ ॥ ೧ ॥

ತೀಡಿದನುಕರತಳವನಡಿಗಡಿ । ಗಾಡುಗಚ್ಚಿದನನುಜನೆಳವಿನ । ಕೇಡನಾಲಿಸಿಕೆದರಿದನುಕಂಗಳಲಿತನಿಗಿಡಿಯ ॥ ದಾಡೆಗಳುದಳ್ಳು
ರಿಯನುಗುಳಲು । ನೋಡಿದಾದೆಸೆಹೊಗೆಮಸಗಿದುದು । ರೂಢಿಬಿರಿಯಲುಬಿಂಕದಿಂದೊದದೆದ್ದನಮರಾರಿ ॥ ೨ ॥ ಎಲೆಲೆಶಂಬರ
ಶಕುನಿವಾಸೇ । ಜ್ವಲತ್ರಿಮೂರ್ಧ್ನಿಕತ್ರ್ಯಕ್ಷಕೋಲಾ । ಹಳನಮುಚಿವರವಿಪ್ರಚಿತ್ತುಪುಲೋಮಮುಖ್ಯರಿರ ॥ ಕೊಳುಗುಳ
ಕೆತಾಹಂದಿಮಲಕತಿ । ಬಳನನಿರಿದುದುಭಾಪುಕೀರ್ತಿಯ । ಬಳಕೆಯಲಿಬಡವಿಷ್ಣುಗತಕೊಂದವನುರಣಗಲಿಯ ॥ ೩ ॥ ಹೇಳ
ದಿಟ್ಟಿಗೆನಡವನಾವನು । ಬಾಲಕನವೋಲೆಲ್ಲವನುಸುರ । ಪಾಲನೈಸಲಿಮಾಡಿದಾತನುಕಪಟವಿದ್ಯೆಗಳ ॥ ಹೇಳಲೇನಮರಾಷ್ಟ
ಶಾಖಾ । ಜಾಲವಾವಿಷ್ಣುವಿಗೆಮೂಲಲೋ । ನ್ಮೂಲನವಮಾಡುವವುಪಾಯವಕೇಳನೀವೆಂದ ॥ ೪ ॥ ಮೂಲವಮರರಿಗಚ್ಯುತ
ಸುತ । ನ್ಮೂಲವೆನಿಪುದುಧರ್ಮಧರ್ಮದ । ಮೂಲವೈಸಲೆದ್ವಿಜರುಗಳುವರ್ಣಾಶ್ರಮಾನ್ವಿತರು ॥ ಬೀಳಗಡಿಪಡೆವಿಪ್ರರನು
ನಿ । ರ್ಮೂಲನಹನಾವಿಷ್ಣುತತ್ಸರ । ಜಾಲವದುನಿಮಿಷಾಂತರಕೆನಿರ್ನಾಮವಹುದೆಂದ ॥ ೫ ॥ ಎಲ್ಲಿವೇದಾಧ್ಯಯನವವನಿ
ಯ । ಲೆಲ್ಲಿಶಾಸ್ತ್ರಶ್ರವಣವಿಪ್ರರ । ದೆಲ್ಲಿಸಮ್ಮತಧರ್ಮನಿಷ್ಠರುಸಾಧುಸಜ್ಜನರು ॥ ಅಲ್ಲಿಗಲ್ಲಿಗೆಧಾಳಿವರಿದವ । ರೆಲ್ಲರನುನೆರೆಕೊ
ಲ್ಲುದಲ್ಲದ । ಡೆಲ್ಲಿಕಾಣಲುಬಹುದುಕಳ್ಳನನೆಂದನಮರಾರಿ ॥ ೬ ॥ ಹಾಲಹೆಂಮಡುವೊಂದುಮನೆತವ । ದೇಳಿಗೆಯತಾದಿ
ಯೊಂದುಮನೆಮುನಿ । ಜಾಲದುದರದಲೊಂದುಮನೆಮೇರುವಿನಲೊಂದುಮನೆ ॥ ಶೀಲವಂತರಸಜ್ಜನರಸಂ । ಮೇಳದಲಿತನ
ಗೊಂದುಮನೆಭೂ । ತಾಳಹೃದಯದಲೊಂದುಮನೆಕಾಣಿಸುವಡರಿದೆಂದ ॥ ೭ ॥ ಮಿಕ್ಕಪಾಲ್ಗಡಲಿಂಗೆಧಾಳಿಡ । ಲೆಕ್ಕತಳದಲಿ
ನಿಲಲರಿಯದೊಳ । ಹೊಕ್ಕುಹೋರುವನೆನ್ನೊಡನೆಮಾಯಾವಿಮರೆಗೊಂಡು । ಠಕ್ಕಠವಣೆಯಠಾಣಗಾರನ । ನಿಕ್ಕುವರೆಗೋ
ದ್ವಿಜರವಧೆಯೇ । ತಕ್ಕುದೆನೆಕದನಪ್ರಿಯರುಕೈಕೊಂಡರಹುದೆನುತ ॥ ೮ ॥ ಧಾಳಿಬೆಂಬಲವಾದಡಗ್ನಿ । ಜ್ವಾಲೆಗಳುತಾವಾಗಿ
ತಾಗುವ । ಕೋಲುಗಳುಗರಿವತ್ತಪ್ರೋಕ್ಷಿವಶಿವಪಚೇತನದ ॥ ಆಳುಬೀಯಹಸಾದವೆನುತವೆ । ಬೀಳುಕೊಂಡದುದೈತ್ಯಭಟರು
ಕ । ರಾಳಕದನಪ್ರಿಯರುತೊಳಲಿದರವನಿಮಂಡಲವ ॥ ೯ ॥ ಕಟ್ಟುಕೆರೆಗಳನೊಡದರರಳಿಯ । ಮೆಟ್ಟಮುರಿದರುದೇಗುಲವ
ನೇಡೆ । ಮೆಟ್ಟದರುವೈದಿಕರಮನೆಗಳಮುರಿದುಬೊಬ್ಬಿರಿದು ॥ ಸುಟ್ಟುಕೊಣಿದರವನಿಯಮರರ । ನಟ್ಟಹೊಯ್ದುರುಧಾರ್ಮಿಕ
ರಮುರಿ । ದಟ್ಟಯಾಡಲುಕಡಿದರಾದಿವ್ಯದ್ರುಮಾದಿಗಳ ॥ ೧೧ ॥ ಕವಿಸಿದರುಖಳರಗ್ನಿಹೋತ್ರದ । ಹವಿಗಳಗೆನಾಯ್ಗಳನುಪತ್ನೀ ।
ನಿವಹವನುಮ್ಲೇಂಛಿಸಿದರೆಡಗೆಡಹಿದರುಋತ್ವಿಜರ । ಸವನರಿಪುಗಳುಸಾರಿದರುಸವ । ರವನುಬೇಡಿದರವನಿಪಾಲ । ಪ್ರವರ
ರಲಿತಾಹೇಳ್ವನೇನನುಖಳರಉರವಣೆಯ ॥ ೧೧ ॥ ಇಳುಹಿದರುಯಜ್ಞೋಪವೀತವ । ನಿಳೆಯವಿಪ್ರೋತ್ತಮರನಾಕದ । ನಿ
ಳಯವನುಹಾಳಿಟ್ಟುಹರದುದುಸುರರುದೆಸೆದೆಸೆಗೆ ॥ ಅಳುಕಿದರುನೃಪರಾದವರುಕೊಳು । ಗುಳದವಾರ್ತೆಗೆದೈತ್ಯರುರುಬೆಗೆ ।
ಹಳಿಯಹಾಸಾಯ್ತುವನಿಯದನೇನೆಂಬೆನದ್ಭುತವ ॥ ೧೨ ॥ ಅತ್ತಲಾದನುಜೇಂದ್ರನನುಜನು । ಸತ್ತಳಲುಕಿಚ್ಚಿನಲಿತಾಯದೆ ।
ಹೊತ್ತಿಹೊಗೆಯಲುತತ್ಸತೀಸುತರಂತರವ್ಯಥೆಯ ॥ ಕೆತಿಗರುತಾವಾಗಿರಲುಕಾ । ಣುತ್ತಿಳುಹುವೆನಿವರಿಗಾತ್ಮಸು । ತತ್ವವಿ
ಜ್ಞಾನಾಮೃತವನೆನುತಸುರನಿಂತೆಂದ ॥ ೧೩ ॥ ಏಕೆಮರುಗುವಿರವ್ವಮಕ್ಕಳಿ । ರೇಕಳುವಿರಾರಿಗೆನಿಜಾತ್ಮವಿ । ವೇಕಶೂನ್ಯ
ರುನೀವಲಾಹರಹರಮಹಾದೇವ ॥ ಪ್ರಾಕೃತರಿರಾರಳಿದವರುಪರಿ । ಶೋಕಿಸುವಡಾತ್ಮನಶರೀರನು । ಸಾಕುಬಯಲಾಡಂಬರಕೆ
ಮನೆಗುಂದಬೇಡೆಂದ ॥ ೧೪ ॥ ಏಕೆನಾತ್ಮನನನ್ಯನಪಗತ । ಶೋಕನಕ್ರಿಯನಖಿಳಮಾಯಾ । ನೀಕನಿಸ್ಪೃಹನಿರ್ವಿಕಾರನನಾದಿ
ಯವಿನಾಶಿ ॥ ಲೋಕಸೃಷ್ಟಿಯನನುಕರಿಸಿಪರಿ । ಶೋಕಿಸುವಡಂತಾರುಸತ್ತವ । ರೀಕಳೇಬರವನೃತವಿದುನಿಜವಲ್ಲಕೇಳೆಂದ ॥
ಆರಿಗಾರಾಮಕ್ಕಳಾರಿಂ । ಗಾರುತಾಯ್ತಂದೆಗಳುಬಾಂಧವ । ರಾರಿಗಾರೆಲೆಯಾವಸತಿಸುಕ್ಷಮಿತ್ರಸಹಭವರು ॥ ಆರಿಗಾರಾ
ಯಾದೇಮುಂ । ನಾರಿಗಾರಾಮಗಳಾದೆನಿನಗೀ । ವೀರನೇನಹನಿಂನುಹೇಳೆನಗೆಂದನಮರಾರಿ ॥ ೧೬ ॥ ಗಗನದಲಿತೋರ್ಪಭ್ರದರೆ
ವ । ಟ್ಟೆಗೆಯನೆರವಿಮಹೇಂದ್ರಜಾಲದ । ಸೊಗಸುಕನಸಿನರಾಜ್ಯಕಾಮುಕನರಿತದೊಡ್ಡವಣೆ ॥ ಬಿಗಿದಮಿಂಚಿನಬೆಳಗುಯೋ
ಗಿಯ । ಬಗೆದುರಾತ್ಮರಸಖ್ಯನೋಳ್ಪರೆ । ನಗೆಯಲಾಸಂಸಾರದಿರವಿದುನಿತ್ಯವಲ್ಲೆಂದ ॥ ೧೭ ॥ ಮಸಗಿದಡೆಜಲದೊಳ್ಗೆರವಿ
ತಾ । ಮಸಗುವನೆತಾತಿರುಗಿಮೇಣೀ । ವಸುಧೆತಿರುಗಿತ್ತೆಂಬವೋಲುತನುಕರಣಧರ್ಮವನು ॥ ಶಶಿವದನೆಜನನಾದಿಗಳನೇ । ತಿಸು
ಪರಾತ್ಮನನರಿಯದಜ್ಞರು । ಹುಸಿಯಲಾತತ್ಸ್ವಪ್ನಚೈತನ್ಯಾತ್ಮಕನೊಳೆಂದ ॥ ೧೮ ॥ ಜನನಿಸರ್ವಾನರ್ಥಕಾರಣ । ಮನವಿ
ದೊಂದೇಸ್ವಾರ್ಥಕಾರಣ । ಮನದಬಳಿಯಲಿಶೋಕಮೋಹಕ್ರೋಧಮಯದುಃಖ ॥ ಮನವನದಬೇರಿರಿಸಿನೋಡಾ । ನಿನಗೆ
ತೋರ್ಪುದದೇನುಸುರಪತಿ । ಯನುಭವಿಸುವನುಪುತ್ರಶೋಕವನೆಂದನಮರಾರಿ ॥ ೧೯ ॥ ಮರೆವುದೀಸಕಲವನುಮನದಲಿ ।
ಮರೆವುದಾಮತಿಯೊಳಗೆಮನವನು । ಮರೆವುದಾತ್ಮಾನಂದಸಾಕ್ಷಾತ್ಕಾರದಲಿಮತಿಯ । ಮರೆದುದನುನೆರೆಮರೆದುಬೇರೊಂ ।
ದರಿಯದಿರವನುಸಹಜವದರೊಳು । ಮರೆವೆಯಲ್ಲರಿವಿಲ್ಲಖಂಡಿತನಾತ್ಮನೋಡೆಂದ ॥ ೨೦ ॥ ಈಸಮಾಹಿತಮತದಲೊಂದಿತಿ ।

ಹಾಸಿವುಂಟೆ ಶಿತಾಯಿ ಮೃತಭೋ । ವಿಾಶಬಾಂಧವರೊಡನೆಯುಮದೇವಂಗೆ ಸಂವಾದ ॥ ಕ್ಲೇಶಹರವಿದುಶಿವನರಾಜ್ಯವು । ಹೇಶ
ನಾಹವದೊಳಗೆ ಮಡಿಯಲು । ನಾಶವನು ಕಂಡಳಲಿದರು ತತ್ಜ್ಞಾತಿಬಾಂಧವರು ॥ ೨೧ ॥ ಉಡಿದ ತೊಡೆ ತೋಳುಗಳ ರಕ್ತದ ।
ತೊಡಿಗೆಗಳ ವಿನ್ಯಾಸ ಕೆದರಿದ । ನಿಡುಗುರುಗಳ ಬಿಡುಗಣ್ಣ ಕೋಪದಿ ಕಚ್ಚುವಾಡುಗಳ । ಕಡಿವಡೆದ ಸಂದುಗಳ ನೇತ್ರ । ಕಡೆಲಸೋರಗ
ದಪತಿಯ ನಾತನ । ಮಡದಿಯರು ತಮತಮಗೆ ಕಂಡಳಲಿದರು ತೆಗೆದಪ್ಪಿ ॥ ೨೨ ॥ ಬಿಟ್ಟ ಮಂಡೆಯು ಬೋಡೆಯು ನೊಡಲಲಿ । ಥಟ್ಟ
ಗೆಡಹಿದರೊತಲುಗಳನೊಡೆ । ಗುಟ್ಟದರು ಬಸುರುಗಳನಡಿಗಡಿಗವನಿಯಲಿ ಹೊರಳ್ಳಿ ॥ ಕಟ್ಟೆ ವಿನ್ಯಾರವುಗೆ ನುತಕಡ । ಲಿಟ್ಟ ಪರ
ಪಶ್ಯಗಳ ಧಾರಾ । ವೃಷ್ಟಿಯಲಿ ಧರೆನನೆಯೆ ಹಳವಿಸಿದರು ರಣಾಂಗ್ರದಲಿ ॥ ೨೩ ॥ ಹಾವಿಧಿಯೆ ಹಾನಾಥ ಹಾಧರ । ಣೀಪರ ನೀನ
ಳಿಯಲೆಮಗಿ । ನ್ನಾವುದೋ ಗತಿ ನಿಜಪದಾಶ್ರಿತೆಯರನು ಬೇರಿರಿಸಿ ॥ ದೇವಲೋಕದ ಸಿರಿಗೆ ಸೇರುವು । ದಾವುದುಚಿತವನಾಥ ಸು
ರಲಾ । ನಾವು ಕಣ್ದೆರದೊಮ್ಮೆ ನೋಡೆಂದಳಲಿದರು ಬಿಡದೆ ॥ ೨೪ ॥ ಇಂತು ದಹನವ ಮಾಡಲೀಸದೆ । ಕಾಂತೆಯರು ತೆಗೆದಪ್ಪಿ ಪ
ತಿಯನು । ತಂತಮಗೆ ಬಸವಳಿದಳುತ್ತಿರಲಾ ದುದಸ್ತಮಯ ॥ ಅಂತರಿಕ್ಷ ವಾಣಿಗೆ ಬಾಲಕ । ನಂತೆ ನಿಜವನು ಮರಸಿಯಮನಾ ।
ಕಾಂತೆಯರ ಹೊಯ್ಯಲು ಕೇಳುತ್ತಲ್ಲಿಗೈತಂದ ॥ ೨೫ ॥ ಏತಕಳುವಿರಿ ತಾಯಿಗಳಿರ । ಶೋಕಾತಿಶಯವೇಕೆ ಕಟನೀವಾ । ರೀ
ತನಾರೇನಹುದು ಮಡಿದನೆ ಪತಿಯೆ ನಿಮಗೀತ ॥ ಮಾತ ಕೇಳನೆ ಮುಂನಿಸನೆನಿಂ । ಮಾತನಾಡದೆ ಹಗೆಯ ಪ್ರೊಬುನಿ । ಘಾತಿಸುವನೇ
ಕಳುವಿರೆಂದನು ನಗುತ ಕರುಣದಲಿ ॥ ೨೬ ॥ ಹುಟ್ಟರೇ ಸತ್ತವರು ಸಾಯರೆ । ಹುಟ್ಟದವರೀ ನೀತಿಯನು ವಿಧಿ । ಕಟ್ಟ ತಲೆಯಲಿ
ಬರೆದುದನು ಮಿಾರುವರೆ ನಿಂಮಳವೆ ॥ ಹುಟ್ಟದಂದೆ ತಂದೆ ತಾಯಿಗಳು । ನೆಟ್ಟನಳಿದರು ತನಗೆ ಕರುಣಾ । ದೃಷ್ಟಿಯಲಿ ನೆರೆ ಸಲಹಿತೆಂ
ನನು ದೈವಗತಿಯೆಂದ ॥ ೨೭ ॥ ಆಯುವುಳ್ಳನನಂಬಿದಿರಿಯಂ । ಬೀಯುರಿತವೇನಾಯ್ತು ನಿಮಗೆಲೆ । ತಾಯಿಗಳಿರೇಕೀಸು ಹರೆ
ಯವಿದಾಯ್ತು ತಿಳಿಯರೆಲ ॥ ಬಾಯನೋಡಳುವವರ ನಿಂಮಿಾ । ಕಾಯವಿದು ಹಗೆಯಾಯ್ತೆ ಶಿವಶಿವ । ಕಾಯಲರಿವಿರೆ ದೈವಹತರ
ನುಹಳಲಿಸಿದರೆಂದ ॥ ೨೮ ॥ ರಕ್ಷಿಸಿದರಾರುದರದಲಿತ । ದ್ರಕ್ಷೆಜೆನಿಸಿದ ಬಳ್ಳಿಕ ತನ್ನನು । ಭಕ್ಷಿಸಿವೆ ಹುಲಿ ಕರಡಿ ಹಾವ್ ಹೇಳುಗಳ
ನಾಥರನು ॥ ರಕ್ಷಿಸಿದುದಾ ದೈವನೆಂಸನು । ರಕ್ಷೇಲಿಮೇಣ್ಮನಿಯಲದರಪ । ರೀಕ್ಷೆ ತನಗಿನ್ನಿಲ್ಲ ದೈವಾಧೀನ ಜಗವೆಂದ ॥ ೨೯ ॥
ದೈವವೇ ಸಲಹುವದು ಕೊಲುವುದು । ದೈವವೇ ಜಯ ಪರಿಭವಂಗಳು । ದೈವದಿಚ್ಛೆಯಲಹುದು ಮರಣ ವ್ಯಾಧಿ ಭಯ ದುಃಖ ॥ ದೈವ
ವುಳ್ಳಂಗಡವಿಯೇ ಮನೆ । ದೈವಹೀನಗೆ ಮನೆಯು ಡವಿಧಿಟ । ದೈವವೇ ಪಿತೃ ಮಾತೃ ಬಾಂಧವರೆಂದನಾ ವಿಪ್ರ ॥ ೩೦ ॥ ಬರಿದೆ ಮನೆ
ಮಕ್ಕಳಿಗೆ ಮೂರ್ಖರು । ಮರುಗುವರು ಮಮತೆಯಲಿ ತಮ್ಮಲಿ । ಹರಿವುದೇನಹುದೇನು ಪರಿಯ ಪಹಾಸ ಮಂತ್ರವದು ॥ ಮರು
ಗಿದವರಾರೆನರೆ ಜೀವವ । ತೊರೆದುದೇತಂನೊಡಲು ನೀವಿದ । ನರಿದು ಬಿಡುವುದು ಬಯಲ ಮಾಯಾಡಂಬರವನೆಂದ ॥ ೩೧ ॥ ಜಪ
ಳೆಯರಿರ ವಧರಿಸಿ ನಿಮಗಾ । ನುಪಕಥೆಯ ನಿರಪೇಕ್ಷೆ ನಂತಕ । ನಪರ ಮೂರ್ತಿಯ ಪ್ರೋಲು ಲುಬ್ಧಕನೊಬ್ಬ ನಡವಿಯಲಿ ॥ ವಿಪುಳ
ಖಗಮೃಗಕುಲದ ಜೀವವ । ನಪಹರಿಸುತ್ತೈತರುತ ಘನ ಪಾ । ದಪದ ಮೇಲೊಂದರಲಿ ಮಿಥುನ ಕುಳಿಂಗವನು ಕಂಡ ॥ ೩೨ ॥ ಬೀ
ಸಿದನು ಬಲೆಗಳನು ತಾಪರಿ । ವೇಷದಂತಿರೆ ವಿಹಗನಿಳಯ । ಭ್ಯಾಸದಲಿ ಖಗಮಿಥುನವರಿಯದ ಪ್ರೋಲು ಮರೆಗೊಂಡು ॥ ಆಸವ
ಯದಲಿ ಕಾಲಪಾಶವ । ದೇಸು ಘನವ ಪ್ರೋಬಿದ್ದು ದಡರೊಳು । ಸಾಸುವೆನಲೊರಗುತ್ತ ಬಲೆಯೊಳಗಾ ಕುಳಿಂಗವದು ॥ ೩೩ ॥ ಕಂಗೆ
ಡುತ್ತೊರಲುತ್ತ ಬಿದ್ದು ಕು । ಳಿಂಗಿ ಬಾಯ್ಬಿಡುತಿರಲು ಕಂಡು ಕು । ಳಿಂಗನುರಿಯೊಳು ನಿಂದ ಪ್ರೊಲು ದುಃಶೋಕವನ್ನಿಯಲಿ ॥ ಅಂಗ
ದೊಳಗುರಿ ಮಸಗಿ ತನ್ನ । ಧರ್ಮಾಂಗಿಯನು ನೋಡುತ್ತ ತೀವಿದ । ಕಂಗಳುದಕದ ಕಡಲೊಳೋಲಾಡುತ್ತ ಹಳವಿಸಿದ ॥ ೩೪ ॥ ಎಲೆ
ವಿಧಾತೃ ವೃಥಾ ನಿರರ್ಥಕೆ । ಕೊಲುವರೇ ದೀನರನು ತಂಸಾವ । ನುಳುಹಿ ತಂನ ಧರ್ಮಾಂಗಿಯನು ನೀನೊಯ್ದು ಫಲವೇನು ॥ ಲಲನೆಯ
ನುತಾ ಕಾಣದೊಂಪರೆ । ಫೆಳಗೆ ಜೀವಿಸಲಾರೆನೇತಕೆ । ತಳವ ಮಾಡದೆ ತನ್ನ ಜೀವವ ಸೆನುತ ಹಳವಿಸಿದ ॥ ೩೫ ॥ ಒರಲುತಿವೆ
ಲಾಗೂಡಿನೊಳಗಿ । ದ್ದರಶಿತಾಯನು ಪುಣ್ಯಹೀನರ । ಮರಿಗಳ ಕಟೆಂತವನು ರಕ್ಷಿಸುವಂದವಿಂನೆನಗೆ ॥ ಎರಕೆ ಬಲಿಯದು ಕು
ಟುಕನೇನೆಂ । ದರಿಪು ವಿಧಕಿಂನೇನು ಗತಿಯನು । ತೊರಲಿ ಮೂರ್ಛಿತನಾಗಿ ಬಿದ್ದನು ಶೋಕಜಲಧಿಯಲಿ ॥ ೩೬ ॥ ಮಕ್ಕಳಿ
ಲ್ಲದೆ ಕಿರಿಯ ದಿನವಾ । ಯುಕ್ಕಿ ದುಃಖಿಸಿ ಹೋಯ್ತು ಮಗುಳೀ । ಮಕ್ಕಳಾದವು ಕಂಡು ಬದುಕುವೆನೆಂಬ ಹರಯದಲಿ ॥ ಅಕ್ಕಟೀ ವಿಧಿ
ಯಾಯ್ತು ಪನಿತೆಗೆ । ಮಕ್ಕಳಿಂಗಿನ್ನಾರು ತನಗಾ । ನೆಕ್ಕಟಿಗನಿಂನೆಂತು ಬದುಕುವೆನರ್ಥದೇಹದಲಿ ॥ ೩೭ ॥ ಏಕೆ ವಿಧಿ ಹುಟ್ಟಿಸಿದೆ
ತಂನನ । ದೇಕೆ ಸತಿ ತನಗಾರುಳಿಯತಾ । ನೇಕೆ ಪುಟ್ಟಿದ ವೇಕೆ ಬಂದನು ಲುಬ್ಧಕನು ವನಕೆ ॥ ಏಕೆ ಹೋದಳು ಕಟುಕ ನರ್ಥಿಸಿ । ನೂ
ಕಿದಳು ತಂನೊಡಲನು ದಿಯೊಳ । ಗೇಕೆ ಬಾರದು ಸಾವು ತನಗೆಂದೊರಲಿದನು ವಿಹಗ ॥ ೩೮ ॥ ಸಾವೆನೇ ತಾನೊಡನೆ ಶಿಶುಗಳಿ । ಗಾ
ವಗತಿಯೋ ಕೃಪಣ ತನದಲಿ । ಜೀವಿಸುವನೆಂತ ಬಳೆಯಿಲ್ಲದ ಹಾಳು ಮನೆಯೊಳಗೆ ॥ ಏನೆನಾನೆಂತೊರಲುತಿರೆ ಮೃಗ । ಜೀವಿ ಕಾಣು
ತಸರಳ ಕೆಂನೆಗೆ । ತೀವಿ ತೆಗೆದೆಚ್ಚನು ಕುಳಿಂಗಕನುರುಳಿದನು ಧರೆಗೆ ॥ ೩೯ ॥ ಉಳಿದವಲ್ಲಿಯದಲ್ಲಿ ಮಿಗೆ ಮ । ಕ್ಕಳು ಮನೆಗಳೇನಾ
ದವ್ರೋ ಧಿಟ । ಸಲಹುವವರಿಂನಾರು ಶಿಶುಗಳನಾದುದೀ ಹದನು ॥ ಲಲನೆಯರಿರೇ ಕಳುವಿರಾರಿಗೆ ; ತಲೆಯೊಡೆಯಲೊರಲುವಿರಿನಿಂ

ವಿಮ್ಮಾ | ಬಳಕೆಯೇನೀದುಃಖವನುಘಟಿಕರಿವರಾರೆಂದ || ೪೦ || ಆರುಜೀವವೊದೇಹವೋಪತಿ | ಯಾರುದೇಹವಿದಾದಡಿದಕಂ|
ಣಾರೆಕಾಣುತ್ತಳುವಿರೇತಕೆಜೀವಚೇತನವ || ನಾರಿಯರಿರೀಪ್ಸಿಸದೆವಿಗತವಿ | ಕಾರನದ್ವಯಜನನಮರಣವಿ | ಕಾರವಿರಹಿತನಿ
ರ್ಗುಣಾತ್ಮಕನರಿವನಕಟೆಂದ || ೪೧ || ಇಂತೆನುತ್ತಿರೆವಟುವನೀಕ್ಷಿಸಿ | ಕಾಂತೆಯರುಬೆರಗಾಗೆಮನದ | ಭ್ರಾಂತಿಯನುನೂಕಿ
ದರುಬಿಸುಟರುಪತಿಕಳೇಬರವ || ಸಂತಸುಖವನುಪಡೆದರೆಲೆಯಾ | ಎಂತುನೀನೀಶೋಕನೋಹ | ಕ್ರಾಂತರಾಗದೆಸುಖಿಗ
ಳಾಗಿಹುದೆಂದನಮರಾರಿ || ೪೨ || ಮಗನನುಡಿಗೇಳುತ್ತಪುಳಕಾ | ಳಿಗಳಲೊಲೆದಳುತನುವಿನೊಳಗಣ | ಡಗೆಯಡಗಿನಿಂದಳು
ನಿಜಾತ್ಮಜ್ಞಾನಸುಖದೊಳಗೆ || ಬಗೆದಣಿಯೆಸಂತವಿಸಿತಾಯಂ | ಘ್ರಿಗಳಿಗೆರಗಿಷ್ಟಾರ್ಥವಹಸಿ | ದ್ಧಿಗಳಪಡೆವೆನೆನುತ್ತಹೊರವಂ
ಟನುತಪೋವನಕೆ || ೪೩ || ನಿಂದನಾತನುತಪಕೆಸುರರಿಪು | ಮಂದರದ್ರೋಣಿಯಲಿತುದಿಗಾ | ಲಿಂದಧರಣಿಯಮೆಟ್ಟಿತೋಳ್ಗಳ
ನಂಬರಕೆನೆಗಹಿ || ಬಂದಿವಿಡಿದಂತರ್ಮನದಲರ | ವಿಂದಭವನನುಮೇಲುಮೊಗವೆನೆ | ಸಂದದೃಷ್ಟಿಯನಿಲಿಸಿರವಿಮಂಡಲದಮ
ಧ್ಯದಲಿ || ೪೪ || ತೊರೆದನಾಹಾರವನುನಿದ್ರೆಯ | ಜರದುವಿಷಯೇಂದ್ರಿಯದಗಡಣವ | ನೆರೆಬಿಡಿಸುಬೇರೊಂದನರಿಯದೆಯೋ
ಗನಿಷ್ಠೆಯಲಿ || ಸೆರಗಬಿಡಿಸಿದನಾಸುಷುಮ್ನೆಯ | ಮರೆಗೆಪವನನತೆಗೆದುಮೇಲಂ | ತರವನಂಗೀಕರಿಸಿಕಾಷ್ಠದವೋಲುನಿಂದಿ
ರ್ದ || ೪೫ || ವೀರನೈದಲುತಪಕೆಸುರರೆದೆ | ಡೇರಿದರುಭಯರಸವಖಳಕಾ | ಹೇರಿದುಕ್ಕಿನವೋಲುಬಹಳತಪಃಪ್ರಭಾವದಲಿ ||
ಮೀರಿದನುಕಲ್ಪಾಂತರುದ್ರಂ | ಗಾರುಮಡಿಯನಲುಳಿದುದಿವವನು | ಜಾರಿದರುಜರುಗಿದರೆಜವಗೆಂದಿದರುದಿಗಧಿಪರು ||೪೬||
ಬಿಟ್ಟಮಂಡೆಯಲಜನಲೋಕಕೆ | ಬಟ್ಟೆದೆಗದರುಸುರರುಪದದಲಿ | ಧಟ್ಟಗೆಡದರುಕೊಡೆಜಯಜಯಜಯತುಜಯಯನುತ ||
ಸೃಷ್ಟಿಯೊಡೆಯನುನೋಡಿಕರುಣಾ | ದೃಷ್ಟಿಯಲಿಬೆಸೆಗೊಂಡನಿಮಗೇ | ನಟ್ಟಳಿಯಭಯವೆನಲುಬಿನ್ನಹಮಾಡಿದರುಹದನ ||೪೭||
ಜಗವಸುಡುವಕೃತಾಂತನೋಪೋ | ಣೊಗೆದರುದ್ರಮುಖಾನಲನೊದಗ | ದಗಿಸುತಿದೆದೈತ್ಯೇಂದ್ರನುಗ್ರತಪೋಮಹಾಜ್ವಾಲೆ ||
ಹೊಗೆಯಹೊರಳಿಯಲದ್ದುದೆಂಮ | ಕ್ಷಿಗಳುಶಿವಶಿವನಂಮನನಿಮೇ | ಷಿಗಳನೇತಕೆಮಾಡಿಕೆಡಿಸಿದೆಯೆಂದುದಮರಗಣ || ೪೮ ||
ಅಚ್ಚರಿಯರಾಜ್ಯದಲಿಖಳರಿರೆ | ಬೆಚ್ಚುವುದುಬೆದರುವುದುತಪದಲಿ | ನಿಚ್ಚಟನುನಿಲಲಾಯ್ತುಶಿವಶಿವಶಿವಮಹಾದೇವ || ಬೆಚ್ಚಿ
ಬೆದರುವಭೀತಿನಮಗಿದು | ನಿಚ್ಚಲೀವಿಧಿಯಾಯ್ತುಜಗದಿದಿ | ಗಿಚ್ಚುಸೈರಿಸಲರಿದುತಮಗೆಂದುದುಸುರಸ್ತೋಮ || ೪೯ ||
ಸುಟ್ಟುಜಗವನುನಿಂಮಡಿಯಕೃತ | ಸೃಷ್ಟಿಯನುನೆರೆಕೆಡಿಸಿತನ್ನಯ | ಸೃಷ್ಟಿಯಾಗಿರೆಮಾಡಿಯೋಗತಪಃಪ್ರಭಾವದಲಿ || ದು
ಷ್ಟನೀಜಗಕೆಲ್ಲತಾನೇ | ನೆಟ್ಟನೀಶ್ವರನಹೆನೆನುತ್ತಾ | ದಟ್ಟಳಿಯತಪದಿಪ್ಪನೆನಲಿಂತೆಂದನಬುಜಭವ ||೫೦|| ಸಾಕುಸಾಕೆಂಜದಿ
ರಿಬಿಡಿಸುವೆ | ನೀಕುಠಾರನತಪವನಿಮಗೀ | ವ್ಯಾಕುಲತೆಬೇಡೆನುತಹಂಸೆಯಹಲ್ಲಣಿಸಹೇಳಿ || ಲೋಕಪತಿಗಳುಸಹಿತತ್ರಿಭು
ವನ | ದಾಕೆವಾಳನುಬಂದನಾಜಗ | ದೇಕವೈರಿಗಳರಸನಿದ್ದಮಹಾತಪೋವನಕೆ || ೫೧ || ಬೆತ್ತಬಿದಿರುಗಳಸುರನೊಡಲನು |
ಸುತ್ತಿಬೆಳದಂದದಲಿಮುತ್ತಿದ | ಹುತ್ತುಗಳಬೊರಲೆಗಳುಬಿಡದಿರುಹೆಗಲುಮನೆಮಾಡಿ || ನೆತ್ತರನುಮಾಂಸವನುತೊಗಲನು | ಕತ್ತ
ರಿಸಿಕಡಿಕಡಿದುತಿನಲದೆ | ನೆತ್ತಲೇನೆಂದರಿಯನುಗ್ರತಪಃಪ್ರಭಾವದಲಿ || ೫೨ || ಉಳಿದುದೊಡಲೊಳಗಸ್ಥಿಮಾತ್ರವು | ಖಳ
ನಭಾಗಕೆಶಿವಶಿವೆಂತುಟೊ | ಖಳನಧೈರ್ಯದಬಲುಹೆನುತನೋಡಿದನುತಲೆದೂಗಿ || ಬಳಲಿದೈಸಾಕೇಳುಸಾಕೇ | ಳೆಲೆಮಗನೆಮೆಚ್ಚಿ
ದೆನುಮೆಚ್ಚಿದೆ | ನೊಲಿದುದನುಬೇಡೀವೆನಿಷ್ಟಾರ್ಥವನುನಿನಗೆಂದ || ೫೩ || ಆರುನಿಂನಂದದಲಿತಪವನು | ಪೂರುವದಲಾಚರಿಸಿ
ದವರೆಲೆ | ವೀರದಿವ್ಯಶತಾಬ್ದಮಾಯಿತ್ತನಶನದತಪದಿ || ಕೀರಿದವುಖಂಡವೆಸುಪೂರಲೆಶ | ರೀರವನುಶಿವಶಿವಯೆನುತಸರ | ಸೀರು
ಹೋದ್ಭವನಡಿಗಡಿಗೆಕೊಂಡಾಡಿದನುಖಳನ || ೫೪ || ಉಸುರಲಾರದೆದೈತ್ಯನಿರೆಪ್ರೋ | ಕ್ಷಿಸಿಕಮಂಡಲಜಲವನೇಳನೆ | ವಿಸು
ಪಗಾತ್ರದವಜ್ರಕಾಯದಿಮೆಳೆಗಳನುಬಗಿದು || ಅಸುರನೆದ್ದನುಹುತ್ತನೊಡದೆ | ಬ್ಬಿಸಿದಹೆಬ್ಬುಲಿಯಂತೆಮುಂದಿಹ | ಬಿಸಜಭವ
ನನುಕಂಡುಮೈಯಿಕ್ಕಿದನುಜಯಜಯನುತ || ೫೫ || ನಿಗಮಶತಸೂಕ್ತಂಗಳಲಿನಾ | ಲಿಗೆದಣಿಯೆಹೊಗಳಿದನುಕೈಗಳ | ಮುಗಿ
ದುಬಿಂನಹಮಾಡಿದನುತಂನಯಮನೋರಥವ || ಹಗಲಿರುಳುಹೊರಗೊಳಗೆಧರೆಯಲಿ | ಗಗನದಲಿಸುರನರರಕೈಯ್ಯಲಿ | ಜಗ
ನುಮಯಕೊಡುಸಾಯದಂತಿರೆವರವನೆನಗೆಂದ || ೫೬ || || ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ ||
ಮತ್ತೆಖಗಮೃಗನಾಗನಿಕರದ | ಉತ್ತಮನೆಸಾಮ್ಯಸುಗಳಿಂ | ಬಿತ್ತರದಲಸುರರಲಿಗಂಧರ್ವರಲಿಯಕ್ಷರಲಿ || ಮೃತ್ಯುತನಗಿ
ಲ್ಲದವೊಲೀವುದು | ಚಿತ್ತವಿಸಿನಿಮ್ಮಡಿಸೃಜಿಸಿದೀ | ತತ್ವನಿಕರಂಗಳಲಿಸಾಯದವರವನೆನಗೆಂದ || ೫೭ || ತಾಗಿದರೆಕಣ್ಣನೊ
ತಗೆಪರಿಭವವೆ | ಮಾಗದಂತಿರೆಸಕಲಲೋಕ | ಕ್ಕಾಗಬೇಕಾನೊಬ್ಬನಿರದೇಕಾಧಿಪತ್ಯದಲಿ || ಯೋಗಸಿದ್ಧಿಗಳೆನಿತೆನಿತುವರ | ಯೋ
ಗಿಗಳದಾತಾರತ್ತೊತ್ತುಗ | ಳಾಗಿಬೆಸಗೈವಂತೆಕರುಣಿಪುದೆಂದನಮರಾರಿ || ೫೮ || ಕೊಟ್ಟೆನೆಲ್ಲವನೆನುತಮಂಡೆಯ | ಮುಟ್ಟಿ
ಕಳುಹಿಸುರಾರಿಯನುನಿಜ | ವಿಷ್ಟರವನೈದಿದನುಸಕಲಸುರಾಸುರರುಸಹಿತ || ಬೆಟ್ಟಬೆದರುವವೋಲುವೈರಿಘ | ರಟ್ಟದೊದರಿಸಿ
ಸೂಜವನಮರರ | ಥಟ್ಟನುಂಗುವೆನೆನುತಬಂದನುವೀರನರಮನೆಗೆ || ೫೯ || ಅಜವಿಗಿಚ್ಚೊಡಲಿಟ್ಟುಚೇತನ | ಪಡೆದುದೋಕ

ಲ್ಪಾಂತಕಾಲದ । ಸಿಡಿಲುಸಪ್ರಾಣಿಸಿತ್ತೊಸಂವರ್ತಾಂಬುಧಿಯಜಲವ ॥ ಕುಡಿವವಡಬಾನಲಗೆನೆರವನು । ಮೃಡನಹಣೆಗಣ್ಣಿತ್ತು
ಡೋಯನ । ಲೊಡಲೊಡನೆದಿನದಿನಕೆಹೆಚ್ಚಿದುದಸುರನಾಟೋಪ ॥ ೨೦ ॥ ಮೀರಿದನುದಿಗಧಿಪರಗಂಟಲ । ನೂರಿದನುಮಲತವ
ರಸುರವನ । ತೂರಿದನುತೂಳಿದನುಭುವನಚತುರ್ದಶಂಗಳಲಿ ॥ ಏರಿದನುಸುರಪತಿಯಸೀಠವ । ನೋರುಗುಡಿಸಿದವಿಭವದಲಿ
ಮದ । ಮೀರಿದನುಮತ್ತೇನುನಿತ್ಯಾತುಮನನಿಜದಾಸ ॥ ... ... ॥ ೨೧ ॥

ಅಂತು ಸಂಧಿ ೨ಕ್ಕಂ ಪದನು ೫೦ರಕ್ಕೆ ಮಂಗಳಮಸ್ತು.

ಮೂರನೆಯ ಸಂಧಿ.

ಹಿರಣ್ಯಕಶ್ಯಪುವಿನ ದಿಗ್ವಿಜಯ.

ಸೂಚನೆ ॥ ರಾಯಸುರಗಜಪಂಚಮುಖನರಿ । ರಾಯತಿಮಿರಸರೋಜಸಖದೈ । ತ್ಯೇಯಮದಮುಖನೆ
ಸದನಸದಳರಾಜತೇಜದಲಿ ॥ ... ...

ಪದನು ॥ ಕೇಳುಧರ್ಮಜಕಮಲಜನವರ । ದೇಳಿಗೆಯಲುಬ್ಬಿದ್ದದಸುರನೆ । ತ್ರೋಳಬಲುಹಿನಬಿಂಕಬೇರ್ವರಿಯಿತ್ತು
ಭುವನದಲಿ ॥ ಸೀಳಬಿಟ್ಟನುಸುರರಹೆಂಡಿರ । ವಾಲೆಗೆಳಪೆಸೆದೆಸೆಗಳೆಂಟರ । ಪಾಲಕರಪರಿಭವದಪರಿಯನುಮತ್ತೆ ಕೇಳೆಂದ ॥ ೧ ॥
ಅನುಜನನುಕೊಂದಳಲುಕಾಯದ । ಲನಲನೆರಕಡವ್ರೋಲಿರಲುದಿನ । ದಿನಕೆಹೆಚ್ಚಿದುಗಕಟುಕಿಂತಾಪವನವೇಗದಲಿ ॥ ದನುಜಹ
ರನಲಿಬಿತ್ತಿದವರಾ । ರನುಮಿಷರಲಾಕೊಂಡೆಯುವನವ । ರನುವಿಭಾಡಿಸಿದಲ್ಲಗಳಲಿಂಗಿಲ್ಲಕಡೆಯೆಂದ ॥ ೨ ॥ ಹೊಕ್ಕನಮರಾವ
ತಿಯನತಿಬಲ । ನೆಕ್ಕತುಳದಲಿಸುರರಹೆಂಡಿರ । ನೊಕ್ಕತನವನುಬಿಡಿಸಿಸುರಪಾಲಕನಪರಿಭವಿಸಿ ॥ ಹಕ್ಕಲನುಹೊಗಿಸಿದನುವನ್ನಿ
ಗೆ । ತಕ್ಕದನುಕಂಣಿದನುಕಾಲನ । ನೊಕ್ಕಲಿಕ್ಕಿದನೊರಸಿದನುನಿರುರುತಿಯಭುಜಬಲವ ॥ ಪಾಸಿಯನುಪರಿಭವಿಸಿಪವನನ ।
ಬೇಸರಿಸಿಸದನುಕುಬೇರನ । ನೀಶನನುತಂನವನೆನಿಸಿತತ್ತನ್ನಿವಾಸಿಗಳ ॥ ಕೋಶರತ್ನಾಂಬರವಿಚಿತ್ರವಿ । ಭೂಷಣಂಗನೆಳ
ದುವಿಬುಧವಿ । ಲಾಸಿನಿಯರನುಕಳುಹುತಿರ್ದನುಪುರಕೆಬಹುಧನವ ॥ ೪ ॥ ಗರುಡಕಿಂನರಸಿದ್ಧವಿದ್ಯಾ । ಧರಮಹೋರಗಯ
ಕ್ಷಗಂಧ । ರ್ವರನುಘೋಳಡಿಸಿದನುಭೂತಪ್ರೇತನಿಕರವನು ॥ ಬರಸಿದನುಕಿಂಪುರುಷಗಗನೇ । ಚರರನಪ್ಸರಸಿಯರನಂಗೀ ।
ಕರಿಸಿದನುದನುಜೇಂದ್ರನಾತತ್ತತ್ಸ್ವವಸ್ತುಗಳ ॥ ೫ ॥ ಇಂದ್ರಪೀಠವನೇರಿದನುದನು । ಜೇಂದ್ರನಾಸುರರಾಜತೇಜದ । ವಂದಿ
ಗಳವರಸೂತಮಾಗಧಮುಖ್ಯಪರಿಜನದ ॥ ವೃಂದದೊಡ್ಡೋಲಗದಲಂದರ । ವಿಂದಭವಹರವಿಷ್ಣುಮೂವರು । ಹಿಂದುಳಿಯ
ಲೋಲೈಸಿತಾತನನಿಖಿಳಪರಿವಾರ ॥ ೬ ॥ ಮಡದಿಯರುಚಾಮರವಚಿಂಮಿದ । ರೆಡಬಲದಲಪ್ಸರಸೆಯರುಪಂ । ಗಡಿಸಿದರುಸತ್ತಿ
ಗೆಗಳನಮುತ್ತಿನಲಿರಂಜಿಸುವ ॥ ತೊಡಿಗೆಗಳನವರತ್ನಕಾಂತಿಯ । ಕಡಲಕಡೆಗಣ್ಣಗಳವಿಗಾನಳ । ಪಡಗರದಮುರುಗದಲಿಮೆ
ರದರುಬಳಿಸಿಸುರರಿಪುವ ॥ ೭ ॥ ನೃತ್ಯದಲಿಗೀತದಲಿವಾದ್ಯದ । ವಿಸ್ತರದವಿಭವದಲಿಗಂಧ । ರ್ವೋತ್ತಮರುಕಿಂನರರುವಿದ್ಯಾಧ
ರಮಹೋರಗರು ॥ ಉತ್ತಮನೆತುಂಬರರುಗಡೆಡ । ನೊತ್ತಿಪಾಡಿದರಾತನತುಳಚ । ರಿತ್ರನನುಗುಣಗಳನುನಾನಾವಿಧಪರಾ
ಕ್ರಮವ ॥ ೮ ॥ ಓಡಿದಡೆಮೇಣಡಗಿದಡೆಖಳ । ಕೂಡಿದೂರೇಕ್ಷಣದಸಿದ್ಧಿಯ । ಲೋಡಿದೆಡೆಗಳನರಿವನಿದ್ದಲ್ಲಿದ್ದಸುರನರರ ।
ಕೇಡನೇವಣಿಸೆನುಹೇಳದ । ಮಾಡಿಜೀವಿಸುತಿರ್ದಡೆಲ್ಲಾ । ನಾಡನರನಾಯಕರುಸುರದಿಗುಪಾಲಕರುಸಹಿತ ॥ ೯ ॥ ಉತ್ತು
ಬಳಲುವರಿಲ್ಲಧರೆಯಲಿ । ಬಿತ್ತಿಬಳಲುವರಿಲ್ಲಬೇಡಿದ । ವಸ್ತುವನುಧರೆಬೆಳವುತಿಹುದಸುರೇಂದ್ರನಾಜ್ಞೆಯಲಿ ॥ ಮುತ್ತು ಮಾಣಿ
ಕಗಳನುಕಾಣಿಕೆ । ಯಿತ್ತುಕಂಡೊಂದೊಂದುಸಾಗರ । ಸಪ್ತಕಂಗಳುಸಕಲನದಿಗಳುಸಹಿತಮರಳುವವು ॥ ೧೦ ॥ ಇಂದ್ರನೆಡಮಂ
ಕದನವೆನಲನಿ । ರಂಧನೆಗನಂತಕನುಮಿಗೆಕೊ । ಲ್ಲಂದನರನೆರೆಕೊಲುವನಾನಿರುತಿಗೆಮನೆಗೆಲಸ ॥ ಎಂದರೂಮಿಂಗುದಕವನು
ನೆರೆ । ತಂದಪೆಕುವನುವರುಣನಾಕಸ । ವೊಂದುಳಿಯದಂತುಡುಗುವನುಪವಮಾನನಗಲದಲಿ ॥ ೧೧ ॥ ಭೂರಿಧನದಲಿದಿನದಿನ
ಕೆಭಂ । ಡಾರವನುತುಂಬುವಕೆಲಸಕಾ । ಬೇರನದುಬೇಡಿದವರಂಗಳನೀವನೀಶ್ವರನು ॥ ವಾರಿಜಾಸನನಿಹನುಬಲದಲಿ । ವೀ
ರನೈಯ್ಯನಮುತ್ತಯನಕ್ಕೆ । ವಾರವೇಹದಿನಾಲ್ಕುಲೋಕವಿಧಾತನೊಳಗಾಯ್ತು ॥ ೧೨ ॥ ಒಬ್ಬನೇಹಗೆಯಾದನಾಹರಿ । ಇಬ್ಬ
ರೊಂದೋಜೆಯಲಿನಡೆದರು । ಸರ್ಬಜನವನುಕೇಳಬೇಕೆಂದಂತೆಬೆಸನೈದು ॥ ನಿರ್ಬಹಿಸಲಾರದೆಸುರಾರಿಗೆ । ಹಬ್ಬಕವ್ಯಂಗಳ
ನೆನಡಸುವ । ರುರ್ಬಿಯಮರರಕೊಡದಡುಂಬನುಯಾಗಭಾಗಗಳ ॥ ೧೩ ॥ ಯಜಿಸುವಡೆತದ್ದೈವಮಂತ್ರವ । ಭಜಿಸುವಡೆ
ತಂನಾಮನೆನೆವಡೆ । ಸುಜನರಿಗೆತನ್ಮೂರ್ತಿಕೀರ್ತನಕಥಾಶ್ರವಣ ॥ ತ್ರಿಜಗದಲಿಬೇರೊಂದುದೈವವ । ಭಜಿಸಲಿಲ್ಲೋಲಗಿಸ
ಲಿಲ್ಲ । ವೃಜಿನಮೂರ್ತಿಯವಾರ್ತೆಯೇಪಸರಿಸಿತುಮೂಜಗವ ॥ ೧೪ ॥ ಏನನೆಂಬೆನುಭೂಪಭುವನದ । ಹಾನಿಯನುಭುವನಾ
ಧಿಪತಿಗಳ । ಮಾನಭಂಗಪನೆದನುವಾಹನವಸ್ತುವನಿತೆಯರು ॥ ದಾನವೇಂದ್ರಂಗಾಯ್ತುಯಜ್ಞವಿ । ತಾನದಾಹುತಿಸಹಿತಜಪ

ರಕ್ಷ । ಶಾಮವಿನಕ್ಷೈದೊಳಸುನೆರವಾಯ್ತೇಮನೋವ್ಯಥೆಗೆ ॥ ೧೫ ॥ ಉಸುರುವೆವುನಾವಾರಿಗೀಯ । ಬ್ಬಸವನೀದುಸ್ಥಿತಿಯ ನೀಮಹ । ಘಸಣೆಯನುಮಾಣಿಸುವರಾರೋಹರಮಹಾದೇವ ॥ ಬಿಸರುಹಾಸನಗೆಂಬಡಾತನೆ । ಮಸಡನಲ್ಲಾಗೋತ್ರದವನೆಂ । ಬೆಸಕಘನವಿಷ್ಣೇನುಗತಿತಮಗೆಂದುದಮರಗಣ ॥ ೧೬ ॥ ಬಲ್ಲಿದನುಮಾಯಾವಿಮಿಕ್ಕವ । ರಿಲ್ಲಹರಿಯದುತಂಮಹೃದಯದ । ತಲ್ಲಣದತನಿಶೋಕಲಕೆಹಾಯನುತತಮತಮಗೆ ॥ ನಿಲ್ಲದಾಕ್ಷೀರಾಬ್ಧಿಗಾಶ್ರೀ । ವಲ್ಲಭನಪದಯುಗಳದರ್ಶನ । ಕೆಲ್ಲರೋಯಂ ದೋಡಿಮರೆಯೊಕ್ಕರುಮನೋರಮನ ॥ ೧೭ ॥ ದಂಡದಂತಿರೆನೆಗಹಿನಿಜದೋ । ರ್ದಂಡಷಂಡಂಗಳನುಧರೆಯಲಿ । ದಿಂಡುಗೆಡಹಿದರೊಡಲನಾಕ್ಷೀರಾಬ್ಧಿಗಿದಿರಾಗಿ ॥ ಪುಂಡರೀಕದಳಾಕ್ಷರಿಪುಮದ । ಖಂಡತಿಮಿರವಿಪಕ್ಷನವರಮಾ । ರ್ತಾಂಡಸಜ್ಜನರಕ್ಷ ಶರಣಾಗೆಂದುದಮರಗಣ ॥ ೧೮ ॥ ಹಲವುದಿನಪರಿಯಂತನಿದ್ರೆಯ । ನುಳಿದರಾಹಾರವನುತಪದಿಂ । ದೊಲಿಸಿದರುಜಗದೇಕನಾಥನಕಡುದಯಾನಿಧಿಯ ॥ ಬಳಿಕಮೃದುಮಧುರಾಕ್ಷರದಮಂ । ಗಳನಭೋಮಯವಾಗಿದೆಸೆಗಳು । ಮೊಳಗುವಂತೆಯಕೇಳಬಂದುದುಸಕಲಸುರಸಭೆಗೆ ॥ ೧೯ ॥ ತ್ರಿದಶರಂಜದಿರಂಜದಿರಿನಿಂ । ಮೆದೆಯಕಿಚ್ಚನುನಂದಿಸುವೆನಾ । ಮದಮುಖನದುಶ್ಚೇಷ್ಟೆಯನುತಾಬಲ್ಲೆನಂಜದಿರಿ ॥ ಉದಿಸುವನುಮಗನೊಬ್ಬನಾಖಳ । ನುದರದಲಿಪುಣ್ಯಾತ್ಮನಾತನ । ಕದನಮುಖದಲಿಕೊಲುವೆನಸುರನನಂಜಬೇಡೆಂದ ॥ ೨೦ ॥ ಆವನಾದ್ವಿಜದೇವಕುಲದಲಿ । ನೋವನೊಡರಿಸಿಬಗೆವನಾತನು । ದೇವನಾಗಲಿದೈತ್ಯನಾಗಲಿಕಾಲನಾಗಿರಲಿ ॥ ಸಾವನಾತನುತಂನಭಕ್ತರ । ಜೀವಘಾತಿಗೆನೆನವನೆಂತೈ । ಜೀವಿಸುವನಕಟೆನುತಮರುಗಿದನಾಗನಖಿಳೇಶ ॥ ೨೧ ॥ ಎಂನನಿರಿದರೆಸೈರಿಸುವೆಮೇ । ಣೆಂನನೊದದರೆಸೈರಿಸುವೆಬಳಿ । ಕೆಂನನೆನವವರಸ್ವಭಾವೋಚಿತದವೃತ್ತಿಯ ॥ ಎಂನಹವಣಲ್ಲೆಂನಭಕ್ತರ । ಬಂನದಲಿಭಂಗದಲಿಸೈರಿಸೆ । ದೆಂನಮನವಿದುಮುಚ್ಚುಮರೆಯೇಕೆಂದನಸುರಾರಿ ॥ ೨೨ ॥ ಇಂತೆನುತ್ತಡಗಿದುದುಸುರಮುನಿ । ಸಂತತಿಗೆನೀವಂಜಬೇಡೆನು । ತಂತರಿಕ್ಷದವಾಣಿವಾಸವಮುಖ್ಯರದಕೇಳಿ ॥ ತಂತಮಗೆಮೈಯಿಕ್ಕಿಲಕ್ಷ್ಮೀ । ಕಾಂತನಂಘ್ರಿಗೆದೈತ್ಯನಾಶವ । ಚಿಂತಿಸುತಮರಳಿದರುಹೋದರುಬಂದಬಟ್ಟೆಯಲಿ ॥ ೨೩ ॥ ಆದರಿತ್ತಲುದೈತ್ಯಪತಿಗಾ । ಹ್ಲಾದನಾತರುವಾಯುಮಿಗೆಸಂ । ನಾಪ್ರಹ್ಲಾದನದ್ಭುತಬಲಮರುಹ್ಲಾದ । ಆದರೀನಾಲ್ವರುಕುಮಾರರು । ಮೇದಿನೀಪತಿನೋಳ್ಪಡುತ್ತಮ । ನಾದನಾಪ್ರಹ್ಲಾದನಾದೈತ್ಯೇಂದ್ರಪುತ್ರರಲಿ ॥ ೨೪ ॥ ಹುಟ್ಟುತವೆಪರತತ್ವವೇಮೊದ । ಲಿಟ್ಟುಜನಿಸಿತುಬೊಂಮವಿದ್ಯೆಯ । ಸೃಷ್ಟಿಗಧಿದೇವತೆಯೊನಿಜಸಾಂಬ್ರಾಜ್ಯವೈಭವಕೆ ॥ ಪಟ್ಟಭದ್ರನೊಪರನುಖವಳ । ವಟ್ಟಸಿದ್ಧನೊಭಾಗನತಜನ । ಪಟ್ಟಕಲ್ಪದ್ರುಮದಸಂಪದವೆನಲುರಂಜಿಸಿದ ॥ ೨೫ ॥ ನುಡಿಯುತಲೆನಾಲಿಗೆಗೆಬಂದುದು । ತಡೆಯದಚ್ಯುತನಾಮಕೀರ್ತನ । ಮೊಡನೊಡನೆಪರಮೇಷ್ಠಿವಂದ್ಯಮುಕುಂದಹರಿಯೆಂಬ ॥ ನಡವುತಲೆತದ್ಧ್ಯಾನದಾಸ್ಪದ । ನಡೆನಿಜಾಂಗವದಾಯ್ತುಶಿವಶಿವ । ಪೊಡವಿಪಾವನಚರಿತನೆಸೆದನುದಗ್ರತೇಜದಲಿ ॥ ೨೬ ॥ ಸರ್ವಭೂತಸುಹೃತ್ತಮನುಜಿತ । ಗರ್ವನಕ್ರೋಧನನುಪಾಸಿತ । ಸರ್ವಸಜ್ಜನಚರಣನಾರಂಜಿತಗುಣಾಭರಣ ॥ ಉರ್ವಿಪಾವನಪುಣ್ಯಚರಿತನು । ಸರ್ವಜನಸುಸ್ವಸ್ತ್ಯನಘಕುಲ । ದುರ್ವಿಗಾಹ್ಯವಿಕಾರನೆಸೆದನುದಗ್ರತೇಜದಲಿ ॥ ೨೭ ॥ ಹಿರಿಯರೊಳುಗುರುಬುದ್ಧಿಸಚರಾ । ಚರದೊಳಗೆಹರಿಬುದ್ಧಿಮೇಣೊ । ಪ್ಪಿರೆನಿಜಾತುಮಬುದ್ಧಿತನಗೆಸಮಾನಜೀವರಲಿ ॥ ದುರಿತದುಸ್ತರದುಃಖಶೋಕಾ । ತುರರೊಳಗೆಸುತಬುದ್ಧಿವಿಶ್ವಂ । ಭರನವರ್ಗದೊಳತಿಶಯಪ್ರಿಯಬುದ್ಧಿಯನಲೆಸೆದ ॥ ೨೮ ॥ ವರ್ಣಿಸುವೆನಾನೇನನಖಿಳಗು । ಣಾರ್ಣವನಮಹಿಮೆಯನುನೃಪಹಗೆ । ಯಂನದಮರರುಸಹಿತಪಾಡಿಪಕೊಳುವರುರುಗುಣವ ॥ ಅನ್ಯರಿಲ್ಲಾತನನುಹೋಲಿಸ । ಲನ್ಯವೈಷ್ಣವರೆಲ್ಲರಿಗೆಸಂ । ಪಂನನಪ್ರತಿಮಾನನೆಸೆದನುಭೂಪಕೇಳೆಂದ ॥ ೨೯ ॥ ಭೂಪಕೇಳಾತನಮಹಿಮೆಯ । ದ್ಯಾಪಿಸಕಲಜನಂಗಳಿಗೆಭವ । ತಾಪಹರವೆಂದೆನಿಸಿಮೆರೆಯದೆಸಾಧುಸಭೆಗಳಲಿ ॥ ಆಪರಮಪುಣ್ಯಾತ್ಮನಾಶಿಶು । ರೂಪದಲಿನೊಸಲಾಗಿಬಿಡದೀ । ಶ್ರೀಪತಿಯಪದಕಮಲಮಧುಮಧುಕರನವೋಲಿರ್ದ ॥ ೩೦ ॥ ಒಡನೆಕರೆದರೆಮಕ್ಕಳಾಟ । ಕ್ಕಡಿಯಿಡದೆಜಿಹ್ವೇಂದ್ರಿಯದರಸ । ದೆಡೆಯಚಾಪಲ್ಯದಲಿಸಿಲುಕದೆಸರ್ವವಿಷಯದಲಿ ॥ ಸೆಡೆದುಮನದಾಸಕತಿಯನುಬೆಂ । ಬಿಡದೆತಾನೀಮುರಹರನಮೆ । ಲ್ಲಡಿಗಳನುಮನಮೆಚ್ಚಿಬಿಗಿಯಪ್ಪಿರ್ದನೊಲವಿನಲಿ ॥ ೩೧ ॥ ಅಹಹಹಸುಳೆಯದೇಕೆಜಡನಾ । ಗಿಹುದುಸಹಜವೊಮೇಣುಬಾಲ । ಗ್ರಹಗ್ರಹೀತನೊಯೆಂದುಕಂಡವರೆಲ್ಲಬೆರಗಾಗಿ ॥ ಗಹಗಹಿಸಿನಗುತಾಮುಕುಂದನ । ಮಹಿಮೆಯದಮನದೊಳಗೆಭಾವಿಸಿ । ಮಹಿಮನಳುವನುಕಣ್ಣೆಗೋಚರನಾಗನೇಕೆಂದ ॥ ೩೨ ॥ ಅರಿಯನಿತರರವತಂನನೇನುವ । ನರಿಯನೀಮುರಹರನಮೂರ್ತಿಯ । ಸೆರೆವಿಡಿದುಸರ್ವಾತ್ಮಕನುತಾನಾಗಿಮೈಮರೆದು ॥ ಒರವಕೆಂಗಳಬಾಷ್ಪದಲಿಮಡ । ಲಿರಿದತನುಪುಳಕದಲಿಭಕ್ತಿಯ । ಲೆರಗಿಸಿದಪೃಥ್ವಿಳಯವೋಲೆಸೆದಿರ್ದನಾಭಕ್ತ ॥ ೩೩ ॥ ಆಡುವನುಮನಬಂದಪರಿಯಲಿ । ಪಾಡುವನುಪಾವನಗುಣವನೀ । ಡಾಡಿಲಜ್ಜೆಯನೆದ್ದುಕುಣಿಕುಣಿದಳುವನೊಂದೊಮ್ಮೆ ॥ ನೋಡುವನುದೆಸೆದೆಸೆಯನೀಮುರ । ಗೇಡಿಯನೆಹಂಬಲಿಸಿಬೆಂಬಳಿ । ಬಾಡುವನುಬಳಕುವನುಬಸವಳಿವನುತದಿಚ್ಛೆ

ಯಲಿ ॥೩೪॥ ತಂದೆಯನುಜಗಿಯಪ್ಪಿಗರ್ಭಕ । ನಂದದಲಿಬಿಡದಾಮುಕುಂದನ । ವಂದ್ಯಚರಣಂಗಳನುಮನದಲಿತೆಗೆದುಬಿಗಿಯಪ್ಪಿ ॥ ಹಿಂದುಮುಂದಿಂದೆಂಬಭೇದವ । ನೊಂದುವನುಮೇಣರಿಯನಚಲಂ । ನಂದಮಯರಸಜಲಧಿಯಲಿಮುಳುಗಿಪ್ಪನನವರತ ॥ ೩೪ ॥ ಯೋಗನಿಧಿಯೆಂದೆಂಬಮೇಣುಣು । ಮಾಗಕಜ್ಜಾಯಂಗಳನುಮೆಲು । ವಾಗಮೆಲ್ಲನೆಹಜ್ಜೆಯನುಮೇದಿನಿಯಲಿಡುವಾಗ ॥ ರಾಗದಲಿನಿದ್ರೆಯನುನೆರೆಮಾ । ಳ್ಪಾಗಸರ್ವೇಂದ್ರಿಯವಿಷಯಸಂ । ಭೋಗದನುಸಂಧಾನತನಗಿಲ್ಲರಸಕೇಳೆಂದ ॥೩೫॥ ಇರಲುಮಗನಚರಿತ್ರವನುಮುರ । ಹರನಭಕ್ತಿಯನಿಜವನಾದು । ಷ್ಕರಿತನೀಕ್ಷಿಸಿದೈತ್ಯಪತಿಬೆರಗಾಗಿಬಿಸುಸುಯ್ದು ॥ ಮರುಳುಮಗನೋವಮಾರಿಯೋಹರ । ಹರಮಹಾಸೇವವನುಹಗೆಯನು । ಹರಹಿಕೊಳುತೈದನೆಮನೋವಚನಂಗಳೊಳಗೆಂದ ॥೩೬॥ ಕಲಿಸಬೇಹುದುರಾಜನೀತಿಯ । ನೆಲನೆಲನೊಶೈಶವದಶೀಕ್ಷೆಗೆ । ಫಲಿಪಿಡದೆಮತಿಸಪಿನವಹುದರ್ಭಕನಿಕೆಂದೆನುತ ॥ ಕಳುಹಿದನುಬಾಲಕನನಾಭೃಗು । ಕುಲದಚಂಡಾಮರ್ಕರಲ್ಲಿಗೆ । ಕೆಳೆಯರೊಳುಕಲಿಸಿದರುಬಲ್ಲಿಕರಾರಾಜನೀತಿಗಳ ॥೩೭॥ ಕೇಳುವನುಬಾಲಕರೊಡನೆಗುರು । ಹೇಳಿದುದನೆಲ್ಲವನುಮನದಲಿ । ಶೀಲನಿಧಿಸಂಗ್ರಹಿಸನೊಂದುವನರರವಿದ್ಯೆಗಳ ॥ ಹಾಲಿರಲುವಿಷವೇಕೆಕುಡಿವರೆ । ಖಳರಿಸದಿರುವಿಷ್ಣುಮಾಯಾ । ವ್ಯಾಳನಿರ್ವಿಷವಿಹ್ವಲಾತ್ಮರುತಾವಲಾಯೆಂದ ॥೩೮॥ ವಿದ್ಯವಿದ್ಯವಿವೆಂಬವೆಲ್ಲವ । ವಿದ್ಯಗಳುನೋಳ್ಪಾಗಲೊಂದೇ । ವಿದ್ಯೆಯಾತ್ಮವಿಚಾರವೆಲ್ಲಾಸಲೆನಿಧಾನಿಸಲು ॥ ಅದ್ವಯಾನಂದೈಕರಸನಿರ । ವದ್ಯನಿಜತತ್ವವನುತೋರ್ಪುದೆ । ವಿದ್ಯೆಯಿಂದದವನೊಡದಲಿನೆತಗಾಲಲಿತದುಕ್ತಿಗಳ ॥೩೯॥ ಮತ್ತೆಕೆಲವುದಿನಕ್ಕೆಬರೆನಿಜ । ಪುತ್ರನನುತಕ್ಕವಿಸಿನೋಹದ । ಲೆತ್ತಿತೊಡೆಯರಿಕುಳ್ಳಿರಿಸಿಕೊಂಡಕ್ಕರದಲಿ ॥ ನೆತ್ತಿಯನುನೆನೆಹುತ್ತಕೇಳಿದ । ಉತ್ತಮನೆನೀನೋದಿದುದರೊಳ । ಗುತ್ತಮವತನಗೊಂದಕರುಣಿಸುಕೇಳ್ದಪೆನೆಂದ ॥೪೦॥ ಆದತವಧರಿಸಿನಿತುದಿನತಾ । ನೋದಿದುದರೊಳಗುತ್ತಮವನೆನು । ತಾದಿಋಷಿಗಳಮತದಲುತ್ತಮವಾದಸಾರವನು ॥ ವಾದಗುಟ್ಟದೆಗೃಹವಿಷಯನಿ । ರ್ವೇದದಲಿಸುರೆಯೊಗುಪ್ರಸಾಮಧು । ಸೂದನಾಂಘ್ರಿಯನೇಕಮನದಲಿತಂದೆಕೇಳೆಂದ ॥ ೪೧ ॥ ಏನನೋದಿದಡೇನುಶಾಸ್ತ್ರವ । ನೇನಕೇಳಿದಡೇನುಧರ್ಮವ । ನೇನಮಾಡಿದಡೇನುದಾನಂಗಳಲಿಫಲವೇನು ॥ ದಾನವಾಂತಕನಂಘ್ರಿಕಮಲ । ಧ್ಯಾನತತ್ಪರುಷಪ್ರಸಂಗವಿ । ಹೀನವಾದಡೆವಿದ್ಯೆವಿದ್ಯೆಯದಲ್ಲಕೇಳೆಂದ ॥ ೪೨ ॥ ಕಷ್ಟವಹವಿಷಯಂಗಳಿಗೆಮೈ । ಗೊಟ್ಟುಮಾಯಾತಿಮಿರದಲಿಕಂ । ಗೆಟ್ಟುಭವಭಯಕೂಪದಲಿಕೆಡೆದಧಿಕದುಃಖದಲಿ ॥ ಹುಟ್ಟಿಸಾವುತಸತ್ತುಹುಟ್ಟುತ । ಬಟ್ಟೆದಪ್ಪಿಮಹಾಟವಿಯಹೊಗ । ದಿಟ್ಟದೇವತೆಹರಿಯನೆನವುದೆವಿದ್ಯೆಕೇಳೆಂದ ॥ ತಂದೆಮತ್ಸರವೆಂಬದೋಷವ । ದೊಂದೆಸಕಲಾನರ್ಥಕಾರಣ । ವೆಂದದನುನೆರೆಮಾಡುನಿಜವಿದ್ಯಾಪ್ರಸಾದದಲಿ ॥ ಚಂದ್ರಮಾಳಪ್ರಿಯನಚರಣ । ದ್ವಂದ್ವವನುಮರೆಯೊಕ್ಕುಪರಮಾ । ನಂದನಿತ್ಯಾತುಮನೆನಿಸಿಸುಖಿಯಾಗುನೀನೆಂದ ॥ ॥ ೪೩ ॥

ಅಂತು ಸಂಧಿ ೩ಕ್ಕಂ ಪದನು ೧೪೬ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ.

ಪ್ರಹ್ಲಾದನು ಮಠಕ್ಕೆ ಹೋದ ಕಥೆ

ಸೂಚನೆ ॥ ಪರಮವೈಷ್ಣವಸಮಯಶಿಕ್ಷಾ । ಗುರುಮಹಾಭಾಗವತನೆಸೆದನು । ಗುರುಕುಲಾವಾಸದಲಿ
ದೈತ್ಯಕುಮಾರಕರಸಹಿತ ॥ ... ...

ರನುತ್ತಂ | ದೆಗಳುನಾಚಿಸಬೇಡತಂನನು | ನಗಿಸಬೇಡನ್ಯರನುಕೃತ್ಯವದೇನುತನಗೆನಲು || ಜಗದುದರನಸುನಗುತಮೂರಡಿ |
ಜಗತಿಯನುತನಗೀವುದುಳ್ಳಡೆ | ಮಿಗಿಲುಬೇಡೆನೆಗಹಗಹಿಪಿದನುಜೇಂದ್ರನಿಂತೆಂದ || ೧೬ || ಹೊಸತುಕೇಳಲುಬಹುದಲಾಜೀ|
ವಿಸುತಿರಲುನಿಜಕಾರ್ಯದಲಿಭೂ | ವಿಸನಲಾಲೋಗರನುಹೋಗಾಡುವನೆಪಂಡಿತನು || ಸಪಿನೆನುಡಿಯಿಂನೊಂಮೆಮೂರಡಿ | ವ
ಸುಮತಿಯುಕೊಡಲಾಪೆನೇದು | ರ್ಯಶವಮಾಡಿದೆಭೂಪುರೇಕೇಳಿದೆನುಕೌತುಕವ || ೧೭ || ಚಕ್ರವರ್ತಿಯಭಜಿಪಿಬೇಡುವ |
ದಕ್ರಮವಲೇತುಷವನೆಂನನು | ಶಕ್ರನಗುವಂತಾಯ್ತುಜಂಬೂದ್ವೀಪಮೇದಿನಿಯು || ಚಕ್ರಾಳವನೀಯ್ಯಬಗೆಯಲು | ಪಕ್ರ
ಮವಮಾಡಿದೆನುಮೂರಡಿ | ಯಕ್ರಮವಬೇಡುವಡೆನೀನೇಕಿದಕೆತಾನೆಂದ || ೧೮ || ಎಲೆಮಹಾಮತಿಕೇಳುನೀನುಂ | ಮಾಳಿ
ಸಲೇಕೆಮಗರ್ಥಿದೇಶಾ | ವಳಿಪರಿಭ್ರಮಣದಲಿರಾಜ್ಯವಿದೇಕೆತಾನೇಕೆ || ತರೆವೊಡಲುನಡುವಿಲ್ಲಬಯಕೆಗೆ | ಬಳಲುವರು
ನಾವಲ್ಲಮೂರಡಿ | ನೆಲನಕೈಗೊಳ್ಳಿಸುವುದಾವನಲುಂಟಾದಡೆಮಗೆಂದ || ೧೯ || ತಿರಿವನರ್ಥವನರ್ಥವುಳ್ಳವ | ಧರೆಯರಾಜ್ಯ
ವರಾಜ್ಯವುಳ್ಳವ | ನಿತದೆಬಯಸುವನಿಂದ್ರಪದವಿಯನಿಂದ್ರನಜನಿರನ || ಸರಕುಮಾಡುವನಾಪೆಯಂಗನೆ | ಜರೆಯಕಾಣಳುಕಾ
ಣೆಯಂಮನು | ಪರಿಹರಿಸನೇನುಳ್ಳಡೀವುದುಖಾತಿಯಿಲ್ಲೆಂದ || ೨೦ || ಅದಡೆನಗೇನಸುಶುಭವನು | ತಾದಿತಿಜಪತಿಯೆಸ್ತು
ಹೊಂಗಳ | ಶೋದಕವತರಿಪಿದನುಧಾರೆಯನೆರೆಯಲನುವಾದ || ಹೋದುರಾಗಹಬೇಡಸ್ವೈರಿಸು | ಭೇದಕರವುಂಟೆಂನಚಿತ್ತದ|
ಲೋದಿಮರುಳಾಗದಿರೆನುತಕೈವಿಡಿದನಾಶುಕ್ರ || ೨೧ || ಏನುಮತ್ತೇನಿವನಿಧಾನಿಶಿ | ದಾನವರಕುಲಕಾದವ್ಯತ್ಯಾಸ | ಮಾನ
ನೀನದನರಿಯೆಪಾಕುವಿಚಾರಹೀನನಲ || ಕಾನನದಹೆಬ್ಬುಲಿಗೆಮಂನಿಪಿ | ಧೇನುವನುಕೊಡೆಬಹುದೆಭಾಗ್ಯವಿ | ಹೀನಕಾಲಕೆನ
ತಿವಿದೊಷಕವಹುದುಧಿಟವೆಂಡ || ೨೨ || ಇವಕಣಾಪ್ರಪಿತಾಮಹನಕೊಂ | ದವನುಹಂದಿಯಹರಿಯರೂಪಿಂ | ದಿವಕಣಾ
ತಾಳಿದವನಂದುಭವತ್ಪಿತಾಮಹನ || ಇವಕಣಾಕೆಡಿಪಿದವನವ್ಯತವ | ನಿವಕಣಾವೈರಿಗಳಿಗೆರದವ | ನಿವಕಣಾವಮಾಯಾವಿವಂ
ಚಕಪಿಸುಣನಿವಸೆಂದ || ೨೩ || ಕತಲಮನೆಯವದೇವಗಣವೊರೆ | ಯಿಡಲುಕೇಳಿದುಮಾಣಿಪರುತನು | ವಿಡಿನವಪಿತಿಯಜಠ
ರದಲಿತಾಬಂದುವಟುವಾಗಿ || ಮಿಡುಕದಿಲ್ಲಿಗೆಬಂದನರಿಯದ | ಬಡವನವ್ರೊಲಿರಬೇಡಕೊಡಬೇ | ಡೆಂದೆತನವನಿಳೆಪರಿತಲಮ
ರರಿಗೆಂದುಕವಿನುಡಿದ || ೨೪ || ವಾಯುಕಖಿಳಾವನಿಯರಾಜ್ಯ | ಶ್ರೀಯ್ಯಹೋಗಾಡದಿರುಸತ್ಯವ | ಕಾಯಬೇಕೇಬಹುವ
ಚೋಕ್ತಿಗಳಂದತಿಳುಪುವೆನು || ದೇಯವೆನಿಸುಗದೇಹಯದಕೋ | ಪೋಯುವೆನಿಸಲುಮಿಕ್ಕವಸ್ತುವ | ನೀಯಲುಂಟೇವೃತ್ತಿವಿರ
ಹಿತನಾದವಂಗೆಂದ || ೨೫ || ದಾನಹೋಮತಪೋವ್ರತಾನು | ಷ್ಠಾನಕರ್ಮಂಗಳಿಗೆವೃತ್ತಿವಿ | ಹೀನರೇನಧಿಕಾರಿಗಳೆದಾರಿದ್ರ್ಯ

ಪೀಡಿತರು || ದೀನರವರೇಪ್ರಾಯಶೋಧ | ರ್ಮ್ಮನುಗುಣಕಾಮಾರ್ಥಬಂಧುವಿ | ಹೀನವೃತ್ತಿವಿಹೀನರಿಂಗಿಹಪರಗಳಿಲ್ಲೆಂದ | ದಿತಿಜಪತಿಕೇಳಾತ್ಮವೃಕ್ಷ | ಸ್ಥಿತಿಗೆಕಾರಣವೆನಿಸುವುದುಜೀ | ವಿತವದಕೆಹುಸಿಮೂಲವಲ್ಲದೆಕೆಡುವುದಾವೃಕ್ಷ | ಋತುವದಕೆಫಲ ಕುಸುಮವೆನಿಸುಗು | ಕೃತಕವಲ್ಲಾಫಲಕುಸುಮವಸಂ | ಗತಿಗೆಕೇಡಹುದಾತ್ಮವೃಕ್ಷದಲಯುದಬಳ್ಳಿವಿಡಿದು ||೨೭|| ಅವಧರಿಸುಶ್ರುತಿವಿ ಹಿತವಿದುಭಿ | ಕ್ಷುವಿಗೆಬೇಡಿದನೇಕರಿಸಿ | ಲ್ಲವನುಕೊಡಬೇಡೀಯ್ಯದಿರಬೇಡೆಂಬುದಖಿಳಮತ || ದಿವಿಜರಿಪುಕೇಳೊಲಿದು ಸರ್ವ | ಸ್ವವನುಭಿಕ್ಷುವನಿತ್ತುಪುರುಷಾ | ರ್ಥವನುಸಂಚಿಸುವಂದವೆಂತಸುರೇಂದ್ರಹೇಳೆಂದ ||೨೮|| ಸ್ತ್ರೀಗಳಲಿಧರ್ಮದಲಿವೃತ್ತಿ ಪಿ | ಯೋಗದಲಿಸಂಪ್ರಾಪ್ತದೇಹತ್ಯಾಗಸಂಕಟದಲಿವಿವಾಹದಲಹಿತದೇಶದಲಿ || ಭೋಗರನುಕೊಲುವಲ್ಲಿಗೋವಿ | ಪ್ರಾಗವಾ ರ್ಥದಲನೃತವಚನ | ಕಾಗದುಪಹತಿಶಾಸ್ತ್ರದಿಂದಸುರೇಂದ್ರಕೇಳೆಂದ ||೨೯|| ಕಾಸಿಪಶ್ರುತಿಶಾಸ್ತ್ರದರ್ಥವಿ | ದೂಷಿತವೆ ತಾನೆಂದುದಿಸು | ಪಾಪಿಗವಲೇಧರ್ಮಸಂಹಿತೆಗಳಾವಿಚಾರಿಸಲು || ದೋಷವೆಮಗೇಕಕಟಧರ್ಮವಿನಾಶಕರನಾವಲ್ಲಗುರುತನ | ದಾಸೆಯುವರಾವಲ್ಲಭಾವಿಸಿನೋಡುನೀನೆಂದ ||೩೦|| ನುಡಿದುದನುಸಲಿಸುವಡೆನಾಪ್ರೌಢ | ಬಡುವೆವೆಂತದುಘಟಿಸದಿರದೋ | ರಡಿಗವನಿಸಂದೀಹವಂಬರವವಯವದಲಡಗೆ || ಬಡವನೇನಾಕವನುಮತ್ತೊಂ | ದಡಿಗೆಸರಿಮಾಡುವನುಮೂರನೆ | ಯಡಿಗೆಗತಿ ಯೇನಿವನಕೋಳುಗಳೊಳಗೆದೆಸೆಯುಡಗೆ ||೩೧|| ಅಕಟಸತ್ಯಸ್ಖಲನದಲಿನಾ | ರಕದಗತಿನಿನಗಹುದುಕಡೆಯಲಿ | ಸಕಲಜನವು ಕವೆಂದುನುಡಿಗೇಳಪಡೆತಪ್ಪಲವ|| ಪ್ರಕಟವಹುದಂಗ್ಯೆಯುಮೇಲೇ | ಮುಕುತಿಹುಸಿಯುದುಸಹಜಕುಲಕಂ | ಟಕನಕೊಂಡಾಡು ವುದುಲೇಸಲೆಲ್ಲಿದುಸಾರಿದೆನು ||೩೨|| ಹಲವುಸರಿಯಲಿಧರ್ಮವನುಭೃಗು | ಕುಲಲಲಾಮನುತಿಳುಹುತಿರಲಂ | ದೊಲಿದುಕೇಳುತ್ತಸುರಪತಿನಿರ್ಮಲಸಮಾಧಿಯಲಿ|| ತಿಳಿದುಕೃತ್ಯಾಕೃತ್ಯವೆರಡರನೆಲೆಯನಿರುಗೆಯುತಾರತಮ್ಯದ|ಬಳಕೆಯನುಗುರುವಿಂಗೆಬಿಂ ನವಿಸಿದನುಕೈಮುಗಿದು ||೩೩|| ವಿದಿತವಿದುನೀವಲ್ಲದೆಮಗಾ|ಸ್ಪದವುದೇರಿಂನಾವುಬೆಂಮ| ಭ್ಯುದಯನಿಂಮುದುಲೇಸಬಯಸು ಪಿರೆಮಸಂತತಿಗೆ || ಬದುಕುವರಿಗಿದುನೀತಿಗಾರ್ಹ|ಸ್ತ್ಯದಸಮಂಜಸಧರ್ಮನೀವೆಂ| ದುದುಮಹೋದಯಹೇತುವರ್ಗತ್ರಿತಯ ಸುಸ್ಥಿತಿಗೆ ||೩೪|| ಲೇಸುನಿಂಮಮಲೋಕ್ತಿತಾನಭಿ | ಲಾಷೆಯುಳ್ಳವನಲ್ಲರಾಜ್ಯದ | ಲೀಸಮಗ್ರೈಶ್ವರ್ಯಲೋಭಾವಿಷ್ಟನೆಂಬೆನಿಸಿ || ಭೂಸುರಾವಜ್ಞೆಯನುದೇಹ | ಶ್ವಾಸವಿರೆತಾನೆಂತುಮಾಡುವೆ | ನೀಸುದಿನಬದುಕಿದಕೆಸಫಲತೆಯಾಯ್ತುತನಗೆಂದ ||೩೫|| ಇಳೆಯನಳವೇಕೊಳಲಿತ್ರಿಪದ | ಚ್ಛಳವನಳದೇಕೊಳಲಿಕೊಟ್ಟೆನು | ಕಳಕಳವುತನಗಿಲ್ಲಭಾಷೆಗೆಭಂಗವಿಲ್ಲದಕೆ || ಇಳೆಯನೀರ ಡಿಪ್ರೋರಡಿಯುವೆಂ | ದಳದುಕಾಡಿದಡೊಪ್ಪುಸುವೆನೀ | ಕಳೆನರವನಲ್ಲದಡೆಯಿತರನಬಯಸೆನಾನೆಂದ ||೩೬|| ಅವಗಡಿಸಲೆಂದೆ ಚ್ಚಕುಹಕದ | ಕವಲುಗೋಲಿತೆಲೆಂನಸತ್ಯದ | ಕವಚಹರಿವದಕೀರ್ತಿಕಾಮಿನಿಗೋಮಿನೀಪತಿಗೆ || ಸವತಿಯಾಗಳಸೈರಿಸುವಳೆಂ | ತವನಿವಧುವಿದುಭೂಮಿರವಿಚಂ | ದ್ರವರಕೀರ್ತಿನಿತಂಬಿನಿಗೆಕಾದಲನುತಾನೆಂದ ||೩೭|| ಸುಟ್ಟರೊಡಲೇನಹುದುಭಸ್ಮದ | ಬೆಟ್ಟನಿಟ್ಟಡೆಸಲ್ಲನಾಯ್ನರಿ | ಮುಟ್ಟಿನಡೆವಿಷ್ಟಾಂತವಹುದಲ್ಲದಡೆಕ್ರಿಮಿಕುಲದ || ಹುಟ್ಟಿಲೆನಿಸೂದಿದನುತಾನೆಂ | ದೊಟ್ಟಿಬಿಸಾರಕದರಾಜ್ಯದ | ಪಟ್ಟಬಂಧನಕೆಂಸನೇಮಿಸವೇಡನೀನೆಂದ ||೩೮|| ಆದುವೆನಿಮ್ಮಲಿನ್ನಿಲಿಶಿರಿಶಾಶ್ವತ | ವದವಿಮೋ ಸೆನಹಿಂಚಿನಬಿಬಿದ | ಉದಕಲಿಕನಸಿನಲಿವಿತ್ತದಕಾಮಸುಕನಸ್ತ್ಯದಯ || ಉದಧಿವೀಚಿಯಬುದುಬುದಂಗಳು | ವುದಿಸಿದಡೆವಿ ಶ್ವಾಸವೈಶ್ವ | ರ್ಯದಲಿಸಂಭವಿಸುವವಿಚಾರಿಸಲಿಲ್ಲಹುರುಳೆಂದ ||೩೯|| ಅರಸುತಾನೆನಗಿವರುಸುತಸೋ | ದರರುಬಂಧುಗಳಾಪ್ತಜನಕರಿ | ತುರಗರಥಪತ್ತಿಗಳುರಾಣೀವಾಸವರ್ಗವಿದು || ಮರಿದಯನ್ವನವೆನಗೆನುತನುಮ | ಕರಿಪಮರಣಮುಹೂರ್ತದಲಿತ | ನರಸತನವೇನಹುದುಬಂಧುವರಿಂದಲೇನೆಂದ ||೪೦|| ಬಗೆಯಲಭ್ರಗಳಿಗೆಹರಿವಾ | ಪಗೆಯುಕೊರಡುಗಳಿಂಗೆಸುರಚಾತ | ತೆಗೆಸೆರದನೆರವಿಗೆಪಿಚಾರಿಸಲಾವಸಂಯೋಗ || ಬಗೆಯನರಿಯದೆಪಮಕರಿಸಿಬಂ | ಧುಗಳಿವರುಸುತರೆಂದುನರಕದ | ನಗೆಗೆಳದೊಡಚ್ಯಾಗಸುಗಡಲರುಹಿಹರೆಂದ ||೪೧|| ಕೊಡನೆಬೇಡಿದಡೊತಲಸಮರರ | ಗಡಣಕಂಡುದಧೀಚಿಶಿಬಿತಂ | ನಡಲಿತಿಸಸೀಶರೂಪದದಿವಿಜನಿಷ್ಕ್ಯರಿಗೆ || ಕೆಡುಗಿಸುರಗಾಯುತನುಬೇಡಿದ | ರೊಡಬಡನೆಪಿತನಮಲಕೀರ್ತಿಯು | ಕಪಲಧರಗಾಪರಿಸುತಬಿಂಬಿದವಿಯೋನುಘನವೆಂದ ||೪೨|| ಎಂತುಕೈಯ್ಯೋಳುವದುಕವಿವೆನ | ದೆಂತುಕಲ್ಪದ್ರುಮವನೆಲವಡ | ಸಂತತಿಮಫಲಗಳನಿಚ್ಛಿಪಯೋಪಿಹೀನೆಮನು || ಕಂತುಧೇನುವನರಿತೆಗೆಂ | ಬಂತೆಕನಸಿನವಿಷಯಸುಖಗಳ | ತಂತುವಿನ ತಪಿಗೆರಗಿನಸಿಯುಬಿಡುವನಲ್ಲೆಂದ ||೪೩|| ಸುಲಭನಿಧಿದೊರಕೊಂಡಡೊಲ್ಲದೆ | ತೊಳವನೇಜಲನಿಂಗೆನಯನಂ | ಗಳುಬರಲು ಚಾತ್ಯಂನೆನೊಲ್ಲದೆಕಳದುಬಿಸುಡುವನೆ|| ಬಳಲುವರುಗಡಯೋಗಿಗಳುನಿ | ರ್ಮಳಸಮಾಧಿಯುಲಾವನಂಘ್ರಿಯು | ನೊಲಿಸಲಾ ರದಿತಸೌಭಾಗ್ಯಪ್ರಬಲಮಮನೆಗೆಂದ ||೪೪|| ಮಂನತಂನಪಿತಾಮಹನುಸಂ | ಪಂನರಾಜ್ಯದಸಿರಿಯನೊಲ್ಲದೆ | ಪಂನಗಾರಿಧ್ವಜನಭಜನೆಯಮಾಡಿಜಗವರಿಯೆ || ಧನ್ಯನೆನಿಪನೆಶಿವಪಾದೇ | ವೆಂನಕುಲದೇವತೆಯಲೀಅವ | ಮಂನಣೆಯಮಾಡಿದಡೆ ನೇಯುನೇತಂಗನೆಚಿತ್ತಯನು ||೪೫|| ಅಂಜೆನಾನೀನಿರಯಶತ್ಸ್ವಸ | ಮಂಚಿಸೆಯಾತನೆಗಳಿಗತಾ | ನಂಜೆನೈಹಿಕಪಾರಲೌಕಿಕ

ಭೂಗಸಂಗದಲಿ ॥ ಅಂಜುವೆನುವಿಪ್ರಪ್ರಲೋಭ । ಕ್ಕಂಜುವೆನುನುಡಿದೆರಡನುಡಿವುದ । ಕಂಜೆನನ್ಯರಿಗೆನುತಧೀರೋದ್ಧಾರನಿಂದಿರ್ದ ॥ ೪೬ ॥ ಕೊಡುವೆನವನಿಯನೆಂದುಕಲಶವ । ಹಿಡಿದುನಿಂದಿರೆಕಂಡುಘುಡುಘುಡು । ಘುಡಿಸಿಕೋಪದಲೆಂದನುಡಿವಿಷವಾಯ್ತುನಿನಗೆಂದು ॥ ಕೆಡದಿರೆಲಪ್ರೋದ್ದಿನವೃತ್ತಿಯ । ನೊಡಬಡುವಡಾನೇಕೆನುತನಾ । ಣ್ಣುಡಿಯಮಾಡಿದನಂತ್ರಬೀಳೆನುತಿತ್ತಶಾಪವನು ॥ ೪೭ ॥ ಬಗವನೇಗುರುಶಾಪವನುಮೂ । ಜಗದಧೀರನಲಾಮಹಾಮತಿ । ನಗುತಬರಹೇಳಿದನುಪಟ್ಟದರಾಣಿವಾಸವನು ॥ ಮುಗಿಲಬಿಗಿದುಚ್ಛಳಿಸಿಗಗನದ । ಲೊಗದಶಶಿಕಳೆಯಂತೆತನುಕಾಂ । ತಿಗಳಲೆಸೆಯಲುಬಂದಳಂಗನೆಪತಿಯಸಂನಿಧಿಗೆ ॥ ೪೮ ॥ ಜೊಳವರತನುನಾಭರಣಕಾಂತಿಯ । ಬೆಳಗುಮುಳುಗಿತುನೆರದಸಭಿಕಂ । ಗಳಿಗೆನೆಲೆಯಾಯ್ತುಬಲೆಯಾಸ್ಯದಲಂಗಪರಿಮಳಕೆ ॥ ಅಳಿಗಳಾಳಿಗಳೊಡನೆಬರೆಹೊಂ । ಗಳಸಜಲವನುಹಿಡಿದುವಿದ್ಯಾ । ವಳಿನಯಾವಳಿಯಮುಮುಬಂದಳುಪತಿಯಸಂನಿಧಿಗೆ ॥ ೪೯ ॥ ಲಲನೆವಾದ್ಯೋದಕವನೀಯಲು । ನಲವುಮಿಗೆಮಂನಿಸಿಮುಕುಂದನ । ಚೆಲುವಿಕೆಗೆನೆಲೆಯೆನಿಪಕೋಮಲಚರಣಕಮಲವನು ॥ ತೊಳದುಧನ್ಯನೆನುತ್ತಶಿರದಲಿ । ತಳೆದುಪರಮಾನಂದರಸದಲಿ । ತುಳುಕಿತರೂಗಾಡಿದನುಶಿರವನುದಾನವೋತ್ತಂಸ ॥ ೫೦ ॥ ಧರೆಯಧಾರೆಯನೆರೆದುಕೊಟ್ಟನು । ಹರುಷಮಿಗೆಗಂಧಾಕ್ಷತೆಗಳಿಂ । ದರಸಿಸಹಿತರ್ಚಿಸಿದನನುಪಮನಂಘ್ರಿಕಮಲವನು ॥ ಧರಿಸಿಜಲಧಾರೆಯನುಧರಣೀ । ಧರನಧೂಪಾರತಿಯನಿತ್ತಾಪ । ಚರಿಸಿದನುಚತುರಾಸ್ಯನರ್ಚಿತವರಪದಾಬ್ಜವನು ॥ ೫೧ ॥ ಸಂಧಿನಾಲ್ಕೆನಲಿದರೊಳಗೆಪದ । ಬಂಧವೈವತ್ತೆರಡುಸಲುವವ । ಸುಂಧರೆಯದೇವನಭೃಗೂದ್ವಹನವನಿಯೊಡೆತನವ ॥ ಸಿಂಧುಶಯನರಗೀಯ್ಯದಿರುಬಗೆ।ಬಂದವಟುವಲ್ಲೆನಲುಕೌಂಸ್ತುಭ । ಕಂದರಂಗೆರೆದನುಧರಿತ್ರಿಯಧಾರೆಯನುನಲಿದು ॥ ॥ ೫೨ ॥

೮೦ಕು ಸಂಧಿ ೧೬ಕ್ಕೆ ೨೦ ಪದನು ೭೮೯ಕ್ಕೆ ಮಂಗಳಮಸ್ತು

ಹದಿನೇಳನೆಯ ಸಂಧಿ

ಸೂಚನೆ ॥ ಸುರನಿಕರಸುರಭೂಜಲಕ್ಷ್ಮೀ । ವರನುವಿಶ್ವಾಕೃತಿಯನಂಗೀ । ಕರಿಸಿದಿವಿಜರಸಲಹಿದನು
ಸವರಿದನುದಾನವರ ॥

ಪದನು ॥ ಚಿತ್ತವಿಸುಚಿನುಮಾಯನಲೀಲೆಯ । ಮತ್ತಸುರಪತಿಮೇದಿನಿಯನೊಲಿ । ದಿತ್ತುಕಪಟವಟುಸ್ವರೂಪದಹರಿಗೆಸುರವೈರಿ ॥ ಹೊತ್ತಹರುಷದಭಾರದಲಿಪುರು । ಷೋತ್ತಮನಲಾವಣ್ಯಗುಣಸಂ । ಪತ್ತನಾಲಿಸುತಿರಲುಜಯಜಯಯೆಂದುದಖಿಳಜನ ॥ ೧ ॥ ಭೇರಿಗಳುಮೊಳಗಿದವುಗಗನದ । ಲಾರಿದರುಸುರರರಳಮಳೆಗಳು । ಸಾರಿದವುಗಣಿಕೆಯರತಿಂಥಿಣಿಕುಣಿದುದಂಬರವ ॥ ಧೀರನೋಮಾಯಾಕಳಂಕವಿ । ದೂರನೋಧಾರುಣಿಯನಿಜಕುಲ । ವೈರಿಗೀವವರಾರೆನುತಕೊಂಡಾಡಿದರುಬಲಿಯ ॥ ೨ ॥ ಗರುಡಕಿನ್ನರಸಿದ್ಧವಿದ್ಯಾ । ಧರಮಹೋರಗಯಕ್ಷರಕ್ಷೋ । ವರವಸುಗಳಶ್ವಿನಿಸವಿಶ್ವೇದೇವಹುತವಹರು ॥ ನೆರದಸುಜನರುಸುಕೃತಿಗಳುಕಿಂ । ಪುರುಷರಖಿಳಧರಾಮರರುವಿ । ಸ್ತರದಿಕೊಂಡಾಡಿದರುಬಲಿಯವಿಶಾಲಧೈರ್ಯರ್ಗವನು ॥ ೩ ॥ ಅಳದುಕೊಂಬುದಧರೆಯನಾವ । ಸ್ಥಳದಲಭಿಮತವೆಂದುಬಲಿಕೈ । ಗಳೆಮುಗಿಯೆಲಸುರಾಂತಕನುತಂನೊಳಗೆನಸುನಗುತ ॥ ಕಳೆವರವನಿಗುಚಿದನುರವಿಮಂ । ಡಲವನಂಡಲವೃತ್ತಲಂಬರ । ತಳದತಳಪಟಗಾರಕೈಕೊಂಡನುತ್ರಿವಿಕ್ರಮನ ॥ ೪ ॥ ಥಳಥಳಿಸಿಗಗನದಲಿಕಲ್ಪ । ಪ್ರಳಯಮೇಘದಮಿಂಚುಗಳುಮಂ । ಡಳಿಸಿದವುಶತಕೋಟಿರವಿಶಶಿಕಿರಣದೊಬ್ಬುಳಿಯ ॥ ತಿಳಿಯಲರಿದೋದಿವ್ಯಬೆಳಗಿನ । ಬಳಗವಿಸಟಂಬರಿದುದೆಸೆಗಳು । ಮುಳುಗೆಮೊಳಗಿತುಮೇಲೆಸಪ್ತಾವರಣಗಳವಿಾರಿ ॥ ೫ ॥ ದೇವವಿಶ್ವಾಕೃತಿಯಮಹಿಮೆಯ । ನಾವಬಣ್ಣಿಪೆನಖಿಳಭುವನವ । ದಾವನಂಗೋಪಾಂಗದೊಳಗಡಗಿದುದುತತ್ಕ್ಷಣಕೆ ॥ ಭಾವಿಸುವಡಜರುದ್ರಮುಖ್ಯಸು । ರಾವಳಿಗಳೆಸೆದುದುವಿಕುಂಠವು । ಹಾವಿಭುವಿನವಯವಸುಗಾತ್ರದರೋಮಕೂಪದಲಿ ॥ ಚರಣತಳದಲಿನಿಲೆರಸಾತಳ । ವಿರಲುಧರೆನೆಗಾಲಲಪನೀ । ಧರನಿಕರಜಂಘೆಯಲಿಜಾನುಗಳಲಿಪತತ್ರಿಗಳು ॥ ವರಮರುದ್ಗಣವೂರುಯುಗಳದ । ಲಿರಲುಸಂದೆಗಳೆಸೆಯೆಪೀತಾಂ । ಬರಗಳಲಿಜಘನದಲಿಜಗವೈರಿಗಳುಸಂದಣಿಸೆ ॥ ೭ ॥ ನಿಲೆನಭೋಮಂಡಲವುನಾಭಿಯ।ಲಲಘುಸಪ್ತಸಮುದ್ರಬಸುರೆಗಳು । ಘುಳುಘುಳಿಸೆತಾರೆಗಳುಮುಕ್ತಾಹಾರದಿಂದೆಸೆಯೆ ॥ ಥಳಥಳಿಸಿವಕ್ಷದಲಿಲಕ್ಷ್ಮೀ । ಲಲನೆಭುಜಮಂಡಲದಲಮರಾ । ವಳಿಯಘೋಷನೆವಿಶ್ವರೂಪದಲೆಸೆದನಸುರಾರೀ ॥ ೮ ॥ ದೆಸೆಗಳೆಸೆದವುಕರ್ಣಕುಹರದ । ಲಸುರವೈರಿಯಕಂಗಳಲಿರವಿ । ಶಶಿಗಳಾಸ್ಯದಲಗ್ನಿಶಿಖಿಹೊಗೆಮಸಗಿಧಗಧಗಿಸೆ ॥ ಹಸಿತದಲಿಮಹಿಮೋಕ್ತಿರಂಜಿಸೆ । ಬಿಸಜಭವಶನಲಲಾಟರುದ್ರ । ಪ್ರಸರಕಾಸ್ಯದವೆನಲುಧ್ರುವಮಂಡಲದಲಾಮಕುಟ ॥ ೯ ॥ ಮೂಡಿದವುಮೂಡಣದಿಶಾವರ । ಕೂಡೆಮುಳುಗೆಸಹಸ್ರಭುಜಯುಮ । ನೋಡುಕುಳಿತನವೈದಿತನೆತೆಂಕಲುಸಹಸ್ರಭುಜ ॥ ನೋಡೆನೋಡೆಸಹಸ್ರಭುಜತತಿ । ಜೋಡಿಸಿತುಪ

ಡುವಲುಕುತೀರನ । ನಾಡೊಳಗೆನೀಡಿತುಸಹಸ್ರಭುಜಂಗಳಚ್ಯುತನ ॥ ೧೦ ॥ ಬಾಹುಗಳುನಸುಸೋಂಕಲಂಕಕ । ಓಹರಿ
ಯುಲುಬಗಮುಡಂಬರ । ರೂಹುಗೆಟ್ಟುದುವಿಶ್ವವಿಭುವಿನಗಾತ್ರದೇಳ್ಗೆಯುಲಿ ॥ ಊಹಿಸುವಳಳವಲ್ಲವಿಂತೆಸು । ಸಾಹಸಕೆಸ್ಥಿರಿಸ
ದುವೇಲಿವು । ಹಾಹಿವೋರೆಯುಮುರುಹಿದನುಬಂಣಿಸುವರಳವಡದೆ ॥ ೧೧ ॥ ಪ್ರಳಯಕಾಲಾನಳನಶಿಖಿಗಳ । ಬಳಕೆವೃದುಭ
ವನಿಳೆಯುಪ್ರೋದೊಳ । ಹೊಳವಚಕ್ರಪ್ರೋಹೇಳುಸಂವರ್ತಾಂಬುದಧ್ವನಿಯೆ ॥ ಕೇಳಿಸಿಪ್ರವಪಾಂಚಜನ್ಯದ । ವೊಳಗುಗ
ಳೂವಿಸ್ಮಯುವಿದೇನಿಂ । ದೊಳಗೊಳಗೆಗುಜುಗುಜಿಸುತಿರ್ದುದುಭುವನಸಂದೋಹ ॥ ೧೨ ॥ ಒಂದುಕಡೆಯುಲಿಶಾರ್ಙ್ಗಶರವು ।
ಕ್ರೊಂದುಕಡೆಯುಲಿಖಡುಗಖೇಟಕ । ವೊಂದುಕಡೆಯುಲಿವೆರವಕೌವೋದಕಿಯುಕಾಂತಿಗಳು ॥ ಒಂದುಕಡೆಯುಲಿಸಕಲಲೋಕ
ವ । ದೊಂದುನಿಮುಷಕೆಬಿಗಿವಪಾಶದ । ಗೊಂದಣದವಿಶ್ವಾಕೃತಿಯುಗರುವಾಯಿಗೋಚರಿಸೆ ॥ ೧೩ ॥ ಜಯುವಿಜಯುಕುಮುದಾ
ಕ್ಷಕುಮುದಾ । ಹ್ವಯುಜಯಂತಸುನಂದನಂದ । ಪ್ರಿಯುಬಲಪ್ರಬಲಾಖ್ಯವಿಷ್ವಕ್ಸೇನಪ್ರೊಂದೆಸೆಗೆ ॥ ಆಯುತಗಜಸಾಹಸಿಗಳಹಿ
ವ್ಯ । ರಿಯುಗಭಾವಣೆಯೊಂದೆಶೆಗೆಜಯು । ಜಯುಜಯುಂಬುವುಗಾಫೆಪ್ರೊಂದೆಶೆಗೆಶೆಯೆತಾನೆಸೆದ ॥ ೧೪ ॥ ಬೇರೆಬೇರೆಲ್ಲರುಗ
ದಾಂಬುಜ । ಧಾರಿಗಳುಚಕ್ರಾಸಿಖೇಟಕ । ಧಾರಿಗಳುಘನಶಾರ್ಙ್ಗತೂಣಾನ್ಯೈಕಧಾರಿಗಳು ॥ ಘೋರತರಪಾಶಾಂಕುಶೋಚ್ಚ
ಯು । ಧಾರಿಗಳುಮಣಿಮುಕುಟಭೂಷಣ । ಧಾರಿಗಳುವಿಶ್ವಾತ್ಮಕನಪಾರ್ಶ್ವದಲಿರಂಜಿಸಿತು ॥ ೧೫ ॥ ನೆಗೆದುದುಬ್ರಂಹಾಂಡನಿಕ
ರವು । ನುಗ್ಗಿದುದುಮುಹಿತಳವ್ರತಾನೆರೆ । ತಗ್ಗಿದನುಪಂನಗಶಿರೋಮಣಿಕಮಠನಳವಳಿಯೆ ॥ ಉಗ್ಗಡದಬಹುವಿಧದವಾದ್ಯದ ।
ಲಗ್ಗೆಬಹಿರಾವರಣಗಳಬಲು । ದುರ್ಗವನುವಿಾರಿತುಗಗನದಲಾದಿಪುರುಷಂಗೆ ॥ ೧೬ ॥ (ಶ್ರೀಕೃಷ್ಣಾಯ ಪರಬ್ರಂಹಣೇನಮಃ)
ಆಮುಕುಂದನವಿಶ್ವರೂಪವು । ಹಾವುಹತ್ತುವಕಂಡುಶಿವಶಿವ । ಕಾಮಿತಾರ್ಥದಸಿದ್ಧಿತನಗಿಂದಾದುದೆಂದೆನುತ ॥ ಭೂಮಿಯುಲಿ
ವ್ಯಯಿಕ್ಕಿನಿಗಮ । ಸ್ತೋಮದೂರನನಸುರವಂಶಲ । ಲಾಮನಾಲಿಸಿನೋಡುತಿರ್ದನುಮುಗಿದಕರಗಳಲಿ ॥ ೧೭ ॥ ಕಂಡುವಿ
ಶ್ವಾಕೃತಿಯುಮಹಿಮೆಯು । ಮಂಡೆಯುಲಿಪಿಡಿಲೆರಗಿದಂತೊಳ । ಗೊಂಡದಾನಾನಲನಮಧ್ಯದಬಿದಿರವನದಂತೆ ॥ ಚಂಡಭುಜಮಂ
ಡಲನನೊದರಿಸಿ । ದಂಡಿಮಿಗೆದಾನವರುಕವಿಕವಿ । ಭಂಡನೋಹಾರುವನೊಯುನುಕ್ಕೈದಿದರಡಾಯುಧದಿ ॥ ೧೮ ॥ ಪಟುತನದ
ಜವನಿಕೆಯುಮರೆಯುಲಿ । ನಟಿಸಿವಿಪ್ರಾಕಾರವನುಘನ । ಕುಟಿಲದಲಿನೋಹಿಸಿದಡೆಂತಾವರಿನೆವಿಾಹದನ ॥ ಚಟುಲಮುತ್ತಿಭುವ
ನಾವಳಿಯುತಳ । ಪಟವಮೂಡಿದನೀಗಲಿವನು । ಬ್ಬಟೆಗೆನಾವೌಷಧವಬಲ್ಲೆನೆನುತ್ತಗಜಭಜಿಸೆ ॥ ೧೯ ॥ ಕಡಲಧರಘೋರೆಂದು
ವಡಬನ । ತೊಡಕಿನೊಳುಬಿದ್ದಂಕಶುಕ್ರನ । ನುಡಿಯುಕೇಳದೆವೈರಿಯುಂನರಿದರಿದುನಂವೊಡೆಯು ॥ ಪ್ರೌಢವಿಯುನುಹೋಗಾಡಿತಾ
ನೀ । ಬಡತನವನಳವಡಿಸಿಕೊಂಡನು । ನುಡಿದುಫಲವೇನೆನುತಘರ್ಜಿಸಿತಸುರಸಂದೋಹ ॥ ೨೦ ॥ ಶಂಬರನಬರಹೇಳಯೋ
ಮುಖ । ನೆಂಬವನಕರೆಶಕುನಿತಾನೇ । ನೆಂಬನೋಬೆಸಗೊಳ್ಳುಕೇಳುನಿಶುಂಭಶುಂಭರನು ॥ ಬೆಂಬಳಯುಪಟುಸುಭಟರೊಡೆ
ಯುನ । ಹಂಬಲನುಮರದರೆಮಹಾದೇ । ನೆಂಬಕಳಕಳರಭಸವೆಸದುದುಕೇರಿಕೇರಿಯುಲಿ ॥ ೨೧ ॥ ಪೂತುಹಂಚಿತುಬಲವದಸು
ರ । ವಾತಬಂದುದುನೆರದುದೆಸೆಗಳು । ಧಾತುಗೆಡೆಗಂಭೀರಭೇರಿಯುಭೂರಿರಭಸದಲಿ ॥ ಪ್ರೋತುರೇಕರಿತುರಗಖುರನಿ । ರ್ಧೂತ
ಧೂಳೀಪಟಲಪಟುಪರಿ । ವೀತವಾದುದುಗಗನಮಣಿಮಂಡಲವೃತಮದೊಳಗೆ ॥ ೨೨ ॥ ಗಾಡಿಗಳಧಳ್ಳುರಿಯುಕಂಗಳ । ತ್ರೋ
ಡುಗಳಕೇಸರಿಯುವಡಬನ । ಬೀಡಿನಂದದನಿಂದುಕೆದರಿದತಲೆಯುನವಿರುಗಳ ॥ ನೋಡಲರಿದೆನಲಮರನಿಕರವ । ನೀಡಿರಿವತ್ತೋ
ಳುಗಳನಾಯುಕ । ವಾಡಿಗಳಕೈದುಗಳಹೊಗರಂಬರವನಲ್ಲರಿಯೆ ॥ ೨೩ ॥ ಮುಂಗುಡಿಯುವೋಹರಿಸಿದುದುಮಾ । ತಂಗಘಟೆ
ಶತಕೋಟಿಕೋಟಿತು । ರಂಗತುಂಗರಥಾಫೆಪತ್ತಿಗಳೆಂಟುದಿಕ್ಕಿನಲಿ ॥ ಸಂಗಡಿಸಿಸಮರಾರ್ಥಿಗಳುಚತು । ರಂಗಬಲನೂಕಿತುವಿ
ರೋಷದ । ವಿಂಗಡಲಬಲ್ಲಹನಮುತ್ತಿತುಭುವನಜನಜಡಿಯೆ ॥ ೨೪ ॥ ಬೇಡಬೇಡೆನೆಚೌರಿಯುನುತ್ತೂಗಾಡಿದರುಧೊರೆಧೊರೆಗ
ಳವನಿಯು । ಕೇಡನೇಂಬಂಣಿಪೆನುಕಡಲುಗಳೇಳುಕೆಸರೆನಲು ॥ ಆಡಬಾರದನಂತಪಡೆಗಳ । ನೀಡಿಬಾಯಾರಿದನುಕೂರುವು ।
ನೋಡಿಕುಪಿದುದುಕುವುತಿಚಾತುರ್ಬಲದಪದಹತಿಗೆ ॥ ೨೫ ॥ ಬೈದುಬೆರಸುವತೋರಹತ್ತರ । ಕೈದುಗಳಪೊಳಪೊಳವಧಾ
ರೆಯು । ವೈದಡಿಗೆಮೇರುಪ್ರತಿಮರಹದನುಜಸೈನಿಕದ ॥ ನೈದಕೇಸರಿಹಿಣಿಲುಗಳಬಲ । ವೈದಿತಮಪುಪ್ರಲೋವುತನುಜೆಯು ।
ವೈದುನನಪೌರುಶದಮುಖ್ಯರುಸಂದರಿದಿರಾಗಿ ॥ ೨೬ ॥ ಕರುಳನುಗಿಯೆಯೋಸ್ವಾವಿಾದ್ರೋಹನ । ಶಿರವಹರಿಯೆಸುತ್ತೋಳುಗ
ಳಕ । ತ್ತರಿಸುಸುರಿಯೆಯೋರಕ್ತಸುಧೆಯುನುಕಳಶಗಲ್ಲನನು ॥ ಹೊರಳಕಡಿಕಾಲುಗಳನೆಲಪ್ರೋ । ಶರಧಿನೊರೆಯಾರಿತ್ತುಕಡವಡೆ ।
ಸುರರುಬಹರೇಯುನುತಸುರಿದರುಸರಳಸರಿವಳೆಯು ॥ ೨೭ ॥ ಇಂದುಮೂರಡಿಧರಣಿಯುನುಸಲಿ । ಸೆಂದುಧಾರಾಪೂರ್ವದಲಿಸುನ ।
ಗುಂಡಿದಿರುನಾವೀವೆವಸ್ತ್ರದಧಾರೆಗಳನೆನುತ ॥ ಮಂದಮತಿಕಾಳಗಕೆನೀವ್ಮೈ । ಯಿಂದಳದುಕೋಸೆಮರಭೂಮಿಯು । ನೆಂದು
ಬೊಬ್ಬಿರಿದೆಚ್ಚರಾಮುರಹರನಮೂದಲಿಸಿ ॥ ೨೮ ॥ ಮೇರುಗಿರಿಖದ್ಯೋತಬಲುನೀ । ಹಾರಕವಿದಡೆಬಲ್ಲುದೇಕ್ಕೆ । ಯಾರಬುದ್ಧಿ
ಗೆಡೆಬಗನ್ಪ್ರಜ್ಞೆಮತ್ತೇಭಕುಸುಮದಲಿ ॥ ಸಾರಿಗಳದಾತಾರಬಗವನೆ । ವೈರಿಗಳಶರಹತಿಯುತಶ್ವವಿ । ಚಾರಿಕೈದುವನೆಳಗುತರುಬಿ

ಸುರವರಿಪುಬಲವ ||೨೯|| ಫಡಫಡಿಸಿಪ್ರೋತ್ಕಲಿತನವನಂ | ವೊಡನೆಮೈರೆಯಲುಕಲಿತರೇನಗೆ| ಗೆಡೆಯಮಾಡದಿರಹದುನೋ
ವೆವೆಂದುಕೈಗುಣವ || ತಡವುನಮಾಡದಿರೆನುತಮಿಗೆಹೆ | ಕೊಡೆಮುಳಿದುಬೆರಸಿದರುತಲೆಗಳ | ತೊಡಕಬಿಡಿಸಿದರಮಮದಾನ
ವಲದಗಾತ್ರಗಳ ||೩೦|| ರಣವನಭಿವರ್ಣಿಸುವಡರಿದು | ಬ್ಬಣದಬೈಗುಳಕೇಳಬಂದುದು | ಖಣಿಖಟಿಲಸಬುದಂಗಳಾಲಿಸಬಂದ
ಕ್ಷಣಕೆ|| ಎಣಿಸಲರಿದೆನಲಂಬರದಲೋ | ರಣದತಲೆಗಳುಕಾಣಬಂದುದು | ಕುಣಿದವಟ್ಟೆಗಳಮಮನಿಟ್ಟಿಸಲರಿದುಶತಕೋಟಿ |
ಗಣಿಯರಥಹಾಸಬುದಶರಶರ | ಖಿರಿಖಟಿಲಬಲುಸಬುದಲಗೆಗ | ಳುರುವಣಿಯಬಿರುಸಬುದಸುಭಟದ್ವಿರದರಿಪುಸಬುದಾ || ಸುರ
ನಿಯಜಯನಂದವಚ್ಯುತ | ನುರುತರೋದ್ಧತಸಿನದಶಾಜಿರ್ಗೆ | ತ್ಕರುಷಮೋಕ್ಷಣನಾದವೆಸದುದುಘೋಷವೆನೆಲೋಕ |೩೨|
ತಗದಾನವವೋಹರದಹೇ | ರೊಡಲಗಿರಿಕುಲಕುಹರವನುಬಿಗಿ | ದೊಡದುಹರಿದವುರುಧಿರಮಯತಟನಿಗಳುಮೇದಿನಿಗೆ |
ಪವಿರಾಡಪ್ರಕಾರವೆನೆಹೆ | ಗ್ಗಡಲುಮಸಗಿತುನೋಡಲರಿದೆನ| ಲೊಡನೆಬೆಂಡೆದ್ದವುಗಜಾಶ್ವಂಗಳಕಬಂಧಚಯ || ೩೩ || ಕ
ರಕೈಕಾಲುಗಳಮೀನ್ಗಳ | ಮಡಿದಗಜನಕ್ರಾವಳಿಯಸ್ಥಿ | ಗೆಡದದಾನವತಿಮಿತಿಮಿಂಗಿಲಖಡುಗಜಲಚರದ || ತೊಡಿಗೆಗಳರ
ಶ್ಮಿಚ್ಛಟಯುದಬೆಳು | ಗೊಡೆಯಡಿಂಡೀರದಲಿತಲೆಗಳ | ಗಡಣನೀರ್ವಕ್ಕಿಗಳುಮೊರೆಯಲುರಣದಶರಧಿಯಲಿ || ೩೪ || ರಣಪ್ರೊ
ನವಕುಲವಿಹಿತಮಾ | ರಣವ್ಯೂಹರಿಯೋಮಾರಿಯೆಂಮಂ | ಡಣಿಸಿಕಳುಹಿದಕೃತ್ತಿಯೊಸುರರೆಂಮಲ್ಲಭರು || ಸೆಣಸಿಮದಿ
ರುಶಿವಯನುತಮಣ | ಮಣಿಯಹೊರಳುವದಾನಮಿಯರು | ಬ್ಬಣನೆನಿಪಹಾಹಾರಭಸಮಂಬರವನಲ್ಲರಿಯೆ || ೩೫ || ಗಂಡು
ನಿಜಸೇವೆಯುಳ್ಳವನು | ಕಂಡುಹೋಹೋಸಮರದಲಿಶಮ | ದಂಡಿಗಳೆನೀಮವರುಪುರುಷೋತ್ತಮನಕಿಂಕರರು || ಚಂಡ
ಜಬಲರೆಮರರನುಘೋ | ಳ್ಕಂಡೆಗೊಳ್ಳಿಸಿದಕಥೆಮಿರಲಿಮಂ | ಕೊಂಡುಬರಿದೇಸಾಯದಿರಿಕೈಗಾಯಬೇಕೆಂದ ||೩೬|| ಕೈ
ಗಳನೀವ್ಬಿಡಿಸಿದಾನವ | ರೈದೆತಂನಾಣಿನ್ನುಕಾದಿದ | ರೈದುರಾತ್ಮರುನೀವುಸ್ಸೈವದಕಡೆಕಾಳಗವೆ|| ಕೈದುವನುಬಿಸುಡುವರೆ
ಲೀಗರು | ಸೊಯುದ್ಧಮಾಡುವುದೇನೆನುತಹರಿ | ಯೈದಿಹೊಕ್ಕೊಡೆಸಾಯುದ್ಧಕಳದನುಭಟರಕೈದುಗಳ || ೩೭ || ಎಲೆಲೆಶಂಬರ
ನಿಗಳುಭುಜ | ಬಲಸಮರ್ಥನಿವಾತಕವಚಾ | ದ್ಯಲಘುಸಾಹಸಿಗಳುಪುಲೋಮಪ್ರಭೃತಿಗಳುನೀವು || ತಿಳಿಯಿರೈಹಾಹೆಗಳು
ತ್ರದ | ಬಳಿಯತೊಲವಂತೊಲವನೊಲ್ಲದೆ | ಮುಳುಗಿಕೊಳಲಾದೆವೆವಿಚಾರಿಸೆಸೂತ್ರಧಾರಕನ || ೩೮ || ಅವನಿಚ್ಛಾಧೀನ
ಭವ | ನಾಪಳಿಯಸುಖದುಃಖಜಯತನ | ಭಾವಜನ್ಮಸ್ಥಿತಿಲಯಂಗಳುಹಾನಿವೃದ್ಧಿಗಳು || ಭಾವಿಸಲುಕಾಲಾತ್ಮಕನುತಾ|
ವನಾತನಗೆಲುವಡೆಚರು | ದ್ರಾವಳಿಗಳಳನಲ್ಲಕಾಳಗವೇಕೆನಿಮಗೆಂದ || ೩೯ || ಬೈಯಬಹುದೇದೈವವನುಜಯ | ವೀಯ
ರ್ಪದೆನಮಗಿನಿತುದಿನ | ಸುಯ್ಯರೇಸುರರೆಡವಿಯೊಳಗೊಳಗಾಗಿಜನವರಿಯೆ || ವ್ಯೆಯುಮರೆಪಿದಡವರಹೊಡಿರೆ | ನೊಯ್ಯೆ
ವಿಪರೀತವಿದೆಲಾ | ಕೈಯೊಡನೆಜಯವಿಲ್ಲಪರಿಕಿಸೆನೀತಿಮಾರ್ಗದಲಿ || ೪೦ || ಕಾಲಗತಿಯಲಿಸ್ವೈಮಮತವನು | ಕೋಲಮಹು
ತಾದಡಿಂದಿನ| ಸೋಲವನುಪಲ್ಲಟಿಸಿಕೊಳಬಹುದಮರರವಿಜಯವ || ಆಲಯವಸುತಳದಲಿಮಾಡುವ | ವೇಳಿನೀಮೆಂದೆನುತ
ನಾ| ಜಾಲವನುಕಳುಹಿದನುಬಲಿಸಂತೈಸಿಬಲಯುತರ || ೪೧ || ಓಡಿದರುದಾನವರುಹರುಷವ | ಮಾಡಿದರುನಿರ್ವಾಣಪಂಬ
| ಮೂಡಿಮುಳುಗಾಡಿತ್ತುಕುಸುಮಮಾಕರೆದಲೀಜಯುವ || ಜೋಡಿಸಿದರಚ್ಯುತನಕಿಂಕರ | ರಾಡಿದರುದೇವಿಯರುನಭದಲಿ|
ಕೇಡುತಿರ್ಪದುನಿಖಿಳಜನನಿತ್ಯಾತ್ಮಮೂರುತಿಯ || ೪೨ || ಹಿಂಗಿದವುಸದಬಂಧವಿಲ್ಲಿಗೆ | ಸಂಗಡಿಸಿನಾಲ್ವತ್ತುಮೂರೆನ| ಲಿಂ
ಕಲನಾಳ್ದನಮಹಾವಿಶ್ವಾತ್ಮನಾಕೃತಿಯ || ಕಂಗಳಗೆಗೋಚರಿಸಿದಾನವ | ರಿಂಗೆಕೇಡಾಯ್ತೆಂಬೆಡೆಗೆಕಲಿ | ಪುಂಗವರುತಲೆ
ಯಗುತಿರದ್ಯೆದನೆಯಸಂಧಿಯಲಿ || ... ... || ೪೩ ||

ಅಂತು ಸಂಧಿ ೧೭ಕ್ಕಂ ಪದನು ೬೯೨ಕ್ಕಂ ಮಂಗಳಮಸ್ತು

ಹದಿನೆಂಟನೆಯ ಸಂಧಿ.

ಸೂಚನೆ || ಕಮಲಜನುಸಂಭಾವಿಸಿದಪದ | ಕಮಲವಖಿಳವಿಶಾಂತರಾಳ | ಪ್ರಮದವಿನಯೋದಧಿಯ
ಭಜಿಸಿದನಗಿಶಿದನುಧರೆಯ || ... ...

ಪದನು || ಅರಸಚಿತ್ತೈಸಮರರಿಪುನೋ | ಹರಮುರಿದುದೊಡೆಯನವಚೋವಿ | ಸ್ತರವನಾಲಿಸಿಸಮರಜಯವಿದು
ಧ್ಯವಲ್ಲೆನುತ || ಧರೆಬಿರಿಯೆಮೊಳಗಿದವುಸುಕಳದ | ಸುರರೆಮಾರಿದರೆತ್ತಲಿತ್ತಲು | ತಿರುಗಿತಮರಾನೀಕಜಯಸಿರಿಸೇಸೆಯ
ಸುರಿಯೆ ||೧|| ಮರಳಿಮಂಗಳಮಾಯ್ತುಸಚರಾ | ಚರವುಸಂತೈಸಿತ್ತುಹರುಷದ | ಹರಹಿನಲಿಹೊರೆಯೇರಿಕುಣಿದುದುದೇ
ವಿಕುರುಂಬ || ಮೊರದವಂಬರದೊಳಗೆಭೇರಿಗ | ಳರಳಮಳೆಗಳುನಭವನಂಗೀ | ಕರಿಸಿದುದುಜಯಯೆನುತಲಿರ್ಪದುದೇವ
ಕುರುಂಬ ||೨|| ಲೋಕಮೂರುತ್ಪಲ್ಲವಿಸಿದುದು | ನಾಕನಿಳೆಯರಸುಕೃತಫಲನರಿ | ಪಾಕನದದುದುತ್ತೊಳದುದಸುರರ

ಭಾಗ್ಯತರಲಿಪಿಯು ॥ ಶೋಕಜಲನಿಧಿಬರತುದಮರೆ । ಶ್ರೀಕಡಂಬದಬಂಧನೋಕ್ಷೆ । ವ್ಯಾಕರಣನಿರ್ಣಯವನೆಡದುದುದನು
ನೀತಿಯಲಿ ॥ ೩ ॥ ಆರತಿಗಳೊಪ್ಪಿದವುಗಗನದ । ಲೋರಣದಸುರಗಣಿಕೆಯರಕೈ । ವಾರವೆಸೆದುದುಸೂತಮಾಗಧವಂದಿವೃಂ
ದಲಿ ॥ ಧಾರುಣೀಪತಿಕೇಳುವಾನವ । ವೈರಿಪರಿಜನನಿವಹಕಭಯಕ । ರಾರವಿಂದವನೆಗಹಿಧರಣಿಯುನಳೆಯಲನುವಾದ ॥ ೪ ॥
ಅರಸಕೇಳವನಿಯಲಿದಪ್ಪಿಣ । ಚರಣಕಮಲವನೀಡಿದಡೆಪು । ಷ್ಕರದೊಳಗೆಮೂಡಿತ್ತು ಮಹಿಮಾನಿಧಿಯನಖಬಿಂಬಾ ॥ ಅರ
ಲೋಕಾಲೋಕಗಿರಿವರ । ಜರಿಯಲುಗ್ರಾಂಗುಲಿಯಸೊಂಕಿನ । ಉರುವಣಿಸಿವಿಹಾರಿತ್ತು ಹೊರಗಣಹೇಮಭೂಮಿಯಲಿ ॥೫॥
ಆಪರಮಪೂರುಷನವಿಮಲ । ಶ್ರೀಪದಾಬ್ಜವಕಂಡುಸಕಲ । ದ್ವೀಪಜನಗಳುಶಿವಶಿವೆಂದುಕೃತಾರ್ಥರಾವೆನುತ ॥ ಧೂಪದೀಪಸ
ಗಂಧಪುಷ್ಪಫ । ಲೋಪಹೃತಿಗಳನಿತ್ತು ಚಿತ್ತದ । ತಾಪನೆಡೆಹೊರಳ್ದರುಹರಿಚರಣಾರವಿಂದದಲಿ ॥ ೬ ॥ ಮೊದಲಕಂಡವರಿಲ್ಲಚ
ಣದ । ತುದಿಯಕಂಡವರಿಲ್ಲಜಗಗಳ । ಗೊಡವಿದನಿತನುಕಂಡುದಲ್ಲದೆಹಿಂದುಮುಂದಿಲ್ಲ ॥ ಮುದದಹರಹಿನಲಖಿಳಜನಪದ । ಪ
ರಚಿತಪೂವಲಿಯಭೇರಿಯ । ವಿದಿತವಾದ್ಯದಸಂಭ್ರಮದಲೋಲೈಸಿದರುಪದವ ॥ ೭ ॥ ಸೇತುವೋಭವಜಲಧಿಪತಿತರ । ನಾತ
ಯನೈದಿಸಲುಬಿಗಿದವು । ಹೀತಳಾಯತಮಾನದಂಡವೊಪುಂಡರೀಕಭವ ॥ ಭೂತಸೃಷ್ಟಿಯನಳದಹಿಂದಣ । ಕೌತುಕವನೇನೆ
ಳ್ವೆನುಪಮಾ । ತೀತನಂಘ್ರಿಸರೋಜವೆಸೆದುದುಧರೆಗೆಪೊಸತೆನಿಸಿ ॥ ೮ ॥ ವಾಮಚರಣವನೆತ್ತಿದಡೆಸು । ತ್ರಾಮಲೋಕವವಿ
ರಿಭುವನ । ಸ್ತೋಮವನುಕಳದತ್ತಲೆಸದುದುಧ್ರುವನಮಂಡಲವ ॥ ಶೀಮೆಗಳನುತ್ತರಿಸಿಪುತ್ರ । ಪ್ರೇಮವಿಗಲ್ಪೈದಿತ್ತು ಶಿವಶಿವ
ತಾಮರಸಸಂಭವನಭವನದಲರುಣನಖಬಿಂದು ॥ ೯ ॥ ಕಡುಗಿನೀಡಿದಡನುಪಮನವೆ । ಲ್ಲಡಿಯಮೃದುಳನಖಾಗ್ರದುರುವ
ಣಿ । ಗೊಡೆದುದಂಡಕಟಾಹವೇನೆಂಬೆನುಮಹಾದ್ಭುತವ ॥ ಕಡುಗಿದವುಭುವನಾವಳಿಗಳೊಡ । ನೊಡನೆತೊನೆದವುಕೋರ
ರಿಗಳು । ಕಡಲುಕದವಿತ್ತಂಘ್ರಿರಭಸಕ್ಕಖಿಳಜಗಬೆದರೆ ॥ ೧೦ ॥ ಬಿರಿಯಲಂಡಕಟಾಹಬಹಿರಾ । ವರಣಜಲಘುಳುಘುಳಿಸಿನಿ
ಮಂ । ದಿರದಲೆರಗುತ್ತಿರಲುಕಂಡುಸರೋಜಸಂಭವನು ॥ ಕರಗಿಹೋಹುದುಭುವನವೆನುತು।ದ್ಧುರವಣಿಪಜಲಧಾರೆಗೊಟ್ಟ
ನುರುಕಮಂಡಲವಮುಮದಾಹಸ್ತಂಭವಿಸ್ತರಿಸೆ ॥ ೧೧ ॥ ಹೊಳಹೊಳವತನುಕಾಂತಿಯಲಿನಿಜ । ವಿಳೆಯಮುಳುಗಿರೆಕಂಡುಅ
ನಂ । ಜಲಿಪ್ರುಟದಭಯಭಕ್ತಿಯುಕ್ತನುಸಕಲಜನಸಹಿತ॥ನಳಿನಸಂಭವನೆಂಬಪೆಸರನು। ಸಲಿಸಿಕೊಂಬೆನೆನುತ್ತನಿಗಮಾ।ವಳಿವಿದ
ರನಚರಣಕಮಲವಸಲುಗೆಗೈತಂದ ॥ ೧೨ ॥ ಸನಕನಾರದಭೃಗುಸನಂದನ । ಮುನಿಕುಮಾರಸನತ್ಸುಜಾತಾ । ದ್ಯನಘಮುನಿ
ಕುಲಮುಳುಗಿಹರುಷೋದ್ರೇಕಜಲಧಿಯಲಿ ॥ ನೆನೆಹುನಿಲುಕದವಸ್ತುಗೋಚರ । ವೆನಿಸಿತಿದಲೆಕೃತಾರ್ಥರಾವೆಂ । ದೆನುತನಡೆತ
ದುದುಮುಕುಂದನಚರಣದರುಶನಕೆ ॥ ೧೩ ॥ ವೇದವೇದಾಂಗಂಗಳುಪನಿಷ । ದಾದಿಮಂತ್ರಪುರಾಣಸಂಹಿತೆ । ಯಾದಿಯಾದಸಮ
ಸ್ತಶಾಸ್ತ್ರವಿತರ್ಕನೀತಿಗಳು ॥ ಕಾದಲೇಕೋನಂಮೊಳಗೆಕಮ। ಲೋದರನಪದಕಮಲವಿದಲೇ । ವಾದವಿಂನೇಕೆನುತಬಂದುದ
ಹರಿಪದಸ್ತುತಿಗೆ ॥ ೧೪ ॥ ತಂದೆತನವ್ವನುತ್ತರಿದನುತನ । ಗಿಂದುತಾನುಕೃತಾರ್ಥನೆನಿಸಿದೆ । ನೆಂದುಹೋಕ್ಕುಳಹೂವಿನಲಿಜ
ನಿಸಿದೆನೆಫಲವೇನು ॥ ದಂಡುಗದಬಹುಸೃಷ್ಟಿಕರ್ಮದ । ಬಂದಿಯಲಿಸಿಲುಕಿದನಮನೆಗೈ । ತಂದುದೇಶಿವಯೆನುತಪದಕೆರಗಿದನುಪ
ಮೇಷ್ಟಿ ॥ ೧೫ ॥ ನಲವುವಿಗೆನಿಜಜನಕನಂಘ್ರಿಯು । ತೊಳೆದನಂಬುಜಭವಕಮಂಡುಲ । ಜಲದಲಗಣಿತವಾದ್ಯರವವಳ್ಳರಿಯ
ದಿಗುತಟವ ॥ ಪುಳಕಜಲದಲಿಮುಳುಗಿಹರುಷಾ।ಕುಳಿತಲೋಚನನರುಣನಖಮಂ।ಡಲವನಾರಾಧಿಸಿದನೀರೆಂಟುಪಚಾರದಲಿ
ಚಂದನವತಿರುಗಿದನುಚರಣದ । ಖೆಂದುಬಿಂಬಂಗಳಲಿಕುಸುಮದ। ವೃಂದದಲಿನುಸುಕಿದನುಸುಮನೋವೃಂದನಲಿದಾಡೆ॥ ಸಂ
ಣಿಸಿಕೃತಿನಾರಿಯರುರಾಮದ । ದಿಂದಮಹಿಮೆಯಪೊಗಳುತಿರಲರ। ವಿಂದಭವನೋಲಗಿಸುತಿರ್ದನುಶ್ರೀಪದಾಂಬುಜವ ॥ ೧೭
ಸಿಂಧುಶಯನನಚರಣವನುಸಾ । ಗಂಧಿಕದಲರ್ಚಿಸಿದನವನತ । ಕಂದರನುಹರುಷದಲಿಧೂಪಾರತಿಯವಿರಚಿಸುತ ॥ ಬಂಧುನಿ
ನೆನಗತ್ರಾಳಕರುಣಾ । ಸಿಂಧುಸಲಹೆನುತಾಹಿತಾಂಜಲಿ । ಬಂದನನುಬಲವಂದುನಮಿಸಿದನಖಿಳಜನಸಹಿತ ॥ ೧೮ ॥ ಆಸಕಲನ
ನಿನಿವಹವಾಯೋ । ಗೀಶನಿಕರಸ್ತವಿತವಿಬುಧನಿ । ಳಾಪಿನೀನಿಕುರಂಬವೇದಪುರಾಣಮೂರ್ತಿಗಳು ॥ ಸೂಸಿದರುಕುಸುಮಾ
ಜಲಿಯನಿತಿ । ಹಾಸತಂತ್ರಪ್ರಭೃತಿಕಲ್ಪನಿ । ವಾಸಿಗಳುತನತನಗೆಒಡಲನೀಡಾಡಿದರುಪದಕೆ ॥ ೧೯ ॥ ಶಿವಶಿವೆಂಬರವೈದೆಭ
ರೀ । ರವಜಯಧ್ವನಿಮಜುಮೆನಲುಜಾಂ । ಬವನುಮಂಗಳವಾದ್ಯರವವಳ್ಳರಿಯೆದಿಗುತಟವ ॥ ವಿವರವನುತುಂಬಿದನುನಯ
ನೋ । ತ್ಸವದಲುಬ್ಬಿದನೆಂನಕಲದೈ । ವರನುಕಂಡೆನುಧನ್ಯನಾನೆಂದೆನುತಸೇವಿಸಿದ ॥ ೨೦ ॥ ಕಮಲಭವನಂದೊಲಿದುತಂ
ದ । ವಿಮಲಪಾದನಖಾಗ್ರವನುತೊಳ । ದಮಲಜಲವದುಗಂಗೆಯೆನಿಸಿದುದಖಿಳಜನಹೊಗಳೆ॥ ಸುಮತಿಸಾವಿರವರುಷಕೇಳ್ತ
ದಮಳಗಿರಿಮಸ್ತಕಕೆಹಾಯ್ದಳು । ಮಮತೆವಿಗೆನಾಲ್ಕೆನಿಸಿಧರೆಗೈತಂದಳಘಹಾರಿ ॥ ೨೧ ॥ ತ್ರಿಜಗದಧಿಪತಿಯಮಳಕೀರ್ತಿ
ಪ್ರಜವುಮೇಣದುವಿಮಳಧರ್ಮ । ಧ್ವಜಪತಾಕಾಪಟಕೆಯೋಪರಿಭಾವಿಸುವಡರಿದು ॥ ಸುಜನನುತನನುಪಮಪದಾಂಬುಜ
ಘಾಜಗಪತಿನಿರ್ಮೋಕಪ್ರೋಯನೆ । ಲಜಲತಟನೀಪೂರವೆನಲೆಸೆದುದುಜಗಂಗಳಿಗೆ ॥ ೨೨ ॥ ಕೃತಕಮಲ್ಲಿಸುನಂಮಕುಲದೇ ।

ಕೆಯುವಿನೊಲಕ್ಷ್ಮೀಪದಾಂಬುಜ । ವಿತತಜಲವೆನುತಲ್ಲಿಗಲ್ಲಿಗೆಸಕಲಭುವನಜನ ॥ ಕೃತಿಗಳಹೆವೆನುತೆದ್ದು ಕೈತ್ರ್ಯೋ । ಚಿತವನೆಲ್ಲವ
ವಹಾವಿಗಂಧಾ । ಕ್ಷತೆಗಳಿಂದರ್ಚಿಸಿದರಚ್ಯುತಪದಕಮಲಜಲವ ॥೨೩॥ ಹಿಂದೆನಾಲ್ಕವತಾರದಲಿಭವ । ಬಂದವನುತಾನರಿಯೆನಿಂ
ತಡ । ರಂಜನನುಕಂಡಿಂಚರಾಚರಜೀವರಾಶಿಗಳ ॥ ದಂಡುಗವವರ್ಣಿಸಲುನಿಗೆಕೃಪೆ । ಯಿಂದಕರುಣಾಸಿಂಧುಚರಣ । ದ್ವಂ
ದ್ವವನುನಿಂಜಿದನೆನೆನೋಡಿತೆರಳಿಸಿದುದಮಲಪದ ॥ ೨೪ ॥ ಬೀಳಲೋಬ್ರಹ್ಮಾಂಡತರುವಿನ । ನಾಳದಂಡಪ್ರೊನಾಳನಳಿನದ ।
ಕೀಳಕೆಯಲಿಂನೊಂವೈರಾಜನೆಕಳ್ಳೇವರೆವ ॥ ಮಾಲಿಗೆಗೊದಗಿದಮಧ್ಯನಾಡಿಯೊ । ಬಾಲವನುಧರೆಗೂರಿನಿಂದಳ । ರಾಳವಂಚ
ಕಣಾಹಿಯೊಯೆನಲೆಸೆದುದಮಲಪದ । ೨೫ ॥ ಆದಿಯಲಿಭೂತಂಗಳೊಂದೇ । ಪಾದವೆಂಬಾಶ್ರುತಿವಚನಹುಸಿ । ಯಾದುದೇಹದಿ
ನಾಲ್ಕುಲೋಕಂಗಳುವಿಚಾರಿಸಲು ॥ ಪಾದಮಾತ್ರದಲಡಗುತಿದಲೇ । ವಾದವಿಂನೇಕೆನಲುವಿಶ್ವವಿ । ನೋದಿಯಂಘ್ರಿಸರೋಜ
ವೆಸದುದುಜಗವನತಿಕರಿಸಿ ॥೨೬॥ ಆದುದೊಂದಡಿಗವನಿತಳಸರಿ । ಯಾದುದೊಂಭುವಭೂರ್ಭುವಸ್ವಸು । ರಾದಿಭುವನಸ್ತೋ
ಮಮತ್ತೊಂದಡಿಗೆಮತ್ತೊಂದು ॥ ಪಾದಗತಿಗಿಂನಾವುದೋಕವಮ । ಲೋದರನತೋಳುಗಳೊಲಾಶಾ । ಭೇದಭೇದವನುಳಿಯ
ಲಂಬರನಾಭಿಯೊಳಗಡಗೆ ॥ ೨೭ ॥ ಕೊಡುವೆನೆಂದೆಲವೆಲವೊಮೂರಡಿ । ಪೊಡವಿಯನುಮತ್ತೀಗಮಾನವ । ಹಿಡಿದಡಹುದೇಸೆ
ಲಿಸುಸಲಿಸೆಂದಹಿಕುಲಾಂತಕನು ॥ ಒಡೆಯನಭಿಮತವರಿದುದೈತ್ಯನ । ಜಡಿದುವಾರುಣಪಾಶದಲಿಹೆಡ । ಗುಡಿಯಬಿಗಿದನುಶಿವಶಿ
ವಾಜನಮರುಗೆದಾನವನ ॥ ೨೮ ॥ ಅವನಿಪತಿಕೇಳಖಿಳಜಗಜನ । ಶಿವಶಿವೆಂದುದುಮತ್ತೆದಾನವ । ಯುವತಿಯರುಹೊರಹೊ
ರಳಬಾಯರೆಳ್ದರುಬಸವಳಿದು ॥ ಜವವಳಿದುದಸುರಾಘಹಾಹಾ । ರವವಿಡಿದುದಂಬರವನುಸುಖಾ । ನರ್ವದಲೋಲಾಡಿತ್ತುಭು
ವನಾವಳಿಗಳಾಕ್ಷಣಕೆ ॥೨೯॥ ಶುಕ್ರವಚನವದೇನುಶಿವಶಿವ । ಚಕ್ರವಹುದೇಭೂಸುರಾನ್ವಯ । ಚಕ್ರವರ್ತಿಯಲಾಮಹಾದೇ
ವೆನುತಜನಹೊಗಳೆ ॥ ಶಕ್ರವೈರಿಯನೋಡಿನುಡಿಯುಲು । ವಕ್ರವಿಸಿದನುಅಪ್ರಮೇಯತ್ರಿ । ವಿಕ್ರಮನುನಿಜಭಕ್ತನಂತಃಸಾರ
ಕೃಜನಂತೆ ॥ ೩೦ ॥ ತ್ರಿದಶರಿಪುಕೇಳೆಮಗೆನೀನಾ । ಡಿದುದಸಲಿಸುವ್ರದಕಟದಾಕ್ಷಿಂ । ಣ್ಯದಲಿತಾನೋರಡಿಯನೀರಡಿಮಾಡಿದೆನು
ಜಗವ ॥ ವಿದಿತವಹುದೇನೋಡುಹುಸಿಹೊ । ದ್ದದಡೆಮತ್ತೊಂದಡಿಗೆಕಲ್ಪಿಸು । ವುದುಧರಿತ್ರಿಯನೆಮಗೆಬೇಗದಲೆಂದನಸುರಾ
ರಿ ॥ ೩೧ ॥ ಎನಿತನೀರವಿರಶ್ಮಿಬೆಳಗುವು । ದನಿತಲೇನಿನಗುಳ್ಳರಾಜ್ಯದ । ಘನತೆಯಿದರೊಳಗಿಟ್ಟಸಾಸವೆಸೂಸಲಿಂಬಿಲ್ಲ ॥ ತನಗೆ
ನೀನೀವ್ರೋರಥಿಯಮೇ । ದಿನಿಯನೀವುದುಬೇಗಲೆಂಮನು । ಕನಲಿಸವಿರವರಿವರಪರಿಯಲ್ಲೆಂದನಸುರಾರಿ ॥ ೩೨ ॥ ಕೊಂಡೆ
ತಲ್ಲಬೆಮಾಣನವನಿಯ । ಕಂಡುಬೇರೆಣಿಸದಿರುಸತ್ಯವ । ಗಂಡುಗೆಡಿಸಿದೆಯಾದಡೆಮಗೇನನೃತಪರನಾಗಿ ॥ ದಿಂಡುಗೆಡೆನರಕದ
ಲಿತಪ್ಪಲ । ವ್ರಾಜಡಲ್ಲದೆಹೋಗದೆನುತು । ದ್ದಂಡಮತಿಯನುನೋಡಿನುಡಿದನುದಾನವಧ್ವಂಸಿ ॥ ೩೩ ॥ ದಿಟ್ಟನೋದಾನವಕು
ಲದಜಗ । ಜಟ್ಟಿಯೋಕೇಳೆಲೆಧರಾಧಿಪ । ಪಟ್ಟಬಂಧನಪಾಶಬಂಧನವೆರಡುಸರಿಯಾಯ್ತು ॥ ಇಟ್ಟಣಿಸಿದರೆದನುಜವೈರಿಘ । ರ
ಟ್ಟನುಕುತಿಯುಸಾರೆಸುಕುತಿಯ । ತೊಟ್ಟಕವಚವತಾಗಿಮುರಿಯಲುನುಡಿದನಸುರೇಂದ್ರ ॥ ೩೪ ॥ ಜೀಯನಿಂಮಡಿಗಳಗೆತಾನ
ನ್ಯಾಯಪರನೆನಿಸಿಬೆನಿತಪ್ಪೇ । ನೀಯ್ಯನೇನಾನಿತ್ತೆನೆನಗುಳ್ಳನಿತುಮೇದಿನಿಯ ॥ ನೋಯಲಾಗದುನುಡಿಗೆಸತ್ಯ್ಯೋ । ಪಾಯನ
ನುತಾನರಿಯೆನಿದುಭವ । ದೀಯ್ಯಚರಣವನೆಂನಶಿರದಲಿಯಿತರನೇನೆಂದ ॥ ೩೫ ॥ ಉಗ್ರಯಾತನೆಗಳಿಗೆಮೋಣಾಸೆ । ಮಗ್ರರಾ
ಜ್ಯಭ್ರಂಶಕೆಬೆವಿಬು । ಧಾಗ್ರಣಿಯೆಕೇಳಂಜುವವನಾನಲ್ಲಬಂಧನದ ॥ ನಿಗ್ರಹಕೆಮನಗುಂದೆನಾಪ । ದ್ವಿಗ್ರಹಕೆಮನಬೀಳನಸು
ಖೋ । ದಗ್ರಕಂಜೆನುಸಾಧುವಾದವಕೇಳ್ವನಲ್ಲೆಂದ ॥ ೩೬ ॥ ಅಕ್ಷರಾತ್ಮಕನೀನುತನಗೆಪ । ರೋಕ್ಷಗುರುನಿಜಜನನಿವಹಡು
ವ । ಶಿಕ್ಷೆನೀಮಾಡುವುದುದಂಡವಿದಲ್ಲಭಾವಿಸಲು ॥ ರಕ್ಷಕನುನೀನಸುರರಿಗೆನ್ನೈ । ಪಕ್ಷಭಾವವನಟ್ಟಿವಿಬುಧರ । ಪಕ್ಷಪಾತ
ವಮಾಡಿದೆನಮಗಹಿತವಲ್ಲೆಂದ ॥ ೩೭ ॥ ಮದದಬಲುಮಬ್ಬಿನಲಿಕಂಗಳು । ಮುದುಗಿತನಿದಿರೆಂಬುದನುಕಾ । ಣದೆವೃಥಾಕ
ಳವಳಿಸಿತಮದಲಿನಿಜವಿವೇಕವನು ॥ ಹೆದಸಿತಲೆಕೆಳಗಾಗಿಭವಕೂ । ಪದಲಿಬೀಳುವತಂನನೀನು । ದ್ಧರಿಸಿದೆಯಲೇಕರುಣಾದ
ಲಿಪರಸ್ವಾಮಿನೀನೆಂದ ॥ ೩೮ ॥ ಘೋರತಪದಲಿಬಂದುವರುಷಾ । ಧಾರೆಯಲಿಸಲೆನನದಾತತ್ವವಿ । ಚಾರದಲಿಬೇಸತ್ತುಹಡೆ
ಯದಾಲೋಕನಮುಕುತಿಯನು ॥ ವೈರದಲಿನಿಂಮಡಿಯವಿಮಲಪ । ದಾರವಿಂದವನೆನನೆನದುಕಂ । ಸಾರಶರಧಿಯನುತ್ತರಿಪೆನಾನ
ಪ್ರಯಾಸದಲಿ । ೩೯ ॥ ನೊಸಲಲಡರಿದಕಿರುಬೆವರಕೆಂ । ಪೆಸೆವಕಂಗಳಮುರಿದಹುಬ್ಬಿನ । ವಿಸುಪಕುಂಡಲನೀಲಕುಂಚಿತ
ವಿಮಳಕುಂತಳದ ॥ ಎಸೆವನಿಂನಾಸನವನೋಡುತ್ತಸುರರ್ಮ್ಮಿದೆಸುದರ್ಶನಾಸ್ತ್ರ । ಪ್ರಸರಧಾರಿತರಾಗಿಧುರದಲಿನಿಂನನ್ನೈದಿದರು ॥
ಸುರುಚತುರ್ವಿಧಶೀನೆಯಿಲ್ಲದೆ । ನಿರುತನಿಜಸುತಶಿಷ್ಯನಲ್ಲದೆ । ಧರೆಯಲಾನಂಗಾನಶುದದೇಶಿಸುವನೇಮೇಣು । ಹರಿದನುಪದೇಶಿಸು
ವನಲ್ಲದೆ । ಖರಿಸುವನೆವೈವವದುಶಿಷ್ಯರ । ಪೆರೆಗೆಭಲರೇಭಾಪುರೇಕರುಣಿಗಳುಸುರರೆಂದ ॥ ೧೪ ॥ ಹಗೆಸುರರುತನನೆಂಬವರ
ತಾ । ಲಗೆಯುಕೊಯಿಸುವೆನಕಟಹಿತಕಾ । ರಿಗಳುಘೋರತಪೋವ್ರತಾನುಷ್ಠಾನಪಲವರಲೀ ॥ ನಿಗಮದೂರನನೊಲಿಸಿಕನ್ನಯ ।

ದ್ರುಗುಯುಗಳಗೋಚರಕೆಬರಿಸಿದ | ಅಗುಣವಿದರಾರೆನ್ನ ಪೊಲುಸಮಾರಾತುಧರೆಗೆಂದ ॥ ೪೨ ॥ ಈವನೇನನುಸುರರಿಗಾನ್ಯ|ಹ್ಯಾಪಹನನಾಕಾಂಕ್ಷಿನೆನ್ನಯ | ಜೀವನವ್ರುಧರೆಸಹಿತಸಂದುದುನಿಂಮಡಿಯುಪದಕೆ ॥ ತಾವೆತಮ್ಮಗುಣಂಗಳಲಿಸಂ | ಭಾವನೆಯಸ್ಮೈದುವ್ರದುವಮಾಡುವ್ರು | ದಾಪ್ರುದುಂಟಪಕ್ಷವನುತಾನುಪಕಾರನಿಷ್ಕೃತಿಗೆ ॥ ೪೩ ॥ ಚಿತ್ತವಿಸುಪ್ರಹಲ್ಲಾದನ್ಯೆಯನು | ಹೊತ್ತವನಲೇಹಸುಳೆತನದಲಿ|ತತ್ತಿರಗದೇವನನುಭಜಿಸುತ್ತಿರಲುಭಕ್ತಿಯಲಿ ॥ ಹೆತ್ತವರುಶಿಶುವಿಂಗೆಬಹುವಿಧ| ವ್ಯತ್ಯಯವನುನಿರ್ವಿಸಲುಕಡುಕೃಪೆ | ವೆತ್ತುಸಲಹಿದಸಾಧುಜನಸಂಸಾರಿನೀನೆಂದ ॥ ೪೪ ॥ ಕಂಭದಲಿಕಳೆವಡದುದಶದಿ|ಕ್ಕುಂಭಿಗಳುಘೀಳಿಡಲುಘನಸಂ|ರಂಭದಲಿವಿಕಟಾಸ್ಯರೌದ್ರನ್ರುಸಿಂಹರೂಪದಲಿ ॥ ಸಂಭವಿಸಿನಖದಿಂದಲೊಗೆದುದ| ರಂಭಕನನಿಜಭೃತ್ಯಜೀವ | ಸ್ತಂಭವನುಮಾಡಿದುದಕೇಳ್ಪದುಬಲ್ಲೆನಾನೆಂದ ॥ ೪೫ ॥ ಆಮಹಾತ್ಮನವಂಶದಲಿನಿ| ಸ್ಸೀಮತಾನುಭವಿಸಿಬಹುವಿಧ|ಕಾಮುಕಾಮುಕನಾಗಿಕೆಡುತಿರೆಕಂಡುಕೃಪೆಯಿಂದ ॥ ಶ್ರೀಮನೋರಮಭಕ್ತಜನಸು| ಪ್ರೇಮದಲಿತನಗೊಲಿದೆಗುರುನಿ | ಸ್ಸೀಮನೀನೆಂದೆನುತನಿತ್ಯಾತುಮಾಗೆಪ್ರೊಢವಂಟ ॥ ೪೬ ॥ ಸಂಧಿಯಾರೆನಲಿದರೊಳಗೆಪದ | ಬಂಡನಾಲ್ವತ್ತೇಳುಸಲುವ| ಸುಂಧರೆಯನಳದನುಮಹಾವಿಶ್ವಾತ್ಮನಾಕೃತಿಯ ॥ ಸಿಂಧುಶಯನನಪದನಖದಿಸುರ | ಸಿಂಧುಜನಿಸಲುಸುರವಿರೋಧಿಗೆ | ಬಂಧನವ್ರುನಾಗಾರಿಯಿಂದಾದುದುಕಥಾಶ್ರವಣ ॥

ಅಂತು ಸಂಧಿ ೧೮ಕ್ಕಂ ಪದನು ೭೪೦ಕ್ಕೆ ಮಂಗಳಮಸ್ತು

ಹತ್ತೊಂಭತ್ತನೆಯ ಸಂಧಿ.

ಸೂಚನೆ.॥ ನಾಮಧಾರಕಕರಖಿಳಯೋಗ | ಕ್ಷೇಮವಾಹಕತನವಮೆರೆದುದ | ಯಾಮಹೋದಧಿಧರಿಸಿದ
ನುಬಲಿಪುರದಬಾಗಿಲನವ ॥ ... ...

ಪದನು | ವಿಮಲಮತಿಚಿಕಿತ್ಸುಸುದನುಜೋ | ತ್ತಮನಧೈರ್ಯದನಿಲವನಮರೋ | ತ್ತಮರೊಳಗೆತಾಕಾಣೆನುಳ್ಳದಪರಿವನಹೋಲುವರ ॥ ಸುಮತಿವಾಯಾವ್ಯೆಸಿಕದವಿ | ಭ್ರಮವನುತ್ತರಿಸಿದನುಸತ್ತ್ವದ | ವೇಘುಕೆವಿಗೆಮುನಿವಂದಿತನವಿನಯೋಕ್ತಿಯಲಿಮೆರದ ॥ ೧ ॥ ಅವನಿಪತಿಕೇಳವನಪಟ್ಟದ | ಯುವತಿಪತಿಬಂಧನವಕಂಡವ | ಯುವಜನಿತ್ರಸಂತೋಷದಲಿಕಾತರಿಸಿಧ್ರುತಿಗೆಡದೆ ॥ ದಿವಿಜವಂದಿತನಂಘ್ರಿಯಲಿಭಾ | ಳವನುಮೇಳೈಸಿದಳುಕೈಮುಗಿ | ದವನತಾನನಕಮಲೆಬಿಂನೈಸಿದಳುದೇವಂಗೆ॥ ಲೋಕವಿದುನೀನಿರಿಸಿದಂತಿಹು | ದೀಕಮಲನಂದನಸುನಾಕಿಪಿ | ನಾಕಿಮುಖ್ಯರುನಾಪ್ರುಪೃಥುಗೀಶಾಪಿಮುನಿಯುಗಳು ॥ ಕಾಕಮತಿಗಳುಮಿಕ್ಕನವರವಿ | ವೇಕದತಿರೇಕದಲಿಬರಿದೇ | ತೂಕಡಿಸಿತುದಿಗೇರಿಬೀಳುವರೆಂದಳಚ್ಯುತಗೆ ॥ ೨ ॥ ತ್ರಿಗುಣಸಂಯೋಗದಲಿನಿಜದಿಂ | ದಗುಣನೆನಿಸಿಯೆಸಕಲಭುವನಾ | ಳಿಗಳನುಗುಳ್ದುನುಂಗಿತೋರುವಬಗೆಯನಾಟಕವ ॥ ಸ್ಥಗಿತದೃಷ್ಟಿಗಳೇನನರಿವೆವ್ರು | ಜಗದೊಳಗೆತ್ರಿಣಯನವಿರಿಂಚಾ | ದಿಗಳಿಗಸದಳವಾಪ್ರುದಸದಳವಹುದುನೀನೊಲಿಯೆ ॥ ೪ ॥ ಪಾಶಬಂಧನವಾಯ್ತುಪತಿಗೆಂ | ಬೀಸಕಂಜುವಳಲ್ಲವಾಯಾ | ಪಾಶವಿಪೆರಾದೇಹಿಗಳಿಗೊಳಬಿಗುಹುಘನವಾಗಿ ॥ ಘಾಸಿಯಾದೆನುಕತ್ಮಗತಿಯಿಂ | ದಾಸುರವ್ರುಸಮನಿಸಿತುಕಮಲಾ | ವಾಸರಕ್ಷಿಸುತಂನನೆನುಶರಗಿದಳುಸಿರಿಪದಕೆ ॥ ೫ ॥ ಪೃಥುವಿಪತಿಕೇಳಸುರವನಿತಾ | ಪ್ರಥಿತನಿರ್ಮಲವಚನವನುಮುರ | ಮಥನನಾಲಿಸಿಕೇಳ್ತಲೆದೂಗಿನುತಂನೊಳಗೆ ॥ ವ್ಯಥಿತನಾದನುವಿನಯಪಾಶ | ಗ್ರಥಿತನಾದನುಬಲಿಯಬಂಧನ | ಶಿಥಿಲವಾದುದುಪರಮಕರುಣಾಸಿಂಧುತಲೆದೋರೆ ॥ ೬ ॥ ಬಂದನಾಕ್ಷಣದೊಳಗೆಮುರಹರ | ನೆಂದಸುರೋತ್ತಮನುವಿಭುವಿನ | ಹಿಂದಣವತಾರದಕಥಾಸಂಗತಿಗೆಮೊದಲಾದ ॥ ಇಂದುಪ್ರೋರವಿಯೋಯೆನುತನಡೆ | ತಂದನಭಿಜನದುರವಣೆಯಲರ | ವಿಂದನಾಭನಭಕುತಿಸಾಮ್ರಾಜ್ಯದಲಿಪ್ರಹಲ್ಲಾದ ॥ ೭ ॥ ನೀಲಮೇಘದ್ಯುತಿಯವಿಮಲಕ | ಪೋಲಮಂಡಲಮಕರಕುಂಡಲ | ಮೌಳಿಮಣಿಕೇಯೂರಪೀತಾಂಬರವಿಭೂಷಣದ ॥ ಶ್ರೀಲಲಾಟದಸೊಳುನೋಟದ | ಬಾಳಲಂಬಿತಕುಂತಳದಕರು | ಣಾಳುವಿನಹೋಲಿಕೆಯನೆರೆಬಲ್ಲಹನುನಡೆತಂದ ॥ ೮ ॥ ಸಿರಿಮೊಗದನಸುನಗೆಯಬಿಂಬಾ | ಧರದಕೋಮಲಕಂಬುಕಂಠದ | ಸುರವಿನುತಕಮಲಾಕ್ಷಮಾಲೆಯಮೆರವಭುಜಲತೆಯ ॥ ತರುಣತುಳಸೀವಾಸಿತದಪೀ | ರುರದಸುಳನಾಭಿಯಮುಕುಂದನ | ಪರಮಭಕುತಿಯನಿರುತಸುಖಸಾಕಾರನೈತಂದ ॥ ೯ ॥ ಕಲಬಲದಲಚ್ಯುತನನಾಮಾ | ವಳಿಯಮಂಗಳಘೋಷಭುವನಾ | ವಳಿಗಳಘಕುಲದಾಭಿಚಾರಿತವೆನೆನಭೋವಿವರ ॥ ಮುಳುಗೆಪರಿಜನದೊಳಗೆಕಂಗಳ | ಲೀವಹರುಷಾಶ್ರುಗಳತನುಹೊಂ | ಪುಳಿಯಭಕುತಿಯಭಾರಣೆಯಲೊಲವುತ್ತನಡೆತಂದ ॥ ೧೦ ॥ ಕೊರಗಿದುತ್ಪಲವನದೊಳಗೆಹಿಮ | ಕಿರಣಸುಳಿದಂತಾಯ್ತುದನುಜೇ| ಶ್ವರನಬರವನುಕಂಡುದಾನವರ್ಯದೆಚೇತರಿಸಿ ॥ ಹರುಷದಲಿಮೊಮ್ಮಗನಬಂಧನ | ದಿರವನೀಕ್ಷಿಸುತಾತನಂತಃ | ಕರಣದುಪಚಾರವನುಕೈಕೊಳುತಚ್ಯುತನಕಂಡ ॥ ೧೧ ॥ ಕಂಡುನಿಜದಾತಾರನನುಪದ | ಪುಂಡರೀಕದಮೇಲೆತನುವನು | ದಿಂಡುಗೆಡಹಿದನಚಲವರವಾನಂದರಸವಿಗಲು ॥ ಪಂಡಿತನುಮುಳುಗಿದನುಪುಳಕಂ | ಗೊಂಡುಕೊಬ್ಬಿದಹರುಷದಮೃತವ | ನುಂಡುಮೈ

ಕರೆದಾಲಿಸಿದನನುಪಮನಿಜಾಕೃತಿಯ ॥ ೧೨ ॥ ನೋಡಿದನು ಕಣ್ದಣಿಯೆ ದೆಸೆಕಡೆ । ಗೋಡಿವರಿದಾನಂದಜಲದಲಿ । ಮೂಡಿ
ಮುಳುಗಾಡಿದನು ತನುಪುಳಕದಲಿ ಜೀವನದ ॥ ಗೂಡು ತನನದುದು ಗುಪ್ತಕಂಠನಿ । ಗೂಢಗದ್ಗದವಚನದಲಿ ಸ್ತುತಿ । ಮಾಡಿದನು ಕೈ
ಮುಗಿದು ವಿನಯಾವನತಶಿರನಾಗಿ ॥ ೧೩ ॥ ಜಯತು ಮತ್ಪ್ರಾಣೈಕವಲ್ಲಭ । ಜಯ ಮನೋದ್ಧತ ಜಯ ಸುದುರ್ಲಭ । ಜಯ
ಸುಜನಸಂಸಾರಿಭವಭಯಹಾರಿ ಮುರವೈರಿ ॥ ಜಯತು ಜಯ ವಿಜಯೋದಯೋಜ್ಜಯ । ಜಯ ಸದಯ ಸದ್ಧೃದಯನಿಳಯ । ವ್ಯಯ
ಕಾಯತೋನಿನಿಯೋನಿಚೇತ್ರೋದರನವೆಯುಂಡ ॥ ೧೪ ॥ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ॥
ಗೋಚರಿಸಿದ್ಯೈ ಶಿವಶಿವಾವತಿ । ನೀಚರಲ್ಲಾಜಾತಿಯಲಿ ವೈ । ರೋಚನಿಗೆ ಮುಕ್ತ್ಯೈಯ್ಯನಾದುದಕೆಂದು ಫಲವಾಯ್ತು ॥ ನೀಚರೇ
ನೀನೊಲಿಯೆ ಭುವದಿ । ಯ್ಯಾಚರಣೆಯದು ಭೂತವಿದೆಂಮನು । ನಾಚಿಸಲು ಬಂದ್ಯೈ ಜಗಕೆ ಬೇರುಂಟೆ ಗತಿಯೆಂದ ॥ ೧೫ ॥ ರಕ್ಷಿ
ಕೊಡೆಯನು ತನಗೆ ಹಳ್ಳಿಯ । ಗಾಡಿನಲಿ ಬೀಡಿಕೆಗೆ ನೆಲನನು । ಬೇಡಿಕೊಂಬಂತಾಯ್ತು ಭುವನಸ್ತೋಮಜಠರದಲಿ ॥ ಆಡುವು
ದಗಡ ತಂ ವೊಳಗೊಂದಿ । ಡಾಡುವಣ್ಣುಗಳ ಪ್ರೋಲನೆಂಮನು । ಬೇಡ ಬಂದ್ಯೈಕರುಬತನದಲಿ ಮೋದಿನಿಯನೆಂದ ॥ ೧೬ ॥ ಅವಧ
ಸುತಾಪಸರು ಮೊದಲಲ್ಲಿ । ವಿವಿಧಮದವೆರಡನೆಯ ಲೆಮಗುದು । ಭವಿಸಿದಡೆ ಬಳಕೆಂಮ ಕೇಡನದಾರು ಬಲ್ಲವರು ॥ ಅವನಿಕಾರಣ
ವಲ್ಲಕಾರಣ । ವೆಮಗನುಗ್ರಹಿಸುವುದು ಕರುಣಾ । ರ್ಣವನು ನೀನಲ್ಲದಡೆ ಗತಿ ನಮಗಂನ್ಯರಿಲ್ಲೆಂದ ॥ ೧೭ ॥ ಒಡೆಯ ತಂನೊಡವೆ
ಯನು ಕೊಳಲಿವೆ ಯಿಡುವರೇ ಲೋಗರು ನಿಬಂಧಿಸ । ಲೊಡೆಯರುಂಟೇ ಬೇರೆ ನೀ ಹೊರಗಾಗಿ ಮಾಜಗಕೆ ॥ ಪೊಡವಿ ನಿಂನದು
ನಾವು ಹೊರಗೆ । ಕಡೆಗೆ ಸರ್ವಂ ವಿಷ್ಣುಮಾಯಮಯ । ವೆನುತ ಡುಗದೇ ಶ್ರುತಿವಚನಪ್ರತಿಪತ್ತಿಯಿಲ್ಲೆಂದ ॥ ೧೮ ॥ ಅಸುರೋತ್ತಮ
ನಂತು ಕೈಮುಗಿ । ದಾಸುಖೋದಧಿಗೆರಗಿ ಪುಳಕಾ । ವೇಶದಲಿ ಮನಮುಳುಗಿ ಹೊಗಳುತ್ತಿರಲು ಗಗನದಲಿ ॥ ಸೂಸಿಕುಸುಮಾಸಾ
ರವನು ಕವು । ಶಾಸನನು ತಲೆದೂಗಿ ಕಪುಳಾ । ಮಾಸನಂ ಭೃಗೆ ನಮಿಸಿ ಬಿಂನೈಸಿದನು ಸಮಯದಲಿ ॥ ೧೯ ॥ ದೇವಸಕಲಸುರಾಘ
ವಂದಿತ । ದೇವನಿಜಜನಸುಲಭವಂದಿತ । ದೇವಜಗದಾಧಾರಚಿತ್ತೈ ಸೂದುಬಿಂನಪವ ॥ ದೇವಸತ್ಯಪರಾಯಣಂಗಿದು । ಭಾ
ವಿಯೋಬಂಧನದಪೆಸನವಿ । ದಾವಲೀಲೆಯಿದಾವಘನತರವಿದೇನುಚಿತವೆಂದ ॥ ೨೦ ॥ ಪತ್ರಪುಷ್ಪಫಲೋದಕಾದಿಯ । ನಿತ್ತವನು
ಕೊಡಲಾಗಿ ನಿರ್ಭಯವ । ನಿತ್ತರಿಸಿ ಸದ್ಗತಿಯನೈದುವನೆಂದಡೀ ಧರೆಯ ॥ ಇತ್ತು ನೆರೆಯ ದೇಶಂನನೇನರೆ । ಯಿತ್ತ ಸದ್ಭಕ್ತಂಗೆ ನೀ
ಕೊಲಿ । ದಿತ್ತುದಿದು ಕಡು ಲೇಸು ಭಕ್ತರ ನಾಚಿಸದಿರೆಂದ ॥ ೨೧ ॥ ಹೆಸರುಗೊಳ್ಳಸಂಸಾರಬಂಧ । ವ್ಯಸನಹಿಂಗುವುದೆಂಬನಾಂಣ್ಣು
। ಮಸುಳಿಸಿತಲಾತಾಯಿ ಶಿಶುವನು ಕೊಲುವಡುಳಿದವರು ॥ ಒಸದು ಮಾಡುವುದೇನು ವಿವಿಜರ । ಹಿಸುಣಹೊಕ್ಕು ದೆಭಾಪುವ
ಘುದು । ಕೃಕವಮಾಡಿರೆ ಭಕ್ತವತ್ಸಲತನಕೆ ಕೊರುಹೆಂದ ॥ ೨೨ ॥ ಹೆತ್ತವರು ಹಗೆಯಾಗಿ ಶಿಶುವಿಗೆ । ಮೃತ್ಯುವನು ಪರುಠವಿಸುವ
ನಿಜ । ಭಕ್ತವತ್ಸಲತನದಲೀ ಪ್ರಹ್ಲಾದದೇವನನು ॥ ಮೃತ್ಯುವನು ಪಲ್ಲಟಿಸಿಸಲಹಿವು । ಹೋತ್ತನಾನವಮಾಡಿದೆಯಲಾತ । ತ್ವಾ
ನಲಿ ಕೃಪೆ ಹಳಸುವುದೆ ಬಂಧನವ ಬಿಡಿಸೆಂದ ॥ ೨೩ ॥ ಅಲ್ಲ ತಾನು ನಿಯಾಮಕನು ನೀ । ಬಲ್ಲಿ ಕೃತ್ಯಾಕೃತ್ಯ ವಿಷಯವ । ನೆಲ್ಲವನು
ಸಲುಗೆಯಲಿ ವಿಜ್ಞಾಪಿಸಿದೆ ನೆನಲು ॥ ಫುಲ್ಲನಾಭನು ನಗುತ ಕರತಳ । ಪಲ್ಲವವನೆಗಹಿದನು ಭಕುತರ । ಬಲ್ಲಹನು ನೋಡಿದನು
ಪ್ರಹ್ಲಾದಗಿಂತೆಂದ ॥ ೨೪ ॥ ಮಗನೆ ತಾಮರುಳಾಗಿ ಭಕ್ತನ । ನೆಗಡುಮಾಡಿದೆ ನಕಟ ಕಟ ಹಿಂ । ಮಗನನುಡಿಹುಸಿಯಲ್ಲನೀ
ನಂಜಬೇಡೆನುತ ॥ ತೆಗದು ಬಿಗಿಯುಪ್ಪಿದನು ಕರುಣಾ । ಳುಗಳ ಬಲ್ಲಹ ನೀ ಪ್ರೆಸೆಲು ಕೈ । ಮುಗಿದು ನಿಂದನು ಬಲಿ ಬಲಾನುಜನಂ
ಗಭಿನಮಿಸಿ ॥ ೨೫ ॥ ಆಮುನಿಗಳಾ ಮನುಗಳಾ ಸು । ತ್ರಾಮ ಸೋಮ ಪ್ರಭೃತಿ ಭುವನ । ಸ್ತೋಮಜನವೈದೊಲಿದು ಕೇ
ತ್ತಿರಲು ಕೈಮುಗಿದು ॥ ಆಮಹಾದೈತ್ಯೇಯ ವಂಶಲ । ಲಾಮ ನಾಲಿಸುತಿರಲು ಭಕ್ತ । ಪ್ರೇಮನಿಧಿ ನುಡಿದನು ಅಭಿಪ್ರಾಯವನು ಕ
ಮಲಜಗೆ ॥ ೨೬ ॥ ಅಹುದಹುದು ಹುಸಿಯಲ್ಲ ಕೇಳೆಲೆ । ದ್ರುಹಿಣ ನೀ ನೆನಗೆಂದನು ಡಿತಾ । ನಹಿತನಂತೊಳಗರಿಯಲೀ ತನ ಮನವ
ನೋಡಿದೆನು ॥ ವಿಹಿತವಲ್ಲದಡೆಂತು ಕುಜನರ । ಕುಹಕಿಗಳನೆಂನವರನುತಸಂ । ಗ್ರಹಿಸಿಕೊಂಬೆನನೇಕವಿಧಮದಮತಿಯುತರ
ನೆಂದ ॥ ೨೭ ॥ ಎಸೆವ ಚತುರ್ಮುಖಕೇಳುವಾಯಾ । ವಿಲಸಿತದ ಸಂಸಾರದುಸ್ತರ । ಜಲಧಿಯಲಿ ತನುಮುಳುಗಿ ತಾಪತ್ರಯದ ನಡ
ನಲಿ ॥ ಸಿಲುಕಿರ್ಪೊಳದಲಿ ಜೀವಜೀವಾ । ವಳಿಗಳೀ ನರಜನ್ಮನಾವೆಯ । ನಳವಡಿಸುವರು ಹಲವು ಜನ್ಮದ ಸುಕೃತಫಲವೆಂದ ॥ ೨೮ ॥
ಹುಸುಕೃತಸಂಚಿತನ್ನಜನ್ಮದ । ಲಹುದೆ ಫಲಸ್ವೈಶ್ವರ್ಯ ತಿಮಿರಾ । ಪಹತದೃಷ್ಟಿಗಳಿಂಗೆ ಪುನರಪಿ ಪೂರ್ವಪದ್ಧತಿಯ ॥ ವಹಿಸುವೀ
ವರೊಳು ಮದನು । ಗ್ರಹಕೆ ಸೇರುವನಾವನಾತನ । ಬಹಳ ಮದತಿಮಿರೋಪಹರಣವ ಮೊಳ್ಪೆ ತಾನೆಂದ ॥ ೨೯ ॥ ಪದುಮ
ಭವ ಮದಹೇತುವೆನಿಪ । ಭ್ಯುದಯ ನೊಲ್ಲವಿನಲಾವನೊಬ್ಬನ । ಹೃದಯ ಸಾರ್ದಲರೆಸಿಯೆಂದದಲಮುರತರವೆನಿಪಿ ॥ ಮದವಿ
ದೂರದಿದೂರವಾಗಿಹು । ದದುವೆ ಮದನುಗ್ರಹಕಣಾ ಲೋ । ಕದಲಿ ತಾದೃಶಪುರುಷರುಂನತಿದೊರಕದಿಳೆಗೆಂದ ॥ ೩೦ ॥
ಯಿತಿಂನೆಮಗೀ ಮಹಾದೈ । ತೇಯಕುಲಕಾಂಸು ಭನುಗೆಲಿದನ । ಜೇಯಮಾಯಾಪಾಶಸಂಹಿತಪಾಶಬಂಧನವ ॥ ಕಾಯಿದ
ಸತ್ವವನುಗುಣದಲ । ಸೂಯೆಯೇ ಕೈಮಾರವೇಕೆಮ । ದೀಯ ಭಕ್ತರೊಳಿಲ್ಲ ನೋಡುವಡೀತಗೆಣೆಯೆಂದ ॥ ೩೧ ॥ ಕಾಣೆ

ಸೀತನಪೋಲಿಕೆಗೆನಿ । ರ್ವಾಣಮುಖ್ಯರನುಳ್ಳವರುಪರ ಮಾಣುನೋಲಿಂಸಂಗಸನಸಂಬಂಧಪ್ರವೃತ್ತಿಗಳು॥ಪ್ರೋಣಿದಾನರೀಕರಕ್ತ ಗಾತ್ರ । ಪ್ರಾಣವನುಸಲಿಸುವರುಗಡಭವ । ನಾಣೆಮೆಚ್ಚಿ ಜಪೀಪರಮಗುಣಶೀಲನಾರುಧಿಗೆ ॥ ೩೨ ॥ ಹಂಗಿಗನುತಾನೀಗಳೀ ತನ । ಭಂಗತನ್ನಯಭಂಗಪೀತನ । ಪಿಂಗರವೆಪಿಂಗಾರಪವನಾದಂತ್ರತಾನವೆನು ॥ ಹಿಂಗಿದಡೆಶಿವನಾಣೆಭಾಷೆಗೆ । ಭಂಗವೇನಿಂ ನಾಣೆತಾನೀ । ತಂಗೆಜವಿಜರುಧರೆಗೆನಾರಿದವಸ್ತುನೋಡೆಂದ ॥ ೩೩ ॥ ಅಳುತನದೇಳ್ಗೆಯಲಿಭಕ್ತರ । ನೋಲಗಿಸಬೇಕೆಂಬಬ ಯಕೆಯ । ಮೇಳವಕ್ಲಿದುಮಗನೆಭಕ್ತಸ್ನೇಹಹಿಂದೆನಗೆ॥ಕೇಳವೈರೋಚನಿಯಗೋಪುರ । ಪಾಲಕತ್ವದಲೀಲೆತನ್ನದು । ಕೋ ಳುವ್ರೋದೆನುಭಕ್ತರೊಳುತಾನೆಂದನಸುರಾರಿ ॥ ೩೪ ॥ ಎನುತಪರಮಕೃಪಾಳುನ್ಯರೋ । ಜನಿಯವದನಾಂಬುಜವನೀಕ್ಷಿಸಿ । ಬಿನವುದಲಿತಲೆವಾಗಿಪದದಲಿಹಣೆಯಮೋಳ್ವಶಿ ॥ ಘನತೆಯಾರದುನಿನ್ನಭಕ್ತರ । ಮನೆಯತೊತ್ತಿರಮಗನೊಳೇಕೀ । ಸನುಚಿ ತದಲೀಲಾವಿಹಾರವಿನೋದಸಂಗತಿಯ ॥ ೩೫ ॥ ಮುರಿದುಬೈವುನವಕಟತನ್ನದೆ । ಗೊರದಪಾತಿಂನೇಕೆಸಲಿಸಲು । ಶರಹೊ ಗೊಡದಿರುವೆಂದಹುಣ್ಣಿನಬೇನೆಘನವೆಮಗೆ ॥ ಮರೆದುಕಳೆಯನ್ನಪರಕೋಕ್ಕೆ । ಶಿಲೆಯನೆನ್ನನುದಿವಿಜರಾಜ್ಯವ । ತೊರೆಬಳ್ಳಿಕ ತಾನಿತ್ತುಬಿಡಿಸುವೆನ್ನನಾನೆಂದ ॥ ೩೬ ॥ ಲೇಸುಕನಸಿನಲೀಸದರ್ಥಕೆ । ಸೂಸುವನೆಸಿಜಸಿರಿಯನಮರರು । ಲೇಸವಾಡಿದರಿ ತ್ತರೇಪ್ರತಿಕೋಶವನುಧರೆಗೆ ॥ ವಾಸುದೇವಮುಖ್ಯರನುತಾಹೊರ । ಬೀಸುವೆನುಗಡಮರಳೆವಾಯು । ವಾಶಕೋಸುಗಮರುಗದ ಡೆಫಲವಿಲ್ಲಕೇಳೆಂದ ॥ ೩೭ ॥ ಕೊಡುವಬಿಡಿಸುವನುಡಿಯನೀತಕೆ । ನುಡಿವೆಸಾಕದುನಿಲಲಿತಾನಿಂ । ನೆಡೆಕಡೆಯರಾಜ್ಯಾಭಿಲಾ ಷೆಗೆತ್ರೊಳಲುವವನಲ್ಲಾ ॥ ಕೊಡುವುದುಂಟೇಭಕುತಿರಾಜ್ಯವ।ಪಡುವುದಂಟೇಮುಕುತಿಯಲ್ಲದ।ದೊಡೆಲನುಳ್ಳದೊಡಗೂಡುವೆನು ತಾನೆನುತನವಿಬಿಸಿದನು ॥ ೩೮ ॥ ಧರಣಿಪತಿಕೇಳುರುದಯಾಂಬುಧಿ। ಗರೆವೆಭಕ್ತಸ್ನೇಹಪಂತಃ । ಕ್ಕರಣದಲಿತುಳುಕಾಡಲೇರಿದ ಗಮ್ವನೆಯುನಿಳಿದು ॥ ಸಿರವಹಿಡಿದೆತ್ತಿಪನುಹುಡಿಯಲಿ । ಹೊರಳಬೇಡೇಳೆನುತಭಕತನ । ಬರಶಳದುಬಿಗಿಯಪ್ಪಿದನುಮ್ಮೊಡಪವಿ ಮನದಣಿಯೆ ॥ ೩೯ ॥ ಮಾನನಿಧಿಕುಳ್ಳರುಮುದೀಯ್ಯನಿ । ಧಾನವೇಬಾಗದ್ದುಗೆಗೆಮುದ । ದಾನೆಬಾಯೆಂದಸುರರಿಪುಬೋಳ್ಳೆ ಬಿಭಕ್ತನನು ॥ ದೀನತನವೇಕಿಂನುನಿಂನಾ । ಧೀನದಲಿತಾನಿರಲುಮುಕುತಿಗೆ । ನೀನುಹಂಗಿಗನಲ್ಲಬೇಡಲದೇಕೆಸಲಿಪಿದೆನು ॥ ಬಳಲಿದವಸೀನಲ್ಲತಾನೀ । ಬಳಲಿದೆನುಬಂಧನದೊಳಗೆಸಲೆ । ಶಿಲುಕಿದವನೀನಲ್ಲಸಿಲುಕಿದೆನಾನುನೀನಿಂನು ॥ ಇಳೆಸುತಳಭುವನ ದಲಿಭುವನವ । ನಳವಡಿಸುನಿಂನರಮನೆಯಬಾ । ಗಿಲಲಿತಾನನವರತಸಂನಿಧನಹೆನುಕೇಳೆಂದ ॥ ೪೧ ॥ ಮರಣಭಯಮತ್ಸರಭ ಯವುದು । ತ್ತರುಷಭಯರಿಪುಭಯಭಯಂಕರ । ಜರೆಯಭಯಯವ್ವನದಭಯರೋಗಭಯಘೋರಭಯ ॥ ಸಿರಿಯಭಯ ಸಿರಿಷಂಕಭಯದು । ಧರ್ಮರಕರೀರೋಗ್ಯಗಳೆಂಬಿವು । ತಿರುಗಿನಿನ್ನನುನೋಡಲುಮುಪ್ರತಂನಕ್ಷಯಿಂದ ॥ ೪೨ ॥ ಸ್ವರ್ಗನ ಸುಕರನೀಡಿಸುವಬಲ । ದುರ್ಗಪದುಕನಸಿನಲಿಸರಿತವ । ವರ್ಗವನುಭವವರಿಯದಪರೊಳಗಿರಲುತಾನಿಂನ॥ ದುರ್ಗಪಾಲಕನ ಪಿನುಸೀಮನಿ । ಸರ್ಗಸಿದ್ಧನುಬಳಕನಿನಗದ । ವರ್ಗವಪ್ರೌರ್ಥಕನರೇನಿಂನಲ್ಲಿಬಹೆನೆಂದ ॥ ೪೩ ॥ ತೊಡಕುಬೇಡಿಪ್ರೌಢವಿ ಗಡವಿಯ । ಜತರುತಾನೇಕೆಳಲಿಸುತಳಕೆ । ನಡಸುಪುತ್ರಸಗೋತ್ರಪರಿಜನಪರಿಯದಳಸಹಿತ ॥ ಒಡನೆತಾನೈತಹೆನುನಿಂನಲಿ। ತಡವಿದವರನುಪಕ್ಷಲಿಕಡೆ । ಗಡಿವೆನಹುತರನೆವ್ರನೆನುನಿನಗೆವಲಿಗವರನೆಂದ ॥ ೪೪ ॥ ಅಲ್ಲದಡೆಪಾಲಿಸುವೆನ್ಯಹಿಕ । ದಲ್ಲಿ ನಿಂನಲಿನಿಪ್ರಕಾರದ । ಬಳ್ಳಿತೊಡಕಿದುನಡೆಯಲೀಸದಲಂಘ್ಯಪರಿತನ ॥ ಪ್ರೊಲ್ಲಹನೆನಿಜಕರ್ಮಪಾಶವಿ । ದ್ದಲ್ಲಭಾವಿಸನೋಡಲ ಪ್ರತಿ । ಪಲ್ಲಮಂನಿಸನೇಹುದಾರ್ಜಿತಕರ್ಮವದನೆಂದ ॥ ೪೫ ॥ ನೋಡಿನಿನಗಿಂದ್ರತ್ವವನುಕೈ । ನೋಳವಿಪಿಕೊಡುವೆನುಸಿರುತವಿ ರು । ಕೇಳಕೇಕನಿಂದುಸಾವನಾಗಂತರದನಿನುತ ॥ ಭಾಳದಲಿಕೈಯಿಟ್ಟುಪರಮಾಕ್ಷ । ಪಾಳುಬೋಳ್ಯೆಸಿದನಿದೇನೈ । ಸಾಲಭಂ ಜಿಕೆಯಾದೆಭಾವಿಪುನೀನುಮನವೆಂದ ॥ ೪೬ ॥

॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ ॥

ಎಂದಾಲಿಪಿಮುಕುಂದನಸುಧೆ । ಯಂದಧಿಕವಹಮಧುರವಚನವ । ನಿಂದ್ರಸೇನನುಮುಳುಗಿಹರುಷಾಂಬುಧಿಯಮಧ್ಯದಲಿ । ಕಂಪಿತದುಕಂಗಳಿಗೆಪ್ರುವಪಿ । ತಂದನೋಪುಮುಚ್ಛಳನೆನಲುಮನ । ಸಂದುಸ್ಯೆನೆರಗಿಪಸಮಾಧಿಯಬೊಂದುಹಿನ್ನಹವ ॥ ೪೭ ॥ ಬಹಮಮಸ್ತ್ರಿಪಪಹೊಗಿರಾಜ್ಯವ । ಪತೆಕರೆಸಾಯಿಪ್ರಚರಾಚರ । ದೊಡೆಯನೆತ್ತಲುತನ್ನಪರಿಪಾಲಕನತನವೆತ್ತ । ಮಾಪಮಾಡಿಯ ಮೇಲಿಪಪೆಂಗಳು।ಪಿಡತಲೆಯಮೇಲಿಹರದಾರೋಡ ॥ ಬಿಡದಿಹರಭಾಪರರೆಯಾರ್ಜಿತಭಾಗ್ಯತಾನೆಂದ ॥ ೪೮ ॥ ಆವನನುತ ನ್ಹಂದದಲ್ಲಿಪೆ । ಟೀವನರಿಂಗಿದನೆಂಬುಪೇಕ್ಷತಿ । ಯಾವನೊಬ್ಬನನರಸಿಕಾಣವುಮುನಿಮನೋನಿಕರ ॥ ಆವನಾತನುತನ್ನಬಾಗಿಲ । ಕಾವಗತಬಲಿಬಡಿಯನಾವಂ । ಗೀವಗಡಶಿವಶಿವನುಚಿತಯಕೇಳ್ವನಾನೆಂದ ॥ ೪೯ ॥ ಅವನನುಯಾಜ್ಞಿಕರುಯಜ್ಞದ । ಲಾವ ನನುತಾಂತ್ರಿಕರುತಂತ್ರದ । ಲಾವನನುಯೋಗಿಗಳುಯೋಗಾಭ್ಯಾಸನಿಷ್ಠೆಯಲಿ । ಭಾವಿಸುವಿನೆನಲಾತನೀನಿ। ಜೀವಬಲಿಪ್ರ ಜಪಾಲಕನುಗಡ । ಕಾವಗಡಬಾಗಿಲನುಭಾಪ್ರುರೆಹಾಸ್ಯವಾಯ್ತೆಂದ ॥ ೫೦ ॥ ಆವನನುಪರವೆಂದಪರವೆಂ । ದಾವನನುಗುಣಿಯೆಂ ದುಗುಣಿಯೆಂ । ದಾವನನುತನಾನೆಂದನುದಿಬತಾರ್ಕಿಕರು ॥ ತಾವುಗಾಣರುತನ್ನಬಾಗಿಲು । ದಾವಲಾವೇದಾಂತದರ್ಥವ ।

ಸಾವುನೆರೆನಿರ್ಣೈಸಿದವರಿಂನೇಕೆಮರೆಯಂದ ||೫೧|| ಆವನನುಹರನೆಂದುಹರಿಯುಂ | ದಾವನನುಸುರನೆಂದಸುರನೆಂ | ದಾವನನು ನರನೆಂದುನಾನಾಜೀವಚಯಸೆಂದು || ಭಾವಿಸಲುಸರ್ವಾತ್ಮಕನುಸ | ರ್ವಾವಶೇಷಿತರೆಂಬರಾತನ | ನಾವುಕಾಂಬೆವುಹೊಸಪರಿಯು ಬೇರೊಂದುಭಾವದಲಿ || ೫೨ || ಅವನೀಪ್ರತ್ಯಕ್ಷದಲಿಮ | ತ್ತಾವನನುಮಾನದಲಮಾನದ | ಲಾವನುಪಮಾನದಲಿಸಾಥ್ಯಾರ್ಥಪ ತ್ತಿಶಬ್ದದಲಿ || ಆವನಪರಿಚ್ಛೇದ್ಯನೆನಿಸುವ | ನಾವಿಮಳಸಂವಿತ್ಸ್ವರೂಪನ | ನಾವಪವರ್ಣೀಪರಿಪರಿಚ್ಛೇದನವುನಿಧಿಯುಂದ || ಹಲವುಮಾತುಗಳೇಕೆಸೇವಕ | ಸುಲಭನೀನೆಂಬುದನುಸಾತ್ವಿಕ | ರೊಳಗೆಮೆರೆಯುದೆತಾಮಸಾತ್ಮಕನಾದತಂನೊಡನೆ || ಬಳಸಿ ಗಡೆನೆರೆಮೆರೆಯುಬಲ್ಲುದೆ | ನಳಿನದೃಶನಾಚಿಪದಿರೆಂನನು | ಕೆಲನಗುವುದನುಚಿತವಮಾಡದಿರೆನಲುನಗುತೆಂದ || ೫೪ || ಪುರುಷ ಲಿಂಗದಮಹಿಮೆಮಲ್ಲಿಗೆ | ಯರಳಸಂಗದಲರಿಯಬಹುದೇ| ನಿರುತತಾಮಸನೆನಿಸದಾಯಸೆಕುಸುಮಸಂಗದಲಿ || ಪರಿಕಿಸಲುಗೋ ಚರಿಸುವುದೆಯನೆ | ಕರವುಬಕೆತಲೆವಾಗೆನುಡಿದನು | ತರಳನನುಕೇಳದಿರುಘನತೆಯಬಲ್ಲೆನೀನೆಂದ || ೫೫ || ಆದಡೆಂಜದಿರೆಲ್ಲವ ನುತಾ | ನೋಡಿದವನನುಚಿತವಿದೆಂಬವಿ | ಷಾದಬೇಡೆಲೆಕಂದಕಂದದಿರೆನುತವೈದಡವಿ || ಆದರದಲಾಜ್ಞಾಪಿಸಿದಡೆಹ | ಸಾದ ವೆನುತೆರಗಿದನುಪದವನು | ನಾದಿದನುನಯನದಲೊಗುವಹರುಷಾಂಬುಪೂರದಲಿ || ೫೬ || ಭದ್ರಗಜಬಡವಾಗಿಪುನರು | ನಿದ್ರ ಬಲವಾದಂತೆಹರುಷಸ | ಮುದ್ರದೊಳಗೋಲಾಡುತಸುರೋತ್ತಂಸನಿಂದಿರಲು || ಅದ್ರಿಧರನಕಟಾಕ್ಷಲೋಕವ | ಮುದ್ರಿಸಿತು ಮಂಗಳತ್ರಯಲಿನಿ | ಚ್ಛಿದ್ರವಾದುದುಗಗನವೈಮಾನಿಕರಸಂದಣಿಗೆ || ೫೭ || ಹೇಳಿಕೆಗೆಕ್ಷೆರಹಿಲ್ಲಹೊಸಮಳೆ | ಗಾಲವಾದುದು ಕುಸುಮಸಂತತಿ | ಗಾಲಿಗಳುನೀರೇರಿದವುನೋಡುವರಕಂಗಳಲೀ || ನಾಲಿಗೆಯಬೀಡುಗಳೊಳಗೆಜಯ | ಮಾಲಿಕೆಗಳೊಪ್ಪಿದ ವುಹಿಂದಣ | ಹೊಳ್ಳಿದುತ್ಸವವೆದ್ದುಕುಣಿದವುಭುವನಚಯಗಳಲಿ || ೫೮ || ಪಾತ್ರಕಂಗಳುಪರಿಣಯದಿಮರೆ | ಮಾತನಾಡಿದು ದಿಲ್ಲಪುನರಪಿ | ಕಾತುದಸುರರಭಾಗ್ಯಸಂತಾನಕೆವುಬೇರೊಡಡು || ಸೂತವೈತಾಳಿಕಮಗಧವಿ | ಖ್ಯಾತಜನಕೈವಾರಿಸಲುನಿ | ತ್ಯಾತುಮನುನಿಜಭಕ್ತನೋಲಗದನುವನಾಲಿಸಿದ || ೫೯ || ಇದುಗಣನೆಗೇಳನೆಯದೆಂದೆನಿ | ಪುದುಮಹೋತ್ತಮಸಂಧಿಭಾ ವಿಸ | ಲಿದರೊಳಗೆಪದಬಂಧವೈಸೆಂದೆಂಬುದನುಕೇಳಿ || ಪದುಮಮಿತ್ರನವೈವಡಸಿದಂ | ತದರೊಳೊಂದೇಕೊರತೆಕರುಣಾ | ಸ್ಪದಮುರಾರಿಯಘನಕೆಯುದುದಾನವನಬಾಗಿಲಲಿ || ... ... || ೬೦ ||

ಅಂತು ಸಂಧಿ ೮೯ಕ್ಕಂ ಪದನು ೩೦೦ಕ್ಕೆ ಮಂಗಳಮಸ್ತು

ಇಪ್ಪತ್ತನೆಯ ಸಂಧಿ.

ವಾಮನ ಮೂರ್ತಿ ಬಲಿಯ ಬಾಗಿಲನ್ನು ಕಾದದ್ದು.

ಸೂಚನೆ|| ಕರುಣಿಯನುಬಲವಂದುಬೀ | ಳ್ಕೊಂಡುರುನಪರಿಜನಸಹಿತಸುತಳಾ | ಗರವನೈದಿದನೊಲಿ
ದುಬಲಿಪ್ರಹಲ್ಲಾದನೊಡಗೂಡಿ || ... ...

ಪದನು || ಭೂಮಿಪತಿಚಿತ್ತೈಸುಭಕ್ತಶಿ | ರೋಮಣಿಯುಮನಮುಳುಗೆಪರಮಕ್ಷ್ಮ | ಪ್ರೇಮಹೋದಧಿಯೊಲಿದುನೆರ ದೋಲಗದಮಧ್ಯದಲಿ || ಪ್ರೇಮಮಿಗೆಮಂನಿಸಿತದೀಯ್ಯಾಪಿ | ತಾಮಹೆನಹತ್ತಿರಕೆಕರದು | ದ್ವಾಮಪತಿಬೋಳೈಸಿನಗುತಿಂತೆಂ ದಕ್ಷಪೆಯಿಂದ || ೧ || ಮಗನೆನೀಹೇಳನಗೆನಿಂನಯ | ನೆಗಳ್ದಮನದಭಿಮತವಸುಗಳನ | ಹೊಗುವೆಯೋಮೇಣೊಲ್ಲೆಯೋ ತಂನಾಣೆಹೇಳನಲು || ಮುಗಿದುಕರಕುಟ್ಮಳದಲೊಸರುವ | ಸ್ರುಗುಜಲದತನುಪುಳಕರಸರಾ | ಜಿಗಳಭಕತರದೇವಬಿಂನೈಸಿದ ನುಪದಕೆರಗಿ || ೨ || ದೇವಚಿತ್ತೈಸೆನಗೆಬೇರಿಂ | ನಾವಮತವುಂಟೆಂನಮತವಸು | ದೇವರರಿಯರಲಾಮಹಾದೇವೀಚರಾ ಚರದ || ಜೀವಸಾಕ್ಷಿಯದಾರುತಾನಿದು | ಸೇವಕತಪಾಭಾವನೆಯಲೀ | ಲಾವಿಡಂಬನಚಮತುಕಾರವನರಿವನಾರೆಂದ || ೩ || ಅಷ್ಟವಿಂಶತಿನಿರಯಕೋಟಿನಿ | ಕೃಷ್ಟಯಾತನೆಗಳಿಗೆಭೃತ್ಯನ | ನಟ್ಟನೋಡುವುದಳುಕಿದರೆನಿಂಮಡಿಯಶಿಶುವಹನೆ || ಬಟ್ಟವಿಸಿ ಕಿರುಕುಳಕೆರಾಜ್ಯದ | ಪಟ್ಟವನುಕಟ್ಟದಡೆಮರುಳಪಿ | ದಿಟ್ಟಕಥೆಯಂತಿರಲಿನಿಂಮಭಿಮತವೆಮತವೆಂದ || ೪ || ಬಲ್ಲುದೇಶಿಶು ತಾಯನೊಲಿವಾ | ಲಲ್ಲದುಳಿದುದನೆಮಗೆನೀಗತಿ | ಯಲ್ಲದನ್ಯಥವುಂಟೆತ್ರಿಭುವನವೆನಗೆತೃಣಮಾತ್ರ || ನಿಲ್ಲದರಸುವನಿಗಮಗೋ ಚರ | ವಲ್ಲದಾನೀನಿರಲೆಮಗೆಕೈ | ವಲ್ಯದಲಿಮನವಿಲ್ಲದೇಕಿಂನುಳಿದಸಿದ್ಧಿಗಳು || ೫ || ಆವನೊಬ್ಬನಚರಣಕಮಲದ | ಸೇವೆ ಯಲಿಸನಕಾದಿಗಳುಭವ | ಭಾವನೆಯಲುತ್ತರಿಸಿನಿಜಸುಖಪೂರ್ಣರೆನಿಸಿದರು || ಆವಿರಿಂಚಿಭವಾದಿಗಳಕುಲ | ದೈವವೆತ್ತಲುಬಲಿ ಯಬಾಗಿಲ | ಕಾವಲೆಂಬರದೆತ್ತಲನುಚಿತದಾನಿತನವೆಂದ || ೬ || ಎನಲುಭಕತನನುಡಿಗೆಕರುಣಾ | ವನಧಿನಗುತಿಂತೆಂದಕೇಳೆನ| ಗನುಚಿತವಿದೆಂನದಿರುಹಂಗಿಗನಾನುಭಕ್ತರಿಗೆ || ತನಗೆಸಿರಿಸರಕಲ್ಲಭಕ್ತರೆ | ಮನೆಯಲಿಹುದೆನಗರ್ಥಿಯಿಂಗಡ | ಲೆನಗೆನೆನೆಮನೆ ಯಲ್ಲರಮಣೀಜನಕೆಮನೆಯುಂದ || ೭ || ಕುಹಕವಮಾತುಗಳಲ್ಲಮನನಮು | ಚ್ಚಿಹುದುಭಕ್ತರಲಿತ್ತಲಿಂಗಡ | ಲಹಿಪತಿಯಮೇ

ಕೊರಗುವದುಬರುಡಿಂಬಮಾತ್ರವದು ॥ ವಿಹಿತವೆನಗದುನೀವುತಂದನು । ಗಹನವನುಮಾತುವಿರಿಭಕುತರ । ಮಹಿಮೆಯುಳ್ಳದೆ
ಬೇರೆಮಹಿಮೆಗಳಿಲ್ಲತನಗೆಂದ ॥ ೮ ॥ ಹಚ್ಚಿಹಲುಬುವಹಲುದೆರಹಿಗಳ । ಮೆಚ್ಚಿದಿದಿರನುನಿಂದಿಸುತಕೆಣು । ಮುಚ್ಚಿನಿಗುರುವ
ಬಿಂನಮತಿಗಳನೊಲ್ಲೆನುಳಿದವರ ॥ ಕಿಚ್ಚಿನಿದಿರಲಿಕೈಮುಗುಚುವರ । ಮೆಚ್ಚಿದೇಶಕೆಹಲವುನುಡಿಗಳ । ಮುಚ್ಚುಮರೆಯೊಳಕೆಂನ
ಭಕುತರನಲ್ಲದುಳಿದವರ ॥ ೯ ॥ ಧನಿಕರನುತಾನೊಲ್ಲೆನೊಲ್ಲೆನು । ಧನವಿಹೀನರನಕೋಜರನಭಿ । ಜನಯುತರನಮರರನುವೆ
ಣಸುರರನುಲೆಖ್ಖಿಸೆನು ॥ ತನಗದಲ್ಲಸಮಾನಜಾತಿಗೆ । ಮನವೆರಗುವವನಲ್ಲತಂನನು । ನೆನೆವವರನೆನವಶಿಶುನಬಿಡಲಾರೆತಾ
ನೆಂದ ॥ ೧೦ ॥ ದೂರದಿಂದಾಲಿಸುತಿರಲುಮನ । ಸೈರಿಸದೆಸಲೆನಿಂಮೊಳಗೆಮ್ಮ । ಯ್ಯಾರೆಸುಳಿದೊಡನಾಡುವರ್ಥಿಗೆಸೆಂದುಶಾಸ್ತ್ರ
ವನ ॥ ನಾರಿಯಲಿಜನಿಸಿದೆನುನೆವದಲಿ । ಧಾರುಣಿಗೆನಡೆತಂದೆನೆಂನಮ । ನೋರಥವಕೆಡಿಸದಿರುನೆರೆಸುಖಿಯಾಗುನೀನೆಂದ ॥ ೧೧ ॥
ಬೀಗಿಬಿಗಿದವುಕೊರಳಕರೆಗಳು । ತೂಗಿತೊನೆದವುತನುಮುಕುಂದನ । ವಾಗಮೃತಸೇಕದಲಿಹಿಗ್ಗುದನುಪಮನಹೃದಯ ॥ ರಾ
ಗರಸದುಬ್ಬಿನಲಿಹೊಂಪುಳಿ । ಯೋಗಿಮನಮರುಳಾಗಿಸುಖಮಯ । ಸಾಗರದಲೊ[illegible]ಡುತಿರ್ದನುಸಜ್ಜನೋತ್ತಂಸ ॥ ೧೨ ॥
ಅರಳುವವುಮುಚ್ಚುವವುಕಂಗಳು । ಸುರಿವಸುಖಬಾಷ್ಪದಲಿತನುಸಾ । ಗರದತೆಪ್ಪದವೋಲುಬೆಂಡೇಳುವುದುಮುಳುಗುವುದು ॥
ಧರಣಿಯಲಿಕೀಲಿಸಿದಪುಥ್ಥಳಿ । ಯಿರವಹೋಲುವುದೆನಲುಭಕುತ । ಭರಣನೋಲದೊಲದಾಡುತಿರ್ದನುಹರಿಯಭಕುತಿಯಲಿ ॥ ೧೩ ॥
ಏನನೆಂಬೆನುಭಕುತಿರಸದನ । ವೀನತ್ರಯನದನಾಕನಂತ । ಧ್ಯಾನನಿಷ್ಠೆಯನಿರುಗೆನಿಟ್ಟಿಸಲಾರಿಗಳವಹುದು ॥ ತಾನಿದಿರುಹೊಳ
ಗೆಂಬಬಗೆಯನಿ । ಧಾನವಳ್ಳವುದುಸತ್ಯಚಿದುಘನ । ತಾನುತಾನಾಗಿದಿರುದೋರದೆಭಕುತಿಯಿಂತೆಸೆದ ॥ ೧೪ ॥ ತೈಲಜಲಧಿಯ
ಮಧ್ಯದಲಿತಿಲ । ಜಾಲವನುಹಿಡಿವಂತೆಮುಗುಳೆಸು । ನೀಲಯದಲುತ್ಪಂನಪರಮಾನಂದಜಲಧಿಯಲಿ ॥ ಮೇಳವಿಸೆಕರಣಂಗಳ
ನುಹೀ । ಹಾಳುವಿಗೆಕರಣೇಂದ್ರಿಯವಕನು । ಜಾಲದಂತೆಚ್ಚರಿಸಿನಿಜಭಕುತಿಯಲಿಕಂದೆರದ ॥ ೧೫ ॥ ಕಮಲಸಂಭವನೊಳಗೆಜ
ನಿಸಿದ । ಮಮತೆಭವನನುಭಜಿಸದೃಷ್ಟಿಯು । ಮಮತೆರಮೆಕಂಡರಿಯದೀಕಡುಮೋಹವೆಂಮೊಡನೆ ॥ ಅಮಮಸಂಭವಿಸಿತ್ತುದ
ನುಜಾ । ದ್ಯಮರಪುರಪಾಲನದಲೀಲಾ । ಚಮತುಕೃತಿಗಿಂನೇನನೆಂಬೆನೆನುತ್ತಕೈಮುಗಿದ ॥ ೧೬ ॥ ॥ಶ್ರೀಕೃಷ್ಣಾಯನಮಃ ॥
ಕರವಮುಗಿದೆರಗಿದನುಚರಣಾಂ । ಬುರುಹದಲಿತಲೆವಾಗಿನಿಜಪದ । ಶರಣಜನವಾತ್ಸಲ್ಯವನುಬಿಡಲಾಗದೆಂದೆನುತ । ಹರುಷದ
ಲಿಬಲವಂದುಪರಿಜನ । ಪುರಜನಂಗಳುಸಹಿತವಿರಹಾ । ತುರನುಪೊಂಮಗನೆರಸಿಕರುಣಾಳುವನುಬೀಳ್ಕೊಂಡ ॥ ೧೭ ॥ ಹರಚ
ತುರ್ಮುಖಮುಖ್ಯರಿಗಶಿವ । ಗೆರಗಿದನುಬಲವಂದುಹರಿಕಿಂ । ಕರರಕರುಣವಪಡೆದುಕೈಮುಗಿದೆರಗಿಬೀಳ್ಕೊಂಡು ॥ ತಿರುಗಿದನು
ದಾನವಚತುರ್ಬಲ । ವುನುವಣಿಸಿಕವಿಕರಲುಸುತಳವ । ನಿರದೆಹೊಕ್ಕನುಬಲಿಪಿತಾಮಹನೊಡನೆನಲವಿನಲಿ ॥ ೧೮ ॥ ಧರಣಿಪ
ತಿಚಿತ್ತೈಸುವಿಶ್ವಂ । ಭರನವಿವಿಧವಿಚಿತ್ರಲೀಲಾ । ಚರಣೆಗಳನಾರೇನನರಿವರುನಿಜಪದಾಂಬುಜದ ॥ ಶರಣಸೈದಿದಮುನ್ನವೇಕ
ಡು । ಗರುಣಿರೂಪಾಂತರವನಂಗೀ । ಕರಿಸಿಸುತಳದಲತ್ತುಭಕುತನಬರವನಾಲಿಸುತ ॥ ೧೯ ॥ ವಿಶ್ವವಿಭುವಿನನೇಮದಲಿಹರಿ ।
ಯಶ್ವಕೋಟಿಪ್ರಭೆಗೆಮಿಗಿಲೆನೆ । ವಿಶ್ವವಿಸ್ಮಯಕರವೆನಿಪನಿಜಕೌಶಲವಮೆರದು ॥ ಅಶ್ವಗಜಶಾಲಿಕೆಗಳಸೆಯಲು । ವಿಶ್ವಕರ್ಮನು
ನೆನೆದುನಿಮಿಷಗೆ । ವಿಶ್ವವಭಿಮತವೆಸವಮಣಿಮಯಪುರವನಿರ್ಮಿಸಿದ ॥ ೨೦ ॥ ಹೊಳಹೊಳವನವರತುನದುಭವ । ನಿಳ
ಯವೆನಿಸುವಹೊನ್ನಪರಿಚಯ । ಕೆಲಸಗತಿನೋಡುವರಕಂಗಳಗೊಡ್ಡುಬಲೆಯನಲು ॥ ಥಳಥಳಿಪಮಣಿಕನಕರಶ್ಮಿಗ । ಳೊಳಗೆ
ಸುಳಿಸುಳಿಸುಳಿದುಪರಿವಾಂ । ಡಳಿಸಿತಿಮಿರವನರಸಿಕಾಣದೆಮರಳ್ವತೆರನೆಸೆಯೆ ॥ ೨೧ ॥ ವಾರಣದತಳಿಗೆಗಳಮುತ್ತಿನ । ತೋರ
ಣದಹೊಂಜಗಲಿಗಳಪಾಂ । ನೀರೆಳಲೆಯದಬಿಗಿದಮೇಲ್ಕಟ್ಟುಗಳಬೀದಿಗಳ ॥ ಕೇರಿಕೇರಿಗಳೊಳಗೆರಡುನ । ದ್ವಾರದಲಿಮನೆಮನೆಗ
ಳೆಸೆಯಲು । ಸಾರವಸ್ತುಗಳಿಂದನಿರ್ಮಿಸಿತೋರಿದನುಪುರವ ॥ ೨೨ ॥ ಅತ್ತಲಂನೆಗಬಲಿಮುಕುಂದನ । ಭಕುತವತ್ಸಲತನಕೆಬೆರೆ
ಗಾ । ಗುತ್ತಮಯ್ಯಾನುತ್ತನಿಜಕೃತಕೃತ್ಯಯವನೆನದು ॥ ಹೊತ್ತಹರುಷದಭಾರದಲಿಕುಸಿ । ಪುತ್ರಪುರಜನಪರಿಜನಂಗಳ । ಮೊತ್ತ
ದಲಿಸುತಳಾಲಯಕೆನಡೆತಂದನೊಲವಿನಲಿ ॥ ೨೩ ॥ ಹಲದುಹರಿಕಿಂಕರರಬರವನು । ಹರಿಜನದಹರಿಚಾರರರುಹಲು । ಹರಿಯ
ನೇಮದಲಖಿಳಸುತಳನಿವಾಸನಿಕುರುಂಬ ॥ ವರವನಿತೆಯರಕರದಚಾಮರ । ಕರಸಿಹಿತಕನ್ನಡಿಗಳೆಸೆಯಲು । ನೆರದುಬಹುಮಂಗ
ಳರವದಲಿದಿಗೆರ್ಗೊಂಡರಾಹರಿಯ ॥ ೨೪ ॥ ಬಂದುಕಾಣಿಕೆಗೊಟ್ಟುಚರಣ । ದ್ವಂದ್ವದಲಿನ್ಯೆಯಿಕ್ಕಿಪರಮಾ । ನಂದದೊಳಗೋ
ಲಾಡಿದರುಭಾಗವತದರುಶನದ ॥ ನಿಂದಪರಿಜನಪುರಜನಂಗಳ । ವೃಂದವನುಮಂನಿಸಿಪಿತಾಮಹ । ನುಂಬೆತಾಹಿಂದೆನಲುಬಂ
ದನುಬಹಳಜನಸಹಿತ ॥ ೨೫ ॥ ಇದುಪಿತಾದ್ರಿಯಗಂಹರವೊಮೋ । ಣಿದುಧರಿತ್ರಿಯಹೃದಯಕೋಟರ । ವಿದುಸುರತ್ನಾವಳಿಯ
ಬಯಕೆಯಬಹಳಕರಡೆಗೆಯೊ ॥ ಇದುವಿರಂಚನಸೃಷ್ಟಿಯೋಕೊ । ಗದಿರುಹೋಮಾಣಗಳುಪ್ರವರುಣ । ಕದಕುಮಂತ್ರಿಗಳೆಂಬ
ರವದಲಿಹೊಕ್ಕನಾಹೊಳಲ ॥ ೨೬ । ಹೇಳಲಹೊಗುತರತನುಮುಕುಂದನು । ಹೋಳವಹೊಸಮೇಘವನುಮಿಂಚಿನ । ಬಳಗದಲಿ
ಬಿಗಿದಂತೆಥಳಥಳಿಸಿರ್ದಕಾಂತಿಯಲಿ ॥ ಬಿಲದದಶಸಾಹಸ್ರಯೋಜನ । ವಳಯವನುನಿಜಧಾಮದಲಿಮು । ಕ್ಕಳಿಸಿದಮಳಪ

ಮಿದೇನೇನೆಂದುಬೆರಗಾದ ॥ ೨೭ ॥ ಹಂಬಲೋನೇಣಿದುಮನದಬರಿ । ಯಂಬಕಭ್ರಮೆಯೋನಿಜಪ್ರತಿ । ಬಿಂಬವ್ರೊನೋ
ದುಮುಕುಂದನವಿಮಳವಿಗ್ರಹದ ॥ ಅಂಬುಜದಪ್ರಭೆಗಳನುಕನಕದ । ತಂಬುಗೆಯಜತುಂಬಿರಿಸಿದನು । ಯಂಬಕಳಕಳದೊ
ಳಿವಿಗೆಬೆರಗಾಗೆನಡೆತಂದ ॥ ೨೮ ॥ ಹೊಲಬುದಪ್ಪಿವಿಕುಂಠವಾಸಿಯ । ಹೊಳಲಹೊರೆಗೈತಂದನೋಮೋ । ಕೊಲಿದುತಾನೇ
ದನೋಬಲಿವಾಸಪಲ್ಲಟವೊ ॥ ತಿಳಿಯಬಾರದಿದೇನೆನಲುಕಳ । ಕಳವಕೋಹೋಮಾಣುಕರುಣಾ । ಜಲಧಿನಿನಗಾಳಾದನೆಂ
ದುಚರರುಕ್ಕಿನೆಗಹಿ ॥ ೨೯ ॥ ಎಲವೊಹುಸಿಯದಿರೇನುಧಿಟವೇ । ತಿಳುಹುನಿರುತವನೆನಲುವಿನ್ನಹ । ನಳಿನನಯನಿದನಾಭಿನಳಿ
ನಾಲ್ಕುತ್ರೋಳುಗಳ ॥ ಹೊಳೆವಪೀತಾಂಬರದವಕ್ಷೆ । ಸ್ಥಳದಹಜ್ಜೆಯಹಂಗಿಗನುಕಂ । ಗಳಗೆದೂರಬೆಳಾಣಬಂದುದುದೇವ
ನೆಂದ ॥ ೩೦ ॥ ತಂದೆಯಾವೆಡೆತೋರುತೋರುಮು।ಕುಂದನಾವೆಡೆತೋರುಪರಮಾ। ನಂದನಾವೆಡೆತನ್ನನೋಹನಜನ್ಮತರು
ಣದ ॥ ಹಿಂದೆಹತ್ತುವನಿಗಮನಿಲುಕದ । ನಿಂದರಾವನುತೋರಿಸೆನುತವೆ । ಮುಂದುವರಿದನುಮುಗಿದಕರತಳಪಲ್ಲವಾಗ್ರದಲಿ।
ಗುತಕಂಡನುಬಾಗಿಲಲಿನಸು । ನಗೆಯಕೋಮಲಕಮಲನೇತ್ರದ । ಲೊಗುವಕರುಣಾವೃತದಲಹರಿಯಮಕರಕುಂಡಲದ।
ದುಪತಿಪಡಿವಳತನದಲೀ । ಲೆಗೆಸವರಾಹಿತನಾಗಿಕಂಬಿಯ । ಹೆಗಲಲಿರಲೋರಂತೆಬಲುಬೆರಗಾಗಿನೋಡಿದನು ॥ ೩೨ ॥ ಅಸ
ಜನಸಹಿತತನುವನು । ಸೂಸಿದನುಬಲಿನಿಗಮನಿಕರಕೆ । ವಿಸಲಳಿಯದಬಹಳಸಂವಿದ್ರೂಪನಂಘ್ರಿಯಲಿ ॥ ಬಾಸಣಿಸಿದನು
ಯುದರಮೇಲು । ವಾಸಿನಲಿಶಿಶುಹೊರಳುವಂದದ । ಲಾಸುಕೃತಿಗಳದೇವತಾಹೊರಳಿದನುಚರಣದಲಿ ॥ ೩೩ ॥ ಕೆಡಿಸದಿರುಕಾ
ವನುಕೇಳೆಂ । ನೊಡವೆಯಿದುತ್ರೈವಿಕ್ರಮಾಹ್ವಯ । ವಿಡಿದೆತಾನಿದರಿಂದಲಲ್ಲದೆಯಿಲ್ಲಹೆಸರೆನಗೆ ॥ ಹುಡಿಯೊಳಗೆಹೊತಬಿಸದಿ
ಳೆಂ । ದೊಡನೊಡನೆಪ್ರಹ್ಲಾದನನುವ್ಯ । ದಡವಿತರ್ಕೈಸಿದನುಸೇವಕರಿಬ್ಬರನುಕರದು ॥ ೩೪ ॥ ಬೋಳವಿಪಿನಿಜಭಕ್ತ
ಬ್ಬರ । ಮೌಳಿಯಲಿಕೈಯಿಟ್ಟುಪರಿಜನ । ಜಾಲವನುಮನ್ನಿಸಿದನವರವರಿಷ್ಟವರಗಳಲಿ॥ ಮೇಳೆಯವಬಿಡಿಸಿದನುವಿವಿಧವಿ । ಶಾ
ಮಂದಿರಗಳಲಿಪರಮಕೃ । ಪಾಲಯನುಸಂಮೇಳವೆಸೆಯಲುಹೊಕ್ಕನಾಪುರವ ॥ ೩೫ ॥ ಮುಕುರನಿಭಭವನಿಕೆಯಗೋ
। ಧಿಕರಚಿತಭಿತ್ತಿಗಳನವಮಾ । ಮುಕರಕರಚಿತಪರಿಕರದವರವಜ್ರಸಂಘಗಳ ॥ ಪ್ರಕಟವಿಭವದಭವನಲಕ್ಷ್ಮಿಗೆ । ಸಕ
ಲನಬೆರಗಾಗಲಬುಜಾಂ । ಬಕನಭಕ್ತಸ್ನೇಹಸಂಸಾರಿಕನುವಿಭವದಲಿ ॥ ೩೬ ॥ ಅತ್ತಲಜಭವಮುಖ್ಯರಾತನ । ತೊತ್ತುಗೆ
ಲವಹಡೆಯದಳಲುವ । ರಿತ್ತಲಾಪರತೈಪಪ್ರೋಲ್ಲೈಸೂದುಸುರರಿಪುವ ॥ ಅತ್ತಲರಸುವಶೃತಿಗೆಮಾನದ । ಹೊತ್ತುಸುಳಿದುದು
ನದೊಡನೆತಾ । ನಿತ್ತಲಾಬಲಿಪುರದಪಾಲನೆಲೀಲೆಗೆಳಸಿದನು ॥ ೩೭ ॥ ಆವನನುಲಕ್ಷಣಗಳಿಂದವೆ । ದೇವರನುಬೋಧಿಸುವ
ನಿಗ । ಮಾವಳಿಗಳತಿಹಾಸಸಹಿತಪುರಾಣರಾಶಿಗಳು ॥ ಆವನನಿದಂಪ್ರತ್ಯಯದಲನು । ಭಾವಿತನುತಾನಾವನಾತನ । ನೀಬಿ
ಧರಿಪುಕಂಡನಾಗೋಪುರಪುರಾಣದಲಿ ॥ ೩೮ ॥ ಕೃತಿಗಳಿಗೆನೆಲೆಯಾಯ್ತು ನಿರ್ಮಲ । ಮತಿಗಳಿಗೆಕುರುಹಾಯ್ತು ಮುನಿಸಂ ।
ಗಳಿಗೆದೃಷ್ಟವ್ಯವಾದುದನಂತರಾಳದಲಿ ॥ ಕ್ಷಿತಿಗೆಮಂಗಳವಾಯ್ತು ಲಕ್ಷ್ಮೀ । ಪತಿಗೆಸಂಸ್ಥಿತವಾಯ್ತು ಭವದು । ಷ್ಕೃತಿಗೆದು
ಮವಾಯ್ತು ಯರವನೆವರವಿಲೋಚನಿಯ ॥ ೩೯ ॥ ಅರಸಕೇಳನವರತಕರುಣಾ । ಶರಧಿಯಂಘ್ರಿಯಭಜಿಸಿಧರಣಿಯ ।
ರಳುಗೊಂಬನುಮಾಣದೀಕ್ಷಿಸುವನುಮುರಾಂತಕನ ॥ ಕರಗುವನುಸದ್ಭಕ್ತಿಯಲಿವ್ಯೈ । ಮರದುಪರಮಾನಂದರಸದು । ಬ್ಬರ
ನೆಳೆಪರಿವಂತನೇನೆಂದರಿಯನಿಹಪರವ ॥ ೪೦ ॥ ಹೇಳಲೇನದನಾತನುಂನತಿ । ಸಾಲದೇಸನಕಾದಿಗಳಹೇ । ರಾಳಹೊಕ್ಕಳಿಹಿಂ
ತಾತನಮನೆಯಬಾಗಿಲಲಿ ॥ ವಾಲಗಿಸುವಳುಮುಕ್ತಿಯಂಗನೆ । ಸಾಲಸಿದ್ಧಿಗಳೊಡನೆಭಕ್ತಿಯ । ಮೌಳಿಮಣಿಯುಂನತಿಯನ
ವರ್ಣಿಸುವಡರಿದೆಂದ ॥ ೪೧ ॥ ಮರೆದಸ್ಯೈಹಿಕಲೋಕಗತಿಯನು । ತೊರೆದನಾಮುಷ್ಟಿಕವನೇನೆಂ । ದರಿಯನೀಸಂಸಾರದುಸ್ಸ
ಹುಖದಾಯಸವ ॥ ನೆರೆಪಿತಾಮಹಸಹಿತತಾನ್ನೈ । ಸರವತಂನಸಮಸ್ತಭಾರದ । ಹೊರಿಗೆನಿತ್ಯಾತುಮನದೆಂದಸುರಾರಿಸುಖವ
ನ ॥ ೪೨ ॥ ಸಂಧಿಯೆಂಟೆನಲಿದರೊಳಗೆಪದ । ಬಂಧನಾಲ್ವತ್ತೆರಡುಕಾಂಸ್ತುಭ । ಕಂದರನುವ್ಯರೋಚನಿಯನಳವಡಿಸಿದಾನದ
॥ ಬಂದುತಾನೆನೆತ್ರಿದಶರಿಂಗೆವ । ಸುಂಧರೆಯಬೇಡಿತ್ತುನಿರ್ಜರ । ಸಿಂಧುಜನಕನುಬಲಿಯಬಾಗಿಲಕಾಪ್ಪಸುತಳದಲಿ ॥ ೪೩ ॥

ಅಂತು ಸಂಧಿ ೨೦ಕ್ಕಂ ಪದನು ೬೮೩೪ಕ್ಕೆ ಮಂಗಳಮಸ್ತು

ಇಪ್ಪತ್ತೊಂದನೆಯ ಸಂಧಿ.

ಸೂಚನೆ ॥ ಬಲಿಮಥನಸುರನಿಕರರಕ್ಷಾ । ಕಲಿತಲೀಲಾಕಥನಕಾಮಿತ । ಫಲವನಾನತಜನರಿಗೊಲ
ವಿಂದೀವನಿಜಸದನ ॥ ... ...

ಪದನು ॥ ಕೇಳುನೃಪನಿಜಭಕ್ತನಿಕರದ । ಯಾಳುಭಕ್ತಾಧೀನಭಕ್ತಾ । ಲೋಲುಪನುಭಕ್ತಪ್ರಕರಪಾಲಕನುತಾನೆಂ
॥ ಸಾಲಬಿರುದಿನಬೆಳವಿಗೆಯಕೈ । ಮೇಳವಣೆಯನುಮೆರದುಹರಿನೆರ।ದೋಲಗದಮಧ್ಯದಲಿನಕ್ಷತ್ರಿಂತೆಂದಭ್ಯಗುಸುತ್ರನ॥ ೧ ॥

ಹರಮುನಿದುಹಣೆಗಂಣತೆರೆದರೆ | ಗುರುವಲಾಕಾವವನುಕಾಣೆನು | ಗುರುಮುನಿದಡಾಹರಿವಿರಿಂಚಿಸುರೇಂದ್ರಮುಖ್ಯ
ಲಿ ॥ ಪರಿಹರಿಪದೈವವನೆನಿಸ್ಪೀ | ಸರಣಿಗಪೇಕ್ಷಣವುನೆರೆಗೋ | ಚರಿಸುತ್ತಿದೆಲೆನಿಂನಶಿಷ್ಯನರಾಜ್ಯವಿಭ್ರಂಶ ॥ ೨
ಗುರುವಚನವೇವೇದವಾಗುರು | ಪರಿಪರಿಯಸತ್ಕರ್ಮಗುರುವೇ | ಹರಿಹರಬ್ರಹ್ಮಾದಿದೇವರುಗುರುವೆಪರತತ್ವ ॥ ಗುರುಕಣ್ಣ
ಶ್ರುತಿರಹಿತನೆಂಬುದ | ನರಿಯದಾಗುರುಮರ್ತ್ಯನೆಂಬೀ | ಮರುಳುಮಾನವಪಶುಗಳಿಗೆಗತಿಯಾವುದಕಟೆಂದ ॥ ೩ ॥ ಕೋ
ವಿರಹಿತನಪಗತಾತ್ಮಪ | ರಾಪರಬ್ರಹ್ಮೈಕವಿಗ್ರಹ | ನೀಪರಮಗುರುವೆನಿಸುವನನುತತ್ಪರನೆವರಶಿಷ್ಯ ॥ ಶಾಪಪರಿಯಂತ್ರಕಟ
ಪ್ಯಕೃ | ತಾಪರಾಧವಜಗವರಿಯೆನಿ | ಶ್ಯಪನೇಗುರುದೈವಕೃತಿಪರಿಹರಿಸಲಳವಲ್ಲ ॥ ೪ ॥ ದೇವನಿಂತೆನೆಕೈಮುಗಿದುಭೂ
ದೇವವರನಿಂತೆಂದನೆಂನಲಿ | ದೇವರಾವುದನೊಹಿಪಿದಿರುಪಸಂನವಲೆತನಗೆ ॥ ದೇವಯಂತ್ರಗನಿರಲುಯಂತ್ರ | ಶ್ಯಾವಗು
ದೋಷಂಗಳಂನನು | ದೇವಬೇರೆಂನದಿರುಭಕ್ತರಭಾವಹರಿದೆಂದ ॥ ೫ ॥ ಎಂದುಚರಣದಲೆರಗಿಭಾರ್ಗವ | ನಂದನನುವೃಸ್ಯಿ
ಕ್ಕಿರಲುಹರಿ | ಯಂದನಗುತ್ತೇಳೇಳುಧಿಟವೇನಪಚಾರಿಕವೆ ॥ ಮಂದಮತಿಗ[illegible]ಮುನವರಿಯಬೇ | ನೆಂದಡೇನದುಫಲವೆವಿವ
ಖದ | ಲೆಂದಿನುಡಿವುದುದೈವಶಾಪವಿಶಾಪರೂಪದಲಿ ॥ ೬ ॥ ವಿಪ್ರಮುಖವೇಮುಖವೆನಗೆತ | ದ್ವಿಪ್ರಮೂರ್ತಿಯೆಮೂರ್ತಿ
ನಗಾ | ವಿಪ್ರವಚನವೆವಚನವಿಪ್ರಾಚಾರವಾಚಾರ ॥ ವಿಪ್ರದೈವವೆದೈವವೆನಗಾ | ವಿಪ್ರಪೂಜೆಯೆಪೂಜೆನೋಳ್ಪಡೆ | ವಿಪ್ರತು
ಯೆತುಷ್ಟಿವಿಪ್ರಸ್ತುತಿಯೆನುತಿಯಂದ ॥ ೭ ॥ ಜಗವುದೈವಾಧೀನದೈವಾ | ವಳಿಗೆಮಂತ್ರಾಧೀನಮಂತ್ರಾ | ವಳಿಗೆವಿಪ್ರಾಧೀ
ವಿಪ್ರಾವಳಿಗಳಾಧೀನ ॥ ಬಗೆಯೆವಿಪ್ರಾಧೀನನಾನೋ | ಲಗಿಸುವೆನುತದ್ವಿಪ್ರಪದರೇ | ಣುಗಳನಾದರದಿಂದಧರಿಸುವೆನುತ್ತಮಾ
ಗದಲಿ ॥ ೮ ॥ ವಿಪ್ರಪಾದಾನುಪದಪುಣ್ಯರ | ಜಪ್ರಭಾವಿತಗಾತ್ರನಾನೆಂ | ನಪ್ರಪದಜಲಲೋಕಪಾವನವಾಯ್ತುಜಗವರಿಯೆ
ಅಪ್ರಮಾಣವಿದೆಂದಡೀಗಂ | ಗಾಪ್ರವಾಹವನೋಡಿತಿಳಿವುದು | ವಿಪ್ರಸೇವಾಫಲದಪರಿಪಾಕಪ್ರಭಾವವನು ॥ ೯ ॥ ಭೃಗುಕ
ಲೋದ್ಭವಕೇಳುಶಿಷ್ಯನ | ಮಗುವುತನವನುನೋಡದಾತನ | ನೆಗಹಬೇಹುದುನೆನೆಯಲಾಗದುನಿಜಗುಣಾಗುಣವ ॥ ಬಗದ
ಕರ್ಮಚೆಟ್ಟಿದ್ರವಾದುದು | ಮಗುಳೆಪರವನ್ನೈದಿಕೆನೆಕ್ಕೈ | ಮುಗಿದುಭಾರ್ಗವಮುನಿಮುಕುಂದಂಗೆರಗಿನಗುತೆಂದ ॥ ೧೦ ॥ ಅಸ
ರರಿಪುಚಿತ್ತೈಸುಮಂತ್ರ | ಛ್ಯಸನದಲಿಮಂತ್ರದಲಿಕಾಲದ | ಲೆಸವದೇಶದ್ರವ್ಯದೇವತೆಗಳವಿಭಾಗದಲಿ ॥ ಎನಗಿದಪೆವೈಷವ
ಕಾಪನ | ಹೆಸರುಗೊಳಲದನೇನುವನುಸ್ಯೆ | ರಿಸದುಗಡನೀನೊಲಿದಬಳಿಕಿಂನಾವುದರಿದೆಂದ ॥ ೧೧ ॥ ವಿಪುಳತರಪೀಯ
ಸೇವಾ | ತುಪ್ರಪುದನಾವಂಗಿಂನುಬೇರು | ಪ್ರಸಿಯಪರಿಭವನೇಕೆಸಾಕ್ಷಾತ್ಕರಿಪಿನಿಂಮಡಿಯ ॥ ಕೃಪೆಯಲೋಲಾಡುವಡೆಕಾಲ
ಕ್ಷೇಪಿತದುಷ್ಕೃದುಷ್ಟಸುಖಲೋ | ಲುಪತಿಯಂಟೇಕರ್ಮಕೋಟಾಕೋಟಿಗಳಲೆಂದ ॥ ೧೨ ॥ ಯಾಗಫಲತಾನಾವುದನುಪಮ
ಯೋಗಸಿದ್ಧಿಯದೇನುವಿಷಯವಿ | ರಾಗಸಿದ್ಧಿಯದಾವುದಖಿಳಾಮ್ನಾಯಮತವೇನು ॥ ಕೂಗುತದೆಕುರುಹಿಟ್ಟಕಾವ್ಯವಿ | ಭ
ಗಯೋಗಸಮಾಧಿಯುಲ್ಲದೆ | ಬಾಗಿಲಲಿಪರದೇಂಮಲಕ್ಷಿತನಾಯ್ತುಶಿಷ್ಯಂಗೆ ॥ ೧೩ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ
ಯಾಕೆಸುರತರುವಿರಲುಶಾಲ್ಮಲಿ | ಯಾಕೆತರುಸುರಧೇನುವಿರೆತಾ | ನೇಕೆಘುಸ್ಕರನಿರಲುದೀಪಪ್ರಭೆಯಹಂಗೇಕೆ ॥ ಯಾಕೆನಿ
ಯಿರೆದಿನಸಂಶಯ | ವೇಕೆನಿಜವಿದ್ಯವಿರೆವಿದ್ಯವ | ದೇಕೆವೇದವಿರಕ್ತನಿನಿರೆಬೇರೆಬಗೆಯಾಕೆ ॥ ೧೪ ॥ ಏಕೆಸತಿಸುತರಿರಲ
ತನುವಿರ | ಲೇಕೆಸುತರಾತನುವಹಂಮಿರ | ಲೇಕೆಹಂಮದುಚೇತಚೇತನವಿರಲದಿಲ್ಲದಡೆ ॥ ಏಕೆಸತಿಸುತರೇಕೆತತ್ತನು | ವೇ
ಹುಮದುಜೀವನುಳ್ಳಡೆ | ದೇಕೆತಾನೆಂದರಿಯದವತಾನಿಂನನರಿಯದಡೆ ॥ ೧೫ ॥ ಯಾಕೆಸಾಧನಮುಖವಿರಲುಮುಖ | ವೇಕೆ
ಲಪಿದಭೋಗವಿರೆಫಲ | ನೇಕೆಭೋಗವದೇಕೆಸುಖವಿರೆಸುಖವದಿಲ್ಲದಡೆ ॥ ಯಾಕೆಸಾಧನವೇಕೆಸುಖಫಲ | ವೇಕೆಭೋಗವ
ಕೆಸುಖಸುಮ | ದೇಕೆತಾನೆಂದರಿಯದವತಾನಿಂನನರಿಯದಡೆ ॥ ೧೬ ॥ ಯಾಕೆರವಿಯಿರೆದೀಪರವಿತಾ | ನೇಕೆದೃಷ್ಟಿಗಳಿರಲ
ದೃಷ್ಟಿಗ | ಳೇಕೆಮನವಿರಲೇಕೆಮನವರಿವಿರಲದಿಲ್ಲದಡೆ ॥ ಯಾಕೆದೀಪವದೇಕೆರವಿದೃ | ಕ್ಕೇಕೆಮನವೇಕಾಳ್ವಮರವೆಯ | ದೇ
ತಾನೆಂದರಿಯದವತಾನಿಂನನರಿಯದಡೆ ॥ ೧೭ ॥ ಯಾಕೆಬಲವೀರ್ಯವಿರೆವೀರ್ಯತೆ | ಯಾಕೆತನಗಮರತ್ವವಿರಲುಮ | ದೇಕೆತನ
ಮರತ್ವನಿತ್ಯತೆಯಿರಲದಿಲ್ಲದಡೆ ॥ ಯಾಕೆಬಲವಾವೀರ್ಯವಮರನ | ದೇಕೆನಿತ್ಯತೆಯುಳ್ಳಡವುತಾ | ನೇಕೆತಾನೆಂದರಿಯದಾತನೆನಿ
ನನರಿಯದಡೆ | ೧೮ ॥ ಯಾಕೆಪ್ರೋಷಣಪುಷ್ಟಿಯಿರೆತಾ | ನೇಕೆಪುಷ್ಟಿಮಹತ್ವವಿರ್ದಡ | ದೇಕೆತನಗೆಮಹತ್ವಪೂರ್ಣತೆಯಿರ
ದಿಲ್ಲದಡೆ ॥ ಯಾಕೆಪ್ರೋಷಣಪುಷ್ಟಿಮಹಿಮೆಯ | ದೇಕೆಪೂರ್ಣತೆಯುಳ್ಳಡದುತನ | ಗೇಕೆತಾನೆಂದರಿಯದವತಾನಿಂನನರಿಯದಡೆ
ಲೋಕವಿಂತೈತವಯವಾಭಾಸ್ಯೈಕದೇಶಶೆತಾಂಶವನುನಸು | ಸೆಂಕಿಸೋಂಕುವುದುದುಕ್ಕುವುದುಮೈಮರವುದದಕಾಗಿ ॥ ತೇ
ವುಪತಲೆಕೆಳಗಹುದುಸು | ವ್ಯಾಕುಲತ್ವವನೈದುವುದುಪರಿ | ಶೋಕಿಸುವುದೆನಲೆಂತಟೋತಾದಾತ್ಮ್ಯಸಿದ್ಧಿಯದು ॥ ೨೦
ಏಕಖಂಡಾವಯವಪಂಚಕ | ದೇಕರಸವೆನಿಸಿದಪರಾತ್ಮನಿ | ಜೈಕವಿಗ್ರಹನಾದನೀನಿರೆಬಲಿಯಬಾಗಿಲಲಿ ॥ ಲೌಕಿಕದಕೃತ್ಯಾ
ಸಂಧಿಯ | ದೇಕೆನಿಂಮಡಿಗೀವಿಡಂಬನ | ಸಾಕುಸಂಶಯವೇನುಭಕ್ತವ್ಯಸನಿನೀನೆಂದ ॥ ೨೧ ॥ ವಶದಲಿಹುದೀಲೋಕವವ

। ವಶದಲಿಹರಮರರುಸುರೇಂದ್ರನ । ವಶದಲಿಹನಮರೇಂದ್ರನಾಸರಸೀರುಹೋದ್ಭವನ ॥ ವಶದಲಿಹಲಜನಿನ್ನವರಾಯಿಯು । ವ
ಶದಲಿಹಳಾವರಾಯೆನಿನ್ನಯ । ವಶದಲಿಹನೀನಾಬಲೀಂದ್ರಂಗಾರುಸರಿಯುಂದ ॥ ೨೨ ॥ ಜೀಯ್ಯಬೆಸಸೊದೆನಗೆಯಾವವಿ ।
ಧೀಯುವಾಪರಿಚರಿಯುವರನಿ । ಶ್ರೀಯುಸವಲೇತನಗೆನಿಂಮಡಿಕೃತ್ಯವನುಬೆಸಸೆ ॥ ಕಾಯಸಫಲವೆನುತ್ತಭಾರ್ಗವ । ರಾಯುಮು
ಕುಂತೀರವನುಪ್ರೊ ; ರಾಯುಪುಳಕೋದ್ಗ್ವವದಲಿಹೊಂಗಿದನುಹೊರೆಯೇರಿ ॥ ೨೩ ॥ ಹರುಷದಲಿಮುನಿರಾಯನಂಗೀ । ಕರಿ
ಸಿಯಾಜ್ಞೆಯನುಚರಣಾಂ । ಬುರುಹದಲಿಮೈಯಿಕ್ಕಿವಿನಯದಲೆರಗಿಬೀಳ್ಕೊಂಡು ॥ ಪರಮಋಷಿಗಳುಸಹಿತಬಲಿಯು । ಧ್ವರ
ಪ್ರಸಲೆಸಂಪೂರ್ಣವೆನಿಪಿ । ಸ್ತರಿಸಿದನುಸತ್ಕರಿಸಿದನುಹರಿಯೆಂಗವಿಸ್ಮಯವ ॥ ೨೪ ॥ ಬಂದನವನಿಗೆಲೋಕಪಾಲರೆ । ಸಂದಣಿ
ಸುಸಡಗರದಸಂಭ್ರಮ । ದಿಂದಚಿಮಾಮರಚೌಮರದಪಲ್ಲವದಸತ್ತಿಗೆಯು ॥ ಗೊಂದಣದಬಹುವಿಧದವಾದ್ಯದ । ದುಂದುಭಿಯುಕಹ
ಳೆಗಳಕಳಕಳ । ದಿಂದಹರಿಯಿರಲಮರವಲ್ಲಭನಾನೆಯಿಂದಿಳಿದ ॥ ೨೫ ॥ ತುಂಬಿತುಳಿದುದುಗಗನವಮರಕ । ದಂಬವನುಕಾರಿದ
ಹ್ರೊಲದನೇ । ನೆಂಬೆನನುವಿಷಮಯವೆಯಾದುದುಭುವನಕಾಲೂರಿ ॥ ಇಂಬುಗೊಳಲೆಡೆಯುಂಟೆಸಾಕುವಿ । ಡಂಬವೇಕೆನಲಮ
ಚೆಯುವಾ । ಡಂಬರದಲೈದಿದರುಪೀತಾಂಬರನಸಂನಿಧಿಗೆ ॥ ೨೬ ॥ ಜಯನವೋನಿರವಂದ್ಯನಿರ್ಗುಣ । ಜಯನವೋಜಯ
ವಾದಿಸದ್ಗುಣ । ಜಯನವೋಮುನಿಹೃದ್ಯಮುಕ್ತಾವೃದ್ಯಸಂವೇದ್ಯ । ಜಯನವೋಬ್ಜಭವಾದಿವಂದ್ಯನೆ । ಜಯನವೋಭವ
ರೋಗವೈದ್ಯನೆ । ಜಯನವೋಯೆನುತೆಂಡಲನೀಡಾಡಿದನುಹರಿಪದಕೆ ॥ ೨೭ ॥ ಕನಕಮಣಿಮಯಮುಕುಟರಶ್ಮಿಗ । ಳನುಕೆ
ಸಕೇಸರವನಳಿಕುಲ । ವೆನುನಯನಚಯಕರತಳಂಗಳೆಯುಳಿಕುಲಂಗಳನೆ ॥ ಅನುಕರಿಸಲಂದೆಸೆದುದಮೃತಾ । ಶನಸಭಾಶೇರಥಿಯು
ಹರಿಪದ । ವನಜವಾತ್ರೈಲೋಕ್ಯಲಕ್ಷ್ಮಿಗೆನಿಜನಿವಾಸವೆನೆ ॥ ೨೮ ॥ ಜೀಯಬಿಂನಹಬಡುಕಿದೆವುಭವ । ದೀಯಕಾರುಣ್ಯದ
ರಿಪುಭಯ । ಬೀಯುವಾದುದುಬೇಗೆಬಿಟ್ಟುದುಮನದಮೈವಳಿಯು ॥ ಮಾಯಿಬೀತುದುದೇವಕೃತ್ಯದ । ಸಾಯಸಕೆಬೇಸರದ
ಕತ್ತನಿ । ಕಾಯವನುಕೈಗಾಯ್ದಯೆಂದೆರಗಿದನುಸುರನಾಥ ॥ ೨೯ ॥ ದೇವಚಿತ್ತವಕರುಣಿಸುವುದಮ । ರಾವತಿಗೆಮನದೊಲ
ವಿರಾ । ಜೀವನಿಭದಳನಯನಬಿಜಯಂಗೈವುದೆಂದೆನಲು ॥ ದೇವನಗುತಿಂತೆಂದನಮಗಿಂ । ನಾವಕೃತ್ಯವದಲ್ಲಿಬಿಜಯಂ ।
ಗೈವುದೆಂದೆನೆಕೈಮುಗಿದುಬಿಂನವಿಸಿದನುಸುರಪ ॥ ೩೦ ॥ ಆವುದೆಂದೇನಾರ್ತನಿಕರವ । ಕಾವುದೇಕರ್ತವ್ಯವಾರ್ತೆಯು । ದಾವು
ದುಭವದುಃಖವೇಮತ್ತುಂಟೆಭವದುಃಖ ॥ ಪಾವುಸೋತ್ತವುನಿಂಮಡಿಗಳಂ । ನಾವುಭೃತ್ಯರುಕರುಣಿಸೆನೆಸಂ । ಭಾವಿಸಿದನಮ
ರೇಂದ್ರನನುಕರುಣವಲಿಹರಿನಗುತ ॥ ೩೧ ॥ ಬಂದುದೈರಾವತಮದೇಭವು । ರಂದರನನೇಮದಲಿಕೈಮುಗಿ । ದಿಂದುಮಂಪಿ
ರಕರಕಲಿತಚಾಮರದಸತ್ತಿಗೆಯ ॥ ಸಂದಣಿಯುಬೈದಿದನುಹರಿಸಂ । ಕ್ರಂದನನುಬಲವಂಕದಲಿಬರೆ । ಸಂದದಿಗಧೀಶ್ವರರು
ರಾಮದಲೈದಲೈತಂದ ॥ ೩೨ ॥ ಕೇಳುನೃಪತಿತ್ರಿಪುರಾರಿನಂದಿಯು । ಮೇಲೆಬಂದನುದಕ್ಷಿಣಾಂಕದ । ಲಾಳುದೋರಿದರಖಿಳಭೂ
ತಪ್ರಮಥಕೋಟಿಗಳು ॥ ತೂಳಿದರುತತ್ತೀಸಕೋಟಿಗ । ಳೋಲಯಿಸುತ್ತೈತರಲುರಾಜಮ । ರಾಳದಲಿರಾಜೀವನಂದನನಿಳಿದ
ನಭದಿಂದ ॥ ೩೩ ॥ ಕೊಲ್ಲಣಿಗೆಕಾತುಕವೆಗಗನವ । ನಲ್ಲಿಕಂಡವರಾರುದಿಕ್ಕಿಗ । ಳಳ್ಳಿಬಿರಿಯದೆಮಾಣದೆನಲೆತ್ತಿದಪತಾಕೆಗಳ ॥
ಮುಲ್ಲರಿಮಪಿಂಗುರಿಯಚಮರದ । ಪಲ್ಲವದಸತ್ತಿಗೆಯಲಪತಿ । ಮಲ್ಲನೆಡಬಲವಂಕದಲಿಮೋಹರಿಸಿಸಂದಣಿಸೆ ॥ ೩೪ ॥ ಅಲಘು
ರತುನವಿಮಾನಧರಣೀ । ತಳೆದಸುರವನಿತಾಲತಾವಳಿ । ಯಲಿವಶುಕಪಿಕಸಂತವಾಗಧಚಯದಚಾಮರದ ॥ ಸುಳಿವಕಳಹಂ
ಸೆಗಳಕಿಂನರೆ । ಕುಲವಧೂವ್ರತತತಿಯಮುಕ್ತಾ । ವಳಿವಿಲಾವಳಿಯಿಂದಮೆರೆದುದುನಭದವುದ್ಯಾನ ॥ ೩೫ ॥ ದೇವಕಟಕದಬ
ಹಳಲಕ್ಷ್ಮಿಯು । ನಾವಬಂಣಿಪನದುಭುತವೆರಾ । ಜೀವನಾಭನಕರುಣದಲಿಕೈಸಾರದಿಹುದೇನು ॥ ನಾವುಸೊಪ್ಪಾದವರುಗಗನ
ದ । ತೀವಿಸುಳಿದೈತರಲುಸುರಸಂ । ಜೀವನೆಂದಯಬಂದನಮರಾವತಿಗೆಮುದದಿಂದ ॥ ೩೬ ॥ ಚರರುಕೈಗುಡಿಗಳಲಿಸಾಯ್ದ
ರು । ಸುರನಗರಿಗುಬ್ಬಿದ್ದುಹರುಷದ । ಲುರವಣಿಸಿತಮತವಗೆಮುದದಲಿಪೌರಪರಿಜನರು ॥ ನೆರವಿಯಲಿಕೈನಗರುಸುರಭಿ । ಷ್ಟ
ರುನಿಗಮವಿಶ್ವಾಸನಪಯಣವ । ನೊರದರೋಸರೆಹೊರದರೋಪುರಜನರಿಗುತ್ಸವವ ॥ ೩೭ ॥ ತ್ರಿದಶಪೋಷಣಬಂದನಿದೆದು । ಹೃ
ದಯದೂಷಣಬಂದನುತ್ತಾ । ಭ್ಯುದಯಶೋಷಣಬಂದಪರಮಾನಂದನಿಧಿಬಂದ ॥ ಕದನಭೀಷಣಬಂದಮುನಿಜನ । ಹೃದಯ
ತೋಷಣಬಂದನಾಶ್ರಿತ । ಪದಗವೇಷಣಬಂದನೆಂದರುಚರರುಕೈನೆಗಹಿ ॥ ೩೮ ॥ ಪಡಿವಳರುನೂಕಿದರುದೇವಿಯು । ರಡೆಗೆಬಂ
ದರುತಾಯಿಕಟ್ಟಿಸು । ಗುಡಿಗಳನುಬೇಗದಲಿಜಂಗಮಜನ್ಮಸುರಭೂಜ ॥ ನಡದುಬರುತಿದೆಮಂದಿಯನುಹೊರ । ವಡಿಸುಬೇ
ಗದಲಿದಿರುಗೊಳ್ಳಿಂ । ದೊಡನೊಡನೆಸಾರಿದರುಸುರವಲ್ಲಭನಗೇಹದಲಿ ॥ ೩೯ ॥ ಕೇಳಿದರುಹರುಷದಲಿಹೃದಯವ । ಹೊಳಹು
ವಿಗೊಂಡತುಳಸುಖಕಂ । ಣಾಲಿಗಳಲಂಕುರಿಸಿತನುಪುಳಕದಲಿಪಲ್ಲವಿಸಿ ॥ ನಾಲಿಗೆಯಲೊಸರಿದುದೆನಲುದೂ । ತಾಳಿಗಳವಂನಿ
ಸುತಪರಿಜನ । ಜಾಲವನುಬೆಸಸಿದಳುಸುತದರುಶನದಲುತ್ಸವಿಸಿ ॥ ೪೦ ॥ ನೆಗಹಿದವುಗುಡಿತೋರಣಂಗಳು । ಬಿಗಿದವಂಬರತಳ
ವಮೇಲ್ಕ । ಟ್ಟುಗಳುಬಿಗಿದವುಬೀದಿಬೀದಿಗಳೊಳಗೆಬಳಸಿನಲಿ ॥ ಮುಗಿಲುಗಳುಮಂದಾರಪರಳನು । ಮೊಗದುಗಗನದಲಡರಿದ

ವ್ರಪುರ | ನಗರಿಕೈಗೈದುದುಮಹೋತ್ಸವದೊಳಗೆಸಂದಣಿಸಿ || ೪೧ || ಇಟ್ಟತ್ತೊಟ್ಟುದುಹರುಷದಲಿಕಂ | ಣಿಟ್ಟಕಾತಿಯರಮ
ರಲೋಕದ | ಪಟ್ಟಗೆಯರೂರ್ವಶಿತಿಲೋತ್ತಮೆರಂಭೆಮೊದಲಾದ || ದಿಟ್ಟಿಸಿದಡಳಲಿಸುವಕೈನಸು | ಮುಟ್ಟಡೆಮೋಹಿಸುವ
ಮದನನ | ಧಟ್ಟನಡಪುದುಕಳಸಕಂನಡಿವಾದ್ಯರಭಸದಲಿ || ೪೨ || ಸಿತಗಿರಿಯಶೃಂಗಾಗ್ರದಲಿಹೊಳ | ವತುಳಮಿಂಚಿನವಳಿ
ಯದಲಿಮು | ದ್ರಿತಬಲಾಹಕದಂತೆಪೀತಾಂಬರದಕಾಂತಿಯಲಿ || ಶತದಿವಾಕರತೇಜನೈರಾ | ವತಗಜಸ್ಕಂಧದಲಿಮೆರೆವ | ಪ್ರ
ತಿಮನನನುಕಂಡಖಿಳಜನಮುಳುಗಿತ್ತುಹರುಷದಲಿ || ೪೩ || ಕಂಗಳಹಮುಹಿನುಕೆಯಸಚ್ಯುತ | ನಂಗನಟ್ಟನನಾಕಿಮರಳವ |
ಹಿಂಗಿದವನಾಕಾಣೆನಂತಃಕರಣವೃತ್ತಿಗಳು || ಸಂಗಡಿಪಿಸಿಲುಕಿದವುಳ್ಳದಕರ | ಣಂಗಳನುಸಂನೋಳನದಜಿಹಿ | ರಂಗಭೂಪನೆ
ಬೀಳುಕೊಂಡುದುಸುರರಸಂಕುಲವ || ೪೪ || ಪಾಲಿಸಿದನವನತರನುಡಿಗಳ | ಪಾಲಿಸಿದನನವರತಭೀಷ್ಟವ | ಪಾಲಿಸಿದನೋರಂ
ತೆಪೊಗಳುವಸೂತಮಾಗಧರ || ಬಾಲಕಿಯರಂಗೈಯ್ಯತಳಿಗೆನಿ | ವಾಳಿಗಳಕೈಕೊಳುತಲಕ್ಷ್ಮೀ | ಲೋಲನಮರೋತ್ತಮರು
ಸಹಿತೈತಂದಸುರಪುರಕೆ || ೪೫ || ಇಳಿದುಗಜವನುಲೋಕಪಾಲರ | ಕೆಲವಮಾಣುವಧಾರುಗಳಕಳ | ಕಳದಪದರುಗ್ಧಕಣೆಯ
ನುಕೈಗೊಡುವಸುರಪತಿಯ || ತಳ್ತಿರ್ದುಲ್ಲರಿಸತ್ತಿಗೆಗಳಿ | ಕ್ಕೆಲದಚಾಮರದಬಲೆಯರಸಂ | ಕುಲದಲಂದಸುರಾಧಿರಾಜಾಲಯಕೆ
ನಡೆತಂದ || ೪೬ || ಸದನಕೈತರಲಾತ್ಮಸಂಭವ | ನಿದಿರುಬಂದಳುಪೊಡವಡಲುಹರ | ಸಿದಳುಹಾರೈಸಿದಳುದಾರೈಸಿದಳುತಂನೊಳ
ಗೆ || ಮುದದಮುತ್ತಿಕೆಯೊಳಗೆಕಾತರಿ | ಸಿದಳುಚೇತರಿಸಿದಳುತೆಗದ | ಪ್ಪಿದಳುತನಿಸುಖದೊಡಲನಾದಿದಳಶ್ರುಜಲಧಿಯಲಿ || ೪೭ ||
ಕೇಳಿದಳುವೃತ್ತಾಂತವನುಹಿಂ | ಹಾಳಿಮಿಗೆತೂಗಿದಳುಶಿರವನು | ಜಾಲಬೊಂಮದಬಳಕೆಕೌತುಕವೆನುತಮನದೊಳಗೆ ||
ಲೋಲಲೋಚನೆನೋಡುತಿರೆನ | ಟ್ಟಲಿಯಲಿಬೆರಗಾಗಲಕ್ಷ್ಮೀ | ಲೋಲನೊಯ್ಯನೆನಗೆಯಮಾಯೆಯಜನನಿಗೊದವಿಸಿದ ||
ಜನನಿಸಹಿತಸುರಾಧಿಪಸಿಂಹಾ | ಸನಕೆಬಿಜಯಂಗೈದನಜಭವ | ಮುನಿನಿಕರಕುಳ್ಳಿರಲುದಕ್ಷಿಣವಾಮಭಾಗದಲಿ || ದನುಜವೈರಿ
ಯನೇಮದಲಿತನ | ತನಗನಲಯಮನಿರುತಿಸಂಕ್ರಂ | ದನಧನದವರುಣಾದಿಗಳುಕುಳ್ಳಿರ್ದರೋಲೈಸಿ || ೪೯ || ಗರುಡಕಿಂನ
ರಸಿದ್ಧವಿದ್ಯಾ | ಧರಮಹೋರಗಯಕ್ಷರಕ್ಷೋ | ಪರವಸುಗಳಶ್ವಿನಿಗಳಾದಿತ್ಯರುಮರುತ್ತುಗಳು || ವರತಿಲೋತ್ತಮೆರಂಭೆಯೂ
ರ್ವಶಿ | ಯರುವಿಲಾಸದಲಖಿಳವಿಬುಧೇ | ಶ್ವರರುಕುಳ್ಳಿರಲೆಸೆದುದಮರಾಸ್ಥಾನವಭಿನವದಿ || ೫೦ || ಸೊರಿಗಳಸುಸ್ವರದತುಂ
ಬುರು | ನಾರದರನರ್ತಕರನಾಟ್ಯವಿ | ಶಾರದರವಂದಿಗಳವೈತಾಳಿಕರಮಾಗಧರ || ವೀರವಿದ್ವತ್ಪಂಕ್ತಿಗಳಕೈ | ವಾರಿಗಳಸಂಕು
ಳದಘನಪರಿ | ವಾರವೆಸೆಯಿತ್ತಮಮವಿಬುಧಾಸ್ಥಾನದೇಳ್ಗೆಯು || ೫೧ || ಹೊಳೆವಮಣಿಮಾಲಾಕದನೆಯನಾ | ವಳಿಯವಿತಾನ
ಳತೋಳ್ಗಳುರಗಾ | ವಳಿಯವಿಬುಧೇಶ್ವರವಿಶಾಲಿತತಿಮಿತಿಮಿಂಗಿಳದ || ಬೆಳುಗೊಡೆಗಳನಶಶಿಕುಲದವಾ | ಪೊರ್ಳವುಗಳಚಾ
ಮರದಹಂಸಾ | ವಳಿಗಳರೆಶ್ರೀಹರಿಯಸೋಲದಲೆನಿಸಿತಾಸ್ಥಾನ || ೫೨ || ಕರಿಕಮಲಸಂಭವನನಸಹಿಪನು | ಬರಲಿಬಂಣಿಸಲ
ಮರರಾಜನ | ಸಿರಿಯನಾತನಪರಿಯನಾತನವರಮಹೋಂನತಿಯ || ನಿರುತವೀಕ್ಷಿಸಲಾತನೇಗೋ | ಚರಿಸಲೆನಲೆಸೆದುದುಸುಧ
ರ್ಮ | ವರಮಹಾಸಭೆನೋಡುವರಕಂಗಳಿಗೆಕೌತುಕವ || ೫೩ || ರಾಜಕೇಳಸುರಾರಿಯಾಜ್ಞೆ | ಪಾಯದಲಿಬಲಿಯಖಿ
ಳರಾಜ್ಯ | ಶ್ರೀಯನೀಸಿಮರಳೆತಂದನುಸುರಪತಿಯವಶಕೆ || ಕಾಯಿದನುಕವಲಂನ್ವಯವನುಭ | ಯಾಯಿತನದಲಿತಂನಭ
ಕ್ತನಿ | ಕಾಯಲಂಪಟತನದಿಮಹಿಮೋಂನತಿಗಳನುಸುರದ || ೫೪ || ಇವರಕುಲದೇವತೆಯಲೇನಾ | ನವರಬಾಗಿಲಕಾವುದೆ
ನಲಿಂ | ನವರಿಗಿದರುಂನತಿಸಮಾನವೆಸೊರಹಲೇಕದನು || ಕವಲೊಡದುದಚ್ಯುತಸುರದ್ರುಮ | ವವರಿಗಿವರೇಸಕಲಸಜ್ಜನ |
ನಿವಹಕಿತ್ತುದುಕಾಮಿತಾರ್ಥದಸಿದ್ಧಿಗಳಫಲವ || ೫೫ || ಸಲಹಿದನುಸುರಕುಲದಭಿಷ್ಟವ | ಸಲಿಸಿದನುಸುರಲೋಕಪಾಲರಿ |
ಗುಳುಹಿದನುನಿಜಮಹಿಮೆಯನುಕಮಲಾಸನಾದಿಗಳ || ಕಳುಹಿದನುಮೇದಿನಿಯಭಾರವ | ಸಿಳುಹಿದನುಸುರಲೋಕಲಕ್ಷ್ಮಿಯ |
ಬೆಳಹಿದನುಪೇರಾಳಹೆಸರಿನಹೆಂಮೆಪೂರೈಸೆ || ೫೬ || ಹತ್ತುದೆಸೆಗಳುವಿಮಲತೆಗೆಸೈ | ನ್ರೊತ್ತುಗೊಟ್ಟವುಸಕಲಜೀವರ | ಚಿತ್ತ
ನಿರ್ಮಳವಾಯ್ತುಭವಸಂತಾಪಸಂಚಯದ || ಬಿತ್ತುಕರಿನೊಳೆಯಾಯ್ತುಬೆಳದುದು | ಬಿತ್ತದಿಳೆಕಾಮಿತಫಲವನೆನೆ | ಪ್ರೊತ್ತಿದುದು
ಮೂಲೋಕವಿಂಗೆಪರಮಾನುರಾಗದಲಿ || ೫೭ || ಇದುಮಹೋದಧಿಗಮಳಚಂದ್ರಿಕೆ | ಯಿದುಮನೋರಥಸಿದ್ಧಿಯಾಗರ | ವಿದು
ಪರಾನಂದಾನುಭವಸಾಧಕದಸಾಕಾರ || ಇದುವೆಮಂಗಳವಖಿಳಭುವನ | ಕ್ಕಿದುಸದಾಯುಃಕೀರ್ತಿವರ್ಧನ | ವಿದುವೆದುರಿತ
ವ್ಯಥನಪುಣ್ಯಪ್ರದನಹರಿಕಥನ || ೫೮ || ವರದೆನಾನಿದನೆಂನಮತಿಗೋ | ಚರಿಸಿದನಿತನುವಿಮಲನಾಮನ | ಚರಿತವನುಕಡೆಗಾ
ಣದಾವಾಸುಗಿಯಜಿಂಹೆಗಳು || ಹೊಗಳುವಡೆಸೀಯವ್ಯಾಸನಯಸಾ | ಗರವನೆಲ್ಲವಕುಡಿದುದಜರಾ | ಮರತೆಯಾಗದೆತೃಷೆಗಳ
ಡಗವೆಭೂಪಕೇಳೆಂದ || ೫೯ || ಆವನಿದನೋದುವನುಕೇಳುವ | ನಾವನೀಮಂಗಳಮಹಾಲ | ಕ್ಷ್ಮೀವರನಚಾರಿತ್ರವನು
ಸಂತೋಷದಿಂದೊಲಿದು || ಈವನವರಿಂಗಿಷ್ಟಸಿದ್ಧಿಯ | ದೇವದೇವನುಪರಮಕಾರು | ಣ್ಯಾವಲೋಕನದಿಂದನಿತ್ಯಾತ್ಮನು
ಮನವೊಲಿದು || … … … … … || ೬೦ ||

ಅಂತು ಸಂಧಿ ೨೫ಕ್ಕಂ ಪದನು ೯೦೪ಕ್ಕಂ ಮಂಗಳಮಸ್ತು

ಇಪ್ಪತ್ತೆರಡನೆಯ ಸಂಧಿ.

ಮನ್ವಂತರಗಳ ವರ್ಣನೆ.

ಸೂಚನೆ॥ ಹೇಳಿದನು ಮನ್ವಂತರಂಗಳ। ಪೇಳ್ಗೆಯನಿಂದ್ರಾದಿಗಳ ಸಿರಿ। ಲೋಲನವತಾರದ ಕಥಾಸಾಗರದ ಸಂಗತಿಯ ॥ ... ...

ಪದನು॥ ಕೇಳು ನೃಪ ವೈವಸ್ವತನಲಾ। ಯೇಳನೆಯ ಮನು ವರ್ತಮಾನವಿ। ಕಾಲಮನ್ವಂತರವನಿದೆಲಾ ಶ್ರಾದ್ಧದೇವನೆನೆ॥ ಪೇಳ್ಗೆಯೊಳಿಕ್ಷ್ವಾಕುಮುಖ್ಯನ। ಪಾಲರಿವರೈವರು ಪುರಂದರ। ನಾಳುವನು ತ್ರಿದಿವವನು ಸುರರಾದಿತ್ಯನೆಂದೆನಲು ॥೧॥ ಛಾಯೆ ಸಂಜ್ಞೆಯರೆಂಬರಿಬ್ಬರು। ಜಾಯೆಯರಲೆ ವಿವಸ್ವತಂಗೆ ತ್ರಿ। ತೀಯ್ಯವಡವೆ ಶನೈಶ್ಚರನು ಸಾವರ್ಣ್ಯ ತಪತಿಗಳು॥ ಛಾಯೆಯಲಿ ಜನಿಸಿದರು ತಪತಿಗೆ। ನಾಯಕನು ಸಂವರಣನಾ ಸಂ। ಜ್ಞೆಯ ಯುವತಿಗೆ ಶ್ರಾದ್ಧದೇವ ಯಮ ಯಮುನೆಯರುತ್ಪನ್ನರು ॥೨॥ ಕ್ಷಿತಿಪ ಕೇಳಶ್ವಿಗಳು ವಡಬಾ। ಸುತರು ಬಳಿಕೆಂಟನೆಯ ಮನುವಿ। ಶ್ರುತನಲಾ ಸಾವರ್ಣಿ ನಿರ್ಮೋಕ್ಷಾದಿಗಳು ಸುತರು॥ ಸುತಪಸರು ದೇವತೆಗಳಾ ಬಲಿ। ಶತಮಖನು ಸಾಕ್ಷಾತ ವಿಷ್ಣುವ। ನತಿಥಿಯಾಗಿ ಧರೆಯನಿತ್ತ ಮಹಾತ್ಮನೋಡೆಂದ ॥೩॥ ಭೂಮಿಪತಿ ಕೇಳ್ ಋಷಿಗಳಶ್ವ। ತ್ಥಾಮ ಗಾಲವ ವಿಷ್ಟಮಾತರು। ರಾಮ ಕೃಷ್ಣ ಸ್ಮೃತಿಪ ತನಲಾ ಬಾದರಾಯಣನು॥ ಆ ಮಹಾಮತಿ ಋಷ್ಯಶೃಂಗನ। ನಾಮರಿಹರಂನಬರವೀಸು। ಕ್ಷೇಮದಲಿ ತಂತಂಮ ಪುಣ್ಯಾಶ್ರಮಗಳೊಳಗೆಂದ ॥೪॥ ಅಂದಿನವರಾರಪ್ರಯೋಜನ। ದಂಡವನು ಕೇಳರಸ ಬಸುರಲಿ। ಬಂದು ಜನಿಸಿಯೆ ವೇದಗುಹ್ಯ ಸರಸ್ವತಿಗಳಂಗೆ॥ ಮುಂದೆ ಯಹಿಡಿದೆಳದು ತಂದು ಪು। ರಂದರನ ಲಕ್ಷ್ಮಿಯನು ಬಲಿಗೆ ಮು। ಕುಂದನೀವನು ಸಾರ್ವಭೌಮ ಸಮಾಖ್ಯೆಯಿಂದೆಂದ ॥೫॥ ನವಮಮನು ಮಾದಕ್ಷಸಾವ। ರ್ಣವ ರುಣೋದ್ಭವ ಧೃಷ್ಟಕೇತು। ಪ್ರವರ ರಾಮನು ಸುತರು ಗರ್ಗ ಮರೀಚಿಮುಖ ಸುತರು॥ ಭುವನಪತಿ ದೇವೇಂದ್ರನದ್ಭುತ। ನವನಿಯಮರರು ದ್ಯುತಿಮಹಾದ್ಯರು। ಭವಿಸುವನು ಹರಿ ರಿಷಭ ವಾರುಧಿಗಂಬುಧಾರೆಯಲಿ ॥೬॥ ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ ಹತ್ತನೆಯ ಮನು ವರನುಪಶ್ಲೋ। ಕೇತ್ರ ನಾಮ ಜನರಸ ಕೇಳುರು। ವೃತ್ತಗುಣಸಂಪಂನನೆನಲಾ ಬ್ರಹ್ಮಸಾವರ್ಣಿ॥ ಪುತ್ರರಾ। ತಗೆ ಭೂರಿಷೇಣಾ। ದ್ಯುತ್ತಮರು ಸತ್ಯಾದಿ ವಿಪ್ರರು। ಸಪ್ತಋಷಿಗಳು ದೇವತೆಗಳು ಸುಧಾಮರೆಂಬವರು ॥೭॥ ಶಂಭುವೆಂಬಾ। ನಿಂದ್ರನದರೊಳು। ಸಂಭವಿಸಿ ಶಾಂತಾಹ್ವಯನು ವಿ। ಶ್ವಂಭರನು ಸಲೆ ವಿಶ್ವಸೃಕ್ಕುಗಳಹ ವಿಷೂಚಿಯಲಿ॥ ಶಂಭುವೀರ್ಯನು ಮಹಾ। ಳ್ಸನಂದಾ। ಶಂಭುಸಾಹಾಯ್ಯವನು ಭುವನಾ। ರಂಭ ಸಂಭೃತ ಮಾಯನೆಲೆ ಭೂಪಾಲ ಕೇಳೆಂದ ॥೮॥ ತಂದೆ ಚಿತ್ರವಿಸುವ ಡನಾಗ। ತ। ದಿಂದ ಸನುಮನು ಮಾದನಾಹಂ। ನೊಂದನೆಯ ಭೂರಿಯಲಿ ಧರೆಯಲಿ ಧರ್ಮಸಾವರ್ಣಿ॥ ಇಂದ್ರನದರೊಳು ವೈಧೃತನು ಮನು। ನಂದನನು ಸತ್ಯಾದಿಗಳು ಸುರ। ವೃಂದ ಕಾಮುಘನಾದ್ಯರರುಣಾದ್ಯರು ಋಷಿಗಳೆಂದ ॥೯॥ ಧರ್ಮಸಾವರ್ಣ್ಯಾಂತರದಲಾ। ಧರ್ಮ ಮಾರುತಿ ವಿಷ್ಣು ಜನಿಸಿಯೆ। ಧರ್ಮಸೇತು ಸಮಾಖ್ಯೆಯಲಿ ವೈಧೃತಿಯಲಾಯುತಿಗೆ॥ ಧರ್ಮಪಾಲಕನಾಗಿ ಸಕಲಾ। ಧರ್ಮಫಲವನು ಜರೆದು ವೈಧೃತ। ಧರ್ಮಪಾಲಕನಹನು ಪೃಥ್ವೀಪಾಲ ಕೇಳೆಂದ ॥೧೦॥ ಜನಪ ಚಿತ್ರೈಸುವಡೆ ಹಂನೆರ। ಡನೆಯ ಮನು ಪುಣ್ಯಾತ್ಮಕನು ಪಾ। ವನಚರಿತ್ರನು ಪರಮಧಾರ್ಮಿಕ ರುದ್ರಸಾವರ್ಣಿ॥ ಮನುತನಯರು ಪದೇವಮುಖ್ಯರು। ಮುನಿಗಳಗ್ನೀಂ। ದ್ರಾದ್ಯರಿಂದ್ರರು। ವಿನುತ ಲಿತರಾವ ಮಾಖ್ಯರಮರರು ಹರಿತಕಾದಿಗಳು ॥೧೧॥ ಸತ್ಯತಪನೆಂಬಾಮಹಾತ್ಮನೆ। ಮತ್ತಶಾಸಿನಿಸೂ। ನೃತೆಗೆ ಪುರು। ಷೋತ್ತಮನು ಸುತನಾಗಿ ಜನಿಸಿ ಸುಧಾಮ ಸಂಜ್ಞೆಯಲಿ॥ ಸತ್ಯವನು ಪಾಲಿಸುವನೆಲೆ ಭೂ। ಪೋತ್ತಮನೆ ಹದಿಮೂ। ರನೆಯ ಮನು। ವೃತ್ತಗುಣಸಂಪಂನನಹನಾ ದೇವಸಾವರ್ಣಿ ॥೧೨॥ ಮನುತನೂಜರು ಚಿತ್ರಸೇನಾ। ದ್ಯನುಪಮರು ಸುತ್ರಾ। ಮರೆಂಬವ। ರನುಮಿಷರು ಸುರಪತಿ ದಿವಸ್ಪತಿ ನಿರಜಸಾದಿಗಳು॥ ಮುನಿಗಳದರೊಳು ದೇವಹೋತ್ರಾ। ವನಿತೆ ಬೃಹತಿಯಲುದಿಪಿ। ಕರುಣಾ। ವನಧಿ ಯೋಗೀಶ್ವರನೆನಿಸಿ ವಿಖ್ಯಾತನಹನೆಂದ ॥೧೩॥ ಜನಪ ಚಿತ್ರೈಸುವಡೆ ಹದಿನಾ। ಲ್ಕನೆಯ ಮನು ಮನುಗಳಿಗೆ ಕಡೆಯಾ। ತನು ಸುಪಾವನ ಕೀರ್ತಿಯನಿಸುವನಿಂದ್ರಸಾವರ್ಣಿ॥ ಮನುಸುತರು ಗಂಭೀರಬುಧ್ಯಾ। ದ್ಯನುಪಮರು ಪವಿತ್ರ ಚಾಕ್ಷುಷರೆನಿಸುವ। ರನಿಮಿಷರು ಶುಚಿಯಂಬನಿಂದ್ರನು ಭೂಪ ಕೇಳೆಂದ ॥೧೪॥ ಮುನಿಗಳದರೊಳು ಶೂರೆ ಮಾಗಧ। ರನಲ ಬಾಹುಪ್ರಮುಖರೆನಿಸಿ। ಜನಪ ಮೆರೆದರು ಕೇಳು ಸುತ್ರಾ ಸನೆ ವಿತಾನೆಯರ॥ ತನಯರೆನಲುದುಭವಿಸಿ ಗಸನಂ। ಜನನಿಭ ಸಭನಫನಿಕ। ರಮಾ। ವನಚರಿತ್ರ ಗುಣಾಂಬಿ ಸಬೃಹದ್ಭಾನು ಸಂಜ್ಞೆಯಲಿ ॥೧೫॥ ಹೇಳಿದೆನು ಮನುಗಳನು ಮನುಗಳ। ಪೇಳಿಗೆಯನಿಂದ್ರರನು ಲಕ್ಷ್ಮೀ। ಲೋಲನವತಾರಂಗಳನು ಋಷಿಗಳನು ನಿನಗೆನಲು॥ ಹೇಳ ನಾರಿಂಗಾರೊಡನೆಸಂ। ಮೇಳವಾದುದು ಕೃತ್ಯವಿನಿ। ಬರಿ। ಗಾಳಿ ಪರದಾರೆನಲು ನಗುತಿಂತೆಂದನಾ ಮುನಿಪ ॥೧೬॥ ಜನಪ ಕೇಳ ನನೀಶ್ವರನು ಮನು। ತನೆಯರೈದ್ಯೈಸೇಕ ಸತ್ತಿ। ವಿನುತ ಚಾತುರ್ಯ್ಯಗದ ತಂತಂಮ್ಮ ಮಂತರಂಗಳಲಿ॥ ಮುನಿಗಳಹರು ಚತುರ್ಯ್ಯಗಾಂತದ। ಲನುಪಮ ನವಷ್ಟಾಂಗ ಮಂಗಳ। ನನುಸ

ತಿಪಿಕರುಣಿಸಲುಧರ್ಮಪದಪ್ರವರ್ತನೆಗೆ ॥ ೧೭ ॥ ಅರಿವರೆಂತಾಪರಮಪುರುಷನ । ನಿರುಗೆಯನುಪಮಾಯಾವಿಕಾರದ । ಹೊರಿಗೆಯನುದರುಶನವಿಭೇದಭ್ರಾಂತಿಬುದ್ಧಿಗಳು ॥ ಅರಿವರಾಪುರುಷೋತ್ತಮನಕೃಪೆ । ನೆರದಜೀವರತತ್ವಸ್ವರೂಪದ । ನಿರುಗೆಯನುನಿತ್ಯಾತ್ಮನಿಷ್ಠೆಯಭೂಪಕೇಳೆಂದ ॥ ... ... ॥ ೧೮ ॥

ಅಂತು ಸಂಧಿ ೨೨ಕ್ಕಂ ಪದನು ೯೨೨ಕ್ಕೆ ಮಂಗಳಮಸ್ತು

ಇಪ್ಪತ್ತ್ಮೂರನೆಯ ಸಂಧಿ:

ಮತ್ಸ್ಯಾವತಾರದ ಕಥೆ.

ಸೂಚನೆ ॥ ಶ್ರುತಿವಿದೂರಗುಣಾಬ್ಧಿಮತ್ಸ್ಯ । ಕೃತಿಯಲಾಡುತ್ತಾತ್ಮತತ್ವ । ಸ್ಥಿತಿಯನುಪದೇಶಿಸಿದನಾ
ಸತ್ಯವ್ರತಂಗೊಲಿದು ॥ ... ...

ಪದನು ॥ ಚಿತ್ತವಿಸುಮುನಿನಾಥಮನವನು । ತುತ್ತಗೊಳುತಿದೆಸಂಶಯಂದಬಲು । ಗತ್ತಲೆಯನಿದಕೀವುದಮಳೋಕ್ತಿಪ್ರದೀಪವನು ॥ ಉತ್ತಮೋತ್ತಮನೇಕೆಧರಿಸಿದ । ನತ್ಯಧಿಕಮತ್ಸ್ಯಾಕೃತಿಯನಖಿ । ಳೋತ್ತಮನೆಕರುಣಿಸುವುದೆನಗೆದನೆಂದನಾಭೂಪ ॥ ೧ ॥ ಹಿಂಗದಾಸೆರುಮನದಬಯಕೆಯ । ಹೊಂಗುಮುರಿಯದುಚಿತ್ತದೊಳವಿನ । ಹಂಗುಹರಿಯದುನೆರೆಯದೆಂನೆಶ್ರೋತ್ರಪರಿತೋಷ ॥ ತಂಗಳಿಗೆಕಡೆದೂರವಾದನು । ಮಂಗಳಾತ್ಮಕನೆಂನಕಿವಿಗಳ । ಕಂಗಳಿಗೆಗೋಚರವಮಾಡುವುದೆಂದನವನೀಶ ॥ ೨ ॥ ಬಿಡಲುಕೆಡವಂನೆಗಪುಕುಂದನ । ಬಿಡದೆಭಜಿಸುತಕೀರ್ತಿಸುತಕಿವಿ । ಗುಡಿತೆಗಳೆಲಾನುತ್ತತತ್ರದುಗ್ಗಣಕಥಾಮೃತವ ॥ ಪೊಡವಿಪಾವನವಾಗಿಹುದನಾಂ । ಪಡೆಯಲಾಪೆನೆಮುನಿಪಗುರುನಿಂ । ಮಡಿಗಳಲ್ಲದೆಗತಿಯದಾರೆಂದೆರಗಿದನುಪದಕೆ ॥ ೩ ॥ ಪೊಳುಮಗನೆಮಹಾನೃಪಾನ್ವಯ । ಮಾಳರತ್ನವೆಭಾಗವತಗುಣ । ಶೀಲಸಂಪನ್ನಿಧಿಯೆಕೇಳೆಂನಾನೆಕೇಳೆನುತ ॥ ಹೇಳಿದನುಮತ್ಸ್ಯಾವತಾರದ । ಲೀಲೆಯನುಮುರಹರನಜಲನಿಧಿ । ಕೇಳಿಯನುಕಾರುಣ್ಯದಲಿಮುನಿನಾಥನವನಿಪಗೆ ॥ ಉತ್ತಮಾಧಮನೆಂಬುದದುಮತಿ । ವೃತ್ತಿಯಲ್ಲೈಭೂಪಭೂಪಕು । ಲೋತ್ತಮನೆಕೇಳುಂಟೆಸರ್ವಾತ್ಮಕಸ್ವರೂಪನಲಿ ॥ ವಸ್ತುವೊಂದರಲೀವಿಕಲ್ಪದ । ಹತ್ತುಗೆಗಳೇರುವವೆಜಗವನು । ತತ್ತದಾಕಾರದಲಿಸಲಹುತ್ತಿಹೆನುಕೇಳೆಂದ ॥ ೫ ॥ ಸೆಂದಕಲ್ಪದಕಡೆಯಲಾಯೆಲೆ । ಕಂಡನೈಮಿತ್ತಿಕವೆನಿಸ್ಪದ । ದೊಂದುಬ್ರಹ್ಮಪ್ರಳಯಮೀತ್ರೈಲೋಕ್ಯವದರೊಳಗೆ ॥ ಹೊಂದಿದನುಕಮಲಜನುನಿದ್ರೆಯ । ಬೊಂದಿರೆಲುವೇದಂಗಳಾವನ । ನಿಂದುದುರಿದವುಪ್ರಳಯಜಲಧಿಯಲರಸಕೇಳೆಂದ ॥ ೬ ॥ ಬಿದ್ದವೇದಂಗಳನುದೈತ್ಯನು । ಕದ್ದುಕೊಂಡಿದ್ದನುಹಯಗ್ರೀ । ವಾಖ್ಯನಾಮನುರಸೆಗೆರಾಜೀವಾಕ್ಷನದನರಿದು ॥ ಅದ್ವಯನುಮತ್ಸ್ಯಾಕೃತಿಯಲವ । ನಿದ್ದೆಡೆಯಹೊಕ್ಕವನಕೊಂದುಸ । ಮಗ್ರದಲಿತಂದಿತ್ತನಾಶೃತಿಗಳನುಶತಧೃತಿಗೆ ॥ ೭ ॥ ಕೇಳರಸಸತ್ಯವ್ರತಾಖ್ಯನ । ಪಾಲಕನುಮುಂನೊಬ್ಬನಾಕೃತ । ಮಾಲೆಯಂಬುತ್ತಮನದೀತೀರದಲಿಕುಳ್ಳಿರ್ದು । ಶ್ರೀಲಲಾಮಪದಾಬ್ಜವನುಹೇ । ಹಾಳಿಸುತಮನದೊಳಗೆವರನಿಯ । ಮಾಳಿಗಳನಾಚರಿಸುತಿರ್ದನುತಪದನಿಷ್ಠೆಯಲಿ ॥ ೮ ॥ ಸಲಿಲದಲಿಜಲತರ್ಪಣವನಾ । ದ್ರವಿಳನೃಪಮಾಡುತ್ತಲಿರಲಂ । ಜಲಿಗೆಬಂದುದುಶಫರಿಯೊಂದುಸುಸೂಕ್ಷ್ಮರೂಪದಲಿ ॥ ಜಲದೊಳಗೆಶಫರಿಯನುಬಿಟ್ಟನು । ಹೊಳೆಯೊಳಗೆಹೋಗುತ್ತಿರದುದು । ಕಳವಳಿಸಿಭೀತಿಯಲಿನೃಪನನುಕರುಣವನುತೋರಿ ॥ ೯ ॥ ಎಲೆಲೆಕರುಣಿಯೆಕೃಪಣಜನವ । ತ್ಸಲನೆಭೂಪಶಿರೋಮಣಿಮುಕರ । ತಳಕೆಬಂದರೆಬಿಡುವರೇಶರಣಾಗತರನಿಂತು ॥ ಮುಳಿದುಕೊಲುತ್ತೈದಾವೆಯಾಭೆಯ । ಲಾಳದಶಫರಿಮಾತ್ರನೆನನು । ಸಲಹಿಕೊಂದಿನೆಯನೆನುತ್ತಿರಲೊದರಿದುದುಶಫರಿ ॥ ೧೦ ॥ ಕಂಣುಕೆರದೀಕ್ಷಿಸಿದನಾಲಿಪಿ । ಹೆಂಣುಮೋಕ್ಷ್ಯಾಯ್ಯಾಲನುಭೂಪಾ । ಗಣ್ಯನರಿಯದೆತಂನರಕ್ಷಿಸಲೆಂದುಮುರವೈರಿ ॥ ಹಂಣಿದಾಕೃತಿಯಂಬುದನುಕಾ । ರ್ಪಣ್ಯವನುಕಾಣುತ್ತಕೃಪಕಾರುಣ್ಯನಾದನುಶಫರಿಯಲಿಭೂಪಾಲಕೇಳೆಂದ ॥ ೧೧ ॥ ಅಕಟಶರಣಾಗತರರಕ್ಷಾ । ಸುಕೃತವಿದುಲೇಸೆನುತಕಲಶೋ । ದಕದಲಿಟ್ಟನುಶಫರಿಯನುತಂದನುನಿಜಾಶ್ರಮಕೆ ॥ ಮಕರಿಪಿದುದದನೊಂದುರಾತ್ರಿಗೆ । ಮಕರಿಕಲಶೋದಕವನನ್ಯಾ । ಸಕತಿಯಲಿಸತ್ಯವ್ರತಂಗಿಂತೆಂದುದಳವಳಿದು ॥ ೧೨ ॥ ಆರೆನಾನಿದರೊಳಗೆತನಗೀ । ಡೇರದಿರವುರಕಮಂಡುಲೋದಕ । ವಾರಿದುದುತೆರಹಿಲ್ಲಕೆಟ್ಟೆನುಕೆಟ್ಟೆನಿಂನೊಂದು ॥ ತೋರುದಾವನುಕರುಣವುಳ್ಳಡೆ । ಬೇರೆಬಹಳೋದಕವನೆನಲದ । ನೋರುಗುಡಿಸದಕಂಗಳಲಿನೋಡಿದನುದ್ರವಿಡೇಶ ॥ ೧೩ ॥ ಸೊಲ್ಲಕೇಳುತನಕ್ಕನೆಳಗೆ । ಯಾಳ್ದಮತ್ಸ್ಯವೆನುತ್ತತೆಗದು । ತ್ಫಲಲೋಚನನಿರಿಸಿದನುಕೆಲದಲ್ಲಿಶಫರಿಯನು ॥ ಇಲ್ಲಿಸುಖದಿಂದಿಹುದೆನುತಭೂ । ವಲ್ಲಭನುಮರಳಿದನುಲಕ್ಷ್ಮೀ । ವಲ್ಲಭನಪರಿಚರಿಯೆಗಧಿಕಮನೋನುರಾಗದಲಿ ॥ ೧೪ ॥ ಇಳೆಗಧೀಶ್ವರಕೇಳುರಿಂಜಾ । ಸಲಿಲದಲಿತಂದಿತಲುಮೂರೇ । ಮೊಳಕೆಬೆಳದುದುಶಫರಿಯುರದೇಘಳಿಗೆಮಾತ್ರದಲಿ ॥ ಕಳವಳಿಸಿದುದುಮತ್ತೆತನಗದ । ರೊಳಗೆತೆರಹನುಕಾಣದೆೊಸಲ । ಕ್ಕಳಿಸಿಕರದುದುನೋಡಿಸತ್ಯವ್ರತಮಹೀಪತಿಯ ॥

ಎಲೆಲೆ ತೆಗೆತೆಗೆ ಭೂಪ ತಂನೊಡೆ । ಒಳತೆಗಲಗಣಸಾಯ್ತು ಮಂಚನ । ಸಲಿಲವಿಂನೊಂದೆಡೆಯ ಕಲ್ಪಿಸು ಸುಖನಿವಾಸವನು ॥ ಹೊಳ
ದುಹೋಗದಿರಧಿಕಕರುಣಾ । ಜಲಧಿನೀನೆನೆ ಬಾವಿಯುಲಿತಂ । ಬಿಳುಹಿದನು ಮತ್ಸ್ಯವನು ನಗುತ ಮಹಾಮಹೀಪಾಲ ॥೧೬॥
ಮತ್ತೆ ಘಳಿಗೆಗೆ ಭಾವಿಯನು ತುಂ । ಬಿತ್ತು ಮತ್ಸ್ಯಶರೀರದಲಿ ಕರ । ದತ್ತು ದಮಭೂಪನನು ತನಗಿದು ನೆರೆಯದಿಂನೊಂದು ॥ ಉತ್ತಮ
ಸ್ಥಾನವನು ಕರುಣಿಸೆ । ನುತ್ತಿರಲು ಗರೆಯೊಳಗೆ ಶಫರಿಯ । ಹೊತ್ತು ತಂದಿರಿಸಿದನು ಸತ್ಯವ್ರತನು ಕರುಣದಲಿ ॥೧೭॥ ನೆರೆಯದಿ
ದುತನಗಿರಲು ತೆಗೆತೆಗೆ । ಕೆರೆಯಿದೇನಹುದರಸ ನೀಬೇ । ಸರದೆ ಮತ್ತೊಂದೆಡೆಯ ಕಲ್ಪಿಸು ಮಡುವಿನೊಳಗೆನಗೆ ॥ ಅರಸಿ ನೆಲೆಯಿಲ್ಲದ
ಜಲಾಂತದ । ಲಿರವ ಮಾಡೆನೆ ಶಫರಿ ವನಿತೆಯ । ಮೊರೆಯಿಡುವ ಧನಿಗೇಳಿ ಧರಣೀಪಾಲನೈತಂದ ॥೧೮॥ ಮಾರಿಗಾಲದ ಮತ್ಸ್ಯವೆಂ
ನನು । ಮಾರುಗೊಳುತಿದೆ ಕರುಣವನು ನೆರೆ । ತೋರಿತಾನಿದಕೇನ ಹೇಳುವೆನದ್ಭುತವಿದೆನುತ ॥ ಜಾರಿಸಿದನಲ್ಲಿಂದ ನೆಲೆಯನು ।
ತೋರದೆಂದು ಮಹಾಹ್ರದಕೆ ಬಾ । ಯಾರದಿಂ ನಿದರೊಳಗೆ ಸುಖದಿಂದಾಡು ನೀನೆನುತ ॥೧೯॥ ಹೋಗದಿರು ಹೋಗದಿರು ತನಗಿರ ।
ಲಾಗದಿದರೊಳಗಕಟ ಕರುಣಾ । ಸಾಗರನೆ ತಿನುತಿರ್ದವೆಂನನು ಜಲಚರಂಗಳಿವು ॥ ಬೇಗದಲಿ ತೆಗೆತೆಗೆಯನುತ್ತಿರೆ । ಮೂಗಿನಲಿ
ಬೆರಳಿಟ್ಟ ನೃಪವರ । ಗಾಗಿನಟ್ಟಾಲಿಗಳಲೆವೆಯಿಕ್ಕದೆ ನಿರೀಕ್ಷಿಸಿದ ॥೨೦॥ ಮೇರುಗಿರಿಯೋ ನೋಡು ನಡೆತಾ । ನಾರು ಶಿವಶಿವ
ಬಡವಲಾಸಲೆ । ನೂರುಯೋಜನದಗಲದುದ್ದದ ಮತ್ಸ್ಯದೇಹವಿದು ॥ ಮಾರುಹೋಗುತ್ತಿದೆಯಲಾಬಡ । ವಾರಿಚರನಿಕರದಲಿ
ಘಾತಿಗೆ । ಕಾರಣವಿದೇನೆನುತ ತಂನಲಿ ತಾನೆ ಚಿಂತಿಸಿದ ॥೨೧॥ ಆರು ನೀನೆಲೆ ಮತ್ಸ್ಯರೂಪದ । ಧಾರಣೆಯ ಬಲ್ಲಹನೆ ನಿಂನಂ । ತಾ
ರುವೀರ್ಶ್ವೇಪೇಕ್ಷ ಮತ್ಸ್ಯವು ಜಲಚರಂಗಳಲಿ ॥ ಆರು ಕಂಡವರಕಟ ಕೇಳ್ದವ । ರಾರು ನಿಂನಂದದ ಸುದೀರ್ಘಶ । ರೀರಿಯನು ಬೀ
ರೆವನು ಪೂರ್ವದಲೆಂದನಾ ಭೂಪ ॥೨೨॥ ಯಾಕೆ ಕಾಡುವೆ ತಂನನೀಪರಿ । ಸಾಕಿದವನಾನೆಂದು ಲೋಗರ । ಲೋಕಸ್ವೈರಿಸೆನೆಂ
ಬೆ ಮತ್ಸ್ಯನೆಯಲ್ಲ ನೀನಿಂದು ॥ ಲೋಕದೊಳಗದ್ಭುತವಲಾ ನಿ । ನ್ನಾಕೃತಿಯನೀಕ್ಷಿಸಲು ಸಾಕ್ಷಾ । ಲ್ಲೋಕನಾಥನೆಯಾಗದಿರೆ
ನೀನಾರು ಹೇಳೆಂದ ॥೨೩॥ ತ್ರಿಣಯನೋ ಸಾಕ್ಷಾತನಾರಾ । ಯಣನೊ ತಜ್ಜಠರಾಂಬುಜದಮಂ । ನಣೆಯ ಮಗನೋ ಮ
ತ್ಸ್ಯನೇ ನೀನಲ್ಲ ತಂನೊಡನೆ ॥ ಕೆಣಸಲೇತಕೆ ಸೋತೆನಾನಿಂ । ನಣಕಬೇಡೆಲೆ ತಂದೆ ನಿನಗಾ । ಪ್ರಣತನಾದೆನು ವಿಷ್ಣುವಲ್ಲದೆ ಮಾಣೆ
ನೀನೆಂದ ॥೨೪॥ ಏನು ಕಾರಣ ಮತ್ಸ್ಯನಾದೆ ಮ । ಹಾನುಭಾವನೆ ಕರುಣಿಸೆನಗೆನೆ । ಧಾನವನು ನೀನಲ್ಲದನ್ಯಥವುಂಟೆ ಗತಿತನ
ಗೆ ॥ ಜ್ಞಾನಮಯನಿಗ್ರಹನೆ ಪರಮಕೃ । ಪಾನಿಧಿಯೆ ಪರಮೇಷ್ಠಿಯೊಡೆಯನೆ । ದೀನನಾನೆಲೆ ತಂದೆ ಕರುಣಿಸು ಕರುಣಿಸೆನಗೆಂದ ॥
ನಿನ್ನ ಕಿಂಕರಕಿಂಕರನು ತಾ । ನೆಂನಮನವನು ದೇವ ನೋಡುವೆ । ಸಂನಿಹಿತರಾರಕಟ ಸಕಲಪ್ರಾಣಿಹೃದಯದಲಿ ॥ ಅಂನ್ಯನೇ ನೀ
ನೀಕ್ಷಿಸಡೆ ಜ್ಯೋ । ತಿಸ್ವರೂಪನಲಾ ಮಹಾಕರು । ಣಾರ್ಣವನೆ ಶರಣಾಗು ಜಯಜಯ ಜಯನಮೋಯೆಂದ ॥೨೬॥ ಪರಮಪುರು
ಷನೆ ನಿಂನ ತನುಗಳು । ಪರಮರಕ್ಷಾಕರಗಳಾಶ್ರಿತ । ಪರಮಪಾವನಕರಗಳಭಯಕರಂಗಳಿವು ಧರೆಗೆ ॥ ಪರಮಮಂಗಳಕರಗಳಿಂ
ದೆಲೆ । ಪರಮಕರುಣಾನಿಧಿಯೆ ಧರಿಸಿದೆ । ಪರಮಮಚ್ಛಾಕೃತಿಯನಂಗೀಕರಿಸಿಯಿದನೆಂದ ॥೨೭॥ ಎಂದು ಸತ್ಯವ್ರತಮಹೀಪ
ತಿ । ಮುಂದೆ ಮೈಯಿಕ್ಕಿರಲು ಕರುಣಾ । ಕಂದಳಿತಕಮನೀಯ ಹೃದಯನನಂನ್ಯಗತಿಕನನು ॥ ಮಂದಹಾಸದಲೇಳು ಕೇಳೆಲೆ ।
ಕಂದ ಕಾರಣಮತ್ಸ್ಯನಾನು ಮು । ಕುಂದನಂಜದಿರಂಜದಿರು ಹೇಳುವೆನು ಕೇಳೆಂದ ॥೨೮॥ ಮಗನೆ ಕೇಳೇಳನೆಯ ದಿನದಲಿ ।
ಜಗವಿದಳಿವುದು ಭೂತ್ರಿವಿಷ್ಟಪ । ಗಗನನೆಂಬಿವು ಜೀವಚಯ ಸಚರಾಚರವು ಸಹಿತ ॥ ನೆಗದು ಸಪ್ತಸಮುದ್ರವೊಂದೇ । ಮೊಗದ
ಲೇಕಾರ್ಣವಗಳಾಗಲು । ಹಗಲು ನಿದ್ರೆಗೆ ನಳಿನಭವನಂಗೈಸುತಿರಲೆಂದ ॥೨೯॥ ನಿಂನನದರೊಳು ಕಾಯಲೆಂದು । ತ್ಪಂನನಾದೆ
ನು ಮತ್ಸ್ಯರೂಪದ । ಲಾರ್ಣವಾಂತಃಪತಿಕವದು ಕೇಳೆಲೆ ಮಹಾಮತಿಯೆ ॥ ಅಂನೆಗೈತಹುದೊಂದು ನಾವೆ ಮ । ಹಾರ್ಣವದಬದನೇ
ರಿ ನೀನಿರೆ । ಪಂನಗೇಂದ್ರನು ಬಹನು ವಾಸುಗಿ ನಿಂನ ಹೊರೆಗೆಂದ ॥೩೦॥ ಈಸಮಸ್ತೋಷಧಿಯ ಬೀಜವ । ನೈಸನೂ ನಾವೆಯಲಿ
ರಿಸಿ ವರ । ವಾಸುಕಿಯ ನಡನೆಂನಶೃಂಗಾಗ್ರದಲಿ ಕಟ್ಟುವುದು ॥ ನೇಸರಿನ ಬೆಳಗಿಲ್ಲ ಕತ್ತಲೆ । ರಾಶಿಯಾಗಿರೆ ಸಪ್ತಋಷಿಗಳ । ಭಾಸು
ರಪ್ರಭೆಗಳಲಿ ನೀನೊಲಿದಾಡುತಿಹುದೆಂದ ॥೩೧॥ ಧರಿಶೃಂಗಾಗ್ರದಲಿ ನಾವೆಯ । ನರಸ ತಾನಾಡುವೆನು ಘನಸಾ । ಗರಜಲದ ನೀ
ಕಾಂತಪರಿಯಂತೊಲಿದು ಕರುಣದಲಿ ॥ ಚಿರವೆನಾತ್ಮಜ್ಞಾನವನು ನಿನ । ಗರಿವವೋಲೆನುತಖಿಳಲೋಕೇ । ಶ್ವರನು ನಿಮಿಷಾಂತರ
ದಲಂತರ್ಧಾನವನು ನೆನೆದ ॥೩೨॥ ಅರಸ ಕೇಳವನೀಶನಾಮರ । ಹರನ ನುಡಿಗೇಳುತ್ತ ತನುವನು । ಧರೆಯಲೀಡಾಡಿದನು ಜ
ಯಜಯಜಯತುಜಯಯೆನುತ ॥ ಸಿರಿಯರಸನಾಜ್ಞೆಯನು ಶಿರದಲಿ । ಧರಿಸಿದ ಧರ್ಭಾಸ್ತರಣದಲಿ ಕು । ಳ್ಳಿರಲು ನೃಪ ಕೇಳಚ್ಯು
ತಾಂಘ್ರಿಧ್ಯಾನಪರನಾದ ॥೩೩॥ ಇರಲು ಬಂದುದು ಹೇಳಿದಾದಿನ । ಧರಣಿಪತಿ ಪಾರುತ್ತ ಕುಳ್ಳಿರೆ । ಗಿರಿಯ ಮೋಹರದಂತೆ ಗಗ
ನಾಂಗಣವನಾವರಿಸಿ ॥ ಸರಭಸದ ಸಂವರ್ತಮೇಘದ । ಹೊರಳಿ ಹೊಡಕರಿಸಿತ್ತು ದಿಕ್ಕರಿ । ಜರಿಯೆ ಸುರಿದುದು ವೃಷ್ಟಿಯಿಳಿದು ಧರೆಯೆ
ಪಾತಳಕೆ ॥೩೪॥ ಕದಡಿದುದು ಧರೆ ಮೇಲೆ ಮೇಲೇ । ಳುದಧಿ ನೂಕಿತು ನಾಕನೀರೇ । ರಿದುದು ನಡುಮಲೋಕವ ಮೂರು ಮಹಾ

ಬ್ಧಿಮಯವಾಯ್ತು ॥ ಪದುಳಿಸುವರಾರಕಟಕೆಡಿಸಿತು । ಪದುಮಜನಕಡಾನಿದ್ರೆಗಾಡಿಕಾಡಿ । ದುಗಕಪನುಮಾಗಿ ದುಗುಭೂಪನ ಸ್ತೋಮನಿಮಿಷದಲಿ ॥ ೩೫ ॥ ಅತುಳಬಲನುದಧಿಯಲಿಸತ್ಯ । ವ್ರತಮಹೀಪತಿನೆನೆವುತಿರಲ । ಚ್ಯುತನಪದಕಮಲವನುಬಂದು ದುನಾವೆಯಾಕ್ಷಣಕೆ ॥ ಕ್ಷಿತಿಪನೇರಿದನದನುಮುನಿಸಂ । ತತಿಸಹಿತಕೊಂಡಖಿಳಬೀಜ। ಪ್ರತತಿಯನುಮೋಹರದಕ್ಕಗ್ರತ್ತಲೆಯಕಡ ಲೊಳಗೆ ॥ ೩೬ ॥ ನಡುಗಡಲಲಾನಾವೆಬಂದುದು । ಪೊಡವಿಪತಿಯಿದ್ದೆಡೆಗೆಧರೆಯಲಿ । ನಡುಗುವನನೀಕ್ಷಿಸುತಪರಸಪ್ತರ್ಷಿಗ ಳುನೃಪನ ॥ ಪೊಡವಿಪತಿನೆನೆನೆನೆನಿಜಾಶ್ರಿತ । ರೆಡರನೆರೆಯಟ್ಟುವಮುರಾಂತಕ । ನಡಿಗಳನುನೆನೆಬೇಗವಾಡೆಂದರುಮಹಾತು ಮರು ॥ ೩೭ ॥ ನೆನದುನಿಲ್ಲದಮುಂನಕರುಣಾ । ವನಧಿಮೈದೋರಿದನುಕರಗಿದ । ಕನಕದಂತೆಸಮಂಗಕಾಂತಿಯಲಕ್ಷಯೋಜ ನದ ॥ ತನುವಿನಾಯಾಮದಲಿಹೆಚ್ಚಿದ । ವನಧಿಯೊಳಗೋಲಾಡುತಾಡುತ । ಜನಪನೆಡೆಗೈತಂದನನುಪಮನುತ್ಸ್ವರೂಪದಲಿ ॥ ಬರವಕಾಣುತಕಾಣುತವೆನೃಪ । ನೆರಗಿಪುಷ್ಪಾಂಜಲಿಗಳಲಿಮಳೆ । ಗರವೃಕ್ತತ್ತಿದಕರಪುಟದಭಾಳದಲಿಜಯಯನುತ ॥ ಪರಮ ರುಷಿಗಳುಸಹಿತಹರುಷೋ । ತ್ಕರುಷದಲಿಹೊಗಳುತ್ತನಾವೆಯ । ನಿರದೆಕಟ್ಟಿದ[illegible]ಕಶೃಂಗನಶೃಂಗದಗ್ರದಲಿ ॥ ೩೯ ॥ ಎಂಗ ಗೋಚರನಾದೆನೀನೆನ । ಗೆಂತನಾದಿಯೆನಿಪ್ಪವಿದ್ಯಾ । ಭ್ರಾಂತಿಯಲಿಮತಿಗೆಟ್ಟುದೇಹಾಹಂಮತತ್ವದಲಿ ॥ ಅಂತವಿಲ್ಲದದುಃಖ ಶೋಕಾ । ಕ್ರಾಂತವಾದವನೆತ್ತವರವೇ । ದಾಂತವೇದ್ಯನೆನಿಪ್ಪಪರಮಾತುಮನುನೀನೆನುತ ॥ ೪೦ ॥ ಆವನೊಬ್ಬನನರಿಯದೀ ಪರಿ । ಸಾವುತಿದೆಸುಖಬುದ್ಧಿಯಲಿಕ । ರ್ಮಾವಳೀಪಾಶದಲಿಬಿಗಿವಡದದನೆನೆರೆಮಾಡಿ ॥ ಜೀವಚಯನರಿದಾವನಂಘ್ರಿಯ । ಸೇವೆ ಯಲಿಮತ್ತಂತೆಗೆಲುವುದು । ಸಾವುಹುಟ್ಟನುನೀನೆನಗೆಗುರುವೆಂದನಾಭೂಪ ॥ ೪೧ ॥ ಆವನಂಘ್ರಿನಿವಿಷ್ಟವಾದಡೆ । ಭಾವವತಿ ನಿರ್ಮಲಿನವಹುದೀ । ಪಾವಕಾಂತರ್ನಿಹಿತಕನಕದವೊಲುತಕ್ಷಣಕೆ ॥ ಜೀವಜೀವನೆಸಕಲಪಾವನ । ಪಾವನನೆಕರುಣಿಸುವುದೆ ನಗೆಲೆ । ದೇವದೇವನದೇವದೇವಾಧೀಶವಂದಿತನೆ ॥ ೪೨ ॥ ಈವವರುಕಾವವರುಮೇಣೀ । ದೇವದೇವರೆಯ್ದೆನಿಂನಕ್ಕ । ಪಾವಲೋಕನದೊಂದುಲವಲೇಶೈಕಲೇಶ್ಯವನು ॥ ತಾವುಮಾಡಲುಬಲ್ಲರ್ರೈವಮ । ಯಾವಿದೂರರುಮಾರ್ಗದೃಷ್ಟಿಯ । ನೀವ ರೇಜಾತ್ಯಂಧರಂಧರಿಗೆಂದನವನೀಶ ॥ ೪೩ ॥ ನೀನೆಸಕಲಜಗತ್ಸುಹೃತ್ತಮ । ನೀನೆಸಕಲಜಗತ್ಪ್ರಿಯೋತ್ತಮ । ನೀನೆವಂದ್ಯ ನುವೇದರೂಪನುವೇದಕನುನೀನೆ ॥ ನೀನೆದೀನಾನಾಥಬಾಂಧವ । ನೀನೆಸಕಲಾತುಮನುನಿಂನನು । ಹೀನಮತಿಗಳುಭಜಿಸಲರಿ ಯರುಶಿವಶಿವಾಯೆಂದ ॥ ೪೪ ॥ ಜಲಧಿಯಲಿನೀನೆಂನಕಾಯಿದ । ಡೊಲವಿದಲ್ಲಲೆದೇಹಸಂಸ್ಮೃತಿ । ಜಲಧಿಯಲಿಮುಳುಗಿದೆನಲಾ ಮಿಗೆಮುಂದುಗೆಟ್ಟೆನಲ ॥ ಸಲಿಸುವುದುತತ್ವಾವಬೋಧದ । ನೆಲೆಯನಾವೆಯನೆನಗೆನೀನೆನು । ತಿಳೆಗಧೀಶನುಕರಪುಟಾಂಜಲಿಮ ರೆಯೆಪೊಡವಂಟ ॥ ೪೫ ॥ ಇಂತುಮತ್ಸ್ಯಾಕೃತಿಯಲಕ್ಷ್ಮೀ । ಕಾಂತಸತ್ಯವ್ರತಮಹೀಶನ । ಚಿಂತಿತವನೆರೆತಿಳಿದುನಿಜತತ್ವಾ ರ್ಥಸಂಗತಿಯ ॥ ಅಂತರಾತ್ಮಕನರುಹಿದನುನಿಗ । ಮಾಂತಸಾರವನಧಿಕಕರುಣಾ । ಕ್ರಾಂತಮತಿಕರುಣಿಸಿದನೊಲಿದುಪುರಾಣ ಸಂಹಿತೆಯ ॥ ೪೬ ॥ ಜಲಧಿಯೊಳಗೋಲಾಡುತಾಡುತ । ಹೊಳೆವನಿಜತನುಕಾಂತಿಯಲಿಮಂ । ಗಳಮಹೋದಧಿಯಾಮಹೋ ದಧಿಯಂಧಕಾರವನು ॥ ಕಳವುತವೆಸತ್ಯವ್ರತನಮನ । ದೊಲವಿನಿಷ್ಟಾರ್ಥವನುನೆರೆಕೈ । ಗೊಳಿಸಿದನುಕಾರುಣ್ಯನಿಧಿನೃಪಸ ಪ್ತರಾಷಿಗಳಿಗೆ ॥ ೪೭ ॥ ಭಕ್ತಿಯನುಸಂಸಾರವಿಷಯವಿ । ರಕ್ತಿಯನುನಿಜತತ್ವವಿದ್ಯಾ । ವ್ಯಕ್ತಿಯನುವಿಸ್ತರಿಸುತಿರಲುಪುರಾಣ ಮುಖದಿಂದ ॥ ಮುಕ್ತಿನಾಥನವಚನವನುಸು । ವ್ಯಕ್ತದಿಂಕೇಳುತ್ತಗದ್ಗದ । ಸೂಕ್ತಿಯಲಿವಿಜಿತಾತ್ಮನಭಿವರ್ನಿಸಿದನಚ್ಯುತನ ॥ ಜಯನಮೋಜಯಭಕ್ತಭಾಗ್ಯೋ । ದಯನಮೋಜಯಭಕ್ತಹೃದಯಾ । ಲಯನಮೋಜಯಭಕ್ತಭಕ್ತನೆಭಕ್ತದೇಹಿಕನೆ ॥ ಜಯನಮೋಜಯಭಕ್ತಭಾವಿತ । ಜಯನಮೋಜಯಭಕ್ತಜೀವಿತ । ಜಯನಮೋಜಯಭಕ್ತಕರುಣಾನಿಧಿಯೆಜಯಯೆಂದ ॥ ಕಳಿದೆನೀಭವಭಯಸುದುಸ್ತರ । ಜಲಧಿಯನುನೀನೊಲಿದುಕರುಣಾ । ಕಲಿತದಿವ್ಯಕಟಾಕ್ಷವೀಕ್ಷಣವೆಂಬನಾವೆಯಲಿ ॥ ಜಲಧಿ ಯಿದುದುಸ್ತರವೆಮೇಣ । ಕ್ಕಳಿಸುನೆನೆತಾನಿದಕೆನಿಂನೊಂ । ದಲಘುನಾಮದಬಲುಹುತನಗುಂಟೆಂದನಾಭೂಪ ॥ ೫೦ ॥ ಕರು ಣಿಸುವುದೆನಗಿದನೆಜನ್ಮಾಂ । ತರಸಹಸ್ರಂಗಳಲಿನಿಂನಯ । ಚರಣಕಮಲಸ್ಥಿತಿಯನೀನಿಜಭಕ್ತಸಂಗತಿಯ ॥ ಪರಮಕರುಣಾನಿ ಧಿಯೆಪರಮೇ । ಶ್ವರನೆಮಾಡುವುದಾವುದಾನೆನು । ತೆರಗಿಕೃಪೆಯನುಬೇಡಿಮೈಯಿಕ್ಕಿದನುಧರಣೀಶ ॥ ೫೧ ॥ ಸಪ್ತಋಷಿಗ ಳುಸಹಿತಭೂಪಕು । ಲೋತ್ತಮನುಭಜಿಸುತ್ತಕೀರ್ತಿಸು । ತ್ತುತ್ತಮಶ್ಲೋಕನನುವಿಜಿತನಿಜಾತ್ಮನಿಷ್ಠೆಯಲಿ ॥ ಅತ್ತಲಿರೆನಾ ವೆಯಲಿನಲಿದಾ । ಡುತ್ತನಿಜಲೀಲೆಯಲಿಜಂಗಮ । ಧಾತ್ರಿಯಂತೆಸದಿರ್ದನಚ್ಯುತನಾಮಹಾಬ್ಧಿಯಲಿ ॥ ೫೨ ॥ ನೇಸರಿಂಗಂಜದ ತಮಿಸ್ರದ । ಬೀಸಿಗೆಯನೆಲ್ಲವನುಕಳವುತ । ಭೂಸುರಾಂಗಪ್ರಭೆಯಲಹರಿಯುಹೊದರಹೊಯ್ಗಿನಲಿ ॥ ವಾಸುದೇವನಮೂರ್ತಿಪೊ ನಮಾ । ರಾಶಿಯಲಿರಂಜಿಸಿದುದಾಕಮ । ಲಾಸನನರಾತ್ರಾಂತಪರಿಯಂತರಸಕೇಳೆಂದ ॥ ೫೩ ॥ ಉಸುರಲೊಕ್ಕಡೆಕದ್ದುನಿಗಮ । ಪ್ರಸರವನುಕೊಂಡೊಯ್ದುಜುಣುಗಿದ । ದಸುರನನುಕೆಡೆಕುತ್ತಿತಂದಿತ್ತನುಚತುರ್ಮುಖಗೆ ॥ ಅಸಮನಿಗಮಂಗಳನುನೃಪನನು । ಸಸಿನಿರಿಸಿಸಂತವಿಸಿಕರುಣಾ । ರಸಮಹೋದಧಿನೆನೆದನಂತರ್ಧಾನಸಂಸ್ಥಿತಿಯ ॥ ೫೪ ॥ ಭೂವರನೆಸತ್ಯವ್ರತನುಬಳಿ । ಕಾವರಾ

ಮಾಖ್ಯೆಯಲಿಜನಿಸಿದ | ನೀವಿವಸ್ವತನಾತ್ಮಭವನೀಶ್ರಾದ್ಧದೇವನೆನೆ ॥ ಆವುದರಿದಚ್ಯುತನಕಾರು | ಣ್ಯಾವಲೋಕನವುಳ್ಳತತ್ಪ | ಸೇವಕರಿಗಿಹಪರಗಳಲಿಕೇಳೆಂದನಾಮುನಿಪ ॥ ೫೫ ॥ ಹೇಳಿದೆನುಮತ್ಸ್ಯಾವತಾರದ | ಲೀಲೆಯನುಮುರಹರನವಾರಿಧಿ | ಳಿಯನುಮಾರಿತಸಮಸ್ತಾಘೌಘಕೇಳಿಯನು ॥ ಹೇಳುವನುತಾನಾವಮರ್ತ್ಯನು | ಕೇಳುವನುಸಕಲಾತ್ಮನವರನು | ಪಾಲಿಸುವನಭಿಮತಮನೋರಥಸಿದ್ಧಿಗಳನಿತ್ತು ॥೫೬॥ ಪ್ರಳಯಜಲಧಿಯಲಂಡಲೆಂದೇ | ತಳೆದುಮತ್ಸ್ಯಾಕಾರವನುಶ್ರುತಿ | ಗಳನುತಂದಿತ್ತುಬುಜಭವಗಸುರನನುಸಂಹರಿಸಿ ॥ ತಳೆದುಸತ್ಯವ್ರತಗೆತತ್ವವ | ತಿಳುಹಿನಿಜದಲಿನಿಂದಕರುಣಾ | ಜಲಧಿನಿತ್ಯಾತುಮನಮುಖ್ಯಾಕೃತಿಗೆನವೋಯಂದ ॥ ... ... ॥ ೫೭ ॥

ಇಂತು ಸಂಧಿ ೨೨ಕ್ಕಂ ಪದನು ೯೮೨ಕ್ಕೆ ಮಂಗಳಮಸ್ತು

ಇತಿ ಶ್ರೀಮದ್ಭಾಗವತೇ ಮಹಾ ಪುರಾಣೇ ಅಷ್ಟಮಸ್ಕಂಧಸ್ಸಮಾಪ್ತಃ.

ಎಂಟನೆಯ ಸ್ಕಂಧ ಸಂಪೂರ್ಣವು.

ಕನ್ನಡ ಭಾಗವತ ನವಮಸ್ಕಂಧ ಪ್ರಾರಂಭವು.

ವೈವಸ್ವತ ಮನುವಂಶಾಭಿವರ್ಣನೆ.

ಸೂಚನೆ॥ ಹೇಳಿದನುವೈವಸ್ವತನಸುವಿ | ಶಾಲವಂಶಚರಿತ್ರವನುಭೂ | ಪಾಲಮೌಳಿಮಹಾಮಣಿಗೆ
ಮುನಿನಾಥಮನವೊಲಿದು ॥ ... ...

ಪದನು ॥ ಕೇಳಿದೆನುಮನ್ವಂತರಂಗಳ | ಪೀಳಿಗೆಯಪುಣ್ಯಾತ್ಮರಮಳವಿ | ಶಾಲಚಾರಿತ್ರವನುಧರೆಗೆಮಹಾಪವಿತ್ರವನು ॥ ಹೇಳುವುದುವೈವಸ್ವತನವಂ | ಶಾಳಿಸನ್ಮತನೃಪಚರಿತ್ರವ | ನಾಳಿದನೆತನಗೆವಲನಗುತಿಂತೆಂದನಾಮುನಿಪ ॥ ೧ ॥ ಅರಸಕೇಳಾದಿಯಲಿವಿಶ್ವಂ | ಭರನನಾಭಿಸರೋಜದಿಂದವ | ತರಿಸಿದನುಬಳಿಕಜನಜಂಗೆಮರೀಚಿಯೆಂಬವನು ॥ ವರಮರೀಚಿಗೆಕಾಶ್ಯಪನನಂ | ತರದಲದಿತಿಯಲುದಿಸಿದನುಸುರ | ವರವಿವಸ್ವಾನೆಂಬವನುಕಾಶ್ಯಪಗೆಕೇಳೆಂದ ॥ ೨ ॥ ಆವಿವಸ್ವಾನಿಂಗೆಸಂಜ್ಞಾ | ದೇವಿಯಲಿಜನಿಸಿದಕುಮಾರಕ | ನೀವಸುಧೆಗಾಶ್ರಾದ್ಧದೇವನೆನಿಪ್ಪವರತನಯ॥ ಭೂವರನೆಮನುಬಳಿಕಪುತ್ರಮ | ಹಾವಲೋಕನವಿಲ್ಲದಾಪು | ತ್ರಾವಹೇಷ್ಟಿಗೆಬಯಸಿಬರಿಸಿದನಮಳರುತ್ವಿಜರ॥೩॥ ಶ್ರದ್ಧೆಯೆಂಬಾಮನುವನಿತೆಸ | ಶ್ರದ್ಧೆಯಲಿಹೋತೃವಿಗೆನುಡಿದಳು | ಬದ್ಧಕರಪುಟೆಯಾಗಿಪುತ್ರಿಯನೀವುದೆನಗೆಂದು॥ಅಧ್ವರದಲಾಹುತಿಯನಾತ | ದ್ಬುದ್ಧಿಯಲಿಹೋಮಿಸಲುವರಸುತೆ | ಸಿದ್ಧಿಸಿದಳೀಕ್ಷಿಸುತಮನುವಿಂತೆಂದನವರೊಡನೆ ॥೪॥ ಏನಿದೇನೆಲೆವಿಪ್ರರಿರೆನೀ | ವೇನಮಾಡಿದಿರೆಂನಸಂಕ | ಲ್ಪಾನುರೂಪವೊಮೇಣುವಿಪರೀತವೊಸಿಸಿದಯವು॥ ಹೀನಭಾಗ್ಯನುತಾನನೋಘಮಿ | ಧಾನಶೂನ್ಯರೊನೀವೆನಲ್ಕನು | ಮಾನಿಸುತವಾಸಿಷ್ಠನೆಂದನುಭಾನುನಂದನಗೆ ॥ ೫ ॥ ಬುದ್ಧಿವಂತನೆಕೇಳುನೆರೆನಿ | ರ್ಬುದ್ಧಿಗಳುನಾವಲ್ಲನಿಂನೀ | ಶ್ರದ್ಧೆಯಂಬಂಗನೆಯಸಂಕಲ್ಪಾನುರೂಪದಲಿ ॥ ಸಿದ್ಧಿಸಿದಳೀಯಂಬಕಂನಿಕೆ | ಶುದ್ಧಹೋತೃವಿಕರ್ಮದಿಂದದ | ನುದ್ಧರಿಸುವೆನುಮಗಳೆಮಗನಹವ್ರೋಲುನಿನಗೆಂದ ॥ ಎಂದುಕೈಗಳನುಗಿದುಸೂಕ್ತಿಗ | ಳಿಂದಸುರಮುನಿವಂದ್ಯಚರಣ | ದ್ವಂದ್ವವನುವರ್ಣಿಸಲುಮೆಚ್ಚಿದಯಾಬ್ಧಿಮೈದೋರಿ ॥ ಕಂದನಾಗಲಿಕಮಲಮುಖಿಯನ | ಲಿಂದುಸದ್ಯುಮ್ನಾಖ್ಯೆಯಲಿಮನು | ನಂದನನುರಂಜಿಸಿದನುಂನತಪುರುಷವೇಷದಲಿ ॥ ೭ ॥ ಮತ್ತೆಕಾಲಾಂತರಕೆಮೃಗಯಾ | ವೃತ್ತಿಯಲಿಹೊರಪಂಟನೊಪ್ಪವ | ಮಾತ್ಯಜನಸಹಿತೇರಿಸೈಂಧವನೆಂಬತುರಗವನು ॥ ತೆತ್ತಿಸಿದಬಿಲುಸರಳಸೈದಿದ | ನುತ್ತರಾಶಾಮುಖನೆನಿಸಿವರ | ಕೃತ್ತಿವಾಸವಿಹಾರವನವನುಮೇರುವಿನಕೆಳಗೆ ॥೮॥ ಪ್ರೀತಿವಕೇಳ್ಮನೆಸ್ಸಿಂದುದಿವಗಿರಿ | ಸುತೆಸಹಿತಶಿವನಾಡುತದರಲಿ | ಶೃತಿವಿನುತನಿರೆಬಂದರಲ್ಲಿಗೆದೇವಮುನಿವರರು ॥ ರತಿವಿಹಾರದಲಿರಲದನುಕಾ | ಣುತ

ನೆಮರಳ್ವರತ್ತಲಿಕ್ಕಲು । ಸತಿಯುವರನೀಕ್ರೆಸುತನಾಚಿನಳುಟ್ಟಳಂಬರವ ॥ ೯ ॥ ಇಂದುಧರನವನರಿತ್ರಹೊಗಲ । ಲ್ಲಿಂದನೋ
ಣೀವನವಪೆಂಣಹ । ರೆಂದುಶಾಪವನಿತ್ತನಾನಿಜಸತಿಯೊಳವನರಿತು ॥ ಮುಂದುವರಿದಾವನವಹೊಕ್ಕನು । ಮುಂದಮತಿಹೆಂಣಾ
ದನಾಮನು । ನಂದನನುಗೋಳ್ಳಗೆಯುದಾಯ್ತಾ ತುರಗನಾಕ್ಷಣಕೆ ॥ ೧೦ ॥ ನೋಡೆನೋಡಲವರ್ಕ್ಯಪರಿಜನ । ಕೂಡೆಹೆಣಾ
ದ್ರೇನನೆಂಬೆನು । ಕೇಡನೆಣಿಸದಿಹಾರಿಸುತಿರಲುವನದೊಳಗೆ ॥ ಕೂಡಿದನುಬುಧನಾಕೆಗಾದನು । ರೂಢಿಗನುಪಮಾನಾಪು
ರೂರವ । ನೀಡಿರಿಯುಲೊಡಲೊಳಗೆತಾಪವಮಹಾಮಹೀಪತಿಯು ॥ ೧೧ ॥ ಮತ್ತೆ ಕಂಡುವಶಿಷ್ಠನರ್ಥಿಸೆ । ಕೃತ್ತಿವಾಸನನರ್ಚಿ
ಸಿದನಾ । ಮತ್ತಕಾಸಿನಿಪುರುಷನಾಗಲುಬೇಕೆನುತ್ತೊಲಿದು ॥ ಇತ್ತನಾನುಡಿತಪ್ಪದಂತೊಸೆ । ವೃತ್ತತಿಂಗಳುಪುರುಷತಿಂಗಳು ।
ಮತ್ತಕಾಮಿನಿಯುಂಗಲೆಂದುಮಹೇಶ್ವರನುವರವ ॥ ೧೨ ॥ ಗುರುವಶಿಷ್ಠನಕರುಣದಲಿನೆರೆ । ಪುರುಷತನವನುಪಡದುರಾಜ್ಯವ ।
ನಿರದೆಮಾಲಿಸಿಪಡೆದುಸುಕರನುದಕ್ಷಿಣಾಪಥಕೆ ॥ ಅರಸುಮಾಡಿದನುಲ್ಕಲಂಥ್ಯರ । ಸರಸನಿತ್ತು ಪುರೂರವಂಗಾ । ಧರೆಯುನಾಸದ್ಯು
ಮ್ನನೈದಿದನುರುತಪೋವನಕೆ ॥ ೧೩ ॥ ಮತ್ತೆಮನುಮಕ್ಕಳನುಕಾಮಿಸಿ । ಹೊತ್ತುನಿಂದನುತಪವನಾಪುದು । ಷೋತ್ತಮಧ್ಯಾ
ನದಲಿನೂರೇವರುಷಮುನೆಯಲಿ ॥ ಚಿತ್ತವಲ್ಲಭನೊಲವಿನಲಿಬಳಿ । ಕುತ್ತಮೋತ್ತಮಕೀರ್ತಿಪಡೆದನು । ಹತ್ತುಮಕ್ಕಳನನು
ಪಮರನಿಕ್ಷ್ವಾಕುಪೂರ್ವಜರ ॥ ೧೪ ॥ ಭೂತಳಾಧಿಪಕೇಳುಮನುಸಂ । ಜಾತರಾಯಿಕ್ಷ್ವಾಕುನೃಗಶ । ರ್ಯಾತಿದೃಷ್ಟಕರೂಷ
ಕನರಿಶ್ಯಂತನಾಭಾಗಾ ॥ ಜಾತದೃಷ್ಟನೃಷದ್ರನಭಗ । ಖ್ಯಾತಿಯುಳ್ಳದಶಪುತ್ರರಘಸಂ । ಘಾತದೂರರುಮೆರೆದರಾಶಾಶ್ರಾದ್ಧದೇವ
ರೋದ್ಭವರು ॥ ೧೫ ॥ ಆಪೃಷಧ್ರನೆನಿಪವನುಗುರು । ಶೀಪಕನುತಾನಾಗಿತುರುಗಳ । ಕಾಪುತಿರಲಾಶ್ರಮದಲಿರುಳೊಂದು
ಮಿಗನೋಹವನು ॥ ಓಪ್ರೊಪೆಟ್ಟುಲಿಹೊಕ್ಕುಹಿಡಿದುದು । ಗೋವನೊಂದನುಸಂಭ್ರಮಿಸುವಾ । ಗೋವುಗಳಮಧ್ಯದಲಿಕಂಣ್ಗೆ
ರದೆದ್ದನಾವೀರ ॥ ೧೬ ॥ ಸುರಿವಮಳೆಗತ್ತಲೆಯುಲೊಲುವ । ಸ್ವರವನೆಡಕೇಳುತ್ತಹರಿದಾ । ಧರಣಿಪಾಲಕುಮಾರಹೊಯಿಹೊ
ಯ್ಯೆನುತಬೊಬ್ಬಿರಿದು ॥ ಉರವಣಿಸಿಹುಲಿಯೆಂದುಹಸುವಿನ । ಕೊರಳಹೊಯ್ದನಡಾಯುಧದಲ । ಬ್ಬರಿಸುತಾಹುಲಿಪಾಯ್ತುದ
ಡವಿಗನೊಂದುಕಿವಿಹರಿದು ॥ ೧೭ ॥ ಇರುಳುಸವೆಯಲುಕಂಡನಾಹರಿ । ಗೊರಳಹಸುವನುಹಾಯೆನುತಮಿಗೆ । ಮರುಗಿದನುಬ
ಳಿಕಾವಶಿಷ್ಠನುಕಂಡುಕಡುಮುನಿದು ॥ ಅರಸುಮಗನೇನೀನುಶೂದ್ರಾ । ಚರಿತನಾಗೆಂದಿತ್ತಶಾಪವ । ಧರಿಸಿದನುನಿಜಕರ್ಮಫ
ಲವಿಪಾಕತನಗೆನುತ ॥ ೧೮ ॥ ಹರಿಪರಾಯಣನಾಗಿಸಂಯುತ । ಕರಣನಾಗಿಸಮಸ್ತವಿಷಯೋ । ತ್ಕರಗಳಿಚ್ಛೆಯನುಳಿದುಭೂ
ತದಯಾಪರತ್ವದಲಿ ॥ ಧರಿಸಿವಿಷ್ಣುವ್ರತಗಳನುಮರಿ । ಹರಿಸಿದುರಿತವನಾತ್ಮವಿದ್ಯಾ । ಪರಿಣತನುಚರಿಸುತ್ತಲಿರ್ದನುವೀರನವನಿ
ಯಲಿ ॥ ೧೯ ॥ ಜಡಬಧಿರಮೂಕಾಂಧರಂತಿರ । ಲೊಡೆಲನಾಡಿಸುತಿರುಳುಹಗಲೂ । ರಡವಿಯಂನದೆದ್ಯವದಿಚ್ಛೆಗದೇಹವನು
ಸಿಲಿಸಿ ॥ ಮೃಡನಪ್ರೋಲಾಸುತ್ತಲಿರಲೊಂ । ದಡವಿಗಿಚ್ಚುರಿತಂದುದದರಲಿ । ಮಡಿದುದೊಡಲುನಿಜಾತ್ಮಪದದಲಿನಿಂದನಾವೀ
ರ ॥ ೨೦ ॥ ಬಳಿಕಮನುಸುತನಾಕರೂಷಂ । ಗಲಘುಮತಿಕರರೂಷರೆನಿಮಕ್ಕಳುಗಳುತ್ತರದೇಶವಧಿಪರೆಸಲಹಿದರುಧರೆಯ ॥
ತಿಳಿದುಲಾಮನುತನಯಧೃಷ್ಟಕ । ನೊಳುಸುತರುದಾರ್ಷ್ಟಕರುಮಂಶಾ । ನಳಿಧರಾಮರರಾಯ್ತುಬಳಿಕವರುತ್ತರೋತ್ತರದ ॥ ೨೧ ॥
ನೃಗನಸುತನಾಸುಮತಿಸುಮತಿಯು । ಲೊಗದಭೂತಜ್ಯೋತಿವಸುವಸು । ವಿಗೆಪ್ರತೀಕನುಜನಿಸಲಾರಂಗಾಘವಾನವಗೆ ॥ ಭಗಿ
ನಿಮುನಿಸಿದಳಾಘವತಿಯಾ । ಕೆಗೆಸುದರ್ಶನನೆಂಬಪತಿಯೆನೆ । ಸೊಗಯಿಸಿತುನೃಗವಂಶವದುಭೂಪಾಲಕೇಳೆಂದ ॥ ೨೨ ॥ ಅನ
ರಿಶ್ಯಂತನೊಳುಜನಿಸಲ । ನೂನಸಾಹಸಚಿತ್ರಶೇನಕ । ನಾನೃಪತಿಗಾದಕ್ಷನೆಂಬವನವಗೆಮಿಢ್ವಾನು ॥ ತಾನುದಿಸಲಾತನೊಳುಕೂ
ರ್ಚನು ಭಾನುನಿಭಗಸಗಿಂದ್ರಶೇನಕ । ನಾನರೇಶಗೆವೀತಿಹೋತ್ರನುಜನಿಸಿದನುಬಳಿಕ ॥ ೨೩ ॥ ವೀತಿಹೋತ್ರಗೆಸತ್ಯಶ್ರವ
ನೆಂ । ಬಾತನುದಿಸಿದನನನತನುಸಂ । ಜಾತನಾದಪುರಶ್ರವಸನೊಳುದೇವದತ್ತನನು ॥ ಆತನುದಿಸಿದನಗ್ನಿಯೆನಿಪಿ । ಖ್ಯಾತಕಾ
ನೀನಾಖ್ಯನವನಿಸಿ । ಜಾತಕರ್ನದ್ವಿಜನಪೆಶಿಯಿಂಬ್ರಹ್ಮಕುಲವಾಯ್ತು ॥ ೨೪ ॥ ಅನರಿಶ್ಯಂತನಕುಲವನಿಂ । ತಾನುನಿನಗರುಹಿ
ದೆನುದೃಷ್ಟನ । ಸೂನುನಾಭಾನಾಖ್ಯತಾತನವಂಶಸಂಗತಿಯು ॥ ಮಾನನಿಧಿಚಿತ್ರ್ಯಸುನ್ಮೃಶ್ಯಪಿ । ಧ್ಯಾನಕರ್ಮದಲವನಿವೈಶ್ಯತೆ । ತಾನೆ
ಬಂದುದುಬಳಿಕನಾಭಾಗಂಗೆಕೇಳೆಂದ ॥ ೨೫ ॥ ವಿಮುತನಾಭಾಗಂಗೆಸುತನಾ । ದನುಭಗಂಧನತನಯನಾತನ । ತನಯುವತ್ಸಪ್ರೀ
ತಿಬಳಿಕಾವತ್ಸಂಶುಭಾಗುನೆ ॥ ತನಯನಾತಂಗಪ್ರಮಿತಿನಂ । ದನಖನಿತ್ರನವಂಗೆಚಕ್ಷು । ಷ್ಯನುವಿವಿಂಶತಿರಂಹನಾತಂಗರಸಕೇ
ಳೆಂದ ॥ ೨೬ ॥ ಉತ್ತರಿಸಿದನುರಂಹನೀಖನಿ । ನೇತ್ರನಾಧಾವಿರ್ಕಕರಂದಮ । ಪುತ್ರನಾವಿಕ್ಷಾತುಬಳಿಕಮರುತ್ತನೆಂಬವನು ॥
ಪುತ್ರನಾತನಯಜ್ಞದಲಿಸಂ । ವರ್ತನೆಂಬಮಹಾತ್ಮನಾಂಗಿರ । ಸೋತ್ತಮನುಯಾಜಕನುತಾನೆನಿಸಿದನುಕೇಳೆಂದ ॥ ೨೭ ॥ ಆಮ
ರುತ್ತನಪ್ರೋಲುಯಜ್ಞವ । ಭೂಮಿಯಲಿಮಾಡಿದವರಿಲ್ಲುರು । ಹೇಮಮಯವಾಯಜ್ಞಸರಿಕರವೈದೆಸುರವರರು ॥ ಸೋಮ
ಪಾನವಮದಾಂಧರಪುರ । ಸ್ತೋಮವಾಯ್ತುಸಭಾಸದರುಬಳಿ । ಕಾಮರುತ್ತಂಗುದಿಸಿದನುದಮನೆಂಬಸುತನೆಂದ ॥ ೨೮ ॥ ಆದ
ಮಂಗಾರಾಜ್ಯವರ್ಧನ । ನಾದನಾಧೃತಿದ್ಯುತಿಗೆನರಬಳಿ । ಕಾದನಾಕೇವಲನುತತ್ಸುತಬಂಧುಮಾನನೆಲು ॥ ಮೇದಿನೀಪತಿವೇಗ

ತ ು । ತಪ್ಪಿಸಿದನಾಬಂಧುವೆಂಬವ । ನಾದನಾತೃಣಬಿಂದುಬಂಧುವಿಗರಸಕೇಳೆಂದ ॥ ೨೯ ॥ ಬೆರಸಲಾತೃಣಬಿಂದುಬಳಿಕ । ಪ್ಸ ಯಲಂಬುಸೆಯಲಿ ವಿಶಾಲನು । ಧರೆಯಲಿಳೆಬಿಳೆಯೆಂಬಸುತೆಯಿಂತಿಬ್ಬರಾಕೆಯನು ॥ ವರಿಸಿದನುವಿಶ್ರವನುವಿತ್ತೇ । ಶ್ವರನನು ಜನಿಸಿದನಾವಿಶಾಲಂ । ಗರಸಕೇಳ್ಹೇಮಚಂದ್ರನುಬಳಿಕಧೂಮ್ರಾಶ್ವ ॥ ೩೦ ॥ ತನಯನಾಸೃಂಜಯನುಸಹದೇ । ವನುಕೃಶಾಶ್ವ ಸು ೋಮದತ್ತನು । ಜನಿಸಿದನುಬಳಿಕವನುಪಡೆದನುಯೋಗಿಗಳಗತಿಯ ॥ ಜನಪಕೇಳಾಸೋಮದತ್ತನ । ತನಯಸುಮತಿ ಯ ೆಂಗೆಪುತ್ರನು । ಜನಿಸಿದನುಜನಮೇಜಯನುವೈಶಾಲರಿವರೆಂದ ॥ ೩೧ ॥ ಅವನಿಪತಿಕೇಳಂತುತೃಣಬಿಂ । ದುವಿನಕೀರ್ತಿವಿ ರ್ಧನರುಮಾ । ನವನೆನಿಪದಿಷ್ಟನಪರಂಪರೆಯತುಳಭುಜಬಲರು ॥ ಶ್ರವಣಮಾತ್ರದಲಖಿಳದುರಿತೌ । ಘವನುಕೆಡಿಸುವುದಿದು ಧರೆಗಾ । ಭುವನಸುತನಿತ್ಯಾತ್ಮನಾರಾಯಣನಕರುಣದಲಿ ॥ ... ... ॥ ೩೨ ॥

ಪ್ರಥಮ ಸಂಧಿ ಸಂಪೂರ್ಣವು.

ಎರಡನೆಯ ಸಂಧಿ.

ಸುಕನ್ಯಾ ಚರಿತ್ರೆ.

ಸೂಚನೆ ॥ ಒರೆದನುಶರ್ಯಾತಿಯಸುಕನ್ಯಾ । ಚರಿತವನುನಾಭಾಗವಂಶವ । ನೊರೆದನಾಮುನಿನಾಥ ನಾಮನುಜಾಧಿನಾಥಂಗೆ ॥ ... ...

ಪದನು ॥ ಅರಸಕೇಳುಶರ್ಯಾತಿಯೆಂಬವ । ನರಸೆನಿಸಿಮನುಸುತನನಿಂದನು ॥ ಧರೆಗೆಪಾಲಕನಾಗಿಧರ್ಮಪಥೈಕನಿಷ್ಠೆಯ ಲಿ ॥ ಇರೆಸುಕನ್ಯೆಯನಿಪ್ಪಮಗಳ । ಚ್ಚರಿಯನಿಪರೂಪದಲಿಗುಣದಲಿ । ಸರಸಿಜಾನನೆಜನಿಸಿರಂಜಿಸುತಿರ್ದಳವನಿಯಲಿ ॥ ಒ ಂದುದಿನಶರ್ಯಾತಿತನಯ । ನಂದನೆಯನೊಡಗೊಂಡುಪರಿಜನ । ವೃಂದಸಹಿತೈತರುತವಿಪಿನಾಂತರವನೀಕ್ಷಿಸುತ ॥ ಬಂದನಾಚ್ಯ ವನಾಶ್ರಮಕೆಸಾ । ನಂದದಲಿಬಳಿಕಾಸುಕನ್ಯಕೆ । ಮುಂದೆನಲಿದಾಡುತ್ತಲಿರ್ದಳುಸಖಿಯರೊಡನೊಲಿದು ॥ ೨ ॥ ಸುರಗಿಸಂ ಪಗೆನಾಗವನವನು । ತರಳೆನೋಡುತಕಲ್ಪವನವನು । ತಿರುಗಿನೋಡುತಪಾಡುವಳಿಗೀತವನುಭಾವಿಸುತ ॥ ಮರುಗಮಲ್ಲಿಗೆ ಪಾಲತಿಯವನ । ದಿರವನೀಕ್ಷಿಸುತಬಳಿಸಖಿಯರು । ವೆರಸಿಸುಳಿದಾಡುತ್ತಲಿರ್ದಳುನಿಜವಿನೋದದಲಿ ॥ ೩ ॥ ಅಚ್ಚರಿಯನಿಂನೆ ಂದಕೇಳಾ । ಸಚ್ಚರಿತನಿರೆಹುತ್ತಿನೊಳಗುರಿ । ಗಿಚ್ಚನಂತೋರಂತೆಬೆಳಗುವಕಂಗಳನುಕಂಡು ॥ ಅಚ್ಚರಿಯಿದೇನೆನುತಮುಳ್ಳಿಲಿ ಚುಚ್ಚಿದಳುತಾನರಿಯದವಳಂ । ತೊಚ್ಚತಿಳಿದಿದುರಕ್ತವವನಿಗೆಸಾಂತೆಬೆರಗಾಗೆ ॥ ೪ ॥ ಅರಿಯನಾಮುನಿಯಡನುಮನವನು । ಮ ರೆದುಗಾಢಸಮಾಧಿಯಲಿತಾ । ನರಿಯನೇಪರಮಾತ್ಮನಾತ್ಮಶ್ರೀತರಭಂಗವನು ॥ ತರುಬಿದುದುಮಲಮೂತ್ರವಾಧರೆ । ಗುರುವನೃ ಪತಿಗೆಪರಿಜನಕೆಕರಿ । ತುರಗನಿಕರಂಗಳಿಗೆನಿಮಿಷದಲರಸಕೇಳೆಂದ ॥ ೫ ॥ ಆರುಕೃತದೋಷಿಗಳುಮುನಿಗೆಲೆ । ವೀರರಿರಸತಿ ರಿರತಂದಿರಿ । ಮಾರಿಯನುನೀವ್ಸರ್ವಘಾತಾನರಿತೆನಲ್ಲದಡೆ ॥ ಭಾರಿಸುವುದೇಶಿವಶಿವಾಶಾ । ರೀರಧರ್ಮವೆನುತ್ತನಿಜಪರಿ । ವಾ ರವನುಬೆಸಗೊಂಡೆನಾಭೂಮಿಪಾಲನಳವಳಿದು ॥ ೬ ॥ ಹೇಳಿನೀವೆನಲಬಲೆತಂದೆಗೆ । ಹೇಳಿದಳುನಡುಗುತ್ತಮನದಲಿ । ಲೀಲೆಯಿ ಂದಾಡುತ್ತಕಂಡೆನುಹುತ್ತಿನೊಳಗಿರಲು ॥ ಲಾಲಿತಜ್ಯೋತಿಗಳನೆರಡನು । ಸೀಳಿದೆನುಮುಳ್ಳಿನಲಿಹುತ್ತಿನ । ಮೇಲೆನೆತ್ತರುಸು ರಿದುದನುನಾಕಂಡೆನಾಕ್ಷಣಕೆ ॥ ೭ ॥ ಅರಿಯೆನೇನೆಂದಪ್ಪನಾಡಿದ । ಕೊರತೆತಂನದೆನಲ್ಕೆಗಂಡಲ । ಹರಿಯಕೊಯ್ಪಯಲಾಕ್ಷತೆ ರನಾಪಲಾಮುನಿಗೆ ॥ ಬರಿದೆಹೋಗದಿದೆನುತಸುತೆಸಹಿ । ತುರುವಮುನಿಯಿದ್ದೆಡೆಗೆನಡೆದನು । ಹೊರೆಗೆನೀವಿಹುದೆನುತನಿ ಜಪರಿವಾರವನುನಿಲಿಸಿ ॥ ೮ ॥ ಹೋಗಿಕಂಡನುಮುನಿಪನಿರವನು । ಮೂಗಿನಲಿಬೆರಳಿಟ್ಟುಮುಕುಟವ । ತೂಗಿದನುತುದಿವೆರಳ ೊಯ್ಯನೆರಕುತವನುತೊಡದು ॥ ಯೋಗನಿಷ್ಠನಪದಯುಗಕೆತಲೆ । ವಾಗಿರಕ್ಷಿಸುತಂಡೆಕರುಣಾ । ಸಾಗರನೆಯೆನುತಚ್ಚರಿಸಿದ ಮುನಿಯನಾಭೂಪ ॥ ೯ ॥ ಅರುನೀನೆಬಿಭೂಪಮಾಡಿದ । ರಾರಿದೇನನುತಂನಕಂಗಳು । ಸೇರಿದವುಸಾಯುಜ್ಯವನುತಾನೆ ಕಿಚೇತನವ ॥ ತೀರಿತೊಂದರಬಳಿಕೆಲೇಸಾ । ಯ್ತಾರುನೀಹೇಳೆನಲುಕೇಳುತ । ಧಾರುಣೀಪತಿಮತ್ತೆಹಿಡಿದನುಮುನಿಪನಂಘ್ರಿ ಗಳ ॥ ೧೦ ॥ ಮಾನವನುಶರ್ಯಾತಿಯೆಂಬವ । ತಾನುತಂನೀಮಗಳದೆಸೆಯಿಂ । ದೀನಿರೋಧಕೆಬರಿಸಿದೆನಲ್ಲೈತಂದೆನಿಂಮಡಿಯ ॥ ಜ್ಞಾನಶೂನ್ಯನುನಾನುವಿಮಲ । ಜ್ಞಾನನಿಷ್ಠನುನೀನುರಕ್ಷಿಸು । ದೀನನನುದಯೆಯುಳ್ಳವನೆಶರಣಾಗುತನ್ನಗೆಂದ ॥ ೧೧ ॥ ಲುನಕ್ಕುಸುಮುನಿಪನಿಂನೀ । ತನುಜೆಮಾಡಿದೇನುಸಂಚಿತ । ಜನನಕರ್ಮದಫಲವಲಾಪ್ರಾಣಿಗಳಿಗುಪಭೋಗ್ಯ ॥ ಮನೆಗೆ ಡೆಯನೆಮುನಿಪನಂಘ್ರಿಗೆ । ಜನಪನೆರಗಿದನಾವುದಿಂನೀ । ತನುಜೆಯಪರಾಧಕ್ಕೆನಿಷ್ಕೃತಿಕರುಣಿಸುವುದೆಂದ ॥ ೧೨ ॥ ಬ ನೀನೇಯನಲುಮನದೊಳ । ಗುಳ್ಳಿದನುನೃಪನರಿತುಕೊಟ್ಟನು । ಫುಲ್ಲಮುಖಿಯನುಮುನಿಗೆಪರಿಚರ್ಯಾವಿಧಾನದಲಿ ॥ ನಿ

ಲ್ಲೆನುತ್ತಾಮಗಳನಳಿಯನ । ನಲ್ಲಿಯೇಬೀಳ್ಕೊಂಡುಪೃಥ್ವೀ । ವಲ್ಲಭನುಪರಿತೋಷದಲಿನಿಜಪುರಕೆನಡೆತಂದ ॥ ೧೩ ॥ ಇತ್ತ
ಲಂದುಸುಕಂನೆಮುನಿಪನ । ನತ್ಯಧಿಕಹರುಷದಲಿಭಜಿಸುತ । ಚಿತ್ತದನುರಾಗದಲಿವಿಷ್ಣುವೆಯೆಂದುಭಾವಿಸುತ ॥ ಸತ್ವನಿಧಿಯನು
ಸಕಲಭೋಗನಿ । ವೃತ್ತಿಯಲಿಸಂಪಂನಗುಣಜಾ । ರಿತ್ರಪರಿಚರ್ಯೆಯನುಮಾಡುತ್ತಿರ್ದಳೊಲವಿನಲಿ ॥ ೧೪ ॥ ಅವಿಗಡಮುನಿತಂ
ನಮೇಲಿಂ । ತಾವಪರಿಯಲಿತಪ್ಪನೇನೆರೆ । ಭಾವಿಸುತ್ತತಿಕೋಪಿಯಾಗಿರಲದಕೆಬೇಸರದೆ ॥ ಭಾವಶುದ್ಧಿಯಲೆನಗೆಪತಿಯೇ ।
ದೈವವೆಂದಿರಲಲ್ಲಿಗಶ್ವಿನಿ । ದೇವರಿಳಿದರುಬಳಿಕವರನುಪಚರಿಸಿದನುಮುನಿಪ ॥ ೧೫ ॥ ಆರಿಲಿಗೆಬಂದವರುಕೇಳೆನೆ । ಕಾರಣವ
ನಾಪಮುರವೈದ್ಯರು । ಸಾರವೇನುಂಟಾಳ್ದನಕ್ಷಿಗಳಂಗೆಭೈಷಜ್ಯ ॥ ಶ್ರೀರಮಣನೇಬಲ್ಲನೀಶಾ । ರೀರಧರ್ಮವಸಾಧ್ಯವಲ್ಲೆನೆ ।
ಧಾರುಣೀಸುರನೆಂದನಶ್ವಿನಿದೇವರಿಂಗೊಲಿದು ॥ ೧೬ ॥ ಇತ್ತನಾದಡೆಸೋಮವನುಪಿವ । ಗುತ್ತಮರಿರಾಸಲಿಪಿತಂನೀ । ಮ
ತ್ತಕಾಪಿನಿಯೊಲುವರೂಪವನೀವುದೆನಗೆಂದು ॥ ವೃತ್ರರಿಪುವಲ್ಲೆನಲಿಮೇಣಾ । ಕೃತ್ತಿವಾಸನೆಕೆಂಣಬಿಡಲಿವಿ । ಚಿತ್ರವನುತ್ತೋ
ರಿಸುವೆನೀವೆನುಚಿಂತೆಬೇಡೆಂದ ॥ ೧೭ ॥ ಎನಲುಕಂಗಳಲಿಳಿದಹುಬ್ಬಿನ । ತೊನ[illegible]ವಂಗಳಿಯಚೆಲ್ವತ್ರೊಗಲಿನ । ಮುನಿಯ
ನೊಯ್ಯನೆನೆಗಹಿಕೊಂಡುಸರೋವರಾಂತಿಕಕೆ ॥ ಜನಪಕೇಳ್ಬೈದಿದರುನಡುಮಡು । ವಿನಲಿಮುಳುಗಿಸಿಮುಳುಗಿದರುಬಳಿ । ಕನಿ
ಮಿಷೋತ್ತಮರವರೊಡನೆತಾವಾಜಲಾಂತದಲಿ ॥ ೧೮ ॥ ಎದ್ದರಾಮುನಿಗೂಡಿಮುವ್ವರು । ಹೃದ್ಯವೇಷದಕಾಯಕಾಂತಿಯ ।
ಹೆದ್ದೊರೆಯಪೋನಲಿನಲಿಸರ್ವಾಭರಣಕಾಂತಿಯಲಿ ॥ ಕದ್ದವಿನಮಂಡಲದತೇಜವ । ನೈದ್ಯರಾರೆಂನಾಳ್ಬನಾರೆನು । ತಿರ್ದಳಂಗ
ನೆನೋಡಿಮನದಲಿಬಿಗಿದಬೆರಗಿನಲಿ ॥ ೧೯ ॥ ಹೊದ್ದಲಮ್ಮದೆಕೆರಳೆದೊರದ । ಲಿರ್ದಕೈಗಳುಮುಗಿದುಸುರಕುಲ । ವೈದ್ಯರಿರ
ನೀವಾರುಪತಿಯಾರೆವಗೆಹೇಳೆಯನೆ ॥ ಬದ್ಧನರುನಾವಿತ್ತಲಿರ್ದವೆ । ಭದ್ರಮುಖಿಕೊಳ್ಳೆನುತಕೋರಿಭ್ಯ । ಗುಪ್ಪಹನನಡರಿದ
ರುದಿವವನುದಿವ್ಯಮೂರ್ತಿಗಳು ॥ ೨೦ ॥ ಅವರುಗವಿಸಿದರತ್ತಲಾಭಾ । ರ್ಗವನುಮರಳಿದನಿತ್ತಲಾಸತಿ । ವಿವಿಧಕೇಳಿಗಳಿಂದ
ಪತಿಯೊಡನಾಡುತಿರಲಿರಲು ॥ ಸವನದೀಕ್ಷಿತನಾಗಲೆಂದಾ । ಚ್ಯವನಮುನಿಪತಿದರುಶನಕ್ಕಾ । ಭುವನಪತಿಶರ್ಯಾತಿತಾನೈತಂದ
ನಾಶ್ರಮಕೆ ॥ ೨೧ ॥ ತಂದೆತಂನಾಶ್ರಮಕೆಬರಲಾ । ನಂದದಲಿಪದಕೆರಗಲಾಮುನಿ । ಯಂದವನುಕಾಣುತ್ತಹರಸದೆನೃಪತಿನಿಜಸುತೆ
ಯ ॥ ಕೊಂದೆತಂನನುಮಗಳೆನೀನಾ । ರೆಂದುಭಜಿಸುವೆಜಾರನನುಸುರ । ವಂದ್ಯನನುಮುನಿಯನುಬಿಸುಟುಶಿವಪಾಪಿನೀ
ನೆಂದ ॥ ೨೨ ॥ ಕಾತಕಲ್ಪದ್ರುಮವನುಳಿದೀ । ಹೂತಶಾಲ್ಮಲಿಗೆರಗಿದೆಯಲಾ । ಬೂತುಮಾಡಿದೆಮಗಳೆಪಾವನವೆನಿಪುಭಯಕುಲ
ವ ॥ ಖ್ಯಾತಿಯನುಮಾಡಿದೆಮಹಾನ್ವಯ । ಜಾತೆಯರಿಗಿದುಫಲವೆದುರ್ಗತಿ । ಹೇತುವಲ್ಲಾತಾಯೆಹೇಳಂತಸಧ್ವೇನೆಂದ ॥ ೨೩ ॥
ಎನಲುನಕ್ಕಳುಕಾಂತೆಮುನಿಯದಿ । ರೆನಗೆನೀನೆಲೆತಂದೆಮಾಡಿದು । ದನುಚಿತವೆತಾನಲ್ಲಜಾಪಲವಿಲ್ಲಿಮನದೊಳಗೆ ॥ ನೆನೆಯೆನ
ನ್ಯಾಯವನುಭೃಗುಕುಲ । ತನಯಕಾಣಾಮುಂನಿನಳಿಯನೆ । ನಿನಗೆಬೇರಿವನೊಬ್ಬನಲ್ಲೆಂದಳುಸರೋಜಮುಖಿ ॥ ೨೪ ॥ ಏನು
ಬಳಿಕಿದುಮಗಳೆಮಾಡಿದು । ದೇನುಹೇಳೆನೆಬಂದರಿಲ್ಲಿಗೆ । ಭಾನುಸಂನಿಭರಶ್ವಿನೀದೇವರುಯದೃಚ್ಛೆಯಲಿ ॥ ತಾನವರನುಪಚರಿ
ಸಲವರೀ । ಮಾನನಿಧಿವೃದ್ಧನನುಬಳಿಕನ । ವೀನಕಾಯನಮಾಡಿದರುಕೇಳೆಂದಳಬುಜಾಕ್ಷಿ ॥ ೨೫ ॥ ಲೇಸುಮಾಡಿದೆಮಗಳೆ
ನೆಲನೊ । ನೇಸರುಳ್ಳಂನಕರಬದುಕೆನು । ತಾಸುಕಂನೆಯನಪ್ಪಿದನುತಕ್ಕೈಸುತಳಿಯನನು ॥ ತ್ರಾಸಿನಂತಾದನುನೃಪತಿಪರಿ ।
ತೋಷದಲಿಬಳಿಕವರುಸಹಿತಮ । ಹೀಶವಂದ್ಯನುಬಂದನಾನಿಜಪುರಕೆನಲವಿನಲಿ ॥ ೨೬ ॥ ಮಾಡಿದನುಯಜ್ಞವನುಬಳಿಕಾ ।
ರೂಢಿಯೊಡೆಯನುಯಜ್ಞಭಾಗವ ॥ ಮಾಡಿದನುಭೃಗುತನಯನಂದೊಲಿದಾಶ್ವಿನೇಯರಿಗೆ ॥ ನೋಡಿಕಂಡನುಶಕ್ರನಾಹಾ ।
ಕೇಡುಬಂದುದುಯೆನುತಮನದೊಳ । ಗೀಡಿರಿವರೋಷದಲಿಕೊಂಡನುವಜ್ರವನುಮುನಿಗೆ ॥ ೨೭ ॥ ಕೊಂಡನೇವಜ್ರವನಹಲ್ಯಾ ।
ಪಿಂಡನದಕೇನಾಯ್ತುತಂನ । ಗ್ಧಂಡತನಹಾರುವನೊಳಲ್ಲದೆದೊರೆಯದೆಂದೆನುತ ॥ ಭಂಡಫಡಫಡನಾವುಕೊಟ್ಟುದ । ನುಂಡು
ಬದುಕುವದಲ್ಲದೇಕೀ । ಚಂಡಿಸಾಕಾಪರಿಯಲಲ್ಲಿಯೆನಿಲಲಿಭುಜವೆಂದ ॥ ೨೮ ॥ ನಿಲುಕನೆಗಹಿದತೋಳುಗಗನದ । ಲುಳಿದುದ
ಲ್ಲಿಯೆಸಕಲಜನವುಂ । ಮಳಿಸಿಮುನಿಪನಬೇಡಿಕೊಂಡರುನಿಜಮನೋರಥವ ॥ ಸಲಿಸಿದೆವುಸಲಿಸಿದೆವುಕಡಿಸಂ । ಕಲೆಯನಮ
ರಾಧಿಪನಕೃತಕವ । ನಳಿಯಬೇಡೆನಲಿತ್ತನಭಯವನಾಸುರೇಶ್ವರಗೆ ॥ ೨೯ ॥ ಕೇಳಿದೈನೃಪವಿಪ್ರವರರವಿ । ಕಾಲಸಾಮರ್ಥ್ಯ
ವನುಬದುಕುವ । ಡೋಲಗಿಸುವುದುಪರಮರುಷಿಗಳಪಾದರೇಣುವನು ॥ ಕೇಳೆನಿಪಸುರವೈದ್ಯರನುಮುನಿ । ಪಾಲಿಸಲುಭಾಗ
ವನುಪಡೆದರು । ಹೇಳಲೇನದನಧ್ವರಂಗಳಲಂದುಮೊದಲಾಗಿ ॥ ೩೦ ॥ ಧರಣಿಪತಿಶರ್ಯಾತಿಗುದಿಸಿದ । ರರಸಬಳಿಕಾನರ್ತಮುಖ್ಯ
ರು । ತರುಣಿನಾನರ್ಥಾಂಗೆರೈವತನಾಥನಿಂದಾಯ್ತು ॥ ವರಕುಶಸ್ಥಳಿಯೆಂಬಪುರಸಾ । ಗರದಮಧ್ಯದಲಾತನಿಂದವ । ತರಿಸಿದುದು
ಶತಪುತ್ರರಂದುಕಕುತ್ಮಿಮುಖ್ಯರೆನೆ ॥ ೩೧ ॥ ಆಕಕುತ್ಮಿಕತನುಜೆರೇವತಿ । ಲೋಕದೊಳಗತಿಚಲುವೆಗಂಡರ । ನಾಕೆಗಿದರಲಿಕಾ
ಣದೈದಿದನಾಥನಜನೆಡೆಗೆ ॥ ಲೋಕನಾಥನಸಭೆಯಲಂದುವಿ । ವೇಕಿಗಾಂಧರ್ವವನುಕೇಳುತ । ನೂಕಿದನುನಿಮಿಷವನುಪಡೆಯ
ದೆಭೂಪನವಸರವ ॥ ೩೨ ॥ ಗಾನಸಮನಂತರದಲಾಜತು । ರಾನನಗೆವಂದಿಸಿಪಿತಾಮಹ । ನೀನುಬೆಸಸುವುದೆನಗೆತಂನಕುಮಾ

ಕೆಣಿಯೆನಿಪ ॥ ಮಾನವರೆನೆನೆನಗುತಕಮಲಜ। ನಾನೃಪತಿಗಿಂತೆಂದನೆಲೆಮುನಿ ಮಾನಿಧಿಯೆಯುಗಪಲವುಸಂದವುಭೂಮಿಲೋ
ಕದಲಿ ॥೩೪॥ ಇತ್ತಲರೆನಿಮಿಷಾರ್ಧವಿದುನೇ। ಸಪ್ತವಿಂಶತಿಯುಗಚತುಷ್ಟಯ। ವತ್ತಲಾದುದನರಿಯಲಾನಿಜಸುತೆಗೆತಾನಿಂ
ದು ॥ ಉತ್ತಮೋತ್ತಮರುದಿಸಿದರುಧರೆ। ಯುತ್ತಲಾಬಲರಾಮಕೃಷ್ಣರು। ಮತ್ತೆಬಲರಾಮಂಗೆಮದುವೆಯಮಾಡುಹೋಗೆಂ
ದಡಾಗಲೆನುತ್ತಚರಣ। ದ್ವಂದ್ವದಲಿತಲೆವಾಗಿಪುರಕೈ। ತಂದುಕಂಡನುಯಕ್ಷರಿರಲಾಪುರದಲಾಕ್ರಮಿಸಿ ॥ ಸಂದರೆಂಬುದನ
ತುಸತಿಸುತ। ನೃಂದವನುಸಾನಂದದಲಿಗೋ। ವಿಂದನಣ್ಣಂಗಿತ್ತನಾನಿಜಸುತೆಯನೊಲವಿನಲಿ ॥೩೫॥ ಇತ್ತಮಗಳನುಬ
ರಿಕಾಶ್ರಮ। ದತ್ತ್ಯೈದಿದನತಿಸುದುಸ್ತರ। ವ್ರತ್ಯವನುಕೆಡೆಯೊಡವೆನೆನುತಮುಕುಂದನಂಘ್ರಿಯನು ॥ ಚಿತ್ತದಲಿಚಿಂತಿಸುತ
ದನು। ಸತ್ಯನಿಧಿಶರ್ಯಾತಿವಂಶದ। ಉತ್ತಮನುನಿನಗೊರವೆನಿಂತೆಲೆಭೂಪಕೇಳೆಂದ ॥೩೬॥ ಕಿರಿಯನಾಮನುಸುತನುನ
ಭನು। ಚರಿಸುತಿರಲಾಬ್ರಹ್ಮಚರ್ಯವ। ನರಸಕಲಿಯುಂದಾತನೊಡವುಟ್ಟಿದರುತಂಮೊಳಗೆ ॥ ಧರೆಯಹಸುಗೆಯಮಾಡಿಕೊಳಲ
। ನರಿತುಭಾಗಿಯಬೇಡಲೈಯ್ಯನ। ತರುಣಕೇಳೆನೆಬಂದನಾತನುತಂದೆಯಿದ್ದೆಡೆಗೆ ॥೩೭॥ ಯಾನವಮಾಡಿದರಗ್ರಜರುನೀ
ನುವನುಬೇಡದಿರುಧರಣೀ। ದಾನವಾರಿಂಗಾಂಗಿರಸರೈಧರೆಸುಸತ್ರದಲಿ ॥ ಜ್ಞಾನವಂತನೆಸೂಕ್ತವೆರಡನು। ನೀನರುಪುಹೋ
ಮರಿಗಿಲ್ಲಿ। ಜ್ಞಾನವವರಲಿಕೊಡುವರಾತಚ್ಛೇಷವನುನಿನಗೆ ॥೩೮॥ ಅರಸಕೇಳಾತಂದೆಯಾಜ್ಞೆಯ। ನಿರದೆಧರಿಸುತಹೋಗಿ
ಸೂಕ್ತವ। ನೊರದೆನೆರಡನುವೈಶ್ವದೇವಿಕವನುಮುನೀಂದ್ರಂಗೆ ॥ ಸುರಪದವನೆಯ್ದುತ್ತಬಳಿಕವ। ರುರುತರಾಧ್ವರಶಿಷ್ಟಧನವ
ನ। ಕರುಣಿಸಿದರಾತಂಗೆಕೊಂಡನುನಭಗನಾಥನವ ॥೩೯॥ ಕೊಂಡುಬರುತಿರೆಪುರುಷನೊಬ್ಬನು। ಕಂಡುತಡದನುಧನವಿ
ನದು। ಪುಂಡಹೋಗೆನೆತನಗೆಕೊಟ್ಟರುರುಷಿಗಳೆಂದೆನಲು ॥ ಗಂಡುಗಲಿನಿಂಮೈಯ್ಯನಿಹನಿ। ತ್ರಂಡದಲಿಸರಿಕೇಳುಹೋ
ನೆ। ಪಂಡಿತನುನಡೆತಂದನಾನಿಜಜನಕನಿದ್ದೆಡೆಗೆ ॥೪೦॥ ಅಪ್ಪನಿಂಮಡಿಯಂಬನುಡಿಗಳು। ತಪ್ಪದಾದವುಕೊಟ್ಟರೆನಗಾ।
ಪ್ರರಧ್ವರಶಿಷ್ಟಧನವನುಕೊಂಡುಬರುತಿರಲು ॥ ಕಪ್ಪುಮೈಯ್ಯವನೊಬ್ಬನುತ್ತರ। ದುಪ್ಪರದದೆಸೆಯಿಂದಬಂದೆನ। ಗೊಪ್ಪಿಸು
ದಾನೊಡೆಯನೆಂದನುತಂದೆಕೇಳೆಂದ ॥೪೧॥ ಆದಡಹುದೆಲೆಮಗನೆರುದ್ರಂ। ಗಾದಿಯಲಿಕಲ್ಪಿಸಿದಧನವದು। ಮೇದಿನಿಯ
ಧ್ವರದಭಾಗವದಿಲ್ಲಬೇರೊಂದು ॥ ವಾದುಗುಟ್ಟದೆಕೊಡುಮಗನೆಹೋ। ಗಾದಯಾನಿಧಿಗೆನಲುಬಂದನು। ಪಾದದಲಿಮೈಯಿ
ಬಿಂನಹವಮಾಡಿದನುಹದನ ॥೪೨॥ ಎಂದಡೆಂದನುತಂದೆನಿಂಮಡಿ। ಯಂದುದನೆಪಿತನೆಂದನೆಂನನು। ತಂದೆತಪ್ಪಾಯ್ತೊಡೆಸು
ರಿಸಬೇಹುದೆಂದೆನುತ ॥ ಇಂದುಮೌಳಿಯಪದದಲೆರಗಲು। ಕಂದಮೆಚ್ಚಿದೆನೇಳುಬೆದರದಿ। ರೆಂದುಮೈದಡವಿದನುಮನುಸ್ಯ
ನನುದಯಾವನಧಿ ॥೪೩॥ ಸತ್ಯವನೆನಿಂಮೈಯನೆಂದನು। ಸತ್ಯವನೆನೀನೆಂದೆಮಾಡದೆ। ವಿತ್ತಲೋಭವನೆಲೆಮಗನೆಮೆಚ್ಚಿ
ದೆನುಮೆಚ್ಚಿದೆನು ॥ ಇತ್ತೆನಿದಕೋಧನವನೆಲ್ಲವ। ನುತ್ತಮನೆವಿಜ್ಞಾನವನುನಿನ। ಗಿತ್ತೆನೆನುತಡಗಿದನುನಿಮಿಷಾರ್ಧದಲಿಮದ
ನಾರಿ ॥೪೪॥ ಇದುಸಕಲಸೌಭಾಗ್ಯವರ್ಧನ। ವಿದುಸದಾಯುಃಕೀರ್ತಿವರ್ಧನ। ವಿದುಕವಿತ್ವವನೀವುದೀವುದುತದ್ವವಿದ್ಯೆ
ಯನು ॥ ಓದಿಕೇಳುವಕೀರ್ತಿಸುಮನಸದು। ಹೃದಯರಿಗೆಕರುಣಿಸುವನುಂನತ। ಪದವನಾನಿತ್ಯಾತ್ಮನಾರಾಯಣನುಮನ
ನ್ನೊಲಿದು ॥ ... ... ॥೪೫॥

ಅಂತು ಸಂಧಿ ೨ಕ್ಕಂ ಪದನು ೭೭ಕ್ಕಂ ಮಂಗಳಮಸ್ತು

ಮೂರನೆಯ ಸಂಧಿ.

ಅಂಬರೀಷ ಚರಿತ್ರೆ.

ಸೂಚನೆ॥ ಅಂಬರೀಷನೃಪಾಲನಾಸ। ಪ್ತಾಂಬುಧಿದ್ವೀಪಾಧಿಪತಿಯಾನ। ಲಂಬುಜಾಕ್ಷನಭಕುತಿಯಲಿ
ಪಾಲಿಸಿದನೀಧರೆಯ ॥ ... ...

ಪದನು॥ ಧರಣಿಪತಿಕೇಳಾಮನುನೊಗ್ಭವ। ಧರಣಿಪತಿನಾಭಾಗನಿಂದವ। ತರಿಸಿದನುಬಳಿಕಂಬರೀಷನುಮಹೀಪಾಲ॥
ರಮಭಾಗವತೋತ್ತಮನುಸ। ಚ್ಚರಿತನಾತನಮುಟ್ಟದಾದುದು। ಪರಮಋಷಿದೂರ್ವಾಸಶಾಪದಲೆಂಪ್ಯೈತಮಾವೆಂದ ॥೧॥
ಕ್ರವರ್ತಿಗಳರಸನಾಹರಿ। ಚಕ್ರರಕ್ಷಿತನಾಗಿಧರಣೀ। ಚಕ್ರವನುಪಾಲಿಸಿದನಾಶ್ರಮವರ್ಣಧರ್ಮದಲಿ॥ ಶಕ್ರಸಂನಿಭನಖಿಳ
ಲೋಗೋ। ಚಕ್ರಮವಕಾಮದಲಿಕಾಲನ। ಚಕ್ರವನುಕೆಡೆಯೊದೆದನವನೀಪಾಲಕೇಳೆಂದ ॥೨॥ ಕರುಣಿಸೆಲೆಮುನಿನಾಥ
ಪಕುಲ। ಪರಮಭಾಗವತೋತ್ತಮನಸ। ಚ್ಚರಿತಪನುಹರಹರವಿಚಿತ್ರವಲಾಮಹಾಮುನಿಯ ॥ ಪರಮಶಾಪವದೆಂತುನೃ
ಪಲಿ। ಹುರುಳುಗೆಟ್ಟುದುತನಗದನುವಿ। ಸ್ತರಿಸಬೀತನಪುಣ್ಯಚರಿತವನೊರೆಯಬೇಕೆಂದ ॥೩॥ ಪರಮಋಷಿಶಾಪವನುಕ
ವಡೆ। ಹರಿಹರಬ್ರಹ್ಮಾದ್ಯರಿಂಗರಿ। ದರಶನಾವಸಮರ್ಥನೋಹರಹರನುಮಾದೇವ ॥ ಒರೆಯಬೇಹುದುತನಗೆದೇಹವ। ಧರಿ

ಸಿದುದಕಿದೆಫಲವಲಾಯನೆ । ಅರಸನುರುವಿನಯೋಕ್ತಿಗೊಲಿದುಮುನೀಂದ್ರನಿಂತೆಂದ ॥ ೪ ॥ ಶ್ರೀಕೃಷ್ಣಾಯನಮಃ ॥
ಅರಸಕೇಳರಿದಾವುದುಂಟು । ಪರಮಪುರುಷನಭಕ್ತರಿಗೆದು । ಸ್ತರಕೃತಾಂತನಪಾಶವವರನುಮುಟ್ಟಲಮ್ಮದೆನೆ ॥ ನಿರುತವೀ
ಶ್ವರರಿಂಗೆತಾವೀ । ಶ್ವರರುಕಾಣಾಕೇಳುನಿನಗದ । ನೊರವೆನಧಿಕರಹಸ್ಯವನುಜನನಾಥಕೇಳೆಂದ ॥ ೫ ॥ ಅರಸಸಪ್ತದ್ವೀಪಪೃ
ಥ್ವೀ । ಶ್ವರನೆನಿಸಿಭಾಗವತಧರ್ಮವ । ಧರಿಸಿಪರಮೈಶ್ವರ್ಯಸಿದ್ಧಿಗೆತವರುಮನೆಯೆನಿಸಿ ॥ ಸುರಪತಿಯಸಿರಿಗಧಿಕವೆನಿಸುವ । ಸಿ
ರಿಯನನುಭವಿಸುತ್ತಕನಸಿನ । ಸಿರಿಯಿದೆಂದಿದಿರಿಂಗೆವೈಗೊಡದಿರ್ದನಾಭೂಪ ॥ ೬ ॥ ಬಿಸಿಲುದೊರೆಯದಕೆದಲದಾರೋ । ತೃ
ಷೆಯಕಳ್ಳವರಹಸಿಯಮುಣ್ಣಿನೆ । ಮಿಸುಪಮಡಕೆಯುದಕವನುಹೊತ್ತೊಯ್ದುಶಾಲ್ಮಲಿಯ ॥ ಸಸಿಯಸಲಹಿದಡುಂಬರೇನ
ಸು । ಹಸರಿಸಿದವಿಭ್ರಮದವಮಾಯಾ । ವಿಷಯದಲಿಸುಖವೇನೆನುತ್ತವಿರಾಗಪರನಾದ ॥ ೭ ॥ ಯಾಕೆಸಿರಿಯಿದುರಾಜ್ಯವಿದು ।
ನೇಕೆಸತಿಸುತಬಾಂಧವಪ್ರಿಯ । ರೇಕೆಧನಕರಿತುರಗರಥಪತ್ತಿಗಳುತಾವೇಕೆ ॥ ಯಾಕೆಯವ್ವನವಿಷಯಸೌಖ್ಯವಿ । ದೇಕೆಕಾಲನ
ಬಾಯಹೊಗುವೀ । ವ್ಯಾಕುಲಾತ್ಮರಿಗೆನುತನಿಸ್ಪೃಹನಾದನಖಿಳದಲಿ ॥ ೮ ॥ ಅಂತವನುಭಾವಿಸುವಡೀಶ್ವರೆ । ತಂತ್ರವೀಜಗವಾ
ತನಾಟಿಸಿ । ದಂತೆಜಗವಾತುವುದುಜನಿಸುವುದಳಿವುದಾತನಲಿ ॥ ದಂತಿಜಾತ್ಯಂಧಂಗೆಹಲವಾ । ದಂತೆಮಾಯಾಮೂಢರಿಗೆತೋ ।
ರ್ಕಿಂತುನಾನಾತ್ವದಲೆನುತ್ತವಿವೇಕಪರನಾದ ॥ ೯ ॥ ಆವನಂಘ್ರಿಚ್ಛಾಯೆಮಾಯಾ । ದೇವಿಯನಿಸಿಸಮಸ್ತಜಗವನು । ಜೀವ
ರನುನಿರ್ಮಿಸಿಗುಣತ್ರಯಮೂರ್ತಿಭೇದದಲಿ ॥ ಸ್ಥಾವರಕೆಜಂಗಮಕೆಚೈತ । ನ್ಯಾವಲಂಬನವಾಯ್ತುತನಗಾ । ದೇವದೇವನೆ
ದೈವವಲ್ಲದೆಬೇರನಾರೆಂದ ॥ ೧೦ ॥ ಈಸಕಲಲೋಕಾಧಿಪತಿಗಳು । ವಾಸವಬ್ರಹ್ಮಾದಿದೇವರು । ದಾಸರಾಪ್ತನಪದಕೆಸೇವಕರಾ
ಗಿಬದುಕುವರು ॥ ಈಸರವನಾನೆನಗೆಗತಿಯಾ । ವಾಸುದೇವನತತ್ಪದಾಂಬುಜ । ದಾಸರೆಗೆತಾದಾಸೆನೆನುತಿರ್ದನುಮಹೀಪಾಲ ॥
ಕಾಯವಿಡಿದುದಕೇನುಫಲನಾ । ರಾಯಣನನರ್ಚಿಸುವೆನೆನೆಯದೆ । ಬಾಯಿದಣಿಯಲುಬಂಣಿಸದೆತತ್ಕೀರ್ತಿಗುಣಗಣವ ॥ ನಾ
ಯಿನರಿಗಳವೋಲುಬದುಕಿದ । ರಾಯುಷಕೆಫಲವೇನುಕಾಲನ । ಬಾಯತಪ್ಪಿಸುವಂದವಂತೆನುತಿರ್ದನವನೀಶ ॥ ೧೨ ॥ ಎನು
ತಕೃಷ್ಣಪದಾರವಿಂದದ । ಅನವರತನಿಜಮನವನಿಲಿಸಿದ । ನನುಪಮನಗುಣಗಣಕಥಾಕಥನದಲಿವಾಕುಗಳ ॥ ತನುವನಾತ
ದ್ಭಕ್ತಸಂಗವ । ಜನಿತಪರಮಾನಂದಸಿದ್ಧಿಯ । ಅನುಪಮನುಮಾಡಿದನುಮನವೊಲಿದಾಮಹೀಪಾಲ ॥ ೧೩ ॥ ಕಿವಿಗಳಲಿತ
ತ್ಕೀರ್ತಿವಾರ್ತೆ । ಶ್ರವಣದಲಿನಯನಂಗಳೆರಡನು । ಭುವನವಂದಿತನಮಳಲಿಂಗಾಲಯದಿದೃಷ್ಟಿಯಲಿ ॥ ಸವನಿಸಿದತದ್ವಾಸ್ಯ
ಲಿಕಾ । ಯವನುಮಾಡಿದನಿಕರತನುಭೋ । ಗವನುಮರೆದನುಜರದನಾನಿಜರಾಜ್ಯವೈಭವವ ॥ ೧೪ ॥ ತಾನೆನವನುಕಾಲುನಡೆ
ಯಲಿ । ದಾನವಾಂತಕನಾಲಯಕೆತೆರೆ । ತಾನೆನಿಜಹಸ್ತದಲಿಸಾರಿಸುವನುತದಾಲಯವ ॥ ತಾನೆರಗಿಬೇಡುವನುಪದದಲಿ । ಮಾ
ನನಿಧಿಭಕುತಿಯನುನಿಂನಾ । ಧೀನವೆಂನೊಡಲಸುಗಳೆನುತೀಡಾಡುವನುತನುವ ॥ ೧೫ ॥ ಕರಗುವನುಹರಿಚರಣಕಮಲದ । ಪ
ರಿಮಳಾನ್ವಿತದಿವ್ಯತುಳಸಿಯ । ನರಸನಾಘ್ರಾಣಿಸುತತಾನೇತತ್ಪ್ರಸಾದವನು ॥ ಶಿರದಲಾಂತಾಡುತ್ತಕುಣಿವನು । ಕರಯುಗಳ
ಮುಕುಳವನುಶಿರದಲಿ । ಧರಿಸಿತಾನದನಂಬನಾಹರಿಪದನಿವೇದಿತವ ॥ ೧೬ ॥ ತತ್ಪದಾಂಬುಜಭಕ್ತರಿಗೆತಾ । ಕೊರ್ಪುವಿಡಿ
ದೋಲಗಿಸುವನುಸಂ । ತರ್ಪಿಸುವನವರಲಿಸಮಗ್ರೈಶ್ವರ್ಯಭೋಗವನು ॥ ಸರ್ಪರಾಜಮಹಾಶಯನನೊಳ । ಗಿರ್ಪನೆಂದವರಂ
ಘ್ರಿಯುಗಳವ । ನಪ್ಪನನುತಂನೆದೆಯೊಳೀವುದುಕನಗೆನುತ್ತೊಲಿದು ॥ ೧೭ ॥ ಇಂತುಸಕಲೇಂದ್ರಿಯವನಾಶ್ರೀ । ಕಾಂತನಂಘ್ರಿ
ಗೆಸಲಿಸಿಪೃಥ್ವೀ । ಕಾಂತನುತ್ತಮವಿಪ್ರರಭಿಮತದಿಂದರಾಜ್ಯವನು ॥ ಸಂತವಿಸುತಚ್ಯುತಪದಾಬ್ಜೈ । ಕಾಂತಭಕ್ತನುದಾರಗುಣ
ವಿ । ಶ್ರಾಂತಚೇತೋವೃತ್ತಿಯಲಿರಂಜಿಸಿದನವನಿಯಲಿ ॥ ೧೮ ॥ ಅಶ್ವಮೇಧಕ್ರತುಗಳಂದಖಿ । ಳೇಶ್ವರನನಾರಾಧಿಸಿದನವ ।
ನೀಶ್ವರನುಗೌತಮವಸಿಷ್ಠಪ್ರಮುಖರನುನೆರಹಿ ॥ ವಿಶ್ವವಿಭವದದಕ್ಷಿಣೆಯನಿ । ತ್ತಾಶ್ವಚಾಂಡಾಲಾದಿಗಳನಾ । ವಿಶ್ವಮಯವಿ
ಷ್ಣುವೆಯೆನುತರ್ಚಿಸಿದನೊಲವಿನಲಿ ॥ ೧೯ ॥ ಸುರರಿಗೀವಮಾನವವಿಗಾರಂ । ತರವಕಂಡನರಾಮಹಾಧ್ವರ । ಪರಮವಿಭವಾರ್ಚ
ತರಿಗಖಿಳೈಶ್ವರ್ಯಭರಿತರಿಗೆ ॥ ಧರಣಿಪನರಾಜ್ಯದಲಿಬಯಸುವ । ನರರದಾರಾಸ್ವರ್ಗವನುಜರೆ । ನೆರೆಯನರಿಯದಕಾಲಮರಣ
ವನರಿಯದಖಿಳಜನ ॥ ೨೦ ॥ ಎಲ್ಲಿನೋಡಿದಡಧ್ವರಂಗಳ । ದೆಲ್ಲಿನೋಡಿದಡಾಗಮಜ್ಞರ । ದೆಲ್ಲಿನೋಡಿದಡಮಳವೇದಪುರಾಣ
ಸಾಹಿತ್ಯ ॥ ಎಲ್ಲಿನೋಡಿದಡಾಮುಕುಂದನ । ಸಲ್ಲಲಿತಗುಣನಾಮಕೀರ್ತನ । ವೆಲ್ಲಿನೋಡಿದಡಾತ್ಮನಿಷ್ಠರುನೃಪನರಾಜ್ಯದಲಿ ॥
ಸಾರತರಸುಧೆಯಿರಲುವಿಷವನ । ದಾರುಕುಡಿವರುದಿವ್ಯಮಂಗಳ । ಚಾರುಕೃಷ್ಣಕಥಾಮೃತಾಬ್ಧಿಗಳಿರಲನಾಯಸದ ॥ ಘೋರವಿ
ಷಯವಿಷಾಂಧಕೂಪದ । ಲಾರುಕಾಣುತಬೀಳ್ವರೆನುತಮು । ರಾರಿಯಂಘ್ರಿಯನಪ್ಪಿನೈಮರದಿಪ್ಪುದಖಿಳಜನ ॥ ೨೨ ॥ ಧರಣಿ
ಪತಿತಾನಿಂತುರಾಜ್ಯವ । ನಿರದೆಪಾಲಿಸುತಾಮುಕುಂದನ । ಚರಣಕಮಲಪರಾಗನಿಷ್ಠೆಯಲಳಿದಭಾವದಲಿ ॥ ಕರಣವೃತ್ತಿಯನೆ
ಲ್ಲವನುಪರಿ । ಹರಿಸಿಪರಮಾನಂದರಸಸಾ । ಗರದಲಿಹನೊಮ್ಮೊಮ್ಮೆತಾನಿದಿರೆಂಬುದನುಮರೆದು ॥ ೨೩ ॥ ತಂನತನುರಕ್ಷೆಯ
ನುಮಾಡನ । ನನ್ಯನಚ್ಯುತನಖಿಳವೆಂದು । ತ್ಪನ್ನವಿಜ್ಞಾನದಲಿಭಾವವಿಭೇದವನುಮರೆದು ॥ ಮಂನಿಸುತಭಕತನನುಸರಮ ।

। ಪಾರ್ಣವನುನೀನಿಹುದುಭೂಪನ । ಬೆಂನಲೆಂದಸುರಾರಿನೇಮಿಸಿದನುಸುದರ್ಶನವ ॥ ೨೪ ॥ ಚಕ್ರವೇಳ್ದಪ್ಪಿಸುವುದಾಪರ ।
ಚಕ್ರಭಯದಲಿಕವಿವಸಂಸೃತಿ । ಚಕ್ರಘೋರವ್ಯಾಧಿತಾಪತ್ರಿತಯಬಾಧೆಯಲಿ ॥ ಚಕ್ರವರ್ತಿಯನಾತನವನಿಯ । ಚಕ್ರವರ್ತಿವ್ರ
ಜಗಳನುಮಂ । ಶಕ್ರವಂದಿತಧರ್ಮಮಾರ್ಗವನಲ್ಲಿಯದಂದದಲಿ ॥ ೨೫ ॥ ಅರಸಕೇಳೊಂದುದಿನವಾವನ । ಚರಿತನವಮಳದ್ವಾ
ದಶೀವ್ರತ । ದಿರವನಂಗೀಕರಿಸಿದನುಹರಿತುಷ್ಟಿಕರವೆಂದು ॥ ಇವದೆಯಮುನಾತೀರವಮಧುವನ । ಪರಮಪುಣ್ಯಸ್ಥಾನದಲಿತ । ಚ
ರಣಸಂನಿಧಿಯುಂಟೆನುತ್ತೈತಂದನಾಸ್ಥಳಕೆ ॥ ೨೬ ॥ ವರುಷವರಿಯಂತಾವ್ರತವನಾ । ಚರಿಸಿಕಡೆಯಲಿಕಾರ್ತಿಕದಲಾ । ಧರಸಿ
ನೂರುಪವಾಸವನುಕಾಳಿಂದಿಯಲಿವಿಂದು ॥ ಪರಮವಿಭವಗುಣಾನುಸಾರದ । ಅರಸನಭಿಷೇಕವನುಮಾಡಿಸಿ । ಹರಿಪದಾಬ್ಜ
ವನರ್ಚಿಸಿದನಾಗಮವಿಧಾನದಲಿ ॥ ೨೭ ॥ ದಿವ್ಯಗಂಧಾಂಬರವಿಭೂಷಣ । ದಿವ್ಯರತ್ನಪ್ರಕರಮಾಲ್ಯದ । ಅವ್ಯಯನನುರುದಿವ್ಯ
ದೀಪಾರತಿಗಳಲಿನೆರೆಯೆ ॥ ದಿವ್ಯಚಿತ್ತದಲರ್ಚಿಸಿದನಾ । ದಿವ್ಯಮಂಗಳಮೂರ್ತಿಯನುಘನ । ದಿವ್ಯಘಂಟಾರವವಮಹಾನಕವಾ
ದ್ಯರವವೆಸೆಯೆ ॥ ೨೮ ॥ ಇತ್ತುಪ್ರಕೃತಗುಣವಿಪಾಯಸಾದಿಮ । ಹೋತ್ತಮನಿವೇದ್ಯವನುತನುವನು । ತೆತ್ತಿಸಿದನವನಿಯಲಿದಂಡ
ಪ್ರಣಾತಿಗಳುಮೆರೆಯೆ ॥ ನೃತ್ಯವನುಮಾಡುತ್ತಕೇಶವ । ಮೂರ್ತಿಯಿದಿರಲಿನಿಂದುಪುಣ್ಯ । ಸ್ತೋತ್ರವನುಪಠಿಸುತ್ತಭಜಿಸುತ್ತಿರ್ದ
ನನೀಶ ॥ ೨೯ ॥ ಖುರದರಾಪ್ಯದಕನಕಶೃಂಗದ । ತರುಣವತ್ಸಪಯೋಗುಣಾನ್ವಿತ । ಪರಮಲಕ್ಷಣಯುಕ್ತದಿವ್ಯಾಂಬರವಿ
ಭೂಷಿತದ ॥ ವರಕಪಿಲೆನಾನೂರುನಿರ್ಬುದ । ಪರಿಗಣಿತವೆನಲಿತ್ತನವನೀ । ಸುರರಿಗುರುವಿದ್ಯಾತಪೋವ್ರತಯುಕ್ತರಿಂಗೊಲಿದು ॥
ಬಕದಿವ್ಯವರಾಂನಭೋಜನ । ಗಳಲಿಮಂನಿಸಿವಿಪ್ರರನುಮಂ । ಗಳಮಹಾಶೀರ್ಘೋಷವೆಸೆಯಲುನೃಪತಿಬೀಳ್ಕೊಂಡು ॥ ಒಲಿ
ದುಪಾರಣೆಗೆಂದುಮನವನು । ಸಲಿಸಲಾದೂರ್ವಾಸಮುನಿಸಂ । ಕುಲದಶಿಷ್ಯರುಸಹಿತಬಂದನುಭೂಪನಿದ್ದೆಡೆಗೆ ॥ ೩೧ ॥ ಬರವ
ಕಾಣುತ್ತಿದಿರುಗೊಂಡಾ । ಪರಮಋಷಿಯನುಪೀಠದಲಿಸಿ । ತ್ಕರಿಸಿಪಾದ್ಯಾರ್ಘ್ಯಾದಿಸತ್ಕೃತಿಯಿಂದಪೂಜಿಸುತ ॥ ಅರಸನಾತಿಥ್ಯ
ಕೈಮುನವನು । ಕರುಣಿಸುವುದೆನಗೆನಲುಭೂಪನ । ಪರಮಭಕ್ತಿಗೆಮೆಚ್ಚಿಕೈಕೊಂಡನುಮಹಾಮುನಿಪ ॥ ೩೨ ॥ ಸತಿಶಿಬಹೆನಾ
ಹ್ನಿಕವನೆನು । ತಲಘುಮಹಿಮನುಹೋಗಿಯಮುನೆಯ । ಸಲಿಲದಲಿಮುಳುಗಿದನುಭಜಿಸುತ್ತಾಘಮರ್ಷಣವ ॥ ತಳುವಿದನ
ಲಮುನಿಪನೊಂದೇ । ಘಳಿಗೆತಾನಿದ್ವಾದಶೀಯೆನು । ತಳಲಿದನುನೃಪನಿತ್ತಲಾವ್ರತಭಂಗವಾಯ್ತೆಂದು ॥ ೩೩ ॥ ನೆರದವಿಪ್ರೋ
ತ್ತರುನೀವೆನ । ಗೊರವುದೀಸಂಕಟವನೆಂತೋ । ಪರಿಹರಿಸುವೆನುಹೇಳಿವಿಪ್ರಾತಿಕ್ರಮದದೋಷ ॥ ಚರಿಸುವೀವ್ರತಭಂಗ
ದೋಷವಿ । ವೆರಡುಬಂದಿದೆಮಾಳ್ಪುದುಚಿತದ । ಅರಸಪಾರಣೆಯನುನಿರಾಮಯವೆಂದರಾದ್ವಿಜರು ॥ ೩೪ ॥ ಪ್ರಾಶಿತಾಪ್ರಾಶನ
ವೆಂಬುದುದ । ಕಾಶನವುಕೇಳೆನಲುಬರಿಯುದ । ಕಾಶನವಮಾಡಿದನುಪಾರಣೆಗೆಂದುತದ್ವ್ರತದ ॥ ವಾಸುದೇವನನೆನವುತಾಭೂ ।
ಪತಿನಿರಶ್ಯೋತಂದನಾದೂ । ರ್ವಾಸನಾವಶ್ಯಕವಮಾಡಿನೃಪೋತ್ತಮನಹೊರಗೆ ॥ ೩೫ ॥ ಬರಲುನೃಪನಾಸನವನಿತ್ತುಪ । ಚರಿ
ಸಿರಲದನರಿದುಮುನಿಪತಿ । ಕ್ರೆರಳಿದನುಕಲ್ಪಾಂತರುದ್ರನವೋಲುರೋಷದಲಿ ॥ ಮುರಿದಹುಬ್ಬಿನಬಿಟ್ಟಕಂಗಳ । ತಿರುಗುವಾ
ಲಿರೌದ್ರವದನದ । ತರಳದೇಹದತಾಪಸನುನೋಡಿದನುನೃಪವರನ ॥ ೩೬ ॥ ನೋಡಲಾಮುನಿಯಂಘ್ರಿಗಂಜಲಿ । ಗೂಡಿ
ತಾನಾಗಿದನುಕೋಪವ । ಮಾಡಲಾಗದುನಿಂನಕರುಣದಕಂದನಾನೆನುತ ॥ ರೂಢಿಯೊಡೆಯನುತನುವನವನಿಗೆ । ನೀಡಿಬಿದ್ದ
ಸಂಗುಟದಲೀ । ಡಾಡಿದನುಹೋಗೆನುತಜರದುಮುನೀಂದ್ರನಿಂತೆಂದ ॥ ೩೭ ॥ ಎಲವೊಧನಯವ್ವನಮದಾಂಧನೆ । ಕುಲಗೆ
ಕೆದುಷ್ಟಾತ್ಮಕನೆನು । ನಿಲಿಸಿನೀನಾತಿಥ್ಯದಲಿಸತ್ಕರಿಸಿತಾಪಸನ ॥ ಬಲದಲುಂಟೆಮಹಾಪುರುಷಪದ । ನೆಳ್ಳನಭಕ್ತನೆಯುಲ್ಲ
ಂಘಿಸಿನು । ಫಲವನೀಗಳೆನಿಂನದುಷ್ಕೃತಕೆಂದನಾಮುನಿಪ ॥ ೩೮ ॥ ಅರಿಯಲಾದೂರ್ವಾಸನೆಂದರೆ । ಮರೆಯೊಗುವನವು
ರುದ್ರನಂತಕ । ನೆರಗಿಬಡುಕುವೆನಾಕುಬೇರಜಲೇಶಪಾವಕರು ॥ ಶರಗಹಾಸುವರಿಂದುಭೂಪರ । ಮರಿಮಗನೆನೀನೆಂನಪರಿ
ಭ । ದೊರೆಯಲೋಲಾಡಿಸಿದೆನೀಹಪದಿರಿಸಿಹಾಳುವನ ॥ ೩೯ ॥ ನಿಂದಿರಿಕೆಯಲಿನಿಂನನುರುಹುವೆ । ನೆಂದುನೋಡುತ್ರಿಜನಬಲು
ವ । ಸಂದತಾಪಸಗೀಪಸರಪರಿಯೆಂದುಬಗದೆಯಲ ॥ ಇಂದುಧರನಲ್ಲಿನಲಿವೋಣರ । ಏಂದಭವನಡ್ಡೈಸಲಾಗೋ । ವಿಂದ
ನಂದಿಕ್ಕಿಕೊಳಲಿಂನರಿಯಬಹುದೆಂದ ॥ ೪೦ ॥ ಎನುತಜಡೆಗಳಕೆದರಿನಿಂದಿ । ರ್ದನುಪದನುಹೊಂಕರಿಸುತಡಿಗಡಿ । ಗನಲ
ಳುನಿಂದಂತರೋಷಕರಾಳವಂಹ್ನಿಯಲಿ ॥ ಮನಮುಳುಗಿಕೈಯ್ಯಿಕ್ಕಿಹೆಡತಲೆ । ಗನಿಶರಳುಕಲುಕಿತ್ತುಜಡೆಯನು । ಜನಪ
ತಿಂನೆನುತಬೀಸಾಡಿದನುಮೇದಿನಿಗೆ ॥ ೪೧ ॥ ಭುಗಿಭುಗಿಲುಭೋರೆಂದುಕಾರ್ಬೊಗೆ । ನೆಗೆಯೆಧಳ್ಳುರಿಕವಿಯೆಗಗನವೆ ।
ಗುಡುಗಳೆಮುಖನಾಸಿಕಂಗಳಲುರಿವದಾಡೆಗಳ ॥ ಹೊಗರಹೊರಳಿಯಲದ್ವದಂಬರ । ತೆಗದುನಿಂದರುಖೇಚರರುಮುನಿ ।
ಗಳೆನಿಂದನುಜಡೆಯನೆನುತ್ರೋಡಿದುದುಜನನಿವಹ ॥ ೪೨ ॥ ಮೇರುಗಿರಿಕೈಕಾಲತಳದಂ । ತಾರುಭಟೆಯಲಿಕೃತ್ಯಬರೆಪರಿ ।
ವಸತಿಸುತಬಾಂಧವಾದ್ಯರುಬಾಯಬಿಡುತಿರಲು ॥ ಧಾರುಣೀಪತಿಹೆಜ್ಜೆಯನುನೆಸು । ಜಾರಿಸದೆನೋಡುತ್ತನಿಂದನು । ಕಾರ
ಣಿಕ್ಯಾತ್ಮಕೃಷ್ಣನೆತನಗೆಗತಿಯೆನುತ ॥ … … … … ॥ ೪೩ ॥

ನಾಲ್ಕನೆಯ ಸಂಧಿ.

ಸೂಚನೆ॥ ಚಕ್ರಮುರೆಬೆಂನಟ್ಟಿಬರಲಂ । ದಕ್ರಮದಫಲದಲಿಫಲಾಯನ । ಚಕ್ರವರ್ತಿಮುನೀಂದ್ರನೈದಿ
ದನಚ್ಯುತನಪುರವ ॥ ... ...

ಪದನು ॥ ಅರಸಕೇಳುಮುಕುಂದದಾಸರು । ಪರಿಭವಕೆಕ್ಕಳಗಹರೆಬಂದುದು । ಪರಮಪುರುಷನಚಕ್ರವದುಸಂಕಟದ
ಆಕ್ಷಣಕೆ ॥ ಉರುವಕೃತ್ಯೆಯನಟ್ಟಿಸುಟ್ಟುದು । ಸುರರಭಾಪೆನೆದಾರೆಗಳಧ । ಟ್ಟರಿಯಧಾಳಿಯಚೂಣಿಯಲಿಜುಂಬಿಸಿದ ನೆಂ
ಬರವ ॥ ೧ ॥ ಸುಟ್ಟುದಣಿಯದೆಕೃತ್ಯೆಯನುಬೆಂ । ನಟ್ಟಿದುದುದೂರ್ವಾಸಮುನಿಯನು । ಕೆಟ್ಟೆನಿದೆವಿಪರೀತವಾಯಿತ್ತೆದೈವಗತಿ
ಯನುತ ॥ ಬಿಟ್ಟುಕೊಂಡನುಬೆಂನಮೇಲಿಳಿ । ಬಿಟ್ಟಜಡೆಗಳುಜಡಿಯೆಪಾಯೆನು । ತುಟ್ಟುದನುಸಂವರಿಸುತೈದಿದನಖಿಳದಿಗುತ
ಟವ ॥ ೨ ॥ ಓಡಿದಡೆಬಿಡೆನೆನುತಮುನಿಯನು । ಕೂಡೆಬೆಂಬತ್ತಿದುದುಕೃತ್ಯೆಯು । ಮಾಡಿಕೊಲಿಸಿಂನಾಪಡೆಂನೆನುಮೇಣುಭೂ
ವರನೆ ॥ ಆಡಲೇಕಗ್ಗಳಿಕೆಯನುಮ । ತ್ತೋಡೆಲಾರೆನುತೋರುವಹಿಯನು । ಕ[illegible]ಡೆಕಾಳುರಿಕವಿದುಸುಡುವಂದದಲಿಮೋಹ
ರಿಸಿ ॥ ೩ ॥ ಹೇಡಿಮುನಿಹರಿಚಕ್ರಧೃಷ್ಟಿಗೆ । ಬಾಡಿಬಳುಕುತಸಾಗರಂಗಳು । ಮಾಡುವವುಶಾಂತಿಯನುಮುಳುಗಿದಡೆನುತಮು
ನಿಮುಳುಗೆ ॥ ಕೂಡೆಹೊಕ್ಕುದುತಳಮಳಲುಕಾ । ಡೇಡಿನೊಳಗಿಟ್ಟಂದವಾಗಲು । ಬೇಡೆನುತ್ತಲ್ಲಿಂದಸುರಗಿರಿಗುಹೆಗಳನು
ಹೊಕ್ಕ ॥ ೪ ॥ ಹೊಕ್ಕನಾಪಾತಾಳನಿಕರದ । ಚಕ್ಕುಲಿಯತರಗುಗಳನೇತಕೆ । ಕಕ್ಕುಲಿತೆತಾನುರುಬಿದರೆತರಬುವಬಲಾಧಿಕರ ॥
ಸಿಕ್ಕಹೋಗೆನುತೊಡನೆಕವಿತಹ । ಚಕ್ರವನುಕಾಣುತ್ತಹೊಕ್ಕನು । ಶಕ್ರಮುಖ್ಯಮಹಾದಿಗೀಶ್ವರರುಗಳಮರೆಯಂದ ॥ ೫ ॥
ಕರವಮುಗಿದನುಸುರಪನನಲನು । ಮರೆಳಿಬಿಜಯಂಗೈವುದೆಂದನು । ಹುರುಳುಗೆಡಿಸದಿರೆಂನನೆಂದನುಯಮನುನಸುನಗುತ ॥
ನಿರುತಿತನಗೇಕೊಲ್ಲೆನೆಂದನು । ವರುಣನೆಂನೊಳಗಿಂಗದೆಂದನು । ಮರುತತಾನಿದಕಾರೆನೆಂದನುಧನದನಾಮುನಿಗೆ ॥ ೬ ॥ ರವಿ
ಯನಿಂದುವನವನಿಜನನಿಂ । ದುವಿನಮಗನನುಗುರುವನಾಭಾ । ರ್ಗವನನಾಶನಿಯನುಪರೀಕ್ಷಿಸಿರಾಹುಕೇತುಗಳ ॥ ಭವ
ನವನುಹೊಕ್ಕುರಗಯಕ್ಷ । ಪ್ರವರಗಂಧರ್ವಾದಿದಿವಿಜರ । ಕಿವಿಯತಾಗಿಪಿಮೆರಳದನುಮುನಿನಾಥನಳವಳಿದು ॥ ೭ ॥ ಹೋದ
ಯವಮಾಡಕಟನಿಮುಷನಿ । ರಾದರವಮಾಡದಿರುಹೋಗುವೆನು । ವೇದಗರ್ಭನಮರೆಯಸೈರಿಸುಸೈರಿಸುವುದೆನುತ ॥ ಹೋದ
ನಜಲೋಕಕ್ಕೆಬಳಿಕಾ । ಕಾದಜಿಂನಿನಮುನಿಪನೆರಗಿದ । ನಾದಿಮೂರ್ತಿಯಪದಕೆಪಾಲಿಸುತಂನನೆಂದೆನುತ ॥ ೮ ॥ ನೀನುಜ
ಗದಾತ್ಮಕಜಗನ್ಮಯ । ನೀನುಜಗದುತ್ಪತ್ತಿವಿಲಯ । ಸ್ಥಾನಕರ್ತೃಗುಣತ್ರಯಾತ್ಮನುನಖಿಳಶಕ್ತಿಯುತ ॥ ನೀನೊಲಿದುರಕ್ಷಿ
ಸುವುದೆಂನನು । ದೀನನನುಪೇಕ್ಷೆಯಸೆಚತು । ರಾನನನುಕೇಳುತ್ತನಗುತಿಂತೆಂದನವನೊಡನೆ ॥ ೯ ॥ ಉಂಟುಸಂಶಯವಿಲ್ಲ
ಮಾಡುವೆ । ನೆಂಟುಭೂರಿಜಗತ್ತನಿದನೆಲೆ । ನಂಟನಾಚಿಸಬೇಡತಂನನುಚಕ್ರವಿದುಕಂನ ॥ ಗಂಟಲೊಳಯಿಂಕಿಳಿಯದಾ
ವನ । ಬಂಟರಾಪೆರೆಮಗನೆಕಾಣೆನು । ಕಂಟಕಕೆಪರಿಹಾರವನುಮಾತಾಡಬೇಕೆಂದ ॥ ೧೦ ॥ ಪಾರಮೇಷ್ಠ್ಯಸ್ಥಾನವಿಗನೀ ।
ಭೂರಿಜಗವನುನಿಜವಿನೋದವಿ । ಹಾರತಂತ್ರವೆನಿಕ್ಕಮೂಯಾಮಾತ್ರದಲಿರಚಿಸಿ ॥ ಘೋರನೆನಿಸುವಕಾಲನಾಮನ । ಭೂ
ರಿಭ್ರೂಭಂಗದಲಿಭಸ್ಮೀ । ಕಾರವನುಮಾಡುವನುದ್ವಿಪರಾರ್ಧಾವಸಾನದಲಿ ॥ ೧೧ ॥ ಆರುಕಾಲವತ್ರೋರಿದುದನಿಂ । ನೀರುಪಿ
ಗಳೀದಕ್ಷಭೃಗುಮು । ಖ್ಯರವಿಂದುಗ್ರಹನಿಕರವೀಲೋಕಪಾಲಕರು ॥ ಗೌರಿಯರಸನುತಾಸಹಿತಮುನಿ । ವೀರತಲೆಯಲಿ
ಹೊತ್ತುನಡಸುವೆ । ವಾರಿದಕೆತಾವಕಟತಂನಲಿಹರಿವುದಲ್ಲೆಂದ ॥ ೧೨ ॥ ಎಂದಡವನಾಲಿಸುತಮುನಿಮನ । ಗುಂದಿಚಕ್ರಜ್ವಾಲೆ
ಯಿಂದುರೆ । ಬೆಂದುಸೈರಿಸಲಾರದಾಕೈಲಾಸವಾಸಿಯನು ॥ ಮುಂದುಗೆಟ್ಟನುತಂದೆತಂದೆರಕ್ಷಿಸು । ಕಂದನನುಮರೆಹೊಕ್ಕೆನೆನು
ತಿರ । ಲಿಂದುಧರನಿಂತೆಂದನಂಘ್ರಿಗೆಬಿದ್ದವನನೆಗಹಿ ॥ ೧೩ ॥ ಅಗದಾಗದುಮುಂಬೆಬರಬೇ । ಡಾಗಮಜ್ಞನೆತಂನನೇತಕೆ । ತಾ
ಗಿನೋಡುವೆತುಷವನಾಮೇರುವಿಗೆಸರಿಯಂದು ॥ ಬೇಗೆಯನುಬಿಸುಡದಿರುತಂನಲಿ । ಲೋಲನಾನೆಯಲಾಮಹಾತ್ಮನೆ । ತಾಗು
ಧಟ್ಟಿಗೆಯನುವಿಚಾರಿಸದಿಂದುಮರುಳಾಗಿ ॥ ೧೪ ॥ ಸ್ಥಾವರಕೆಕರಜೀವಸಂತತಿ । ತೀವಿದೀಬ್ರಹ್ಮಾಂಡಕೋಟಿಗ । ಳಾವನೊ
ಳಗಾಡುತ್ತಿಹವುವರೆಮಾಣುಚಯದಂತೆ ॥ ಭಾವಿಸಲುತಾನವನಿದರೊಳು । ಜಾವಳವೆಜಗವಳಿದುದಗಲಕೆ । ದಾವಶಿಖಿಯಲಿದಾ
ಷ್ಟ್ರವೇಮುನಿನಾಥಕೇಳೆಂದ ॥ ೧೫ ॥ ಅರಿಯೆನಾಸಜನರಿಯನೀಮುನಿ । ವರರುನಾರದಕಪಿಲಸನಕಾ । ದ್ಯರುಮರೀಚಿಪ್ರಮು
ಖರೀಸುರಲೋಕಪಾಲಕರು ॥ ಅರಿಯರಾವನಮಾಯೆಯನುಮೈ । ಮರೆದವಿದ್ಯೆಯನಿದ್ರೆಯಿಂಬೆ । ಚ್ಚರಿಯಲೀಸಂಸಾರವ[illegible]
ಯಾವ್ಯತರುನಾವೆಂದ ॥ ೧೬ ॥ ಬಾಯಬಿಡಬೇಡೆಂನತಂನಲಿ । ಬೀಯವಾಗದುಬೇಗೆತಾನಾ । ರಾಯಧವಿದಾತನನೆಮರೆಯೆ[illegible]
ಗುಜಗದಧೀಶ್ವರನ ॥ ಆಯುಮಂತನೆಹೋಗೆನಲುನಾ । ರಾಯಣನಗತಿಯೆನುತಬಳಿಕಾ । ಸಾಯಲಾರದೆಮುನಿಪನಲ್ಲಿಂದಿರದೆಪೈ
ರವಂಟ ॥ ೧೭ ॥ ಕೀಪಿಡುಭಯಗುಣಪ್ರಪಂಚದ । ಲೇಸೆನಿಪನಿಜತತ್ವನಿಷ್ಟರೆ । ಬೀಸಿಗೆಯಸಂಪಂನಸಹಜೈಶ್ವರ್ಯಸಿದ್ಧಿಗಳ

ಾಸನರ್ಗದಹರವಿರಿಂಚಶಾ । ಧೀಶವರ್ಗದಪರಮಪುರುಷಾ । ವಾಸವೆನಿಪವಿಕುಂಠಪುರದೆಡೆಗೈದಿದನುಮುನಿಪ ॥ ೧೮ ॥ ಹೊ
ನಾಪುರವರವನಾಯತಿ । ಚಕ್ರವರ್ತಿತಪ್ಪೊಂಬಲನೆಲೆ । ಚಕ್ರರಾಜನೆಸ್ಯೆರಿಸಿದರೊಳಗಿಲ್ಲಶೈತಾಪ ॥ ಅಕ್ರಮವಪಾಡಿದಿರೆನು
ಹಿರ । ದಿಕ್ಕಿಬಾಗಿಲನೇಳನಾನಿರು । ಪಕ್ರಮದನಿಜದೈವದಂತಃಪುರಕೆನಡೆತಂದ ॥ ೧೯ ॥ ಮೇಳದಷ್ಟೈಶ್ವರ್ಯಸಿದ್ಧಿಗ । ಳೋಲ
ರಚಾಷಷ್ಟಿವಿದ್ಯಗ । ಳೋಲಗದವೆರವಾಪನಿಷದಂಗನೆಯರೋಲಗದ ॥ ಮೂಲವಿದ್ಯಾಶಕ್ತಿಗಳಸಾ । ಲೋಲಗದಸಂಭ್ರಮ
ನೀಕ್ಷಿಸಿ । ಸಾಲಭಂಜಿಕೆಯಂದವಾದನುಮುನಿಪನ್ಹೆತರುತ ॥ ೨೦ ॥ ಪಿರಿಯಕರತಳನಿಹಿತನ್ಯದುಪದ । ಸರಸಿಜಜಘ್ನೆಗಳ
ಾನು । ಸ್ಫುರಿತಚಾರುರುಗಳಪೀತಾಂಬರದಕಟಿತಟದ ॥ ಅರುಣಮಣಿನೂಖುಲೆಯಕಾಂತಿಯ । ಮೆರವನಾಭಿಸರೋಜಪ್ರೊ
ಪ್ಪವ । ತರುಣತುಳಸೀಭೂಷಣನಮೂರ್ತಿಯನುಮುನಿಕಂಡ ॥ ೨೧ ॥ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ ॥
ರೆದೆರದಲೋಚನದಕಾಂತಿಯ । ಕುರುಳುಗಳಕಮನೀಯಭಾಳದ । ಸಿರಿಮುಡಿಯ ಮಲ್ಲಿಗೆಯನುಣಿಕುಂಡಲದಕೌಸ್ತುಭದ ॥
ರಿತತೇಜದದಂತಪಂಕ್ತಿಯ । ವರರುಚಿರಬಿಂಬಾಧರದಮೋ । ದುರಮನೋಹರಮೂರ್ತಿಯನುನೋಡುತ್ತನಡೆತಂದ ॥ ೨೨ ॥
ಾಸುರನೆನಿಪ್ಪುರಗರಾಜನ । ಹಾಸಿನಲಿಮುಡಿದರಳುಮಲ್ಲಿಗೆ । ಸೂಸೆನಿಡಿದೋಳುಗಳನಿಗಮದಕಾಂತಿರಂಜಿಸಲು ॥ ವಾಸನೆಗಳ
ಮರದುಕರುಣಾ । ರಾಶಿದವಡಿಸಿರಲ್ಕೆಕಂಡಾ । ದೇಶಿಗನುದಂಡಪ್ರಣಾಮವಮಾಡುತೈತಂದ ॥ ೨೩ ॥ ಬಂದುಮೈಯಿಕ್ಕಿ
ನುಚರಣ । ದ್ವಂದ್ವದಿದಿರಲಿಜಯಜಯಾಖಿಳ । ವಂದ್ಯರಕ್ಷಿಸೆನುತ್ತಕೈಗಳಮುಗಿದುನಿಂದಿರ್ದ ॥ ಕಂದೆರದುನೋಡುತ್ತನಡು
ತ । ಹಂದೆಹಾವನುಮೆಟ್ಟದಂತಿರ । ಲಂದುಬಿಂನಹಮಾಡಿದನುಬೇಗೆಯನುಮುನಿನಾಥ ॥ ೨೪ ॥ ಅರಿಯದಪರಾಧವನುಮಾ
ಡಿದೆ । ನುರುವನಿಂನೇಕಾಂತಭಕ್ತಗೆ । ನೆರೆಯನೀಧರೆಗೇವನೀನೃಪನೆಂದಹಂಕರಿಸಿ ॥ ಬರಿದೆಬಳಲಿದೆನೆಂನಮನದಾ । ಸರನುಕ
ಯುಲಿತಂದೆಹೊಕ್ಕೆನು । ಮರೆಯನೀನಿಂನಂಘ್ರಿಕಮಲವೆತನಗೆಗತಿಯಂದ ॥ ೨೫ ॥ ಮತ್ತಗಜವನುಕಣಿಪಿತಿವಿದೋ । ಡು
ಜೀವಿಸಲಾಡಲವತಾ । ಹತ್ತಿದಂತಾಯ್ತೆಲೆಕೃಪಾವಾರುಧಿಯೆನಿಂಮಡಿಯ ॥ ಭೃತ್ಯನಲಿಕಣಿಶಿದಡೆನೆರೆಬೆಂ । ಬತ್ತಿದುದುನಿಜ
ಕ್ರವಮರರ । ಮೊತ್ತವನುಮರೆಯೊಕ್ಕೆನೆಂನೀಜೀವಲೋಭದಲಿ ॥ ೨೬ ॥ ಇಂನುಗತಿಬೇರಿಲ್ಲಶರಣಾ । ಪಂನನಾದೆನುದೇ
ನಿಂಮಡಿ । ಯುಂನತಾಂಘ್ರಿಯನೀಪರಿಯನಿಂನೀಪ್ರಭಾವವನು ॥ ಮುಂನತಾನಿದನರಿತಡಕಟ । ಬಂನಬಡುವೆನೆನಿಂನಭ
ರಿ । ಗಂನ್ಯನಹೆನೇದೇವಮಾಯಾಮೂಢನಾನೆಂದ ॥ ೨೭ ॥ ಅದಕೆಹರಚಿತವೇನುತನಗೆಂ । ಬುದನುದೇವರುವಿಧಿಸುವುದು
ಾ । ವುದುಕೃತಘ್ನೆನೆನೆಂನನೊಲಿದುಕೃಪಾಕಟಾಕ್ಷದಲಿ ॥ ಕುದಿವುತಿದೆತಂನೊಡಲುಘನತಾ । ಪದಲಿನೀನೇಬಲ್ಲೆನಿಂನೀ । ಪದ
ಯೊಜಪರಾಗಶರಣಾಗತನುತಾನೆಂದ ॥ ೨೮ ॥ ನರಕಿಗಳುಸಹಿತಾವದೇವನ । ಪರಮಮಂಗಳದಿವ್ಯನಾಮ । ಸ್ಮರಣೆಯನು
ರದೊಂಮೆಮಾಡಿದಡವರುಮುಕ್ತರೆನೆ ॥ ನಿರುತನಿಂಮಡಿಗಳನುಕಂಡೆನ । ಗರಿದೆಕಂಡ್ಡರದೊಂಮೆಕರುಣಾ । ಕರನೆನೋ
ಡುವುದೆನುತವೈಯಿಕ್ಕಿದನುಮುನಿನಾಥ ॥ ೨೯ ॥ ಎದ್ದನಾಲಿಸುತೊಯ್ಯನಾನಿಜ । ನಿದ್ರೆಯನುಕೆಲಕೊತ್ತಿಕರುಣಾ । ಮುದ್ರಿ
ಕ್ಷಣನೊಸರುವೆಳೆನಗೆವೆಳಸುಪಸರಿಸಲು ॥ ಖದ್ಯಜನಮೇಲ್ವಾಸಿನಲಿಕು । ಳ್ಳಿರ್ದಮುನಿಪನುಕೊಳ್ಳಿರಿಸಿಕೊಂ । ಡೆದ್ದೆಯ
ನಮಾತಾಡಿದನುಮಂನಿಸುತಮುನಿಯೊಡನೆ ॥ ೩೦ ॥ ಎಲೆಮುನಿಪನೀನಿತ್ತಲಾನ । ಗ್ಗಳಯನೆಂದೈತಂದೆನಿಜವನು । ತಿಳಿದು
ತಾಭಕ್ತರಿಚ್ಛೆಯದೇನನೆಂಬುದನು ॥ ಸಲಹುವರುಪಂಜರದಗಿಳಿಯಂ । ತುಳಿದಮಾತೇಕೆಂನನೇಹ್ಯ । ಜ್ಜಲಜದಲಿಭಾವಿಸು
ಭಕ್ತರಭಕ್ತತಾನೆಂದ ॥ ೩೧ ॥ ಭಕ್ತಹೃದಯಪ್ರಿಯವಿದೆಂದೇ । ಮೂರ್ತಿಗೊಂಡಿಹನಲ್ಲದೆನೆಗೇ । ಮೂರ್ತಿಯಲಿಫಲವೇನು
ೀಣೀಶಿರಿಯಲಹುದೇನು ॥ ಹತ್ತಿಹಳುತಾನಲ್ಲದೆನಗಾ । ಸಕ್ತಿಮಾತ್ರವೆಯಿಲ್ಲವೆನಗಾ । ಕ್ತತ್ತಿವಾಸವಿರಿಂಚಿಮುಖ್ಯರೊಳಿಲ್ಲನು
ನೆಂದ ॥ ೩೨ ॥ ಅಂತರವನೀನರಿಯೆನಿಜಸತಿ । ಸಂತತಿಪ್ರಿಯಬಾಂಧವಾದ್ಯರಿ । ನಂತವಿಲ್ಲದಧನವನಾತ್ಮಪ್ರಾಣಪಶುಗೃಹವ ॥
ತಿಸದೆಬೀಸಾಡಿತಂನೇ । ಕಾಂತಭಕ್ತರೆನಿಪ್ಪಶರಣರ । ನೆಂತುಮರವೆನುಬಿಡುವೆನೆಂತಿಹಪರವನುಳಿದವರ ॥ ೩೩ ॥ ಇಹ
ಬಾಂಧವರನುಳಿದಾ । ಮತಿಯುತರನಾನುಳಿದಡಾವುದು । ಗತಿಯವರಿಗೆಲೆಮುನಿಪಬಿಡಲರಿವೆನೆಸೆವಾಶ್ರಿತರ ॥ ಪಿತೃಗೃಹವನು
ದಾಪತಿವ್ರತೆ । ಪತಿಯನುಳಿಯಲೇನಹಳುತಂನದು । ಕೃತಕವಲ್ಲೆಲೆಮುನಿಪಮನ್ಮಥವೈರಿಯಾಗೆಂದ ॥ ೩೪ ॥ ಒಲವಪುರು
ನನೊಲಿಪಸತಿವಶೆ । ದೊಳಗೆಪೊಂಡುವಪೊಂಲುನಿಜಪದ । ನಳಿನಯುಗಳಪರಾಗಶರಣರುಭುವನಜನವರಿಯೆ ॥ ಒಳಗುಮಾ
ತುವರೆಂನನೇತಕೆ । ಹಲವುಮಾತುಗಳೀಸ್ವತಂತ್ರದ । ಟಳಕೆಯವರೊಳಗಾಗದೆಂದನುನಗುತಮುರವೈರಿ ॥ ೩೫ ॥ ಭಕ್ತರೊ
ಗಾನಿಹೆನುತಂನೊಳು । ಭಕ್ತರಿಹರೆಲೆಮುನಿಪಬಹಳಾ । ಸಕ್ತಿಯಲಿತಂನಂಘ್ರಿಕಮಲವನೆನೆವುತಿಹರಾಗಿ ॥ ಭಕ್ತಯೋಗಕ್ಷೇ
ಮನಿರ್ವಾ । ಹೋಕ್ತನಾನವರಿಂದಭಕ್ತರ । ಭಕ್ತನಾನನಗವರಮೇಲವಧಾನಹಿರಿದೆಂದ ॥ ೩೬ ॥ ಆವಸುಖವೊತನಗೆತಾನೀ ।
ಸೇವೆಯೆಸುಖವೆಂನಚರಿತಸು । ಧಾವಗಾಹವೆಸಕಲಸಿದ್ಧಿಗಳೆಂಬರೀಪದವ ॥ ಆವುದನುತಾನಿತ್ತಡೊಲ್ಲರು । ಸಾವುಹುಟ್ಟುಗಳಿ
ಲ್ಲದಾನಿಜ । ಭಾವವನುಸಹಿತೊಲ್ಲರೆಂತುಟೊಭಕ್ತರೊಲವೆಂದ ॥ ೩೭ ॥ ಸೋಲವೆನಗೆಂನದಿರುತಂನಯ । ಸೀಲವಿದುನಿಜಭಕ್ತ

ರಿಷ್ಟನ । ಪಾಲಿಸುವಸುವ್ರತವಲಾತನಗಾಗದಿಂನೊಂದು ॥ ಅಲಯಕೆಬರೆನಿಸ್ಟರವನಾ । ಹೇಳಲಂಮೆನುಹೋಹುದಾಭೋ । ಪೋ
ಲನಲ್ಲಿಗೆತಂನಕೈಜಾಲಿಹರಿನೃಪನಲ್ಗೆಂದ ॥ ೩೮ ॥ ಅರಡಿಸಿಯಿಂದಾಯ್ತು ನಿನಗೀ । ಘೂರಿಸಂಕಟವಾತನೇಪರಿ । ಪಾರವನುಪಾ
ಡುವನುಸಡತಿಶ್ರಮವಮಾಡಿದಡೆ ॥ ಸೇರುವುದುತತ್ಫಲವದೇತನ । ಗಾರುಷೇಯಪ್ರವರಮತವಿದು । ಕಾರಣವನೀನರಿಯದವ
ನೇತಂದೆಹೋಗೆಂದ ॥ ೩೯ ॥ ವಿಪ್ರರಿಗೆವಿದ್ಯಾತಪಸ್ಸುಗ । ಳುಪ್ಪರದಗತಿಹೇತುಗಳುವಿನ । ಯಪ್ರಯತ್ನಾನ್ವಿತರಿಗಲ್ಲದಡವೆ
ವಿಪರೀತ ॥ ಆಪ್ರಿಯರತನದಿಂದಮಾಡಿದೆ । ದರ್ಪವನುಯಲೆಮುನಿಪನಿಂನಲಿ । ತಪ್ಪದಾರುವನಲ್ಲನೃಪನಿದಕಂಜಬೇಡೆಂದ ॥
ಮುಪ್ಪುವಿದ್ಯೆಗೆದುರ್ವಿನೀತಿಯೆ । ಮುಪ್ಪುಯಜ್ಞಕ್ಕನೃತವಚನವೆ । ಮುಪ್ಪುವಿಪ್ರರಮೇಲೆದೋಷವಹೇಳಲಾಯುಷಕೆ ॥ ಮು
ಪ್ಪುಗರ್ವನಲಾತಪಸ್ಸಿಗೆ । ಮುಪ್ಪುಪರಕೀರ್ತನವೆದಾನಕೆ । ಮುಪ್ಪುಯತಿಗರಿವರ್ಗವೃದ್ಧಿಯೆಮುನಿಪಕೇಳೆಂದ ॥ ೪೧ ॥ ಏಕೆ
ತಪವೀವಿವಿಧವಿದ್ಯೆಗ । ಳೇಕೆಸಕಲಪ್ರಾಣಿಜಾತಹಿ । ತೈಕವರ್ತಿಗೆನಿರುತಕಾಮಕ್ರೋಧವರ್ಜಿತಗೆ ॥ ಲೋಕಹಿತವಾತ್ಮಹಿತ
ವೆಂಬವಿ । ವೇಕವನುನೆರೆಮರೆಯದಿರುಸುಖಿ । ಗಾಕುಲತೆಬೇಡಾಮಹಾತ್ಮನಹೊರೆಗೆಹೋಗೆಂದ ॥೪೨॥ ರುದ್ರವಿಹಿತಾಂಶಾವ
ತಾರನೆ । ರೌದ್ರವಿದುನಿಜಸಹಜನೈಸಲೆ । ನಿದ್ರಿತನುನೀನಾಗದಿರುನಿಜಯೋಗಮಾಯೆಯಲಿ ॥ ಭದ್ರವಹುದಾತನಲಿಹೋಗೆ
ನು । ಕದ್ರಿಧರನಂದೊಲಿದುತಾಪಸ । ಮುದ್ರನನುನಿತ್ಯಾತ್ಮನಾರಾಯಣನುನೇಮಿಸಿದ ॥ ... ... ॥೪೩॥

ಅಂತು ಸಂಧಿ ೪ಕ್ಕಂ ಪದನು ೪೩ಕ್ಕಂ ಮಂಗಳಮಸ್ತು

ಐದನೆಯ ಸಂಧಿ.

ಅಂಬರೀಷರಾಯನು ದೂರ್ವಾಸರನ್ನು ಉಪಚರಿಸಿದ್ದು.

ಸೂಚನೆ ॥ ಸ್ತುತಿಸಿಚಕ್ರವನಂಬರೀಷ । ಕ್ಷಿತಿಪನಾದೂರ್ವಾಸಮುನಿಯನು । ಸತ್ಕರಿಸಿಸಂತವಿಸಿಕಳು
ಹಿದನುಚಿತವಚನದಲಿ ॥ ... ...

ಪದನು ॥ ಇಂತೆನಲುಬೆರಗಾಗಿಲಕ್ಷ್ಮೀ । ಕಾಂತವಚನವನಾಲಿಸುತಮುನಿ । ಕುಂತವೆಡೆಯಲಿತಾಗಿದಂತುರೆನೊಂದುಬಿ
ಸುಸುಯ್ದು ॥ ಚಿಂತಿಸಿದನೆಂನಂತೆಭಂಗವ । ನಿಂತುಬೆಳೆದವರಾರುತಾಪಸ । ಸಂತತಿಯಲೆನುತಾದಿಮೂರ್ತಿಯಯೆರಗಿಬಿಳ್ಕೊಂ
ಡ ॥ ೧ ॥ ಹರಿಪುರವಹೊರವಂಟುತಾಪಾ । ತುರನುಮರಳಿದತಾಪಸರಿಗೀ । ನಿರಭಿಮಾನತೆವರತಪೋವರ್ಧನವಿದೆಂದೆನು
ತ ॥ ಪರಮಭಾಗವತಾಗ್ರನೆನಿಪಾ । ಧರಣಿಪಾಲನಹೊರೆಗೆಬಂದಾ । ಪರಮಋಷಿಪಾದವನುಹಿಡಿದನುಪಾಲಿಸುವುದೆನು
ತ ॥ ೨ ॥ ಲಜ್ಜಿಸುತಮುನಿವರನನೀಕ್ಷಿಸಿ । ಹಜ್ಜೆಯನುಹಿಂದಿಂಗೆತೆಗೆವುತ । ಸಜ್ಜನಾಗ್ರಣಿಯೇನಿದೇನಂನ್ಯಾಯವೇನೆನು
ತ ॥ ಸಜ್ಜನನನೆತ್ತಿದನುಸಾಕೇ । ಛಜ್ವರವೆಬೆಸನಾವುದೆನಗೆನೆ । ವಿಜ್ವರನಮಾಡೆಂನನೆಂದನುಮುನಿನೃಪಾಲಂಗೆ ॥ ೩ ॥
ಕಾಲಬಿದುಬಿಡುಬಳಿಕನಾಥನು । ಕೇಳುವೆನುಪಾತಕವನೇತಕೆ । ಮೇಲೆಬಿಸುಡುವೆದೈವವಲ್ಲಾದ್ವಿಜರುತನಗೆನಲು ॥ ಪಾಲಿಸು
ವೆನೆಂದೆನುತಕೊಡುಭೂ । ಪಾಲಕೈಯನುಭಾಗವತಜನ । ಮೌಳಿರತ್ನವೆಬೇರೆಗತಿತನಗಾರುಹೇಳೆಂದ ॥ ೪ ॥ ರಕ್ಷಿಸಪರಾಧಿ
ಯನುತಂನನು । ಪೇಕ್ಷಿಸದಿರೆಲೆಭೂಪಕಾರು । ಣ್ಯೇಕ್ಷಣವಮಾಡಕಟಮರೆಹೊಕ್ಕೆನುನಿಜಾಂಘ್ರಿಗಳ ॥ ಅಕ್ಷಮತೆಬೇಡೆನಲು
ಲಕ್ಷಿಸಿ । ಬಿಕ್ಷುವಿನನಾತಿಂನೆಚಕ್ರವ । ನೀಕ್ಷಿಸಿದನ್ನವನೀಶನಿಂನೇಕೆನುತಕೈಮುಗಿದು ॥ ೫ ॥ ಜಯತುಜಯಜಯಜಯಮು
ರಾರಿ । ಪ್ರಿಯಜಯತುಸಾಹಸ್ರಧಾರನೆ । ಜಯಸುದರ್ಶನಪುಣ್ಯದರ್ಶನಪಾಪಕರುಷನನೆ ॥ ಜಯತುಜಯಜಯಚಕ್ರರಾಜನೆ ।
ಜಯತುಜಿತರಿಪುಚಕ್ರರಾಜನೆ । ಜಯತುಜಯಸರ್ವಾಸ್ತ್ರಶಾತಿಯೆಸಾಧುಜನಗತಿಯೆ ॥ ೬ ॥ ॥ ಶ್ರೀಕೃಷ್ಣಾಯನಮಃ ॥
ನೀನೆಜಲನೀನಗ್ನಿನೀನೇ । ಭಾನುಶಶಿತಾರಾಗ್ರಹಾವಳಿ । ನೀನೆಗಗನಕ್ಷಿತಿಪವನಕರಣೇಂದ್ರಿಯವ್ರಾತ ॥ ನೀನೆನಿತ್ಯಾತ್ಮಕವು
ಧರ್ಮವು । ನೀನೆಧೃತಿಯೂನೀನೆಯಜ್ಞವು । ನೀನೆಸಫಲವುನೀನೆಭೋಕ್ತೃವುನೀನೆಗತಿನೀನೆ ॥ ೭ ॥ ನೀನೆಸಕಲಾತ್ಮಕವು
ಸರ್ಗವು । ನೀನೆಮಂತ್ರವುನೀನೆದೇಶವು । ನೀನೆಕಾಲವುನೀನೆಪಾತ್ರವುನೀನೆಕ್ರತುನೀನೆ ॥ ನೀನೆಕಮಲಾಸನನುರುದ್ರನು ।
ನೀನೆಸಕಲಾಧೀಶಪತಿಗಳು । ನೀನೆತೋರುವವಿಶ್ವವಿಶ್ವಾಧೀಶಪತಿಯೆಂದು ॥ ೮ ॥ ನಿಂನತೇಜವೆತೇಜವಖಿಳಕೆ । ನಿಂನತೇಜವೆ
ಪ್ರೋಜವಖಿಳಕೆ ನಿಂನತೇಜವೆಸಕಲಜಗಕೆಸಹೋಬಲಾತ್ಮಕವು ॥ ನಿಂನರೂಪವೆಪರಕೆಪರವೀ । ನಿಂನರೂಪವೆಸಕಲಮಾಯಾ
ವೀ । ನಿಂನರೂಪವೆದುರ್ನಿರೂಪವತರ್ಕ್ಯತಮವೆಂದ ॥ ೯ ॥ ಎಲೆಸುನಾಭಸುರಾರಿವಂಶದ । ಕೊಲೆಗೆಲಸಕೊಡೆಯನುನಿರೂ
ಪಿಸಿ । ಬೆಳೆದದಾನವದೈತ್ಯಕದಳೀಕಾನನಂಗಳನು ॥ ಸುಳಿದುಸವರುತತದ್ರುಧಿರಪಂ । ಕಿಲಮಹೋಗ್ರಾಭೀಲಧಾರಾ । ವಳಿ
ಭಯಂಕರನೆನಿಸಿಮೆರೆಯೆಮಹಾರಣಾಗ್ರದಲಿ ॥ ೧೦ ॥ ಜಯಜಯಾಶುಭಧೂಮಕೇತುವೆ । ಜಯಜಯಾಖಿಳಧರ್ಮಹೇತುವೆ ।
ಜಯನಿಜಜ್ವಾಲಾವಲೀದಾಹಿಳಜಗತ್ರಯನೆ ॥ ಜಯನಿಜಾಶ್ರಿತರಕ್ಷಕನೆಜಯ । ಜಯಮದೋದ್ಧತಶಿಕ್ಷಕನೆಜಯ । ಜಯ

ಮಹೀತಳವಲಯಪಾವನಸಕಲಗುಣನಿಳಯ ॥ ೧೧ ॥ ನಿಂನವನುತಾನೆಂದುತಂನನು । ಮಂನಿಸಿದೆರಕ್ಷಿಸಿದೆಸಕಲಗು । ಣಾರ್ಣ
ವನೆನೆರೆಮೆರೆದೆಲಾನಿಜಗುಣಪರಾಕ್ರಮವ ॥ ಇಂನುನೀಚಿಕಿತ್ತ್ಯಸಬೇಹುದು । ಬಿಂನಹವನೆಲೆಚಕ್ರರಾಜನೆ । ಬಂನಬಡಿಸದಿರೀ
ಮಹಾತ್ಮನನೆಂದನಾಭೂಪ ॥ ೧೨ ॥ ಉಳ್ಳಡೆಂನಲನುಗ್ರಹದಮತಿ । ಕೊಲ್ಲದಿರುವಿಪ್ರನನುನೀನೇ । ಬಲ್ಲೆಬೇಡುವೆನಾನುಬಾಧಿ
ಸನೇಡಪ್ಪೈವವಲ ॥ ಸೊಲ್ಲನುಂನಿಸುನಿಂನಮಹಿಮೆಯ । ಬಲ್ಲರಾರಲೆತಂದೆಹಾವಿನ । ಹಲ್ಲಕಳದೂಕೊಲುವಕಷ್ಟವದೇನುಫಲ
ವೆಂದ ॥ ೧೩ ॥ ದತ್ತಫಲವೇನುಳ್ಳಡಿಷ್ಟಾ । ಪೂರ್ತಿಫಲವೆನಗುಳ್ಳಡಾಪುರು । ಷೋತ್ತಮಾಂಘ್ರಿಪರಾಗದಾಸರದಾಸನಾನಹ
ಡೆ ॥ ಮತ್ತೆತಂನಯಕುಲಜರೀದ್ವಿಜಭಕ್ತರಾದಡೆಬಿಡುವುದತ್ರಿಯ । ಪುತ್ರನನುಪುರಹೂತವಂದ್ಯನೆಕರುಣಿಸೂದೆಂದ ॥ ೧೪ ॥
ನಿನಗೆಕೃಪೆಯುಂಟಾದಡೆಂನಲಿ । ಮುನಿಯಬಿಡುವುದೆನುತ್ತಧರೆಯಲಿ । ಜನಪಮೆಯ್ಯಿಕ್ಕಿರಲುನಿಮಿಷಾರ್ಧದಲಿಚಕ್ರವದು ॥
ಅನಲನೊಳಗುದಕವನುತಳೆದಂ । ತನುವಿಷರುಭಾಪೆನಲುಭೂಪನ । ಮನದಬಯಕೆಯನರಿದುಹಿಂಗಿದುದರನಕೇಳೆಂದ ॥ ೧೫ ॥
ಇಂದುಕಂಡೆನುಕಂಡೆನೀಗೋ । ವಿಂದದಾಸರದುಷ್ಕ್ರತರ್ಕ್ಯವಿ । ದೊಂದುಮಹಾತ್ಮ್ಯವನುಶಿವಶಿವಶಿವಮಹಾದೇವ ॥ ಸಂದ
ಸುರನರವೀರವಾನವಮುನಿ । ವೃಂದದಲಿಪಡಿಯಾರುನಿನಗೆಲೆ । ತಂದೆಹೆಸರಿಸಿಕೊಂಡೆಭಾಗವತೋತ್ತಮರೊಳೆಂದ ॥ ೧೬ ॥ ಮಾ
ಡಿದಪರಾಧವನುತಂನಲಿ । ನೋಡದನುಪಮಚಕ್ರವನುನೀ । ಬೇಡಿಕೊಂಡೆನಗಿತ್ತಯಭಯವನೆನಗನುಗ್ರಹವ ॥ ಮಾ
ಡಿದೆಯಲಾತಂದೆತಾನಿದ । ನಾಡಿತೋರಿಸಲೇಕೆಮರೆವೆನೆ । ರೂಢಿಯೊಳ್ಗಂನಬರನಿಂನೀಗುಣವನಿದನೆಂದ ॥ ೧೭ ॥ ಆವು
ದೋದುಸ್ತರವೃಷುಜನರಿ । ಗಾವುದೋದುಸ್ತ್ಯಜವೃಷಿರಹಂ । ಭಾವರೆನಿಪಮಹಾತ್ಮರಿಂಗಿಹಪರಗಳೆರಡರಲಿ ॥ ಭಾವದಲಿಹಿಡಿ
ದಿಹರಸ್ಯೈಭ । ಕಾವಳೀಪ್ರಿಯಬಾಂಧವನನಾ । ದೇವದೇವಮುಕುಂದನನುಪರಮೇಶ್ವರನನೆಂದ ॥ ೧೮ ॥ ಒಂಮೆದಾವನನಾಮ
ವನುದು । ಷ್ಕರ್ಮಗಳುಕೇಳ್ದರೆಧರೆಯಲಿ । ನಿರ್ಮಲರುತಾವಹರಲ್ಲೈನೀವಾಜಗನ್ಮಯನ ॥ ನೆಂಮಬದುಕುವದಾಸರಲಿದು ।
ಷ್ಕರ್ಮವುಂಟೇತಂದೆತಂನೀ । ಜನ್ಮವಿದುಫಲವಾಯ್ತುತತ್ಸಂಭಾಷಣದಲೆಂದ ॥ ೧೯ ॥ ಎಂದಡೆಲೆಮುನಿನಾಥಪೊಗಳನೆ । ತಂ
ನೆಸುತರನುಹಪಿದೆಬಾಗೋ । ವಿಂದಪೂಜೆಯಮಾಡುಕೃಪೆಮಾಡೆನಗೆನೀನೆನುತ ॥ ವಂದಿಸುತಮುನಿವರನಚರಣ । ದ್ವಂದ್ವವ
ನುತ್ತೊಳೆದರ್ಚಿಸಿದನರೆ । ವಿಂದನಾಭನಭಕ್ತನಂದಾದ್ಯರಲಿಮುನಿಪತಿಯ ॥ ೨೦ ॥ ಉಂಡುಮೃಷ್ಟಾಂನವನುದಣಿದು । ದ್ದಂಡಮು
ನಿಭೋಜನವಮೊಡೆಸೆ । ಮಂಡಲಾಧೀಶ್ವರನೆನೀನಿಂನಮಳಕೀರ್ತಿಯನು ॥ ಕೊಂಡುಹೋಗಲುಸುರಪತಿಯರಥ । ಖಂಡನೈಕಸ
ಮರ್ಥವಿದುಭೂ । ಮಂಡಲದಜನಕೆನುತಕೊಂಡಾಡಿದನುಭೂವರನ ॥ ೨೧ ॥ ಸ್ವಸ್ತಿಭೂಪಯನುತ್ತಹರಸುತ । ಮಸ್ತಕವನ
ಡಿಗೆರಗಲೆತ್ತಿದ । ನಸ್ತಮಿತವುದಮಾನನಾಗಿಮಹೇಶ್ವರನಗುಣವ ॥ ವಿಸ್ತರಿಸುತ್ತೈದಿದನುದಿವವನು । ದುಸ್ತರಾದಿಷ್ಟಾರ್ಥವವ
ನಿದ । ನುತ್ತರಿಸಿದೆನೆನುತ್ತಸಂತೋಷಿಸಿದನವನೀಶ ॥ ೨೨ ॥ ಜಾರುತವೆಹಂನೆರಡುದಿನಗಳು । ಮೀರೆಗಳ್ದವುನೃಪಗೆಮುನಿಪತಿ ।
ಬಾರನೇಕೆನುತುದಕಮಾತ್ರಾಹಾರದಲಿಬಳಿಕ ॥ ಪಾರಣೆಯಮಾಡಿದನುಪಾವನೆ । ಧಾರುಣೀಸುರಭುಕ್ತಶಿಷ್ಟಾ । ಹಾರದಲಿಹರಿ
ದಿನಪರಾಯಣನರಸಕೇಳೆಂದ ॥ ೨೩ ॥ ತಂನಸಾಮರ್ಥ್ಯವನುಪರಮಕೃ । ಪಾರ್ಣವನಕರುಣವನುಭಾಗವ । ತೋಂನತಪ್ರೇ
ಮವನುನೆನೆನೆನೆದರಸನಡಿಗಡಿಗೆ ॥ ಧನ್ಯನಾದೆನೆನುತ್ತಭಕ್ತರ । ಮಂನಿಸುತಹರಿಗುಣಚರಿತ್ರವ । ವರ್ಣಿಸುತಕೇಳುತ್ತರಾಜ್ಯ
ದೊಳಿರ್ದನಾಭೂಪ ॥ ೨೪ ॥ ಲೇಸೆನಿಪಕರ್ಮವನುಮಾಡುತ । ದೋಷವರ್ಜಿತನೆನಲುಮನದಲಿ । ವಾಸುದೇವಾಂಘ್ರಿಯು
ಗತದುಣರಾಸಿಯನಲಿರಿಸಿ ॥ ದಾಸಭಾವದಲಖಿಳಕರ್ಮದ । ರಾಸಿಗಳನರ್ಪಿಸುತಕಳೆದನು । ವಾಸನಾದ್ವಿತಯವನುಯೋ
ಗಾಭ್ಯಾಸನಿಷ್ಠೆಯಲಿ ॥ ೨೫ ॥ ಕರೆಗವನುಕಾರುಣ್ಯಸಿಂಧುವ । ನಿರದೆನೆನವ್ರತಸೈಂಧವವಸಾ । ಗರದೊಳಿಟ್ಟಂತಪ್ಪೆಹರುಷಜ
ಲಾವಿಲಾಂಗದಲಿ ॥ ಮೆರೆದನಿದಿರನುಮಾತನಾಡದೆ । ತೆರೆಯಡಗಿದಂಬುಧಿಯವೋಲಾ । ಧರಣಿಪತಿಗಳದೇವನಿಹನೊಂಮೊಂ
ಮೆಮೆನೆವೆಳ್ದು ॥ ೨೬ ॥ ಇರಿಸಿಬಳಿಕಸಮಸ್ತರಾಜ್ಯದ । ಧುರವನಾತ್ಮತನೂಜರಲಿಸ । ಚ್ಚರಿತರಲಿಸಂಪಂನಗುಣಗಣಭೂಷಿತಾ
ತ್ಮರಲಿ ॥ ಪರಮಪುರುಷನಪಾದಕಮಲ । ಸ್ಮರಣೆಯನುಮಾಡುತ್ತವನವನು । ಧರಣಿಪಾಲರದೇವನೈದಿದನಧಿಕಹರುಷದಲಿ ॥
ಮಾರಿಗುಣಮೂರರಲಿಕಾರವ । ನಾರುಭಾವದತನುಗುಣಂಗಳ । ನೇರಿಸದೆತಂನಲ್ಲಿತಾನಾಗಿರ್ದುತೂರ್ಯದಲಿ ॥ ಓರುಗುಡಿಸದೆ
ಯಿಂದುಮನೆವನು । ಸೇರಿಪರಮಾನಂದಪದದಲಿ । ಜಾರದರಸನುನಿಂದನಾನಿಗಮೋಕ್ತಮಾರ್ಗದಲಿ ॥ ೨೮ ॥ ಇದುಪರಮಮಂ
ಗಳಮಹೋದಯ । ವಿದುಸದಾಯುಃಕೀರ್ತಿವರ್ಧನೆ । ವಿದುಮುಕುಂದಪದಾಬ್ಜಭಕ್ತಿಪ್ರದಶುಭಪ್ರದವು ॥ ವಿದಿತಭಾಗವತಾ
ನುಭಾವವ । ನಿದನುಹೇಳುವಕೇಳುವಾಸರು । ಹೃದಯರನುಪಾಲಿಸುವನಾನಿತ್ಯಾತ್ಮಮುರವೈರಿ ॥ ॥ ೩೦ ॥

ಅಂತು ಸಂಧಿ ೫ಕ್ಕಂ ಪದನು ೯೯೪ಕ್ಕೆ ಮಂಗಳಮಸ್ತು

ಆರನೆಯ ಸಂಧಿ.

ಇಕ್ಷ್ವಾಕು ವಂಶಾಭಿ ವರ್ಣನೆ.

ಸೂಚನೆ ॥ ವರ್ಣಿಸಿದನವನಿಪಗೆಬಳಿಕಾ । ವರ್ಣನೀಯಿಕ್ಷ್ವಾಕುವಂಶೋ¦ತ್ಪನ್ನಭೂಪರಪರಮಪುಣ್ಯ
ಚರಿತ್ರವನುಮುನಿಪ ॥ ... ...

ಪದನು ॥ ಜನಪಕೇಳುವಿರೂಪಕ‌ೇತುರು । ದನಘಶಂಭುಗಳೆಂಬಮೂವರು । ತನಯರೊಪ್ಪಿದರಂಬರೀಷಂಗಾವಿರೂ
ಪಂಗೆ ॥ ತನಯವೃಷದಶ್ವಾಂತನಾತನ । ತನಯನರಸರಥೀರಥನುಸಂ । ಜನಿಸಿದನುಬಳಿಕಾತನಬಲೆಯಲಂಗಿರನುಸುತರ ॥ ೧ ॥
ಕ್ಷುತದಲಾಮನುವಿಂಗೆಜನಿಸಿದ । ಸುತನಲಾಯಿಕ್ಷ್ವಾಕುಮೂಗಿನ । ಲತುಳಬಲನಾತಂಗೆಪುತ್ರರುನೂರ್ವರದರೊಳಗೆ ॥ ವಿಶ್ರುತವು
ಹಿಮವಿಕುಕ್ಷಿಹಿರಿಯನು । ವಿಶ್ರುತವಾಯ್ತಂಶಾಂಶವೆಸಲಾ । ಪಿತನುಕಳುಹಲುಪೋಲನವಮಾಂಸದವಿನಾಸಲನುಮೆದ್ದು ॥ ೨ ॥ ಪರ
ಪುರಂಜಯನಾವಿಕುಕ್ಷಿಗೆ । ಭರಿತವಿಕ್ರಮನಾಪುರಂಜಯ । ಗರಸಕೇಳಾಯಿಂದ್ರವಾಹಕಕುಸ್ಥಸಂಜ್ಞೆಯಲಿ ॥ ಒರವೆನಿಪನೊಂ
ದುದಿನದೇವಾ । ಸುರರಿಗಾಯ್ತುಮಹಾಸಮರದ । ರ್ಧರವೆನಲುಕಲ್ಪಾಂತವಾದುದುಕೇಳುಸುರಬಲಕೆ ॥ ೩ ॥ ಚೆಲ್ಲಿದುದುಸು
ರಕಟಕದೈತ್ಯರ । ಭಲ್ಲಣೆಗೆಗಾಢಪ್ರತಾಪರು । ಬಿಲ್ಲಬಿಸುಟರುಬೇಗದಿಗಧೀಶ್ವರರುವಸವಳಿದು ॥ ನಿಲ್ಲದೋಡಿದರಮರರಧಿಪನ।
ನಲ್ಲಿಕಂಡವರಾರುಹದಗಡ । ಧಲ್ಲರಿಯುಕೋರಟಿಯದಾದುದುಭೂಪಕೇಳೆಂದ ॥ ೪ ॥ ಅಟ್ಟಿಹೊಯ್ದರೆಸುರರಸಮಿತಿಕಂ । ಗೆಟ್ಟ
ಕಾಲನಧಾಳಿಗೆಲ್ಲವ । ಬಿಟ್ಟುಹೋಹಾಯುಷ್ಯಹೀನರವ್ರೋಲುಶತಧೃತಿಗೆ ॥ ಬಿಟ್ಟುಕೊಂಡೊಳಿಗದಹದನನು । ಮುಟ್ಟಸಲುಕೈ
ಕೊಳ್ಳರೆಂನೆನು । ಕೆಟ್ಟನಾಯಿಗಳೇನಮಾಡುವೆನೆಂದನಬುಜಭವ ॥ ೫ ॥ ಆಗದೆಂನಲಿತಂನಲಾನಿ । ರ್ಭಗಧೇಯರವಿಜಯಮೇತ
ಕೆ । ಜೋಗುಳನುಮಾಡುವಿರಿತಂನನುಸಾಕುಪರಿಭವವ ॥ ಸಾಗರಾವಾಸದಸಮಾಶ್ರಿತ । ರಾಗನಿಧಿಗರುಹುವೆವುದಿವಿಜರು।
ಬೇಗಮಾಡಿಯೆನುತ್ತನಿಂದಿರ್ದನುಸರೋಜಭವ ॥ ೬ ॥ ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ.
ಬಟ್ಟೆದೆಗದನುಬಳಿಕಕಮಲಜ । ನಿಷ್ಟದೇವತೆಯನಿಪದನುಜಘ । ರಟ್ಟನಲ್ಲಿಗೆಜಯತುಜಯಜಗಧೀಶಜಯಯೆನುತ ॥ ಸಿಟ್ಟ
ಸುತಕರತಟದಭಾಳದ । ಸೃಷ್ಟಿಪತಿಪಾಲಡೆಲಪರಮನ । ಪಟ್ಟಣದಪಡಿಹಾರರಿಂಗೈದಿಸಿದನೊಳಗವ ॥ ೭ ॥ ಕೇಳಿದನುಬಿಂನಹ
ವನಾಶ್ರೀ । ಲೋಲನೊಸರುವನಯನದಲಿಕರು । ಣಾಳುಮೈದೋರಿದನುಸುರಕುಲಕೋಟಿಕೈಮುಗಿಯೆ ॥ ಸಾಲರತುನದಸು
ಸ್ಮಿತಾನನ । ಲೋಲಮಣಿಕುಂಡಲದಕಾಂತಿಕ । ಪೋಲದಲಿರಂಜಿಸಲುನುಡಿದನುಮಧುರವಚನದಲಿ ॥ ೮ ॥ ಅಂಜದಿರಿಸುರವ
ರರುದೈತ್ಯರ । ಕುಂಜರಂಗಳುಕೊಬ್ಬಿದವುತಾ । ಭಂಜನವಮಾಡಿಸುವೆನೇತ್ರಕೇತಾನುಪರಿಯಂತ ॥ ರಂಜಿಸುತ್ತೈದನೆನ್ನಪಾಲಪ್ರ
ರಂಜಯನುವರಸೂರ್ಯವಂಶದ । ಕಂಜವನದಲಿಕಾಲಲಕ್ಷ್ಮಿಗೆಕಮಲಸಖನೆಂದ ॥ ೯ ॥ ಆತನನುನೀವ್ಬೇಡಿಕೊಂಬುದು ।
ಘಾತಿಸುವನಹಿತರನುಪಿರಿದ । ಡಾತುಕೊಂಬೆನುತಾನುನೀನಿದಕಂಜಬೇಡೆನುತ ॥ ಆತುರಿಸಬೇಡೆಂದುಸಂತತ । ಮಾತನಾಡಿತ
ತೂಕ್ಷಣಕೆಪರ । ಮಾತುಮನುಪರಿವೇಷಪಡದನುಯೋಗಮಾರ್ಗದಲಿ ॥ ೧೦ ಬಂದನಾನೃಪನೆಡೆಗೆಬಳಿಕಪು । ರಂದರನುಸರ
ಮಾತ್ಮನಂಘ್ರಿಗೆ । ವಂದಿಸುತಬೀಳ್ಕೊಂಡುಹೇಳಿದನಾದಸಂಸ್ಥಿತಿಯ ॥ ಎಂದನಾತನುತನಗೆವಾಹನ । ನಿಂದುನೀನಹರರಹಿತಬಲ
ವನು । ಕೊಂದುತೋರುವೆನಾಮಕುಂದನಕರುಣವುಂಟೆಂದ ॥ ೧೧ ॥ ಅದಡಾಗಲಿಯೆನುತಭೂಪನ । ನಾದರಿಸಿತಾನೇವೃಷಾ
ಕೃತಿ । ಯಾದನಿಂದ್ರನುಸುರರುಪೇಯನೆನೃಪತಿನಿಂದಿರ್ದ ॥ ಭೇದಿಸುವೆನಹಿತರನುಕರೆಕರೆ । ಕಾದುವವರನೆನುತ್ತಕೊಂಡನು ।
ಮೇದಿನೀಪತಿಕವಚವನುಕೋದಂಡಮಾರ್ಗಣವ ॥ ೧೨ ॥ ಕರದರಸುರರನಾವಹಕೆನೋ । ಹರದಭೇರಿಯಕಹಳೆಗಳದು ।
ರ್ಧರವೆನಿಪನಿಸ್ಸಾಳಪಟಹಾದಿಗಳರಭಸದಲಿ ॥ ಸುರಬಲಾಂಬುಧಿಯೊಳಗೆಭೂಪಿನಾ । ಶ್ವರನುಕುಳ್ಳಿರ್ದಾವೃಷಾಂಗದ । ಉರವಣಿ
ಸಿನುತ್ತಿದನುಪಶ್ಚಿಮದೆಸೆಯಲರಿಪುರವ ॥ ೧೩ ॥ ಬಂದುದೈತ್ಯರಿವಿಂಡುಮಾರಿಯ । ಮುಂದಿರಕೆತಪ್ಪೇನುಕವಿಕವಿ । ಹಂದೆಗಳ
ನೆರೆಯಟ್ಟಿಕೊಲ್ಲುಕೃತಾಂತನೂರವರ ॥ ಸಂದುದಾಗಲಿಸಾಲವೆನುತಾ । ಮುಂದನುತಿಗಳುಪುರವಹೊರವಂ । ಟಂದುಹಳಚಿದರ
ಸ್ತ್ರಶಸ್ತ್ರಗಳಲಿಸುರಬಲವ ॥ ೧೪ ॥ ಮತ್ತೆನುಸದುದುಸಮರಭುವನಕೆ । ಮೃತ್ಯುಬಾಯ್ದೆರದಂತ್ರೆದಿವಿಜರ । ಮೊತ್ತವನುಹಿಂ
ದಿಕ್ಕಿನೃಪನೈದಿದನುಸಂಮುಖಕೆ ॥ ಎತ್ತನೇರಿದವೀರನಿವನಾ । ರೆತ್ತಣವನೆಂದೆನುತಕವಿದುದು । ಮೊತ್ತದಸುರರುಮೋಹರಿಸಿಸು
ರಿವಸ್ತ್ರಶಸ್ತ್ರದಲಿ ॥ ೧೫ ॥ ಕೇಳಬಂದಿರೆತಂನಹೆಸರನು । ನಾಳೆಹೇಳುವೆನಿಂದುನೀವೀ । ಕಾಳಗದೊಳುಳಿದಡೆವೃಥಾಭೂಷಿತ
ವಿಬೇಕೆನುತ ॥ ಕೋಲಮಳೆಯನುಕರೆದನಾಮುಂ । ಗಾಳಗದತವಕಿಗರಿಗಿತ್ತನು । ಕಾಲನೂರನುಕೋಟಿಸಂಖ್ಯೆಯದೈತ್ಯಪತಿ
ಗಳಿಗೆ ॥ ೧೬ ॥ ನೊಂದುದೋಬಲವೀತನಾರುಪ್ರು । ರಂದರನಪರಿಯಲ್ಲಸಾಕೀ । ದಂದುಗವಿದೇಕೆನುತಜಾರಿದರಲ್ಲಿಕೆಲಕೆಲರು ॥
ಹೊಂದಿದರೆಗತಿಯಹುದೆನುತ್ತವೆ । ಮುಂದುವರಿದುಮಹಾಭಟರುತರಿ । ಸಂದುಸೂರೆಗೊಳುತ್ತಲಿರ್ದರುಕೊಡೆಸುರಪುರವ ॥ ೧೭ ॥

ಕೆರನ ಣಿಕಣಿಚ್ಚನಾರೋ । ತರಹರಿಸಬಹುದವನಿಪಾಲನ । ಶರಹತಿಗೆಹಾರಿದರುಜಾರಿದರುಲಿಯುವನುಳಿದು ॥ ಸುರಪಿರೋ
ಗಳ ನುನೆರಹಿದ । ಪುರಧನನನೆಲ್ಲವನುತಂದಾ । ಧರಣಿಪತಿಸುರಪತಿಗೆಕೊಟ್ಟನುವಾಹನವನಿಳಿದು ॥ ೧೮ ॥ ಕೊಟ್ಟನವ
ನೆಲ್ಲವನ ಮುಗುಳಾ । ವಿಷ್ಟಪಾಧೀಶ್ವರನುನೃಪತಿಗೆ । ಕಟ್ಟಿಕೊತ್ತಡಕಿದರುಸುರರವನೀಶನರಮನಿಗೆ ॥ ಪೆಟ್ಟನಹವಡೆಕನಕ
ನುಯ ರಾ । ಸೃಷ್ಟಿಪಾಲಕನಿಳೆಯೆಳೇನರಿ । ದಷ್ಟಭೂತಿಗಳೊಡೆಯನೊಲಿಪರಿಗರಸಕೇಳೆಂದ ॥ ೧೯ ॥ ಇಂದ್ರನೇವಾಹನವೆನಿಸ
ರಾ । ಂತಿಂದ್ರವಾಹನವೆಸರುನೃಪಕುಲ । ನಂದನಂಗಾವೃಷಕಕುತ್ಸ್ಥನವೋಲಿಕುಲ್ಲಸರ್ಗ ॥ ಅಂದುನೃಪತಿಕಕುತ್ಸ್ಥನಾದನು ।
ನಂದನ ನುವೇನಾಖ್ಯನಾತನ । ನಂದನನುಪೃಥುವಿಶ್ವಗಂಧಿತನೂಜರಾಜೇಂದ್ರ ॥ ೨೦ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ।
ವನ ಮಗನುಕೃಶಾಶ್ವನೆಂಬವ । ನವನಮಗನಾಸೇತಜಿತ್ತಂ । ತವನಮಗಯುವನಾಶ್ವನಾಥಂಗಿಲ್ಲಸಂತಾನ ॥ ಅವನಿಪತಿಬಳ್ಳಿ
ಕಡವಿ ರೊಕ್ಕನು । ಯುವತಿಸಹಿತದಕಂಡುಮುನಿಗಳು । ಸವನವನುಮಾಡಿಸಿದರೈಂದ್ರಾಖ್ಯವನುಕೇಳೆಂದ ॥ ೨೨ ॥ ನಿದ್ರೆಗೈ
ದರು ಷಿಗಳಿರುಳುಂ । ನಿದ್ರನಾದನುನೃಪತಿತೃಷೆಯಲಿ । ಹೊದ್ದಿದನುಪುಂಸವನವೆಂಬಭಿಮಂತ್ರಿಸಿದಜಲವ ॥ ಎದ್ದುತೆಗದೀಂಟಿ
ದನು ಮುನಿವರ । ರೆದ್ದುಕಂಡರುಬರಿಯುಕಳಶವ । ಕದ್ದವರದಾರೆನುತಬೆಸಗೊಂಡರುಮಹಾಜನವ ॥ ೨೩ ॥ ಭೂವರನಕರ್ಮ
ನೆಯು ತ್ತಾ । ಭೂವಿಬುಧವರರರಿತುಶಿವಶಿವ । ದೈವಬಲವೇಬಲವಲಾಪೌರುಷದಲೇನಹುದು ॥ ದೇವದೇವನೆಗತಿಯೆನುತಚಿ
ತ್ತಾ ವ ನದಲಿರಲುರುಷಿಗಳ । ಭಾವನೆಯನನುಕರಿಸಿಬೆಳೆದುದುಗರ್ಭವವನಿಪಗೆ ॥ ೨೪ ॥ ವಸುಮತೀಶನಬಲದಭಾಗದ ।
ಬಸು ನೊಡೆದುತ್ಪತ್ತವಾದುದು । ಶಿಶುವೊಲೆಯನೂಡುವರದಾರೋಹಸುಳೆಯೊದರುತಿರೆ ॥ ಋಷಿಗಳಂತೆನಲಾನಿಹೆನುಕುಡಿ ।
ಶಿಶುವ ಬೆರಳನೆನುತಕರುಣಾ । ರಸದಲಿಂದ್ರನುಕೊಟ್ಟನಾದೇಶಿನಿಯನರ್ಭಕಗೆ ॥ ೨೫ ॥ ಜೀವಿಸಿದನವನೀಶನಾಪ್ರದು । ದೈ
ವಪ್ರ ಂಗರಿದುಬಳಿಕಾ । ಭೂವರನುಕಾಲಾಂತರದಲೈದಲುತಪೋವನಕೆ ॥ ಈವಸುಧೆಗರಸಾದನಾನರ । ದೇವನಂದನನಧಿಕಬ
ಲಕೌ ರ್ಯಾವಲಂಬನನಾಗಿನೃಪಮಾಂಧಾತನೆಂದೆನಿಸಿ ॥ ೨೬ ॥ ನೀತಿವಿದಯುವನಾಶ್ವಸುತಮಾಂ । ಧಾತನೆನಲಾತನುಜಗದ್ವಿ ।
ಖ್ಯಾ ನಾದನುಬಳಿಕಸಪ್ತದ್ವೀಪಧರಣಿಯನು ॥ ಓತುಪಾಲಿಸಲವನತನುಸಂ । ಭೂತಪುರುಕುತ್ಸಾಂಬರೀಷ । ಖ್ಯಾತಮುಚು
ಕುಂ ಖ್ಯಯೋಗಿಪ್ರವರರುದಿಸಿದರು ॥ ೨೭ ॥ ಸೋದರೆಯರೈವತ್ತುಕಂನೆಯು । ರಾದರವರಸ್ತ್ರೀಸಮಾನೆಯು । ರಾದರವರೆ
ಲ್ಲರಿಗೆ ಸೌಭರಿಯೆಂಬಮುನಿವರನು ॥ ಕಾದಲನತತ್ಕಥೆಯನದನಾ । ನಾದಿಯಿಂದರುಪುವೆನುಕೇಳೆಲೆ । ಮೇದಿನಿಯಲತಿಪುಣ್ಯವೆ
ನಿಪಿತಿ ಹಾಸಸಂಗತಿಯು ॥ ೨೮ ॥ ಅಲಪಿಸಂಸಾರಕ್ಕೆಸೌಭರಿ । ಲಲಿತನಾಮಮುನೀಂದ್ರನೊಬ್ಬನು । ಸಲಿಸಿಪಾಸವನನುತಪಕೆ ।
ಯುವ ಗನಾನದಿಗೆನಡೆತಂದು ॥ ಮುಳುಗಿದನುಹಲಕಾಲವಲ್ಲಿಯೆ । ಚಲಿಸದಮಳಜಲಾಂತದಲಿತ । ಜ್ವಲಚರಾವಳಿಯೊಡನೆಜಲ
ಪೌರುಷದಲಿ ॥ ಕಾಯವಿಡಿದಿಹಸುಕೃತಿಗಳಿಗೆನಿ । ರಾಯಸದಲಾಮೋಕ್ಷಯೋಗಿ । ಧ್ಯೇಯಪದಪಂಕಜನೆನಿಜಪದಶರಣರಿಂಗೆಂದ ॥ ೧೩ ॥ ಅಲ್ಲದರೆದೇವೀಭವತ್ಪದ । ಪಲ್ಲವದಸಂಪನ್ನಭಕ್ತಿಯ । ನೊಲ್ಲದಾತ್ಮಜ್ಞಾನಸಿದ್ಧಿಗೆಬಳಲುವಜ್ಞರಿಗೆ ॥ ಎಲ್ಲಿಯದುಸಂಕ್ಲೇಶವೇತುಷವ । ಗಲ್ಲದಹುದೇಮೋಕ್ಷಧಾನ್ಯವ । ನೊಲ್ಲದುಯ್ಯಾನುಕುಟ್ಟಿಪಡವರೆತಂಡುಲವನೆಂದ ॥ ೧೪ ॥ ಮುನ್ನಹಲಬರುಯೋಗಿಗಳುಸಂ । ಪನ್ನನಿಜಪದಸೇವೆಯಿಂದು । ತ್ಪನ್ನಭಕ್ತಿಯನಾವೆಯಲಿಸಂಸಾರಸಾಗರವ । ನನ್ನಿನೆರೆವಿಸ್ತರಿಸಿಬಹಳಕೃ । ಪಾರ್ಣವನೆನಿಂನಂಘ್ರಿಕಮಲದ । ಸನ್ನಿಧಿಯನೈದುವರನಾಯಾಸದಲಿತಾವೆಂದ ॥ ೧೫ ॥ ಮನವಚನಕಾಯಂಗಳಿಂದವೆ । ಮುನಿಮನೋಜ್ಞಚರಿತ್ರಸಲೆನಿಂ । ನನೆನಮಸ್ಕರಿಸುತ್ತನೆನವುತ್ತೊಲಿದುಕೀರ್ತಿಸುತ ॥ ತನುಮನೋವಚನಾದಿಚೇಷ್ಟಾ । ಜನಕನೀನೆಂದರಿತುಜೀವಿಸು । ವೆನೆಸಭಾಗ್ಯನುದಾಯಿಗನುನಿಜಮೋಕ್ಷಪದಕೆಂದ ॥ ೧೬ ॥ ಏನನೆಂಬೆನುದೇವತನ್ನ । ಜ್ಞಾನವನುಪರಮೇಷ್ಠಿತನದಭಿ । ಮಾನದುದ್ರೇಕವನುಭುವನಾಧೀಶ್ವರೇಶ್ವರನ ॥ ತಾನುಮೋಹಿಸಲೆಂದುಮಾಯಾ । ಧೀನಮತಿನಿಜಮಾಯೆಯಿಂದನು । ಮಾನಿಸಿದೆನೆಂನಂತಶಿವಶಿವಮೂಢರಾರೆಂದ ॥ ೧೭ ॥ ನೀನಲಾಪರಮಾತ್ಮನಿನ್ನಯ । ಧೀನವಲ್ಲಾಮಾಯೆಮಾಯಾ । ಧೀನವಾನಖಿಳೇಶ್ವರನುನೀನೀಶಿತವ್ಯಲ ॥ ತಾನದೆಂತೋನಿಂನೊಡನೆಮತಿ । ಹೀನತನದಲಿಸೆಣದೆನೇಕೆಸ । ಮಾನಬುದ್ಧಿಯಲಕಟಕಟಕಡುಪಾಪಿತಾನೆಂಬ ॥ ೧೮ ॥ ತಂದೆಯೆಂಬುದನರಿಯದಿರ್ಪುದ । ದೊಂದುಘನತರಪಾಪವಲ್ಲಾ । ತಂದೆಯೊಳುಸಮಬುದ್ಧಿಸುಮಹತ್ತರದಪಾಪವಲಾ ॥ ತಂದೆಯೊಳುಹೊರುಡಿಸುವಘಾತ್ಮಂ । ಗಿಂದುಸರಿಯಿನ್ನಾರುಶಿವಶಿವ । ಮಂದಮತಿಪೃಥ್ವೀಶತನದಲಿಕೆಟ್ಟೆನಾನೆಂದ ॥ ೧೯ ॥ ನೋಡಲೆನ್ನನದೇಕೆಮಗನೆಂ । ದಾಡುವದುಜಗಬಸುರಹೂವಿನ । ಕೀಡೆಯನುಭವದಿಯ್ಯಮಾಯಾಮೂಢಬುದ್ಧಿಯನು ॥ ನಾಡಮಾತಿನಹರದವಾರ್ತೆಗೆ । ಮೂಢತನಗೀಗರ್ವಪರ್ವತ । ಕಾಡನೇನಿಕ್ಷೈಸಿದೆನುಶಿವಶಿವಶಿವಾಯೆಂದ ॥ ೨೦ ॥ ಧರಣಿಜಲಪಾವಕಸಮೀರಾಂ । ಬರಗುಣಾಹಂಕಾರಮಹದಂ । ತರಣಸಪ್ತಾವರಣಗಳಜಗದಂಡಕೋಟಿಗಳು ॥ ನಿರುತನಿಂನಯರೋಮರೋಮಾಂ । ತರದಲಾಡುವದೆತ್ತಲೊಂದರೊ । ಳಿರುಳತಿಹಹುಳುತಾನದೆತ್ತಲುಗರ್ವಿಸುವಡೆಂದ ॥ ೨೧ ॥ ಕ್ಷಮಿಸುವದುದೇವೇಶದೇವೋ । ತ್ತಮರಜೋಗುಣರೂಪಮಾಯಾ । ಭ್ರಮಿತನಪರಾಧವನುನಿಂನವನೆಂದುನೀನೊಲಿದು ॥ ಕುಮತಿತಾನೀಭುವನಸೃಷ್ಟಿ । ಕ್ರಮನೆನುತನಿಂನಿದಿರಲಾನೊ । ಬ್ಬಮರಮತಿಯೆಂದೇಕೆಗರ್ವಿತೆನಾದೆನಕಟೆಂದ ॥ ೨೨ ॥ ಆರನೈಕೆಂಗೆಡಿಸದಿನಾ । ರಾಠನಳಲಿಸದಕಟಗರ್ವವಿ । ಕಾರಕೆಡಹದುನರಕದುಃಖಮಹಾರ್ಣವಂಗಳಲಿ ॥ ಆರುಮಿಲ್ಲದನಾಥನಾನಿಂ । ನಾರೆನಗೆಗತಿದೇವದೇವರು । ದಾರಕಾರುಣ್ಯೇಕ್ಷಣದಲಭಯವನುಕೊಡಿಯೆಂದ ॥ ೨೩ ॥ ಬಸುರೊಳಗೆಶಿಶುವಿದುರ್ಮೈಯ್ಯನು । ಮಸಗಿದರೆತಾಯಾರೊಡನೆಕೋ । ಪಿಸುವಳೆಲೆಜಗದೀಶಜಗದಾತ್ಮಕಜಗನ್ಮಯನೆ ॥ ನುಸಿಗಳೆನ್ನಂದದವರೆನಿತೋ । ಬಿಸಜಕುಸುಮದಕೀಟದಲಿಮೇ । ಣ್ಸೊಸಲಕೆಂಣಮಹೇಶ್ವರರುನಿಂನುದರದೊಳಗೆನಿತೋ ॥ ೨೪ ॥ ಆರರಿವರೀನಿಂನಮಹಿಮೋ । ದಾರವಾರ್ಧಿಯನೆಲೆಯನಿಂತೀ । ಭೂರಿಭುವನಕದಂಬವೀಸಚರಾಚರವ್ರಾತ ॥ ತೋರಿತೋರಿಯಡಂಗುವುದುಡಿಂ । ಡೀರನಿಕರದವೋಲುನಿಜಮಾ । ಯೋರುವೀಚೀಭಂಗಮಹದಾವರ್ತದೊಳಗೆಂದ ॥ ೨೫ ॥ ಮೊದಲೊಳರ್ಭಕವತ್ಸಮಯರೂ । ಪದಲಿಕಂಡೆನುನಿಂನಮಾಯಾ । ವಿದಿತವಿಭವವಮತ್ತೆತದನಂತರಚತುರ್ಭುಜದ ॥ ಹೊಸರುಗಳತೇಜವನುಮತ್ತಂ । ತುದಿತಸತ್ಯಜ್ಞಪ್ತಿಸುಖಮಯ । ಪದದವೋಲಿರೆಕಾಣಿಕೆಗೆಕಲ್ಪಾಂತವಾಯ್ತೆಂದ ॥ ೨೬ ॥ ಅರಿವುಹೊಗದಜ್ಞಾನವಾರ್ತೆಗೆ । ತೆರಹುಗುಡದಾನೆಂಬಹಂಮಿನ । ಹೊರಿಗೆಗೊಳಗಾಗದಪರಾನಂದೈಕವಿಗ್ರಹದ ॥ ನಿರುನೆತಂನೀಮೂಢಮತಿಗೆಂ । ತರಿಯಬಹುದೆಲೆತಂದೆಮಾಯೆಯ । ಮರಿಮಗನಮೌಢ್ಯವನುನೋಡದೆಕೃಪೆಯಮಾಡೆಂದ ॥ ೨೭ ॥ ಸೃಜಿಸುಜಗವನೆನುತ್ತತನ್ನನು । ಸೃಜಿಸಿದೆಯಲೈಸಕಲಭುವನ । ಪ್ರಜೆಗಳಿಗೆಪರಮೇಷ್ಠಿತನದೈಶ್ವರ್ಯವನುಸಲಿಸಿ ॥ ಭಜಕರೊಳಗಾನೊಬ್ಬನೆನಗಾ । ಯ್ತಜನೆನಿಪ್ಪಭಿಧಾನವದರಿಂ । ಕುಜಡನಾದೆನುನಿನ್ನಮಾಯಾಗುಣದಲಾನೆಂದ ॥ ೨೮ ॥ ಸೃಷ್ಟಿಗಾನಧಿಕಾರಿಜಗದಲಿ । ನಷ್ಟಿಗೀಶ್ವರನಖಿಳಲೋಕದ । ದುಷ್ಟನಿಗ್ರಹಶಿಷ್ಟಜನರಕ್ಷಾಭಿದಾನದಲಿ ॥ ಅಷ್ಟದಿಗಧೀಶ್ವರರುನಿಂನಲಿ । ಶಿಷ್ಟಮೂರ್ತಿಗಳಾಗಿನಿಯಮಾ । ವಿಷ್ಟರಾಗಿಹೆವಿಂತುನಿಂನೊಂದಾಜ್ಞೆಯೊಳಗೆಂದ ॥ ೨೯ ॥ ಬಯಲನಾಟಕವೆನಿಸಿಭುವನ । ತ್ರಯವಿದೆಲೆಜಗದೀಶನಿಜಮಾ । ಯೆಯಲಿತೋರ್ಪುದುರಜ್ಜುಸರ್ಪನವೋಲುನಿಂನೊಳಗೆ ॥ ಲಯವಹುದುನೀನೊಲಿದುನಿಜಸೃ । ಷ್ಟಿಯಲಿನೋಡಲುಭಕ್ತಹೃದಯ । ಪ್ರಿಯನೆಬಳಿಕವರಂಜುವರೆನಿಜಶರಣರೀಭವಕೆ ॥ ೩೦ ॥ ಅನ್ನಬರಭವಬಂಧಜೀವರ । ಬೆನ್ನಬಿಡದೋರಂತೆದುಃಖಮ । ಹಾರ್ಣವದಲದ್ದುವುದುತಾಪತ್ರಯದಬೇಗೆಯಲಿ ॥ ಬನ್ನಬಡಿಸುವುದಸ್ಮದಾದ್ಯರ । ನುನ್ನತಾಹಂಕಾರಮೂಢರ । ನಿನ್ನವರನೀನೋಡೆಕಾರುಣ್ಯೇಕ್ಷಣದಲೆಂದ ॥ ೩೧ ॥ ಅನ್ನವರಗೃಹವೆಂಬಶೆರೆಮನೆ । ಯನ್ನವರರಾಗಾದಿವೈರಿಗಳನ್ನವರಧನಪುತ್ರಮಿತ್ರಕಳತ್ರವೆನಗೆಂಬ ॥ ಅನ್ನವರನೇಕಾಲಸಂಕಲೆ । ಬನ್ನಬಡಿಸುವರೆನ್ನನಕಟಾ । ನಿನ್ನವರುತಾವೆನಿಸಲರಿಯದುಮೂಢಜನವೆಂದ ॥ ೩೨ ॥ ಬೇಡತನಗೆಲೆದೇವನಿಮ್ಮಡಿ । ಮಾಡಿದೀಪರಮೇಷ್ಠಿತನದಿರ । ವಾಡಲಂಮೆನುಬಿನ್ನಹವಚಿತ್ತೈ

ಸುವಡೆಕೃಪೆಯ ॥ ಮಾಡುವುದುನಿಂನಂಘ್ರಿಸೇವೆಯ । ಮಾಡುವವರಮಳಾಂಘ್ರಿಸೇವೆಯ । ಮಾಡುಪ್ರೇಂಮಸಭಾಗ್ಯಜನ್ಮವ ಕರುಣಿಸುವುವೆಂದ ॥ ೩೩ ॥ ಒಲ್ಲೆನೀಂಲೋಕಾಧಿಪತ್ಯವ । ನೊಲ್ಲೆನೀಂವಿಬುಧಾದಿಪತ್ಯವ । ನೊಲ್ಲೆನೀಂದ್ವಿಪರಾರ್ಧಸಂಜ್ಞಾಯುಷ್ಯಸಂಪದವ ॥ ಒಲ್ಲೆನೆನಗೀಭವಭವತ್ಪದ । ಪಲ್ಲವೈಕಪರಾಯಣರಪದ । ಪಲ್ಲವದಸಮಸಂಗಸುಖವೇಸಾಕುತನಗೆಂದ ॥ ಅವನೊಬ್ಬನತೃಪ್ತಿಗೀಯ । ಜ್ಞಾವಳಿಗಳ್ಯಾದವುಸಮಸ್ತಸು । ರಾವಳಿಗಳಾಪರಿತ್ರೆವೇಸಹಭೋಜನದಸುಖವ ॥ ಗೋಪಳರಭಾಗ್ಯವನುಬಂಣಿಪ । ನಾವನೀಂನಿಂನುಡಿಯೊಡನೆಭ । ಕ್ತಾವಶೇಷವನುಂಬನೆರೆಸಂಪ್ರೀತಿಯನುಮಾಳ್ಪ ॥ ೩೫ ॥ ನಿಗಮದೂರನೆನಿಪ್ಪನೀನೆ । ಮಗನೆನಿಸಿಕರುವೆನಿಸಿಮೊಲೆವಾ । ಲುಗಳನುಗಿದುಂಡವರವರಮಗ್ಗುಲಲಿಪವಡಿಸುವ ॥ ಅಗಣಿತಾಮಳಸೌಖ್ಯವಿದುಯೋ । ಗಿಗಳಿಗುಂಟೇಗೋಪಿಯರಗೋ । ವುಗಳಭಾಗ್ಯೋದಯವನಭಿವರ್ಣಿಸುವರಾರೆಂದ ॥ ೩೬ ॥ ಏನನೆಂಬೆನುಗೋಪಜನದನ । ವೀನಭಾಗ್ಯದಸಿರಿಯದಂತಿರ । ಲಾನುವೇದಲೆನೆತತ್ತದಿಂದ್ರಿಯಕರಣಪಾತ್ರದಲಿ ॥ ದಾನವಾಂತಕನಿಜಪದಾಬ್ಜನ । ವೀನಸುಧೆಯನುಸವಿವತ್ರದಧಿ । ಷ್ಠಾನದೇವತೆಗಳಸಭಾಗ್ಯತೆಗಾರುಸರಿಯೆಂದ ॥ ೩೭ ॥ ಅದುನಿಮಿತ್ತಲಿದೇವಕರುಣಾ । ಸ್ಪದನೆಕರುಣಿಪುದೆನಗೆಗೋಪರ । ಪದಪರಾಗಪವಿತ್ರಜನ್ಮವನೊಂದನಿದರೊಳಗೆ ॥ ಸದಮಳನೆಬೇಡುವೆನಾಸಕಲ । ಪ್ರದನೆಸಕಲಾತ್ಮಕನೆತಂನೀ । ಮದಮುಖನಮಾಧ್ಯವನುನೋಡದೆಕೃಪೆಯಮಾಡೆಂದ ॥ ೩೮ ॥ ಎಂದುಪುಳಕಾಶ್ರುಗಳಸಹಿತರ । ವಿಂದಭವನಡೆಗೆಪದುಚರಣ । ದ್ವಂದ್ವದಲಿಹೊರಳುತ್ತಹೊಗಳುತ್ತಿರಲುಭಕ್ತಿಯಲಿ ॥ ಮಂದಹಾಸದಲೆತ್ತಿದನುಕೃಪೆ । ಯಿಂದಮೈಯನುತಡವಿಪರಮಾ । ನಂದನಿಧಿನಸುನಗುತಲಭಯವನೀವೃತಿಂತೆಂದ ॥ ೩೯ ॥ ಕ್ಷಮಿಸುವೆನುತಾನೇಳುನೀನ । ಕ್ರಮವಮಾಡಿದ್ದೇನುಭಿನ್ನ । ಭ್ರಮೆಯಬಳಕೆಯಮಾತದೇತಕೆನಿಂನಸಾರೆಂದು ॥ ಸುಮತಿನೋಡದಹಂಕರಿಸುವ । ಕ್ರಮವಿದೇತಪ್ಪಲ್ಲದನಹಂ । ಮಮತೆಯಲಿಭಜಿಸುತ್ತಿಹುದುಸುಖಿಯಾಗುಹೋಗೆಂದ ॥ ೪೦ ॥ ಗರ್ವವೆಂಬೊಂದಧಿಕತರವಹ । ಪರ್ವತಾಗ್ರವನೇರದೆನ್ನನು । ಸರ್ವಲೋಕಾಧೀಶ್ವರೇಶ್ವರನೆಂಬುದನುತಿಳಿದು ॥ ನಿರ್ವಹಿಸುತೆಂನೊಳಗೆಮತಿಯನು । ಸರ್ವವಿಷಯಂಗಳಲಿಭಾವಿಸೆ । ಸರ್ವಗತನಾದೆನ್ನಸೇರುವಿಯಂಜಬೇಡೆಂದ ॥ ೪೧ ॥ ಮೆಚ್ಚಿದೆನುನೀಮಾಳ್ಪಸಂಸ್ತುತಿ । ಗುಚ್ಚರಿಪನಿಜನಾತನೇನೆಲೆ । ನಚ್ಚಿನೆಂನಯಭಕ್ತಗೀವೆನಭೀಷ್ಟಸಂಪದವ ॥ ಸಚ್ಚರಿತನೀನೆಂನಮಾಯೆಗೆ । ಬೆಚ್ಚದುಚ್ಚತ್ರೆಭಜಿಸುತಿರುಮನ । ಮೆಚ್ಚಿನೆನವೃತ್ತಿಹುದುಮರೆಯದೆನುತ್ತಬೀಳ್ಕೊಟ್ಟ ॥ ೪೨ ॥ ಎನೆಹಸಾದಭವತ್ಕೃಪೇಕ್ಷಣ । ದನುಪಮಾನುಗ್ರಹದವಿದುಳತ್ರೆ । ತನಗೆಮರವೆಯದೇಗುವುದುದೇವೆನುತಕೈಮುಗಿದು ॥ ವನಜಭವನಚ್ಯುತನಪದಯುಗ । ವನಜದಲಿತಲೆವಾಗಿಕೈಮುಗಿ । ದೆನಗೆಗತಿಮತಿನೀನೆನುತಬಿದ್ದಿರ್ದನಿದಿರಿನಲಿ ॥ ಸನಕನಾರದಮುಖ್ಯಸುರಮುನಿ । ಜನಸಹಿತಬಲವಂದುಕರುಣಾ । ವನಧಿಯನುಬೀಳ್ಕೊಂಡುಮಂಗಳದಿವ್ಯಮೂರ್ತಿಯನು ॥ ಮನದೊಳಗಭಾವಿಸುತಬಂಣಿಸು । ತನುಪಮನನಮಹಾತ್ಮ್ಯವನುಸಂ । ಜನಿತಪರಮೋತ್ಸವದಲಂದಜನೈದಿದನುದಿವವ ॥ ೪೪ ॥ ನಳಿನಭವನನುಬೀಳ್ಕೊಟ್ಟು । ನಳಿನನಾಭನುನಗುತಮುನ್ನಿನ । ಪುಳಿನದೆಡೆಗೈತಂದನಾಕರುವಿಂಡುಗಳುಸಹಿತ ॥ ಕೆಳೆಯರಚ್ಚರಿಪಡುತಹರುಷದ । ಕಳೆಯನರಿಯದೆತೀವ್ರಗತಿಯಲಿ । ತಳುವದೆಂತೈಬಂದೆಯೆಂದರುನಗುತತಮತಮಗೆ ॥ ೪೫ ॥ ತಂದೆಕೆರುಗಳನೆಲ್ಲಕಾಣಿಸಿ । ತಂದೆನಿಮಿಷಾರ್ಧಾರ್ಧವಿಂನೂ । ಸಂದುದಿಲ್ಲೊಡನುಂಣುಬಳಲಿದೆನೀನೆನುತ್ತೊಲಿದು ॥ ಸಂದಸುರಮುನಿವರರುಭಾಪೆನ । ಲಂದುಗೋಷ್ಠಿಯಲೂಟವಮಮುದ । ದಿಂದಮಾಡಿದರಚ್ಯುತನನೊಡಗೊಂಡುಬಾಲಕರು ॥ ೪೬ ॥ ಬಳಿಕಕರುವಿಂಡುಗಳನೂರ । ತ್ತಲುಸರೋರುಹಮಿತ್ರನಿಳಿದನು । ಜಲಧಿಗೆಲವೋಮರಳಿಸೆನುತಚ್ಯುತನುನಿಂದಿರಲು ॥ ಕೊಳಲುಕೊಂಬುಗಳೆಸೆಯಲೊಪ್ಪಿರೆ । ಕೆಳೆಯಗೋಪಕುಮಾರಕರುಕಳ । ಕಳದಸಂಭ್ರಮವೆಸೆಯೆಮಗುಚಿದರೂರಸಂಮುಖಕೆ ॥ ೪೭ ॥ ಆಡುತಾಡುತ್ತಘನಚರ್ಮವ । ನೋಡುತದರೊಳುಹೊಕ್ಕುಮಿಗೆಮಾ । ತಾಡಿಕೂಗುತ್ತಬ್ಬರಿಸುತಾನಂದಲೀಲೆಯಲಿ ॥ ನೋಡುವರಕಂಗಳಿಗೆಹಬ್ಬವ । ಮಾಡುವಂಗವಿಭೂಷಣದಹೊಸ । ಗಾಡಿಗಳಗುಣನಿಧಿಗಳೈತಂದರುನಿಜಾಲಯಕೆ ॥ ೪೮ ॥ ಪೂತನಿಯಭಂಜನದವಾತ್ಯಾ । ಘಾತನದಯಮಳಾರ್ಜುನದ್ರುಮ । ಪಾತನದಬಕವತ್ಸದೈತ್ಯಪ್ರಾಣನಾಶನದ ॥ ಖ್ಯಾತವಿಕ್ರಮಗಳಲಿಸೂರ್ಯಜ್ಯೋತಿಗೆಡೆಗೊಡುವಚ್ಯುತನವೀ । ರ್ಯಾತಿಶಯವನುಹೊಗಳುತೈತಂದರುಸರಾಗದಲಿ ॥ ೪೯ ॥ ಎಸೆವಕತ್ತರಿವೇಲಿಗಳರಂ । ಜಿಸುವಗುಂಜಾಭರಣದೊಪ್ಪವ । ನೊಸಲತಿಲಕದಕತ್ತುರಿಯಚಂದನದಪರಿಮಳದ ॥ ಎಸಳುಗಂಗಳಮಂಗಳಾನನ । ವಿಸರುಹದವಿಶ್ವಾಧಿಪತಿನೋ । ಹಿಪಿದನೀಕ್ಷಿಸುವಖಿಳಸುರಮುನಿಜನದಕಣ್ಮನವ ॥ ೫೦ ॥ ಕೊಳಲುಕೊಂಬುಗಳುಲಿದಕಳಕಳ । ದೊಳಗೆನಡೆಯಲುಮುಂದೆಕರುಗಳು । ಕೆಳಯರೈತರಹಿಂದೆದಕ್ಷಿಣವಾಮಪಾರ್ಶ್ವದಲಿ ॥ ನೆಲನನುಗ್ಗಡಿಸುತ್ತಮಹಿಮೆಯ । ನೊಲಿದುಪಾಡುತಹೊಗಳುತಮರಾ । ವಳಿಗಳಭ್ರದಲುಲಿಯೆಗೋಕುಲದರಸನೈತಂದ ॥ ೫೧ ॥ ಪ್ರೇಂಗೊಳಲಕೊಂಬುಗಳಧನಿಗೀ । ರಂಗನಿದೆಯಿಾಬಂದನಿದೆಯಂ । ದಂಗನೆಯರೆಲ್ಲವರುನೆರದಾಮಾರ್ಗವಿದ್ದೆಸೆಗೆ ॥ ಕಂಗಳಲಿಕಮನೀಯಮೂರ್ತಿಯ । ಮಂಗಳಾನನಕಮಲಮಧುವನು । ಹಿಂಗದಾಸ್ವಾದಿಸುತಪಡೆಯರುಡಣಿವುಗಳನೆಂದ ॥ ೫೨ ॥ ಹೊಕ್ಕನಾಗೋಕುಲವನೊಡ

ನೆಯ । ಮಕ್ಕಳನುಮನೆಗಳಿಗೆಕಳುಹಿಸು । ತಿಕ್ಕಿಲದಗೋಪಿಯರಕಂಗಳುಕಳುಹುತ್ತೈತರಲು ॥ ಅಕ್ಕರಿತುಕಡುಮೋಹದಲಿತ
ನು । ಸೊಕ್ಕಿಸುತರತ್ನವನುಮೊಲೆತೊರ । ದೊಕ್ಕಲಪ್ಪಿದಳಿದುರುಗೊಂಡುಯಶೋದೆನಲವಿನಲಿ ॥ ೪೩ ॥ ಹೇಳ್ದರುತಂತ
ಮ್ಮಮನೆಯಲಿ । ಬಾಲಕರುನಾವಿಂದುಕರುಗಳ । ಪಾಲಿಸುತಬಲಕೃಷ್ಣರೊಡನಾಡುತ್ತವನದೊಳಗೆ ॥ ಲೀಲೆಯಿಂದಿರೆನುಂಗಿ
ಕೊಂದುಕ । ರಾಳಫಣಿಧರೆಗಡೆಗೆಡದಸುರ । ಶೈಲದಂದದಿದೇಹವಿರೆಕರುವಳರಕರುಸಹಿತ ॥ ೪೪ ॥ ಏನನೆಂಬೆವುಸರ್ಪಜಠರ
ಕೃ । ಶಾನುವಿಂಗಾಹುತಿಗಳಾದೆವು । ದಾನವಾಂತಕಕೃಷ್ಣನಂನೆಗಫಣಿಯಗಂಟಲಲಿ ॥ ದಾನಿಗಳದಾತಾರಬೆಳದಡೆ । ಭಾನುವಿ
ನವೋಲವನಮೂರ್ಧ । ಸ್ಥಾನದಲಿಹೊರವಂಟುದಸುದೆಸೆದೆಸೆಗೆಬೆಳಗುತ್ತ ॥ ೪೫ ॥ ಕೂಡೆಹೋದವುತಂಮಸುಗಳದ । ನಾ
ಡಲರಿಯುವುಕೃಷ್ಣನೊಂಮೆಯು । ನೋಡಿದಡೆಕಾರುಣ್ಯದೃಷ್ಟಿಯಲೈದೆವೈಮುರಿದು ॥ ಹೇಡನಾದನುಮೃತ್ಯುಮಕ್ಕಳ । ಬೀ
ಡುಬೊಬ್ಬಿರಿವುತ್ತಹೊರವಡೆ । ಕೂಡಿತಾತನಜೀವಕಂಡೆವುಕೃಷ್ಣನುದರದಲಿ ॥ ೪೬ ॥ ಬಳಿಕಬೃಂದಾವನದಲಂದಿನ । ನಳಿನ
ನಾಭನಕೂಡೆಪರಿಮಂ । ಡಲವೆನಲುಕುಳ್ಳಿರ್ದುಕೃಷ್ಣನಬಾಯತುತ್ತುಗಳ ॥ ನಲಿದುಸವಿನೋಡುತ್ತಲುಂಡೆವು । ಸಲಹಿದೊಡೆ
ಯನುಕೃಷ್ಣನಂಮಸು । ಗಳಿಗೆಪರಮಸ್ವಾಮಿಯಂದರುಗೋಪನಂದನರು ॥ ೪೭ ॥ ಕೇಳ್ದಡಚ್ಚರಿವಟ್ಟರಂದಾ । ಬಾಲಕರನು
ಡಿಗಳನುವರುಷದ । ಕೀಳುಪೋಗಿನವಾತಿದಿಂದಿನಲಾಯ್ತಿದಿಂದೆನುತ ॥ ಲೋಲಮತಿಗಳುಕೇಳ್ಕೃಷ್ಣನ । ಲೀಲೆಚಿತ್ರವೆನುತ್ತ
ಸಂಶಯ । ಲೋಲಮತಿಗಳುಯಿದ್ದರಾನಿತ್ಯಾತ್ಮಸುಖದೊಳಗೆ ॥ ... ... ॥ ೪೮ ॥

ಅಂತು ಸಂಧಿ ೧೪ಕ್ಕಂ ಪದನು ೭೦೪ಕ್ಕಂ ಮಂಗಳಮಸ್ತು.

ಹದಿನೈದನೆಯ ಸಂಧಿ.

ಶ್ರೀಕೃಷ್ಣಮೂರ್ತಿಯು ಧೇನುಕಾಸುರನನ್ನು ವಧಿಸುವಿಕೆ.

ಸೂಚನೆ ॥ ಸುರರುಭಾಪೆನೆತಾಳವನವನು । ಬೆರಸಿಮುರಿದರುಬಾಲಕೇಳೀ । ಪರಿಣತರುಧೇನುಕನನ
ಚ್ಯುತರಾಮರುರವಣಿಸಿ ॥ ... ...

ಪದನು ॥ ಕೇಳುಪಾಂಡವಧರಣಿಪತಿಕುಲ । ಪಾಲಕನೆಹರಿರಾಮರರ್ಭಕ । ಲೀಲೆಯನುಮೋಹನಮನೋಜ್ಞನೆನಿಪ್ಪ
ಶಿಶುತನವ ॥ ಬೀಳುಕೊಟ್ಟರುಗೋಕುಲವನು । ದ್ವೇಲವಿಕ್ರಮರೆಸದರಂದಾ । ರೇಳುವರುಷದಹರೆಯದಲಿಪಶುಪಾಲರೆಂದೆ
ನಿಸಿ ॥ ೧ ॥ ತುರುಗಳನುಕಾವುತ್ತಭುವನೇ । ಶ್ವರರುಬೃಂದಾವನಕೆತುರುಗಾ । ರರುಸಹಿತಹೊರವಂಟರುತ್ಸವದಿಂದಗೋಕು
ಲವ ॥ ಸುರನಿಕರವಭ್ರದಲಿಜಯಜಯ । ಪರಮಪುರುಷಯೆನುತ್ತನಿಜಗುಣ । ಚರಿತವನುಪಾಡುತ್ತಕೈವಾರಿಸಲುವಿನಯದಲಿ ॥
ಅಂಕುಶಧ್ವಜವಜ್ರಯವಲತೆ । ಪಂಕಜಂಗಳೆನಿಪ್ಪನಿಜಪದ । ಪಂಕಜಂಗಳಶುಭತರದರೇಖೆಗಳುಧರಣಿಯಲಿ ॥ ಅಂಕಿಸಲು
ಗೋಪಾಲಬಾಲಕ । ರಂಕವಾಲೆಯಹೊಗಳುತೆಡಬಲ । ವಂಕದಲಿಮೋಹರಿಸಲೈತಂದರುವನಾಂತರಕೆ ॥ ೨ ॥ ಪಾಡುವರಗಿ
ಳಿವಿಂಡುತುಂಬಿಗ । ಳಾಡುವಹಿವೈರಿಗಳಪರಿಮಳ । ತೀಡುವಳಿಪೂಗೊನೆಯಹೂತವನಾಮರದ್ರುಮದ ॥ ಕೂಡೆತಂಗಾಳಿಯಲಿ
ಮಿಗೆತೂ । ಗಾಡುವೆಳೆದಳಿರುಗಳರುಳವನು । ರೂಢಿಸುವನೆಳಲೆಸೆವಬೃಂದಾವನಕೆನಡೆತಂದ ॥ ೪ ॥ ಫಲಕುಸುಮಪಲ್ಲವದ
ಭಾರದ । ಲಿಳೆಗೆರಗಿಶೋಭಿಸುವಶಾಖಾ । ವಳಿಯತರುನಿಕರವನುನೋಡಿಮನೋನುರಾಗದಲಿ ॥ ನಳಿನದೃಶನಂಣಂಗೆತರುಲ
ತೆ । ಗೊಲಿದನುಗ್ರಹಿಸುತ್ತಕರುಣಾ । ಜಲಧಿಕಾರುಣ್ಯೇಕ್ಷಣದಲಿಂತೆಂದನೊಲವಿನಲಿ ॥ ೫ ॥ ನೋಡುನೀನೆಲೆಯಂಣತರುಗ
ಳು । ಮಾಡುವುಪಚಾರವನುಮನುಜರು । ಮಾಡಲರಿವರೆನಿಜಫಲಾವಳಿಪುಷ್ಪನಿಕರವನು ॥ ನೀಡಿಕಾಣಿಕೆಗಳನುಹರುಷದ ।
ಗಾಡಿಕೆಯಪುಳಕಾಂಕುರಂಗಳ । ಕೂಡೆತಲೆವಾಗಿದೆಮಹೋತ್ತಮರಂತೆನೋಡೆಂದ ॥ ೬ ॥ ಮುಂನಮಾಡಿದಪಾಪದಿಂದು ।
ತ್ಪಂನವಾದೆವುಮೂಢಯೋನಿಯ । ಲಿಂನುಬರಲಾರೆವ್ರಭವಾರ್ಣವದೊಳಗೆತಾವೆಂದು ॥ ನಿಂನಸಿರಿಪದಕಮಲಯುಗಳಕೆ ।
ನಂನಿನೆರೆತಲೆವಾಗಿಪಾಪವ । ಹಾರ್ಣವವನುತ್ತರಿಸುತಿದೆತರುನಿಕರನೋಡೆಂದ ॥ ೭ ॥ ಭಾವಿಸಲುನೋಡಂಣಮುನಿಗಳೊ ।
ದೇವನಿಕರವೊಪಾಡುವೀಭೃಂ । ಗಾವಳಿಗಳಖಿಳಾಘಹರವಹನಿಂನಚರಿತವನು ॥ ನಾವುವನದೊಳಗಿರ್ದಡೆಯುನಿಜ । ದೈವವ
ನುಬಿಡುವರೆಮಹೋತ್ತಮ । ರೀವಿಪಿನದಲಿಗೂಢಚಾರಿಗಳಾಗದಿರರೆಂದ ॥ ೮ ॥ ಯೋಗಿಚೇತ್ರೋದೂರನಹನಿಂ । ನಾಗಮನ
ನಾಯ್ತೆಂದುಮುದದಲಿ । ಸೋಗೆಗಳುನೋಡುತ್ತನೃತ್ಯವನಾಡುತಿವೆನಲಿದು ॥ ಭಾಗವತರಂದದಲಿಹರುಷದ । ಸಾಗರದಲೋ
ಲಾಡಿಪಾಡುವ । ಕೋಗಿಲೆಯಗೀತವನುಕೇಳುಮನೋಜ್ಞವಿದೆಯೆಂದ ॥ ೯ ॥ ನೋಡುನೆರೆದಿಹಹರಿಣವಧುಗಳು । ನೋ
ಡುತಿರೆಗೋಪಿಯರುನಿಂನನು । ನೋಡಿದಣಿಯದವೋಲುಮಧುರಸ್ಮಿತಕಟಾಕ್ಷದಲಿ ॥ ತೀಡುತಿವೆಪರಿಮಳವವನದಲಿ । ಕೂ
ಡೆಮಂದಾನಿಲನುಹರುಷವ । ಮಾಡುವಂತಿರೆಯಂಣವಿಪಿನಾಭ್ಯಾಗತರಿಗೆಂದ ॥ ೧೦ ॥ ಧನ್ಯೆಯಲ್ಲಾಧರಣಿಮೆರವೀ । ನಿನ್ನಪ

ದಲಂಭನಗಳಲಿ ನೆರೆ । ಧನ್ಯರೀ ನದಿಗಿರಿತೃಣಾದಿಯನಿತ್ತನಮಗಿಂದು ॥ ಧನ್ಯವೀ ತರುವೃಂದಫಲಕುಸುಮ । ಮೋನ್ನತಚ್ಛಾಯಾ
ದಿಸೌಖ್ಯವ । ನಿನ್ನವರಿಗೊಲಿದೀಪವಾಗಿ ಜಗತ್ರಯದಲೆಂದ ॥೧೧॥ ಇಂತನುಗ್ರಹಿಸುತ್ತ ಲಕ್ಷ್ಮೀ । ಕಾಂತನಾವೃಂದಾವನದ
ತರು । ಸಂತತಿಗೆ ಖಗಮೃಗನದೀವನಗಿರಿಗಳಿಂಗೊಲಿದು ॥ ಅಂತವಿಲ್ಲದ ಕೃಪೆಯನಾತ್ಮ । ಸ್ವಾಂತದಲಿ ನೆರೆತಳೆದು ಸಲೆನಿ । ಶ್ಚಿಂತೆ
ಯಿಂದಾಡುತ್ತಲಿರ್ದನು ನಿಜವಿನೋದದಲಿ ॥೧೨॥ ಒಂಮೆ ತುಂಬಿಗಳೊಡನೆ ಪಾಡು । ತ್ತೊಂಮೆ ಹಂಸೆಯ ಗತಿಯಲಾಡುವ ।
ರೊಂಮೆ ನವಿಲುಗಳೊಡನೆ ತಾನಿಂದಿದುರ್ಗೆಸೆಕ್ಕಣವ ॥ ಒಂಮೆ ನಲಿದಾಡುವರು ಗಿಳಿಯಂ । ತೊಂಮೆ ನೆಗುತ್ತೋಡುವರು ಪಾಡುವ ।
ರೊಂಮೆ ಕೋಗಿಲೆಯಂತೆ ಹರಿಬಲಬಾಲಕರು ಸಹಿತ ॥೧೩॥ ಒಮ್ಮೆ ಹುಲ್ಲೆಗಳಂತೆ ಹುಲಿಯಂ । ತೊಮ್ಮೆ ಹಕ್ಕಿಗಳಂತೆ ಹರಿಯಂ ।
ತೊಮ್ಮೆ ಗಜಪತಿಯಂತೆ ತತ್ತಜ್ಜಾತಿಚೇಷ್ಟೆಯಲಿ ॥ ಒಮ್ಮೆ ನಾನಾವಿಧವಿಹಾರದ । ಲೊಮ್ಮೆ ಮಲ್ಲರವೋಲು ಕಾದುವ । ರೊಮ್ಮೆ ತಾ
ರುಗಾವುತ್ತಲಿರ್ದರು ವನವನಾಂತದಲಿ ॥೧೪॥ ದೂರದಲಿ ಕರುತುರುಗಳಾಡುತ । ಬಾರದಿರೆ ತಾನೊಂಮೆ ಘನಗಂ । ಭೀರರವದ
ಲಿ ಸಕಲಲೋಕಮನೋಜ್ಞಸೂಕ್ತಿಯಲಿ ॥ ಧಾರುಣೀಪತಿ ಕೇಳು ಪಶುಗಳ । ಭೂರಿಭಾಗ್ಯವನೊಲಿದು ಕರವನು । ದಾರವಹ
ತತ್ತದ್ಗುಣಾಂಕಿತವರ್ಣಸಂಜ್ಞೆಯಲಿ ॥೧೫॥ ಹಲವುವಿಧಲೀಲೆಗಳಲಂತಿಂ । ತೊಲಿದು ಗೋಪಕುಮಾರಕರು ಸಹ । ಶಲಘುವಿ
ಕ್ರಮನಾಡಿ ಬಳಲಿದು ತಳಿರಹಾಸಿನಲಿ ॥ ಮಲಗಿದನು ಮುನಿಹೃದಯಪಂಕಜ । ಲಲಿತಶಯ್ಯದಲೆಸೆವ ಕರುಣಾ । ಜಲಧಿ ಗೋಪರ
ತೊಡೆಯ ತಲೆಗಿಂಬಿನಲಿ ನುನವ್ರೊಲಿದು ॥೧೬॥ ಇಳೆಗಧೀಶ್ವರ ಕೇಳು ಪುಣ್ಯದ । ಫಲದ ಪರಿಣತಿಯೆಂತುಟೋ ಗೋ । ವಳರು ಕೆ
ಲರಾಹರಿಯ ಮೃದುತರಪಾದಪಂಕಜವ ॥ ಮೆಲುದಳದಲೊತ್ತುವರು ತಂತಂ । ಮೊಳುದೊಡೆಗಳಲಿತೆಗೆದು ಯೋಗಾ । ವೇಸ
ಮಾಹಿತಮತಿಗಳರಿಯದ ಹಜ್ಜೆಗಳನೆಂದ ॥೧೭॥ ಕೆಲರು ಹರಿಪದಕಮಲಯುಗಳವ । ನುಳುಕುಗೆಂದೊಯ್ಯೊಯ್ಯನೊತ್ತುವ ।
ರೊಲಿದು ಕೆಲರೆಳೆದಳಿರ ಬೀಸಣಿಗೆಯಲಿ ಬೀಸುವರು ॥ ಕೆಲರು ಪುಣ್ಯಚರಿತ್ರ ಬಿರುದಾ । ವಳಿಗಳನು ಪಾಡುತ್ತ ಹೊಗಳುತ । ಕಳೆವ
ರವಮರವರು ತದಾತ್ಮಕರಾಗಿ ಬುಧರಂತೆ ॥೧೮॥ ಈ ಪರಿಯಲಾಡುತ್ತ ಮಾಯಾ । ಗೋಪಿತಾತ್ಮಕನಾಗಿ ಸಂಪ । ದ್ರೂಪನೆಸೆದ
ನು ಗೋಪರೂಪದ ನಾಟಕವ ಧರಿಸಿ ॥ ಭೂಪ ಭಕ್ತರ ಭಾಗ್ಯನಿಧಿ ಲೋ । ಕೋಪಕಾರಚರಿತ್ರನೊಡೆಯನು । ಗೋಪಬಾಲಕರಿಗೆ
ನಿಜಾಂಘ್ರಿಯಸನ್ನಿಧಿಯನಿತ್ತು ॥೧೯॥ ಇರಲಿರಲು ಶ್ರೀರಾಮನೆಂಬವ । ಪರಮಸುಖಹಿತಕಾರಿ ಬಲಕೃ । ಷ್ಣರಿಗೆ ತಾನಿಂತೆಂದನಾ
ಗೋಷ್ಠಿಯಲಿ ಕುಳ್ಳಿರ್ದು ॥ ಸರಸಮಿಗಲಾ ಸರಿಸೆ ಗೋಪಾ । ಲರಿಗೆ ನಿರುಪಮವೆನಿಪ ವಿಪಿನಾಂ । ತರವನೊರವುತ್ರಪಕ್ವಫಲಭೋ
ಜನದವೇಳೆಯಲಿ ॥೨೦॥ ಕೇಳು ಕೇಳೆಲೆ ಕೃಷ್ಣ ದುರ್ಜನ । ಕಾಲಸರ್ಪಮಹಾಭುಜನೆ ರಿಪು । ಜಾಲಸೌಖ್ಯವಿರಾಮ ಕೇಳೆಲೆ
ರಾಮ ಬಿನ್ನಪವ ॥ ಕೇಳಿ ಕೆಳೆಯರಿರೊಂದು ವನವಿಹು । ದಾಲಿಸುವಡಳವಲ್ಲ ಸರಿಹದ । ತಾಳವನ ನುತಪಕ್ವಫಲಭರಶೋಭಿತವೆ
ದೆಂದ ॥೨೧॥ ಎಂಬೆನೇನನು ಪಕ್ವಫಲಭರ । ವಂಬರವನಳ್ಳಿರಿಯೆ ದೆಸೆಗಳ । ನಿಂಬುಗೊಂಡಿದೆ ಪರಿಮಳದ ಪವಮಾನನೀವ
ನವ । ಉಂಬ ಭಾಗ್ಯಾಧಿಕರ ಕಾಣೆನು । ಹಂಬಲಿಸಬೇಡದನು ಧೇನುಕ । ನೆಂಬವನು ಕಾದಿಹನು ದೈತ್ಯನು ನೋಡಲರಿದೆಂದ ॥೨೨॥
ಕತ್ತಲಿಸಿಕೊಂಡಿಹುದು ವನವದು । ಕತ್ತೆಯಾಕೃತಿಯಾಗಿ ತಾನಿಹ । ನತ್ಯಧಿಕಬಲವೀರ್ಯಗರ್ವಿತನವನ ಪರಿವಾರ ॥ ಕತ್ತೆಗಳು ದಾನ
ವರು ವನವದು । ಮೃತ್ಯುವಿನ ಬೀಡಿಕೆ ಮಹಾಹಿಯ । ಹುತ್ತು ಹೊಗಲರಿದಮರರಿಗೆ ಸಹಿತದರ ದೆಸೆಗೆಂದ ॥೨೩॥ ಸಾಯರೇ ಹು
ಟ್ಟಿರ್ದರೆಂದಿಂ । ಗಾಯವಂತರಿಗಿಷ್ಟಸಿದ್ಧಿಯ । ದಾಯವಾದರೆ ಸಾಕು ಕಲ್ಪಾಂತರತರುಗಳಂತೆ ॥ ಕಾಯವಿಡಿದಿರ್ದೇನು ಫಲನಿಂ ।
ಮಾಯತಿಕೆಯೆಂತೆನಲು ಬಲನಾ । ರಾಯಣರು ನಡೆತೋರಿಸೆಂದರು ದೈತ್ಯನಿಹವನವ ॥೨೪॥ ಹೊಕ್ಕನಮರಾರಿಗಳ ವನವನು ।
ಮಿಕ್ಕರೋರೋರೊಬ್ಬರನುಹಿಂ । ದಿಕ್ಕಿ ಬೊಬ್ಬಿರಿದಾರ್ದು ಗೋಪಕುಮಾರಕರು ಸಲಿದು ॥ ಸೊಕ್ಕಿದಾನೆಯ ಮರಿಗಳಂತಿರ ।
ಲೊಕ್ಕಲಿಕ್ಕಿದರಲ್ಲಿಗಲ್ಲಿಗೆ । ಚಕ್ಕುಲಿಸಿದರು ತಾಳವನವನು ತುರುಗಳನು ಹೊಗಿಸಿ ॥೨೫॥ ಬಾಲಕರ ಹಿಂದಿಕ್ಕಿ ಹೊಕ್ಕಾ । ತಾಳ
ಕೇತನನೆರಡು ಕೈಯಲಿ । ತಾಳಮರಗಳನಲುಗಿ ಕೆಡಹಿದನಾನೆ ಪರಿವರಿದು ॥ ತಾಳತರುಫಲನಿಕರವನು ಹೇ । ರಾಳವೆನೆಕ್ಕೆವೀಸಿದ
ನು ಗೋ । ಪಾಲಬಾಲಕರಿಂಗೆ ತಾನಿಹೆನಂಜಬೇಡೆನುತ ॥೨೬॥ ಹಬ್ಬವನು ಮಾಡಿದರು ಹರಿಬಲ । ರೊಬ್ಬರೊಂದೊಂದೆಸೆಗೆ ಹೆ
ರಿಹರಿ । ದುರ್ಬಿಕಂಟಕರೊಡಲಲಂತಸ್ತಾಪವಡಿಗಡಿಗೆ ॥ ಉಬ್ಬಿಲಬ್ಬಿರಿಸಿದರು ಗೋಪರು । ದುರ್ಬಲರು ಹರಸಿದರು ಹರಿಯನು ।
ಸರ್ಬಲೋಕಾಧೀಶನಾಗೆಮಗಾಳ್ದನಾಗೆಂದು ॥೨೭॥ ಏನಿದೆತ್ತಣ ರಭಸನೆಂಮಿ । ಕಾನನಕೆ ಬಹ ರಾರು ಭೂಪವ । ಸಾನಕಾಲ
ವಿದಾರಿಗೋಕ್ಕೈಕೊಡಿತಿಂದಿನಲಿ ॥ ಬೋನವಾಯ್ತೆಂಮವರ ಪುಣ್ಯವ । ನೇನನೆಂಬೆನೆನುತ್ತ ಜಡಿದಾ । ದಾನವಾಧಿಪನೆದ್ದ ನವನಿಯ
ನೊದೆದು ಬೊಬ್ಬಿರಿದು ॥೨೮॥ ಅವನಿ ಕಂಪಿಸೆ ಕುಲಗಿರಿಗಳವ । ಯವದಗತಿಗಾಡಿದವು ಬೊಬ್ಬೆಗೆ । ದಿವವನಳ್ಳಿದರು ಸುರರು ಸಾ
ಗರವೇಳು ಸೂಸಿದವು ॥ ಜವಗೆನೊಮ್ಮಡಿಯಾಗಿ ರಣರೌ । ದ್ರವನು ತಳೆದಮರಾರಿ ಬಲವಾ । ಧವರಿಗಭಿಮುಖನಾಗಿ ಬಂದನುಖ
ಕಳರೋಷದಲಿ ॥೨೯॥ ಬಂದುದಾನವ ಕತ್ತೆ ಘನರವ । ದಿಂದ ಮರುತೀ ಜಗವನೆಲ್ಲವ । ನೊಂದುಹೊಡೆಯಲಿ ತಳೆದ ಬಲರಾಮಂ
ಗೆನಡು ಮುಳಿದು ॥ ಹಿಂದುಮುಂದೆನೆನಿಂದು ಹಿಂಗಾ । ಲಿಂದೊದೆದು ವಕ್ಷಸ್ಥಳವನಾ । ಯೆಂದೊದೆದ ಹಿಂಮೆಟ್ಟು ಪುನರಪಿ ತಾಗಿದನು

ಬಲನ ॥೩೦॥ ಮತ್ತೊದವಖಳನೆರಡುಕಾಲ್ಗಳ । ನೊತ್ತರಿಸಿಹಿಡಿದಭ್ರದಲಿಬೀ । ಸುತ್ತಬೀಸಾಡಿದನುಗಗನಾಂಗಣಕೆಬಲಭದ್ರ॥
ಹಸ್ತಪ್ರೌಢರಲೇನನೆಂಬೆನು । ಮರ್ತ್ಯನಾಟಕದನುಗುಣದಲೀ । ಲೋತ್ತರದಮಹಿಮೆಯನುಬಣ್ಣಿಸಬಲ್ಲರಾರೆಂದ ॥೩೧॥
ಬೀಸುವಾಗಳೆಖಳನತನುಹೊರ । ಸೂಸಿತಸುವನುಹೆಣನನುತ್ಕಟ । ರೋಷದಲಿತಿರುಹಿಟ್ಟನೊಪ್ಪುವಹನೆಯಕೊನೆಗಳಿಗೆ ॥ ಘಾ
ಸಿಯಾಯಿತುತಾಳವನಪರಿ । ವೇಷದಾದ್ರುಮನಿಕರವವನಿಗೆ । ಹಾಸಿಕೆಡದುದುಮುರಮುರನನೊಂದೊಂದನಂಡಲೆದು ॥೩೨॥
ಖಳನೊಡಲಕರಚರಣಹತಿಯಲಿ । ಸುಲಿಗೆವಡದುದುವಿಪಿನಭುವನ । ಪ್ರಳಯದಂದಿನಪವನನಟ್ಟಿದವೊಲುತನಿಗೆಡದು ॥ ಭಳಿ
ರೆಭಾಪುರೆದೈತ್ಯಕದಳೀ । ದಳನದಕ್ಷ್ತಸಮೀರಮುಲವರಕುಲಕುಠಾರಯೆನುತ್ತಹೊಗಳುತ್ತಿರ್ದಗಖಿಳಜನ ॥೩೩॥ ಮತ್ತೆಕವಿ
ದುಮೋಲೆದೈತ್ಯರ । ಕತ್ತೆಗಳಕಡಲೇನನೆಂಬೆನು । ಮುತ್ತಿಗೆಯನದನುರಿವಕಿಚ್ಚನುಶಲಭಸಂದೋಹ ॥ ಮುತ್ತುವಂದದಲನಿ
ತುವನುಕೈ । ವರ್ತಿಸಿದರಂತಕನೆಗೆತಿರುಹಿದು । ತುತ್ತಮುರುಬಲಕೃಷ್ಣರಾಹಿಂಗಾಲ್ಗಳನುಹಿಡಿದು ॥೩೪॥ ಏನನೆಂಬೆನುಸುರಕು
ಲದಸುಂ । ಮಾನವನುಬರಿದಾಯ್ತುದೈತ್ಯೌ । ದ್ಯಾನವೆನೆಮಂದಾರದರಳ್ಗಳಮಳೆಮಹೀತಳಕೆ ॥ ಜೇನಹುಳುಗಳವೊಲುತುಂ
ಬಿಗ । ಳಾನುತಿಳಿವುತ್ತಿರಲುಸುರಿದವು । ದಾನವಾಂತಕಹಲಧರರನಾನನದಸರಿಸದಲಿ ॥೩೫॥ ಬಿದ್ದೊಡದಪರಿಪಕ್ವಫಲದಲಿ ।
ಗರ್ದಭಂಗಳಹೆಣನರಕುತದ । ಹೆದ್ದೆರೆಯಹೊನಲಿನಲಿತಳೆದುದುಕೂಡೆವನಭೂಮಿ ॥ ರೌದ್ರವನುವನದೊಳಗೆಹರಿಬಲ । ಭದ್ರ
ರಿಂತೆಸದಿರಲುತಾವರೆ । ನಿದ್ರೆಗಭಿಮುಖವಾಯ್ತುನಿರ್ದಶೆಯಾಯ್ತುರವಿದೀಪ ॥೩೬॥ ಎಂಬೆನೇನನುದೈತ್ಯಮಥನಕ । ರಾಂ
ಬುಜಸ್ಪರ್ಶನಹತಾಘರ । ನಂಬುಜಪ್ರಿಯನೂರ್ಧ್ವಗತಿಗೈದಿಸುತನಿಜಕರವ ॥ ಅಂಬರಕೆನೆಗಹಿದನುತದ್ರುಧಿ । ರಾಂಬುಸಂಪ್ಲ
ಷ್ಟವನುಹೇಳೆನೆ । ಹೊಂಬಿಸಿಲುರಂಜಿಸಿತುಗಗನಾಂಗಣವನಾವರಿಸಿ ॥೩೭॥ ಮರಳಿದವುತುರುವಿಂಡುಬಲಕೃ । ಷ್ಣರಕೊಳಲ್ಧ
ನಿಗೇಳುತುರಿಗೆ । ತೊರದಕೆಚ್ಚಲಭಾರದಲಿತೊನಲುತ್ತಸಂದಣಿಸೆ ॥ ಖುರಖುರಾಗ್ರದಲವನಿಯನುಗ । ಬ್ಬರಿಸಿಗಜರುವವೃಷಭ
ತತಿಮೋ । ಹರಿಸಿನಡದುದುದೆಸೆದೆಸೆಗೆಕೆಂಧೂಳಿಪಲ್ಲವಿಸೆ ॥೩೮॥ ಹಿಂದೆಗೋಪಕುಮಾರಕರುಬರೆ । ಸಂದಣಿಸಿಹೊಂಗೊಳ
ಲಕೊಂಬುಗ । ಳಂದೆಸೆಯೆಪೊಗಳುತ್ತತಂನೆಡಬಲದಲುರವಣಿಸಿ ॥ ಮುಂದೆತುರುಗಳನಡೆಯಲೊಪ್ಪಿರೆ । ಮಂದಗಮನದಲ
ಚ್ಯುತನುನಡೆ । ತಂದನಂಬರತಳದಲಮರರುಜಯತುಜಯಯೆನಲು ॥೩೯॥ ನಗೆಮೊಗದಕಿರುಬೆಮರಕೆಂಧೂ । ಳಿಗಳಲೊ
ಪ್ಪಂಬಡೆದಸುಳಿಗುರು । ಳುಗಳಕತ್ತರಿಮೀಲಿಗಳಮುಡಿಗಂಟನೊಳುಮೆರೆವ ॥ ಮೃಘಮಭ್ರಿಪಮಲ್ಲಿಗೆಯರಳ್ಗಳ । ದೃಗುಯುಗಳ
ದೀಧಿತಿಯಸುಲಿಪ । ಲ್ಗಗಳಮಂಗಳಮೂರ್ತಿಬಂದನುನಂದಗೋಕುಲಕೆ ॥೪೦॥ ಕೊಳಲಧನಿಗೀಬಂದನಿದೆಗೋ । ಕುಲದ
ರಸನೀಬಂದನೆನುತಾ । ಲಲನೆಯರುತಮತಮ್ಮಗೃಹಕೃತ್ಯಂಗಳನುಬಿಸುಟು ॥ ನಳಿನನಾಭನನೀಕ್ಷಿಸುವಮನ । ದೊಲಿವಿನಲಿಹ
ರಿತಂದುನೆರದಿ । ಕೈಲದಲೀಕ್ಷಿಸುತಿರ್ದರಚ್ಯುತನಾನನಾಂಬುಜವ ॥೪೧॥ ಅಂಗನೆಯರಚ್ಯುತನಮಧುರಾ । ಪಾಂಗಸುಧೆಯ
ನುನೀಲಮೇಘನಿ । ಭಾಂಗಸೌಂದರ್ಯಾಮೃತವನೋರಂತೆಕುಡಿಕುಡಿದು ॥ ಕಂಗಳಲಿನೆರೆದಣಿಯಹಡೆಯರ । ನಂಗಶರಭಗುನೆ
ಯರುನವಚಿ । ತ್ರಂಗಳಂತೆಸದಿರ್ದರಿಕ್ಕೆಲದಲಿಮಹಾತ್ಮೆಯರು ॥೪೨॥ ನೋಡುತ್ತಡಬಲವಂಕವನುಮಾ । ತಾಡುವವರಿಂಗಿಷ್ಟ
ವನುಕೈ । ಗೂಡಿಸುತಲಾಸ್ನೇಹಕರುಣಾಪಾಂಗದೃಷ್ಟಿಯಲಿ ॥ ನೀಡಿಭುಜವನುಕೆಳೆಯನಂಸಕೆ । ಆಡಿಸುತಬಲಗೈಯ್ಯಲೊಪ್ಪಿರೆ ।
ಕೂಡೆಲೀಲಾಕಮಲವನುನಡೆತಂದನೊಲವಿನಲಿ ॥೪೩॥ ಹಿಂದೆಕೆಳೆಯರುಬಾಲಚರಿತವ । ನಂದೊಲಿದುಪಾಡುತ್ತಮಾಗಧ ।
ರಂದದಲಿಹೊಗಳುತ್ತಬರೆಬಹುವಿಧವಿನೋದದಲಿ ॥ ಇಂದುವದನೆಯರಿಕ್ಕೆಲದಲೊಲ । ವಿಂದಭಜಿಸುತ್ತೈತರಲುಗೋ । ವಿಂದ
ನಾಗೋಕುಲವಹೊಕ್ಕನುವಿದಿತವಿಭವದಲಿ ॥೪೪॥ ಗೋಪಿಯರುಗೋವಿಂದಮೂರ್ತಿಯ । ರೂಪಸುಧೆಯನುಸವಿದುವಿರ
ಹದ । ತಾಪವನುಕಂಗಳಲಿಕಳೆದರುಕಮಲವದನೆಯರು ॥ ಅಪರಮಪೂರುಷನಕೃಪೆಯನು । ಭೂಪಬಣ್ಣಿಸಲರಿದುನಿಗಮಕ ।
ಳಾಪವೆತ್ತಲುಕಾಣದಾವನಪಾದರೇಣುಗಳ ॥೪೫॥ ಬಂದುದೈತಂನಾನೆತನ್ನಸು । ಬಂದುದೆನ್ನಕುಲಾತ್ಮದೇವತೆ । ಬಂದನೆನ್ನ
ಸ್ವಾಮಿಯಂನಾನಂದಸಿಧಿಬಂದ ॥ ಎಂದುರೋಹಿಣಿಸಹಿತಮುದದಲಿ । ನಂದಗೋಪಿಸಭಾಗ್ಯಬಲಗೋ । ವಿಂದರನುಬಂದಿದಿರು
ಗೊಂಡೊಯ್ದಳುನಿಜಾಲಯಕೆ ॥೪೬॥ ಮೈಯ್ಯಹುಡಿಯನುತ್ರೂಪಪಚುತ್ತೈಲವೆ । ನೊಯ್ಯನಂಗದಲೊತ್ತಿತಾಮಿಗೆ । ಮೈಯ್ಯ
ಲೆರದುಷ್ಣೋದಕವನುದ್ವರ್ತನವಮಾಡಿ ॥ ಮೈಯ್ಯಲಂಪಿಕ್ಕಿದಳುಪಾನಿನಿ । ತುಯ್ಯಲನುತನ್ನಂಗಿತಂನಯ । ಕೈಯ್ಯಲೇಬಡಿ
ಸಿದಳುಹೊಸಕ್ರಾಪ್ಪವನುಷಡ್ರಸವ ॥೪೭॥ ಹಾಲುಸಕ್ಕರೆಸಹಿತಸಂದನ । ಲೋಲಲೋಚನೆಯುಣಬಡಿಸಿಸಿರಿ । ಲೋಲರಾಮ
ರಿಗಿತ್ತುವರಕರ್ಪೂರದವೀಳೆಯವ ॥ ಬಾಲೆಸಿರಿಮಂಚದಲಿನಿದ್ರಾ । ಲೋಲರನುಮಲಗಿಸಲುಪರಮುಕ್ತ್ಯ । ಪಾಳುನಿತ್ಯಾತಂಮ
ರುನಿದ್ರೆಗೆಸಲಿಸಿದರುಮನಸವ ॥ ... ... ॥೪೮॥

ಅಂತು ಸಂಧಿ ೧೫ಕ್ಕಂ ಪದನು ೭೫೩ಕ್ಕೆ ಮಂಗಳಮಸ್ತು.

ಹದಿನಾರನೆಯ ಸಂಧಿ.

ಕಾಳಿಂಗಮರ್ದನ ಕಥೆ.

ಸೂಚನೆ॥ ವಿಷದಮಡುವನುಕಲಕಿಕಾಳಿಯ । ವಿಷಧರೇಂದ್ರನಮದವನುದ್ವ । ರ್ತಿಸಿಸುರಾವಳಿಮೆಚ್ಚ
ನೆಬ್ಬಟ್ಟಿದನುವಾರಿಧಿಗೆ ॥ ... ...

ಪದನು॥ ಹರದುದಂಧತಮಿಸ್ರಹರಿಪದ । ದರುಶನದಲೀಸಕಲಜೀವರ । ಭರಿತಹೃದಯಜ್ಞಾನವೇಪರಿಹರವದೆಂಬಂತೆ॥ ತರಣಿಯುದಯದಲಕ್ಷ್ಮಿಗಳಗವ । ಸರದಹದನಾಯಾತ್ಮವಿದ್ಯಾ । ಪರಿಹೃತಜ್ಞಾನದಲಿನಿಜವನುಬುಧರುತಿಳಿವಂತೆ ॥೧॥ ಹರಿನಯನಸರಸಿರುಹಬಿರಿನಿಜ । ಬಿರಿಯಕದ್ದಿರುಳೊಯ್ಯಲಿವೃತಾ । ವರೆಗಳಾದವುಸರಸಿಜಶ್ರೀಕೋಶಗೃಹವೆನಲು ॥ ಅರಳಿದವ್ರತತಿಬಿಗಳವಶದಲಿ । ಪರಿಮಳದಮೃಷ್ಟಾವಶಿಷ್ಟದ । ಸರಕುಸೇರಿದವೆನಲುಮೆರದುದುದಿವಸಕರನುದಯ ॥೨॥ ಮಗಳನ್ಮೈಯಲಿ ಹೊತ್ತದೋಷವ । ತೆಗವುದೊಡೆಯರೆನಲ್ಕೆಕಿರಣಾ । ಳಿಗಳನಟ್ಟದವ್ರೋಲುರವಿರಾಜೀವಲೋಚನನಗೆ ॥ ತೆಗದುನಿಂದುದುತಿಮಿರಕರುಣಾ । ಳಿಗಳದೇವನುಮೈಮುರಿದುಗೃಗು । ಯುಗಳಕಾರುಣ್ಯೇಕ್ಷಣದಮುದ್ರೆಯಲಿಭಾಷಿಸಿದ ॥೩॥ ಸತಿಯರೊಪ್ಪದನಯನನಿಚಯಾ । ರತಿಗಳೆಸೆಯಲುಜನನಿಮಂದ । ಸ್ಮಿತವದನಲಕ್ಷ್ಮೀನಿರೀಕ್ಷಣದರ್ಥಿಯಿಂದೊಲಿದು ॥ ಸುತನೆಬೆಳಗಾಯ್ತೆನ್ನಜೀವ । ಸ್ಥಿತನೆಬೆಳಗಾಯ್ತೆನಲುಮುನಿಜನ । ಮತಿವಿದೂರನುನಗುತತಂದೆರದಿರ್ದನೊಲವಿನಲಿ ॥೪॥ ಎದ್ದುಕಾಲ್ಮೊಗತೊಳದುಮುನಿಜನ । ಹೃದ್ಯನಾರೋಗಿಸಿದನಮೃತಾ । ನ್ನಾದ್ಯವನುಷಡ್ವಿಧರಸಾಯನಭಕ್ಷ್ಯಭೋಜ್ಯವನು ॥ ಅದ್ವಯನುಹೊಂದೊಡಿಗೆತೊಟ್ಟನ । ವಸ್ತ್ರನಮಳಾಂಬರವನುಟ್ಟನು । ಭದ್ರಭೂಷಣಮೂರ್ತಿಮಾನುಷ್ಯದಲಿರಂಜಿಸಿದ ॥೫॥ ಮತ್ತೆಗೋಪಕುಮಾರಕರುಸಹಿ । ತುತ್ತಮಾಮಳಕೀರ್ತಿತುರುಗಳ । ಮೊತ್ತಸಹಿತಾಪುತ್ತವೃಂದಾರಕವನಾಂತರಕೆ ॥ ತತ್ಸನಿಧಿಗೋಪಿಯರಕಂಗಳು । ಚಿತ್ತವೃತ್ತಿಗಳೊಡನೊಡನೆಕಳ್ಳು । ಹುತ್ತಬರೆಕರುಣಾಳುಬಿಜಯಂಗೈದನೊಲವಿನಲಿ ॥೬॥ ಹಿಂದಿರಿಸಿಬಲರಾಮನನುಗೋ । ವಿಂದನಾಡುತತುರುಸಹಿತಮ । ಧ್ಯಂದಿನದವೇಳೆಯಲಿನಲಿದಾಗೋವಳರುಸಹಿತ ॥ ಬಂದನಾಕಾಳಿಯಮಹೋರಗ । ಮಂದಿರದಮತ್ಸಹವೆನಿಪಕಾ । ಳಿಂದಿಗಾಗಿತ್ತಡಿಯವಿಷದಿಂದುರಿದಜಲದೆಡೆಗೆ ॥೭॥ ಬಿಸಿಲಝಳದಲಿನೀರಡಿಸಿಪಶು । ವಿಸರಕವಿದುದುವುರಗರಾಜನ । ವಿಷದಮಡುವಿನದೆಸೆಗೆಗೋಪಕುಮಾರಕರುಸಹಿತ ॥ ಅಸುರರಿಪುವಿನಕ್ಕಸಿಯುನದನೀ । ಪ್ರಿಸುವವ್ರೋಲುದಕವನುಕುಡಿಕುಡಿ । ದಸುವನೀಗಿದರರ್ಭಕರುತುರುಮಿಂಡುಗಳುಸಹಿತ ॥೮॥ ಮೇಲೆಹಾರುವವಿಹಗವಿಷದ । ಜ್ವಾಲೆಯಲಿಗರಿಸೀದುಜಲದಲಿ । ಬೀಳುವವ್ರುತತ್ತೀರವನತರುನಿಕರವ್ರಿಹೊಯ್ದು ॥ ಹೇಳಲೇನೊಣಗಿರಲುನೋಡದೆ । ಬಾಲಕರುತುರುಮಿಂಡುಸಹಿತಕ । ರಾಳವಿಷಜಲಪಾನಮೂರ್ಛಿತರಾದರಾಕ್ಷಣಕೆ ॥೯॥ ಕಂಡನಾಕೋಲಾಹಳದತುರು । ಮಿಂಡುಗಳನಾಶವನುಗೋಪರ । ತಂಡದಸುಸಂಕ್ಷಯವನಕಟಕಟೇನಿದೇನೆನುತ ॥ ಕಂಡುನಿಜದೃಷ್ಟಿಯಲಿಕಾಲನ । ದಂಪವೀಜಲವಾಯ್ತುಜೀವವ । ಕೊಂಡುದಿದೆಲಾಹಾಯೆನುತನೋಡಿದನುಕರುಣದಲಿ ॥೧೦॥ ನೋಡಿದಾಗಳಶಿಶುಪಶುಗಳಸು । ಕೂಡಿಪಸರಿಸಿಬಿಗಿದನಿದ್ದೆಯ । ಕೇಡಿನಲಿಮೈಮುರಿದುಕಂಡೆರದಂತೆತಮತಮಗೆ ॥ ಆಡುತಿದ್ದರುತುರುಸಹಿತದಿಟ । ನೋಡಿದಡೆಬ್ರಹ್ಮಾಂಡಕೋಟಿಯ । ಮಾಡಳೀನದೆವನಾಯೆಯವನನಮುನಸಂಜ್ಞೆಯಲಿ ॥೧೧॥ ಕೆಟ್ಟುದೀನದಿಯಕಟಕಟಗಡಿ । ಗೆಟ್ಟಜಲಚರನಿಕರವನುನೆರೆ । ಸುಟ್ಟುದೀವನತರುಗಳುಲಿವ್ರುತ್ತಿವಿಷಾಗ್ನಿಯಲಿ ॥ ಮುಟ್ಟದವರಿಂಗೀಹದನುಕ್ಕೈಯಟ್ಟುತಿದೆಲಾಪಾಪಿಯನುಯ । ಬಟ್ಟಿದಲ್ಲದೆನದಿಯಜಲವಿದುಸೇವ್ಯವಲ್ಲೆಂದ ॥೧೨॥ ಮಜ್ಜನವಿದುಸಕಲಲೋಕದ । ಸಜ್ಜನಾನುಗ್ರಹಕೆಕಾರಣ । ದುರ್ಜನರನಿಗ್ರಹಕೆಕಾರಣವಾಗಿಮತ್ತಿಂದು ॥ ವರ್ಜಿಸಿದಭಿಗನಾರುಮಾಡುವ । ಸಜ್ಜನಾನುಗ್ರಾಹಕರುದಿಟ । ಕಬ್ಜಜಾದಿಮಹೇಶರಿದಕೆಸಮರ್ಥರಲ್ಲೆಂದ ॥೧೩॥ ಎನುತಮನದಲಿಕೋಡಿಕರುಣಾ । ವನಧಿಸೀತಾಂಬರದಸೆರಗನು । ಕನಕರಶನಾಬದ್ಧದಲಿರಂಜಿಸಲುಬಿಗಿದುಟ್ಟ ॥ ದನುಜರಿಪುಕುರುಳೋಳಿಗಳನೊ । ಯ್ಯನೆತೆಗದುಬಿಗಿದೆಸೆವಮುಡಿಗಂ । ಟಿನಲಿನೇವರಿಸಿದನುಮಿಗೆಮುಂಗೈಯಕಂಕಣವ ॥೧೪॥ ವಿಷಜಲಾಶಯದಂತರದಲೊಂ । ದೆಸೆವಕದಹದತರುಮಹಾದ್ರುಮ । ವಸಮವೆನೆಪಲ್ಲವಿಸಿಮುಗಿಲುದ್ದಕಲಿಬೆಳೆದಿರಲು ॥ ಅಸುರರಿಪುನಗುತ್ತಡರಿದನುಪದ । ವಿಸರುಹಂಗಳುಕೆಂಪಡರಲಾ । ಗಸದಲಮರಾವಳಿಯಘೋಷನಲಾಮಹಾದ್ರುಮವ ॥೧೫॥ ಗಂಡುಗಲಿಗಳದೇವನೊಡರಿಸಿ । ದಂಡೆಯನುಬೊಬ್ಬಿರಿದುಮರದಿಂ । ದಿಂಡುವಾಯ್ದನುದುರ್ನಿರೀಕ್ಷಣವೆನಿಪಮಡುವಿನಲಿ ॥ ಕಂತುಸುರರಂಬರದಲದನಾ । ಖಂಡಲಾದ್ಯರುತಮತಮಗೆಭಯ । ಗೊಂಡುಮರುಗಿದರರಿಯದವರನುಪಮಾನಮಹಿಮೆಗಳ ॥೧೬॥ ಕೀರಿಹಾಯ್ದುಡಿವಿಷದಮಡುವದು । ನೂರುಬಿಲ್ಲಂತರದಡಕೆನೀ । ರೇರಲುಕ್ಕಿತುಬಹಳತರನಿರ್ಘೋಷದಲಿಜಡಿದು ॥ ಕಾರಿದನುಕಡುಗನಲಿದಹಿಪತಿ । ಘೋರವಿಷವನುಭುವನಜನಸಂ । ಹಾರಸಮಯವಿದಾಯ್ತೆನಲುಬೆದರಿಸಿತುಮೂಜಗವ ॥೧೭॥ ಮತ್ತಗಜದಂದದಲಿತೊಳ್ಗಳ । ನೆತ್ತಿಹೊಡವ್ರುತ್ತಡಿಗಡಿಗೆಕಲ । ಕುತ್ತಮಂದರದಂತೆಮಂದರಧಾರಿಮುರಿಮು

ಳಿದು ॥ ಸುತ್ತಿಸುಳಿವುತ್ತಿರಲುಕಾಳಿಯ । ದೆತ್ತಣದುಬಲುರಭಸವೆನುತ । ದ್ವೃತ್ತಫಣಮಂಡಲದಲಾಲಿಸಿದನುಮಹಾರವವ ॥ ನೋಡಲರಿದಮರರಿಗೆತನ್ನಯ । ಬೀಡನಿದನಾವಿಹಗಪತಿಮಾ । ತಾಡಲಾಪನುಮಿಕ್ಕವರಯಿಾವಿಷದಮಡುವಿನಲಿ ॥ ಕೂಡಲಂಮುವರುಂಟೆಹೊಕೋ । ಲಾಡುವವರಾರೋದುರಾತ್ಮರ । ನೋಡುವೆನುತಾನದನೆನುತ್ತುರಗೇಂದ್ರನೈತಂದ ॥೧೯॥ ಕ್ಷೀರವಾರಿಧಿಶಯನನಾವಿಷ । ವಾರಿಕೇಳಿಯಲಿರಲುಕಾಣುತ । ಚಾರುಚರಣಾಂಬುಜದತಳವನುದಾರರೇಖೆಗಳ ॥ ವೀರಬಾಲಕನಾರೆನುತಕಾ । ಳೋರಗನುಕಮನಿಯ್ಯಮೂರ್ತಿಯ । ಭೂರಿತೇಜವನಾಪರಿಸುತ್ತೈತಂದನುರೆಮುನಿದು ॥೨೦॥ ಊರಿವರ್ಮಂಗಳನುಭುವನಾ । ಧಾರಮೂರ್ತಿಯನೊಂದಧಿಕವಹ । ನೂರುಮುಖದಲಿಸುತ್ತಿಕೊಂಡೊಳಗಿಕ್ಕಿಕೆಕ್ಕೆಯಲಿ ॥ ತೋರಿದನುನಿಜವಿಷದವೀರ್ಯದ । ಸಾರತರಸಾಮರ್ಥ್ಯವನುದು । ರ್ವಾರನಖಿಳೇಶ್ವರನೊಡನೆನಾಗೇಂದ್ರನುರೆಮುನಿದು ॥೨೧॥ ಇತ್ತಲುರಗನಬಂಧದಲಿಹರಿ । ಮೂರ್ತಿಮುಳುಗಿರೆಕಾಣುತಾತಡಿ । ಯೆತ್ತಲಾಕೆಳೆಯರುನಿಜಾತ್ಮಪ್ರಾಣನಾಥನನು ॥ ಎತ್ತಲೀನಾದನೊಯೆನುತಮೊಗ । ವೆತ್ತಿನೋಡುತನೋಡುತವನಿಯ । ಲತ್ತುಕೆಲದರುಮೂರ್ಛೆಯಲಿಗೋಪಾಲಬಾಲಕರು ॥೨೨॥ ಏನನೆಂಬೆನುಭೂಪಘನದುಂ । ಮಾನದಲಿಪಶುಗಳುಸಹಿತಕೃ । ಷ್ಣನನಾರ್ಪಿತದೃಷ್ಟಿಯಲಿಪೊಗುವಶ್ರುಪೂರದಲಿ ॥ ಕಾನನದಚಿತ್ರದಪೊಲುತ್ಕಟ । ದೀನಭಾವವತಳೆದುಮೂರ್ಛಾ । ಧೀನವೃತ್ತಿಗಳಾಗಿಮಿಡುಕಾಣನಿಂದರೀಕ್ಷಿಸುತ ॥೨೩॥ ಕೋರಿದವುಗೋಕುಲದಲತ್ತಲು । ಮೂರುವೆರದುತ್ಪಾತವವನಿಯ । ನೋರುಗುಡಿಸುವಪ್ರೋಲುನಭದಲಿಧರೆಯಲಾಕ್ಷ್ಮನಲಿ ॥ ದೂರಿದವುಕಾನನದಲೊಬ್ಬನೆ । ಬೇರೆರಾಮನನುಳಿದುಹರಿತುರು । ಗಾರರೊಡನೈದಿದುದನರಿದಳಲಿದುದುಜನನಿವಹ ॥೨೪॥ ಪ್ರಳಯದುತ್ಪಾತಂಗಳಾರಿಂ । ಗಳವತರುತಪೊಡಾಯೆನುತಗೋ । ಕುಲದಜನತನತನಗೆವಿಗತಪ್ರಾಣರಾದಂತೆ ॥ ನಿಳಯವನುಹೊರವಂಟುಹರಿಯುಳಿದುಳಿವರಾವಲ್ಲೆನುತಹೊರವಂ । ಟಳುತನಡದುದುಕೂಡೆವೃಂದಾವನಕೆಕಳವಳಿಸಿ ॥೨೫॥ ಮುಂದೆತುರುಗಳಹಜ್ಜೆಗೊಂಡಾನಂದಗೋಪಾನ್ಯಖಿಳಗೋಪರ । ವೃಂದವಾಗೋಪಾಂಗನೆಯರಾಬಾಲವೃದ್ಧಜನ ॥ ಸಂದಣಿಸಿನಡೆತಂದುದಾಕಾ । ಳಿಂದಿಗೇಳುತಬೀಳುತಾಗೋ । ವಿಂದಮೂರ್ತಿಯನೀಕ್ಷಿಸುವಮನದೊಂದುತವಕದಲಿ ॥೨೬॥ ಅಲ್ಲಿಗಲ್ಲಿಗೆಮೆರೆವಹರಿಪದ । ಪಲ್ಲವದವಜ್ರಾಂಕುಶಧ್ವಜ । ಸಲ್ಲಲಿತರೇಖೆಗಳಹಜ್ಜೆಗಳಲ್ಲಿಹೊರಳುತ್ತ ॥ ನಿಲ್ಲದೈದಿದರರಸುತರಸುತ । ಹಳ್ಳಿಯವರಾಮ್ನಾಯತತ್ವವೆ । ಬಲ್ಲೆವೆಂದಾವನದತರುಲತೆಗಳನುಬೆಸಗೊಳುತ ॥೨೭॥ ಬೇಗೆಯಲಿಬಿದ್ದಂತೆಜನನದಿ । ಗಾಗಿಹರಿತಂದಾಜಲಾಂತದ । ಭೋಗಿಭೋಗಪರೀತನಾಗಿಹಕೃಷ್ಣನನುಕಂಡು ॥ ನೀಗಿದರುಜೀವವನುಜಾತವಿ । ಯೋಗದಲಿಗೋಗೋಪನಿಕರದ । ಸಾಗರದಸಂಕ್ರಂದಿತವಲಾಲಿಸುತಮೂರ್ಛೆಯಲಿ ॥೨೮॥ ಗೋಪಿಯರುಗೋವಿಂದಮೂರ್ತಿಯ । ರೂಪಗುಣಸೌಂದರ್ಯಮಧುರಾ । ಳಾಪವನುನೆನವುತ್ತಕಂಬನಿಗಡಲಲಾಳುತ್ತ ॥ ತಾಪತಪ್ತೆಯರಾಗಿಭುವನಕ । ಳಾಪಹಾಳಾಯ್ತೆನುತಕೇಡಾ । ಶ್ರೀಪತಿಯದುಸ್ಥಿತಿಗೆಮರುಗಿದರಂದುಮರುಕೊಳಿಸಿ ॥೨೯॥ ಬಾಯಬಿಡುತ್ತೈತಂದರಂದಾ । ಸ್ತ್ರೀಯರಳಲುವನಂದಗೋಪಿಯ । ಕಾಯದಲಿಕಾಯವನುಕೆಡಹಿಸಮಾನದುಃಖದಲಿ ॥ ಬೇಯಲೊಪಲೊಡನೊಡನೆಮೂರ್ಛೋರ್ಮೀ । ವಾಯದಲಿಹಲುಬುತ್ತಹರಿಯನು । ಸಾಯಲನುಗೈವುತ್ತಲಿರ್ದುದುಸಕಲಜನನಿವಹ ॥೩೦॥ ಏಕೆಜೀವನವತ್ಸನಮಗಿ । ನ್ನೇಕೆನಮಗೀವಿಭವಸಾಕಿಂ । ನೇಕೆಗೋಕುಲಕೃಷ್ಣನೆಂಬಸುಹೋಗಿನಾವೇಕೆ ॥ ಏಕೆಲೋಕವಿದಿನ್ನುಕೃಷ್ಣನ । ಲೋಕವೇನಿಜಲೋಕವೆಮಗಿಂ । ದಾಕುಳಿಯರಳವಳಿದುಬಿದ್ದರುಧರೆಗೆಮೂರ್ಛೆಯಲಿ ॥೩೧॥ ಇರಲುಕಾಣುತಕೃಷ್ಣನಾನಿಜ । ಶರಣಜನದಾಯಾಸಪರಂ । ಪರೆಯನಾಗೋಕುಲದದುಸ್ಸಹವೆನಿಪದುಸ್ಥಿತಿಯ ॥ ನರರಲೀಲೆಯನಾಟಕವನನು । ಕರಿಸಿಮೈಮುರಿದಂತೆನಿಮಿಷಾಂ । ತರಕೆಮೈಮುರಿದೆದ್ದನುಗ್ರೋರಗನಬಂಧನವ ॥ ಅಸುರರಿಪುಮೈಮುರಿಯಲಾಶಿಶು । ಪಶುಗಳಸುಗಳುಸಹಿತಗೋಕುಲ । ದಸುವಮುರಿದೊಡಲೊಳಗೆಮಸಗಿದರೊಡನೆಮಸಗಿದುದು ॥ ನಸುನಗುತಹರಿನೋಡಲಾನನ । ವಿಸರವಿಕಸಿತವಾಯ್ತುಜೀವ । ಪ್ರಸರಚೇತನಮೂರ್ತಿಹರಿಯಾಂಬುದಸಂತ್ರೋರ್ಪಂತೆ ॥ ಜರದುಹರಿಮೈಮುರಿದುನಿಲೆಬಿಗಿ । ದುರಗನೊಡಲಿನಬಂಧವನುಬಿಡೆ । ಬಿರಿದುಬಿಸುಟಿಳಲುತ್ತಮಿಗೆಕಡುನೊಂದುಹರಿಸಾರ್ದ ॥ ಉರುಹುಮಂತೀರೇಳುಜಗವನು । ಧರಧರದನೂರೊಂದುಮುಖದಿಂ । ದುರಗನುರಿಯುಗುಳುತ್ತಲಿರ್ದನುಹೆಲವುಕಂಗಳಲಿ ॥೩೪॥ ಕೆರಳಿನೋಡುತ್ತುರಗಪತಿಮೋ । ಹರದಹೆಡೆಗಳನೆತ್ತಿಪುನರಪಿ । ಹರಿಯನೊಳಕೊಂಬೊಂದುಮನದಸರೋಷದುಬ್ಬಿನಲಿ ॥ ಹರಿದುಬರೆಸಿಂಮುಖಕೆನಾಗನ । ಕೆರಳಿಸುತಬಳಲಿಸುತತಪ್ಪಿಸಿ । ಮರಮುರಿದುಮುರಪ್ಪೈಸುಳದಾಡಿದನುಮಡುವಿನಲಿ ॥೩೫॥ ಅಡ್ಡಡೆಡನದ್ದುತ್ತಮುರಹರ । ನೆದ್ದರೆಡೆಡನೇಳುತತಿರುಗಿದ । ಡಸ್ವಯದಿಬೇಬಳಿಯಬಿಡದೋರಂತೆತಿರುಗುತ್ತ ॥ ಹೊಡ್ಡಲಾರದೆತನ್ನಕಟವಾ । ಯಿದ್ದೆಸೆಯನೆಕ್ಕುತ್ತಫನತರ । ರೌದ್ರಮುಖನುರಿಯುಗುಳುತಿರ್ದನುರೋಷಪಾವಕನ ॥೩೬॥ ಕಾದಮಡಕೆಗಳಂತೆಸೆವನಾ । ಸೋದರದವಿಷವೀರ್ಯದುಸ್ಸಹ । ವಾದಕಂಗಳಸುಯ್ಲುಹೊಗೆಗಳಭೀಕರಾನನದ ॥ ಹಾದಿಯನುಹತ್ತಿಸುತಬಹೆರಾ । ಕೋದರೇಂದ್ರನಕಡುಹುತಳಮೇ । ಲಾದುದೈದಲುನೆರೆಯದಾವೇದಾಂತವಿಶ್ರುತನ ॥೩೭॥ ಬಳಲಿದನುನಾ

ಗೇಂದ್ರನೊಡನಲಾ । ಪರ್ಗಳದುತ್ತಂನೆಯುಮುಂದೆರೋಷಾ । ಕುಳಿತನ್ನೆತ್ತರೆಮುಟ್ಟಿಹೆಡೆಗಳಮೇಲೆಸೀಡಿರ್ದ ॥ ತುಳಿದನುರಗನಮ
ಸ್ತಕದನುಂ । ದಲವನರುಣತರಾಂಘ್ರಿಪಂಕಜ । ದಳದರೇಖೆಗಳೆಸೆಯುಲಮರಾವಳಿಯುಘೋಷಯಿಸಲು ॥ ೩೮ ॥ ಮೆಟ್ಟಿದನು
ಮುನಿದಾತ್ರೈಕೃಷ್ಣ । ರಟ್ಟನುರಗಾಧಿಪನಹೆಡೆಗಳ । ಧಟ್ಟಗಳನೊಡನೊಡನೆಪೆಡೆಮಣಿನಿಕರರಂಜಿಸಲು ॥ ಸೃಷ್ಟಿಪಾಲಕರೊ
ಡೆಮುನುದರನಿ । ವಿಷ್ಟಜನದಮಹಾಗುರುಸ್ವದ । ಲಷ್ಟದಿಗಧೀಶ್ವರರುಭಾಪೆನೆವಿವಿಧಲೀಲೆಯಲಿ ॥ ೩೯ ॥ ತಾಳಮದ್ದಳೆಶಂಖಪ
ಟಹಸ । ಮೇಳವದಸಂಗೀತಸುಮನೋ । ಜಾಲವೃಷ್ಟಿಗಳಿಂದಗಂಧರ್ವಾಪ್ಸರರನಿಕರ ॥ ಮೇಲೆಸಂಸ್ತುತಿಜಯರವಂಗಳ ।
ಲೋಲಗಿಸುತಾಹರಿಯನ್ನಸ್ಪದ । ಲೀಲೆಗನುಗುಣವೆನಲುಮುಸುಕಿತುಗಗನಮಂಡಲವ ॥ ೪೦ ॥ ವ್ಯೋಮತಳವೆಡೆಗೆಡಲು
ವಿಬುಧ । ಸ್ತೋಮನೆರಪೋಲಗಿಸಲಾತ್ಮ । ರಾಮರರಸಲನಂತಭುವನಾಧಾರನಂಘ್ರಿಗಳ ॥ ತಾಮರಸದಳತಾಡನದಲು । ದ್ದಾ
ಮದರ್ಪವನುಳಿದುವಿಗತ । ಕ್ಷೇಮಚೇವನನಾಡನುರಗಾಧೀಶನಾಕ್ಷಣಕೆ ॥ ೪೧ ॥ ಮೂಗುಬಾಯಿಗಳಿಂದನೆತ್ತರ । ನಾಗನು
ದ್ಗಾರಿಸುತವಿಹ್ವಲ । ನಾಗಿವಿಶ್ವಾಧೀಶನಂಘ್ರಿಕ್ಷೇಮದುರವಣೆಗೆ ॥ ಬಾಗಿಹೆಡೆಗಳನಸುವಿಗುಬ್ಬಸ । ವಾಗಿಕಳವಳಿಸಿದನುದೇಹ ।
ತ್ಯಾಗವನುಮಾಳ್ಪಂತೆಮೂರ್ಛಿತನಾದನಡಿಗಡಿಗೆ ॥ ೪೨ ॥ ಕೆಟ್ಟೆವೆನುತಾನಾಗಪತ್ನಿಯು । ರುಟ್ಟದನುಸಂವರಿಸುತೊಡಲನು ।
ಕುಟ್ಟಿಕೊಳುತದವಾಗ್ನಿಯಲಿಬಿದ್ದಂತೆಬಸವಳಿದು । ತುಟ್ಟಿಸುತಮರಿಮಕ್ಕಳನುಮುಂ । ದಿಟ್ಟುಕೊಂಡೊರಲುತ್ತಬಿದ್ದರು । ಸೃಷ್ಟಿ
ಪಾಲಕನಂಘ್ರಿಗಾಳ್ದನನೀವುದೆಂದೆನುತ ॥ ೪೩ ॥ ಜಯನಮೋಜಗದೀಶಜಗದಾ । ಶ್ರಯನಮೋಜಗದಾತ್ಮಲಕ್ಷ್ಮೀ । ಪ್ರಿಯ
ನಮೋಲಾವಣ್ಯಕಾರುಣ್ಯೈಕವಾರಿಧಿಯೆ ॥ ಜಯನಮೋಭುವನೈಕಕರ್ತೃವೆ । ಜಯನಮೋಭುವನೈಕಭರ್ತೃವೆ । ಜಯನ
ಮೋಯೆನುತೊಡಲನೀಡಾಡಿದರುಹರಿಪದಕೆ ॥ ೪೪ ॥ ದೇವದೇವನದರುಶನವಿದೆಂ । ತಾವಪುಣ್ಯದಫಲವೊಬಹುಯೋ । ಗಾವ
ಳೀಸಿದ್ಧರಿಗೆದೊರಕದಿದಿಂದುತಮಗಾಯ್ತು ॥ ಈವಿಷಮಮತಿತಪ್ಪಿದಡೆಕರು । ಣಾವನಧಿತಪ್ಪುವರೆಸಿಮ್ಮಡಿ । ಜೀವದಾನವನೀ
ವುದೆಮಗೆಂದುದುವಧೂನಿವಹ ॥ ೪೫ ॥ ಎಸೆವದೇವರಕೋಪವಿದುತಾ । ಮಸರೆನಿಪ್ಪೆಮಗಾಯ್ತನುಗ್ರಹ । ವಿಷಧರಾಕೃತಿಯಾ
ಗಿನಿರ್ಮಿಸಿನೀನೆಮತ್ತಿಂದು ॥ ಹೊಸತಲಾಮುನಿವುದುಚರಾಚರ । ವಿಸರಚೈತನ್ಯಾತ್ಮಕನುಕೋ । ಪಿಸುವಡನ್ಯವದಾವುದೆಂದ
ರುನಾಗಪತ್ನಿಯರು ॥ ೪೬ ॥ ಅವಯೋಗದಸಿದ್ಧಿಯೋತವ । ಗಾವತಪದಸಮೃದ್ಧಿಯೋಸ । ದ್ಭಾವಸಂಚಿತಸಾರಸುಕೃತೋ
ದಯವೊನಿಜಪತಿಗೆ ॥ ದೇವನಿಂಮಡಿಯಂಘ್ರಿರಜವಿದ । ನಾವನೈಲಭಿಸುವನುತಾಮುಸ । ಜೀವಿತಾನಿದನೆಂತುಲಭಿಸಿದುದೆಂದರ
ಬಳೆಯರು ॥ ೪೭ ॥ ಪಾವನಾಂಘ್ರಿರಜಕ್ಕೆಲಕ್ಷ್ಮೀ । ದೇವಿಯುರುನೋನುವರುಗಡನಾ । ನಾವಿಧವ್ರತನಿಷ್ಠೆಯಲಿವಿವಿಧಪ್ರಕಾ
ರದಲೀ ॥ ಶ್ರಾವಕರುಸುರಮುನಿವರರುರಾ । ಜೀವಭವಭವಮುಖ್ಯರರ್ಥಿಸಿ । ತಾವನರಿಯರುಭಾಪುಕರುಣಾನಿಧಿಯೆನಿರವ
ಧಿಯೆ ॥ ೪೮ ॥ ಬಲ್ಲರೀಪದರಜವಪಡದವ । ರುಳ್ಳರಜರುದ್ರಾಮರೇಶ್ವರ । ರುಲ್ಲಸಿತಪದವೀಧರಾತಳವನುರಸಾತಳವ ॥
ಬಲ್ಲರನುಪಮಸುಖವೆನಿಪಕೈ । ವಲ್ಯವನುಬೇರೊಂದನಾವುದ । ನೊಲ್ಲರಾರುಸನಾಥರೆಮ್ಮಂತಿರೆಧರಿತ್ರಿಯಲಿ ॥ ೪೯ ॥ ಕೀರ್ತಿ
ಸಿದಡೊಲಿದೊಮ್ಮೆನಾಮವ । ಕೂರ್ತನೆನೆಸೊಡೆಸಕಲಸಂಸಾ । ರಾರ್ತಿಗಳುಯಿಂಗುವವುಗಡನಿನ್ನನೆಸಮುಕ್ಷದಲಿ ॥ ಮೂರ್ತಿ
ಗೊಂಡಿರೆಕಂಡತಮಗಿಂ । ನಾರ್ತಿಯಾತ್ತಣದಕಟಭಯದುಃ । ಖಾರ್ತಯರಿಗಬಲೆಯರಿಗೆಂದರುನಾಗಪತ್ನಿಯರು ॥ ೫೦ ॥ ಕೋಪ್ವ
ಮಾತಿಗೆಕುರಿಗಳಿಂಗಸು । ದಲ್ಲಣನನೀಮತೆಲಕ್ಷ್ಮೀ । ವಲ್ಲಭನೆನೀಲೀಲೆಕೊಳುತಿರೆಕದ್ರುಸುತನಸುವು ॥ ವಲ್ಲಭನಜೀವವನು
ದಯ್ಗೆ । ಬಲ್ಲನೀನೇಯೆನುತಪದಯುಗ । ಪಲ್ಲವದಿಚಾಚಿದರುಕಾಂತೆಯರುರೆಕಳೇವರವ ॥ ೫೧ ॥ ದಾಪಿಯರುನಿಮ್ಮಡಿಯ
ಕರುಣಾ । ರಾಸಿನೀನೆಮತ್ತಂಘ್ರಿಯುಗದಲಿ । ಹಾಸಿಕೆಗಿಹಿದನೊತಲನಶ್ರುಜಲಾಬ್ಧಿಯಲಿಮುಳುಗಿ ॥ ಬೀಸರಕೆಬೀರುವವಧೂ
ಜನ । ದಾಸರಡಗಲುಮೃದುವಚನಪಿ । ಯ್ಯೂಷದಲಿನಗುತ್ತಂದನಸುರಾರಾತಿಕರುಣದಲಿ ॥ ೫೨ ॥ ಏಳಿನೀವಂಜದಿರಿಮುತ
ವನು । ಪಾಲಿಸಿದೆನಾನಿಮಗೆನುತ್ತಾ । ಬಾಲೆಯರತೆತ್ತಿದನುಕಾರುಣ್ಯೇಕ್ಷಣದಲಂದು ॥ ಆಲಿಸುತಸಿಂದಿರಲುಕರಪುಟ । ಮೇಳ
ವಿಸಿನ್ಯೈಮಿಕ್ಕಿಪರವಕ್ಕೆ । ಪಾಳುವಿನೆಬಿಂಸ್ಯೆಬಿದನುಹದುಳಸುತನಾಗೇಂದ್ರ ॥ ೫೩ ॥ ಚಿತ್ತಪಿಸುಕರುಣಾಳುಕೋಪದ । ಕೃತ್ಯ
ಕದಗುಣವದನುಮಿರಾರುವ । ಚಿತ್ತಲಾಸಿರಿದೇವಶಪಜಗುಣಸ್ವಭಾವವನು ॥ ಕೃತ್ಯವಾವುದುತನಗೆನೇಮವ । ನಿತ್ತುರಕ್ಷಿಪುದಂ
ಘ್ರಿಕಮಲದ । ಭೃತ್ಯಭೃತ್ಯನುತಾವೆನುತ್ತರಿದನುಹರಿಪದಕೆ ॥ ೫೪ ॥ ನಾಗನದಿಯುದಕದಲಿನೀನಿರ । ಲಾಗದಿಂದಿದರೊಳಗಿರಿ
ಶುಪಶು । ಧೇನುಗಿಸಲಿಜಲಪಿದನುಸಿಂನಕುಟುಂಬಜನಸಹಿತ ॥ ಸಾಗರಕೆನಡೆಮಗನೆದುಃಖಿತ । ನಾಗದಿರುತ್ತಂನಂಘ್ರಿಕಮಲವ ।
ರಾಗಲಾಂಛನನಾದೆನಿನಗಿನ್ನಿಲ್ಲಿಭಯವೆಂದ ॥ ೫೫ ॥ ಕೇಳುವನುತಾನಾವನಿದನೀ । ಲೀಲೆಯಲಿನಿನ್ನವನುಮರ್ದಿಸಿ । ಬೀಳು
ಕೊಟ್ಟಂಕಥೆಯನಭಿವರ್ಣಿಸುವಸುಕೃತಿಗಳ ॥ ವ್ಯಾಳಕುಲಜರುಮುಟ್ಟಲಾಗದು । ಕೇಳೆಲವೊತಂನಾಜ್ಞೆಯನುತಲೆ । ಬೀಳು
ಕೊಳಿಸಿನಾರವಾಪತಿಯನಾಬಿಲೇಶಯನ ॥ ೫೬ ॥ ಸಿಂನಿರದಲಿಕೆಂಡದಿನನೀ । ತಂನಪದಲಾಂಛನವನಹಿರಿಪು । ಮಂನಿಸುವ
ನಂಜನಿಸಿನುತ್ತಕೃಪೆಯಾಳುನೇಮಿಸಲು ॥ ಪನ್ನಗನುಪರಿತೋಷರಸದಮು । ಹಾರ್ಣವದಲೋಲಾಡಿಪರಮಸು । ಖಾರ್ಣವನನ

ರ್ಚಿಸಿದನುಂನತಭಾವಭಕ್ತಿಯಲಿ ||೫೭|| ದಿವ್ಯಗಂಧಾಭರಣನಿಕರದ | ದಿವ್ಯರತ್ನಾಂಬರವನುನ್ನತ | ದಿವ್ಯಪುಷ್ಪಂಗಳನುದಿವ್ಯಾನ್ನಾಮೃತಂಗಳನು || ದಿವ್ಯವನಮಾಲಾದಿಗಳನಿ | ತ್ತವ್ಯಯನನುಪಚರಿಸಿಸಜ್ಜನ | ಸೇವ್ಯನನುಸತ್ಕರಿಸಿದನುನಾಗೇಂದ್ರನೊಲವಿನಲಿ ||೫೮|| ಮೂವೆಬಲವಂದೆರಗಿನಾಗಕು | ಲಾವಳಿಗಳೊಡಗೂಡಿಹರಿಕರು | ಣಾವಲೋಕನದನುಪಮಾನುಗ್ರಹಕೆನೆಲೆಯಾಗಿ || ದೇವತತಿಭಾಪೆನಲುಬೀಳ್ಕೊಂ | ಡಾವನಧಿಗುರಗೇಂದ್ರನಿತ್ತಲು | ಜೀವದಾನವಬೇಡಿಕೊಂಡೈದಿದನುಹರುಷದಲಿ ||೫೯|| ರಮಣಕಾಖ್ಯದ್ವೀಪವನುಭೂ | ರಮಣಕೇಳುರಗೇಂದ್ರನಾಶ್ರೀ | ರಮಣನನುನೆನವುತ್ತನಡದನು ಸತಿಸುತರುಸಹಿತ || ಅಮಿತಚಾರುಚರಿತ್ರರಭ್ರದ | ಲಮರರಾಯನೆಬಹಳಪುಳಕೋ | ದ್ಗಮವನೀಯಲುಬಂದನಿತ್ಯಾತುಮನನಿಜಪದಕೆ || ||೬೦||

[ಅಂತು ಸಂಧಿ ೧೬ಕ್ಕಂ ಪದನು ೭೩೨ಕ್ಕೆ ಮಂಗಳಮಸ್ತು.

ಹದಿನೇಳನೆಯ ಸಂಧಿ.

ಸೂಚನೆ || ಕಾಡುಕಿಚ್ಚನುನುಂಗಿಗೋಗೋ | ಪಾಲರನುಕೈಗಾಯ್ದುಪರಮಕೃ | ಪಾಳುಬಿಜಯಂಗೈದನಂ
ದಾನಂದಗೋಕುಲಕೆ || ... ...

ಪದನು || ಕರುಣಿಸೆಲೆಮುನಿನಾಥರಮಣಕ | ದಿರವನುಳಿದಾನಾಗಪತಿಮಂ | ದಿರವಮಾಡಿದನೇಕೆಕಾಳಿಂದಿಯಜಲಾಂತದಲಿ || ಗರುಡದೇವನಭೀತಿನಾಗೇ | ಶ್ವರರೊಳೊಬ್ಬಂಗೆಂತುಮಾಡಿದ | ದುರುಳತನವೇನೆನಲುನಗುತಮುನೀಂದ್ರನಿಂತೆಂದ || ಭೂತಳಾಧಿಪಕೇಳುಕೃತಸಂ | ಪ್ರೀತಿಯಲಿನಾಗಾಧಿಪರುವಿನ | ತಾತನೂಜಂಗೊಂದುಸಮಯವಮಾಡಿಬಲಿಗಳನು || ಓತುತಿಂಗಳುತಿಂಗಳಿಗೆಸಂ | ಕೇತವನೆತಾವೊಂದುಮನದಲಿ | ಕಾತರಿಸಿಕೈಗಾವುದೆಂಮನೆನುತ್ತನಮಿಸಿದರು ||೨|| ಪರ್ವಪರ್ವಂಗಳಲಿನೆರದಾ | ದರ್ವಿಕರತತಿತಪ್ಪದೀವುತ | ಸರ್ವತ್ರೋಭಯಹೀನರಾಗಿರಲೊಂದುದಿವಸದಲಿ || ದುರ್ವಿನೀತನೆನಿಪ್ಪಕಾಳಿಯ | ನೋರ್ವನದನಾಕ್ರಮಿಸಿವಿಷಮದ | ಗರ್ವಿತನುತಾನುಂಡನಾವಿಹಗಾಧಿಪನಬಲಿಯ ||೩|| ಎಂನವರುತಾವಾಗಿಮಾಳ್ಪರೆ | ಪನ್ನಗಾರಿಯಪೂಜೆತಾನಿರೆ | ತನ್ನಹಗೆಗಾಗರುಡಗಿರುಡರದಾರುಬಲಿಗೆನುತ || ಮಂನಿಸದೆತಾನುಣಲುಕೇಳಾ | ಪನ್ನಗಾರಿಕನಲ್ದುಕಾಳಿಯ | ಕುಂನಿತಿಂದನೆಕೊಳನೆನುತ್ತೈತಂದನುರೆಮುನಿದು ||೪|| ಕಾತುಗೊಂಬೆನೆನುತ್ತವಿನತಾ | ಪುತ್ರನೈತರೆಕಂಡುಹೆಡೆಗಳ | ನೆತ್ತಿಕಾಳಿಯನುಗ್ರವಿಷವೀರ್ಯದಲಿಮದವೇರಿ || ಹೊತ್ತಿಹಳಚಿದನುಳ್ಳವಿಷವನು | ಬಿತ್ತಿದನುಮರ್ಮಸ್ಥಳಂಗಳ | ಲತ್ಯಧಿಕರೋಷದಲಿಕಚ್ಚಿಕರಾಳಮುಖಗಳಲಿ ||೫|| ತೊಡರಿದನೆತನ್ನೊಡನೆಕದ್ರುವಿ | ನೊಡಲಹುಳುತಪ್ಪೇನುತಪ್ಪೇ | ನಡಬಳಗನಪೆನೋಡುಸಮರದಸವಿಯನೆಂದೆನುತ || ಎಡದಪಕ್ಷದಕೊನೆಯಲುರಗನ | ಹೊಡೆಯಲುರುಳಿದನಪನಿಗೀತನ | ತೊಡಕುಬೇಡೆನಗೆನುತಹಾಯ್ದನುಹದುಳಿಸುತ್ತಸುವ ||೬|| ಓಡಿಕಂಗೆಟ್ಟುರಗಪತಿರಣ | ಹೇಡಿತನದಲಿಮರುಗಿಮನದಲಿ | ನೋಡಿಬದುಕುವುಪಾಯವನುನಿಶ್ಚೈಸಿಮನದೊಳಗೆ || ಬೀಡುಸಹಕಾಳಿಂದಿಯಲಿಮನೆ | ಮಾಡಿಮಡುವಿನೊಳುರಗರಿಪುವಿಗೆ | ನೋಡಬಾರದನೆಲೆಯಲಿರ್ದನುಬಂಧುಜನಸಹಿತ ||೭|| ಒಂದುದಿನಖಗರಾಜನಾಕಾ | ಳಿಂದಿಯಲಿಮುಂನೊಂಮೆಬಲುಮಿಾ | ನೊಂದಮೆದ್ವರೆಹಿಸಿದುಬೇಡೆನೆಸೌಭರಿಯಮಾತ || ಹಿಂದುಗಳೆಯಲುಶಾಪವನುಮುನಿ | ವಂದ್ಯನಿತ್ತನುವಿಹಗಪತಿಯಿಂ | ದಿಂದಮೇಲಿದಮಾಡಿದಡೆಖಗಸಾಯಲೆಂದೆನುತ ||೮|| ಬಲ್ಲನದನಾಕಾಳಿಯೋರಗ | ನಲ್ಲದುಳಿದವರರಿಯರದರಿಂ | ದಲ್ಲಿನೆಲೆಗೊಂಡಿರ್ದನಕುತೋಭಯದಸೌಖ್ಯದಲಿ || ಬಲ್ಲಿದವರಾರಕಟಲಕ್ಷ್ಮೀ | ವಲ್ಲಭನಭಯವಾಯ್ತ್ರೈಜಗ | ದಲ್ಲಿನಿರ್ಭಯರಾದಜೀವರಕಾಣೆನಾನೆಂದ ||೯|| ಮತ್ತೆಕರುಣಿಸಿಚರಣಮುದ್ರೆಯ | ನೊತ್ತಿಶರಣಾಗತನನಾವುರು | ಷೋತ್ತಮನುಬೀಳ್ಕೊಳಸಲಭಯವನಿತ್ತುರಮಣಕಕೆ || ಅತ್ತಲುರಗನುಗಮಿಸಲಿತ್ತಡಿ | ಯಿತ್ತಲಾಸಂತಾಪಪಾವಕ | ತಪ್ತರಲ್ಲಿಗೆಬಂದನಾನಿಜಬಾಂಧವರಹೊರಗೆ || ಬಂದನೈಬಲ್ಲಹರದೇವನು | ಬಂದನೈಜಿತನಾಗರಾಜನು | ಬಂದನೈಭುವನಾಧಿಪತಿವಂದಿತಪದಾಂಬುಜನು || ಬಂದನೈತಂಮಂತರಾತ್ಮನು | ಬಂದನೈಯೆನುತಖಿಳಗೋಪರ | ವೃಂದವೆದ್ದುದುಕಾಣುತಸುಬಂದಂತೆತಮತಮಗೆ ||೧೧|| ದಿವ್ಯಗಂಧಾಂಬರವಿಭೂಷಣ | ದಿವ್ಯಜಾಂಬೂನದವಿರಾಜಿತ | ದಿವ್ಯಮಾಲ್ಯಮನೋಭಿರಾಮಮನೋಜ್ಞವಿಗ್ರಹನ || ದಿವ್ಯಮೂರ್ತಿಯನೀಕ್ಷಿಸುತವಿರ | ಹವ್ಯಥೆಯನೀಡಾಡಿತಮತಮ | ಗವ್ಯಯನನಪ್ಪಿದರುಪುಳಕಾಶ್ರುವಿನಪೂರದಲಿ ||೧೨|| ಹೆತ್ತವರಹರುಷವನುತಾನದ | ವಿಸ್ತರಿಪೆನಿಂನೇನತುರುಗಳ | ಮೊತ್ತಮುಸುಕಿದವಿರದೆಹರುಷದಲಾಮುರಾಂತಕನ || ಸುತ್ತನಿಂದೀಕ್ಷಿಸುತಲವಿರಳ | ತೃಪ್ತಲೋಚನಗಳಲಿಮೋಹನ | ಮೂರ್ತಿಯನುಮಿಕ್ಕವರಹರುಷವನಾಡಲೇಕೆಂದ ||೧೩|| ತೊರದಮೊಲೆಯಲಿತಾಯಿಬಂದಾ | ಪರಮಪುರುಷನನಪ್ಪಿದೆಳೆಮ್ಮೆ | ಮುರಿಯಲಿಯ್ಯಾಡೆನಂದನೊಡನೊಡನಪ್ಪಿದನುಬಿಡದೆ || ಹರಹರಾಗೋಪಿಯರಹರುಷಾಂ | ಕುರಜಪುಳಕದಪರಮಸುಖಸಾ | ಗರಸಮೃದ್ಧಿಯನರಿವರಾರೆಲೆಭೂಪಕೇಳೆಂದ ||೧೪|| ಪ್ರಾಣವೈತರಲಖಿಳಕರಣ | ಶ್ರೇಣಿಚೇ

ಷ್ಟಿಸುವಂತೆಭುವನ । ಪ್ರಾಣಚೇತನವಮೂರ್ತಿಬರಲಾವಿಷದಮಡುವಿಂದ ॥ ಕಾಣುತವೆಗೋಗೋಪವನಿತಾ । ಪ್ರಾಣವೀಪತ್ಯ
ಪ್ತವೆನಿಸೆ । ಪ್ರಾಣಿಸಿದುದೇನೆಂಬೆನಾಸಂಜಾತಸಂಭ್ರಮವ ॥ ೧೫ ॥ ನಗುತಬಂದಪ್ಪಿದನುಬಲನಾ । ಜಗದಪತಿಯನುಕೃಷ್ಣನ
ರುಮಹಿ । ಮೊಗಳಸಾಮರ್ಥ್ಯವನುಬಲ್ಲಮಹಾತ್ಮನೊಲವಿನಲಿ ॥ ಮುಗಿಲವ್ರೋಳ್ ಜೆಸುತವೃಷಭಾ । ಳಗಳುಕವಿದಪ್ರಹರಿಯು
ನನುರರು । ಗಗನದಲಿಭಾಪೆನುತಕರದರುಪುಷ್ಪವೃಷ್ಟಿಗಳ ॥ ೧೬ ॥ ಭೂಸುರರುಭೂಸುರರವಧುಗಳು । ಲೇಸೆನುತನಂದನನು
ಘನವರಿ । ತೋಷದಲಿರೋಹಿಣಿಯುಶೋದಾದೇವಿಯರನೊಲಿದು ॥ ವಸುಧನ್ಯರೊನೀಪ್ರಭುವನವಿ । ನಾಶದಕ್ಷ್ಯನಿಸ್ಪಸರ್ಪನ ।
ವಿನಾಸಲಿನಶಿಶುಬಹುದಪದಿರೆನುತ್ತಹೊಗಳಿದರು ॥ ೧೭ ॥ ಎಲವೊನಡಿಯಲಿಮಗುಚಿಕರುತುರು । ಗಳನುವನಿತಾವೃದ್ಧಜನ
ಗೋ । ಕುಲಕೆನುತ್ತಾನಂದಗೋಪಾದಿಗಳುಕೈವೀಸೆ ॥ ತೊಲಗಿಸಿದನಾರವಿನಿಜಾತ್ಮಜೆ । ಗೊಲಿದುರಥವನುಮರೆಸಹೆಗೋ ।
ಕುಲಕೆಮಗಳನುಬಿಟ್ಟುಹೋದಪನೆಂದುಮನವುರುಗೆ ॥ ೧೮ ॥ ಅಂದಿನಾರಾತ್ರಿಯನುವನದಲಿ । ಹಿಂಡುಗಳದರುಪ್ರರುತ್ತರಶ್ರಮ ।
ದಿಂದಬಳಲಿದುಬಾಲವನಿತಾವೃದ್ಧಜನಸಹಿತ ॥ ತಂದಗೋರಸಪಾನಭೋಜನ । ದಿಂದವಿಗತಶ್ರಮರೆನಿಸಿಸುಖ । ದಿಂದಗೋಪರು
ನಿದ್ರೈಗೈದರುಹರಿಬಲರುಸಹಿತ ॥ ೧೯ ॥ ಮತ್ತೆಬಂದುದುಗೋಕುಲಕೆಬಲು । ಮೃತ್ಯುಬಾಯ್ದೆರದಂತೆಸುಟ್ಟರು । ಹುತ್ತಸೂಸುವ

ಶ್ರೀಕೃಷ್ಣಮೂರ್ತಿಯು ಕಾಡುಗಿಚ್ಚಂ ತಂಪಿಸಿದ ಕಥೆ.

ಕಾಚೋರ್ಗೆಯುಕೆಂಗಿಡಿಯುಗಡಣದಲಿ ॥ ಸುತ್ತಕವಿದುದುಕಾಳ್ಗಿಚ್ಚಂ । ದುತ್ತರಿಸಲರಿದೆನಲುಕಾನನ । ಹೊತ್ತಿಹೊಗೆಯಲು
ಭೂರಿಭುವನವ್ರಳಯದಂದದಲಿ ॥ ೨೦ ॥ ಭುಗಿಭುಗಿಲುಭುಗಿಲೆಂದುಕೇಸುರಿ । ತಗುಳ್ದುದುಜಗದಂಡಮಂಡಲ । ಸೆಗಳ್ಳೆಯು
ಲೋಸರಿಸಲೋಯಂದೋದರಿಗೋವಳರು ॥ ಬಿಗಿದನಿದ್ರೆಯುಪಾರವಶ್ಯದ । ಬಗೆಯುಭೀತಿಯುಲ್ಯೆದೆಹರಿಪದ । ಯುಗಳವನುಮರೆ
ಯೊಕ್ಕರುಕಾಳ್ಗರಿಗೆತಲ್ಲಣಿಸಿ ॥ ೨೧ ॥ ದೇವರಕ್ಷಿಸುರಕ್ಷಿಸಾನತ । ದೇವರಕ್ಷಿಸುರಕ್ಷಿಸುಧೃತ । ದೇವರಿಪುಕುಲಕಾಲರಕ್ಷಿಸುರಕ್ಷಿ
ಸೆಂದೆನುತ ॥ ಗೋವಳರುಗೋವಿಂದನಂಘ್ರಿಗೆ । ಜೀವರಕ್ಷೆಯಬೇಡಿಬಿದ್ದಿರೆ । ಗೋವುಗಳುಮುಸುಕುತ್ತಮುತ್ತಿದವಚ್ಯುತನ
ಬಳಸಿ ॥ ೨೨ ॥ ಕೆಲರುನಂದಿಸಬೆಂದುಹರಿದರು । ಕೆಲರುಕೆಲಸಾರಿದರುಧೂಮ । ಜ್ವಲನನಾಟೋಪಕ್ಕೆಸೈರಿಸಲರಿಯದಳವಳಿದು ॥
ಕೆಲರುಕೃಷ್ಣನೆಗತಿಯೆನುತಕೆಲ । ಕೆಲರುಸತ್ತರೆನುಕುತಿಯುಂಟೆಂ । ದಳುಕದಚ್ಯುತನಂಘ್ರಿಯಲಿಬಿದ್ದಿರ್ದರೊಡಲಿಟ್ಟು ॥ ೨೩ ॥
ಕೆಲರುಸತ್ತರೆಮುಕುತಿಯೈಸಲೆ । ಸುಲಭವದುನೆನವರಿಗೆನಂವಿಾ । ಚೆಲುವಕೃಷ್ಣನಚರಣಸೇವಾಸೌಖ್ಯವದಕುಂಟೆ ॥ ಸಲಹಿ
ಕೋಸರ್ವಾತ್ಮಕನೆನಿಂ । ನೊಲವಿನಂಘ್ರಿಯದಾಸರಾವೆನೆ । ನಳಿನನಾಭನುನಗುತನೆಗಹಿದನಭಯಕರತಳವ ॥ ೨೪ ॥ ಅಂಜದಿರಿ
ಗೋವಳರುಗೋಪಿಯು । ರಂಜದಿರಿಶಿಶುಪಶುಗಳೇತ । ಕ್ಕಂಜುವಿರಿನಾನಿಹೆನುನಿಂಮಸುವಿಂಗೆಹೊಣೆಯೆನುತ ॥ ಕಂಜನಾಭನುನೆ
ಗುತಭಯಕರ । ಕಂಜವನುನೆಗಹುತ್ತಕರುಣಾ । ರಂಜಿತೇಕ್ಷಣನೀಕ್ಷಿಸಿದನಾನಿಖಿಳಪರಿಜನವ ॥ ೨೫ ॥ ತಿರುಗಿನೋಡಿದನುಬ್ಬ
ರದಕಾ । ಳುರಿಯನಂಗೈದೋರಿನಗುತಾ । ಕರುಷಿಸಲುಮದವ್ರುಡುಗಿಬಂದುದುಕಿಚ್ಚುಕರತಳಕೆ ॥ ಇರದೆಜಠರಸ್ಥಾನದಲಿಭೆಯ ।
ಮರುತಸಖನೆಂಬಂತೆಕುಡಿದನು । ಕತತಳದಕಾಳ್ಗುರಿಯನಾಗೋಪಜನವುಲಿಯೆ ॥ ೨೬ ॥ ಭಾಪುಗೋಕುಲಜೀವದೊಡೆಯನೆ ।
ಭಾಪುಗೋಕುಲಸುಖವೆಗೋಕುಲ । ದೀಪಭಾಪುರೆಭಾಪುಗೋಕುಲಜನಮನೋರಥನೆ ॥ ಭಾಪೆನುತತಮತಮಗೆಬಂದಾ ।
ಗೋಪಜನವಪ್ಪಿದುದುನೆರದಾ । ಗೋಪಿಯರುಪಾಡಿದರುಹರಿಗುಣಚರಿತವನುನಲಿದು ॥ ೨೭ ॥ ನುಂಗಿದನುಪಾವಕನನೆಂನನು ।
ನುಂಗದಿರನೆಂದಂಜಿಕತ್ತಲೆ । ಹಿಂಗಿತಾಕ್ಷಣದೊಳಗೆನುತ್ತಾಪಾವಕನವಾಸ । ಹಿಂಗದಾರ್ಯ್ಯೆವಂತೆರವಿಗಗ । ನಾಂಗಣಕೆಬರೆಕಂಡೆರದು
ಸಿರಿ । ರಂಗನುಪ್ಪವಡಿಸಿದನೆದ್ದುದುಸಕಲಗೋಪಜನ ॥ ೨೮ ॥ ಎತ್ತಿನಡದುದುಬೀಡುಗೋಕುಲ । ದತ್ತಸನ್ನೆಯಕೊಂಬುಕೊಳ
ಲುಗ । ಳೊತ್ತಲಾಬಲಕೃಷ್ಣರನುಹೊಗಳುತ್ತಹರುಷದಲಿ ॥ ಸುತ್ತಿಸುರರಂಬರದಲೋಲಗಿ । ಸುತ್ತಬರೆಗೋಪಿಯರುಕೃಷ್ಣಚ ।
ರಿತ್ರವನುಪಾಡಿದರುಪರಮೋತ್ಸವದಲಂದೊಲಿದು ॥ ೨೯ ॥ ಚಾರುಗಾತ್ರದಸುಪ್ರಸನ್ನಮು । ಖಾರವಿಂದದಚಪಲನಯನ ।
ಸ್ಮೇರದಂತಾಧರಕಪೋಲದಕರ್ಣಕುಂಡಲದ ॥ ಭೂರಿತೇಜದಭುವನಮೋಹನ । ಸಾರಸೌಭಾಗ್ಯದಲಿಬಲದ್ಯೆ । ತ್ಯಾರಿಗಳುರಂ
ಜಿಸಿದರಾಜನನಿವಹಮಧ್ಯದಲಿ ॥ ೩೦ ॥ ನೀಲಪೀತಾಂಬರಗಳಲಿಸಿತ । ನೀಲನೀರದನಿಭಮನೋಜ್ಞವಿ । ಶಾಲತನುಕಾಂತಿಗ
ಳಲೊಪ್ಪಿರೆರಾಮಕೇಶವರು ॥ ಬಾಲೆಯರಕಡಗಂಣಲೆಸೆವನಿ । ವಾಳಿಗಳಸತ್ಕೃತಿಯನೊಲಿದುಕೃ । ಪಾಳುಗಳುಕೈಕೊಳುತಹೊ
ಕ್ಕರುನಂದಗೋಕುಲವ ॥ ೩೧ ॥ ಅರಪಿಕಾಣರುಮುನಿಗಳಾವನ । ನಿರುಗೆಯನುತತ್ವಂಪದಾರ್ಥದ । ನೆರವಣಿಗೆಯುಳ್ಳಾತ್ಮತ
ತ್ವಜ್ಞಾನಮಾರ್ಗದಲಿ ॥ ವರಲಿಕಾಣಿಸವಾಪನರಿವಿನ । ಸೆರಗನಾವಮ್ನಾಯಶಾಘೆಕೃಷ್ಣನ । ನರಿವರಾರನುಕರಿಸುತಿರ್ದನುಮರ್ತ್ಯ
ಲೀಲೆಗಳ ॥ ೩೨ ॥ ಅತ್ತಲಜಭವಮುಖ್ಯರಾವನ । ನೆತ್ತಲೇನೆಂದರಿಯರೀಶ್ವ । ತ್ಯುಕ್ತದಲಿಭಾವಿಸುವರಂತರ್ಭಾವದಲಿಪದ
ವ ॥ ಇತ್ತಲಾಗೋಕುಲದೊಳಗೆನಿಜ । ಚಿತ್ತೆನಿಪನಿತ್ಯಾತ್ಮನೆಂತಾಟೊ । ಭಕ್ತವಶ್ಯತೆಮೆರವುತಿರ್ದನುಬಾಲಲೀಲೆಯಲಿ ॥ ೩೩ ॥

ಅಂತು ಸಂಧಿ ೧೭ಕ್ಕಂ ಪದನು ೮೪೭ಕ್ಕಂ ಮಂಗಳಮಸ್ತು.

ಹದಿನೆಂಟನೆಯ ಸಂಧಿ.

ಬಲಭದ್ರನು ಪ್ರಲಂಬನನ್ನು ಸಂಹರಿಸಿದ ಕಥೆ.

ಸೂಚನೆ॥ ಮುಷ್ಟಿಘಾತದಲಾಪ್ರಲಂಬನ । ಅಟ್ಟಿಯನುಕೆಡೆಯೊದದುಕಾಲಂ । ಗಟ್ಟಿದನುಕಂಸಾಸುರನ
ಭೃತ್ಯನನುಬಲಭದ್ರ ॥ ... ...

ಪದನು॥ ಅರಸಕೇಳ್ ರಾಮಕೃಷ್ಣರು । ಪರಿಪರಿಯಲೀಲೆಗಳನಿಂತಾ । ನರಶಿಶುತ್ವದನಾಟಕವನನುಕರಿಸಿಗೋಕುಲ
ದ ॥ ಧರೆಯಲೆಸದಿರಲೋಲಗಿಸಲಿಂ । ದಿರದೆಧರೆಗಾಗ್ರೀಷ್ಮಋತುವವ । ತರಿಸಿದುದುನಿಜಕಾಲಗುಣವೈಭವದಲಂದೆಸೆಯೆ ॥ ೧ ॥
ಎಳದುಬಿಸುಟನುಶಿಶಿರಋತುವನು । ಕಳಲೆಜಡಿದುವಸಂತನನುಬಲು । ಝಳದಧಾಳಿಯನಟ್ಟಿದನುದೆಸೆದೆಸೆಗೆದಾಹಿಸಲು ॥ ನೆಳ
ಲಹೊಗಿಸಿದನೆಲ್ಲರನುಜ । ಕ್ಕಲಿಸಿಜಲವನುಸುರಿದುಬಿಸಿಲನು । ಬೆಳಸಿದನುಗ್ರೀಷ್ಮರ್ತುಬೆದರಿಸಿದನುಜಗತ್ರಯವ ॥ ೨ ॥
ಕೊಡಿಸಿದನುಪೂರ್ವ್ವರಿಗೆಧನಿಕರ । ಗಡಣದಿಂಧಾರ್ಮಿಕನಲೊಪ್ಪುವ । ಕೊಡೆಕೆರಹುಗಳನುಂನತಛಾಯಾದ್ರುಮಂಗಳನು ।
ಇಡಿಸಿದನುನಿರ್ಜಲನಿರಾಶ್ರಯ । ದೆಡೆಯಲರವಟ್ಟಿಗೆಯನುರೆನೀ । ರಡಿಕೆಯನುಮಾಡಿದನುಸಚರಾಚರದಜೀವರಿಗೆ ॥ ೩ ॥
ಅಸುದುತ್ಸಹವೆನಿಪಬೇಗೆಯ । ಬೇಸಿಗೆಯುಬಿರುಬಿಂಕಗೋಕುಲ । ವಾಸಿಗಳ್ಗಾಪಶುಗಳ್ಗೆಮಳೆಗಾಲದಂದದಲಿ ॥ ವಾಸುದೇ
ವಕೃಪೇಕ್ಷಣದಪಿ । ಯೂಷರಸಸೇಕದಲಿತದ್ವನ । ದೇಶಗುಣವೈಭವದಲೆಸದುದುಭೂಪಕೇಳೆಂದ ॥ ೪ ॥ ಹರಿವನಿರ್ಜರ
ವಾರಿಗಳಕ । ಬ್ಬುರಿತಪವನನುದೀರ್ಣಘನಶೀ । ಕರದಯಮುನಾಜಲತರಂಗಸ್ಫುರಿತಕಾನನದ ॥ ತರುನಿಕರಸಲ್ಲವಪ
ಲಾಶೋ । ತ್ಕರಫಲಚ್ಛಾಯಾನಿವಾರಿತ । ಕರಮರೀಚಿಮರೀಚಿಗಳಲೊಪ್ಪಿದುದುವನಭೂಮಿ ॥ ೫ ॥ ನೆಳಲನೀರುಗಳಿಂ
ದಮಿಗೆಕ । ತ್ತಲಿಸಿಕಾನನಭೂಮಿನೆರೆಶಾ । ದ್ವಲಿತವಾಗಿರಲಲ್ಲಿಗಲ್ಲಿಗೆಮೆರೆವತರುಲತೆಯ ॥ ವಳೆಯದಲಿರವಿರಶ್ಮಿಯೊಳಗು।
ಚ್ಛಳಿಸದನುದಿನದಹಗಲುಶೀ । ತಳವೆನಲುವೃಂದಾವನಾಂತ್ರದಲಕ್ಷ್ಮಿರಂಜಿಸಿತು ॥ ೬ ॥ ಮೊರೆವತುಂಬಿಯಕೋಗಿಲೆಯ
ಸು । ಸ್ವರದಶುಕಸಾರಸಮಯೂರೋ । ತ್ಕರದಕೋಲಾಹಳದಕಂಪಿತಪುಷ್ಪಪರಿಮಳದ ॥ ಪರಿಪರಿಯತರುಗಳಲಿಖಗಮೃ
ಗ । ಭರಿತವನವಿಭವವನುನೋಡುತ । ಭರದಲಾಬಲಕೃಷ್ಣರೈತಂದರುವನಾಂತರಕೆ ॥ ೭ ॥ ಪೊಂಗೊಳಲಬಾರಿಸುತವನ
ವಿಭ । ವಂಗಳನುನೋಡುತ್ತಗೋಪರ । ವಂಗಡದವೇಳದಲಿಮೋಹನಮೂರ್ತಿಗಳುನಗುತ ॥ ಸಂಗಡಿಸಿಪಸಲೆಗಳಲಾತುರು ।
ಜಂಗುಳಿಯಲಾಡಿಸುತನಿಜಪದ । ಸಂಗಸುಖವನುಸಲಿಸಿದರುವೃಂದಾವನಸ್ಥಳಕೆ ॥ ೮ ॥ ಆಡುವರುಲತೆಯುಯ್ಯಲನುಜೋ ।
ಲಾಡುವರುಲತೆಗಳನುಮಿಗೆಮಾ । ತಾಡುವರುಮಾರ್ದನಿಯೊಡನೆಸಂಗೀತರವವೆಸೆಯೆ ॥ ಪಾಡುವರುನವಿಲಂತೆನೃತ್ಯವ । ನಾ
ಡುವರುತಂಮೊಳಗೆಯುದ್ಧವ । ಮಾಡುವರುಮಿಗೆಮಲ್ಲರಂತಿರೆಕೆಳೆಯರೊಡನೊಲಿದು ॥ ೯ ॥ ಜನಪಕೇಳ್ಭುಜಪಕ್ಷತಳತಾ ।
ಡನವಿಕರ್ಷಣಚಾಲನೋಲ್ಲಂ । ಘನಭುಜಾಸ್ಫಾಲನವಿಬಂಧನಚಿತ್ರಗತಿಗಳಲಿ ॥ ತನತನಗೆಗೋವಳರುಮಲ್ಲರ । ನನುಕರಿಸಿತಿವಿ
ದಾಡುವರುಬಲ । ದನುಜಹರರೊಡನಾಡಿಗಳು ತಾವಾಗಿವಿಪಿನದಲಿ ॥ ೧೦ ॥ ಆಡುವರುತಾಪೊಂಮೆಗೋಪರು । ನೋಡಿಘೂ
ಪೆಂದುಲಿಯೆಕರತಳ । ತಾಡನದಲಾಕೊಂಬುಕೊಳಲವಿಶಾಲರವವೆಸೆಯೆ ॥ ಪಾಡುವರುನೃತ್ಯವನುಗುಣವೆನೆ । ನೋಡುವರುಮ
ತ್ತೊಂಮೆಕೆಳೆಯರ । ನಾಡಿಸುತಸಂಗೀತನಿಜಕರತಾಡನಂಗಳಲಿ ॥ ೧೧ ॥ ಹೊಗಳುವರುಗೋವಳರನಾಡಿಸಿ । ನಗುತಮೆಚ್ಚಿಸು
ತೋನುರಾಗದ । ಲಗಣಿತಾಮಳಕೀರ್ತಿತೆಗದಪ್ಪುವನುಮನವೊಲಿದು ॥ ಹೊಗಳಲರಿಯವುವೇದವಾವನ । ಬಗೆಯಲಪ್ಪಲಾನೆರೆ
ಸುರಾಯೋ । ಗಿಗಳುಗೋಪರಪುಣ್ಯವೆಂತುಟೊ ಭೂಪಕೇಳೆಂದ ॥ ೧೨ ॥ ಅಂದಣವನೇರಿಸಿಕುಮಾರರ । ವೃಂದಚಮರಛ
ತ್ರವೈಭವ । ದಿಂದಪರಮೋತ್ಸವದಲಲ್ಲಲ್ಲಿಗೆವನಾಂತರಕೆ ॥ ಸಂದಬಿರುದಾವಳಿಗಳನುಸಾ । ನಂದದಲಿಹೊಗಳುತ್ತಹರಿಯನು ।
ವಂದಿಗಳವೋಲವನಿಪತಿಯನುಮಾಡಿತಿರುಗುವರು ॥ ೧೩ ॥ ದನುಜವೈರಿಯತೋಟಿಯಮಳಾ । ರ್ಜುನವಿಭಂಜನತೋಟಿಬಕ
ದಂ । ಜನಮುರಾರಿಯತೋಟಿವತ್ಸವಿದಾರಣನತೋಟಿ ॥ ಕನಲುವಘಧೇನುಕಬಕಾಹಿತ । ವನಕೃಶಾನುವತೋಟಿಯನುಬೇ ।
ಕಿನುತಕೋಯಣಿಗೆಯಲಿಸಡವರುವಹಿಸಿದಂಡಿಗೆಯ ॥ ೧೪ ॥ ಕಾಳಿಯಾಖ್ಯಮಹಾವಿಷೋಗ್ರ । ವ್ಯಾಳಭಂಜನಬಂದನಿದೆಸುತ ।
ಗಾಲರೋಲಗಿಸುವಮಹೋತ್ತಮಬಂಡನಿದೆಬಂಡ ॥ ಕಾಳುಗಿಚ್ಚನುನುಂಗಿಭಕ್ತರ । ಪಾಲಿಸಿದಪರಮಾತ್ಮಪರಮಕೃ । ಪಾಳು
ವೆಮಿಬಂಡನಸುರಕುಲಾಂತಕನುಬಂಡ ॥ ೧೫ ॥ ಎಂದುಕೆಲರುಗ್ಘಡಿಸುತೊಪ್ಪಿರೆ । ಮುಂದೆನಡೆದರುಕೆಲರುವಹಿಸುವ । ರಂ
ಣವನಾವನವನಾಂತರದೊಳಗೆಮುರಹರನ ॥ ಹಿಂದೆಕಟ್ಟಿಗೆಕೈದುಕಾರರ । ಚಂದದಲಿಪರಿವರಿಸಿಸೆಡಗರ । ದಿಂದಬಹರೆಡಬಲದ
ಲೋಲಗಿಸುತ್ತಗೋವಳರು ॥ ೧೬ ॥ ಎತ್ತಲೀನರಲೀಲೆತಾದಿಟ । ವೆತ್ತಹರಹರಮಾಯೆಮರ್ಝುಮನ । ಪೊತ್ತುಪದಯುಗಪದು
ಮಪರಿಚಾರಕಿಮಹಾಲಕ್ಷ್ಮೀ ॥ ಕೃತ್ತಿವಾಸವಿರಂಚಿಸಕಲಸು । ರೋತ್ತಮರುಸೇವಕರುತನಗೀ । ಕೃತ್ತಿಮದನರಲೀಲೆಪರಿ
ನಗೋಪಜನವೆಂದ ॥ ೧೭ ॥ ಆಡುವಳುಗಡಮಾಯೆನೆನದಂ । ತಾಡುವವುಜಗವಾವನಿಚ್ಛೆಯ । ಲಾಡುಪರುಕಮಲಭವಾ

ದ್ಯೆರುನಯನಸಂಜ್ಞೆಯಲಿ || ಆಡುವನುತಾನಿತ್ತಲರ್ಭಕ | ರಾಡಿಪಿದಪ್ರೋಲಾವಸುಕೃತವ | ಮಾಡಿ ನಿಪಿದರೋ ಮರುಳುಗೋ
ಪಾಲಬಾಲಕರು || ೧೮ || ಇರೆನೃಪೋತ್ತಮಕೇಳುಕಂಸಾ | ಸುರನಟ್ಟಿಸದಿಂದೊಬ್ಬನಾಗೋ | ಪರನುಕೊಂಡಾರಾಮಕೃಷ್ಣರು
ಸಹಿತನೋಧನವ || ಪುರಕೆಹೊಡಸುವೆನೆನುತರೋಷಾ | ತುರನುಬಂದನುದ್ಯೆತ್ಯನಂಗೀ | ಕರಿಸಿಗೋಪಾಕೃತಿಯಲಾಗೋಪಾ
ಲರಿಪ್ಪೆಡೆಗೆ || ೧೯ || ಮಂಜುಮೈದೋರುವುಸೆಧುರದಲಿ | ಕಂಜಸಖನೈತರಲುಗೋವಳ | ರಂಜುವರುಸಹಜಾಕೃತಿಯನಿದಕಂಡ
ರೆಂದೆನುತ || ರಂಜಿಸುವತದ್ರೂಪದಲಿತನು | ರಂಜಿಸಲುಬೆರಸಿದನುದಾನವ | ಭಂಜನನಭಂಜನಕೆಮನವನುಮಾಡಿಸುರವೈರಿ ||
ಇರೆಚರಾಚರಚಿತ್ತಸಾಕ್ಷಿಕ | ನರಿದನಾಲಿಸುತಾಪ್ರಲಂಬಾ | ಸುರನುಬಂದುದನೊಡನೆಬೆರಸಿರ್ದದನುಗೋಪರಲಿ || ಬರಲಿತಪ್ಪೀ
ನೆನುತತಾನದ | ನರಿಯನವನಂದದಲಿಗೋಪಾ | ಲರಿಗೆಬಹುದೊಂದಾಟವಿಹುದಾಡುವೆವುನಾವೆಂದ || ೨೦ || ಶ್ರೀಕೃಷ್ಣ ||
ಹೊಸಪರಿಯಿದೆಂದಿನಪ್ರೊಲಲ್ಲೀ | ಪ್ಪಿಸುವುದೆಲೆಕೆಳೆಯರಿರತಾತೋ | ರಿಸುವೆನಾಟವನೊಂದನೆಲ್ಲರುಬಂನಿನೀವಿತ್ತ || ಎಸೆಯ
ಲಣನುನಿಲಲಿತಾನೊಂ | ದೆಸೆಗೆನಿಲುವೆನುಬಂನಿಗೋಪ | ಪ್ರಸರವಿತ್ತೆರನಾಗಿಗೆಡೆಯಿಟ್ಟುಡಬೇಕೆಂದ || ೨೧ || ಎನಲುಖರೆ
ಲೇಸೆನುತಗೋಪರು | ತನತನಗೆಮುಖ್ಯರನುಮಾಡಿದ | ರನುಪಮರನಾರಾಮಕೃಷ್ಣರನೆರಡುತಂಡದಲಿ || ದನುಜಹರನವರಾ
ಗಿಕೆಲಬರು | ಯೆನಿಪಿಕೆಲರಾರಾಮನವರೆಂ | ದೆನಿಸಿವಾಹನವಾಹ್ಯಲಕ್ಷಣವೆಸೆಯಲಾಡಿದರು || ೨೨ || ಸೋತವರುವಹಿಸುವ
ರುತತ್ಸಂ | ಕೇತದಲ್ಲಿಗೆಗೆದ್ದವರನಂ | ತಾತಗಳುಭಾಂಡೀರಕಾಖ್ಯವಟಪ್ರದೇಶದಲಿ || ಓತುಗುತ್ತಸುಮಾಡಿಗೋಪ | ನ್ಯಾತವೈ
ದುದನೇನನೆಂಬೆನು | ಸೋತುದಚ್ಯುತವರ್ಗಗೆಲಿದುದುರಾಮಪರಿವಾರ || ೨೩ || ಮುನ್ನಪೇಳನರಿದುಹರಿವಧೆ | ತನ್ನವಶ
ವಹುದಾಗದೆಂದು | ತ್ವನ್ನಸಂಶಯನಾಗಿಬಲರಾಮನನುಕೊಲಲೆಂದು || ತನ್ನೊಳಗೆನಿಶ್ಚೈಸಿದಾನವ | ಕುನ್ನಿಕೃಷ್ಣನಪಕ್ಷವನು
ಸಾ | ದುರ್ನ್ನತಾಭಿಪ್ರಾಯನಿರ್ದನುಮನದಕಡುಹಿನಲಿ || ೨೪ || ರಾಮಪಕ್ಷಾಶ್ರಿತರುಗೆಲಿದರು | ಭೂಮಿಪತಿಕೇಳ್ಕೃಷ್ಣಪ
ಕ್ಷದ | ಲಾಮಹಾತ್ಮರೆಹೊತ್ತುನಡದರುಬಳಿಕಬಲನವರು || ಶ್ರೀಮುಕುಂದನಬೆನ್ನನಾಶ್ರಿ | ದಾಮನೇರಿದನದರಿದನುಸಂ | ಗ್ರಾ
ಮಜಿತನಾಭದ್ರಸೇನನಬೆಂನನಾವೃಷನು || ೨೫ || ಹೊತ್ತನಾಬಲರಮನನುದ್ಯೆ | ತ್ಯೋತ್ತಮನುಪರಿಭವಕೆನೆಲೆಯಾ | ಗು
ತ್ತಗುತ್ತಿಂಗತುಳಬಲಬಲವಂತರರಸನನು || ಮೃತ್ಯುವನುಕಂಸಾಸುರಂಗೊಯಿ | ದಿತ್ತುಕೊಲಿಸುವೆನೆನುತತಂನಯ | ಚಿತ್ತದಲಿ
ನೆನವುತ್ತನಡದನುವಿಾರಿವಟಕುಜವ || ೨೬ || ಇಳುಹದಲ್ಲಿಂದತ್ತಲಾಖಳ | ತಿಳಕನೈದಿದನೇನನೆಂಬೆನು | ಹಲಧರನಮೂರ್ತಿ
ಯನುಹೆಗಲಲಿಧರಿಸಿಸ್ಯೆನಡೆಯೆ || ಇಳುಹಿಳುಹುಹೋಗದಿರುಹೋಗದಿ | ರೆಲಪ್ರೊಫಡನಿಲ್ಲೆನುತಗೋವಳ | ರಳುಕಿಬೊಬ್ಬಿಡೆಹಾ
ಯ್ದನಂಬರತಳವನಾಕ್ರಮಿಸಿ || ೨೭ || ಮೂಡಿದವುದಾಡೆಗಳುಕಂಗಳು | ಕೊಡೆಕಿಡಿಕಿಡಿಯೋಗಭ್ರುವ | ತ್ರೋಡಿನಿಲಿಸಿದ
ಪ್ರೋಲುಗಗನಾಂಗಣಕೆಸೈನೆಗದು || ಓಡುವಸುರನಭೀಕರಾಂಗವ | ನೋಡೆಮುಗಿಲುದ್ದದಲಿತಾನಿರ | ಲೀಡಿರಿದುದೊಡಲೊಳ
ಗೆಭಿತ್ತಿಸಿತೆತ್ತುದಂಬರವ || ೨೮ || ನಡುಗಿಡನಿದೇನೆತ್ತಲೀಹೇ | ರೊಡಲಖಳನಿಪನಾರುತಾತ | ನ್ನೊಡನೆಯಾಡುವಗೋಪನ
ಲ್ಲಾತನ್ನಹೊತ್ತವನು || ಬಿಡುದಲೆಯಕೇಸರಿಯಹುಬ್ಬಿನ | ಮಿಡುಕುವಧರದಬಿಟ್ಟಕಂಗಳ | ಪಡಿಗನಿವನಲ್ಲಿಂದಮಾಡಿದನೆಂದುಖ
ತಿಗೊಂಡ || ೩೦ || ಬೆಟ್ಟವನುಬಲವೈರಿವಜ್ರದ | ಲಿಟ್ಟಪ್ರೋಲಾಖಳನತಲೆಯನು | ಮುಷ್ಟಿಯಲಿಬಲಭದ್ರನೆರಗಿದನೋಡೆನುತ್ತೊ
ದರಿ || ಅಟ್ಟೆಯಲಿತಲೆಯಾಳಲವನಸು | ಬಿಟ್ಟುಕೊಂಡುದುಕಾಯವವನಿಗೆ | ಧಟ್ಟುಗೆಡದುದುಕೂಡೆಧುಮ್ಮಿಕ್ಕಿದನುಬಲಭದ್ರ ||
ಆಯೆನುತಸುರರಭ್ರದಲಿನಾ | ರಾಯಣಾಗ್ರಜನತುಳಮಹಿಮೆಯ | ಬಾಯಿದಣಿಯಲುಪೊಗಳಲಿಳದವುಪುಷ್ಪವೃಷ್ಟಿಗಳು ||
ಜೀಯಮಹಾಬಲಲ್ಲಾಳೆಭಾಪಹು | ದೋಯೆನುತಗೋವಳರುಹರಿತಂ | ದಾಯುವಂತನನಪ್ಪಿದರುಹರುಷದಲಿಹರಿಸಹಿತ || ೩೨ ||
ಬಿಟ್ಟಕಂಗಳಬಿಡುದಲೆಯಸೆಲ | ಗಟ್ಟನಂದದಪೇರುರದಬಿರಿ | ದಟ್ಟೆಯಲಿತಲೆಮಡಿದುನಾಸಿಕಪ್ರೊಡದುಕೊರಳುಡಿದು || ಬಟ್ಟೆನ
ಲುಬಲುಬಕುಳಮಡಕೆಯ | ಕುಟ್ಟಿದಪ್ರೊಲರುಣಾಂಬುನೆರೆಕಡ | ಲಿಟ್ಟುಪರಿಯಲುತಳೆದುದತಿರೌದ್ರವನುರಣಭೂಮಿ || ೩೩ ||
ಸತ್ತುಬದುಕಿದಪ್ರೋಲುನಿರ್ಜಿತ | ದೈತ್ಯನನುಸಿಮುರ್ದಕ್ತಸುರಕುಲ | ಮೃತ್ಯುವನುಬಂದಪ್ಪಿಹರುಷಾಂಬುಧಿಯಲೋಲಾಡಿ ||
ಉತ್ತಮರುಬಲಭದ್ರನನುಹೊಗ | ಳುತ್ತಕೈವಾರಿಸಲುಪುಣ್ಯಾಜ | ರಿತ್ರನನುಕೊಂಡಾಡಿದರುಹರುಷದಲಿತಮತಮಗೆ || ೩೪ ||
ಅತ್ತಲಾಗೋಪಾಲಬಾಲರ | ಮೊತ್ತವಾಕೋಳಾಹಳದಲಿರ | ಲಿತ್ತಲಾಡುವಗೋವ್ರಗಳುತಂಮಿಚ್ಛೆಯಲಿಕಳದು || ದುಸ್ತರದಪ
ನವಿಪಿನವನುಮೇ | ವುತ್ತತೃಣಲಾಭದಲಿಸಂಚರಿ | ಸುತ್ತಹೊಕ್ಕವುಘೋರಗಿರಿಕಾನನದಗಂಹರವ || ೩೫ || ಸಿಕ್ಕಿದವುತುರು
ವಿಂಡುಗಳುಕ್ಕೆ | ಮಿಕ್ಕಮುಂಜಾಟವಿಯಲತ್ತಲು | ಹೊಕ್ಕುಹೊರವಡಬಾರದಿರುಬಿನಲ್ಯೆದೆಹೊಲಬಳಿದು || ಅಕ್ಕಟೆನುತರಸು
ತ್ತಗೋಪರ | ಮಕ್ಕಳ್ಳೆತಂದೊಡನೆಹೋಗುವಡ | ಶಕ್ಯವೆನುತೊಂದೆಡೆಯೊಳಿರ್ದರುಕೂಡೆವಸವಳಿದು || ೩೬ || ಕೆಟ್ಟೆವೆಂದರ
ಸುತ್ತಮಿಗೆಕಂ | ಗೆಟ್ಟುತುರುಗಳುಹೋದಹೆಜ್ಜೆಯ | ಬಟ್ಟೆಗಾಣದೆಶಿಖರವನಗಂಹರತೃಣಂಗಳಲಿ || ಭ್ರಷ್ಟತೇಜರುಮರಳಬಂ
ದಾ | ವಿಷ್ಟಪಶ್ರಮನೈದೆಬಾಯನು | ಬಿಟ್ಟರೆಲೆಮಲೆದೇವರಕ್ಷಿಸುರಕ್ಷಿಸೆಂದೆನುತ || ೩೭ || ಕಂಗೆಡದಿರೆಲವೆಲಪ್ರೊತುಕುಗಳ

ಭಂಗತಂನೆದುಸಾರೆನುತಸಿರಿ | ರಂಗನಡರಿದನೊಂದುಮರನನುಮೇಲೆನಿಂದಿರ್ದು || ಗಂಗೆಬಾರೆಲೆಗೌರಿಬಾರೌ | ತುಂಗೆಬಾ
ಯೆನ್ನೊಡತಿಬಾಯೆನು | ತಂಗಲಕ್ಷ್ಮಿಯುತೋರಿಕರದನು ಬೇರೆಬೇರೊಲಿದು || ೩೮ || ಕೇಳರಸಗೋವುಗಳಬಹಳವಿ | ಶಾಲ
ಭಾಗ್ಯೋದಯವನಾಥನಿ | ಗೇಳುತವೆಮುರಿಮುರಿದುಹರಿಯಾನನವನೀಕ್ಷಿಸುತ || ಬಾಲದತ್ತಲುಮೊಗವನಿಟ್ಟೀ | ವೇಳುವೆನು
ಹುಂಭಾರವದಹೇ | ರಾಳಧನಿದೋರಿದವುದೆಶೆಮಾರ್ಮೊಳಗುವಂದದಲಿ || ೩೯ || ಬಂದುದಾಸಮಯದಲಿಕಾಳ್ಗಿ | ಚ್ಚೊಂದು
ಕಲ್ಪಾಂತರಮಹಾನಲ | ನಂದದಲಿನೆರೆಸುತ್ತಿಸುಡುತಾಶೈಲಕಾನನವ || ನಂದಗೋಪರುಗೋವುಗಳುಭಯ | ದಿಂದಕಂಗೆಡೆಹೊ
ಗೆಯುಹೊರಳ್ದಗ | ಳಂದಹೊಳುತ್ತೆಂಟುದಿಕ್ಕಿನಲ್ಲೈದೆಮೋಹರಿಸಿ || ೪೦ || ವೆಂಟಣಿಸಿದೆಸೆಗುಗಿವಕಿಡಿಗಳ | ಕುಂಟಣಿಯಪವಮಾನ
ನೆಂಬೊಳ | ನಂಟನಲಿನಯುವಡದನಾಲಿಗೆಗಳಸಮಗ್ರತೆಯು || ಉಂಟುಮಾಡುತ್ತಬ್ಬಿಯನುನೆರೆ | ಪಂಟಿಸುತಸಚರಾಚರಂಗಳ |
ಲೆಂಟುದೆಸೆಯುಲಿಬಂದುದೊಂದೇಪರಿಯಲಾವರಿಸಿ || ೪೧ || ಛಿಳಿಛಿಳಿಲುಛಿಟಿಛಿಟಿಲುಘುಳುಘುಳು | ಘುಳಿಸಿಕಾಳುರಿಕಾನನವನ |
ವ್ಯಾಳಿಸುತ್ತೈತರೆಕಂಡುಗೋಗೋಪಾಲಬಾಲಕರು || ಘಳಿಲನೆದ್ದರುಮುಂನಬಂದಾ | ಬಳಲಿಕೆಯನೀಕ್ಷಿಸದೆಜೀವದ | ಕಳಕಳದ
ಲೈತಂದುಹೊಕ್ಕರುಮುರಹರನಮರೆಯ || ೪೨ || ರಕ್ಷಿಸೆಲೆಜಗದೀಶ್ವರೇಶ್ವರ | ರಕ್ಷಿಸಾನತಕಮಲಭಾಸ್ಕರ | ರಕ್ಷಿಸೆಲೆಸುರ
ಪಾಲರಕ್ಷಾಮಣಿಯೆಗುಣನಿಧಿಯೆ || ರಕ್ಷಿಸೈದಾವಾಗ್ನಿನಿಂನಕ್ಕೆ | ಪೇಕ್ಷಣದದಾಸರನುತಂಮನು | ಭಕ್ಷಿಸುತ್ತಿಡೆಯೆನುತಕರುಣವ
ತೋರಿದರುಹರಿಗೆ || ೪೩ || ರವಿಯಕಾಹಿನಕಮಲವನಕಂ | ಘವಿಸುವುದೆಕತ್ತಲೆನಿಜಾಶ್ರಿತ | ನಿವಹವನುಹೊದ್ದುವುದೆಕಾರು
ಣ್ಯೈಕರಕ್ಷಕರ || ತ್ರಿವಿಧವಹಘನತಾಪಮುಟ್ಟದು | ದವಶಿಖಾನಲತಾಪವಿದುಸಂ | ಭವಿಸಲರಿವುದೆನಿಂನವರಿಗೆನುತೆರಗಿದರು
ಪದಕೆ || ೪೪ || ಹೋದವತ್ತಲುತುರುಗಳೆಮಗಳಿ | ವಾದುದಿತ್ತಲುಕೃಷ್ಣನಿಂನೆಯು | ಪಾದವೇಗತಿಯೆನುತಮೂರ್ಛಿತರಾಗಿಭೀ
ತಿಯಲಿ || ಆದರಿಸಿತನ್ನಂಘ್ರಿಕಮಲವ | ನಾದಿಮೂರುತಿತನ್ನವರಿಗಂ | ದಾದಭಂಗವನೋಡಿನೆರೆತಲೆದೂಗುತಿಂತೆಂದ || ೪೫ ||
ಉಂಟುತನ್ನವರಬಿರಿನಿಮಗಾ | ನೆಂಟುಪುಡಿಹಂಗಿಗನುಹೋನಿ | ಷ್ಕಂಟಕರುನೀವಂಜಬೇಡನಿಜಾಶ್ರಿತಾಶ್ರಿತರ || ಭಂಟನಾನೆಲೆ
ತಂದೆಗಳಿರದ | ನುಂಟುಮಾಡಿಯೆತೋರ್ಪೆನೀಗಳೆ | ನಂಟರಿರನಿಮಗೆನುತನೆಗಹಿದನಭಯಕರತಳವ || ೪೬ || ಕಿಚ್ಚಿಗಂಜುವ
ರೈದೆಕಂಗಳ | ಮುಚ್ಚಿಕೊಳ್ಳಿಯೆನುತ್ತನೇಮಿಸೆ | ಲಚ್ಯುತನನುಡಿಗೇಳಿಖರೆಲೇಸೆನುತಕಂಗಳನು || ಮುಚ್ಚಿರಲುಗೋಗೋಪ
ರನುತಂ | ದೊಚ್ಚತೊಯ್ದಿರಿಸಿದನುನೃಪಕೇ | ಳಚ್ಚರಿಯನಾಗೋಕುಲಪ್ರಾಂತದಲಿಕೇಳೆಂದ || ೪೭ || ತುರುಗಳನುತುರುಗಾಹಿ
ಗಳನೆ | ಲ್ಲರನುನುಂಗುವವೋಲುಬಹಕಾ | ಳುರಿಯನಾಕ್ಷಣನುಂಗಿತನ್ನನಿಜಪ್ರಭಾವದಲಿ || ತೆರೆಯೆಕಂಗಳನೆನಲುಗೋಪರು |
ತ್ತರದುಕಂಡರುತಮ್ಮಿರವನ | ಚ್ಚರಿಯನುತಭಾಂಡೀರಕಾಖ್ಯವಟಾಂತರದಲಂದು || ೪೮ || ಏನಿದೆತ್ತಣನಂಬಿರವುಘನ | ಕಾನನವ
ದೇನಾಯ್ತುಬಹಳಕೃ | ಶಾನುವಿನಭಯವೆತ್ತಲಾಗೋವುಗಳಕಡುಗೇಡು || ಸ್ಥಾನಪಲ್ಲಟವೆತ್ತಲಿದುಕೃ | ಷ್ಣಾನುಭಾವದಮಹಿ
ಮೆಯನುತಾ | ಧ್ಯಾನಿಸುತಬೆರಗಾಯ್ತುಗೋಪಮಾತ್ರವಡಿಗಡಿಗೆ || ೪೯ || ಬಂದುಗೋಕುಲಕಾಕುಮಾರರ | ವೃಂದವಾವೃ
ತ್ತಾಂತವನುಮುದ | ದಿಂದವಿವರಿಸಲೈದೆಕೇಳ್ದಾನಂದದಲಿಹರಿಯ || ಕಂದಣಿಯೆನೋಡುತ್ತತವಕದ | ಲಂದುತಕ್ಕೈಸುತ್ತತಂಮೊಳ |
ಗೆಂದರಾಗೋಕುಲದವರುಗೋವಿಂದನಸ್ಥಿತಿಯ || ೫೦ || ನರರಪರಿಯಲ್ಲೀಯಶೋದಾ | ವರಸುತನಮ್ಮೈಸಿರಿಪರಾಕ್ರಮ | ದಿರ
ವುದುಸ್ತರಲೀಲೆದೈತ್ಯನಿಕಾಯಭಂಜನದ || ಉರಿಯಮಧ್ಯದಗೋಕುಲವನು | ದ್ಧರಿಸಬಲ್ಲಸಮರ್ಥರಾರ | ಚ್ಚರಿಯೆನುತ್ತೋ
ರಂತೆಕೊಂಡಾಡಿದರುಹರುಷದಲಿ || ೫೧ || ಗೋಪಿಯರುಗೋವಿಂದನೊಪ್ಪುವ | ರೂಪಗುಣಲಾವಣ್ಯಸುಧೆಯನು | ತಾಪತಪ್ತೆ
ಯರಕ್ಷಿಗಳಲೋರಂತೆಕುಡಿಕುಡಿದು || ಭೂಪಮರದರುತಮವನನ್ಯಾ | ಳಾಪರಹಿತೆಯರಾಗಿನಿಮುಷಯು | ಗೋಪಮಪಲಾ
ಕಾಣದಿರ್ದಡೆಕೃಷ್ಣನಂಘ್ರಿಗಳ || ೫೨ || ಅಗಲಿದಪನಬುಜಾಕ್ಷಿಯುರನೆಂ | ದೊಗುಮಿಗೆಯಕರುಣದಲಿನಿಳಯವ | ಹೊಗಿಸಿಹರಿ
ಯನುಮಗುಳೆಹೊರವಡದಂತೆಕತ್ತಲೆಯ || ಬಿಗಿದನಬುಜಪ್ರಿಯನದಕೆನಭ | ನಗುವವೋಲೋರಂತೆತಾರಾ | ಳಿಗಳುತೊಳ
ತೊಳೆತೊಳಗಿಬೆಳಗಲುಸಂಜೆರಂಜಿಸಿತು || ೫೩ || ಬಳಿಕಗೋಪಿಯನಯನಭೃಂಗಾ | ವಳಿನಿಷೇವಿತವದನಕಮಲೋ | ಜ್ವಲ
ಮಧುಸ್ಮಿತಮುದ್ರಿತಾಪಾಂಗೇಕ್ಷಣದಲೆಸೆಯೆ || ನಳಿನನಾಭನುನಿಜಪದಾಶ್ರಿತ | ರೊಳಗೆಮತಿಯಿಟ್ಟೊಲಿದುನಿದ್ರಾ | ಲಲನೆಗಭಿ
ಮುಖನಾಗಿನಿತ್ಯಾತುಮನುಪವಡಿಸಿದ || ... ... || ೫೪ ||

ಅಂತು ಸಂಧಿ ೧೮ಕ್ಕಂ ಪದನು ೮೯೯ಕ್ಕೆ ಮಂಗಳಮಸ್ತು.

ಹತ್ತೊಂಭತ್ತನೆಯ ಸಂಧಿ.

ಸೂಚನೆ॥ ಮಳಲಗೌರಿಯನೋಂತುಕೃಷ್ಣನ । ಚೆಲುವಮೂರ್ತಿಗೆಸೋತುವರಗೋ । ಕುಲದಕನ್ಯೆ
ಯರ್ಕೈನೆಪಡೆದರುನಿಜಮನೋರಥವ ॥

ಪದನು॥ ನಳಿನಸಖನಿರದೂದಿದನುಕ । ತ್ತಲೆಯಕಂಡನುಪೂರ್ವಸಂಧ್ಯಾ । ಲಲನೆಗೊಪ್ಪಿರೆತೊಡಿಸಿದನುದಿಗುವಳೆಯ
ಭೂಷಣವ ॥ ಹೊಳಲಹೊಸಹೊಂಬಿಸಿಲತೇಜವ । ತಳೆದುದಂಬರವಂಬರವನಾ । ನಳಿನಸಖನುಡಲಿತ್ತು ಕಳುಹಿದಪ್ರೋಲುಕೃ
ಷ್ಣಂಗೆ ॥ ೧॥ ಉಪ್ಪವಡಿಸಿದನುಭಯಕವಿಮುಖ । ದರ್ಪಣೋಚಿತಕೀರ್ತಿಜಿತಕಂ । ದರ್ಪಕೋಮಲಮೂರ್ತಿಕಾರುಣ್ಯದ
ಲಿಕಂದೆರದು ॥ ದರ್ಪಣವನೋಡಿದನುನಿಜಮುಖ । ದರ್ಪಣನುಸಂನುತಮನೋರಥ । ತರ್ಪಣನುತನುಭೂಷಣಂಗಳನೊಪ್ಪಿ
ರಲುಮಾಡಿ ॥ ೨॥ ಇಂತುಗೋಕುಲದರಸನಾಶ್ರೀ । ಕಾಂತನೆಸದಿರಲಮಿತಮುನಿಸಂ । ಚಿಂತ್ಯಮಾನಪದಾಬ್ಜನಾಗೋಕುಲದ
ಮಧ್ಯದಲಿ ॥ ಸಂತರಂತಿರೆಸಕಲಜೀವರ । ತಿಂಥಿಣಿಯತಾಪವನುಕೆಡಿಸುವ । ನಂತಪದನಿಷ್ಠೆಯಲಿಮೆರೆದವುಮೇಘಸಂದೋಹ ॥
ಬಿಸಿಲಬಿಂಕವನೊದೆದುಹರಿಪದ । ವಿಸರುಹಕೆಕೈಂಕರ್ಯವನುಬೀರುತ । ಬಸವನಂತೊದರುತ್ತ ಘನಗಂಭೀರನಾದದಲಿ ॥ ದೆಶೆದೆಶೆಗೆದಾ
ಕ್ಷಿಣ್ಯದಲಿವರು । ಷಿಸುತಜಲವನುಜೀವಜಾತ । ಕ್ಕೆಸುಸಮೃದ್ಧಿಯನಿತ್ತುದುತ್ತಮರಂತೆವರುಷಿಯುತು ॥ ೪॥ ಹೊಳೆದುಹೋ
ದವುಮಿಂಚುಗಳುಪುಂ । ಶ್ಚಲಿಯರಂತಿರೆಗುಣವದಭ್ರಂ । ಗಳಲಿನಿಲ್ಲದೆಲೋಕಬಂಧುಗಳಲಿನಿರಂತರಕೆ ॥ ತೊಳಲಿದವುಹಂಸೆಗ
ಳುನೆರೆತಿಳಿ । ಗೊಳನಕಾಣದೆಸತಿಕುಟುಂಬಾ । ಕುಳರವೋಲಶ್ರಾಂತಕೃತ್ಯದಲೀಕ್ಷಿಸದೆಸುಖವ ॥ ೫॥ ಸೋಗೆಗಳುನೃತ್ಯವ
ನುಘನಮೇ । ಘಾಗಮದಲಾಡಿದವುಮಮತ್ರೆಯ । ಬೇಗೆಯಲಿಬಳಲುವಗೃಹಸ್ಥರುತಂಮಮನೆಗಳಿಗೆ ॥ ಭಾಗವತರೈತರಲುಹ
ರುಷದ । ಸಾಗರದಲೋಲಾಡಿಮನದನು । ರಾಗದಲಿಕುಣಿವಂತೆಕೇಕಾರವದಸೂಕ್ತಿಯಲಿ ॥ ೬॥ ಒಡೆದುಹರಿದವುಕಟ್ಟೆಗಳ
ನು । ಗ್ರಹಗನದಿಗಳುವರುಷಜಲಸಂ । ಗಡಿಸೆಯುವ್ವನದುಬ್ಬಿನಲಿಧಿಕ್ಕರಿಸಿಸತ್ಪಥವ ॥ ನಡವದುರ್ಜನರಂತೆಮುಗಿಲಿನ । ಗಡಬ
ಡೆಯಕೇಳುತ್ತ ಕಪ್ಪೆಗ । ಳೊಡನೆಧನಿದೋರಿದವುವಿಫಲೋಕ್ತಿಗಳನರರಂತೆ ॥ ೭॥ ಕದಡಿದಡೆಕಾಹುರಕೆನದಿಗಳು । ಕದಡಿದ
ವುತಂಮೊಳಗೆನೆರೆಕೂ । ಡಿದಡೆಹೆಚ್ಚದೆಕುಂದದವರುಪರತಿಯಲಿದ್ದಂತೆ ॥ ಉದಧಿಯಿರ್ದುದುಪೂರ್ಣನಿಜಸಂ । ಪದದಲನ್ಯಾ
ಪೇಕ್ಷೆಯನುಕೆಡೆ । ಯೊದೆದುನಿಜಪದದೊಳಗೆನಿಂದಮಹಾತ್ಮರಂದದಲಿ ॥ ೮॥ ದನುಜಹರನೀಕ್ಷಿಸಲುವೃಂದಾ । ವನದಶಿರಿಯ
ನುಗೋಪಜನಗೋ । ಧನಸಹಿತಹೊರವಂಟುಯಮುನಾನದಿಯನುತ್ತರಿಸಿ ॥ ಅನಿಮಿಷಾರ್ಚಿತನೆಸದನಾವನ । ವನಗಳಲಿಫಲ
ಮೂಲವಿಹಿತಾ । ಶನನೆನಿಸಿಗಿರಿಗುಹೆಗಳನುಮನೆಮಾಡಿವಿಭವದಲಿ ॥ ೯॥ ಒಂಮೆಮಳೆಘನವಾದಡಾಪರ । ಬೊಂಮಮೂರುತಿ
ಗೋಕುಲಕೆಬರ । ಲಂಮದುಂಬನುತರಿಸಿಕಟ್ಟೋಗರವವನದೊಳಗೆ ॥ ಒಂಮೆತರುಗಳಹಾಲಕರದೊಂ । ಮೊಂಮೆವರಖರ್ಜೂ
ರಜಂಬೂ । ನಿರ್ಮಿತಾಹಾರದಲಿಕಳೆದನುವನದೊಳಗೆದಿನವ ॥ ೧೦॥ ಹೆಚ್ಚಿದಡವಿಯಹುಲ್ಲಮೇದರೆ । ಮುಚ್ಚಿಕಂಗಳನೊ
ಯ್ಯನೊಯ್ಯನೆ । ಕೆಚ್ಚಲನುತೂಗುತ್ತಮೆಲುಕೊತ್ತುತ್ತಗೋಕುಲಕೆ ॥ ನಿಚ್ಚನಿಚ್ಚಲುಬಸ್ಸಪಶುಗಳ । ನಚ್ಯುತನುನಡೆನೋಡಿ
ಮನದಲಿ । ಮೆಚ್ಚವನುಮಿಗೆವರುಷಯುತುವಿನವಿವರವೈಭವಕೆ ॥ ೧೧॥ ಇರೆಶರತ್ಕಾಲದಮಹೋದಯ । ದಿರವನದನೇನೆಂಬೆ
ನಾವಿ । ಷ್ಕರಿಸಿದುದುಹರಿಚರಣಕಮಲದಸೇವೆಯನುಮಾಳ್ಪ ॥ ಭರದಲಾಕಾಶವನುಬೆಳಗುತ । ನಿರುತಜಲವನುಕೂಡೆಶುದ್ಧೀ ।
ಕರಿಸಿದಾಶ್ರಮಗಳನುಹರಿಪದಭಕ್ತಿಯಂದದಲಿ ॥ ೧೨॥ ವಿಮಳವಾದುದುಸಲಿಲಯೋಗ । ಕ್ರಮವಿದರಮತಿಯಂತೆನಿರಹಂ । ಮ
ಮರವೋಲಭ್ರಂಗಳುಳಿದವುಸಲಿಲಸಂಭ್ರಮವ ॥ ಸ್ತಿಮಿತವಾಯ್ತುಸಮುದ್ರಶರದಾ । ಗಮನದಲಿನಿಜಲಾಭವನುಪಡ । ದಮಲ
ಹೃದಯರವೋಲುಸಕಲಾಗಮನಿವೃತ್ತಿಯಲಿ ॥ ೧೩॥ ಕಟ್ಟೆಗಳಉದಕವನುಮುಂನಿನ । ಬಟ್ಟೆಯಲಿಕೆಡೆಬಂಕೆಕೃಷಿಕರು । ಕಟ್ಟ
ದರುತಂತಂಮಕೈಮನೆಗಳಿಗೆಕಾಲದಲಿ ॥ ಕೆಟ್ಟವಿಷಯಕ್ಕೆರಗಿಯೋಗ । ಭ್ರಷ್ಟರಾದರೆಮಗುಳೆಕಾಲವಿ । ಶಿಷ್ಟತೆಯನೈದುವವೋ
ಲಚ್ಯುತಭಕ್ತರೆಂದೆನಿಸಿ ॥ ೧೪॥ ಮಳೆಯನೀರದುನಿತ್ಯವೆಂದೇ । ಜಲಚರಂಗಳುನಚ್ಚಿನಿಜವಹ । ಜಲವನೈದದೆನೋಡದಾತ
ಜ್ಜಲದಸಂಕ್ಷೋಭವ ॥ ಸುಳಿವುತಿರ್ದವುಬಹುಕುಟುಂಬಾ । ಕುಲರೆನಿಸಿವ್ಯಾಮರದುನಿಜವನು । ತಿಳಿಯದಜ್ಞರವೋಲುನಿಚ್ಚಯ
ವೆಂದುಗೃಹಧನವ ॥ ೧೫॥ ಆರಿದವಾಶರದರ್ಕನಿಂದಹ । ಬಿರುಬಿಸಿಲಸಂತಾಪವನುಮೇ । ಗರೆಯಜಲದೊಳಗಿರ್ದಜಲಚರ
ನಿಕರವತಿಗಡಿನೆ ॥ ನೆರೆಕುಟುಂಬಾಸಕ್ತರಾತ್ಮನ । ನರಿಯದೀಸಂಸಾರತಾಪವ । ನರಿವವೋಲಧ್ರುವವೆನಿಪದೇಹಾತ್ಮಬುದ್ಧಿ
ಯಲಿ ॥ ೧೬॥ ಮಿಗೆಬಿಸಿಲ್ಬೇಗೆಯನುಬರಿಗೋ । ಡಿಗಳಮೀನ್ಗಳುದಿನದಿನಕೆಮ್ಮೈ । ದೆಗೆಯದನುಭವಿಸುತ್ತ ಕುದಿಕುದಿಕುದಿದು
ಮುಗ್ಗಿದವು ॥ ಬಿಡಿಯದಾತ್ಮನಗತಿಯನಜ್ಞಾ । ನಿಗಳುದೇಹಕಳತ್ರಪುತ್ರಾ । ದಿಗಳಮಮತಾಕ್ಲೇಶದಲಿಕುದಿಕುದಿದುಕೆಡುವಂತೆ ॥
ಘೋರತರಶರದರ್ಕತಾಪನಿ । ವಾರಣನನೀಸಕಲಲೋಕಕೆ । ಶಾರದೇಂದುಪ್ರಭೆಸಮರ್ಥಿಸಿವಿಷ್ಣುಪದದೊಳಗೆ ॥ ಭಾರಿಸಿದುದು
ಬ್ಬರದಘನಸಂ । ಸಾರತಾಪವನಾತ್ಮತತ್ವವಿ । ಚಾರಮತಿಪರಿಹರಿಸುವಂದದೆಖಿಳಜೀವರಿಗೆ ॥ ೧೮॥ ಆಶರತ್ಸಮಯಾಭ್ರರಹಿ

ತಾ । ಕಾಳವೆಸೆದುದುವಿಮಳತಾರಾ । ರಾಶಿಗಳಲಖಿಳಾಗಮಾರ್ಥಜ್ಞರಹೃದಯದಂತೆ ॥ ನೇಸರೆಡೆಯಾಡಿದುದುಸಲೆದಿ । ಗ್ದೇಶಶು
ದ್ಧೀಕರಣದಲಿಹರಿ । ದಾಸರಂತಿರೆತಾಮಸವನಪಹರಿಸುತವನಿಯಲಿ ॥ ೧೯ ॥ ತೊಳತೊಳಗಿಪೂರ್ಣೇಂದುನಭದಲಿ । ಬೆಳಗಿದನು
ಪೀಯೂಷರಸವನು । ತಳೆದುಪರಮಾನಂದವನುಮಾಡುತ್ತಮೂಜಗಕೆ ॥ ನಳಿನಲೋಚನನಖಿಳಗೋಕುಲ । ಲಲನೆಯರಿಗಿ
ಷ್ಟಾರ್ಥವನುನೆರೆ । ಸಲಿಸುವಂತಿರಲೊಲಿದುಕರುಣಾಪಾಂಗದೃಷ್ಟಿಯಲಿ ॥ ೨೦ ॥ ಸಂಗಡಿಸಿಧೇನುಗಳನಾವೃಷ । ಭಂಗಳನುಗ
ಮಿಸಿದವುಸತ್ಕವರ್ಗಂ । ಗಳಿಗೆಫಲನಿಕರವನುಗಮನವನುಮಾಳ್ಪಂತೆ ॥ ಹಿಂಗದಖಿಳಹಿತಕ್ಕೆರವಿಗಗ । ನಾಂಗಣಕೆಬರೆಮಾಸುಕಿ
ದವುಕುಮು । ದಂಗಳಚ್ಯುತದಾಸರೈತ್ರರಲಜ್ಞರಂದದಲಿ ॥ ೨೧ ॥ ಇಂತುಶಾರದಲಕ್ಷ್ಮಿಲಕ್ಷ್ಮೀ । ಕಾಂತಪದಯುಗಸೇವೆಯ
ನುಮಾ । ಳ್ಪಂತೆಮೆರವುತ್ತಿರಲುಸಹಜಮನೋಜ್ಞವಿಭವದಲಿ ॥ ಕಂತುಪಿತನದನೀಕ್ಷಿಸಲುವಿಪಿ । ನಾಂತರಶ್ರೀಗಳಿಗೆನಿಯುತ್ತೇ ।
ಕಾಂತವಹವೃಂದಾವನಕ್ಕೈತಂದನೊಲವಿನಲಿ ॥ ೨೨ ॥ ಅಳಿಕುಲದಸಾಮ್ರಾಜ್ಯಸೌಖ್ಯಾ । ವಳಿಗೆನೆಲೆಯಹಪುಷ್ಪಿತದ್ರುಮ । ಕು
ಲದಮತ್ತಮಯೂರರನ್ಯಭೃದಪಿಕದಸುಸ್ವರದ ॥ ಲಲಿತಶುಕಸಾರಸಕುಲೋನ್ನತ । ಕಳರವದಕಮನೀಯವನಸಿರಿ । ಗಳನುನಡೆ
ನೋಡುತ್ತಗೋಪರುಸಹಿತನಡೆತಂದ ॥ ೨೩ ॥ ಪೊಂಗೊಳಲನಾದದಲಿಸಕಲಜ । ನಂಗಳನುಮೋಹಿಸುತಹೊಸಪರಿ । ಯಂಗ
ಭೂಷಣವೆಸೆಯೆನವ್ಯಪ್ರಸವನಿಕರದಲಿ ॥ ಕಂಗೊಳಿಸುತಡವಿಯನುನಿಜಪದ । ಸಂಗದಲಿಪಾವನವಮಾಡುತ । ಭೃಂಗಗೀತಶ್ರ
ವಣಲೋಲುಪನೈದಿದನುವನಕೆ ॥ ೨೪ ॥ ಪೊಂಗೊಳಲಲೊಪ್ಪಿರಲುಗೋಪರ । ವಂಗಡದಮೇಳದಲಿಬಾರಿಸು । ವಂಗಜನಪಿತ
ನಖಿಳಸಮ್ಮೋಹನದಲೀಲೆಗಳ ॥ ಅಂಗವನುನೆನನೆನದುಗೋಕುಲ । ದಂಗನೆಯರಾಕೃಷ್ಣಗುಣಚರಿ । ತಂಗಳನುಪಾಡುತ್ತಮೊ
ರವರುದಿವಸವಿಭ್ರಮವ ॥ ೨೫ ॥ ಕೇಳುತಾಯಿಯಶೋದೆನಿಜಸುತ । ನೇಳಗೆಯಮೈಸಿರಿಯಕತ್ತರಿ । ಪೀಲಿಯನುತಳೆಸುತ್ತಿ
ಕಿವಿಯಲಿಕೊಸಕಿಲನುಧರಿಸಿ ॥ ಲೋಲತರನವವೈಜಯಂತಿಯ । ಮಾಲೆಪೀತಾಂಬರಗಳೆಸೆಯಲು । ನೀಲಮೇಘಶ್ಯಾಮನೀ
ಹೋದನೆವನಾಂತರಕೆ ॥ ೨೬ ॥ ಕೆಳೆಯರಿಂದೊಪ್ಪಿರಲುಹೊಗಳಿಸಿ । ಕೊಳುತನಟನವರಂಗದಲಿಕಂ । ಗೊಳಿಸುವಭಿನವರೂ
ಪದಲಿಮೋಹಿಸುತಮೂಜಗವ ॥ ಸುಳಿವಸೊಬಗನುಕಂಡಡೀಕಂ । ಗಳಿಗೆಫಲವೆಲೆತಾಯೆಹೋಲುವ । ಚಲುವರಾರೀಕೃಷ್ಣನೇ
ಕಾಂಗದಸಮಗ್ರತೆಯ ॥ ೨೭ ॥ ಕೆಳದಿಯರಿರೀಕೃಷ್ಣನಂಗೈ । ತಳದಲೊಪ್ಪುವವೇಣುಮಾಡಿದ । ಹಲವುಜನ್ಮದಸುಕೃತದಿಂದ
ಧರಾಮೃತವಸವಿದು ॥ ಒಲಿದುಪಾನವಮಾಳ್ಪಸೌಖ್ಯದ । ಸುಭಗತೆಯದಾರ್ಗಹುದುಲಕ್ಷ್ಮೀ । ಲಲನೆತದ್ಭುಕ್ತಾವಶೇಷವನಕ
ಟಬಯಸುವಳು ॥ ೨೮ ॥ ಧರೆಗೆಕೀರ್ತಿಯನಧಿಕವೆನೆವಿ । ಸ್ತರಿಸುತಿದೆವೃಂದಾವನದಸಿರಿ । ಪರಮಪುರುಷಪದಾಬ್ಜಲಾಂಛನ
ಗಳನುನೆರೆಧರಿಸಿ ॥ ಸರಸಿಜಾಸನಶಕ್ರಮುಖ್ಯಾ । ಮರರುಮುನಿಗಳದಾವನೊಬ್ಬನೆ । ಚರಣರಜವನುಕಾಣಲರಿಯರುಗಡಸ
ಮಾಧಿಯಲಿ ॥ ೨೯ ॥ ಆವಸುಕೃತಿಗಳವ್ವವರವೃಂ । ದಾವನದತನುನಿಕರವಾಪಿಹ । ಗಾವಳಿಗಳಾಮೃಗಕುಲಂಗಳುಕೃಷ್ಣಸಂ
ಘ್ರಿಗಳ ॥ ಸೇವಕೋತ್ತಮರಂತೆತನುಪುಳ । ಕಾವಳಿಯನಯನಾಂಬುತರ್ಗತ । ಭಾವದಲಿಪರಿವರಿಸಿನೋಡುತ್ತಿಪ್ಪರನವರತ ॥
ಎಂತುಟೋಪುಳಿನಗಳಪೂರ್ವಭ । ವಾಂತರಾರ್ಜಿತಸುಕೃತಲಕ್ಷ್ಮೀ । ಕಾಂತನಂಘ್ರಿಸರೋಜನವಕುಂಕುಮಪರಾಗವನು ॥
ತಂತಮಗೆತೆಗೆತೆಗದುತೃಣದಲಿ । ಸಂತತಧರಾನನಕುಚಂಗಳ । ಲಂತ್ರತೊಡತ್ರೊಡವುತ್ತಮರದರುಮನ್ಮಥವ್ಯಥೆಯ ॥ ೩೧ ॥
ಚಿತ್ತವಿಸಿಕೆಳದಿಯರಿರಾಪುರು । ಷೋತ್ತಮಾಂಘ್ರಿಸ್ಪರ್ಶಸುಖಲಾ । ಭೋತ್ಕರದಸಿದ್ಧಿಯಲಿಹರ್ಷಿತನಾಗಿತನಗುಳ್ಳ ॥ ಮತ್ತೆತೃಣ
ಜಲಕಂದಮೂಲನ । ನಿತ್ತುದಣಿಯನುನಿಚ್ಚಲಕಟಾ । ವೃತ್ತಮಾಚ್ಯುತಭಕ್ತನೀಗಿರಿರಾಜನವನಿಯಲಿ ॥ ೩೨ ॥ ಏನನೆಂಬೆನು
ಕೃಷ್ಣನತ್ರಾಳಮ । ಹಾನುಭಾವವನಖಿಳವಾತ್ಮಾ । ಧೀನವೀಜಗವೆಂದುತೋರಿಸುವಂತೆಪೊಂಗೊಳಲ ॥ ಗಾನರಸದಲಿತುರುಗ
ಳಗೆಪ್ರಳ । ಕಾನುಬಂಧವನಖಿಳಖಗಮೃಗ । ಮಾನವಾದಿಗಳಿಂಗೆಮಾಳ್ಪನುತರುಗಳಸ್ಥಿತಿಯ ॥ ೩೩ ॥ ಎಸುತಕೃಷ್ಣನಲೀಲೆ
ಯನುನೆನ । ನೆನದುವರ್ಣಿಸುತಖಿಳಗೋಕುಲ । ವನಿತೆಯರುತಮ್ಮೊಳಗೆತದ್ಗತಭಾವಭಕ್ತಿಯಲಿ ॥ ತನುವಮರೆದರುಗದದಾ
ಕ್ಷರ । ಜನಿತತಾದಾತ್ಮ್ಯದಲಿಗೋಪೀ । ಜನದಭಾಗ್ಯದಸಿರಿಯನಭಿವರ್ಣಿಸುವರಾರೆಂದ ॥ ೩೪ ॥ ಇಂತುಶಾರದದಿವಸವಾಶ್ರೀ ।
ಕಾಂತನನುನಿಜಸಮಯಸೌಖ್ಯದ । ಸಂತತಿಗಳಿಂದೋಲಗಿಸುತಿರಲಿರಲುದಿನಗಳಿಗೆ ॥ ಅಂತುಕಪನಿಕ್ಕಿದನುವಿಧಿತದ । ನಂತರದ
ಲ್ಲೈತಂದುದಾಹೇ । ಮಂತಋತುರಾಜೀವಲೋಚನನಂಘ್ರಿದರ್ಶನಕೆ ॥ ೩೫ ॥ ವಿದಿತವಾಹೇಮಂತಋತುವಿನ । ಮೊದಲತಿಂಗ
ಳುಕೃಷ್ಣಪದಸಂ । ಗದಮಹಾಭಾಗ್ಯಕ್ಕೆತಮ್ಮೊಳಗೋತುಮನಸೋತು ॥ ಪದುಮಮುಖಿಯರುಗೋಪಕನ್ನೆಯ । ರುದಿತವಿ
ಭವದಲಂದುಗೌರಿಯ । ಪದವಪೂಜಿಸಲೆಂದುತೊಡಗಿದರಾಮಹಾವ್ರತವ ॥ ೩೬ ॥ ಶ್ರೀಕೃಷ್ಣಾಯನಮಃ.
ಅರುಣನುದಿಸದಮುನ್ನವೇಯೆ । ದ್ದರಿಸಿನವನಕ್ಷತೆಯನಮಳಾಂ । ಕುರಫಲಪ್ರಸವಂಗಳನುಪರಿಬಾಗಿನಂಗಳನು ॥ ಧರಿಸಿದಾ
ಶಿರಿಹಸ್ತದಲಿಕರ । ಕರದುಮುಂಮುನೆನೆರಮನೆಯಸಖಿ । ಯರನುನೆರದೈತಂದರಾಯಮುನಾಜಲಾಂತರಕೆ ॥ ೩೭ ॥ ಹೊಳವ
ಕಂಗಳಬೆಳಗುಗಳಥಳ । ಥಳಿಪದಂತಾಧರದಮುಕ್ತಾ । ಫಲಪರಿಸ್ಫುರದರುಣಲತೆಪಲ್ಲವಚಯದ್ಯುತಿಯ ॥ ತೊಳಪಕದಪಿನಕಂ

ಬಾಕೆಂತದ | ನೆಳನಡುವಿನೋರೊಬ್ಬರಂಗೈ | ತಳಸಿಬಂಧದಕ್ಕೋಳ್ಳಲಿರಂಜಿಸಿದರಬಲೆಯರು || ೩೮ || ಪಾಂಸಿಸುತ್ತಿಳ್ಗಿಳಿದ ಕಿಂನರ | ಕಂನೆಯರೊಹರಿಗಳುಘಿದಪ್ಸರ | ಕಂನೆಯರೊತನುವೆತ್ತಸ್ತ್ರೀಗಮುಕಂನೆಯರೋಯೆನಲು || ಚಂನೆಯರುಗೋಕುಲದ ಗೋಪರ | ಕಂನೆಯರುಸೌಂದರ್ಯಗುಣಸಂ | ಪಂನೆಯರುಪಾಡುತ್ತಹರಿಯನುಬಂದರಾನದಿಗೆ || ೩೯ || ಬಂದುಗೋಕುಲಕಂನೆಯರುಕಾ | ಳಿಂದಿಯಲಿತಮತಮಗೆಸತಿಯರು | ಮಿಂದುಮಡಿಗಳನುಟ್ಟುನಿರ್ಮಿಸಿಮಳಲಗೌರಿಯನು || ವಂದಿಸುತವಿಪ್ರಾಂಗನೆಯರಿಂ | ದಂದದಲಿತದ್ವಿವಿಧವಿಧಿಯಾ | ನಂದದಲಿಪೂಜಿಸಿದರಾಜಗದೀಶ್ವರೇಶ್ವರಿಯ || ೪೦ || ಜನನಿಜಗದೀಶಾನಿಕಾತ್ಯಾ | ಯನಿಕಪರ್ದಿಪ್ರಿಯೆಮಹಾಮಾ | ನಿನಿಮಹೇಶ್ವರಿವಾಂಛಿತಾರ್ಥಪ್ರದೆಮಹಾದೇವಿ || ಎನಗೆಕೊಡುಗಂಡನನುನಂದನ | ತನಯನನುಸುರನರರೊಳತಿಚಲು | ವನನುಬೇಡುವೆವವ್ವನಿನ್ನಾಚ್ಛಿಯಲಿಪೊಡವಂಟು || ೪೧ || ಎನುತಮಂತ್ರವನುಚ್ಚರಿಸುತಾ | ವನಿತೆಯರುಧೂಪಾಕ್ಷತಾಂಕುರ | ವಿನುತಫಲಪುಷ್ಪಂಗಳಲಿಬಲಿಬಾಗಿನಂಗಳಲಿ || ತನತನಗೆಪೂಜಿಸುತತ್ರಿಜಗ | ಜ್ಜನನಿಯನುನೆರೆಬೇಡಿಕೊಂಡಂ | ಗನೆಯರೊಪ್ಪಿರೆಪಾಡುತೈತಂದರುನಿಜಾಲಯಕೆ || ೪೨ || ಸಂದವೀಪರಿಕೆಲವುದಿನಗೋ | ವಿಂದನಂಘ್ರಿಸ್ಪರ್ಶನಕೆಮನ | ಸಂದುನಿಚ್ಚಲುಗೌರಿದೇವಿಯನೋನುತವೆನದಿಗೆ || ಬಂದುವಿಧ್ಯುಕ್ತದಲಿಗೋಪರ | ನಂದನೆಯರಿಗೆಭೂಪತಿಂಗಳ | ಗೊಂದೆರಡುದಿನಕೊರತೆಯೆನೆತದ್ವ್ರತಸಮಾಪನೆಗೆ || ೪೩ || ಬಂದುದಿನನೆರದಾಕುಮಾರಿಯ | ವೃಂದವುಂನಿನಪರಿಯಲೇಗೋ | ವಿಂದನನುಪಾಡುತ್ತದೆಸೆದೆಸೆಗಳನುವೇಹಿಸುತ || ಬಂದುಶೀರೆಗಳೆಲ್ಲವನುತಾ | ವೊಂದುತಾವಿನಲಿರಿಸಿಬತ್ತಲೆ | ಮಿಂದುಬಹೆವೆನುತಿಳಿದರಾಕಾಳಿಂದಿಯುದಕದಲಿ || ೪೪ || ಪಾಡುತದರೊಳುಕೃಷ್ಣನನುಚಲು | ಕಾಡುತುದಕವನೊಬ್ಬರೊಬ್ಬರು | ನೋಡಿನಗುತಬಲೆಯರುವಿಹರಿಸುತಿರೆವಿನೋದದಲಿ || ಮಾಡುವಾವ್ರತಕಿಂದೆಸಿದ್ಧಿಯ | ಮಾಡಿದಪೆನಾನೆನುತಕಂನೆಯರಾಡುವೆಡೆಗೈತಂದನಾಗೋವಿಂದನೊಲವಿನಲಿ || ೪೫ || ಯೋಗಮಾಯಾಧೀಶ್ವರನುತನ | ಗಾಗಿನೋಡುತಕಂನೆಯರನನುರಾಗವನುಕಾಣುತ್ತಕೆಳೆಯರುಸಹಿತಹರಿತಂದು || ಬೇಗದಲಿಶೀರೆಗಳನೆಲ್ಲವ | ನಾಗುಣಾಂಬುಧಿಕೊಂಡುಕರುಣಾ | ಸಾಗರನುಕಾಡಿದನುನಿತ್ಯಾತ್ಮಮನುವನಿತೆಯರ || ... ... || ೪೬ ||

ಅಂತು ಸಂಧಿ ೧೯ಕ್ಕಂ ಪದನು ೯೮೫ಕ್ಕಂ ಮಂಗಳಮಸ್ತು.

ಇಪ್ಪತ್ತನೆಯ ಸಂಧಿ.

ಗೋಪೀ ವಸ್ತ್ರಾಪಹರಣದ ಕಥೆ.

ಸೂಚನೆ || ಕನ್ಯೆಯರಿಗಿಷ್ಟಾರ್ಥಸಿದ್ಧಿಯ | ನುನ್ನತಾಮಳಕೀರ್ತಿಸಲಿಸಿಕೃ | ಷ್ಣಾರ್ಣವನುಮೆರದನೆ ನಿಜಾಶ್ರಿತಭಕ್ತವಶ್ಯತೆಯ || ... ...

ಪದನು || ಬಂದುಶೀರೆಗಳೆಲ್ಲವನುಗೋ | ವಿಂದನೊಯ್ಯುತ್ತಿರಲುಕಾಣಾ | ತ್ತಿಂದುಮುಖಿಯರುನಡುಗಿಲಜ್ಜಾಭಾವದೆಲಿನಾಚಿ || ಎಂದರೆಲೆಯೆಲೆಕೃಷ್ಣನಿನಗೇ | ಕಿಂದುನಂಮೊಳುಸರಸತದ್ವ್ರತ | ದಿಂದಕರ್ಷಿತೆಯರ್ಗೆಕೊಡುನೀನಕಟಶೀರೆಗಳ || ಹೇಳುವೆವುಕೊಡದಿರ್ದಡೀನಿಂ | ನೊಳಗವನಾನಂದಗೋಪಗೆ | ಮೇಳವೇವ್ರತನಿಷ್ಠೆಯರಕೂಡಕಟಕಟನಿನಗೆ || ಕಾಲುವಿಡಿವೆವುಕಾಡದಿರುಕೊಡು | ಶೀರೆಗಳನೆಂಮಾಣೆಯೆನೆಪಿರಿ | ಲೋಲನಡರಿದನೊಂದುತೊರರೆಹೊಂಮರನತ್ರವಕದಲಿ || ೧ || ಎಲೆಲೆಮರದಲಿಬೊಮ್ಮರಕ್ಕಸ | ಕೊಲುವನೇರಿದಮಾನವರನೀ | ನೀನಿರರ್ಥಕೆಸಾಯದಿರುನೀನೆನಲುನಸುನಗುತ || ಕೊಲುವನ್ನೆಸೆಲೆಮಾನವರನೆನ | ಗಳಲುವಿರಿಸೀವೇಕೆಮರನಿಂ | ದಿಳಿವವನುತಾನಲ್ಲಸಾಯೆನುಚಿಂತೆಬೇಡೆಂದ || ೨ || ಚೋರರಪಹರಿಸಿದರೆಶೀರೆಯ | ನಾರುಕೊಡುವರುಹೇಳುವ್ರುದುನಿಂ | ಮೂರತಳವಾರಂಗೆಮೋಣರಸಿಂಗೆನೀವಿದನು || ನೀರೆಯರಿರೇಕಳಲುವಿರಿಹೊಸ | ಸೀರೆಮನೆಯೊಳಗುಂಟುತಂನವಿ | ಚಾರವದುಬಳಿಕಹುದುಹೋಗಿಯೆನುತ್ತನೇಮಿಸಿದ || ೩ || ಕದ್ದರೊಡೆಯರುಹುಯ್ಯಲನುಕೆಲ | ಕಿದ್ದವರಿಗೆಂದೇನುಫಲಜಗ | ದಾದ್ಯವಹಪರದ್ವೈವನೀನೊಡೆಯರಿಗೆಕಟ್ಟೊಡೆಯ || ಕದ್ದರಾರುವಿಚಾರಿಸುವನ್ನೆಪ | ರಿದ್ದರಾಡದೆಹೇಳುಕೈತವ | ವಿದ್ಯೆಯಿದುನಮ್ಮೊಡನೆಯೋಗ್ಯವೆಯೆಂದರಬಲೆಯರು || ೪ || ಎಂದಡೆಂದನುನಗುತನೀರಲಿ | ನಿಂದುಶೀರೆಯನುಡಲದೇತಕೆ | ಬಂದುಬೇಗದೊಳೀಸಿಕೊಳಬಾರದೆನಿಜೇಚ್ಛೆಯಲಿ || ಇಂದುಧರನಾಣೆಲ್ಲಹುಸಿತಂ | ನಿಂದಹುಟ್ಟದುಮೇಣಾಗೋಪರ | ವೃಂದವನುನೀವ್ಕೇಳತಂನಯಸತ್ಯಸಂಸ್ಥಿತಿಯ || ೫ || ಅಹುದಹುದುಹುಸಿಹುಟ್ಟಲರಿವುದೆ | ಸಹಜಸಂವಿತ್ಸತ್ಯಮುಖವಿ | ಗ್ರಹನಲಾನೇದಾಂತಸಿದ್ಧವಿದಕಟನಿಂನೊಳಗೆ || ಇಹಳುಮಾಯೆಯುದಾರವಶದಲಿ | ಸಹಚರರನಾತ್ಮೇಕೆಸಂನುತ | ಮಹಿಮಬಳ್ಳೆವುಕೊಡಿಸುಕಾಡದಿರಕಟಸೀರೆಗಳ || ೬ || ಬಳ್ಳಿರಾಡದೆಬಹುದುಮಾಯೆಗೆ | ವಲ್ಲಭನುತಾನಹೆನುಸಂಶಯ | ವುಳ್ಳಡೂರಿಹೋಗಿಯೇತಕೆಹಲವುಮಾತುಗಳು || ಸಲ್ಲವೆನ್ನಲಿಕೊಡುವನಾನ | ಲ್ಲಲ್ಲಕಾಡುವಡೂರಜಟ್ಟಿಗ | ನಲ್ಲ

ಜಾಣೆಯರಾದಿರೆಂದನುನಗುತಮುರವೈರಿ ||೮|| ಕುಹಕಿಕೊಡುಶೀರೆಯನುತೊತ್ತಿಯು | ರಹೆವುನಿನಗಾವೆಲ್ಲರೆಂದುದೆ | ನಹಹ ಮಾಳ್ಪುವುಕೊಲ್ಲದಿರುಹಿಮಜಲನಿವಾಸಿಗಳು || ಅಹುದುತೊತ್ತಿಯರಾಗಿಯಾದಂ | ತಿಹದೆನೀರೊಳಗಿರದೆನೀವ್ವೈ | ತಹುದುಬಳಿ ಕುಡಲೀವೆನೆಂದನುನಗುತಸತಿಯರಿಗೆ ||೯|| ಎಂದಡಾನುಡಿಯಂಬಬಲೆಯೊಳ | ಗಿಂದುಮುಖಿಯರುಸಿಲುಕಿಮದನನ | ಮಂದಿ ರವಕರಕಮಲದಲಿಕುಚಗಳನುತೋಳ್ಗಳಲಿ || ಹಿಂದೆಬಿಡುಮುಡಿಯಿಂದಕಟಿತಟ | ದಂದವನುಮರೆಮಾಡಿತಂಮೊಳ | ಗೊಂದು ಮೊತ್ತವೆನಲ್ಕೆಹೊರವಂಟರುಜಲಾಶ್ರಯವ ||೧೦|| ಬಿಸಜಲತೆಗಳೊಮೇಣುಮನುಮಥ | ನಸಿಯಲತೆಗಳೋಜಗದಮೋಹನ| ದಸಮಜಲದೇವತೆಗಳೋಹರಿಮೂರ್ತಿಗುರೆಸೋತು || ವಸುಧೆಗೈತಂದಮರಕನ್ಯಾ | ವಿಸರವೋಕಾಮಾಂಧವಿಸ್ಮಿತ | ವಸನೆಯ ರೊಹೇಳೆನಲುರಂಜಿಸಿತಾವಧೂನಿವಹ ||೧೧|| ಇರಲುಸತಿಯರಮುಗ್ಧತೆಗೆನಗು | ತಿರಿಸಿದನುಪಟಭಾರವನುತ | ತ್ತರುವರ ಸ್ಕಂಧದಲಿತೆಗದೊಂದೊಂದನವರೊಡನೆ || ಸರಸದಿಂದಿಂತೆಂದನೀವ್ರತ | ಪರಮಪುರುಷನುಬತ್ತಲೀಳ್ವರೆ | ಸರಸಿಯಲಿನಿಜನಿಯ ಮನಿಷ್ಫಲವಾಯ್ತುನಿಮಗೆಂದ ||೧೨|| ಬತ್ತಲಾದಕದಲಿಳಿದುದಕೆಕೈ | ಯೆತ್ತಿಸುರರಿಗೆಪೊಡಮಡುವುದೆನು | ತುತ್ತಮೋತ್ತಮ ಕೀರ್ತಿತಮಗಾಜ್ಞಾಪಿಸಲುಕೇಳಿ || ಚಿತ್ತದಲಿಬಾಲಕಿಯರುರೆನಡು | ಗುತ್ತಚರಿತವ್ರತವಿನಾಶವಿ | ಹಸ್ತೆಯರುಪೊಡವಂಟರೊಂ ದೇಕ್ಕೈಯಲಮರರಿಗೆ ||೧೩|| ಅಕಟನಿಮಗಾರೆಂದರಲೆಬಾ | ಲಕಿಯರಿರಸಿಮಗೀವಿಧಾನದ | ಭಕತಿಯಲಿಪೊಡಮಡುವಿರಾರಿಂ ಗೊಂದುಹಸ್ತದಲಿ || ಸುಕೃತವಹಡಂಜಲಿಗಳೊಪ್ಪುವ | ಮುಕುಳವನುಮಸ್ತಕದಲಿಡುವುದು | ಸಕಲಸುರಗಣತುಷ್ಟಿಕರವೆಂದಸು ರರಿಪುನುಡಿದ ||೧೪|| ಎನಲುಲಜ್ಜಾಭಾರದಲಿವರ | ವನಿತೆಯರುತಲೆವಾಗಿಮದನನ | ಮನೆಯುಮುದ್ರಿಸಿತೊಡೆಗಳಲಿತಂತಂಮ ಕರಪುಟವ || ವಿನಯದಲಿಹಣೆಗಾಗಿನೆಗಹಿದ | ರನುಪಮೆಯರಂದವನುಕಾಣು | ತ್ತನಿಮಿಷಾರಾಧಿತನುಕೊಟ್ಟನುಶೀರೆಗಳನೊ ಲಿದು ||೧೫|| ಬೇರೆಬೇರೊಂದೊಂದನವರಿಗೆ | ತೋರಿಬಿಸುಟನುಧರೆಗೆಮನವನು | ಮಾರುಗೊಂಡನುವಸ್ತ್ರದಲಿನಿಜರೂಪ ವಿಭವದಲಿ || ನೀರೆಯರುಮನ್ಮಥನಕೃತಕವ | ದೂರುವಂತಿರೆಚಪಳೆಯರುಮೈ | ದೋರಿನಿಂದರುವಿಧೃತವಸ್ತ್ರೆಯರಾಗಿಹರು ಷದಲಿ ||೧೬|| ರೂಹುದೋರಿದಬಲೆಗೆನಾರೀ | ವ್ಯೂಹಬಿರ್ದುದುಮಿಗೆತದುದ್ಭವ | ದಾಹದಲಿಬಸವಳಿದುಶಿವಶಿವಲಜ್ಜೆಗಳನು ಳಿದು || ಮೋಹುಗೊಂಡಕ್ಷಿಗಳುತ್ರಿಜಗ | ನ್ಮೋಹನಾಮಳಮೂರ್ತಿಯನುಕಂ | ಗಾಹಿಗಳುತಾವಾಗಿನಿಂದಿರೆಕಂಡನಬಲೆಯರ || ಲಲನೆಯರಮನದಿಷ್ಟವನುನೆರೆ | ಸಲಿಸುವುದೆಕರ್ತವ್ಯವೆನಗೆಂ | ದೊಲಿದುಕರುಣಾಸಿಂಧುದೀನಾನಾಥಜನಬಂಧು || ಇಳಿದುಮರ ವನುನಿಂದನಾಕೋ | ಮಲೆಯರೊಳಗೆಮನೋನುರಾಗದ | ಲಲಘುಮಧುರಸ್ಮಿತಕಟಾಕ್ಷಮನೋಜ್ಞದಲಿನೋಡಿ ||೧೮|| ಎಂತುತಂಮನುಕಾಡಿದಡೆಮೇ | ಣ್ಗಿಂತುನಾಣ್ಗಿಡಿಸಿದಡೆಗೋಕುಲ | ಕಾಂತೆಯರುಕೃಷ್ಣನಲಿನೆನೆಯರಸೂಯೆಯನುಮನದ || ಚಿಂತಿತಾರ್ಥದಸಿದ್ಧಿಲಕ್ಷ್ಮೀ | ಕಾಂತನೊಲವಿದೆನುತ್ತಸತಿಯರು | ತಂತಮಗೆಪರಿವರಿಸಿನಿಂದರುಕಮಲಲೋಚನನ ||೧೯|| ಎಂದನವರಿಂಗೆಂನನೀವ್ಮನ | ಸಂದುಗೌರೀವ್ರತವಚರಿಸಿದಿ | ರಿಂದುಪರಿಯಂತೀಮನೋಭಾವದಲಿಮೆಚ್ಚಿದೆನು || ಸಂದುದಾ ಗಲಿಭಯಕೆಭಕ್ತರ | ಕುಂದುತಂನದುಬಳಲದಿರಿನೀ | ವೆಂದುಬೋಳೈಸಿದನುಕೈವಿಡಿದಾಕುಮಾರಿಯರ ||೨೦|| ಮನವನೆನ್ನೊಳೆ ಗಿರಿಸಬಲ್ಲಂ | ನನುಪಮಾಮಳಭಕ್ತರಿಂದ್ರಿಯ | ಜನಿತಲೌಲ್ಯಕ್ಕಂಜುವರೆನೆರೆಹುರಿದಬೀಜದಲಿ || ನೆನೆದಡಂಕುರವಹುದೆತನ್ನವ| ರೆನಿಸಿದಂದೇಸಕಲಸುಖಭಾ | ಜನರುನಿಮಗಾನಹೆನುವಲ್ಲಭನಂಜಬೇಡೆಂದ ||೨೧|| ಕಾಮದಲಿಕಂನೆಯರಿರೆಂನನು | ಕಾಮ ದಲಿಮೇಣೊಲಿದುಭಜಿಸುವ | ಭೂಮಿಪಾವನಮೂರ್ತಿಗಳ್ಗಿಹಪರಗಳೆರಡರಲಿ || ಕ್ಷೇಮವಲ್ಲಾದಿಟಕೆಕಾಮನ | ಕಾಮವದು ನೋಳ್ಪಡೆಮದೀಯ | ಪ್ರೇಮಪರಿಣತಚಿತ್ತರಿಗೆಭಯವಿಲ್ಲಬಳಿಕೆಂದ ||೨೨|| ಸತಿಯರಿರತನಗೋತುಚರಿತ | ವ್ರತೆಯರಾದಿರಿ ಸಲಿಸಿದೆನುಮಾಂ | ಛಿತವನೆಂನೊಡನಿಹುದುನೀವೀರಾತ್ರಿಗಳಲೆನುತ || ಶತಮಖಾರ್ಚಿತಚರಣನಿಂತೀ | ಸ್ಮಿತಮಧುರಸೂಕ್ತಿಯ ಲಿಬೆಸೆಸಿದ | ಡತನುಶರಪರವಶೆಯರಿರ್ದರುಕೇಳುತವೆನುಡಿಯ ||೨೩|| ಹೋಗಿನೀವ್ಗೋಕುಲಕೆನಿಂಮನು | ರಾಗವನುತಾ ನರಿತೆನೆನುತಾ | ಯೋಗಮಾಯೇಶ್ವರನುನೇಮಿಸಲಬಲೆಯರುಕೇಳಿ || ನೀಗಿಮನವಾರ್ತೆಯನುವಿರಹದ | ಬೇಗೆಯಲಿಬೆಂಡಾ ಗಿಕರುಣಾ | ಸಾಗರನನೆನವುತ್ತಲೈದಿದರವರುಗೋಕುಲಕೆ ||೨೪|| ಎಂತುಟೋಕೃಪೆಭೂಪತಂನೇ | ಕಾಂತಭಕ್ತರೊಳಕಟ ಲಕ್ಷ್ಮೀ | ಕಾಂತನೊಲಿದಿಷ್ಟಾರ್ಥವನುಸಲಿಸಿದನುಸತಿಯರಿಗೆ || ಮಂತ್ರಮೂರುತಿಗೋಪಕನ್ಯಾ | ಸಂತತಿಗೆಹರಹರಸುಲಭನಿಂ| ನೆಂತುಟೋನಿತ್ಯಾತ್ಮಕೃಷ್ಣನಚಿಂತ್ಯಗುಣವನಧಿ || ... ... ||೨೫||

ಅಂತು ಸಂಧಿ ೨೦ಕ್ಕಂ ಪದನು ೯೭೦ಕ್ಕೆ ಮಂಗಳಮಸ್ತು.

ಇಪ್ಪತ್ತೊಂದನೆಯ ಸಂಧಿ.

ಆಂಗೀರಸನ ಯಜ್ಞ ಯಾಚನೆ.

ಸೂಚನೆ|| ಸಂನುತಾಮಳಕೀರ್ತಿಪರನುಕ್ತ | ಪೂರ್ಣವನುವಿಮಳಾಂಗಿರಸಯ | ಜ್ಞಾಂನಯಾಚಕೆ
ನಾಡನಸುರಾರಾತಿನಲಿವಿನಲಿ || ... ...

ಪದನು|| ಒಂದುದಿನಗೋವಳರುಸಹಿತಮು | ಕುಂದನೈದಿದನಾವನಶ್ರೀ | ಯುಂದವನುನೋಡುತ್ತದೂರಾರಣ್ಯಮಾರ್ಗದಲಿ || ಮುಂದೆಮೆರೆವಮಹಾಲತಾದ್ರುಮ | ವೃಂದವನುಪರಹಿತಕೆಜೀವಿಸು | ವಂದವನುಕರುಣದಲನುಗ್ರಹಿಸುತ್ತಗೋಪರಿಗೆ ||೧|| ಬಿಸಿಲುಬೆಳತುದುಬೀದಿವರಿದುದು | ತೃಷೆತಟಾಕವಸಾರಿದವುಪಶು | ವಿಸರವಾಗೋಪಾಲಕರುನೀರ್ಗುಡಿಸುಕಳ್ಳಿದ್ದರ್ || ಹಸಿದೆವೆಂದೆಲ್ಲವರುಹರಿಗಾ | ವೃಷಸುಬಲಸೌಜನ್ಯಮುಖ್ಯರು | ಬಸುರುಗಳತೋರುತ್ತಬಿಂನವಿಸಿದರುಬಸವಳಿದು || ದೇವಕರುಣಿಸುಕೃಷ್ಣ ಸನ್ನುತ | ಜೀವರಕ್ಷಾಮಣಿಯೆಸುರಮುನಿ | ಸೇವಿತಾಂಘ್ರಿಯೆರಾಮರಾಜೀವಾಯತೇಕ್ಷಣನೆ || ಬೇವುತಿದೆತಂಮೊಡಲುಜಠರದ | ಪಾವಕನಪರಿಗತಿಯುಳಿಪಿರಾ | ಜೀವಲೋಚನಕರುಣಿಸೆನ್ನುವನೆಂದುದಖಿಳಜನ ||೩|| ಎನಲುನೆಸುನಗುತಸುರಕುಲಮ | ರ್ದನನುಮನದಲಿನೋಡಿವಿಪ್ರರ | ವನಿತೆಯರಪುಣ್ಯೋದಯವನಾಲಿಸುತನುಗ್ರಹವ || ನೆನೆದುನುಡಿದನುಗೋಪರಿಗೆನೀ | ವಿನಿಬರಾಂಗಿರಸಾಖ್ಯಮುಖವಿದೆ | ಸನಿಹದಲಿನೀವೀಕ್ಷಿಸಿತಹುದೋಗರವನದನೆಂದ ||೪|| ಎಂದಡಾಗೋವಳರುಖರೆಲೆ | ಸೆಂದೆನುತತಮತಮಗೆರಾಮಮು | ಕುಂದರಾಜ್ಞೆಯುಮೇಲೆಸತ್ರದಶಾಲೆಗೈತಂದು || ವಂದಿಸುತವಿಪ್ರರಿಗೆಕೈಮುಗಿ | ದೆಂದರಶನಾರ್ಥಿಗಳುಹರಿಬಲ | ರಿಂದುಕಳುಹಿದರೆಂಮನೆಂದರುವಿನಯಪರರಾಗಿ ||೫|| ಕುಮತಿಗಳುಕರ್ಮೈಕನಿಷ್ಠರು | ತ್ರಿಮದಮಾನೋದ್ಧತರುಲಕ್ಷ್ಮೀ | ರಮಣನಭ್ಯರ್ಥಿಸಿದಡಾಗೋವಳರಮುಖದಿಂದ || ಭ್ರಮಿತರಿದ್ದರುಕಿವುಡುಕೇಳು | ತ್ತಮಮಸಾಕ್ಷಾದ್ಯಜ್ಞಪುರುಷನ | ನಮರಸೇವಿತಚರಣನನುನರನೆಂದುಧಿಕ್ಕರಿಸಿ ||೬|| ಏನನೆಂಬೆನುಗೋಪರಿಂತವ | ಮಾನಭಾಜನರಾಗಿಮಗುಳಾ | ದಾನವಾಂತಕನೆಡೆಗೆಬಳಲುತಬಂದುತಮಗಾದ || ಮಾನಭಂಗಸ್ಥಿತಿಯನಧಿಕವ | ಮಾನವದನರುಬಿಂನವಿಸಲನು | ಮಾನಿಸುತ್ತಿಂತೆಂದನಸುರಾರಾತಿನಸುನಗುತ ||೭|| ಅಕಟಮಾಯಾಭ್ರಮಿತವೀಲಾ | ಕಿಕದಗತಿವಿಪರೀತವಿದುಡಾಂ | ಭಿಕರುತಾವಿಂನೇನನಿಶ್ಚೈಸಿದರೊಪರಗತಿಯ || ಸುಕೃತಹೀನರುಕರ್ಮಜಡರವ | ರುಕುತಿಸಾಕಾವಿಪ್ರಪತ್ನೀ | ನಿಕರಕೆಂನೀಹೆಸರಹೇಳುವುದೀಸಿತಹುದೆಂದ ||೮|| ಅವರವೋಲಲ್ಲವರಪತ್ನೀ | ನಿವಹವೆನ್ನೇಕಾಂತಭಕ್ತೆಯ | ರವರುನಿಮಗೀವರುಸುಮೃಷ್ಟಾಂನವನುಹೋಗಿಯನೆ || ತವತವಗೆಗೋವಳರುಮನದು | ತ್ಸವದಲಾದ್ವಿಜಪತ್ನಿಯರಭವ | ನವನುಭಾವನಾಧೀಶನಾಜ್ಞೆಯಲೈದಿದರುಮಗುಳೆ ||೯|| ವಿನಯದಲಿಪೊಡಮಂಟುವಿಪ್ರರ | ವನಿತೆಯರಿಗಿಂತೆಂದರಜಭವ | ಮುನಿಸುರೇಂದ್ರಾರಾಧಿತಾಂಘ್ರಿಯೆನಿಪ್ಪಹರಿಯೊಲಿದು || ವನದಲೀಬಂದ್ಯೈದನಾಶ್ರಿತ | ಜನಮನೋರಥಕಾರಿಕರುಣಾ | ವನಧಿಕೃಷ್ಣ ನವರ್ಗಳವಧರಿಸೊಡುಬಿಂನಹವ ||೧೦|| ಹಸಿದುವಿಪಿನಾವಾಸದಲಿಸುರ | ವಿಸರವಂದಿತನುಣಲೆಳಸಿನಿಜ | ವಸತಿಗಟ್ಟಿದನೆಂಮನಶನವನೀಕ್ಷಿತಹುದೆಂದು || ಶಶಿವದನೆಯರಿರಿವ್ರುದನ್ನವ | ನೊಸದುನಿಜಸುಖಪೂರ್ಣಲಾಭಂ | ಗಸಮಸೌಭಾಗ್ಯೋದಧಿಗೆನೀವೆಂದರಭಿನಮಿಸಿ ||೧೧|| ಕೇಳುತವೆಕಮಲಾಕ್ಷಿಯರುಪಿರಿ | ಲೋಲನಾಗನಸವನುದರ್ಶನ | ಲೋಲೆಯರುತತ್ಕ್ಷಣವೆಪೂರ್ಣಮನೋರಥೆಯರಾಗಿ || ತೊಳುವೃತ್ಸವದುಬ್ಬರದಪುಳ | ಕಾಳಿಗಳಸಾನಂದಲೀಲೋ | ನ್ಮೀಲಿತಾಕ್ಷಿಯರೆದ್ದರಧಿಕಮನೋನುರಾಗದಲಿ ||೧೨|| ಬಯಸಿಕಾಣರುಬಹಳವೇದ | ಕ್ರಿಯೆಗಳಲಿಯಾಜ್ಞಿಕರುಮೇಣ | ಹ್ರಯುತಪೋವ್ರತನಿಷ್ಠರರಿಯರದಾವನಂಘ್ರಿಗಳ || ನಯನಗೋಚರನಹನೆನಮಗಬ | ಳೆಯರಿಗಕೃತಾನೇಕಭವಸುಕೃ | ತೆಯರಿಗೆನುತೋರಂತೆಸಂಭ್ರಮಿಸಿತುವಧೂವಿವಹ ||೧೩|| ನಿಕೃತ್ಯಪ್ತನುಹಸಿದಗಡತಾ | ವೆತ್ತಣಂನವನೀವೆವೌಶ್ರುತಿ | ಮಸ್ತಕಾಮಳರತ್ನವೈತಂದುದುಗಡೀಥರೆಗೆ || ಕೃತ್ಯವಾವುದುನಮಗೆನುತ್ತಾ | ಮತ್ತಕಾಶಿನಿಯರುಚತುರ್ವಿಧ | ದುತ್ತಮಾನ್ನವನ್ನೈದೆಕೊಂಡರುವಿವಿಧಪಾತ್ರೆಯಲಿ ||೧೪|| ಸದೆನವನುಹೊರವಂಟರಂದಾ | ಸುದತಿಯರುಹರಿಗಾಂಬತವಕದ | ಲೊದಮನೆಮನವಾರ್ತೆಯನುನಿಜಬಂಧುವರ್ಗವನು || ಉದಧಿಯನುನೆರೆಕೂಡಲೈದುವ | ನದಿಗಳಂತಿರಲಾಮುಕುಂದನ | ಪದಕಮಲಸನ್ನಿಧಿಗೆನಡೆತಂದರುಮಹಾತ್ಮೆಯರು ||೧೫|| ವಿಾರಿಪತಿಪಿತೃಮಾತೃಬಾಂಧವ | ಭೂರಿನಿರ್ಬಂಧವನುನಡದರು | ನಾರಿಯರುನಯನಾಮೃತಾನಂದಾಬ್ಧಿಯಿದ್ದೆಡೆಗೆ || ತಾರತಮ್ಯವನುಳಿದುಜೀವರ | ಭೂರಿಚೈತನ್ಯಾತ್ಮಕನುತಾ | ನಾರುತತ್ಸಂನಿಧಿಗೆಬರಲಪರಾಧವೇನೆನುತ ||೧೬|| ಬಂದುಕಂಡರುಬಹಳಶ್ರೀಚೋ | ವೃಂದವಿಭ್ರಾಜಿತನನಾಗೋ | ವಿಂದನನುಗೋಗೋಪಜನಸುರಸೇವಿತಾಂಘ್ರಿಯನು || ಇಂದುಮುಖಿಯರುಮುನ್ನಕೇಳಿದ | ರಿಂದಮಿಗಿಲುಸಹಸ್ರಗುಣವದ | ರಂದವಪದಭಿರಾಮಮೂರ್ತಿಯನಾಲಿಗಳುದಣಿಯೆ ||೧೭|| ಎಳೆಲತೆಯನಾಡಿಸುವಮಂದಾ | ನಿಲನತಂಪಿನಕಂಪಶೋಕೆಯ | ತಳಿರುಗಳಮಾಮನೋಪವನಭೂಮಿಯಲಿರಂಜಿಸುವ || ನಳಿನನಾಭನೆ

ಮೂರ್ತಿಯನುಕಂ । ಗಳಲಿಸಾಕ್ಷಾತ್ಕರಿಸಿಶಿವಶಿವ । ನಳಿನಮುಖಿಯರುಮುಂದೆಕಂಡರುಮುನಿಮನೋರಮನ ॥ ೧೮ ॥
ನೀಡಿವಾಮಕರಾಂಬುಜವನೊಡ । ನಾಡಿಯುಂಸದಮೇಲೆಕಮಲವ । ನಾಡಿಸುತಬಲಗೈಯಲೆಸವಕೃಪಾಕಟಾಕ್ಷದಲಿ ॥ ನೋ
ಡಿಕೆಲಬಲಮಂಕವನುಮಾ । ತಾಡಿಸುತಕೆಳೆಯರನುನಿಂದಿರೆ । ಗಾಡಿಕಾರರದೇವನಿರವನು ಕಂಡರಬಲೆಯರು ॥ ೧೯ ॥
ತೊಟ್ಟಮಣಿಭೂಷಣದಕನಕದ । ಕಟ್ಟುಡುಡಿಗೆವಳದಹೊಸಹೊಂ । ಬಟ್ಟೆಯುಡಿಗೆಯಮೆರವಧಾತುವಿಚಿತ್ರಕಾಂತಿಗಳ ॥
ದೃಷ್ಟಿಮೋಹನಮೂರ್ತಿಯನುನಿಜ । ದೃಷ್ಟಿಗಳಲೀಕ್ಷಿಸುತಸತಿಯರು । ತುಷ್ಟಿವಡೆಯದಕರುಣರಸದೊಳಗದ್ದರಡಿಗಡಿಗೆ ॥ ೨೦ ॥
ಕೇಳಿಕೇಳಿಮುಕುಂದನುನ್ನತ । ಬಾಲಕೇಳೀಸುಧೆಗಳನುಮನ । ಸೋಲುತಿರ್ದರುಮುನ್ನಮೇಹರಿಪದದಿದೃಷ್ಟಿಯಲಿ ॥ ಅಲಿ
ಗಳಲಪ್ಪಿದರುಬಳಿಕಾ । ಲೋಲಲೋಚನೆಯರುನಿರಂತರ । ಬೀಳುಕೊಟ್ಟರುಬಹಳಪೂರ್ವಾರ್ಜಿತಮನೋವ್ಯಥೆಯ ॥ ೨೧ ॥
ಅರ್ಪಿಸಿದರಬುಜಾಕ್ಷಿಯರುಕಂ । ದರ್ಪಕಮನಿಯ್ಯಾಂಘ್ರಿಗಾತ್ಮಸ । ಮರ್ಪಣವಮಾಳ್ಪಂತೆಪರಮಾನ್ನವನುಮನವೊಲಿದು ॥
ಸರ್ಪರಾಜಮಹಾಶಯನಸಂ । ತರ್ಪಿತೇಂದ್ರಿಯವೃತ್ತಿಗಳುಚಿ । ತಾರ್ಪಿತಾಕೃತಿಗಳವೊಲಿರ್ದರುಬಿಗಿದಬೆರಗಿನಲಿ ॥ ೨೨ ॥
ಕಂಗಳಲಿಸವಿಸವಿದುಸಲೆಸ । ರ್ವಾಂಗಸೌಂದರ್ಯಾಮೃತಾಬ್ಧಿಯ । ಲಂಗನೆಯರಳವಳಿದುಪರವಶತೆಯಲಿಮೈಮರೆದು ॥ ಹೊಂ
ಗಿತನುಪುಳಕದಲಿನಿಜಪದ । ಸಂಗಕಾಂಕ್ಷೆಯಲಿರಲುಕರುಣಾ । ಪಾಂಗದಲಿನೋಡುತ್ತನಗುತಿಂತೆಂದನಸುರಾರಿ ॥ ೨೩ ॥
ಎಂದಿರಾಸತಿಯರಿರಹಸಿದಾ । ನಿಂದುಕಳುಹಿದಡನ್ನವನುನೀ । ವ್ತಂದಿರಾಲೇಸಾಯ್ತುಕುಳ್ಳಿರಿಬಳಲಿದಿರಿನಿಮಗೆ ॥ ಇಂ
ದುಮಾಡುವುದೇನುಕಾಣಲು । ಬಂದಿರೇಕೆನ್ನುವನುನಿಮಗೆಯು । ಸಂದುದೇಸಂಪ್ರೀತಿತನಗಿದುಸುದಿನವಾಯ್ತೆಂದ ॥ ೨೪ ॥
ಬಯಸುವರುನಿಮ್ಮಂತೆಲೋಕ । ಪ್ರಿಯತಮನುತಾನಾಗಿತನ್ನನು । ನಿಯತದಿಂದೇಜೀವರೈದೆನಿಜಾತ್ಮರೂಪವನು ॥
ಬಯನೆಗೋಚರಮೂರ್ತಿಲೀಲಾ । ಮಯವಿದನುನಚ್ಚದಿರಿಸಕಲೇಂ । ದ್ರಿಯಮನೋಮತಿ ಸಾಕ್ಷಿಚಿತ್ತೇತನ್ನನಿಜವೆಂ
ದ ॥ ೨೫ ॥ ಸತಿಸುತಪ್ರಿಯ ಬಾಂಧವಾಪ್ತರು । ಹಿತವರೆಂಬವರೈದೆನಿಜಸಂ । ಸ್ಥಿತಿನಿಮಿತ್ತವೆ ಸುಖಕೆಸಾಧನದಂತೆತೋ
ರುವುದು ॥ ಸತತನಿಜತಾನಲ್ಲದಿರ್ದಡೆ । ವಿತತವಿತರಸ್ನೇಹವದರಿಂ । ದತಿಶಯವದಿನ್ನೆಂತುಟೋಸ್ವಸುಖಾನುಭವವೆಂದ ॥
ನಿಜಸುಖವೆಸುಖದಂತೆತೋರ್ಕಾ । ನಿಜದುಳುಮೆಬೇರುಳುಮೆಯಂತಿರೆ । ನಿಜದರಿವೆಮತಿವೃತ್ತಿಯಲಿತೋರ್ಕರಿವಿನಂದದಲಿ ॥
ನಿಜವೆತಾನಿದಿರೆನಿಪಮತ್ತಾ । ನಿಜವೆಜಗದಾಕಾರದಂತಿರೆ । ನಿಜವಿದಳಿವುದುತೋರಲರಿಯದನಿಜವೆತಾನೆಂದ ॥ ೨೬ ॥ ಕನಸಿ
ನೊಳುಮಿಗೆಸುಖಕೆಮೈಚೀ । ತನಕೆನಿಜತಾನಾದವೋಲ್ನೀ । ನೆನಸುವೆಲ್ಲಾವಿಕೃತಿಗಳಿಗೆವಿಚಿತ್ರಗತಿಗಳಿಗೆ ॥ ಜನನವೆನ್ನೇಕಾಂಕ
ಕ್ಷೀವಾ । ತ್ಮನಸಕಾಶದಲೆಂದುತಿಳಿವುದು । ವನಿತೆಯರಿರೆನ್ನಿಂದಧಿಕವಹವಸ್ತುವಿಲ್ಲೆಂದ ॥ ೨೭ ॥ ಎನ್ನೊಳಗೆನೀವ್ನಿಮ್ಮಮತಿಯ
ಲಿ । ಸನ್ನಿಹಿತನಾನನವರತನಿಮ । ಗನ್ಯನಾನಲ್ಲೆನಗೆನೀವನ್ಯೆಯರುದಿಟಕಲ್ಲ ॥ ಭಿನ್ನಭಾವನೆಬೇಡನಡವುದು । ಜನ್ಮಶಾಲೆಗೆನೀ
ನೆನುತಕರು । ಣಾರ್ಣವನುಬೆಸಸಲ್ಕೆಮಗುಳಂತೆಂದರಬಲೆಯರು ॥ ೨೮ ॥ ಬೇಡನಿನ್ನೇಕತ್ವಮೆಮಗೀ । ಡಾಡಿನಿಜಜನನಿಕ
ರವನುನೆಲೆ । ಮಾಡಿನಿನ್ನಲಿಬದುಕುವರ್ಥಿಗೆಸಂದುನಾವಿಂದು ॥ ನಾಡರಿಯಲ್ಕೈತಂದೆವೆಮ್ಮೊಡ । ನಾಡದಿರುನಿಷ್ಠುರವನಳಲಿಸಿ ।
ಕಾಡದಿರುಕಾರುಣ್ಯನಿಧಿನೀನೆಂದರಬಲೆಯರು ॥ ೩೦ ॥ ಮನವಚನಗೋಚರಕೆಬಾರದ । ಚಿನುಮಯನುನೀನೊಲಿದುಧರೆಯ
ಲಿ । ತನುವಿಡಿದಡಿನ್ನಾರುಬಿಡುವರುನಿಜಸುಖಾತ್ಮನನು ॥ ಸನಕನಾರದಮುಖ್ಯಮುನಿಜನ । ರನುವನರಿಯರೆಕೃಷ್ಣಕರುಣಾ । ವ
ಧಿಯೇಕೃಪೆಮಾಳ್ಪುದೆಮಗೆಂದುಡುವಧೂನಿವಹ ॥ ೩೧ ॥ ಏಕೆಕಾಡುವೆಕೃಷ್ಣನಮ್ಮನು । ನೂಕದಿರುನಿನ್ನಂಘ್ರಿಕಮಲಯು ।
ಗ್ಮಕದಾಸಿಯರಾಗಿಬದುಕುವೆವೆಂದುಬಂದವರ ॥ ಲೋಕವೆರಡರಮಾತುತಮಗಿ । ನ್ನೇಕೆಚರಣದತುಲಸಿಯನುಕರು । ಣಾಕರನೆ
ರುಣಿಸುವುದೆಂದರುಯಜ್ಞಪತ್ನಿಯರು ॥ ೩೨ ॥ ಅಲ್ಲದಿದ್ದಡೆಗತಿಯದಾವುದು । ವಲ್ಲಭನೆನೀನೊಲ್ಲೆಮೇಣೊಳ । ಕೊಳ್ಳರೇ
ತೃಮಾತೃಪತಿಪುತ್ರಾಪ್ತರೆಮ್ಮವನು ॥ ಬಲ್ಲೆನೀನೇನಿನ್ನಸಿರಿಪದ । ಪಲ್ಲವವೆಗತಿಯನುತಸತಿಯರು । ತಲ್ಲಣಿಸಲಿಂತೆಂದನವ
ಂಗಭಯವನುಕೊಡುತ ॥ ೩೩ ॥ ಎನ್ನನೊಲಿವರನೊಲವುದೀಜಗ । ವೆನ್ನನೊಲ್ಲದಡೊಲ್ಲದದರಿಂ । ದೆನ್ನೊಲವುಸುರಪಿತೃಗ
ಣಲವುಸಮಸ್ತಜನದೊಲವು ॥ ಮನ್ನಿಸುವರಂಜದಿರಿನಿಮ್ಮನು । ಮುನ್ನಿನಂತತಿಶಯನೆನಲುಸಂಪ । ನ್ನಪತಿಪಿತೃಬಾಂಧವಾ
ಪ್ತರುಪುತ್ರಜನವೆಂದ ॥ ೩೪ ॥ ಅಂಗಸಂಗದಸುಖಕೆಬರಿದೇ । ಕಂಗೆಡಬೆಕರಣೇಂದ್ರಿಯದವಿಷ । ಯಂಗಳಿವುಕಡುತುಚ್ಛವತಿ
ಚಂಚಲವಿದೆಂದರಿದು ॥ ಹಿಂಗದೆನ್ನಲಿಮನವನಿಲಿಸಿನಿ । ಜಾಂಗಭೂತೆಯರಾಗಿಕೂಡುವಿ । ರಂಗನೆಯರಿರತಡೆಯದೆನ್ನನುಚಿಂತೆ
ಗೀಡೆಂದ ॥ ೩೫ ॥ ಹೋಗಿನೀವೆಂದೆನಲುಕರುಣಾ । ಸಾಗರನಪದಯುಗಳಕನುಲಪ । ರಾಗವನುಬಲವಂದುಧರಿಸಿನಿಜೋತ್ತ
ಮಾಂಗದಲಿ ॥ ತ್ಯಾಗಕಾತರೆಯರುತದಾತ್ಮೀಯ । ರಾಗಿತದ್ವರುಶನಕೃತಾರ್ಥೆಯ । ರಾಗಿಮರಳಿದರಬಲೆಯರುಕಂತುಸುಮನೆಗ
ೆ ॥ ೩೬ ॥ ಅತ್ತಲಾದ್ವಿಜವರರುನಿಜದು । ವೃತ್ತವನುನಿಜವನಿತೆಯರಸ । ದ್ವೃತ್ತವನುಸಾಕ್ಷಾನ್ಮುಕುಂದಪದೈಕನಿಷ್ಠೆಯ
ನ ॥ ಮತ್ತೆನೆನೆದೀಕ್ಷಿಸುತನುಡಿದರು । ಚಿತ್ತದನುತಾಪದಲಿಧಿಕ್ಕರಿ । ಸುತ್ತತಮ್ಮನುತಾವುಮಾಡಿದದುರ್ವಿದಗ್ಧತೆಗೆ ॥ ೩೭ ॥

ಶಿವಶಿವೆತ್ತಣವಿಪ್ರಕುಲಸಂ | ಭವವಿದೆತ್ತಣವೇದಶಾಸ್ತ್ರ | ಶ್ರವಣವೆತ್ತಣದ್ವಿಜವಿಹಿತಸಂಸ್ಕಾರಪರಿನಿಷ್ಠೆ || ತ್ರಿವಿಧಜನ್ಮಗುಣಂಗಳೆತ್ತಣ | ವಿವಿಧಯಜ್ಞಕ್ರಿಯೆಯಿದೆತ್ತಣ | ಭುವನದಧಿದೇವತೆಯವಜ್ಞೆಯಿದೆತ್ತಣದುನಮಗೆ || ೩೮ || ಯಜ್ಞವಿದುತಾನಾರಿಗೋಸುಗ | ಯಜ್ಞಮುಖದೇವತೆಗಳಾವನ | ಸಾಜ್ಞೆಸಾಂಗೋಪಾಂಗನಾಮವಿಭೇದಮೂರ್ತಿಗಳು || ಯಜ್ಞಫಲದಾಯಕರದಾರೀ | ಯಜ್ಞಮೂರ್ತಿಯದಾರುಮಾಡಿದ | ವಜ್ಞೆಯಿದುಮತ್ತಾರೊಡನೆನಮಗೆಂದರಾದ್ವಿಜರು || ೩೯ || ಅರುಗೆಲುವರುವಿಷ್ಣುಮಾಯೆಯ | ಭೂರಿಮಾಹಾತ್ಮ್ಯೆಯನುಯೋಗಧಿ | ಶಾರದರನೊಳಗಾಗಿಮೋಹಿಸುವುದುಮಹಾತ್ಮರನು || ಧಾರುಣಿಗೆನ ವ್ರರುಗಳಧಿಕಾ | ಚಾರನಿಷ್ಠರುಸಕಲಲೋಕಾ | ಧಾರವಿಷ್ಣುವನರಿಯೆವಕಟಕಟೆಂದುಮರುಗಿದರು || ೪೦ || ಅರಿಯರಜ್ಞರುತನ್ನನೆಂದೆ | ಚ್ಚರಿಸಿದನುಗೋವಳರಕೈಯಲ್ಲಿ | ಕುರುಬರಿಂದತ್ಯಧಿಕರಾದೆವುಮೂರ್ಖವಿದ್ಯೆಯಲಿ || ಅರಿಯವೆಂಬಡೆಗೋಕುಲದಲವ | ತರಿಸಿದನುಸಾಕ್ಷಾತಹರಿಯೆಂ | ದರಿವೆವೈನಾವ್ಮನ್ನಕೇಳುತದೀಯಗುಣಗಣವ || ೪೧ || ಇಲ್ಲಿಸಂಸ್ಕಾರಾದಿಸತ್ಕ್ರಿಯೆ | ಯಿಲ್ಲವೇದಾಧ್ಯಯನಸುಚರಿತೆ | ಯಿಲ್ಲಗುರುಕುಲವಾಸಶೌಚಾಚಮನದೀಕ್ಷೆಗಳು || ಇಲ್ಲಜಪತಪವಿಧಿಗಳೊಂದೂ | ಇಲ್ಲವೀಸ್ತ್ರೀಯರಿಗೆಹರಿಪದ | ಪಲ್ಲವಾಶ್ರಿತಭಕ್ತಿದೊರಕೊಂಡುದುಮಹಾದೇವ || ೪೨ || ಆವಕರುಣಾಸಿಂಧುವೋಮೇ | ಣಾಪಸಜ್ಜನಬಂಧುವೋರಾ | ಜೀವನಾಥನುಶಿವಶಿವಾಮದನುಗ್ರಹಾರ್ಥದಲಿ || ಗೋವಳರನಟ್ಟಿದನುಪಾತಕ | ಜೀವಿಗಳಹೊರೆಗಕಟಕಾರು | ಣ್ಯಾವಲೋಕನದಿಂದನುಗ್ರಹಿಸುತ್ತನಿಜಪದವ || ೪೩ || ಅಲ್ಲದಿರ್ದಡೆನಿತ್ಯತೃಪ್ತಂ | ಗೆಲ್ಲಿಯದುಹಸಿವೆಕಟಲಕ್ಷ್ಮೀ | ವಲ್ಲಭಂಗೆವಿರಿಂಚಿಸುರಮುನಿದುರ್ಲಭಂಗಿಂದು || ಎಲ್ಲಿಯದುಮುನಿವರರನಾಮ್ನಂ | ಮಲ್ಲಿದಿಟಯಾಚಕನುಗಡಕ್ಕೆ | ವಲ್ಯನಾಥನುನಾವಲಾಯವಮಾನಕರ್ತುಗಳು || ೪೪ || ಸತಿಯರಿಗೆಹರಿಭಕತಿದೊರಕೊಂ | ಡತುಳಪುಣ್ಯದಫಲವೊಮೇಣ | ಚ್ಯುತಮುಖಾಹುತಿಹವ್ಯಸಂಪತ್ಫಲವೊನಮಗಿಂದು || ಮತಿಯಿದಳವಟ್ಟುದುಕೃತಾರ್ಥ | ಸ್ಮೃತಿಯಿದೆಂತಹುದೆನುತನೆನೆದಾ | ಕ್ಷಿತಿಸುರರುಸುರವಂದ್ಯನನುನೆನನೆನೆದುಮರುಗಿದರು || ೪೫ || ಅತ್ತಲಾದ್ವಿಜಸಮಿತಿಮಾಡುವ | ಚಿತ್ತದುಪಚಾರವನುಕೈಕೊಳು | ತಿತ್ತಲವರಂಗನೆಯರಿತ್ತಮೃತಾನ್ನಭೋಜನವ || ಚಿತ್ತವಿಸಿಚತುರಾಸ್ಯನುತಚಾ | ರಿತ್ರನಾಗೋಕುಲಕೆಮಂಗಳ | ಮೂರ್ತಿನಿತ್ಯಾತುಮನುಬಿಜಯಂಗೈದನೊಲವಿನಲಿ || ... ... || ೪೬ ||

ಅಂತು ಸಂಧಿ ೨೧ಕ್ಕಂ ಪದನು ೧೦೮೬ಕ್ಕಂ ಮಂಗಳಮಸ್ತು.

ಇಪ್ಪತ್ತೆರಡನೆಯ ಸಂಧಿ.

ಗೋವರ್ಧನಗಿರಿಯನ್ನು ಕೊಡೆವಿಡಿದ ಕಥೆ.

ಸೂಚನೆ || ಯಜ್ಞಭಾಗಭ್ರಂಶಜಿತಶತ | ಯಜ್ಞನೆಸೆದನುಧರಿಸಿಸುಜನಮ | ನೋಜ್ಞವಾಮಭುಜಾಗ್ರದಲಿ
ಗೋವರ್ಧನಾಚಲವ || ... ...

ಪದನು || ಒಂದುದಿನನೃಪಕೇಳುನೆರದಾ | ನಂದಗೋಪಾದಿಗಳುತಮ್ಮೊಳ | ಗಿಂದ್ರಯಾಗೋದ್ಯೋಗದಲಿಸಂಭ್ರಮಿಸುತಿರೆಕಂಡು || ಎಂದನಖಿಳಾಧ್ಯಕ್ಷನರಿಯದ | ನಂದದಲಿವೃತ್ತಾಂತವನುಗೋ | ವಿಂದನರಿದಿಚ್ಛೆಯಲಿನಗುತಾಗೋಪವೃದ್ಧರಿಗೆ || ೧ || ಹೇಳಿನಿಮಗಿಂದೇನುಸಂಭ್ರಮ | ಕೇಳಲಾಗದೆತಾನಿದನುಮಖ | ದೇಳಿಗೆಯಫಲವೇನುದೇವತೆಯಾರುವಿಧಿಯೇನು || ಮೂಲಕಾರಣವಾವುದೇತಕೆ | ಮೇಳವಿಸುವಿರಿಯಾಗಸಾಧನ | ಜಾಲವಿವರವಿವೇಕವನುವಿಸ್ತರಿಪುದೆಮಗೆಂದ || ೨ || ಎಂದಡೆಂದನುನಂದನಾನಿಜ | ನಂದನಂಗೆಲೆಮಗನೆಮಖಕೆಪು | ರಂದರನೆಪತಿವೃಷ್ಟಿಫಲವಿದುಮಖಕೆವೃಷ್ಟಿಯಲಿ || ಸಂದಸಚರಾಚರಕೆಜೀವನ | ವೆಂದುವೇದಪುರಾಣಮತವೆಲೆ | ತಂದೆತಾತ್ಪರ್ಯವನುತಿಳಿಯಿದನರಿದುಕೊಳ್ಳೆಂದ || ೩ || ಹೇಳುಕಥೆಯನುಗ್ರಾಮಶಾಂತಿಗೆ | ಬೋಳಿಸುವನೇಮಂಡೆಯನುತಳ | ವಾರನಾರಿಂಗೋಸುಗಿಂದ್ರನುಮಳೆಗಳನುಕರೆವ || ಬಾಳುವುದುಜನವಾರಿಗೋಸುಗ | ಹೇಳಿದವರಾರಿದನುನಿನಗೆಕ್ರ | ಮಾಳುತನದಲಿನಿನ್ನನೊಬ್ಬನಕಂಡೆನಾನೆಂದ || ೪ || ಮಗನೆನಗೆಯಲ್ಲಿದುನಮಗೆಗೋ | ವುಗಳಿಗಭ್ಯುದಯಾರ್ಥಮಾಳ್ಪುದು | ಜಗಕಿದನುತಾನೊಬ್ಬನಲ್ಲಮಹೇಂದ್ರಮುಖಕರ್ತು || ನಿಗಮಚೋದಿತಕರ್ಮವಿದುಮೂ | ಜಗದೊಡೆಯನಮರೇಂದ್ರನಾತನ | ಬಗೆಗೆತುಷ್ಟಿಪ್ರದವಿದೇಕರ್ತವ್ಯತಮಗೆಂದ || ೫ || ಅರಸುಗಳಿಗಿದುಧರ್ಮಸಚರಾ | ಚರಕೆತಾವಲ್ಲೊಡೆಯರಿದನಾ | ಚರಿಸದೊಡೆಬಲವೈರಿಮುಖವಿದುಮಾನ್ಯವೇನಮಗೆ || ಧರೆಯೊಳಗೆನಾವಾರುವನಭೂ | ಚರರುತರುಗಿರಿತೃಣಜಲಂಗಳು | ನಿರುತನಮಗೀಜೀವಿವೀಶಿಶುಪಶುಗಳೆಂಗೆಂದ || ೬ || ಆರಿಗಾವಕ್ರಿಯೆಗಳೊಳಗಧಿ | ಕಾರವಾರಿಂಗಾವುದುಕ್ತಾ | ಚಾರದನಾಚರಿಸುವುದುತತ್ತದ್ಗುಣಾನ್ವಿತರ || ಆರಿಗೀವಿಧಿವಿಹಿತವೆಂದುವಿ | ಚಾರಿಸದೆಮಾಡಿದಡೆತತ್ಫಲ | ಸೇರಲರಿವುದೆತಂದೆನಮಗಿದುವಿಹಿತವಲ್ಲೆಂದ || ೭ || ಅರಿದುಮಾಳ್ಪರುಕೆಲರುಕರ್ಮವ | ನರಿಯದನೇಕೆಲರುಮಾಳ್ಪರು | ನೆರೆವಿಚಾರಿಸಲದರೊಳಿ

ತತ್ಕರ್ಮಫಲಸಿದ್ಧಿ || ಅರಿದುವೊಳ್ಪರಿಗಹುದುಕರ್ಮವ | ನರಿಯದಾಚರಿಸುವರಿಗಾಗದು | ಬರಿದೆಬಿಸುಡದಿರುರಿಯೊಳಗೆಸಂಪನ್ನ
ಸಾಧನವ ||೮|| ಲೌಕಿಕವೊವೈದಿಕವೊನಿಮ್ಮವಿ | ವೇಕವಾವುದುವೊಳ್ಪದಿಂದೀ | ಪಾಕಶಾಸನಮುಖವಿದಾರಿಗೆಹಿತಧನಕ್ಷಯವ ||
ಏಕೆಮಾಡುವೆತನ್ನನುಡಿಕಿವಿ | ಗೋಕರಿಸದನುಕೂಲವಹದೇ | ವ್ಯಾಕುಳರುನೀವಿದನುಮಾಡೂದುಚಿತವಲ್ಲೆಂದ ||೯|| ರಾಗ
ಲೋಭಫಲಿಂದುಪೂರ್ವಕು | ಲಾಗತಕ್ರಮವಿದನುಸುರಪನ | ಯಾಗವನುಮಾಡುವಡೆದೇವವಿರೋಧಗತಿನಮಗೆ || ಆಗದಿದು
ಯುಮಗಿದನುನಿನ್ನಮ | ನೋಗತವಿದೇನೆನಲುಕರುಣಾ | ಸಾಗರನುಸಲಿಸಿದನುಮಗುಳಾತಂದೆಗುತ್ತರವ ||೧೦|| ಕರ್ಮದಿಂದ
ಲೆಜನಿಸುವುದುಜಗ | ಕರ್ಮದಿಂದವೆಬೆಳೆದುಮಗುಳಾ | ಕರ್ಮವಶದಲಿಲಯುವಹುದುಸಲೆಸಕಲಲೋಕವಿದು || ಕರ್ಮವೇಸ ಖದುಃ
ಖಕಾರಣ | ಕರ್ಮವೇಭವಬಂಧಕಾರಣ | ಕರ್ಮವೇಮೋಕ್ಷಕ್ಕೆಕಾರಣತಂದೆಕೇಳೆಂದ ||೧೧|| ಮಾಡುವರನೇಡ್ಯೆಪಗೆನೆನೆ |
ಕಾಡುವುದುಸಹಜೋಪಕಾರವ | ಮಾಡದವರನುಕಾಡಲರಿವುದೆಕರ್ತೃವಲ್ಲದೊಡೆ || ಮಾಡುವುಪಚಾರದನಿವೃತ್ತಿಯು | ಮಾಡು
ವುದುವೈರವನುಮುನ್ನವೆ | ಮಾಡದವರಿಗೆಮುನಿವರಾರೆಲೆತಂದೆಹೇಳೆಂದ ||೧೨|| ನಮಗೆ ಕೊಳ್ಪಡೆದೈವವೀಗಿರಿ | ಸಿವಹ
ವೀವನರಾಜಿತೃಣಜಲ | ವಿವಿಧಕಂದಫಲಪ್ರಸೂನಪ್ರಕರದಾನದಲಿ || ಭವನವಾದುದರಿಂದವೊಳ್ಪುದು | ಸವನವನುಗೋವರ್ಧ
ನಾದ್ರಿಗೆ | ದಿವಿಜಪತಿಗೇನೆಂದುವೊಳ್ಪರಿಮುಖವನಿದನೆಂದ ||೧೩|| ವೇದದಲಿವಿಪ್ರರಿಗೆವರ್ತನೆ | ಮೇದಿನಿಯರಕ್ಷೆಯಲಿನೃಪರಿ
ಗೆ | ಪಾದಜರಿಗಾದ್ವಿಜಕುಲದಶಿಶ್ರೂಷೆವೃತ್ತಿಯಲಿ || ಭೇದಿಸಲುವಾಣಿಜ್ಯಗೋರ | ಕ್ಷಾದಿವೈಶ್ಯರಿಗೀಚತುರ್ವಿಧ | ವಾದುದಂತ
ದರೊಳಗೆಗೋವೃತ್ತಿಗಳುನಾವೆಂದ ||೧೪|| ಸತ್ವರಜತಮವೆಂಬತ್ರಿಗುಣಾ | ವೃತ್ತಿಯಲಿಸಂಸ್ಥಿತಿಸಮುದ್ಭವ | ಮೃತ್ಯುಗಳು
ಸೇರುವವುಸಚರಾಚರದಜೀವರಿಗೆ || ಕೃತ್ಯವಾವುದುಸುರಪತಿಗೆನಾ | ವೆತ್ತಣವರೀಮುಗಿಲುಮಳೆಗಳ | ನಿತ್ತುಸಲಹುವದಾರ
ಜೋಗುಣದಾಜ್ಞೆಯಲಿಜಗವ ||೧೫|| ಈವುದುಪಹಾರವನುಧರಣೀ | ದೇವರಿಗೆಜೀವನವೆನಿಪ್ಪೀ | ಗೋವುಗಳಿಗಾವಾಸ
ವಹಗೋವರ್ಧನಾಚಲಕೆ || ದೇವರಾಜಮಖೋಕ್ತಸಂಭ್ರಮ | ರಾವಳಿಗಳೀಮುಖಕೆನೆರೆಸಂ | ಭಾವಿಸಲಿಸುರರಾಜನಿಂದಹ
ಸಿದ್ಧಿಯೇನೆಂದ ||೧೬|| ಧಾರುಣೀಸುರರಿಂಗೆಯುಸೆಯಲಿ | ಭೂರಿಭೋಜನಸಾಧನದವಿ | ಸ್ತಾರವಾಯುಸೆಪಳಿದ್ಯಪೆಸ
ರ್ಗರಿವಿವಿಧಫಲಶಾಕ || ಹೂರಿಗೆಯುಮಂಡಗೆಯುಘನಬಿಸು | ಹೂರಿಗೆಯುಸೇವಗೆಯುಬಹುವಿಧ | ಗೋರಸದಸಂವರಣೆಸ
ವನಿಸಲೀಕ್ಷಣದಲೆಂದ ||೧೭|| ಕ್ಷಿತಿಸುರರುಹೋಮಿಸಲಿಬೆಳಸಲಿ | ಹುತವಹನನಾವಾಹಿಸಲಿದೇ | ವತೆಗಳನುದೂರ್ವಾಂ
ಕುರಾಕ್ಷತೆಗಂಧಮಾಲ್ಯದಲಿ || ಘೃತದಧಿಕ್ಷೀರಾಮೃತಾನ್ನಾ | ದ್ಯತಿಶಯದಲುರುಗುಣಸುಶೀಲಾ | ನ್ವಿತಸುಗೋದಾನದಲಿ
ಮನ್ನಿಸುವುದುಮಹೀಸುರರ ||೧೮|| ಆಶ್ವಚಾಂಡಾಲಾದಿತನುಭೃ | ದ್ರಾಶಿಗಳಿಗನ್ನವನುನೆರೆಗೋ | ಗ್ರಾಸವನುಸಂಪಾ
ದಿಸುವುದೀವುದುಮಹಾಬಲಿಯು || ಲೇಸೆನಲುಗಿರಿವರಗೆಬಳಿಕಹು | ತಾಶನದ್ವಿಜಗಿರಿಗಳನುವಿಹಿ | ತಾಶನರುಬಲವಂದುಪ್ರೊ
ಡಮಡುವುದುಜನಸ್ತೋಮ ||೧೯|| ಮನಕೆಬಹಡಿದುತನ್ನಮತನಿ | ಮ್ಮನಿಬರಿಗೆಹಿತಲೇಸುಗೋದ್ವಿಜ | ಜನಕೆಪರಮಪ್ರೀ
ತಿಕರವೀಮಖವಿದೆಂದೆನಲು || ತನತನಗೆಖರೆಲೇಸುಕಾರ್ಯವಿ | ದೆನುತಕೃಷ್ಣನವಚನವನುಕೇ | ಳ್ದನಿಬರೊಬ್ಬುದ್ಧಿಯಲಿತ್ರೊ
ಡಗಿದರಾಮಹಾಮಖವ ||೨೦|| ಹೂಡಿದರುಭಂಡಿಗಳನೊಪ್ಪಿರೆ | ಮಾಡಿದಡಿಗೆಯನಾಮಹಾನ್ನವ | ಕೊಡೆತುಂಬಿಸಿಘೃತದಧಿ
ಕ್ಷೀರಾದಿಕಂಗಳನು || ಜೋಡಿಸಿದರಾಗಿರಿಗೆಮುಖವನು | ಮಾಡಿಸೀದ್ವಿಜತುಷ್ಟಿಯನುಹರಿ | ಗೂಡಿಬಲವಂದೆರಗಿದರುಬಲಸಹಿ
ತಗಿರಿವರಗೆ ||೨೧|| ಹರೆಕೊಳಲುಕೊಂಬುಗಳುಮೊರದ | ಬ್ಬರದಬಿರುದಿನಕಹಳೆಗಳಗಾ | ವರದರವದಲಿಗಿರಿಗೆಪೂಜೆಯ
ಮಾಡಿಬಲಿಗೊಟ್ಟು || ಕರವಮುಗಿಯಲುಮುಂದೆರೂಪಾಂ | ತರದಲಾಗೋವಳರುನೋಡಲು | ಗಿರಿಶಿರದಲೆಸುರಾರಿಕುಳಿರ್ದುಂ
ಡನಾಬಲಿಯ ||೨೨|| ಇತ್ತನೋಡಿರೆಶೈಲರಾಜನ | ಚಿತ್ತದೊಲವನುಪರಮಕಾರಣಿ | ಕೋತ್ತಮನಲಾಕೊಟ್ಟಬಲಿಯನು
ಕಂಗಳಿದಿರಿನಲಿ || ತುತ್ತುಗೊಳುತ್ತೈಧಾನೆಮರ್ಘಬಲ | ಶತ್ರುವಿನಪರಿಯಲ್ಲನೆರೆಕೃತ | ಕೃತ್ಯರಾದೆವುಪೊಡಮಡುವುವೆಂದನು
ಮುರಧ್ವಂಸಿ ||೨೩|| ಎಂದುಗೋಪರುಸಕಲಗೋಧನ | ವೃಂದಸಹಿತಾಪರ್ವತವಬಲ | ವಂದುಶಿಶುಪಶುವೃದ್ಧವನಿತಾ
ಕ್ಷೇಮವನುನಮಗೆ || ತಂದೆಕರುಣಿಸೆನುತ್ತಸಲೆಗೋ | ವಿಂದನೆಂದನುತನಗೆತಾನೇ | ವಂದಿಸ ತಮ್ಮೆಯಿಕ್ಕಿದನುಗಿರಿರಾಜನಿದಿರಿ
ನಲಿ ||೨೪|| ಕಾವನೀತನುತನಗೆಬಲಿಗಳ | ನೀವಮರ್ತ್ಯರನಿಯ್ಯದಿರ್ದಡೆ | ಜೀವದನಮರ್ತ್ಯರನುಸಿಂಹವ್ಯಾಘ್ರರೂಪದಲಿ ||
ಜೀವಹರಣವವೊಳ್ಪನೀಗಿರಿ | ದೇವನಿವನನುನುಡಿಸಿಕೇಳಿಕ್ಕೃ | ಪಾವನಧಿಮಾತಾಡುವನುಸಂದೇಹವಿಲ್ಲೆಂದ ||೨೫|| ಎನ
ಲುಕೃಷ್ಣನನುಡಿಗೆಗೋಪರು | ತನತನಗೆನಿಜನಿಜಮನೋರಥ | ವೆನಿತನಿತನೆಲ್ಲವನುಪೊಡವಂಟನಿಬರರ್ಥಿಸಲು || ವಿನಯಪರ
ರಿಂಗೀವೆನಿಷ್ಟವ | ನೆನುತಮೊಳಗುವಮುಗಿಲವೊಲುಕರ | ವನಜವನುನೆಗಹಿದನುನುಡಿದನುಶೈಲರೂಪದಲಿ ||೨೬|| ಅತ್ತ
ಲುಂಡನುಬಲಿಗಳನುಗಿರಿ | ಮಸ್ತಕದಲಾಕ್ರಮಿಸಿಕುಳ್ಳಿ | ರ್ದಿತ್ತಲುಣಬಡಿಸಿದನುತಾನೇತನಗೆಭಕ್ತಿಯಲಿ || ಮತ್ತೆಭೋಜನ
ಭೋಜ್ಯಭೋಜಕ | ತೃಪ್ತಿಯೆಂಬೀತ್ರಿವಿಧತಾನೇ | ತತ್ವದಿಂದೆಂಬುದನುತದ್‌ಜ್ಞರಿಗರುಪುವಂತಿರ್ದ ||೨೭|| ಪಡಿಸುವವೊ

ಲ್ಸುರಪತಿಯುಬಾ। ಯಾಡಿಸುತಬಣ್ಣಿಸುತಕೈಗಳ। ನೀಡಿಬಹುವಿಧಭಕ್ಷ್ಯಭೋಜ್ಯಂಗಳನುಜಠರದಲಿ ॥ ಹೂಡಿದನುಗೋಪರಿಗೆ ಹರುಷವ। ಮಾಡಿದನುಗೋಪಿಯರುಕೃಷ್ಣನ। ಪಾಡಿದರುಪರಮೋತ್ಸವದಸಂತೋಷದುಬ್ಬಿನಲಿ ॥ ೨೮ ॥ ಅತ್ತಲಮರಾಧೀಶನುದರದ। ಲೆತ್ತಿದುದುಘನತಾಪಮನದಲಿ। ಹೊತ್ತಿದುದುತನುಸಾವಿರಾಲಿಗಳುರಿಗಳನುಕೆದರಿ ॥ ಕೆತ್ತಿದವುಮೀಸೆಗಳುಹಲುಮೊರೆ। ವೃತ್ತಗೋಪಪ್ರಳಯಸಮಯದ। ಕೃತ್ತಿವಾಸನವೋಲುತಳೆದನುರೌದ್ರಮಯರಸವ ॥ ೨೯ ॥ ಅಕ್ಕಟಕಟಾನೋಡಿಗೋಪರ। ಸೊಕ್ಕನದನೇನೆಂಬೆನೆನ್ನನು। ಧಿಕ್ಕರಿಸಿಗಿರಿಗಿತ್ತರೇಕನ್ಯರಿಗೆಪೂಜೆಯನು ॥ ಹಕ್ಕಳಿಸಿಬಲಕೃಷ್ಣರೆಂಬರ। ಮಕ್ಕಳಾಟಿಕೆಮಾರಿಯಿದುತನ। ಗಕ್ಕುವದೆನಿಜಪೂಜೆಪರ್ವತಗೆಂದುಖತಿಗೊಂಡ ॥ ೩೦ ॥ ಮರದರೆನ್ನನುಭೂಪುತನ್ನಂ। ತರವನರಿಯದೆಕೃಷ್ಣನೆಂಬಾ। ಬರಿಮನುಷ್ಯನಬಲವನಚ್ಚಿನಿಜೋಪಹಾರವನು ॥ ಸುರಿದರೇಗಿರಿಗಹುದುತಪ್ಪೇ। ನರಿಪವೋಲುಮದಾಂಧರನುಹೆ। ದ್ದೊರೆಯುಲದ್ದುವೆನೀಕ್ಷಣವೆಗೋಕುಲವನಿದನೆಂದ ॥ ೩೧ ॥ ಸಂಕಲೆಯಕಡಿಪುಷ್ಕಳನಹೊರ। ಯಿಂಕೆಬಿಡುಸಂವರ್ತಕನನುಬಲ। ವಂಕದಲಿತಾನಿಹೆನುಕರೆಕರೆಮೇಘನಿಕರವನು। ಲೆಂಕರೊಡನೊಡೆಯುಂಗೆಸವನಿಸಿ। ಶಂಕನಾಚಿಕೆಯಾಯ್ತೆನುತ್ತಾ। ಹೂಂಕರಿಸುತಮರೇಂದ್ರನಾನೆಯನೇರಿಹೊರವಂಟ ॥ ೩೨ ॥ ಮೇಳವಿಸಿತ್ತೆಡಬಲದಲಾದಿಗು। ಪಾಲಕರುಸಂಗ್ರಾಮಗಡಗೋ। ಪಾಲಕರೊಳೊಡೆಯುಂಗೆಮಾಳ್ಪೆನೆನುತ್ತಗಗನದಲಿ ॥ ತೂಳಿತಮರಾನೀಕದೆಸೆಗಳ। ಮೂಲೆಬಿರಿಯಲುಬಂದನಾನೆಯ । ಮೇಲೆಸುರಪತಿಸುತ್ತಿಕವಿದುದುಮೇಘಸಂದೋಹ ॥ ೩೩ ॥ ಆಡಿದವುಮಿಂಚುಗಳುನಭದಲಿ । ಕೂಡೆಕತ್ತಲಿಸಿತ್ತುಕಲ್ಪದ । ಕೇಡಿನಂದದವೋಲುಗೋಕುಲದೆಂಟುದಿಕ್ಕಿನಲಿ ॥ ಜೋಡಿಸಿದುದಭ್ರದಲಿಬಲುಘಾ । ಳೀಡಿರಿದುದೋರಂತೆಸಲೆಹೊಡೆ। ದಾಡಿದವುಬರಸಿಡಿಲುಸುರಿದುದುವೃಷ್ಟಿಭೂತಳಕೆ ॥ ೩೪ ॥ ನೆಟ್ಟಕಂಭದವೋಲುಧಾರಾ । ವೃಷ್ಟಿಕೀಲಿಸಿತಿಳೆಯನಭ್ರವ । ನಟ್ಟಳಿಸಿಕುಱತ್ರೆವರನಾಗಿಡಬಲ್ಲಮರಗಳನು ॥ ನಿಟ್ಟಸುವಡರಿದಾಯ್ತುಮಿಗೆಕಂ। ಗೆಟ್ಟುಗೋಕುಲವೈದೆನೀರೊಳ । ಗಿಟ್ಟವೃತ್ತಿಕೆಯಂತ್ರನನದುದುನಿಮಿಷಮಾತ್ರದಲಿ ॥ ೩೫ ॥ ಸಿಡಿಲುಮಳೆಘಾಳಿಗಳಬಾಧೆಗೆ । ಸಿಡಿದುಶಿಶುಪಶುವೃದ್ಧವನಿತೆಯ। ರೊಡಲುಕಂಪಿಸಿಸೇಡುಗೊಂಡೀಡಾಡಿಮನೆಗಳನು ॥ ಒಡೆಯರಾರೆಮಗಿನ್ನುಕೃಷ್ಣನೆ। ಕೆಡಿಸಿದನುಕೈಗಾಯಹೇಳೆನು। ತಡಿಗಡಿಗೆಘೋಳಿಡಲುಮಳೆಮುದ್ರಿಸಿತುಗೋಕುಲವ ॥ ೩೬ ॥ ಎತ್ತಣದುಬಾಯ್ದೆಡದಿರೆಲವೊವಿ। ಪತ್ತುನಮಗೀಕೃಷ್ಣನಿರಲಿದ। ಕುತ್ತುಗೊಳ್ಳನೆಕಾಳುರಿಗಘನವೈಜಲಾಸಾರ ॥ ಉತ್ತಮನನಾಶ್ರೈಸಿನೀವೊಯೆ। ನುತ್ತಗೋಕುಲಜನಜಲವನೀ। ಸುತ್ತಬಂದುದುಬಳಲುತಾಗೊವಿಂದನಿದ್ದೆಡೆಗೆ ॥ ೩೭ ॥ ಕರುಗಳನುಮುಂದಿಟ್ಟುಮೋರೆಯ। ಮುರುಹಿಕೋಡ್ಗಳದೊಡ್ಡಿಹಲುಗಿಡಿ। ಗಿರಿದುಬಾಲವನೆತ್ತಿಬಹಳಾಸಾರದಲಿನಡುಗಿ ॥ ಅರಸುತಚ್ಯುತನಂಘ್ರಿಕಮಲದ। ಮರೆಯಹೊಕ್ಕವುಕಾಲಕರ್ಮಾ। ತುರರವೋಲಳವಳಿದುತುರುಮಿಂಡುಗಳುಸಂದಣಿಸಿ ॥ ೩೮ ॥ ರಕ್ಷಿಸೆಲೆಗೋವಿಂದಗೋಕುಲ । ರಕ್ಷಕನೆತ್ರೈಲೋಕ್ಯರಕ್ಷಾ । ರಕ್ಷಕನೆರಕ್ಷಿಸುದುರಂತಮದಾಂಧಶಿಕ್ಷಕನೆ ॥ ಅಕ್ಷಯನೆಶರಣಾಗತಾರಿಕು। ಲಕ್ಷಯನೆಕಾರುಣ್ಯರಸಜ। ನ್ಮಕ್ಷಯನೆಶರಣಾಗೆನುತ್ತಿರ್ದುದುಜನಸ್ತೋಮ ॥ ೩೯ ॥ ಅಂಜದಿರಿಗೋವಳರುಗೋಪಿಯ । ರಂಜದಿರಿಗೋವುಗಳಗಾನಿಹೆ। ನಂಜಬೇಡಮರೇಂದ್ರನಾಟೋಪಕ್ಕೆಬೆದರದಿರಿ ॥ ಅಂಜುವರಿಗಭಯವನುಗಿರಿವರ। ನಂಜದಿರಿನಿಮಗೀವನೆನುತವೆ। ಕಂಜನಾಭನುಕರವನೆಗಹಿದನಖಿಳಪರಿಜನಕೆ ॥ ೪೦ ॥ ಉಂಬೆಗಂಡೂರವರಬಲಿಗಳ । ದಿಂಬುಗೊಡುಗೋಕುಲಕೆಬಳಲಿಸ। ದಂಬುಧಿಯಮಧ್ಯದಲಿಮುಳುಗುತ್ತೇಳುತಿದೆನೋಡ ॥ ನಂಬಿದವರನುಕಾವುದೆನುತಕ। ರಾಂಬುಜವನೀಡಿದನುನಸುನಗು। ತಂಬುಜಾಕ್ಷನುನೋಡಿಗೋವರ್ಧನಮಹಾಚಲಕೆ ॥ ೪೧ ॥ ಎಡದಕೈಯ್ಯನುನೀಡಿಗಿರಿಯನು। ತುಡುಕಿನೆಗಹಿದನೇನನೆಂಬೆನು। ಕೊಡೆಯನೆಗಹುವವೋಲುಖಗಮೃಗನಿಕರವನುಸಹಿತ ॥ ಹಿಡಿದುಗೋಪರಿಗೆಂದನೆಲ್ಲರು । ತಡೆಯದಿತ್ತಲುಬನ್ನಿನೀವೊ। ಗ್ಗೊಡೆಯದೆಲ್ಲಾಶಿಶುಪಶುಪ್ರಿಯಬಾಂಧವರುಸಹಿತ ॥ ೪೨ ॥ ಬೀಳದೀಗಿರಿತನ್ನಕೈಯ್ಯಿಂ। ದೇಳದಿಟವನುಮಾಡಿದೆಲ್ಲರು । ಶೈಲವಾಸದಲಿಹುದುಮಳೆತ್ರೆಗೆವನ್ನಗೆಂದೆನುತ ॥ ಕೇಳುತಪೆಗೋವಳರುಕಡುಪೇ। ಹಾಳಿಮಿಗೆಹರುಷದಲಿತಂತಂ। ಮಾಲಯವಹೊಗುವಂತೆಹೊಕ್ಕರುಸಕಲಜನನಿವಹ ॥ ೪೩ ॥ ಹೊಕ್ಕುಕರುತುರುಸರಕುಗಳುಸಹಿ। ತಿಕ್ಕಿಹಕ್ಕಿಯಮಾಡಿಗಿರಿಯಲಿ। ಶಕ್ರನನುನಗುವಂತೆನಿಶ್ಚಿಂತೆಯಲಿಗೋವಳರು ॥ ಇಕ್ಕಿಲದಮಳೆಘಾಳಿಸಿಡಿಲನು। ಮಿಕ್ಕುಹರಿಮೂರ್ತಿಯನುಯನೆಯನು। ಇಕ್ಕದೀಕ್ಷಿಸುತಿರ್ದರಿತರದಚಿಂತೆಯನುಮರದು ॥ ೪೪ ॥ ವನದಮೃಗಖಗನಿಕರವಾತ। ದ್ವನಪುಳಿಂದಪುಳಿಂದೆಯರುಸಹಿ। ತಿನಿತುಜನವಾನಂದದಲಿಗಿರಿವಿವರವಾಸದಲಿ ॥ ಅನಿಮಿಷಾಕ್ಷಿಗಳಾಗಿಕೃಷ್ಣಾ। ನನಸರೋಜವನೀಕ್ಷಿಸುತಸಂ। ಜನಿತಸುಖದಲಿಮರದರಾದಿವರಾತ್ರಿವಿಭ್ರಮವ ॥ ೪೫ ॥ ಹಸಿವುತೃಷೆಗಳಮರದುದಾಜನ। ವಿಸರಕೃಷ್ಣನಮೂರ್ತಿಸುಧೆಯನು। ಶಶಿಮುಖಿಯರೊಪ್ಪಿರಲುಪಾಡುತಕೃಷ್ಣಗೀತವನು ॥ ಓಸದುಕಣ್ಣಿವಿಗುಡುತೆಜುಲಿಸೇ। ದಿಸುತಪುಳಕೋಚ್ಚಿನ್ನನೇತ್ರ। ಪ್ರಸರದಲಿಸುಖವೆನಿಸಿದರುನಿತ್ಯಾತ್ಮಭಾವದಲಿ ॥ ... ... ॥ ೪೬ ॥

ಅಂತು ಸಂಧಿ ೨೩ಕ್ಕಂ ಪದನು ೧೦೫೭ಕ್ಕೆ ಮಂಗಳಮಸ್ತು.

ಇಪ್ಪತ್ಮೂರನೆಯ ಸಂಧಿ.

ಸೂಚನೆ॥ ನತಸುರೋತ್ತಮಮೌಳಿಮಣಿಸಂ । ಘಿತಪದಾಬ್ಜನಖೇಂದುಮಣಿನಿ । ರ್ಜಿತನಿಜಾಶ್ರಿತತಾಪ
ನೆಸೆದನುಕೃಷ್ಣನವನಿಯಲಿ ... ...

ಪದನು॥ ಕೇಳುನೃಪಕಮಲಾಕ್ಷನರ್ಭಕ । ಲೀಲೆಯನುಸುರಪತಿಯಗರ್ವವ । ಕೀಳುವಂತಿರೆಕಿತ್ತುವಾಮಕರಾಗ್ರಲಿ
ಗಿರಿಯ ॥ ಏಳುದಿನಪರಿಯಂತಚಲಿಸದೆ । ಘೋಳಿಮಳೆಸಿಡಿಲುಗಳಭಯದಲಿ । ಪಾಲಿಸಿದನಾತ್ಮಾಶ್ರಿತರನಂದಖಿಳಗೋಕುಲವ ॥೧॥
ಅರಸಕೇಳಮರೇಂದ್ರನಮರರು । ವೆರಸಿಗಗನಾಂಗಣದಲಂಬರ । ಚರವಧೂಪರಿಗೀಯಮಾನಚರಿತ್ರನೊಲವಿನಲಿ ॥ ಪರಮವಿ
ಭವದಲೆಸದಿರಲುದಿ । ಕ್ಕರಿಯಮೇಲೋಲಗವನಿತ್ತಾ । ದರದೀಭ್ರದಧಾಳಿಯನುಮುನ್ನಟ್ಟಿಗೋಕುಲಕೆ ॥೨॥ ಸವದಮಾಕೆ
ಲ್ಪಾಂತಘನವಂ । ಸವಘನಶ್ರೀಗೆನಲುನೆರೆಪರಿ । ಭವದಕೈಬೆಳದಂತೆಧಾರಾವೃಷ್ಟಿಯನುಸುರಿದು ॥ ಭುವನವಳಿದರೆಕೃಷ್ಣನವ
ರಿಗೆ । ಸವನಿಸದುಲಯವೆಂದುಸಲೆಸಾ । ರುವವೊಲಿರ್ದವುಸಿಡಿಲುಗಳುವಿಫಲಪ್ರಯತ್ನದಲಿ ॥೩॥ ನೋಡಿತಲೆದೂಗಿದನಿದೆತ್ತಣ
ಕೇಡುತನಗೀಪರಿಯಮೇಘದ । ಮೂಡಿಗೆಯಮಳೆಗೀಗಲೀಜಗವೇಳುಕದಡುತಿವೆ ॥ ಆಡಲೇತಕೆಪರ್ವತವಮರೆ । ಮಾಡಿಪಾ
ಯಾರಕ್ಷೆಯನುನೆರೆ । ಮಾಡಿದನುಗೋಕುಲಕೆಗೋವಳನೊಬ್ಬನಕಟೆಂದ ॥೪॥ ಕೇಳಿದರಿಯವುಕಿವಿಗಳಿದನಿಂ । ತಾಲಿಗಳುಕಂ
ಡರಿಯವದ್ಭುತ । ದೇಳಿಗೆಯನೇನೆಂಬೆನಿತ್ತುದುಮಾನಭಂಗವನು ॥ ತೋಳಬಲುಹಿಂನೆಂತುಟೋನರ । ಗೇಳುದಿನಪರಿಯಂ
ತಗಿರಿಯನು । ತಾಳುವರ್ಭಕನಾಶನಾರೋಶಿವಶಿವಾಯೆಂದ ॥೫॥ ಅರಿತೆನಾನೆಲವೇವೊಕೃಷ್ಣನ । ನಿರುಗೆಯನುಸಾಕ್ಷಾತನ
ವ್ಮೆ । ಲ್ಲರನುಸಲಹುವವಿಷ್ಣುವೇನರನಾದಗಡೆಧರೆಯ ॥ ಹೊರೆಯನಿಳುಹಲುತೆಗೆಯಹೇಳೋ । ಸೆರೆವನೆಗೆಮೇಘವಸುನಮ
ತಿ । ಮರದೆನಕಟಾಕೆಟ್ಟೆನೆಂದನುನಡುಗಿದೇವೇಂದ್ರ ॥೬॥ ಹರದುದಭ್ರಸ್ತೋಮವಮರೇ । ಶ್ವರನಹುಂಕೃತಿಯೊಡನೆಸಿಡಿ
ಲುಗ । ಳುರವಣಿಗಳುಪಶಮಿಸಿದವುವಂದಿಗಳರವದೊಡನೆ ॥ ಧರೆಯದುರ್ದಿನವೆಡಗಿದುದುದು । ರ್ಧರವೆನಿಪಗೋಕುಲವಿಪತ್ಸಾ
ಗರದೊಡನೆನಿಮಿಷಾಂತರಕೆನರನಾಥಕೇಳೆಂದ ॥೭॥ ಬಿಂಕಬೀತುದುಮಳೆಗಿಳೆಗೆನಿ । ಷ್ಕಂಪವಾಯ್ತೆಗೋಪರಿರನಿ । ಶ್ಶಂಕೆ
ಯಲಿಹೊರವಡುವುದಂಜದಿರೀಗುಹಾಂತರವ ॥ ಮುಂಕೊಳಿಸಿಗೋಧನವನೆಂದಾ । ಪಂಕಜಾಕ್ಷನುನಗುತನಿಜಕರ । ಪಂಕಜ
ಧೃತಗೋತ್ರನೆಂದನುಗೋಪವೃದ್ಧರಿಗೆ ॥೮॥ ಅರಿಯರಾಮಳೆಘೋಳಿಸಿಡಿಲ । ಬ್ಬರಣೆಯನುಭಯದುಃಖವನುಕಂ । ದೆರದು
ಕೃಷ್ಣನಮೂರ್ತಿಯನುಮುಕ್ಕುಳಿಸಿಮೈಮರದು ॥ ನೆರೆಯದಾತ್ಮತೆವೆತ್ತುಸುಖಸಾ । ಗರದಲೋಲಾಡುತ್ತವಿಶ್ವಂ । ಭರನ
ನುಡಿಗೆಚ್ಚತ್ತರೊಬ್ಬರನೊಬ್ಬರೀಕ್ಷಿಸುತ ॥೯॥ ಉಲಿವಕರುತುರುಗಳಲಿಕೋಲಾ । ಹಲದಕೊಂಬುಕೊಳಲ್ಗಳಲಿಗೋ । ಕು
ಲವಹೊರವಡುವಂತೆಗಿರಿವಿವರವನುಹೊರವಂಟು ॥ ಕೆಲರುಸುರಪನನೇಡಿಸುತಕೆಲ । ಕೆಲರುಕೃಷ್ಣನಬಣ್ಣಿಸುತವಂ । ಗಳದ
ಲಾಗೋಕುಲಕೆಬಂದುದುಗೋಪಜನನಿವಹ ॥೧೦॥ ಇಳುಹಿದನುಸುರಪತಿಯಗರ್ವವ । ನಿಳುಹುವಂತಿರಲದ್ರಿಯನುತಂ ।
ನೊಳಗೆಕುಳಿತೆವರುಗಲೊಡಂಬಟ್ಟವುಸುರೇಂದ್ರನಲಿ ॥ ನಳಿನನಾಭನಚಿತ್ತದೊಲವೆಂ । ತಳವಡುವುದೆಂಬಂತೆಹರಿಗೋ । ಕುಲ
ವಹೊಕ್ಕನುನೆನೆವವರಹೃದಯವನುಹೊಗುವಂತೆ ॥೧೧॥ ಉಲಿವಸುರದುಂದುಭಿಯಕಹಳಾ । ವಳಿಯತುಂಬುರನಾರದರವಾ ।
ಗಳೆಸುಗೀತದಸುರವಧೂವಿಭ್ರಮದತಾಂಡವದ ॥ ಕಳಕಳದಸುರವೃಷ್ಟಿಕುಸುಮಾ । ವಳಿಯಗೋಪೀಗೋಪಜನಸಂ । ಕುಳದ
ಲಂದೈತಂದುಹೊಕ್ಕನುನಂದಗೋಕುಲವ ॥೧೨॥ ಮುಂದೆತುರುಧೂಳಿಗಳಲೊಪ್ಪಿರ । ಲಂದವಡದಳಕಾವಳಿಯಚೆಂ । ದೊಂ
ದೊಡಿಗೆಗಳದಿವ್ಯಪೀತಾಂಬರಘನದ್ಯುತಿಯ ॥ ಮಂದಹಾಸದನಗೆಯದೀಧಿತಿ । ಇಂದೆಸೆವಮಂಗಳಮುಖಾಬ್ಜದ । ವಂದ್ಯಚರಣ
ರದೇವನೈತಂದನುನಿಜಾಲಯಕೆ ॥೧೩॥ ವಾಮವಾಮಭುಜಾಗ್ರದಶ್ರೀ । ಧಾಮನಂಸದಮೇಲೆಕಮಲ । ಭ್ರಾಮಣದಲಂದೆ
ಸೆಯಲಂಘ್ರಿಸರೋಜಯುಗಳದಲಿ ॥ ಭೂಮಿಗಾನಂದವನುಕೊಡುತು । ದ್ದಾಮಗೋಪೀನಯನಭೃಂಗ । ಸ್ತೋಮಸೇವಿತ
ಮೂರ್ತಿಬಿಜಯಂಗೈದನೊಲವಿನಲಿ ॥೧೪॥ ಅತ್ತಲಮರಾಧೀಶ್ವರನತನು । ಹೊತ್ತಿಹೊಗದುದುಮಾಸುಷುಮಾಡಿದ । ಕೃತ್ಯ
ದನುತಾಪದಲಿಸುಯಿದ್ದುಳಲುತ್ತಮನದೊಳಗೆ ॥ ಎತ್ತಣದುತನಗೀಮತಿಭ್ರಮೆ । ಕೆತ್ತುದರವಿನಕಥನೆನುತ್ತನಿ । ರಸ್ತಮಾನಸ್ತಂಭ
ನಾದನುನಿಮಿಷಮಾತ್ರದಲಿ ॥೧೫॥ ಮಂದಮತಿನಾನಾದೆನೇಗುವೆ । ನಿಂದುಗತಿಯಾರೆನುತಲಾಗೋ । ವಿಂದನಭಿಮುಖಕಂ
ಜಬರಲಂಮದೆಕೃತಘ್ನತೆಗೆ ॥ ಸಂದನಜಲೋಕಕ್ಕೆನಭದಲಿ । ನಿಂದುಜಯಜಯಯೆನುತಚರಣ । ದ್ವಂದ್ವದಲಿಮೈಯಿಕ್ಕಿಬಿಂ
ನಹಮಾಡಿದನುಹದನ ॥೧೬॥ ಕೇಳಿದನುಬಿಂನಹವನೆಲವೋ । ಕಾಳುಮಾಡಿದೆಕೃಷ್ಣನಾರೆಂ । ದಾಲಿಸದೆನರನೆಂದುಗೋವಳ
ನೆಂದುಗರ್ವದಲಿ ॥ ಹೇಳನವನಾಚರಿಸಿತನಗಿದ । ಹೇಳಬಂದ್ಯೆಕಥೆಯನಗ್ಗದ । ಖೂಳರರಸನುನೀನೆನುತಜರದನುಸರೋಷಿಭ
ವ ॥೧೭॥ ಭಾರಹೆಚ್ಚಿದಡವನಿಸೈರಿಸ । ಲಾರೆನೆಂದೊರಲಿದರೆನಾನಂ । ದಾರನಭ್ಯರ್ಥಿಸಿದೆನಭಯವನಾರುನಮಗೆಂದು ॥
ಸೈರಿಸುತಮಾಡಿದಪರಾರವ । ತಾರವನುಮತ್ತಿಂದುನಿನ್ನವಿ । ಕಾರವಾರೊಡನಕಟಸ್ವಾಮಿದ್ರೋಹವಾಯ್ತೆಂದ ॥೧೮॥

ಅಹಹಸಾಕಿನ್ನೀನುಸ್ವಾಮಿ । ದ್ರೋಹಿಕೋಗಾಶ್ರಿತಕೃಪಾನಿ । ವಾಹಕನನಿಜಭಕ್ತಕುಲಬಾಂಧವಮರೆವೇಕೈ ॥ ದ್ರೋ
ಹವನುಪರಿಹರಿಸುನಿಷ್ಪ್ರ । ತ್ಯೂಹದಲಿಜೀವಿಸುವುವೆಲೆದು । ದ್ರೋಹಿಗಳದಾವಾರಹೋಗಿದಕೋಜನೇಡೆದ ॥ ೧೯ ॥
ಸುರಭಿಸುಹಿಲಿವುಗಳಿಹೋಗೆಂ । ನರಸತಿತೆಗೆನಾಳ್ದನೆಡೆಗೆಂ । ನಾರದಯಾನಿಕೆಯೆಡೆಗೆಯುನ್ನಯುತಂದೆಯೆಡ್ಡೆಡೆಗೆ ॥ ಇರದೆ
ಹೋಗೀಕ್ಷಣವೆನಸರ । ಸಿರುಹದಲಿವ್ಯೆಯ್ಯಿಕ್ಕುಮುನಿನುತ । ಚರಣಸೋಲವನುಪಡೆಫೆಹೇಕರುಣಾಳುಹೋಗೆಂದ ॥ ೨೦ ॥
ಕ್ಷಮಿಸುವನುಕರುಣಾಳುನಿನ್ನ । ಕ್ರಮವನಾನತಬಂಧುಲಕ್ಷ್ಮೀ । ರಮಣನಂಬಿದಿರೆಂದುನೆರದೋಲಗದಮಧ್ಯದಲಿ ॥ ಕಮಲ
ಭವನಾಜ್ಞಾಪಿಸಲುಪದ । ಕಮಲದಲಿತಲೆವಾಗಿಬೀಳ್ಕೊಂ । ಡಮರಪತಿಸುರಧೇನುಸಹಿತ್ಯೆತಂದನೀಧರೆಗೆ ॥ ೨೧ ॥ ಪರಿಮಿತ
ದಶ್ರೀತಂದುಕೃಷ್ಣನ । ಚರಣದಲಿಪ್ರೌಢವಂಬುಸವಮಣಿ । ಕಿರಣಕೀರ್ಣನಖೇಂದುಮಂಡಿತಮೌಳಿಯಾದೆನಿಸಿ ॥ ಕರಯುಗವ
ಮುಗಿದೆದ್ದುಲಜ್ಜಿಸಿ । ಶಿರವೆರಗಿವಿಹಿತಾಪರಾಧ । ಸ್ಮರಣೆಮನದಲಿಮೂರ್ತಿಸಲುಸುರನಾಥನಿಂತೆಂದ ॥ ೨೨ ॥ ಶುದ್ಧಸತ್ವಾತ್ಮ
ಕನೆಸತ್ವಸ । ಮೃದ್ಧಗುಣಸೇವಿತನೆತತ್ಪ್ರತಿ । ಸಿದ್ಧರಾಜಸತಾಮಸಾಖ್ಯಗುಣೋರುವಿಗ್ರಹನೆ ॥ ಶುದ್ಧಸಾತ್ವಿಕಭಕ್ತಕರುಣಾ ।
ಲಬ್ಧಹೃದಯನೆರಕ್ಷಿಸೆನ್ನನು । ಶುದ್ಧಜಡನನುಬುದ್ಧಿಹೀನನನೆಂದನಮರೇಂದ್ರ ॥ ೨೩ ॥ ಸತ್ವಗುಣನಿಧಿಯೆನಿಪನಿನ್ನೊಳ ।
ಗೆತ್ತಣಮುಕೇಳತರಗುಣದು । ವೃತ್ತಿಗಳುಶೋಭಾದಿಗಳುನಿರ್ವ್ಯಂಗ್ಯರೂಪನಲಿ ॥ ಚಿತ್ತವಿಸುಮನ್ಮುಖವಿನಾಶನ । ವೃತ್ತಿಯಿಂದು
ಮದನುಗ್ರಹಾರ್ಥವು । ಹೊತ್ತಮನೆಶರಣಾಗುಕರುಣಾನಿಧಿಯೆತನಗೆಂದ ॥ ೨೪ ॥ ಮತ್ತನಾನುಮದಾಂಧಶೀಕ್ಷಾ । ವೃತ್ತಿನೀ
ನುದುರಂತಮೋಹೋ । ದ್ವೃತ್ತನಾನುವಿಮೋಹನಾಶನುವಿಮಲಗುಣನೀನು ॥ ಉತ್ತಮರಿಗಧಿದೈವನೀನಘ । ವೃತ್ತರಿಗೆಕುಲ
ದೈವನಾನೆಲೆ । ಭೃತ್ಯವತ್ಸಲದೇವಶರಣೆಂದನಮರೇಂದ್ರ ॥ ೨೫ ॥ ದೇವಯಾಗಂಗಳಲಿಹವಿಗಳು । ದೇವರಂಗೋಪಾಂಗ
ವೆಂಬೀ । ಭಾವಿಸುತಯಜಮಾನನಿತ್ತುದನುಂಡುಜಗವರಿಯೆ ॥ ಜೀವಿಸುವನಿನ್ನಂಘ್ರಿಕಮಲದ । ಸೇವಕರುನಾವೆತ್ತನಿನಗೆಕ್ಕ ।
ತಾವಮಾನದಮಾಪಕಾರಿಗಳೆತ್ತಲಕಟೆಂದ ॥ ೨೬ ॥ ಒಡೆಯನೀನೆಮಗೆಲ್ಲರಿಗೆನಿ । ಮ್ಮಡಿಯಸೇವೆಯುಮಾಳ್ಪಸಲುಗೆಯು । ಪಡ
ವೆನೆಂದುಬ್ಬರಿಸಿವೃಥಗೀಶಾಭಿಮಾನದಲಿ । ಒಡೆಯನನುಕಂಗಾಣದೀಪರಿ । ಕೆಡುವಪಾಪಿಗಳಾವುದೇವರ । ಬಡಿಗೆಗಲ್ಲದೆಬಾಗಲರಿ
ಯುವುಬಿಂಕವಿದನೆಂದ ॥ ೨೭ ॥ ತಪ್ಪಿದೆನುತಾನೊಡೆಯನಂಘ್ರಿಗೆ । ದರ್ಪವಿಕಳತ್ರಯಿಂದಮರವೆಯು । ಕಪ್ಪಿನಲಿಕಂಗೆಟ್ಟುಕೆಡದೆ
ನನಾಥನೆಂದೆನಿಸಿ ॥ ತಪ್ಪಿದಡೆಶಿಶುತಾಯ್ಗೆಶಿಶುವಿಗೆ । ತಪ್ಪವಳೆಕಾರುಣ್ಯನಿಧಿನೀ । ತಪ್ಪಹಾರುವಡುಂಟೆಬೇರೆನ್ನೆನಗೆಗತಿಯಂತ ॥
ಅಂಗಿಗಂಗಕೃತಾಪರಾಧದ । ಭಂಗಿಯಲಿಮಾನಚ್ಯುತಿಯೆಸ । ರ್ವಾಂಗಿಯಹನಿನ್ನಂಗವಲ್ಲಾಸುರನರೋರಗರು ॥ ಜಂಗಮಸ್ಥಾ
ವರಗಳೆಂದಹ । ಭಂಗವಾವುದುಭಾಪುಕರುಣಾ । ಪಾಂಗಸಂಸಾರಿಕನೆಶರಣಾಗೆಂದನಮರೇಂದ್ರ ॥ ೨೯ ॥ ಎಂದುಚರಣದಲೆ
ರಗಿಕರುಣಿಸು । ತಂದೆಕೃಷ್ಣಕೃಪಾನಿಧಿಯೆಗೋ । ವಿಂದಗೋಕುಲರಕ್ಷಕನೆತ್ರಿಮದಾಂಧಶಿಕ್ಷಕನೆ ॥ ಇಂದಿರಾವಲ್ಲಭನೆದೇವ
ಮು । ಕುಂದರಕ್ಷಿಸೆನುತ್ತಿರಲುನಗು । ತೆಂದನಸುರಾರಾತಿಘನಗಂಭೀರವಚನದಲಿ ॥ ೩೦ ॥ ಮರದುನೀನಿರಲಾಗದೆನುತೆ । ಜ್ಜ
ರಿಸಲೋಸುಗಮಗನೆಮುಖವನು । ನೆರೆವಿಭಂಡಿಸಿದೆನುಮಹೇಂದ್ರಶ್ರೀಮದಾಂಧನನು ॥ ಮುರಿದೆನುಗ್ರಹಿಸಿದೆನುಮನದಲಿ ।
ಕೊರತೆಯನುತಾಳದಿರುತನ್ನುವ । ನರಿಯಲೀಯದೆಲೈಮದಾಂಧತಮಿಸ್ರವೀಜಗವ ॥ ೩೧ ॥ ಮತ್ತೆಗೆಯನ್ನಲ್ಲಿಮತಿನಿ । ರ್ವೃ
ತ್ತಿಸದುತನಗಾಮದಾಂಧರ । ವೃತ್ತಿಯಲಿಕೃಪೆಸೇರಲರಿಯದುಕೇಳುನಿಜಮತವ ॥ ಕತ್ತಲೆಗೆಬೆಳಗೀಗೆಸೇರುವೆ । ಯೆತ್ತಣದು
ನೀನಂಜದಿರುನಿಜ । ಭೃತ್ಯನಲ್ಲಾಯೆನುತಮೈದಡವಿದನುಸುರಪತಿಯ ॥ ೩೨ ॥ ಹೋಗುಮಗನೆಮದಾಂಧತನಕೊಳ । ಗಾಗ
ದೆನ್ನಾಜ್ಞೆಯನುಮಾಡುವ । ನಾಗಿನಿನ್ನಧಿಕಾರದಲಿನೀನಿಹುದುಗರ್ವಿಸದೆ ॥ ಲೋಗರಂತಿರೆವಿಷಯನಿಸ್ಪೃಹ । ನಾಗಿವಿಶ್ವಾಸವ
ನುಮಾಡದೆ । ಯೋಗಸುಖಸಂಪನ್ನನಾಗಿಹುದೆನುತಸೇವಿಸಿದ ॥ ೩೩ ॥ ಬಂದುಪಾದಾವನತನಾದವು । ರಂದರಂಭಯವನು
ಕೊಡುತಮು । ಕುಂದನಾಸುರಭಿಯನುಮನ್ನಿಸಲುಚಿತವಚನದಲಿ ॥ ತಂದೆಕೃಷ್ಣಕೃಪಾನಿಧಿಯೆಗೋ । ವಿಂದಗೋಕುಲದರಸ
ಮುನಿಜನ । ವಂದ್ಯಚಿತ್ತೈಸುವುದುಬಿನ್ನಪವೆಂದಳಾಸುರಭಿ ॥ ೩೪ ॥ ವಿಕ್ರಮುತ್ರೀಮದದಲೊಡೆಯಂ । ಗಕ್ರಮವನಾಚರಿಸಿಭ
ಯದಲು । ಶಕ್ರಮಿಸಲೆಜನಲ್ಲಿಗಾಜ್ಞಾಪಿಸಿದನಜನೆನಗೆ ॥ ಶಕ್ರಸಹಿತ್ರಲೆತಾಯೆಕೃಷ್ಣಂ । ಗಕ್ರಿಯಂಗಭಿಷೇಕವನುಚಿತ । ವಿಕ
ಮಂಗಾಚರಿಸಿಬಹುದುಮನುಷ್ಯವಿಗ್ರಹಗೆ ॥ ೩೫ ॥ ಎಂದಡಜನಾಜ್ಞೆಯಲಿತಾನ್ಹೈ । ತಂದೆನಭಿಷೇಕವನುಮಾಡಿಸ । ಲೆಂದನು
ಜ್ಞೆಯನೀವುದೆನಗೆಲೆಗೋವನೋಕುಲಕೆ ॥ ಇಂದ್ರನಾದುದರಿಂದಲೀಗೋ । ವಿಂದನಾಗಲಿವೆಳ್ಕೆನುತಸಾ । ನಂದದಲಿಬೇಡಿದಳ
ನುಜ್ಞೆಯನಮರಕುಲಧೇನು ॥ ೩೬ ॥ ಪಾಕಶಾಸನನಕ್ರಮನಜಗ । ದೇಕನಾಥನುಮರದುಮುಗುಳಭಿ । ಷೇಕಕೆತ್ತನನುಜ್ಞೆ
ಯನುಬಹುಬಿಂದುಜಂಗುಳನ ॥ ನಾಕದಲಿಯುವರೆಸಗಲೆಂದಾ । ಲೋಕಪಾಲರುಸಹಿತಭುವನಾ । ನೀಕಜನವೈತಂದುದೊಂದೇಸಿ
ಮುಷವಮಾತ್ರದಲಿ ॥ ೩೭ ॥ ಬಂದುದಜಭವಮುಖ್ಯಸುರಮುನಿ । ವೃಂದವಾಲೋಕಾಧಿಪತಿಗಳ । ವೃಂದವಾಗಂಧರ್ವಕಿನ್ನರ
ಸಿದ್ಧಖವೃಂದ ॥ ಸುದತಿರಣಜುಷ್ಟೇರಾಕ್ಷಸ । ವೃಂದವೂಪ್ಸರಮರವನಿತಾ । ವೃಂದವಾವೃಂದಾವನಾಂತರಕೆಂದುನಲವಿನಲಿ

ವಿಷ್ಟರಶ್ರವಗೆಂಟುದಿಕ್ಕಿನ । ಲಷ್ಟದಿಗ್ಗಜಗಳುಕರಾಗ್ರ । ಕೃಷ್ಟತೀರ್ಥಜಲಂಗಳಲಿಪಂಚಾಮೃತಂಗಳಲಿ ॥ ತುಷ್ಟಿವಡಿಸಿದರಚ್ಯುತನನುಪ । ವಿಷ್ಟವಾರ್ಗವಮಹಾಭಿಷೇಕವಿ । ಶಿಷ್ಟಮಂತ್ರಂಗಳಲಿವಿಪ್ರೋತ್ತಮರುವಿವರಿಸಲು ॥ ೩೯ ॥ ಪಾಡಿದರುಗಂಧರ್ವರೊಪ್ಪಿರ । ಲಾಡಿದರುದೇವಿಯರುನೃತ್ಯವ । ನೀಡಿರಿವನವರಸಗುಣಾಲಂಕಾರರಂಜಿಸಲು ॥ ತಾಡಿಸುವಬಹುವಿಧದವಾದ್ಯದ । ಜೋಡಣೆಯುಮಂಗಳತೆಮೆರೆಯಲು । ಮಾಡಿದರುಮುರವೈರಿಗಭಿಷೇಕದಮಹೋತ್ಸವವ ॥ ೪೦ ॥ ಆದುದಭಿಷೇಕದಮಹಾಸಂ । ಪಾದನದಮಂಗಳತ್ರಿಮಿಗೆದಾ । ಮೋದರಗೆಬ್ರಹ್ಮಾಂಡನಿಕರನಿವೇಶಿತೋದರಗೆ ॥ ವೇದವೇದ್ಯಂಗಜಭವೇಂದ್ರಸು । ರಾದಿವಂದ್ಯಂಗನುಪಮಾನಂ । ದೋದಧಿಗೆಕೃಷ್ಣಂಗೆನಿಜಪರಿಪೂರ್ಣತುಷ್ಟಂಗೆ ॥ ೪೧ ॥ ಮಲ್ಲಿಗೆಯಮಳೆಸುರಿದುದಂಬರ । ವೆಲ್ಲತನ್ಮಯವೆನಲುಸುರವರ । ವಲ್ಲಭೆಯರಂಜಲಿಪುಟಾಭ್ರನಿಕಾಯದಿಂದಿಳೆಗೆ ॥ ಫುಲ್ಲನಾಭನನಮಳಲಕ್ಷ್ಮೀ । ವಲ್ಲಭನನೋರಂತೆಹೊಗಳುತ । ಸಲ್ಲಲಿತಮೂರ್ತಿಯನುಮಿಸ್ತರಿಸುತ್ತಲೊಪ್ಪಿದರು ॥ ೪೨ ॥ ಸುರಭಿನಿಜಪಂಚಾಮೃತದಲಂ । ಬುರುಹನಾಭನದಣಿಸಿದಣಿದುದು । ಸುರನರೋರಗವೃಂದಸಹಿತಚರಾಚರವ್ರಾತ ॥ ಕರಣನಿರ್ಮಳವಾಯ್ತುಕಾಪುರು । ಷರಿಗೆದುಃಖಿಗಳೆಲ್ಲನಿಜಸುಖ । ಭರಿತರಾದರುಪಾಪಿಗಳುಪುಣ್ಯಾತ್ಮರೆನಿಸಿದರು ॥ ೪೩ ॥ ಸರ್ವಗತನಭಿಷೇಕದಲಿಸಲೆ । ಸರ್ವಭೂತನಿಕಾಯನಿರ್ಜಿತ । ಗರ್ವಮದಮತ್ಸರಗಳಾದವುಜಾತಿವೈರವನು ॥ ನಿರ್ವಹಿಸುತೊಂದೊಂದರಲಿಚಾ । ತುರ್ವಿಧಪ್ರಾಣಿಗಳುಸಹಿತಸು । ಪರ್ವಪದಪರಿನಿಷ್ಠರಾದರುನರಕಿಗಳುಸಹಿತ ॥ ೪೪ ॥ ತರುಗಳಲಿಮಧುಧಾರೆಗಳುಗಿರಿ । ಗಿರಿಗಳಲಿರತ್ನಾವಳಿಸರೋ । ವರಗಳಲಿಮುತ್ತುಗಳುನದಿನದಗಳಲಿರಸಭೇದ ॥ ಮರುಗಳಲಿರಾಜಾನ್ನಸರ್ವೋ । ರ್ವರೆಗಳಲಿಬಿತ್ತದೆಸುಧಾನ್ಯೋ । ತ್ಕರಗಳುದುಭವಿಸಿದವುಪೃಥ್ವೀಪಾಲಕೇಳೆಂದ ॥ ಕಮಲಭವಭವಮುಖ್ಯವಿಬುಧೋ । ತ್ತಮರುಸನಕಾದ್ಯಖಿಳಮುನಿಸ । ತ್ತಮರುನಾರದಮುಖ್ಯಭಾಗವತೋತ್ತಮೋತ್ತಮರು । ಕಮಲನಾಭನದಿವ್ಯಗುಣಗಣ । ವಿಮಳಸುಧೆಯನುಮೂರ್ತಿಲಕ್ಷ್ಮಿಯ । ನಮವುಬಣ್ಣಿಸಿಮಾಣದೋಲಾಡಿದರುಹರುಷದಲಿ ॥ ಬೀಳುಕೊಂಡುದುತನುಗಳಲಿಜನ । ಜಾಲವಾಕೃಷ್ಣನನುಮನದಲಿ । ನಾಲಗೆಗಳಲಿಬೀಳುಗೊಳಲರಿಯದೆತದಾಕೃತಿಯ ॥ ಆಲಿಸುತಬಣ್ಣಿಸುತತಂತ್ರಂ । ಮಾಲಯಕೆನಿತ್ಯಾತ್ಮನುನ್ನತ । ಲೀಲೆಯನುಸಂತೋಷದಲಿಪಾಡುತ್ತತಮತಮಗೆ ॥ ॥ ೪೫ ॥

ಅಂತು ಸಂಧಿ ೨೩ಕ್ಕಂ ಪದನು ೧೧೦೪ಕ್ಕೆ ಮಂಗಳಮಸ್ತು.

ಇಪ್ಪತ್ನಾಲ್ಕನೆಯ ಸಂಧಿ.

ವರುಣಪುರ ಯಾತ್ರೆ.

ಸೂಚನೆ ॥ ವರುಣಪುರಯಾತ್ರೆಯನುವಿಶ್ವಂ । ಭರನುವಿರಚಿಸಿತಂದೆಯನುಮಂ । ದಿರಕೆಮಗುಳೊಡಗೊಂ
ಡುಬಿಜಯಂಗೈದನಸುರಾರಿ ॥

ಪದನು ॥ ನಂದನೊಂದೇಕಾದಶಿಯಲಾ । ನಂದದಿಂದುಪವಾಸವೆನುನಲ । ವಿಂದವಿರಚಿಸಿವಿಷ್ಣುಚರಿತಕಥಾಪ್ರಸಂಗದಲಿ ॥ ಮಿಂದುಬಹೆನಾನಿನನುದಯವಾ । ಯ್ತೆಂದಪರರಾತ್ರೆಯಲಿಬರೆಕಾ । ಳಿಂದಿಗೊಯ್ದರುವರುಣದೂತರುವರುಣನಿದ್ದೆಡೆಗೆ ॥ ೧ ॥ ಬಂದುನೀರೊಳುಮುಳುಗಲಂದಾ । ನಂದನನುಗೋವಳರುಕಾಣದೆ । ಹೊಂದಿದನೆನುತ್ತ್ರೈದೆತಮತಮಗರಸಿಕರಕರದು ॥ ತಂದೆಹಾಹಾಕೃಷ್ಣಹಾಗೋ । ವಿಂದಹಾಗೋಕುಲದರಸಹಾ । ಯೆಂದೆನುತಕಂಗೆಟ್ಟುಕಳವಳಿಸಿತ್ತುಜನನಿವಹ ॥ ೨ ॥ ಅಧನಿಯಲಾಲಿಸುತಬಂದಾ । ಮಾಧವನುಮನದೊಳಗೆಕಾಲವಿ । ರೋಧಕೃತಕವಿದಾದುದಾಸುರವೇಳೆಯಾದರಿಂದ ॥ ಸಾಧಿಸಿದರೈವರುಣಭೃತ್ಯರು । ಬಾಧಿಸದೆತಂದೆಯನುತಪ್ಪೇ । ನಾಧಿಕಾರರುಜಲಕೆನೀವಿಡಕಂಜಬೇಡೆಂದ ॥ ೩ ॥ ಚಿಂತೆಬೇಡೀತಹೆನುವರುಣಪ್ರ । ರಾಂತಿಕಕೆತಾಹೋಗಿಬೊಪ್ಪಂ । ಗಂತಕನಭಯವಿಲ್ಲಬಾಹಿರವಲ್ಲನಿಜವಚನ ॥ ಸಂತವಿರಿನೀವೆನುತಲಕ್ಷ್ಮೀ । ಕಾಂತನಾಗೋಕುಲದಜನವನು । ಸಂತವಿಸಿವರುಣಾಲಯಕೆವರದೇಶನೈತಂದ ॥ ೪ ॥ ದೇವದೇವನಬರವನಾಯಾ । ದೋವಿಶೇಷಾಧಿಪನುಕೇಳುತ । ಜೀವವೇಬಂದಂತೆಬಹಳಾನಂದದಲಿಮುಳಗಿ ॥ ಆವದನ್ಯನೊನಾನೆನುತಸದು । ಭಾವಭಯಭಕ್ತಿಯಲಿನಿಜಜನ । ದೇವಜನಸಹಿತಿದಿರುಗೊಂಡನುವಿವಿಧವಿಭವದಲಿ ॥ ೫ ॥ ವಸಗೆವರೆಯಲಿಬಹಳಕಹಳಾ । ವಿಸರದಲಿಕೊಂಬುಗಳಶಂಖ । ಪ್ರಸರದವದಲಿಕಳಸದಲಿಗುಡಿತ್ತೋರಣಂಗಳಲಿ ॥ ಮಿಸುಪಕಂಗಳಕಮಲಮುಖಿಯರ । ವಿಸರದಲಿಕೃಷ್ಣನನುಚಮರೋ । ಲ್ಲಸಿತಧವಳಚ್ಛತ್ರದಲಿನಡೆತಂದರಿದಿರಾಗಿ ॥ ೬ ॥ ಪಾಶಿಪರಮೋತ್ಸವದಲಂದಾ । ವಾಸುದೇವನನೆಸವನಿಜಸಿಂ । ಹಾಸನದಲೊಪ್ಪಿರಲುನಂದನಕೊಡೆಕುಳ್ಳಿರಿಸಿ ॥ ಪಸುಜನ್ಮಾಂತರದಸುಕೃತದ । ರಾಶಿಯೋದೇವರಪದಾಬ್ಜವಿ । ಳಾಸಲಕ್ಷ್ಮಿಯದರುಶನವಮಾಡಿಸಿತುನನಗೆಂದ ॥ ೭ ॥ ಸುಕೃತಿನಿನ್ನಂಘ್ರಿಯನುಯೋಗ । ಪ್ರಕೃತಿಗಳುಕಾಣಿಸರುನಿಗಮ । ಪ್ರಕರಮಸ್ತಕನಿಕರವೈದವುಪಾದರೇಣುಗಳು ॥ ಅಕಟತನಗಿನ್ನಾವಯೋಗ । ಪ್ರಕಟಜನ್ಮದಸಿದ್ಧಿಯೋಸಂ । ಮುಖಕೆತಂದುದುದೇವರಂಘ್ರಿದ್ವಯವನಿದನೆಂದ ॥

ಚಿತ್ತವಿಸುನೆನಗಿಂದುದೇಹವ । ಹೊತ್ತುದಕೆಫಲವಾಯ್ತುದೇವರು । ವಿಸ್ತರಿಸಿದಧಿಕಾರವಿಂದಿನಲಿಷ್ಟವಾಯ್ತೆನಗೆ ॥ ಎತ್ತ
ಲಾನಮರಾಧಮಾಧಮ । ನೆತ್ತಲೀಭವದೀಯಚರಣದ । ಭಕ್ತರರ್ಚಿತಚರಣಯುಗಳಸಮಕ್ಷವಾಯ್ತೆಂದ ॥೯॥ ಸ್ತುತಿ
ಸುವೆನುನಾನೆಂತುನಿಗಮ । ಸ್ತುತಿವಿದೂರನನೆಂತುಪೂಜಿಸಿ । ಮತಿಗೆತುಷ್ಟಿಯಮಾಳ್ಪನಖಿಳಚರಾಚರಾತ್ಮಕನ ॥ ಕ್ರತುಮ
ಯನೆತದ್ದ್ರವ್ಯಮಂತ್ರ । ಶ್ರುತಿಮಯನೆತದ್ದೇವತಾಸ । ಸ್ಮೃತಿಮಯನೆಸರ್ವಾತ್ಮಕನೆಪೊಡವಂಟೆನಾನೆಂದ ॥೧೦॥ ದೇವ
ಭೃತ್ಯಕೃತಾಪರಾಧದ । ಪಾವಕನಬೇಗೆಯಲಿತನ್ನದೆ । ಬೇವುತಿದೆನಿಮ್ಮಯ್ಯನನುತಂದರುಮದಂತಿಕಕೆ ॥ ಕಾವುದೆನ್ನ
ನುಪರಮಕಾರು । ಣ್ಯಾವಲೋಕನದೃಷ್ಟಿಯಲಿರಾ । ಜೀವಲೋಚನಯೆನುತಬಿನ್ನಹಮಾಡಿದನುವರುಣ ॥೧೧॥ ನವದಳಾ
ನೆರೆದೇವದೇವ । ಪ್ರವರಪದಯುಗದರುಶನದಭಾ । ಗ್ಯವನುಪಡೆದೆನುಪರಮಕಾರುಣಿಕೋತ್ತಮನೆಪಿತನ ॥ ಅವನಿಗೊಯ್ಯು
ದುದೇವನಿಜಜನ । ನಿವಹದಾಸರದಾಸನೆಂದೆ । ನ್ನವನುಕರುಣದಲೀಕ್ಷಿಸೆನುತೆರಗಿದ್ದನುಚರಣದಲಿ ॥೧೨॥ ಎತ್ತಿದನುವೃದಡ
ವಿವರುಣನ । ನೆತ್ತಿಯಲಿಕೈಯಿಟ್ಟುಬೆದರದಿ । ರುತ್ತಮೋತ್ತಮದಾಸನೆನಗಂಜದಿರುನೀನಿದಕೆ ॥ ಚಿತ್ತದಲಿಮರೆಯದಿರುಯನ್ನ
ನು । ನಿತ್ಯವಲ್ಲೀವಿಭವಮಂಜಿನ । ಮೊತ್ತಮೆರವಮಹೇಂದ್ರಜಾಲವಿದೆಂದನಸುರಾರಿ ॥೧೩॥ ಅರಿತುದಿಲ್ಲಪರಾಧವೆನ್ನನು ।
ಮರನಡಪರಾಧಿಗಳುನೀವಹಿ । ರರುಪಜಗದೀಶ್ವರನುಜಗದಧಿದೈವಮಾನೆಂದು ॥ ಮರೆಯದಿರುನೀನೆನನೆನುತೆ । ಚ್ಚರಿ
ಸಿನಿಜವನುವರುಣನನುಪದ । ಕೆರಗಲೆತ್ತಿದನಪ್ಪಿದನುಕರುಣದಲಿಮುರವೈರಿ ॥೧೪॥ ಎಂದುಕಳುಹಿಸಿಕೊಂಡುತನ್ನಯ ।
ತಂದೆಸಹಿತನುಗತಸುರೋತ್ತಮ । ವೃಂದವನುಬೀಳ್ಕೊಳಿಸಿಸತ್ಕೃತನಾಗಿಗೋಕುಲಕೆ ॥ ಬಂದನಪಗತಜೀವನ್ನೈತ । ಪ್ಪಂ
ದದಲಿನಿಜಜನಕೆಪರಮಾ । ನಂದವನುಮಾಡುತ್ತಗೋಕುಲದರಸನೊಲವಿನಲಿ ॥೧೫॥ ಹೊಂದಿದಸುಬಂಧಂತ್ರಬಂಧಾ । ನಂ
ದಗೋಪನನಪ್ಪಿಗೋಪರ । ವೃಂದವಾಗೋವಿಂದನನುತಕ್ಕೈಸಿಕೈಗಣಿಯೆ ॥ ಕಂದಣಿಯೆಕಮನೀಯಮೂರ್ತಿಯ । ನಂದು
ನಡೆನೋಡುತ್ತಮುನಿಜನ । ದಂದದಲಿಮುಳುಗಾಡಿದರುನಿಜಸುಖರಸಾಬ್ಧಿಯಲಿ ॥೧೬॥ ತನ್ನಮಗನಾವಿಷ್ಣುವೆಂಬುದ । ನ
ನ್ಯಮುಖದಿಂದರಿತುವರುಣನ । ಮನ್ನಣೆಯನಖಿಳಾಮರರಸೇವಾಮಹೋತ್ಸವವ ॥ ತನ್ನಮನದಲಿನೆನೆನೆನದುಸಂ । ಪನ್ನಮತಿ
ಬೆರಗಾಗಿಭಕತಿಸು । ಧಾರ್ಣವದಲೋಲಾಡುತಿರ್ದನುನಂದನದಿಗಡಿಗೆ ॥೧೭॥ ದಣಿಸಿಗೋದ್ವಿಜದೇವಸಂತ । ರ್ಪಣಮುಖ
ದೆಲಖಿಳವನುಸುಖಮಾ । ರಣೆಯಮಾಡಿದನಖಿಳಜಗದಾತ್ಮಕನನೊಡಗೊಂಡು ॥ ತ್ರಣವಲಾನಂದಂಗೆಮಜ್ಜಭಾ । ಪೆಸಿಸುವಪೆ
ಕೈವಲ್ಯಸುಖಧಾ । ರುಣಿಯಲಾರುಕೃತಾರ್ಥರಾಗೋಕುಲದಜನದಂತೆ ॥೧೮॥ ನಂದಹೇಳ್ಳೇನಾಯ್ತುನಿನಗೆ । ಲ್ಲಿಂದದಿವ್ಯಾಂ
ಬರವಿಭೂಷಣ । ವೃಂದವೀವರಗಂಧಮಾಲ್ಯಾಲಂಕರಣನಿಚಯ ॥ ಬಂದವಿವುಭಾಪುರೆಸಭಾಗ್ಯರ । ತಂದೆಯಲ್ಲಾಹೇಳುತಮ
ಗಿದ । ನೆಂದೆನಲುಗೋವಳರಿಗಂದಾನಂದನಿಂತೆಂದ ॥೧೯॥ ಕೇಳಿರೈಕೃಷ್ಣನನುದಿಟಗೋ । ಪಾಲನೆಂದೇಬಗದುನಮ್ಮೊಳ ।
ಗೇಳಿದಿಟವನುಮಾಡದಿರಿಹೇಳುವೆನುನಿಮಗೊಂದ ॥ ಭೂಲಲನೆಭಾರದಲಿಕುಶಿದಡಿ । ಗಾಳುತಿರೆಹೆಬ್ಬುಯ್ಯಲನುತಾ । ಕೇಳಿಸಾ
ಕ್ಷಾದ್ವಿಷ್ಣುಗಡಅವತರಿಸಿದನುಧರೆಗೆ ॥೨೦॥ ವರುಣಪುರಕಾಹೋದಡೆನ್ನನು । ಪರಮದಿವ್ಯಾಸನವನಿತ್ತುಪ । ಚರಿಸಿನಿಜದೂ
ತರನುಜರಿದುದುರಾತ್ಮಹೋಗೆನುತ ॥ ಕರಯುಗವಮುಗಿದೆನಗೆಸುರನುತ । ಚರಣನುಪಚರಿಶಿದನುನಾನದ । ನೊರೆಯಲರಿಯೆ
ನುನೋಡಿಮಿಗೆಬೆರಗಾದೆನಾನೆಂದ ॥೨೧॥ ಈತಕಾಣಿರೆನಮ್ಮೊಡೆಯಸಾ । ಕ್ಷಾತಸಕಲಜಗಚ್ಚರಾಚರ । ಚೇತನಾತ್ಮಕವಿ
ಷ್ಣುವಿಗೆಪಿತನಾದಗಡತಮಗೆ ॥ ಈತನೇಸಾಕ್ಷಾತಹರಿಯೆಂ । ದೋಡುತನ್ನನುಸಕಲವಿಬುಧ । ವ್ರಾತವದುಬೆರಗಾಗಲೋಲಗಿ
ಸಿದನುನಿಜಪದವ ॥೨೨॥ ಬರಲುಬಳಿಕೀಕೃಷ್ಣನನುವಿ । ಸ್ತರದವಿಭವದಲಿದಿರುಗೊಂಡುಪ । ಚರಿಸಿಕುಳ್ಳಿರ್ದನ್ನದಿವ್ಯೋತ್ತ
ಮವರಾಸನದ ॥ ಹೊರೆಯಲೇಕುಳ್ಳಿರಿಸಿಸಕಲಾ । ಮರರುಸಹಿತರ್ಚಿಸುತಹೊಗಳಿದ । ನುರುತರಾಮಳಮೂರ್ತಿಯನುತಲೆ
ವಾಗಿವಿನಯದಲಿ ॥೨೩॥ ನೀನೆಸಾಕ್ಷಾದ್ವಿಷ್ಣುವೆಂದೇ । ಸೂನುವನುಕೃಷ್ಣನನುಮನ್ನಿಸಿ । ಮಾನನೀಯಚರಿತ್ರವನುಮಿಗೆ
ಭಕತಿಭಾವದಲಿ ॥ ಏನುಬೆಸಸೆನಗೆನುತವರುಣನು । ಮಾನವರಶಿಶುಕೃಷ್ಣನಂಘ್ರಿಗೆ । ತಾನೆರಗಿಕೈವಾರಿಸಿದನೇನೆಂಬೆನದುಭು
ತವ ॥೨೪॥ ವರುಣನೆನಗೊಲಿದಿತ್ತವಸ್ತ್ರಾ । ಭರಣವಿವುವರಗಂಧಮಾಲ್ಯೋ । ತ್ತರವಿದಕೆಸಂದೇಹವಿಲ್ಲೀಕೃಷ್ಣನಾರೆಂದು ॥
ನರರುನಾವಿದನರಿಯೆವಿಂತ । ಚ್ಚರಿಯಲಾಗೋವರ್ಧನಾದ್ರಿಯ । ಧರಿಸಿನಿಲುವಸಮರ್ಥರಾರುಮನುಷ್ಯರೊಳಗೆಂದ ॥೨೫॥
ಗಾರ್ಗ್ಯನೆನಗೇಕಾಂತದಲಿಮುನಿ । ವರ್ಗವಂದ್ಯನುಕರುಣಿಸಿದನಪ । ವರ್ಗಮೂರುತಿವಿಷ್ಣುವೆಂದೀಕೃಷ್ಣನನುಮುನ್ನ ॥ ವರ್ಗ
ಸುತನಾಮಂಗಳನುಮುನಿ । ನಿರ್ಗಮಿಸಲಲ್ಲಿಂದನನಗಾ । ಸ್ವರ್ಗದಿರದಿಂದಧಿಕವಹಸುಮ್ಮಾನವಾಯ್ತೆಂದ ॥೨೬॥ ಹೇಳಿದರು
ದಿಟನಾರದಾದ್ಯರು । ಕೇಳಿರೈನೀವಿದನುಲಕ್ಷ್ಮೀ । ಲೋಲನಹಸಾಕ್ಷಾತವಿಷ್ಣುವೆಕೃಷ್ಣನೆಂಬುದನು ॥ ಹೇಳಲಮ್ಮೆನುಕಾಳಿ
ಯೊಗ್ರ । ವ್ಯಾಳನನುದಮಿಸುವಕರಾಗ್ರದ । ಲೇಳುದಿನಗಿರಿಧಾರಣವಮಾಳ್ಪವರದಾರೆಂದ ॥೨೭॥ ಮಾಡುಹಲವರಲೇನು
ಫಲಸಂ । ಜಾತಶಿಶುವೊಲೆಯುಂಡುಕಳೆಯನೆ । ಪೂತನಿಯಜೀವವನುತೊಟ್ಟಲತಳದಭಂಡಿಯನು ॥ ಘಾತಿಸನೆವ್ಯದುತಳನಜಾ

ಸ್ರವಿ । ಘಾತಿಯಲಿಕೃಷ್ಣನನುನರನೆಂ । ದೇತರಿಂದಾನೆಂಬೆವೀಕ್ಷಣನೆಂದನಾನಂದ ॥ ೨೮ ॥ ದೃಷ್ಟವಲ್ಗಾಮನೆಯದಾವಗ್ಳು । ಕ
ಟ್ಟೈದವರುನಡುವನೊರಳಲಿ । ಕಟ್ಟುವಡದವರಾರುಬಳ್ಳಿಕಾವೊದಲದಾಮಿನಲಿ ॥ ಕಟ್ಟುವಡದವನೆತ್ತಮರಗಳ । ಧಟ್ಟುಗೆಡಹು
ವದೆತ್ತಹೊಗಳಲು । ಭಟ್ಟನೇತಾನೆನುತಹೊಂಪುಳ್ಳಯೋದನಾನಂದ ॥ ೨೯ ॥ ಕಾಲುವಿಡಿದೀಡಾಡಿವತ್ಸನ । ಪೀಳಬಕನನುಫ
ಣಿಯೊಡಲಗೋ । ನಾಳಿಯಲಿತನುವೆಳದುಧೇನುಕನನುಸಬಾಂಧವರ ॥ ಕಾಲನನುಕಾಣಿಸಿದತನ್ನೀ । ಬಾಲಕನವಿಕ್ರಮವನೇ
ನನು । ಹೇಳುವೆನುದಿಟವಿಷ್ಣುವಾಗದೆಮಾಣನಿವನೆಂದ ॥ ೩೦ ॥ ನರರಶಿಶುಗಡವರುಣಪುರದೆಂ । ನಿರವನರಿವುದಿದೆತ್ತಸುರರಾ ।
ದರಿಸಿಪೂಜಿಪುದೆತ್ತಲೀಕೃಷ್ಣಂಗೆಕೈಮುಗಿದು ॥ ಶಿರವನೆರಗುವುದೆತ್ತಲಮರೇ । ಶ್ವರರುಶಿಶುವಿನವಿಷ್ಣುಮಾಯಾ । ಚರಿತ್ರಪರಮ
ರಹಸ್ಯಮುದ್ರೆಯನರಿವರಾರೆಂದ ॥ ೩೧ ॥ ಎಂದಡೆಂದರುಗೋಪರೆಲೆಯಲೆ । ನಂದಸಂಶಯವಿಲ್ಲನೀನೀ । ಗೆಂದನುಡಿಹುಸಿಯೆ

ಗೋಪರಿಗೆ ವೈಕುಂಠವನು ತೋರಿಸಿದ ಕಥೆ.

ಲ್ಲಕಾರಣಮೂರ್ತಿಯಿಾನಿನ್ನ ॥ ಕಂಡನಿಂದೀವರುಣಪುರವನು । ತಂದೆತೋರಿಸಿದಂತೆತನ್ನಯ । ಮಂದಿರವತೋರಿಸನೆನಿಜವೈಕುಂ
ಠಪುರವರವ ॥ ೩೨ ॥ ಅದನರಿತುಮುರವೈರಿಕಾರು । ಣ್ಯದಲಿತನ್ನೊಳಗೆಂದನೀಭವ । ದೊದವಿತೀತಾಪತ್ರಯದಬೇಗೆಯಲಿ
ಬೆದೆಬೆಂದು ॥ ಕುದಿವಮರ್ತ್ಯರಿಗೆನ್ನನಿಜವಹ । ಪದವತೋರಿಪರಾವ್ಯತಾನಂ । ದದಲಿಮುಳುಗಿಸದಿರ್ದಡಿಲ್ಲವಸಾನವಿದಕೆಂದ ॥
ಊರಸುಖವನುಘೋರತರಕಾಂ । ತಾರಪಥಿಕರುಬಲ್ಲರೇಸುರ । ವೀರಸೌಖ್ಯವನೇನಬಲ್ಲರುನರಕವಾಸಿಗಳು ॥ ಪಾರಮೇಷ್ಠ್ಯದ
ತನ್ನನಿಜಪದ । ಸಾರಸುಖವಜ್ಞಾನಮೂಢಶ । ರೀರಿಗಳಿಗಳವಡದೆನುತಮನದೊಳಗೆಕರುಣಿಸಿದ ॥ ೩೪ ॥ ದೇವತಿರ್ಯಙ್ಮರ್ತ್ಯ
ಯೋನಿಶ । ತಾವಳಿಗಳೊಳುನೆರೆಮರದುನಿಜ । ಭಾವವನುಕಂಗೆಟ್ಟುಹುಟ್ಟುತಸಾವುತಡಿಗಡಿಗೆ ॥ ನೋವನಾನಾಕಾಲಕರ್ಮತ ।
ಮೋವಿಮೂಢಾತ್ಮರಿಗೆತನ್ನೀ । ಕೇವಲಾನಂದಾನುಭವವಳವಡುವುದೆಂತೆಂದ ॥ ೩೫ ॥ ಎಂದುಮನದಲಿತಿಳಿದುಗೋವಳ ।
ರಂದುನೆನದುದನಕಟತನ್ನವ । ರೆಂದುದನೆಮಾಡೂದುನೆರೆಕರ್ತವ್ಯವೆಂದೆನುತ ॥ ಅಂದುನಿಜವೈಕುಂಠವನುಗೋ । ವಿಂದನಾಗೋ
ಗೋಪಗೋಪೀ । ವೃಂದನಯನಂಗಳಿಗೆಗೋಚರವಾಗಿತೋರಿಸಿದ ॥ ೩೬ ॥ ಕೋಟಿಸೂರ್ಯಸಹಸ್ರದೀಪ್ತಿಕ । ವಾಟವನುತ್ತರ
ದಂತ್ರೆತಮವನು । ತಾಟಿಸುವತನುವೆಳಗಿನುರುಳಿಯಕಾಲವಿಕ್ರಮದ ॥ ಆಟವಿಲ್ಲದದೇಹಧರ್ಮದ । ಕೂಟವಿಲ್ಲದತತ್ವಮಸಿಯಡೆ ।
ಯಾಟವಿಲ್ಲದಪದವತುರುಗಾರರಿಗೆತೋರಿಸಿದ ॥ ೩೭ ॥ ಚಾರುದೀರ್ಘಚತುರ್ಭುಜದಸುಕು । ಮಾರಗಾತ್ರದಲೋಲತರಸರ ।
ಸೀರುಹಾಕ್ಷದಮೆರವಭಾಳದಬಹಳಕುಂತಳದ ॥ ನೀರದಾಭದ್ಯುತಿಯವಿಮಳೋ । ದಾರಪೀತಾಂಬರದಪರಿಜನ । ಪೌರಜನ
ದಲಿಮೆರವವೈಕುಂಠವನುತೋರಿಸಿದ ॥ ೩೮ ॥ ಮಕುಟಕುಂಡಲಹಾರಮಣಿಮಾ । ಕ್ತಿಕಕನಕಕೇಯೂರಕಂಕಣ । ನಿಕರ
ಕಾಂಚೀರಣಿತಚರಣಾಭರಣದೀಪ್ತಿಗಳ ॥ ಪ್ರಕಟಸಾರ್ಷ್ಟ್ಯಸರೂಪ್ಯಸಾಮಿಾ । ಪ್ಯಕದಸಾಲೋಕ್ಯಾದಿಮುಕ್ತ । ಪ್ರಸರವೆಸವವಿ
ಕುಂಠಪುರವನುಕಂಡುದಖಿಳಜನ ॥ ೩೯ ॥ ಮೂರುಗುಣವನುಕಳಿದುಹಗೆಗಳ । ನಾರನೊಡೆಹೊಯ್ದೂರ್ಮಿಷಟ್ಕವ । ಮಿಾರಿಷ
ಡ್ಭಾವವನುಷಟ್ಕಾಶಿತದತನುಧರ್ಮ ॥ ತೋರದಾನಂದಾನುಭವದೊಳ । ಗೋರುಗುಡಿಸುವಪರಮಮುಕ್ತರ । ತಾರುಥಟ್ಟನಲೆ
ಸವಹರಿಪುರಕಣ್ಗೆರಂಜಿಸಿತು ॥ ೪೦ ॥ ಅದಕೆಪರಮಸ್ವಾಮಿಲೋಕಾ । ಭ್ಯುದಯಕಾರಣಮೂರ್ತಿಲಕ್ಷ್ಮೀ । ಹೃದಯಸಂಕ್ಷೋ
ಭನಸಮರ್ಥನಿಜಾಂಘ್ರಿಯುಗಲಕ್ಷ್ಮಿ ॥ ಪದುಮಭವಭವಶಕ್ರಮುಖ್ಯ । ತ್ರಿದಶಜನದುರ್ದರುಶಮಾಯಾ । ಸ್ಪದವೆನಿಪಕೃಷ್ಣನನು
ಕಂಡರುವಿಷ್ಣುವಾಗಿರಲು ॥ ೪೧ ॥ ಬ್ರಹ್ಮಭವಪೂಜಿತನಸೆಗುಣ । ಬ್ರಹ್ಮಲಕ್ಷಿತವಿಗ್ರಹನಸ । ಬ್ರಹ್ಮಸೂಕ್ತಸಹಸ್ರಸಂಕೀರ್ತಿತ
ಯಶೋನಿಧಿಯ ॥ ಬ್ರಹ್ಮಕುಲದೈವವನುಸಾಕ್ಷಾ । ದ್ಬ್ರಹ್ಮವಹಕೃಷ್ಣನನುಕಂಡಾ । ಬ್ರಹ್ಮಪದದಲಿಮರದರೀಸಂಸಾರವಿಭ್ರ
ಮವ ॥ ೪೨ ॥ ಯೋಗಮಾಯಾಧೀಶ್ವರನುನಿಜ । ಯೋಗಸಾಮರ್ಥ್ಯದಲಿತೋರಿಸಿ । ಯೋಗಗಮ್ಯವೆನಿಪ್ಪನಿಜವೈಕುಂಠ
ಪುರವರವ ॥ ಆಗಳಂತಿರೆಗೋಪಿಜನಬೆರ । ಗಾಗಲುಪಸಂಹರಿಸಿಕರುಣಾ । ಸಾಗರನುನಟಿಸಿದನುನರಶಿಶುತನದನಾಟಕವ ॥ ೪೩ ॥
ಕನಸೊಮೇಣೀಕಂಡಡಿದುಸಂ । ಜರಿತದೃಷ್ಟಿಭ್ರಮೆಯೊಹರಹರ । ನೆನಹುನೆಗ್ಗದವಸ್ತುಗೋಚರಿಸಿತ್ತುಕಂಗಳಿಗೆ ॥ ಜನಿತಕಾವು
ಕಮರ್ಥರೇಕೃ । ಷ್ಣನಮಹಿಮೆತಾನಾಗದಿರದೆಂ । ದನಿತುಜನಮುಳುಗಾಡಿದುದುನಿತ್ಯಾತ್ಮಸುಖದೊಳಗೆ ॥ ... ॥ ೪೪ ॥

ಅಂತು ಸಂಧಿ ೨೪ಕ್ಕಂ ಪದನು ೧೧೨೪೭ಕ್ಕಂ ಮಂಗಳಮಸ್ತು.

ಇಪ್ಪತ್ತೈದನೆಯ ಸಂಧಿ.

ಸೂಚನೆ || ಗೋಪಿಯರುಗೋವಿಂದನಗ್ಗದ | ರೂಪಗುಣವೈಭವಕೆಮದನೋ | ದ್ದೀಪಿತಾತ್ಮೆಯರೈದಿದರು ಕಾನನಕೆವಸನವಳಿದು ||

ಪದನು || ಮೂಡಿದುದುಶಶಿಮೂಡದೆಸೆಯಲಿ | ಕೂಡೆಕಿರಣವಕೆದರಿತಮವನು | ತ್ರೋಡಿತೆಗೆದನುಸಕಲಸಚರಾಚರಜಗದ್ಧಿತವ || ಮಾಡಿದನುಮೇದಿನಿಯತಾಪವ | ರೂಡಿಸುತಸತ್ಪುರುಷರಂದದ | ಲೀಡಿರಿವಘನಶ್ರೈಸ್ವಪಲಿಜನಮನವರಂಜಿಸಿದ ||೧|| ಪಂಕಜದಮನೆಗಳನುಮುದ್ರಿಸಿ | ಮುಂಕೊಳಿಸಿತುಂಬಿಗಳಧರವನು | ಪಂಕದಲಿನೈದಿಲನುಮೈದೋಹಕ್ಕೆಪರುಷವಿಸಿ || ಸಂಕಲಿಗೆ ನೂಕಿದನುವರಚ | ಕ್ರಾಂಕಯುಗಳವನಭ್ರದೊಳಗೆಶ | ಶಾಂಕನೃಪನೋಲಗವನಿತ್ತನುರಾಜತೇಜದಲಿ ||೨|| ಹಲಬರಿಗೆಹಿತ ನೆನಿಸಿನಯನೋ | ಜ್ವಲನೆನಿಸಿಸಚರಾಚರಕೆಸೀ | ತಳನೆನಿಸಿತಾನಿಲ್ಲದಿರ್ದರೆದುಃಖಕರನೆನಿಸಿ || ಕೆಲಬರಿಗೆಬೇಡೆನಿಸಿಚೋರಾ | ವಳಿರಥಾಂಗವಿಯೋಗಕಮಲಾ | ವಳಿಗೆಯಪ್ರಿಯನೆನಿಸಿರಾಜೋದಯವುರಂಜಿಸಿತು ||೩|| ಲೋಕಹಿತಕರನಾಗಿವಿಷ್ಣುಪ | ದೈಕಸಂಶ್ರಿತನೆನಿಸಿಭುವನಾ | ನೀಕಪಾವನನಾಗಿಶೀತಳವೃಷ್ಟಿತಾನೆನಿಸಿ || ಅಕೃತಿಪ್ರಿಯನಾಗಿಪೀಯೂ | ಷಾಕರನುಬುಧರಂತೆಯಿರಲಾ | ಲೋಕಿಸುತಗೋವಿಂದನೈದಿದನಾವನಾಂತರವ ||೪|| ಓತವರಿಗೆನ್ನಂಗಲಕ್ಷ್ಮಿಮಿಗೆ | ಸೋತವರಿಗಂದೊಲಿದು ಗೌರಿಯು | ನೋತವರಿಗಿದುಸಮಯವಿಷ್ಟಾರ್ಥವನುಮಾಡುವರೆ || ಮಾತುಮೈಲಗೆಯಹುದುಮರದಡೆ | ಘಾತಿಸುವನೀಕಾಮನೀತರು | ಗಾತಿಯರನೆಂದಸುರರಿಪುವನಕೇಳಿಗೈತಂದ ||೫|| ಸಂಗಡಿಸಿಸಪ್ತಸ್ವರದಸಹ | ಜಂಗಳೆಸೆಯಲುನಗುತನಿಂದುತ್ರಿ | ಭಂಗಿಯಲಿಕಲ್ಪದ್ರುಮದಮಣಿಮಂಟಪದಮೇಲೆ || ಅಂಗನೆಯರೆನುಸುರನರರಭುವ | ನಂಗಳನುಮೋಹಿಸುತಬಹುರಾ | ಗಂಗಳಲಿಪೊಂಗೊಳಲನಸುರಾಂತಕನುಬಾರಿಸಿದ ||೬|| ಕೇಳುತವೆಸಂಗೀತವನುಜನ | ದಾಲಿಗಲ್ಲಾಯ್ತೇನನೆಂಬೆನು | ಬಾಲೆಯರಭಾವೋದಯೋದ್ಯೋತಿತಮನೋವ್ಯಥೆಯ || ಹೇಳಲೇನನುಗತಚರಾಚರ | ಜಾಲಜೇತ್ರೋಭಂಗಿಯನುಜರಿ | ಲೀಲೆಮಿಗೆಲಾವಣಿಗೆಗೊಂಡುದುಲೋಕಜನಮನವ ||೭|| ಆಪರಮಪೂರುಷನಜನಹೃದ | ಯೋಪರಂಜನವೇಣುಗೀತಾ | ಳಾಪಸಾರಸುಧಾರಸಾಸ್ವಾದನಸುಖಾಬ್ಧಿಯಲಿ || ಗೋಪಿಯರುಮನಮುಳುಗಿಮದನೊ | ದ್ದೀಪಿತೆಯರೈದಿದರುಗೋಕುಲ | ದೀಪಗೋಪೀನಾಥನಂಘ್ರಿಸರೋಜಸನ್ನಿಧಿಗೆ ||೮|| ಮಸಗಿದರುಗೋಪಿಯರುಮನೆಗಳ | ಬಿಸುಟುಪತಿಪಿತೃಮಾತೃಬಾಂಧವ | ನಿಸರವನುಬೀಸಾಡಿಮಮತಾಪಾಶವನುಹರಿದು || ಕುಸುಮಶರಸುಪ್ರೌಢಶರಪರ | ವಶೆಯರಚ್ಯುತಸಂಗಸುಖಲಾ | ಲಸೆಯರೈದಿದರಿರದೆನಿಜವಲ್ಲಭನಸನ್ನಿಧಿಗೆ ||೯|| ತೊರೆದುಲೋಕದ್ವಯದಕೀರ್ತಿಯ | ಜರೆದುನಿಜಬಾಂಧವರಮತವನು | ಮುರಿದುಸಹಜಕುಲಾಭಿಮಾನಪರಂಪರೆಯಪಥವ || ಕರದಕಂದಗಹಾಲಕೊಡದೆಯೆ | ನೆರೆಯುಡಿದುಜೋಲಾಡುವುಟ್ಟುದ | ಮರಜುವ್ರೋಡುತ್ತಕಟಸಂಭ್ರಮಿಸಿತುವಧೂನಿವಹ ||೧೦|| ಕೆಲರುಪತಿಪರಿಚರ್ಯೆಯನುಕೆಲ | ಕೆಲರುತತ್ಪಿತೃಮಾತೃಸೇವಾ | ವಳಿಗಳನುಕೆಲಕೆಲರುಮನೆಮನವಾರ್ತೆಗಳನುಳಿದು || ಕೆಲರುಶಿಶುಗಳಗೂಡುತಾವೊಲೆ | ಗಳನುಪಾಲ್ಬೆಣ್ಣೆಯನುಮಿಗೆಕಳ | ವಳಿಸಿದರುಗೋಪಿಯರುತತ್ತತ್ಕ್ರಿಯೆಗಳನುಮರೆದು ||೧೧|| ನೂಕಿದರುಪತಿಗಳನುಮಕ್ಕಳ | ನೇಕೆತಮಗಿವರೆನುತಜರೆದುನಿ | ರಾಕರಿಸಿಕುಲಧರ್ಮವನುಧಿಕ್ಕರಿಸಿಪರಿಜನವ || ಸೋಕಿದವರನುಕೃಷ್ಣನೆಂಬುವಿ | ವೇಕಿಸದೆತಕ್ಕೈಸುತಬಲೆಯ | ರಾಕುಳೆಯರಾದರುಮುಕುಂದನಕೊಳಲಧನಿಗಳಿಗೆ ||೧೨|| ಉಟ್ಟದನುಬೀಸಾಡಿಮುಡಿಗಳ | ವಟ್ಟಹೂಮಾಲೆಗಳನುಡಿಯಲಿ | ಕಟ್ಟಿಕಿವಿಗಳಲೊಪ್ಪವಿಟ್ಟರುಕೈಯ್ಯಕಂಕಣವ || ಹಟ್ಟಿಗಳುಮನೆಯಂದುಮನೆಗಳು | ಹಟ್ಟಿಯಂದೈದುವರುಕೆಲಸಕೆ | ಅಟ್ಟದನೆಮಗುಳಚುತಲಿರ್ದರುಮರದುಕೆಲಕೆಲರು ||೧೩|| ಒಂದಹೇಳಿದರಬಲೆಯರುಮ | ತ್ತೊಂದನೇಮಾಡುವರುಕೇಸವ | ನೊಂದನೆನವರುವಚನದಲಿಹೇಳುವರುಮತ್ತೊಂದ || ತಂದೆಬಾರೆಲೆತಮ್ಮಬಾಹೋ | ಗೆಂದುಪತಿಗಳಕರೆದುಕಳುಹುವ | ರಿಂದುಮುಖಿಯರುಭಾವಿಸದೆಹರಿವಿರಹವಿಕಳೆಯರು ||೧೪|| ನಗಿಸಿಕೊಂಡರುಕೆಲರುಕೈಯ್ಯಲಿ | ಮುಗಿಸಿಕೊಂಡರುಕೈಗಳನುಮರು | ಳುಗಳುಕೆಲರಿಂಗೆನಿಸಿದರುಕೆಲರಿಗೆಮಹಾತ್ಮೆಯರು || ಬಗೆಯದಿಹಪರಲೋಕವೆರಡರ | ಬಗೆಯಬಳಕೆಯನೈದೆವರಯೋ | ಗಿಗಳವೊಲೀಡಾಟಹೊರವಂಟರುಜಗದ್ಭ್ರಮೆಯ ||೧೫|| ಕೆಲರುಹೊರವಡಲರಿಯದಾಮನೆ | ಗಳಲಿಮನದೊಳಗಾಮುಕುಂದನ | ಚೆಲವಮೂರ್ತಿಯನಪ್ಪಿಸಂಚಿತಸುಕೃತದುಷ್ಕೃತವ || ಕಳೆದುಕೃಷ್ಣಧ್ಯಾನಸುಖದಲಿ | ಮುಳುಗಿವಿರಹಾನಲನಬೇಗೆಗೆ | ಕಳೆನರವನೀಡಾಡಿಸಂದರುಮುಕುತಿಗಬಲೆಯರು ||೧೬|| ಬೊಡ್ಡಿಹೋದವೆನೀನದೆಲ್ಲಿಗೆ | ಖಡ್ಡಿಗೆನ್ನನುಕೊಲ್ಲದೆನುತಿದೆ | ಗಡ್ಡವನಕೆವರುತ್ತಹಿಡಿದರೆಕಾಂತೆಬಿಸವಳಿದು || ಅಡ್ಡವಿಸಿದರೆಪತಿಗೆತನುವನು | ಬಡ್ಡಿಸಹಿತೊಪ್ಪಿಸಿದಳಕ್ಕಟ | ಖಡ್ಡತನಬೇಡೆನುತಲಿರ್ದುದುಶ್ಶೀಲಜನನಿವಹ ||೧೭|| ಅಂಗನೆಯರಿಂತುಳಿದುಗೃಹಕೃ | ತ್ಯಂಗಳನುಸಂಸಾರವಿಷಯಾ | ಸಂಗವನುನೆರೆತೊರೆದುಪರವಶರೂಢರಂದದಲಿ | ರಂಗನಾಥನಮಧುರತರವಹ | ಪೊಂಗೊಳಲನಾದವನುಕೇಳುತ | ನಂಗಶರಪರವಶೆಯರೈದಿದರಾವನಾಂತರಕೆ |

ಚಲಕುಚದ್ವಯಭಾರದಲಿನಡು | ಬಳುಕೆಬಹಳನಿತಂಬಭಾರ | ಕ್ಕಲಸಿಕೃಷ್ಣಧ್ಯಾನಪರವಶೆಯರುವನಾಂತರಕೆ || ಲಲಿತಕಂಕಣ ಹಾರಮಣಿಕುಂ | ಡಲಗಳೆಸೆಯಲುಬಂದರಾಪ್ತೋಂ | ಗೊಳಲನಾದವನಾಲಿಸುತಬಳಿವಿಡಿದುಬಾಲೆಯರು || ೧೯ || ಬಂದಗೋಪೀ ಜನವನಾಗೋ | ವಿಂದನೀಕ್ಷಿಸಿನುಡಿಯಬಲ್ಲರ | ತಂದೆಕಾಣುತಕಮಲಮುಖಿಯರಭಾವವನುತಿಳಿದು || ಎಂದನೇತಕೆಸತಿಯರಿ ರನೀವು | ಬಂದಿರಿತ್ತಲರಾತ್ರಿಯಲಿಭಯ | ವೆಂದುನೋಡದೆಘೋರಸರ್ಪನಿಷೇವಿತಸ್ಥಳಕೆ || ೨೦ || ಏನಿದೆತ್ತಲುನೆರದುಬಂದಿ ರಿ | ಮಾನಿನಿಯರಚ್ಚರಿಯಲಾತಾ | ನೇಸುಮಾಡುವಕಾರ್ಯವುಳ್ಳಡೆಹೇಳುವುದುತನಗೆ || ದಾಸಪರಭಯವಿಲ್ಲಲೇಕವು | ಲಾಸನೆ ಯರಿರಗೋಕುಲಕೆಬರ | ಲೇನುಕಾರಣವಿಂದುವಿಪಿನಾಂತರಕೆನೀವೆಂದ || ೨೧ || ಹೋಗಿನೀವ್ಗೋಕುಲಕೆವನಭೂ | ಭಾಗ ವರಿವಿದರೊಳಗೆನೀವಿರ | ಲಾಗದೆನ್ನನುಬರಿದೆಶಂಕಿಸುವರುದುರಾತ್ಮಕರು || ರಾಗಿಯಂದಡೆತಂದೆತಾಯ್ಮೊದ | ಲಾಗಿಬಾಂಧವರ್ಕೈ ದೆನಿಮ್ಮನು | ಬೇಗೆಗೊಂಡರಸುತ್ತಲೈಧರೆಹೋಗಿನೀವೆಂದ || ೨೨ || ನೋಡಬಂದಿರೆವನದಶಿರಿಯನು | ನೋಡಿಹೂತೊಪ್ಪ ವುದುಸಂಪಗೆ | ಪಾಡುವೆಳೆಗೋಗಿಲೆಗಳಲಿರಂಜಿಸುವುದಿದುಚೂತ || ತೀಡುವೀತಂಗಾಳಿಲರಿನಲಿತೂ | ಗಾಡುವುದುಸುರಲತೆಧರಿ ತ್ರಿಗೆ | ಬೇಡಿದಿಷ್ಟವನೀವುದೀಕಲ್ಪದ್ರುಮಗಳೆಂದ || ೨೩ || ಫಲಭರದಲಿವೆಮುಂದೆತೋರ್ಪುದು | ಹಲಸುಸುಜನರವೋಲು ಕುಜನರ | ಬಳಕೆಯಂತೊಪ್ಪುವುದುಶಾಲ್ಮಲಿವಿಫಲಪುಷ್ಪದಲಿ || ಕೆಲದಲಿದೆಕಿತ್ತಳೆಯುತಲೆಗಳ | ನೊಲವುತಿವೆಲಾತೆಂಗುಗಳುಬ ಹು | ಫಲಭರಿತಪೀಯೂಷರಸದಲಿಸಾಧುಜನರಂತೆ || ೨೪ || ಬಾಳೆಗಳುಪರಿಪಕ್ವಫಲಗಳ | ಜಾಲವೆಸೆಯಲುಪರಮಯೋಗಿ ಯು | ಪೋಲುಪರಹಿತನಿಷ್ಠೆಯಲಿನೋಡಿರೆದಿಗಂತದಲಿ || ತಾಳವನವಿದೆನೋಡೆಮೆರವರ | ಸಾಳವನವಿದೆನೋಡಿಮೆರವವಿ | ಶಾ ಲವನವಿದೆನೋಡಿನೋಡಿತ್ತಲಿದೆಯೆಂದ || ೨೫ || ಇದೆಸರೋವರಪರಿಮಳೋತ್ಪಲ | ಪದುಮವನವಿದೆಮಲ್ಲಿಗೆಯವನ | ವಿ ದೆಲತಾಮಂಟಪಮನೋಜ್ಞವಿಹಾರವನಭೂಮಿ || ಇದೆಮರುಗಶೇವಂತಿಪಾದರಿ | ಯಿದೆಮೆರವಕೇತಕಿಯಕಾನನ | ವಿದೆಲತಾ ಪಳವೇಷ್ಟಿತದ್ರುಮನಿಕರವಿದೆಯೆಂದ || ೨೬ || ಇವೆನದೀಪುಳಿನಸ್ಥಳಂಗಳು | ವಿವಿಧಖಗಮೃಗಭೃಂಗಕುಲಕಳ | ರವದಲತಿರ ಮಣೀಯವಿಂತಿದೆನೋಡಿವನಲಕ್ಷ್ಮೀ || ಯುವತಿಯರಿರಿನ್ನೇನಕಂಡಿರಿ | ನಿಮಗಭೀಷ್ಟವೆನಿಪ್ಪವನವನು | ವಿವರಿಸಿದೆನಿನ್ನಿಲ್ಲಿನೀ ವಿಹುದುಚಿತವಲ್ಲೆಂದ || ೨೭ || ಹೋಗಿನೀವೆಸಗೋಲಿದುಬಂದರೆ | ಲೋಗರೇತಪ್ಪೇನುನಿಮ್ಮವ | ರೀಗತಾವ್ಕಾಣದಡೆಮ ರುಗುವುದೆನ್ನಗೀಲೋಕ || ಆಗಲದಕೇನಿಲ್ಲಿನೀವಿರ | ಲಾಗದೆಂದೇತನ್ನಮನದಭಿ | ಯೋಗವೇತಕೆಬಂದಿರಿನ್ನೇನಿಲ್ಲಿನಿಮಗೆಂದ|| ಪತಿಗಳಗೆಶುಶ್ರೂಷೆಮಾಳ್ಪುದು | ಸತಿಯರಿಗೆಸದ್ಧರ್ಮಪರರಲಿ | ಮತಿಯಮಾಡದೆಬಾಂಧವರಿಗಿಷ್ಟರಿಗೆನೆಂಟರಿಗೆ || ಮತವನಂದಾ ಚರಿಸುವುದುನಿಜ | ಪತಿಗಹಿತವೆನೆನಡವರಿಂತಿದು | ಸತತವೇದಪುರಾಣಸಂಮತವೆಂದನಸುರಾರಿ || ೨೯ || ಅಳಸದಿರಿಮಕ್ಕಳ ನುಕಾಣದೆ | ಕಳವಳಿಸುತಿದೆಬಂಧುಜನವುಂ | ಮಳಿಸುತಿದೆಪಿತೃಮಾತೃಬಾಂಧವವರ್ಗದಲಿನಿಂಮ || ಲಲನೆಯರಿರಿನ್ನೇನುನಿಮ ಗಿದ | ರೊಳಗೆಕರ್ತವ್ಯಾಂಶವೆನ್ನನು | ಬಳಲಿಸದೆಬೇಗದಲಿಬಿಜಯಂಗೈವುದಕಟೆಂದ || ೩೦ || ಬಡವನಾಗಲಿಮೋಣುಪತಿಮು | ಪ್ಪಡಸಿದವನಾಗಲಿಸುದುರ್ಭರ | ಜಡಬಧಿರಮೂಕಾಂಧನತಿದುಶ್ಶೀಲನಾಗಿರಲಿ || ಬಿಡುವುದುಚಿತವೆಯಲ್ಲಪತಿಯನು | ಮಡದಿಯ ರುಲೋಕದ್ವಯವನೊಡ | ಬಡುವರಕ್ಷತಮಹಾಘನಾಗಿರಲೆಂದನಸುರಾರಿ || ೩೧ || ನಿಂದ್ಯವದುಲೋಕಕ್ಕೆಕೀರ್ತಿಗೆ | ಮುಂ ದಿರವುಭಯಹೇತುಪಾತಕ | ವೃಂದಪಾತ್ರವೆನಿಪ್ಪುದನ್ಯರಸಂಗಸತಿಯರಿಗೆ || ಎಂದಿದನುನೀವರಿತುತನ್ನನು | ಬಂದುವಿಡಿವಿರಿಸಾ ಕದೇತಕೆ | ಬಂದಬಟ್ಟೆಯಲಕಟಮರಳಿದಡೆನಗಹಿತವೆಂದ || ೩೨ || ಮನದಲೆನ್ನನುನೆನೆವುದಲ್ಲದೆ | ತನುವಿನಲಿಫಲವೇನುಸಂ ಗಿಸಿ | ವನಿತೆಯರಿರಾಅಗಲರಿಯದುದೇಹಸಂಗದಲಿ || ನೆನವಕೇಳುವಕೀರ್ತಿಸುವಬಿಡ | ದನುಭವಿಸುವಾನಂದವದುಸಂ | ಜನಿ ಸಲರಿಯದುತನುವಿನಲಿಸಾಯುಜ್ಯಪದವೆಂದ || ೩೩ || ಹೋಗಿನೀವಂಜದಿರಿಭವಭಯ | ಸಾಗರಕೆತನ್ನಂಘ್ರಿಕಮಲಪ | ರಾ ಗಚಿಂತಾಪೋತವೇಪರಿಯಾಪ್ತವೆಂದೆನಲು || ನಾಗಶಯನನನುಡಿಯಬಿರುಗಣೆ | ತಾಗಿಧಟ್ಟಿಗಿದೊಡಲುಕಂಪಿಸಿ | ಬಾಗಿನಿಂದ ಉತಲೆಗಳನುಕಾಂತೆಯರುಕಳವಳಿಸಿ || ೩೪ || ಕೇಳುತವೆಕೆಂಬನಿಗಳೊಸರಿದ | ವಾಲಿಗಳಲೋರಂತೆಕಾಡಿಗೆ | ಮೇಳವಿಸಲಾ ನನದಲಧರದಲಗ್ರಕುಚಗಳಲಿ || ಬೀಳುತಿರ್ದವಿದೇಮುಕುಂದವಿ | ಶಾಲಭೋಗಸ್ಥಾನವೆಂಬುದ | ಲಾಲಿಸುತಲಚ್ಚಣಿಸಿತ್ತೋರಿಸು ಪಂತೆಬಿಂದುಗಳು || ೩೫ || ಕರತಳದಕದಪಿನಲಿಸತಿಯರು | ಶಿರವೆರಗಿಕೇಳುತ್ತಕೃಷ್ಣನ | ಬಿರುನುಡಿಯಲೆಕ್ಕವನುಬರಮಂದದ ಲಿಮೇದಿನಿಯ || ಚರಣದಂಗುಟದಲ್ಲಿಬರವುತ | ಸರಸಿಜಾಕ್ಷಿಯರೆಸೆದರೆವಿಮ್ಮಾ | ಶಿರದಬರಹವಿದೆಂದುಸಾಂಜ್ಞೆಯಮಾಡಿತೋ ರ್ಪಂತೆ || ೩೬ || ಹೃದಯದಂತಸ್ತಾಪದಲಿಕೋ | ಳ್ಗುದಿಗುದಿವಸುಯ್ಲುಗಳಲೊಣಗಿದ | ವದನಕಮಲದಬಾಡಿದಧರದಬಾಷ್ಪ ಬಿಂದುಗಳ || ಕಡಿದಿಹರಿವಕುಚಾಗ್ರಕುಂಕುಮ | ವಿದಿತಸಿರಿಗಂಧದಸರೋರುಹ | ವೆದೆಯರುಮಾತಾಪದಿರ್ದರುತೀವ್ರದುಃ ಖದಲಿ || ೩೭ || ಸುರಿವಕಂಗಳಬಾಷ್ಪವನುನಿಜ | ಕರತಳದಲೊರಸುತ್ತಕೃಷ್ಣನ | ಶಿರಿಮೊಗವನೋಡುತ್ತಹದುಳಿಸಿಕೊ ಳುತಮನದೊಳಗೆ || ಸರಸಿಜಾಕ್ಷಿಯರೆಂದರಂದಂ | ಬುರುಹನಾಭನನುಡಿಗೆಮಾರು | ತ್ತರವನೊಯ್ಯನೆಗದ್ಗದಾಕ್ಷರ

ವೆಸವವಚನದಲಿ ॥ ೩೮ ॥ ಒಡೆಯನಿಷ್ಠುರವೇಕೆತೊತ್ತಿಯ । ರೊಡನೆಯೋಗ್ಯವೆಕೃಷ್ಣನಿನಗೀ । ನುಡಿನಿಜೋಕ್ತಿಯ
ಸತ್ಯವನುವಾಚಿಸುವುದೆಮಗಿಂದು ॥ ಬಿಡುವೆನಾವೆಂತೊಪ್ಪುದೀವೆ । ಲ್ಲಡಿಗಳನುಕ್ಷ್ಮೀಕುಚಾಗ್ರದ । ತೊಡವುಗಳದಾಸ್ಯ
ವನುಕರುಣಿಪುದೆಂದರಬಲೆಯರು ॥ ೩೯ ॥ ಬಿಟ್ಟುನಿಜಪಿತೃಮಾತೃಪತಿಗಳ । ನಿಷ್ಟರನುನಂಟರನುಸುತರನು । ಸೃಷ್ಟಿಪಾ
ಲಕರೊಡೆಯನಿನ್ನನೆನಚ್ಚಿಮನಮೆಚ್ಚಿ ॥ ಬಿಟ್ಟೆವಿಹಪರಲೋಕದೃಷ್ಟಾ । ದೃಷ್ಟಭೋಗಂಗಳನುತ್ರಮ್ಮನು । ಬಿಟ್ಟಡೆಮಗಾ
ರಿನ್ನುಗತಿಯುಂದರುಮ್ಮಗಾಶ್ರಯರು ॥ ೪೦ ॥ ಸತಿಸುತಪ್ರಿಯಬಂಧುಗಳಗತಿ । ಹಿತವೆನಿಪ್ಪನಿವೃತ್ತಿಧರ್ಮ । ಸ್ಥಿತಿವಿಧನೆನಿಜಧ
ರ್ಮವೆಂದೆಮಗೆಂದೆಸತಿಯರಿಗೆ ॥ ವಿತತವೆನ್ನೀವೃತ್ತದಖಿಳಾ । ಕೃತಿಗಳಿಗೆಪರಮಾತ್ಮನೀನಿರ । ಲಿತರಜೀವಭ್ರಾಂತಿಭಕತಿಯಲೇನು
ಫಲವೆಂದ ॥ ೪೧ ॥ ಪ್ರಿಯರೆನಿಪ್ಪವರೆಲ್ಲಮಗುಳ । ಪ್ರಿಯರೆನಿಪರಂತಿರಲಿನಿತ್ಯ । ಪ್ರಿಯನಲಾನೀನಖಿಳಸಚರಾಚರದಜೀವರಿಗೆ ॥
ನಯವಿದನೆಕಾಡದಿರುಕರುಣಾ । ಶ್ರಯನೆತಮಗಿನ್ನೇಕೆಬಂಧು । ಪ್ರಿಯರೆನಿಪದುಃಖಪ್ರದರುದುಃಖೈಕವಿಗ್ರಹರು ॥ ೪೨ ॥ ಅರಿ
ಯರೇಮುನಿಮುಖ್ಯರೆಲ್ಲವ । ತೊರೆದುನೀನೇಗತಿಯನುತ್ತ । ಕ್ಕರಿತುಹೃದಯಸರೋಜದಲಿನಿಜಪಾದಪಂಕಜವ ॥ ನೆರೆವಿಡಿದು
ಸಂಸಾರದುಃಖವ । ಮರವರಿನ್ನೆನಲೇತಕಿನ್ನಗ । ಕುರಿಯಕಾದೆವೆಕೃಷ್ಣಕಾಡದಿರೆಂದರಬಲೆಯರು ॥ ೪೩ ॥ ಚಿತ್ತನಿನ್ನಲಿಚಲಿ
ಸದಿದೆಗೃಹ । ಕೃತ್ಯವನುಮಾಡುವಡೆಮನೆಯಲಿ । ಚಿತ್ತಬೇರೊಂದುಂಟೆಭಾವಕರರಸನೀನಿದನು ॥ ಚಿತ್ತವಿಸಲೇಕೊಲ್ಲೆಮಾಡು
ವ । ಕೃತ್ಯವಾವುದುಕೈಗಳಗೆನಿಜ । ಚಿತ್ತಸಾಕ್ಷಿಯೆನಿಪ್ಪನಿನ್ನಪದಾಂಬುಜವನುಳಿದು ॥ ೪೪ ॥ ಮಿಡುಕಲೊಲ್ಲವುಕರಣಕರುಣಿ
ಗ । ಳೊಡೆಯಕಾಲ್ಗಳಪೇಗುವವುಮೆ । ಲ್ಲಡಿಯಸನ್ನಿಧಿಯಿಂದಗಮನಕ್ಕೊಂದುಹಜ್ಜೆಯನು ॥ ಹಿಡಿದುಕಾಡುವೆಕರಣನಿಕರದ ।
ಗಡಣವನುನಿರ್ಬಂಧವುಳ್ಳಡೆ । ಕಡಿದುಬೀಸಾಡೆಮ್ಮನೂರಿಂಗೆಂದರಬಲೆಯರು ॥ ೪೫ ॥ ಮೆಲುನಗೆಯಮಂಜುಳಕಟಾಕ್ಷದ । ಲಲಿ
ತವೇಣುನಿನಾದದಿಂದು । ಜ್ವಲಿಸುತಿದೆಕಾಮಾಗ್ನಿಸುಡುತಿದೆನಮ್ಮದೇಹವನು ॥ ತಳೆದುನಂದಿಸುನಿನ್ನಧರಸುಧೆ । ಗಳನುಮೇಣ
ಲ್ಲದಡೆಸಾಯುವ । ನುಳಿದುಕೊಡುವೆವೊಪ್ಪುವೀನಿನ್ನಂಘ್ರಿಗಳಪದವ ॥ ೪೬ ॥ ಇಂದಿರೆಗೆದತ್ತಾವಸರವಹ । ವಂದ್ಯವಹನಿನ್ನಂ
ಘ್ರಿಕಮಲ । ದ್ವಂದ್ವಸಂಸ್ಪರ್ಶನದಪರಮಾನುಗ್ರಹದಸಿದ್ಧಿ ॥ ಎಂದೆಮಗೆದೊರಕೊಂಡುದಂದಿಂ । ದಿಂದುತನಕೆಲೆದೇವಲೋಗರ ।
ಮುಂದೆನಿಲಮನವಿಲ್ಲನೀವಿರಹಿತಧರಿತ್ರಿಯಲಿ ॥ ೪೭ ॥ ದಿವಿಜಪತಿಗಳನೊಲ್ಲದಂಬುಜ । ಭವಭವತ್ಪದವೆಂಬತುಲಸೀ । ಭವ
ನವನುಕಾಮಿಸುವಳುರದಲಿಬೇರೆಮನೆಮಾಡಿ ॥ ಶಿವಶಿವಾನತಭೃತ್ಯಸುರಮುನಿ । ನಿವಹಸೇವಿತಸೌಖ್ಯಪರಮೋ । ತ್ಸವಕಳಿ
ಕಿಸುರವರಸಮಾರಾಧಿತನಿಜಾಂಘ್ರಿಯುಗೆ ॥ ೪೮ ॥ ಕರುಣಿಸುವುದೆಮಗೊಡೆಯನಿನ್ನೀ । ಚರಣವನುಮರೆಯೊಕ್ಕೆವೀನಿ । ನ್ನ
ರುಮನೋಜ್ಞಸ್ಮರನಯನಾಪಾಂಗವೀಕ್ಷಣವ ॥ ಉರಿಯಲದ್ದುದುದೇಹವೆಮಗೆಲೆ । ಕರುಣಿಗಳದಾತಾರನೆಂಬೀ । ಬಿರಿದು
ಗಡದಾಸಿಯರನೀಕ್ಷಿಸನಾಥೆಯರನೊಲಿದು ॥ ೪೯ ॥ ಪೊಂಗೊಳಲಗೀತಾಮೃತಂಗಳ । ತುಂಗತ್ರಿಜಗನ್ಮೋಹನದನಿ । ನ್ನಂಗ
ಕಾಂತಿಯುಸಾಷ್ಟವದನಿದನೊಮ್ಮೆಕಿವಿಗಳಲಿ ॥ ಕಂಗಳಲಿಸೀವಿಶಿದಡಕಟಾ । ವಂಗನೆಯರಳವಳಿಯಕಾರ್ಯವ । ದಂಗಳನುಬಿಡು
ವವರುಹೇಳಲಿಮೂರುಲೋಕದಲಿ ॥ ೫೦ ॥ ತರುಗಳಿಗೆತನುಪುಳಕವೆನಲಿ । ನ್ನರಿದೆಪಶುಮೃಗಪಕ್ಷಿಗಳಿಗೀ । ನರರಿಗೆಂತುಟೊ
ವಿಕೃತಿವಿವರಿಸಬಲ್ಲರಾರದನು ॥ ಪರಿಕಿಸಲುನಿನಗಿಲ್ಲನಿನ್ನೀ । ಪರಮಸೌಭಾಗ್ಯವನುಭವವೆಲೆ । ಕರುಣಿಗಳಬಲ್ಲಹನೆಕರುಣಿಸು
ದಾಸ್ಯವನುನಮಗೆ ॥ ೫೧ ॥ ಬಲ್ಲೆವಾವ್ಸಾಕ್ಷಾತಲಕ್ಷ್ಮೀ । ವಲ್ಲಭನುಭೂಭಾರಹರಣವ । ನಲ್ಲಿಯೋನಿಶ್ಚೈಸಿರಪ್ರಿಸಲೆಂದುಸುಜ
ನರನು ॥ ಬಲ್ಲಹನೆಬಂದೇಕೆನಮ್ಮನು । ಕೊಲ್ಲದೇತಕೆಕೊಲುವೆನಿಜಕರ । ಪಲ್ಲವವನಿರಿಸೆಮ್ಮಶಿರದಲಿಕುಚಭರಂಗಳಲಿ ॥ ೫೨ ॥
ಎಂದುಸತಿಯರುಕರಗಿಕಂಬನಿ । ದುಂಬಿಳಿಯೆಮೋದಿನಿಗೆಕಾಣುತ । ಮಂದಹಾಸದಲೆಸವನಿಜಕರುಣಾಕಟಾಕ್ಷದಲಿ ॥ ನಿಂದಿರೆ
ಲುನಳಿನಾಕ್ಷಿಯರುಗೋ । ವಿಂದನೊಲವನುಕಂಡುತಮತಮ । ಗಂದುತೆಗೆದಪ್ಪಿದರುನಿತ್ಯಾತುಮನನೊಲವಿನಲಿ ॥ ೫೩ ॥

ಇಂತು ಸಂಧಿ ೨೫ಕ್ಕಂ ಪದನು ೧೨೦೦ಕ್ಕಂ ಮಂಗಳಮಸ್ತು.

ಇಪ್ಪತ್ತಾರನೆಯ ಸಂಧಿ.

ಕೃಷ್ಣನ ಅಂತರ್ಧಾನ ಲೀಲೆ.

ಸೂಚನೆ ॥ ಗರ್ವವನುಸ್ವೈರಿಸನುತಾನಂ । ದುರ್ವಿಗುಪದೇಶಿಸುವನೆವದಲಿ । ಸರ್ವಗತನಡಗಿದನುಗೋಪೀಜ
ನಕೆಮ್ಮೆಗೊಡದೆ ॥

ಪದನು ॥ ಕ್ಷಿತಿಪಕೇಳುಮುಕುಂದನಾಡುವ । ಕೃತಕವಚನಂಗಳಿಗೆಮನದಲಿ । ಸತಿಯರುಂಮಳಸುತ್ತವಿರಹಕ್ಕೃಶಾನು
ತಾಪದಲಿ ॥ ಗತಿಗೆಮುತ್ತಿರೆಕಂಡುಮಂದ । ಸ್ಮಿತಮಧುರಪೀಯೂಷರಸರಂ । ಜಿತಕಟಾಕ್ಷದಮಳೆಯಗರದಂಗನೆಯರಂಗದಲಿ ॥
ಜಾಣೆಯರುಜಗದೀಶನೊಲವಿನ । ಕೇಣವನುಕಾಣುತ್ತಭುವನ । ಪ್ರೀಣನೋದ್ಯತಬಹಳಕಾರುಣ್ಯಾಮೃತೇಕ್ಷಣದ ॥ ಏಣಧ

ರನುದಯದಲಿಕುಮುದ। ಶ್ರೇಣಿಚೇಷ್ಟಿಸುವಂತೆಸಲೆಸ । ಪ್ರಾಣಿಸಿದತಪ್ಪಿದರುಮಿಗೆಕಂಗಳಲಿಕೈಗಳಲಿ ॥ ೨ ॥ ಸಿಲುಕಿದುದು
ಗೋಪಾಂಗನಾವ್ರಜ। ಕುಲಮುಕುಂದೋದಾರಮಧುರೋ । ಜ್ವಲಮೃದುಸ್ಮಿತವದನನಯನಾಪಾಂಗವಿಭ್ರಮದ ॥ ಬಲೆಗೆ
ಭಾಪಚ್ಚರಿಯಿಭುವನಾ । ವಳಯದಾವನಮಾಯೆಯಲಿನೆರೆ। ಶಿಲುಕಿತೊಳಲದೆಕಮಲಭವರುದ್ರಾದಿಗಳುಸಹಿತ ॥ ೩ ॥ ಉರಿ
ಗೆತುಪ್ಪವತ್ತೋರಿದಂತಾ । ತರುಣಿಯರಕಾಮಾಗ್ನಿಕೃಷ್ಣನ । ಚರಣಸಂಸ್ಪರ್ಶನದಪರಮಾನಂದವಿಭವದಲಿ ॥ ಭರಿತವೆನಲಂ
ಕುರಿಸಿಮಗುಳಾ । ಪರಿಸಿತಿಂದ್ರಿಯವೃತ್ತಿಗಳನುದು । ಗರಿಸುತಿರ್ದುದುಬಹಳಚಾಪಲ್ಯದಚಮತ್ಕೃತಿಯು ॥ ೪ ॥ ಸೂರೆಯೋ
ದನುಕೃಷ್ಣನವರಿಗೆ । ಮಾರುವೋದರುಮಾನಿನಿಯರಾ । ಮೂರುಲೋಕಾಧೀಶ್ವರಗೆಮಾಯಾಮಹೇಶ್ವರಗೆ ॥ ನೀರೆಯರು
ಲೋಕಕ್ಕೆಮದನನ । ಮಾರುವಂತಿರೆಲಜ್ಜೆಯನುಸಲೆ । ಮೀರಿದರುತೋರಿದರುಹಿರಿದಹಲೋಕವಿಭ್ರಮವ ॥ ೫ ॥ ಬಳಿಕ
ಗೋಪೀಜನಸಹಿತಗೋ । ಕುಲದರಸನಾಡುತ್ತಯಮುನಾ । ಪುಳಿನದಲ್ಲಿಗೆಮೆರವವನಮಲ್ಲಿಗೆಯಮಂಟಪಕೆ ॥ ಬಲಿದುಬಿಜ
ಯಂಗೈದನೊಪ್ಪುವ। ಮೆಲುಮಳಲಮುಕ್ತಾಪ್ರಕೀರ್ಣ। ಸ್ಥಳಕೆಬಹುವಿಧಕುಸುಮಸೌರಭರಂಜಿತಸ್ಥಳಕೆ ॥ ೬ ॥ ಅಮನೋ
ಜ್ಞಸ್ಥಳದಲಂತಾ। ಭಾಮೆಯರುಮನದಣಿಯಲಾತ್ಮಾ । ರಾಮನಾಡಿದನಾತ್ಮವಶ್ಯೇಂದ್ರಿಯನುತಾನಾಗಿ ॥ ಭೂಮಿಪತಿಕೇಳ
ಸುರವನಿತಾ। ಸ್ತೋಮವಾಲೀಲೆಗಳನೀಕ್ಷಿಸಿ । ಕಾಮಶರಮೂರ್ಛಿತೆಯರಾದರುಮೇಲೆಗಗನದಲಿ ॥ ೭ ॥ ಸರಸವಚನದ
ಸುಸ್ಮಿತೇಕ್ಷಣ । ದುರುತರದವಿಭ್ರಮದನಖಸಂ । ಸ್ಪರುಶನದಕುಚಯುಗಳನಿಷ್ಪೀಡನದಚುಂಬನದ ॥ ಕರತಳದಸಮ್ಮೇಳದಿ
ತೆರೇ। ತರದೃಢಾಲಿಂಗನದಮನುಮಥ। ಚರಿತೆಯರಚಾತುರ್ಯನಿಧಿರಮಿಸಿದನುರಮಣಿಯರ ॥ ೮ ॥ ಬೆಚ್ಚವಂಗದಲಂಗಮ
ನಮನ । ಬೆಚ್ಚದವುಮದನಾಸ್ತ್ರಹತಿಗಳು । ಮುಚ್ಚದವುಮಾಡಿದವುಕರುಣಾನೀಕರತದೊಳಗೆ ॥ ಕಚ್ಚಿದಧರದಕೆಳದಕ
ಣಮನ। ಬೆಚ್ಚರಿನಕಾಂತೆಯರುಮುಳುಗಿದ । ರಚ್ಯುತಶ್ಲೇಷಾಧಿಕಾನಂದಾಮೃತಾಬ್ಧಿಯಲಿ ॥ ೯ ॥ ಇಂತುರತಿಲೀಲೆಯ
ಲಿಲಕ್ಷ್ಮೀ । ಕಾಂತನಮಗೊಳಗಾದನೆಂದಾ । ಕಾಂತೆಯರುಕೃಷ್ಣಾಂಘ್ರಿಸಂಸ್ಪರುಶನದಸೌಖ್ಯದಲಿ ॥ ಸಂತವಿರದೀಸುರನ
ಗೋರಗ। ಕಾಂತೆಯರೊಳೆಮ್ಮಿಂದಧಿಕಗುಣ । ವಂತೆಯರದಾರೆನುತಗರ್ವಿಸಿದರುಲತಾಂಗಿಯರು ॥ ೧೦ ॥ ಕತ್ತಲೆಗೆಬೆಳಗಿಂ
ಗೆಸೇರುವೆ । ಯೆತ್ತಣದುಗರ್ವಕ್ಕೆತನ್ನೊಳ । ಗೆತ್ತಣದುಸಮ್ಮೇಳಸಾಕಿನ್ನಿವರಗರ್ವವನು ॥ ಕಿತ್ತುಕಳವೆನೆನುತ್ತತನ್ನಯ ।
ಚಿತ್ತದಲಿಗೋವಿಂದನರಿದಾ। ಮತ್ತಕಾಶಿನಿಯರಿಗೆಮಾಡಿದನಂದನುಗ್ರಹವ ॥ ೧೧ ॥ ಸರಸಿಜಾಕ್ಷಿಯರೆನ್ನಸನ್ನಿಧಿ। ಯಿರವಿನಲಿ
ಗರ್ವಿಸಿದರೆನ್ನಯ। ವಿರಹವೇವರವೈದ್ಯವಿವರಿಂಗೆನುತಮನದೊಳಗೆ ॥ ಪರಮಪುರುಷೋತ್ತಮನುನಿಮಿಷಾಂ। ತರದೊಳಡಗಿ
ದನಾಗಳಂತಿರೆ। ತರುಣಿಯರುಕಳವಳಿಸಿತಳವೆಳಗಾದರಳವಳಿದು ॥ ೧೨ ॥ ನೋಡಿದರುದೆಸೆದೆಸೆಗೆಸತಿಯರು । ಕೂಡೆಹಂಬಲಿ
ಸುತ್ತತಾವ್ಮ। ನ್ನಾಡಿದೆಡೆಗಳಲರಸಿಕೃಷ್ಣನಕಾಣದಳವಳಿದು ॥ ಪಾಡುತಚ್ಯುತಲೀಲೆಗಳಲೆಡೆ । ಯಾಡುತಿರ್ದರುಕಾನನದಲೊ
ಳ। ಗೂಡಿದಗ್ಧಚಿತ್ತೆಯರುಪುತ್ಥಳಿಗಳಂದದಲಿ ॥ ೧೩ ॥ ಉರ್ವಿಪತಿಕೇಳರಸಿಕಾಣದೆ। ಸರ್ವಗತನನುವನದತರುಲತೆ। ಪರ್ವ
ತಂಗಳನಳಿನಿಕರಖಗಮೃಗಕುಲಂಗಳನು ॥ ನಿರ್ವಿಶೇಷದಲೈದೆಬೆಸಗೊಳು। ತುರ್ವಿಹಂಕೃತಿಗಿದುವೆಫಲವೆನು। ತುರ್ವಿಗುಪದೇಶಿ
ಸುವವೊಲ್ತೊಳಲಿದರುವನದೊಳಗೆ ॥ ೧೪ ॥ ತರುಗಳಿರತೋರಿರೆಮುರಾಂತಕ। ನಿರವನೆಲೆಯೆಲೆಚೂತಚಂಪಕ । ಕುರವ
ರಾಶ್ವತಾದವರಹಿತಜೀವಿಗಳಿರೆಮಗೆ ॥ ಮರುಗಮಲ್ಲಿಗೆನೊಲ್ಲೆಪಾದರಿ। ವರಲತೆಗಳಿರಮೆರವಕಮಲಾ । ಕರಗಳಿರತೋರಿರೆ
ತಾರ್ಥಮುಕುಂದನಿದ್ದೆಡೆಯ ॥ ೧೫ ॥ ಕೊಂಡುಹೋದನುಕೃಷ್ಣನೆಮ್ಮನು। ಮಂದಮಾರುತಕೇಳೆಲೆಗೆಕಾ। ಳಿಂದಿಕೇಳೌತಾ
ಸಿತುಲಸಿಮುಕುಂದಪದನಿಳಯೆ ॥ ನಂದಸುತನೊಲವುಂಟುಗಡತೋ। ರಿಂದುತಮಗಚ್ಯುತನಚರಣ। ದ್ವಂದ್ವವನುಧರಿಸಿಹನ
ನಿನ್ನನುಸರಾಗದಲಿ ॥ ೧೬ ॥ ಆವತಪವನುಮುನ್ನಗೆಲೆಭೂ। ದೇವಿಮಾಡಿದೆತಾಯೆಕೃಷ್ಣನ। ಪಾವನಾಂಘ್ರಿಸ್ಪರ್ಶಪುಳಕಿತೆಯಾ
ನೀನೆಂದು ॥ ಆವರಾಹನಸಂಗವೋಮೇ। ಣಾವಿಶಿಷ್ಟತ್ರಿವಿಕ್ರಮಾಂಘ್ರಿಯ। ಸೇವೆಯೋಪುಳಕಕ್ಕೆಕಾರಣವಾವುದಾನಿನಗೆ ॥
ಮೃಗವನಿತೆನೀನಾರನೋಡುವೆ। ದೃಗುಯುಗಳವೇಕರಳಿದವುಕಂ। ಡೆಗೆಮುಕುಂದನಮೂರ್ತಿಯನುಪಾವನಸುಕೀರ್ತಿಯನು ॥
ಮುಗಿವಿರಾರಿಗೆಕೈಯ್ಯಕಮಲಾ। ಳಿಗಳಿರುಪಚಾರವನುಬಲ್ಲೆನೆ । ಮಗುಧರರಸನುಕೃಷ್ಣನಲ್ಲದಡೀವಿಧಿಯೆನಮಗೆ ॥ ೧೮ ॥
ಲನೆಯರುನೋಡುತ್ತಲಿದೆಗೋ। ಕುಲದರಸನಮರಾಂಗನಾಕುಚ। ಲಲಿತಕುಂಕುಮಗಂಧಮಿಶ್ರಿತವೈಜಯಂತಿಗಳ ॥ ಲಲಿತಗಂ
ಧಗಂಧನಹನೆಳ। ನುಳಗೊಳುತ್ತಿದೆನಾಸಿಕವನಾ। ಲಲನೆಯಾವಳೊಕೃಷ್ಣನೊಡನೈದಿದವಳತಿಮಾನ್ಯೆ ॥ ೧೯ ॥ ನೀಡಿಭುಜವನು
ನಿತೆಯಂಸದ। ಲಾಡಿಸುತಕಮಲವನುಹರಿಸುಳಿ। ದಾಡಿದೆಡೆಯಿದುರಮ್ಯತರವಾಗಿದೆವನೋದ್ದೇಶ ॥ ಪಾಡುವಳಿಗೀತವನು
ಕೇಳು। ತಾಡುವೀನವಿಲುಗಳನೃತ್ಯವ । ನೋಡುತಿದೆಹೋದನೆಮನೋಜ್ಞೆಯರೀವನಾಂತರಕೆ ॥ ೨೦ ॥ ಇಂತುವನವನ
ದೊಳಗೆಗೋಕುಲ। ಕಾಂತೆಯರುತೊಳಲುತ್ತಲಕ್ಷ್ಮೀ। ಕಾಂತನನುಕಾಣದೆಚರಾಚರಜೀವಭರಿತನನು ॥ ತಂತಮಗೆತರುಣಿ
ಯರುಕೃಷ್ಣನ। ಚಿಂತೆಯಲಿಲೋಕಕ್ಕೆಮರುಳಾ। ದಂತೆತದ್ಭಾವದಲಿಚೇಷ್ಟಿಸಿದರುತದಾತ್ಮೆಯರು ॥ ೨೧ ॥ ನೋಡುತ್ತೈಧನೆ

ಕೃಷ್ಣನೆಂದವ । ರಾಡುಮೆಂಬುಜದೆಡೆಗೆಹರಿಮಾ । ತಾತುಮೈಥನೆಯುಂದುಘನಗಂಭೀರರವದೆಡೆಗೆ ॥ ಮಾಡುಮಳಿಗಳಿಗೈದುಮೆರಾ
ಹರಿ । ಮಾಡುತ್ತೈಥನೆಯುಂದುಸತಿಯರು । ಕೂಡೆಹಂಬಲಿಸಿದರುಕೃಷ್ಣನಮೆಡವಡೆಸೆದೆಸೆಗೆ ॥೨೨॥ ಪರಿಮಳವರುಡಿಹಿಡಿ
ದುಹರಿವರು । ತರುಣಿಯರುಕೃಷ್ಣಾಂಗರಾಗದ । ಸರಸತರಪರಿಮಳವಿದೆಂದೇಕಮಲವನದೆಡೆಗೆ ॥ ಕರಿಯುಕಬ್ಬಿನಬನಕೆಕೃ
ಷ್ಣನ । ನಿರುಪಮಿತತನುಕಾಂತಿಯುನುತಂ । ಬುರುಹಮುಖಿಯರುಬೇದಿಪರಿವರುಕೂಡೆವನದೊಳಗೆ ॥೨೩॥ ಮರದಾ
ತಾವಿದಿರೆಂಬುದನುತಂ । ತರವನೋರಂತಾಮುಕುಂದನ । ಪರಮಲೀಲೋದಾರಹಾಸಕಟಾಕ್ಷವೀಕ್ಷಣವ ॥ ಪರಿಪರಿಯು
ತಂಮುಕ್ತಿಗಳಬಂ । ಧುರವಿಹಾರಂಗಳನುನೆರದಂ । ಬುರುಹಮುಖಿಯರುತಾಳ್ದರುಕೃಷ್ಣಾತ್ಮಭಾವನೆಯು ॥೨೪॥ ಆನು
ಪೂತನಿಯುಂದಳೊಬ್ಬಳು । ದಾನವಾಂತಕನಾದಳಾಸ್ತನೆ । ಮಾನವನುಮಾಡಿದಳುಬಿಟ್ಟಳುಕಾಂತೆಬಸವಳಿದು ॥ ತಾನುತೊ
ಟ್ಟಲುಕೃಷ್ಣನೆಂದನು । ಮಾನಿಸುತವುತ್ತೊಬ್ಬಳಾಶಕ । ಟಾನುಕಾರದಕಾಂತೆಯುನುಕೆಡೆಯೊದದಳಂಬರಕೆ ॥೨೫॥ ಲಲ
ನೆಯೊಬ್ಬಳುಕೃಷ್ಣನಾನೆಂ । ದಿಳೆಯುಲಿರೆಗಿರಿಯುಂತ್ರೆಹೊತ್ತೊ । ಯ್ದಳುಮಹಾಮಾತ್ಯಾಕೃತಿಯುಲೊಬ್ಬಳುನಭಸ್ಥಳಕೆ ॥ ಉಲಿ
ವಗೆಜ್ಜೆಯುಕಾಲನಂಗಳ । ದೊಳಗೆಳದುಸುಳಿದಾಡುತಂಜಿದ । ಪ್ರೊಲಾಯುಶೋದೆಯುಕೈಗಳಿಗೆಹರಿತಪ್ಪಳಾಕ್ಷಣಕೆ ॥೨೬॥
ಹಾಲುಬೆಣ್ಣೆಮೊಸರ್ಗಳನುನಿಜ । ಬಾಲಕನುಕದ್ದುಂಡನೆಂದೊಯಿ । ದಾಳಿಗಪನಾಡುವರುನೆರದುಯುಶೋದೆಗೈತಂದು ॥
ಹೇಳುವಳುಮತ್ತೊಬ್ಬಳಂಜಿಸಿ । ಕೋಲುಗೊಂಡರೆಕಾಣುತ್ತೊಬ್ಬಳು । ಲೋಲಲೋಚನೆಕೃಷ್ಣನಾನೆಂದಳುವಳನುಕರಿಸಿ ॥
ಬೆಣ್ಣೆಗಳವನುಮಾಣಿಸುವೆನೀ । ಚೀಣನನುಕಟ್ಟಿರಿಸಿತಾರಾ । ಕಣ್ಣಿಗಳನೆಂದೊಬ್ಬಳೊಬ್ಬಳನಡುವನೊಡೆಬಿಗಿದು ॥ ಪ್ರ
ಣ್ಯನಿಧಿಕಟ್ಟುವಳುಕರದೆರೆ । ಯುಂಣಬಾಯುಂನರಸಬಾರೆಲೆ । ಯಾಂಣುಬಾನಿಂಮುಂಣನೊಡನೆಂದೆಂಬಳಬುಜಾಕ್ಷಿ ॥೨೮॥
ಕರುಗಳಾದರುಕೆಲರುಕೆಲಬರು । ಕರುವಳರುತಾವಾಗಲೊಬ್ಬಳು । ಮುರಹಿಕೃಷ್ಣನಪ್ರೋಲುವತ್ಸಾಸುರನುತಾನಾಗಿ । ಬೆರೆ
ಸಿದಳುಮತ್ತೊಬ್ಬಳಾಕೆಯು । ತುರುಸಿಹಿಂಗಾಲ್ಪಿಡಿದುಗಗನಾಂ । ತರಕೆಬೀಸಾಡಿದಳುಘೋಯುಂದುದುವಧೂನಿವಹ ॥೨೯॥
ಬಕನೆನುತಕುಳ್ಳಿರ್ದಳೊಬ್ಬಳು । ಬಕವಿದಾರಣನೆಂದಳೊಬ್ಬಳು । ಸುಕೃತವೆಂತುಟೊಶಿವಶಿವಾಗೋಪಾಂಗನಾಜನದ । ವಿಕಟ
ಭುಜಬಲದೈತ್ಯಪತಿಧೇ । ನುಕನುತಾನೆಂಬಳನುನೀಳಾ । ಳಕಿಯುರೈದಿದರಾಹವಕೆಬಲಕೃಷ್ಣರಾವೆನುತ ॥೩೦॥ ಹೋಗು
ನೀನಿನ್ನೀನದಿಯುಲಿರ । ಲಾಗದೆನುತಲತಾಂಗಿಕಾಳಿಯು । ನಾಗನಾದವಳುತ್ತಮಾಂಗವನೇರಿನಿಂದಿರ್ದು ॥ ಬಾಗಿಕುಣಿದಳುನಾ
ಗಪತ್ನಿಯು । ರಾಗಿಕೆಲರೈತಂದುಕರುಣಾ । ಸಾಗರನೆಕೈಗಾಯುಬೇಕೆಂದೆರಗಿದರುಪದಕೆ ॥೩೧॥ ಎಲೆಲೊಕಿಚ್ಚೋಕಿಚ್ಚುಹೊ
ಗುಹೊಗು । ನಳಿನನಾಭನಮರೆಯುನೆನಲಾ । ಕಳವಳವಮಾಣ್ಮಾಣುತಾನಿಹೆನಂಜಬೇಡೆನುತ ॥ ತಳವನೊಡ್ಡಿದರಬಲೆನೋಡಿ
ರೆ । ಚೆಲುವಮೂರ್ತಿಯುನೆನುತಲೊಬ್ಬಳು । ಯುಳೆನಗೆಯುಕುಡಿನೋಟದಲಿರಂಜಿಸಿದಳಬುಜಾಕ್ಷಿ ॥೩೨॥ ಘಾಳಿಮಳೆಗಂಜುವ
ರೆಬನ್ನೀ । ಶೈಲರಾಜನಿವಾಸವಿದೆಗಿರಿ । ಬೀಳುಗೆಂದಂಜದಿರಿಯುನಲೈತಂದಸತಿಯುರಿಗೆ ॥ ಮೇಲುದವನಂಬರಕೆನೆಗಹಿವಿ । ಶಾಲ
ಲೋಚನೆನಿಂದಳೊಬ್ಬಳು । ಬಾಲೆಯುರಕೃತಪುಣ್ಯವೆಂತುಟೊಭೂಪಕೇಳೆಂದ ॥೩೩॥ ಇಂತುಕೃಷ್ಣವಿಯೋಗಚಿಂತಾ । ಕ್ರಾಂ
ತೆಯುರುತೊಳಲುತ್ತಗೋಕುಲ । ಕಾಂತೆಯುರುದೆಸೆದೆಸೆಗೆಹಂಬಲಿಸುತ್ತಹಲುಬುತ್ತ ॥ ಮುಂತೆಕಂಡರುಬರುವಲಕ್ಷ್ಮೀ । ಕಾಂ
ತಕೃಷ್ಣನಹಜ್ಜೆಗಳನವ । ರಂತರದಲೊಪ್ಪುವವರಾಂಗನೆಯುಸವಹಜ್ಜೆಗಳ ॥೩೪॥ ಇತ್ತಲಿಮೆಯುಮೆನೋಡಿನಮ್ಮನು । ಹತ್ತಿಸು
ವಪಜ್ಜೆಗಳನಸುಗೆಂ । ಪೊತ್ತಿಮಿಗೆರಾಜಿಸುವಪಂಕಿಲಕುಂಕುಮಂಗಳಲಿ ॥ ಉತ್ತಮಧ್ವಜವಜ್ರರೇಖೆಗ । ಳತ್ತಲಿವೆಮಾನಿನಿಯು
ಹಜ್ಜೆಯು । ನುತ್ತಹೊರಳಿದರವನಿಯುಲಿಕೃಷ್ಣನನುಕರಕರದು ॥೩೫॥ ಆವಚೆಲುವೆಯೊಶಿವಶಿವಾಮು । ನ್ನಾವಪರಿಯುಲಿಭಜಿ
ಸಿದಳೊಬಲು । ದೈವವನುಪೂರ್ತೇಷ್ಟದಾನವ್ರತಶತಂಗಳಲಿ । ನಾವುಳಿಯುಲೊಬ್ಬಳನುಬಿಟವಸು । ದೇವನಂದನನೊಯಿದನಾ
ಯೆನು । ತಾವನಿತೆಯುರುಹಜ್ಜೆಗೊಂಡರಬಿದರುಹರಿಪದವ ॥೩೬॥ ಕದ್ದುಹೋಗುತ್ತಿದರೊಳಗೆಕು । ಳ್ಳಿರ್ದನಿದೆಕಾಮಿನಿಗೆ
ಹೂಗಳ । ನಪ್ಯಯುನುತುರಬಿಸುತ್ತರಮಿಸಿದನಾತ್ಮರತನಿಲ್ಲಿ ॥ ಆದ್ದುಹೋಗಿವೆಹಜ್ಜೆಗಳುದಿಟ । ಭದ್ರಗಾತ್ರೆಯುಮಹಿಸಿನಡೆದನೆ ।
ಧೇನ್ಯಮಾನಾಂಘ್ರಿಯುನುಹಾಯೆಂದಳಲಿದರುನೋಟ ॥೩೭॥ ಇಲ್ಲಿಹೂಗಳಕೊಯ್ದುನಿಡೆಯಿದೆ । ಇಲ್ಲಿಯಿವೆತುದಿಗಾಲಹಜ್ಜೆಗ ।
ಳಿಲ್ಲಿಳುಹಿದನುಸತಿಯುಕುರುಳನುಬಿಡಿಸಿಪಿಡಿಗೆಳವೆ ॥ ಇಲ್ಲಿನಕ್ಕರೆಬಾಯುತಂಬುಲ । ಚೆಲ್ಲಿದೆಡೆಯಿದೆನೋಡಿತುರುಬಿದ । ಮಲ್ಲಿಗೆ
ಗಳಿವೆಯುನುತಬೆಂಬತ್ತಿದರುಹಜ್ಜೆಗಳ ॥೩೮॥ ಇಂತುಕೃಷ್ಣನನರಸುತಾಶ್ರುತಿ । ಕಾಂತೆಯುರಪ್ರೋಲಿಖಿಳಗೋಕುಲ । ಕಾಂತೆ
ಯುರುತೊಳಲುತ್ತವಿಪಿನಾಂತರದೊಳ್ಕೆರಲು ॥ ಮುಂತೆಕೃಷ್ಣನಕೂಡೆಬಂದಾ । ಕಾಂತೆನೆಸದುದನಕಟಕಟಭೂ । ಕಾಂತಕೇಳ
ದುರಾತ್ಮೆಯುಲ್ಲಿಂತೆಂದಳಾವನಿತೆ ॥೩೯॥ ಸತಿಯುರೊಳಗೆನ್ನಂತೆರೂಪಾ । ನ್ವಿತೆಯುರಖಿಳಗುಣಾನ್ವಿತೆಯುರಾ । ರಿತರನಾರಿಯು
ರೆಲ್ಲರನುಬಿಸುಟೆನ್ನನೊಬ್ಬಳನು ॥ ರತಿವಿದಸುರಮಿಸಿದನಲಾಪರಿ । ಮಿತವನಸ್ಥಳಗಳಲಿಯೆನುತಾ । ಸತಿಮುಕುಂದನಿಗೆಂದಳೆ
ಯ್ಯನೆನಿಂದುಮೊರಕಿಸುತ ॥೪೦॥ ಮಿಡುಕಲಾರೆನುಕೃಷ್ಣಮುಂದೋ । ರಡಿಯಿಡಲುಸೈರಿಸವುಕಾಲ್ಗಳು । ಮುಡಿಗಳಿಗೆಹ

ಬೆಟ್ಟಗಳಗೀಯಡೆಯುಪಥಗಳಿಗೆ || ನಡುವನೀನಿಂನೆತ್ತಲಿಲ್ಲಿಗೆ । ನಡದುಬಳಲಿದೆನಾನುಕಾಮಿಸಿ । ಪಡೆಗೆಹೊತ್ತೊಯ್ಯಿತಂನ
ನೆಂದಳುಕಾಂತ್ರವಸವಳಿದು || ೪೧ || ಎನಲುನಕ್ಕನುಕಾಂತ್ರೆಕೆಡಿಸಿದೆ । ತನಗೆಹೇಳದೆಬರಿದೆಬಳಲಿದೆ । ವನಿತೆಕುಳ್ಳಿರುಹೆಗಲಮೇ
ಲಿನ್ನಾದಡೆಂದೆನುತ || ದನುಜಹರನಿರೆಸಂವರಿಸುತಂ । ಗನೆಸಮಾಹಿತ್ರೆಯಾದಳ್ಳೇನಂ । ಬೆನುವಿಚಿತ್ರವನಡಗಿದನುಕಮಲಾಕ್ಷನಾ
ಕ್ಷಣಕೆ || ೪೨ || ಬಿಟ್ಟುಹೋದರೆಕಾಂತೆಕಾಣದೆ । ಕೆಟ್ಟೆನೆನುತಾಕ್ಷಣವೆಮಿಗೆಕಂ । ಗೆಟ್ಟುಹೊರಳಿದಳವನಿಯುಲಿಹಾಕಾಂತಹಾ
ಯೆನುತ ||ನಟ್ಟಡವಿಯೊಳಗೆನ್ನನೊಬ್ಬಳ ।ಬಿಟ್ಟರುಳಿವೆನೆಹಾಯೆನುತಬಾ।ಯ್ಬಿಟ್ಟಳಬಲೆವನಾಂತರದಲೋರಂತೆಕಾತರಿಸಿ ||೪೩||
ಮಾರಮಣಹಾಕಾಂತಕರುಣಾ । ವಾರಿಧಿಯೆಹಾನಾಥಹಾರತಿ । ಶೂರಮೂರುತಿಕೃಷ್ಣಹಾಹಾವಿಮಳಕೀರಿತಿಯೆ || ತೋರುನಿನ್ನನ
ನಾಥೆಗೆನುತಾ । ನಾರಿಬಾಯ್ಬಿಡೆಕೇಳಿಗೋಕುಲ । ನಾರಿಯರುಹರಿತಂದುಕಂಡರುಕಾಂತೆಯಳುತಿರಲು || ೪೪ || ಕೇಳದಿನಿನಗೇ
ನಾಯ್ತುದಾರಿಂ । ದಳುವೆರಮಣನದಾರುನೀನೀ । ಹಳುವದೊಳಗೇಕಿದ್ದೆಹೇಳೊಬ್ಬಳೆದುರಾಗತರ || ತಿಳುಹುಸಾಕೆಳಬೇಡೆನು
ತ್ತಾ । ಲಲನೆಯರುಸಂತೈಸಲೊಯ್ಯನೆ । ಬಳಲುತಾತ್ಮಕೃತಾಪರಾಧವನೆಂದಳವರೊಡನೆ || ೪೫ || ನಿಲ್ಲುಸಾಕೆದನೇನಹೇಳುವೆ ।
ಕಳ್ಳನಾಚರಣೆಯನುಗರ್ವಿಸ । ಲಿಲ್ಲಗುಣಮಾತನಲಿವಿಗಡರದೇವನೀಪರಿಯ || ಕೊಲ್ಲನೇನಮ್ಮನುನಿರರ್ಥಕೆ । ಬಳ್ಗನೆಂದಾಶ್ರೈಸಿ
ದವರನು । ಬಲ್ಲಿದನಕೂಡೇವುದೆಂದರುಕಾಂತೆಯರುಮಱುಗಿ || ೪೬ || ಬಳಿಕಸತಿಯರುದೆಸೆದೆಸೆಗೆಹಂ । ಬಲಿಸುತಡವಿಯೊಳಲ್ಲಿ
ಗಲ್ಲಿಗೆ । ತೊಳಲಿದರುಬೆಳದಿಂಗಳುಕ್ಷಂನೆಗವನಾಂತದಲಿ || ನಳಿನಮುಖಿಯರುಕೃಷ್ಣಚಿಂತಾ । ಕುಳಿತೆಯರುಪಾಡುತ್ತಹೊಗಳು ।
ತ್ತಳಲುತೋರಂತಾಲಿಸುತಬೆಸಗೊಳುತಗಿಡಮರನ || ೪೭ || ನೆರದವಿರಹಾಂಧಕೆಗೆಕತ್ತಲೆ । ನೆರವುಬರೆಗೋಪಿಯರುಕೃಷ್ಣನ ।
ಚರಣವನುನೆನವುತ್ತಹಂಬಲಿಸುತಬಂಣಿಸುತ || ತರಣಿಯುದಯುವನಿರದೆಹಾರುವ । ಸರಸಿಜಾವಳಿಯಂತೆಪರಮೇ । ಶ್ವರನೊಲ
ವಹಾರುತ್ತಕುಳ್ಳಿರ್ದರುವನಾಂತದಲಿ || ೪೮ || ಕಾಂತೆಯರುವನದೊಳಗೆಲಕ್ಷ್ಮೀ । ಕಾಂತನನುನೆನವುತ್ತಸುಜನ್ಯೆ । ಕಾಂತಶರ
ಣನನಪ್ರತರ್ಕ್ಯನನಂತವಿಗ್ರಹನ || ತಂತಮಗೆತದ್ಗುಣಚರಿತ್ರೋ । ದಾಂತಸುಧೆಯಲಿಮುಳುಗಿವಿರಹ । ಸ್ವಾಂತೆಯರುಪಾಡಿದರು
ನಿತ್ಯಾತುಗುಣಗಣವ || ... ... || ೪೯ ||

ಅಂತು ಸಂಧಿ ೨೬ಕ್ಕಂ ಪದನು ೧೨೮೯ಕ್ಕಂ ಮಂಗಳಮಸ್ತು.

ಇಪ್ಪತ್ತೇಳನೆಯ ಸಂಧಿ.

ಗೋಪಿಕಾ ಗೀತ ಕಥಾ.

ಸೂಚನೆ || ಸಲೆನಿಜಾಶ್ರಿತಭಕ್ತರಿಗೆತಾ । ಸುಲಭನೆಂಬುದಮೆರದುಕರುಣಾ । ಜಲಧಿಮೈದೋರಿದನುಗೋಪೀ
ಜನಕೆಮನವೊಲಿದು || ... ...

ಪದನು || ನಂದನಂದನನೀನುದಿಸಿದಂ । ದಿಂದಮೇಲಮರಾವತೀಪುರ । ದಿಂದಧಿಕವಿಭವದಲಿಗೋಕುಲವೆಸದುದಿಂನಬರ ।
ಇಂದಿರೆಗೆನೆಲೆಯಾಯ್ತುಲಾಗೋ । ವಿಂದಗೋಕುಲದರಸಗೋಪೀ । ವೃಂದವಲ್ಲಭಕೃಷ್ಣಕರುಣಾನಿಧಿಯೆಮೈದೋರು ||೧|| ಶಾರ
ದೇಂದೀವರದಳಾಂಕೋ । ದಾರನಯನಾಪಾಂಗದಿಂದೆಲೆ । ವೀರಕೊಲುವುದುಪಾಥವೇನೀಬಿಟ್ಟುತೊತ್ತಿಯರ || ಕೂರಲಗುಗೊಂ
ಡಿರಿಯಲಾಗದೆ । ಹಾರಮಣಹಾನಾಥಹಾಲ । ಕ್ಷ್ಮೀರಮಣಮೈದೋರುಮೈದೋರಬಲೆಯರಿಗೆಸುಗೆ ||೨|| ವಿಷಜಲಾಶಯಸರ್ಪ
ಮುಖರಾ । ಕ್ಷಸಮಹಾನಿರ್ವೃಷ್ಟಿಪಾತ । ವ್ಯಸನದಲಿವೃಷಮಯಸುಖಾದಿಕೃತಾಪರಾಧದಲಿ || ಅಸುಗಳೊಡೆಯನೆರಕ್ಷಿಸಿದೆಯಂ ।
ನುಸುಗಳನುಗುರಿಮಾಡಿಮನಸಿಜ । ನೆಸುಗೆಗೊಪ್ಪಿಸಿದೇಕೆಕೃಷ್ಣಕೃಪಾರಸಾಂಬುಧಿಯೆ || ೩ || ನಂದಗೋಪಿಯಮಗನೆಹುಸಿ
ಗೋ । ವಿಂದನೀಸಾಕ್ಷಾತಸುರಮುನಿ । ವೃಂದವಂದಿತವಿಷ್ಣುನೀಸಚರಾಚರಾತ್ಮಕನು || ಮುಂದುಗೆಟ್ಟಮರೌಘಸಹಿತರ ।
ವಿಂದಭವನಭ್ಯರ್ಥಿಸಿದಡೆಮು । ಕುಂದಜನಿಸಿದೆಧರೆಯರಕ್ಷಿಸಲೆಂದುಧರಣಿಯಲಿ || ೪ || ಸಿರಿಯಪಾಣಿಗ್ರಹಣವನುಮಾ । ಳ್ಪ
ನುತರದಸಂಸಾರಭಯದಲಿ । ಶರಣುವೊಕ್ಕರಿಗಭಯವನುಕೊಡುವೊಪ್ಪುವೀನಿನ್ನ || ಕರಸರೋಜವನೊಡೆಯಾಂತಂಮಯ । ಶಿರ
ದಲಿಡುಶಾಶ್ವತನೆಕರುಣಾ । ಕರನೆಸನ್ನುತಜೀವರಕ್ಷಾಕರನೆಸುಖಕರನೆ || ೫ || ಅನತರಪಾಪವನುಕೆಡಿಸುವ । ಧೇನುಗಳಬಳಸ
ಲುವಲಕ್ಷ್ಮೀ । ಸ್ಥಾನಶೋಭಿತವಪ್ಪಕಾಳಿಯಮಸ್ತಕದಲೆಸೆವ || ಧ್ಯಾನಮಂಗಳವಪ್ಪನಿಜಮುನಿ । ಮಾನನೀಯಪದಾಂಬುಜವ
ನೀ । ಮಾಣದೀಕುಚಗಳಲಿರಿಸುಭಂಗಿಸುಮನೋವ್ಯಥೆಯ || ೬ || ಬುಧಮನೋಜ್ಞವೆನಿಪ್ಪಸಂತತ । ಮಧುರತರವೆನಿಸಿಪ್ಪ
ವಾಕ್ಯದ । ನಿಧಿಯೆನಿಸಿರಂಜಿಸುವನಿಜವಾಗಮೃತಸೇವೆಯಲಿ || ಅಧಿಕತರಮೂರ್ಛಿತೆಯರಾದೆವು । ವಿಧುವದನವಿಭ್ರಾಜಿತನೆನಿ ।
ನ್ನಧರಸುಧೆಯಲಿಕಾಂತಸಂಜೀವನನಮಾಡೆಮಗೆ || ೭ || ತಪ್ತಜೀವನವಾಗಿಕವಿವಾ । ಗ್ವ್ಯಾಪ್ತಿಗಾಶ್ರಯವೆನಿಸಿಪಾಪನಿ । ವೃತ್ತಿ
ಕರವಹಕೇಳದಡೆಮಂಗಳತೆಯನುಮಾಳ್ಪ || ಮುಕ್ತಿಲಕ್ಷ್ಮಿಗೆನೆಲೆಯನಿಸಿಸ । ಚರಿತ್ರಸುಲಭವೆನಿಪ್ಪನಿನ್ನಚ । ರಿತ್ರವನುಪೇಳ್ವ

ರುಸಮಸ್ತವನಿತ್ತವರುಧರೆಗೆ ॥ ೮ ॥ ನೋಟವನುನಗೆಗಳನುನಿನ್ನಸ । ಪಾಟವನುನೆನೆವವರದುರಿತಕ । ಪಾಟಭಂಜನವನುಪು
ನೋಜ್ಞವೆನಿಪ್ಪಪರಿಮಿತದ ॥ ಕೂಟವನುಕಮಲೇಕ್ಷಣನೆಮಾ । ತಾಟವನುನೆನೆವೆಂಮಹೃದಯದ । ಕೋಟರಕ್ಷೋಭವನುಮಾ
ಳ್ಪುದುನಿನ್ನಲೀಲೆಗಳು ॥ ೯ ॥ ಗೋವುಗಳಬಳಿಕೆಂದುನೀವ್ವಂ । ದಾವನಕೆಬಂದಿರಲುಮನದಲಿ । ನೋವೆಪಾವೆಲೆಕಾಂತಕಲು
ನೆಲತಾಗಿದಡೆನಿನ್ನ ॥ ನೋವವಂಭ್ರಗಳೆಂದುನಿನ್ನಲಿ । ಜೀವವನುತ್ರೆತ್ತಿಸಿವಿನಿರ್ಗತ । ಜೀವರಾದಂತಿಹೆವುಮನೆಯಲಿಡಿಂಬಮಾ
ತ್ರದಲಿ ॥ ೧೦ ॥ ಮತ್ತೆದಿನದವಸಾನದಲಿಕುರು । ಳೊತ್ತುಗಳಕಿರುಬೆಮರಭಾಳದ । ಸುತ್ತುವೀಲಿಯಪೊರವತುರುಧೂಳಿಗಳ
ಸಿರಿಮೊಗದ ॥ ಇತ್ತುನಿಜಮುಖದರುಶನದಸಾ । ಖ್ಯೋತ್ತರದಸಿದ್ಧಿಯನುನಮಗೆಲೆ । ಚಿತ್ತವಲ್ಲಭಮಾಳ್ಪಮನದಲಿಕಾಮಸಂಭ್ರ
ಮವ ॥೧೧॥ ಕಾನನಕೆತುರುಗಾಯಹೋಗಿರ । ಲೇನನೆಂಬೆವುಗಹನವಿಲಯಕ್ಕೆ । ಶಾನುವನುತೃಟಿಕಾಲಯುಗದಂತಿಹುದು
ನೀನುಳಿಯೆ ॥ ಆನತಾಳಿಕನಿಚಯವಹನಿಂ । ನಾನನವನೀಕ್ಷಿಸುವಡೆವೆಗಳಿ । ವೇನವಮಾಡಿದವಕಟವಿಧಿಬಲ್ಲವನೆಪರಸುಖವ ॥೧೨॥
ಪತಿಸುತಪ್ರಿಯಬಾಂಧವಾಳ್ಯರ । ನತಿಗಮಿಸಿನಿಜವೇಣುಗೀತಾ । ಮೃತಕೆಮನವಮರುಳಾಗಿಬಂದೆವುಬಲ್ಲೆನೀನೆಂದು ॥ ಗತಿವಿದನೆ
ನಾರಿಯರುಬರೆವರಿ । ಮಿತಕೆಬಿಡುವರೆರಾತ್ರಿಯಲಿವರ । ಯತಿಲಲಾಮನೆಕೃಷ್ಣನೀವ್ಮೈಡೋರೆನಮಗೇಕೆ ॥ ೧೩ ॥ ಪ್ರಣತ
ಜನದಿಷ್ಟಾರ್ಥವನುಕೊಡು । ವಣಕಿಸುವರಸುಗೊಂಬನಂತನ । ಫಣದಲೊಪ್ಪುವಕಮಲಭವಭವಮುಖ್ಯರರ್ಚಿಸುವ ॥ ಋಣಿ
ಯೆನಿಸುವಾಪನ್ನರಿಗೆಧಾ । ರುಣಿಗೆತೊಡವಹನಿನ್ನಚರಣವ । ನೆಣಿಸಲೇಕಿದುತಮ್ಮಕುಚಗಳಲಳಿಮನೋವ್ಯಥೆಯ ॥ ೧೪ ॥
ವೃಜಿನಹರವೆಂದೆನಿಪನಿನ್ನಯ । ನಿಜವನೆಮಗಿಂದೊಲಿದುವಿಪಿನ । ವ್ರಜನಿವಾಸಿಗಳಿಂಗೆತೋರಿದೆನೀನೆಕರುಣದಲಿ ॥ ಸುಜನಹೃ
ದಯವ್ಯಾಧಿಗುರುಭೇ । ಷಜವಲಾನಿನ್ನೊಲುವಚರಣಾಂ । ಬುಜವನೇತಕೆಮತ್ತೆತೋರಿಸಲೊಲ್ಲೆನೀನಮಗೆ ॥ ೧೫ ॥ ಮೊಲೆ
ಗಳಲಿತೆಗದಪ್ಪಲಮ್ಮೆವು । ಚೆಲುವನಿನ್ನಪದಾರವಿಂದವ । ಮೆಲುದಳದಮೈಯ್ಯುಷ್ಣಕಠಿಣತೆಗಳುಕುಗೆಂದಂಜಿ ॥ ಕಲುನೆಲದಲೆಂತ
ಳುಕದೀಬಲು । ಹಳುವದಲಿಸಂಚರಿಸಲೆಂದುಂ । ಮಳಸುತಿಹೆವೆಲೆಕೃಷ್ಣಕರುಣಾನಿಧಿಯೆಮ್ಮೈದೋರು ॥೧೬॥ ಎನುತೆನುತಹಲ
ವಂಗದಲಿಕೃ । ಷ್ಣನನುಪಾಡುತಹಲುಬುತಾವ್ರಜ । ವನಿತೆಯರುಹಂಬಲಿಸಿದೆಸೆಗಳನೋಡಿಬಾಯ್ಬಿಡುತ ॥ ವನದೊಳಗೆಧೃತಿಗೆ
ಟ್ಟುನಿಜಕಾಂ । ತನನುಕಾಣದೆಕರಗಿಸಲೆಕಂ । ಬನಿಗಳಲಿಹೊರಳುತ್ತಧರಣಿಯಲತ್ತರೊಡಲೊಡೆಯೆ ॥ ೧೭ ॥ ಹಾರಮಣಹಾ
ಕಾಂತಹಾಲ । ಕ್ಷ್ಮೀರಮಣಹಾಕೃಷ್ಣಹಾಕರು । ಣಾರಸಾಂಬುಧಿಹಾಮುಕುಂದಮನೋಜ್ಞಮೂರುತಿಯೆ ॥ ನಾರಿಯರುನಿನಗಿ
ದಿರೆನಮ್ಮಲಿ । ವೈರವೇಕೈಕೃಷ್ಣನೀವ್ಮೈ । ದೋರದಡೆನಾವ್ಪುಳಿಯಲರಿಯೆವೆನುತ್ತಹಲುಬಿಹರು ॥ ೧೮ ॥ ದೇವನೀನೊಲ್ಲದಡೆನಿ
ನ್ನಯ । ಭಾವವೇಸಾಕೆಮಗೆನಿನ್ನಲಿ । ಜೀವವನುಬೆರಸುವೆವುತನುವಿರಹಾಗ್ನಿತಾಪದಲಿ ॥ ಬೇವುದೈಸಲೆಯೆನುತಮಿಗೆಸ । ದ್ಭಾ
ವದಲಿಮೂರ್ಛೆಕ್ರಿಯರಾಗಿರೆ । ದೇವಕೀನಂದನನುಮೈದೋರಿದನುಸತಿಯರಿಗೆ ॥ ೧೯ ॥ ನಗೆಮೊಗದನಯನಾರವಿಂದದ । ಲೊ
ಗುವಕಾರುಣ್ಯಾಮೃತಪವೀ । ಚಿಗಳವಿಶದದ್ಯುತಿಯದಂತಾವಳಿಯಮಾಕ್ತಿಕದ ॥ ಮೃಗಮದದಪರಿಮಳದಕುರುಳೋ । ಳಿಗಳ
ಕಮನೀಯಾಂಗರಾಗದ । ಜಗದಸೊಬಗಿನದೇವಮೈದೋರಿದನುಸತಿಯರಿಗೆ ॥ ೨೦ ॥ ಉಟ್ಟಪೀತಾಂಬರದತೋಳ್ಗಳ । ಲಿಟ್ಟ
ಮಣಿಕಂಕಣದಕೊರಳಲಿ । ತೊಟ್ಟವನಮಾಲೆಗಳಕಾಂಸ್ತುಭಮಕರಕುಂಡಲದ ॥ ಇಟ್ಟಡೆಯತನುಶಿಂಗರದಲೊಪ । ಲಿಟ್ಟಕಾ
ಮನವರ್ಗವನುಕೆಡೆ । ಮೆಟ್ಟಮೆರವಂಗದಲಿಮೈದೋರಿದನುಸತಿಯರಿಗೆ ॥ ೨೧ ॥ ಅಂದುನವಮಾವಸ್ಥೆಯಲಿಮನ । ಸಂದು
ಕೃಷ್ಣಧ್ಯಾನಸುಖದೊಳ । ಗಿಂದುಮುಖಿಯರುಕಾಣದಿತರವಮರದುಕುಳ್ಳಿರಲು ॥ ನಿಂದುಧನಿದೋರಿದನುಪ್ರೊಂಗೊಳ । ಲಿಂದ
ವಿವಿಧಶ್ರುತಿಗಳಲಿಗೋ । ವಿಂದನಾಪ್ಯಾಯನವಮಾಳ್ಪಂತಿರೆವಧೂಜನಕೆ ॥ ೨೨ ॥ ಕೊಳಲನಾದವಕೇಳುತವೆಕೋ । ಮಳೆಯ
ರೆದ್ದರುಕೃಷ್ಣಕರುಣಾ । ಜಲಧಿಯಾವೆಡೆಕಾಂತನೀನಾವೆಡೆಯನುತ್ತೈದಿ ॥ ಪುಳಕಿತಾಂಗಿಯರಪ್ಪಿದರುಕಂ । ಗಳಲಿನಳಿತೋಳ್ಗಳ
ಲಿಹೋದಸು । ಗಳನುಪಡದಂತೇನನೆಂಬೆನುಹರುಷದುತ್ಸವವ ॥ ೨೩ ॥ ಲಲನೆಯೊಬ್ಬಳುಕೃಷ್ಣನಂಗೈ । ತಳವಹಿಡಿದಳುತನ್ನಸ
ವಕರ । ತಳದಲೊಬ್ಬಳುಚಾರುಚಂದನವೆಸವಹರಿಭುಜವ ॥ ತಳದುನಿಂದಳುತನ್ನೆಡೆಗಲಲಿ । ಕಳದುಕೊಂಡಳುಶಾಂತೆಮಾತ್ತೊ ।
ಬ್ಬಳುಮುಕುಂದನಚಾಯತಂಬುಲವನುಕರಾಗ್ರದಲಿ ॥ ೨೪ ॥ ಒಬ್ಬಳೆಡವಂಕದಲಿಭಜಿಸಿದ । ಳೊಬ್ಬಳೆರೆಬಲವಂಕದಲಿಮ ।
ತ್ತೊಬ್ಬಳಪ್ಪಿದಳುರದೊಳಗೆಹರಿಪಾದಪಂಕಜವ ॥ ಒಬ್ಬಳೆವೆಯಿಕ್ಕದೆನಿರೀಕ್ಷಿಸಿ । ಸರ್ಬಲೋಕೇಶ್ವರನವದನವ । ನುಬ್ಬಿದಳುಪುಳ
ಕದಲಿನಯನಾನಂದಬಾಷ್ಪದಲಿ ॥ ೨೫ ॥ ಒಬ್ಬಳೀಕ್ಷಿಸಿದಳುಸರೋಷದ । ಲೊಬ್ಬಳಾಕಿದಳಧರವನುಮ । ತ್ತೊಬ್ಬಳುರೆಚುಂ
ಬಿಸಿದಳೆಸವಕದಂಪನೋರಂತೆ ॥ ಒಬ್ಬಳುರೆನಡೆನೋಡಿಕೃಷ್ಣನ । ಸರ್ಬಲೋಕದಚಲುವಮೂರ್ತಿಯ । ತಬ್ಬಿದಳುತಡದಂತ
ರಂಗದಲಪ್ಪಿನ್ಮೈಮರೆದು ॥ ೨೬ ॥ ಇಂದುವದನೆಯರಚ್ಯುತನನೊಂ । ದೊಂದುಪರಿಯಲಿಭಜಿಸಿವಿರಹದ । ಬಂದುಗವನೀಡಾಡಿ
ನಿಮಿಷಾರ್ಧಪ್ರಸಂಗದಲಿ ॥ ಸಂದಣಿಸುವೃತ್ತವದಪರವಮಾ । ನಂದರಸಪುಳಕಂಗಳಲಿಗೋ । ವಿಂದನನುಪರಿಪರಿಸಿನಿಂದರುಕೂಡೆ
ಸಮತಳಿಸಿ ॥ ೨೭ ॥ ಅರಸಕೇಳೊಪ್ಪಿದುದುಪರಮೇ । ಶ್ವರನಮಂಗಳಮೂರ್ತಿತಾರಾ । ಪರಿವೃತೇಂದುವಿನಂತೆತನ್ವಂಗಿಯರ

ಮಧ್ಯದಲಿ ॥ ಸರಸಿರುಹದಳನಿಕರಮಧ್ಯ । ಸ್ಫುರಿತಕರ್ಣಿಕೆಯಂತೆಸೊಗಸಿನ । ಪರಿಮಳದಸಂಪನ್ನತೇಜೋಗುಣವಿಶೇಷದಲಿ ॥ ಬಳಿಕಕರಿಣೀಯೂಥಮಧ್ಯದ । ಬಲುಗಜೇಂದ್ರನವೋಲುಲಲನಾ । ವಳಿಯಪರಿವಾರದಲಿಪರಮೇಶ್ವರನುರಂಜಿಸುತ ॥ ನಲವುಮಿಗಲ್ಕೈತಂದನೊಪ್ಪುವ । ಪುಳಿನದೆಡೆಗುತ್ಸಾಹಿಸಿಕುಮುದಾ । ವಳಿವಿಶಾಲಿತಪುಷ್ಪಸೌರಭಸೌರಭಸ್ಥಳಿಕೆ ॥ ೨೯ ॥ ನಿಗಮಮಸ್ತಕಗಳಲಿಮುನಿಗಳ । ಬಗೆಯಬಯಸಿಕೆಗಳಲಿರಂಜಿಸು । ವಗಧರಂಗಾಸನವನುರದಪ್ಪಿನಲಿಶೋಭಿಸುವ ॥ ಸೊಗಯಿಸುವತಂತ್ರಮ್ಮಕುಚಪ । ಟ್ಟಗಳಲೊಪ್ಪಿರಲಿಕ್ಕಿವನಿತೆಯ । ರಗಣಿತಾಮಳಮೂರ್ತಿಯನುಕುಳ್ಳಿರಿಸಿದರುನಡುವೆ ॥ ೩೦ ॥ ಪಂಕಜಾಕ್ಷನುಸಗುತವರಕುಚ । ಕುಂಕುಮಾರುಣಪಟ್ಟಕಾಪರಿ । ಯಂಕದಲಿಕುಳ್ಳಿರ್ದನಭಿನವರೂಪವಿಭವದಲಿ ॥ ಅಂಕದಲಿತೆಗೆದನುಪಮಾನಪದ । ಪಂಕಜವನಾದರದಲೊತ್ತುತ । ಪಂಕಜಾಕ್ಷಿಯರೆಂದರಿಂತನ್ಯಾಪದೇಶದಲಿ ॥ ೩೧ ॥ ಭಜಿಸುವರನೇಭಜಿಸುವರುಕೆಲ । ರಜಿತರನೆಭಜಿಸುವರಲ್ಪೈಭಜಿ । ಸುವರುಕೆಲರಾರುವನುಕೆಲರಾರೊಲ್ಲರುಭಜಿಸುವನು ॥ ಸುಜನರಾರಿನಿಬರೊಳುಭಾವದ । ನಿಜವಹೇಳೆಲೆಕೃಷ್ಣತಮಗೆನೆ । ತ್ರಿಜಗದಾರಾಧಿತನುನಗುತಿಂತೆಂದನವರೊಡನೆ ॥ ೩೨ ॥ ಭಕತರನುಭಜಿಸುವರಲೇಸಾ । ಧಕರುನಿಜಕಾರ್ಯದಕೃತಜ್ಞರು । ಭಕತರನುಭಜಿಸುವವರಾತ್ಮಜ್ಞಾನಪಂಡಿತರು ॥ ವಿಕಟಮತಿಗಳುಮೇಣುಸಲೆಬಾ । ಲಕರುಭಕತಾಭಕತರೆನ್ನದೆ । ಸುಕೃತಿಗಳುಭಜಿಸುವರುಪರಮಕೃಪಾಳುಗಳುಧರೆಗೆ ॥ ೩೩ ॥ ಇನಿಬರೊಳಗಾನಾರುಮಲ್ಲಲೆ । ವನಿತೆಯರಿರಾಪ್ತ್ವಾರ್ಥಸಾಧಕ । ತನವೆನಗೆಮುನ್ನಿಲ್ಲಮೇಣುಕೃತಜ್ಞತಾನಲ್ಲ ॥ ನೆನವಭಕತರಭಜಕನಾನೆ । ನ್ನನುವನರಿಯಲಲಾನಿಜಾಶ್ರಿತ । ಜನಪರಾಯಣನೆಂಬಬಧ್ಧವ್ರತನುತಾನೆಂದ ॥ ೩೪ ॥ ಧನವಿಹೀನನುಲಬ್ಧಧನದಲ್ಲಿ । ವಿನಲಿಕುದಿದನ್ಯೋಪಭೋಗದ । ಮನವನರಿವಂತೆನ್ನಕಾಣದಡಕಟನಿಮಗಿಂದು ॥ ಘನತರಸ್ನೇಹಾನುಬಂಧದ । ಮನವಿದೆನ್ನಲಿತೀವ್ರತರವಹು । ದೆನುತಡಂಗಿದೆನಬಳೆಯರಿರನ್ಯಾಯವೇನೆಂದ ॥ ೩೫ ॥ ಇಲ್ಲಿನಿಮಗೆನ್ನಂದದತಿಶಯ । ವಲ್ಲಭರುನಿಂಪೊಂದದವರೆನ । ಗಿಲ್ಲಸದ್ಭಕ್ತೆಯರುವಲ್ಲಭೆಯರುವಿಚಾರಿಸಲು ॥ ಬಳ್ಳಿನಾನುಪಕಾರವನುಗುಣ । ದಲ್ಲಿದೋಷವನೀಕ್ಷಿಸದೆಯ । ನ್ನಲ್ಲಿನಿಮ್ಮನುರಾಗವಿದುದುರ್ಭೇದವಾಯ್ತೆಂದ ॥ ೩೬ ॥ ತೊರದಿರೆನಗೋತಿಹಪರವನಿರೆ । ಜರದಿರಾತ್ಮಕುಲಾಭಿಮಾನವ । ನುರುವಗೃಹಪಶುಭೃತ್ಯಪುತ್ರಸಹಾಯಬಾಂಧವರ ॥ ಎರಕವಡದಿರಿತನ್ನಲಾತ್ಮನ । ನರಿದಬುಧರಂತಾವಕಾಲಕೆ । ಮರವೆಸಾನಿದನೆನುತನಿತ್ಯಾತುಮನುಕರುಣಿಸಿದ … … … … … … ॥ ೩೭ ॥

ಇಂತು ಸಂಧಿ ೨೭ಕ್ಕಂ ಪದನು ೧೦೬೭ಕ್ಕೆ ಮಂಗಳಮಸ್ತು.

ಇಪ್ಪತ್ತೆಂಟನೆಯ ಸಂಧಿ.

ರಾಸ ಕ್ರೀಡೆಗಳು.

ಸೂಚನೆ ॥ ಆಡಿದನುಮನವೊಲಿದುರಾಸ । ಕ್ರೀಡೆಯನುಗೋಪಾಂಗನೆಯರೊಡ । ಗೂಡಿಗೋಪೀನಾಥನ
ವನತನಾಥಸುರನಾಥ ॥ … … … …

ಪದವು ॥ ಕೇಳುನೃಪಕಮಲಾಕ್ಷಿಯರುಶಿರಿ । ಲೋಲಸಾಕ್ಷಿತಭಕ್ತಪಶ್ಯವಿ । ಶಾಲಕಾರುಣ್ಯಾಮೃತರಸಾಂಸಾರಸೂಕ್ತಿಗಳ ॥ ಆಲಿಸುತತದ್ವಿರಹವಹ್ನಿ । ಜ್ವಾಲೆಯನುಸಂತೋಷರಸದಲಿ । ಬೀಳುಕೊಟ್ಟರುಬಾಲೆಯರುನಿಮಿಷಾರ್ಧಮಾತ್ರದಲಿ ॥ ೧ ॥ ಅಲ್ಲಿರಾಸಕ್ರೀಡೆಯನುನಿಜ । ವಲ್ಲಭೆಯರೊಡಗೂಡಿಲಕ್ಷ್ಮೀ । ವಲ್ಲಭನುಡೊಡಗಿದನುಗೋಪೀಜನಮನೋರಥವ ॥ ಭುಲ್ಲವಿಸಲನ್ಯೋನ್ಯಯುತಕರ । ಪಲ್ಲವದಕದಪುಗಳತೋಳ್ಗಳ । ಪಲ್ಲಟದಪರಿರಂಭಣಾದಿವಿಚಿತ್ರಗತಿಗಳಲಿ ॥ ೨ ॥ ಚಲದಳಕರಾಜಿಗಳಕರ್ಣೋರ್ಮಿ । ಜ್ವಲದಬಹಳಸ್ವೇದಜಲಪರಿ । ಲುಳಿತತಿಲಕದಹೊಳವಮಣಿಕುಂಡಲದಕದಪುಗಳ ॥ ಎಳನಗೆಯಸುಪ್ರೇಮವೀಕ್ಷಣ । ದಲಸಗಮನದವಿಭ್ರಮದಹರಿ । ಸಲಿಸಿದನುಮನವನುಸರಾಗದರಾಸಗೋಷ್ಠಿಯಲಿ ॥ ೩ ॥ ಚಲಕುಚಸ್ಯಯಭಾರದಲಿನಡು । ಬಳುಕಿಬಹಳನಿತಂಬಭಾರ । ಸ್ಖಲಿತಪದವಿನ್ಯಾಸೆಯರುಸಂಗಾಭಿಲಾಷೆಯರು ॥ ಬಳಲಿದಂತ್ರಚ್ಯುತನತ್ರೋಳ್ಗಳ । ಮಲಗಿಮುಡಿದೋಳ್ಮಲ್ಲಿಗೆಗಳೆಳೆ । ಗಿಳಿಯಲಾಡಿದರಾಳ್ವನೊಳುಗುಣಗಳನುಪಾಡುತ್ತ ॥ ೪ ॥ ಕಾಲಲೊಪ್ಪುವನೂಪುರದನಲ । ತೋಳುಗಳಕಂಕಣದಕಟಿತಟ । ಲೋಲಕಾಂಚೀಗುಣದಮಣಿಮುದ್ರಿಕೆಯಬೆರಳುಗಳ ॥ ಮೇಲೆಬಿದ್ದರವಿಟರಯದನಿ । ಪ್ಪೋಳುಗಳಪುಗುರುಗಳಬಿಂಕದ । ಬಾಲೆಯರುಬಳಸಿದರುಬಹುವಿಭ್ರಮದಲಚ್ಯುತನ ॥ ೫ ॥ ಕರಕಮಲವಿನ್ಯಸ್ತಿಗಳಕಂಕಣ । ವಿರಹಿತದನೂಪುರಝಣತ್ಕೃತಿ । ಮೆರವಪಾದಪ್ರಸಗತಿಗಳಸಸ್ಮಿತೇಕ್ಷಣದ ॥ ಸರಸವಚನದಸಕಲಲೋಕಾ । ಕರುಷಣೋದ್ಯತವಿಭ್ರಮದಸರ । ಸಿರುಹಮುಖಿಯರುಸೂರೆಗೊಂಡರುಜನದಕಣ್ಮನವ ॥ ೬ ॥ ಬಿಡುಮುಡಿಯಮಲ್ಲಿಗೆಯರಳ್ಗಳ । ಗಡಿಯಿಡುವತುಂಬಿಗಳಗೀತದ । ಪಡಿರವದಪೊಂಗೆಜ್ಜೆಯಂದುಗೆವಾದ್ಯರವವೆಸೆಯೆ ॥ ಮಡದಿಯರುಕೈ

ಷ್ಣಾಂಗಸಂಗದ | ಜಡಿವಸುಖದುಬ್ಬಿನಲಿಪಾಡಿದರೊ | ಡನೊಡನೆಭಾಪೆಂದುಭುವನೇಶ್ವರರುಘಲ್ಲವಿಸೆ || ೭ || ಒಬ್ಬಳಚ್ಯುತ
ನೊಡನೆಪಾಡಿದ | ಳೊಬ್ಬಳದನಂಗೈಸಿದಳುಮ | ತ್ತೊಬ್ಬಳಾಳಾಪಿಸಿದಳಚ್ಯುತಶ್ರುತಿಯನಂತದನೆ || ಸರ್ಬಜನಮೋಹನಸುಗೀ
ತಸು | ಪುರ್ಬನಿಧಿಗಳಚಿತ್ರಗತಿಗಳ | ನುಬ್ಬಿಸಿದರೊಂದೊಂದುಪರಿಯಲಿರತಿವಿದಗ್ಧಯರು || ೮ || ವನಿತೆಯರಶಶನ್ನಂಗ
ಸಂಗದ | ಘನತರದಸಾಖ್ಯೋಪಭೋಗದ | ಜನಿತಲಾಲಸ್ಯದಲಿಲಟಕಟಸುತ್ತಲಿರೆಕಂಡು || ಅನಿಬರಿಂಗನಿತಾಕೃತಿಯಸಾಂ |
ತನುಪಮಾನುಕರುಣದಲಿಗೋಪೀ | ಜನವದಣಿಪಿದನಾತ್ಮರತನನುಕೂಲವೃತ್ತಿಯಲಿ || ೯ || ತಾನುತನ್ನೆಡೆನೆಡೆಗೆವಾನಿನಿ |
ಮಾನಿನಿಯರೆಡೆಗೆಡೆನೆತಾನದ | ನೇನನೆಂಬೆನುಕೃಷ್ಣಗೋಪೀಜನದಮಂಡಲವ || ಸ್ಥಾನರಚನೆಯಚಿತ್ರವಿಭವದ | ಮಾನಿ
ಸಿದ್ಧಿಯನಿಂದ್ರನೀಲಸ | ಮಾನಸೂತ್ರದಕನಕಮಣಿಗಳವೋಲುರಂಜಿಸಿತು || ೧೦ || ಸಾಲೆಸವಮಂಡಲಕೆಹೇಮಕ | ಮಾ
ಲೆಗಳೊಶ್ರೀಕೃಷ್ಣವನಿತಾ | ಜಾಲತರುಮಂಡಲವೊಸೊಬಗಿನಸಾರಮಂತಲವೊ || ಹೇಳಲರಿದಾಯ್ತುಮಲಪನಿತಾ | ಜಾ
ಹಮ್ಮೈಸಿದುದುಹರಿಲೀ ; ಲಾಲಲಿತರಾಸೋತ್ಸವದಸಂಭ್ರಮವನೆರೆನೋಡಿ || ೧೧ || ಸಡಿಲಿದುಡೆಕುಚಪಟ್ಟಗಳನಳ | ವಡಿ
ಸಮರದರುಹೊರಗೆಸೂಸುವ | ಬಿಡುಮುಡಿಯಸಂವರಿಸಮರದರುಮಾನಿನಿಯರಂದು || ಬಿಡದೆಮುರಹರನಂಗಸಂಗವ | ಸ
ಡಿಲುವುದುಸುಖವೆಂದುಮೇಣರಿ | ವೊಡರಿಸಿದಸೌಖ್ಯಾನುಭವವೋಬಲ್ಲರಾರೆಂದ || ೧೨ || ಮುಗಿಲುಮಧ್ಯದಮಿಂಚುಗಳ
ವೋ | ಲಗಧರನನೀಲಾಭ್ರನಿಭಮೂ | ರ್ತಿಗಳಮಧ್ಯದಲೊಪ್ಪಿದರುಪಾಡುತ್ತಗೋಪಿಯರು || ನಿಗಮವನಿತೆಯರಂತೆಹರಿಮ
ಹಿ | ಮೆಗಳನೊಪ್ಪುವದಿವ್ಯಗುಣಚರಿ | ತಗಳನುಘ್ನಡಿಸುತ್ತವಿಸ್ತರಿಸುತ್ತದೆಸೆದೆಸೆಗೆ || ೧೩ || ಆಡಿದರುವನಿತೆಯರುಬಲಹರಿ |
ಗೂಡಿಗೋಪಿಯರೊಡನೆಕೆಲವದ | ನೋಡಿಮೂರ್ಛೆಗೆಸಂದರಲ್ಲಿಯೆಕೃಷ್ಣಲೀಲೆಗಳ || ಆಡಲೇಕೆಶಶಾಂಕನಲಿಕಂ | ಡಾಡಿದವು
ಶರೋಹಿಣಿಗೆವಾಣಿಗೆ | ವೇಡಿಸಿತುಕಂದರ್ಪಶರಸರ್ವಾಂಗದಲಿಮನವ || ೧೪ || ನಕ್ಕಳಗಜೆಮಹೇಶ್ವರನಹಗೆ | ಹೆಕ್ಕಳಸಲೀಮ
ರುಳುಲೋಕದ | ಮುಕ್ಕಳಾಟಕೆಮಾನ್ಯವೇಸಂಸಾರಗತಿಯನುತ || ಮಿಕ್ಕಸತಿಯರಹೃದಯಸಾರವ | ನಕ್ಕಡಭಿಪರ್ಣಿಸುವಡರಿ
ಯನು | ಸಿಕ್ಕಿಸಿತುಕಣುಮನಗಳನುರಾಸೋತ್ಸವದರಚನೆ || ೧೫ || ನೋಡಿದಣಿಯರುಸುರರುಸಂತಸು | ಪಾಡಿದಣಿಯರು
ಮುನಿಗಳೊಪ್ಪಿರೆ | ಪಾಡಿದಣಿಯರುದಂಡಿಗಳುಗಂಧರ್ವಜನನಿಕರ || ಆಡಿದಣಿಯರುದೇವಿಯರುಹರಿ | ದಾಡಿದಣಿಯರುನಾರದ
ನುತಾಳು | ಕಾಡಿಸಿತುಹರಿಲೀಲೆಹರುಷಾಬ್ಧಿಯಲಿಮೂಜಗವ || ೧೬ || ಆವುದೋಗೋಪಿಯರಪೂರ್ವಭ | ವಾವಳಿಯಸಂಚಿತಸ
ಮಗ್ರತ | ಪೋವಿಭೂತಿವಿಶಿಷ್ಟಜನಸನುಮಾನಸತ್ಕಾರ || ದೇವದೇವನನಖಿಳನಿಗಮಶಿ | ರೋವಿರಾಜಿತಚರಣನನುಮ |
ನ್ನಾವಪರಿಯಲಿಭಜಿಸಿದರೊಯನುತಿರ್ದುದಮರಗಣ || ೧೭ || ಆವಕಾರುಣ್ಯಾಮೃತಾಬ್ಧಿಯೊ | ದೇವಕೀನಂದನನುಮರ್ಘ
ಭಾ | ಪಾವಸೇವಕಸುಲಭದೈವವೊದೇವನಿಕರದಲಿ || ರಾವುಗಾಣವುಮುನಿಮನಂಗಳು | ಭಾವಿಸುತಭವರೋಗವೈದ್ಯಂ |
ಗೀವಿನೋದದಲೀಲೆಭಾಪೆಂದುದುಬುಧಸ್ತೋಮ || ೧೮ || ಸರಸಿಜಾಸನರುದ್ರವಿಬುಧೇ | ಶ್ವರರಪದಸೌಖ್ಯಂಗಳಿದರೊಂ |
ದೊರೆಗೆಬಹವೇಮೋಹಕರವಲ್ಲದೆಮತಿಪ್ರದವೆ || ಪರಮಸುಖಕರವಿಹಪರಕೆಹರಿ | ಚರಣಕಮಲದಸೇವೆಯನುತಂ | ಬಾರರು
ತಾವ್‌ಹೊಗಳುತ್ತಸುರಿದರುಪುಷ್ಪವೃಷ್ಟಿಗಳ || ೧೯ || ತಾಳಮರ್ದ್ದಳಶಂಖಪಟಹದ | ಮೇಳವದಬಹುಭದ್ರವಾದ್ಯದ | ಲೋಲ
ಗಿಸಿದುದುಸಕಲಗಂಧರ್ವಾಪ್ಸರೋನಿವಹ || ಹೇಳಲರಿದಾಯ್ತುಸಮಗೋಪೀ | ಜಾಲಮಂಡಲತಾಂಡವದಹರಿ | ಲೀಲೆಮಿಗೆಲಾ
ವಣಿಸಿಗೊಂಡುದುಜಗದಕಣುಮನವ || ೨೦ || ಆಡಿದರುಮೈದಣಿಯೆಕುಣಿದರು | ಪಾಡಿದರುಮುದದಿಂದೆಹರಿಯನು | ಕೂಡಿದ
ರುಸೋಪಾಧಿಕದಸಾಯುಜ್ಯಸಂಪದವ || ಮೂಡಿದವುಕಿರುಬೆಮರುಮುಖದಲಿ | ನೋಡಿಕರುಣಾವನಧಿತೊಡದನು | ಕೂಡೆ
ಕಾಲಶ್ರಮಭಯಾಪಹನಿಜಕರಾಗ್ರದಲಿ || ೨೧ || ತೋಳುಗಳತಕ್ಕೈಸಿಬಳಲಿದು | ಬಾಲೆಯರುಬಸವಳಿದುತನ್ನಯ | ಮೇಲೆಬೀ
ಳುತ್ತಿರಲುಕರುಣಾವನಧಿಸಂತೈಸಿ || ಏಳಿರಾಸಾಶ್ರಮಕೆಕಡೆಜಲ | ಕೇಳಿಯೇಕರ್ತವ್ಯವೆನುತಾ | ಲೋಲಶೃತಿಯರುಸಹಿತಬಿಜ

ಜಲಕ್ರೀಡೆಗಳು.

ಯಂಗೈದನೊಲವಿನಲಿ || ೨೨ || ಬರಸರೋರುಹನೇತ್ರನನುಪಂ | ಕರುಹಮುಕುಳಿತಹಸ್ತೈರವ | ಪರಿಮಳದಕಾಣಿಕೆಯ
ನಿತ್ತಳಿಗೀತದಲಿಪಾಡಿ || ಭರಿತಪವನವ್ಯಜನಹಂಸೋ | ತ್ಕರದಚಾಮರೆಗಳಲಿಮಿಗೆಸತು | ಕರಿಸಿಸರಸೀನಾರಿಮನ್ನಿಸಿದಳುಮ
ರಾಂತಕನ || ೨೩ || ಸರಸಿಸಜ್ಜನಹೃದಯದಂತಿರೆ | ಪರಿವೃತಾಖಿಲಕಲುಷಿತೆಯಲಂ | ಬುರುಹಮುದ್ರಿತಭ್ರುಂಗದಲಿಕೃಷ್ಣಾ
ತ್ಮರಂತಿರಲು || ಸರಸಿಜಾಕ್ಷಿಯರಿಳಿದರದರೊಳು | ಪರಿಹರಿಸಲೆಂದಾರತಿಶ್ರಮ | ದುರವಣಿಯಲಚ್ಯುತನಬಳಿಯಲಿವಿಮಳಸಲಿಲ
ದಲಿ || ೨೪ || ಇಳಿದುಕಲಕಿದರಾಸರೋವರ | ಕಲಕದನುಸಂಕ್ಷೋಭವಿಲ್ಲದೆ | ಚಲಿಸದಿರ್ದುದುಚಪಳೆಯರಪ್ರಜ್ಲಣೆಯಗಜಭ
ಜಕೆ || ಸಲಿಲಸಂಪನ್ನತೆಯಲಿಂತಿಂ | ತೊಳಗೆಸಾಕ್ಷಾದ್ವಿಷ್ಣುವಿರೆಕಳ | ವಳಿಸುವರೆಬಲ್ಲವರುವಿಷಯಭ್ರಾಂತಿಗೆಂಬಂತೆ || ೨೫ ||
ಚೆಲ್ಲಿಡಡೆಜಲಮಾಸರೋವರ | ದಲ್ಲಿಯೇಸೂಸಿದವುಬಹಳತೆ | ಯುಳ್ಳಕಾರಣದಿಂದಕರಣೇಂದ್ರಿಯದವೃತ್ತಿಗಳು || ಎಲ್ಲರೊಳುತ

ನೆಂಬುಕಂಡವ । ರಲ್ಲಿಲಯುವತಿವಿತರದೋಷವ । ನೆಲ್ಲನಿತಸಂಗ್ರಹಿಸರೆಂದೆಂಬುದನುತೋರ್ಪರಂತೆ ॥ ೨೬ ॥ ಕಳದನರೆನಿಮುಷ
ದಲಿಲಲನಾ । ವಳಿಯುರಾಸಶ್ರಮವನಂದಾ । ಸಲಿಲಕೇಳಿನಿಜಾತ್ಮತತ್ವಜ್ಞಾನವಿಭವದಲಿ ॥ ಬಳಲಿಕೆಯುಕಳೆವಂತೆಕರುಣಾ । ಜಲ
ಧಿಕ್ರುಳುಕ ಡಿದನುಸರಸೀ । ಸಲಿಲಸುಮೇಳದಲಿಕಾಮಿನಿಜನದಪೂರದಲಿ ॥ ೨೭ ॥ ಶ್ರಮಸಮೂಹನಿವಾರಣೈಕ । ಕ್ಷಮವಲಾ
ಜಲಕೇಳಿಮಂಗುಳಾ । ಶ್ರಮವನೀಯುದುಬನ್ನಿಯನುತಾಡಿದನುಮನವೊಲಿದು ॥ ಶ್ರಮನಿಬಂಧನಸಕಲದುಃಖ । ಶ್ರಮನಿವಾರಣ
ವೆನಿಪಗುರುಪದ । ಕಮಲಭಕ್ತಿಶ್ರಮದವ್ರೊಲೆಂಬುದನುತೋರ್ಪರಂತೆ ॥ ೨೮ ॥ ಹಂಸನೈತರೆಸರಸಿಯೊಳಗಣ । ಹಂಸತತಿಹಾ
ರಿದವ್ರುಭಯದಲಿ । ಹಂಸನಾನಾತ್ವವನುಸ್ಮರಿಸನೆಂದುತೋರ್ಪರಂತೆ ॥ ಕಂಸರಿಪುಕಮಲಾನನೆಯರಿದಿ । ರಂಸೆಯುಡಗಲುಸಕಲ
ದುಃಖ । ಧ್ವಂಸನದಜಲಕೇಳಿಯನುನಲಿದಾಡಿದನುಬಿಡದೆ ॥ ೨೯ ॥ ಜನಪಕೇಳಾಡಿದನುಗೋಪೀ । ಜನಮನೋವಲ್ಲಭನುಜ
ಲಸಂ । ಜನಿತಕೇಳಿಯಲಿಂತುಹೂಮಳೆಗರೆಯೆಗಗನದಲಿ ॥ ಅನಿಮಿಷರುಭೂಪನಿಲುಸೇವಕ । ಜನಮನೋರಥಕಾರಿತಾನೆಂ ।
ದೆನಿಸಿಸಲಿಸಿದನಿರದೆಗೋಪಾಂಗನೆಯರಭಿಮತವ ॥ ೩೦ ॥ ಲತೆವನೆಯಲಾಡುತ್ತವನತರು । ತತಿಗಳನುತ್ರೋರುತ್ತಭ್ರಂಗ ।
ಶ್ರುತಿಮನೋಹರಗೀತವನುಕೇಳುತ್ತಪಾಡುತ್ತ ॥ ಸತಿಯರನುಪಾಡಿಸುತತಕ್ಕೈ । ಸುತನಿಜಪ್ರೇಮದಲಿಘನಸಾ । ರತಕಳಾಸಾ
ರಸ್ಯಸಂಪತ್ತಿಯನುತೋರಿಸಿದ ॥ ೩೧ ॥ ಹೇಳದೆಯುಲೈಮುನಿಪಧರ್ಮವ । ಹೇಳುವಾತನುಜಗಕೆಧರ್ಮವ । ಪಾಲಿಸುವಲಾಲಿಸುವ
ತದನುಷ್ಠಾತೃವೆಂದೆನಿಪ ॥ ಶ್ರೀಲಲಾಮಪದಾಬ್ಜನೆಂತೈ । ಮೇಳವಾಡಿದನಾಪರಸ್ತ್ರೀ । ಜಾಲದೊಡನೆವಿಚಿತ್ರವಾಯ್ತನಲೆಂದ
ನಾಮುನಿಪ ॥ ೩೨ ॥ ಅರಸಕೇಳನ್ಯಾಯವೇನಂ । ಬುರುಹನಾಭಂಗಖಿಳಸಚರಾ । ಚರಜಗಚ್ಚೈತನ್ಯರೂಪಂಗದ್ವಿತೀಯಂಗೆ ॥
ನಿರುತಲೋಕಕೆವಿಧಿನಿಷೇಧವ । ಬರದುತಲೆಯಲಿಕಟ್ಟನಡಸುವ । ಪರಮಪುರುಷಂಗುಂಟೆವಿಧಿಕಿಂಕರತೆಹೇಳೆಂದ ॥ ೩೩ ॥ ನು
ಡಿಯಸತ್ಯವನೋಳ್ಪದಲ್ಲದೆ । ನಡೆಯನೋಳ್ಪಾಮಗನೆವಿಷವನು । ಕುಡಿಗನೀಶ್ವರನೆಂದಡೆಲ್ಲರಿಗಹುದೆಪತಿಗಳಿಗೆ ॥ ಒಡನಿಹರು
ಗೋಪಿಯರುಮನೆಯಲಿ । ಬಿಡದೆತನ್ನಂತಿಕದಲಿಹರಾ । ಗೊಡರಿಸುವ್ರದೀಶಕ್ತಿಯಂದನುಮುನಿಸ್ವಪಾಲಂಗೆ ॥ ೩೪ ॥ ಹೇಳ
ನಡೆಕೇಳದಡೆಪಾಪೋ । ನ್ಮೂಲನವಮಾಡುವುದುಕೃಷ್ಣನ । ಲೀಲೆಗೋಪೀಜಾರನೆಂದಡೆಭೂಪಮೂಜಗಕೆ ॥ ಹೇಳಲೇಕಘ
ಹರವಲ್ಲಸುವಿ । ಶಾಲಪುಣ್ಯಪ್ರದವಿದಿಂತಿದ । ನೇಳದಿಟವನುಮಾರ್ಪವರುಪಾಪಾತ್ಮರವರೆಂದ ॥ ೩೫ ॥ ರತಿಯನುತ್ಪಾದಿಸುವ
ನಿಜಸುಖ । ರತನೆನಿಸಿಸತಿಯರಿಗೆಚರಣಾ । ಶ್ರಿತೆಯರಿಗೆದಿಟವಿಟನವ್ರೊಲಸ್ಖಲಿತವೀರ್ಯನಲಾ ॥ ಕ್ಷಿತಿಪಲೌಕಿಕವಲ್ಲಲಕ್ಷ್ಮೀ ।
ಸತಿಯಪರಮವಿಹಾರವಜ್ಞರ । ಪತಿಗೆಗಮ್ಯವೆಮಗನೆಮುರಮಥನನಮಹಾಮಹಿಮೆ ॥ ೩೬ ॥ ಸಕಲಜೀವರಿಗೊಂದುನೆವದಲಿ ।
ಮುಕುತಿಯನುಕೊಡಲೆಂದುಸಲೆಸು । ಪ್ರಕಟವಾದುದುಸರಸಿಜಾಕ್ಷನಮೂರ್ತಿಮೇದಿನಿಗೆ ॥ ಅಕಟವಿಟಬುದ್ಧಿಯಲಿವಿಹಿತಾ ।
ಸಕತಿಯಲಿಗೋಪಿಯರುಪಡೆಯದೆ । ಮುಕುತಿಯನುಬರಲಾರರವರಚ್ಯುತನಸನ್ನಿಧಿಗೆ ॥ ೩೭ ॥ ಅಡಿಮನಬಂದಂತೆನಲಿದೆಡೆ ।
ಮಾಡಿಹರಿಯೊಡನರ್ಥಿಯಲಿಮಾ । ತಾಡಿರತಿಕೋವಿದೆಯರಿಂತಿಂತೊಲಿದುಲೀಲೆಯಲಿ ॥ ಕೂಡೆವನಭೂಮಿಯನುಪಾವನ ।
ಮಾಡಿಬೆಳಗಹಜಾವದೊಳಗಾ । ಗಾಡಿಕಾತಿಯರೈದುವರುತಂತಂಮಮನೆಗಳಿಗೆ ॥ ೩೮ ॥ ಹೋಗಿನೀವೆಂದೆನುತಕರುಣಾ ।
ಸಾಗರನಾನೇಮಿಸಲುವಿರಹದ । ಬೇಗೆಯಲಿಬೇವುತ್ತಹೋಹರುವನಿತೆಯರುಮನೆಗೆ ॥ ಯೋಗಮಾಯಾಧೀಶ್ವರನನನು । ರಾ
ಗದಲಿಪಾಡುತ್ತಹಗಲನು । ನೀಗುವರುತದ್ಭಾವಭಾವಿತಚಿತ್ತವೃತ್ತಿಯಲಿ ॥ ೩೯ ॥ ಇಂತುಗೋಪಿಯರೊಡನೆಲಕ್ಷ್ಮೀ । ಕಾಂ
ತನಾಡಿದವಿಮಳಚರಿತೋ । ದಾಂತಸುಧೆಯನುಸೇವಿಸುವರಾರಿದನುಭಕತಿಯಲಿ ॥ ಅಂತಕನನೊದಚ್ಯುತನಚರ । ಣಾಂತಿಕವೆ
ಯ್ದುವರವರುಭೂ । ಕಾಂತಭುವನಾಧೀಶನಿತ್ಯಾತುಮನಕರುಣದಲಿ ॥ ... ... ॥ ೪೦ ॥

ಅಂತು ಸಂಧಿ ೨೮ಕ್ಕಂ ಪದನು ೬೩೩೩ಕ್ಕಂ ಮಂಗಳಮಸ್ತು.

ಇಪ್ಪತ್ತೊಂಭತ್ತನೆಯ ಸಂಧಿ.

——○()○ ವಿದ್ಯಾಧರ ಮೋಕ್ಷ ಕಥಾ ○()○——

ಸೂಚನೆ॥ ಗೋಪಗೋಪೀಜನಮನೋವಿ । ಸ್ತಾಪಕೋರುಚರಿತ್ರಮುರರಿಪು । ಶಾಪಮೋಕ್ಷವನಿತ್ತನಾ
ವಿದ್ಯಾಧರಂಗೊಲಿದು ॥ ... ...

ಪದನು ॥ ಒಂದುದಿನಕೇಳರಸಗೋಪರ । ವೃಂದನಡದುದುದೇವಯಾತ್ರಾ । ನಂದಸಿದ್ಧಿಗೆಸಕಲಜನಸಹಿತಂಬಿಕಾವ
ಕೆ ॥ ಮಿಂದುತೀರ್ಥದಲಂಬಿಕಾಂಘ್ರಿ । ದ್ವಂದ್ವವನುಭಜಿಸುತ್ತರಾತ್ರಿಯ । ಲಂದುಮೈಮರೆದಿರ್ದರುಪವಾಸದಲಿಗೋವಳರು ॥
ಗಲುಹರಗಿರಿಜಾಪದಾಂಬುಜ । ಯುಗಳವನುಪೂಜಿಸುತವಿಪ್ರರ । ಬಗೆದಣಿಯೆಗೋಭೂಮಿವಸನಹಿರಣ್ಯದಾನದಲಿ ॥ ಸೊಗ
ಸುಪಮೃಷ್ಟಾನ್ನದಾನಾ । ದಿಗಳಸೊಪ್ಪಿರಲಿರುಳುನಿದ್ರೆಯ । ಬಿಗುಹಿನಲಿಮೈಮರದುಮಲಗಿರ್ದರುಪವನಾಂತರದಲಿ ॥ ೧ ॥ ನಂದ

ನಾರಾತ್ರಿಯಲಿವನದೊಳ । ಗಂದುಮೈಮರೆದೊರಗುತಿರಲ್ಕೆ । ತಂದುದವದಿರಧನಿಗೆಮೈಮುರಿದೆದ್ದು ಕಂಡೆರದು ॥ ಬಂದುದುಗ್ರೋ
ರಗಮಹಾಶನ । ವಿಂದುದೊರಕಿದುದೆನುತ ಸರಭಸ । ದಿಂದನುಂಗಿದುದೇನನೆಂಬೆನುನಂದನಸುಹಿಡಿದು ॥ ೩ ॥ ನಿದ್ರೆತಿಳಿದುರ
ಗಾಸ್ಯದಲಿತಾ । ಬಿದ್ದೆನೆನುತ್ತೊರಲುವಧ್ವನಿಯ ಕೇಳಿ । ಕಿದ್ದವರನೆಬ್ಬಿಸಿತು ಹರಿತಂದುದುಜನಸ್ತೋಮ ॥ ಎದ್ದುದಲ್ಲಿಯುದಲ್ಲಿಕತ್ತಲೆ ।
ಕದ್ದುದನಿಬರಕಣ್ಣನೊರಲುವ । ಶಬ್ದವೇಪ್ರಮಾಣ್ಯವಹಡುದುಭೂಪಕೇಳೆಂದ ॥ ೪ ॥ ಪರಿದರತ್ತಾಯುಧಗಳಿಂದ । ಬ್ಬಿರಿಸಿ
ಹೊಯ್ದರುಕಲ್ಲುಗಳಲಿ । ಟ್ಟರುಕಠಾರಿಯಲಿರಿದರಪ್ಪಳಿಸಿದರುದಡಿಗಳಲಿ ॥ ಅರಿಯನಸುವೇದನೆಯನಂತದ । ನುರಗಪತಿಬಾ
ಯ್ದೆರದುನುಂಗುವ । ಭರದಲಿದ್ದನುನಂದಗೋಪನನಿಳೆಯೊಳಡಗೆಡಹಿ ॥ ೫ ॥ ಗಾರುಡದಮಂತ್ರದಲಿಕೆಲರುರ । ಗಾರಿಮಂತ್ರಂ
ಗಳಲಿಕೆಲರಹಿ । ಮಾರಣದವಿಧಿಗಳಲಿಕೆಲರೌಷಧವಿಧಾನದಲಿ ॥ ಆರದಾವಂಗದಲುಪದ್ರಿಸೆ । ಸಾರನೆಂತುಟೊಸದಹಿವಿಗತವಿ ।
ಕಾರನಿರ್ದನುಸರ್ಪನಾತ್ಮಜ್ಞಾನರತನಂತೆ ॥ ೬ ॥ ಎಲಲೆನುಂಗಿತುನುಂಗಿತ್ಯೆಯನ । ನಳಲಿಗನೆಹಾಕೃಷ್ಣಹಾಗೋ । ಕುಲದರಸ
ಹಾರಾಮಹಾಹಾಹಾಪ್ರಬಲಹಾವು ॥ ಬಲವದರಿಮರ್ದನನೆಬಿಡಿಸಾ । ಖಳಕುಲಾಂತಕರಾಮಬಿಡಿಸಾ । ತಲೆಗಡಿಗೆನುಂಗಿತುನುಂ
ಗಿತ್ತೆನುತಜನರುಲಿಯೆ ॥ ೭ ॥ ಅಬ್ಬರವಕೇಳುತ್ತಹೋಹೋ । ದುರ್ಬಲರಿರಂಜದಿರಿನೀವೆನು । ತಬ್ಬರಾಹರಿರಾಮರಯ್ದಿದರಭ
ಯವನುಕೊಡುತ ॥ ಉಬ್ಬುಪತಿಶಯರೋಷಪಾವಕ । ಕುಬ್ಬುಳಿತಕೋಮಲಕಟಾಕ್ಷದ । ಸರ್ಬಗತನೈತಂದುಮೆಟ್ಟಿದನಾಮ
ಹೋರಗನ ॥ ೮ ॥ ಮೆಟ್ಟದರೆಹರಿಚರಣಕಮಲವ । ಮುಟ್ಟಿಮುನ್ನಿನಸರ್ಪದೇಹವ । ಬಿಟ್ಟನಿಮಿಷಾಂತರದಲಾಂತನುದಿವ್ಯ
ರೂಪವನು ॥ ಉಟ್ಟಪಟ್ಟಾವಳಿಯಕನಕದ । ತೊಟ್ಟಮಣಿಭೂಷಣದಮಿಗೆರೂ । ಹಿಟ್ಟಮನ್ಮಥವಂತ್ರೆಬೆಳಗಿದನಖಿಳದಿಗುತಟ
ವ ॥ ೯ ॥ ರವಿಯರಶ್ಮಿಯನೇಳಿಸುವತ । ನ್ನವಯವದಕಾಂತಿಯಲಿದಶದಿ । ಗ್ವಿವರವನುಬೆಳಗುತ್ತಕೃಷ್ಣನಚರಣಕಮಲದಲಿ ॥
ದಿವಿಜವರನೆರಗಿದನುಗೋಪರ । ನಿವಹವೀಕ್ಷಿಸಲೊಲಿದುಕರುಣಾ । ರ್ಣವನುನಸುನಗುತೆಂದನಾತನಮಸ್ತಕವನೆಗಹಿ ॥ ೧೦ ॥
ಏನಿದೆತ್ತಣತೇಜವಿದುಮಾ । ನ್ನೇನುಕಾರಣಸರ್ಪನಂದವ । ದೇನುಮತ್ತೀದಿವ್ಯಮೂರ್ತಿಗ್ರಹಣಸಂಬಂಧ ॥ ನೀನಿದನುಹೇಳೆನ
ಗೆನಲುಕೇ । ಳಾನುತನುರೂಪದಲಿಗುಣದಲ । ನೂನವಿದ್ಯೆಗಳಲಿಸುದರ್ಶನನೆಂಬುದಭಿಧಾನ ॥ ೧೧ ॥ ಉತ್ತಮಾಂಗನೆಯರುಸಹಿ
ತತಿರು । ಗುತ್ತದಿವ್ಯವಿಮಾನದಲಿಪುರು । ಷೋತ್ತಮನೆನಾಕಂಡೆನಾಂಗಿರಸದ್ವಿಜೋತ್ತಮನ ॥ ಚಿತ್ತವಿಸುವಿದ್ಯಾಧರಂಗಾ । ನು
ತ್ತಮನುತಾನರುಹನಾಗೆಮ । ಹಾತ್ಮನಿಡವಿಸ್ತರಿಸಲೆಲ್ಲವನೆನುತಲಿಂತೆಂದ ॥ ೧೨ ॥ ತಾಪಸನುತಪದಿಂದಕೃಶತನು । ರೂಪವಳಿ
ರೆಕಂಡುತಾನವ । ಲೇಪದಲಿನಿಜರೂಪಗುಣಯೌವನದಕೊಬ್ಬಿನಲಿ ॥ ಶ್ರೀಪತಿಯೆಚಿತ್ತೈಸುತನಗಾ । ದಾಪದವನೆನಗಾಗಲಿ
ತ್ತರು । ಶಾಪವನುಫಡಸರ್ಪನಾಗೆಂದೆನುತಭೂಸುರನು ॥ ೧೩ ॥ ಕೊಟ್ಟಶಾಪದವಜ್ರಹತಿಗೆಡೆ । ಗೆಟ್ಟುದೆನ್ನಯಗರ್ವಗಿರಿಕಂ ।
ಗೆಟ್ಟುಕಾಲಲಿಕೆಡೆದುಬೇಡಿದಲಿತ್ತರವರೆನಗೆ ॥ ಸೃಷ್ಟಿಪಾಲಕರೊಡೆಯನಂಘ್ರಿಯ । ಮುಟ್ಟಿಮೋಕ್ಷವಪಡೆಯೆನುತಗಡಿ । ಗಟ್ಟಿದ
ರುಶಾಪಕ್ಕೆಶಾಂತಕ್ರೋಧರವರೆಂದ ॥ ೧೪ ॥ ಕಂಡೆನಾದ್ವಿಜವರರುಮಾಡಿದ । ಚಂಡಕಾರುಣ್ಯೇಕ್ಷಣದಲಾ । ಖಂಡಲಾದಿಸುರೌ
ಘಸೇವಿತಪಾದಪೀಠವನು ॥ ಕಂಡೆನರಸುವನಿಗಮತತಿಮುಂ । ಕೊಂಡುಕಾಣದೆಮರಳ್ವನಾಚಿದ । ಖಂಡಸುಖಪರಿಪೂರ್ಣಪರ
ಮಾತ್ಮನನುತಾನೆಂದ ॥ ೧೫ ॥ ಅಕಟಹರಿಯರುತಪ್ಪವರೆಮತಿ । ವಿಕಳರಂತಿರಲಖಿಳಜೀವ । ಪ್ರಕರಚೈತನ್ಯಾತ್ಮನೊಬ್ಬನೆಯೆಂ
ದುಕಂಡವರು ॥ ತ್ರಿಕರಣಂಗಳಲಿಂತುಹಿತಸಾ । ಧಕರುಪರರಿಂಗೆಂಬನುಡಿಸ್ವಾ । ರ್ಥಕವಲಾನಾನಾವಧನ್ಯನೊಶಿವಶಿವಾಯೆಂದ ॥
ಬಲಿದರೆಂತುಟೊಸಜ್ಜನರುಸದ । ಮಳರುಮುನಿದರೆನಿನ್ನಪದಯುಗ । ಜಲಜದರುಶನಮಾಯ್ತಲಾದಿವಿಜಾಧಮಂಗೆನಗೆ ॥ ಒಲಿ
ದುಮೇಣೊಲ್ಲದೆನಿರೀಕ್ಷಿಸಿ । ನಳಿನಸಖನನುತ್ತರಳವೇಕ । ತ್ತಲೆಗಳೆಂತುಟೊಗಹನವೋಗುಣವಂತರಿವರೆಂದ ॥ ೧೭ ॥ ದೇವ
ದೇವನಚರಣಕಮಲಯು । ಗಾವಲೋಕನಮಾತ್ರದಿಂದಘ । ಪಾವನನುನಾನಾದೆನೆಂಬುದಿದೊಂದುಸಂಸ್ತುತಿಯೆ ॥ ದೇವನಾಮ
ಸ್ಮರಣೆಪಾತಕ । ಪಾವನಕೆಪಾವನವಲಾಸಲೆ । ಜೀವಜಾತಕ್ಕೆನ್ನವೋಲುಸಭಾಗ್ಯರಾರೆಂದ ॥ ೧೮ ॥ ಸಿರಿಯಕರಕಮಲದಲಿ
ಫಣಿಪನ । ಶಿರದಲಂಗದಲಮಳಮುನಿಹೃ । ತ್ಸರಸಿರುಹಪೀಠದಲಿನಿಗಮಶಿರೋರುಹಸ್ತದಲಿ ॥ ಚರಿಸುವೀನಿಂಮಡಿಯರೇಣು
ಸ್ಪರುಶನದಬಹುಪುಣ್ಯವೆಂತೋ । ದೊರಕಿದುದುನನಗಿಲ್ಲಿಮೋಹವಿಮೂಢಮತಿಗೆಂದ ॥ ೧೯ ॥ ಧನ್ಯನಾದೆನುಬೀಳುಕೊಡ
ನಿಂ । ನುನ್ನತಾಮಳಕೀರ್ತಿಸುಧೆಯನು । ಮನ್ನಿಸುವೆನಿನ್ನಂಘ್ರಿಯುಗಳದದಾಸನೆಂದೆನಿಸಿ ॥ ಸನ್ನುತನೆಸಂಚರಿಸುವಂತೆಕೃ । ಪಾ
ರ್ಣವನೆಕಾರುಣ್ಯದೃಷ್ಟಿಯ । ನೆನ್ನಲಿರಿಸೂದೆನುತಮಕುಟವಚಾಚಿದನುಪದಕೆ ॥ ೨೦ ॥ ಅಗಲೇಳೆಲೆಮೃಗನೇತ್ರನ್ನದು । ಮೇ
ರೆಯಮಾತಲ್ಲಗರ್ವಿಸ । ಲಾಗದಾವಂಗದಲಿಕೆಡುವರುನೀನೆಕಂಡೆಯಲ ॥ ಹೋಗುತನ್ನನುಮರೆಯದಿರುಸುಖಿ । ಯಾಗೆನುತತ
ದಡವಿಕರುಣಾ । ಸಾಗರನುಬೀಳ್ಕೊಟ್ಟನಾವಿದ್ಯಾಧರಂಗೊಲಿದು ॥ ೨೧ ॥ ಎರಗಿದನುಬಲವಂದುಪುನರಪಿ । ಚರಣದಲಿಬೀ
ಳ್ಕೊಂಡುವಿದ್ಯಾ । ಧರರೊಡೆಯನನುಸಕಲದಿಗಧೀಶ್ವರಮಹೇಶ್ವರರ ॥ ಬೆರಸಿದನುಸುರರೊಳಗೆಶಾಪವ । ಪರಿಹರಿಸಿಬಳ್ಕಿ
ಗೋಪರು । ಪರಮವಿಸ್ಮಿತರಾದರೀಕ್ಷಿಸಿಹರಿಯಮಹಿಮೆಗಳ ॥ ೨೨ ॥ ಸತ್ತುಬದುಕಿದನೆನುತಗೋಪರ । ಮೊತ್ತಕವಿದುದುನ

ದಗೋಪನ । ನುತ್ತಮರುಹರಸಿದರುತ್ತಕ್ಕೈಸುತ್ತ ಕೈದಣಿಯೆ ॥ ಮತ್ತೆ ಕೃಷ್ಣನನಪ್ಪಿಕಾರಣ । ಮೂರ್ತಿಯಲ್ಲದಡೀವಿಧಾನದ ।
ಶಕ್ತಿಸೇರೂಪಾವದೇವಂಗೆಂದುದಖಿಳಜನ ॥ ೨೩ ॥ ಬಳಿಕನಿಯಮಸಮಾಪ್ತಿಯನುಕ್ಕೈ । ಗೊಳಿಸಿಹೂಡಿದಭಂಡಿಗಳನಳ । ವಳಿಸಿ
ಕರುತರುಬಾಲವನಿತಾವೃದ್ಧಜನಸಹಿತ ॥ ನಳಿನಮುಖಿಯರು ಕೃಷ್ಣಚರಿತವ । ನೊಲಿದುಪಾಡುತ ಬಂದರಾಗೋ । ಕುಲಕೆಗೋಪ
ರುಮೇಳಿಸುಮನೋವೃಷ್ಟಿಗಳುಸುರಿಯೆ ॥ ೨೪ ॥ ಹಗಲುಚೋರರಶಾಪದಲಿವೈ । ದೆಗದುರಾತ್ರಿಯರೂಪದಿಂದಿರೆ । ಜಗದಪತಿ
ಕೃಷ್ಣನನುಸೋಂಕಿವಿಶಾಪವಾದಂತೆ ॥ ಮುಗುಳೆನಿಜರೂಪದಲಿರಂಜಿಸೆ । ಸೊಗಸುಮಿಗೆತಾವರೆಗಳೊಯ್ಯನೆ । ನಗುತಲಿರ್ದವುಮಿ
ತನುದಯದವಿಭವವನು ಕಂಡು ॥ ೨೫ ॥ ಮತ್ತೆ ನೈದಿಲುಸುಯ್ಗುರುಳದಲಿ । ಹೊತ್ತಿಹೋಗೆಸುತ್ತಾಯ್ತು ಹಗಲಿನ । ಭಿತ್ತಿಭುವನದ
ಚಿತ್ರರಚನೆಗಳೆಡನೆಮಾಸಿದವು ॥ ಮತ್ತೆ ಶಶಿಧವಳಿಸಿದನಮೃತದ । ಹಸ್ತದಲಿದೆಸೆಗಳಲಿಬಲುಪುರು । ಷೋತ್ತಮರಿಗಿರತಕ್ಕುದೆನೆ
ರೋಧೋಗ್ಗೃಹಾಂತರವ ॥ ೨೬ ॥ ಕಡಲಮಾಗಣೆಯಾಯ್ತು ವಾರಿಯ । ಕಡಿತವುನ್ಮಥನಲಗುಗೊಂಡನು । ನುಡಿಸಿದನುವಿರಹಿ
ಣಿಯರಂಗದಲಂತರವ್ಯಥೆಯ ॥ ಕುಡಿಯಲೆರದನುಜೊನ್ನವಕ್ಕಿಯು । ಗಡಣಕಮೃತವನೀಚರಾಚರ । ದೊಡಲಪಗೆಯನುಕಳೆವು
ತುದಯಾಚಲಕೆನಡೆತಂದು ॥ ೨೭ ॥ ಭೂರಿಭುವನದತಾಪಮೃಗಕುಲ । ವಾರಣಕೆಹಿಮಕರಬಿಗಿದಬೆ । ಳ್ಳಾರವಲೆಯಂತೆಸೆದ
ಬೆಳುದಿಂಗಳನುನೋಡುತ್ತ ॥ ಶೌರಿಹಲಧರರೈದಿದರುಕಾಂ । ತಾರಕೇಳಿಗೆಕಮಲಮುಖಿಯರ । ಸಾರರಸಂಕಲ್ಪಸಿದ್ಧಿಗೆಸಮ
ಯವೆಂದೊಲಿದು ॥ ೨೮ ॥ ಪೊಂಗೊಳಲಬಾರಿಸುತಹೊಸಪರಿ । ಯಂಗದಲಿಮೋಹಿಸುತಗೋಪಾ । ಲಾಂಗನೆಯರೊಡಗೂಡಿ
ವೃಂದಾವನದಮಧ್ಯದಲಿ ॥ ತುಂಗವಿಕ್ರಮಮಾಡುತಿರೆಬೆಳು । ದಿಂಗಳಲಿಬಲವಂತನೊಬ್ಬನು । ಸಂಗರಪ್ರಿಯನಾಗಿದೈತ್ಯಾಧಮನು
ನಡೆತಂದ ॥ ೨೯ ॥ ಬಂದುಕಂಡನುಹರಿಬಲರನಾ । ನಂದಲೀಲೆಯಲಾಡುವಾಸ್ತ್ರೀ । ವೃಂದವನುಸತ್ಸಂಗಸುಖಸಾಮ್ರಾಜ್ಯವೈಭ
ವದಲಿ ॥ ಚೆಂದನಂಗಜನಸ್ತ್ರಹತಿಯಲಿ । ಬಂದಿಕಾರನುಬಳಲುತೈತಂ । ದಿಂದುಮುಖಿಯರನೊಯ್ವೆನಿವರನುತನ್ನಮನೆಗೆಂದು
॥ ೩೦ ॥ ಕಂಡುಕಮಲದಳಾಕ್ಷಿಯರನಾ । ಭಂಡನಾರವರೆಂದುನೋಡದೆ । ದಂಡಧರನೂರಿಂಗೆಸ್ವೀಳೆಯವಸವಿವಂತೆ ॥ ಖಂಡ
ಪರಶುಸಭಾನುಚರನು । ದ್ದಂಡಬಲನಾಶಂಖಚೂಡನು । ಕಂಡಲದನಬಲೆಯರನಂಗಜನಾಹವದಮೊನೆಗೆ ॥ ೩೧ ॥ ಒಲ್ಲದರೆ
ಸತಿಯರನುನೂಕಿದ । ನಿಲ್ಲಿನಿಮಗೇಕೆಡವಿಯಲಿನೃಪ । ರಿಲ್ಲಲಾರಾಜ್ಯಕ್ಕೆಧರ್ಮಪಥಕ್ಕೆಪಾಲಕರು ॥ ಸಲ್ಲದುಗನಾಚರಿಪರೆನ್ನದು ।
ಹೊಲ್ಲಹೆನುನಡೆನಡೆಯನುತಖಳ । ನೆಲ್ಲರನುಹಿಡಿದೊಯ್ವನಳುಕದೆಬಡಗದೆಸೆಗಾಗಿ ॥ ೩೨ ॥ ಹಾರಮಣಹಾಕೃಷ್ಣಹಾರಿಪು । ವೀ
ರಗಜಪಂಚಾನನನೆರಣ । ಧೀರರರಸನೆರಾಮಹಾರಾಜೀವಲೋಚನನೆ ॥ ಚೋರನೊಯ್ವುತ್ತಿಹನೆಯಮನಿ । ನ್ನಾರೊಡೆಯರಿಹ
ರೋಯೆನುತ್ತಾ । ನಾರಿಯರುಮೊರೆಯಿಡಲುಖಳನಟ್ಟಿದನುಬೆಂಬಿಡದೆ ॥ ೩೩ ॥ ಕೇಳುತವೆಹೆಬ್ಬುಯ್ಯಲನುವನ । ಮಾಲಿರಾಮ
ರುಬೆದರಬೇಡೆನು । ತಾಳುಗಳದಾತಾರರೈದಿದರಭಯವನುಕೊಡುತ ॥ ಕಾಲಮೃತ್ಯುಗಳಂತೆರೋಷಕ । ರಾಳಭ್ರುಕುಟೀಬದ್ಧ
ಭೀಷ್ಮಾ । ಭೀಲವಕ್ತ್ರರುವಿಕೃತಗಾತ್ರರುಖಳನಸಂಮುಖಕೆ ॥ ೩೪ ॥ ಜಾರಪಥಹೋಗದಿರುನಾರೀ । ಚೋರಪಥಹೋಗದಿರು
ಪಾಪಾ । ಚಾರಹೋಗದಿರೆನುತಬರೆಬೆಂಬತ್ತಿಹರಿಬಲರು ॥ ಚೋರನಾನಹೆನಹೆನುವಿಮಳಾ । ಚಾರನಿರತರುನೀವ್ರನಿಶ್ಚಯ ।
ವಾರರಿಯರಿದನೇಕೆಬಂದಿರಿತನ್ನಬಳಿಗೆಂದ ॥ ೩೫ ॥ ಅಹುದುಧರ್ಮರಹಸ್ಯಸಂಹಿತೆ । ಯಿಹುದುನಿನ್ನಲಿಸತಿಯರನುನಿ । ಗ್ರಹಿ
ಸುವವನಲಿಜೀವಹಿಂಸಾಪಾರಲುಬ್ಧನಲಿ ॥ ವಿಹಿತವಹನಿಜಧರ್ಮಘನಿ । ರ್ವಹಣವನುತಾತೋರ್ಸೆನೀಗಳೆ । ಕುಹಕಿನಿಮ
ಷಾಂತರದೊಳೆನುತ್ತೈದಿದನುರಿಪುಭಟನ ॥ ೩೬ ॥ ಮುಟ್ಟಬರೆಮುರಮಥನನನುಕಂ । ಗೆಟ್ಟುನೋಡುವಡಂಜಿಸುರರಿಪು । ಬಿ
ಟ್ಟುತಳೆದನುಮನೆಯಹೆಂಡಿರುಸಾಕುತನಗೆನುತ ॥ ಬಿಟ್ಟುಗೋಪೀಜನವನಸುರಘು । ರಟ್ಟನಂಣನಿಲಿಸಿಕಾಲಂ । ಗಟ್ಟಬ
ಹೆನಿವನಸುವನೆನುತ್ತೈದಿದನುಬಳಿಸಲಿಸಿ ॥ ೩೭ ॥ ಕಳ್ಳಹೋಗದಿರಿನ್ನುಬಿಡುವೆನೆ । ಬಲ್ಲಿದನಹಗೆಬಾಳಲಿವುದೇ । ತಲ್ಲಣಿಸುವರೆ
ವೀರರಾದವರಾಹವಾಗ್ರದಲಿ ॥ ನಿಲ್ಲೆನುತನಳಿನಾಕ್ಷನೈದಿದ । ನುಲ್ಲಸಿತಶಚಕ್ರಡರಕ್ಷಮ । ತಲ್ಲಿಕಾಗ್ರಹಸ್ತೈಕತತ್ಪರನಾಗಿ
ಬೆಂಬಿಡದೆ ॥ ೩೮ ॥ ಮುಟ್ಟಲರಿಯಾಪ್ರತೀವ್ರಯೋಗವಿ । ಶಿಷ್ಟಮತಿಗಳುತನ್ನನಸುರನ । ಮುಟ್ಟಲಾರದೆಮರಳಲರಿವನಚೇತ

ಶಂಖಚೂಡನ ಕೆಡಹಿ ಮಣಿ ಗ್ರಹಿಸಿದ ಕಥೆ.

ನಾತ್ಮಕನು ॥ ಅಟ್ಟಿದನುಖಳನೋಡಿದನುಗತಿ । ಗೆಟ್ಟುಗಾಢಶ್ರಮದಭರದಲಿ । ತುಟ್ಟಿಸಿತುತನುಬಳಲಿಮಾರ್ಗದಲಿಸ್ಥೈ
ವರಿದು ॥ ೩೯ ॥ ಹಿಡಿದುಖಳನನುಮುಂದಲೆಯನೊದ । ದೆಡದಕಾಲಲಿಧರೆಗೆಕಾಯುವ । ಕೆಡಹಿತಲೆಯನುತಿವಿದುಕೊಂಡನು
ತಚ್ಛಿರೋಮಣಿಯ ॥ ಪೊಡವಿಗತಿಶಯವೆನಿಪಮಣಿಯನು । ಮಡದಿಯರುಭಾಪೆನಲುಮುರರಿಪು । ತಡೆಯದಣ್ಣಂಗಿತ್ತನೈತಂ
ದಧಿಕಹರುಷದಲಿ ॥ ೪೦ ॥ ಇರುಳುಶಶಿಚಂದ್ರಿಕೆಯನೊಯ್ಯನೆ । ಬರಸೆಳದಸಂಬರಕೆತೊಡೆದನು । ತರಣಿತನುಕಾಂತಿಯನೆನಲು
ಪರವಶಕೆಹೆರಹಿನಲಿ ॥ ಗರುಡದೇವನುಗಗನದಗಲ । ಕ್ಕೆರಕೆಗೆದರಿನಿಜಾತ್ಮನಾಥನ । ಹೊರೆಗೆಬಂದಪನೆನಲುಪುದಯಾರುಣಿಮೆ

ರಂಜಿಸಿತು ॥ ೪೧ ॥ ಬಳಿಕಗೋಪಿಯರಾಮುಕುಂದನ | ಚೆಲುವಮೂರ್ತಿಯನಪ್ಪಿಮನದಲಿ | ನಿಳಯವನಾಸರಿದರುಪಿರಿದಾ ತುರೆಯರಾಗುತ್ತ ॥ ಲಲನೆಯರುನಿತ್ಯಾತ್ಮಕೃಷ್ಣನ | ಲಲಿತಮಂಗಳಮೂರ್ತಿಸುಧೆಯಲಿ | ಮುಳುಗಿಮರೆದಿರ್ದಪ್ರಲುಕಳಿವರು ದಿವಸದಾಯಾಸವ ॥ ... ... ॥ ೪೨ ॥

ಅಂತು ಸಂಧಿ ೨೯ಕ್ಕಂ ಪದನು ೧೪೭೭ಕ್ಕಂ ಮಂಗಳಮಸ್ತು.

ಮೂವತ್ತನೆಯ ಸಂಧಿ.

ವೃಷಭಾಸುರನ ವಧೆ.

ಸೂಚನೆ॥ ಸಾರತರಸತ್ಕೀರ್ತಿಭುವನಾ | ಧಾರಕಾರಣಮೂರ್ತಿಕೊಂದನು | ಘೋರವೃಷಭಾಸುರನ ನಚ್ಯುತನಾಹವಾಗ್ರದಲಿ॥ ... ...

ಪದನು॥ ಹಗಲುಹರಿತುರುಗಾಯಿತೊಡನಾ | ಡಿಗಳುಸಹಿತವನಾಂತರದೊಳಿರೆ | ಮೃಗನಯನೆಯರತದ್ಗತಾತ್ಮೆಯರಾಗಿತನುತ್ರಮಗೆ ॥ ಬಗೆದಣಿಯೆಗೋವಿಂದನುರುಲೀ | ಲೆಗಳನಭಿವರ್ಣಿಸುತವಿರಹದ | ದಗೆಯುಗೆಲುವರುದುಃಖದಲಿವಾಸರಪರಿಭ್ರಮವ ॥ ೧ ॥ ಎಡದಭುಜದಲಿಮುರಿದುಮಂಡಿಸಿ | ದೆಡದಕದಪಿನವಿರುಗುವಧರದ | ಲಡಿಯಿಡುವಪೊಂಗೊಳಲಸತ್ಕ್ರಿಗೆ

ವೇಣುಗೀತೆಗಳು.

ಗಿವಹುಬ್ಬುಗಳ ॥ ಬಿಡುವಹಿಡಿವಂಗುಲಿದಳನನಯ | ಪಡೆದಸಪ್ತಸ್ವರದಮೂಜಗ | ದೊಡೆಯನೀಗೋವಿಂದನೈಧನೆಮಲಗಿಸುರತರುವ ॥ ೨ ॥ ಆಗಳದನಾಲಿಸುತಸಿದ್ಧಸ | ಮಾಗತಾಮಳವನಿತೆಯರುತಾ | ಮಾಗನಲ್ಲರತ್ತೊಡೆಯನೇಲುಡೆಮುಡಿಗಳನುಮರೆದು ॥ ಪೊಗಣಿಯುಷ್ಟಾಯದಲಿಭಗ್ನೆಯ | ರಾಗಿಮೂರ್ಛೆಗೆಸಂದುಕರುಣಾ | ಸಾಗರನಮೂರ್ತಿಯನುನೋಡುತ್ತಿಪ್ಪರನವರತ ॥ ೩ ॥ ಕೇಳಿರಾಚಿತ್ರವನುನೀವೆಲೆ | ಬಾಲಕಿಯರಿರನಮ್ಮಕೃಷ್ಣನ | ನೀಲಮೇಘಶ್ಯಾಮನೆನಿಸುವಮೆರವಪೇರುರದ ॥ ಮೇಲುಮಿಂಚುಗಳೆಸೆಯಲಾರ್ತರ್ಕ್ಯ | ಮೇಳನತಜನಬಂಧುಕೊಳಲಲಿ | ಹೇಳಿಸುತ್ತಿರೆರಾಗಭೇದವನೆಸೆಯೆವನದೊಳಗೆ ॥ ೪ ॥ ಮೆಳ್ಳಿರಿದುಕಿವಿಗಳಲಿಕೇಳುತ | ಹುಲ್ಲುಗಳನರೆಗಚ್ಚಿಬಾಯಲಿ | ಬಲ್ಲಪುರುಷರಪೋಲುಮೇಲ್ಮೊಗವಾಗಿಗೋವುಗಳು ॥ ಹುಲ್ಲುಗಳುಹುಲಿಹದ್ದುಹಾವುಗ | ಳೆಲ್ಲನೆರದೊಂದಾಗಿಲಕ್ಷ್ಮೀ | ವಲ್ಲಭನನೋಡುತ್ತಲಿರ್ದವುಚಿತ್ರದಂದದಲಿ ॥ ೫ ॥ ಅಂಗಭೂಷಣಮಾಡಿಹೊಸಪರಿ | ಯಂಗದಲಿಮಲ್ಲರವೊಲೀನಂ | ಮಂಗಜನಪಿತನೊಮ್ಮೆದೂರದಲಿರ್ದುಗೋವುಗಳ ॥ ಗಂಗೆಬಾರೆಲೆಯಮುನೆಬಾರಾ | ತುಂಗೆಹೋಗದಿರೆನುತತನ್ನಾ | ಮಂಗಳಲಿಸಖಿಕೇಳುಕರವನುಕರತಳವತೋರಿ ॥ ೬ ॥ ಕರದನಮ್ಮನೆನುತ್ತನದಿಗಳು | ಹರಿವುದನುನೆರೆಮಾಡುನಮ್ಮಂ | ತಿರೆಸುಕೃತಗಾತಿಯರುಸುಳಿಸುಳಿಸುಳಿದುನೆಲೆಗೊಂಡು ॥ ಧರೆಗಳಲಿಕಮಲಾಪಹಾರವ | ಧರಿಸಿಕೃಷ್ಣನಪದಕಮಲಸಂ | ಸ್ಪರುಶನವಮಾಡುತ್ತಲಿರ್ದವುಪಾರವಶ್ಯದಲಿ ॥ ೭ ॥ ಕೆಳೆಯಗೋವಳರಿಂದಹೊಗಳಿಸಿ | ಕೊಳುತಪರಮೇಶ್ವರನವೋಲ | ಸ್ಖಲಿತವಿಭವದಲಾಡುತೊಪ್ಪುವಗಿರಿತಟಂಗಳಲಿ ॥ ಹೊಲಬುತಪ್ಪಿದತುರುಗಳನುಪೊಂ | ಗೊಳಲಧನಿಯಲಿಕರೆವುತಿರೆಯೆಲೆ | ಕೆಳದಿಕೇಳಾಕೃಷ್ಣನುರುಲೀಲೆಗಳಸೈಶಿಕವ ॥ ೮ ॥ ಆಗಳಲ್ಲಿಯತರುನಿಕರತಲೆ | ವಾಗಿಫಲಭಾರದಲಿನಂಮಲಿ | ಯೋಗಮೂರುತಿಕೃಷ್ಣನಿಳನೆಂದರುಪುವಂದದಲಿ ॥ ತೂಗಿತೊನಲುತಮೇಳಿಸುತ್ತನು | ರಾಗಕೋರಕಪುಳಕಮಧುರಾ | ರಾಗಗಳಬಾಷ್ಪದಲಿಮೆರೆವುವುಮುನಿಗಳಂದದಲಿ ॥ ೯ ॥ ನಸುಬಳಲಿದೆಡೆದುರುಬಿನಲಿವೇ | ಷ್ಟಿಸಿದಕತ್ತರಿವೀಲಿಗಳಹೆರೆ | ನೊಸಲತಿಲಕದಕತ್ತುರಿಯನಳಿನಾಯತೇಕ್ಷಣದ ॥ ಎಸವಭಂಗೀತ್ರಯದಲೊಲವಿನ | ಕುಸುಮನಾಭನುಪೊಂಗೊಳಲಬಾ | ರಿಸುವಸಮುಖದಲಾದಹದನನುಕೇಳಿಕೆಳದಿಯರು ॥ ೧೦ ॥ ಸಾರಸಾರಸಚಕ್ರವಾಕವು | ಯೂರಹಂಸವಿಹಂಗಮಂಗಳು | ದಾರವೇಣುಸ್ವನರಸವನಾಲಿಸುತಮೌನದಲಿ ॥ ಭೂರಿವಿಟಪಂಗಳಲಿಕೃಷ್ಣನ | ಚಾರುಮೂರ್ತಿಯನೀಕ್ಷಿಸುತಪರಿ | ವಾರದಂತೆಸದಿರ್ದವತವಿಯುಚಿತ್ರದಂದದಲಿ ॥ ೧೧ ॥ ವಿಹಿತದಿವ್ಯವಿಚಿತ್ರವೇಷ | ಗ್ರಹಣಗುಣನಿಧಿಪೊಂಗೊಳಲಲು | ದ್ವಹಿಸೆಸಪ್ತಸ್ವರವನೆಲೆಕೆಳದಿಯರಿರೊಪ್ಪಿರಲು ॥ ಮಹದತಿಕ್ರಮಭೀತಿಯಲಿಸ | ನ್ನಿಹಿತಮೃದುರವಪುಷ್ಪವೃಷ್ಟಿಯ | ಲಹಹತಾಪಸಹರಣವನುಮಾಡುವನುಮೇಘಾಂಕ ॥ ೧೨ ॥ ನಿನ್ನಮಗನಿರ್ತಿಭುವನದೊಳತಿ | ಮಾನ್ಯನಲ್ಲಾತಾಯೆದಿಟಸಾ | ಮಾನ್ಯನೇನಿಜವೇಣುಗೀತಮನೋಜ್ಞಕೌಶಲವ ॥ ಸನ್ನಿತೋರಿಸುತಧರಪುಟದಲಿ | ಚೆನ್ನಿಗನುಪೊಂಗೊಳಲನಿರಿಸೆಸು | ತನ್ನಿಸುವಸಪ್ತಸ್ವರೋತ್ಥಗ್ರಾಮಜಾತಿಗಳ ॥ ೧೩ ॥ ಕೆಳದಿಕೇಳ್ಲೋಕಮಲಭವಭವ | ಬಲವಿರೋಧಿಪ್ರಮುಖಸುರಮುನಿ | ಕುಲನಿವಹವಂಬರದಲಾಲಿಸುತಿರಲುತತ್ವವನು ॥ ತಿಳಿಯಲರಿಯದೆತಲೆಯನಾಡಿಸಿ | ಹೊಲಬುಗೆಡುವರುಜಾಣರೊಳಗ | ಗ್ಗಳೆಯನೀಗೋವಿಂದನಮರಾಸುರನನುಷ್ಯರಲಿ ॥ ೧೪ ॥ ಕೆಳೆಯಗೋವಳರೀಕ್ಷಿಸಲುಗೋ | ಕುಲದಪರಮಸ್ವಾಮಿನವಿಮ್ಮಾ | ಚೆಲುವರರಸನುಯಮುನೆಯೊತ್ತಿನ

ಗಾಡುತಿರಲೊಮ್ಮೆ ॥ ಬಳಿದನ ಕಿನ್ನಾಳ್ದನೆನುತ । ಕ್ಕಳಿಸಿಶೀತಳವಾಗಿಮಂದಾ । ನಿಲನುಬೀಸುವನೇನೆನೆಂಬೆನುಕೃಷ್ಣನೊಡೆ
ತನವ ॥ ೧೫ ॥ ಆಡುತಿರೆವನದೊಳಗೆನೆರೆಕೈ । ಗೂಡಿಸಲುನಮ್ಮಿಷ್ಟವನುನೆರೆ । ಮಾಡಲಸ್ತಾಚಲದತಪ್ಪಲಲಬುಜಸಖನೊಲಿದು ॥
ನಡಿಸುತತುರುಗಳನುತನೆನ್ನಡ । ನಾಡಿಗಳ್ಗೊರತ್ತಸನ್ನೆಯ । ಮಾಡಿಸಜ್ಜನಬಂಧುಮರಳುವನೊಲಿದುಗೋಕುಲಕೆ ॥ ೧೬ ॥
ಮುಂದೆತುರುಗಳಖುರಹತಿಗೆಧರೆ । ನೊಂದಡನುಪಮನಿಜಪದಾಬ್ಜ । ದ್ವಂದ್ವಲಾಂಛನಗಳಲಿಸಂತೈಸುತ್ತತದ್ವ್ಯಥೆಯ ॥ ನಂದಿ
ಸುತನಯನಾಭಿರಾಮನು । ಕುಂಜನೀಬರುತ್ತೈಧನೀಗೋ । ವಿಂದನಂತೆಕೃಪಾನಿಧಿಗಳಿಂನಾರುಧರಣಿಯಲಿ ॥ ೧೭ ॥ ಏನನೆಂ
ಬೆನುಕೃಷ್ಣಸಾರವ । ಧೂನಿಜಯುತಪ್ಮಂಕ್ತೆವಿರಹವ । ನಾನಲಾರದೆಮರೆಗಳನುಮೋಹವನುನೆರೆತೊರೆದು ॥ ಜ್ಞಾನವಿಲ್ಲದಡೇ
ನುಶಿವಶಿವ । ಹೀನಜಾತಿಗಳೆನಬಹುದೆಕೃ । ಷ್ಣಾನನಾರ್ಪಿತದೃಷ್ಟಿಗಳಲೆಸದಿರ್ದವನವರತ ॥ ೧೮ ॥ ವಂದಿಗಳುಸುರಸೂತಮಾ
ಗಧ । ವೃಂದಕೈವಾರಿಸಲುಸುಮನೋ । ವೃಂದಧಾರಾವೃಷ್ಟಿಗಳಲೋರಂತೆಗಗನದಲಿ ॥ ಮುಂದೆಮುನಿಗಳುತಾಯೆನಿನ್ನಯ ।
ನಂದನಾಂಘ್ರಿಗೆನವಕುಸುಮತತಿ । ಯಿಂದಮಾರ್ಗನಿರೋಧವನುಮಾಡುವರುಪೂಜಿಸುತ ॥ ೧೯ ॥ ನೋಡಿತಮ್ಮನುಮದನಶಿಖಿ
ಯಲಿ । ಬಾಡಿದೀಕಂಗಳಿಗೆಹಬ್ಬವ । ಮಾಡುವನುಮಂದಸ್ಮಿತಾರ್ದ್ರಕಟಾಕ್ಷದೀಕ್ಷೆಯಲಿ ॥ ನೋಡುತಡಬಲವಂಕವನುಕೈ ।
ನೀಡಿಕೆಳೆಯನಮೇಲೆಕಮಲವ । ನಾಡಿಸುತಬಲಗೈಯಲ್ಲೈತಹನೀನಿಜಾಲಯಕೆ ॥ ೨೦ ॥ ವಾರಣೇಂದ್ರನವೋಲುಘನಗಂ ।
ಭೀರಗಮನದಸಸ್ಮಿತೇಕ್ಷಣ । ಚಾರುವದನದ್ಯುತಿಯುಮಧುರಕಟಾಕ್ಷವೀಕ್ಷಣದ ॥ ಮಾರನೈಯನಮುರುಕನಮ್ಮನು । ಮಾರು
ನೊಳುತಿದೆಲೋಕಗತಿಯನ । ದಾರುಬಲ್ಲರುಮರವೆಯುಡಿಮುಡಿಗಳನುಮರದಿಟ್ಟು ॥ ೨೧ ॥ ಭೂರಿಭುವನಾಧಿಪನಸೊಬಗಿನ ।
ಸಾರಸಂಗ್ರಹವೆನಿಪಚಾರುಶ । ರೀರಕಾಂತಿಯುಕೌಮುದಿಯಲೀಜಗದತಾಪವನು ॥ ತ್ರೋರಿಸುತಶಂಡವರನಯನಜ । ಕೋರ
ಸೌಖ್ಯದಬಹಳಪೂರಾ । ವಾರವನುಪೇರ್ಚಿಸುತಬಹನೀವ್ರಜಕಳಾನಾಥ ॥ ೨೨ ॥ ಸ್ಥೂಲರತ್ನಾಂಗದಲೆಸವನಿಡಿ । ದೋಳುಗ
ಳಗಂಭೀರಗಮನದ । ಕಾಲಕಡೆಯದದಾನವರಹಾಹೆಗಳಬಾವುಲಿಯ ॥ ಲೋಲಮಣಿಕುಂಡಲದಲೆಸವಕ । ಪೋಲಕಾಂತಿಯ
ನೋಹನದಗೋ । ಪಾಲನಿದೆಬಂದನೆಮನೋರಥಸಿದ್ಧಿಗಳಕೊಡುತ ॥ ೨೩ ॥ ಆವಪುಣ್ಯದಸಿದ್ಧಿಯೋಕರು । ಣಾವಳಿಗೆಸಕ
ಲೇಂದ್ರಿಯಂಗಳಿ । ಗಾವಭೋಗಸ್ಥಾನವಯನ್ಯವೊಬಲ್ಲರಾರದನು ॥ ಸೇವೆಸವೆಯದುಸುಕೃತನೆನವರ । ಭಾವದಣಿಯದುಸಕಲ
ಜೀವರ । ಜೀವನೀಗೊಂವಿಂದಬಂದನುಬಂದನಿದೆಬಂದ ॥ ೨೪ ॥ ನೆರದುಗೋಪಿಯರಿಂತುಕೃಷ್ಣನ । ಚರಿತವನುಪಾಡುತ್ತಪು
ರವರು । ವಿರಹದಂತಸ್ತಾಪವನುತತ್ಪಾರವಶ್ಯದಲಿ ॥ ಕರಗುವರುಕೊಂಬುಗಳಕೊಳಲುಗ । ಳುರವಣಿಯನಾದವನುಕೇಳುತ ।
ಕರಿವರಸುಬಂದಂತೆಮನವಾರ್ತೆಗಳನೀಡಾಡಿ ॥ ೨೫ ॥ ವನಿತೆಯರುಕಾಣುತ್ತಕೃಷ್ಣನ । ನನಿಮಿಷಾರಾಧಿತನಮರವರು । ತನಾ
ವನಾಮಾರ್ಗದಲಿದಿನದವಸಾನಸಮಯದಲಿ ॥ ಕನಸಿನಲಿಗೃಹಕೃತ್ಯದಲಿಸಂ । ಜನಿತಭಾವಕರಂತೆತದ್ಗತ । ಮನದನೆನಸಿನಭಕ್ತ
ಭಾಗ್ಯಕ್ಕಾರುಸರಿಯುಂದ ॥ ೨೬ ॥ ಇಂತುಪರಮೋತ್ಸವವೆಪ್ರೊಡಲಿ । ಟ್ಯಂತೆಹಲಧರಸಹಿತಲಕ್ಷ್ಮೀ । ಕಾಂತನೆಸದಿರೆನಂದಗೋ
ಕುಲದೊಳಗೆಮನವೊಲಿದು ॥ ಅಂತಕನನೆರಸುತ್ತನಡೆತ । ಪ್ಪಂತೆದಾನವನೊಬ್ಬನಾಹರಿ । ಯಂತಿಕಕೆನಡೆತಂದನಾಕಂಸಾಸುರನ
ಭೃತ್ಯ ॥ ೨೭ ॥ ಬಸವನಾಕೃತಿಯಾಗಿಕಂಡವ । ರಸುವನಪಹರಿಸುತ್ತಕೋಡೊಳು । ಬಸಿವರುಧಿರದಬಂಧದಲಿಜಡವಂತ್ರಮಾ
ಬೆಯಲಿ ॥ ಉಸುರಹೊಗಲಿನಧಳ್ಳುರಿಯುಕೆಂ । ಪೆಸೆವಕಂಗಳಭೀಕರಾಂಗದ । ಲಸುರನಾವರಿಸುತ್ತಬಂದನುನಂದಗೋಕುಲಕೆ ॥
ಖುರಪುಟದಕೆಂಧೂಳಿದೆಸೆಗಾ । ವರಿಸೆಧರೆಪಾತಾಳತಳವನು । ಶರಣುಪೊಗೆಪೊಲಾಡಿಸುತ್ತಭ್ರವನುಬಾಲದಲಿ ॥ ಮುರಿದು
ನೋಡಿದದೆಸೆಸೆನರಕೇ । ಸರಿಯುಪೋಲ್ಲಂಘಿಸುತಗೋಪರ । ನೆರವಿಬೆದರಲುಬಿಂಕದಲಿನಡೆತಂದನಮರಾರಿ ॥ ೨೯ ॥ ಕೊಬ್ಬಿದಿಳೆ
ಕೊರಳುಗಳನೆಲನನು । ಗಬ್ಬರಿಪಕೊಳಗುಗಳನಭದಸು । ಪರ್ಬರನುಮರೆಯೊಗಿಸುತತ್ತಲಭ್ರವನವಮಂಡಲವ ॥ ಅಬ್ಬರದಗ
ರ್ಜನೆಗೆಬಸುರೊಡ । ದುರ್ಬಿಗಿಳಿಯಲುಗರ್ಭಹೆಂಗಳಿ । ಗುಬ್ಬರದಕೋಪದಲಿಕವಿದೈತಂದನುರವಣಿಸಿ ॥ ೩೦ ॥ ಚಂಡಶೃಂಗ
ಗಳಲ್ಲಿತಾರಾ । ಮಂಡಲವನಿರಿದೆತ್ತಿಬಿಸುಡುತ । ಕಂಡವರನಂತಕನಕೈಯಲಿಕೊಡುತಗೋಕುಲಕೆ ॥ ಗಂಡುಗಲಿಬರೆದೂರದಲಿ
ತುರು । ವಿಂಡುಗಳುಚೆಲ್ಲಿದವುಗೋಪರ । ತಂಡಹಾಯ್ದುದುದೆಸೆದೆಸೆಗೆಕಾಣುತ್ತಭೀತಿಯಲಿ ॥ ೩೧ ॥ ಕೆಟ್ಟೆವೆನುತಾಬಾಲವೃ
ದ್ಧರು । ಬಿಟ್ಟುಮನೆಯನುಗೋಕುಲವಹಾ । ಳಿಟ್ಟುಮಿಗೆಕಂಗೆಟ್ಟುಕಾವವರಿಲ್ಲದಳವಳಿದು ॥ ಕಟ್ಟಿಯೊಡದಂತಾಯ್ತುದುಷ್ಟಾ ।
ವಿಷ್ಟನಾಗೋಗೋಪಜಾತಿಗ । ನಿಷ್ಟವೇಬಪ್ಪಂತೆಬಂದನುಉಗ್ರಕೋಪದಲಿ ॥ ೩೨ ॥ ಮಂದರದಮಥನಕ್ಕೆದಿವಿಜರ । ವೃಂದವಾ
ನೇಲೆಯನುಮರೆಯೊಗು । ವಂದದಲಿಖಳನಾಗಮನದಾಟೋಪದುರವಣಿಗೆ ॥ ತಂದೆರಕ್ಷಿಸುಕೃಷ್ಣದೇವಮು । ಕುಂದರಕ್ಷಿಸು
ರಕ್ಷಿಸೆನುತಾ । ಮಂದಿಕವಿದುದುಕೃಷ್ಣನಂಘ್ರಿಸರೋರುಹದಮರೆಯ ॥ ೩೩ ॥ ಮೃತ್ಯುಭಯವಿದ್ರಾವಿತರುಮತಿ । ವೃತ್ತಿಯಲಿ
ಮರೆಯೊಕ್ಕುಗೆಲುವರು । ಮೃತ್ಯುವನುಗಡತನ್ನನಿಂದೀಗೋಪಗೋಧನದ ॥ ಮೊತ್ತವನುತಲೆಗಾಯದಿರ್ದಡೆ । ಯೆತ್ತಣದು
ನಿಜಭಕ್ತಕರುಣಾ । ವೃತ್ತತಾನೆಂಬೀಪ್ರತಿಜ್ಞೆಯನುತ್ತಹರಿನುಡಿದ ॥ ೩೪ ॥ ಅಂಜದಿರಿಗೋವಳರುಗೋಪಿಯ । ರಂಜದಿರಿಬ

ಹಿರರುಭಕ್ತರ । ನಂಜಿಸುತ್ತಿರೆನೋಳ್ಪದೈವವೆತಾನೆನುತ್ತೊಲಿದು ॥ ಕಂಜನಾಭನುನಗುತಸಿರಿಕರ । ಕಂಜವನುತೋರುತ ಕರು
ಣಾ । ರಂಜಿತೇಕ್ಷಣದಿಂದನೋಡಿದನಂದುಗೋಕುಲವ ॥ ೩೫ ॥ ಮಂದಮತಿನೋಡಿತ್ತಲೀವ್ರೋ । ಹಂದೆತನ್ನನುಸಂಗರದಿಸೆ ।
ನ್ನಂದದವರಿಂಗುದಿಸಿದಂತಕನನುದುರಾತ್ಮರಿಗೆ ॥ ಮುಂದೆತಾನಿರೆಶಿಶುಪಶುಸ್ತ್ರೀ । ವೃಂದದಲಿಫಲವೇನುಬೆದರಿಸಿ । ನಿಂದಿರೆನುತ
ಸುರಾರಿಕರದನುವೆರಳಸನ್ನೆಯಲಿ ॥ ೩೬ ॥ ಎಲವೊಬಾಸಮ್ಮುಖಕೆಸಮರವ । ನೇಲುವವೆನುತಾಸ್ಫೋಟಿಸುತಕರ । ತಳವ
ನಿದಿರಲಿನಿಂದುನಿರ್ಭಯನಾಗಿನಸುನಗುತ ॥ ಕೆಳೆಯನಂಸದಲೆಡದಭುಜವನು । ಚಲಿಸದೊಪ್ಪಿರೆನೀಡಿಹರಿಸಾ । ದಲಿಸಿಕರವಪ್ರ
ತ್ತಿರಲುಕಂಡನುಖಳಕುಲಾಂತಕನ ॥ ೩೭ ॥ ಪಿಡಿವ್ರೊಲುಗರ್ಜಿಸುತಕೃಷ್ಣನ । ಕಡೆಗಣಿಸಿಕೂರ್ಗೊಳಗುಗಳಲಿಳೆ । ಯೊಡೆಯ
ಲಪ್ಪಳಿಸುತ್ತಕೂರಿಯಕೋಡುಗಳಮೊನೆಯ ॥ ಕಡುಹಿಮೋಹಿಯಜಾಂಡಕೋಟಿಯ । ಯಿಡಿಕಿಲಿಜಠರವನುಹಾಯ್ವಿರೆ ।
ಹಿಡಿದನಸುರಾರಾತಿಚಲಿಸದೆಕೋಡುಗಳತುದಿಕಿ ॥ ೩೮ ॥ ಎರಡುಕೈಯಲಿಖಳನಕೋಡ್ಗಳ । ನೆರದನಾಡುರ್ಹಿಡಿದುಪೇಳ್ಗೆಲೆ ।
ಕರುವನಿನಗೇಕಾಹವಾಂಗದವಿದ್ಯೆನಿನಗೇಕೆ ॥ ಧರೆಗೆಪಶುವಧೆಪಾಪವಿದುಪೀ । ರರಿಗಕೀರ್ತಿಯೆನುತ್ತನೂಕಿದ । ನಿರದೆಖಳನ
ನುಬಂದಬಟ್ಟೆಯಲಸುರರಿಪುನಗುತ ॥ ೩೯ ॥ ನೂಕಿಬಿಟ್ಟರೆನೂರುಹಜ್ಜೆಯ । ತೇಕಿಬಿದ್ದನುಹಿಂದೆನಭದಲಿ । ಪಾಕಶಾಸನಮು
ಖ್ಯದಿವಿಜೇಶ್ವರರುಘೇಯೆನಲು ॥ ಏಕೆಸ್ಮೈರಿಸಿನಗುವವರಕ್ಕೈ । ತೂಕದಲಿನುಂಗುವೆನೆನುತ್ತವಿ । ವೇಕಿಹಾಯ್ದನುಮತ್ತೆಸಿಟ್ಟಲಂದ
ಜಲಿಮುರಹರನ ॥ ೪೦ ॥ ಇಟ್ಟವಜ್ರದವೋಲುಖಳಮುಂ । ದಿಟ್ಟಕೂರ್ಗೋಡುಗಳಮೊನೆಯಲಿ । ಹೆಟ್ಟಿಬಿರಿಯಲುಹಾಯ್ದ
ಡಸುರನಕೋಡ್ಗಳನುಹಿಡಿದು ॥ ಮುಟ್ಟಲೀಸದೆಕೆಡಹಿಧರೆಯಲಿ । ಸೃಷ್ಟಿಪಾಲಕರೊಡೆಯನಂತಕೆ । ಗಟ್ಟದನುಜೀವವನುಘೋ
ಯೆನುತಿರ್ದುದಮರಗಣ ॥ ೪೧ ॥ ಕೊರಳುಮುರಿದಸುರಡಗಿಕಾಲ್ಗಳು । ಜರಿದುಕಣ್ಣುಹೊರಹಾಯ್ದುಬಸುರು । ಬ್ಬರಿಸಿನಾಸಿಕ
ವರಳಿಹಲುಗಿಟಕಿರಿದುಬಾಯ್ದೆರದ ॥ ಹೊರಗೆಮೂತ್ರಪುರೀಷವವನಿಗೆ । ಸುರಿದುಕೋಡುಗಳುಡಿದುಘನಭೀ । ಕರವೆನಿಸಿಕೆಡ
ದಸುರನೊಡಲಂಜಿಸಿತುಮೂಜಗವ ॥ ೪೨ ॥ ಭಾಪುವೈರಿವಿದಾರಣನೆಮುರು । ಭಾಪುವೀರಪಿತಾಮಹನೆಮುರು । ಗೋಪವೇಷ
ಚ್ಛನ್ನಪರಮೇಶ್ವರನೆಭಾಪೆನುತ ॥ ಗೋಪಗೋಪೀವೃಂದವಿರಹಿತ । ತಾಪಭವನಿರ್ಲೇಪನಮರಕ । ಲಾಪಕೈವಾರಿಸಲುಜಯ
ರವಪುಷ್ಪವೃಷ್ಟಿಯಲಿ ॥ ೪೩ ॥ ಆಡಿದರುದೇವಿಯರುನಭದಲಿ । ಪಾಡಿದರುಮಹಿಮೆಯನುಸಂಸ್ತುತಿ । ಮಾಡಿದರುಮಂಗಳವೆ
ನುತಗಂಧರ್ವಕಿನ್ನರರು ॥ ಜೋಡಿಸಿದಜಯಲಕ್ಷ್ಮಿಯಲಿನಲಿ । ದಾಡುವಾಗೋವಳರಸಂದಣಿ । ಗೂಡಿನಿತ್ಯಾತುಮನುಹೊ
ಕ್ಕನುನಂದಗೋಕುಲವ ॥ ... ... ॥ ೪೪ ॥

ಅಂತು ಸಂಧಿ ೩೦ಕ್ಕಂ ಪದನು ೮೭೯ಕ್ಕಂ ಮಂಗಳಮಸ್ತು.

ಮುವ್ವತ್ತೊಂದನೆಯ ಸಂಧಿ.

ಸೂಚನೆ ॥ ಹೇಳಿದನುಕಂಸಂಗೆಲಕ್ಷ್ಮೀ । ಲೋಲಬಾಲಚರಿತ್ರಸಹಿತಾ । ಖೀಳದೈತ್ಯರವಧೆಯನಾ
ನಾರದಮಹಾಮುನಿಪ ॥ ... ...

ಪದನು ॥ ಬಂದನಮರಾಸುರನತಾಂಘ್ರಿ । ದ್ವಂದ್ವನಚ್ಯುತಗೋತ್ರಪರಮಾ । ನಂದನಿಧಿಪರಹಿತಸಮಾಹಿತಮೂರ್ತಿನ
ತಕೀರ್ತಿ ॥ ಇಂದಿರಾಪತಿಭಕ್ತಿಜನನೀ । ಮಂದಿರನುವೈಷ್ಣವಶಿರೋಮಣಿ । ವಂದ್ಯಚರಣರದೇವನಾನಾರದನುಮಧುಪುರಿಗೆ ।
ಕಂಡವರಕರಣಾವಳಿಯಕರಿ । ಗೊಂತಕಲ್ಮಷನಿಕರವನುಕಡಿ । ಖಂಡವನುಮಾಡುತ್ತಕೇಳುವರಘದಸಂಚಯವ ॥ ಹಿಂಡಿಹಿ
ಳುವೃತಕಾಲಕರ್ಮವ । ಗಂಡುಗೆಡಿಸುತಧರೆಗೆಮುನಿಮಾ । ರ್ತಾಂಡನಾವಿರ್ಭವಿಸಿದನುಮಥುರಾಪುರಾಂತರದಲಿ ॥ ೨ ॥ ದೆಸೆದೆಸೆ
ಯದುರಿತವನುದುವ್ವಾ । ಳಿಸುತಹರಿಗುಣನಾಮಘೋಷ । ಪ್ರಸರವೀಣಾರವದವೈಷ್ಣವಸಮಯಶಾಸನದ ॥ ಎಸೆವಗಾತ್ರದಚಾ
ರುನೇತ್ರದ । ಹೆಸರಿಸಿದವೈಷ್ಣವಮಹಾಪೂ । ರುಷನುಮೈದೋರಿದನುಭೋಜನೃಪಾಲನಿದಿರಿನಲಿ ॥ ೩ ॥ ಬಂದಡೋಲಗದೆಡೆಗೆ
ಭೋಜನೃ । ಪೇಂದ್ರನಿಳಿದುತ್ತಮವರಾಸನ । ದಿಂದಲಿದಿರ್ಗೊಂಡುಚಿತವಹಸತ್ಕಾರವನುಮಾಡಿ ॥ ವಂದಿಸುತ್ತಿರೆಮಗನೆಸುಖಿ
ಯಾ । ಗೆಂದುಮುನಿತಲೆದಡವಿನಿನಗಾ । ನಂದವೇಮುಖಲಕ್ಷ್ಮಿಮುನಿದಂತಿರ್ಪುದೇಕೆಂದ ॥ ೪ ॥ ಏನನೆಂಬೆನುಮುನಿಪಮನದ ।
ಜ್ಞಾನತೆಯತನ್ನೊಂದುಪೈಕದ । ಹಾನಿಯನುಕೇಳುವಡೆಕರ್ಣವ್ಯಥೆಯಲಾನಿಮಗೆ ॥ ಮಾನನಿಧಿಚಿತ್ತೈಸುತಂಗಿಯ । ಸೂನುವಿ
ನದೆಸೆಯಿಂದತನಗವ । ಸಾನವೆಂದಂದಿಂದಮನಕೆವಿಷಾದವಾಯ್ತೆಂದ ॥ ೫ ॥ ತಂಗಿಗೊಬ್ಬಳುಮಗಳುಕೊಲಲಾ । ನಂಗವಿಸಿದಡೆ
ಹಾರಿದಳುಗಗ । ನಾಂಗಣಕೆಸಾರಿದಳುಮೃತ್ಯುವೆನಿನಗೆಧರಣಿಯಲಿ ॥ ಅಂಗವಿಡಿದಿಹನೆಂದುತನ್ನೊಡ । ಲಿಂಗೆತಾಪವನಿತ್ತುಹೋ
ದಳು । ಭಂಗಿಸಿತಲಾಬಯಲನುಡಿತಾನೇನೆನಿದಕೆಂದ ॥ ೬ ॥ ವಸುಧೆಯೊಳಗಿಹನೈಸಲೇಯಂ । ದಸುರೆಹೋದಳುಹೋದಳತ
ಲೆ । ಶಿಶುವಧೆಗೆಬಕವತ್ಸಧೇನುಕರೆಂಬಪಟುಭಟರ ॥ ಅಸುವನಾರೋಕೊಂಡವರುಕೇ । ಳಿಸದುಮುಗುಳಾವಾರ್ತೆನಿಮ್ಮಡಿ ।

ಬೆಸಸಬೇಹುದುಬಲ್ಲರೆಂದನುಮುನಿಪತಿಗೆಕಂಸ ॥೭॥ ಎನಲುನಕ್ಕನುಮುನಿಪನಾಕಂ । ಸನನುಡಿಯನಾಲಿಸುತಕೇಳೆಲೆ । ನಿನಗೆಸರಿಯೇವಿಷ್ಣುವೀರರದಾರುನಿಂನಿದಿರ ॥ ಅನಿಮಿಷರಿಗಲಗಣಸುನಿನ್ನಾ । ನನದಲಷ್ಟ್ಮಿಗೆಪಾಂಡ್ಯವೇಕಿ । ಲ್ಲಿನಿತುಭಯವಾರಿಂಗೆನೀನಿದಕಂಜಲೇಕೆಂದ ॥೮॥ ಹೇಳುವೆನುಬಲ್ಲಂಡದಲಿನಿ । ನ್ನಾಳುಗಳುಮಡಿದಂದವನುಗೋ । ಪಾಲರಿಬ್ಬರುಬೆಳವೃತ್ತೈಧರೆನಂದಗೋಕುಲದ ॥ ಬಾಲಕರೊಳತಿಚೆಲುವರಧಿಕವಿ । ಶಾಲಭುಜಬಲರವರುಲಕ್ಷ್ಮೀ । ಲೋಲನಂಶಜರೆಂಬರೆಲೆಭೂಪಾಲಕೇಳೆಂದ ॥೯॥ ದುಷ್ಟನೃಪಕುಲಭಾರದಲಿಕಂ । ಗೆಟ್ಟುಕುಸಿದುರಸಾತಳಕೆಧರೆ । ತಾಟ್ಟಸುತತನುಗೊಂಡುನಡುಗುತಕಮಲಸಂಭವನೆ ॥ ವಿಷ್ಟಪಾಧೀಶ್ವರರುಸಹಿತಮ । ದಿಷ್ಟಪಿತನಾವಿಷ್ಣುವಿನೆಮೊರೆ । ಯಿಟ್ಟಡುದಿಸಿದನವನಿಯಲಿಸಾಕ್ಷಾತಹರಿಯಂದ ॥೧೦॥ ದೇವಕಾರ್ಯವಮಾಡಲೋಸುಗ । ದೇವಕಿಯಜಠರದಲಿಬರೆವಸು । ದೇವನೊಯ್ದಿರಿಸಿದನುಕೇಳೆಲೆಕಂಸನಿಜಸುತನ ॥ ಗೋವಳರೊಳ್ಳಾರರಿಯದಂತಿರು । ಳಾವಿಗಡವಿಷ್ಣುವನುಸಿನ್ನೀ । ಜೀವಹರಣನುಬೆಳವೃತ್ತೈಧನೆಗೋಕುಲದಲೆಂದ ॥೧೧॥ ಭೂಮಿಭಾರಾಯಿತನೃಪಾನ್ವಯ । ಧೂಮಕೇತುಗಳಾಗಿಧರೆಯಲಿ । ರಾಮಕೃಷ್ಣಾಹ್ವಯರುಬೆಳವೃತ್ತೈಧರವರಿಂದ ॥ ಈಮಹಾದುರ್ದರ್ಶದೈತ್ಯ । ಸ್ತೋಮವಳಿದುದುಕಂಸಕೇಳು । ದ್ದಾಮಬಾಲಕ್ರೀಡೆಯಿಂದಲೆಕೊಂದರವರೆಂದ ॥೧೨॥ ಮಗನೆಕೇಳೈಕಂಸನಂದನ । ಮಗಳುಚಂಡಿಕೆಕೃಷ್ಣನಾಶೌ । ರಿಗೆಜನಿಸಿದನುರಾಮನಾರೋಹಿಣಿಗೆಮಗನಿಂತು ॥ ಮುಗುಧನಾಗದಿರಿನ್ನುಕಾರ್ಯವ । ಬಗವುದೆನೆಕೇಳುತ್ತಖಳನೆ । ದ್ದೊಗುಮಿಗೆಯಕೋಪದಲಿಕೊಂಡನುಸೆಳದುಕೂರಸಿಯ ॥೧೩॥ ಕಾಭೈರವನಂತೆರೋಷಕ । ರಾಳಮುಖತೊದದಪನಿಯನುಕಂ । ಣಾಲಿಗಳುಕಿಡಿಗುಟ್ಟಹೂಂಕರಿಸುತ್ತನಿಂದಿರ್ದ್ದ ॥ ಸೀಳಿಪಸುದೇವನನುರಣಭೂ । ತಾಳಗೀವೆನುಬಲಿಯನೀಕ್ಷಣ । ವೇಳೆನುತಖಂಡೆಯವಜಡಿದನುಹಿಡಿದುಮುಂದಲೆಯ ॥೧೪॥ ಅಕ್ಕಟೇನೇನೆನುತತಾನಿನಿ । ತಕ್ಕೆಖಂಡೆನೆಪಾಪಿಕೊಲ್ಲದಿ । ರಕ್ಕಳಿಸಿಕೋಕೋಪವನುಕಾರ್ಯಾರ್ಥಸಂಗತಿಯ ॥ ಲೆಕ್ಕಿಸದೆನೀಕೊಂದಡವದಿರು । ಸಿಕ್ಕುವರೆಬಾಲಕರುನಿನ್ನದು । ಮಕ್ಕಳಾಟಿಕೆಕಂಸಕಳವಳಿಸದಿರುನೀನೆಂದ ॥೧೫॥ ಅರಿದೆನಿನಗೀತನನುಕೊಲುವರೆ । ಮರುಳೆತಲೆಯಿರೆಬಾಲವನುಕ । ತ್ತರಿಸುವರೆಕಾಳೋರಗನಕಲಿತನವತೋರುವರೆ ॥ ಕರಸುನಿನ್ನಳಿಯಂದಿರನುನಿಜ । ಪುರಕೆನೆವದಲಿಹಣ್ಣುವುದುಬಳಿ । ಕರಸಮನದೊಳಗಿದ್ದಕಾರ್ಯವನೆಂದನಾಮುನಿಪ ॥೧೬॥ ಇಲ್ಲಿಹಿತವರುನಿನಗೆಯಾದವ । ರೆಲ್ಲಹಗೆಯಂಬುದನುಮುನ್ನವೆ । ಸೊಲ್ಲಿಸೆನೆಷಡುಗರ್ಭಜನನದಲಂದುದೇವಕಿಯ ॥ ಖಲ್ಲಿದಂಗಿದುಪಥನೆಯಾದವ । ನಲ್ಲಗಂಧರ್ವೋದ್ಭವನುನೀ । ನಲ್ಲದಿರ್ದಡೆಕುಲವಿರೋಧವಿದೆಂತುನಿನಗೆಂದ ॥೧೭॥ ಹೇಳಿದನುಗಂಧರ್ವವೀರ್ಯವ । ಬಾಲೆಧರಿಸಿದಕಥೆಯವೈರದ । ಮೂಲಸಂಬಂಧವನುಯಾದವರೊಡನೆಕಂಸಂಗೆ ॥ ಏಳದಿಟಬೇಡೆನುತತಪ್ಪಿಸಿ । ಕಾಲಭಯವನುಶೌರಿನೃಪರನು । ಬೀಳುಕೊಂಡಡರಿದನುನಭವನುನಾರದವ್ರತಿಪ ॥ ನೊಕುಸಂಕಲೆಗಳಿಗೆಕಳ್ಪನ । ನಾಕೆಸಹಿತಾಪುತ್ರಮರಣದ । ಶೋಕವನುಭೋಗಿಸಲಿಹೋಗಲಿಕೊಡೆಬಳಿಕೆನುತ ॥ ಆಕುಮತಿಕಂಸಾವನೀಶನ । ನೇಕಪರಿಯಲಿಜರದುಸುಜನಾ । ನೀಕವಮರುಗಲುಶೌರಿದೇವಕಿಯರನುಬಂಧಿಸಿದ ॥೧೯॥ ದುರುಳನಾಗಳೆಕೇಶಿಯಂಬನ । ಕರೆದುಬೆಸಸಿದನರಿತವೊಳ್ಭಾ । ಸ್ಕರನೆವೀರಶಿರೋಮಣಿಯೆನೀಹೋಗುಗೋಕುಲಕೆ ॥ ಭರದಲೆನ್ನವಿರೋಧಿಗಳಸಂ । ಹರಿಸಿಬಾರಾರಾಮಕೃಷ್ಣರ । ತರಿಸುವೆನುಗೋವಳರಸೆರೆಯನುಬಳಿಕತಾನೆಂದ ॥೨೦॥ ಕಳುಹಿಖಳನನುದುಷ್ಟಮತಿಗೋ । ಕುಲಕೆಬಳಿಕಾಮಲ್ಲರೊಳಗ । ಗ್ಗಳೆಯರಹಚಾಣೂರಮುಷ್ಟಿಕಶಲತೋಸಲರ ॥ ಬಲವದವರೋಹಕರರಣಕತಿ । ಬಲರೆನಿಪಮಾವಂತರನುಕರ । ದಳಲುಮಿಗಲಿಂತೆಂದನೋಲಗದೊಳಗೆಕುಳ್ಳಿರ್ದ್ದ ॥೨೧॥ ಕೇಳಿದಿರೆನೀವೊಂದುಕಥೆಯನು । ಹೇಳುವರೆನಾಚುವುದುಮನಗೋ । ಪಾಲರಿಬ್ಬರುನಂದಗೋಕುಲದೊಳಗೆಗಡತನ್ನ ॥ ಆಳುಗಳಕೊಂದವರುಕಲಿಗಳು । ಕಾಳಗಕೆಗಡತನಗೆಮುನಿಪತಿ । ಹೇಳಿದನುವಸುದೇವಸುತರವರೆಂದುಬಾಲಕರ ॥೨೨॥ ಕೇಶಿಯಾಹವದೊಳಗೆಹಗೆಗಳ । ನ್ನಾಶಿಪಮಾಡದೆಮಾಣನುಳಿದಡೆ । ಸಾಸಿಗಳಕರಸುವೆನುಕೊಲುವುದುನೀವುಬಲವರ ॥ ಈಸಮಂಚಸವಲ್ಲಸಭೆಯ । ಭ್ಯಾಸಮುಖದಲಿಮಲ್ಲರಂಗಸ । ದೇಶದಲಿಮಂಚಂಗಳಕ್ಕಲಿನೋಟಕರಿಗೆಂದ ॥೨೩॥ ಕುಳ್ಳಿರಲಿಮಂಚಂಗಳಲಿಜನ । ರೆಲ್ಲನೋಡಲಿಪೌರುಷವನೆಲೆ । ಮಲ್ಲರಿರಿಮಾವಂತಕೇಳಾಹಸ್ತಿಮಲ್ಲನನು ॥ ಬಲ್ಲಿದರಸಮ್ಮುಖಕೆಬಿಡುಬಳಿ । ಕಲ್ಲಿನಿರ್ಣಯವಾಗದಿರ್ದಡೆ । ಮಲ್ಲರಲಿನಿರ್ಣಯಿಸಬಹುದೆನುತಂಜುತಿಂತೆಂದ ॥೨೪॥ ಕೊಂದೆನೆಂದರಿಕಳನಹೊಗದ । ಲ್ಲಿಂದಮುನ್ನವೆಬಾಗಿಲೊಳಗಾ । ನಂದಗೋಪನಮಕ್ಕಳನುಸಂದೇಹವೇಕಿದಕೆ ॥ ಒಂದುಬಿನ್ನಹನಿಮ್ಮಡಿಯಅಳಿ । ಯಂದಿರಲ್ಲಾತನನೀವೂಲ । ಲೆಂದುಬೆಸಸಿದಡಕ್ರಮವನಾಮಾಳ್ಪೆನೆಂತೆಂದ ॥೨೫॥ ಎಂದಡೆಂದನುಕಂಸನಿದನಾ । ರೆಂದರೇವೊನಿನಗೆನನಗಳಿ । ಯಂದಿರವರೆಂದೆಂಬಲೋಕದಹರದಮಾತುಗಳ ॥ ಇಂದುತಾನಾರೆನಗೆಯಾದವ । ವೃಂದವೇನಹುದರಿಯೆನೀನಡ । ರಂದವನುಕೇಳಾದಡೆಂದೆಲ್ಲವನುವಿವರಿಸಿದ ॥೨೬॥ ಕೇಳಿರೈಪರಿವಾರವೆಲ್ಲರು । ಕೇಳಿಸಭಟರುಮಂತ್ರಿಗಳುನೀವ್ । ಕೇಳಿಪಾರಪ್ರಭೃತಿಗಳುಕರಿತುರಗವಾಹಕರು ॥ ಕೇಳಿರೈಯಾದವರಿಗೆನ್ನಲಿ । ಮೇಳವಿಸಿದಾವೈರಕೃತ್ಯದ । ಮೂಲಕಾರಣವನುಸಮಸ್ತಾಮಾತ್ಯಜನರೆಂದ ॥೨೭॥ ಹು

ಟ್ಟದವನಾನಲ್ಲತಂದೆಗೆ । ಹುಟ್ಟಿದೆನುಪರಮೀಜದಲಿಕಂ । ಣಿಟ್ಟುನಿಜಜನನಿಯುಲಿಮುನ್ನಾದ್ರವಿಳಂಬಿಪನು ॥ ಹುಟ್ಟಿಸಿದನೆನ್ನ ವನುಯಾದವ । ಸೃಷ್ಟಿಯೊಳಗಾನಲ್ಲಕೊಂದರೆ । ಮುಟ್ಟದೆಂನನುಪಾಪನೀವಿದಕಂಜಬೇಡೆಂದ ॥ ೨೮ ॥ ಸುರರುಯಾದವರೈದೆತಾವೇ । ಸುರವಿರೋಧಿಗಡೆನ್ನಕೊಲಲವ । ತರಿಸಿದನುಗಡವಿಷ್ಣುಧರೆಯುಲಿರಾಮಕೃಷ್ಣರೆನೆ ॥ ನಿರುತ್ರಗಂಧರ್ವಕನವೀರ್ಯವ । ಧರಿಸಿದಾತಿವ್ರತ್ಯಭಂಗದ । ದುರಿತದಲಿಜನಿಸಿದೆನುಪೂರ್ವದಲಸುರನಾನೆಂದ ॥ ೨೯ ॥ ಕೋಪದಲಿತಪ್ಮ್ಮನ್ಯೆಸುವ್ರತ । ಲೋಪದಲಿಸಂಜನಿಸಿದೆನ್ನೀ । ಪಾಪಿಮಗಸುರಸುಜನಕಂಟಕನಾಗಲೆನುತಿರಲು ॥ ಶಾಪಭಯದಿಂದಪನುಯಾದವ । ಭೂಪರಿಗೆಕಂಟಕನಹನುನಿ । ರ್ಲೇಪನಾನೆನುತಡಗಿದನುಗಂಧರ್ವನಾಕ್ಷಣಕೆ ॥ ೩೦ ॥ ಹೇಳಿದನುನಾರದನುತ್ರನಗೀ । ಮೂಲಜನ್ಮರಹಸ್ಯವನುಕರು । ಣಾಳುತನದಲಿಲೋಕಹಿತವಿಗ್ರಹನುತಾನಿದನು ॥ ಹೇಳನಿನ್ನಗವಿಂದುಸಂಶಯು । ಲೋಲರಾದನಿಮಿತ್ತಹದನನು । ಹೇಳಿದೆನುಬಾಂಧವರವಧೆಗಿನ್ನಂಜಬೇಡೆಂದ ॥ ೩೧ ॥ ಎಲವೊಸಂಶಯುಬೇಡಗಜದಲಿ । ತಾಳಿಸುತಂಗಿಯುಮಕ್ಕಳನುಗೋ । ಪಳರುಸಹಿತೆಲ್ಲರನುಕರಸುವೆನೀಚರುರ್ದಶಿಗೆ ॥ ಬಲಬಲಿಪ್ರಮಥರರನೀಬಾ । ಗಿಲಲಿತಪ್ಪಿದಡಿಕ್ಕುವುದುಖಳ । ನೊಳಗೆಮಲ್ಲರನೀವಿದಕೆತಲ್ಲಣಿಸಬೇಡೆಂದ ॥ ೩೨ ॥ ರಂಗವನುನೆರೆಬಳಸಿಬಹುಮಂ । ಚಂಗಳಲಿಕುಳ್ಳಿರ್ದುನೋಡಲಿ । ಸಂಗರಪನೀದೇಶಜನಪೀಪೌರಪರಿವಾರ ॥ ಕಂಗಳಲಿನೆರೆಕಂಡುನಿಜಸುತ । ರಂಗನಾಶವನವರಬಳ್ಳಿಯುಲಿ । ಹಿಂಗದೀವಸುದೇವಸ್ಯೆದಲಿಬಂಧುಜನಸಹಿತ ॥ ೩೩ ॥ ನಂದಗೋಪನನಖಿಳಗೋಪರ । ವೃಂದವನುನೆರೆಕಳುಹಿಕಾಲನ । ಮಂದಿರಕೆತಾತರಿಸುವೆನುಬಳಿಕವರಗೋಧನವ ॥ ತಂದೆಯುಸುದೇವಕಸನಾಕ್ರಮ । ದಿಂದಮನ್ನಿಸಿಬಾಂಧವರನಾನಂ । ದದಲಿರಾಜ್ಯವನುವಮಾಡುವೆನೆಂದನಾಕಂಸ ॥ ೩೪ ॥ ಎಂದುಬೆಸಸಿದುರಾತ್ಮರನುಗೋ । ವಿಂದರಾಮರನಖಿಳಗೋಪರ । ವೃಂದಸಹಿತ್ರೊಡಗೊಂಡುಬಹಮತಿವಂತರಾರೆನುತ ॥ ಮಂದಹಾಸದಲೆಸವಕರತಳ । ದಿಂದತಳವನುಹಿಡಿದುಖಳನಿಂ । ತೆಂದನಕ್ರೂರಂಗೆಪರಿಮಿತದಲಿಮನೋಗತವ ॥ ೩೫ ॥ ಹೋಗುನೀನೆಲೆತಂದೆಗೋಕುಲ । ಕಾಗಿತನ್ನಾಜ್ಞೆಯುಲಿದಿಟನೀ । ನಾಗಲರಿವರೆಮತ್ತೆಕೆಲಬರುಸ್ವಾಮಿಕಾರ್ಯದಲಿ ॥ ಹೋಗಿಸುಕರಂಡಲದುತಂದರು । ಸಾಗರದಮನೆಯುವನನೀಭೂ । ಭಾಗಕೆನ್ನಯುವಧೆಗೆಗಡಕೇಳಿದೆನುತಾನೆಂಡ ॥ ೩೬ ॥ ಶ್ರೀಕೃಷ್ಣಾಯುನವಾ: ಪುತಿಯುತನೆನಿನ್ನಂತೆಹಿತವರ । ನತಿಶಯುದತನಗಾಪ್ತಜನವನು । ಸತತನಿರ್ಮಲಹೃದಯರನುನಿಜಧರ್ಮಕಾರ್ಯದಲಿ ॥ ಮತಿಗೆಬಹುದಿಂನ್ನೊಂದುಕಾರ್ಯ । ಸ್ಥಿತಿಯುನೊರವೆನುತನ್ನವಚನವ । ನತಿಗಳೆಯುಬೇಡೆಂದನಕ್ರೂರನನುಬೋಳೈಸಿ ॥ ೩೭ ॥ ನಂದಗೋಕುಲಕೆಲೆಸುಮತಿಹೋ । ಗಿಂದೆವಸುದೇವಾತ್ಮಭವರವ । ರೆಂದುಕೇಳಿದೆನಿಂದುನಿರ್ಮಿತಮೃತ್ಯುಗಳುತನಗೆ ॥ ತಂದೆನೀನೊಡಗೊಂಡುಬಾರಾ । ನಂದಗೋಪಾದಿಗಳುಸಹಿತೈ । ತಂದಡಾಯುತ್ತವಸಾನವೆಂದರಿಚಿಂತೆಬೇಡೆಂದ ॥ ೩೮ ॥ ಕೊಲುವುದೇನೊಂದರಿದೆಬಂದಡೆ । ಬಳಿಕತಾನಿರೆನೀಪರಿಯುಲಾ । ಕೆಲಸವೆನ್ನದುನೆವದಲಿವದಿರನೀಚತುರ್ದಶಿಗೆ ॥ ಛಳೆಯುದಿಂದೊಡಗೊಂಡುಬಾಪುರ । ಲಲನೆಯುರುಚೆಲುವೆಯುರುಹಬ್ಬದ । ಹೊಳಲಸಿರಿಲೇಸೆನ್ನುಹಿತಕರರೆಮ್ಮಬಾಂಧವರು ॥ ೩೯ ॥ ಕೇಡುತಪ್ಪದುಮುಂದೆಕುವಲಯು । ಪೀಡನಿದೆಭಾಗಿಲಲಿರಿಪುಗಳಿ । ಗಾದಿತ್ರೋರಿಸಲೇಕೆಮಲ್ಲರಸತ್ವಸಾಹಸವ ॥ ನೋಡಬಹುದುವಿನೋದದಿಂದವ । ರಾಡುವದಮನದೊಳಗೆಸಂಶಯು । ಬೇಡಮರಳಿದುಹೋಗಲೀಸೆನುಗೋಕುಲಕ್ಕೆಂದ ॥ ೪೦ ॥ ಹೋಗಲವನಿಯುಭಾರನಿನ್ನಿಂ । ದಾಗಲೀಯಾದವಮಹಾನ್ವಯು । ಸಾಗರಕೆಕಡೆಮಿತ್ರರೆನಗೀಮಾಗಧಾದಿಗಳು ॥ ತಾಗುಥಟ್ಟಿಂಗೊದಗುವವದಿರು । ಲೋಗರೇಮುರನರಕಸಾಲ್ವರು । ಬೇಗದಿಂದೊಡಗೊಂಡುಬಾರಾಬಾಲಕರನೆಂದ ॥ ೪೧ ॥ ಸುರರಕೆಲಸವದಂತಿರಲಿನಿಜ । ಕರತಳಸ್ಥವಲಾಕುಠಾರರ । ನೆರಜುಗಳುಕಾಡುವವೆಕರೆಯಾರಾಮಕೃಷ್ಣರನು ॥ ಭರದಲೆನ್ನಂತಿಕಕೆಸಂದಡೆ । ಮರಣವಹುದಂಜದಿರುಹಬ್ಬಿಕೆ । ಕರಸಿಕೊಡುನಾಡಿದುಚತುರ್ದಶಿಗೆಂದನಾಕಂಸ ॥ ೪೨ ॥ ಭೋಜಕುಲವರ್ಧನನೆಹೋಗೀ । ರಾಜರಥದಲಿನಂದಗೋಕುಲ । ಕೋಜೆಯುಲಿಕುಹಕಿಗಳನಿಲ್ಲಿಗೆಕೊಂಡುಬಾಯೆಂದ ॥ ಅಜಗಕ್ಕತಿಬಳನೆನಿಪಕೇ । ಳೀಜನಾರ್ದನವಧೆಗೆನೇಮಿಸಿ । ರಾಜಗೃಹವನುಹೊಕ್ಕನೋಲಗಹರೆಯುಲಮುರಾರಿ ॥ ೪೩ ॥ ಬೀಳುಕೊಂಡಕ್ರೂರನಾರಾ । ಜಾಲಯುವಹೊರವಂಟುಲಕ್ಷ್ಮೀ । ಲೋಲನಂಘ್ರಿಸರೋಜದರುಶನದರ್ಥಿಯುಲಿಬರಲು ॥ ಮೇಳವಿಸಿದುದುರವಿಗೆಪಶ್ಚಿಮ । ಶೈಲದಿರವಂದಿರುಳುಗೋಕುಲ । ಬಾಲೆಯುರಿಗವಸರವೆನುತನಿತ್ಯಾತ್ಮಕೃಷ್ಣನಲಿ ॥ ... ... ॥ ೪೪ ॥

ಅಂಕು ಸಂ೩ ೩೧ಕ್ಕೆ೦ ಪದನು ೧೭೮೬೩ಕ್ಕೆ ಹು೦X೪ಮಸ್ತು.

ಮೂವತ್ತೆರಡನೆಯ ಸಂಧಿ.

——೦◯೦ ಕೇಶಿಮಥನ ಕಥೆ ೦◯೦——

ಸೂಚನೆ॥ ಕೇಶಿಯನು ಸದ್ಧರ್ಮಮಾರ್ಗವಿ । ನಾಶಿಯನು ಸಂಹರಿಸಿ ಕರುಣಾ । ರಾಶಿ ಸಲಹಿದನೊಲಿದು ಕಾರುಣ್ಯದಲಿ ಗೋಕುಲವ॥ ... ...

ಪದನು॥ ಚಿತ್ತವಿಸು ನೃಪ ಕೇಶಿಯೆಂಬಾ । ದೈತ್ಯನೊಡೆಯನ ನೇಮವನು ತ । ನ್ನುತ್ತಮಾಂಗದ ಮೇಲೆ ಧರಿಸುತ್ತೆಂದನವನೊಡನೆ॥ ಎತ್ತಲೆನ್ನೀ ಬಲಪರಾಕ್ರಮ । ವೆತ್ತಲಾ ಗೋವಳರ ಮಕ್ಕಳು । ಮತ್ತೆ ಬೆಸಸಿನ್ನೊಬ್ಬನನು ಕರುಗಾವವರ ಕೊಲೆಗೆ ॥೧॥ ಇರಿದು ತಹೆನಾಲೋಕಪಾಲರ । ಸೆರೆಯನೂರ್ವಶಿರಂಭೆಯರು ಸಹಿ । ತೊರಲಿಸುವೆನೊಂದೇ ಮುಹೂರ್ತದಲಖಿಳಸುರಕುಲವ ॥ ಬರಿದೆ ಕಳುಹುವೆ ತನ್ನನೇತಕೆ । ಕರುವ ಕಾವವರಲ್ಲಿಗಾರೆಂ । ದರಿಯೆ ಪಟ್ಟಾಂತರವನೆನಲಿಂತೆಂದನಾ ಕಂಸ ॥೨॥ ಕೊಂದು ಬಾ ಹೋಗೊಮ್ಮೆ ಸುಭಟರ । ಕುಂದು ಹೆಚ್ಚಿಸ ಮಾಸಿಗಳನರಿ । ದಿಂದು ಫಲವೇನರಿಯದೇ ಜಗವೈದೆ ನಿನ್ನಳವ ॥ ತಂದೆ ತಡೆಯದೆ ಹೋಗು ಕಾಲನ । ಮಂದಿರಕೆ ಕಳುಹಾ ಕುಮಾರರ । ನೆಂದು ಸೇಸೆಯನಿಟ್ಟು ಬಿಟ್ಟನು ಭಟನನಾಹವಕೆ ॥೩॥ ಎನೆ ಹಸಾದವೆನುತ್ತ ತನ್ನಯ । ಮನದೊಳಗೆ ನಾಚುತ್ತ ಗೋಪರ । ತನಯರಿದಿರೇ ತನಗೆ ಶಿವಶಿವ ಬದುಕಲೇಕಿನ್ನು ॥ ಇನಿತು ಮಾನಚ್ಯುತಿಯಲೆನುತಾ । ದನುಜನಾಳ್ದನ ನೇಮವನು ಮಾ । ಳ್ಪನಿತು ಕೃತ್ಯವೆನುತ್ತ ಹೊರಟನು ನಂದಗೋಕುಲಕೆ ॥೪॥ ಅತ್ತಲನ್ನೆಗ ಕೇಶಿಯೆಂಬಸು । ರೋತ್ತಮನು ಕಂಸಾಜ್ಞೆಯಲಿ ಬಲು । ಮೃತ್ಯು ಬಾಯ್ದೆರದಂತೆ ಬಾಯನು ತೆರೆದು ಗೋಕುಲಕೆ ॥ ಹತ್ತು ದೆಸೆಯನು ಬೆದರಿಸುತ ತುರ । ಗೋತ್ತಮಾಕೃತಿಯಾಗಿ ಬಲು ಪುರು । ಷೋತ್ತಮರನರಸುತ್ತ ಬಂದನು ಭೀಕರಾಂಗದಲಿ ॥೫॥ ಖರಖುರಾಗ್ರದೊಳವನಿಯನು ಗ । ಬ್ಬರಿಸಿ ಪಾತಾಳವನು ಹೊಗಿಸು । ತ್ತುರು ಸಟಾನೀಕದಲಿ ಗಗನಾಂಗಣವ ಕೆದರುತ್ತ ॥ ಉರಿಯನುಗುಳುವ ಕಂಗಳಲಿ ಮುರಿ । ದುರಿದು ದೆಸೆಗಳನೀಕ್ಷಿಸುತ ಸಂ । ಗರವಿಶಾರದನಾಗಿ ತುರಗಾಕೃತಿಯಲೈತಂದ ॥೬॥ ಹೇಷಿತದಲಮರಾವಳಿಗೆ ಪರ । ವೇಶವನು ಮಾಡುತ್ತ ವನವನು । ಘಾಸಿಮಾಡುತ ಕಾಲುದುಳಿಯಲಿ ಮೈಯ ಕಪ್ಪಿಸಲಿ ॥ ನೇಸರನು ಮುಸುಳಿಸುತ ಗೋಕುಲ । ವಾಸಿಗಳನಂಜಿಸುತ ಘನತರ । ರೋಷದಲಿ ನಡೆತಂದನಂತಕನಂತೆ ಗೋಕುಲಕೆ ॥೭॥ ಅಡಸಿ ಕವಿತರಲಸುರನನು ಕಂ । ಡೊಡಲು ಕಂಪಿಸಿ ಗೋಪಜನ ಗಡ । ಗಡನೆ ನಡುಗುತ ಗೋಧನಂಗಳ ಕರುಗಳನು ಬಿಸುಟು ॥ ನಡುಗಿ ಹಾಯ್ದುದು ದೆಸೆದೆಸೆಗೆ ಕಾ । ಪೊಡೆಯರೆಮಗಿನ್ನಾರೆನುತ ಬಾ । ಯ್ವಿಡುತ ಕೃಷ್ಣನ ಮರೆಯ ಹೊಕ್ಕುದು ಯೋಗವಿದರಂತೆ ॥೮॥ ಅಂಜದಿರಿ ಗೋವಳರು ಗೋಪಿಯ । ರಂಜದಿರಿ ಗೋಕುಲದಲಾನಿರ । ಲೆಂಜಲಿಸುವರೆ ದೈತ್ಯರೀ ವ್ಯಾಜಾಶ್ವರೂಪದಲಿ ॥ ಪಂಜರದ ಗಿಳಿಗಳನು ಮುರಿವುದೆ । ಮಂಜರನು ಬೆದರದಿರೆನುತ ಕರ । ಕಂಜವನು ನೆಗಹಿದನು ಕರುಣದಲಸುರರಿಪು ನಗುತ ॥೯॥ ವಾಮವಾಮಭುಜಾಗ್ರವಾಶ್ರೀ । ದಾಮನಂಸದ ಮೇಲೆ ನಯನ । ಪ್ರೇಮಭೋಜನ ಮೂರ್ತಿ ಕಡೆಗಣಿಸುತ್ತ ಗೋಪಿಯರ ॥ ಆ ಮಹಾಸುರನಭಿಮುಖಕೆ ಕರ । ತಾಮರಸವನು ತೋರಿ ಭುವನೋ । ದ್ದಾಮಗುಣನಿಧಿ ನಿಂದು ಕರೆದನು ಸಿಂಹನಾದದಲಿ ॥೧೦॥ ಇತ್ತಲಿತ್ತಲು ಹೋ ಹೋ ನಿಲು ನಿಲು । ಶಕ್ತಿಯುಳ್ಳಡೆ ಸಮರಮುಖದಲಿ । ಮೃತ್ಯುವಾಗಿಹೆನೇಕೆ ಬೆದರಿಸಿ ಬಲವಿಹೀನರನು ॥ ಅತ್ತಲೇಕಂಜಿಸುವೆ ಮರಣೋ । ದ್ಯುಕ್ತನಾದಡೆ ಬಾಯೆನುತ ಕೈ । ಮೈತ್ತಿ ಕರೆದನು ಖಳನನಸುರಾಂತಕನು ಕನಲಿಸುತ ॥೧೧॥ ತಿರುಗಿ ಕಂಡನು ಕೃಷ್ಣನನು ಕೇ । ಸರಿಯನುಗುಳುತ ಕಂಗಳಲಿ ಗ । ರ್ಘರಮಹಾರವದಿಂದ ಗರ್ಜಿಸಿ ಹಿಂದುಮುಂದಾಗಿ ॥ ಖರಖುರಾಗ್ರದಲಚ್ಯುತನ ಪೇ । ರುರವನೊದೆದನು ದೈತ್ಯನಂಜನ । ಗಿರಿಯ ವಕ್ಷವನಿಂದ್ರನಿಟ್ಟಂತಾಯ್ತು ವಜ್ರದಲಿ ॥೧೨॥ ಇಲ್ಲ ಹುಸಿ ಹೋಗೆನುತ ಲಕ್ಷ್ಮೀ । ವಲ್ಲಭನು ಹಿಂಗಾಲ ಘಾಯದ । ಘೆಲ್ಲಣೆಯ ಘಾತಿಯನು ತಪ್ಪಿಸಿಕೊಂಡನು ನಸುನಗುತ ॥ ಬಲ್ಲಿದನು ನೀನಹೆ ಮಹಾಹವ । ದಲ್ಲಿ ಸುಸ್ಥಿರನಾಗೆನುತ ರಿಪು । ಮಲ್ಲನನು ನೂಕಿದನು ಹರಿ ಹಿಂಗಾಲ್ಗಳನು ಹಿಡಿದು ॥೧೩॥ ಜಾರಿದನು ಖಳ ಹಿಂದುಮುಂದೆನೆ । ನೂರು ಬಿಲ್ಲಂತರಕೆ ಮೋರೆಯ । ನೂರಿ ಬಿದ್ದನು ಘಾತಿಯ ಶಿಖರಶೈಲವನಸಹಿತ ॥ ಡೋರಃಪ್ರೋಗಲು ನೊಂದು ನೆತ್ತರ । ಕಾರುತಮರಾರಾತಿ ಮಿಗೆ ಕಾ । ಹೇರಿದುಕ್ಕಿನ ಪ್ರೋಲು ಕಿಡಿಕಿಡಿಯೋ ನನಡಿಗಡಿಗೆ ॥೧೪॥ ಆಹ ತಿಂಬೆನು ಕರುಳನೀಗಳೆ । ಹೂಹೆಗಕ್ಕಟ ತನ್ನೊಡನೆಯೇ । ಕಾಹವಕೆ ನಿಲುವಂತ ನಿಗುರಿತೆ ವಿಕ್ರಮದ ಬಿಷ್ಮ ॥ ಸಾಹಸಿಕನಹೆ ನಿಖಿಳಗೋಪ । ವ್ಯೂಹಸಹಿತೆನ್ನೊಂದಣಲ ಮೊದ । ಲಾಹುತಿಗೆ ಲಘುವೆನುತ ಖಳ ಬಾಯ್ದೆರದು ಹರಿತಂದ ॥ ಘಂಡಬೊಬ್ಬಾಟವನು ಬಿಡುಕೈ । ಕೊಂಡು ನೋಡಿದನುಳಿದ ಗೋಪರ । ತಂಡವನು ಬಳಿಕಾಹುತಿಯ ಮಾಡಾಪೆನೆಂದೆನುತ ॥ ದಿಂಡುಗವಿವನ ಬಾಯೊಳಗೆ ದೋ । ರ್ದಂಡವನು ನೂಕಿದನು ಭಯದಲಿ । ಕಂಡು ಗೋಪರ ನಿಕರ ಬಿದ್ದುದು ಬಹಳ ಮೂರ್ಛೆಯಲಿ ॥ ಕಡಿದು ನುಂಗುವೆನೆನುತ ಗಂಟಲ । ತಡಿಗೆ ನೂಕಿದ ತೋಳ ಮೊದಲನು । ಕಡುಗಿ ಖಳ ನಾಕಿದಡೆ ಬಾಯಲಿ ಸೋಂಕಿದಾಕ್ಷಣಕೆ ॥ ಉಪಿದು ಬಿದ್ದವು ದಂತಚಯ ಗೋ । ಸೊಡೆಯ ಬೆಳದುದು ಬಾಹುಲತೆಯುಸು । ರಡಗಿ ಬಸುರುಬ್ಬರಿಸಿ ಬಿದ್ದನು ಧರೆಗೆ ಸುರವೈರಿ ॥೧೭॥ ಬಂಡವನು ಬಿಡುತ್ತವನಿತಳದಲಿ । ದಿಂದುಗೆಡೆದನು ವಜ್ರಹತಿಕೈ । ಕೊಂಡ ಕುಲಗಿರಿಯಂತೆ ದಿಕ್ಕುಂಭಿಗಳು ಘೀಳಿಡಲು ॥ ಚಂಡ

ವಿಕ್ರಮನಾರ್ದನಿಜದೋ | ರ್ದಂಡವನುತ್ತೆಗೆದನುಖಳನಹೃ | ತ್ಪುಂಡರೀಕದಜೀವಚೈತನ್ಯವನುತ್ತೆಗೆದಂತೆ ॥೧೮॥ ಮಲ್ಲಿಗೆಯಮಳೆಸುರಿದವಮರರ | ವಲ್ಲಭೆಯರಾಡಿದರುಪಾಡಿದ | ರುಲ್ಲಸಿತಸಂಗೀತವಾದ್ಯಂಗಳವಿನೋದದಲಿ ॥ ಫುಲ್ಲದೃಶನಾಗೋಪಗೋಪಿಯ | ರೆಲ್ಲರಿಗೆಸಂತೋಷವನುಶೌರಿ | ವಲ್ಲಭನುಸಲಿಸುತ್ತಲಿರ್ದನುವಿವಿಧಲೀಲೆಯಲಿ ॥೧೯॥ ಆಮಹೋತ್ಸವದೊಳಗೆಭುವನ | ಕ್ಷೇಮಕಾರಣಮೂರ್ತಿಹರಿಗುಣ | ನಾಮಸಂಕೀರ್ತನರಸಜ್ಞರದೇವನೀಧರೆಗೆ ॥ ಸೋಮಸನ್ನಿಭನಿಳಿದನವಸತ | ಕಾಮಧೇನುಮಹಾತ್ಮನಾತ್ಮಾ | ರಾಮರರಸನುನಾರದಾಂಕನುಕೃಷ್ಣನಿದಿರಿನಲಿ ॥೨೦॥ ಕಿರುಜಡೆಯನಯವಡದಭಾಳದ | ತರುಣತುಳಸಿಯದಂಡೆಗಳಪು | ಷ್ಕರದಬೀಜದಕೊರಳತ್ತಿಸರಭಾಸುರದ್ಯುತಿಯ ॥ ಮೆರವಹರಿನಾಮೋರ್ಧ್ವಪುಂಡ್ರೋ | ತ್ಕರದಪುಳಕಾಮೃತದಲಹರಿಯ | ಪರಮವೈಷ್ಣವಮೌಳಿಮಣಿಯಿಳಿತಂದನೀಧರೆಗೆ ॥೨೧॥ ಕಂಡವರುಮುಕುಳಿತಕರಾಬ್ಜವ | ಮಂಡೆಯಲಿಧರಿಸುತ್ತತನುವನು | ದಿಂಡುಗೆಡಹುತ್ತಿರಲುಪದದಲಿಪರಮಭಕತಿಯಲಿ ॥ ಕಂಡುಕೃಪೆಯಲಿಕಾಲಪಾಶವ | ಖಂಡಿಸುತಕಾರುಣ್ಯವರುಷಾ | ಖಂಡಲನುಮೈದೋರಿದನುಗೋವಿಂದನಿದಿರಿನಲಿ ॥೨೨॥ ಜಯನಮೋಗೋವಿಂದಗೋಪೀ | ಜನವಲ್ಲಭಭಕ್ತಸಂಸಾ | ರಿಯೆನಮೋಭವರೋಗವೈದ್ಯನೆಭುವನವಂದಿತನೆ ॥ ಜಯಜಗನ್ಮೋಹನಗುಣಾಬ್ಧಿಯೆ | ಜಯಜಗತ್ಪಾವನಯಶೋಬ್ಧಿಯೆ | ಜಯಯೆನುತಮೈಯಿಕ್ಕಿದನುಮುರಹರನಚರಣದಲಿ ॥೨೩॥ ರೂಢಿಸಿದತನುಪುಳಕದುಬ್ಬಿನ | ಲೀಡಿರಿವಹರುಷದಲಿಬಿನ್ನಹ | ಮಾಡಿದನುಮೈಯಿಕ್ಕಿಕೈಗಳಮುಗಿದುಮುನಿನಾಥ ॥ ನೋಡಿಮಂಗಳಮೂರ್ತಿಯನುಕಡೆ | ಗೋಡಿವರಿವಾನಂದಜಲದಲಿ | ಕೂಡೆನೆನೆದನುನಯನಸಂಪ್ರೀತಿಯಲಿಮನಮುಳುಗಿ ॥೨೪॥ ಕಂಡೆನಾನೆಲೆಕೃಷ್ಣಭುವನೋ | ದ್ದಂಡದೈವದದೈವವೆಂಬಾ | ಖಂಡಸುಖವಿಗ್ರಹನನರಶಿಶುತನದಲೀಲೆಗಳ ॥ ಕಂಡೆನಿಂಗಡಲಿಂದಿಳಿದುಸುರ | ತಂಡವನುರಕ್ಷಿಸಲುತನುವನು | ಗೊಂಡುದೇವಕಿಯುದರಕುಹರದಲಿಂದುತಾನೆಂದ ॥೨೫॥ ಮತ್ತೆಕಂಡೆನುದೇವನಿಜಸುಚ | ರಿತ್ರವನುನೀನೀಯಶೋದಾ | ಪುತ್ರನೆನಿಸಿಯೆಮೆರವತತ್ವದಪರಮಲೀಲೆಗಳ ॥ ಇತ್ತುವಿಷವನುದನುಜೆನಿನ್ನಲಿ | ಮುಕ್ತಿಪಡೆದಳ್ಭಂಡಿಯನುನೀ | ನೆತ್ತಿಬೀಸಾಡಿದುದನಾವಾತ್ಯಾಸುರನವಧೆಯ ॥೨೬॥ ಬೆಣ್ಣೆಗಳುವುದನೂರೊಳಗೆನೆರೆ | ಮಣ್ಣಮೆದ್ದುದರದಿಜಗಂಗಳ | ಬಣ್ಣಿಗೆಯಚಿತ್ರವನುತಾಯಿಗೆಬಾಯೊಳಗೆತೋರ್ಪ ॥ ಹಣ್ಣುಮಾಣಿಕವಹುದನಾಕಿಶಿ | ಹಣ್ಣಹುದನಂತ್ಯೆಗೆಕಂಡೆನು | ಕಣ್ಣಲೆಲೆಕಮಲಾಕ್ಷನಿನ್ನವಿಚಿತ್ರಲೀಲೆಗಳ ॥೨೭॥ ಊರನೇಣುಗಳುದರವೇಷ್ಟನ | ಭಾರಣೆಗೆಬಾರದುದನೊಂದೇ | ಸೇರಿದುದನರ್ಜುನಮಹಾವಿಟಪಿಗಳನೀಧರೆಗೆ ॥ ಬೇರುಸಹಿತಡಗೆಡಹುವದನವ | ರೇರುವದನೀಸ್ಥಳಕೆವತ್ಸನ | ನಾರುಭಟೆಯಲಿಕೊಲುವುದನುನೆರೆಕಂಡೆನಾನೆಂದ ॥೨೮॥ ಬಕನನಘನನುವ್ಯೋಮಕನಧೇ | ನುಕನನಾವೃಷಭನನುಕೊಂದಂ | ತಕನಪುರಕಟ್ಟಿದಪ್ರಲಂಬನಶಂಖಚೂಡಕನ ॥ ಸುಕೃತಿಯಾದೆನುಕಂಡುನಿಜಬಲ | ಶಕುತಿಯನುಮತ್ತಿಂದುಕೇಶಿಗೆ | ಮುಕುತಿಯನುಕರುಣಿಸುವುದನುಸಂಗ್ರಾಮದೊಳಗೆಂದ ॥೨೯॥ ಕಾಳಿಯನಮಸ್ತಕವತುಳಿದುರ | ಗಾಲಯಕೆಕಳುಹುವುದನಚಲವ | ನೇಳುದಿನಧರಿಸುವುದನೊಂದೇವಾಮಹಸ್ತದಲಿ ॥ ಘೋಳಿಮಳೆಯಲಿಗೋಕುಲವನೆರೆ | ಪಾಲಿಸುವುದನುಕಂಡೆನೀನಿಜ | ಲೀಲೆಗಳನಾಟಕದನಾನಾವಿಧವಿಡಂಬನವ ॥೩೦॥ ನಾಳೆಮತ್ತಕ್ರೂರನೊಡನೆನೃ | ಪಾಲಕಂಸನಪುರಕೆಬಲಗೋ | ಪಾಲಕರುಸಹಿತೈದುವದನಾಸುರದರಜಕನನು ॥ ಕಾಲನನುಕಾಣಿಸುವಚಿಪ್ಪಿಗ | ನೇಳಿಗೆಯನಾಗಿಸಿಸುದಾಮನ | ಮಾಲೆಯನುಕೊಂಡೀವವರವನುಕಾಂಬೆನಾನೆಂದ ॥ ಅಲ್ಲಿಕುಬುಜೆಯಮೂಹುರುಡಕೈ | ಯಲ್ಲಿತಿದ್ದುವಕಂಸನಗ್ಗದ | ಬಿಲ್ಲನುಡಿದುತದೀಯಬಲವನುಬಡಿದುಬರಿಕೈದು ॥ ಬಲ್ಲಿದಾನೆಯಕೆಡಹಿಕದನದಿ | ಮಲ್ಲರನುಮಾವನನುನಿರ್ಜರ | ವಲ್ಲಭೆಯರೊಡನಾಡಿಸುವುದನುಕಾಂಬೆನಾನೆಂದ ॥೩೨॥ ಮೇಲೆಗುರುದಕ್ಷಿಣೆಗೆಕಾಲನ | ತಾಳಿನೆಗೆತುತ್ತಾದಭೂಸುರ | ಬಾಲಕನನಂತಕನಪುರದಿಂದೀಸಿತಂದೀವ ॥ ಲೀಲೆಯನುಮುಚುಕುಂದನಕ್ಷಿ | ಜ್ವಾಲೆಯಲಿಯವನೇಶನೊಡಲನು | ಹೂಳುವುದನೀಕ್ಷಿಸುವೆನಾಮಾಗಧನಬಲಸಹಿತ ॥೩೩॥ ದ್ವಾರಕಾನಿರ್ಮಾಣವನುದು | ರ್ವಾರಹಂಸಾಹವವನಾತ | ದ್ಭೂರಿಬಲಸಂಕ್ಷಯವನಾರುಕ್ಮಿಣಿಯಪರಿಣಯವ | ಸ್ವೈರಚಾರಿತ್ರವನುಪೌಂಡ್ರಕ | ವೀರನಸುಗೊಂಬುದನುಕೃತ್ಯೆಗೆ | ವಾರಣಾಸಿಯಬೇಳುವುದನೀಕ್ಷಿಸುವೆತಾನೆಂದ ॥೩೪॥ ಮತ್ತೆಘಂಟಾಕರ್ಣನಿಗೆನಿಜ | ಭಕ್ತನೆಂದೊಲಿವುದನುಕಾಣಲು | ಕೃತ್ತಿವಾಸನಪದವನಾಕೈಲಾಸಯಾತ್ರೆಯನು ॥ ಉತ್ತಮಾಧ್ವರದೊಳಗೆಕುಂತೀ | ಪುತ್ರಪೂಜಿತನಾಗಿಚೈದ್ಯಗೆ | ಮುಕ್ತಿಯನುಕರುಣಿಸುವಹದನನುಕಾಂಬೆನಾನೆಂದ ॥೩೫॥ ಮುರನನರಕನಭಂಜನದಸಂ | ಗರವನಾಷೋಡಶಸಹಸ್ರಾಂ | ಬುರುಹಮುಖಿಯರಲಾಭವನುಸುರಲೋಕಯಾತ್ರೆಯನು ॥ ಮರಳಿಬರುತಾಪಾರಿಜಾತದ | ಹರಣದಲಿಸುರಲೋಕಪಾಲರ | ಪರಿಭವಿಸಿಕೈಗಾಯ್ದುಬಹುದನುಕಾಂಬೆನಾನೆಂದ ॥೩೬॥ ಸಾಲುವನಶಂಬರನವಿವಿದನ | ಬೀಳಹೊಯ್ದುಕರೂಷಭವನನು | ಕಾಳಗದಲವಘಡಿಸಿಗೌರೀಶನನುಬಲಿಸುತನ ॥ ತೋಳುಗಳನಿಳುಹುವುದನರ್ಜುನ | ಗಾಳಹುದನಾಭಾರತದಬಲು | ಗಾಳಗವನೆಲಿಸುವವಿಹಾರವಕಾಂಬೆನಾನೆಂದ ॥೩೭॥ ಅರಸಿಸಹಿತಮಹಾಶ್ಯಮಂತಕ | ಹರಣವನುನೃಗಮೋಕ್ಷವನುದು |

ರ್ಧರಮಹಾಭೂಭಾರಸಂಹಾರಣದಲೀಲೆಗಳ ॥ ದುರವಗಾಹ್ಯವೆನಿಪ್ಪನಿಜಪಮಂ । ದಿರದಲಿದ್ದರ್ಭಕರನವನೀ । ಸುರಗೆತಂದೀವುದ
ನುಕಾಂಬೆನುಧನ್ಯನಹೆನೆಂದ ॥ ೩೮ ॥ ಆವನಿಜಸುಖಪೂರ್ಣಲಾಭನೊ । ದೇವನೀನಿಸ್ಸಂಗನಿಸ್ಪೃಹ । ನಾವನೈಸಂಸಾರವಿಷ
ಯಸುಖೋಪಭೋಗದಲಿ ॥ ರಾವಣಾಂತಕನಿಜಕುಲಶ್ರೇಯ । ಕಾವನಂಗೈಸುವುದಕಂಡಪೆ । ದೇವವಿವಿಧವಿಚಿತ್ರಲೀಲೆಯನೆಂ
ದನಾಮುನಿಪ ॥ ೩೯ ॥ ನೀನಲಾಸಾಕ್ಷಾತಯೋಗಿ । ಧ್ಯಾನಗಮ್ಯನೆನಿಪ್ಪದೈವವು । ನೀನಲಾಕಮಲಜಪಿನಾಕಿಸುರೇಂದ್ರಮು
ಖ್ಯರಿಗೆ ॥ ಸ್ಥಾನಮಾನ್ಯವನಿತ್ತುಸಲಹುವ । ದಾನಿಗಳದಾತಾರನಿನ್ನೀ । ಮಾನುಷದಚಾರಿತ್ರವಧಿಕಪವಿತ್ರತರವೆಂದ ॥ ೪೦ ॥
ಆರುಜಗದಾತ್ಮಕಜಗನ್ಮಯ । ನಾರುಜಗದಾಧಾರಭೂತರ । ದಾರುಜಗದಾರಾಧ್ಯದೈವದದೈವವೆನಿಪವರು ॥ ಆರುಜಗದಭಿವಂದ್ಯ
ವಂದ್ಯನ । ದಾರುಪರಮಾತುಮನೆನಿಪ್ಪನ । ದಾರುಮತ್ತಾನೆನಗಿದಿಂತುಪ್ರಸನ್ನವಾಯ್ತೆಂದ ॥ ೪೧ ॥ ಭಕತಿಯೇಭವಬಂಧಭೇ
ದನ । ಭಕತಿಯೇವರಮುಕುತಿಸಾಧನ । ಭಕತಿಯೇಭುವನತ್ರಯಾರ್ತವಿರಾಗಸಂಸಿದ್ಧಿ ॥ ಭಕತಿಸುಖವನುಬಲ್ಲಬುಧರಿಗೆ ।
ಮುಕುತಿಸುಖವಶ್ಲಾಘ್ಯನಿಜಪದ । ಭಕತಿಯನುಕೃಪೆಮಾಳ್ಪುದೆಲ್ಲರಿಗೆಂದನಾಮುನಿಪ ॥ ೪೨ ॥ ಯಜಿಸಿದಣಿಯರುಕರ್ಮಿಗಳು
ನೆರೆ । ಭಜಿಸಿದಣಿಯರುವಿಮಳಹೃದಯಾಂ । ಬುಜದಕರ್ನಿಕೆಯೊಳಗೆಭಕ್ತರುನಿಜಪದಾಂಬುಜದ ॥ ಭಜಿಸಿತತ್ವಂಪದವನಾತ್ಮನ ।
ನಿಜವಭೇದ್ಯಾದ್ವೈತವೆಂದೆನೆ । ತ್ರಿಜಗವಂದ್ಯನೆಕಂಡುದಣಿಯದುಯೋಗಿಜನವೆಂದ ॥ ೪೩ ॥ ಸಾಕುತನಗೀನಿನ್ನಪದಕಮ ।
ಲೈಕಭಕ್ತಿಯೆಬೇರೆಬಯಸಲ । ದೇಕೆತತ್ವಜ್ಞಾನಸಿದ್ಧಿಯಬುದ್ಧಿಯನುದಿಟಕೆ ॥ ಲೋಕಪಾವನಪುಣ್ಯಚರಿತಕ । ಥಾಕಥನಪೀ
ಯೂಷವಾರ್ಧಿಯ । ಲೇಕಚಿತ್ತದಲಾಡುವಂತಿರೆಕೃಪೆಯಮಾಡೆಂದ ॥ ೪೪ ॥ ಎಂದುಮುನಿಪತಿನೋಡಿಪರಮಾ । ನಂದಬಾಷ್ಪ
ಜಲಾವಿಶೇಷಣ । ದಿಂದದಿವ್ಯಮನೋಜ್ಞಮಂಗಳಮೂರ್ತಿಯನುಬಿಡದೆ ॥ ಸಂದಣಿಪತನುಪುಳಕದಲಿಗೋ । ವಿಂದನನುಪಮ
ಪಾದಪದುಮ । ದ್ವಂದ್ವದಲಿಮೈಯಿಕ್ಕಿಮುಳುಗಿದನಶ್ರುಪೂರದಲಿ ॥ ೪೫ ॥ ಬೀಳುಕೊಂಡನುಕಂಗಳಲಿಮನ । ಬೀಳುಕೊ
ಳ್ಳದುಕೃಷ್ಣಮೂರ್ತಿವಿ । ಶಾಲಸಂಗದಪರಮಸುಖಸಾಮ್ರಾಜ್ಯಸಂಪದವ ॥ ನಾಲಗೆಯುಲಚ್ಯುತನನಾಮವ । ನೋಲಗಿಸುತ್ತೈದಿ
ದನುಕಮಲಜ । ನಾಲಯಕೆಭಾಗವತಗುಣಗಣಮಾಳ್ಪನಲವಿನಲಿ ॥ ೪೬ ॥ ಜನಪಕೇಳೊಂದುದಿನವೃಂದಾ । ವನದೊಳಗೆಗೋ
ವಳರುಸಹಿತಾ । ದನುಜಹರಬಲರಾಮರಾಡುತ್ತಿರೆವಿನೋದದಲಿ ॥ ದನುಜನೊಬ್ಬನುದಾರಭುಜಬಲ । ಜನಿತದರ್ಪದಲನಿಬರ
ನುಕೊಲಲು । ವನುವನೆರೆನಿಶ್ಚೈಸಿಕೊಂಡೈತಂದನಾಸ್ಥಳಕೆ ॥ ೪೭ ॥ ಅದನರಿತುಸರ್ವಾತ್ಮಕನುತಾ । ಗಿದನುಶಿರವನುಭಾಪುವ
ಝುಬಂ । ದುದುತನಗಿದೊಂದಾಟವಿಂದಾನವನಹೋಗಾಟ ॥ ಇದಿರುಗೊಂಬೆನೆನುತ್ತಕೆಳೆಯರಿ । ಗೊದವಿದಂತರ್ಭಾವದುತ್ಸಾ ।
ಹದಲಿಕೆರದಿಂತೆಂದನಾಶ್ರೀದಾಮಮುಖ್ಯರಿಗೆ ॥ ೪೮ ॥ ಚೋರಪಾಲಕರಾಗಿಗೋಪಕು । ಮಾರಕರುಕೆಲರಿದರೊಳಗೆಗತ ।
ಚೋರರಾಗಲಿಕುರಿಗಳಾಗಲಿಕೆಲರುಕೆಲರದನು ॥ ಚೋರವಿದ್ಯಯಲೊತ್ತಲೆನುತಸು । ರಾರಿನೇಮಿಸಲಾಗಲೆನುತಕು । ಮಾರ
ಕರುಮೂರಂಗವಾದರುಕೃಷ್ಣನಾಜ್ಞೆಯಲಿ ॥ ೪೯ ॥ ಕಂಡುಖಳನದನವರವೇಷವ । ಕೊಂಡುಬೆರಸಿದನರಿಯದಂತಿರೆ । ಚಂಡ
ಬಲನಾವ್ಯೋಮಸಂಜ್ಞಿತನಂದುಚೋರರನು ॥ ಕೊಂಡುನಿಂದನುಕುರಿಗಳೆನಿಸುವ । ತಂಡದಾಗೋವಳರನೊಯಿದು । ದ್ದಂಡ
ಬಲನಿರಿಸಿದನುಗಿರಿಗಂಹರದಲರ್ಭಕರ ॥ ೫೦ ॥ ಮತ್ತೆಪಾಲಕರೆಂಬಗೋಪರ । ಮೊತ್ತವನುಕೊಂಡೊಯ್ದುಬಿಸುಟಾ । ಗರ್ತ
ದೊಳಗಾಚೋರರಾದರ್ಭಕರಕೊಂಡೊಯ್ದು ॥ ಅತ್ತಲಾಗುಹೆಯೊಳಗೆಖಳನೊಂ । ಮೊತ್ತವನುಮಾಡಿದನುಹರಿಬಲ । ರೊತ್ತ
ರಿಸಿನಿಲೆನೀಗಿದನುಮಿಕ್ಕಾಕುಮಾರಕರ ॥ ೫೧ ॥ ಉಳಿದರದರೊಳುನಾಲ್ವರೈವರು । ಖಳನಬಾರಿಗೆತಪ್ಪಿಮುಗುಳೊ । ಯ್ದುಳುಹಿ
ದನುದರಿಯೊಳಗೆಮಕ್ಕಳನೆಲ್ಲರನುಮೇಲೆ ॥ ಶಿಲೆಯಲವರನುಮುಚ್ಚಿಬಂದನು । ಬಲಮುರಾಂತಕರೆಡೆಗೆಮನದಲಿ । ಕೊಲೆಯ
ನೇನಿಶ್ಚೈಸಿನಕ್ತಂಚರನುರೋಷದಲಿ ॥ ೫೨ ॥ ಬರೆಖಳನಕಾಣುತ್ತಮುಂಗೈ । ಮುರಿಯೆಹಿಡಿದಸುರಾರಿತೋರಾ । ಕುರಿಗಳನು
ಕುರಿಗಾವರನುಕಳ್ಳರನುತೋರೆನುತ ॥ ಅರಗುರಿಯನೊತ್ತಿದಡೆಕಂಗಳು । ಹೊರಗೆಹಾಯ್ದುವುಬಿಟ್ಟನಸುವನು । ಮೊರೆಯಿಡುತ
ಮಲಗಿದನುಕಾಯವಕೆಡಹಿಧರಣಿಯಲಿ ॥ ೫೩ ॥ ಕೊಂದುಖಳನನುಬಳಿಕಬಾಲಕ । ವೃಂದವನುಬಿಲಮುಖದಲತಿಕೃಪೆ । ಯಿಂದ
ನೆಗಹಿದನೆಲ್ಲರನುಪಡಿಗಲ್ಲನೀಡಾಡಿ ॥ ಬಂದನಾಗೋಕುಲಕೆಪರಮಾ । ನಂದಮೂರುತಿಗೋಪಗೋಪೀ । ವೃಂದನಯನೋ
ತ್ಸವವನಿತ್ಯಾತುಮನುವಿರಚಿಸಿದ ॥ ... ... ॥ ೫೪ ॥

ಅಂತು ಸಂಧಿ ೩೨ಕ್ಕಂ ಪದನು ೧೬೧೨ಕ್ಕೆ ಮಂಗಳಮಸ್ತು.

——೦ಜ್ಞಾಂ ಅಕ್ರೂರಾಗಮನ. ೦ಜ್ಞಾಂ——

ಸೂಚನೆ॥ ವೀರವೈಷ್ಣವಮೌಳಿಮಣಿಸಂ । ಸಾರತಿಮಿರದ್ಯುಮಣಿಕಂಡನು । ದಾರಗುಣಮಣಿಕಾಂತನೆ
ಕ್ರೂರಾಂಕನಚ್ಯುತನ॥ ... ...

ಪದನು॥ ಅರಸಕೇಳಕ್ರೂರನೈತಂ । ದಿರುಳುದುಮ್ಮಾನದಲಿನಿಜಮಂ । ದಿರಕೆಬಂದನುಚಿಂತಿಸುತಕೃಷ್ಣಾಂಘ್ರಿಪಂಕಜ
ನ॥ ದರುಶನಕೆತಾನಾವನೆಂತೋ । ದೊರಕುವುದುಮೇಣಾವಕಲ್ಪಾಂ । ತರಕೆಬೆಳಗಹುದಲ್ಪಪುಣ್ಯಾಂಗೆಂದುಬಿಸುಸುಯ್ದ ॥ ೧ ॥
ಇನಿತುದಿನಬದುಕಿದಕೆಫಲವಾ । ಯ್ತೆನಗೆಕಂಡಪೆನೀಗಳಂತಿರೆ । ದನುಜಹರನಪದಾಬ್ಜಯುಗಳವದೆಂತುತಾನೇಕೆ ॥ ವನಜಸಖ
ನೆಂತ್ರಕಟವಿಘ್ನವ । ನೆನದನಿರುಳನುಮಾಡಿಬೇಗಂ । ಗೆನಿತ್ರಪೇಯುಪ್ರೊಧರೆಯಲೆನಿತುಂಮುಳಿಸಿದನುಮರುಗಿ ॥ ೨ ॥ ಅರುಮು
ನಿದೇಗುವರುವಿಘ್ನದ । ಭಾರಣೆಗಳೇಗುವವುದಿಟಲ । ಪ್ರೇಮರಮಣನೊಳವುಳ್ಳಡಾವುದುಭೀತಿಭಕ್ತರಿಗೆ ॥ ಹಾರಮಣಹಾಕೃಷ್ಣ
ಹಾಲ । ಪ್ರೇಮರಮಣಹಾತ್ರೋರೆನಿನ್ನಪ । ದಾರವಿಂದವನೇಕೆನುತ್ರಹಲುಬುತ್ತಕುಳ್ಳಿರ್ದ ॥ ೩ ॥ ಇರುಳನೂಕಿದನಿಂತುಕೃ
ಷ್ಣನ । ಚರಣವನುನೆನವುತ್ತನಿದ್ರಾ । ವಿರಹಿತೇಕ್ಷಣನಿರಲುಹರಿಶರಣರಮನೋರಥವ ॥ ಧರೆಯಲಡ್ಡೈಸುವರದಾರೆಂ । ದಿರದೆ
ಸಾರುವವೋಲುಮೂಡಲು । ತರಣಿನೂಕಿದನುದಯಶೈಲಾಗ್ರದಲಿನಿಜರಥವ ॥ ೪ ॥ ಹರದುದಂಧತಮಿಸ್ರವಾಯದು । ವರನ
ಮನದವಿಷಾದತಾಮಸ । ಹರವವೋಲುಮನೋರಥೋದಯದೊಡನೆರವಿಯುದಯ ॥ ಭರಿತವಾಯ್ತುದಯದಲಿತನ್ಮುಖ ।
ಸರಸಿರುಹದೊಡನರಳಿದವುಸರ । ಸಿರುಹತತಿಬೆಳಗಾಗೆಮಂಗಳವಾಯ್ತುಮೇದಿನಿಗೆ ॥ ೫ ॥ ಎದ್ದುಸಂಧ್ಯಾವಂದನಾದಿಯ । ತಿದ್ದಿ
ಮತಿಮಾಡಿದನುಬಳಿಕರಿ । ಮರ್ದನನುಬಲವಂದುಗೋಗುರುದೇವತಾದ್ವಿಜರ ॥ ಹೊದ್ದಿದನುನೃಪರಥದಲೊಪ್ಪುವ । ಭದ್ರಪಚ
ನೆದಬಹಳಘೋಷದ । ಹೃದ್ಯಶಕುನವನಾಲಿಸುತಹೊರವಂಟನಕ್ರೂರ ॥ ೬ ॥ ಪರಿದನುನೃಪರಥವನಂದ । ಕ್ರೂರನಂತಃಕರ
ಣದಲಿಹರಿ । ಚಾರುಚರಣಾಂಬುಜವನೆನವುತ್ತೊಗುವಸುಖಜಲದ ॥ ಪೂರದಲಿಪೂರಾಯಪುಳಕದ । ಭಾರದಲಿಭಾಗವತಗುಣ
ಗಣ । ಮೇರುನಡದನುರಥಕುಸಿಯುಲಕ್ರೂರನೊಲವಿನಲಿ ॥ ೭ ॥ ಬರುತಭಾಗವತ್ರೋತ್ತಮನುಮನ । ಕರಗಿಕೃಷ್ಣಪದಾಬ್ಜ
ಭಕತಿಯ । ಪರಮಸುಖದಲಿಮುಳುಗಿಪರವಶನಾಗಿಮಾರ್ಗದಲಿ ॥ ಪರಮಪುರುಷನಚರಣಕಮಲದ । ದರುಶನದಬಹುಪುಣ್ಯವೆಂ
ತೋ । ದೊರಕಿದುದುತನಗೆನುತಮತ್ತಿಂತೆಂದನಕ್ರೂರ ॥ ೮ ॥ ಆವದೈವವಭಜಿಸಿದೆನೊಮೇ । ಣಾವಮುಖದಲಿಯಜಿಸಿದೆನೊ
ತಾ । ನಾವಜನ್ಮಾಂತರದಸುಕೃತಪ್ರೊಫಲಿತವಾಯ್ತೆನಗೆ ॥ ದೇವದೇವನನಖಿಳನಿಗಮಶಿ । ರೋವಿರಾಜಿತಪಾದಪೀಠನ । ನಾವ
ಪರಿಯಲಿಕಾಂಬಿನಿತುಸಂಪತ್ತಿಯಾಯ್ತೆಂದ ॥ ೯ ॥ ಅಳಿಯಲಿಕುಂದಿಲ್ಲಪುಣ್ಯದ । ರಾಶಿಯಂತುಟೊಕಾಂಬೆನೆಂಬಭಿ । ಲಾಷೆಘನ
ಮೀಮಾಂಸದೃಷ್ಟಿಗಳಂದಮುರಹರನ ॥ ದಾಸರೊಲವೊಡಗೂಡದೀಬಹು । ದೋಷಿಗೆಂತಹುದಾದಡಾನಿ । ನ್ನೇಸುಧನ್ಯನೊಹರಿ
ಪದಾಂಬುಜದರುಶನವಪದೆಂದ ॥ ೧೦ ॥ ವೇದವಚನಶ್ರವಣಶುದ್ರಂ । ಗಾದಡೆನಗಹುದಾಮುಕುಂದನ । ಪಾದಕಮಲಪರಾಗದ
ರುಶನವಧಿಕಮಾತಕಿಗೆ ॥ ಆದಡದನ ರರಿದಪರುಭಾ । ಗ್ಯೋದಯದಬೆಳೆಸಿರಿಯನೀವಾ । ಯೋದಧಿಯನುತ್ತರಿಸನೇನಿಪು
ಷಾರ್ದ್ರಬೊಳಗೆಂದ ॥ ೧೧ ॥ ಕೆಟ್ಟುದಿಂದಿನಬೆನ್ನದುರಿತದ । ಬೆಟ್ಟಬೆಳದುದುಜನ್ಮಫಲಕೈ । ಗಟ್ಟದುದುಕಾಮಿತಮನೋರಥಸಿದ್ಧಿ
ಗಳುತನಗೆ ॥ ದೃಷ್ಟಿಗೋಚರನಾಗಿಕಂಡೊಡ । ಲಿಷ್ಟ್ಯಯೋಗಿಧ್ಯೇಯಪದಯುಗ । ವಿಷ್ಟರಕೆಪೊಡವಂಟಪೆನುನಾನೆಂದನಕ್ರೂ
ರ ॥ ೧೨ ॥ ಅಜಭವಾದ್ಯಮರೇಶ್ವರರುನೆರೆ । ಭಜಿಸಿದಣಿಯರನಾರಚರಣಾಂ । ಬುಜವಚ್ಯಮುಂಡಾಡಿದಣಿಯಳುಗಡಮಹಾಲ
ಕ್ಷ್ಮಿ ॥ ಯಜಿಸಿಕಾಣರುಕರ್ಮಿಗಳುನಲೆ । ಭಜಿಸಿಕಾಣರುಸಾತ್ವಿಕರುಸುರ । ಸುಜನಸೇವ್ಯನದುರ್ವಿಗಾಹ್ಯನಕಾಂಬೆನೆಂತೆಂದ ॥
ಅತ್ತಲಜಭವಸುರಮುನೀಂದ್ರರ । ಚಿತ್ತದಲಿಸಂಚರಿಸುವಂಘ್ರಿಗ । ಳೆತ್ತಲಿತ್ತಲುಗೋವುಗಳಬಳಿಸಂದುವನದೊಳಗೆ ॥ ಮತ್ತೆಚ
ರಿಸುವುದೆತ್ತಲಕ್ಷ್ಮೀ । ವೃತ್ತಕುಚಕುಂಕುಮದಲೊಪ್ಪುವು । ದೆತ್ತಗೋಪೀಸ್ತನಘುಸೃಣಪಂಕಾಂಕಿತವಿದೆತ್ತ ॥ ೧೪ ॥
ಲೋಲನಯನಾಂಬುಜದಚಾರುಕ । ಪೋಲನಾಸಾಪುಟದಮೆರವಗು । ಡಾಳಕದಸಸ್ಮಿತಕಟಾಕ್ಷಾರುಣನಿರೀಕ್ಷಣದ ॥ ಶ್ರೀಲಲಾ
ಮಮುಖಾಬ್ಜಲಕ್ಷ್ಮಿಯ । ನಾಲಿಗಳಲನುಭವಿಸಿದಪೆನಿದ । ಹೇಳುತಿದೆಲಾತನ್ನಬಲದಲಿಖಗಮೃಗವ್ರಾತ ॥ ೧೫ ॥ ಧರೆಯಭಾ
ರವನಿಳುಹಲೆಂದವ । ತರಿಸಿಸಾಕ್ಷಾದ್ವಿಷ್ಣುನರರೊಳು । ನರನೆನಿಸಿನಿಜಲೀಲೆಯಿಂದಿರಲಿಂದುಪರಿಯಂತ ॥ ಬರಿದೆಹೋದವುದಿವ
ಸನಾಪೆ । ಚರಿತನಾದೆನುವಿಫಲವಾಯ್ತಂ । ನಿರವುಮೇಣೀಜನ್ಮವೀನಿಜಬುದ್ಧಿಗುಣವೆಂದ ॥ ೧೬ ॥ ಹುಟ್ಟಿಫಲವೇನೀಮ
ನುಷ್ಯರು । ನೆಟ್ಟನಾರಾಧಿಸದೆಕಾಣದೆ । ದೃಷ್ಟಿಗೋಚರನಾಗಿಸಾಕ್ಷಾದ್ವಿಷ್ಣುವೈಷ್ಣವರ ॥ ಬೆಟ್ಟದಲಿಗಿಡಬಳ್ಳಿಮರಗಳು । ಹು
ಟ್ಟಿಮಡಿವಂದದಲಿಸುಡುಸುಡು । ಕಷ್ಟಜೀವರಜೀವನವನದನೆಂದನಕ್ರೂರ ॥ ೧೭ ॥ ಕೇಳವಾವನಕಿವಿಗಳಾಶ್ರೀ । ಲೋಲಚಾ
ರಿತ್ರವನುದುರಿತ । ವ್ಯಾಳದುರ್ಧರದುಃಖವಿಷಮವಿಶಾಪನೋದನವ ॥ ಹೇಳದಾಜಗದೇಕನಾಥನ । ಲೀಲೆಯನುನಾಲಗೆನಿರರ್ಥ
ದ । ಬಾಳಿಕೆಯುಬಾಹಿರರುಜೀವನ್ಮೃತಕರವರೆಂದ ॥ ೧೮ ॥ ಓದಿದಡೆಫಲವೇನುವೇದವ । ನೋದಿದಡೆಫಲವೇನುಶಾಸ್ತ್ರವ ।

ನೋಡಿದಡೆಫಲವಾವುದಧಿಕಪುರಾಣನಾಟಕನ ॥ ಆದಿಮಧ್ಯಾಂತಂಗಳಿಲ್ಲದ । ವೇದವೇದ್ಯನನೋಡದಿರ್ದಡೆ । ಬೂದಿಯಲಿಬೇ
ಳ್ದಹವಿಸ್ಸುಗಳೆಂದನಕ್ರೂರ ॥ ೧೯ ॥ ಆವನೊಬ್ಬನಪುಣ್ಯಚರಿತಕ । ಥಾವಿಮಿಶ್ರೋಕ್ತಿಗಳುಸಜ್ಜನ । ಜೀವನಂಗಳುಪಾವ
ನಂಗಳುಬಹಳಪಾತಕದ ॥ ಭಾವಿಸಲುತದ್ರಹಿತಸೂಕ್ತಿಗ । ಳಾವನಾಗಲಿನೆರೆಯಲರಿಯವು । ಜೀವವಿಲ್ಲದೊಡಲ್ಗಳೊಪ್ಪಂಬಡೆ
ಯುವೆಂತಂತೆ ॥ ೨೦ ॥ ಆಸಕಲಲೋಕೈಕನಾಥನೆ । ವಾಸುದೇವಾಖ್ಯೆಯಲಿಗೋಕುಲ । ವಾಸದಲಿಜನಿಸಿದವೊಲಾವಿಷ್ಕರಿಸಿನಿಜ
ತನುವ ॥ ಈಸಕಲಲೋಕಾಘಬಂಧವಿ । ನಾಶನಾಮಳಕೀರ್ತಿಯನುಜಗ । ದೀಶವಿಸ್ತರಿಸುತ್ತಲಿಹನೀಂತೀಧರಿತ್ರಿಯಲಿ ॥ ೨೧ ॥
ಪಾಡುತಿದೆಜಗನ್ನೈದೆನಭದಲಿ । ಕೂಡುವೈಮಾನಿಕರುದೇವಿಯ । ರಾಡುತಿದೆಗಂಧರ್ವಕಿನ್ನರರ್ಥೈದೆಸಂಸ್ತುತಿಯ ॥ ಮಾಡುತಿದೆಲಾ
ಕೃಷ್ಣನಾರೆಂ । ದಾಡುವರುಪಾಪಿಗಳುಲೋಕದ । ಕೇಡನರನಿನ್ನೇನಹೇಳುವೆನೆಂದುಚಿಂತಿಸಿದ ॥ ೨೨ ॥ ಇಂದಿದೇಕಂಡಪೆನು
ಕಾಮನ । ತಂದೆಯನುಕಮಲಜಭವಾದ್ಯಭಿ । ವಂದ್ಯನನುಕಮನೀಯಮೂರ್ತಿಯನಮಳಕೀರ್ತಿಯನು ॥ ಕುಂದದಪಸವ್ಯಾ
ಕ್ಷಿಬಾಹು । ಸ್ಪಂದನಂಗಳುಪೇಳುತಿವೆತನ । ಗೆಂದುಹರುಷಾಮೃತಸಮುದ್ರದಲದ್ದನಡಿಗಡಿಗೆ ॥ ೨೩ ॥ ಬಯಸುವವಮರೇಶ್ವರ
ರನೊಲ್ಲದೆ । ಬಯಸಿದಳುಗಡಲಕ್ಷ್ಮಿತನಗಾ । ಲಯಕೆಸುಸ್ಥಿರವೆಂದುಸುಕರವಿದೆಂದುರಸ್ಥಳವ ॥ ಬಯಸುವಳುಗಡಮತ್ತೆತುಲಸಿ ।
ಪ್ರಿಯವೆನಿಪಚರಣಾರವಿಂದಾ । ಲಯವನೆನಲಿನ್ನಾವಸೊಬಗಿನಕಣಿಯೊತಾನೆಂದ ॥ ೨೪ ॥ ಚರಣಕಮಲದಲೆರಗಿದೆನ್ನನು ।
ಕರುಣದಿಂದೀಕ್ಷಿಸುತತನ್ನಯ । ಶಿರದಲಭಯಪ್ರದವೆನಿಪನಿಜಹಸ್ತಪಂಕಜವ ॥ ಇರಿಸಬೇಕೆನ್ನಯಮನೋರಥ । ದೊರಕದಿರದೀ
ಹೋದಿರುಳುಶುಭ । ದರುಶನಂಗಳುತೋರಿದವುಬೆಳಗಾಗುತಿರಲೆಂದ ॥ ೨೫ ॥ ಎಲ್ಲಿಪೂಜೆಯನಿತ್ತವಾಣೀ । ವಲ್ಲಭನುಹದಿ
ನಾಲ್ಕುಲೋಕಕೆ । ವಲ್ಲಭನುತಾನಾದನಾಬಲಿಭೂಮಿದಾನವನು ॥ ಎಲ್ಲಿಗರ್ಪಿಸಿಮೂರುಲೋಕಕೆ । ಬಲ್ಲಿದನುತಾನಾದನಾಕರ ।
ಪಲ್ಲವವನೀಶಿರದಲಿಟ್ಟಡೆಧನ್ಯನಾನೆಂದ ॥ ೨೬ ॥ ಬಂದನಿವನಾಕಂಸನಾಜ್ಞೆಯ । ಲಿಂದುತನ್ನಲ್ಲಿಗೆತದಾಶ್ರಯ । ನೆಂದುತತ್ಪರನೆಂ
ದುತತ್ಕಾರ್ಯೈಕರತನೆಂದು ॥ ಮಂದಭಾಗ್ಯನನಕಟದೇವಮು । ಕುಂದನೆನ್ನನುಬಗವನೋಗೋ । ವಿಂದನಚ್ಯುತಚೇತನಾತ್ಮ
ಕನರಿಯನೇಯೆಂದ ॥ ೨೭ ॥ ಬಿದ್ದುಪದದಲಿಕೈಮುಗಿದುನಿಂ । ದಿರ್ದತನ್ನನುನೋಡಿನಿಜಕರು । ಣಾರ್ದ್ರಲೋಚನದಿಂದಸ
ಸ್ಮಿತಮಧುರಸೂಕ್ತಿಯಲಿ ॥ ಭದ್ರವನುಬೆಸಗೊಂಡುನಕ್ಕಂ । ನದ್ವಯಾನಂದಾಂಬುನಿಧಿತಾ । ಬಂದುದಕೆಫಲವಿಂದೆಕೈಗೂಡೂದು
ನನಗೆಂದ ॥ ೨೮ ॥ ಹಿಂಗದೆನ್ನವನೆಂದುಕರುಣಾ । ಪಾಂಗದಲಿನಡೆನೋಡಿತೆಗದಾ । ಲಿಂಗಿಸಲಿಬೇಕೆನ್ನನೆರಡುಭುಜಂಗಳಿಂ
ದೊಲಿದು ॥ ಅಂಗವಿದುಧರೆಮೇಲೆಜಂಗಮ । ಗಂಗೆಯೆನಿಸದೆನಿಜಮನೋರಥ । ಹಿಂಗದೇಬಳಿಕೆನ್ನವೋಲುಕೃತಾರ್ಥರಾ
ರೆಂದ ॥ ೨೯ ॥ ಬಂದುನಿಜಚರಣಾರವಿಂದ । ದ್ವಂದ್ವದಲಿಮೈಯಿಕ್ಕಿತನ್ನಯ । ಮುಂದೆನಿಂದಿದ್ದೆನ್ನನನುಪಮಮಹಿಮನೀಕ್ಷಿ
ಸುತ ॥ ತಂದೆಬಂದ್ಯೆಮಗನೆಸುಖವ್ವೆ । ಯೆಂದುತನ್ನನುನುಡಿಸಿದಡೆತ । ನ್ನಿಂದಧಿಕರಾರೋಸನಾಥರುಭುವನದೊಳಗೆಂದ ॥ ೩೦ ॥
ಅಲ್ಲದಾಸಾಕ್ಷಾತಲಕ್ಷ್ಮೀ । ವಲ್ಲಭನಕಾರುಣ್ಯದೃಷ್ಟಿಗೆ । ಸಲ್ಲದಾನರನಂದದಲಿಫಲವೇನುಮರನಂತೆ ॥ ಎಲ್ಲಿಹುಟ್ಟುವದೆಲ್ಲಿಮಡಿ
ವುದು । ಬಲ್ಲರಾರಾರೈದುಸಲಹುವ । ರಿಲ್ಲದರ್ಭಕಜನ್ಮದಂತಾರಿಂಗೆಹಿತವೆಂದ ॥ ೩೧ ॥ ಎನ್ನವರುಪರರೆಂದುಸಂಪ್ರತಿ । ಪನ್ನ
ಭೇದಭ್ರಾಂತಿಯಲಿಕರು । ಣಾರ್ಣವನುದಿಟಕಾಣಲರಿವನೆಜೀವರಾಶಿಗಳ ॥ ಅನ್ಯರಾತ್ಮದ್ವೇಷಿಗಳುನೆರೆ । ತನ್ನಪರುತದಭಿಜ್ಞ
ರೆಂದುಪ । ಸನ್ನಹಿತವಿಗ್ರಹನುಕಲ್ಪದ್ರುಮದವೋಲೆಂದ ॥ ೩೨ ॥ ಶ್ರೀಮನೋರಮನಗ್ರಜನುಬಲ । ರಾಮನೆನ್ನನುನಿಜಪ
ದದ್ವಯ । ತಾಮರಸಸನ್ನುತನನಪ್ಪುತ್ತೆರಡುತೋಳ್ಗಳಲಿ ॥ ಕ್ಷೇಮವನುಬೆಸಗೊಂಡುತನ್ನಯ । ಧಾಮವನುಹೊಕ್ಕಂತೆಸಹ
ಜ । ಪ್ರೇಮದಿಂದುಚಿತವನುಮಾಳ್ಕುಮನೋನುರಾಗದಲಿ ॥ ೩೩ ॥ ಹರಿಯವರುಮನ್ನಿಸದಬಾಳಿಕೆ । ಹರಿಕಥೆಯಹೇಳದನಹೇ
ಳಿಕೆ । ಹರಿಯಭಕ್ತರುಗಳಿಗೆಪ್ರೊಡಮಡದವನಹಿರಿಯತನ ॥ ಹರಿಯನರಿಯದನರದಭಿಜ್ಞತೆ । ಹರಿಸಮರ್ಪಿತವಲ್ಲದರ್ಪಿತ । ನರ
ಕಭೋಜನವೆನುತ್ತನುತಚಿಂತಿಸುತನಡೆತಂದ ॥ ೩೪ ॥ ಇಂತೆನುತಮನದೊಳಗೆಲಕ್ಷ್ಮೀ । ಕಾಂತನನುನೆನವುತ್ತಮಾರ್ಗ । ಶ್ರಾಂತಿ
ಯನುನೆರೆಮರಡುತದ್ಭಾವಭಕ್ತಿಯಲಿ ॥ ಸಂತಸದಲೈತರುತಗೋಕುಲ । ದಂತಿಕಕೆರವಿರಥವನಪರದಿ । ಕಾಂತರಕೆನೂಕಿದನು
ಬರೆಬರೆಸಂಜೆರಂಜಿಸಿತು ॥ ೩೫ ॥ ಬರುತಗೋಕುಲದಂತಿಕದಲಾ । ಪರಮಪುರುಷನಪಾದಕಮಲದ । ಧರೆಗೆಭೂಷಣವಾದಹಜ್ಜೆ
ಗಳನುವನಾಂತದಲಿ ॥ ಇರಲುಕಂಡನುಶೇಷವಿಬುಧೇ । ಶ್ವರರಮಣಿಮಕುಟಪ್ರಭಾಕೇ । ಸರಗಳಲಿಶೋಭಿಸುತಲಿರಲಾಮುಂ
ದಿಮಾರ್ಗದಲಿ ॥ ೩೬ ॥ ಕಂಡೆನೆನ್ನಯಜನ್ಮಫಲವನು । ಕಂಡೆನೆನ್ನಮನೋರಥವಹದ । ಗೊಂಡಹೆಂಬೆಳಗೈಯ್ಯಹೆಬ್ಬೆಳಸಿನಮ
ಹೋದಯವ ॥ ಕಂಡೆನೆನ್ನಸ್ವಾಮಿಪದಯುಗ । ಪುಂಡರೀಕದಹಜ್ಜೆಗಳನಾ । ಖಂಡಲಾದಿಸುರೌಘಸೇವಾಸಹ್ಯರೇಣುಗಳ ॥
ಇವೆಯಶಾವಜ್ರಾಂಕುಶಧ್ವಜ । ಯವೆಲತೆಗಳೆಂದೆಸೆವರೇಖಾ । ನಿವಹಲಕ್ಷ್ಮೀಕುಚಕುಧರಕುಂಕುಮಪರಾಗಚಯ ॥ ಇವೆಯ
ಲಾಮುನಿಹೃದಯಪಂಕಜ । ಭವನತಿಮಿರದ್ಯುಮಣಿಗಳುತನ । ಗಿವರದರುಶನವಾಯ್ತುಕಂಡೆನುಕಂಡೆನಚ್ಯುತನ ॥ ೩೭ ॥
ನಾಕುತನಗಿಹಪರವೆರಡುಲೋ । ಕೈಕಮಂಗಳವೆನಿಪಕೃಷ್ಣಪ । ದೈಕಪದ್ಮಪರಾಗದರುಶನವೇಮಹೋನ್ನತಿಕೆ ॥ ಶ್ರೀಕರವಲಾ

ಶ್ರೀಗೆತನ್ನಾ | ಲೋಕನಕೆದೊರಕೊಂಡುದೆಂತೆನು | ತಾಕುಲಾಂತಃಕರಣನೋಲಾಡಿದನುಹರುಷದಲಿ || ೩೯ || ಚಿಗಿದುರಥದಿಂ ದಿಳೆಗೆಬಿದ್ದನು | ಬಿಗಿದಗಳದಲಿಹರುಷಬಿಂದುಗ | ಳೊಗಲುಕಂಗಳುಮುಚ್ಚಿಕೃಷ್ಣಕೃಪಾಳುಶರಣೆನುತ || ಬಗೆದಣಿಯೆಹೊರಳ್ದನುಕ್ಕೆಯಲಿ | ತೆಗದುಮುಂಡಾಡಿದನುಪದರೇ | ಣುಗಳಲೊಡಲನುಹೊಳ್ಳಿಹೀಡಾಳಿಸಿದನಡಿಗಡಿಗೆ || ೪೦ || ಸಂತವಿಸಿದವುಪುಳಕವೆನುತೇ | ಕಾಂತಭಕ್ತರದೇವಲಕ್ಷ್ಮೀ | ಕಾಂತನಂಘ್ರಿಪರಾಗದಲಿಹೊರಳ್ದನುತಾಯುರದಿ || ಅಂತರದಲೋಲಾಡುವರ್ಥಕ | ನಂತೆಮ್ಮೈಮರದಧಿಕಹರುಷಾ | ಕ್ರಾಂತಮತಿಕೇಳ್ದನುಗೋಕುಲದೆಸವಕಳಕಳವ || ೪೧ || ಏರಿರಥವನುಹರುಷದಲಿಹೊರೆ | ಯೇರಿಫಲದಾಸೆಯಲಿಪುಷ್ಪವ | ವಿಾರುವಂತಿರೆಕೃಷ್ಣಚರಣಾಂಬುಜದಿದೃಕ್ಷೆಯಲಿ || ವಿಾರಿನಡದನುಹಜ್ಜೆಗಳನಡೆ | ಯೂರದನುರಾಗದಲಿಗೋಪರ | ತಾರುಥಟ್ಟನಸಿರಿಯಲೆಸವಾನಂದಗೋಕುಲಕೆ || ೪೨ || ಮುಂದೆಕಂಡನುಬರುತಗೋಪರ | ವೃಂದವನು ಗೋವುಗಳಕರುಗಳ | ಸಂದಣಿಯುಸಂಭ್ರಮದಲೆಸವಾನಂದಗೋಕುಲವ || ಇಂದುಮುಖಿಯರಕೃಷ್ಣಗೀತಾ | ನಂದಭವನಶ್ರೇಣಿಗಳನಲ | ವಿಂದನೋಡುತಕೈಮುಗಿವುತ್ಕೈತಂದನಕ್ರೂರ || ೪೩ || ದೂರದಿಂದ್ಯೈತರುತಕಂಡನು | ದಾರಕೇಜೋನಿಧಿಗಳನುಸುರ | ವೀರಸೇವಿತಚರಣರನುಸುಜನೈಕಶರಣರನು || ಚಾರುತರಸರ್ವಾಂಗಲಕ್ಷ್ಮೀ | ಕ್ಷೀರವಾರಿಧಿಗಳನುಬಲದ್ಯೈ | ತ್ಯಾರಿಗಳನೊಪ್ಪಿರಲುಗೋಗೋಪಾಲಮಧ್ಯದಲಿ || ೪೪ || ನೀಲಕೈಲಾಸಾದ್ರಿಗಳವನ | ಕೇಳಿಯೋದಿಕ್ಕರಿಗಳರ್ಭಕ | ಲೀಲೆಯೋಸೌಂದರ್ಯಗುಣಸಾಗರದಸಂಭ್ರಮವೋ || ಸ್ಥೂಲಮರಕತಶುಭ್ರರತ್ನದ | ಸಾಲಭಂಜಿಕೆಗಳೊಬಲಶ್ರೀ | ಲೋಲರೋಯೆನಲೆಸವಮಂಗಳಮೂರ್ತಿಗಳಕಂಡ || ೪೫ || ಜೀಯಕೊಡುನೇಮವನೆನುತಸುರ | ರಾಯರಿರಲೊಂದೆಸೆಗೆವಂದಿನಿ | ಕಾಯಕೈವಾರಿಸಲುನಿಜಕೀರ್ತಿಗಳನೊಂದೆಸೆಗೆ || ಕಾಯಕಾಂತಿಯಲಿಳೆಗೆಶಿವಿರೋ | ಪಾಯನವಮಾಡುತ್ತಬಲನಾ | ರಾಯಣರುನಿಜಲೀಲೆಯಿಂದಿರೆಕಂಡನಕ್ರೂರ || ೪೬ || ಒಮ್ಮೆತತ್ವಂಮುಗಳಲೊಪ್ಪಿರೆ | ವೊಮ್ಮೆನಾನಾವಿಧದಲಂತಿರ | ಲೊಮ್ಮೆಭುಜನಾಲ್ಕರಲಿಬಹಳೈಶ್ವರ್ಯಗುಣಗಳಲಿ || ಒಮ್ಮೆಸಚ್ಚಿತ್ಪೂರ್ಣರಾಗದ | ಲೊಮ್ಮೆಸಹಜಾರ್ಭಕರವೋಲಿರ | ಲೊಮ್ಮೆಬಲನಾರಾಯಣರನಿಜಲೀಲೆಯನುಕಂಡ || ೪೭ || ಪೊಂಗೊಳಲಬಾರಿಸುತತುರುಗಳ | ಜಂಗುಳಿಯನೀಕ್ಷಿಸುತಗೋಪರ | ವಂಗಡದಮೇಳಾಪದಲಿಮೂಜಗವಮೋಹಿಸುತ || ಅಂಗನೆಯರಾಲೋಲನೇತ್ರಾ | ಲಿಂಗನಾಸೌಖ್ಯವನುಕರುಣಾ | ಪಾಂಗದಲಿಕೈಗೊಳುತನಿಂದಿರೆಕಂಡನಕ್ರೂರ || ನೀಲಪೀತಾಂಬರಗಳಲಿನಿಡಿ | ದೋಳುಗಳಕಂಕಣಗಳಲಿವರ | ಮಾಲೆಗಳಸರ್ವಾಂಗಭೂಷಿತಭೂಷಣಂಗಳಲಿ || ಕಾಲಕಡಗದಮುದ್ರಿಕೆಯಗೋ | ಪಾಲರಿಬ್ಬರನೀಕ್ಷಿಸುತಕ | ಣ್ಣಾಲಿಗಳುನೀರೇರಿದವುದೂರದಲಿಯದುವರನ || ೪೯ || ಧರೆಗೆಭೂಷಣವಾದಚರಣಾಂ | ಬುರುಹಶುಭರೇಖೆಗಳಸುರಮುನಿ | ವರರಮಣಿಮಸ್ತಕದಲೊಪ್ಪುವಪಾದಪದ್ಮಗಳ || ಹರಿಬಲರನೀಕ್ಷಿಸುತಕಂಗಳು | ಕರಗಿದವುಕರಪುಟವತನ್ನಯ | ಶಿರದಲಿಟ್ಟನುಜಯಜಯನಮೋನಿತ್ಯಾತ್ಮಜಯಜಯೆನುತ ... || ೫೦ ||

ಅಂತು ಸಂಧಿ ೩೩ಕ್ಕಂ ಪದನು ೧೭೭೭ಕ್ಕೆ ಮಂಗಳಮಸ್ತು.

ಮುವ್ವತ್ನಾಲ್ಕನೆಯ ಸಂಧಿ.

ಅಕ್ರೂರನು ಕೃಷ್ಣದೇವರನ್ನ ಕಂಡನು.

ಸೂಚನೆ || ಗಾಂದಿನೀಸುತನೊಡನೆದೇವಮು | ಕುಂದನಾಗೋಗೋಪಗೋಪೀ | ವೃಂದವನುಸತ್ಕೈಸಿ
ಗೋಕುಲದಿಂದಹೊರವಂಟ || ... ...

ಪದನು || ಕಂಡುರಥದಿಂದಿಳೆಗೆತನುವನು | ದಿಂಡುಗೆಡಹಿದನಚ್ಯುತನಪದ | ಪುಂಡರೀಕವನೀಕ್ಷಿಸುತಜಯಜಯಜಯೆನುತ || ದಂಡದಂತಿರೆಪ್ರೌಢಮಹಾತ್ಕರ | ಪುಂಡರೀಕದಮುಕುಳವನುಸಲೆ | ಮಂಡೆಯಲಿಧರಿಸುತಭಕತರದೇವನೈತಂದ || ೧ || ಮುಳುಗಿದನುಕಾಣುತ್ತಹರಿಪದ | ಜಲರುಹವನಾನಂದಬಾಷ್ಪದ | ಜಲಧಿಯಲಿಬೆಂಡೆದ್ದಕಂಗಳಬಿಗಿದಸಂತಸದ || ಪುಳಕನಿಕರದಭರದಲುಬ್ಬುವ | ಕಳೆವರದಕೃಷ್ಣಾಂಘ್ರಿಭಕತಿಯ | ಸಲುಗೆವಂತರದೇವಮ್ಮೈಯಿಕ್ಕುತ್ತನಡೆತಂದ || ೨ || ಮರದುತನುವನುತಕ್ಷದಾಬ್ಜದ | ಲೆರಗಿಸಿದನಿಜಚಿತ್ತವೃತ್ತಿಯ | ಲರಿಯನೇನುಮನಿಂದಿರುವತದುಭಾವಭಕತಿಯಲಿ || ಅರಿವಿನಂತವಕಳೆವವೊಲುನಿಂ | ದಿರುವಯೋಗಿಗಳಂತೆಹರಿಯನು | ಹೊರಗೊಳಗೆಕಾಣುತ್ತತನ್ಮಯನಾದನಕ್ರೂರ || ೩ || ಕಂಡುಪರವಶನಾಗಿಪದಯುಗ | ಪುಂಡರೀಕದಮೇಲೆತನುವನು | ದಿಂಡುಗೆಡಹಿದನೊಪ್ಪಿಸುವವೋಲೊಡಲನುಸಹಿತ || ದಂಡದಂತಿರೆನೋಡಿಭಕತನ | ಮಂಡೆಯಲಿಕೈಯಿಟ್ಟುನಿಜದೋ | ರ್ದಂಡದಲಿನೆಗಹಿದನುಕರುಣಾವನಧಿತಕ್ಕೈಸಿ || ೪ || ನಗುತಕಾರುಣ್ಯದಲಿಕರುಣಾ | ಳುಗಳದೇವನುತನ್ನಸಿರಿಪದ | ಯುಗಳದಲಿಮಗುಳೆರಗಿದಕ್ರೂರನನುಕೈದಣಿಯೆ || ತೆಗದುತಕ್ಕೈಸಿದನುಪಿಗೆಮ್ಮೈ | ದೆಗೆಯಲೀಯದೆಬಿಗಿದಪುಳಕಾ | ಳಿಗಳಸುಪ್ರೇಮಾರ್ದ್ರಹೃದಯೇಕ್ಷಣದಲಡಿಗಡಿಗೆ || ೫ || ಶುದ್ಧತತ್ವಂಪದಯುಗೈಕ್ಯದ | ಸಿದ್ಧ

ಯೋಹರಿಭಕತರಿಬ್ಬರ | ಬದ್ಧಗಾಢಾಲಿಂಗನದಸಂಪನ್ನಸಂಸ್ಥಿತಿಯ || ಶ್ರದ್ಧೆಯಂತುಟೋಸಾತ್ವಿಕತ್ವದ | ಬುದ್ಧಿಯಂತುಟೋನಿಜಮನೋರಥ | ಸಿದ್ಧನಾದನುಶತಗುಣೋತ್ತರವಾಗಲಕ್ರೂರ || ೬ || ಕೇಳ್ದಣಿಯವುಕಿವಿಗಳ್ ಶ್ರೀ | ಲೋಲನಮೃತೋಕ್ತಿಯನುಸವಿಸವಿ | ದಾಲಿಗಳುಸಾಕೆನ್ನದೊಂದವಯವದಸಂಸ್ತವವ || ತೋಳುಗಳುತಕ್ಕೈಸಿದಣಿಯವು | ನಾಲಗೆಯುಸ್ತುತಿವಾದಿದಣಿಯದು | ಹೇಳಲರಿದಾಯ್ತುಂತುಟೋಹರಿಗುಣದಮಹಿಮೆಗಳ || ೭ || ಹರಿಗೆಹರಿಯೊಡನಾಡುವವರಿಗೆ | ಹರಿಸಖಪ್ರಿಯಬಂಧುವರ್ಗಕೆ | ಹರಿಚರಿತ್ರವಮಾಡುವಾಗೋಪೀಜನಂಗಳಿಗೆ || ಹರಿಯಭವನಂಗಳಿಗೆಹರಿಸಂ | ಚರಿಸುವಾಸ್ಥಳಗಳಿಗೆಗೋವ್ರಗ | ಳರದೆಮ್ಮೈಯಿಕ್ಕಿರ್ದನಕ್ರೂರಾಂಕನೊಲವಿನಲಿ || ೮ || ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ || ಶ್ರೀ ಶ್ರೀ ಜಯತು ||

ಅಡಿಗೆರಗಲಕ್ರೂರನನುತಲೆ | ದಡವಿತಕ್ಕೈಸುತ್ತಹಲಧರ | ನಡಿಗಳಿಗೆಸಪ್ರೇಮರಸಸಂಭಿನ್ನಭಾವದಲಿ || ನುಡಿಸಿಕೇಳುತಕುಶಲವನುಕುಲ | ಗೆಡುಗಕಂಸನನುಡಿಗಳಿಗೆಕಿವಿ | ಗೊಡುತನಗುತಕ್ರೂರಸಹಿತ್ರೈತಂದನಾಲಯಕೆ || ೯ || ನಲವುಮಿಗಲಾತಿಥ್ಯಸತ್ಕ್ರಿಯೆ | ಗಳಲಿಮನ್ನಿಸಿಕುಳ್ಳಿರಿಸಿಹರಿ | ಬಲರುನಿಜಬಾಂಧವಗೆಮಧುಪರ್ಕಾದಿಪೂಜೆಗಳ || ಒಲಿದುಮಾಡಿದರಂಘ್ರಿಯುಗಳವ | ತೊಳೆದುಮಾರ್ಗಶ್ರಮಗಳನುನೆರೆ | ಕಳೆದುಕೈಗೂಡಿಸಿದನಕ್ರೂರನಮನೋರಥವ || ೧೦ || ಬಳಿಕಬಹುವಿಧದನ್ನಪಾನಂ | ಗಳಲಿಸಂತರ್ಪಿಸಿದರಾಯದು | ಕುಲಕುಶೇಶಯಭಾನುಗಳ್ ಭಾಗವತಮುಖ್ಯನನು || ಅಲಘುಭುಜಬಲರುಂಡುಕುಳ್ಳಿ | ರ್ದಡೆನೆಗೆಯಸಸ್ನೇಹವಚನಂ | ಗಳಲಿಸಂಭಾಷಣವಮಾಡಿದರೊಡನೆಯದುವರನ || ೧೧ || ತಂದೆಹೇಳೈನೀನಿದೇನೈ | ಬಂದೆಬೇಸರವಿಲ್ಲಲೇನಿಂ | ಮೊಂದುಬಾಂಧವವರ್ಗದಲಿಪಿತೃಮಾತೃಸಹಜರಲಿ || ಇಂದುನೀಬಹುದೆಮ್ಮಭಾಗ್ಯದ | ಕಂದೆರವೆಯಲ್ಲೈವಿಚಾರಿಸೆ | ಲಿಂದಿನೀದಿನಸುದಿನವಾಯ್ತುನಲೆಂದನಕ್ರೂರ || ೧೨ || ಬೀಸರವನೇನೆಂಬೆನಾಕಂ | ಸಾಸುರನದೆಸೆಯಿಂದನಗರಾ | ವಾಸವನುನೆರೆತ್ತೊರೆದುಯಾದವರ್ಪೈದೆದೆಸೆದೆಸೆಗೆ || ಸೂಸಿದರುತಂತಮ್ಮಜೀವವಿ | ನಾಶಭಯದಲಿವಿಷಯಸುಖದಭಿ | ಲಾಷೆಗಳನೀಡಾಡಿಬಹಳವಿದೇಶಗತರಾಗಿ || ೧೩ || ನೀವುಸಾಕ್ಷಾದ್ವಿಷ್ಣುಗಳುವಸು | ದೇವಮುಖ್ಯಯದೂತ್ತಮರುದಿಟ | ದೇವನಿಕರವುಗಡಜಗದ್ಧಿತಕಾರಿಗಳುಜನಿಸಿ || ದೇವಕಾರ್ಯವಮಾಡಲೋಸುಗ | ದೇವಕೀಸುತರಾದರೆಂಬುದ | ದೇವಮುನಿನಾರದನುಹೇಳಿದನಾನೃಶಂಸಂಗೆ || ೧೪ || ಘಾಳಿಬೆಂಬಲವಾಗಲಗ್ನಿ | ಜ್ವಾಲೆನಿಲುವುದೆಕೇಳುಖಳಕರ | ವಾಳನುಗಿದೆರಗಿದರೆವಸುದೇವನನುಕೊಲಲೆಂದು || ಖೂಳನನುಮಾಣಿಸಿದನಾಕರು | ಣಾಳುಮುನಿಪನುಪಾಯದಲಿತಾ | ಹೇಳಲರಿಯೆನುಮೇಲೆಬಂದದುರಂತಸಂಸ್ಥಿತಿಯ || ೧೫ || ಶೌರಿದೇವಕಿಯರಿಗೆಮೊದಲಲಿ | ಭಾರಿಬಂಧನವಾಯ್ತುಸಂಕಲೆ | ಸೇರಿದವುದುರ್ಮತಿಯಹೆತ್ತವರಿಂಗೆಹಿರಿಯರಿಗೆ || ಆರುನಿಲಬಹುದುಳಿದಯಾದವ | ವೀರರಿಗೆಬಂದೆಡರುಗಳನಿಂ | ನಾರುಹವಣಿಪರೆಂದುಬಿನ್ನೈಸಿದನುವಿನಯದಲಿ || ೧೬ || ಹೇಳಿದನುತಾಬಂದಕಾರ್ಯದ | ಮೂಲವೃತ್ತಾಂತವನುಖಳಕುಲ | ಮಾಳ್ಪನೆಗಹಿದನೀತಿಯನುದುರ್ಮಂತ್ರಸಂಗತಿಯ || ಕೇಳುನೃಪನೈತ್ಯಾರಿಬಲರದ | ಕೇಳಿಗಹಗಹಿಸುತ್ತನಗೆಯಲಿ | ಹೂಳಿದರುಹೇರಾಳಹೃತ್ತಾಪವನುಯದುವರನ || ೧೭ || ನಂದಗೋಪಂಗದನುಹೇಳಿದ | ಡಿಂದನಾತನಶೇಷಗೋಪರ | ವೃಂದವನುನೆರೆಕರಸಿಕಾರ್ಯಸ್ಥಿತಿಯಸಂಗತಿಯ || ನಂದಗೋರಸದಧಿಘೃತಾಧಿಕ | ಕಂದಮೂಲಫಲಾದ್ಯುಪಾಯನ | ದಿಂದಭಂಡಿಗಳಸೆಯಿಹೂಡೂದೆಂದುನೇಮಿಸಿದ || ೧೮ || ಹೊರವಡಲಿಜನನೈದೆಮಧುರಾ | ಪುರಕೆನೋಡುವಬಿಲ್ಲಹಬ್ಬದ | ಧರಧುರದಸಂಭ್ರಮವನಾಹೊಳಲೊಪ್ಪವನುಸಕಲ || ಧರೆಯಜನವೈತಹುದುಗಡನ | ಮ್ಮರಸನಿದೆಲಾಕಳುಹಿದನುಯದು | ವರನನೆನುತಲ್ಲಲ್ಲಿಸಂಭ್ರಮಿಸಿತುಜನಸ್ತೋಮ || ೧೯ || ಕೇಳುತವೆಗೋಪಾಂಗನೆಯರೆದೆ | ಹೋಳಿದುದುಹೃತ್ತಾಪದಲಿಸಿರಿ | ಲೋಲನಂಘ್ರಿಸರೋಜವಿರಹವಿಷಾದಭಾರದಲಿ || ಕೋಳುಗೊಂಡಂತಾಗಿಮೂರ್ಛಾ | ವ್ಯಾಳವಿಷವಿಹ್ವಲೆಯರಶ್ರುವಿ | ಲೋಲನೇತ್ರೆಯರಳಲುಮಿಗೆಮರುಗಿದರುಮರುಕೊಳಿಸಿ || ೨೦ || ಕ್ರೂರಕಂಸನಬೆಸದಲಿಂದ | ಕ್ರೂರನೆಂಬುವನೊಬ್ಬನೀನ | ಮ್ಮೂರಿಗಿದೆಬಂದಗಡಮಥುರೆಗೆರಾಮಮಾಧವರ || ಹಾರದೊಯಿವನುಕಂಡನಾಳಂ | ನಾರುಗತಿನಮಗೆನುತಗೋಕುಲ | ನಾರಿಯರುನಯನಾಶ್ರುಜಲದೊಳಗದ್ದರಡಿಗಡಿಗೆ || ೨೧ || ಸೀದವಧರದ್ಯುತಿಗಳಾದಾ | ಮೋದರಾಧರರಸವಿಯೋಗವಿ | ಷಾದದಂತಶ್ವಾಸಗತಿಗಳಗಾಢತಾಪದಲಿ || ಕಾದುದೆದೆಕಮಲಾಕ್ಷಿಯರುಬಡ | ವಾದರುಡೆಮುಡಿಸಡಿಲಿಕಂಬನಿ | ಮೇದಿನಿಗೆಕಡಲಿತಲುಕಳವಳಿಸಿತುವಧೂನಿವಹ || ೨೨ || ಕೆಲರುಬಿದ್ದರುಮೂರ್ಛೆಯಲಿಕೆಲ | ಕೆಲರುಕೃಷ್ಣಧ್ಯಾನಪರಮುನಿ | ಗಳವೊಲಿರ್ದರುಮರದುತನುಭಾವನೆಯಲಿಹಪರವ || ಕೆಲರುಕಮಲದಳಾಭನೇತ್ರನ | ಚೆಲುವಮೂರ್ತಿಯನಾಮೃದುಸ್ಮಿತ | ಲಲಿತಸೂಕ್ತಿಗಳೊಳಗೆಮನವೊಲಿದಿರ್ದರಬಲೆಯರು || ೨೩ || ಅರಿವಿನೊಳುಮರವೆಯೊಳುಬೇರೊಂ | ದರಿಯರಾಮುರಹರನನಲ್ಲದೆ | ತೆರಹಕಾಣರುಕೊಡೆಸಚರಾಚರದಜೀವರಲಿ || ನೆರೆನಿಜಪ್ರಾಣಾರ್ಪಣದಲೆಡೆ | ವರಿಯದೊಲವಿನಮನದವೃತ್ತಿಯ | ಲೆರಗಿಸಿದಪುತ್ಥಳಿಗಳಂತಾದರುಮಹಾತ್ಮೆಯರು || ೨೪ || ಸ್ಮೇರವದನದ್ಯುತಿಯಘನಗಂ | ಭೀರಸೂಕ್ತಿಯಸುಪ್ರಸನ್ನೋ | ದಾರನಯನಾಪಾಂಗಮಧುರಮನೋಜ್ಞವೀಕ್ಷಣದ || ಚಾರುಗತಿವಿಭ್ರಮವಿಲಾಸದ | ಸಾರಮೂರ್ತಿಯಲೀಲೆಗ

ಳನಾ। ನಾರಿಯರುನೆನನೆನೆದುನನೆದರುನಯನವಾರಿಯಲಿ॥ ೨೫॥ ಪ್ರೊಂದೆಡೆಯಲೆಲ್ಲವರುನೆರೆದುಮು। ಕುಂದನನುಹಲುಬುತ್ತ
ತವೆಮ್ಮೊಳ। ಗೆಂದರಾಗೋಪಿಯರುತಮಗೈತಹಸರಾಘವವ॥ ಕೊಂದೆನೀನೆಲೆವಿಧಿಯೆಹಗೆಯೇ। ನಿಂದುಮುಖಿಯರಲಕಟಬಲ್ಲಿ
ದ। ನೆಂದುನಿರ್ದಾಕ್ಷಿಣ್ಯದಲಿವರಾಳ್ವರೆಮನೋವ್ಯಥೆಯ॥ ೨೬॥ ಪುತ್ರಮಿತ್ರಕಳತ್ರಬಾಂಧವ। ಭೃತ್ಯಜನವೆಂದಖಿಳಜೀವರ।
ನೊತ್ತನನುಪಿತೃಮಾತೃಸಹಜಪ್ರೇಮತಮರೆಂದು॥ ವಿಸ್ತರಿಸಿಮಮತೆಯಲಿಬಿಗಿದೇ। ಕತ್ರವಾಸದಲಗಲಿಸದಕೃತ। ಕೃತ್ಯರಾ
ಗದಮುನ್ನವೆಮಗುಳ್ಳಸಬಾಂಧವರ॥ ೨೭॥ ಅಕಟನಿನ್ನಯಚೇಷ್ಟೆದಿಟಬಾ। ಲಕನಚೇಷ್ಟಿತದಂತ್ರಜೀವ। ಪ್ರಕರದಲಿಯೆ
ಬಿಲ್ಲಬಲ್ಲವನಲ್ಲಪರಹಿತವ॥ ಸಕಲಲೋಕೇಶ್ವರನನಖಿಳಾ। ತ್ಮಕನನೀಕೃಷ್ಣನನುಕ್ರೂರಿಂ। ತಕುಟಿಲನೆನೀವಾಡಲೇಕೆಪರೋ
ಕ್ಷಸಂಸ್ಥಿತಿಯ॥ ೨೮॥ ಲೋಕಸೃಷ್ಟಿಗೆಚೆಲುವನೊಬ್ಬನೆ। ಸಾಕುತೆಗೆವಿಕ್ಕುವರಪತಿಗಳ। ಲೋಕಪಾಲರನೊತ್ತವನುನವಿಶ್ವನಿ
ಕೇಶ್ವರನ॥ ಆಕೃತಿಯಸೌಂದರ್ಯಲಕ್ಷ್ಮಿಯ। ನೇಕದೇಶವಹೋಲುವರೆನವು। ಗೇಕೆಹರಿವಿರಹಿತಜಗತ್ರಯವೆಂದರಬಲೆಯರು॥
ಅಸಿತಕುಂತಳಪರಿವೃತಾನನ। ವಿಸರುಹದವಿಭ್ರಮಕಪೋಲೋ। ಲ್ಲಸದಕಮಲದಳಾಯತಾರುಣಚಾರುಲೋಚನದ॥ ಎಸವ
ಹರಿಯನುಕಂಡುಮಿಗೆಸಂ। ತಸವಮಾಡುವೆವೆನೆವಿಧಾತನು। ವಿಷವಕಲಸಿದಡೆಂತುಬದುಕುವೆವೆಂದರಬಲೆಯರು॥೩೦॥ ಬಾಯ
ಬಿಡುತಿದೆಕುಕ್ಕುಟವ್ರಜ। ಬೀಯವಾದುದುರಾತ್ರೆನದರ। ಸ್ತ್ರೀಯರಭಿಮತಸಿದ್ಧಿಗಳುಸೇರಿದವಲಾದಿಟಕೆ॥ ಅಯಿತಿನ್ನೇನರೆ
ಘಳಿಗೆತಂ। ಮಾಯುಷಕೆಕಡೆಕಮಲಸಖನಿ। ದಾಯದಿಂದುದಯಿಸಿದನೆಂದರುಕಾಂತೆಯರುಮರುಗಿ॥೩೧॥ ಹಬ್ಬವೆಂದೇ
ಹೆಸರುಕಂಗಳ। ಹಬ್ಬನಾಮಥುರಾಪುರಸ್ತ್ರೀ। ಸರ್ಬಜನಸಂತತಿಗೆಸಾಕ್ಷಾದ್ವಿಷ್ಣುವೆಂದೆನಿಪ॥ ಸರ್ಬಲೋಕೇಶ್ವರನನಖಿಳಸು।
ಪರ್ಬಜನಸಂಸ್ತುತನಕಾಣ್ಬಸ। ಗರ್ಭಪುಣ್ಯೋದಯವಿದೆಂದರುಕಾಂತೆಯರುಮರುಗಿ॥೩೨॥ ಆವತಪವನುಚರಿಸಿದರೊಮು।
ನ್ನಾವಮಖಗಳನೆಜಿಸಿದರೊಮೇ। ಣಾವಪರಿಯಲಿಫಲಿಸಿತಿಷ್ಟಾಪೂರ್ತರಾಶಿಗಳು॥ ಈವಿರಿಂಚಾರಾಧ್ಯಚರಣನ। ನಾವಪರಿಯ
ಲಿಕಾಂಬವಾರ್ಗಜ। ನಾವಳಿಗದೆಂತೆನುತಹಂಬಲಿಸಿದರುಮಿಗೆಮರುಗಿ॥ ೩೩॥ ಹೋದವರುಬಹರೆಂತುಬಲದಾ। ಮೋದರ
ರುಮಗುಳಿತ್ತನಗರತ। ಳೋದರೀವಿಭ್ರಮವಿಳಾಸಂಗಳನುನೆರೆಕಂಡು॥ ಆದರಿಸುವರೆಹಲ್ಲಕಾರರ। ಹಾದರದಹೆಂಗಳನುಕೆಟ್ಟ
ವ। ಲಾದುರಂತಧ್ವಾಂತಸಾಗರಮಧ್ಯದಲಿಮುಳುಗಿ॥ ೩೪॥ ಕ್ರೂರನಲ್ಲಾಹೆಸರಿದೇಕೆ। ಕ್ರೂರನೆಂದೀತಂಗೆತಮ್ಮಕ। ಠೀರ
ಮಾತ್ರವನುಳುಹಿಜೀವವನೊಯ್ವಪಾತಕಿಗೆ॥ ಆರುಕೆಳ್ಳವರುವಿರಹಮಾರಾ। ವಾರವನುನಾವೆಂದುಕಾಂಬೆವು। ಮೇರೆಯಿಲ್ಲದ
ಕೃಪೆಯನಾರ್ಥಿಯನೆಂದರಬಲೆಯರು॥ ೩೫॥ ಹುಟ್ಟಗುರುಡರಿಗೇಕೆಕಂಗಳ। ಕೊಟ್ಟುಕೊಂಬೆವಿಧಾತನಿನ್ನಯ। ಚೇಷ್ಟೆ
ಹಿತಕರವಲ್ಲನೆರೆದತ್ತಾಪಹಾರವಲ॥ ಬಿಟ್ಟುನಿಜಪಿತೃಮಾತೃಸುತರನು। ನೆಟ್ಟನಾಶ್ರೈಸಿದೆವುನಮ್ಮನು। ಬಿಟ್ಟುಹೋಗದಿರೆಲೆ
ಮುಕುಂದಯೆನುತ್ತಹಲುಬಿದರು॥ ೩೬॥ ಆರುಗತಿಹೇಳೆಮಗೆನಿಮ್ಮಪ। ದಾರವಿಂದಾಶ್ರಿತೆಯರಿಂಗೆಲೆ। ಮೇರುವಲ್ಲಾನಿಮ್ಮ
ನೊಂದರೆನಿಮುಷಕಾಣದೊಡೆ॥ ಆರರಿವರೆಂಮಳಲನಿದನಿ। ನ್ನಾರಿಗೆಂಬೆವುಕೃಷ್ಣಕರುಣಾ। ವಾರಿಧಿಯೆಹಾರಾಮಹಾಯನುತ
ಳಲಿವರುಬಿಡದೆ॥ ೩೭॥ ಹೆತ್ತತಾಯ್ತಂದೆಗಳುಪೇಕ್ಷಿಸ। ಲೆತ್ತಣದುನಮಗಿನ್ನುಕೃಷ್ಣನ। ವಾರ್ತೆಹೋಗಲಿರಥವನೇರುತ್ತಿರ್ದ
ನಿನ್ನೇನು॥ ಮೃತ್ತವರುಬೇಡೆನ್ನಲೇಕೆ। ಮುತ್ತೆಳೆಯರುತವಕಿಸುತ್ತಿದೆ; ಯೆತ್ತಲೇನೆಂದರಿಯರಕಟಕಟೇಸುದುಸ್ಥಿತಿಯ॥
ಆಗಪವರಕುವಂಗಳೇತಕೆ। ಹೋಗಲೆಂದೇಕಂಡವಿಭೂ। ಭಾಗದಧಿದೇವತೆಗಳೀವನಖಗಮೃಗವ್ರಾತ॥ ಏಗುವೆವುನಾವಿನ್ನು
ದೈವದ। ಲಾಗುತಪ್ಪದಬಳಿಕಸುಖದಲಿ। ಹೋಗಿರಾಜ್ಯವಮಾಡಲದುವೇನಮಗೆಪರಿತೋಷ॥ ೩೯॥ ಅಡವಿಯಲಿತುರುಗಾ
ಯಹೋಗಿರ। ಲೆಂಡೆಯನ್ನೆಕಹನೆಂದುದಿವಸದ। ಕಡಲಕಳವೆವುಕಜ್ಜರಿತ್ರಕಥಾಕಥನದಿಂದ॥ ಬಿಡಲತಾಪಕ್ಕಸ್ತಮಯವೇ।
ಕಡೆಯನಿಸಿತಿನ್ನಾವಕಾಲದ। ಕಡೆಗೆಕಾಂಬೆವೆಯೆನುತಮಲಗಿದರುಮೂರ್ಛೆಯಲಿ॥ ೪೦॥ ಎಂದುಬಹನಿನ್ನೆನುತಹಲುಬು।
ತ್ತಿಂದುಮುಖಿಯರುತವೆಮ್ಮೊಳಗೆಗೋ। ವಿಂದದಾಮೋದರದಯಾನಿಧಿಮಾಧವಾಯನುತ॥ ಬಂದುದೆಸೆಗೊರಲಿದರುಗೋವ್ರಜ।
ಳೊಂದೆಸೆಮರುಗಿದಪ್ರೇಮವು। ಕಂದನನುನೋಡಿಸಿನೋಡಿದವಶ್ರುಜಲಪ್ರೊಗಲು॥ ೪೧॥ ಅತ್ತಲುದಯಾಚಲಕೆರವಿ
ರಥ। ಬತ್ತಿಬರೆತಲೆವಾಗಿಪದದಲಿ। ಹೆತ್ತವರಬೀಳ್ಕೊಂಡುಸಂತವಿಸುತ್ತಗೋಪಿಯರ॥ ಚಿತ್ತದಳಲನುಕಳದುತೆಗೆದರು। ಪುತ್ತ
ಪರಿಮಿತವಚನದಲಿವರ। ಮುಕ್ತಿಗಳುಜೊರಮಂಟಪದಾಸಂಗಗೋಕುಲವ॥ ೪೨॥ ವೀರಕೃಷ್ಣವನೆರಗಿಹರಿಪದ। ವಾರಿಜಕೆ
ತಲೆವಾಗಿಬಂದ। ಕ್ರೂರತೀರಿದನಾರಥವನಾಸಕ್ಕಕವಮಾಡಿ॥ ಭೂರಿಕಹಳಾರವಫೇನಗಂ। ಭೀರಭೇರೀರವದವಿಪ್ರರ। ವೀರ
ಸೇಸೆರುಮಂತ್ರರವದೊಡ್ಡವಣೆರಂಜಿಸಿತು॥ ೪೩॥ ಅವನಿಪತಿಚಿತ್ತೈಸುಪರಮೋ। ತ್ಸವದಲಂಕ್ರೂರಬಲಮಾ। ಧವರುಕ
ಳ್ಳರಲಾರಥಾಗ್ರದಲೆಸೆಯಲೆಡಬಲದ॥ ಅವನಿಜಾಡೆಗೆಡೆಭಂಡಿಗಳುಭಾ। ರಪಿಸಿನೂಕಿತುಬಹಳಗೋರಸ। ನಿವಹತೀವಿರಹರ
ವಿಗಳಸಾಲುಗಳುತನಿಜಡಿಯೆ॥ ೪೪॥ ನಂದಗೋಪಾದ್ಯಖಿಳಗೋಪರ। ವೃಂದವಖಿಳವಿಭೂಷಣಾಂಬರ। ದಿಂದಹೊರವಂಟು
ನಂತರಾಶ್ವಂಗಳಲಿಕೈಗೈದು॥ ಸಂದಣಿಸಲಕ್ರೂರಕರಿಬಲ। ರೊಂದುರಥದಲಿಬರಲುನೆರೆದುದು। ಮುಂದಿಬಂಡಿಗಳೆತ್ತುಗಳುಗೋ

ಪಳಿನೋಡೆನೆರಸಿ ॥ ೪೫ ॥ ಒಡಲುಜೀವವನುಳಿದಡೊಪ್ಪಂ । ಬಡಿಯಲರಿವುದೆರಾಮಕೃಷ್ಣರ । ಗಡಣವಿಲ್ಲದಗೋಕುಲವಿದೇ
ಕೆನುತತವುತವಗೆ ॥ ಕಡುಗಲಿ ಯಪೆಯುಣಿಸನುಕಾಣುತ । ಮಡದಿಯರುಮುವ್ಮಾರ್ಗದಲಿಧರ । ಬಿಡಿದುಚಿತ್ರದವೋಲುನಿಂ
ದರುಕೂಡೆಮುರವಿಟ್ಟು ॥ ೪೬ ॥ ಬೀಳುವೆವ್ರುರಥವಿಧಿಯಲೀಸುಡು । ಬಾಳಲೇತಕೆಕೃಷ್ಣವಿರಹದ । ಕಾಳುಗಿಚ್ಚಿನಲಕಟಸೀಕರಿ
ಯೋದವನದಂತೆ ॥ ಸಾಲದೇಬಿಡುಕಿದುದುಕೃಷ್ಣನ । ಕಾಲಕೆಳಗಸುಗಳಸುನೀಗುವ । ವೇಳೆನುತತವುತವಗೆಕಳವಳಿಸಿತುವಧೂ
ನಿವಹ ॥ ೪೭ ॥ ಅನಸುಖವ್ರೋಹರಿಯಕಾರು । ಣ್ಯಾವಲೋಕನತದ್ವಿರಹವಿ । ನ್ಯಾವತಾಪವ್ರೋಹರಹರಾಹರಬಲ್ಲರಾರದನು ॥
ಗೋವ್ರುಗಳದಂತಿರಲಿಗೋಪಜ । ನಾವಳಿಗಳಂತಿರಲಿತದ್ಬಲಂ । ದಾವನಶ್ರೀಸೀದುದೊಂದೇನಿಮಿಷಮಾತ್ರದಲಿ ॥ ೪೮ ॥ ಅದನರಿ
ತುಗೋಪಿಯರಿಗುರುತರ । ಹೃದಯದಂತಸ್ತಾಪವನುಕರು । ಣದಲಿಕೆಳೆಯರಕಳುಹಿನಿಜಕರಕಮಲವನುತೋರಿ ॥ ಹದುಳ
ವಿಹುದಾನೀಬಹೆನುನಾ । ಡಿದುನಿರರ್ಥಕೆಸಾಯಬೇಡೆಂ । ದುದಿತಸೌಹಾರ್ದದಲಿಸಂತೈಸುತ್ತನಡೆತಂದ ॥ ೪೯ ॥ ಕಳುಹಿದರು
ಹರಿಯೊಡನೆಮತ್ತಾ । ಚೆಲುವಮೂರ್ತಿಯನೆಡೆಯುಡುಗದೋರಂತಭಾವಿಸುತ ॥ ಬಳಿಕಮರಳಿದುರಾಗಗಟ್ಟಿ । ಲಲನೆಯರು
ಗೋಕುಲಕೆಪರಿಜನ । ವುಲಿಯಲಾನಿತ್ಯಾತ್ಮರಾಮರುನಡದರುರವಣಿಸಿ ॥ ... ... ॥ ೫೦ ॥

ಅಂತು ಸಂಧಿ ೩೪ಕ್ಕಂ ಪದನು ೧೭೭೨ಕ್ಕಂ ಮಂಗಳಮಸ್ತು.

ಮುವ್ವತ್ತೈದನೆಯ ಸಂಧಿ.

ಸೂಚನೆ ॥ ಯೋಗಮಾಯಾಧೀಶ್ವರನುನಿಜ । ಯೋಗಸಿದ್ಧನೆನಿಪ್ಪನಿಜವನು । ಯೋಗಮೂರುತಿ
ಜಲದೊಳಕ್ರೂರಂಗೆತೋರಿಸಿದ ॥ ... ...

ಪದನು ॥ ಅರಸಕೇಳಚ್ಯುತನಮೂರ್ತಿಯ । ನಿರದೆನೋಡುತಚಿತ್ರದಂತಂ । ಬುರುಹಮುಖಿಯರುನೆರದುಬಾರನೆಮನೆಗೆ
ಮರಳೆನುತ ॥ ಹರಿಯನಾಹರಿರಥವನಾಧ್ವಜ । ಶಿರವನಾರಥರೇಣುಗಳನಂ । ಬರದೊಳಗೆಕಾಂಬನ್ನವೀಕ್ಷಿಸಿಮರಳಿದರುಮನೆಗೆ ॥
ಸರಸಿಜಾಕ್ಷಿಯರನವರತಹರಿ । ಚರಿತವನುಪಾಡುತ್ತಕೀರ್ತಿಸು । ತಿರುಳುಹಗಲೆನ್ನದೆಸದಾಕೃಷ್ಣಾಂಘ್ರಿಪಂಕಜವ ॥ ಸ್ಮರಿಸುತಿಹ
ಪರಲೋಕವೆರಡನು । ಸರಕುಮಾಡದೆಪರಮಸುಖಸಾ । ಗರದಲೋಲಾಡುತ್ತಲಿರ್ದರುತತ್ಪ್ರಸಂಗದಲಿ ॥ ೨ ॥ ಅತ್ತಲಾರಥ

ಕಾಳಿಂದೀ ನದಿಯಲ್ಲಿ ಅಕ್ರೂರಂಗೆ ವಿಶ್ವರೂಪ ದರ್ಶನ.

ದೊಳಗೆಬಲಪ್ರುರು । ಷೋತ್ತಮಾಕ್ರೂರರುಮನೋವೇ । ಗೋತ್ತರದವೇಗದಲಿನಡದರುಗೋಪಜನಸಹಿತ ॥ ಉತ್ತರಿಸಿಕಾಳಿಂ
ದಿಯನುಗೋ । ಪೋತ್ತಮರುಮುಂಕೊಂಡುನಡೆಯಲು । ವಿಸ್ತರದಭಂಡಿಗಳಬಹಳೋಪಾಯಸಂಗಳಲಿ ॥ ೩ ॥ ಬಂದುಬಲ
ಮಾಧವರೊಡನೆಕಾ । ಳಿಂದಿಗಕ್ರೂರಾಂಕನಂದಿದ । ನೆಂದನೀನದಿಯೊಳಗೆಮಾಧ್ಯಾಹ್ನಿಕವನಾಚರಿಸಿ ॥ ಬಂದಪೆನುನೀವಿಹುದು
ರಥದೊಳ । ಗೆಂದುನೇಮವಕೊಂಡುಬಲಗೋ । ವಿಂದರನುನೆನೆವುತ್ತಬಂದನುವರನದೀಜಲಕೆ ॥ ೪ ॥ ತೊಳೆದುಕರಚರಣಂಗ
ಳನುತ । ಜ್ಜಲವನಭಿಮಂತ್ರಿಸುತನೀರೊಳು । ಮುಳುಗಿಕಂಡನುರಾಮಕೃಷ್ಣರನಾಜಲಾಂತದಲಿ ॥ ಘೊಳಿಲನೆದ್ದನಿದೇನುರಥದಿಂ ।
ಇಳಿದುಬಂದರೊಬರಿಮನದಹಂ । ಬಲೊಯೆನುತರಥದೊಳಗೆಕಂಡನುರಾಮಮಾಧವರ ॥ ೫ ॥ ಮತ್ತೆಮುಳುಗಿದನಾದಡದು
ಹುಸಿ । ಚಿತ್ತದಭ್ರಮೆಯೆನುತಜಲದೊಳ । ಗುತ್ತಮಶ್ಲೋಕರನುಪುನರಪಿಕಂಡನದರೊಳಗೆ ॥ ಎತ್ತಲಿದುಹರಹರಶಿವಾಯನ ।
ನೋಸ್ತು ಚಿತ್ರವೆನುತ್ತಸ್ಸಲಿಲವ । ನುತ್ತರಿಸಿಬೆರಗಾದನೀಕ್ಷಿಸಿರಾಮಮಾಧವರ ॥ ೬ ॥ ಇದನರಿವೆನಿನ್ನೊಮ್ಮೆಯೆನುತಾ । ಹೃದ
ಯದೊಳುಮುಳುಗುತ್ತಕಂಡನು । ಕದವತೆರದಂತಿರಲುಸೂರ್ಯಸಹಸ್ರದೀಪ್ತಿಗಳ ॥ ವಿದಿತವಿಭವಂಗಳಿಗೆಸಂಭವ । ಸದನವೆನಿಸುವ
ನಂತನನುಸೊಂ । ಪೊದವಿದುರುತೇಜದಸಹಸ್ರಫಣಾಮಣಿದ್ಯುತಿಯ ॥ ೭ ॥ ಕಂಡನಾಫಣಿರಾಜಭೋಗೋ । ದ್ದಂಡತಳ್ಪದ
ಮೇಲೆಕನಕನ । ಕಂಡಳಿಸಿದೆಳನೀಲರತ್ನಾಚಲದಗರುವಿಕೆಯ ॥ ಪುಂಡರೀಕಾಕ್ಷನನುಪುನರಪಿ । ಕಂಡನಿಕ್ಕೆಲದೋಲಗದಪರಿ ।
ಮಂಡಲದಪರಮೇಷ್ಟಿರುದ್ರಾದಿಕ್ಯಕೋಟಿಗಳ ॥ ೮ ॥ ಸುಳಿಗುರುಳಮಣಿಮಕುಟರತ್ನಾ । ವಳಿಯಭಾಳದಚಂದನದಹೊಸ ।
ತಿಲಕಸಸ್ಮಿತಮಧುರತರಮಂಡಲಮುಖಾಂಬುಜದ ॥ ಹೊಳವಕಂಗಳತೊಟ್ಟಮಣಿಕುಂ । ಡಲದಚಾರುಕಪೋಲದಂತಾ । ವಳಿಯ
ಸೂಕ್ತಿಕವೆಸೆವಹರಿಯನುಕಂಡನಕ್ರೂರ ॥ ೯ ॥ ಮೆರವನಾಸಾಪುಟದಬಿಂಬಾ । ಧರದರುಣದೀಧಿತಿಯಚುಬುಕದ । ಕೊರಳ
ಸೂರೇಖೆಗಳಕೌಂಸ್ತುಭರತ್ನಭೂಷಣದ ॥ ಕರಚತುಷ್ಟಯಶಂಖಚಕ್ರಾಂ । ಬುರುಹಗದೆಗಳಕಂಕಣದಮೇ । ರುರದವನಮಾಲೆ
ಗಳರತ್ನಾಂಗದವಿಭೂಷಣದ ॥ ೧೦ ॥ ಬೆರಳುಗಳಮುದ್ರಿಕೆಯಪೀತಾಂ । ಬರದಕಾಂಚೀಗುಣದಜಿತಕರಿ । ಕರಕರದ್ವಯದ
ಮಳಜಂಘಾಯುಗಳಜಾನುಗಳ । ಬೆರಳಮೇಲುದಳದರುಣಚರಣಾಂ । ಬುರುಹನಖಮಂಡಲದಮುನಿಹೃ । ತ್ಸರಸಿರುಹವಿಷ್ಟರದ
ಹರಿಯನುಕಂಡನಕ್ರೂರ ॥ ೧೧ ॥ ಸನಕನಾರದಮುಖ್ಯವರಮುನಿ । ಜನದಬಲಿಪ್ರಹ್ಲಾದಸಾತ್ವಿಕ । ಜನದಕಮಲಜರುದ್ರವಿ

ಬುಧಾಧೀಶಪರಿಜನದ || ವಿನುತಮಾಯಾಶಕ್ತಿಗಳಸಂ | ಜನಿತಪರಮೈಶ್ವರ್ಯತೇಜೋ | ವನಧಿಮಧ್ಯದೊಳೆಸವಹರಿಯನುಕಂಡ
ನಕ್ರೂರ || ೧೨ || ಶ್ರೀಸರಸ್ವತಿತುಷ್ಟಿಪುಷ್ಟಿವಿ | ಶೇಷಕಾಂತಿಸುಕೀರ್ತಿವಿಮಳೆಯೊ | ಚ್ಚಾಸಕತಿಸಂಪನ್ನತತ್ವಜ್ಞಾನಸೂಕ್ತಿಗಳ ||
ಆಸುವಿದ್ಯಾವಿದ್ಯೆಗಳಮಾ | ಯಾರತಿಯಬಹುವಿಧವಿತಾನವಿ | ಳಾಸಿನಿಯರೋಲಗದಹರಿಯನುಕಂಡನಕ್ರೂರ || ೧೩ || ಜೀಯ
ಸಾದವೆನುತ್ತ ದೈತ್ಯನಿ | ಕಾಯವಿರೆತಲೆವಾಗಿಪನ್ನಗ | ರಾಯರಿರಲೊಂದೆಸೆಗನಂತನಬಲದಭಾಗದಲಿ || ರಾಯರಾಯರಿಗೆಲ್ಲತಾ
ನೇ | ರಾಯನೆನಿಪಜಗನ್ಮಯನನಾ | ರಾಯಣನಸಾಷ್ಟಾಂಗದೋಲಗದೊಪ್ಪವನುಕಂಡ || ೧೪ || ಚಾರುಚರಿತ್ರೋದ್ಗಾಯಕ
ಶ್ರುತಿ | ನಾರಿಯರಸಂಕೀರ್ತಿಗುಣವಿ | ಸ್ತಾರಕಿಯರೋಲಗದನರ್ತಕಿಯರವಿಳಾಸಕದ || ಭೂರಿತೇಜದವೈಷ್ಣವರಪರಿ | ಚಾರ
ಕರಪಾಠಕರಪರಮೋ | ದಾರಸಭೆಯಲಿಮೆರೆವಲಕ್ಷ್ಮೀರಮಣನನುಕಂಡ || ೧೫ || ಜಗದಸೊಬಗಿನಬಿತ್ತುಬೊಮ್ಮದ | ಹೊ
ಗರುಭಾಗವತಾಭಿಮಾನದ | ಹುಗಿಲುಪರಮಾನಂದರಸವಿಶ್ರಾಣನದಮುಗಿಲು || ದೃಗುನಿಜಯವೀಕ್ಷಣದಸೌಖ್ಯದ | ತಗಹು
ಬಹಳೈಶ್ವರ್ಯನಿಕರದ | ಬಿಗುಹುತಾನೆನಲೆಸವವೈಕುಂಠವನುನೆರೆಕಂಡ || ೧೬ || ಅರಿವಿನಂಗಡಿಭಾಗವತರ | ಕ್ಕರಿನಜನ್ಮಸ್ಥಾನ
ಜಗದಂ | ಕುರದನಿರ್ಲಯಬೀಜರವಿಶಶಿಪಾವಕಪ್ರಭೆಯ || ಎರಗಿಸಿದಪರಿಣಾಮಮಹಿಮೆಯ | ಮಿರುಗುಮಾಯಾಗುಣಪಡದ
ಕಡೆ | ಶರಗುತಾನೆನೆಮೆರೆವಹರಿಪುರಲಕ್ಷ್ಮಿಯನುಕಂಡ || ೧೭ || ಕಾಣುತವೆಕಮಲಾಕ್ಷನನುಸ | ತ್ರಾಣಚೇತನನಾವಿಕುಂಠ |
ಕ್ಷೇಣಿಯನುಕಂಗಳಲಿಜನವನುಮನದಲುತ್ಸವವ || ಮಾಣದೊಡಲ್ಲಲಿಬಹಳಪುಳಕ | ಶ್ರೇಣಿಯನುವದನದಲಿತದ್ಗತ | ವಾಣಿ
ಯನುತಳದಿಳೆಯಲೀಡಾಡಿದನುಕಳೆವರವ || ೧೮ || ಸುರಿವಸುಖಬಾಷ್ಪದಲಿಕಂಗಳು | ಕರಗಿಕೃಷ್ಣಪದಾಬ್ಜಯುಗಳದ | ಲೆರ
ಕವಡದುದುತನುತದಂಘ್ರಿಸ್ಪರ್ಶಸುಖದೊಳಗೆ || ಬೆರಕೆವಡದವ್ರನಾಗೆಯಲಂ | ಬುರುಹನಾಭನಕೀರ್ತಿಗುಣವಿ | ಸ್ತರವನಾ
ವಿಷ್ಕರಿಸಿದನುನಿಜಭಾವಭಕ್ತಿಯಲಿ || ೧೯ || ಜಯನಮೋಜಗದಾದ್ಯಜಗದಾ | ಶ್ರಯನಮೋಜಗದೀಶಜನನ | ವ್ಯಯನಮೋ
ವರ್ತಿತಜಗದ್ವಿಸ್ತಾರಸಂಸಾರ || ಜಯಜಗಜ್ಜೀವನದಯೋದಯ | ಜಯಜಗತ್ಪಾವನಗುಣೋದಯ | ಜಯನಮೋಸ್ತುನ
ಮೋಸ್ತುಜಗದಾತ್ಮಕಜಗನ್ಮಯನೆ ||೨೦|| ಜಯಮನೋಹರಮೂರ್ತಿಭಕ್ತ | ಪ್ರಿಯಭವಾಬ್ಧಿನಿಮಗ್ನಜನಸಂ | ಶ್ರಯಸದಾ
ನಂದೈಕವಿಗ್ರಹಸರ್ವವಿಗ್ರಹನೆ || ಜಯಜರಾಮರಣಾರ್ತಿಸಂಸೃತಿ | ಭಯನಿವಾರಣಪುಣ್ಯನಾಮಾ | ಹ್ವಯಪವಿತ್ರಚರಿತ್ರಪರ
ಮೇಶ್ವರನಮೋಜಯತು || ೨೧ || ದೇವನಿನ್ನಂಶಾಂಶದಿಂದೀ | ದೇವದಾನವಮನುಜಪಕ್ಷಿಮೃ | ಗಾವಳಿಗಳೀಸಕಲಸಚರಾ
ಚರಜಗನ್ನಿಕರ || ಶ್ರೀವರನೆಸಂಜನಿಸಿತೋರುವ | ವಾವಿರಿಂಚಿಭವೇಂದ್ರಮುಖ್ಯರು | ದೇವರಾಜ್ಞಾವರ್ತಿಗಳುದಿಗುಪಾಲರಿವ
ರೆಂದ || ೨೨ || ನಿನ್ನನಾಭಿಸರೋಜದಿಂದು | ತ್ಪನ್ನನಾದನುಕಮಲಭವನೀ | ನಿನ್ನಬಾಹುಗಳಿಂದಸುರನರಲೋಕಪಾಲಕರು ||
ನಿನ್ನನಖಮಣಿಕಾಂತಿಯಿಂದು | ತ್ಪನ್ನರಾದರುರವಿಶಶಿಗಳೆನೆ | ನಿನ್ನಬಹಳೈಶ್ವರ್ಯಗತಿಗಳನರಿವರಾರೆಂದ || ೨೩ || ಕಿವಿಗಳೊ
ಳುದಿಕ್ಕುಗಳುನಾಸಾ | ವಿವರದೊಳಗಶ್ವಿಗಳುಮುಖದೊಳು | ಪವನಸಖನುದರದಲಿಸಪ್ತಸಮುದ್ರವಂಬರವು || ಭುವನವೀನಾ
ಭಿಯೊಳುಚರಣದ | ಲವನಿಸಂಧ್ಯೆಗಳುಟ್ಟವಸನದ | ಜವಳಿಯೊಳುಸಂಭವಿಸಳಖಿಳಾತ್ಮಕನುನೀನೆಂದ || ೨೪ || ಕುಂಡಲಂಗಳು
ದೀಪ್ತರವಿಶಶಿ | ಮಂಡಲಂಗಳುಹುಬ್ಬಿನಾಟವೆ | ದಂಡಧರನುಬ್ಬಾಟಕಾಲತ್ರಿತಯವೇಗಮನ || ಖಂಡಪರಶುವಿರಿಂಚಿವಿವಿಧಾ |
ಖಂಡಲಾದಿಸಮಸ್ತಸುರನರ | ಮಂಡಲಾಧೀಶ್ವರರುನಿನ್ನಂಶಾಂಶಭವರೆಂದ || ೨೫ || ಗಿರಿನಿಕರದೀಪ್ತಿಗಳುಧಾರಾ | ಧರನಿಕ
ರಕೇಶಂಗಳೀಲತೆ | ತರುನಿಕರರೋಮಂಗಳೀನಿನ್ನೊಪ್ಪವೆಡೆಯಾಟ || ಇರುಳುಹಗಲುಗಳಖಿಳಲೋಕನ | ನಿರದೆಶಾಸಿಪವೇದ
ವಾಗ್ವಿ | ಸ್ತರವೆನೆಲುನಿನ್ನತುಳಮಹಿಮೆಯನರಿವರಾರೆಂದ || ೨೬ || ಧರೆಜಲಾನಲವಾತವೀಯಂ | ಬರಗುಣಾಹಂಕಾರದಂತಃ |
ಕರಣವಿಷಯೇಂದ್ರಿಯಕನಿಜಯಾವ್ಯಕ್ತಮಹದಾದಿ || ಸುರನಿಕರವಿಂತೀಜಗದ್ವಿ | ಸ್ತರಣಹೇತುಗಳೆನಿಪಸತ್ವಾ | ಕ್ಕರಗಳ
ಲಿನಿನ್ನಂಶದಿಂದುತ್ಪನ್ನವಾಯ್ತೆಂದ || ೨೭ || ಅರಿಯದೀನಿನ್ನಸ್ವರೂಪದ | ನಿರುಗೆಯನುಕರಣೇಂದ್ರಿಯಂಗಳು | ನೆರೆಸರೋ
ರುಹಭವಭವೇಂದ್ರಾದ್ಯಮರವರನಿಕರ || ಎರಗಿಮಾಯಾಗುಣವಿಷಯದಿಹ | ಕುರಿನಸುಖಲೇಶಕ್ಕೆಮತಿಯನು | ತೆರುವವು
ತ್ಸರವಾತದೇಕಿನ್ನೆಂದನಕ್ರೂರ || ೨೮ || ಭಜಿಸುವರುಯೋಗಿಗಳುನಿನ್ನನು | ತ್ರಿಜಗದಧಿದೇವತೆಯನಾಶ್ರಿತ | ಸುಜನನನು
ದೇಹೇಂದ್ರಿಯಾಂತಃಕರಣಸಾಕ್ಷಿಯನು | ಯಜಿಸುವರುವೈತಾನಿಕೋಕ್ತ | ದ್ವಿಜರುನಾನಾಕ್ರತುಗಳಲಿವಾ | ರಿಜದಳೇಕ್ಷಣವಿ
ವಿಧಸ್ವೈವದ್ರವ್ಯಭೇದದಲಿ || ೨೯ || ಕೆಲರುಳಿದುವೇದೋಕ್ತಧರ್ಮಂ | ಗಳನುಸಲಿಸಿಸನ್ಯಸ್ತವಿಷಯಂ | ಗಳಲಿಸಂಸ್ಥಿತರಾಗಿತತ್ವ
ಜ್ಞಾನಯಜ್ಞದಲಿ || ಕೆಲರುನಿನ್ನಯಮೂರ್ತಿಭೇದಂ | ಗಳನುಮಂತ್ರೋಕ್ತದಲಿಭಜಿಸುವ | ರೆಲೆಮುಕುಂದಭವತ್ಪದಾಬ್ಜಪ
ರಾಗರತನೆನಿಪ || ೩೦ || ಕೆಲರುಶೈವಾಗಮಪುರಾಣಂ | ಗಳಲಿಬಹುವಿಧಮಾರ್ಗಭೇದಂ | ಗಳಲಿಯಜಿಸುವರೊಲಿದುಸಾಕ್ಷಾ
ತ್ಪರಮಶಿವನೆಂದು || ಕೆಲರುಸೌರಾಗಮಗಳಲಿಕೆಲ | ಕೆಲರುಶಾಕ್ತೇಯಾದಿಭೇದಂ | ಗಳಲಿಸಕಲಾತ್ಮಕನೆಭಜಿಸುವರೀಭವತ್ಪ
ದವ || ೩೧ || ಹಲವುನದಿಗಳತರ್ಪಣದಜಲ | ಜಲಧಿಗೈದುವವೋಲುಲೋಕದ | ಹಲವುದೈವಭಜನೆಗಳುತತ್ತತ್ವರೂಪನ

ನು ॥ ಜಲಜಲೋಚನನಿನ್ನ ನೈದುವ । ವಲಘುದೈವದದೈವನೀನಿರ । ಲುಳ್ಳದದೈವದಭಜನೆಕಾಲಕ್ಷೇಪಕಕಳವೆಂದ ॥೩೧॥ ಸತ್ವ
ಗುಣದಿಂದಮರರಿಂಗು । ತ್ಪತ್ತಿರಾಜಸತಾಮಸದಗುಣ । ವೃತ್ತಿಯಿಂದೀನರರುಭೂತಪ್ರೇತಗಣನಿಚಯ ॥ ಮತ್ತೆತಾಮಸದಿಂದತ
ನುಗಳು । ಚಿತ್ತವಿಸುವಡೆನಿನ್ನಮಾಯಾ। ಮತ್ತಕಾಶಿನಿಯಿಂದತದ್ಗುಣನಿಕರವಾಯ್ತೆಂದ ॥ ೩೨ ॥ ಜಲಚರಾವಳಿತೋರಿಮಗು
ಗ । ಜಲಧಿಯೊಳಗಳ್ಳವಂತೆನಿನ್ನಲಿ । ಹೊಳೆದುತೋರುವವಿೀಯಜಾಂಡಕಟಾಹಕೋಟಿಗಳು ॥ ಅಳವವಿೀನಿನ್ನೇಕದೇಶದ ।
ಳ್ಳಿಯದುದುಭವಿಸನಸದಾನಿ । ಶ್ಚಲನಿರಂಜನನಿತ್ಯಸುಖಪರಿಪೂರ್ಣನೀನೆಂದ ॥ ೩೩ ॥ ಆರರಿವರೀನಿನ್ನಮಹಿಮೆಯ । ನಾರು
ಎಣಿಸಬಹುದುನಿನ್ನವ । ತಾರಕಥೆಗಳನೀಸರೋರುಹಭವಭವಾದಿಗಳು ॥ ಈಋಷಿಗಳೀಮನುಗಳೀಸುರ । ವೀರವಂದಿಗಳೀ
ಶ್ರುತಿಗಳೀ । ನಾರದಾದ್ಯರುವಿಸ್ತರಿಸಿಕಡೆಗಾಣರಿವರೆಂದ ॥ ೩೪ ॥ ದೇವನಿನ್ನವತಾರಚರಿತಸು । ಧಾವಗಾಹನವಿಲ್ಲದಿರ್ದಡೆ ।
ಕೇವರಿಗೆಸಂಸಾರತಾಪತ್ರಯತಪ್ತರಿಗೆ ॥ ಆವುದೋಪರಿಹಾರಗತಿಮತಿ । ಯಾವುದೋಶಿವಶಿವದುರಂತತ । ಮೋವಿಮೂಢರಿಗ
ಕಟವಿಷಯವಿಷಾವಗಾಹರಿಗೆ ॥ ೩೫ ॥ ಧರಣಿಕಾರಣಮತ್ಸ್ಯಮಂದರ । ಧರಣಕಾರಣಕೂರ್ಮಧರಣೀ । ಧರಣಕಾರಣದಿವ್ಯತ
ನುಮಾರಾಹನರಸಿಂಹ ॥ ಶರಣರಕ್ಷಾವಹನೆಕಾಶ್ಯಪ । ವರತನಯವಾಮನನೆತ್ರಿಜಗ । ದ್ವಿರಚಿತತ್ರಿಪಥತ್ರಿವಿಕ್ರಮಜಯನಮೋ
ಗುಂದ ॥ ೩೬ ॥ ಧರೆಯದುಷ್ಟಕ್ಷತ್ರಕುಲಸಂ । ಹರಣಭಾರ್ಗವರಾಮದಶಕಂ । ಧರಕಬಂಧರಣೋಗ್ರನರ್ತನಕಾರಿರಘುರಾ
ಮ ॥ ಸುರವಶುದ್ವಿಜಧರ್ಮರಕ್ಷಾ । ಕರಣಯದುಕುಲರಾಮಸುರರಿಪು । ಹರಣಬೌದ್ಧಯುಗಾಂತಕಲ್ಕೀಶ್ವರನಮಸ್ತೇಸ್ತು ॥
ಯನಮೋವಸುದೇವನಂದನ । ಜಯತುಸಂಕರುಷಣನಮಸ್ತೇ । ಜಯಜಯಪ್ರದ್ಯುಮ್ನಮಹಿನಿರುದ್ಧಸಂಜ್ಞಿಕನೆ ॥ ಜಯ
ಚತುರ್ವಿಧಮೂರ್ತಿಭಕ್ತಾ । ಶ್ರಯಭವಾಂಬುಧಿಮಗ್ನಜನಸಂ । ಶ್ರಯಸದಾನಂದೈಕವಿಗ್ರಹಜಯನಮೋಜಯತು ॥ ೩೯ ॥
ಬುದ್ಧಿಗೆಟ್ಟನಿಂತುಸಂಸಾ । ರಾಬ್ಧಿಯಲಿಸುತದಾರಬಂಧುಸ । ಮೃದ್ಧನವಿಷಯಾನುರಾಗಗ್ರಹಮುಖಂಗಳಲಿ ॥ ಆಧ್ಯಹೀನನನು
ತದುಸಲೆಸುಖ । ಬುದ್ಧಿಯಲಿಬಹುಕರ್ಮಪಾಶದ । ಬದ್ಧನಾದೆನುಕೃಷ್ಣ ಕರುಣಿಸುಕರುಣಿಸೆನಗೆಂದ ॥೪೦॥ ಇತ್ತಲತ್ತಲುಕಳವು
ನೆಲಾ । ಚಿತ್ತವನುಕರಣೇಂದ್ರಿಯಂಗಳ । ವೃತ್ತಿಗಳುಕಡುಕೃಪಣನಾದೆನುಕಾಮವಶತೆಯಲಿ ॥ ಎತ್ತಲೇನೆಂದರಿಯಲೀಸವು ।
ತ್ಸವಿದ್ಯಾನಾವೆಯನುಪುರು । ಷೋತ್ತಮನೆಕೃಪೆಮಾಡನಾಥಂಗೆನಗೆನೀನೆಂದ ॥ ೪೧ ॥ ದುರ್ಲಭನೆನಿಪ್ಪೀಭವತ್ಪದ । ಪಲ್ಲ
ವದಸನ್ನಿಧಿಗೆಲಕ್ಷ್ಮೀ । ವಲ್ಲಭನೆಸೇರಿದೆನುನಿನ್ನಕೃಪಾಕಟಾಕ್ಷದಲಿ ॥ ಬಲ್ಲೆನಿನ್ನೀಭವವನಿನ್ನವ । ರಿಲ್ಲದಾಮೋಕ್ಷವನುಬಯ
ಸವ । ನಲ್ಲಕೊಡುನಿನ್ನವರಸಂಗವಸಾಕುತನಗೆಂದ ॥ ೪೨ ॥ ಎಂದುಭಕತಿಯಲೆರಗಿಚರಣ । ದ್ವಂದ್ವದಲಿವ್ಯೈಯ್ಯಕ್ತಿಪರವಶಾ ।
ಂದಬಾಷ್ಪಜಲಾವಿಲೇಕ್ಷಣನಾಗುತಿರಲಿರಲು ॥ ಮುಂದೆತೋರ್ಪಮುಕುಂದನಾಕೃತಿ । ನಿಂದುದಂತರ್ಧಾನಗತಿಯಲಿ । ಸಂದವೈ
ಭವನಿಕರದೋಲಗಸಹಿತನಿಮುಷದಲಿ ॥ ೪೩ ॥ ಇದ್ದನಾಜಲದೊಳಗೆಕಂಡುಜ । ನಾರ್ದನನಮೂರ್ತಿಯನುಕಾಣದೆ । ಬಿದ್ದ
ನನ್ನನುಕಾಣದಳಲುವವೋಲುಕಳವಳಿಸಿ ॥ ನಿದ್ರೆತಿಳಿದಂದದಲಿಭಕತರ । ಭದ್ರವಾರಣನೇಳುತವೆಬಲ । ಭದ್ರನಿತ್ಯಾತ್ಮರನು
ಂಡನುರಥದಮೇಲಿರಲು ॥ ॥ ಶ್ರೀಕೃಷ್ಣಾಯಪರಬ್ರಹ್ಮಣೇನಮಃ ॥ ॥ ೪೪ ॥

ಅಂತು ಸಂಧಿ ೩೬ಕ್ಕಂ ಪದನು ೧೬೬೬ಕ್ಕಂ ಮಂಗಳಮಸ್ತು.

ಮುವ್ವತ್ತಾರನೆಯ ಸಂಧಿ.

ಸೂಚನೆ॥ ಮಧುಮಥನನಕ್ರೂರನೊಡನಾ । ಮಧುರೆಯನುಪೊಕ್ಕಂತೆಭಕ್ತನ । ಮಧುರಸೋಕ್ತಿಗ
ಳಿಂದಬೀಳ್ಕೊಳಿಸಿದನುನಿಜಗೃಹಕೆ ॥ ... ...

ಪದನು॥ ಅರಸಕೇಳಕ್ರೂರನಚ್ಯುತ । ನಿರವನಾಜಲದೊಳಗೆಕಾಣದೆ । ಹೊರಳುತೆದ್ದನುಕೃಷ್ಣ ಕೃಷ್ಣ ಕೃಪಾಕರನೆಯೆ
ನುತ ॥ ಸುರಿವಸುಖಬಾಷ್ಪದಲಿಕರಗುತ । ತಿರುಗಿಮುನ್ನಿದ್ರಾರಥಾಗ್ರದೊ । ಳಿರಲುಕಂಡನುಕೌತುಕಾನ್ವಿತನಾಗಿಹರಿಬಲರ ॥
ತ್ಯಕರ್ಮವಮಾಡಿಸಲಿಲವ । ನುತ್ತರಿಸುತಕ್ರೂರನೈತಂ । ದುತ್ತಮಶ್ಲೋಕಾಂಘ್ರಿಯಲಿತಲೆವಾಗಿನಿಂದಿರಲು ॥ ಇತ್ತಬಾರೈಕಾ
ರೇತಕೆ । ಹತ್ತಿರಕೆಬರಲೊಲ್ಲೆನಿನ್ನಯ । ಚಿತ್ತದಲಿಹೇಳೇನುಸಂಶಯವೆಂದುಹರಿನುಡಿದ ॥ ೧ ॥ ಜಲದಲಿಕ್ಕಿಸ್ಥಳದಲಂಬುಜ ।
ಕಜಲಕ್ಕದುಭುತವನಾವದ । ನುಳಿಸೆಮೇನುವಕಂಡೆನೀತಾಬಲ್ಲೆನಿಂಗಿತವ ॥ ಹೊಲಬುದಪ್ಪಿದನಂತೆನಾಲ್ದೆಸೆ । ಗಳನುತನ್ನನು
ೀಳ್ಪೆಹೇಳ್ಪೆ । ಬಳಲಿಸದೆತನ್ನುವನೆನಲ್ಕಿಂತೆಂದನಕ್ರೂರ ॥ ೨ ॥ ಜಲದೊಳಿಕ್ಕಿಸ್ಥಳದೊಳಂಬರ । ತಳದೊಳಕ್ಕದುಭುತಗಳೇ
ನೆ । ನೊಳವುಕಂಡೆನದೆಲ್ಲವನುನಿನ್ನಂಘ್ರಿಪಂಕಜವ ॥ ಜಲಜದೃಶಕಂಡಂತೆಮಾಯಾ । ಜಲಧಿಯೀನಿನ್ನೊಂದುಮಾಯೆಗೆ । ಹೊ
ಬುದಪ್ಪಿದರೊಳಗೆಚಿತ್ತವಿಸೆಂದನಕ್ರೂರ ॥ ೩ ॥ ಸಚ್ಚಿದಾನಂದೈಕರಸವಹ । ನಿಚ್ಚಟನಿಜಸುಖವನರಿಯದೆ । ಮಚ್ಚಿಮಾ
ನಾಮಯವಿಷಯಸುಖಲೇಶದನುಭವಕೆ ॥ ಕಚ್ಚಿಂ ರ,ಕಿನೆಯಿ.ರಲುಮನ । ಮಚ್ಚಿದಕಟಲೋಕವೇತ । ಕ್ಕಚ್ಚಿಗಂಬಡುತಿ

ಹುದುಕರುಣಾವನಧಿಕೇಳೆಂದ ॥೫॥ ಹತ್ತಿರಕೆಬಹಬುದ್ಧಿಯನುನಿಜ । ಚಿತ್ತದಲಿಕರುಣಿಸಿದಹಲ್ಲದೆ । ಮತ್ತೆಒಡೆನಾನೆಂತುಕಾ
ಬೆನದೆಂತುಸಿರಿಪದನ ॥ ಉತ್ತಮೋತ್ತಮನಿನ್ನನಾಯಾ । ಮತ್ತಕಾಶಿನಿಯುಪದಗಳಕೆಯ್ಯೆ । ಯ್ಯೆತ್ತಿಪ್ರೇಮದವಂದಿಪನುಜಯಜಯ
ಜಯಮನವೋಯೆಂದ ॥೬॥ ಎನಲುನಗುತಪ್ಪಿದನುಕರುಣಾ । ವನಧಿರಥದೊಳುಕುಳ್ಳಿರಿಸಿಕೊಂ । ಡನುಪಮಾನಂದಾಬ್ಧಿಯೊ
ಳಗೋಲಾಡುವನನೋಡಿ ॥ ಅನುಪಮನನೆನೆದಿರ್ದಪನೆನಗೇ । ಕಿನಿತುಕೌತುಕಬುದ್ಧಿನಿನಗೆಂ । ದೆನುತನಿಜಭಕ್ತನನುಮೃದುಪವಿ
ದನುಕರುಣದಲಿ ॥೭॥ ನಡಸಿದನುನೃಪರಥವನಡಿಗಡಿ । ಗೊಡಲನೋಲವುತರಾಮಕೃಷ್ಣರ । ಕಡುಚೆಲುವಮೂರ್ತಿಯನು
ಕಂಗಳುದಣಿಯಲೀಕ್ಷಿಸುತ ॥ ಕಡಲಮಂಗಳೇನರಿಯದೀವೆ । ಗ್ಗಡಿಗಳನುಘಟಿಸಿದಳಕಂಗಳ । ಲೆಡಹಿಕಾಣದೆಕಮಲಭವಭವನ
ಲೇಂಕವಿದಲಕ್ಷರ ॥೮॥ ಎನುತಮನದಲಿಕಂಗಳಲಿವಾ । ಕಿನಲಿಪರಿಯನುನೆನವುತೀಕ್ಷಿಸು । ತನುನಯನದಲಭಿವರ್ಣಿಸುತಮಾ
ರ್ಗಕ್ರಮವನುರದು ॥ ಜನಪಕೇಳಕ್ರೂರನೈದಿದ । ನನುಪಮರುಸಹಿತಾವ್ರಜಚ್ಛರಿ । ಜನನಮರಣಕ್ಲೇಶವನುಮರೆಯುರೆತದಾ
ಶ್ಚ್ರರು ॥೯॥ ಬಾರದಿರಕ್ರೂರನೊಡನಸು । ರಾರಿಬಲರೆನುತಲ್ಲಿಗಲ್ಲಿಗೆ । ದಾರಿಯಿಕ್ಕಿಲದಲ್ಲಿತತ್ತದ್ದೇಶಜನನಿಕರ ॥ ಹಾರು
ತಿರ್ದುದುಮಾಯನಂಗಳ । ಭೂರಿಸಂದಣಿಯಲ್ಲಿಬಳ್ಳಕದ । ನಾರುಹವಣಿಸಬಹುದುಬಹಳೋತ್ಸವದಸಂಭ್ರಮವ ॥೧೦॥ ಇಳಿದು
ಜನವರಾಮಕೃಷ್ಣರ । ಚೆಲುವಮೂರ್ತಿಯಕಂಡುಕಣ್ಣಲಿ । ಮುಳುಗಿಮೊಗದಿಂಟಿದರುಮಾಣದೆತನ್ಮುಖಾಂಬುಜವ ॥ ಲಲಿ
ತಮಧುರಸ್ಮೇರನಯನ । ಸ್ಖಲಿತಸುಧೆಯನುಭಳ್ಳಿರೆಭಾಪುರೆ । ನಳಿನಭವನಸೃಷ್ಟಿಗಿಂದಿನಲಾಯ್ತುಫಲವೆಂದ ॥೧೧॥ ಅಂಗನೆ
ಯರೊಡಲೊಳಗೆಕಾಮನ । ಹೊಂಗರಿಯಹೊಸಬಂಣಬಾಗಿಸಿ । ಬೇಂಗೆಮಾಡಿದುದೇನನೆಂಬೆನುತಾಪವನುತುಂಬಿ ॥ ಕಂಗ
ಳ್ಮೈದವುತೃಪ್ತಿಯನುಹರಿ । ಯಂಗಲಕ್ಷ್ಮಿಯನೀಕ್ಷಿಸುತಸ । ರ್ವಾಂಗದಲಿಸಿಲುಕಿತ್ತುತೆತ್ತುದುತನುಮನಧನವ ॥೧೨॥ ಅವ
ನಿಪತಿಕೇಳ್ಕೃಪೆಯಲಿಂತವ । ರವರಕಾಣಿಸಿಕೊಳುತಪುರುಷಾ । ರ್ಥವನುಕರುಣಿಸುತೆಲ್ಲರಿಗೆಕರುಣಾಕಟಾಕ್ಷದಲಿ ॥ ಅವರಕ
ಣುಮನಗಳನುಬಲವನಾ । ಧನರುವಾಸನಿಸುತ್ತನಡದರು । ಸವನಿಸದೆಸೌಹಾರ್ದದಲಿಮಧುರಾಪುರಾಂತರಕೆ ॥೧೩॥ ಅತ್ತಲ
ನ್ನಿಗಗೋಪರಾಪುರು । ಷೋತ್ತಮಾಕ್ರೂರರಬರವಹಾ । ರುತ್ತನಂದಾದಿಗಳುಮಧುರಾಪುರದಪೊರಪೊಳಲ ॥ ಹತ್ತಿರದುಪವನ
ದೊಳಗೆಬಿಟ್ಟರು । ವಿಸ್ತರಿಸಿಬೀಡಿಕೆಯಭಂಡಿಗ । ಳೊತ್ತರಿಸೆಯಿಳಿದಲರುಗಳತಣ್ಣೆಲರನೆಳಲಿನಲಿ ॥೧೪॥ ಬಂದರಲ್ಲಿಗೆರಾಮ
ಕೇಶವ । ಗಾಂದಿನೀನಂದನರುಬರುತರ । ವಿಂದನಾಭನುನಗುತಲಕ್ರೂರನನುಕೈವಿಡಿದು ॥ ಎಂದನೀರಥಸಹಿತಹೋಗಾ । ಮುಂ
ದೆತಾವೀಯಿರುಳನಿದರೊಳು । ಹಿಂದುಗಳದ್ವೈತಹೆವುತಡೆಯದೆಮನೆಗೆನಡೆಯೆಂದ ॥೧೫॥ ಹೋಗುಮನೆಗೆಂದೆಂಬಕರುಣಾ ।
ಸಾಗರನಮೊಗನೋಡಿಮಿಗೆತಲೆ । ವಾಗಿಕಂಗಳಲೊಗುವಶೋಕಾಶ್ರುಗಳಪೂರದಲಿ ॥ ತೂಗಿದನುನಿಜಶಿರವವಿಹ್ವಲ । ನಾಗಿಕೃ
ಷ್ಣಪದಾಬ್ಜವಿರಹದ । ಬೇಗೆಯಲಿಬೆಂಡಾಗಿಬಿನ್ನಹವೆಂದನಕ್ರೂರ ॥೧೬॥ ದೇವಮನೆಯೆಂದೇನುತೊಳಲುವ । ಜೀವರಿಗೆನಿ
ಸ್ಸಂಸ್ರೃಯುಗರಾ । ಜೀವವಿದೆಲಾಮನೆಜಗಕ್ಕಕುತೋಭಯಸ್ಥಿತಿಗೆ ॥ ಅವುದೀಮನೆಮಕ್ಕಳೆಂಬೀ । ಭಾವಭೇದಭ್ರಾಂತಿವಿಫಲ
ವ । ಲಾವಿಚಿತ್ರಸ್ವಪ್ನವಿಭ್ರಮವೆಂದನಕ್ರೂರ ॥೧೭॥ ಬಿಟ್ಟುನಿನ್ನೀಚರಣಕಮಲದ । ವಿಷ್ಟರದಸನ್ನಿಧಿಯದೆಂತೈ । ಕಷ್ಟಮಾತಿ
ತಾಹೆನೊಹೆನೆನ್ನಯಮನೆಗೆನೀನೆಂತು ॥ ಬಿಟ್ಟುಕಳುಹುವೆಶರಣನನುದಯ । ಗೆಟ್ಟುಹರಹರಪರಮಕರುಣಾ । ಸೃಷ್ಟಿಗಕಟಕಟೇನು
ಬಾಹಿರನಾದೆನೇನೆಂದ ॥೧೮॥ ಆದಲಮ್ಮೆಸುತನ್ನಮನೆಯಲಿ । ಬೀಡಿಕೆಯಚಿತ್ತವಿಸಿಕೃಪೆಯನು । ಮಾಡುವುದುನಿನ್ನವನನುನಾ
ನೊಸನಾಥನೆಂಬುದನು ॥ ನಾತರಿಸಿತೋರಿಸುವುದಿದನೇ । ಬೇಡಿಕೊಂಬೆನುಚರಣಕಮಲವ । ನೋಡಿಸಂತಸವಡಲಿತನ್ನವರೆಂ
ದನಕ್ರೂರ ॥೧೯॥ ಮತ್ತೆತನ್ನಯಪಿತೃಗಳಸ್ತ್ರಯು । ತೃಪ್ತಿಪಡೆಯಲಿದೇವತೆಗಳನ । ಗ್ನ್ಯಾದಿಕಸಂತುಷ್ಟರಾಗಲಿಸಲೆಹುತಾಶನ
ರು ॥ ಕೃತ್ಯವನುತೀರಿಸಲಿನಿಮ್ಮಡಿ । ಯುತ್ತಮಾಂಘ್ರಿಸರೋಜತೀರ್ಥವ । ನಿತ್ತುತನ್ನಯಗೃಹವಪಾವನಮಾಡಬೇಕೆಂದ ।೨೦।
ಬಲಿಯದಾನವಪಾದಕಮಲವ । ತೊಳೆದುಭುವನಶ್ಲಾಘ್ಯನಾಗನೆ । ನೆಲಸನೇಸುರರಾಜತೇಜದಬಹಳವಿಭವದಲಿ ॥ ಸಲುಗೆವಡೆ
ಯನೆನಿನ್ನಪಾರ್ಶ್ವದ । ಲೊಳಗೆನಿನ್ನವನೆನಿಸಿಕೊಳ್ಳನೆ । ಜಲಜಗೃಹತತ್ಪಾದತೀರ್ಥವಕರುಣಿಸೊದೆಂದ ॥೨೧॥ ದೇವನಿನ್ನೀ
ಚರಣಕಮಲನ । ಪಾವನೀಜನವಾರಿತ್ರಿಜಗ । ತ್ಪಾವನವಲಾಗಂಗೆಯೆನಿಸಿಪವಿತ್ರಕರವೆನಿಸಿ ॥ ಆವಿರಿಂಚನುತೊಳೆದನಾಗೌ ।
ರೀವರನುಧರಿಸಿದನುಶಿರದಲಿ । ದೇವಲೋಕವನೈದಿಸಳೆಸಗರಾತ್ಮಜರನೆಂದ ॥೨೨॥ ಮುನ್ನಜನಿಸಿದಗಂಗೆಪುನರು । ತ್ಪನ್ನ
ವಾಗಲಿಲೋಕಪಾವನೆ । ತನ್ನಮನೆಯಂಗಣದಮಧ್ಯದಲೆಲೆಕೃಪಾನಿಧಿಯೆ ॥ ನಿನ್ನಚರಣದದಾಸನಾನೆಂ । ಬುನ್ನತೋನ್ನತತೇ
ಜವನುಸಂ । ಪನ್ನಗುಣವಾರಿಧಿಯೆಕರುಣಿಸಬೇಹುದೆನಗೆಂದ ॥೨೩॥ ಬಿಡೆನುನಿನ್ನಪದಾರವಿಂದವ । ನೊಡೆಯಕರುಣಿಸುತ
ನ್ನಮನೆಯಲಿ । ಬಿಡಿಸುವುದುಬೀಡಿಕೆಯನೆಂದಕ್ರೂರನಂಘ್ರಿಯಲಿ ॥ ಬಿಡದೆಪೊರಳುತ್ತಿರಲುಕಂಬನಿ । ದೊಡದುತಕ್ಕೈಸುತ್ತವಿ
ನವ್ಯ । ದಡವಿಸಂತವಿಸುತ್ತಸರ್ವೇಶ್ವರನುನೇಮಿಸಿದ ॥೨೪॥ ಬಹೆನುತಾನೆಲೆತಂದೆಪರಿಜನ । ಸಹಿತನಿನ್ನಾಲಯಕೆಕೊಂ
ಡೀ । ಕುಹಕಿಮಾತುಲಕಳಿದುಬಾಂಧವಜನವಸಂತವಿಸಿ ॥ ವಿಹಿತವೆನಗಿದುತನ್ನಭಕತರ । ಗೃಹದಲಾರೋಗಿಸುವವ್ರೋಲೆಸ ।

ಗಹುದೆಂತುಷ್ಟಿಜಡಾಗ್ನಿಹೋತ್ರದಲೆಂದನಸುರಾರಿ ॥ ೨೫ ॥ ಎಂದುಕ್ತಿವಿಡಿದನುನಯದಲಾ । ಗಾಂದಿನೀತನಯನನುಕಳುಹಿದಾ ।
ಕುಂದನೀಳದನುರಥನನಗ್ರಜಸಹಿತನಲವಿನಲಿ ॥ ಕೊಂದನಕಟುವಿಧಿಯೆನುತರಥ । ದಿಂದಪುರವನುಹೊಕ್ಕುತನ್ನಯ । ಮಂದಿರವ
ನೈದಿದನುವೈಷ್ಣವನರೆಸನನುಕಂಡು ॥ ೨೬ ॥ ಬೀಳುಕೊಟ್ಟಕ್ರೂರನನುಶಿರಿ । ಲೋಲರಾಮರುಪುರದಬಾಹ್ಯವಿ । ಶಾಲವನದ
ಲಿಬಿಡಿಸಿಸಂವರಣೆಗಳ ಸಂಘಗಳ ॥ ಸಾಲೆಸೆಯಲಾಕೆಳೆಯಗೋಪರ । ಮೇಳದಲಿಕಡೆಹಗಲಜಾವದ । ವೇಳೆಯಲಿಹೊರವಂಟರೊ
ಪ್ಪಿರಲೀಕ್ಷಿಸುತಹೊಳಲ ॥ ೨೭ ॥ ಕೋಟೆಗಳನವರತ್ನಚಿತ್ರ । ಸ್ಫಟಿಕದರಚನೆಗಳವಜ್ರಕ । ವಾಟನಿಕರದಕನಕನಿರ್ಮಿತ
ತುಂಗಗೋಪುರದ ॥ ಮಾಟಿಸುವಪರಿಸರಪುರೋದ್ಯಾ । ನಾಟವಿಯರನ್ಯೋಪವನತರು । ಕೋಟರದಕಮನೀಯಪುರವನುಕಂ
ಡನಸುರಾರಿ ॥ ೨೮ ॥ ಪೊಳಹೊಳಪನವಕನಕಹರ್ಮ್ಯ । ಸ್ಥಳದಶೃಂಗಾಟಕದಮಾರ್ಗದ । ಕೆಲದಲೆಸವಾಶ್ರೇಣಿಗಳಸಭೆಗಳ
ಮನೋಹರದ ॥ ಲಲಿತಘನನೈತೂರ್ಯಮುಕ್ತಾ । ಫಲಮಹಾಸ್ಫಟಿಕೇಂದ್ರನೀಲಾ । ವಳಿಯವಲಯಭಿತ್ತಿಗಳವೇದಿಗಳರಚನೆ
ಗಳ ॥ ೨೯ ॥ ಹೊಳವಹೆಸಭಿತ್ತಿಗಳರತ್ನ । ಸ್ಥಳದಕೆಂಗೊಳಿಸುವಗವಾಕ್ಷಾ । ವಳಿಯಲಾಡುವಬರುಹಿಮಾರಾವತಮ್ರದುಸ್ವ
ನದ ॥ ತಳಿಗೆಗಳತೋರಣದಗುಡಿಗಳ । ನೆಳಲುವರಗಳತಿಂಥಿಣಿಯಬೀ । ತಳತರುಘ್ಟಯೆಯಲಿಮೆರವಾಪುರವರವಕಂಡ ॥ ೩೦ ॥
ಅಂಗಣದವೀಧಿಗಳಧರವಿಡಿ । ದಂಗಡಿಯಪುಷ್ಪೋಪಕರಣದ । ತುಂಗರಚನೆಯರಾಜಮಾರ್ಗದವರಪತಾಕೆಗಳ ॥ ಪಣ್ಣೊನೆ
ಯಕದಳಿಗಳಪೂಗವ । ನಂಗಳಲಿಪುರಲಕ್ಷ್ಮಿನೋಳ್ಪರ । ಕಂಗೊಳಿಸಲೀಕ್ಷಿಸುತನಡದರುರಾಮಮಾಧವರು ॥ ೩೧ ॥ ಹೇಮ
ಕನಕದಪೂರ್ಣಕಲಶಂ । ಗಳಲಿತನ್ಮುಖನಿಹಿತದರ್ಪಣ । ಗಳಲಿಧಾನ್ಯಾಕ್ಷತಫಲಾಂಕುರಪಲ್ಲವಂಗಳಲಿ ॥ ಹೊಳಹೊಳವನವರತ್ನ
ದೀಪಾ । ವಳಿಗಳಲಿಲಾಜೇಕ್ಷುದಂಡಂ । ಗಳಮಹಾವಿಭವದಲೆಸೆವಪುರಲಕ್ಷ್ಮಿಯನುಕಂಡ ॥ ೩೨ ॥ ಬಾರದಿರನಕ್ರೂರನೊ
ಡನೆಸು । ರಾರಿಬಲರೆಂದಲ್ಲಿಗಲ್ಲಿಗೆ । ಸಾರಿಸಿದಕಸ್ತೂರಿಯಕುಂಕುಮಚಂದನಂಗಳಲಿ ॥ ಭೂರಿಮಾರ್ಗದಚಪ್ಪರದವಿ । ಸ್ತಾರವಪ್ರೊ
ಪ್ರವರಂಗವಲಿಗಳ । ಚಾರುರಚನೆಯಪೂವಲಿಯಪುರರಚನೆಯನುಕಂಡ ॥ ೩೩ ॥ ಆನೆಗಳಕುದುರೆಗಳತೇರ್ಗಳ । ಮಾನವ
ರದಾನವರಭೂಷೆಯ । ಮಾನವಂತರವೀರಪರಿವಾರದಪಸಾಯತರ ॥ ಜಾನಪದಜನಪೌರಜನಸಂ । ಧಾನವನುಮಾಳ್ಪಮರಶಿ
ಷ್ಟಜ । ನಾನುರಂಜಿತಮಂತ್ರಿಗಳಪುರಲಕ್ಷ್ಮಿಯನುಕಂಡ ॥ ೩೪ ॥ ಕಂಡುಮರಳುವಧರೆಯರಾಯರ । ಮಂಡಲಾಧೀಶ್ವರರ
ಸುಭಟರ । ತಂಡವನುಮುಂಕೊಂಡುಕಾಣಲುಬಹಮಹೀಶ್ವರರ ॥ ತಂಡವನುಕಂಸನಲಿಸಲುಗೆಯ । ದಂಡನಾಥರಮಾಡಿಮು
ಖದು । ದ್ದಂಡತೇಜದವೀರರನುನೋಡುತ್ತನಡೆತಂದ ॥ ೩೫ ॥ ಡೊಕ್ಕಣಿಯಗವಣಿಗಳಕೋಟೆಯ । ಕೊಂಕುಗಳಕೊತ್ತಳದ
ತೆನೆಗಳ । ವಂಕದುರುಪರಿಧಿಗಳನಾನಾಯಂತ್ರಕೋಟಿಗಳ ॥ ಅಂಕದೊಡ್ಡವಣೆಗಳಬಲುಭಾ । ರಂಕದುರ್ಗವನೀಕ್ಷಿಸುತಬಲ ।
ಪಂಕಜಾಕ್ಷರುಹೊಳಲಹೊಗುತ್ತಂದರುವಿನೋದದಲಿ ॥ ೩೬ ॥ ಆಮಹಾಪುರಭವನನಿಕರದ । ಸೋಮಸೂರಿಯವೀಧಿಗಳಸಂ ।
ಗ್ರಾಮಧೀರರುಕೇರಿಕೇರಿಗಳೊಳಗೆನಡೆತರಲು ॥ ರಾಮಮಾಧವರೆಸದರಂದಾ । ಭೂಮಿಲಂಬದಪುರಜನದಲು । ದ್ದಾಮವಿಕ್ರ
ಮರಖಿಳಜನಮನಗಳನುಮೋಹಿಸುತ ॥ ೩೭ ॥ ದೂರದಿಂದಾರಾಮಕೃಷ್ಣರು । ದಾರಮೂರ್ತಿಯನೀಕ್ಷಿಸುತಪರಿ । ವಾರಪು
ರಜನದೇಶಜನಗಳುದಾರಕೀರ್ತಿಗಳ ॥ ಭೂರಿತೇಜೋಗುಣದರೂಹಿನ । ದಾರಲಕ್ಷ್ಮಿಯಬಹಳಪೌರಾ । ವಾರದಲಿಜನಮೂ
ಡಿಮುಳುಗಾಡಿದುದುನಿಮಿಷದಲಿ ॥ ೩೮ ॥ ಬರಲುಪುರಜನಕಾಣಿಕೆಯನಿ । ತ್ತಿರದಿದಿರುಗೊಂಡರ್ಘಪಾದ್ಯಾ । ದ್ಯುರುತರದಪೂ
ಜೆಯಲಿಮನ್ನಿಸಿಚರಣಯುಗಳದಲಿ ॥ ಶಿರವೆರಗಿಕಂದಣಿಯೆಬಲಕೃ । ಷ್ಣರನುನಡೆನೋಡುತ್ತಸುಖಸಾ । ಗರದಲೋಲಾಡುತ್ತ
ಲಿರ್ದುದುಸಕಲಜನಸಹಿತ ॥ ೩೯ ॥ ಬೆರಸಿಸಾಗರಜಲವನದಿಗಳು । ಮರಳಲರಿಯದವೋಲುಕೃಷ್ಣನ । ಪರಮಮಂಗಳದಿವ್ಯ
ಮೂರ್ತಿವಿಳಾಸಲಕ್ಷ್ಮಿಯನು ॥ ಬೆರಸಿದಾಪುರಜನದಕಂಗಳ । ಮರಳುದಲೆಯನದಾರುಕಂಡರು । ಇರದೆಬೀದಿಯಚಿತ್ರದಂತಿ
ರ್ದುದುಜನಸ್ತೋಮ ॥ ೪೦ ॥ ಪೇಳುವೆನುತಾನೇನನುತ್ಸವ । ದೇಳಿಗೆಯಸಂಭ್ರಮವನಾಜನ । ಜಾಲದಾಪಿಭೂರ್ತಹರ್ಮ್ಯೋ
ನ್ನತೀಕದುರುವಣೆಯ ॥ ಓಲಗಿಸೆವೈದಣಿಯದೀಕ್ಷಿಸು । ವಾಲಿಗಳುದಣಿಯವ್ರಪದಸ್ಪರ । ಹೇಳಿದಣಿಯವ್ರನಾಲಗೆಗಳಜ್ಯೋತ
ನಗುಣಗಣವ ॥ ೪೧ ॥ ಅರಸಕೇಳಾಪುರವಧುಗಳಂ । ಬುರುಹನಾಭನರಾಜಮಾರ್ಗಕೆ । ಬರಲುತದ್ವಾರ್ತೆಯನುಕೇಳುತಕೇ
ಳುತವೆತನುವ ॥ ಮರದುಕಿವಿವೇಟದಲಿತನ್ಮುಖ । ಸರಸಿರುಹಸಂದರುಶನಕೆಕಾ । ತರಿಸುತಿರದೇರಿದರುಮಣಿಮಾಡಂಗಳನುನ
ಗಿಸು ॥ ೪೨ ॥ ಕೆಲರುಣುತ್ತುಣುತಿರ್ದವರುಹರಿ । ಬಲರಬರವನುಕೇಳಿಕಾಮಾ । ಕುಳಿತೆಯರುಬೀಸಾಡಿಹರಿವಣಗಳನುತವ
ಕವಮನೆ ॥ ನಳಿನಮುಖಿಯರುನಯನಜನ್ಮದ । ಫಲವಪಡೆದೆವೆನುತ್ತಹರ್ಮ್ಯ । ವಳಿಗಳನುಹತ್ತಿದರುಹರಿಯನುಕಾಂಬತವಕ
ದಲಿ ॥ ೪೩ ॥ ಕೆಲರುತೊಟ್ಟರುಕಡಗವನುಕಿವಿ । ಗಳಲಿಕಾಲಂದುಗೆಗಳನುಕೈ । ಗಳಲಿಕಿವಿಯೋಲೆಯನುಬೆರಳ ಳಲಿಟ್ಟರುಟ್ಟ
ರನು ॥ ಕಳದುಬಿಸುಟುಡಿಗಳಲಿಸುತ್ತಿದ । ರೊಲಿದುಪೂಮಾಲೆಗಳನಾಮುಡಿ । ಗಳಲಿಮಣಿಮೇಖಲೆಗಳನುತುರುಬಿದರುತರಳೆ
ಯರು ॥ ೪೪ ॥ ಒಂದುಕಣ್ಣಲಿಕಾಡಿಗೆಯನಕ । ಟಿಂದುವದನೆಯರೆಚ್ಚುತವೆಸು । ತ್ತೊಂದುಕಣ್ಣನುಮರದರಚ್ಚಲುಪೊನ್ನ

ದೊಡಿಗೆಗಳ || ಬಂದನುಳಿದೊಂದೊಂದತೆರೊಟ್ಟರು | ಬಂದರಾಭುವನಾಧಿಪತಿಗೋ | ಪಿಂದನನುಕಾಂಬೊಂದುಬಹಳೋತ್ಸವದ ತವಕದಲಿ ||೪೫|| ಕೆಲರುತೈಲಾಭ್ಯಕ್ತೆಯರುವರ | ಲಲನೆಯರುಮಜ್ಜನವಮಾಡಿದರು | ಕೆಲರುಶಿಶುಗಳಗೂಡುತವೆಬೀಸಾಡಿ ಶಿಶುಗಳನು || ಕೆಲರುಕತ್ತುರಿಚಂದನವತಲೆ | ಗಳಲಿಪೂಸಿಕೊಳುತ್ತಹರಿಯಾ | ಕುಳಿಯರಾದರುಪರಮಪುರುಷೋತ್ತಮನದರು ಶನಕೆ ||೪೬|| ಬಸಗೆವರೆಗಳಧನಿಗೆಸತಿಯರು | ಬಿಸುಟುಮನವಾರ್ತೆಯನುನವಿಸ್ಮ್ರಾ | ಕುಸುಮಬಾಣನತಂದೆಬಂದನೆನುತ್ತ ತಮತಮಗೆ || ಮಿಸುಪವೊಲೆಗಳಪಾಳಿಕಾತಿಯು | ರಸುಗಳನೆಕಾಣಿಕೆಯನಿತ್ತು | ಕ್ರಿಸುಕಲಿರ್ದರುಕೂಡಿಮನೆಮನೆಗಳಗವಾ ಕ್ಷದಲಿ ||೪೭|| ಅರಳುಗಂಗಳಚೆಲುವಬಿಂಬಾ | ಧರಮೃದುಸ್ಮಿತದಂತಪಙ್ಕ್ತಿಯು | ಬಿರಿಮುಗುಳನಾಸಿಕದಕದಪಿನಚಾರುಕುಂ ಡಲದ || ಕೊರಳಮುತ್ತಿನಹಾರಕುಚಯುಗ | ಭರದಸುಳಿಗುರುಳುಗಳಕಾಮಿನಿ | ಯರುಗವಾಕ್ಷಂಗಳಲಂಕರಿಸಿದರುಮುಖ ಗಳಲಿ ||೪೮|| ನಾರಿಯರುನಡೆನೋಡಿಕೃಷ್ಣನ | ಚಾರುಮಂಗಳಮೂರ್ತಿಯನುದಾ | ತಾರನಾಗೆಮಗೆಲ್ಲರಿಗೆಧರೆಗೊಡೆಯನಾಗೆ ನುತ || ಭೂರಿಪುಷ್ಪಾಂಜಲಿಯನಿತ್ತುಪ | ಚಾರವನುಲಾಜಾಕ್ಷತಾಂಕುರ | ಸಾರನಯನಾಪಾಂಗವೀಕ್ಷಣಗಳಲಿರಚಿಸಿದರು ||೪೯|| ಈತನೀದೇವಕಿಗೆಗಹಸಂ | ಜಾತನಾದನುಪೂರ್ವದಲಿಸಾ | ಖ್ಯಾತವಿಷ್ಣುವೆಗಡದುರಾತ್ಮನಕಂಸಭೂಪತಿಯ | ಭೀತಿಯಲಿವಸು ದೇವನೊಯ್ದಿರಿ | ಸೀತನನುಗೋಕುಲದಲಿಂತಾ | ನೀತಿವಿದತನುಬೆಳವುತಿರ್ದನುಗೋಪಸದನದಲಿ ||೫೦|| ಜಗವಸೃಜಿಸಿದ ಕಮಲಸಂಭವ | ನೊಗೆದನೀತನನಾಭಿಯಲಿಗಡ | ಹಗಲಿರುಳನೊಡೆಯರುಗಳೀತನನಯನಸಂಭವರು || ದಿಗಧಿಪರುಗಡದಾ ಸರೀತನ | ಜಗದಳಿವುಸೋಂಕದುಗಡೆಂತುಟೊ | ಬಗೆವಡೀತನಮಹಿಮೆಯೆನುತಿರ್ದುದುವಧೂನಿವಹ ||೫೧|| ಹಿರಿಯನೀತಂ ಗೀತನೀಶಶಿ | ಕಿರಣಕಮನೀಯಾಂಗನವನಿಯು | ಧರಿಸಿದಾಸಾಕ್ಷಾತಶೇಷನೆಬಲನುರೋಹಿಣಿಗೆ || ವರತನಯರೀಗೋಪರಿವ ರನು | ಚರರುಪುಣ್ಯಾತ್ಮಕರೆನುತಪಂ | ಕರುಹಮುಖಿಯರುಹೊಗಳುತಿರೆನಡೆತಂದರೀಕ್ಷಿಸುತ ||೫೨|| ನೋಡಿನೋಡಿಮು ಕುಂದನನುತನು | ಬಾಡಿಮನಮಥನಲಗುಮರುಮೊನೆ | ಮಾಡಿಮುಗುದೆಯರಿರಲುಮಾಡದಚಿತ್ರದಂದದಲಿ || ಆಡಲೇತಕೆ ಜಗದವಶ್ಯವ | ಕೂಡೆಚೆಲುವರಮೂರ್ತಿಯನುವಿಧಿ | ಮಾಡಿಸಿದನೆನುತಿರ್ದದಂದಾಸಕಲಜನನಿವಹ ||೫೩|| ಆವಮೋಹನ ಮೂರ್ತಿಯೋಮೇ | ಣಾವಪಾವನಕೀರ್ತಿಯೋರಾ | ಜೀವಲೋಚನನಕಟನೋಳ್ಪರಕಣ್ಣುಮನಂಗಳನು || ಲಾವಣಿಗೆಗೊಂ ಡನುಜಗತ್ರಯ | ಜೀವನಕೆತಾನೊಬ್ಬನೇದಿಟ | ಜೀವಚೇತನಮೂರ್ತಿಯಂಬುದನರುಪ್ರವಂತಿರ್ದ ||೫೪|| ಅಸತೀನಿಕುರುಂ ಬದೊಳಗಾ | ದೇಶಜನಪುರಜನಮಹಾವಾ | ರಾಶಿಯೊಳಗತ್ಯಧಿಕರೂಪೌದಾರ್ಯಗುಣಗಣದ || ಬೀಸುವಲೆಗಳಬಹಳಕಾಂತಿವಿ | ಳಾಸಹಾಸೇಕ್ಷಣದಲಾಬಲ | ಕೇಶವರುನಿತ್ಯಾತ್ಮಸುಖವನುಸಲಿಸಿದರುಜಗಕೆ || ಶ್ರೀಕೃಷ್ಣಾಯನಮಃ || ||೫೫||

ಅಂತು ಸಂಧಿ ೩೬ಕ್ಕಂ ಪದನು ೧೨೧೬ಕ್ಕಂ ಮಂಗಳಮಸ್ತು.

ಮುವ್ವತ್ತೇಳನೆಯ ಸಂಧಿ.

ರಜಕನ ಹರಣ.

ಸೂಚನೆ|| ಕೊಂದುರಜಕನನಾಸುದಾಮನ | ಮಂದಿರವನೀಕ್ಷಿಸಿಕುಬುಜೆಗಾ | ನಂದವನುಮಾಡಿದರು
ಮುರಿದರುಹರಿಬಲರುಧನುವ || ... ...

ಪದನು|| ಅರಸಕೇಳಾರಾಮಕೃಷ್ಣರು | ಬರುತಕಂಡರುರಾಜಮಾರ್ಗದ | ಲರವಣಿಸಿಪರಿಜನಸ್ಮೈತಹರಾಜರಜಕ ಸನು || ಮುರಿದಹುಬ್ಬಿನಬಿಟ್ಟಕಂಗಳ | ಬೆರೆಮೀಸೆಯಬಿಗಿದಬಿಂಕದ | ದುರುಳನನುನುಡಿಸಿದರುನೆರವಿಗಳೀಕ್ಷಿಸಲುನಗುತ || ನಿಲ್ಲುಹೋಗದಿರೆಲವೊನಮ್ಮನು | ಬಲ್ಲಿರೇನ್ಯೆನುಡಿಸಲೇತ | ಕ್ಕೊಲ್ಲೆನಿನ್ನೊಡೆಯಂಗೆನಾವಳಿಯಂದಿರೆಂಬರಲ || ಬಲ್ಲಿದನುನೀ ರಂಗಗಾರರಿ | ಗೆಲ್ಲರಿಗೆಲೇಸಾಯ್ತುಕೊಡುನಿನ | ಗುಳ್ಳವಸನದಲುತ್ತಮವನೆಮಗೆಂದನಸುರಾರಿ ||೨|| ಕೊಡುವುದಿಬ್ಬರಿಗೆರ ಡುವಸ್ತ್ರವ | ನುಡಲುತಕ್ಕುದನಕಟನಮ್ಮಗು | ಪೊಡವಿಯೀಜನರಾಯನಳಿಯಂದಿರುಗಳೆಂದೆನು || ಅಡಿಗೆರಗುತಿಬೆನೀನದೇ ತಕೆ | ಕಡೆಗಣಿಸಿಗರ್ವದಲಿಮುಂದಡಿ | ಯಿಡುವೆಹೋಗದಿರೆನಲುಮಡಿವಳನೆಂದನುದೆಮುಳಿದು ||೩|| ಅಡವಿಯಲಿಸಂಚರಿಸುವ ವರಿಂ | ಗುಡಲುತಕ್ಕುದಕಾಣೆನೀತಕೆ | ಬಡವುಗಳರೀವಸ್ತ್ರವನುಬಯಸುವಿರಿಬಣಗುಗಳು | ಉಡುವರಿವನೇನೀವುತನ್ನಯ | ಮಡಿಗಳಿಗೆಮಚ್ಚಿದಿರಿಬೀದಿಯ | ಕಡೆಯಲಿವೆಲಾವಸ್ತ್ರನಿಮಗುಡತಕ್ಕವೆಯುಂದ ||೪|| ಉರ್ಬಿಯೊಳಗೀನಿಮ್ಮಹೋಲುವ | ಗರ್ಬಿತರನಾಕಾಣೆನೀತಕೆ | ಕೊಬ್ಬಿಸವಿರಿಬರಿದೆರಾಜದ್ರವ್ಯವನುಬಯಸಿ || ತುಬ್ಬಿದರೆನೃಪನವರುನಿನ್ನನು | ಸರ್ಬಧನವನು ಕೊಂಡುಕಾಲಿಗೆ | ಕಬ್ಬುನದಕಡೆಯವನುತೊಡಿಸುವರಳಿಯದಿರಿಗೆಂದ ||೫|| ಮರೆಯಮಾಡಿಸಿಕೊಡುವೆನೀಪರಿ | ಮುರುಕಿ ಸಿದಡೊಲಿದಂತೆಕೆಡವರೆ | ಕುರುಬದಿರನಗರವಿದುಗಿರಿತಟವಲ್ಲವನವಲ್ಲ || ತೆರನನರಿಯಿರಿರಾಜನೀತಿಯ | ಬರಿದೆಸಾಯದೆಸೋ

ುದೆಲ್ಲರ । ಪರಿಯಲುಸುರದೆಹೋಗಿಬದುಕುವಡೆಂದುಖಳಜರೆದ ॥ ೬ ॥ ಎಲೆಮೂಜರೆಯದಿರಿಳೆಗಧೀಶ್ವರ । ನೊಳುಮಮಡಿಗಳ
ಂದುಬೇಡಿದ । ಡುಲಿವೆಮನಬಂಡಂತೆಘಡಹೋಗದಿರುಹೋಗದಿರು ॥ ಒಲಿದುಕೊಟ್ಟಡೆಬೇಸನೀಕ್ಕೆ । ಯೊಳಗೆತೋರುವೆನಲ್ಲ
ರ್ದಡೆ । ತಲೆಸಹಿತಮಡಿವರ್ಗತನ್ನದೆನುತ್ತಹರಿನುಡಿದ ॥ ೭ ॥ ಉಡಲುವಸ್ತ್ರವನಿಯ್ಯಲೇಸನು । ಕೊಡುವೆಗಡಲೋಗರಿಗೆ
ರಹರ । ಕಡುಕ್ಕಪಣತನವೇಕೆಹೋಹರೆಹೋಗಿನೀವೆನುತ ॥ ಜಡಿದುಲಕ್ಷ್ಮೀಪತಿಯಮಜ್ಞೆಯ । ನೆಡಹಿಕಾಣದೆಮಾಪಿಥಟ್ಟಿಬಿ
ಡದನಂತಃಪುರಕೆನಡವಂತಿರೆಸರಾಗದಲಿ ॥ ೮ ॥ ಬೇಡಿಕೊಳಲೇಕಕಟರಜಕನ । ನೋಡುಮಾಂಡೆಯಮಾಗಸನಾರೆಂ । ದಾ
ಿವನುಘಡಯನುತಸಂವರಿಸುತ್ತಮುಂಜರಗ ॥ ನೋಡಿಬಲಭದ್ರನಮೊಗವನೊಡ । ನಾಡಿಗಳನೆಳನಗೆಯರೋಷದ । ಲೀಡಿ
ವನಯನಚ್ಚಪಿಯುಳ್ಳಿದಿದನುಬೆಂಬತ್ತಿ ॥ ೯ ॥ ಅಟ್ಟರಜಕನತಲೆಯನುಗುರಲಿ । ಸೃಷ್ಟಿಪಾಲಕರೊಡೆಯನವನಿಯ । ಲಿಟ್ಟಕೆಡೆ
ುಲುಚಿವುಟಿಬೀಸಾಡಿದನುಬವರದಲಿ ॥ ಕೆಟ್ಟೆನೆನುತುಳಿದವರುಹೊರೆಗಳ । ಬಿಟ್ಟುಹಾಯ್ದರುದೆಶೆದೆಶೆಗೆಕಂ । ಗೆಟ್ಟುಕೃಷ್ಣನ
ೂಟಿಯೇಬೇಡೆನುತತಮತಮಗೆ ॥ ೧೦ ॥ ಕಂಡವರುಲೇಸಾಯ್ತುಖಳನು । ದ್ದಂಡತನಕಿದುಘನಪಯೆನುತಾ । ಪುಂಡರೀ
ಾಕ್ಷನನುಹೊಗಳಿದರಂದುಹರ್ಷದಲಿ ॥ ಗಂಡುಗಲಿಗಳುಬಳಿಕವಸನದ । ದಿಂಡುಗಳವೃತ್ತಮವನಃವಿದು । ಕೊಂಡುವುಳಿದುದ
ತ್ತರಾಗೋಪರಿಗೆಪರಿಜನಕೆ ॥ ೧೧ ॥ ಅದರೊಳೊಬ್ಬನುಚಿಪ್ಪಿಗನುಸೊಂ । ಪೊದವಿದಾಶ್ರೀರಾಮಕೃಷ್ಣರ । ಸದಮಳಾಮಳ
ೂರ್ತಿಗಳಸೌಂದರ್ಯಸಂಪದವ ॥ ವಿದಿತತೇಜವನೀಕ್ಷಿಸುತಪದ । ಪದುಮದಲಿತಲೆವಾಗಿತರ್ಪ್ಪ । ಸ್ತ್ರದಲಿಮಾಡಿದನಂಗಿಕೆಯ
ಂರುತರದಲಕ್ಷಣದಿ ॥ ೧೨ ॥ ಅಂಗಲಕ್ಷ್ಮಿಗೆತಕ್ಕಹೊಸಪರಿ । ಯಂಗಭೂಷಣರಚನೆಗಳಲಿಸ । ಮಂಗಿಕೆಯನೊಪ್ಪಿರಲುಸಿರ್ಮಿಸಿ
ಾವಭಕ್ತಿಯಲಿ ॥ ರಂಗನಾಥಾನಂತರಿಗೆಕೊಡ । ಲಂಗಸಾರೂಪ್ಯವನುಕೊಟ್ಟರ । ಥಾಂಗಧರನಿಷ್ಟಾರ್ಥಸಿದ್ಧಿಯನಿತ್ತನಾತಂಗೆ ॥
ೂಟ್ಟನಿರಿಗುಪ್ಪಸದಪಾಗಿನ । ಕಟ್ಟುದುಟಿಲೇವಳದಮಣಿಗಳ । ಪಟ್ಟಪೀತಾಂಬರದನೀಲಾಂಬರದನಿರುಗೆಗಳ ॥ ಇಟ್ಟಮಾಣಿಕುಂ
ಲದನೆಗೆಮೊಗ । ದಷ್ಟಭೂತಿಗಳೊಡೆಯರೆಸೆದರು । ಪಟ್ಟದಾನೆಯಮರಿಗಳಂತಾಜನದಮಧ್ಯದಲಿ ॥ ೧೩ ॥ ಮುಂಬೆಬರುತಮೆ
ಾಲೆಗಾರರ । ಮಂದಿರಂಗಳನೀಕ್ಷಿಸುತಗೋ । ವಿಂದರಾಮರುಕಂಡರೊಬ್ಬಸುಧಾಮನೆಂಬವನ ॥ ಮಂದಿರವನಿಜಭಕತಜನ
ೀ । ಮಂದಿರವನುರುವಿನಯಗುಣಮಣಿ । ಮಂದಿರವನಭಿನವಸುಪುಷ್ಪಾಮೋದಮಂದಿರವ ॥ ೧೪ ॥ ಅರಸಕೇಳಾರಾಮಕೃ
ಷ್ಣರ । ಬರವಕಾಣುತಪರಮಹರುಷಾಂ । ಕುರಿತಪುಳಕಿತಗಾತ್ರಸಂಭ್ರಸರೋಜಯುಗಳದಲಿ ॥ ಶಿರವೆರಗಿಕೈಗೊಟ್ಟುನಿಜಮಂ
ರಕೆಬಿಜಯಂಗೈಸಿತಂದಾ । ದರದಲಾರಾಧಿಸಿದನಂದುಸುಧಾಮನೊಲವಿನಲಿ ॥ ೧೫ ॥ ಪಡಿಗದಲಿಪರಮೇಷ್ಠಿವಂದಿತ । ನಡಿಗ
ನುತೊಳೆವೃತ್ತತೀರ್ಥವ । ನೊಡಲುನೆನೆಯಲುತಳಿದುಕೊಂಡುಕುಟುಂಬಜನಸಹಿತ ॥ ಅಡಿಗಡಿಗೆಮೈಯಿಕ್ಕಿಪುಳಕದ । ಗುಡಿ
ುಕೆಂಗಳಪೂರ್ಣಕಲಶದ । ಗಡಣದೊಸಗೆಯಬೋಲಗಿಸುತಿಂತೆಂದನವರೊಡನೆ ॥ ೧೬ ॥ ಹಿಂದೆನಾನಾಯೋನಿಮುಖದಲಿ ।
ಂದುದಕೆಫಲವಾಯ್ತುಪಿತೃಗಳು । ಸಂದರಕ್ಷಯಗತಿಗೆತನ್ನೀಕುಲಪವಿತ್ರತೆಗೆ ॥ ಇಂದುಸೇರಿದುದೆನ್ನಪುಣ್ಯದ । ಕಂದೆರದೆಸಾ
ಕ್ಷಾತವಿಷ್ಣುವೆ । ಮಂದಿರಕೆಬಹಬಹಳಭಾಗ್ಯೋದಯವಿದೆಂತೆಂದ ॥ ೧೭ ॥ ಕಾಣರಾವನಚರಣಕಮಲದ । ರೇಣುಗಳನಜ
ವಸುರೇಂದ್ರ । ಶ್ರೇಣಿಗಳುಹೊಗಳುವಡೆನಡೆಯವುನಿಗಮಕೋಟಿಗಳು ॥ ಕಾಣವೆನ್ನೀಕಂಗಳಂತೊ । ಪ್ರಾಣನಾಥನೆಶೌರಿ
ಮನಿ । ರ್ವಾಣಮೂರ್ತಿಯೆನುತ್ತಹೋಂಪುಳಿಯೋದನಡಿಗಡಿಗೆ ॥ ೧೮ ॥ ದೇವನಿನ್ನೀನಾಭಿಯಲಿರಾ । ಜೀವಭವನುದಯಿಸಿದ
ಂಬುದ । ಪಾವನಾಂಘ್ರಿಗಳಿವೆಯಲಾಮುನಿಹೃದಯಪಂಕಜದ ॥ ಜೀವನಂಗಳುಜಾನ್ಹವಿಯಪು । ಣ್ಯಾವಹಂಗಳುಕಂಡೆನಾನಿ ।
ನ್ನವಜನ್ಮಾಂತರಸಹಸ್ರದಸುಕೃತದಿಂದೆಂದ ॥ ೨೦ ॥ ಧನ್ಯರಾರೆನ್ನಂತೆಜಗದಲಿ । ಮಾನ್ಯರಾರೆಲೆದೇವದೇವರು । ಮನ್ನಿಸುತಮನೆ
ೂಲಿದುಬಿಜಯಂಗೈದಿರೆಂದೆನಲು ॥ ತನ್ನವೊಲುಸನಾಥರತಿಸಂ । ಪನ್ನಪುಣ್ಯರದಾರೆನುತಕರು । ಣಾರ್ಣವನಪದಕೆರಗಿಮಗುಳೆ
ಧಾಮನರ್ಚಿಸಿದ ॥ ೨೧ ॥ ಮಾಲೆಗಾರರದೇವನಾಶ್ರೀ । ಲೋಲರಾಮರನಿಂತುಸಂತಸ । ದೇಳ್ಗೆಯಭಿವರ್ಣಿಸುತತದ್ರೂಪ
ುಣಗಣವ । ಕಾಲಮೇಲಡೆಗೆಡದುಪರಮಕೃ । ಪಾಳುಗಳುನೀವಿಂದುಬಂದಲೆ । ನ್ನಾಲಯಕೆಕರ್ತವ್ಯವಾವುದುಬೆಸಸಬೇಕೆಂದ ॥
ವುದೆಂದೇನೆನ್ನಭಕ್ತರ । ಕಾವುದೇಕರ್ತವ್ಯವಲೆಸಂ । ಭಾವಿಸುವುದೇಕೃತ್ಯನವರಿಷ್ಟಾರ್ಥಸಿದ್ಧಿಯನು ॥ ಈವುದೇತನ್ನಿಷ್ಟ
ೇಳ್ಕೆ । ಜೀವದೊಡೆಯದಿಬಃಯೆನುತಕರು । ಣಾವಲೋಕನದಿಂದಮಯ್ಯದಡವೃತ್ತಹರಿನುಡಿದ ॥ ೨೨ ॥ ಬನೆಯಬಯಕೆಯನರಿ
ುಕೈಗಳ । ಮುಗಿದುಚಿತ್ತೈಸೊದುನಿಮ್ಮಡಿ । ಮಗನಸೇವೆಯನೆನುತಸುರಗಿಯಮೊಲ್ಲೆಮಲ್ಲಿಗೆಯ ॥ ಮಗಮಗಿಸುವೆಳೆತುಳ
ವನಮಾ । ಲೆಗಳಬೊಪ್ಪಿರೆರಚಿಸಿಕರುಣಾ । ಳುಗಳದೇವನಮುಂದಿರಿಸಿಮೈಯಿಕ್ಕುತಿಂತೆಂದ ॥ ೨೩ ॥ ನಿತ್ಯತೃಪ್ತಂಗೇನನೀ
ನು । ತೃಪ್ತಿಪಡಿಸುವೆನೆಂತುಲೋಕದ । ತೃಪ್ತಿರೂಪನನದ್ವಯನನವ್ಯಯನನಕ್ರಿಯನ ॥ ಪತ್ರಪುಷ್ಪಫಲಂಗಳನುನಿಜ । ಭಕ್ತ
ತ್ತರೆನಲಿದುದೇವರು । ತುತ್ತುಗೊಂಬುದನೊಮ್ಮೆಕೇಳಿದುಬಲ್ಲೆನಾನೆಂದ ॥ ೨೪ ॥ ಎಂದುಕೈಗಳಮುಗಿದುಚರಣ । ದ್ವಂದ್ವದ
ತಲೆವಾಗಿಬಹುವಿಧ । ಕಂದಮೂಲಫಲೇಕ್ಷುದಂಡಂಗಳನುಭಕುತಿಯಲಿ ॥ ಸಂದಭಾಗವತೋತ್ತಮನುನಲ । ವಿಂದಕೊಡಲದ

ನೆಲ್ಲವನುಕೃಪೆ | ಯಿಂದಕೈಕೊಳುಕೊಳುಮುನಿಗಳಿಂತೆಂದನಸುರಾರಿ ‖೨೬‖ ಬೇಡುವರವನುಮೆಚ್ಚಿದೆನುನೀ | ಮಾಡುವುಪಚಾರಕ್ಕೆನಿರ್ಮಳ | ಗೂಢಭಕ್ತಿಗೆವಿನಯಗುಣನಿರಹಂಮಮತೆಗಳಿಗೆ ‖ ಅಟಮೆಚ್ಚಿಸಲೇಕೆಕೊಡುವೆನು | ಬೇಡಿದಿಷ್ಟಾರ್ಥವನುಸಂಶಯ | ಬೇಡೆನಲುಕೈಮುಗಿದುಬಿನ್ನಹಮಾಡಿದನುಮುಗುಳೆ ‖೨೭‖ ಬೇಡುವೆನುನಿಜಚರಣಭಕುತಿಯ | ಬೇಡುವೆನುನಿಜಭಕುತಸಂಗವ | ಬೇಡುವೆನುನಿಜವನಿಸಮೈತ್ರಿಯಸಖೀಭಾವದಲಿ ‖ ಬೇಡುವೆನುಭವಭವದಲಿದನೆಲ | ನಾಡೆಸಲಿಸೂಡೆಂದೆನುತ್ತೀ | ಹಾಡಿದನುಕಳೆನರಸನಚ್ಯುತಸಂಭ್ರಮಕನುಬದಲಿ ‖೨೮‖ ಅಯಿತೇಳತ್ತೆಸುಮತೀ | ಪ್ರಾಯಸಿದ್ಧಿಯಸಿದ್ಧಿಕವಹಪರ | ಮಾಯುವನುನಿನ್ನಸ್ವಯಾನುಕ್ರಮವಿವರ್ಧನವ ‖ ಶ್ರೀಯನುತ್ತಮಕೀರ್ತಿಯನುನಿ | ಶ್ರೀಯಸಸನ್ಮೈಸ್ವರ್ಗಗತಿಗಳ | ನಾಯುವಂತನೆಕೊಟ್ಟೆನೆಂದನುವರವನಾತಂಗೆ ‖೨೯‖ ಸಲಿಸಿಬಲವನುಕಾಂತಿಯನುಬಲ | ಬಲಿಮಥನನಲ್ಲಿಂದಭಕುತನ | ನಿಳಯವನುಹೊರವಂಟುಬರುತಿರೆರಾಜಮಾರ್ಗದಲಿ ‖ ಲಲನೆಯೊಬ್ಬಳುಮುಂದೆಸೊಂಬ | ಟ್ಟಲಿಗಂಧವಹಿಡಿದುಡಶಿಪರಿ | ಮಾಸಿ

ಕುಬ್ಜಾಪರಿತ್ರಾಣ ಕಥೆ.

ಪೋಗುತ್ತಿರಲುಕಂಡರುಕಮಲಲೋಚನೆಯ ‖೩೦‖ ನಕ್ಕರೊಬ್ಬರನೊಬ್ಬರೀಕ್ಷಿಸು | ತಕ್ಕಟೇಸತಿಯೋಕೆಯನ್ವನ | ದುಕ್ಕಿಸೊಕ್ಕಿನಹರೆಯವೇಕೀಕೇಜವೀರೂಪು ‖ ತಕ್ಕದೈವಮುಪ್ಪೊರಡುವಿಧಿಕೃತ | ವಕ್ಕುಶಿವಶಿವನೋಡಿಯೆನುತಾ | ರಕ್ಕಸರಹಗೆನೋಡಿಕೆಳೆಯರನಾಕೆಗಿಂತೆಂದ ‖೩೧‖ ಆರುನೀನೆಲೆಕಾಂತೆಕಂಡಡೆ | ವಾರಿಜಾನನೆಚೆಲುವೆಕೈಯಲಿ | ದಾರಿಗೊಯಿದಪೆಗಂಧವನುಲೇಪನವನಾರಿದಕೆ ‖ ಭಾರಿಭಾಗ್ಯರುಯೋಗ್ಯರೇತಕೆ | ನಾರಿತಾನಿದರಂಗಶಿರಿತಾ | ವಾರುಬಲ್ಲೆಪ್ರಿಯೆಸುತವಮಾತಾಡಿಸಿದರಂಗಸೆಯ ‖೩೨‖ ಈವುದನುಲೇಪನವನಮಗೆಲೆ | ಗೀವುದಿಷ್ಟಾರ್ಥವನುನಿನಗಿದ | ಕಾವಸಂಶಯಬೇಡನ್ಮಸನೆಳಿಯಂದಿ ರಾವೆನುತ ‖ ದೇವದೇವನುನುಡಿಸಲಾರಾ | ಜೀವಲೋಚನೆಮನದೊಳಗೆಸಂ | ಭಾವಿಸುತವೊಗನೆಗಹಿಮಾತಾಡಿದಳುಹರಿಯೊಡನೆ ‖೩೩‖ ಲೇಸನಾಡಿದೆವೀರಮೋಹದ | ದಾಸಿಯಾನೀಭೋಜರಾಜಗೆ | ಯೋಸನಾರೊಯಿದಿತ್ತಡನುಲೇಪನವನದನೊಲಿದು ‖ ವಾಸನಿಸನಾರಿತ್ತುದನುಖರ | ಲೇಸನುತಕೈಕೊಂಬನೆನ್ನ | ಭ್ಯಾಸವಿದರಲಿಸುಪ್ರತಿಷ್ಠಿತವೆಂದಳಬುಜಾಕ್ಷಿ ‖೩೪‖ ಏನಮಾಡಿದಡೇನುದೈವಾ | ಧೀನದಲಿತನ್ನೊಡಲುರೂಪುವಿ | ಹೀನವಾದುದುಕೆಟ್ಟೆನಾರಿಗೆಹೇಳುವೆನುಹದನ ‖ ಈನಿಮಿತ್ತತ್ರಿವಕ್ರೆಯೆಂಬಖಿ | ಧಾನವತದೆನಗಿನ್ನುನಾನಿ | ನ್ನೇನನೀವೆವಿಧಾತ್ರನಲ್ಲಿಂದಳುಸರೋಜಮುಖಿ ‖೩೫‖ ಇತ್ತಪೆನುಗಂಧವನುನಿನ್ನೀ | ಚಿತ್ತದೊಲವೇಸಾಕುಕಾಣ್ಕೆನು | ಮರ್ತ್ಯರೊಳಗೀನಿನ್ನಹೋಲುವಪುರುಷಭೂಷಣದ ‖ ಸತ್ಯಸಂಧನೆನೀನಿರಲುಹಿಡಿ | ಮತ್ತೆಯೋಗ್ಯರನಾರೆನುತ್ತಾ | ಮತ್ತಕಾಶಿನಿಕೊಟ್ಟಳನುಲೇಪನವನಚ್ಯುತಗೆ ‖೩೬‖ ವನಿತೆತನ್ನನುಕೊಡುವಪ್ರೋಲಾ | ದನುಜಹರರಾಮರಿಗೆಗಂಧವ | ನನಿತುವನುಕೊಡಲೊಲಿದುಕರುಣಾವನಧಿಗಳುಕೊಂಡು ‖ ತನುವಿನಪರಾರ್ಧದೊಳಗನುಲೇ | ಪನಗಳೊಪ್ಪಿರೆಧರಿಸಿಕೆಳೆಯರ | ತನುನೆನೆಯಲೋಕಾಲಯಾನಾಡಿದರಮಳಗಂಧದಲಿ ‖೩೭‖ ಕೊಂಡುದಕೆಫಲಬಳ್ಳಕತನ್ನನು | ಕೊಂಡುದಕೆಫಲಕೈಯ್ಯಮೇಲೀ | ಪುಂಡರೀಕದಳಾಕ್ಷಿಗಾಗಲಿಬೇಕೆನುತ್ತೊಲಿದು ‖ ಮಂಡೆಯಲಿಕೈಯಿಟ್ಟುಹೊರಡೆಡೆ | ಗೊಂಡುದೇಂದಿಂದಿತ್ತಮೈನ್ಯರು | ಕಂಡುಬಲ್ಲರುತಮ್ಮಪೂರ್ವಜನೆಂದನಸುರಾರಿ ‖೩೮‖ ಮೆಟ್ಟಿಪಾದಾಗ್ರವನುಗಲ್ಲದ | ಲಿಟ್ಟುನಿಜಕೋಮಲಕರಾಗ್ರವ | ನಿಟ್ಟುನೇರೆದಡಂಗುಲಿಯಲುತ್ತಾನವಾಗಿರಲು ‖ ನಿಟ್ಟೆಲುಮ್ರುನಿಟನಿಟಲುನಿಟಲೆನೆ | ಸೃಷ್ಟಿಕರ್ಮಗಳೊಡೆಯನಬಲೆಯ | ಮುಷ್ಟಿನಿಗುಚಿನಿರೀಕ್ಷಿಸುಸಜನನಿಕರಭಾಪೆನಲು ‖೩೯‖ ಧರೆಯೊಳಿಂದ್ರನರಂಭೆಯೋಕಿ | ನ್ನರರವಧುಗಂಧರ್ವೆಯೋಸಂ | ಚರಿಸುಮ್ರುಗಾಲಯವನುಜನಾಗಕನ್ನಿಕೆಯೋ ‖ ಪರಮಪುರುಷೋತ್ತಮನಕರಸಂ | ಸ್ಪರುಶದಲಿಸೈರಂಧ್ರಿಯಂಗೀ | ಕರಿಸಿದಳೊದಿವ್ಯಾಕೃತಿಯಕಿನಲೆಸೆದಳಬುಜಾಕ್ಷಿ ‖೪೦‖ ಅಂಜುವೆನುಬಿನ್ನೈಸಲಿದೆಲಾ | ಸಂಜೆಕೆನಿಷಕೆಬುಂದುಮಘಕುಲ | ಭಂಜನನೆನಡೆಮನೆಗೆಮಾಡುಮನೋರಥವನೆನಗೆ ‖ ಸಂಜನಿತಕಾಮಾಗ್ನಿಜೀವನ | ಭಂಜಿಸುತ್ತಿದೆಕರುಣಿಸೆನುತವೆ | ಮುಂಜೆರಗನಾಜಾತ್ತಹಿಡಿದಳುನಳಿನಮುಖಿತಗುಳ ‖೪೧‖ ಬಜೆನುಸಂಶಯವಿಲ್ಲನಿನ್ನಯ | ಗೃಹಕೆಕಾರ್ಯವಿಶೇಷವನುನಿ | ರ್ವಹಿಸಿನಾಡಿದುನಂಬುತನ್ನಯಮಾತನಿಳವೆಂದು ‖ ಗೃಹವಿಹೀನರಿಗೆಮನೆನಿನ್ನಯ | ಗೃಹವಲಾಪಥಿಕರಿಗೆಸಮ್ಮತ | ಗೃಹಪವೇಶಮಪರಪಿದೆಂದನುನಗುತಮುರವೈರಿ ‖ ಬೀಳುಕೊಟ್ಟುಚಿತದಲಿಲಕ್ಷ್ಮೀ | ಲೋಲರಾಮರುಸಹಿತವಾಗೋ | ಪಾಲರೊಡನಾಡುತ್ತನೋಡುತ್ತಾಪುರದಸಿರಿಯ ‖ ಮೇಲೆನೋಳ್ಪಬಜೆಪುರಹಂತಿಯು | ನಾಲಿಸುತಮನುಮಥನಮತವನು | ಪಾಲಿಸುತನಡೆತಂದರೊಪ್ಪುವರಾಜಮಾರ್ಗದಲಿ ‖೪೩‖ ನೀರಪೊಂಚಾಲರಪಸಾಯ್ರ | ಕೇರಿಗಳಮಾವಂತನಿಕರದ | ಕೇರಿಗಳನೊಪ್ಪಿರಲುಪಾಠಕನಿಕರಕೇರಿಗಳ ‖ ಚಾರಣರವಂದಿಗಳಮೈಸ್ತ್ರರ | ಕೇರಿಗಳನಾಹಂಜಮಾನರ | ಕೇರಿಗಳನೀಕ್ಷಿಸುತನಡೆತರುತಿರ್ದರೊಲವಿನಲಿ ‖೪೪‖ ಮುತ್ತುಮಾಣಿಕಗಳನುಕಾಣಿಕೆ | ಇತ್ತುಕಾಲಲ್ಲಿಗೆರಗಿಕೈಮುಗಿ | ದೊತ್ತರಿಸಿಜೀಯೆಂಬಪಟ್ಟಣಗಾರರೋಲಗದ ‖ ಮತ್ತೆಮಾಗಧಸೂತವಂದಿಗ | ಳುತ್ತಮಸ್ತುತಿಪಾಠವನುನೆರೆ | ಚಿತ್ತವಿಸುತ್ತೈತಂದರೊಪ್ಪಿರೆರಾಜಮಾರ್ಗದಲಿ ‖೪೫‖ ಬಿಲ್ಲಹಬ್ಬವೆನುತ್ತಧರೆಯೊಳ | ಗೆಲ್ಲಬೊಬ್ಬಿಡು

ತಿವೆಯುಲಾಬಲು । ಬಿಲ್ಲುಗಡತೋರಿರೆಯುನುತ್ತಾ ನಡೆಯೆಧನುಶಾಲೆ ॥ ಯೆಲ್ಲಿಹೇಳಯೆನುತ್ತ ಲಕ್ಷ್ಮೀ । ವಲ್ಲಭನುಬೆಸಗೊಳುತ
ಬಂದನು । ನಿಲ್ಲದಾಯುಧಶಾಲೆಗಾಬಲಗೋವಳರುಸಹಿತ ॥ ೪೬ ॥ ಬಂದುನಿಂದರುಶಸ್ತ್ರಶಾಲೆಯ । ಮುಂದೆಮೋಹನಮೂ
ರ್ತಿಗಳುಗೋ । ವಿಂದರಾಮರುತಡದನುವದಾಸರಿಗೆನೃಪಧನುವ ॥ ತಂದೆಗಳರೀಕ್ಷಿಸುವವಮನದಲಿ । ಬಂದೆವಾಡಡೆತೋರಿಸುವೆ
ನು । ತಂದುಹೊಕ್ಕರುನಗುತ್ತತದ್ವಾರಿಕರಕರವಿಡಿದು ॥ ೪೭ ॥ ಕಂಡರೆದಿರಲಿಮೆರವನೃಪಕೋ । ದಂಡವನುಮಣಿಕನಕರ
ತನೋ । ದ್ದಂಡವನುರಿಪುಭಟವಿನಾಶನಕಾಲದಂಡವನು ॥ ಕಂಡಿರೇಗೋವಳರುಧನುವನು । ಕಂಡಿರೈನೀವಣ್ಣದೇವರು । ಖಂ
ತವೆರಳುವಿನಾಣಕೌತುಕವಿತ್ತನೋಡೆಂದ ॥ ೪೮ ॥ ದೃಷ್ಟಿಸಫಲವಿದಾಯುತ್ತೈಗಳು । ಮುಟ್ಟಿಸಫಲವಹಡೆಯಲಾಗದೆ । ಸೃಷ್ಟಿ
ಯುಲಿಧರಿಸುವಮಹಾತ್ಮನದಾರೊತಾವಿದನು । ಮುಟ್ಟನೋಡುವೆವೆನುತದೈತ್ಯಘ್ನ । ರಟ್ಟನಾಬಲುಬಿಲ್ಲನೀಕ್ಷಿಸಿ । ಬೆಟ್ಟದಂತಿರಲೆ
ತದಕೈಯಲಿನೆಗಹಿದಮತುಡುಕಿ ॥ ೪೯ ॥ ಎಲವೊಹೋಹೋತಮ್ಮಬಿದ್ದಡೆ । ಕೊಲುವುದೆಲ್ಲರನಿರಿಸಿರಿಸುನಿ । ನ್ನಳವಿನಾಯುಧ
ವೆಲ್ಲಬಿಡುಬಿಡುಮಾಣುಮಾಣೆನುತ ॥ ಪುಲಿಯುಲಾರಾಮಾದಿಗಳುಹಳು । ಹಳುಮಹಾಧನುಬೇಡಸತ್ತಡೆ । ಕೊಲಿಸಿದವರಾವಲ್ಲವೆ
ನುತಿರ್ದುದುಭಟವ್ರಾತ ॥ ೫೦ ॥ ತೊಡಿಸಿದನುಚಾಪದಲಿತಿರುವನು । ಕಡುಗಿಕಾಪಿನಭಟರುವಿಂಗೆಬೊ । ಬ್ಬಿಡಲುತೆಗದಡೆತಪ್ಪೆ
ಕನಗಿದುಕೀರ್ತಿವೀರರಿಗೆ ॥ ಮಡಿದರಮರರಪದವೆನುತಕಿವಿ । ಗಡಿಗೆಕೆಗದಾರ್ದಚಲಚಾಪವ । ನುಡಿದನಿಕ್ಕಡಿಯಾಗಲಂಬರತಳ
ತಲಜಬೆದರೆ ॥ ೫೧ ॥ ಒಡದುದೋಬ್ರಹ್ಮಾಂಡವವನಿಗೆ । ಕೆಡದುದೋಕುಲಶೈಲವದ್ದುದೊ । ಪೊಡವಿಪಾತಾಳಕ್ಕೆಹರಹರಹರ
ಮಹಾದೇವ ॥ ನಡುಗಿದನುಖಳಕಂಸನಮರರು । ಗುಡಿಯುಕಟ್ಟದರಾಮಹಾಧನು । ಮುಡಿದಧನಿಧೃತಿಗೆಡಿಸಿತ್ತೇನೆಂಬೆನುಜಗತ್ರ
ಯುವ ॥ ಕಟ್ಟುಹಿಡಿಕೊಳ್ಳಿವನನೇತಕೆ । ದುಷ್ಟನನುಹೊಗಿಸಿದಿರಿಬಾಗಿಲ । ಕಟ್ಟಕೋಳಲಿಮಹಾಭಟರುಹೊರವಡದಪ್ಪೋಲೆನುತ ॥
ಇಟ್ಟಣಿಸಿಕಾಪಿನಮಹಾಭಟ । ರಿಟ್ಟಮುಸಲಮುಸುಂಡಿಮುದ್ಗರ । ಪಟ್ಟಸಂಗಳಪಾಯದಳವೈತಂದುಮೆಂಟಣಿಸಿ ॥ ೫೨ ॥ ಕಡುಗಿ
ದಕಾಪಿನಮಹಾತ್ಮರ । ಪಡೆಯನೀಕ್ಷಿಸಿನಗುತೆರಡುಬಿ । ಲ್ಲಾದಿಯನಿಬ್ಬರುಕೊಂಡುನಿಂದರುಬಾಗಿಲಿದ್ದೆಸೆಗೆ ॥ ಹಿಡಿಯಬಂದಿರೆನೀ
ನೆನುತಕೈ । ವಿಡಿಸಿದರುಕಾಲಂಗೆಮಡಿದುದು । ಪಡೆಪರಾಜಯವಾರ್ತೆಹರದುದುಕಂಸನೋಲಗಕೆ ॥ ೫೪ ॥ ಮತ್ತೆಕಂಸಾಸುರ
ನಟ್ಟೆಸದಲಿ । ಮತ್ತಗಜಘಟೆಕುದುರೆಕಾಲಾ । ಳೊತ್ತರಿಸಿಬರಲಾಹವಕೆಬೊಬ್ಬಿರಿದುಬಾಗಿಲಿಗೆ ॥ ಮುತ್ತಿಗೆಯಪರಬಲದಜೀವ
ದ । ಮೃತ್ಯುವಿಗೆಮಾಮಾರಿಹಿಡಿದಂ । ತಾತ್ತಮಶ್ಲೋಕಾಖ್ಯರುಪಸಂಹರಿಸಿದರುಬಡಿದು ॥ ೫೫ ॥ ದಳ್ಳುರಿಯಮುತ್ತಿಗೆಯಹ
ನಗದ । ಹೊಳ್ಳುನೆರವಿಯೊತಕ್ವವಿದ್ಯದ । ಕೊಲ್ಲಣಿಗೆಗೊಡ್ಡಿಸಿದಮಾಯಾಮಯತನುಭ್ರಮೆಯ ॥ ಫುಲ್ಲನಾಭಾನಂತರಿಕ್ಕಿದ । ಫು
ಲ್ಲಣೆಯಘಾಯವನುಕಳದರಿ । ಮಲ್ಲಸೈನ್ಯವಗೆಲಿದನೊಂದೇನಿಮಿಷಮಾತ್ರದಲಿ ॥ ೫೬ ॥ ಬಳಿಕರವಿನಿಜರಥವನಾಖಳ । ಕುಲ
ಶಿರೋಮಣಿಹರಿಸದಿರನೆಂ । ದಿಳಿದನಸ್ತಾಚಲದತಪ್ಪಲಕಾನನದಮರೆಗೆ ॥ ಹಲಧರಶ್ರೀಕಾಂತರಾಯುಧ । ನಿಳೆಯುವನುಪೊರವಂ
ಟುಬಂದರು । ಹೊಳಲಸಿರಿಯನುನೋಡಿಬೀಡಿಕೆಗಾಗಿನೇವಿನಲಿ ॥ ೫೭ ॥ ಕಂಡುಹೊಳಲೊಪ್ಪವನುಕಂಸನು । ಕೊಂಡಹರಿ
ಬವನೆರಿದುಮಗುಳು । ದ್ದಂಡವಿಕ್ರಮರಿರದೆಬೀಡಿಕೆಗಾಗಿನಡೆತಂದು ॥ ಉಂಡುಹಾಲೋಗರವನೊಲಿದೆಡೆ । ಗೊಂಡುಕೆಳೆಯರ
ರಾಪ್ತರನುಕೈ । ಕೊಂಡುನಿದ್ರಾಂಗನೆಯಬಲನಿತ್ಯಾತ್ಮರೊಪ್ಪಿದರು ॥ ॥ ೫೮ ॥

ಅಂತು ಸಂಧಿ ೪೭ಕ್ಕಂ ಪದನು ೧೭೭೪ಕ್ಕೆ ಮಂಗಳಮಸ್ತು.

ಮುಷ್ಟಿಕಾಂತನೆಯ ಸಂಧಿ.

ಸೂಚನೆ ॥ ಚಂಡವಿಕ್ರಮರಾನೆಯನುಬೆಂ । ಕೊಂಡುಭುವನೇಶ್ವರರುಪೃಥ್ವೀ । ಮಂಡಲಾಧೀಶ್ವರನ
ಸಭೆಯನುಹೊಕ್ಕರೊಲವಿನಲಿ ॥

ಪದನು ॥ ಅರಸಕೇಳಾರಾಮಕೃಷ್ಣರ । ಚರಿತವನುಸಾಹಸವನಾಧರ । ಧುರದವೀರಪರಾಕ್ರಮವನಿಜಚಾಪಭಂಜನ
ದ ॥ ಇರದೆನಿಜಬಲನಾಶನವಸಂ । ಗರದಕಲಿತನಗಳನುಕೇಳ್ದು । ಯಿರುಳುಕಂಸಂಗಾಯ್ತುಜಾಗರವಾನೃಶಂಸಂಗೆ ॥ ೧ ॥ ಕ
ರಸಿದನುಮಲ್ಲರನುಮಾವಂ । ತರನುಮನದಂಧತೆಗೆಕತ್ತಲೆ । ನೆರವಬರೆಬೇಹವರನಾರಾಕ್ಷಸರಮಂತ್ರಿಗಳ ॥ ಬರಿಸಿನೃಪನಿರು
ಓಲಗವನಿ । ತ್ತರಿದಿಶಾಪಟನಳಲುವಂತಃ । ಕರಣದಲಿಕಳವಳಿಸಿಯಾಜ್ಞಾಪಿಸಿದನವರೊಡನೆ ॥ ೨ ॥ ಬಂದರೀವಸುದೇವ
ಸುಹಕಿಯ । ನಂದನರುತನ್ನಾಜ್ಞೆಯಿಂದೀ । ಗಾಂದಿನೀಸುತನೊಡನೆತನ್ನಯಪುರಕೆರಜಕನನು ॥ ಕೊಂದರುಡಲೀಯದೊಡೆಗ
ತಕಾ । ಮಂದಿಯೊಳುಬಲುಬಿಲ್ಲಮುರಿದುಮು । ಕುಂದರಾಮರುಕೇಳದಿರೆನೀವ್‍ಬಾಲಕೇಳಿಗಳ ॥ ೩ ॥ ಉಡಿದಬಿಲ್ಲಿನಿಸಡಿಗ
ಲಿಬಡಿ । ಬಡಿದುಕಾಪಿನಭಟರನೆಲ್ಲರ । ಕೆಡಹಿದರುತಾಕೆಳುಹಿದೀಚತುರಂಗಸೈನಿಕವ ॥ ಮಡುಹಿದರುಗಡಕೈದುಗೊಳ್ಳದೆ । ಕ
ರಗಲಿಗಳಾಯಿಬ್ಬರೇದಿಟ । ಪೊಡವಿಗಗ್ಗದಭಟರೆನುತಬಿಸುಸೂಯ್ದನಾಕಂಸ ॥ ೪ ॥ ಆಳಮತ್ಸರವೇಕೆನಾಳಿನ । ಕಾಳಗದಕ

ಲಿತನದಲೆನ್ನಯ । ಸೋಲುಗೆಲುವುಗಳೆಂಬುದನುನಿವ್ರಿಕ್ರಮಪರಾಕ್ರಮವ ॥ ಅಲಿಗಳಲೀಕ್ಷಿಸಿನೆಂದುಸ್ತರ । ಕಾಲಗತಿಯುಸುಕಂಸ
ರಾರಿ । ನ್ನೀಳ್ದಿದಬೇಡವರಬಲ್ಲಿದರೆಂದನಾಕಂಸ ॥೫॥ ಬವರಬಲುಹುರಿನವಮೆಗನಾಳನ । ದಿವಸನೀವೆನ್ನಾಹವಕ್ಕೊದ । ಗಾ
ವ್ರದುಕಾಂಬೆನುಹರುವನಸುವಿಂಗಹಿತಸಂತತಿಯು ॥ ಅವನಿಗಳಿಯಲಿಭಾರವೀಯಾ । ದವಕುಲಾಂತಕನೆನಿಸಿಕೊಂಬೆನು । ಕು
ವಲಯಾಪೀಡನಲಿನಿಮ್ಮಲಿಚಿಂತೆಬೇಡೆಂದ ॥೬॥ ರಂಗವನುಕೈಗೈದುರಣಭೂ । ತಂಗಳನುಪ್ರಾಚಿಸುವುದೆನುತರಿ । ಭಂಗನಾ
ಸುರಮಂತ್ರಮಲ್ಲರನೊಲಿದುಬೀಳ್ಕೊಳಿಸಿ ॥ ಸಿಂಗಿಯನುಕೊಂಡಂತೆಚಲಸ । ಪ್ರಾಂಗನಿರ್ದನುರಾಮಕೃಷ್ಣರ । ಸಂಗರದಸಾಹ

ಕಂಸನ ದುಸ್ವಪ್ನಗಳು.

ಸವನೆನೆನೆನವೃತ್ತಮನದೊಳಗೆ ॥೭॥ ಕಂಡನಪಶಕುನಂಗಳನುಭೂ । ಮಂಡಲದಲಭ್ರದಲಿದೆಸೆಯಲಿ । ಗಂಡುಗಲಿನಿಜದೇಹ
ದಲಿನಾನಾವಿಧಂಗಳಲಿ ॥ ಕಂಡುಮರಣತ್ರಾಸದಲಿಭಯ । ಗೊಂಡುಮನದನುತಾಪಶಿಖಿಯಲಿ । ಕೆಂಡವನುನುಂಗಿದವ್ರೊಲು
ವ್ಮಳಿಸಿದನುಮಿಗೆಕಂಸ ॥೮॥ ತಲೆಗಡವಿನೋಡುತ್ತದರ್ಪಣ । ದೊಳಗೆಕಾಣದೆತನ್ನತಲೆಯನು । ಖಳಕುಲಾಗ್ರಣಿಕಾತರಿ
ಸಿಕಳವಳಿಸಿದನುಮರುಗಿ ॥ ನೆಲದೊಳಗೆಚಿಹ್ನಂಗಳನುಕಿವಿ । ಗಳಲಿನಷ್ಟಪ್ರಾಣಘೋಷವ । ನಳಲಿದನುಕಾಣುತ್ತಕಾಲನಭಯ
ದಲಾಕಂಸ ॥೯॥ ಲಲಿತವೃಕ್ಷಂಗಳಲಿಧೂಮಾ । ಕುಲಿತಗಗನಸ್ಥಳವನಾಕಾ । ವಳೆಯುವನುತಿಮಿರಾಕೃತಿಯನಾಕಸ್ಮಿಕವ್ಯಥೆ
ಯು ॥ ಕಳೆವರದಕಂಪವನುಕಂಗಳ । ಲಿಳಿವಜಲವನುಹಲವುವಿಧವಹ । ಕುಲವಿನಾಶಕರಂಗಳನುನೆರೆಕಂಡನಾಕಂಸ ॥೧೦॥
ಸತ್ತವರುಬಂದಪ್ಪಿಕೊಂಬುದ । ಕತ್ತೆಯನುತಾನೇರಿಹೋಹುದ । ಗರ್ತದೊಳಗಾಳುವುದನೊಂದುಜ್ಯೋತಿಯೊಳಗೆರಡ ॥ ಚಿ
ತ್ತವಿಸುವುದನೊಬ್ಬನೇವಿಷ । ಭುಕ್ತಿಯನುಮಾಳ್ಪುದಮತ್ತೈಲಾ । ಭ್ಯಕ್ತನಾದುದಕನಸುನೆನಸುಗಳೊಳಗೆನೆರೆಕಂಡ ॥೧೧॥
ಕಾಣುತವೆಬಹುವಿಧನಿಮಿತ್ತ । ಶ್ರೇಣಿಗಳಲೀಪರಿಯಲಾತ್ಮ । ಪ್ರಾಣನಾಶನಹೇತುಗಳನಡಿಗಡಿಗೆಕಂಪಿಸುತ ॥ ಕ್ಷೀಣವಿಲ್ಲದೆಕಾ
ಲಭಯವನು । ಕೇಣಿಯನುಕೊಂಬಂತೆಕಂಸ । ಕ್ಷೋಣಿಪತಿಕುಳ್ಳಿರ್ದನಾತ್ಮಧ್ಯಾನರತನಂತೆ ॥೧೨॥ ಭಯದಲಾಕಂಸಂಗೆ
ಜಗಹರಿ । ಮಯವೆನಿಸಿತ್ತೀನೆಂಬೆಪ್ರಹೊಸ್ತ್ಯೋ । ದಯದಸಿದ್ಧಿಯಸಾರಸಂಪನ್ನತೆಯಸಂಸ್ಥಿತಿಯು ॥ ನಯನಗೋಚರಗಳನುಶಬ್ದ ।
ಪ್ರಿಯರಸಘ್ರಾಣಾದಿಕರಣೇಂ । ದ್ರಿಯವಿಷಯನಿಕರಗಳುತನ್ಮಯವಾಗಿರಲುಕಂಡ ॥೧೩॥ ಜಲದೊಳಗೆಕಂಗಳಲಿಮಂದರ ।
ಕುಲಗಿರಿಯಕುಹರದಲಿಮತ್ತಾ । ನಳನಭವನುಸುರಿನಲಿಜನಿಸನೆಮುನ್ನವಾಯೆಯಲಿ ॥ ಜಲಧಿಶಯನನೆನುತ್ತಖಳನಂ । ಮಳಿ
ಸಿಭೋಜನಪಾನಶಯನಂ । ಗಳಲಿಶಂಕಿಸುತಿರ್ದನೋರಂತಾಜಗನ್ಮಯನ ॥೧೪॥ ಖಳನಕರ್ಮಕ್ಷಯದವ್ರೊಲುಕ । ತ್ತಲೆಸಂ
ಕ್ಷಯವಾಯ್ತುಮೂಡಲು । ನಳಿನಸಖನರಥಾಶ್ವತತಿನೂಕಿದುದುದಯಗಿರಿಗೆ ॥ ಮೊಳಗಿದವುಭೇರಿಗಳುಭುವನ । ಪ್ರಳಯದಂ
ತಿರೆಮಲ್ಲರಂಗದ । ಬಳಸಿನಲಿಮಂಚಂಗಳೆಸದವುನಾಲ್ಕುದಿಕ್ಕಿನಲಿ ॥೧೫॥ ಕಡಿವಕುರಿಕೋಣನನುದಿಗುಬಲಿ । ಗೊಡುವಗಂ
ಧಾಕ್ಷತೆಗಳನುದೆಶಿ । ಗಿಡುವಮಾಂಸಸುರಾದಿಪೂಜೆಗಳಿಂದಚಂಡಿಕೆಯು ॥ ಹೊಡವಡುವಶಸ್ತ್ರಾಸ್ತ್ರನಿಕರವ । ಬಿಡದೆಪೂಜಿಸಭ
ಟರಬಿಂಕದ । ಸಡಗರದಸಂಭ್ರಮಸಮಾಹಿತವಾಯ್ತುಸಮಯದಲಿ ॥೧೬॥ ಅತ್ತಲುಪವನದಿಂದಗೋಪರ । ಮೊತ್ತವೈತಂದ
ರಸನೆನುಕಂ । ಡಿತ್ತುಕಾಣಿಕೆಗಳನುಕುಳ್ಳಿರಲಂದುಮಂಚದಲಿ ॥ ಮತ್ತೆಕೆಳೆಯರುಸಹಿತಬಲಪುರು ॥ ಷೋತ್ತಮರುಕ್ರೀಭೋ

ಕುವಲಾಪೀಡ ಸಂಹಾರ ಕಥೆ.

ಜನದಸಂ । ಪತ್ತಿಯಲಿಪೊರವಂಟರಾಪೊರವಳಲನೀಕ್ಷಿಸುತ ॥೧೭॥ ವೀರವರರೈತರುತರಂಗ । ದ್ವಾರದಲಿಕೈಕಾಲಧರಿಸಿದ
ಮೇರುಗಿರಿಯೋಗಜವ್ರೊಗಂಡಸ್ಥಳದಮದಜಲವ ॥ ಧಾರೆಯೋಸುರಗಿರಿಯನಿರ್ಜರ । ವಾರಿಯೋಹೇಳೆನಲುಕಂಡರು । ದೂ
ರದಿಂದವೆಕುವಲಯಾಪೀಡನನುಪೋನ್ನತಿಯು ॥೧೮॥ ಬಂದಿರ್ಪವಸುಧಾಧಿಪತಿಯಳಿ । ಯಂದಿರಾವಿನ್ನಿದಿರುಗೊಳಬೇ । ಕೆಂ
ದುಪಪ್ತಕಪಂಕುಶದಲಿರಿದಾಮದೇಭವನು ॥ ಮಂದಮತಿನಡಸಿದನುಬಲಗೋ । ವಿಂದರಭಿಮುಖಕಾಗಿಬಲಗೋ । ವಿಂದರು
ಟ್ಟುದಸೆಪದಿಸುತ್ತಂತ್ರಂಜರವನೊಡನೆ ॥೧೯॥ ಎಲೆಪ್ರೊಬಿಡುಬಿಡುಬಟ್ಟೆಯನುನೀ । ತೊಲಗುಗೋಲಗೀಗಜಸಹಿತನಿ । ನ್ನಳಿ
ವನೆಲುವಪೆಸರುಸರಲ್ಲದೆನಿನ್ನಸುವ ॥ ಕಳುಹುವೆನುಯಮಪುರಿಗೆನೋಟೀ । ಗಳೆಗಜೇಂದ್ರನಜೀವಸಹಿತಂ । ದುಲಿದುಹ
ಸ್ತಿಪಕೊಡನೆವೊಳಗುವವ್ರೋಲುಹರಿಜರದ ॥೨೦॥ ಅಹುದಲೇಮತ್ತೀನುಸಹಸಿಗ । ಳಹಿರಿಸೋಪರವಕ್ಕಳರಸ । ನ್ನಹಿತ
ರಾದಿರಿಶೌರ್ಯದಲಿತಪ್ಪೇನುಕಪ್ಪೇನು ॥ ಮಹಿಯಲಿನ್ನೇನೇನಕಾಣಲು । ಬಹುದುಬದುಕಿರಲೆನುತಜರದಾ । ಕುಹಕಿನೂಕಿದನಾ
ನೆಯನುಮುರಹರನಸಮ್ಮುಖಕೆ ॥೨೧॥ ಮತ್ತಗಜವಾವಂತನಿರಿಯಲು । ನೆತ್ತಿಯನುಕೋಪಾಗ್ನಿಯಲಿತನು । ಪೊತ್ತಿಪೊ
ಗಮಾಲಿಗಳಕೆಂಗರಿನವಿಸ್ಫುಲಿಂಗದಲಿ ॥ ಮೃತ್ಯುಮುನ್ನುರಿದೆದ್ದವ್ರೊಲುಹರಿ । ವೃತ್ತನುಶ್ಲೋಕನನುರಣದಲಿ । ಸುತ್ತಿಹಿಡಿದುದು
ಸುಂಡಿಲಲಿಬಲಗೋವಳರುಬೆದರೆ ॥೨೨॥ ಬಿಡಿಸಿಕೊಂಡಾಗಜದಮಸ್ತಕ । ವ್ರೊಡೆಯಲಪ್ಪಳಿಸಿದನುಮತ್ತುಗ । ಳೊಡನೆ
ಚಲ್ಲುಗನಸಳತಾರಕಿತವಾದಂತೆ ॥ ಬಿಡುಹುಗುಡದಸುರಾರಿಕಾಲುಗ । ಳೆಡೆಯಲಡಗಿದಡರಸಿಕಾಣದೆ । ತುಡುಕುತಿರ್ದುದು

ಕಂಡವರನಾಹಸ್ತಿ ಹರಿಹರಿದು ॥ ೨೩ ॥ ಕಾಣದಜ್ಞಾನಿಗಳು ಕರಣ । ತ್ರಾಣಸಾಕ್ಷಿಯನು ಕಟವಿಷಯ । ಶ್ರೇಣಿಗಳಲರಸುತ್ತ ತೊ
ೞಲುವವೊಲು ಮುರಹರನ ॥ ಕಾಣದರಸುತ ಕಂಡುದಾತ್ಮ । ಘ್ರಾಣ ದೃಷ್ಟಿಯಲೊಳಗಿಹುದಗೀ । ರ್ವಾಣಿಗಳವೊಲ್ತ ಡಹಿಹಿಡಿ
ದುದುಸುಂಡಿಲಲಿ ಹರಿಯ ॥ ೨೪ ॥ ಚಿತ್ತಶುದ್ಧಿಗಳಿಲ್ಲದವರಿಂ । ಗೆತ್ತಣದು ನಿಜಲಾಭವೆಂದರು । ಪುತ್ತಲಿಪ್ಸಂತ್ರಿಭಪತಿಜು ಬರಿಕ್ಕೈ
ಯ್ಯ ಬಂಧನವ ॥ ಮತ್ತೆ ಹರಿ ಹಿಡಿಹಿಡಿಯೆ ಬಿಡಿಸಿಕೊ । ಳುತ್ತ ಗಜ ಬಾಲವನು ಹಿಡಿದಿ । ಪ್ಪತ್ತು ಬಿಲ್ಲಂತರವನೆಳದನು ಹಿಂದುಮುಂ
ದಾಗಿ ॥ ೨೫ ॥ ಮುರಿದು ಡೆಡದಲಿ ಬಲದೆಡೆಗೆ ತಾ । ತಿರುಗುವನು ಬಲದೆಡೆಗೆ ಮುರಿದಡೆ । ತಿರುಗುವನು ವಾಮದಲಿ ಹರಿ ಬಳಲಿಸು
ತ ಬಲು ಗಜವ ॥ ಹುರುಳುಗೆಡಿಸಿದನಿಂತು ತ್ರಿವುದಾಂ । ಧರನು ಬಳಲಿಸಿ ನೈಗುಡದೆ ತಾ । ನಿರದೆ ಕಾಡುವೆನೆಂದು ತೋರಿಸುತಂತೆ
ಮೂಜಗಕೆ ॥ ೨೬ ॥ ಬಿಸುಟು ಬಾಲವನಾ ಮದೇಭದ । ಮುಸುಡೆತಿವಿದೋಡಿದನು ಕರಿ ಕೋ । ಪಿಸುತ ಬೆಂಬತ್ತಿದುದು ಮುನಿ
ಮಾನಸದುರಾಸದನ ॥ ಅಸುರರಿಪು ಹಿಡಿಹಿಡಿಯೆ ಹಾಯ್ದನು । ಮಸಗಿ ಗಜ ಬೆನ್ನಟ್ಟಿ ಬರೆಬರೆ । ವಸುಧೆಯಲಿ ಬಿದ್ದಂತೆ ಮುಗ್ಗಳೆದ್ದೋ
ಡಿದನು ನಟಿಸಿ ॥ ೨೭ ॥ ಬಿದ್ದನಚ್ಯುತನೆಂದು ಬಗದಾ । ಭದ್ರಗಜ ಮೆರಗಿದುದು ಬಲುದಂ । ತದ್ವಯದಲದ್ವಯನ ಕೊಲುವೆನೆನುತ್ತ
ಕೋಪದಲಿ ॥ ಹೊದ್ದಲರಿವುದೆ ಕಾಲಗತಿಗಳು । ಹೊದ್ದಲರಿಯದ ಹರಿಯ ನಿಖಿಳಾ । ಭೇದ್ಯನನು ಭೇದಿಸುವುದೆಂತಿಭ ದಂತಹತಿಗಳ
ಲಿ ॥ ೨೮ ॥ ಕರಿ ಕೆರಳ್ವಿಫಲಪ್ರಯತ್ನದ । ಲಿರದೆನಿಸ್ಸೈಗವರವೊಲಾವಿ । ಷ್ಕರಿಸಿ ಮುಗ್ಗಳಾಟೋಪವನು ಮಾವಂತನುರುವಣಿಸಿ ॥
ಘರೆರಸಾತಳಕಿಳಿದುದೆನಲ । ಬ್ಬರಿಸುತ್ತೈತರೆ ಸಾಕದೇತಕೆ । ಮರುಳು ಗಜದೊಡನಾಟವೆನುತಿದಿರಾಗಿ ನಡೆ ಕಂಡ ॥ ೨೯ ॥ ಹಿಡಿದು
ದೋ ಗಜನೆನುತ ಜನಬೊ । ಬ್ಬಿಡಲು ಸುಂಡಿಲ ಸುತ್ತಿ ತೆಗೆಯಲು । ಪೊಡವಿ ಸಪ್ತದ್ವೀಪ ಸಾಗರ ಶೈಲವನ ಸಹಿತ ॥ ನಡುಗಿದುದು ಸುರ
ನಿಕರ ಭಾಗೆಬಾ । ಯ್ವಿಡಲು ದಂತದಲಿರಿದು ತನುಜವ । ಮುಡುಗಿ ಬಳಲಿದು ಮತ್ತಗಜ ಕೆಣಗಿದುದು ಹರಿಯೊಡನೆ ॥ ೩೦ ॥ ಸದದು ಮಾ
ವಂತರನು ಕಾಲನ । ಸದನವನು ಹೊಗಿಸುತ ಕಡುಗುವ । ಮದನಿಯನು ರಣವಿಜಯ ಶುಂಡಾದಂಡವನು ಹಿಡಿದು ॥ ತ್ರಿದಶರಾಯನ
ಲವನಿಯಲಿ ಕೆಡ । ಹಿದ ಡೆಸುರಗಿರಿ ವಜ್ರಹತಿಯಲಿ । ಬಿದುರಿ ಬೀಳುವವೊಲು ಬಿದ್ದುದು ಭದ್ರಗಜವಿಳೆಗೆ ॥ ೩೧ ॥ ಮತ್ತೆ ಗಜವ
ನುಗೆಡಹಿ ನಿಂದಿ । ದುರ್ಮತ್ತ ವೋತ್ತಮನ ದರವೇಲಾ । ಡುತ್ತ ಕಂಸನ ಹಲ್ಲುಗಳ ಕೀಳ್ವಂತೆ ದಂತವನು ॥ ಕಿತ್ತು ಗಜದಾರೋಹಕರ ಕೆ
ಡೆ । ಗುತ್ತಿ ಕೊಂಡನು ಸುರನಿಕರ ಹಾ । ಡುತ್ತ ಹರಸುತ್ತ ಮವುಕರದರು ಪುಷ್ಪವೃಷ್ಟಿಗಳ ॥ ಕೊಂದು ಗಜವನು ತದ್ರುಧಿರ ಮದದ । ಬಿಂ
ದುಗಳು ಸಮರೋಚಿತಶ್ರಮ । ಬಿಂದುಗಳು ಸರ್ವಾಂಗದಲಿ ರಂಜಿಸಲು ಸಿರಿವೊಗದ ॥ ಮಂದಹಾಸೇಕ್ಷಣದಲಾಗೋ । ವಿಂದರಾ
ಮರು ಕೆಳೆಯ ಗೋಪರ । ವೃಂದದಲಿ ಗಜದಂತಧಾರಿಗಳೆಸೆದರವನಿಯಲಿ ॥ ೩೩ ॥ ಹೆಗಲದಂತದ ಮೆರವ ಸಿಲ್ಲಣಿ । ಗೆಗಳಲಾ ಬಲರಾ
ಮದೈತ್ಯಾ । ರಿಗಳು ಕೆಳೆಯರು ಸಹಿತ ರಂಗದ್ವಾರ ರಚನೆಗಳ ॥ ಬಗದು ನೋಡುತ ಹೊಕ್ಕರೆಸವೋ । ಲಗದ ವೀರರ ಪಟುಭಟರ ಪ
ತ್ತಿಗಳ ನಾನಾದೇಶ ಜನದಾಸ್ಥಾನ ಮಂಟಪವ ॥ ೩೪ ॥ ಮಲ್ಲವರೆಗಳು ಮೊಳಗಲಪ್ರತಿ । ಮಲ್ಲ ನೋಲಗವಿದ್ದ ಶಿಗೆಜನ । ವೆಲ್ಲ ಕು
ಳ್ಳಿರಬೆಸೆವ ಮಂಚಂಗಳಲಿ ಬಲ್ಲಿದರು ॥ ಕುಳ್ಳಿರಲು ತಾನೆಸೆವ ಪೃಥ್ವೀ । ವಲ್ಲಭರ ಮಧ್ಯದಲಿ ಗಗನವ । ನಳ್ಳಿರಿವ ಮಂಚದಲಿ ಕು
ಳ್ಳಿರೆ ಕಂಡರವನಿಪನ ॥ ೩೫ ॥ ಅಗಿವ ಚಮರಚ್ಛತ್ರನಿಕರದ । ಬಿಗಿವ ನೇಲ್ಕಟ್ಟುಗಳ ರತ್ನಾ । ಳಿಗಳ ಪರಮೈಶ್ವರ್ಯ ತೇಜೋ
ರಾಶಿಯೆಂದೆನಿಸಿ ॥ ವಿಗಡನುನ್ನತ ಮಂಚದಲಿ ಕಾ । ಳಗವನೀಕ್ಷಿಸಲೆಂದು ಹೃದಯದ । ದುಗುಡದಲಿ ಕುಳ್ಳಿರಲು ಕಂಡರು ಕಂಸ
ಭೂಪತಿಯ ॥ ೩೬ ॥ ಮಲ್ಲರಿಗೆ ತಲೆಗೊಂಬ ವಜ್ರವೊ । ಫುಲ್ಲಲೋಚನೆಯರಿಗೆ ತನುಗೊಂ । ಡೆಲ್ಲರಿಗೆ ಮೋಹಿಸಲು ಬಂದಭಿನವ ಮ
ನೋಭವನೋ ॥ ಖುಲ್ಲಜನರಿಗೆ ಶಾಸಕನೊ ಗೋ । ಪಲ್ಲರಿಗೆ ಬಾಂಧವನೊ ಯೆನೆ ಸಿರಿ । ವಲ್ಲಭನು ತೋರಿದನು ನೋಳ್ಪರ ಕಂಗಳಿಗೆ ನಿ
ಜವ ॥ ೩೭ ॥ ಮತ್ತೆ ಶಿಶುವಿನವೊಲು ತನ್ನಯ । ಹೆತ್ತ ತಾಯ್ತಂದೆಯರಿಗೀಕ್ಷಿಪ । ಮರ್ತ್ಯರಿಗೆ ನರವರನ ಹೋಲುವ ಕಂಸಭೂ
ಪತಿಗೆ ॥ ಮೃತ್ಯು ತಾನೆಂಬಂತೆ ಯೋಗವಿ । ದುತ್ತಮರಿಗೀಕ್ಷಿಸಲು ಪರತರ । ತತ್ವನೇ ತಾನಾಗಿ ನೆರೆದನು ರಂಗಮಧ್ಯದಲಿ ॥ ೩೮ ॥
ಮತ್ತಗಜವನು ಕೊಂದುದನು ಕೇ । ಳುತ್ತ ಮತ್ತವರಾಕೃತಿಯ ಕಾ । ಣುತ್ತ ಖಳನೆಸೆಯೊಳಗೆ ಹೊಕ್ಕು ದುಭೀತಿ ಕನಗಿವರು ॥ ಮೃ
ತ್ಯುಗಳು ಸಂದೇಹವಿಲ್ಲಂ । ದುತ್ತರಿಪಿಸ್ಥೈರ್ಯವನು ಮಿಗೆನುರು । ಗುತ್ತ ಕುಳ್ಳಿರ್ದನು ಧರಾಧೀಶ್ವರರ ಮಧ್ಯದಲಿ ॥ ೩೯ ॥ ಲೋಲ
ನೇತ್ರ ಪಚಲು ವಿಕೆಮಸಿಜ । ದೋಳುಗಳ ಬಹಳಕೆಯ ಜಗವನು । ಸೋಲಿಸುವ ನವರತ್ನಭೂಷಣ ಗಾತ್ರಲಕ್ಷ್ಮಿಯಲಿ ॥ ನೀಲ
ಮೇಘಸಿತಾಭ್ರರುಚಿಗಳ । ನೇಳಿಸುವ ಸುಕುಮಾರರನು ಕೆ । ಣ್ಣಾಲಿಗಳಲಂದಿದಿರುಗೊಂಡಪ್ಪಿದರು ಜನನಿವಹ ॥ ೪೦ ॥ ಕುಡಿಕು
ಡಿದು ಜನನಯನ ತತಿನೀ । ರಡಸಿದವು ಹರಿಮೂರ್ತಿ ಸೊಬಗನು । ಬಿಡದೆ ತಕ್ಕೈಗೆ ತವಕಿಸಿದವಾ ಜನದ ತೋಳುಗಳು ॥ ಪೊಡವಿಡ
ಲುಕರವುಬಗಳೆತ್ತಿದ । ವಡಿಗಡಿಗೆ ಭಾಳದಲಿ ತಾಗಿದ । ರೊಡಲುಗಳ ಸೋರಂತೆ ತದ್ದರುಶನದ ಭಾಗ್ಯತೆಗೆ ॥ ೪೧ ॥ ಅವಭಾಗ್ಯಾ
ಧಿಕರೊ ಸೇವರ । ದೇವ ಮುರುಮಹಿಮರನು ಹೆತ್ತನ । ರಾವ ಜನ್ಮಾಂತರ ಸಹಸ್ರಾರ್ಜಿತ ತಪಸ್ವಿಗಳೋ ॥ ಆವುದೋ ನಮಗಿಂದು
ಪೂರ್ವಭ । ವಾನಳೀಸಂಚಿತ ಸುಕರ್ಮಫ । ಲಾವಳಿಗಳೆನುತೆನುತ ನೆರೆದುದು ಕೂಡೆ ಜನನಿವಹ ॥ ೪೨ ॥ ಇವರು ಸಾಕ್ಷಾದ್ವಿಷ್ಣು
ಗಳು ಗಡ । ದಿವಿಜರರ್ಥಿಸಲವನಿಯಲಿ ಸಂ । ಭವಿಸಿದರು ಗಡ ಶೌರಿ ದೇವಕಿಯರಿಗೆ ಸುತರೆನಿಸಿ ॥ ಇವರನಾ ಗೋಕುಲಕೆ ರಜ ।

ಬ್ರುವನಭಯದಿಂದೊಯ್ದಿರಿಸಲಿಂ । ಶಿವರುಬೆಳವೃತ್ತಿರ್ದರಿನ್ನೆಗಗೋಪಗೃಹದೊಳಗೆ ॥೪೩॥ ಇವರುಮೊಲೆಯುಂಡಂದುಗಡ
ಕೊಂ । ದವರುನಮ್ಮಾಪೂತನಿಯನಾ । ಪವನರೂಪನನರಿಶಕಟಯಮಳಾರ್ಜುನಾಹ್ವಯರ । ಇವರುಸಂಹರಿಸಿದರುವತ್ಸನ ।
ನಿವರುಕೊಂದರುಬಕನನಘನನು । ವಿವರಿಸಿದರಂತಕನಪುರಕೆನುತಿರ್ದುದಖಿಳಜನ ॥೪೪॥ ಇವರುಧೇನುಕವ್ಯಾತ್ಯಗಳುಮ ।
ತ್ತಿವರುಲೀಲೆಯಲಾಪ್ರಲಂಬನ । ದಿವವನೈದಿಸಿದವರುವೃಷಭನತುರಗದಾನವನ ॥ ಹವಣಿಸಿದರಸುಗಳನುರಜಕನ । ಸವಸಿಕು
ಬ್ಜೆಯನಿಗುಜಿಕೊಂದರು । ಕುವಲಯಾಪೀಡನನುಮತ್ತಿಂದೀಗಲ್ಲೀಬರುತ ॥೪೫॥ ಕಾಳಗಿಚ್ಚನುನುಂಗಿದನುಗಡ । ಪಾಲಿಸ
ಲುಗೋಕುಲವನಿಂದ್ರನ । ಕಾಲವೃಷ್ಟಿಯಮಾಡಲಾಗೋವರ್ಧನಾಹ್ವಯದ ॥ ಶೈಲರಾಜನನೆತ್ತಿದತನ್ನಯ । ತೋಳಲಾಂತನು
ಗುಂಡನೆರೆಕಿ । ತ್ತೇಳುದಿನಪರಿಯಂತಚಲಿಸದೆಘಾಳಿಮಳೆಗಳಲಿ ॥೪೬॥ ದುಷ್ಟಫಣಿಕಾಳಿಯನಹೆಡೆಗಳ । ಮೆಟ್ಟಿಮಡುವನುಕಲಕಿ
ಕಡಲಿಂ । ಗಟ್ಟಿದನುಗಡತದ್ವಿಷೋದಕಪಾನದಗ್ಧರನು ॥ ದೃಷ್ಟಿಯಿಂದೆತ್ತಿದನುಗಡನೆರೆ । ನಷ್ಟರೆನಿಸಿದಶಿಶುಪಶುಗಳನು । ಸೃ
ಷ್ಟಿಪಾಲಕನೀತನೆನುತಿರ್ದುದುಜನಸ್ತೋಮ ॥೪೭॥ ಗೋಪಿಯರುಗಡತಮ್ಮಹೃದಯದ । ತಾಪವಡಗಲುಕಂಗಳಲಿಕುಡಿ ।
ದೀಪರಮಪೂರುಷನದಿವ್ಯಮುಖಾಂಬುಜದರಸವ ॥ ರೂಪುಗುಣಸೌಂದರ್ಯಮಧುರಾ । ಳಾಪಹೃಚ್ಚಿಂತೆಯರುಮಾಡಿದ । ನೋ
ಪಿಯಾವುದೆಮಾರದರಿಹಪರಶೋಕವಿಭ್ರಮವ ॥೪೮॥ ಈತನೀತಂಗಗ್ರಜನುಗಡ । ಭೂತಳವನಿವನಾಂತನಂತನೆ । ಜಾತ
ನಾದನುಕಂಡರೋಹಿಣಿಯಲ್ಲಿಯದುವರಗೆ ॥ ಈತಗಳುಜಗದುದ್ಭವಸ್ಥಿತಿ । ಹೇತುಗಳುನೋಡೆನುತಬಲನಿ । ತ್ಯಾಶುಮಾರನೋ
ರಂತೆಹೊಗಳುತ್ತಿರ್ದುದಖಿಳಜನ ॥ … … … … ॥೪೯॥

ಅಂತು ಸಂಧಿ ೩೮ಕ್ಕಂ ಪದನು ೧೮೨೪ಕ್ಕಂ ಮಂಗಳಮಸ್ತು.

ಮುವ್ವತ್ತೊಂಭತ್ತನೆಯ ಸಂಧಿ.

ಚಾಣೂರಮುಷ್ಟಿಕರ ಮರಣದ ಕಥೆ.

ಸೂಚನೆ॥ ಗಂಡುಗಲಿಗಳುಹರಿಬಲರುಮುಂ । ಕೊಂಡುರಣದಲಿಮಲ್ಲರನುತಲೆ । ಗೊಂಡುಮುರಿದೆಳದಾಡಿ
ದರುಕಂಸನನುಕಳನೊಳಗೆ॥ … … … …

ಪದನು॥ ಇಂತೆನುತತತಮತಮಗೆಲಕ್ಷ್ಮೀ । ಕಾಂತರಾಮರರೂಪಗುಣವೃ । ತ್ತಾಂತಸಂಗತಿಗಳನುಕಾಣಿಸುತ್ತೊಬ್ಬರೊ
ಬ್ಬರಿಗೆ ॥ ಸಂತಸುಖದೊಳಗಿರಲುಮೊಳಗುವ । ನಂತಭೇರೀರವದಮಲ್ಲರ । ತಿಂಥಿಣಿಯನೀರೌದ್ರರಸರಂಜಿಸಿತುರಂಗದಲಿ ॥೧॥
ಎಂದನಾಚಾಣೂರನಾಗೋ । ವಿಂದಬಾರೈಬಲ್ಲಿದನುನೀ । ನೆಂದುಕರಸಿದನವನಿಪತಿಯಾಳಿಯಂದಿರಾಟವನು ॥ ಇಂದುನೋಳ್ಪ
ಮನೋಭಿಲಾಷೆಗೆ । ಸಂದುತೋರೂದೆಮ್ಮೊಡನೆಬ । ಲ್ಲಂದದಲಿಮಲ್ಲಶ್ರಮವನೆನಲೆಂದನಸುರಾರಿ ॥೨॥ ಮಲ್ಲರರಸನುಮರು
ಳಲಾಭೂ । ವಲ್ಲಭನುಮಲ್ಲಾಂಗವಿದ್ಯೆಯ । ದೆಲ್ಲಿಯದುಗಿರಿವರನಿವಾಸಿಗಳಾದಗೋಪರಿಗೆ ॥ ಬಲ್ಲಿದನುತಾನಹೆನುಕರೆನಿಜ ।
ಮಲ್ಲಬಾಲಕರನುಧುರಕೆಸಮ । ವಲ್ಲಸಮರವಿಹಾರನಮಗಿಬ್ಬರಿಗೆಕೇಳೆಂದ ॥೩॥ ಒಡೆಯರಿಲ್ಲಿಮಗಾಹವದಪರಿ । ವಿಡಿಯಕ
ಲಿಸುವರಿಲ್ಲಗುರುಗಳು । ಕಡುಗಿಕಾದುವರೆಂತುನಿನಗೀಸಮರದಂಘವಣೆ ॥ ಬಿಡದೆಕಾದಿದಡಕಟಪಾಪದ । ಕಡಲಲಾಳದೆಮಲ್ಲ
ಸಭೆತ । ನ್ನೊಡನೆಸಮರದಮಾತನಾಡದಿರೆಂದಡಿಂತೆಂದ ॥೪॥ ಆರಿಗಾಡುವೆಕೃಷ್ಣಗೋಪಕು । ಮಾರಕನೆನೀದಿಟಕೆಕೊಂದವ ।
ರಾರುಗಜವನುಗಜಸಹಸ್ರಸಮಾನಸತ್ವವನು ॥ ಆರುಮುರಿದರುಧನುವನಾರೋ । ಹೀರಿದರುಪೂತನಿಯಜೀವವ । ನಾರುಶಕ
ಟನನೊದೆದರಾಯಮಳಾರ್ಜುನರನೆಂದ ॥೫॥ ಆರುಬಕವೃಷವತ್ಸಧೇನುಕ । ಮಾರಿಗಳುಮೇಣಘನಜಠರವ । ನಾರುಹೊ
ಕ್ಕುಳುಹಿದರುಶಿಶುಪಶುನಿಕರದಸುಗಳನು ॥ ಆರುಕೊಂದರುಕೇಶಿಯನುರಣ । ಧೀರರಲ್ಲಾನೀವ್ರಸರಿನಿಮ । ಗಾರುಮಲ್ಲರಸಭೆ
ಗೆಪಾತಕವಿಲ್ಲಕೇಳೆಂದ ॥೬॥ ಹಳಚುನೀನೆನ್ನೊಡನೆಮುಷ್ಟಿಕ । ಹಲಧರರುತಮ್ಮೊಳಗೆಕಾದಲಿ । ಸಲಿಸುವುದುನೃಪಗರ್ಭಿಯ
ನುನೋಡಲಿವಿನೋದವನು ॥ ಇಳೆಯಜನರೆಲೆಕೃಷ್ಣಕೊಡುಕರ । ತಳವನನುವಾಗೆನುತಹಿಡಿದನು । ತಳವನಾಚಾಣೂರಮು
ಷ್ಟಿಕನಾಪಲಾಯುಧನ ॥೭॥ ತಳವತಳದಲಿಹೊಯ್ದುಭುಜಮಂ । ಡಲವನಾಸ್ಫೋಟಿಸಿಪರಸ್ಪರ । ಕಲಿತಕರಜಾನೂರುಪಾದ
ದ್ವಿತಯಬದ್ಧದಲಿ ॥ ತಳ್ಳಿಸಿತ್ತೊಡರುವಬೀಸಿಬಿಸುಡುವ । ನಿಲುವನಿಂದಡಿಯಿಂದಬಲಿಸುವ । ಹಲವುಪರಿಯಲಿಹಳಚಿತಿವಿದಾಡಿದ
ರುಪಟುಭಟರು ॥೮॥ ಹೊಗುವಹತ್ತುವಲಾಗಿಸುವಹೆರೆ । ತೆಗವತ್ತೊಡರುವತೋರಹತ್ತರ । ಬಿಗಿಯುರಗಬಂಧದಲಿಬಿಚ್ಚುವ
ಬೀಸುವಡೆಗವಿವ ॥ ಬಿಗಿದುಬೀಳುವಧರದಲೇಳುವ । ಗಗನಗತಿಯಲಿಲಂಘಿಸುವಮೂ । ಜಗದವೀರರುತೋರಿದರುಬಹುವಿಧ
ದಬಿನ್ನಣವ ॥೯॥ ಡೊಕ್ಕರಿಸಿಬರಸೆಳವಬಿಡಿಸುವ । ತೆಕ್ಕೆಯಲಿಮಡಮುರಿವಕೆಳಚುವ । ಜಕ್ಕುಲಿಸುವಂಘವಿಸುವಾಸ್ಫೋಟಿ
ಸುವಬೊಬ್ಬಿರಿವ ॥ ಸಿಕ್ಕಿಸುವಹೊರವಡುವಹೋರುವ । ದಿಕ್ಕರಿಗಳಂದದಿಮಹಾಭಟ । ರಿಕ್ಕಿದರುಘಾಯವನುಪರಿಹರಿಸುತ್ತ

ಸುಭಟರು ॥೧೦॥ ನೆರೆದುನೋಡುತ್ತಾಪುರಸ್ತ್ರೀ । ಯರುಮಹಾಬಲಬಾಲಕರಸಂ । ಗರವನೆಂದರುತಮ್ಮೊಳಗೆಖಾಪಕಟ
ಧಿಯನುತ ॥ ಬರಿಶಿದ್ಯೆಕೊಲಲೆಂದುಸುಕುಮಾ । ರರನುಶಿವಶಿವಕರುಣವಿಲ್ಲದ । ಧೊರೆಯಲಾಸಭ್ಯರುಮಹಾಪಾತಕಿಗಳಿವರೆ
ಂತ ॥೧೧॥ ಏತ್ತಲೀದೃಢವಜ್ರಸನ್ನಿಭ । ಗಾತ್ರರೀಚಾಣೂರಮುಷ್ಟಿಕ । ರೆತ್ತಲತಿಸುಕುಮಾರಗಾತ್ರರುರಾಮಮಾಧವರು॥
ತ್ತಲೀಗಿರಿಸನ್ನಿಭರುತಾ । ವೆತ್ತಲೀಬಾಲಕರುಕಾಜೊ । ದೆತ್ತಲಾಕಡುಪಾಪಿಗಳುನಾವೆಂದರಬಲೆಯರು ॥೧೨॥ ಲೇಸುತಾ
ಕಟಕಟನೋಳ್ಪಸ । ಭಾಸದರಿಗಿದುಸಕಲಧರ್ಮವಿ । ನಾಶನವಲಾಬಾಲಬಲಯುದ್ಧವನುನೋಡುವುದು ॥ ದೋಷವಿದುಬಲ್ಲ
ರುಕೊರಗತಿ । ದೋಷಿಸಭೆಯನುಸರ್ವದಾಕೃತ । ದೋಷಿಗಳುತಾವಾಗದೇಕಿಹರೆಂದರಬಲೆಯರು ॥೧೩॥ ನೋಡಿರಾಕೆಳ
ಯರುಕೃಷ್ಣನ । ಬಾಡಿದಾನನಕಮಲಲಕ್ಷ್ಮಿಯ । ನೀಡಿರಿವಘನಘರ್ಮಜಲಪರಿಲುಳಿತಕುಂತಳದ ॥ ನೋಡಿಬಲರಾಮನೆ
ಮನನೀ । ರೂಢರೋಷೋದ್ವೃತ್ತನಯನಸ । ಗಾಢರಾಡಶ್ವೇತಜಲಸಂಸಿಕ್ತವಿಗ್ರಹನ ॥೧೪॥ ಧನ್ಯೆಯರುಗೋಪಿಯ
ತ್ರಿಭುವನ । ಮಾನ್ಯೆಯರುನೋಳ್ಪರುಗಡೀಕರು । ಣಾರ್ಣವನಕಮನೀಯಮೂರ್ತಿಯನತುಳಕೀರ್ತಿಯನು ॥ ವರ್ಣಿಸು
ಮರವರುಮಹಾತ್ಮೆಯ । ರನ್ಯಸುಖವನುಮುನಿಗಳಂತಿರೆ । ಮುನ್ನಮಾಡಿದತಪವದಾವುದೊಭವಸಹಸ್ರದಲಿ ॥೧೫॥ ಪಾ
ದಣಿಯರುಬಾಲಚರಿತವ । ನಾಡಿದಣಿಯರುತಮ್ಮೊಳಗೆನಡೆ । ನೋಡಿದಣಿಯರುಕಂಗಳಲಿಸಂಪನ್ನಗುಣನಿಧಿಯ ॥ ನೋಡಿರಾ
ಮಾವಪಾಪವ । ಮಾಡಿದೆವೊಮೊದಲಲ್ಲಿತೊಟ್ಟಿದು । ಕೇಡುಹಾಹಾವಿಧಿಯೆಹಾಯೆನುತಿರ್ದರಬಲೆಯರು ॥೧೬॥ ಕರವಕಾ
ವಕಡವಕೊಟ್ಟಲ । ನಿರದೆತೂಗುವಸಾರಿಸುವವಿಧಿ । ಮರಿವಪೂಸುವವಿಮಾವಪೂಡುವವುಂಬಪವಡಿಸುವ ॥ ಭರದಲುದ್ಯಾಲೆ
ನಾಡುವೆಡೆಗಳ । ಲರರೆಗೋಪಿಯರೀಮುಕುಂದನ । ಚರಿತ್ರವನುಪಾಡುತ್ತಮರವರುಗಡಪರಿಕ್ರಮವ ॥೧೭॥ ಮುಂದೆತು
ಗಳುಗೋವಳರುಬರೆ । ಹಿಂದೆಕೈವಾರಿಸುತನಡುವೆಮ । ಹೇಂದ್ರವಂದಿತಚರಣನೀಗೋವಿಂದನೈತರಲು ॥ ನಿಂದುಹೋದರೆ
ಗೆಗೋರಜ । ವಿಂದಮೊರವಳಕಾವಳಿಯುಮೃದು । ಮಂದಹಾಸಾನನವನೀಕ್ಷಿಸುವರುಸಭಾಗ್ಯೆಯರು ॥೧೮॥ ಕಂಗಳಲಿಕುಡಿ
ಡಿದುಕೃಷ್ಣನ । ಮಂಗಳಾನನಸುಧೆಯನಾಗೋ । ಪಾಂಗನೆಯರೆವೆಗಳಿಗೆಮುನಿವರುದಣಿಯರನವರತ ॥ ತಂಗಿನಮ್ಮಂದದಲ
ಗ್ಯೆಯ । ರಂಗನೆಯರಾರೀದುರಾತ್ಮರ । ಸಂಗರದಲಳಿವುದನುಕಂಡೆವೆನುತ್ತಮರುಗಿದರು ॥೧೯॥ ಏಕೆಕ್ರೋರಿದೆವಿಧಿಯೆಸುರ
ರ । ಲೋಕಮೋಹನಮೂರ್ತಿಯನುಮ । ತ್ತೇಕೆನೋಕಿದೆನಯನರತ್ರವನೀಮಹಾಹವಕೆ ॥ ಏಕೆಬಾರದುಸಾವುತಮಗಿ । ನ್ನೇ
ಜೀವವೆನುತ್ತಸತಿಯರು । ಶೋಕಜಲಧಿಯಲಾಳುತೇಳುತ್ತಿರ್ದರಡಿಗಡಿಗೆ ॥೨೦॥ ಈಪರಿಯಲಳಲುತ್ತಸುಜನಕ । ಳಾಪವೀ
ಸುತಿರಲುಕೇಳ್ಳೆ । ಭೂಪಯೋಗಾಧೀಶ್ವರನುಕೇಳುತ್ತಸತಿಯರನು ॥ ತಾಪಹರವೆಂದೆನಿಪನಿಜಕರು । ಣೋಪಚಿತದೃಷ್ಟಿಯಲಿ
ಲೋಡಿಸ । ಕೋಪನಾದನುಶತ್ರುಸಂಹಾರಕ್ಕೆಮನದಂದ ॥೨೧॥ ಎಕ್ಕತುಳದಲಿತೋಳಬಲುಹನು । ಚಕ್ರಧರಚಾಣೂರರಿಕ್ಕಿ
। ತಿಕ್ಕಿದರುಘಾಯುವನುಬಲಮುಷ್ಟಿಕರುತಮ್ಮೊಳಗೆ ॥ ಲೆಕ್ಕಿಸುವಡಾಹರಿಬಲರಘಾ । ಯಕ್ಕೆಮಲ್ಲರೊಡಲಳುಸುರೊಳ । ಸಿಕ್ಕಿ
ಪುಸಡಿಲಿದವುತನುಸಂಧಿಗಳುಪಟುಭಟರ ॥೨೨॥ ಕಂಡರತಿಸುಕುಮಾರಗಾತ್ರರು । ಚಂಡವಿಕ್ರಮರಿವರುಕರಹತಿ । ಗೊಂಡ
ತ್ತೆದೆಬಲ್ಲಿತಹುದೋಕೃಷ್ಣನೀನಹುದೋ ॥ ಕಂಡಪರಿಯಲಿತಿವಿಯಲೇಕೀ । ಭಂಡತನಬೇಡೊಂದನೇಕ್ಸೈ । ಕೊಂಡುನೋಡಾ
ಣ್ಣವೋನೀಮುನ್ನವೋಯೆಂದ ॥೨೩॥ ತಿವಿಯಲವೊನೀಮುನ್ನಮಲ್ಲಾ । ಹವಕೆಮಾನ್ಯನಲಾಭಟಾಗ್ರಣಿ । ಬವರವೆನ್ನದು
ಳಿಕಮುಂಗಾಣಿಕೆಯನಿನ್ನದಲ್ಲೆ ॥ ಜವವತ್ರೋರಾತ್ರೋರೆನಲುಮಾ । ಧವನನುಡಿಗೇಳುತ್ತಮುಷ್ಟಿಯ । ಹವಣಿಸುತಚಾಣೂ
ರೆರಗಿದನಸುರಹರನೆದೆಯ ॥೨೪॥ ಆಯಿತೇಸಂಕಲ್ಪನೋಡೆ । ನ್ನಾಯತಿಕೆಯನುನಿಲ್ಲೆನುತನಾ । ರಾಯಣನುನಗುತಟ್ಟ
ಸೆದಲಾಮಹಾಭಟನ ॥ ಘಾಯವನುಪರಿಹರಿಸಿಕಡುಪೂ । ರಾಯದಲಿಭಟನುರವನೆರಗಲು । ಬಾಯಲೊಕ್ಕುದುರುಧಿರನಾಸಾ
ವರವೆರಡರಲಿ ॥೨೫॥ ಬಿಡದೆಬೀಸಿದಡರಿಭಟನತಲೆ । ಯೊಡೆದುಸೂಸಿದುದರುಣಜಲನಭ । ದೆಡೆಯಲೇನಾರಿತ್ತುಜೀವನಕ
ರವನುಬಿಸುಟು ॥ ಪೊಡವಿಗೀಡಾಡಿದನುಹೆಣನನು । ಗಡುಗಲಿಯುಮರಣದಲಿಕಟ್ಟಿತು । ಗುಡಿಯನಭ್ರದಲಮರಚಯಜ
ಜಯತುಜಯಯೆನುತ ॥೨೬॥ ಮುಷ್ಟಿಕನಕರಹತಿಗೆಬಲನೈ । ಗೊಟ್ಟುವಜ್ರಸಮಾನದುಗ್ಧತರ । ಮುಷ್ಟಿಯಲಿಮೋದಿ
ಕಿವಕ್ಷಸ್ಥಳವನುಸುರಡಗಿ ॥ ಧಟ್ಟಗೆಡದನುಧರೆಗೆಖಳಕಡ । ಲಿಟ್ಟುಹರಿದುದುರಕ್ತವಜ್ರದ । ಲಿಟ್ಟಗಿರಿಯಂದದಲಿಕುಸಿಯಲು
ರಿಸಾತಳಕೆ ॥೨೭॥ ಕಡುಗಿಫಡಫಡತಾನಿಹೆನುರಣ । ದೆಡೆಗೆನಿಲುನಿಲ್ಲೆನುತಬಲನನು । ಜಡಿದುಕೂಟಾಖ್ಯಯನುಹೆಳಚಿ
ಯಂತ್ರಕನಪುರಕೆ ॥ ನಡೆದನತ್ತಲುಕಂಸಲಾಖ್ಯನ । ನೆಡೆದಕಾಲಲಿಕೃಷ್ಣನೊದೆಯಲು । ಪೊಡವಿಗಿತ್ತಸುಕನುವನವರ್ಯ್ಯದಿದರು
ಜನದವ ॥೨೮॥ ಅಸಮಬಲಚಾಣೂರಮುಷ್ಟಿಕ । ರಸುವಳಿಯೆಕೂಟಾಖ್ಯರೊಡಲನು । ಬಿಸುಟುಹೋಗಲುವಿಕ್ಕಮಲ್ಲ
ಬಲಮುರಾಂತಕರ ॥ ಘಸಣಿತಮಗೇಕೆನುತಹಾಯ್ದರು । ದೆಸೆದೆಸೆಗೆಜೀವಾಭಿಲಾಷೆಯ । ಲಸುಗಳುಳಿದರೆಸಾಕೆನುತಸಂಗಾ
ಯ್ಯೀತಿಯಲಿ ॥೨೯॥ ಕೊಲ್ಲೆವೋಡದಿರೋಡದಿರಿನೀವು । ನಿಲ್ಲಿರೈಪರಿವಾರಹಗೆತಮ । ಗಲ್ಲನಂಮಾವರ್ಗ್ಯಸಾನೀವಂಜಬೇ

ಡೆನುತ ॥ ಫುಲ್ಲನಾಭಾನಂತರಭಯವ । ನೆಲ್ಲರಿಗೆಕರುಣಿಸುತನಿಜಕರ । ಪಲ್ಲವವನೆಗಹಿದರುನಲಿದಾಡುತ್ತರಂಗದಲಿ ॥೩೦॥ ಬನ್ನಿರೈಗೋವಳರುನೀವೇ । ನನ್ನಿಗರೆಕರೆಕರೆಯುತೋಡುವ । ಕುನ್ನಿಗಳನೇಗುವೆವೆನುತ್ತಾರಾಮಮಾಧವರು ॥ ಹೊನ್ನಘಂಟೆಗಳುಲಿಯುಲಾಡಿದ । ರುನ್ನತೋನ್ನತರೂಪುಗುಣಸಂ । ಪನ್ನರೆಸವಾಮಲ್ಲವರೆಗಳರಂಗಮಧ್ಯದಲಿ ॥೩೧॥ ನೂಕಿವರನೂರಿಂದಹೊರಗು । ದ್ರೇಕಿಗಳನೆಲವೆಲವೊಹರೆಗಳ । ನೇಕೆಯೊಡವಿರಿಭಂಡರಿರಬಾಹಿರರಿರಜ್ಞರಿರ ॥ ನಾಕನಂದನಕುರುಳಿಕುಹಕಿಯು । ನೇಕೆಕೊಂಡಾಡುವಿರಿಬಿಟ್ಟನು । ಗೋಕುಲದಕೈಸೂರೆಯನುನಿಮಗೆಂದನಾಕಂಸ ॥೩೨॥ ಕೊಲ್ಲಿವಸುದೇವನನುಮಕ್ಕಳು । ಗಳ್ಳನನುವೃದ್ಧನನುಕೊಲ್ಲಲೆ । ಕೊಲ್ಲಿರೈಯ್ಯನನುಗ್ರಸೇನನನಾತನನುಜನನು ॥ ಭಲ್ಲೆಯುದಲಿರಿಕುಹಕಿಯಾದವ । ರೆಲ್ಲರನುತಡೆಗಡಿಯೆನುತರಿಪು । ಮಲ್ಲಭಂಜನನೆದ್ದುಕೈವೀಸಿದನುನಿಜಬಲಕೆ ॥೩೩॥ ಅಣ್ಣನೀನದಕೇಳಿದ್ದೈಬಾ । ಬಂಣಿಗೆಯನಾನಿದಕೆತಕ್ಕುದ । ಹಣ್ಣಿಬಹೆನೀನೋಡುಚಿತ್ರವನೆನುತಲಭಿಮೆಯುಲಿ ॥ ಪುಣ್ಯಗುಣನಿಧಿಲಂಘಿಸಿದನಾ । ಕಣ್ಣಮನಗಳುಕೊಳ್ಳದಸುರಾ । ಗ್ರಣ್ಯನೇರಿದರಾಜಮಂಚಾಗ್ರಕ್ಕೆರಭಸದಲಿ ॥೩೪॥ ಬರಲುಕಾಣುತಗದ್ದುಗೆಯಮೇ । ಲಿರದೆಕೆಲದಲಿನಿಂದುಕೊಂಡನು । ಹರಿಗೆಕಡಿತಲೆಗಳನುಕಲಿಗಳದೇವನಾಹವಕೆ ॥ ಭರದಲೆಡಬಲವಂಕದುಪ್ಪರ । ದುರವಣಿಯಲಾಗಿನಲವಣಿಗೋ । ಚರಿಸದಂತಭ್ಯಾಸದಲಿತೋರಿದನುಕೌಶಲವ ॥೩೫॥ ಗರುಡನುರಗನನಾಕಿಹಿಡಿವಂ । ತರಿಭಟನನಾಹವದಲಿರದ । ಬ್ಬರಿಸಿಕೆಡೆಕೆಡೆಯೆನುತಹಿಡಿದನುಹಾಯ್ದುಮುಂದಲೆಯ ॥ ಧರೆಗೆಬೀಸಾಡಿದನುಜಗದೀ । ಶ್ವರನುಜಗದಾಧಾರನಾತನ । ಕರುಳುಚಲ್ಲಲುಮೇಲೆಧುಮಿಕಿಹಾಯ್ದನವನೊಡಲ ॥೩೬॥ ಕೆಳದುದಸುಕಾಯವನುಕಂಸನ । ಬಳಗಬಾಯ್ಬಿಡೆಬರಿಹೆಣನನೆಳ । ದೆಳದುನಲಿದಾಡಿದನುಕೋಪಾಟೋಪದಲಿಬಿಡದೆ ॥ ಮಳೆಗರೆದರಭ್ರದಲಿಪುಷ್ಪಾ । ವಳಿಮಯುದಲಮರೌಘಕೈಗುಡಿ । ಗಳಲಿಕುಣಿದುದುಕೂಡೆನಿತ್ಯಾತ್ಮಕನವರ್ಣಿಸುತ ॥ … … … … ॥೩೭॥

ಅಂತು ಸಂಧಿ ೩೯ಕ್ಕಂ ಪದನು ೧೮೬೦ಕ್ಕೆ ಮಂಗಳಮಸ್ತು.

ನಾಲ್ವತ್ತನೆಯ ಸಂಧಿ.

ಉಗ್ರಸೇನಗೆ ಪಟ್ಟವಂ ಕಟ್ಟಿದ್ದು.

ಸೂಚನೆ ॥ ಸಂತವಿಟ್ಟನುಸಕಲಯಾದವ । ಸಂತತಿಯನಿರದುಗ್ರಸೇನಂ । ಗಂತಕಾಂತಕನೊಲಿದುಪಾಲಿಸಿದ
ನುನ್ನೃಪಾಸನವ ॥ … … … …

ಪದನು ॥ ಅರಸಕೇಳನವರತವೈರೋ ॥ ತ್ತರದಭರಭಾರದಲಿನೆನನೆನ । ದಿರುಳುಹಗಲೋರಂತೆತನ್ಮಯನಾಗಿಮೂಜಗವ ॥ ಬೆರಸಿಕಾಣುತಕಂಸನಾಮುರ ॥ ಹರನಸಾರೂಪ್ಯವನುಪಡೆದನು । ಪರಮಭಕತರಿಗಿನ್ನುದುರ್ಲಭವೇನುಹೇಳೆಂದ ॥೧॥ ಅವನಿಪತಿಕೇಳಣ್ಣನವಸಾ । ನವನುಕಂಡವನನುಜರಿಗೆಮತಿ । ಸವನಿಸಿದುದಾಹವಕೆಬಲನೊಡನೆಂಟುಮಂದಿಗಳು ॥ ದಿವವನೈದಿದರವರವನಿತಾ । ನಿವಹಕೆಟ್ಟೆವೆನುತ್ತಹಾಹಾ । ರವದಿಗಂತವನಳ್ಳಿರಿಯಲೈತಂದರಾಸ್ಥಳಕೆ ॥೨॥ ಹೊಡಹೊಡದುತ್ರಲೆಬಾಯಿಬಸುರುಗ । ಳೊಡೆದುಸುರಿವರುಣಾಂಬುಕಂಬನಿ । ಗಡಲಸಂಗಮಮಾಯ್ತುತಕ್ಕವಿಸುತ್ತಪತಿಗಳನು ॥ ಕೆಡದರವನಿಗೆಹಳಿವಿಸುತದೆಸೆ । ವೊಡೆಯುಲೊರಲುತಬಿಕ್ಕಿಬಿರಿವುತ । ಮಡದಿಯರುಬಸವಳಿದರಳಲಿದರತ್ತಲಿಳೆವೊಡೆಯ ॥೩॥ ಹಾರಮಣಹಾಕಾಂತನೆಲನಿದು ಸೇರಿತೇವ್ಯದುತಳ್ಪಶಾಯಿಗೆ । ಸೇರಿದುದೆಕಸ್ತೂರಿಕುಂಕುಮಗಂಧರಾಗವಿದು ॥ ಈರಣೋದ್ಧತಧೂಳಿರುಧಿರಾ । ಸಾರಸಾಧಿತಪಂಕವೆಮಗಿ । ನ್ನಾರುಗತಿಹೇಳೇಕೆನುಡಿಯೆಯೆನುತ್ತಹಲುಬಿದರು ॥೪॥ ಉಪ್ಪವಡಿಸೆಲೆಕಾಂತನೊಡೆದಿ । ನ್ನೊಪ್ಪವನುಪುರಲಕ್ಷ್ಮೀನುಳಿ । ದೆಪ್ಪಲರಿವುದೆಕೋರುತಿದೆಸದ್ಧರ್ಮವೆನ್ನೊಡನೆ ॥ ತಪ್ಪಿದೈವದ್ರೋಹಿಗಳಬದು । ಕಿಪ್ಪರಾರೀಗೋದ್ವಿಜರವಧೆತಪ್ಪದೇಕೈಯೊಡನೆಫಲಿಸಿತ್ತೆಂದರಬಲೆಯರು ॥೫॥ ಈತನಲ್ಲಾಸಕಲಭುವನ । ಖ್ಯಾತದೈವದದೈವತ್ರಿಜಗ । ಕ್ಕೀತನಿಂದುತ್ಪತ್ತಿವಿಲಯಸ್ಥಾನವೃತ್ತಿಗಳು ॥ ಈತನನುಸುರಮುನಿವರರುಸಾ । ಕ್ಷಾತವಿಷ್ಣುವೆಯೆಂಬರೇತ । ಕ್ಕೀತನಲಿಹಗೆಯಾಯ್ತೆನುತಹಲುಬಿದರುಹರಿಗುಣವ ॥೬॥ ಇಂತೆನುತ್ತಿರೆಕೃಷ್ಣನಾನೃಪ । ಕಾಂತೆಯರಿಗಭಯವನುಕರುಣಿಸಿ । ಸಂತವಿಸಿಸಂಸಾರಧರ್ಮವಿದೆಂತುಟೆಂದರುಪಿ ॥ ಚಿಂತೆಬೇಡೆಂದೆನುತಮೃತನೃಪ । ಸಂತತಿಗಳಿಗೆಮಾಡಿಸಿದನವ । ರಂತದೂರ್ಧ್ವಕ್ರಿಯೆಗಳನುನೆರೆಸಂಪದಾಯಕವ ॥೭॥ ಬಿಡಿಸಿಸೆರೆಯನುತಾಯಿತಂದೆಯ । ರಡಿಗೆರಗಿಬಹುಕಾಲದುಃಖಂ । ಬಡಿಸಿದನಲಾಪಾಪಿಸೆರೆಸಂಕಲೆಗಳನಮಾಡಿ ॥ ಬಿಡದೆತತ್ಫಲವೈಸಲೇಕೈ । ಯ್ದೊಡನೆಫಲಿಸಿತ್ತೆನುತಹರಿಬಲ । ರಡಿಗೆರಗೆತಲೆದೂಗಿನನದರುನಯನವಾರಿಯಲಿ ॥೮॥ ಹುಟ್ಟಿಫಲವೇನವ್ವಮಕ್ಕಳು । ನೆಟ್ಟನಾರಾಧಿಸದೆನೆರೆಕ । ಣ್ಣಿಟ್ಟುಕಾಣದೆಹೆತ್ತತಾಯ್ತಂದೆಯರನಾರೆಂದು ॥ ನಟ್ಟಡವಿಯುಲಿಸುಟಪೊಲುಕೈ । ಗಟ್ಟುವುದೆಸುಖವೆನುತದನುಜಘ್ನ । ರಟ್ಟರಾಮರುತುಂಬಿದರುಕಂಗಳಲಿಕಂಬನಿಯ ॥೯॥ ಹೆತವಿಧಿಸ್ರೀ

ತವಿದೇಶ | ಸ್ಥಿತಿಯುಲಾತಮಗಾಯ್ತು ಮಾತಾ | ಪಿತೃಪರೋಕ್ಷದಲಾಯ್ತು ಲಾಲನಪೋಷಣಾದಿಗಳು || ಅತುಳಸುಖವರ್ಧಕರಿಗಿ
ಲ್ಲದ | ವಿತಥಜೀವನರವರುಜೀವ | ನ್ಮೃತರಲಾಯೆಂದೆನುತದನುಜಾರಾತಿಬಿಸುಸುಯ್ದ || ೧೦ || ಅರ್ಥಿತಾಖಿಳಸೌಖ್ಯಘನಪು
ರು | ಸ್ವಾರ್ಥತರವಹಮರ್ತ್ಯದೇಹವ | ನರ್ಥಿಯಿಂದುತ್ಪಾದಿಸಿದಮಾತಾಪಿತೃಂಗಳಿಗೆ || ಅರ್ಥದಿಂದೊಡಲಿಂದಸುಖವಸ | ಮ
ರ್ಥಿಸದಪಾಪಿಗಳಜನನ | ವ್ಯರ್ಥವಲ್ಲಾ ನರಕಭಾಜನರವರುಕೇಳೆಂದ || ೧೧ || ಹೆತ್ತತಾಯನುತಂದೆಯನುಮಾ | ಸ್ಪೋತ್ತಿದವ
ರನುಧಾರ್ಯೆಯನುಸ | ದ್ವ್ರಾತ್ಯೆಯನುಶಿಶುಪಶುಗುರುದ್ವಿಜಸೇವಕಾಶ್ರಿತರ || ಶಕ್ತಿತನಗುಂಟಾಗಿಸಲಹದ | ಮರ್ತ್ಯರನುಕಡಿದ
ವನಬಾಯಿಗೆ | ತುತ್ತುಮಾಡುವರವನವಮಾಂಸವನರಕದೊಳಗೆಂದ || ೧೨ || ಬರಿದೆಹೋದವುದಿವಸವಿನ್ನೆಗ | ಸಿರೆಯಲಿದ್ದಿರಿ
ನೀವುದೇಶಾಂ | ತರಕೆನೂಕಿದುದೆಮ್ಮನರಿವವರಾರುವಿಧಿಕೃತವ | ಮರವುದೆಮ್ಮಪರಾಧವನುಪರಿ | ಹರಿಸಿಕೊಂಬುದುಗುಣವ
ನೆನುತಡಿ | ಗೆರಗಿವಿನಯಾನ್ವಿತರುಮೆರದರುಲೋಕಸಂಗ್ರಹವ || ೧೩ || ಕುಡಿಕುಡಿದುಕಿವಿಗಳಲಿಕಂಗಳ | ಲೊಡನೆವಾಕ್ಸುಧೆ
ರೂಪಗುಣಗಳ | ಲೊಡಲಮರದರುಮುದದಲುಬ್ಬುವರೋಮಪುಳಕದಲಿ || ಸುಡಿಯುಲರಿಯರುಕ್ಕೆಗಳಲಿತಡ | ತಡವಿತೆಗೆದಪ್ಪಿ
ದರುಮಾಜಗ | ದೊಡೆಯರನುಪುತ್ರಾನುರಾಗದಲಾಮಹಾಭುಜರ || ೧೪ || ತೆಗೆದುತೊಡೆಯಲಿಕುಳ್ಳಿರಿಸಿಕೊಂ | ಡೊಗುವಿ
ಗೆಯಸುಪ್ರೇಮಹರುಷಾ | ಶ್ರುಗಳಧಾರಾವೃಷ್ಟಿಯಲಿನಾದಿದರುಸುತರೊಡಲ || ಮಗನಗಾತ್ರಸ್ಪರುಶದಲಿತೊರ | ದೊಗುವವೊ
ಲೆಗಳಲಪ್ಪಿದೇವಕಿ | ಢಗೆಯನುಳಿದಳುಮನದಸಂಕ್ಲೇಶದಪರಂಪರೆಯ || ೧೫ || ಅಚ್ಚರಿಯೆಮರದೊಮ್ಮೆನಾಮವ | ನುಚ್ಚರಿ
ಸೆನಾಲಗೆಯಕೊನೆಯಲಿ | ಬಿಚ್ಚುವುದುಭವತಾಪವೆನಲಾದೇವಕೀದೇವಿ || ಅಚ್ಯುತನನಿಕ್ಕೈಯ್ಯಲೊಡಲಿ | ಟ್ಟೊಚ್ಚತಾಲಿಂಗಿ
ಸುತಹರುಷದ | ಹೆಚ್ಚುಗೆಯನದನೇನಹೇಳುವೆನೆಂದನಾಮುನಿಪ || ೧೬ || ಮತ್ತೆಮೂರ್ಧ್ನ್ಯಘ್ರಾಣವನುಮಾ | ಡುತ್ತಮು
ಗ್ಗುಲಲಪ್ಪಿಮುಹಿಮರ | ಹೆತ್ತವರುಕುಳ್ಳಿರಲುಕುಶಲಕ್ಷೇಮವಾರ್ತೆಯಲಿ || ಕೃತ್ಯವಿದರಾಪುರದಜನಗಳ | ಮೊತ್ತವೈತಂದೆರಗಲ
ಭಯವ | ನಿತ್ತುಕಾಣಿಸಿಕೊಂಡರಾಪ್ತಪಸಾಯ್ತಮಂತ್ರಿಗಳ || ೧೭ || ಕಡಿಸಿಸಂಕಲೆಗಳನುಕಂಸನ | ಹಡದತಂದೆಯನುಗ್ರ
ಸೇನನ | ಬಿಡಿಸಿಬಿಗುಹನುದೇವಕನಹೆಡಗೈಯ್ಯಬಂಧನವ || ಪೊಡವಿಗಧಿಪತಿನೀನೆನುತಜಗ | ದೊಡೆಯರೊಡೆಯನುಸಕಲ
ಯಾದವ | ರೊಡನೆಸಲಿಸಿದನುಗ್ರಸೇನಂಗಾನೃಪಾಸನವ || ೧೮ || ಹೇಳಲರಿದೆಲೆಭೂಪಕೃಷ್ಣನ | ಲೀಲೆಕೌತುಕವುಗ್ರಸೇನ
ನೃ | ಪಾಲನನುಕುಳ್ಳಿರಿಸಿಸಿಂಹಾಸನದಮಧ್ಯದಲಿ || ಹೇಳುಬೆಸನನುತಮಗೆನಿಮ್ಮಡಿ | ಯಾಳುಗಳುತಾವೆನುತನಿಂದಿ | ದೋ
ಲಗಿಸುವನುಸಕಲಪೃಥ್ವೀಪಾಲಕರುಸಹಿತ || ೧೯ || ಆಯಯಾತಿಯಶಾಪಕುಳ್ಳಿರ | ಲೀಯದಿಂನೆಗನಮ್ಮಯಾದವ | ರಾಯ
ನನುರಾಜಾಸನಾಗ್ರದಲೆನಲುತಾನೆಂಬ || ಜೀಯಭೃತ್ಯನಿರಲ್ಕೆನಿನಗ | ನ್ಯಾಯವಿಲ್ಲಂಜದಿರುನಿರ್ಜರ | ರಾಯರೆರಗುವರುಳಿದ
ರಾಯರಮಾತದೇಕೆಂದ || ೨೦ || ಎಂದುನೇಮಿಸಿಕಂಸಕೃತಭಯ | ದಿಂದವಿದ್ರುತರಾದಯಾದವ | ವೃಂದವನುಕರಸಿದನುದೇ
ಶಾಂತರನಿವಾಸಿಗಳ || ಬಂದವರಿಗವರವರಪೂರ್ವದ | ಮಂದಿರಂಗಳನವರಧನಪಶು | ವೃಂದವನುನೆರೆಕೊಡಿಸಿದನುಕಾಣಿಸಿದನ
ವನಿಪನ || ೨೧ || ಏನನೆಂಬೆನುಯಾದವರಸು | ಮ್ಮಾನವನುಸುಖದಿಂದಹರಿಸೆ | ನ್ಮಾನಿತರುತಾವಾಗಿನಗರಾವಾಸಸಂಸ್ಥಿತಿಯ ||
ಸ್ಥಾನಮಾನ್ಯಂಗಳಲಿತಪ್ಪದೆ | ದಾನವಾಂತಕನೆಲ್ಲರನುಸನ | ಮೀನಪದವಿಯನಿತ್ತುಸಲಹಿದನಖಿಳಬಾಂಧವರ || ೨೨ || ತಲೆನ
ಡುಗಿಕಂಗಳಲಿಹುಬ್ಬುಗ | ಳಿಳಿದುಕರಣೇಂದ್ರಿಯದಬಲವ | ಕ್ಕಳಿಸಿಮುಪ್ಪಡೆಗೊಂಡವೃದ್ಧರುಸಹಿತಯೌವನವ || ತಳದುದ
ದನೇನೆಂಬೆನಾಯದು | ಕುಲದವರುಗೋವಿಂದಮೂರ್ತಿಯ | ಲಲಿತಮಧುರಸ್ಮೇರವದನಾಮೃತವಸವಿಸವಿದು || ೨೩ || ಏನ
ನೆಂಬೆನುಭೂಪಹರಿಮಹಿ | ಮಾನುಭಾವದಸಿದ್ಧಿಯನುಬಲ | ಹೀನರೇಬಲವಂತರತಿದುಃಖಿಗಳೆಸುಖಮಯರು || ದಾನಿಗಳು
ತಾವೆನಿಸಿದರುಧನ | ಹೀನರಾದವರಧಿಕತೇಜೋ | ಭಾನುಗಳುತಾವಾದರಪಗತತೇಜರಾದವರು || ೨೪ || ಚಿತ್ತವಿಸುನೃಪ
ನಂದಗೋಪನ | ಹತ್ತಿರಕೆನಡೆತಂದುಬಲಪುರು | ಷೋತ್ತಮರುತಕ್ಕೈಸುತಿಂತೆಂದರುಮನೋಗತವ || ಹೆತ್ತಪರಮೋಹಕ್ಕೆಮಿ
ಗಿಲೆನ | ಲತ್ಯಧಿಕಸಂಪ್ರೀತಿಯಲಿಸಲ | ಹುತ್ತಲಾಲನಪೋಷಣವಮಾಡಿದಿರಿನೀವೆಂದ || ೨೫ || ಅವರೆತಾಯ್ತಂದೆಗಳುನಿಜ
ಸುತ | ರವರಪೊರಲುಸಲಹುವರೆನಿಜಬಾಂ | ಧವಸುತರನಾತತ್ಸುತರನತ್ಯಧಿಕಮೋಹದಲಿ || ಯವರನೀವೇತಂದೆತಾಯಿಗ |
ಳೆವಗೆನೀವೇಪ್ರಾಣದೊಡೆಯರು | ಸವನಿಸಿದುದೆಮ್ಮೊಳಗೆಪುತ್ರಸ್ನೇಹನಿಮಗೆಂದ || ೨೬ || ತಂದೆಹೋಗಾಬಹೆನುಬಾಂಧವ |
ವೃಂದವನುಸಂತೈಸಿದಿನವನು | ಹಿಂದುಗಳೆಯದೆಗೋಕುಲಕೆನೀವಿಂದುನಮ್ಮೊಳಗೆ || ಕುಂದದಿರಿಹೋಗೆನುತಪರಮಾ | ನಂದ
ನಿಧಿಬೆಸಸುತ್ತಲಿರಲಾ | ನಂದಗೋಪನುಕೇಳುತಿರ್ದನುನಯನಜಲವೊಗಲು || ೨೭ || ಹಿಡಿದುಮೆಟ್ಟಿದಕೊಂಬುಗಳದೊ |
ಹುಡಿಹುಬಿದ್ದವೊನೆತ್ತಿಯನುಬರ | ಸಿಡಿಲುಕವಿದುದೊದಿಂಡುಗೆಡದುದೊಧರೆರಸಾತಳಕೆ || ಕಡಲುಕವಿದುದೊಮೇಲೆನಲುಮು |
ಪ್ಪಡಿಸಿದಾತನುಪುತ್ರವಿರಹದ | ನುಡಿಗಳನುಕೇಳುತ್ತಬಿದ್ದನುಬಹಳಮೂರ್ಛೆಯಲಿ || ೨೮ || ತೆಗೆದುತಕ್ಕೈಸುತ್ತಕರುಣಾ |
ಳುಗಳದೇವನುತೊಡದುನಯನಾಂ | ಬುಗಳನೊಯ್ಯನೆನಿಜಕರಾಬ್ಜದಮೆಲುದಳಂಗಳಲಿ || ನಗುತನುಡಿದನುತಂದೆಹೋಗಾ |

ನಗಲಲರಿವೆನೆನಿಮ್ಮನೇತಕೆ । ಮುಗುಡವಾಗಿರಲಂಜಬೇಡೆನಲೆಂದನಾನಂದ ॥ ೨೯ ॥ ಮಗನೆನೀನೆಲೆದೇವತನಗೀ । ಜಗದ್ದೈ
ವದನ್ಯೈವವಲ್ಲ । ನಿಗಮಶತನಿರ್ಣೈಸಲರಿಯವುನಿನ್ನಮಹಿಮೆಗಳ ॥ ದೃಗುಯುಗಳದಲಿಕಂಡುವರಯೋ । ಗಿಗಳುಬಯಸುವ
ಪೊಮ್ಮವಪನಾ । ನಗಲಲರಿವೆನೆಕೃಷ್ಣಕರುಣಾನಿಧಿಯೆಹೇಳೆಂದ ॥ ೩೦ ॥ ಅಂತರಾತ್ಮನನಗಲಿಹೋಹೆನ । ದೆಂತುನಾನೆಲೆಕೃ
ಷ್ಣಕಮಲಾ । ಕಾಂತಗತಿನುತಿಯಾವುದೆಮಗಿನ್ನೆನುತಬಾಯ್ಬಿಡಲು ॥ ಚಿಂತೆಬೇಡಾನೆನ್ನನೆನೆವವ । ರಂತರಂಗದೊಳಿಹೆನುಮರೆ
ಯದೆ । ಸಂತವಿರುಸುಖಿಯಾಗುಭಾಗ್ಯಾಧಿಕನೆಹೋಗೆಂದ ॥ ೩೧ ॥ ದೃಷ್ಟಿಗೋಚರವಾದುದನುಸರೆ । ನಷ್ಟವೆಂದರಿಕಾಲಚಕ್ರಾ
ವಿಷ್ಟವೀಸಂಸಾರವಾಬ್ರಹ್ಮಾಂಡವರಿತವರ ॥ ಮುಟ್ಟಲರಿಯದುಮಾಯೆನೆನೆವವ । ರಿಷ್ಟರೆಸಗವರಂತರಂಗಾ । ವಿಷ್ಟನಾನೆಲೆತಂ
ದೆಚಿಂತಿಸಬೇಡಹೋಗೆಂದ ॥ ೩೨ ॥ ಎಂದುಸುಪ್ರೇಮದಲಿಗೋಪರ । ವೃಂದವನುವಿನಯದಲಿತನ್ನಯ । ತಂದೆಯನುಕಾತರಿ
ಸದಿರಿಬಹೆನೆನುತಸಂತವಿಸಿ ॥ ಇಂದಿರಾಪತಿರಾಮರಥಿಕಾ । ನಂದಜಲಪರಿಲುಳಿತಲೋಚನ । ದಿಂದಕಳುಹಿದರುಚಿತವಹಸತ್ಕಾರ
ವನುಮಾಡಿ ॥ ೩೩ ॥ ನಂದನಾಗೋವಳರುಸಹಿತಾ । ನಂದಮೂರ್ತಿಯನಪ್ಪಿಬಲನನು । ನಿಂದುತಕ್ಕೈಸುತ್ತನಯನಜಲಾವಿ
ಲೇಕ್ಷಣನು ॥ ಮಂದಿರಕೆಬೀಳ್ಕೊಂಡುಭಂಡಿಗ । ಳೊಂದೆಸೆಯೆನಿತ್ಯಾತ್ಮದೇವಮು । ಕುಂದನನುಭಾವಿಸುತಬಂದನುನಂದಗೋ
ಕುಲಕೆ ॥ ... ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ॥ ... ॥ ೩೪ ॥

ಅಂತು ಸಂಧಿ ೪೦ಕ್ಕಂ ಪದನು ೨೯೯೦ಕ್ಕಂ ಮಂಗಳಮಸ್ತು.

ನಲವತ್ತೊಂದನೆಯ ಸಂಧಿ.

ಬಲಕೃಷ್ಣರ ಗುರುಗೃಹವಾಸ.

ಸೂಚನೆ॥ ಮನುಜರಿಗೆಗುರುಮುಖದಲಲ್ಲದೆ । ಜನಿಸದಾತ್ಮಜ್ಞಾನವೆಂಬುದ । ನನುಪಮರುತೋರ್ಪಂತೆ
ನಡೆದರುಗುರುಗೃಹಾಂತರಕೆ ॥ ... ...

ಪದನು॥ ಶೂರಸುತನಂದೊಲಿದುತನ್ನಕು । ಮಾರರಿಂಗುಚಿತದಲಿನೃಪಸಂ । ಸ್ಕಾರವನುವೇದೋಕ್ತದಿಂದುಪನಯನ
ಸಂಸ್ಥಿತಿಯ ॥ ಭೂರಿವಿಭವಂಗಳಲಿವಿಶ್ರುತ । ಧಾರುಣೀಸುತಮಂತ್ರಘೋಷಗೆಯ । ಭಾರಣೆಯಲೊಪ್ಪಿರೆಪುರೋಹಿತನಿಂದಮಾ
ಡಿಸಿದ ॥ ೧ ॥ ಗಾರ್ಗ್ಯಮುಖಋಷಿಮುಖ್ಯರಿಂದಪ । ವರ್ಗಮೂರ್ತಿಗಳಿಂಗೆರಚಿಸಿನಿ । ಸರ್ಗನಿರ್ಮಳರಿಂಗೆಪಾವನವೆನಿಪಸಂ
ಸ್ಕೃತಿಯ ॥ ನಿರ್ಗಮಿತಮಾಯರಿಗೆವೈದಿಕ । ವರ್ಗವಿಹಿತವ್ರತಗಳನುಬುಧ । ವರ್ಗವಂದ್ಯರುಕಟ್ಟದರುನಿಜನಿತ್ಯಮುಕ್ತರಿಗೆ ॥
ಗಣಿಸಲಿತ್ತನುದಾನವನುಧಾ । ರುಣಿಯಸುರರಿಗೆಶೌರಿನಾರಾ । ಯಣಸಮರ್ಪಿತವೆಂದುಪುತ್ರಾಭ್ಯುದಯಕರವೆಂದು ॥ ಮಣಿ
ಕನಕದಿವ್ಯಾಂಬರಂಗಳ । ನೆಣಿಸುವೆಲ್ಲಾವಸ್ತುವನುಮ । ನ್ನಣೆಯಮಧುರೋಕ್ತಿಯಲಿಪೂಜಿಸಿದನುಸಭಾಸದರ ॥ ೩ ॥ ನೆನೆದ
ನಾಗಳೆಮುನ್ನಕೃಷ್ಣನ । ಜನನದಲಿಸಂಕಲ್ಪಿಸಿದಗೋ । ಧನವನಯುತವನಿತ್ತನಂದಾಕಂಸಭೂಪತಿಯ ॥ ಮನೆಯಗೋಧನಗ
ಳನುಕೊಟ್ಟನು । ಕನಕಕೋಡುಗಳಿಂದಮಿಗೆಸಂ । ಜನಿತರೌಪ್ಯಖುರಾಗ್ರವೆಸವವಿಭೂಷಣಾಂಬರವ ॥ ೪ ॥ ಆದುದುತ್ಸವವ
ಖಿಳಯಾದವ । ಮೇದಿನೀಶಂಗಂದುಸಲೆಸಂ । ಪಾದಿಸಿದಸಂಕರುಷಣಾಚ್ಯುತಸದ್ವಿಜತ್ವದಲಿ ॥ ವೇದಮಯರೊಪ್ಪಿದರುಬಲದಾ ।
ಮೋದರರುರವಿರಶ್ಮಿಗಳುಗಂ । ಗೋದಕಸ್ಪರುಶನವಪಡೆದಂದದಲಿನಿರ್ಮಳರು ॥ ೫ ॥ ಬಳಿಕವಿದ್ಯಾಮೂರ್ತಿಗಳುಗುರು ।
ಕುಲನಿವಾಸವಬಯಸಿಕಾಶೀ । ನಿಳಯಸಾಂದಿಪಮುನಿಯೆನಿಪ್ಪಮಹಾತ್ಮನಂತಿಕಕೆ ॥ ನಳಿನನಾಭನನಂತರೈದಿದ । ರೊಲಿದನಂ
ತಾಪ್ರಸದಗುರುಪದ । ಜಲರುಹಕೆತಲೆವಾಗಿಕಲಿತರುವಿವಿಧವಿದ್ಯೆಗಳ ॥ ೬ ॥ ಕಲಿಸಿದನುಚೌಷಷ್ಟಿವಿದ್ಯಾ । ವಳಿಗಳನುನಿಜಸಕ
ಲವಿದ್ಯಾ । ಜಲನಿಧಿಗಳಿಗೆಸಕಲಸುರನರಲೋಕಗುರುಗಳಿಗೆ ॥ ಸಲೆಚತುಷ್ಷಷ್ಟಿಪ್ರಮಿತದಿನ । ಗಳಲಿಸಾಂಗಸಮಗ್ರವೇದಾ ।
ವಳಿಧನುರ್ವೇದಾದಿಶಾಸ್ತ್ರದಶಿಕ್ಷೆಗಳುಸಹಿತ ॥ ೭ ॥ ಮೂಗಿನಲಿಬೆರಳಿಟ್ಟುಗುರುತಲೆ । ದೂಗಿಮಾನಸದಲ್ಲಿಮಹಿಯಲಿ । ಯೋ
ಗಸಿದ್ಧರೊಮೇಣಿವರುಸಾಕ್ಷಾತ್ಹರಿಹರರೋ ॥ ಆಗದಿರದಿವರಲ್ಲಿದಿರ್ದಡೆ । ಲೋಗರಿಂಗೀಬುದ್ಧಿಬಲಶ್ರೀ । ಜೋಗುಣಪ್ರಾಗಲ್ಭ್ಯ
ರೂಪಾದಿಗಳಿವೆಂತೆಂದ ॥ ೮ ॥ ಎತ್ತಲೀನರಶಿಶುಗಳಿವರರು । ಪತ್ತುನಾಲುಕುವಿದ್ಯೆಗಳನರು । ಪತ್ತುನಾಲ್ಕುದಿನಂಗಳಿಂಗಭ್ಯಾಸ
ವನಾವಳ್ಪ ॥ ಚಿತ್ತಶುದ್ಧಿಯದೆಂತೆನುತನಿಜ । ಚಿತ್ತದಲಿಗುರುಧನ್ಯತೆಯನೆನ । ವೃತ್ತಿರಲುವಿದ್ಯಾಮಯರುಸರ್ವಜ್ಞರೆನಿಸಿದ
ರು ॥ ೯ ॥ ಅಕ್ಷಯರುಗುರುವಿನಲಿಕಲೆಗಳ । ಶಿಕ್ಷಿಸಿದರಿನ್ನೇನನೀವೆವು । ದಕ್ಷಿಣೆಗಳನುಬೇಡಿಕೊಂಬುದುನಮ್ಮಬೀಪರಿತಾ ॥
ಲಕ್ಷಣದಿವೆರಸಾತ್ಮವಿದ್ಯೆಯ । ಶಿಕ್ಷಿಸಿದಗುರುವಿಂಗೆಕೊಡುವೆವು । ದಕ್ಷಿಣೆಯನಿನ್ನೇನನೆನುತೆರಗಿದರುಗುರುಪದಕೆ ॥ ೧೦ ॥
ಆಮಹಾತ್ಮರಬಿನ್ನಹವನು । ಪ್ರೇಮದಲಿಕೇಳುತ್ತಮನದಲಿ । ಭೂಮಿಸುರನಾಳೋಚಿಸುತನಿರ್ಣಯವಕಾಣದಿರೆ ॥ ಭಾಮಿ
ನಿಯಬೆಸಗೊಂಡಡವಳು । ತಾಮರಸಮುಖಿತನ್ನಮನದಲಿ । ರಾಮಕೃಷ್ಣರತೇಜವನುಕಾಣುತ್ತಪತಿಯೊಡನೆ ॥ ೧೧ ॥

ತಂದುಕೊಡಹೇಳ್ದಪತಿನ್ನಯ । ನಂದನನತೀರ್ಥಕ್ಕೆಹೋಗಿರೆ । ಹೊಂದಿದಾತನಸಾಪ್ರಭಾಸದಲಾಜಲಾಂತದಲಿ ॥ ಬೆಂದೊಡಲ
ನೇಗೆಯನುಕಳೆಯುಲಿ । ತಂದೆಗಳುಸಾವಾನ್ಯರಲ್ಲಿವ । ರೆಂದುಸತಿಹೇಳ್ದರೆಹೇಳ್ದನಾತನಿವರೊಡನೆ ॥೧೨॥ ಉತ್ತಮರಿರೆ
ನ್ನೊಡೆಯರಿರನಿಜ । ಚಿತ್ತವಲ್ಲಭರಿರನಿರೂಪವ । ಚಿತ್ತವಿಸುವುದುಮಕ್ಕಳರವರಿಯಾನೆಗಳಿರೆನ್ನ ॥ ತತ್ವಮೂರುತಿಗಳಿರಗುರು
ಕುಲ । ಕೃತ್ಯವನುಮಾಡುವರೆತನ್ನಯ । ಸತ್ತಮಗನನುತಂದುಕೊಡಿನೀವೆಂದನಾವಿಪ್ರ ॥೧೩॥ ಎನೆಹಸಾದಭವತ್ಕೃಪಾ
ಕಂ । ಜನಿತಕೃತ್ಯರಿಗಾವುದರಿದೆಂ । ದೆನುತಗುರುವನುಬೀಳುಕೊಂಡೇರಿದರುಮಣಿರಥವ ॥ ದನುಜಹರಬಲರಾಪ್ರಭಾಸಾ ।
ವನಿಯನೈದಿದರುದಧಿತೀರದ । ಲನುಪಮರುಕುಳ್ಳಿರ್ದರಂದಾಲೋಕಪಾಲಕರು ॥೧೪॥ ಅದನರಿತಾತನ್ನಾಳ್ವನೈತಂ । ದುದ
ನುಸಾಗರನಾಕ್ಷಣವೆಲೋ । ಕದೊಳುಧನ್ಯನುತಾನೆನುತನವರತ್ನನಿಕರವನು ॥ ಸದಮಳರಕಾಣಿಕೆಗೆತಂದಿ । ತ್ತೊದವಿದುಃಸ್ವವ
ನಿಂದತನ್ನಯ । ಪದವನೋಲಗಿಸುತ್ತಲಿರಲಿಂತೆಂದನಸುರಾರಿ ॥೧೫॥ ಎಲವೊತಾಗುರುಪುತ್ರನನುನಿ । ನ್ನೊಳಗೆಮಾಡಿದನನೀ
ಕ್ಷಣವೆನುಡಿ । ಬಳಿಕನಲ್ಕೈಮುಗಿದುಸಾಗರನಧಿಕಭಕುತಿಯುಲಿ । ತೊಲಗಿಬಿನ್ನವಿಸಿದನುಕೊಲ್ಲೆನು । ಕೊಲುವರಿಗೆಮತಿಗೊಡೆ
ನುಗುರುಸುತ । ನಳಿವುಪಂಚಜನಾಖ್ಯಶಂಖಾಸುರನಲಾಯ್ತೆಂದ ॥೧೬॥ ಇಹನುತನ್ನೊಳಗಾತನನುಕೊಂ । ದಹಿತನನುಮೃತ
ಗುರುಸುತನಸಂ । ಗ್ರಹಿಸುವುದುಬಲ್ಲಿದನುಖಳನವರಾಸುರೇಂದ್ರರಲಿ ॥ ಅಹಡೆನೋಡುವುದೆನಲುಹರಿಗಹ । ಗಹಿಸುತಾವರು
ಣಾಗ್ರಹಸ್ತದ । ಗೃಹದಲಿಳ್ದನುಜಲಧಿಯಲಿಕಂಡನುಮಹಾಸುರನ ॥೧೭॥ ಕಾಳಗದೊಳವನಸುವನಂತಕ । ನಾಲಯಕೆಕಳು
ಹುತ್ತಜಠರವ । ಸೀಳ್ದನೋಡಿದಡಸುರರಿಪುಗುರುಪುತ್ರನಿದ್ದಿರವ ॥ ಆಲಿಸುತಕಾಣದೆಕೃತಾಂತನ । ಕೋಳುವಿಡಿವೆನೆನುತ್ತರಿಪು
ಕುಲ । ಕಾಲನುದ್ಧರಿಸಿದನುಶಂಖವನಾತನಂಗದಲಿ ॥೧೮॥ ಉತ್ತರಿಸಿಸಾಗರವಬಲಪುರು । ಷೋತ್ತಮರುರಥದಿಂದನಿಜಗುರು ।
ಪುತ್ರನನುತರಲೆಂದುಸಂಯಮನೀಪುರಾಂತಿಕಕೆ ॥ ಮತ್ತೆನಡೆತಂದನುಪಮರುಶಂ । ಖೋತ್ತಮವವೊಳಗಿದರಕೇಳ್ದು । ದೆತ್ತ
ಣಮರನವೆನುತಜನನೈತಂದನಿದಿರಾಗಿ ॥೧೯॥ ಎನ್ನೊಡೆಯನಾರಾಯಣನಶಂ । ಖೋನ್ನತವಿದೆಂದೆನುತಹರುಷೋ । ತ್ಪನ್ನವಾ
ಗ್ನಿತ್ತಶ್ರೋತ್ರಪುಟಪೀಯೂಷದುತ್ಸವಕೆ ॥ ಧನ್ಯನಾದೆನೆನುತ್ತಯಮನ । ತ್ಯುನ್ನತೋನ್ನತವಿಭವದಲಿಕರು । ಣಾರ್ಣವನ
ನೊಲಿದಿದಿರುಗೊಂಡನುಸಕಲಜನಸಹಿತ ॥೨೦॥ ಬಂದುಕಾಣಿಕೆಗೊಟ್ಟುಚರಣ । ದ್ವಂದ್ವದಲಿತಲೆವಾಗಿಮಿಗೆರವಿ । ನಂದನನು
ನಯನಾಮೃತಾನಂದಾಬ್ಧಿಯಲಿಮುಳುಗಿ ॥ ಕಂದೆರದುಕಮನೀಯಮೂರ್ತಿಯ । ಅಂದವನುನೋಡುತ್ತಬಿನ್ನಹ । ವೆಂದುಕರ
ಪುಟವೆಸೆಯೆನುಡಿದನುವಿನಯಪರನಾಗಿ ॥೨೧॥ ಆವಧನ್ಯರೊತನ್ನಪಿತೃಗಳ । ದಾವಭಾಗ್ಯಾಧಿಕರೊತನ್ನಕು । ಲಾವಳೀಸಂ
ಜಾತಪಾವನವಾಯ್ತುನಿಮ್ಮಡಿಯು ॥ ಶ್ರೀವಧೂಕರಕಮಲಲಾಲಿತ । ಪಾವನಾಂಘ್ರಿಯುದರುಶನಕೆತಾ । ನಾವನೆಂದಡಿಗೆರಗಿಪುಳ
ಕಿತನಾಗುತಿಂತೆಂದ ॥೨೨॥ ಕೃತ್ಯವಾವುದುತನಗೆದೇವರು । ಚಿತ್ತವಿಸುವುದುನಿಮ್ಮಡಿಗಳೇ । ನಿತ್ತಬಿಜಯಂಗೈದಿರೆಂದಂಘ್ರಿ
ಯುಲಿತಲೆವಾಗಿ ॥ ಭೃತ್ಯಭಾವದಲಿರಲುಕಾರು । ಣ್ಯೋತ್ತರದಸುಪ್ರೇಮಸೂಕ್ತಿಯ । ಉತ್ತಮೋತ್ತಮಕೀರ್ತಿಬೆಸಸಿದನಂದುರ
ವಿಸುತನೆ ॥೨೩॥ ತಂದುಕೊಡುಗುರುಪುತ್ರನನುತನ । ಗಿಂದುಮಾಳ್ಪಡೆಸೇವೆಯನುನಿಜ । ಮಂದಿರದಲಿದ್ದವನನಾತ್ಮಕೃತಾಪ
ರಾಧದಲಿ ॥ ಬಂದೆಮಾವಿದುಕಾರಣದಲೆನ । ಲೆಂದನಾತನುದೇನರರಿಯರೆ । ತಂದುಕೊಡುವೀಹದನನೆನಲಿಂತೆಂದನಸುರಾರಿ ॥
ಪ್ರಾರಬ್ಧವಶದಿಂದಜೀವರು । ಸೇರುವರುನರಕಕ್ಕೆಬಲ್ಲೆನ । ದಾರುತಪ್ಪಿಸಬಹುದುತಾಹೊರಗಾಗಿನೂಜಗಕೆ ॥ ಆರೊಡೆಯ
ರೆಲೆಮಗನೆಶಾಸಕ । ರಾರುತಾಹೇಳ್ದರೆತಹುದುವಿ । ಚಾರಿಸಲುತಾನೊಲಿದಡಾಪ್ರಾರಬ್ಧವಿಲ್ಲೆಂದ ॥೨೫॥ ಎನೆಹಸಾದವೆನು
ತ್ತಗುರುಪು । ತ್ರನನುತಂದಿತ್ತನಜನಚ್ಯುತ । ನನುಪಮಾಂಘ್ರಿದ್ವಯವಭಜಿಸುತಲಿರಲುಭಕ್ತಿಯಲಿ ॥ ದನುಜಹರಬಲರಾತನನು
ಸಂ । ಜನಿತಕಾರುಣ್ಯದಲಿಬೀಳ್ಕೊಂ । ಡನಿಮಿಷಾರಾಧಿತರುಬಂದರುಮರಳಿಗುರುಗೃಹಕೆ ॥೨೬॥ ತಂದುನಿಜಗುರುಪುತ್ರನನು
ಗೋ । ವಿಂದರಾಮರುದಕ್ಷಿಣೆಯನಿದೆ । ತಂದೆತಂದೆವುನಿಮ್ಮಡಿಯುಕಾರುಣ್ಯಶಕ್ತಿಯಲಿ ॥ ಎಂದುಕೈಯಲಿಕೊಟ್ಟುಚರಣ ।
ದ್ವಂದ್ವದಲಿತಲೆವಾಗಿರಲುಮಯ್ । ತಂದೆತಾಯ್ಗಳಹರುಷವನುಹವಣಿಸುವರಾರೆಂದ ॥೨೭॥ ಕಾಲಿಗೆರಗಿದರಾಮಕೃಷ್ಣರ ।
ನಾಳಿಗಳನೆಗಹುತ್ತಹರುಷಾ । ಲೋಲನಯನಾಸ್ಪಂದಸಲಿಲಾಪ್ಲುತದಲೋಲಾಡಿ ॥ ತೋಳುಗಳುಮಿಗೆದಣಿಯಲಪ್ಪಿವಿ । ಶಾಲ
ಮತಿಹರಸಿದನುಪೃಥ್ವೀ । ಪಾಲರಾಗಿಪವಿತ್ರಕೀರ್ತಿಗಳಾಗಿನೀವೆನುತ ॥೨೮॥ ಆವುದರಿದೆನಗಿನ್ನುಧರೆಯಲಿ । ಸೇವಕರುನೀ
ವಾದಿರೆನಲಿ । ನ್ನಾವಧನ್ಯನೊತಾನೆನುತನಿಜಪುತ್ರಲಾಭದಲಿ ॥ ಜೀವವನುಪಡದೊಡೆಪ್ರೋಲಾಧ । ರಾವಿಬುಧಹರುಷದಲಿನಿಜ
ಸ । ಜೀವಲೋಚನೆಸಹಿತಹೊಂಪುಳಿಯೋದನಡಿಗಡಿಗೆ ॥೨೯॥ ಭಕುತಿಯಲಿಬೀಳ್ಕೊಂಡುಗುರುವನು । ಸಕಲಲೋಕೇಶ್ವ
ರನುಸಹಜ । ಪ್ರಕಟವಿಸ್ಮಯರುಬಂದರಾಮಧುರಾಪುರಕ್ಕೊಲಿದು ॥ ಸಕಲಪುರಜನಬಂಧುವರ್ಗ । ಪ್ರಕರವಂದೊಲಿದಿದಿರುಗೊಳ
ಲ್ಕತಿ । ಸುಕೃತವನುಸಲಿಸಿದರುಬಲನಿತ್ಯಾತ್ಮರಭಿಜನಕೆ ॥ ... ... ॥೩೦॥

ಅಂತು ಸಂಧಿ ೪೧ಕ್ಕಂ ಪದನು ೯೨೪ಕ್ಕಂ ಮಂಗಳಮಸ್ತು.

ನಲವತ್ತೆರಡನೆಯ ಸಂಧಿ.

ಉದ್ಧವನು ಗೋಕುಲಕ್ಕೆ ಬರುವಿಕೆ.

ಸೂಚನೆ॥ ಬಂದನುದ್ಧವನಚ್ಯುತನಬೆಸ | ದಿಂದಭಾಗವತೋತ್ತಮನುನಲ | ವಿಂದಬಾಂಧವದರ್ಶನಾರ್ಥ ದಲಂದುಗೋಕುಲಕೆ ॥ ... ...

ಪದನು ॥ ಅರಸಕೇಳೈರಾಮಕೃಷ್ಣರ | ಬರವಕಾಣುತಶಶಿಯಿದಿರಸಾ | ಗರದವೋಲುಬ್ಬೆದ್ದು ಪುಳಕದಬಹಳಹರುಷ ದಲಿ॥ ಪರಿಹರಿಸಿಬಹುದಿವಸಕಾಣದ | ವಿರಹತಾಪದಲಾತ್ಮವಿದ್ಯಾ | ಪರಿಣತರವೋಲಾಯ್ತು ಮಧುರಾಪುರಜನಸ್ತೋಮ ॥೧॥ ವಿತತತರಹರುಷದಲಿದಿರುಗೊಂಡ | ಚ್ಯುತಬಲರನಾಪೌರಪರಿಜನ | ತತಿಕದೀಕ್ಷಣದುತ್ಸವದಲೋಲಾಡಲೊಲವಿನಲಿ॥ ಶ್ರುತಿಶಿರೋ ಭೂಷಣರುರಥದಿಂ | ದತುಳವಿಕ್ರಮರಿಳಿದುಮಾತಾ | ಪಿತೃಗುರುದ್ವಿಜರಂಘ್ರಿಗಳಿಗೆರಗಿದರುವಿನಯದಲಿ ॥೨॥ ಉಲಿವಬಿರುದಿನ ಕಹಳೆಗಳಕಳ | ಕಳದಬಹುವಿಧಭದ್ರವಾದ್ಯಾ | ವಳಿಯಮೊಳಗುವಸೂತಮಾಗಧವಂದಿಗಳರವದ ॥ ಕೆಲವಪಾಯವಧಾರುಗಳ ಮಂ | ಗಳಮಹಾರವನೆಸೆಯಲುತ್ಸವ | ದೊಳಗೆಸುಮುಹೂರ್ತದಲಿಹೊಕ್ಕರುಹರಿಬಲರುಪುರವ ॥೩॥ ಸತ್ತಿಗೆಯಚಾಮರದ ಕಹಳೆಗೆ | ಕೆತ್ತುದಂಬರವಿವರರಥಹಯ | ಮತ್ತಗಜದಳಭಾರದಲಿವಿಾರಿತು ಕಣಃಮನವ ॥ ಒತ್ತರಿಸಲೆಡಬಲದಲುದ್ಧವ | ಸಾತ್ಯಕಿಪ್ರಮುಖಪ್ರಚಂಡಯ | ದೂತ್ತಮರುನಡೆತಂದುಹೊಕ್ಕರುರಾಜಮಂದಿರವ ॥೪॥ ಆದುದುತ್ಸವವಖಿಳಯಾದವ | ಮೇದಿನೀಶರಿಗುತ್ತರೋತ್ತರ | ಮಾದುದಖಿಳಾಭ್ಯುದಯದುನ್ನತಿಯೆಂದುಮೊದಲಾಗಿ ॥ ಮೇದಿನೀಪತಿಕೇಳುಬಲದಾ | ಮೋದರರು ಮಾಂಸಾಕ್ಷಿಗೋಚರ | ಮಾದಬಳಿಕಿನ್ನೇನುದುರ್ಲಭವೆಂದನಾಮುನಿಪ ॥೫॥ ಒಂದುದಿನದೋಲಗದೊಳಗೆಗೋ | ವಿಂದನಾ ಗೋಕುಲವನೆನೆದಿಂ | ತೆಂದನುದ್ಧವನೊಡನೆಬಹಳವನೋನುರಾಗದಲಿ ॥ ತಂದೆಹೋಗೆನ್ನರಸಹೋಗಾ | ನಂದಗೋಕುಲ ಕೀಗಳಂತಿರೆ | ತಂದೆತಾಯ್ಗಳಮನಕೆಹರುಷವಮಾಡುಹೋಗೆಂದ ॥೬॥ ಗೋಪಿಯರಿಗೆನ್ನೀವಿರಹಹೃ | ತ್ತಾಪವಡಗುವವೋ ಲುತನ್ನವ್ಯ | ತೋಪಮೋಕ್ತಿಯನೊರೆದುಸಂತವಿಸೆನ್ನಬಾಂಧವರ ॥ ಆಪದವಕಳೆತಂದೆಹೋಗುಕೃ | ತಾಪರಾಧರುನಾವ್ರುನ ಮ್ಮನಿ | ರೂಪವನುಹಾರೈಸುತಿಹರಾಗೋಪವನಿತೆಯರು ॥೭॥ ಚಿತ್ತವೆನ್ನಲಿಪ್ರಾಣವೆನ್ನಲಿ | ಪುತ್ರಪತಿಪಿತೃಮಾತೃಬಾಂಧ ವ | ಭೃತ್ಯಗೃಹವಾಸಕತಿತನ್ನಲಿಗೋಪವಧುಗಳಿಗೆ ॥ ಇತ್ತಲಿಹುದೆನ್ನೊಡಲುಮನವವ | ರತ್ತಲಿಹುದೆಲೆತಂದೆಕಲ್ಪಶ | ತ್ರೋತ್ತ ರಕೆತಾಕಳೆಯಲರಿವೆನೆಯೆಂದನಸುರಾರಿ ॥೮॥ ತೊರೆದದೆನಗೊಲಿದಿಹಪರವೆನಿ | ಪ್ಪೆರಡರಭಿಲಾಷೆಯನುತನ್ನನು | ಕರಗುವ ರುಕಾಣದಡೆಕಂಬನಿಗಡಲಲಬಳೆಯರು ॥ ಅರೆನಿಮಿಷಯುಗವೆಂಬರೆವೆಗಳ | ಮತಿಗೆಟ್ಟವರುವಿಧಿಯನೆಂತೋ | ವಿರಹದುಃಖವ ನಕಟಸೈರಿಸಲರಿಯರವರೆಂದ ॥೯॥ ಇನ್ನಗವರಸುನಿಲ್ಲದೊಡಲಲಿ | ತನ್ನವಿರಹಾನಲನಲೊಡಲುವಿ | ಪನ್ನವಾಗದೆಜೀವಿಸಿದ್ದಡೆ ಹೇಳುನೀಹೋಗಿ॥ ಯನ್ನವಲ್ಲಭೆಯರಿಗೆಬಹಳಕೃ | ಪಾರ್ಣವನುಬಹನಂಜಬೇಡೆಂ | ದೆಂನುತಮ್ಮನುಮರೆಯೆನಾನೆಂಬುದ ನುಹೇಳೆಂದ ॥೧೦॥ ಭಕತಯೋಗಕ್ಷೇಮನಿರ್ವಾ | ಹಕನುತಾನೆಂಬೀಪ್ರತಿಜ್ಞೆಯ | ವಿಕಳತೆಯನಾಗಿಸಿತಲಾಗೋಪಾಂ ಗನಾವಿರಹ | ಮುಕುತಿಫಲವಲ್ಲವರಮನದಾ | ಸಕತಿಗವರನುರಾಗಲಾಲಿತ | ಭಕತಿಗಾವುದುಪಡಿಫಲೋದಯವೀವುದುಂ ಟೆಂದ ॥ ಅರಿಯರೆನ್ನಿಂದಧಿಕದೈವವ | ನರಿಯರೆನ್ನಿಂದಧಿಕಹಿತವರ | ನರಿಯರೆನ್ನಿಂದತಿಶಯಪ್ರಿಯಮಿತ್ರಬಾಂಧವರ ॥ ಅರಿತೆನೇತಾನದನುಗೋಪಿಯ | ರುರತರಸ್ನೇಹವನುಕೇಳ್ನಿ | ಷ್ಕರುಣಿಗಳುತನ್ನಂದದವರಾದಿನ್ನುಹೇಳೆಂದ ॥೧೨॥ ನೀನೆನಗೆಸರಿತರೂಕದವನುಸ | ಮಾನಬಾಂಧವನೆನಗೆಯನ್ನಮ | ನೋನುರಾಗದಭಕ್ತನದರಿಂದೆನ್ನವಾರ್ತೆಯನು ॥ ನೀ ನೊರೆದುನಿಜಶಕ್ತಿಯರದುಂ | ಮಾನವನುಕಳೆಹೋಗುಭಕ್ತಾ | ಧೀನನೆಂಬೀಬಿರುದಪಾಲಿಸುತಂದೆಹೋಗೆಂದ ॥೧೩॥ ಧರೆ ಯನೊಲ್ಲೆನುಶಿರಿಯನೊಲ್ಲೆನು | ವರಸಖಿಪ್ರಿಯಮಿತ್ರಬಾಂಧವ | ರಿರವನೊಲ್ಲೆನುತನ್ನಭಕ್ತರನಲ್ಲಿದುರ್ಲಭವರೆ ॥ ಸೆರಕುಮಾ ಡೆನುಮಗನೆಹೋಗೆಂ | ನೆರಹಹೋಗೆಂನಾನೆಹೋಗೆಂ | ನುರುತರಪ್ರೇಮಾಸ್ಪದನೆಹೋಗೆಂದನಸುರಾರಿ ॥೧೪॥ ಎಂದಡಾಗ ಲಿಜೀಯಯೆನುತಾ | ನಂದದಲಿತಲೆವಾಗಿಚರಣ | ದ್ವಂದ್ವದಲಿಮೈಯಿಕ್ಕಿಪುಳಕಿತನಾಗಿಬೀಳ್ಕೊಂಡು ॥ ಅಂದುಭಾಗವತೋತ್ತ ಮನುರಥ | ದಿಂದಹರಿಯಾಜ್ಞೆಯಲಿನಡದನು | ನಂದಗೋಕುಲದಧಿಕತೀವ್ರಮನೋನುರಾಗದಲಿ ॥೧೫॥ ಅನ್ನಗಿನನಸ್ತಾಚಲ ಕ್ಕೆಪ | ಸನ್ನನಾದನುಭಕ್ತಿಗುಣಸಂ | ಪನ್ನಮತಿಬರೆನಂದಗೋಕುಲವಾಗಿಮಾರ್ಗದಲಿ ॥ ಧನ್ಯವಹಗೋಧೂಳಿಪಟಲ | ಚ್ಛನ್ನ ರಥಹಯಗಾತ್ರನೈತಂ | ದುನ್ನತಾಮಳಕೀರ್ತಿಕಂಡನುಗೋಕುಲದಸಿರಿಯ ॥೧೬॥ ಕಂಡನಾಗೋಕುಲವನಾತುರು | ವಿಂ ಡುಗಳಸಂದಣಿಯನಾಮೊಲೆ | ಯುಂಡುಕುಣಿವೆಳೆಗರುಗಳೆಸೆವಾನಂದಲೀಲೆಗಳ ॥ ಕಂಡುಗೋಪೀಗೋಪನಿಕರದ | ಖಂಡವಿ ಭವನನೆಸೆವಸಿರಿಯನು | ಮಂಡೆಯಲಿಕರಮುಕುಳವನುಧರಿಸುತ್ತನಡೆತಂದ ॥೧೭॥ ಮಘಮಘಿಪಮನೆಮನೆಯಧೂಪದ | ಹೊಗೆಯಗುರುಪಿತೃದೇವಪೂಜಾ | ದಿಗಳಸಂಭ್ರಮದಿಂದಮೆರೆವಮಹಾಮಹೋತ್ಸವದ ॥ ಹಗಲಿರುಳುಹರಿಗುಣಮಮೋಡ ವ

ಹೊಗಳುತಳಲನುಮರವಗೋಪಿಯ | ರೊಗುಮಿಗೆಸಂಗೀತವನುಕೇಳುತ್ತನಡೆತಂದ ॥ ೧೮ ॥ ಇಳಿದುರಥವನುಭಾಗವತ
ಕುಲ | ತಿಲಕನಾಬಾಗಿಲಲಿನಂದನ | ನಿಳಿಯುವನುಹೊಗುತಿರಲುನೆರೆಕಾಣುತ್ತದೂರದಲಿ ॥ ತೊಲಗಿದಸುಬಂದಂತೆಹರುಷಾ |
ಕುಳಿತಲೋಚನನಿದಿರುಬಂದು | ತ್ಕಳಿತಪುಳಕದಲಪ್ಪಿದನುಬಾಂಧವನನಾನಂದ ॥ ೧೯ ॥ ಸತ್ಕರಿಸಿಪರಮಾಸನದೆಂ | ದತಿ
ಶಯಪ್ರೀತಿಯಲಿಭುವನಾ | ರ್ಚಿತನನೊಲಿದರ್ಚಿಸುತಕೃಷ್ಣಪ್ರಿಯಸಬಾಂಧವನ ॥ ಸುತಸಭೋಜನಪಾನವಿಭವೋ | ಚಿತ
ಸುಸತ್ಕಾರದಲಿಕಳದನು | ವಿತತಮಾರ್ಗಶ್ರಮವನಧಿಕಾನಂದದಲಿನಂದ ॥ ೨೦ ॥ ಕುಳ್ಳಿರಿಸಿಮಂಚದಲಿಮೃದುಪದ | ಪಲ್ಲವ
ವನೊತ್ತುತ್ತಲಕ್ಷ್ಮೀ | ವಲ್ಲಭನುಸಾಕ್ಷಾತ್ತನೀನೆಂದೊಲಿದುಪತಿಕರಿಸಿ ॥ ಎಲ್ಲರಿನ್ನೆಗಕುಶಲರೇನೈ | ಬಲ್ಲಹಸಶೂರಾತ್ಮಜಾದ್ಯ
ರು | ಬಲ್ಲಿದರೆಬಾಂಧವರುಬಂದಿರದೇನುನೀನೆಂದ ॥ ೨೧ ॥ ಕುಶಲಿಗಳೆಸಲೆರಾಮಕೃಷ್ಣರು | ಕುಶಲರೈನಮ್ಮಾಪ್ತಬಾಂಧವ |
ನಿಸರವೀಸಂಬಂಧಿಶಿಶುಪಶುಭೃತ್ಯಮಾರ್ಗದಲಿ ॥ ಹೆಸರಿಸಿದಭಾಗವತರಿತ್ತಲು | ಹೊಸತಲಾನೀವ್ಬಹುದುಮಜಭೂ | ಪಸಮ
ಪುಣ್ಯನುತಾನೆಸುತತೂಗಿದನುನಿಜಶಿರವ ॥ ೨೨ ॥ ನೆನವನ್ನೈಮನದೊಮ್ಮೆಜನನೀ | ಜನಕರನುಗೋವಿಂದನೆಮ್ಮನು | ನೆನವ
ನ್ನೈಸಖಿಯರನುಗೋಪರನಾಪ್ತಬಾಂಧವರ ॥ ನೆನವನ್ನೈಗೋಕುಲವನೀಗೋ | ಧನವನೀವೃಂದಾವನವನೀ | ವಿನುತಗೋವ
ರ್ಧನವನೆನಿಪ್ಪೀಗಿರಿಯನಿದನೆಂದ ॥ ೨೩ ॥ ತಂದೆಹೇಳೆಂನಾಳ್ದನೆಂನಾ | ನಂದನಿಧಿಯಂನೆರಸನ್ನುತಹ | ನೆಂದುಕಾಣಲನಾಥರನು
ನಿಜಚರಣಶರಣರನು ॥ ಬಂದರೀಕ್ಷಿಪೆನೊಮ್ಮೆದೇವಮು | ಕುಂದನೊಪ್ಪುವಮಧುರರಸನಿ | ಷ್ಯಂದಹಾಸೇಕ್ಷಣದಕಮನೀಯಾ
ನನಾಂಬುಜವ ॥ ೨೪ ॥ ಪರುಷವಾತದಬಾಧೆಯಲಿಕಾ | ಳುರಿಯಕೋಪದಲಹಿವೃಷಭದ | ಸ್ತರಮಹಾಮೃತ್ಯುಗಳಮುಖ
ಕಲಿಬಹುವಿಪತ್ತಿನಲಿ ॥ ಕರುಣದಲಿರಕ್ಷಿಸಿದನೆಮ್ಮನು | ಶರಣಜನನಿಜಬಂಧುಕೃಷ್ಣನ | ಚರಣವನುತಾನೆಂತುಮರವೆನುತಂದೆ
ಕೇಳೆಂದ ॥ ೨೫ ॥ ಹೇಳಲೇನೆಲೆತಂದೆಕೃಷ್ಣನ | ಬಾಲಕೇಳಿಯಲಾಪರಾಕ್ರಮ | ದೇಳಿಗೆಯಲಾಮಧುರಹಾಸೋದಾರವೀ
ಕ್ಷಣವ ॥ ಲೋಲನಯನಾಪಾಂಗದೆಸವಕ | ಪೋಲನಾಸಾಪುಟಮೃದೂಕ್ತಿಯ | ನಾಲಿಸುತನಿಶ್ಚೇಷ್ಟರಾಗಿಹೆವೆಂದನಾನಂದ ॥
ರಮುಕುಂದಪದಾಬ್ಜರೇಖಾ | ಸ್ತೋಮರಂಜಿತಗಿರಿನದೀವನ | ಭೂಮಿಗಳನಿವನೆಂತುಮರವೆನುಕಾಣುತಡಿಗಡಿಗೆ ॥ ಈಮ
ನೋಹರವೇಣುರವವೆಂ | ತಾಮಹಾತ್ಮನಮರೆಯಲೀಯವು | ಸೋಮಸಂನಿಭಕೇಳುತನ್ಮಯವಹುದುಮನವೆಂದ ॥ ೨೭ ॥
ಎಲ್ಲೆನಚ್ಯುತರಾಮರನುನರ | ರಲ್ಲಗೋವಳರಲ್ಲಯಾದವ | ರಲ್ಲದೇವೋತ್ತಮರುತಾವವತರಿಸಿಧರಣಿಯಲಿ ॥ ಸಲ್ಲಲಿತಮೂ
ರ್ತಿಗಳುನರರಂ | ತೆಲ್ಲರಿಗೆಮರವುತ್ತನಿಜವನು | ವಲ್ಲಭನೆವರ್ತಿಸುವರಖಿಳಜಗದ್ಧಿತಾರ್ಥದಲಿ ॥ ೨೮ ॥ ಗಾರ್ಗ್ಯನಂದನಗೊ
ರದನಿವರಪ | ವರ್ಗಮೂರ್ತಿಗಳೆಂದುಮರವೆಯ | ಮಗ್ಗಲಿವಮಾತಾಡಿನಂಬಿಸೆತಂನಸುತರೆಂದು ॥ ದುರ್ಗಮವನೀವ್ಕೇಳುವಿ
ರವರಿಂ | ಗಗ್ಗಳೆಯರೀಸುರನರೋರಗ | ವರ್ಗದೊಳಗಿಲ್ಲೆಂದಡರಿಯದೆಕೆಟ್ಟತಾನೆಂದ ॥ ೨೯ ॥ ದುರ್ಲಲಿತತಾಳತ್ರಯದಬ
ಲು | ಬಿಲ್ಲುಮುರಿದುಮಹಾಹವಕೆಗಜ | ಮಲ್ಲರನುಬಲಿಗೊಟ್ಟುರಂಗದ್ವಾರದಲಿಮಲವ ॥ ಮಲ್ಲರನುತಲೆಗೊಂಡುಕಂಸನ | ಕೊ
ಬ್ಬರೈನಾಗಾಯುತಪ್ರತಿ | ಮಲ್ಲಬಲವನುಹರಿಬಲರುಸಾಮಾನ್ಯರಲ್ಲೆಂದ ॥ ೩೦ ॥ ಆರುಶಿಶುತನದಂದುದನುಜೆಯ | ಹೀರಿದ
ಸುಜೀವವನುಶಕಟನ | ನಾರೊಡದರಭ್ರದಲಿವಾತಾಸುರನಜೀವನಕೆ ॥ ಮಾರಿಯಾದವರಾರುವತ್ಸನ | ನಾರುಕೊಂದರುಶೀಳ್ವ
ಬಕನನು | ಶೇರಿಸಿದರಾರಂತಕಂಗೆಲೆತಂದೆಹೇಳೆಂದ ॥ ೩೧ ॥ ಬೆಂಣೆಗಳ್ಳನದಾರುಬಾಯಲಿ | ಮಂಣಮೆದ್ದುಗುಣತ್ರಯಂಗಳ
ಮಂಣಿಗೆಯಭುವನಾವಳಿಯಚಿತ್ರವನುತೋರಿಸುವ ॥ ಚಿಂಣಸುದರಕ್ರೂರದಾವನ್ಳ | ಹೆಂಣಲರಿಯವುಮಗುಳೆಮೊದಲಾ |
ಕಂಣಿವೊಂದೇಕಟ್ಟಲಾದುದುತಂದೆಕೇಳೆಂದ ॥ ೩೨ ॥ ಏಳುವರ್ಷದಬಾಲಕನುತಾ | ನೇಳುದಿನಪರಿಯಂತವೊಂದೇ | ತೋ
ಳಿನಲಿಗೋವರ್ಧನಾದ್ರಿಯನಕಟಲೀಲೆಯಲಿ ॥ ತಾಳಿದಿರನೈಪ್ರಳಯದಂದದ | ಘೋಳಿಮಳೆಯಲಿಕಾಳಿಯಾಖ್ಯ | ವ್ಯಾಳನನುನೊ
ಶಿತುಳಿದುಕಳುಹನೆಸಾಗರಕ್ಕೆಂದ ॥ ೩೩ ॥ ಹೇಳಲರಿಯನುಕೃಷ್ಣನರ್ಭಕ | ಲೀಲೆಗಳನಿಖಿಳಾಮರೇಂದ್ರರು | ಹೋಲಲರಿವರೆ
ರೂಪುಗುಣವಿಕ್ರಮದವಿಭವದಲಿ ॥ ಖೂಳರಾರೆಂಮಂತೆಲಕ್ಷ್ಮೀ | ಲೋಲನನುಮಗನೆಂದುದಿಟಗೋ | ಪಾಲನೆಂದಜ್ಞಾನ
ಮೋಹಿತರಾದೆವಾವೆಂದ ॥ ೩೪ ॥ ಎನುತೆನುತಕೃಷ್ಣಾಂಘ್ರಿಕಮಲವ | ನೆನನೆನದುಜನಿತಾನುರಾಗದ | ವನಧಿಯಲಿಮನಮು
ಳುಗಿತನ್ಮಯನಾಗಿಪುಳಕದಲಿ ॥ ನೆನದುನಯನಾನಂದಜಲದಲಿ | ಮುನಿವರನವೋಲೆಡರನರಿಯದೆ | ಘನಸುಖದಲುಸುರದೆಸ
ಮಾಧಿಯಲಿದ್ದನಿದಿರಳಿದು ॥ ೩೫ ॥ ಇರಲದನುಕೇಳುತ್ತಪುತ್ರನ | ಚರಿತವನುತದ್ಗುಣಗಣಂಗಳ | ನಿರದೆನೆನವುತ್ತಾಯಶೋ
ದೆಮನೋನುರಾಗದಲಿ ॥ ತೊರದಮೊಲೆಗಳತನುಪುಳಕದು | ಬ್ಬರದನಯನಜಲೌಘದೊಳಗಂ | ಬುರುಹಮುಖಿನನವುತ್ತ
ಕೊಂಪುಳಿಯೋದಳಡಿಗಡಿಗೆ ॥ ೩೬ ॥ ಅವರಮನದನುರಾಗವನುಮ ತ್ತವರನಾಕೃಷ್ಣಾಂಘ್ರಿದರುಶನ | ದವಿರಳಾಂತಸ್ತಾಪ
ವನುಕಾಣುತ್ತಮನದೊಳಗೆ ॥ ಸವನಿಸಿದಭಕತಿಯಲಿಕೈಮುಗಿ | ದನತನುತಾನಾಗಿವರನೈ | ಷ್ಣವಕುಲಾಗ್ರಣಿಧನ್ಯತೆಗೆತಲೆ
ಬಾಗುತಿಂತೆಂದ ॥ ೩೭ ॥ ಆರುನಿಂಮಂದದಕೃತಾರ್ಥರು | ಭೂರಿಭಾಗ್ಯರುಭುವನಜನವಿ | ಸ್ತಾರದಲಿನಿಂಮಂತೆಧನ್ಯರದಾರು

ಮುನಿಮನಕೆ ॥ ದೂರವಹಪರವಾತ್ಮನಲಿಮನ । ಜೇರುವರಿದುದುಕೃಷ್ಣನಲಿಸಾ । ಕಾರಸಂಪತ್ತಿನಲಿಪುತ್ರಪ್ರೇಮದಿಂದೆಂದ ॥ ಈಸಕಲಜಗದುದಯಸಂಸ್ಥಿತಿ । ನಾಶಕೇತುಗುಣತ್ರಯಂಗಳ । ಕೋಶನೆನಿಸುವವನಾಯೆನ್ನೊಳಗೊಂಡಾವನಂಘ್ರಿಯಲಿ ॥ ದಾಸಿಯಾಗಿಹಳುವಿಕುಂಠಾ । ವಾಸಿಸಾಕ್ಷಾದ್ವಿಷ್ಣುಧರೆಯಲಿ । ವಾಸುದೇವಾಖ್ಯೆಯಸುತಳಡನುನಂಪಕೇಳೆಂದ ॥ ೩೯ ॥ ಅಪನೊಬ್ಬನನಂತ್ಯಕಾಲದ । ಶೋಭನಿಜಚಿತ್ತದಲಿಧ್ಯಾನಿಸಾ । ಅವಸರವನುಪಡೆದುಸನೆನದರೆನಿಮುಷಮಾತ್ರದಲಿ ॥ ಜೀವರ್ಯದುವರೆನಿವಿಮುಕ್ತಿಯ । ನಾವಿಕುಂಠಾಧೀಶನಲಿನಿಜ । ಭಾವವುಳ್ಳವಮಹಾತ್ಮರಿರನಿಮಗಾರುಸರಿಯೆಂದ ॥ ೪೦ ॥ ಜನ್ಮನಿಜನಾಮವನುನೆನೆದಡೆ । ಕರ್ಮಬಂಧವಹರಿವಸಾಕ್ಷಾ । ಬ್ರಹ್ಮಮೂರುತಿಕೃಷ್ಣನಂಘ್ರಿಯಲಕಟನಿಮಗಿಂದು ॥ ಸನ್ಮತಾತ್ಮಸುತಾಭಿಮಾನದ । ನೆಮ್ಮುಗೆಯನಿಜಭಕ್ತಿಯಾಯಿತ್ತು । ನಿಮ್ಮಶೋಭಲವವದರಮಧ್ವರವಾರುಹೇಳೆಂದ ॥ ೪೧ ॥ ಅತ್ತಲಜಭವವಮುನಿವರರುನಿಜಚಿತ್ತದಲಿನೆನನೆನೆದುದಣಿಯರು । ಸತ್ಯಸಂವಿದೂಪನನುಸಂಪನ್ನಸಕಲಿಯಲಿ ॥ ಇತ್ತಲೀನರಲೀಲೆಯಲಿಪರಿ । ವರ್ತಿಸುತಪರಮಾತ್ಮನಿಹುದೀ । ಮರ್ತ್ಯಲೋಕದಪುಣ್ಯವಲ್ಲಾ ತಂದೆಕೇಳೆಂದ ॥ ೪೨ ॥ ಅಂತಿಕದಲಿಹನಚ್ಯುತನುಮಾ । ಣಂತರಂಗವ್ಯಥೆಯನೆಲ್ಲರಿ । ಗಂತರಾತ್ಮನುಕೃಷ್ಣನಲ್ಲನೆನದುನೋಡುವಡೆ ॥ ಸಂತವಿರಾಸುಖಿಯಾಗುಲಕ್ಷ್ಮೀ । ಕಾಂತನೆಸುನಿನ್ನೊಳಗೆಕಂಡೀ । ಚಿಂತೆಯನುಬಿಡುತಾಯೆಸರ್ವಾತ್ಮಕನುಹರಿಯೆಂದ ॥ ೪೩ ॥ ತಂದೆತಾಯೊಡವುಟ್ಟಿದವರೆಂ । ಬೊಂದುಮಾಯಾಭ್ರಾಂತಿಯಿದುಗೋ । ವಿಂದನಲಿನೆರೆಕೊಳ್ಳದಖಿಳಾತ್ಮಕನುತಾನಾಗಿ ॥ ಮಂದಮತಿಗಳುಬರಿದೆನಿಜಸುತ । ನೆಂದುಬಾಂಧವಜನಕಜನನಿಯು । ರೆಂದುಕಲ್ಪಿಸಿಕೆಡುವರುನೊಂದೇವಸ್ತುವಿನಲೆಂದ ॥ ೪೪ ॥ ಬಿಡದೆಮೂರುಗುಣಂಗಳಲಿಕನು । ವಿಡಿದುಸೃಷ್ಟಿಸ್ಥಿತಿಲಯಂಗಳ । ನಡಸುವನುಪರಮಾತ್ಮನಜಹರಿಕಾಶ್ವರಾಖ್ಯೆಯಲಿ ॥ ಕಡೆಗೆತಾನೇತನ್ನೊಳಗೆಜಗ । ವಡಗಿನಿಲಲುಗುಣತ್ರಯಂಗಳ । ತೊಡಕನೇಕನನಂತನಕ್ರಿಯನಾತ್ಮನೋಡೆಂದ ॥ ೪೫ ॥ ತಾತಿರುಗಿಕಂಗೆಟ್ಟುತಿರುಗಿತು । ಭೂತಳವಿದೆಂಬಂತೆದಿಟಪರ । ಮಾತುಮನೆತೋರುವನುತತ್ವಜ್ಞಾನಶೂನ್ಯರಿಗೆ ॥ ಜಾತವ್ಯಾತವೆಂಬಂತೆಕರ್ಮ । ವ್ರಾತಕರ್ತೃವಿನಂತೆಹಮ್ಮಿನ । ಹೇತುವಿಂದನೆತಿಳಿದರಕ್ರಿಯನಾತ್ಮನೋಡೆಂದ ॥ ೪೬ ॥ ಮಗನುನಿಮಗೆಂದೆಂಬಡೆಲ್ಲಾ । ಜಗಕೆಮಗನಲ್ಲಾಮಮಕಾಂಪದನು । ನಿಗಮಮತನೆನಿಪುಣ್ಯವಂತರಿರಿದುವಿಚಾರಿಸಲು ॥ ಅಗಲಿರವನೇಚಿನುಮಯನುಸ । ರ್ಪಗನುಸರ್ವಾತ್ಮಕನುತೋರುವ । ದೃಗುಪಯುಗಳವಿಷಯಕ್ಕೆವಿಹ್ವಲರಾಗಬೇಡೆಂದ ॥ ೪೭ ॥ ಜಲನಿಧಿಯವೀಚಿಯಲಿತಾರಾ । ವಳಿಗಳಾಜಲಧಿಯಲಿತೋರುವ । ವಳಿರವೆಂತೆಂತದ್ವಯಾಜ್ಞಾನಾಮ್ಬೃತಾಬ್ಧಿಯಲಿ ॥ ಪೊಳೆದುತೋರುವವೀಯಜಾಂಡಾ । ವಳಿಚರಾಚರಸಹಿತಕೃಷ್ಣನ । ಲಳಿವನೆನೆಲಿನ್ನಾರುತವ್ವಿರಹಿತರುಕೇಳೆಂದ ॥ ೪೮ ॥ ಭಾವಿಸಲುಸರ್ವಾತ್ಮಕನುಮಾ । ಯಾವಲಂಬನದಿಂದಜನಿಸಿದ । ಯಾವನಧಿಶೋಕ್ಷಿಕಹಿತವಿಗ್ರಹನುತಾನಾಗಿ ॥ ಈವಸುಧೆಯಲಿಸಂಚರಿಸಲಿಂ । ದೀವರಾಕ್ಷನುನಿಮ್ಮಬಯಕೆಯ । ಭಾವನೆಗೆಬಳಸಂದುಬಂದನುನಿಮ್ಮಸನ್ನಿಧಿಗೆ ॥ ೪೯ ॥ ಯತಿಮನಂಗಳುಮುಟ್ಟಲಮ್ಮವು । ಕ್ರತುಗಳಾವನತುಷ್ಟಿಗೈಯ್ಯವು । ಶ್ರುತಿನಿಕರಬಣ್ಣಿಸಲುನೆರೆಯುವನಾವನೊಳುಗುಣವ ॥ ಸುತನೆನಿಸಿನೊಳೆಯುಂಡುದಣಿದ । ಚ್ಯುತನುಮಗುಲಲಿಶೋರಗುವನುಕೇ । ಳುತನಿಜಾರ್ಭಕಚರಿತವನುನೀನ್ಪೊಸಾಶುತಿರಲೆಂದ ॥ ೫೦ ॥ ಧನ್ಯರಿನ್ನಾರಪ್ಪನಿಮ್ಮಂ । ತನ್ಯರೀಜಗದೊಳಗೆಸಜ್ಜನ । ಮಾನ್ಯರಾರೀಭಕತಿಯನವರಿಜನಿಕಬೇಕೆಂನು ॥ ಸನ್ನುತನುದರಸನಾದಂ । ತೆನ್ನನಟ್ಟದನದುನಿಮಿತ್ತವೆ । ಖಿನ್ನರಾಗದಿರೆಂದುಸಂತವಿಸಿದನುಬಾಂಧವನ ॥ ೫೧ ॥ ಎಂದುಹರಿಮಹಿಮೆಗಳನಂದಾ । ನಂದಗೋಪಯಶೋದೆಯರಿಗೆಮು । ಕುಂದದಾಸನುಮನದವಿರಹವಿಷಾದಕೆತುಮಂತೆ ॥ ಬುಡದವನುಹರಿಯುಂನುಬಣ್ಣಿಸು । ತಂದುಕುಳ್ಳಿರಲಿರುಳುಕತ್ತಲೆ । ಸುದುದರೆನಿವಿಷದವೊಶಾನಿತ್ಯಾತ್ಮನಿಸ್ತರಿಗೆ ॥ ... ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ... ॥ ೫೨ ॥

ಅಂತು ಸಂಧಿ ೪೬ಕ್ಕಂ ಪದನು ೧೯೭೬ಕ್ಕೆ ಮಂಗಳಮಸ್ತು.

ನಲವತ್ತೇಳನೆಯ ಸಂಧಿ.

ಸೂಚನೆ ॥ ಸುತವಿಟ್ಟನುಗೋಪಿಯರನೇ । ಕಾಂತಭಕ್ತರನೇವಲಕ್ಷ್ಮೀ । ಕಾಂತನಾಜ್ಞಾಪಿಸಿದವುಳಸಂದೇಶಸೂಕ್ತಿಯಲಿ ॥ ... ...

ಪದನು ॥ ಅರಸಕೇಳ್ನಂದಗೋಪಾ । ಲ್ಯರುಮುಕುಂದನಲೀಲೆಯನುವಿ । ಸ್ತರಿಸುತುದ್ಧವನೊಡನೆಮಾತಾಡುತಕುಳ್ಳಿರಲು ॥ ಇರುಳುಕಡೆಸಾಯಿತೆಂದಂ । ಬುರುಹಮುಖಿಯರುಗೋಪನಾರಿಯ । ರಿರದೆಕಡದರುಮೊಸರನೊಪ್ಪಿರದೀವಿಗೆಯಬೆಳಗಿ ॥ ೧ ॥ ಸೊತರಬೆಳಗಿನಲೆಸವಮಣಿಹೊಂ । ದೊಡಿಗೆಗಳವೊಗರಸವಸೂಸುವ । ಬಿಡುಮುಡಿಯಮಲ್ಲಿಗೆಯಚಲಕುಚತಟದಕದಪುಗಳ ॥ ಹೊಡವಸೊನ್ನೋಲೆಗಳಕಿರುಬೆನು । ರಿಡುವಭಾಳದಸುಳಿಗುರುಳುಗಳ । ಮುಡದಿಯರುಪೊಳದರು

ಹರಿಯನುಮೊಸರಕಡವುತ್ತ ||೨|| ದಿವವನಲ್ಲರಿವಂತೆದಶದಿಗು | ವಿವರದಘಹರವಂತ್ರಸುಜನ | ಶ್ರವಣಮಂಗಳವೆ
ಲುಪರಮಾನಂದಕರವೆನಲು || ಯುವತಿಯರುಪಾಡಿದರುಕೃಷ್ಣನ | ನವಿರಳಪ್ರೇಮೋಪರಂಜಿತ | ರವದಲಾತ್ರೈಲೋಕ್ಯ
ಪಾವನಮೂರ್ತಿಗಳುಬಿಡದೆ ||೩|| ಪರಿಪರಿಯಹರಿಬಾಲಲೀಲಾ | ಚರಿತವನುಪಾಡುತ್ತಕಾಂತೆಯರು | ರಿರದೆಮೊಸರನುಕಡವು
ರೆತತ್ಪರವಶ್ಯದಲಿ || ಹರವದುರಿತದಕೂಡೆಕತ್ತಲೆ | ಹರದುದೆಣ್ಣೆಸೆಗುದಯಶ್ಯೈಲದ | ಶಿರದಲಿತ್ತುಸುರವಿಧರಾತಳಕಿಸೆಯುಲೋ
ಗವ ||೪|| ನಾರಿಯರುಬೆಳಗಾಗಲಾಹೊಂ | ದೇರನೀಕ್ಷಿಸಿಬಾಗಿಲೊಳಗೀ | ಗಾರುಬಂದವರಿಂದುನವಿಮ್ಮಾನಂದಗೋಕುಲಕೆ ||
ರದಿರನಕ್ರೂರನಾವುದು | ಕಾರಣವೊತನಗಿಲ್ಲಿಬಹದೆವಿ | ಚಾರಕಂಡೈತಂದರಂದಾರಥದಹೊರೆಗಾಗಿ ||೫|| ನರದುಸತಿಯ
ನೋಡುತಿರಲಂ | ಬುರುಹನಾಭನಭಕ್ತನಂದಾ | ಚರಿಸಿಸಂಧ್ಯಾವಂದನವನೈತಂದನಾಸ್ಥಳಕೆ || ಅರಳುಗಂಗಳಲೆಸೆವಭಾಳದ |
ರುಳಗಳಕವಾನೀಯವದನಾಂ | ಬುರುಹಕಾಂತಿಯಲಖಿಳಜನಮನಗಳನುಸೋಲಿಸುವ ||೬|| ಉಟ್ಟಪೀತಾಂಬರದಕಿವಿಗ
ಲಿಟ್ಟಮಣಿಕುಂಡಲದಕೊರಳಲಿ | ತೊಟ್ಟಹಾರದವೈಜಯಂತಿಯಕರದಕಂಕಣದ || ಕಟ್ಟಿದುಡೆನೇವಳದಮಣಿಗಳ | ವಟ್ಟ
ಂಜೆರಗಿನಲಿದನುಜಘ | ರಟ್ಟನಂತೈತರಲುಕಂಡರುಗೋಪಕಾಂತೆಯರು ||೭|| ಈತನಹನಹನಖಿಳರೂಪವು | ಹಾತಿಶ
ಲಕ್ಷಣದಲಾಸಾ | ಕ್ಷಾತಲಕ್ಷ್ಮೀಕಾಂತನಂದದಲೆಸವಭೂಷಣದ || ಜಾತಶೋಭೆಗಳಂತುತನಗಿದು | ಪ್ರೀತಿಯಲಿಸಂಭವಿಸಿ
ವೊಬ | ನ್ನೀತನನುನೋಡುವೆನುತನಡೆತಂದರಬಲೆಯರು ||೮|| ಆಸತಿಯರುದ್ಧವನನಚ್ಯುತ | ವಾಸನೆಂಬುದನರಿತುತ
ತ | ವೇಷಭೂಷಣದಿಂದವಿದಿತವನೋನುರಾಗದಲಿ || ಲೇಸೆನುತಪರಿವರಿಸಿನೆರೆಪರಿ | ವೇಷದಂತಿರೆನಿಂದುಹರುಷಾ | ವೇಶ
ಲಿದೆಸಗೊಂಡರನುಪಮನಂಘ್ರಿಗಳಿಗೆರಗಿ ||೯|| ಆರುನೀನೆಲೆತಂದೆಕಳುಹಿದ | ರಾರುನಿಂನನುಬಂದೆನೀನಿಂ | ದಾರಹತ್ತಿರ
ನುಕಾರಿಯುಮಾರಬಾಂಧವನು || ಚಾರುತರಕೃಷ್ಣಾಂಗಲಕ್ಷ್ಮಿಗೆ | ಸೇರುತಿದೆನಿಂನಂಗಸಿರಿಹೇ | ಳಾರುನೀನೆನಲೆಂದನುದ್ಧವ
ವರೊಡನೆನಗುತ ||೧೦|| ದಾಸನಾನೆಲೆತಾಯ್ಗಳಿರಲ | ಕ್ಷ್ಮೀಶನಂಘ್ರಿಗೆಪರಮಕರುಣಾ | ರಾಶಿಕಳುಹಿದನೆಂನನೀನಿಂವಂ
ಸಂನಿಧಿಗೆ || ವಾಸುದೇವನುಕರುಣಿಸಿದಸಂ | ದೇಶದಲಿತಾಬಂದೆನೀವುನ | ದಾಸರನುಪರಿಹರಿಸಿನಿಮ್ಮನುಸಂತವಿಸಲೆಂದು ||
ನಲುಸತಿಯರುಕೇಳುತವೆಕಂ | ಬನಿಯಧಾರಾವೃಷ್ಟಿಯಲಿತನು | ನನೆದುನಯನಪ್ರೀತಿರಸದಲಿಮುಳುಗಿಮರುಳಾಗಿ || ವನಿ
ಯರುಗೋವಿಂದನೊಲವನು | ನೆನೆದುತಲೆದೂಗುತ್ತಹರಿದಾ | ಸನನುಸತ್ಕರಿಸುತ್ತನುಡಿದರುಕುಶಲವಾರ್ತೆಗಳ ||೧೨||
ಸನಾಡಿದೆಕೃಷ್ಣನಗದ | ದಾಸನಹೆನೀನದನುಬಲ್ಲೆವು | ದೂಷಣವೆನಿಜಮಾತೃಪಿತೃಗಳಲೆಸವಮಮತೆಗಳ || ಆಸರಿದನಾರಕ
ಕಳುವರು | ಘಾಸಿಯಾದರುತಂದೆತಾಯ್ಗಳ | ಗಾಸೆಯಾವುದುಕಳುಹದಿರ್ದಡನಾಥರಿಗೆದಿಟಕೆ ||೧೩|| ಹೆತ್ತವರಮೇಲುಳ್ಳಮ
ತೆಸು | ದುಸ್ತರವಲಾಯೋಗಿಗಳಿಗೆನಿ | ವೃತ್ತರುಪ್ಪರಿಗವಗತಾತ್ಮಸುತತ್ವರಿಗೆಸಹಿತ || ಮತ್ತೆಕೃಷ್ಣಂಗಾರುನೆನವಡೆ | ಭೃತ್ಯ
ನುಕಳುಹುವಡೆತನ್ನಯ | ಚಿತ್ತವೃತ್ತಿಗೆಬಹವರಿದರೊಳಗಾತ್ಮಬಾಂಧವರ ||೧೪|| ಉಳಿದವರಕೆಳೆಕಾರ್ಯಕೋಸುಗ | ಬಲಿದಿ
ದುತತ್ಸಿದ್ಧಿಯಲಿನಿಷ್ | ಫಲವೆನಿಪ್ಪದುಪುಷ್ಪದಲಿರಸತುಂಬಿಗಳುಮಾಳ್ಪ || ಕೆಳೆಯವ್ರೋಲಾರಿಂಗದಾರ್ಯೆ | ಕೆಳೆಯರಾರಿಂಗಾ
ಹಿತವರು | ತಿಳಿವರೆಲ್ಲಾಲೋಕವಿಹುದಾಸ್ವಾರ್ಥಪರವಾಗಿ ||೧೫|| ಎಣಿಸುವರೆಧನಹೀನರನುದಿಟ | ಗಣಿಕೆಯರುವಿಭ್ರ
ನಹಧಾ | ರುಣಿಸತಿಯನಾಪ್ರಜೆಗಳವಗತವಿದ್ಯರಾಗುರುವ || ತೃಣಕೆಕೊಂಬರೆಋತ್ವಿಜರುದ | ಕ್ಷಿಣೆಬರಲುಯಜಮಾನನನು
ಗ | ಗಣವಿಹವೆಕರಿಗಾಡೊಳೆಂದರುಕಾಂತೆಯರುಮರುಗಿ ||೧೬|| ಬೀತಮರನನುಬಿಡದೆಪಕ್ಷಿಗ | ಳೀತಕಾಹಲುಬುವಿ
ಕೃಷ್ಣನ | ಮಾತುನಮಗಿನ್ನೇಕೆಕನಸಿನನಿಧಿಯಭಿಲಾಷೆ || ಓತುಕಮಗರಿದೊಲಿದುಪತಿಪಿತೃ | ಮಾತೃಸುತರನುತೊರದನೆ
ನು | ಘಾತಿಸಿದನಿಷ್ಕರುಣಿಯೆಂದರುಕಾಂತೆಯರುಮರುಗಿ ||೧೭|| ಆರುನಾವೀನಮಗೆಕೃಷ್ಣನ | ದಾರುಬರಿದೇಹಂಬಲಿ
ಸಂ | ಸಾರಬರುದೊಡೆಯಾಯ್ತುತಚ್ಚಿಂತೆಯಲಿಮನಮುಳುಗಿ || ಸೇರಿದರುಸಾಮ್ರಾಜ್ಯವಹಿತರು | ಸೇರಿದರುಕಾಲಂಗತ
ಗಿ | ನ್ನಾರುನೆನವಡೆನಾವೆನುತತುಂಬಿದರುಕಂಬನಿಯ ||೧೮|| ನೆನವನೈಮರಮೊಮ್ಮೆನಮ್ಮನು | ವನಿತೆಯರಗೋಷ್ಠಿಯ
ಕೆಳೆಯರ | ಜನಿತಮೇಳದಹಾಸ್ಯಕಥೆಗಳಲಿರೆಯದೃಷ್ಟಿಯಲಿ || ಮನುಜಭೂಷಣನಾತ್ಮಪದಯುಗ | ವನಜಸಂಶ್ರಿತೆಯರನ
ಥಿಸು | ರನುನಿಜಾಂಘ್ರಿಯದಾಸಿಯರನೆಂದರುಮೃಗಾಕ್ಷಿಯರು ||೧೯|| ತಾಯೆಮರುಳಾನೀನುನಗರ | ಸ್ತ್ರೀಯರಿಗೆತಾ
ನ್ನುಕಮಲದ | ಳಾಯತಾಕ್ಷಂಗಾರುಮೋಹಕ್ಕುಂಟೆಮುಪ್ಪುಗಳು || ಬಾಯಬಿಟ್ಟಡೆಬಲ್ಲನೈನ | ಮ್ಮಾಯುಸವನಿವನೊಡೆಯನೆ
ತೆನು | ತಾಯುವತಿಯರುಬಿದ್ದರಳಲುತಬಹಳಮೂರ್ಛೆಯಲಿ ||೨೦|| ನೆನನೆನದುಗೋಪಿಯರುಗೋವಿಂ | ದನಮೃದು
ತಮಧುರಸೂಕ್ತಿಯ | ನನುಪಮಾನನಕಮಲವನುಸುಪ್ರೇಮವೀಕ್ಷಣದ || ಜನಿತಸೌಹಾರ್ದದೃಢಾಲಿಂ | ಗನವನಾರತಿ
ಗೋಷ್ಟಿಗಳನಾ | ವನಿತೆಯರುತನ್ಮಯವೆನಲುಕಂಡರುಜಗತ್ರಯವ ||೨೧|| ಸತಿಯರಿಂತಳಲುತ್ತನೆನದ | ಚ್ಯುತನಬಾಲ್ಯ
ಮಾರಲೀಲಾ | ಕೃತಿಗಳನುಮೋಹನವಿಹಾರವಿಳಾಸವಿಭ್ರಮನ || ಗತಿಗಳನುತದ್ಭಾವನಾಭಾ | ವಿತೆಯರಶ್ರುಜಲಾವಿಲೋ

ಭ್ರಮರ ಗೀತೆಗಳು.

ಲೇ । ಷ್ಟೆಯುರಿದ್ದರುಪೃಥ್ವಿಗಳಂತುದ್ಧವನವಂದೆ ||೨೨|| ಅಂಬುಜಾನನೆಗೋಪಿಯೊಬ್ಬಳು । ಹಂಬಲಿಸಿದೆಸೆದೆಸೆಗಳಿನಿಂ ।
ತಾಂಬರನುಕಳುಹಿದನುದೂತನನೆಂದುನೆರೆಬಗದು || ತುಂಬಿಯನುಕಂಡೆಂದಳೀತ । ಕ್ಕಂಬುಜೋದರನಟ್ಟಿದನುನೀಂ । ನೆಂಬೆಕವು
ಗಿನ್ನಾವನಸಾಮವೆನುತ್ತಹಲುಬಿದಳು ||೨೩|| ಮುಟ್ಟವಮಾತಾಡದಿರುವಲ್ಲಭ । ನಟ್ಟದನೆಲೇಸಾಯ್ತುಸವತಿಯು । ಬಿಟ್ಟಕುಚಕುಂ
ಕುಮುದವ್ಯೆಲಗೆಸೋಂಕಿದಂದದಲಿ || ನೆಟ್ಟನಾತನೆಧರಿಸಲವದಿರು । ತೊಟ್ಟವನವಮಾಲಾಪ್ರಸಾದನ । ನಿಷ್ಟೆಯಿದುಸಭೆಗೇನುಸೌಖ್ಯಾ
ಪ್ಯವದುತವುತವುಗೆ ||೨೪|| ದೂತನೀಪರಿನೀನುತಾನಿ । ನ್ನೇತರವಕಾಂತಾನುಭವಿಯೋ । ಘಾತಕನುತನ್ನಧರಸುಧೆಯನುತನಗೆ
ಮುನ್ನೊಮ್ಮೆ || ನೂತನಪ್ರಿಯನಿತ್ತುಮಗುಳವ । ನೀತೆಯರನೀಡಾಡಿಕುಸುಮ । ವ್ರಾತವನುನಿನ್ನಂತೆಬಿಸುಟೈದಿದನುಮಧುಪು
ರಿಗೆ ||೨೫|| ಇಂತುಪರಿಚರಿಯಿಯನುಲಕ್ಷ್ಮೀ । ಕಾಂತೆಮಾಳ್ಪಳೊತನಗೆತನ್ನನ । ದೆಂತುನಂಬುವಳಕಟಕಪಟವಿಳಾಸದೀಕ್ಷಿ
ತನ || ಮಂತ್ರಮೂರ್ತಿಪವಿತ್ರಕೀರ್ತಿಮ । ಹಾಂತರಿಂಗಾಹ್ಲಾದನೆನಿಪಶ್ರು । ತ್ಯಂತಗೀತವಕೇಳಿಮರುಳಾದಳುಮಹಾಲಕ್ಷ್ಮಿ ||
ಬಂದುಬಂದೆರೆತುಂಬಿನೀನೇ । ನೆಂದುಮಾಡುವೆಹಳೆಯನಲ್ಲನ । ನಿಂದುಲಾಭವದೇನುಹಾಡಿದಡಬಲೆಯರಮುಂದೆ || ಮಂದಿರವ
ನಮಗಿಲ್ಲನೀಹೋ । ಗೆಂದುಮುಖಿಯರುಕೃಷ್ಣಸಂಗದ । ಲಿಂದುಪೂರ್ಣೆಯರೀವರಿಷ್ಟಾರ್ಥವನುದಿಟನಿಮಗೆ ||೨೬|| ಅವವಧು
ಪ್ರೋಕಪಟಹಾಸ । ಭ್ರೂವಿಜೃಂಭಂಗಳಿಗೆಸೋಲದ । ಳಾವಳೋದುರ್ಲಭನೆರಾಮರನಾಗಲೋಕದಲಿ || ಸೇವಿಸುವಳಾವನಪ
ದಾಬ್ಜರ । ಜೋವಿಶೇಷವಲಕುಮಿಯುಂದೊಡೆ । ನಾವದಾತಾಯುಂಬಡುತ್ತಮಕೀರ್ತಿಯಿನ್ನೇಕೆ ||೨೮|| ಎರಗಿಪದದಲಿಬೇ
ಡಲೀತ । ಕ್ಕರಿಯನೇತಾವಿದನುಕಪಟದ । ಹೊರಿಗೆವಾಳದಮಾತಿನಲಿದಿಟಸಾರವೇನುಂಟು || ತೊರದುತನಗೋತಿಹಪರದ
ಸುಖ । ದರಕೆಯನುನಾವಿರಲುನಮ್ಮನು । ತೊರದುಹೋದಾತನಲಿಮಾಡುವರುಂಟೆಸಂಧಾನ ||೨೯|| ಕೊಲುವನೇಧರ್ಮಿಷ್ಠ
ನಾದಡೆ । ಹಳುವದಲಿಬಾಲಿಯನುಬಲಿಯನು । ಬಿಲನಿವಾಸಕ್ಕಿಳುಹುವನೆನಿಜಚರಣಶರಣನನು || ಲಲನೆಕಾಮಿಸಿಬಂದಡರಿವನೆ ।
ಮೂಳ್ದುಕಿವಿಮೂಗುಗಳನೊಬ್ಬಳ । ಕಳೆವರವನದಸೆಸಿನೆಮಾಳ್ಪನೆಕಾಮಿಯಲ್ಲದನ ||೩೦|| ಸಾಕುಕೃಷ್ಣನಸಖ್ಯವವನಿ ।
ನ್ನೇಕೆಮರೆಯಲುನೆರೆಯವಾತನ । ಲೋಕಮೋಹನಮೂರ್ತಿವಾರ್ತೆಯನೊಮ್ಮೆಕೇಳ್ದವರು || ಲೋಕದೊಳಗಿರಲೀವಿಹಂ
ಗಾ । ನೀಕಸಹಿತಪವಿಯುಲಿಭಿಕ್ಷಾ । ನ್ನೈಕಜೀವಿಗಳಾದವ್ರುಳದುಕುಟುಂಬಸಂಗ್ರಹವ ||೩೧|| ಸತ್ಯನೆಂದೇನಂಬಿದೆವ್ರಜಿಂ ।
ಹೋಕ್ತಿಯನುಲುಬ್ಧಕನಸನ್ನೀ । ಕೋಕ್ತಿಯನುನಂಬಿದಮೃಗಾಂಗನೆಯರವೊಲಾಯ್ತುಮಗೆ || ಮತ್ತಿದೊಂದೇಲಾಭವಾಪುರು ।
ಷೋತ್ತಮನನಖಹತಕುಚಪ್ರಭ । ವಾರ್ತಿಸಾಕಂತಿರಲಿಹೇಳೂದನ್ಯವಾರ್ತೆಗಳ ||೩೨|| ಮತ್ತೆಬಂದ್ಯೆಪ್ರಿಯಸಖಿಯೆಪುರು ।
ಷೋತ್ತಮನುತಾನೇಕೆಕಳುಹಿದ । ನಿತ್ತಬಾರೈಕುಳ್ಳಿರಿಷ್ಟವದೇನುಬೇಡುವುದು || ಚಿತ್ತದೊಡೆಯನದೂತನೀನೆಮ । ಗಖ್ಯಧಿ
ಕೆತರಮಾನ್ಯನಲ್ಲಾ । ಕೃತ್ಯವನುತಮಗೇನಹೇಳಿದನೇನುಗತಿನಮಗೆ ||೩೩|| ಸಂದಿಸಲುನೀಬಂದೆಬಹೆವಾ । ವಂಧತನವಿನ್ನಿಂ
ತುಮತ್ಸರ । ಬಂಧುವಿನಸನ್ನಿಧಿಗೆಬಂದಡೆಕೃತ್ಯವೇನಮಗೆ || ಸಿಂಧುವಿನಮಗಳಹಳುರಸ್ಥಳ । ಬಂಧದೊಳಗನವರತಕಾಂಸ್ತುಭ ।
ಕಂಧರನಕಾಣಿಸಸಮರ್ಥನೆಹೇಳನಾಥೆಯರ ||೩೪|| ಎಂದುಬಹನೆಮ್ಮರಸನೆಮ್ಮಾ । ನಂದನಿಧಿಯುಂಮಾಳ್ಪನೆಮ್ಮವು । ಕುಂ
ದನೆಮ್ಮಯಸ್ವಾಮಿಯುಮ್ಮಯಪ್ರಾಣದಾತಾರ || ಚಂದನಾಗರುಚಾರುಭುಜದಿಂ । ದೇದುವಿರಹಾತುರೆಯರನುಗೋ । ವಿಂದನ
ಪ್ಪುವನೆನುತನುರ್ಭೆಗೆಸುಂದರಬಾಲೆಯರು ||೩೫|| ಇಂತುಕಂಡುದನೆಲ್ಲವನುನಿಜ । ಕಾಂತನಹಗೋವಿಂದನಂದೇ । ಕಾಂತ
ಯರುಹಂಬಲಿಪಹಲುಬುತಹಲವುಪರಿಗಳಲಿ || ಚಿಂತಿಸುತಸದ್ಭಾವನಿಯುತ । ಸ್ವಾಂತದಲಿಮೈಮರದಳಲುವೇ । ಕಾಂತಭಕ್ತೆಯು
ರಿರವನಂದುದ್ಧವನುನೆರೆಕಂಡ ||೩೬|| ಗೋಪಿಯರನಿಜನಿಸಭಕ್ತಿಯು । ನಾಪರಮಪೂರುಷನಚರಣದ । ವ್ಯಾಪ್ತರುಶನಲಾ
ಲಸೆಯುರಿದ್ದುರವನೀಕ್ಷಿಸುತ || ಶ್ರೀಪತಿಯುನಿಜದಾಸನಂದಾ । ಗೋಪಕಾಂತೆಯರಧಿಕಪುಣ್ಯಕೆ । ಳಾಪವಾಯ್ತೆಯೆನುತಪ್ರೌಢವ
ಮತೆಂದನವರೆಡನೆ ||೩೭|| ಹೇಳುವೆನುತಾಯಿಗಳರಾನಿ । ವ್ವಾಳದನಸಂಕ್ಲೇಶವನುನಿಜ । ಮಾಳ್ಪಯುಲಿಧರಿಸೂದುಹೇ
ಳುವೆನದನುನಿಮಗಿಂದು || ಶ್ರೀಲಲಾಮಪದಾಬ್ಜಸೇವಾ । ಲೋಲಭೃತ್ಯರಭೃತ್ಯತಾನೆಂ । ನ್ನೋಲಗವನವಧರಿಸುವುದನಿ
ಮೆಂದುಕೈಮುಗಿದ ||೩೮|| ಆರುನಿಮ್ಮಂದದನಾಥೆಯು । ರಾರುನಿಮ್ಮಂದದಮಹಾತ್ಮೆಯು । ರಾರುನಿಮ್ಮಂದದಸಭಾಗ್ಯೆ
ಯರಖಿಳಭುವನದಲಿ || ಶ್ರೀರಮಣನೊಲವಿನಕಟಾಕ್ಷದ । ಕೂರುಮೆಗೆಸೇರಿದಿರಿನಿಮ್ಮಂ । ತಾರುಧನ್ಯೆಯರಾರಪಾಪ್ತವ
ನೋರಥೆಯರೆಂದ ||೩೯|| ಜಪತಪಂಗಳನಿಶ್ಚಕರ್ಮದ । ಕೃಪಣರರಿಯರುಯೋಗನಿಷ್ಠೆಯ । ನಿಪುಣಮತಿಗಳುಕಾಣರ
ವನಪಾದರೇಣುಗಳ || ವಿಪುಳಪ್ರಜ್ಞೆಯರಾರುನಿಮ್ಮಂ । ತಪರಿಮಿತಮಹಿಮನಲಿವಾಯಯಾ । ಗುಪಿತಪರಮಾತ್ಮನಲಿಮ
ನಂದನ್ನವಾಯ್ತೆಂದ ||೪೦|| ದಾನಯಜ್ಞಕಪ್ರೋಪ್ರತಾಸ್ತ್ರ । ಧ್ಯಾನಸೇಯಮನಿಯಮತೀರ್ಥ । ಸ್ನಾನಜಪನ್ನೈರಾಗ್ಯಬುದ್ಧಿ
ಗುಣಂಗಳೆಂಬಿವರ || ತಾನದಾವುದುಸಿದ್ಧಿನೋಡಲ್ಪಡೆ । ದಾನವಾಂತಕಕೃಷ್ಣಭಕ್ತಿವಿ । ಧಾನವೆಂಬೀಸಕಲವೇದಪುರಾಣಪ

ತವೆಂದ ॥ ೪೧ ॥ ಆಮಹಾಪುರುಷನಪದಯುಗ । ತಾಮರಸನಿಜಭಕ್ತಿಸುಕೃತೋ । ದ್ದಾಮಯರಿರಳನಟ್ಟಿದಿರುನಿರ್ದ
ಯದಲಿನಿಮಗೆ ॥ ಭೂಮಿಪಾವನಮೂರ್ತಿಗಳರನಿ । ರಾಮಯಾಜ್ಯಾತಭಕ್ತೆಯರಿರವು । ಹಾಮಹಿಮೆಯರಿರಾರುಸರಿಭುವ
ನದಲಿನಿಮಗೆಂದ ॥ ೪೨ ॥ ವಂದನೀಯರಿರಖಿಳಜಗಕಭಿ । ನಂದನೀಯರಿರಚ್ಯುತಾಂಘ್ರಿ । ದ್ವಂದ್ವಭಕ್ತೆಯರಪನಿಪಾವನ
ಮೂರ್ತಿಗಳುನೀವು ॥ ಮುಂದುವರಿವಶ್ರುಗಳಿಗೀಗೋ । ವಿಂದನೀತನಸಮಯವನುನೀ । ವೆಂದಡುರಿಯರೆಗಾಗಿಕರಗುವಕೃ
ಷ್ಣನನವರತ ॥ ೪೩ ॥ ಮನವಿಹುದುನಿಮ್ಮಲ್ಲಿಕೃಷ್ಣನ । ತನುವಿಹುದುಮಧುರೆಯಲಿನಿಮ್ಮನು । ನೆನೆದಾಣಿಯನುವಾಕಿ
ನಲಿಬಣ್ಣಿಸುತನೆರೆದಣಿಯ ॥ ನೆನೆಯಲರಿಯರುಮಾನಿಗಳತ್ತಲು । ಘನತರದಮಹಿಮೆಯನುಬಣ್ಣಿಸು । ವನುವನರಿಯವು
ವೇದಮಸ್ತಕವಾಚನೆಗಳೆಂದ ॥ ೪೪ ॥ ಶ್ರದ್ಧೆಯಲಿಸಂಪಾದಿಸಿದವೇ । ದಾರ್ಢ್ಯಯನಜಪಹೋಮಸಂಯಮ । ಬುದ್ಧಿಗುಣನಿ
ಯಮಾದಿಸದನುಷ್ಠಾನನಿಕರದಲಿ ॥ ಸಿದ್ಧಿಯೆಂದೇಕೃಷ್ಣಪದಯುಗ । ಲಬ್ಧವಹನಿಜಭಕತಿಧರೆಯಲ । ಸಾಧ್ಯವಿದುಬಹುಪು
ಣ್ಯವಂತರಿಗಲ್ಲದಿಲ್ಲೆಂದ ॥ ೪೫ ॥ ಅತ್ತಲಾಭವಸುರಮುನೀಂದ್ರರ । ಮೊತ್ತಗುಣಸಂಪನ್ನನಿರ್ಮಳ । ಚಿತ್ತವೃತ್ತಿಗಳ್ಳದಲರಿ
ಯದಪರಕೆಪರತರದ ॥ ಸತ್ಯವೆನಿಸುವಕೃಷ್ಣನಲಿನಿಜ । ಚಿತ್ತವನುರಾಗೋಪಲಾಲಿತ । ಭಕ್ತಿಯಿದುನಿತ್ಯಾತ್ಮನಲಿನಿಮಗಾಯ್ತು
ಲಾಯೆಂದ ॥ … ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ … ॥ ೪೬ ॥

ಅಂತು ಸಂಧಿ ೪೩ಕ್ಕಂ ಪದನು ೨೦೨೩ಕ್ಕಂ ಮಂಗಳಮಸ್ತು.

ನಲವತ್ತಾಲ್ಕನೆಯ ಸಂಧಿ.

ಸೂಚನೆ॥ ಸಂತವಿಸಿಗೋಕುಲವನಂದೇ । ಕಾಂತಭಕ್ತರದೇವಲಕ್ಷ್ಮೀ । ಕಾಂತನಂಘ್ರಿಗೆಬಂದುಬಿನ್ನಹ
ಮಾಡಿದನುಹದನ ॥ … … … …

ಪದನು॥ ಅಂದಲೇಸಾಯ್ತಚ್ಯುತನಬೆಸ । ದಿಂದನೀಬರಲಾಯ್ತುಮಗೆಗೋ । ವಿಂದನರುಹೆನಸೌಖ್ಯವಲೆಸಜ್ಜನಕುಲಾ
ಗ್ರಣಿಯೆ ॥ ಎಂದನೇನನುನೆನೆವನೆಂತುಮ । ಕುಂದನೆಮ್ಮನುನಗರವನಿತಾ । ವೃಂದವಿಭ್ರಮಮೋಹಿತನುಹೇಳೆಂದರಬಲೆ
ಯರು ॥ ೧ ॥ ನೆನೆವನೇನನಮ್ಮಡನೆವೃಂದಾ । ವನದಲಾರಾಸೋತ್ಸವದಸಂ । ಜನಿತಸೌಖ್ಯದಲಾಡಿದೆಮ್ಮನುಸಂದರಾತ್ರಿಗಳ ॥
ನೆನೆವನೇನಿಜದಾಸಿಯರನೆ । ಮ್ಮನುಪಮಪ್ರೇಮವನುನಿಜಗುಣ । ವೆನಿಪಸಂಗೀತವನುಮೋಹನವೆನಿಪಲೀಲೆಗಳ ॥ ೨ ॥ ಅರಿ
ಯನೇಗೋಕುಲವನಿಜಪದ । ವಿರಹಸಖಿತಾಪದಲಿಬೆಂದುದ । ನರಿಯನೇನವಿಮ್ಮಾವಿಧಿಗೆಸಂದವರಬೆಂದವರ ॥ ಮೆರವಕಾರು
ಣ್ಯೇಕ್ಷಣದಮಳೆ । ಗರದುಸಂಜೀವನವಮಾಳ್ಪನೆ । ಕರುಣಿಗಳದಾತಾರಬಂದೀನಂದಗೋಕುಲಕೆ ॥ ೩ ॥ ಕಾಳುಗಿಚ್ಚಿನಲುರಿವ
ವನುಮಳೆ । ಗಾಲವನುಕಾಂಬಂತೆಕೃಷ್ಣನ । ಲೋಲನೇತ್ರಾಪಾಂಗಸುಸ್ಮಿತಮಧುರಸೂಕ್ತಿಗಳ ॥ ಲೀಲೆಗಳನಿನ್ನೆಂದುಕಂಡಪೆ ।
ವಾಲಿಗಳಲಕಟಕಟಬರಿದೆಕೃ । ಪಾಳುವೆಂಬರುಕೃಷ್ಣನನುಬಲ್ಲವರುತಾವೆಂದು ॥ ೪ ॥ ಆಶೆಯಿಲ್ಲದೆಬಹುದುಹುಸಿಲ । ಕ್ಷ್ಮೀಶ
ನವಿಮ್ಮಾಗೋಕುಲಕೆನಿಜ । ದಾಸಿಯರಹಂಗೇಕೆನಿಜಲಾಭಾಪ್ತಕಾಮಂಗೆ ॥ ದೇಸಿಗಿತಿಯರಹೊರಗೆದಿಟಸಂ । ದೇಶವಾವುದು
ಕಳುಹುವಡೆನಿ । ರ್ದೇಶಿಸುವರಾವರಿಯೆವೆಂದರುಕಮಲವದನೆಯರು ॥ ೫ ॥ ಆಶೆಯಿಂದಲೆಜೀವರಿಗೆಸಂ । ಕ್ಲೇಶವದನುಳಿವ
ವರಿಗಾವ । ಕ್ಲೇಶವಿಲ್ಲೆಂಬುದನುಪಿಂಗಳೆಹೇಳಿದನುಮುನ್ನ ॥ ಆಶೆಬಿಡದಡನರಿವಡೆಯಲ । ಕ್ಷ್ಮೀಶನಂಘ್ರಿಯುದರುಶನವದಿ ।
ನ್ನೇಸುಮೋಹನಪ್ರೇಮಕುಂದನಮೂರ್ತಿಮೊಜಗಕೆ ॥ ೬ ॥ ಎಲೆಮಹಾತ್ಮನೆಕೇಳುಕೃಷ್ಣನ । ಜೇಯಮೂರ್ತಿವಿಲಾಸವ
ನುಕಂ । ಡುಳಿಯಲುತ್ಸಹಿಸುವಯೋಗಿಯದಾರುಭುವನದಲಿ ॥ ಉಜದವರನಾಕೇಕೆಮಗೆಮರೆ । ನಿಜಯಲರಿಯಳುಲಕ್ಷ್ಮಿ
ತಪ್ಪುವು । ದೊಲವೆನುತ್ತಂಗದಲಿಮನೆಮಾಡಿಹಳುನಿಸ್ಪೃಹನ ॥ ೭ ॥ ಈಗಳೀಗಿರಿನದಿಗಳೀಭೂ । ಭಾಗವೀವನನಿಕರಕರು
ಣಾ । ಸಾಗರನಪದಕಮಲಭೂಷಿತಲಾಂಛಿತೋದ್ದೇಶ ॥ ರಾಗರಂಜಿತವೇಣುರವಗಳು । ಯೋಗನಿಧಿಯನುಮರೆಯಗೊಡ
ವಿ । ನ್ನೇಗುವೆವುಹಾವಿಧಿಯೆನುತ್ತಳಲಿದರುಗೋಪಿಯರು ॥ ೮ ॥ ಏತಕಳಲುವರಾಗಗೋಪಕ । ನೀತುವಲ್ಲಾನಮಗೆಕೃಷ್ಣನ ।
ನಾತನಮ್ಮವನುಳಿದುದಿನವಾತಂಗೆರಿಂಗುವಡೆ ॥ ಆತನಿಂದವೆನಮಗೆದಿನನಿ । ರ್ನೀತವಾದರೆಸಾಕುನಮಗಾ । ರಾತನಾರಿನ್ನೇತ
ಕಾಸೆಯೆನುತ್ತಹಲುಬಿದರು ॥ ೯ ॥ ಆವಗರಿಯಲಿಮರೆಯಬಹುದೀ । ಭಾವವನುಸಪ್ರೇಮಹಾಸದ । ಯಾವಲೋಕನಲಲಿತ
ಗತಿಮೃದುಮಧುರಸೂಕ್ತಿಯನು ॥ ಜೀವರೂಪವನುಳಿದಡೆಂತೋ । ಜೀವಿಸುವೆವಾವೆಮಗೆಗತಿಮತಿ । ಯಾವುದೆನುತೋಲಾ
ಹುತಿರ್ದರುನಯನವಾರಿಯಲಿ ॥ ೧೦ ॥ ಅಡಿಗಡಿಗೆಹಂಬಲಿಸಿಹಲುಬು । ತ್ತೊಡನೊಡನೆಹಾಕೃಷ್ಣಗೋಕುಲ । ದೊಡೆಯಗೋ
ಪೀನಾಥಗೋಕುಲಭಯನಿವಾರಕನೆ ॥ ಒಡೆಯನೀನುದ್ಧರಿಸುದುಃಖದ । ಕಡಲಲದ್ದೆವುಕೃಷ್ಣಯೆನುತಾ । ಮಡದಿಯರುದೆಸೆ
ಯೊಡೆಯೆಲೊರಲಿದರಿವಿದಮೂರ್ಛೆಯಲಿ ॥ ೧೧ ॥ ಆರುಗತಿನಮಗಿನ್ನುಕರುಣಾ । ವಾರುಧಿಯೆಹಾಕೃಷ್ಣಹಾಗೋ । ಪೀರಮಣ

ಗೋವಿಂದಗೋಕುಲದರಸಹಾಯೆನುತ ॥ ನಾರಿಯರುಹಲುಬುತ್ತಹರಿಯನು। ಮೇರೆಯಿಲ್ಲದಕೃಷ್ಣಚಿಂತಾ। ವಾರಿಧಿಯಲೋ
ಲಾಡುತಿರ್ದರುಮರದುಲೌಕಿಕವ ॥ ೧೨ ॥ ಇರಲದನುಕಾಣುತ್ತಗೋಪಿಯ। ವಿರಹವಾಪ್ರೇಮೋಪಲಾಲಿತೆ। ಹರಿಪದಾಂಬು
ಜಭಕ್ತಿಯನುಸರ್ವಾತ್ಮಭಾವವನು ॥ ಪರಮಭಾಗವತೋತ್ತಮನುಮನ। ಕರಗಿತಲೆದೂಗುತ್ತಸಾಮವ। ನೊರೆವುದಾಡಿದ
ನಂದನಧಿಕನಮನೋನುರಾಗದಲಿ ॥ ೧೩ ॥ ಸತಿಯರಿರಸಂಪನ್ನಭಾಗ್ಯ। ನ್ವಿಕೆಯರಿರಗೋವಿಂದವಿರಹದ। ಅತಿಶಯಾಹಿತ
ಮಾಮನುಗ್ರಹವಾಯ್ತು ಕೃಷ್ಣನಲಿ ॥ ಮತಿಸುಸಿಕ್ತಲವಾಯ್ತುನೆನವಡೆ। ಯತಿಮನೋದುಷ್ಪ್ರಾಪ್ಯವೆನಲ। ಚ್ಯುತನೊಳುಪ್ರಸಿ
ದ್ಧಿಯದಲಿಸೇರಿತ್ತುನಿಮಗೆಂದ ॥ ೧೪ ॥ ಚಿತ್ತವಿಪಿತಾತಾಯ್ಯರಸಿಜ। ಚಿತ್ತವಲ್ಲಭನೆಂದಸಂದೇ। ಶೋಕ್ತಿಯನುನಿಮ್ಮ
ಉತ್ಪತ್ತಿಯಾತವಿಮಿಸದೀಪ್ತಿಯನು ॥ ಸತ್ಯವೆಂದೇನೆಂಬುವುದುತ। ದ್ಭೃತ್ಯನಾನೆಂದೆನುತಹೇಳಿದ। ನುತ್ತಮಶ್ಲೋಕನಸುಧಾಸೂಕ್ತಿಗ
ಳನುಗತಿಮ ॥ ೧೫ ॥ ಅಗಲಲರಿವನದೆಂತುನಿಮ್ಮನು। ಜಗನುಮಯಾತಾನಾಗಿಜೀವರ। ಬಗೆಗಳಿಗೆಚ್ಛೆತನ್ನಮಾಯಾಶ್ರಯನು
ತಾನಾಗಿ ॥ ಗಗನಜಲಧರೆವನ್ಹಿವಾತಾ। ದಿಗಳುನಿಜಕಾರ್ಯಕನುತಾನಂ। ತಗಲುವವ್ರತದ್ಭೂತಭೌತಿಕರೂಪತಾನೆಂದ ॥ ೧೬ ॥
ಎನ್ನೊಳುಮಾಯೆಯಿಂದುಳುಮತ್ರಿಜಗ। ಕ್ಕೆನ್ನೊಳಗೆಸಂಸ್ಥಾನವಮಾಯೆಗೆ। ಯೆನ್ನಮಾಯಾಶಕ್ತಿಯಿಂದಮೆಮಗುಳ್ಳಸಂಹಾರ ॥ ಭಿನ್ನವಾ
ದಂತಿಹುದನುನೋಡಲ। ಭಿನ್ನವೆನ್ನಲಿತ್ರಿಜಗತೋರ್ಪವು। ಹಾರ್ಣವದಬುದುಬುದತರಂಗಾವಳಿಗಳಂತೆಂದ ॥ ೧೭ ॥ ಮೂರು
ಗುಣದಲಿತೋರ್ಪಬುದ್ಧಿಯು। ಮೂರವಸ್ಥೆಗಳೊಳಗೆತಾನೆಡೆ। ಯಾರದಮಲಜ್ಞಾನಮಯನಿಜತತ್ವವೆಂದೆನಿಸಿ ॥ ಬೇರೆನಿಜ
ಪ್ರಾಟೆಂಬುದನುನೆರೆ। ತೋರಿತುರಿಜಾವಸ್ಥೆಯಲಿಕ್ಕೈ। ವಾರಿತುರಿಯಾತೀತನಹಪರಮಾತ್ಮತಾನೆಂದ ॥ ೧೮ ॥ ಬೇರೆನಿಸಿತೋ
ರುವದುಮನದವಿ। ಕಾರದಲಿಜಗವೊಂದೆಸ್ವಪ್ನವು। ನೋರಥಂಗಳಪ್ರೋಲನಿರ್ವಚನೀಯರೂಪದಲಿ ॥ ನೀರೆಯರಿರಾಸುಳಿ
ಯೆಜಗವಿದು। ತೋರಲರಿಯದುಜಗವಿದಲ್ಲದ। ದೋರುಗುಡಿಸೆನುನಿತ್ಯಸುಖಪರಿಪೂರ್ಣತಾನೆಂದ ॥ ೧೯ ॥ ಇತ್ತನಗಲಿಕೆಯ
ನುನಿಮಗನಿಜ। ಚಿತ್ತವೃತ್ತಿಗಳೆನ್ನನಗಲದೆ। ವರ್ತಿಸಲುಬೇಕೆಂದುಬಹಳಮನೋನುರಾಗದಲಿ ॥ ಮುಕ್ತಿಗೆನ್ನಧ್ಯಾನವಲ್ಲದೆ।
ಮತ್ತನುವಿನಸಂಗದಲಿನಿ। ರ್ವರ್ತಿಸದುಹುರುಳಿಲ್ಲಜಡವಿಷಯಂಗಳೊಳಗೆಂದ ॥ ೨೦ ॥ ನಲ್ಲನೊಡಲಿರಲಾತನಲಿಮನ। ವಿಲ್ಲ
ನಬಲೆಯರಿಂಗೆದೊರಕೆ। ನಲ್ಲನಿರಲಡಿಗಡಿಗೆತಾತ್ಪರಿಯದಲಿನೆನವಂತೆ ॥ ವಲ್ಲಭೆಯರಿರನಿಮ್ಮಮನವೆ। ನ್ನಲ್ಲಿದೃಢತರವೆಂಬುದನು
ತಾ। ಬಲ್ಲೆನೇತಕ್ಕಳಲುವಿರಿಹಂಗಿಗನುತಾನೆಂದ ॥ ೨೧ ॥ ಭಾವಭಕ್ತಿಯೆಮುಕ್ತಿಕಾರಣ। ನೀವೆಕಾಣಿರೆಮಾನೆಗಳಲಿರಾ। ಜೀ
ವದುಬಿಡುರಾನೆನದುತನ್ನಯರಾಸಲೀಲೆಗಳ ॥ ಭಾವೆಯರಿರಾಪಡೆಯುದೆನ್ನಲಿ। ಜೀವವನುಬೆರಸಿದಿರಿತನುವಿನ। ಸೇವೆಯಿಂದ
ಮನೋನುರಾಗವೆಮುಖ್ಯತರವೆಂದ ॥ ೨೨ ॥ ಕೂಡಿಕೊಂಬೆನುನಿಮ್ಮನೆಂದೇ। ಮಾಡಿದೆನುಕಂಗಳಿಗೆದೂರವ। ನಾಡಲೇತಕ್ಕಂ
ಜಿಪಿರಿಹಂಗಿಗನಲ ನಿಮಗೆ ॥ ನೋಡಲಾಗದುತಪ್ಪನೆನ್ನಲಿ। ಖೋಟಿಯನುಹಿಡಿಯದೆನಿಮ್ಮಲಿ। ಕೂಡಿಹುದುನಿಜಚಿತ್ತವನ್ಯ
ಥವರಿಯೆನಾನೆಂದ ॥ ೨೩ ॥ ಮನದಲೆನ್ನಯಧ್ಯಾನವನುವಾ। ಕಿನಲಿನಿಜಗುಣಗಣದವರ್ಣನೆ। ಗಳನುನೆರೆನಾಮುತ್ತಮಾಸ
ಗಳಪ್ರೋಲಮುಕ್ಕದಲಿ ॥ ವನಿತೆಯರಿರ್ಕ್ಯೆದುವಿರಿತನ್ನಲಿ। ನೆನೆಯದಿರಿಭೇದವನುವಿಸ್ಮೃತಿ। ಜನಿಸಲರಿಯದುಭಕ್ತಿಹೀನವಿಗ್ರಹವನು
ತಾನೆಂದ ॥ ೨೪ ॥ ಅಬಿನಂತಿಂದ್ರಿಯಕೆಗೋಚರ। ವೆನಿಸುವೀವಿಷಯಂಗಳನುಭವ। ಮನಕೆಮನವಾತ್ಮನುವಿಶುದ್ಧಜ್ಞಾ
ನಶಕ್ತಿಯಲಿ ॥ ನೆನೆವ್ರತಾತ್ಮಭಾಸಿತವನಾ। ಮನವನೆನ್ನಲ್ಲಿಯೆರಚಿಸೆಸಂ। ಜನಿಸುವುದುಸಾಯುಜ್ಯಪದವೀಜೀವರಿಂಗೆಂದ ॥
ಬಿತದರ್ಥದಬಿಜನಿಗಮ। ವ್ರಾತವದಗಿದನಾತ್ಮವಿದ್ಯೋ। ಪೇತಸಾಂಖ್ಯಮನೀಷಿತ ರ್ಥತಪ್ರೋವ್ರತಾದಿಗಳು ॥ ನೀತಿವಿದೆ
ಯರಿರಬುದ್ಧಿಯುಳಸಂ। ಖ್ಯಾತನದಿಗಳನಡಗುವಂತಿರ। ಲಾತುರಿಸಬೇಡಖಿಳದಲಿಪರಿಪೂರ್ಣತಾನೆಂದ ॥ ೨೫ ॥ ಮರೆಯಲರಿವೆ
ನೆನಿಮ್ಮನೇತಕ। ನೆರವಣಿಗೆಯನುಕೋಟಿಕಲ್ಪಂ। ತರಕೆನಿಷ್ಕೃತಿಯುಂಟೆತನಗೊಲಿದಿಹಪರದಸುಖವ ॥ ತೊರದರೆನ್ನಲಿಹಂಗ
ನೇಸೆರೆ। ಮೊರಿಬಿರಿಸಾಕಿನ್ನುಮನದಲಿ। ಮರೆಯಲಾಗದುತನ್ನಭಕ್ತರಭಾರತನೆಂದ ॥ ೨೬ ॥ ಇಂತುನಿಜನಾಥೋಕ್ತಿಗಳ
ನಾ। ಕಾಂತೆಯರುಕೇಳುತ್ತವಿರಹದ। ಚಿಂತೆಗಳನೀಡಾಡಿಪೂರ್ಣಮನೋರಥೆಯರೆನಿಸಿ॥ ಅಂತರಾತ್ಮನುಕೃಷ್ಣನೆಂಬುದ। ನಂ
ತರಂಗದಲರಿದುಸತಿಯರು। ಸಂತಸುಖದಲಿನೆಲಸಿದರುಮರದರುಮನೋವ್ಯಥೆಯ ॥ ೨೭ ॥ ಪ್ರಿಯತಮನಸಂದೇಶದಲಿಕಾಂ।
ತೆಯರಿಗೊರತಿಪರಾಂತರಂಗಾ। ಮಯವನಪಹರಿಸುತ್ತಭಾಗವತೋತ್ತಮನುಹರಿಯ ॥ ನೆಯದಲಿಷ್ಟದಕೊರಳವನವಾ। ಲೆಯ
ನುರದಿರಿಗಂಧಕಸ್ತೂ। ರಿಯನುಕೊಟ್ಟುಚಿತದಲಿಸಂತೈಸಿದನುಗೋಪಿಯರ ॥ ೨೮ ॥ ಗೋಪಗೋಪೀಜನಗಳಂತ। ಸ್ವಾಪ
ಪದಗಲುಕೃಷ್ಣಲೀಲಾ। ಳಾಪಕಥನಶ್ರವಣಕೀರ್ತನಸಾರಸುಧೆಗಳಲಿ ॥ ಶ್ರೀಪತಿಪ್ರಿಯದಾಸನಂದನು। ರೂಪಚೇಷ್ಟೆಗಳಂದವಿ
ದಬೆದ। ಯಾಪರನುಪರಿಪೂರ್ಣನೆಂತೆಂದರಿಯಬೇಕೆಂದ ॥ ೨೯ ॥ ಉದ್ಧವನನಿಂತಬಲೆಯರುಹರಿ। ಬುದ್ಧಿಯಲಿನಂದಾದಿಗಳುಸ।
ಪ್ರದ್ಧೆಯಲಿಮನ್ನಿಸುತಹರಿಗುಣಕೀರ್ತನವನೊಲಿದು ॥ ಬದ್ಧಬಹಳಪ್ರೇಮರಸಸಂ। ವೃದ್ಧಸತ್ಪ್ರೋದ್ಧತಪರಾನಂ। ದಾಬ್ಧಿ
ಯೊಳಗೋಲಾಡುತಿರ್ದರುಸಾಧುಸಂಗದಲಿ ॥ ೩೦ ॥ ವರನದೀತೀರವನುಶೋಭಿತ। ತರುಗಳನುಗೋವರ್ಧನಾಹ್ವಯ।

ಗಿರಿಯನಾಕೃಷ್ಣಾಂಘ್ರಿರೇಖಾರೇಣುರಂಜಿತದ ॥ ಪರಮಭಾಗವತಾಂಕನೀಕ್ಷಿಸು । ತಿರದೆತಲೆದೂಗುತ್ತ ಕೃಷ್ಣನ । ಚರಿತವಿಪಿ
ನೋದ್ದೇಶದೊಳಗಾಡಿದನುಹರುಷದಲಿ ॥ ೩೨ ॥ ಇದುಬಕಾಸುರಭಂಜನಸ್ಥಳ । ಇದುವೆಧೇನುಕನಾಶನಸ್ಥಳ । ಇದುವೃಷಾಸುರ
ಸಂಖಚಂಡವ್ಯೋಮರೆಂಬವರ ॥ ಕದನರೌದ್ರಸ್ಥಾನವತ್ಸನ । ನೊದದಲೀಲಾಸ್ಥಾನವೆಂದಾ । ಸುದತಿಯರುತ್ತರೋತ್ತನಡೆದರು
ವಯನವಾರಿಯಲಿ ॥ ೩೩ ॥ ಇಸುರವಮಾರವಮಣಾದ್ಯತಸ್ಥಳ । ಇದುಮಹೋರಗಮರ್ದನಸ್ಥಳ । ಇದುಮುಕುಂದನಭೋಜ
ನದಮಂಡಲದಸುಸ್ಥಾನ ॥ ಮುದದಲಿವೆಗ್ಮಡನಾಡಿದಸ್ಥಳ । ಇದುವಿಹಾರಲತಾಗೃಹಾಂತರ । ಇದೆಯೆನುತವಸವಳಿದರಬಲೆಯ
ರುದ್ಧವನಮುಂದೆ ॥ ೩೪ ॥ ತೋರಿದರುತಂತಮ್ಮಜೀವವ । ಮಾರುಗೊಂಡೆಡೆಗಳನುಧರೆಯಲಿ । ನೀರೆಯರುಹೊರಳುತ್ತನಯ
ನಜನಂಗಳಲಿನೆನೆದು ॥ ಓರುಗುಡಿಬಿದರೊರಲಿದರುಬಾ । ಯಾರಿಬಸವಳಿದೇಕೆಗಂಟಲ । ನೂರಿಹೋದೆವಿಧಾತ್ರಯಂದಳಲಿದರು
ಮೂರ್ಛೆಯಲಿ ॥ ೩೫ ॥ ಇರಲುಗೋಪಾಂಗನೆಯರಂತಃ । ಕರಣಪರಿಪಾಕವನುಪರಮೇ । ಶ್ವರಪದಾಬ್ಜಪರಾಗನಿಷ್ಠೆಯನ
ನುಕಾಣುತ್ತ ॥ ಪರಮಭಾಗವತೋತ್ತಮನುಮನ ಕರಗಿಕರಪುಟವಮುಕುಳದಲಿಪಂ । ಕರುಹಮುಖಿಯರಪಾದರೇಣುಗಳಂ
ನೆಪೊಡವಂಟ ॥ ೩೬ ॥ ಹುಟ್ಟಿದರೆಗೋಪಿಯರಪರಿಯಲಿ । ಹುಟ್ಟುವುದುನರನಾಗಿಮೇಣೀ । ಸೃಷ್ಟಿಯಲಿಗಿಡಬಳ್ಳಿಮರಗಳು
ಹಕ್ಕಿಹರಿಣಗಳು ॥ ಹುಟ್ಟನೈಫಲವೇನುನರರವಿ । ಶಿಷ್ಟವಿಪ್ರತ್ವದಲಿಸುಖಕ್ಕೈ । ಯುಟ್ಟಲರಿವುದೆಹರಿಪದಾಬ್ಜಪರಾಙ್ಮುಖರಿಗೆಂದ ॥
ನಾವುಹುಟ್ಟನೆದುಃಖಸಂಕ್ಲೇ । ಶಾವಳಿಗಳಂಗಂಜಿಮುನಿಗಳ । ದಾವನಂಘ್ರಿಸರೋಜದಲಿಭಕ್ತಿಯನುಭಜಿಸುವರು ॥ ನಾವುಬ
ಯಸುವೆವಾವನಂಘ್ರಿಯ । ಸೇವೆಯನುಗೋಪಿಯರಸುಕೃತವ । ದಾವುದೋತತ್ಪದಭಕತಿಸಂಪನ್ನವಾಯಿತೆಂದ ॥ ೩೮ ॥ ಎತ್ತ
ಲೀಗಿರಿವನನಿವಾಸಿಗ । ಳೆತ್ತಲೀವ್ಯಭಿಚಾರಲೀಲೆಯ । ದೆತ್ತಲೀಶೌಚಾಚಮನಚಾರಿತ್ರಹೀನೆಯರು ॥ ಎತ್ತಲೀಗೋವಿಂದನಲಿದೃ
ಢ । ಭಕ್ತಿಯಿದುಮುಮುಕ್ಷುಭೂಪ್ರಸಂಭವಿ । ಸಿತ್ತುಯೋಗಿಧ್ಯೇಯನಲಿಸಕಲಾತ್ಮಕನಲೆಂದ ॥ ೩೯ ॥ ಆರುಸರಿಸತಿಯರಿಗೆರಾಸ
ದ । ಹಾರದಲಿಕಾರುಣ್ಯನಿಧಿಶ್ರೈ । ತ್ಯಾರಿಮನವೊಲಿದಪ್ಪವನುಗಡಗೋಪನಾರಿಯರ ॥ ಭೂರಿಭಾಗ್ಯೆಯರೊಡನೆಕೂಡಿದ । ಕೂ
ಸುಮೆಯಲವಲೇಶವುಂಟೇ । ವಾರಿಧಿಯಮಗಳಲಿನಿಜೋರಃಸ್ಥಳನಿವಾಸೆಯಲಿ ॥ ೪೦ ॥ ಅಪ್ಪಿಹಳುಸಿರಿತಾನೆಬಿಡದೊಲಿ । ದಿಪ್ಪ
ನಾಲಕ್ಷ್ಮಿಯನುಮುರಹರ । ನಪ್ಪವನುಗಡತಾನೆವೊಲಿದೀಭಾಗ್ಯವಂತೆಯರ ॥ ದರ್ಪಕನಹೆತ್ತೈಯನೊಲವಿನ । ದರ್ಪವೆಂತು
ನೊಭಕ್ತರಿಂಗೇ । ನೊಪ್ಪಲರಿಯದುಬಲ್ಲಿದರುಭುವನತ್ರಯದಲೆಂದ ॥ ೪೧ ॥ ಜನನವಾಗಲಿತನಗೆಗೋಪೀ । ಜನದಪಾದಪರಾ
ಗಸೋಕುವ । ವಿನುತವೃಂದಾವನದತರುಲತೆಗುಲ್ಮನಿಕರದಲಿ ॥ ವನಜದೃಶನೊಲವೆನ್ನಲುಳ್ಳಡೆ । ತನಗಿದೇಪುರುಷಾರ್ಥಬೇಡು
ವೆ । ನೆನಗೆಕರುಣಿಸುಕೃಷ್ಣ ಕರುಣಾಕರನೆನೀನೆಂದ ॥ ೪೨ ॥ ಅರಸಿಕಾಣರುಮುನಿಗಳಾವನ । ನಿರುಗೆಯನುಶ್ರುತಿಕೋಟಿಗಳು
ಕಡೆ । ನೆರೆಗಕಾಣವುಕೀರ್ತಿಸುತಮಹಿಮಾವನಾಂಬುಧಿಯ ॥ ವುರುವದ್ವೈವವನದನುಕುಚಕರ । ದಿರುಬಿನಲಿಬಿಗಿಯಪ್ಪಿಗಡ
ನ್ನೈ । ಮರವರೀಗೋಪಿಯರುರಾಸೋತ್ಸವದಗೋಷ್ಠಿಯಲಿ ॥ ೪೩ ॥ ವಿರತರನುವಿಷಯಿಗಳಮಾಡುವ । ಪರತರಾತ್ಮಜ್ಞಾ
ನನಿಷ್ಠಾ । ನಿರತರನುನೆರೆಗೆಡಿಸುವಚ್ಯುತನಂಘ್ರಿಪಂಕಜವ ॥ ಇತದೆಕಂಗಳಲಾನನದಲಂ । ಬುರುಹವದನೆಯರೊತ್ತಿಕೊಳುತ್ತೊ
ನು । ವಿರಹತಾಪವನುಳಿವರಿರುಳಿರುಳೀಸಭಾಗ್ಯೆಯರು ॥ ೪೪ ॥ ಒಡನಿಹೆನುತಾನೆಂಬಕೃಷ್ಣನ । ನುಡಿಯನೇನೆರೆನಂಬಿಮಲ
ಗು । ತ್ತೊಡನೆಹರಿಯಿರೆಕಂಡುವಿರಹವ್ಯಥೆಯನೀಡಾಡಿ ॥ ತಡವಿತಕ್ಕೈಸುತ್ತರತಿಸುಖ । ವೊಡರಿಸಲುಬೆಳಗಾಗೆವಿಸ್ಮಯ । ವ
ಡುವರಚ್ಯುತನಂಗರಾಗವನಂಗದಲಿಕಂಡು ॥ ೪೫ ॥ ಆವಕರುಣಾವನಧಿಯೋರಾ । ಜೀವಲೋಚನನಕಟಗೋಪಿಯ । ರಾ
ವಭಾಗ್ಯಾಧಿಕೆಯರೋಭುವನತ್ರಯಂಗಳಿಗೆ ॥ ಭಾವಹರಿಮಯಭಕತಿಹರಿಮಯ । ಜೀವಜಾತಕೆವಿದ್ಯೆಹರಿಮಯ । ವ್ರೋ
ಪ್ರೊಹರಿಮಯಕನಸುನೆನಸುಸುಷುಪ್ತಿಗಳಲೆಂದ ॥ ೪೬ ॥ ಇಂದುಮುಖಿಯರುಪಾಡುವೀಗೋ । ವಿಂದಚರಿತಾಮೃತದಕಡಲ
ದ । ವಿಂದುಪಾವನವಾಗುತಿದೆಲಾಸಲೆಜಗತ್ರಿತಯ ॥ ವಂದಿಸುವೆನಾನೀವ್ರಜಸ್ತ್ರೀ । ವೃಂದಪದರೇಣುಗಳನಡಿಗಡಿ । ನೆಂದುನೆ
ರೆಕೈಯೆತ್ತಿಪೊಡಮಡುತಿರ್ದನವನಿಯಲಿ ॥ ೪೭ ॥ ಬಾಲೆಯರುಪಾಡುವಮುಕುಂದನ । ಲೀಲೆಯನುಕೇಳುತ್ತಕರಗು । ತ್ತಾಲಿ
ಗಲ್ಲಿಂದದಲಿಪರವಶನಾಗಿಗೋಪಿಯರ ॥ ಕಾಲಿಗೆರಗುವನಡಿಗಡಿಗೆಪದ । ಧೂಳಿಯನುಧರಿಸುವನುಕೃಷ್ಣವ । ಶೀಲನಿಧಿಮುಳು
ಗಾಡುತಿರ್ದನುನಯನವಾರಿಯಲಿ ॥ ೪೮ ॥ ಇಂದುನಾಳೆಯೆನುತ್ತದಿವಸವ । ಹಿಂದುಗಳದರುಗೋಪರಾಗೋ । ವಿಂದದಾಸ
ನಸಂಗಸುಖಲಾಭದಲಿಕಳುಹಿಸದೆ ॥ ಸಂದವರಘಳಿಗೆಯಲಿದಿನವೊಂ । ದೊಂದುಹರಿಗುಣಕಥನಕೀರ್ತನ । ದಿಂದಕೃಷ್ಣನಸಂಗ
ಸುಖಕೆಸಮಾನವೆಂದೆನಿಸಿ ॥ ೪೯ ॥ ಸಂತವಿಸಿಗೋಕುಲವನಂದೇ । ಕಾಂತಭಕ್ತರದೇವನಾಶ್ರೀ । ಕಾಂತನನುನಿಜಭಕತಿಯಲಿ
ಸನ್ನಿಸುತಬೀಳ್ಕೊಂಡು ॥ ಸಂದಸದಬೀರಿದನುರಥವನು । ಕಂತುಶರಭಗ್ನೆಯರುಗೋಕುಲ । ಕಾಂತೆಯರುಕವಿತರಲುಕಾಣಾ
ಕಾತರಾಷ್ಟ್ರೆಯರ ॥ ೫೦ ॥ ನಂದಗೋಪಯಶೋದೆಯರುನಡೆ । ತಂದುಗೋಪೀಗೋಪಜನಸಹಿ । ತಂದುಕಾಣಿಕೆಗೊಟ್ಟು
ಕೃಷ್ಣಂಗೀವುದಿದನೆನುತ ॥ ಎಂದರಾಕೃಷ್ಣಾಂಘ್ರಿಚಿಂತಾ । ನಂದಬಾಷ್ಪಜಲಾವಿಲೇಕ್ಷಣ । ದಿಂದನೋಡುತ್ತುದ್ಧವನಕಾಲ್ಗೆರಗಿ

ತೆಗದಪ್ಪಿ ||೫೨|| ಮನದವೃತ್ತಿಗಳಾವುಕೊಂದನ | ನೆನಹಿನಲಿವಾಕುಗಳುಗುಣಕೀ | ರ್ತನೆಗಳಲಿಕೈಗಳುಶದಂಘ್ರಿಸರೋಜ ಪೂಜೆಯಲಿ || ತನುನಮಸ್ಕಾರದಲಿಸಲೆಸಂ | ಜನಿಸಬೇಬೇಕೆಮಗೆಬೇಡುವೆ | ವಿನಿತನೇಬನ್ನಿಸುವುದುಕೃಷ್ಣಂಗೆನೀನಿದನು || ಕರ್ಮವಶದಲಿತಿರುಗಿನಾನಾ | ಜನ್ಮವಶದಲಿತೊಳಲುವಿದು | ಷಡ್ವರ್ಗಗಳನಿಪ್ಪಿಮನೆಮರೆದುದವ್ರೋಲುನಿಜಮತಿಯ || ಎಮ್ಮೊಳಗೆದಯೆಗೈದುನೋಳ್ಪುದು | ಧರ್ಮವೆನ್ನೈತಂದೆಸಾಕ್ಷಾ | ದ್ಬ್ರಹ್ಮರೂಪನೆನಿಪ್ಪಕೃಷ್ಣನಚರಣಕಮಲದಲಿ ||೫೩|| ದತ್ತ ಫಲದಲಿಸಂಚಿತೇಷ್ಟಾ | ಪೂರ್ತಫಲದಲಿವಿಧಿವಿಹಿತಸ | ದ್ವೃತ್ತಫಲದಲಿಬೇಡುವೆವುತಾವಿದನೆನಿಜವೆನಿಪ || ಭಕ್ತಿಯುಸುಕೃಷ್ಣನಲಿಸಂತತ | ವ್ಯತ್ರಿಯನುಭೂತದಲಿತನ್ನಯ | ಭೃತ್ಯರೊಲವನುಕರುಣಿಸೂದೆಂದೆನ್ನುಕೃಷ್ಣಂಗೆ ||೫೪|| ನಿನ್ನವರುತಾ ಮಾದರೆಲೆಕರು | ಣಾರ್ಣವನನೀಬೇಡಿಕೊಸಂ | ಪನ್ನಕರುಣಾನಿಧಿಯನೆನುತಾನಂದಬಾಷ್ಪದಲಿ || ಸನ್ನುತನನಪ್ಪಿದರುಮರಳ ದ | ರುನ್ನತಾಮಳಕೀರ್ತಿಗೋಪರ | ಧನ್ಯತೆಗೆತಲೆದೂಗಿಕೈಮುಗಿವುತ್ತಬೀಳ್ಕೊಂಡ ||೫೫|| ಬಂದನುದ್ಧವನಾಮಹಾರಥ | ದಿಂದಮಧುರಾಪುರಕೆಪರಮಾ | ನಂದದಲಿಕಾಣಿಕೆಯನಿತ್ತಚ್ಯುತನಪದಕೆರಗಿ || ನಿಂದುಕೈಗಳಮುಗಿದುಬಿನ್ನಹ | ವೆಂದೆನುತಗದ್ಗದಗಳಾಕ್ಷರ | ದಿಂದಭಕ್ತ್ಯುದ್ರೇಕವನುಹೇಳಿದನುಗೋಕುಲದ ||೫೬|| ಹೆಸರುಗೊಂಡವರವರುಪಾಯನ | ವಿಸರವನು ಮಣಿಕನಕಭೂಷಣ | ವಸನಮಧುಘೃತಕುಂಭಧೇನುಪ್ರಮುಖವಸ್ತುಗಳ || ಪ್ರಸರವನುಪರಮೇಷ್ಠಿಪಿತಗೊ | ಪ್ಪಿಸಿದನಿತು ವನೊಲವುಮಿಗಲೀ | ಪ್ರಿಸುತಭಕ್ತಪ್ರಿಯನಿಧಿಕುಂಬಿದನುಕಂಬನಿಯ ||೫೭|| ಆಲಿಸುತವೃತ್ತಾಂತವನುಕರು | ಣಾಳು ಹೋಂಪುಳಿಯೋಗಿಭಕ್ತನ | ಮೇಳಣನುರಾಗಾನುರಂಜಿತಪಾರವಶ್ಯದಲಿ || ಹೂಳಿದವ್ರನಿಡುಗಂಗಳಡಿಗಡಿ | ಗೇಳಗೆಯಪ್ರಳ ಕದಲಿಭಕ್ತನ | ಮಾಳಿಯನುತಡವಿದನುಕೇಳಿದನವರಕಾಶಲವ ||೫೮|| ಮತ್ತೆವಸುದೇವಂಗೆದೇವಕಿ | ಗಿತ್ತನಾನಂದಾದ್ಯ ರುಚಿತದ | ಲಿತ್ತುಕಳುಹಿದವಸ್ತುಗಳನಿರದುಗ್ರಸೇನಂಗೆ || ಮತ್ತೆಬಲರಾಮಂಗೆಕಾಣಿಕೆ | ಯಿತ್ತುಕೈಗಳಮುಗಿದುಗೋಪರ | ಭಕ್ತಿಯನುವಿಸ್ತರಿಸಿದನುನಿತ್ಯಾತ್ಮಬಾಂಧವರ || ... ... ||೫೯||

ಅಂತು ಸಂಧಿ ೪೪ಕ್ಕಂ ಪದನು ೨೦೮೬ಕ್ಕಂ ಮಂಗಳಮಸ್ತು.

ನಲವತ್ತೈದನೆಯ ಸಂಧಿ.

ಸೈರಂಧ್ರಿಯ ಮನೆಗೆ ಸ್ವಾಮಿ ಬಂದ ಕಥೆ.

ಸೂಚನೆ || ಸಿಂಧುಶಯನನಭೀಷ್ಟವನುಸೈ | ರಂಧ್ರಿಗಿತ್ತಕ್ರೂರಭವನಕೆ | ಬಂದುಕೃತ್ಯಾರ್ಥದಲಿಬಿಜ
ಯಂಗೈದನಸುರಾರಿ || ... ...

ಪದನು || ಒಂದುದಿನಮನದೊಳಗೆನೆನೆದುಮು | ಕುಂದನಾಸೈರಂಧ್ರಿಗೊಪ್ಪುವ | ಮಂದಿರಕೆಬಹೆನೆಂದಮಾತನುಸಲಿಸಬೇಕೆನುತ || ವಂದ್ಯಚರಣರದೇವನೈತರ | ಲಿಂದುಮುಖಿಕಾಣುತ್ತಪರಮಾ | ನಂದದಲಿಬಂದಿದಿರುಗೊಂಡಳುವಿಹಿತವಿಭವದಲಿ || ಆಸರೋರುಹವದನೆಹರುಷಾ | ವೇಶದಲಿಮನಮುಳುಗಿಕೃಷ್ಣಂ | ಗಾಸನವನೊಪ್ಪಿರಲುಸಿರಿಮಂಚವನುಪಚ್ಚಡಿಸಿ || ಲೇಸೆನಿಪನಿರ್ಮಲಿನವಹಮೇ | ಲ್ವಾಸಿನಲಿನವರತ್ನನಿಕರದ | ಭಾಸುರಾಂತರ್ಗೃಹದೊಳಾರಾಧಿಸಿದಳಚ್ಯುತನ ||೨|| ಕೋಟ್ಟವಿಮಲಾಸನವಕೈಯಲಿ | ಮುಟ್ಟಿಕೆಳಗವನಿಜಾಲಿಸಲೆಜಗ | ಜಟ್ಟಿಭಕತರದೇವನುದ್ಧವನೆರಗಿಕುಳ್ಳಿರಲು || ದೃಷ್ಟಿನೋಹನಮೂರ್ತಿದನುಜಘ್ನ | ರಟ್ಟನನುಕರಿಸುತ್ತಲೋಕದ | ಚೇಷ್ಟೆಯನುಕುಳ್ಳಿರ್ದನೊಪ್ಪಿರಲೆಸೆವಮಂಚದಲಿ ||೩|| ಮಘಮಘಿಪಕಸ್ತೂರಿಚಂದನ | ದಗರುಕುಂಕುಮವಾಸಿತದಬೆಳು | ಮ್ರೊಗಿಯಧೂಪದದಿವ್ಯಪುಷ್ಪಾಮೋದಮೋಹನದ || ಬಿಗಿದಪಟ್ಟೆವಳಿಯಮೇಲ್ಕ | ಟ್ಟಿಗಳಮುಕ್ತಾಜಾಲಮಾಲಾ | ಸ್ಥಗಿತಗೃಹರಚನೆಯನುನೋಡಿದನಸುರರಿಪುನಗುತ ||೪|| ಕಾಲುನೇಗವನುತೊಳದುಮೆರವದು | ಕೂಲವನುನೆರಿದುಟ್ಟುನೂರಿಗಳ | ಮೇಲೆವರಕಸ್ತೂರಿಚಂದನದಂಪುರಂಜಿಸಲು || ಲೋಲಲೋಚನೆಮುಡಿಮವೆಣ್ಣಿಯ | ಮಾಲೆಯನುಕೊಳಕೊಳವಕೊಸೆದು | ನ್ನೀಲಿಕಪಗಂಗಳನುತೊಟ್ಟಳುಮೆರವಭೂಷಣವ ||೫|| ಬಲಿದುಭೋಗಿನಮಾನಭೂಷಾ | ವಳಿಗಳಲಿಮನದಣಿದುಕೊಂಡಳು | ಬಿಳಿಯಲೆಯುಕರ್ಪೂರಪೂರದಲೆಸವವೀಳೆಯವ | ಲಲಿತಪದನೂಪುರದರವದಲಿ | ಲಲನೆಬಂದಳುಲಕ್ಷ್ಮಿಯಂತಾ | ನಳಿನನಾಭನಹೊರೆಗೆಮೆರವಮನೋನುರಾಗದಲಿ ||೬|| ಉಡುಗಿಲಜ್ಜಾಭರದಲಿವ್ಮೊ | ನಡುಗಿಸುವಸಂಗಮಕೆನಸುಬೆಮ | ರಿಡುವಭಾಳದತಿಲಕದಲಿಕಡೆಗಣ್ಣನೋಟದಲಿ || ಎಡದಕೈಯಲಿಮೇಲುದವಬಿಡು | ಮುಡಿಯನೇಸರಿಸುತ್ತನಿಂದಳು | ಕಡುಚೆಲುವೆಯೆಂದೆನಿಪವಿಭ್ರಮಗಳನುನೆರೆಮೆರದು ||೭|| ಕಾತರಿಸಿದಳುಕಾಂತೆನಯನೆ | ಪ್ರೀತಿಚೇತನಸಂಗಸಂಕ | ಲ್ಪಾತಿಶಯನಿದಾ ನಿವೃತ್ತಿಶರೀರಕಾರ್ಶ್ಯದಲಿ || ದೌತ್ಯವಿಷಯನಿವೃತ್ತಿಲಜ್ಜಾ | ಖ್ಯಾತಿಚೇತೋನ್ಮಾದಮೂರ್ಛೆ | ಜಾತವೆಂಬೊಂಭತ್ತವಸ್ಥೆಗಳವ್ರಕಿದವ್ರಸತಿಯ ||೮|| ಅಕಟಲೋಕವಿಗಧಿಕಸೌಜನ್ಯ | ಸ್ರ

ಕೃತಿಗುಣಸಂಗತಿಗಳಿಂದಲಿ । ವಿಕಳತೆಯನೈದುವುದುಸಾವುದುಕೆಡುವುದಳಲುವುದು ॥ ಸಕಲಸುಖವಿಗ್ರಹಸಕಲಾ । ತ್ಮಕನೆ ಸುಂದರಿಕೇಳಾತಾಸತಿ । ವಿಕಳಗೊಂಬುದುಚಿತ್ರನೀಭೂಪಾಲಕೇಳೆಂದ ॥ ೯ ॥ ಇರಲುಪಂಕಜನಾಭನಾಪಂ । ಕರುಹಮುಖಿಯನುನೋಡಿಕರವಂ । ಕರುಹದಲಿಕಂಕಣದಕೈಯನುಹಿಡಿದುನಸುನಗುತ ॥ ಸ್ಮರುಶಸುಖಸಾಮ್ರಾಜ್ಯಭೋಗನ । ನಿರದೆಸಲಿಸುವೆನೆಂದುಕರುಣಾ । ಶರಧಿತೆಗೆದಪ್ಪಿದನುಸಿರಿಮಂಚದಲಿಕುಳ್ಳಿರಿಸಿ । ರಮಿಸಿದನುರಾಣಿಯನುಲಕ್ಷ್ಮೀ । ರಮಣನಂದನುಲೀಲನವನಿ । ತ್ತವಿತ್ತಪುಣ್ಯದಫಲವನಿಹದಲಿಸಲಿಸಲೆಂದೊಲಿದು ॥ ಕಮಲಮುಖಿಕಂಗಳಲಿನಿಜಮುಖ । ಕಮಲದಲಿಮೊಲೆಗಳಲಿಕರಿಪದ । ಕಮಲವನುಕೆಗದೊತ್ತಿಕೊಳುತ್ತೆಸದಿರ್ದಳಡಿಗಡಿಗೆ ॥ ೧೧ ॥ ಮುಕ್ತಿಸುಖವನುಪಡೆದಜೀವರ । ಚಿತ್ತಸಹಿತಮುಕುಂದನಂಘ್ರಿಯ । ಭಕ್ತಿಸುಖಲಾಭಕ್ಕೆವಿಗೆಕಕ್ಕುಲಿತೆವತುವುದೆನೆ ॥ ಎತ್ತಲಾಮದನಾಸ್ತ್ರತಾಡಿದ । ಚಿತ್ತಸುಖಲೇಶವನುಪಡೆಯುನೆ । ಮತ್ತೆಪಡದೆಂತಕಟಬಿಡುವಳುಕೃಷ್ಣನಂಘ್ರಿಗಳ ॥ ೧೨ ॥ ತೋಳುಗಳಮಧ್ಯದಲಿಬಲಿದಾ । ಬಾಲೆತಕ್ಕೈಸುತ್ತಗಣಿಯುನು । ಮೇಳದಲಿಮಾತಾಡಿದಳುತಾಕೃಷ್ಣನಂಗವನು ॥ ಸಾಲದಾಘ್ರಾಣಿಸುತದಣಿಯಳು । ನೀಲಮೇಘನಿಭಾಂಗಕಾಂತಿಯ । ಕಾಲಿಗಳನಡಿಗಡಿಗೆದಣಿಯಳುಕುಡಿಕುಡಿದುಗಣಿಸ ॥ ೧೩ ॥ ಎಂದಳಂಗನೆಬಿಡದಿರೆಲೆಗೋ । ವಿಂದನನ್ನನುದಿನವನಿಲ್ಲಿಯೆ । ಬಂದುಗಳವುದುಕೆಲವನೀವುದುನಿಜಮನೋರಥವ ॥ ಎಂದುಸತಿನಿಜಚರಣಕಮಲ । ದ್ವಂದ್ವವನುಹಿಡಿದಿರಲುನಸುನಗು । ತೆಂದನಾಸೈರಂಧ್ರಿಯೊಡನೆಮನೋನುರಾಗದಲಿ ॥ ೧೪ ॥ ಮತ್ತೆಬಹೆನೆಲೆಕಾಂತೆಕಾಡದೆ । ಚಿತ್ತದಲಿಕಳವಳಿಸದೆನ್ನನು । ಮುಕ್ತನನುವಮಾಡುವುದುಕಾರ್ಯವಿಶೇಷವುಂಟೆನುತ ॥ ಇತ್ತುಕಾಮಿತವರಗಳನುವರ । ಪೂರ್ತಿಸೈರಂಧ್ರಿಯನುಸಂತೈ । ಸುತ್ತಬೀಳ್ಕೊಳಿಸಿದನುಬಿಜಯಂಗೈದನರಮನೆಗೆ ॥ ೧೫ ॥ ತಂದೆಕೇಳೆಲೆಭೂಪಹರಿಮು । ತ್ತೊಂದುದಿನರಾಮೋದ್ಧವರುನಲ । ವಿಂದತನ್ನೊಡನೈತರಲುಭಕ್ತಾನುರಾಗದಲಿ ॥ ಬಂದನಕ್ರೂರನಮನೆಗೆಮುದ । ದಿಂದಭಕ್ತಾಧೀನವಿಗ್ರಹ । ನೆಂದುಲೋಕಕ್ಕರುಪುವಂತಿರೆತಾನಿಮನವೊಲಿದು ॥ ೧೬ ॥ ಬರವಕಾಣುತಗಾಂದಿನೀಸುತ । ನಿರದೆಮೈಯಿಕ್ಕುತ್ತಹರುಷೋ । ತ್ಕರುಷದಲಿನಡೆದಿದಿರುಗೊಂಡುಬಿಜದಲಿನಿಜಗೃಹಕೆ ॥ ಪರಮಪುರುಷೋತ್ತಮನನಂದಾ । ಪರಮಭಾಗವತೋತ್ತಮನುಸ । ತ್ಕರಿಸಿಬಿಜಯಂಗೈಸಿತಂದನುಪರಮವಿಭವದಲಿ ॥ ೧೭ ॥ ಹೊನ್ನಪಡಿಗಂಗಳಲಿಪರಮಕೃ । ಪಾರ್ಣವನಪದಕಮಲವನುತೊಳ । ದುನ್ನತಾಮಳಕೀರ್ತಿಮಣಿಮಂಚದಲಿಕುಳ್ಳಿರಿಸಿ ॥ ಮನ್ನಿಸುತತತ್ತೀರ್ಥಜಲದಲಿ । ಧನ್ಯರರಸಿನುಮುಳುಗಿಬಂದನು । ಜನ್ಮಸುಕೃತಜನಜನಿತವೆನ್ನಯಗೃಹಕಿದೇಯೆಂದ ॥ ಅರ್ಚಿಸಿದನಾತೀರ್ಥದಲಿಜಗ । ದರ್ಚಿತಾಂಘ್ರಿಗಳನುಮನೋರಥ । ದಚ್ಚುಗಳನಾಶ್ರಿತರಪುರುಷಾಮೃತದಹೆಚ್ಚುಗಳ ॥ ಸಚ್ಚರಿತನಮೃತಾನ್ನಪಾನಸ । ಮುಚ್ಚಯಾಮಳಗಂಧಮಾಲ್ಯದ । ಪಚ್ಚಕರ್ಪೂರವೀಳೆಯದವಿಭವಾನುಸಾರದಲಿ ॥ ೧೯ ॥ ಕುಳ್ಳಿರಿಸಿಸಿರಿಮಂಚದಲಿಪದ । ಪಲ್ಲವವನೊತ್ತುತ್ತನಿಜಕರ । ಪಲ್ಲವದಲಕ್ರೂರನೆಂದನುನಿಜಸಭಾಗ್ಯತೆಯ ॥ ಫುಲ್ಲವಣೆಯನುಭುವನಪತಿಗಳ । ಬಲ್ಲಹನುಬರಲಾವಧನ್ಯರ । ಬಲ್ಲಹನೊತಾನಿಂದುನಿಜಮಂದಿರಕಿದೆಂತೆಂದ ॥ ೨೦ ॥ ಆದುರಾತ್ಮಕಕಂಸನನುಕೊಂ । ದಾದಿನಮೊದಲಾಗಿತವಿಮ್ಮ । ಯಾದವರಕುಲವಧಿಕವಾಪನವಾಯ್ತುಸುಖವಾಯ್ತು ॥ ಆದುರಂತಮಹಾವಿಪತ್ಸಮು । ಹೋದಧಿಯನುತ್ತರಿಸಿದುದುಕರು । ಣೋದಧಿಗಳಿರನೀವೊಲಿದಡಿನ್ನಾವುದರಿದೆಂದ ॥ ೨೧ ॥ ನೀವಲ್ಲೈಜಗದುದಯಸಂಸ್ಥಿತಿ । ಭಾವನೆನುಸಚರಾಚರಾತ್ಮಕ । ಜೀವರೂಪರುಸಕಲಜಗದಾಧಾರಮೂರ್ತಿಗಳು ॥ ನೀವುಳಿಯಲೀಜಗದತೋರ್ಕೆಗ । ಳಾವವೈತೋರುವವುಕಲ್ಲೋ । ಲಾವಳಿಗಳಂತಬುಧಿಜಲವಿರಹಿತಗಳಹವೆಂದ ॥ ೨೨ ॥ ಆರಜೋಗುಣದಿಂದನೀನೀ । ಭೂರಿಜಗವನುಮಾಕ್ಷಿಸಲಹುವೆ । ಸಾರಸತ್ವಗುಣಾವಲಂಬನದಿಂದಮತ್ತಿಂದು ॥ ಮೇರೆಗೆಡಿಸುವೆಜಗವನಂತಗು । ಣಾರಚಿತಮೂರ್ತಿಯನೆನಿಜಲೀ । ಲಾರಚನೆತೋರ್ಪೀಗುಣತ್ರಯವೇಡನಕ್ರೂರ ॥ ೨೩ ॥ ನಿನಗೆತದ್ಗುಣಕರ್ಮವೆಂತ್ವೆ । ಜನನಹೇತುಗನಿಷ್ಪ್ರದಖಿಳಾ । ತ್ಮನನುಬಂಧಿಸಲರಿವುದೆಂತೆಲೆದೇವಚಿನುಮಯನ ॥ ಕನಸಿನಂತನಿರೂಪಿತವಲಂ । ಜನನವಿದುಸತ್ವಾದಿಗುಣಸಂ । ಜನನವಲ್ಲದೆಬಂಧಮುಕುತಿಗಳಿಲ್ಲನಿನಗೆಂದ ॥ ೨೪ ॥ ಅರಿವುಮರವೆಗಳಿಲ್ಲನಿನ್ನಲಿ । ತೆರಹುಕುರುಹುಗಳಿಲ್ಲಬಂಡಿತ । ದರಿವೆನಿಸಿತೇರಾಗಿತೋರದನಿತ್ಯದುಃಖಿನಾತ್ರ ॥ ಅರಿವುಮರವೆಗಳೀಯವಿಸ್ತೈಗ । ಳರಿಸುವರೆಜೀವರಿಗೆವಿಗೆತೋ । ರ್ಕರಿವುನೀನಲ್ಲದಡೆಮರವೆಯನರಿವರಾರೆಂದ ॥ ೨೫ ॥ ಗುಣವಿಮೂಢಾತ್ಮರಿಗೆನಿಜವನು । ಗುಣಿಸಿಕೆಡಲೆಂದೊಲಿದುನೆರೆನಿ । ರ್ಗುಣನೆನಿಸಿಪಪರಮಾತ್ಮಕನೆಸತ್ವಾದಿಗುಣದಿಂದ ॥ ಗುಣಯುತನುನೀನಾಗಿನಾರಾ । ಯಣನೆನಿಸಿನಾನಾವತಾರದ । ಭಣಿತೆಗಳಪರುಠವದಪರತರವಸ್ತುನೀನೆಂದ ॥ ೨೬ ॥ ಜಗಕೆತತ್ವಜ್ಞಾನಸಿದ್ಧಿಯ । ಬಗೆಗೆನೀನೇಕರುಣಿಸಿದವರ । ನಿಗಮಮಾರ್ಗಂಗಳನುತದನುಷ್ಠಾನ್ವವರ್ಗವನು ॥ ಅಗಡಿಸುವಪಾಷಂಡಪಥದೂ । ಳಗವಮಾಣಿಸಲೆಂದುನೀನೊಲಿ । ದೊಗುವೆನರಸುರತಿರ್ಯಗಾದಿಶರೀರಗಳಲೆಂದ ॥ ೨೭ ॥ ದೇವನೀನಿಂದೊಲಿದುಸತ್ವಗು । ಣಾವಲಂಬನಮೂರ್ತಿಯಲಿವಸು । ದೇವಗೃಹದಲಿದೇವಕೀದೇವಿಯರಿಗವತರಿಸಿ ॥ ಜೀವರಕ್ಷಾಕರನೆಭೂಭಾ । ರಾವಹನನವಬುಜಸಿಜನಿಸಿದ । ದಾವನೈದಿದಕರಿವನೀನಿನ್ನಕುಳಲೀಲೆಗಳ ॥ ೨೮ ॥ ಇಂದುಪಾವನವಾಗದೆನ್ನ

ಯು । ಮಂದಿರಂಗಳುಚರಣತೀರ್ಥದ । ಲೊಂದಿದೆವಲಾತ್ರಿಜಗದಘಹರವೆನಿಪನಿಜಪದವ ॥ ವಂದ್ಯರೇಣುವಧರಿಸಿದೀಜನ । ನ್ಯಂದವೆನ್ನೀಸತಿಸುತಾದ್ಯರ । ಮಂದಪುಣ್ಯರುಪರಮಧನ್ಯರುಮಾನ್ಯರಾವೆಂದ ॥ ೨೯ ॥ ಪರಮಕರುಣಾಸಿಂಧುತ್ರಿಜಗ । ದ್ಗುರುಕೃತಜ್ಞನೆನಿಪ್ಪನಿನ್ನೀ । ಚರಣಕಮಲವನುಳಿದೆಬೇರಿನ್ನೊಂದುದೈವವನು ॥ ಶರಣುಪೊಗುವರೆಬಲ್ಲವರುನಿಜ । ಶರಣರಿಗೆಕಾಮಿತವರಂಗಳ । ಕರುಣಿಸುವಕಲ್ಪದ್ರುಮವಲಾನಿನ್ನಪದವೆಂದ ॥ ೩೦ ॥ ಕ್ಷೇಮವೃದ್ಧಿಗಳೆಲ್ಲದಧಿಕ । ಕ್ಷೇಮವಹನಿಜಪದವನೀನಿ । ಷ್ಕಾಮರಿಗೆನೀನೀವೆನೆಂದರೆದೇವನಿನ್ನಂತೆ ॥ ಶ್ರೀಮನೋರಮಕೇಳುಭಕ್ತ । ಪ್ರೇಮವಾಹಕರಾರುಭುವನ । ಸ್ತೋಮದಲಿನಿನ್ನಂತೆಕರುಣಾನಿಧಿಗಳಾರೆಂದ ॥ ೩೧ ॥ ಅರರೆಭುವನತ್ರಯದಲೆನ್ನಂ । ತಿರೆಸಭಾಗ್ಯರದಾರುಯೋಗೀ । ಶ್ವರಮನೋದುರ್ಲಕ್ಷ್ಯಪದಕಮಲವನುಕಂಡೆನಲ ॥ ಕರುಣಿಸುವುದೆನಗಿದನೆಜನ್ಮಾಂ । ತರಸಹಸ್ರದಭವಣಿಗೆಯಲೆಂ । ದಿರದೆಮೈಯಿಕ್ಕಿದನುಮುನಿವಂದಿತನಚರಣದಲಿ ॥ ೩೨ ॥ ಇಂತುಸಂಸ್ತುತಿಪೂಜೆಗಳನೇ । ಕಾಂತಭಕ್ತರದೇವನನಮಳ । ಸ್ವಾಂತದಲಿಮಹತ್ತಮೈಯಿಕ್ಕಿರಲುಚರಣದಲಿ ॥ ಅಂತವಿಲ್ಲದಕೃಪೆಯನಾಶ್ರೀ । ಕಾಂತನಾಚರಿಪಿದನುನುಡಿದನು । ದಂತಪಙ್ಕ್ತಿಗಳೆಸೆಯಲಾತನಮಸ್ತಕನನೆಗಹಿ ॥ ೩೩ ॥ ನೀನಲಾಗುರುಮಂದ್ಯನೆಮಗತಿ । ಮಾನನೀಯನಲಾಪಿತೃವ್ಯನ । ದೇನಹೇಳಲಿತಂದೆಲಾಲನಪೋಷಕರುನಮಗೆ ॥ ಸೂನುಗಳಿಗೇಕಿದುತ್ರಿಕಾಲ । ಜ್ಞಾನನಿಧಿಗಳುನೀವುಪೂಜ್ಯರು । ಮಾನವರಿಗಿಷ್ಟಾರ್ಥಸಿದ್ಧಿಗೆಸೇವ್ಯತಮರೆಂದ ॥ ೩೪ ॥ ಸುರರುಸಜ್ಜನರೆಂಬರಿಬ್ಬರೆ । ಪರಹಿತೈಕಸ್ವಾರ್ಥನಿಷ್ಠರು । ಸುರರುನಿಯುತಸ್ವಾರ್ಥಸಾಪೇಕ್ಷೋಪಕಾರಿಗಳು ॥ ಸುರರಿಗಧಿಕರುಸಜ್ಜನರುಸಂ । ದರುಶನದಲಖಿಳಾಘಹರರೀ । ಧರೆಗೆಪಾವನಮೂರ್ತಿಗಳುನಿಮ್ಮಂದದವರೆಂದ ॥ ೩೫ ॥ ಅರಿಯದವರಿಗೆತೀರ್ಥವೀಜಲ । ವರಿಯದವರಿಗೆಮೃಷ್ಯವೀನೆಲೆ । ಅರಿಯಬಲ್ಲವರಿಂಗೆನೀನೇತೀರ್ಥನಿಜದೈವ ॥ ಮರೆಯದೋಲಗಿಸಿದಡೆಕಾಲಾಂ । ತರಕೆಕೆಡಿಸುವವಘವನವುಸ । ತ್ಪುರುಷರೊಂದೇನಿಮಿಷಸಂಗಪವಿತ್ರಕರವೆಂದ ॥ ೩೬ ॥ ವರಮತಿಯೆಹೋಗಿನ್ನುಹಸ್ತಿನ । ಪುರಕೆಬಂಧುಗಳೆನಿಪಪಾಂಡವ । ರಿರವನವರಕ್ಷೇಮಕುಶಲಂಗಳನುನೆರೆತಿಳಿದು ॥ ಮರಳಿಬಹುದಾಪಾಂಡುಮಾವನ । ಮರಣದಲಿಬಾಲಕರುನೆರೆಕಾ । ತರಿಸಿಸಲೆಕಳವಳಿಸದಿರರೆಲೆತಂದೆಹೋಗೆಂದ ॥ ೩೭ ॥ ತರಳಮತಿಧೃತರಾಷ್ಟ್ರನಾಸಚ್ಚರಿತರನುತಾಯಿಸಹಿತಹಸ್ತಿನ । ಪುರಕೆಕರಸಿದನೆಂದುಕೇಳಿದೆನಿಂದುತಾನಿರದೆ ॥ ದುರುಳರಾದುರ್ಯೋಧನಾದ್ಯರು । ಧರಣಿಪತಿಜಾತ್ಯಂಧನೆಂತವ । ರಿರವುನೋಡಿಶುಭಾಶುಭಂಗಳನರಿದುಬಾರೆಂದ ॥ ೩೮ ॥ ವೃತ್ತವನುನೆರೆತಿಳಿದುಬಾಹೋ । ಗುತ್ತಮನೆಬೇಗದಲಿಪರಮಸು । ಹೃತ್ತುಗಳುನಮಗವರಸ್ತೈಕುಂತೀಕುಮಾರಕರು ॥ ಮತ್ತನಾಥರಿಗಬಲರಿಗೆನಿಜ । ಭೃತ್ಯರಿಗೆನಿಜಚೇಷ್ಟೆಯಲಿನಿ । ವರ್ತಿಸೂಪದೆಲೆತಂದೆತಡೆಯದೆಹೋಗುನೀನೆಂದ ॥ ೩೯ ॥ ಎಂದುಕಳುಹಿಮುಕುಂದನಂದಾ । ಗಾಂದಿನೀತನಯನನುಕುಂತೀ । ನಂದನರಹೊರೆಗಿರದೆಬಲಭದ್ರೋದ್ಧವರುಸಹಿತ ॥ ಬಂದನರಮನೆಗಖಿಳಪರಿಜನ । ವೃಂದಜಯಯೆನೆಸೂತಮಾಗಧ । ವಂದಿಗಳಕೈವಾರವನುನಿತ್ಯಾತ್ಮನಾಲಿಸುತ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ... ... ॥ ೪೦ ॥

ಅಂತು ಸಂಧಿ ೪೫ಕ್ಕಂ ಪದನು ೨೩೨೩ಕ್ಕಂ ಮಂಗಳಮಸ್ತು.

ನಲವತ್ತಾರನೆಯ ಸಂಧಿ.

ಸೂಚನೆ ॥ ಗಾಂದಿನೀನಂದನನುಕುಂತೀ । ನಂದನರನಾಸಕಲಬಾಂಧವ । ಬೃಂದವನುಕಂಡುಚಿತಸತ್ಕಾರ
ದಲಿಮನ್ನಿಸಿದ ॥ ... ...

ಪದನು ॥ ಅರಸಕೇಳಕ್ರೂರನಾಮರ । ಹರನನೇಮದಲಿರದೆಹಸ್ತಿನ । ಪುರಕೆಬಂದನುಕಂಡನಾಧೃತರಾಷ್ಟ್ರಭೂಪತಿಯು ॥ ಸುರನದೀಜದ್ರೋಣಕೃಪವಿದು । ರರನುಬಾಹ್ಲಿಕಕರ್ಣಕೌಂತೇ । ಯರನುಕುಂತಿಸುಯೋಧನಾದಿಸಮಸ್ತಬಾಂಧವರ ॥ ದೂರದಿಂದೈತರಲುಕಂಡ । ಕ್ರೂರನನುಬಂದಿದಿರುಗೊಂಡು । ಕೌರವಾನ್ವಯಜಾತರೊಪ್ಪಿರಲಧಿಕಹರುಷದಲಿ ॥ ಭೂರಿಕುಶಲಪ್ರಶ್ನೆಯೆಸೆಯಲು । ದಾರಮತಿಗಳುಪಡದೆವೀಸಂ । ಸಾರಫಲವನೆನುತ್ತಕೊಂಡಾಡಿದರುಯದುವರನ ॥ ೨ ॥ ವಿದಿತವೆನಲಾಕುಂತಿಯೊಡವೃ । ಷ್ಟಿದನಬರವನುಕಾಣುತವೆಹರು । ಷದಲಿಬಂದಪ್ಪಿದಳುಕುಶಲಕ್ಷೇಮವಾರ್ತೆಯನು ॥ ಪದುಮಮುಖಿಕೇಳುತ್ತಸಂತೋ । ಷದಲಿಹೊಂಪುಳಿಯೋಗಿತನುಪುಳ । ಕದಲಿನನೆದಳುನಳಿನಲೋಚನೆನೆಯನವಾರಿಯಲಿ ॥ ೩ ॥ ನೆನೆದುತನ್ನಯತವ್ರರುಮನೆಯನು । ನೆನೆದುಬಂಧುಸ್ನೇಹವನುಕೃ । ಷ್ಣನಪರಾಕ್ರಮರೂಪಗುಣಮಹಾತ್ಮ್ಯವೈಭವವ ॥ ವನಜಮುಖಿಕಂಬನಿಯುಲಾನನ । ನನೆಯಲಾನಿಜನಂದನರುಸಹಿ । ತನುಪಮಂಗಿಂತೆಂದಳಂತರ್ಗತಮನೋವ್ಯಥೆಯ ॥ ೪ ॥ ನೆನವರೇತಾಯ್ತಂದೆಗಳುದಿಟ । ನೆನವರೇಭ್ರಾತೃಗಳುತನ್ನನು । ನೆನವರೈತಂಗಿಯರುತತ್ಸುತಸಹಿತಬಾಂಧವರು ॥ ನೆನವನೇಕರುಣಾಳುಗಳದೇ । ವನುಶರಣ್ಯನನಾಥಬಾಂಧವ । ನನುಪಮನೆಗೋವಿಂದನೆನ್ನುವನೆಂದಳಾಕುಂತಿ ॥ ೫ ॥ ಭ್ರಾತೃಸುತನಾರಾನುನೆನ್ನಯ । ನಾತ

ಡುವನೇ ವಿರೋಧಿ। ವ್ರಾತಮಧ್ಯನಿವಾಸಿಗಳನೆನ್ನೀ ಕುಮಾರಕರ ॥ ಘಾತಿಸುತ್ತಿಹ ಹುಲಿಗಳೊಳು ಮೃಗ । ಪೋತಕಂಗಳು
ವಿಸುವವೋ । ಲೀತಗಳು ಜೀವಿಸುವರೆಂದಳು ಕುಂತಿ ಬಿಸುಸುಯ್ದು ॥ ೬ ॥ ಹಸುಳೆತನದಲಿ ಮಕ್ಕಳೈಯ್ಯನು । ನುಸುಳಿದನು
ರರಾಜಪದವಿಗೆ । ಬಿಸುಟು ತನ್ನನು ವಿಪಿನದಲಿ ವಿಹ್ವಲೆಯನಬಲೆಯನು ॥ ಶಿಶುಗಳೊಡನಾನಿರಲು ಬಳಿಕೀ । ವಿಷಮ ಮತಿಕರ
ವಡೆಬಂದೆನು । ಹೆಸೆದು ಸಾಯಲದೇಕೆ ನುತ್ತೀ ಹಸ್ತಿನಾಪುರಕೆ ॥ ೭ ॥ ಇವರ ಬುದ್ಧಿ ಬಲಂಗಳನು ಮ । ತ್ತಿವರ ಸಾಹಸದೇಳಿಗೆಯ
। ತಿವರ ಸಚ್ಚರಿತವನು ಮತ್ತೀ ಬಲವನನುನಯನ ॥ ಇವರ ಲಖಿಳ ಪ್ರಜೆಗಳನುತೇ । ಜವನುತ್ರೇ ಜೋಗುಣಗಳನು ಕಂ । ಡವ
ಕೆಡಿಸಲು ಬಗದರಿವದಿರ ಸೆಂದಳಾ ಕುಂತಿ ॥ ೮ ॥ ಕಾವಡೆಯು ಕೊಲುವಡೆಯು ಕಡೆಯಲಿ । ದೇವಕೀಸುತನಲ್ಲದುಳಿದವ । ರೇವ
ವದಿರುವ ನಿದು ಮಾತೂದೇನು ಮನವೊಲಿದು ॥ ಅವಿಗಡರಿಕ್ಕಿದರೆ ವಿಷವನು । ಜೀವಿಸರೆ ಮಡುವಿನೊಳಗದ್ದಿದ । ಡೋ ವೊ
ಮುಕರೆ ತನ್ನ ಸುತರೆಂದೆಂದಳ ಬುಜಾಕ್ಷಿ ॥ ೯ ॥ ದೈವವೆಂದೇನಖಿಳದೈವದ । ದೈವವಲ್ಲಾ ಕೃಷ್ಣ ನೀಜೀ । ವಾವಳಿಯನುದ್ಧರಿಸ
ಲೀಸು ಗವಿಷ್ಣು ವೀಧರೆಗೆ ॥ ದೇವಕೀನಂದನನೆನಿಸಿ ಕರು । ಣಾವನಧಿ ಜನಿಸಿದನು ಗಡ ನವು । ಗಾವು ದೈಭಯವಿನ್ನು ವಿಜಯಿಗ
ದಳಾ ಕುಂತಿ ॥ ೧೦ ॥ ಬಾರನೇ ಗೋವಿಂದನ ಮಗಿ । ನ್ನಾರು ಗತಿ ಶಿಶುಗಳನು ಸಲಹುವ । ರಾರು ಬಾಂಧವರಾರು ಹಿತವರ ದಾರು
ನುಳಿಯೆ ॥ ಆರಿಗಂಜೆನು ಕೃಷ್ಣ ಕರುಣಾ । ವಾರಿಧಿಯೆ ತನ್ನೊಡಲ ತಾಪವ । ನಾರು ಕಳವ ಸಮರ್ಥರನ್ನಿದನೆಂದಳಾ ಕುಂತಿ ॥ ೧೧ ॥
ಲಿಪಿದೆಗಡ ಜಗವನೆನ್ನೀ । ಬಾಲಕರು ನಿನಗೆರವಿಗರೆ ಕರು । ಣಾಳು ತನವನದೆಲ್ಲಿ ಸಲಿಸುವೆದೀನರಾವಿರಲು ॥ ಕಾಲಕರ್ಮದ ಬಯಕೆ
ನ್ನಯ । ಕಾಲನೊಡ್ಡು ವೆಭೀತರಿಗೆಗಡ । ನಾಳೆ ನಂಬುವರಾರು ನಿನ್ನುವನೆಂದಳಾ ಕುಂತಿ ॥ ೧೨ ॥ ಬೇರೆಗತಿಯನು ಕಾಣೆ ನೀ ಸಂ ।
ರ ದುಸ್ಸಹದುಃಖಭಯದು । ರ್ವಾರಘೋರಾಪಾರಪತಿತರಿಗಸ್ವತಂತ್ರರಿಗೆ ॥ ಚಾರುತರಭವದೀಯಚರಣಾಂ । ಭೋರುಹಸ್ಮೃತಿ
ವೆಯಲ್ಲದ । ಡಾರು ನಿಸ್ತಾರಕರು ಜೀವರಿಗೆಂದಳಾ ಕುಂತಿ ॥ ೧೩ ॥ ಧಳ್ಳುರಿಯ ಮಧ್ಯದಲಿ ಸಿಲುಕಿದ । ಹುಲ್ಲೆ ಮರಿಗಳು ಸಹಿತ
ವಿಸೆ । ಬಲ್ಲುದೇ ಬೇರೊಂದು ಹಿಂಡನಗಲ್ಲು ಪತಿಯುಳಿದು ॥ ಎಲ್ಲರಿಗೆ ನೀನಾತ್ಮನೆಂಬುದ । ಬಲ್ಲವರು ತನ್ನಿರವ ನೀನೇ । ಬಲ್ಲ
ಂದಳಲಿದಳು ನಿನ್ನ ಪಿತಾಮಹನ ಜನನಿ ॥ ೧೪ ॥ ಇಂತು ತನ್ನ ಪರಾಭವವನಾ । ಕುಂತಿ ವಿಸ್ತರಿಸುತ್ತ ಲಕ್ಷ್ಮೀ । ಕಾಂತ ಕೃಷ್ಣನ
ಹಿಮೆಯನು ಮನದೊಳಗೆ ನೆನವುತ್ತ ॥ ಸಂತವಿಸಿ ಕೊಳಲರಿಯದಳಲನು । ಕಾಂತೆ ಕಂಬನಿ ಸುರಿಯಲಖಿಳದಿ । ಗಂತಜನ ಮರು
ವವೊಲತ್ತಳು ಮರುಗಿ ಮೂರ್ಛೆಯಲಿ ॥ ೧೫ ॥ ಇರಲು ವಿದುರಾಕ್ರೂರರಾಪಂ । ಕರುಹಮುಖಿಯನು ಸಂತವಿಸುತೆಂ । ದರು
ಕುಂದನನಿಖಿಳ ಸಂಬಂಧ ಪ್ರಯೋಜನವ ॥ ಸುರರು ನಿಜ ಕಾರ್ಯಾರ್ಥದಿಂದವ । ತರಿಸಿದರು ಯೀ ನಿನ್ನ ಸುತರೆಂ । ದೊರೆದು ಸಮ
ಖದುಃಖಮನದಲಿ ತಿಳುಹಿದರು ಸತಿಯ ॥ ೧೬ ॥ ನೀನದೇಕಾಚಿಂತಿಸುವೆ ನಿಜ । ಸೂನುಗಳು ತಾನಾರಿವರಸುಯಿ । ಧಾನವಾರದು
ಜಪರಾಗಪದಾಬ್ಜ ಸಂಸ್ಥಿತರ ॥ ಹಾನಿವೃದ್ಧಿಗಳೆನ್ನದೆಂಬನು । ದಾನವಾಂತಕ ಕೃಷ್ಣನೆಂದಾ । ಮಾನಿನಿಯ ತಿಳುಹಿದರು ವಿದುರಾ
ಕ್ಕನು ದ್ವಾರಕಾಪುರಿಯ ॥ ತಳೆದು ಕಾರ್ಯವಿಶೇಷವನು ಪಡಿ । ವಳರು ಹೊಗಿಸಲು ಬಂದು ಕಂಡನು । ಲಲಿತಸಿಂಹಾಸನದಲೆಸೆವ ಮು
ಕುಂದನಂಘ್ರಿಗಳ ॥ ೨೬ ॥ ಬರವ ಕಾಣುತ್ತಾಸನವನಿಳಿ । ದುರುದಯಾನಿಧಿ ಕೃಷ್ಣನೇರಿಸ । ಪರಮಸಿಂಹಾಸನದ ಮೇಲಾತನನು
ಕುಳ್ಳಿರಿಸಿ ॥ ಚರಣಯುಗಳವ ತೊಳೆದು ಘನಗೆಯನು । ಪರಿಹರಿಸಿ ಮೃದುಸೂಕ್ತಿಯಿಂದಾ । ದರಿಸಿ ಪೂಜಿಸಿದನು ಸುರಾರ್ಚಿತಚರಣ
ನಾ ದ್ವಿಜನ ॥ ೨೭ ॥ ಅಮಿತಕರುಣಾಸಿಂಧು ಮಾರ್ಗ । ಶ್ರಮವಡಗಲಾದರಿಸಿ ವಿಪ್ರೋ । ತ್ತಮನನಮೃತಾಹಾರಭೋಜನ
ಪಾನದಲಿ ದಣಿಸಿ ॥ ಕಮಲನಾಭನು ನಗುತ ನುಡಿದನು । ವಿಮಳದಂತದ್ಯುತಿಗಳರದಾ । ಕ್ರಮಿಸಲಧರದ್ಯುತಿಗಳನು ಸತ್ಪ್ರೇಮಸೂ
ಕ್ತಿಯಲಿ ॥ ೨೮ ॥ ಬಂದೆ ನೀನೆಲ್ಲಿಂದ ಹೇಳೆಲೆ । ತಂದ ಕಾರ್ಯವಿಶೇಷವೇನು । ಇಂದು ಬೆಸಸುವುದೇವ ಭೃತ್ಯರಾವು ನಿಮ್ಮಡಿ
ಗೆ ॥ ಮಂದಿರದ ಸುಕ್ಷೇಮವೈ ಸುಖ । ದಿಂದ ಶಿಶು ಪಶು ಭೃತ್ಯ ವನಿತಾ । ವೃಂದ ಸಂಜೀಸುವುದೈ ಭಯವಿಲ್ಲಲೇಯೆಂದ ॥ ೨೯ ॥
ದೃಷ್ಟಲಬ್ಧಧನಂಗಳಲಿ ಸಂ । ತುಷ್ಟರಾಗಿಹ ವಿಪ್ರರವರೆನ । ಗಿಷ್ಟರೆಂದರಿ ಕಾಮಲೋಭವಿಮೋಹವರ್ಜಿತರು ॥ ತುಷ್ಟಿಯಿಲ್ಲದಡಾ
ವನಾಗಲಿ । ವಿಷ್ಟಪಾಧೀಶ್ವರನೆಯಾಗಲಿ । ಕಷ್ಟಜೀವನನಾತನೆಂದನು ದಾನವಧ್ವಂಸಿ ॥ ೩೦ ॥ ಹಿಂದೆ ನೆನೆಯದೆ ಮುಂದೆ ಬಯಸದೆ ।
ಬಂದುದನು ಭೋಗಿಸುತಹಂಕೃತಿ । ಯಿಂದ ವಿರಹಿತರಾಗಿ ನಿರ್ಮಳರಾಗಿ ಸಕಲದಲಿ ॥ ಒಂದೆನಿಸಿ ನೆರೆಕಾಣಬಲ್ಲವ । ರಿಂದಧಿಕರಿ
ಲ್ಲವರ ಚರಣಕೆ । ವಂದಿಸುವೆನನವರತ ತಾ ಕೆಲೆವಿಪ್ರ ಕೇಳೆಂದ ॥ ೩೧ ॥ ನೊಂದಡಾನೇ ನೋವೆನವರಭಿ । ವಂದಿಸಿದಡಾನಂದಿಸುವೆ
ನಭಿ । ವಂದಿಸಿದಡವರಿಂಗೆ ಮಾಡಿದ ವಂದನೆಗಳೆನಗೆ ॥ ನಿಂದಿಸಿದಡೆನ್ನವನೆ ದಿಟ ನೆರೆ । ನಿಂದಿಸಿದರಹ ಹರೀ ಭುವಿಗೆ ದ್ವಿಜ । ರಿಂದಧಿಕ
ವಹ ಸೇವ್ಯದೈವವ ಕಾಣೆನಾನೆಂದ ॥ ೩೨ ॥ ಅರಸುಗಳು ನಿನ್ನವನು ನೆರೆಪತಿ । ಕರಿಸುವರೆ ಕುಲದೈವನೆಂದಾ । ದರಿಸುವರೆ ಹೇ
ಳುವನಾಗಲಿ ವಿಪ್ರಮಾತ್ರವನು ॥ ಕರೆದು ಮನ್ನಿಸಬೇಹುದವನೀ । ಶ್ವರರು ತಾವವರಿಂಗಭೀಪ್ಸಿತ । ವರವನೀವೆನು ವಿಪ್ರಪೂಜಕ
ಭೂಪರಿಂಗೆಂದ ॥ ೩೩ ॥ ಬರಲಿದೇನು ನಿಮಿತ್ತ ನೀನಿದ । ನೊರೆವುದಧಿಕ ರಹಸ್ಯವಲ್ಲದ । ಡುರುತರಶ್ರಮದಿಂದ ಬಂದೆಸು ದೂರ
ಪಥದಿಂದ ॥ ಹರಹರಾವುದು ಕೃತ್ಯವದನೆನ । ಗೊರೆದು ಮಾಡಿಸಿಕೊಂಬುದಾವು ಕಿಂ । ಕರರು ಸಂಶಯವಿಲ್ಲ ಕಾರಿಯವೇನು ಹೇ
ಳೆಂದ ॥ ೩೪ ॥ ಎಂದಡಾ ವಿಪ್ರೋತ್ತಮನು ತಾ । ಬಂದಕಾರ್ಯವು ಕೊರಗೆನೆಗಳುವ । ದೆಂದು ಮಿಗೆ ಹಾರೈಸುತೇರಿರ್ದಾಸನವನಿಳಿದು ॥
ವಂದಿಸುತ ತತ್ಪಾದಕಮಲ । ದ್ವಂದದಲಿ ನಗುತಿರಿಸಿದನು ಪೂ । ರ್ಣೇಂದುಮುಖಿ ಕಳುಹಿದ ಸುವಿಜ್ಞಾಪನದ ಪತ್ರಿಕೆಯ ॥ ೩೫ ॥
ನೆಗೂತ್ತ ನಿಜಪದನಿಹಿತಲಿಖಿತನ । ನೊಗುಮಿಗೆಯು ಹರುಷದಲಿ ಕೈಯ್ಯಲಿ । ತೆಗೆದು ಸುಸ್ಮಿತ ಮಧುರನಯನಾಪಾಂಗದಲಿ ನೋಡಿ ॥
ಜಗದುಪತಿ ದಂತಾವಳಿಯದೀ । ಪ್ತಿಗಳು ಪಸರಿಸಿ ಹರುಷದಲಿ ದೃಗು । ಯುಗಳವರಲು ತಾನೆ ವಾಚಿಸಿದನು ಸರಾಗದಲಿ ॥ ೩೬ ॥
ಕೇಳು ನಿನ್ನಯ ಗುಣಗಳನು ಕಿವಿ । ಸೋಲಿದವು ಮನವದರ ಬಳ್ಳಿಯಲಿ । ಬೀಳುಕೊಂಡುದು ದೇವ ನಿನ್ನ ಪದಾಬ್ಜಸನ್ನಿಧಿಗೆ ॥ ಹೇಳಲ
ರಿಯೆನು ಭುವನಮೋಹನ । ಮಾಲಮಂತ್ರಕುಲಾಧಿದೈವನೆ । ಪಾಲಿಸೆನ್ನಿಷ್ಟಾರ್ಥವನು ಚಿತ್ತವಿಸು ಬಿನ್ನಪವ ॥ ೩೭ ॥ ಹಜ್ಜೆ

ಯಿಟ್ಟುದುಮುಂದೆಮನನಿ । ರ್ಲಜ್ಜಿತನದಲಿಮಾಳ್ಪನೇನನು । ವರ್ಣಿಸಿದೆನಭಿಮಾನವನುನಿನಗೋತುಮನದೊಳಗೆ ॥ ಸಜ್ಜನ
ಸ್ತುತಗುಣನೆನಿನ್ನಲಿ । ಲಜ್ಜಿಸುವ ಸತಿಯಾರುನಿಜಚರ । ಣಾಬ್ಜಸೇವಾಸಾರಸೌಖ್ಯವನೀವುದೆನಗೊಲಿದು ॥ ೩೮ ॥ ಕಾಲವ
ನಭಿಮಾನವನುತೊರೆಯದ । ಲಲನೆಯಾವಳುದೇವನಿನ್ನಯ । ಚಲುವುರೂಪುಗುಣಂಗಳನುತ್ರೈಲೋಕ್ಯಮೋಹನದ ॥ ಲಲಿತ
ಮೂರ್ತಿಯನೊಮ್ಮೆಕೇಳ್ದವ । ಳೆಲೆಮುಕುಂದಮಹಾಕ್ಷುಧಾಸಹಿ । ತೊಲಿದುಭಜಿಸುವಳಾವನಂಘ್ರಿಸರೋಜರೇಣುಗಳ ॥ ೩೯ ॥
ಬಯಸಿದೆನಲಾಕೃಷ್ಣಭಕ್ತ । ಪ್ರಿಯಮೆನಿಪನಿನ್ನಂಘ್ರಿಕಮಲಾ । ಶ್ರಯವನತಿದುರ್ಲಭವಿದೆಂಬುದನೀಕ್ಷಿಸಿದೆಮನದ ॥ ಪ್ರಿಯವಸ
ಲಿಸುವುದೆನಗನಾಥಗೆ । ನಯವಿದನೆನಿನ್ನಂತೆಕರುಣಾ । ಶ್ರಯರದಾರಾಶ್ರಿತಮನೋರಥಕಾರಿಗಳುಧರೆಗೆ ॥ ೪೦ ॥ ಚಿತ್ತಶುದ್ಧಿಯಲ
ಖಿಳಭೂತದ । ಯೋತ್ತರದವೃತ್ತಿಗಳಲಿಷ್ಟಾ । ಪೂರ್ತದಾನವ್ರತಗಳಿಂದೆಲೆದೇವಪೂರ್ವದಲಿ ॥ ಇತ್ತಲಾನಾರಾಧಿಸಿದಡೆ । ಪ್ರೈತ್ರೆ
ಯಾದರೆಕರುಣಿಸುವುದೆಲೆ । ಮರ್ತ್ಯಲೋಕವಮನೋಭಿರಾಮಮನೋರಥವನೆನಗೆ ॥ ೪೧ ॥ ಬೇಡುವೆನುಪ್ರೌಢವಂಟುದೇ
ವರು । ಮಾಡುವುದುಕಾರುಣ್ಯವನುಕೃಪೆ । ಮಾಡುವುದುದಾಸ್ಯವನುದನುಘೋಷಾತ್ಮಜಾದಿಗಳು ॥ ಮಾಡಲಾಗದುಪರಿಣಯ
ಪರಿ । ಪಾಡಿಯನುತಕ್ಕಲಿತೆಯನುತಾ । ಮಾಡುವೆನೆಲೆಲೋಗರಲಿನಿನಗಲ್ಲದೆದುರಾತ್ಮರಲಿ ॥ ೪೨ ॥ ನಾಳೆಕೊಡುವುದುತನ್ನ
ನಾಶಿಶು । ಪಾಲನೆಂಬದುರಾತ್ಮಕಗೆನೀ । ನೇಳಿದಿಟವನುಮಾಡಿದೆಲ್ಲಾಸೇನೆಗಳುಸಹಿತ ॥ ಶ್ರೀಲಲಾಮನೆಬಂದುಮಾಗಧ । ಸಾ
ಲುವಾದಿಸಮಸ್ತದುಷ್ಟನೃ । ಪಾಲಕುಲವನುಸದೆದುಮಾಳ್ಪುದುನಿಜಕರಗ್ರಹವ ॥ ೪೩ ॥ ಪರಿಭವಿಸಿಬಂಧುಗಳಲಂತಃ । ಪುರದಲಿ
ದ್ದಬಲೆಯನುಕಾದಿಯೆ । ಪರಿಣಯವಮಾಳ್ಪಂದವೆಂತೆನಬೇಡುಪಾಯವನು ॥ ತೆರವೆನಾನಾದಿನದಹೊತ್ತರೆ । ಪುರವಹೊರವಂ
ಟಂಬಿಕಾಪದ । ದರುಶನಕೆಬಹುದುಂಟುನಿಜಕುಲವಿಹಿತವಿದುತನಗೆ ॥ ೪೪ ॥ ಬಹಳಬಲಸಹಿತಲ್ಲಿಗೈತಂ । ದಹಿತರೆನಿಸುವಸಾ
ಲ್ವಮಾಗಧ । ಕುಹಕಿಚೈದ್ಯನೃಪಾಲಬಲವನುಸದೆದುನಿಜಪುರಕೆ ॥ ವಹಿಸಿಪಾಣಿಗ್ರಹವಮಾಳ್ಪುದು । ಸಹಚರಿಯರೊಡನಂತಿ
ದೇಬಿ । ನ್ನಹವುಕರುಣಿಸುಕೃಷ್ಣಕರುಣಾನಿಧಿಯೆನೀನೆನಗೆ ॥ ೪೫ ॥ ದೇವನೀನೆನಗೆನ್ನನೀಸ್ವೈಜ । ನಾವಳಿಗಳಿತ್ತವರಲ್ಲೈನಿಜ ।
ಭಾವದಲಿಸಂಕಲ್ಪಿಸಿದಡಂದೇಭವತ್ಪದದ ॥ ಸೇವಕಿಯಲಾಹಾನಿತನಗಿ । ನ್ನಾವುದಾವಡೆನಿನ್ನದೈಸಲೆ । ಕಾವುದೆನ್ನನನಾಥೆಯನು
ಚಿತ್ತವಿಸುಬಿನ್ನಪವ ॥ ೪೬ ॥ ಇಂತುಭೀಷ್ಮಕನಂದನೆಯುಪ । ತ್ರಾಂತಗತವೆಂದೆನಿಸಿದಾವೃ । ತ್ತಾಂತವನುನೋಡುತ್ತಸಸ್ನೇ
ಹಾರ್ದ್ರನಯನದಲಿ ॥ ತಿಂಥಿಣಿಯಪುಳಕದಲಿಲಕ್ಷ್ಮೀ । ಕಾಂತನಿಗೆನೋಡುತ್ತನಿಜನಯ । ನಾಂತದಲಿನೋಡಿದನುವಿಪ್ರೋ
ತ್ತಮನನೊಲವಿನಲಿ ॥ ೪೭ ॥ ಎನ್ನನೀಕ್ಷಿಸಲೇಕೆಬಹಳಕೃ । ಪಾರ್ಣವನೆಚಿತ್ತವಿಸುವುದುವರ । ವರ್ಣಿಸಿಯವಿಜ್ಞಾಪನೋಚಿತ
ಕಾರ್ಯಸಂಗತಿಯ ॥ ಮನ್ನಿಸುವುದವಿಳಂಬಿತವುವುಪ । ಸನ್ನವೆಂದೇನಿಮ್ಮಡಿಗೆಸಂ । ಪನ್ನವಾದಡೆಬೇಗವಮಾಡೆಂದೆಂದನಾವಿಪ್ರ ॥
ಎನಲುದಾರುಕನೊಡನೆರಥವನು । ದನುಜರಿಪುಹೂಡೆಂದುಯಾದವ । ಜನಕೆಲ್ಲೊಡನೆಚ್ಚರಿಸಿಸಾತ್ಯಕಿಗಖಿಳಸೈನಿಕವ ॥ ಆಸುವ
ರಕೆನೆರಹೆನುತಬಲರಾ । ಮನನಿರಿಸಿಪುರರಕ್ಷೆಗಾಮರು । ದಿನವೆಹೊರವಾಳೆಯವಬಿಡಿಸಿದನಂದುನಿಜಬಲವ ॥ ೪೯ ॥ ಏರಿರಥವ
ನುವಿಪ್ರನೊಡನೆಮು । ರಾರಿನಡೆದನುಕಿರಿದುಬಲಸಹಿ । ತಾರುಮರಿಯದವೋಲುಮಾಗಧಚೈದ್ಯನೃಪರೊಳಗೆ ॥ ದೂರಪಥವನು
ಕಳೆದುಭುವನಾ । ಧಾರಮೂರ್ತಿವಿದರ್ಭದೇಶವ । ಸಾರಿದನುನಿಲಿಸಿದನುರಥವನುಪುರದಬಾಹೆಯಲಿ ॥ ೫೦ ॥ ಹೋಗುನೀನೆಲೆ
ವಿಪ್ರಯೆನೆತಲೆ । ವಾಗಿನುಡಿದನುನಂಬಿಕರುಣಾ । ಸಾಗರನೈದರ್ಭಿಗೀವೃತ್ತಾಂತಸಂಗತಿಯ ॥ ಈಗಲರುಹುವೆನೆನ್ನಭಾಷೆಯ ।
ನೀಗಲಾಗದುಸತ್ಯನಿಷ್ಫಲ । ನಾಗದಂತೈದೆದುನಡೆವುದೆನಲ್ಕೆಹರಿನುಡಿದ ॥ ೫೧ ॥ ಮರುಳಳಲಾನೀನೆನ್ನಚಿತ್ತವ । ನರಿಯೆಕಾಂ
ತೆಯಚಿಂತೆಯಲಿಹೋ । ದಿರುಳುತನ್ನನುಬೀಳುಕೊಂಡುಸುನಿದ್ರನಯನದಲಿ ॥ ಪುರಕೆನಡೆನಡೆಬೇಗಬೇಗಂ । ಬುರುಹಮುಖಿ
ಗಿದನೆನ್ನನೀನೆಂ । ದಿರದೆಕಳುಹಿದನಸುರರಿಪುನೆಸುನಸುಭೂಸುರನ ॥ ೫೨ ॥ ಬೀಳುಕೊಂಡವನತಿಯಲಾಸಿರಿ । ಲೋಲನನು
ಕೈವಿಡಿದುನಂಬಿನೃ । ಪಾಲಯಕೆಸಂತೋಷದಲಿಭೂಸುರನುನಡೆತಂದು ॥ ಹೇಳಿದನುಸತಿಗದನುಚಿಂತಾ । ಲೋಲಚಿತ್ತೆಗೆಬಲ್ಲವ
ನಾಕರು । ಣಾಳುನಿತ್ಯಾತುಮನಬಹಳೋದಾರಲೀಲೆಗಳ ॥ ... ... ॥ ೫೩ ॥

ಅಂತು ಸಂಧಿ ೫೮ಕ್ಕಂ ಪದನು ೨೭೫೭ಕ್ಕಂ ಮಂಗಳಮಸ್ತು.

ಐವತ್ತೊಂಭತ್ತನೆಯ ಸಂಧಿ.

——○○ ರುಕ್ಮಿಣೀಕಲ್ಯಾಣದ ಕಥೆ, ರುಕ್ಮಿಣೀ ಅಪಹಾರ. ○○——

ಸೂಚನೆ ॥ ಮಥಿಸಿಪರಬಲಜಲಧಿಯನುಮುರ । ಮಥನನಿಂದಿರೆಯಂಶೆಯನುನಿ । ರ್ಮಥನದಲಿನಿಜಪುರಕೆ
ತಂದನುನಲಿದುರುಕುಮಿಣಿಯ ॥ ... ...

ಪದನು ॥ ಅರಸಕೇಳಾಕುಂಡಿನಾಧೀ । ಶ್ವರನುಭೀಷ್ಮಕನಂದುತನುಜೆಯ । ಪರಿಣಯಕೆಪರುಠವಿಸಿಗುಡಿತೋರಣ

ಳಲಿಪುರವ ॥ ಪರಿಪರಿಯವಿಭವಂಗಳಲಿವಿ । ಸ್ತರಿಸಿಮಂಗಳವಸ್ತುಗಳನಿರೆ । ತರಿಸಿವಿದಿತೋತ್ಸಾಹದಲಿಮಾಡಿಸಿದನುತ್ಸವವ ॥೧॥ ಬಂದನಾಶಿಶುಪಾಲನುತ್ಸವ । ದಿಂದಕೈಗೈದಖಿಳಭೂಪರ । ವೃಂದವಾತನಬೆಂಬಲಕೆಮಗಧೇಶ್ವರಾದಿಗಳು ॥ ಬಂದರಲ್ಲಿಗೆಧರಣಿಬೆಸಲಾ । ದಂದದಲಿನಾನಾದಿಗಂತದ । ಸಂದಣಿಯಸಂಭ್ರಮದಚತುರಂಗದಲಿನೃಪಕಟಕ ॥೨॥ ಇದಿರುಗೊಂಡರ್ಚಿಸುವಸವನಿಸಿ । ಸದನವನುಸೇವಿಸುವರಾಯರಿ । ಗುದಿತವಿಭವಂಗಳಲಿಮನ್ನಣೆಗಳನುಮಾಡಿಸುವ ॥ ಮದುವೆವರೆಗಳಕಹಳೆಗಳವರ । ಸುದತಿಯರಶೋಭನಸುಸಂಗೀ । ತದಮಹೋತ್ಸವದಬ್ಬರಣೆರಂಜಿಸಿತುಮಾಜಗವ ॥೩॥ ಹೊಳೆವಕನ್ನಡಿಕಳಶದೀಪಾ । ವಳಿಫಲಾಕ್ಷತೆಲಾಜಪುಷ್ಪಾ । ವಳಿಯಲೆಸೆವಗೃಹಂಗಳಲಿಕಸ್ತೂರಿಚಂದನದ ॥ ಚಳೆಯದಲಿರಂಜಿಸುವಚೈತ್ರಾ । ವಳಿಯಚಪ್ಪರರಚನೆಯಲಿಮಂ । ಗಳವೆಸೆದುದುತ್ತುಂಗತೋರಣಗಳಲಿಗುಡಿಗಳಲಿ ॥೪॥ ಹಿಡಿದಚಮರದಝಲ್ಲರಿಯಬೆಳು । ಗೊಡೆಯಸಿಂಧದಗಡಣದಲಿನಭ । ವಡಗಿದುದುಕೆಂಧೂಳಿದೆಸೆಗಳಮುಳುಗೇಲವನಿಯನು ॥ ನಡುಗಿಸಿತುಚತುರಂಗಬಲವತಿ । ಗಡಿಗೆಕಂಪಿಸಿಕುಲಗಿರಿಗಳಳ್ಳೆಯೊಡೆಯಲೈತರುತಿರ್ದುದಗಣಿತವಾದ್ಯರಭಸದಲಿ ॥೫॥ ನೆರೆದುಶಿಶುಪಾಲಂಗೆವರಪಂ । ಕರುಹಮುಖಿಯನುಸಾಧಿಸುವನುನ । ದುರವಣೆಯಭರದಿಂದಬಂದುದುಪೌಂಡ್ರಕಾದಿಗಳು ॥ ಬರಲಿವಿಷ್ಣುವೆಮೇಣುರುದ್ರನೆ । ಬರಲಿಬೆಂಬಲವಾಗಿಕೃಷ್ಣಂ । ಗರಸುಮಗಳನುತುಡುಕಲೀಸೆವೆನುತ್ತತವತವಗೆ ॥೬॥ ಕರೆಸಿವಿಪ್ರೋತ್ತಮರನವನೀ । ಶ್ವರನಭೀಷ್ಮಕನಂದುತನ್ನಯ । ವರಕುಮಾರಿಗೆಬಳಿಕವೈವಾಹಿಕವಿಧಾನದಲಿ ॥ ಪರಮಮಂಗಳಕೃತ್ಯವನುವಿ । ಸ್ತರಿಸಿಬಹುವಿಧಕನಕರೂಪ್ಯಾಂ । ಬರವಿಭೂಷಣಗಳಲಿಮನ್ನಿಸಿದನುಮಹೀಸುರರ ॥೭॥ ಕೇಳನಿಜವೈವಾಹಿಕಕೆಶಿಶು । ಪಾಲನೈತಂದುದನುಪೃಥ್ವೀ । ಪಾಲರಾಗಮನವನುತತ್ಕಾರ್ಯೈಕಸಿದ್ಧಿಯನು ॥ ಬಾಲೆಕೇಳವಳಿಸಿದಳುಮನದಲಿ । ತೂಳುವಂತಸ್ತಾಪವಹ್ನಿ । ಜ್ವಾಲೆಯಲಿತನುಬೆಂದಪೋಲುಮ್ಮಳಿಸಿದಳುಮರುಗಿ ॥೮॥ ಬಾರನಾನತಬಂಧುಕೃಷ್ಣನು । ದಾರಗುಣನಿಧಿಕಳುಹಿದಾತನು । ಬಾರನೇತಕೆವಿಪ್ರನೇನಾದನೊಮನೋವ್ಯಥೆಯ । ಆರಿಗೆಂಬೆನುದೈವಹೀನೆಗ । ದಾರುಹಿತಕಾರಿಗಳುಕಾಣೆನು । ಕಾರಣವನಾನಿದಕೆನುತಚಿಂತಿಸಿದಳಬುಜಾಕ್ಷಿ ॥೯॥ ದೋಷವನುಕಂಡೆನ್ನಗುಣವಾ । ರಾಶಿವುಳಿದನೊಬರವನದನಾ । ಭೂಸುರನುದೇಶಾಂತರವನೈದಿದನೊಭಂಗದಲಿ ॥ ಲೇಸನೆಸಪರಿಗಕಟವಿಘ್ನವ । ದೇಸುಹರಹರಬರಿದೆಮನದಭಿ । ಲಾಷೆನಿಷ್ಫಲವಾಯ್ತಲಾಹಾಯೆನುತಮರುಗಿದಳು ॥೧೦॥ ಇಲ್ಲಿಪುಣ್ಯೋದಯವುಲಕ್ಷ್ಮೀ । ವಲ್ಲಭನದುರ್ಲಕ್ಷ್ಯವಹದದ । ಪಲ್ಲವದಪರಿಚರ್ಯೆಸೇರುವಡೆನಗೆದುರ್ಮತಿಗೆ ॥ ಸಲ್ಲಲಿತಸಜ್ಜನಮನೋಗತಿ । ದುರ್ಲಭನಪದದರುಶನವುತನ । ಗೆಲ್ಲಿಯದುಬಹುಪಾಪಿಗೆಂದಳಲಿದಳುಲಲಿತಾಂಗಿ ॥೧೧॥ ನಿರುತವಾನಿರ್ಭಾಗ್ಯೆಯಲ್ಲದ । ಡಿರದೆತನ್ನೊಡವುಟ್ಟದಣ್ಣನೆ । ಕೊರಳಕೊಯ್ವನೆಹಗೆಯೆನಿಸಿತಂಗಿಯಮನೋರಥಕೆ ॥ ಚರಣಸೇವಕಿಯೆಂದುಪರಮೇ । ಶ್ವರನುನೆನೆದನೆನಂಬಿದೆನ್ನನು । ಕರುಣದಲಿನೋಡಿದಳೆಗಿರಿಜೆಯೆನುತ್ತಹಲುಬಿದಳು ॥೧೨॥ ಆರಿಗುಸುರುವೆನಳಲನಿದನಿ । ನ್ನಾರುಕೇಳುವರಕಟನಾಥೆಗ । ದಾರುಹಿತವರುಕೃಷ್ಣಕರುಣಾನಿಧಿಯಲಾನೀನು ॥ ದೂರವಾದಡೆತನ್ನೊಡಲಿಗಸು । ಸೇರಲರಿವುದೆಹಾಯೆನುತಸರ । ಸೀರುಹವದನೆಮರುಗಿದಳುಮನದೊಳಗೆಹಸವಳಿದು ॥೧೩॥ ಅರಳುಗಂಗಳಮುಚ್ಚಿಕೃಷ್ಣನ । ಚರಣವನುನೆನೆವುತ್ತಚಿಂತಾ । ತುರೆಮಹಾಶೋಕಾರ್ತಸಾಗರದೊಳಗೆಮುಳುಗಿರಲು ॥ ಸರಸಿಜಾನನೆಗೆಡದಲಂಗ । ಸ್ಫುರಣೆಯಾದವುಕಂಡುಸಖಿಗದ । ನೊರೆವುತಿರಲೈತಂದನಾದ್ವಿಜವರನುನಸುನಗುತ ॥೧೪॥ ಅರಿತಳಿಂಗಿತದಿಂದವಿಪ್ರನ । ಬರವದೂರದಲೀಕ್ಷಿಸುತಪಂ । ಕರುಹಮುಖಿಗಂಭೀರಗಮನದನೊಗದಹರುಷದಲಿ ॥ ತರಳೆತರಹರಿಸಿದಳುಶೋಕೋ । ತ್ಕರುಷದುದ್ರೇಕವನುಕೃಷ್ಣನ । ಚರಣವನುಕಂಡಂತೆಪುಳಕಿತೆಯಾದಳಡಿಗಡಿಗೆ ॥೧೫॥ ಏನುಮತ್ತೇನವ್ವಭಾಗ್ಯವು । ಹಾನಿಧಿಯಲಾನೀನುಬರುವನು । ದಾನವಾಂತಕನಧಿಕಕಾರುಣ್ಯದಲಿನಿನಗೊಲಿದು ॥ ಏನನೆಂಬೆನುಕೃಷ್ಣನಂತೆಕೃ । ಪಾನಿಧಿಗಳಿನ್ನಾರುಭಕ್ತಾ । ಧೀನವಿಗ್ರಹನೆಂಬಬಿರುದನುಕಂಡೆನಾನೆಂದ ॥೧೬॥ ಜನ್ಮಸಫಲವಿನಾಯ್ತುಬಿಟ್ಟಿಯ । ಧರ್ಮದಲಿಕಟಕವನುಕಂಡಂ । ತಮ್ಮನಿಜಸಂದೇಶದಲಿಮುನಿವಂದಿತಾಂಘ್ರಿಯನು ॥ ನಿರ್ಮಮರುನೆರೆಕಾಣರೀನಸು । ಗರ್ಮಿಪಾತಕಿಹೋಗಿಸಾಕ್ಷಾ । ದ್ಬ್ರಹ್ಮಮೂರುತಿಕೃಷ್ಣನಂಘ್ರಿಯಕಂಡೆನಾನೆಂದ ॥೧೭॥ ಎಂದುವಿಪ್ರೋತ್ತಮನುವಿಪುಳಾ । ನಂದದಲಿಮುಳುಗಾಡುತಿರಲದ । ನಿಂದುಮುಖಿಕೇಳುತ್ತಕೃಷ್ಣಾಗಮನವಾರ್ತೆಯನು ॥ ತಂದವಿಪ್ರೋತ್ತಮನಚರಣ । ದ್ವಂದ್ವದಲಿಮೈಯಿಕ್ಕಿದಳುಮನ । ದಿಂದವಗಳ್ಪಚಿತ್ತವನುಕಾಣದೆಬೇರೆಮತ್ತೊಂದ ॥೧೮॥ ಅರಸಕೇಳಾಕೃಷ್ಣನೊಬ್ಬನೆ । ಪರಿಹರಿಸಿಪರಿವಾರವನುಹೋ । ಗಿರಲುಕುಂಡಿನಪುರಕೆನಾನಾದೇಶದರಸುಗಳು ॥ ಧುರಕೆಚೈದ್ಯನಪಕ್ಷಸಂಗೀ । ಕರಣದಲಿಬಹವಾರ್ತೆಯನುಸಂ । ಕರುಷಣನುಕೇಳುತ್ತನೆರಹಿದನಂದುನಿಜಬಲವ ॥೧೯॥ ವಹಿಲದಲಿನಡೆತಂದನುರು । ಗ್ರಹವಶಂಕಿಸಿನೆರಹಿಯಾದವ । ಬಹಳಬಲವನುಕರಿತುರಗರಥಪತ್ತಿಸಂಕುಲವ ॥ ವಿಹಿತವದನಜದೊಳಗೆಮುಳುಗಲು । ವಿಯತಮಂಡಲವಾವರಿಸಿದಿ । ಕ್ಕುಹರವನುಮೋಹರಿಸಿಬಿಟ್ಟನುಪುರದಬಾಹೆಯಲಿ ॥೨೦॥ ಬಂದುಕಂಡುದುಸಕಲಪುರಜನ । ವೃಂದವಾಶ್ರೀರಾಮಕೃಷ್ಣರ । ಮಂದಹಾಸೋದ್ದಾಮಮಧುರಾಪಾಂಗವೀಕ್ಷಣದ ॥ ಕುಂದರದನಾವಳಿಯಮೌಕ್ತಿಕ । ಧಿಂದೆಸೆವ

ಬಿಂಬಾಧರಸ್ಮಿತಿ । ಕೆಂದಳಿಕಕಮನೀಯವದನಾಂಬುಜನನಖಿಳಜನ ॥ ೨೧ ॥ ರಾಮಕೃಷ್ಣರಬರವನರಿದಾ । ಭೂಮಿಪತಿಕಾ
ಣಾತ ಹರುಷದಿಂ । ದ್ರಾಮದಲಿನಡೆದಿದಿರುಗೊಂಡನು ವಿವಿಧವಿಭವದಲಿ ॥ ಧಾಮರಾಪರಿಗಿತ್ತು ನಿರ್ಮಳ । ಧಾಮವನು ಮನ್ನಿಸಿ
ದನಧಿಕ । ಪ್ರೇಮದಲಿ ಮಂಗಳಸುಭೋಜನದಾನಶಯನದಲಿ ॥ ೨೨ ॥ ಕುಡಿಕುಡಿದು ಕಂಗಳಲಿ ಕೃಷ್ಣನ । ಕಡು ಚೆಲುವ ಮೂ
ರ್ತಿಯನು ಸ್ತ್ರೀಯರು । ತಡೆಯು ಕಾಣದು ಮನದ ಪುರುಷರು ಭಾವದ ಸೌಭಗದ । ಕಡೆಗೆ ಕಾಮನ ತಂದೆಗೀಸು । ಗಡದರೂಪಿ
ಲ್ಲದಪೆಗೊಂಡಿಯ । ರೊಡಲನಳವರೆ ಕೃಷ್ಣವಿರಹದಲೆಂದು ದಖಿಳಜನ ॥ ೨೩ ॥ ಈತನರ್ಧಶರೀರವೆನಿಸುವ । ಖ್ಯಾತಳೋದರಿ
ಯೋಗ್ಯೆ ರುಕ್ಮಿಣಿ । ಗೀತನೇ ಪಾಣಿಗ್ರಹಣಯೋಗ್ಯನು ವಿಚಾರಿಸಲು ॥ ಮಾತು ಬೇರಿನ್ನೇಕೆ ವಿಬುಧ । ವ್ರಾತವೆಣಿಸಿಲ್ಲಿಂಬ
ನೇದಿಬ । ಪಾತಕನಲಾ ರುಕ್ಮಿಯೆನುತಿರ್ದುದು ಸುರವ್ರಾತ ॥ ೨೪ ॥ ಎಲೆ ವಿಧಾತ್ರ ಮಹಾಸತೀಗಿನೀ । ನೊಲವೆಯಾದಡೆ ಸೇ
ರಿಸೀತನ । ಲಲಿತಪಾಣಿಗ್ರಹಣವನು ಮಾಳ್ಪಂತೆ ಕೇಳೆನುತೆ ॥ ಹಲವುವಾತ್ಮನೆನ್ನ ಜನ್ಮ । ವಳಿಯ ಸುಕೃತದ ಫಲಗಳು
ಳ್ಳತೆ । ಲಲನೆ ಸೇರಲಿ ಸೇರಲೀತನ ಚರಣಸನ್ನಿಧಿಗೆ ॥ ೨೫ ॥ ಕಂಡು ಕಮಲಾಕ್ಷಿಯರು ಕೃಷ್ಣನ । ಖಂಡಸೌಭಾಗ್ಯೋದಧಿ
ಯ ಸರಿ । ಮಂಡಲದ ಮೂರ್ತಿಯನು ಮರೆದರು ಲೋಕವಿಭ್ರಮವ ॥ ಕಂಡವರು ಬಳ್ಳಿಕಿತರ ವಿಷಯವ । ಕಂಡರಾದರೆ ಕೊ
ರತೆಸೃಟಿಸಿದ । ಪುಂಡರೀಕಾಕ್ಷನ ನೆನೆನುತಿರ್ದುದು ಬುಧಸ್ತೋಮ ॥ ೨೬ ॥ ಎನುತ ನಗರನಿವಾಸಿಗಳು ವರ । ವನಿತೆಯರು ನಾನಾ
ದಿಗಂತದ । ಜನಗಳಾ ವೈವಾಹಿಕೋತ್ಸವದರ್ಶನಕೆ ನೆರೆದು ॥ ಅನಿಬರಾಶ್ರೀರಾಮಕೃಷ್ಣ । ನನಸರೋಜಸುಧಾಬ್ಧಿಯಲಿ
ಲೀಲ । ಜನಗಳೆಂದೆಂಬಾಮುತಿರ್ದುದು ಕೂಪೆಕನತವನೆ ॥ ೨೭ ॥ ಅತ್ತಲನ್ನೆಗ ಮೊಳಗಿದವು ನುಡಿ । ಹೊರ್ತಿಕರನಿಸ್ಸಾಳಭೇ
ರಿಗ । ಳೊತ್ತರಿಸಲಂಬಿಕೆಯ ನಾರಾಧಿಸಲು ಭೀಷ್ಮಕನ ॥ ಪುತ್ರಿ ಹೊರವಂಟಳು ಮಹಾದ್ವಿಜ । ಮತ್ತಕಾಶಿನಿಯರಲಿ ನಿರ್ಮಳ ।
ಚಿತ್ತದಲಿ ನೆನೆವುತ್ತ ಕೃಷ್ಣಪದಾಬ್ಜ ವಿಷ್ಟರವ ॥ ೨೮ ॥ ಕಿತ್ತ ಖಡುಗದ ಸ್ವೈದಿಡರು ಸುಭ । ಟೋತ್ತಮರು ಪರಿವಾರನಡೆದುದು ।
ನೇತ್ರ ಜರ್ಝರಪಾಣಿಗಳು ಕಂಚುಕಿಗಳೊಗ್ಗಿನಲಿ ॥ ಸುತ್ತಿಸುಳಿದರು ವರಾಂಗ್ರಿ ಕರವಿ । ಸ್ತ್ರೋತ್ರ ಮುರು ವರಸೂತಮಾಗಧ ।
ರೊತ್ತರಿಸಲುತ್ಸಾಹದಲಿ ಹೊರವಂಟರ ರಮಣಿಯು ॥ ೨೯ ॥ ಉರಗರಾಜಸ್ಪರ್ಣಾಸಹಸ್ರ । ಸ್ಫುರಿತ ಮಧ್ಯ ಮಹಾಮಣಿಯೊಡು ।
ರ್ಧರನು ಹಾವೇತಾಳ ಬಿಚರಸ್ತ್ರೀ ಮಹಾಮಣಿಯೊ ॥ ಘುರವ ಗಾಹ್ಯನು ಹಾಸಿಧಾರಾ । ಭರಿತ ಮಧುಪ್ರೋರಾಜಭಟಸಂ । ಜರಿಸ
ರೀತ ಮಹಾನಧುಪ್ರೊಯೆನುತಿರ್ದುದಖಿಳಜನ ॥ ೩೦ ॥ ಭರಿತಯಾಪವಮಧ್ಯನಿಕರ । ಸ್ಫುರಿತಲಕ್ಷ್ಮಿಯೊ ಪೃಥ್ವೀಹಸ್ತಾಂ । ತರಿತ
ಸುಧೆಯೋ ರಾಹುವದನನಿಗೀರ್ಣಚಂದ್ರಿಕೆಯೊ ॥ ಪರಿಗತಾವಿದ್ಯಾವಿಮೋಹಾ । ತುರನ ಧೃತಿಯೊ ಕ್ರೋಧಶೀಲನ । ಕರುಣ
ಶಾಂತಿಯೊ ಸುಭಟಗಣವೇಷ್ಟಿತ ಮಹಾಸತಿಯೊ ॥ ೩೧ ॥ ನೋಡಿದನರಪ್ರಿಗಳು ಮನವನು । ಮಾಡಿದವು ಮಹಿಳೆಯಲಿ ಮನಗ
ಳು । ಮೂಡಿಗೆಗಳಾದವು ಮಹಾಮದನಾಸ್ತ್ರಸಂತತಿಗೆ ॥ ಬಾಡಿದುದು ತನು ಮನದ ಬಳಿಯಲಿ । ಕೂಡೆ ನಿಶ್ಚೇಷ್ಟೆಯಲಿ ಮನೆಮಾ
ಳು । ಗಾಢತಿರ್ದುದು ತತ್ತುಹೃತ್ತಾಂತ ಸ್ವಪ್ನವಿಯಲಿ ॥ ೩೨ ॥ ಏಕೆ ಸುರಪತಿಗಕಟ ಗರ್ವ್ಯೋ । ದ್ರೇಕ ವೀಸತಿಯ ವಯವದ
ಲೆಂ । ದೇಕನೇಕಿ ಕಿಕಿ ಲೋಲವರೆ ಸುರಲೋಕವನಿತೆಯರು ॥ ಈ ಕಮಲಮುಖಿಯಿದ್ದಡೆಂದು ಪಿ । ನಾಕಿ ಸುಡುವನೆ ಶಿವಶಿವಾ
ಸ್ತ್ರರ । ನಾಕ್ರಮಿಸೆಂದೆನುತಲಿರ್ದುದು ಸಕಲಜನನಿವಹ ॥ ೩೩ ॥ ಈ ಸಕಲಪುರಜನ ಮಹಾಜನ । ವಾಸರೋರುಹಮುಖಿಯ
ರಾಪುನಿ । ಳಾಸ ನತಿ ಗಂಭೀರ ತೇಜೋಗುಣವಿಶೇಷವನು ॥ ವಾಸನಿಟಿಕಂಗಳಲಿ ಕಾವಮಾ । ವೇಶದಲಿ ಮನ ಮುಳುಗುತಿರಲಂ ।
ತಾಸುಭಟನಿಗ್ಗಿನಲಿ ಬಂದಳು ಗಿರಿಜೆ [illegible] ॥ ೩೪ ॥ ಕಾಲುನೊಗವನು ತೊಳೆದು ಸತಿಯರ । ಮೇಳದಲಿ ನಡೆತಂದು ಹೊ
ಕ್ಕಳು । ಲೀಲೆ ಲೋಚನೆ ದೇವತಾ ಮಂದಿರವ ತೊಲಗಿನಲಿ ॥ ಸೂಳಗಿವ ಕಹಳೆಗಳ ರವನಿ । ಸ್ಸಾರ ಭೇರೀ ಶಂಖ ರವದಿಗು । ಜಾ
ಲವ ಸಿತಿತಳತರಾರಾಧಿಸಿದಳಂಬಿಕೆಯ ॥ ೩೫ ॥ ಪೊಡಮಡಿ ಬಹರುಷದಲಿ ವಿಪ್ರರ । ಮಡದಿಯರು ಹರಗಿರಿಜೆಯರನು । ಲ್ಲಡಿ
ಗಳೆನವನ ಧೂಪನಾಗನು ವಿಹಿತಮಾರ್ಗದಲಿ ॥ ಇಡಿದ ಗಂಧಾಕ್ಷತೆಗಳಲಿ ಮಣಿ । ದೊಡಿಗೆ ಧೂಪಾರತಿಗಳೊಪ್ಪುವ । ಸೊಡರು
ಗಳ ನವರತ್ನನಿಕರಂಗಳಲಿ ತನುತವಗೆ ॥ ೩೬ ॥ ವಿನುತ ವಹವನ ಮಾಲ್ಯದಲಿ ಬಾ । ಗಿನಗಳಲಿ ಲವಣೇಕ್ಷುಫಲಸಾ । ವನ ಮಹಾ
ನನ ಭಕ್ಷ್ಯಭೋಜ್ಯಂಗಳಲಿ ಮಾ ಜಗದ ॥ ಜನನಿಯನು ತದ್ವಿಪ್ರಕಾಂತಾ । ಜನಗಳನು ಪೂಜಿಸಿದಳಂದಾ । ವನಿತೆಮಂಗಳಸೂ
ತ್ರ ಸಸನ ವಿಭೂಷಣಂಗಳಲಿ ॥ ೩೭ ॥ ಹರಸಿದರು ಕಾಂತೆಯರು ಕೃಷ್ಣಂ । ಗರಸಿಯಾಗೆಲೆ ತಾಯೆ ನೀನೆಂ । ದಿರದೆ ಕೊಟ್ಟರು ಶೇ
ಷವನು ಮಾಂಗಲ್ಯಾಕ್ಷತಾದಿಕನ ॥ ಸರಸಿಜಾಕ್ಷಿ ನೆಬಳ್ಳಿಕಪೇವಿಯು । ಚರಣದಲಿ ತಲೆವಾಗಿ ವರವಿ । ಪ್ರರಿಗೆ ಸತಿಯರಿಗೆರಗಿ ಹೊರವಂಟ
ಳು ಶಿವಾಲಯವ ॥ ೩೮ ॥ ಬಿಳಿಕಮಲನನ್ಯವನುಳಿದಾ । ಲಲನೆ ಹೊರವಂಟದರಸನಿಕರದ । ಮಲವಿರೋಧಿಶಚೀಗೃಹಂಗಳಿಗೊ
ಲಿದು ನಡೆತಂದು ॥ ನಳಿನಮುಖಿ ಕುಲದೇವತೆಗಳನು ನಲಿದು ಪೂಜಿಸಿ ಬೇಡಿದಳು ಮನ । ದೊಲವ ನೀವುದು ನೀವೆನುತ ಸದುಭಾ
ವಭಕ್ತಿಯಲಿ ॥ ೩೯ ॥ ಬೀಳುಕೊಂಡಳು ಸತಿಸಮಸ್ತರು । ರಾವಭಗಳ ಭಿನ್ನವಿಬಲಲಕ್ಷ್ಮೀ । ಲೋಲನನು ಭಾವಿಸುತ ಮನದ
ಲಿಚ್ಛಿಕ ಸುರದತಿಯ ॥ ಆಲಯವ ಹೊರವಂಟಳಂದಾ । ಬಾಲೆ ಕೃಷ್ಣನ ಪುರವನಿದ್ದೆಡೆ । ಗಾಲಿಸುತ ಸವಿಪ್ರೀತಿಯನಾಮಾಂಗವೀ

ಷ್ಟಸಂಧಿಯಲಿ ||೪೦|| ಮೊರೆಯುವುಡಿಘಾರದಲಿಬಡನಡು | ಬಳುಕೆಬಹಳನಿತಂಬಭಾರ | ಸ್ಖಲಿತನಡೆಯಲಿಮೃದುಳತರಚರಣಾರವಿಂದ
ದಲಿ || ಅಳುಕಿನಡೆವುತರತ್ನಮುದ್ರಿಕೆ | ಗಳಲಿಮೆರೆವಕರಾಗ್ರಧಾತ್ರೀ | ಫಲದಲೆಸೆಯಲುಕಾಂತೆಹೊರವಂಟಳುಸುರಾಲಯವ || ೪೧
ಮುಳುಗಿದುದುನಭಸತ್ತಿಗೆಯಸಾ | ಲೊಳಗೆಚಲಿಸುವಚಾಮರದಸಂ | ಕುಲದಲದ್ದುದುದೆಸೆಗಳೆಂಟರವಿವರವಾಕ್ಷಣಕೆ || ತಳ್ತಸ
ವ್ನಹದಲಿರಥವನು | ಸುಳಿಸಿದರುವಾವಾಕ್ಷಿಯಿದಿರಲಿ | ತಳುವವಮಾತದಿರೆನುತಮಾಹೂರ್ತಿಕರುಸಂದಣಿಸಿ || ೪೨ || ಬಂದಳೊ
ಯ್ಯನೆಚರಣಕಮಲ | ದ್ವಂದ್ವದಲಿನೂಪುರಗಳುಲಿಯಲು | ಮಂದಹಾಸೇಕ್ಷಣದಲೆಡೆಬಲವಂಕವನುನೋಡಿ || ಕೊಂದನೋವಿಧಿ
ಯೆನುತಮಾನಿನಿ | ಮುಂದೆಹಜ್ಜೆಯನಿಡಲುಶಂಕಿಸು | ತಂದುಮೃದುತರಗತಿಯಲೈದಿದಳಾರಥದಹೊರೆಗೆ || ೪೩ || ನಿಲುಕಿಕಾ
ಣದೆಕಲ್ಪಕುಜಕ | ವ್ವಳಿಪಲತೆಯೋತತ್ವಸುಖದಲಿ | ನಿಲವನೈದಲುನೆರೆಯದಾತ್ಮಜ್ಞಾನಸಂಪದವೋ || ಕಳವಳಿಸಿದಳುಕಮಲ
ಮುಖಿತ | ಳ್ಳಳಿಸಿಕಾಣದೆಕೃಷ್ಣಪದಯುಗ | ನಳಿನವನುನಸುಬೆಮರುವಂಗೋಪಾಂಗದಲಿತರಳೆ || ೪೪ || ಏರಿಮುದುವೆಯರ
ಥವನಂದಾ | ನೀರೆಯಿದ್ದಳುತನ್ನಮತಿಯನು | ಬೇರಿರಿಸಿಕೃಷ್ಣಾಂಘ್ರಿಕಮಲಧ್ಯಾನನಿಷ್ಠೆಯಲಿ || ತೋರುವೀಸಂಸಾರವಿಷಯ
ಕೆ | ಮಾರುವೋಗದಮನದವಿರತಿಯ | ಲಾರುರುಕ್ಷುವಿನಂತೆನಿಸ್ಪೃಹೆಯಾಗಿಚೈದ್ಯನಲಿ || ೪೫ || ಇರಲುಹಾಯ್ದನುಕೃಷ್ಣನಾ
ಕೆಯ | ಹೊರೆಗೆರಥವನುನೂಕಿಸೂಟಿಯ | ಲುರವಣಿಸಿನೃಪಭಟರಬಲುವೋಹರವನೊಡೆದುಳಿದು || ಸರಸಿಜಾಕ್ಷಿಯನೆತ್ತಿಕೊಂ
ಡ | ಬ್ಬರಣೆಮಸೆಗಲುತನ್ನರಥದೊಳ | ಗಿರಿಸಿದನುಸಂಸಾರಪತಿತರನೆತ್ತುವಂದದಲಿ || ೪೬ || ಎಲೆಲೆಕವಿಕವಿಯೆನುತಲಾಬಲ |
ಜಲಧಿನೂಕಿದುದೆಂಟುದಿಕ್ಕಿನ | ಲಿಳೆಗಧೀಶ್ವರನಾಜ್ಞೆಯಲಿಕರಿತುರಗರಥನಿಕರ || ತಳಿಸೆಕೃಷ್ಣನರಥವಪರಿವಂ | ಡಲಿಸಿನಿಮಿ
ಷಾರ್ಧಾರ್ಧಮಾತ್ರದ | ಲೊಳಗುಮಾಡಿದರಸ್ಥಿರಾಂತಃಕರಣರಂದದಲಿ || ೪೭ || ಅರದನನಿತುಚತುರ್ಬಲವನದ | ನರೆನಿಮಿ
ಷಮಾತ್ರದಲಿಬಲವನು | ಬೆರಸಿದನುಬಲಭದ್ರಮುಖ್ಯರನಿರಿಸಿಸಂಗರಕೆ || ಹರಿಣಲೋಚನೆಸಹಿತಹಾಯ್ದನು | ಕರಿಗಳನುಕೆಡೆ
ಯೊದೆದುನರಕೇ | ಸರಿಯುವೊಲುನಿತ್ಯಾತ್ಮಕೃಷ್ಣನುನಲಿದುನಿಜಪುರಕೆ || ... ... || ೪೮ ||

ಅಂತು ಸಂಧಿ ೫೯ಕ್ಕಂ ಪದನು ೨೮೦೫ಕ್ಕೆ ಮಂಗಳಮಸ್ತು

ಅರವತ್ತನೆಯ ಸಂಧಿ.

ರುಕ್ಮಿ ಯುದ್ಧ ಕಥೆ.

ಸೂಚನೆ || ಚಂಡವೀರನೃಪಾಲಕದಳೀ | ಖಂಡನೋಜಿತಬಹಳಬಲದೋ | ರ್ದಂಡದಲಿರುಕ್ಮಿಯನುಗೆ
ಲಿದನುರುಕುಮಿಣಿಯರಮಣ || ... ...

ಪದನು || ಅರಸಿಕೇಳಾಸಕಲಪೃಥ್ವೀ | ಶ್ವರರುಮಸಗಿದರಂತ್ಯಕಾಲದ | ಧರಧುರದದುರ್ವಾರಸಾಗರದಂತೆತವತವಗೆ |
ಉರಿಮೊಗದಕೆಮ್ಮೀಸೆಗಳತುದಿ | ವೆರಳುಗಳಬದ್ಧಭ್ರುಕುಟಿಭೀ | ಕರಭಟಾವಳಿಯೊಡನೆಗರ್ಜಿಸುತೇರಿದರುರಥವ || ೧ ||
ಕೊಂಡರಭಿಮಾನವನುಗೋಪರು | ಕಂಡಿರ್ಮ್ಮೆನೀವದನುಕೊಡಿರೈ | ಹೆಂಡಿರನುಬಳುವಳ್ಳಿಯನೆಲ್ಲರುಭೀಷ್ಮನಂದನೆಗೆ || ಗಂಡ
ನೊಬ್ಬನೆಕೃಷ್ಣನಧಿಕೋ | ದ್ದಂಡಸಾಹಸಿಯೆನುತಕೆದರಿದ | ಮಂಡೆಯಲಿಬೆಂಬತ್ತಿದರುಮೂದಲಿಸಿಮುರಹರನ || ೨ || ರಾ
ವುತರುರಥಗಳನುರಥಿಕರು | ಭಾವಿಸದೆಕುದುರೆಗಳನೇರಿದ | ರೋವುವಾಹನಕವಚಶಸ್ತ್ರಾಸ್ತ್ರಂಗಳನುಮರೆದು || ಜೀವವ
ನುಸೇದುವೆವುಕೃಷ್ಣನ | ದಾವಘನಬಿಡದಿರ್ದಡಾರಾ | ಜೀವಮುಖಿಯನುಕಾಣಬಹುದೆನುತೈದಿದರುಭಟರು || ೩ || ಅಬ್ಬರಿ
ಸಿನೃಪನಿವಹಕವಿದುದು | ಸರ್ಬದಳಭಾರದಲಿಪೆದಹತಿ | ಗರ್ಬಿತಳಮೇಲಾಯ್ತುನಲುಕೆಂಧೂಳಿದೆಸೆದೆಸೆಗೆ || ಹಬ್ಬಿದುದುಹರ
ಹರಯೆನುತಸು | ಪರ್ಬಜನಬೆರಗಾಗಲಾಶತ | ಪರ್ಬಧರನನುಜನನುಮುತ್ತಿದುದೆಂಟುದಿಕ್ಕಿನಲಿ || ೪ || ಬಂದಿರೇನಿಬ್ಬಣಿಗ
ರೇತಕೆ | ಮುಂದುವರಿವಿರಿಕೊಳ್ಳಿನುತ್ತೊಂ | ದೊಂದುಬಾಣದಲನಿಬರನುಕೆಡೆಯೆಚ್ಚುಪರಬಲವ || ಅಂಡಗೆಡಿಸಿದನಸುರರಿಪು
ನೀ | ಮುಂದೆನಡೆಸಂಗರಕೆತಾನಿಹೆ | ನೆಂದುಮೊಳಗುವಪರಬಲಕೆಮಾರಾಂತನಾರಾಮ || ೫ || ಕವಿದೆಸುವಪರಬಲದಬಾಣಾ |
ರ್ಣವದಲದ್ದುದುಯಾದವರಬಲ | ನಿವಹವದನೇನೆಂಬೆನೀಕ್ಷಿಸುತಾವಿಚರ್ಬಸುತೆ || ಅವಯವದಕಂಪದಲಿನಿಜಪರಿ | ಭವವನೀ
ಕ್ಷಿಸಿತನ್ನಮುಖಕಮ | ಲವನುನೋಡಲುನುಡಿದನಸುರಾರಾತಿಸತಿಯೊಡನೆ || ೬ || ಅಂಜಬೇಡೆಲೆಕಾಂತೆನಿನ್ನವ | ರಂಜಲರಿಪ
ರೆಶರನಿದಾಘದ | ಮಂಜಲಾಮಲವಹಿತರಾಯರವೋಹರವಿಡೆನುತ || ಕಂಜನಯನೆಯನಪ್ಪಿನಿಜಕರ | ಕಂಜದಲಿವ್ಯೆದಡವಿಭವ
ಭಯ | ಭಂಜನನುಬೋಳವಿಸಿದನುಮಾನಿನಿಯನಲವಿನಲಿ || ೭ || ಕಿರಿದೆನಿದರವಿಮಂಡಲವನಾ | ವರಿಸಿಕವಿವಮಪಾಭ್ರಮಂ
ಡಲ | ದಿರನತಳೆದುದುವೈರಿಬಲಹರಿರಥವನಾಕ್ರಮಿಸಿ || ಇಳದೆಬಿಡೆಬೀಸಿದುದುಗಡಸಂ | ಕರುಷಣೋದ್ಧವಸಾತ್ಯಕಿಪ್ರಮು | ಖರ

ಶರಾವಳಿತೀವ್ರಮಾರುತನೆಂಟುದೆಸೆಗಳಲಿ ॥ ೮ ॥ ಕುದುರೆಗಳುಶರಹತಿಗೆಕುಕ್ಕರಿಸಿದವುತೇರ್ಗಳುಧಟ್ಟುಗೆಡೆದವು । ರಜನಿಗಳ
ಕರಹರಿದುಬಿದ್ದುವುಪಾದಚಾರಿಗಳು ॥ ಉದುರಿದರುರಣದೊಳಗೆಕಡಿಖಂ । ಡದಲಿಪಲ್ಲಟವಾಯ್ತುಚತುರಂ । ಗದಲಿದಳದುಳಮಾದ
ಮಂಬುಗಳಾಯ್ದರೂತ್ತಮರ ॥ ೯ ॥ ಸೋಕುವುದುಪರಬಲಮಹಾಂಬುಧಿ । ನೂಕುವುದುಯಾದವಶರಾವಳಿ । ತೇಕಿದರುನೃಪವರ
ರುತಲೆಕೆಳಗಾಗಿಭಂಗದಲಿ ॥ ಘೋಕರಿಸಿದರುಕರುಳನೊಡಲೊಳ । ಗೇಕರಸವಾಯ್ತಸ್ತ್ರಹತಿಪರ । ಲೋಕಯಾತ್ರೆಗೆಯೋಚಿಸಿದ
ರಂದಾತ್ಮಸಂಬಳವ ॥ ೧೦ ॥ ಚೆಲ್ಲಿದರುನೃಪಕಟಕಜೋಧರು । ಬಿಲ್ಲಬಿಸುಟೋಡಿದರುಕೆಲರೆದೆ । ದಲ್ಲಣದಹೇಡಿಗಳುಹೊಕ್ಕರು
ಹಲಧರನಮರೆಯ ॥ ಕೊಲ್ಲದಿರಿನಿಮ್ಮವರೆನುತಸಿರಿ । ವಲ್ಲಭನಸಾರಿದರುಮಾಗಧ । ಸಾಲ್ವಮುಖ್ಯರುಹಾಯ್ದರಾಶಿಶುಪಾಲನಿದ್ದೆ
ಡೆಗೆ ॥ ೧೧ ॥ ಏಳುನಡೆನಿಜಪುರಕೆಸಮರೋ । ಕಾಲವಿದುಶುಭವಲ್ಲಧರೆಯಲಿ । ಬಾಲೆಯರುಸಮಗೆಸುಬೇಕೈಸುಂಟುಸಮ್ಮೊಡಲ ॥
ಕೋಲಕೋಳಾಹಳವನೋಡೆಂ । ಮೇಳಗೆಯುಭುಜಬಲವನಿದುಪಶು । ಪಾಲರಿಂಪರಿಭೂತವಾಯ್ತೆಂದರುಮಹೀಶ್ವರರು ॥
ಜಯಪರಾಭವಗಳಿಗೆಲಾಭ । ವ್ಯಯಗಳಿಗೆಸೇರದುದುಲೋಕ । ತ್ರಯವಿದೀಶ್ವರತಂತ್ರದಲಿದಿಟಬಲ್ಲನಾನಿದನು ॥ ನಯವಿದನೆ
ಗೋಪಾಲನೆನ್ನನು । ಜಯಿಸಿದನುಬಹುವಾರವಾತನ । ಜಯಿಸಿದೆನುತಾಬಳಿಕಲೆಂದನುಮಗಧಭೂಪಾಲ ॥ ೧೩ ॥ ಮರುಳೆತಾ
ಹದಿನೇಳುಸೋಲನು । ವರವಸೋತೆನುಕಾದಿಗೋಪಾ । ಲರನುಗೆಲಿದೆನುಕಡೆಗೆಹದಿನೆಂಟನೆಯಸಮರದಲಿ ॥ ಪರಿಭವಕೆಮನ
ಗುಂದೆನಾಹವ । ದುರುಜಯಕೆಹಾರೈಸುತಿಹುದೀ । ಶ್ವರನವಶದಲಿಲೋಕವೆಂದರಿದಣ್ಣಕೇಳೆಂದ ॥ ೧೪ ॥ ಭಂಗವಡೆಯುವೆನೋ
ಡುಮತ್ತೀ । ಗಂಗವಿಸಿಲೋಕೈಕವೀರರು । ಸಂಗರದಲಂತಲ್ಪಬಲರೆಂದೆನಿಪಗೋಪರಲಿ ॥ ಕಂಗೆಡದಿರೀಕಾಲವೇನಂ । ಮಂಗಿತ
ಕೆಬರೆಬಳಿಕಜಯಿಸುವ । ನಂಗನಾಚೋರರನುನೀನಿದಕಂಜಬೇಡೆಂದ ॥ ೧೫ ॥ ಎಂದುತಿಳುಹಲುಸಕಲಭೂಪರ । ವೃಂದಸೆ
ಹಿತ್ಯೈದಿದನುತನ್ನಯ । ಮಂದಿರಕೆಮದವಳಿಗನತ್ತಲುಹೋದದುಗುಡದಲಿ ॥ ಎಂದನಿತ್ತಲುರುಕ್ಮಿತಂಗಿಯ । ತಂದಡಲ್ಲದೆಪುರವ
ತಾಪೊಗೆ । ನೆಂದುರಾಯರಮುಂದೆಭಾಷೆಯಮಾಡಿಹೊರವಂಟ ॥ ೧೬ ॥ ದುಷ್ಟಮತಿತಾನಾರುದನುಜಘ । ರಟ್ಟನಾರೆಂಬುದ
ನುನೋಡದೆ । ಬಿಟ್ಟನಾನಿಜರಥವನಾಗೋವಿಂದನಭಿಮುಖಕೆ ॥ ಒಟ್ಟಯಲಿಸಮರ್ದೆಯನಸುರಘ । ರಟ್ಟನುತ್ತರಿಸುತ್ತಲಿರಲ
ಡ । ಗಟ್ಟಿದನುಹೋಗದಿರುಹೋಗದಿರೆಲವೊನಿಲ್ಲೆನುತ ॥ ೧೭ ॥ ಎಲವೆಲವೊಹೆಂಗಳ್ಳಹೋಗದಿ । ರೆಳವಿಗೊಡುಸಂಗರಕೆನಿ
ಜಭುಜ । ಬಲವತೋರಾತೋರುಜಿತಭೂಪಾಲಮಂಡಲದ ॥ ಬಲುಹನೆಮರೆಯದಿರೆಮ್ಮೊಡನೆಕೊಳು । ಗುಳಕೆಹಿಡಿಚಾಪವನು
ಬಾಣಾ । ವಳಿಗಳನುಮಾತಾಡುಮಾತಾಡೆನುತತೆಗೆದೆಚ್ಚ ॥ ೧೮ ॥ ಮೂರುಬಾಣದಲಸುರರಿಪುವನು । ಕೀರಿಖಳನುರುವಣಿಸಿ
ದಡೆನಗು । ತೇರಿಸಿದಚಾಪವನುಖಂಡಿಸಿಬಾಣವನುಕಡಿದು ॥ ಆರರಲಿರುಕ್ಮಿಯನುರಥವನು । ತೂರಲೆಚ್ಚನುತುರಗನಾಲ್ಕನು ।
ಹಾರಿಸಿದನಾಧ್ವಜವನೆಂಟರಲೊಂದುಬಾಣದಲಿ ॥ ೧೯ ॥ ಮತ್ತೆಕೊಂಡನುರುಕ್ಮಿಧನುವನು । ತೆತ್ತಿಸಿದನೈದಂಬಿನಲಿಪುರು । ಷೋ
ತ್ತಮನನಾಹವದಲಹುದೋವೀರಭಾಪೆನುತ ॥ ಕತ್ತರಿಸಿದನುಕೈಯಧನುವನು । ಮತ್ತೆಕೊಂಡನುಧನುವನವನದ । ನೆತ್ತಿಬಿಸು
ಟನುಕೃಷ್ಣನಧಿಕಾಪುರುಷದಲಿಧನುವ ॥ ೨೦ ॥ ಇಟ್ಟಯನುಸಬಳವನುಪರಿಘವ । ಪಟ್ಟಸವನಸಿಚರ್ಮಶೂಲೋ । ತ್ಕೃಷ್ಟ
ತೋಮರವೆಂಬಹಲವುಮಹಾಸ್ತ್ರಸಂಚಯವ ॥ ದುಷ್ಟಮತಿಕೈವೃತ್ತಿರಲುಕಡಿ । ದೊಟ್ಟಿದನುಮುರವೈರಿಸುಭಟನ । ಮುಷ್ಟಿ
ಯೊಳಗಿರಲನಿತುವನುಬೆರಗಾಗಲಖಿಳಜನ ॥ ೨೧ ॥ ಕೆಡಹಿದನುಸಾರಥಿಯತಲೆಯನು । ಕೊಡಹಿಬಿಸುಟನುತುರಗನಾಲ್ಕರ ।
ಗಡಣವನುಸತ್ತಿಗೆಯನಾಹೊಂದೇರನಾಧ್ವಜವ ॥ ಎಡಬಲದಪಟುಸುಭಟರನುಸೋಂ । ಕಡಿಸಿದನುನಿಮಿಷಾರ್ಧಮಾತ್ರದ ।
ಲತವಿಜಯನುಕಡಿಮಂದಲಿಬಯಲಾಯ್ತುರಣಭೂಮಿ ॥ ೨೨ ॥ ನಿಲ್ಲುನಿಲ್ಲೆಲೆಕೃಷ್ಣನೀನಹೆ । ಬಲ್ಲಿದನುಗೋವಳರಬಳಗ ।
ಕ್ಕೆಲ್ಲನೀನುತ್ತಮನಲಾತಪ್ಪೇನುಕನ್ನೊಡನೆ ॥ ಬಿಲ್ಲಹಿಡಿರಥವೇಕೆತನಗೀ । ಗೊಲ್ಲರೊಡನೆಯಸಮರವೆನುತರಿ । ಮಲ್ಲನಸಿಚರ್ಮ
ವನುಕೊಂಡನುಕೃಷ್ಣನಭಿಮುಖಕೆ ॥ ೨೩ ॥ ಸಂಗರಕೆನಿಲಲಾರದಿರ್ದಡೆ । ತಂಗಿಯನುಬಿಡುಸೋತೆನೆನೆಗೆಂ । ದಂಗುಲಿಯ
ಕುಡುಕೃಷ್ಣಕಾಲ್ಗೆರಗಿಮರೆಯೊಗಲು ॥ ಅಂಗರಕ್ಷೆಯಮಾಳ್ಪನಲ್ಲದ । ಡಂಗಚಾರಿಯೆಬರಲಿನಿನ್ನಸು । ವಿಂಗೆತಾನೇಕಾಲ
ನೆನುತ್ತೈತಂದನುರವಣಿಸಿ ॥ ೨೪ ॥ ಭಾವನಲ್ಲಾನೀನುದಿಟಸಂ । ಭಾವಿಸಲುಬರಲಾವುಪ್ರೌಢನವಡ । ಲಾವುದೈತಪ್ಪೆವಗೆಕಡಿವೆವುಬೆ
ರಳನೊಯ್ಬರಿಗೆ ॥ ಗಾವಿಲನೆಮರೆಹೊಗುವನಚ್ಚರ । ಭಾವನಿಗೆಸಹಜದಲಿನಿನಗೀ । ಕ್ಕಿವಿಡಂಬನವೇನುಕಹರಿಸುರಿಯಿಚ್ಚನಭಿಭ
ಟನ ॥ ೨೫ ॥ ಎಚ್ಚಡಹಿತನಸರಿಗೆಕಡಿತಲೆ । ನುಚ್ಚುನೂರೆನೆಹಾರಿದವುಮನ । ಕಚ್ಚರಿಯನೇನೆಂಬೆನಭ್ರದಲಮರರುಘೆಯನೆ
ಲು ॥ ಮೆಚ್ಚಿದೆನುತಾಡುಗಳನೋಡಿ । ಗಚ್ಚುಮುಷ್ಟಿಯುಬಲಿದುಹಾಯಿದ । ನಚ್ಯುತಂಗಿದಿರಾಗಿದಂಡಾದಂಡಿಗಸುಮಾದ ॥ ೨೬ ॥
ಘಡತೊಲಗುಹಸುಕೊಬ್ಬಿಸಿಂಹವ । ಹಿಡಿಯಬಂದುದೆಸಾರೆಲವೊಕುಲ । ನೆಡುಕಬಂಧುದ್ರೋಹಿಪಾತಕಿಯೆನುತಮುಂದಲೆಯ ॥
ಹಿಡಿದುಧರೆಗಡಗೆಡಹಿಕೊರಳಿಗೆ । ಖಡುಗವನುಹರಿಮೋಹತಿರಲಾ । ಮಡದಿರುಕ್ಮಿಣಿನಡುಗಿನುಡಿದಳುಕಂಡುಭೀತಿಯಲಿ ॥ ೨೭ ॥
ಕೆಟ್ಟನಂಣನವಧೆನಿರರ್ಥಕೆ । ಮುಟ್ಟದಿರುದೇತನಗೆಕಾಣುತ । ದೃಷ್ಟಿಪಥದಲಿಕೊಲುವುದನುಸೈರಿಸದಡಕಟೆನುತ ॥ ಬಿಟ್ಟಮಂಡೆ

ಯಲಬಳಲಿಮಿನೆಕಂ । ಗೆಟ್ಟುಕೃಷ್ಣಪದಾಬ್ಜಯುಗಳದ । ವಿಷ್ಟರದಲೆರಗಿದಳುಬಾಯರೆಳ್ದಳುನಿಮಿಷದಲಿ ॥ ೨೮ ॥ ದೇವರಷ್ಟಿ
ಸುರಕ್ಷಿಸವನತ । ದೇವರಕ್ಷಿಸುಕೊಲುನೆಯೆಂತ್ಯೆ । ಭಾವನನುನಿಜಯೋಗಮಾಯಾಮೋಹಿತಾತ್ಮನಸು ॥ ಕೋವಿದರಿಗರಿದರಿ
ವಡೆಂತ್ಯೆ । ಸಾವುದನುತಾಕಾಂಬೆನೆಂಣಿಸ । ಜೀವದಾನವನೀವುದೆಂದಳುಕಾಂತೆಕಳವಳಿಸಿ ॥ ೨೯ ॥ ನಿನಗಿದಿರೆಹುಲುಮನುಜ
ಗಿನುಜರು । ನೆನೆದಜಸುರರುದ್ರಕೋಟಿಗ । ಳನಿಮಿತ್ತೋರ್ವವುಮುಗುಳಡಗುವುದುನಿನ್ನಪೇಕ್ಷೆಯಲಿ ॥ ವನಿತೆತಾನೆಂತರಿವೆ
ನೀನಿ । ನ್ನನುಪಮಿತಮಾಹಾತ್ಮ್ಯವನುಕೊಡು । ತನಗೆಕುಹಕಿನ್ನಪಾಧಮನೆಂದಳಲಿದಳುತರಳೆ ॥ ೩೦ ॥ ಎಂದುನಿಜಚರಣಾ
ರವಿಂದ । ದ್ವಂದ್ವದಲಿತಲೆವಾಗಿನಡುಗು । ತ್ತಿಂದುಮುಖಿಕಂಬನಿಯಕಡಲಲಿಮುಳುಗಿರಲುಕಂಡು ॥ ಮಂದಹಾಸದಲಬಳೆಯನು
ಗೋ । ವಿಂದನಪ್ಪುತ್ತಾನನದಜಲ । ಬಿಂದುಗಳನೊರಸಿದನುಬೋಳೈಸಿದನುಭಾಮಿನಿಯ ॥ ೩೧ ॥ ಕೊಟ್ಟನಂಗನೆಗಭಯವ
ನುಕ್ಕೆ । ಮುಟ್ಟಿಕೊಲ್ಲೆನುಕೊಲ್ಲೆನೆನುತನೆ । ದುಷ್ಟಮರ್ದನನಧಿಕಕೋಪಾಟೋಪದಲಿಜಡಿದು ॥ ಕಟ್ಟಿದನುಹೆಡಗೈಯಿಯನೆ
ಲವೋ । ದುಷ್ಟಕೋಗೆನುತವನನುಡಿಯನು । ಮುಟ್ಟಿಸಿದನಸಿಧಾರೆಯಲಿಮುನಿವಂದಿತನುಮುನಿದು ॥ ೩೨ ॥ ಬಂದನಾಸನು
ಯದಲಿರಾಯರ । ವೃಂದವನುನೆರೆಗೆಲಿದುಯಾದವ । ವೃಂದದೊಡನಾಹಲಧರನುಹರಿರಮೆಯರಿದ್ದೆಡೆಗೆ ॥ ಕಂದಿದಧರದಕಂಣಹ
ನಿಗಳ । ಕುಂದಿದಾನನಕಾಂತಿಗಳತರಿ । ಸಂದತಲೆನವಿರುಗಳರುಕ್ಮಿನೃಪಾಲನನುಕಂಡ ॥ ೩೩ ॥ ಬಿಟ್ಟನಾತನಹೆಡಗುಡಿಯುಬಲು ।
ಗಟ್ಟನಕಟಕಟಕಟವಮಾಡಿದೆ । ಕಷ್ಟವನುಕಡುಮೂರ್ಖತನದಲಿಕೃಷ್ಣನೀನಿದನು ॥ ಮೆಟ್ಟಿಕೊಯಿಮರೆತಲೆಯನಂಗನೆ । ಗಟ್ಟಿದೇ
ತಕೆತಾಪವೆನುತಾ । ಮುಷ್ಕರಾರಿಮನೋನುರಾಗದಲೆಂದನನುನಯದ ॥ ೩೪ ॥ ಉಮ್ಮಳಸದಿರುಪೂರ್ವಕೃತದು । ಷ್ಕರ್ಮಫ
ಲದಲಿದುಃಖಕೃತಸ । ತ್ಕರ್ಮಫಲದಲಿಸೌಖ್ಯವಿಂತಿದುನಿಯತಜೀವರಿಗೆ ॥ ದಾರ್ಮನಸ್ಯವಿದೇಕೆನೀನಿರ । ಹಮ್ಮಮಾತ್ರೆಯಲಿ
ನೋಡುಬರಿದೇ । ಯಮ್ಮಲಾಚರಿಸದಿರಸೊಯೆಯನೆಂದನಾರಾಮ ॥ ೩೫ ॥ ತಾಯೆಚಿಂತಿಸಬೇಡತ್ರೋರ್ಪುದು । ಮಾಯೆಯಿ
ದುಸಹಜಾತಬಂಧುಸ । ಹಾಯಮೆಂಬೀಭೇದಭಿನ್ನಭ್ರಾಂತಿಬುದ್ಧಿಯಲಿ ॥ ನೋಯಿಸದಿರಾತ್ಮನನುಮರವೆಗೆ । ದಾಯಿಗನುತಾನಾ
ಗಲಿವುನಿ । ದಾರ್ಯದಲಿಸಂಸಾರವೆನಿಸಿಹನಾತ್ಮನಿವನೆಂದ ॥ ೩೬ ॥ ಒಬ್ಬನೇಪರಮಾತ್ಮನಖಿಳದೊ । ಳೊಬ್ಬನೇಜೀವಾತ್ಮನೆನಿಸಿ
ಹ । ನೊಬ್ಬನೇಮೃತಜಾತನಾದಂತಿಹನುಮೂಢರಿಗೆ ॥ ಒಬ್ಬನೇಕನಸಿನಲಿತನ್ನನು । ಸರ್ವವಿಧದಲಿಕಾಂಬಪೋಲುಯಿಂ । ತೊಬ್ಬ
ನಲಿತ್ರೋರ್ವವುಚರಾಚರಜೀವಚಯವೆಂದ ॥ ೩೭ ॥ ಹಲವುಪರಿಯಲಿತತ್ತ್ವವಿದ್ಯೆಯ । ನೊಲಿದುಬೋಧಿಸಿರುಕ್ಮಿಣಿಯಮನ ।
ದಳಲಮಾಣಿಸಿಸಂತವಿಸಲಾರುಕ್ಮಿದುಗುಡದಲಿ ॥ ತ್ರೊಲಗಿದನುತನುಗುಂದಿಕುಂಡಿನ । ನಿಳಯವನುಹೊಗದಿರ್ದನಿತ್ತಲು । ನೆಲೆ
ಗೊಳಿಸಿನೆರೆಭೋಜಕಟಕವದೆಂಬಪುರವರವ ॥ ೩೮ ॥ ಪುಂಡರೀಕಾಕ್ಷನನುಕೊಲ್ಲದೆ । ಕೊಂಡುಬಾರದೆತಂಗಿಯನುತಾ । ಕುಂ
ಡಿನವಹೊಗೆನೆಂದುಭಾಷೆಯಮಾಡಿನೃಪರೊಡನೆ ॥ ಭಂಡನದ[illegible]ಸಲುನೆರೆಯದೆ । ಮಂಡೆಯನುತಡವೃತ್ತಕಳವಳ । ಗೊಂಡು
ಭೋಜಕಟಾಖ್ಯಪುರದೊಳಗಿರ್ದನಾಭೂಪ ॥ ೩೯ ॥ ಇತ್ತಲಸುರಾರಾತಿರಾಯರ । ಮೊತ್ತವನುಮಾನಚ್ಯುತಿಗೆಯ್ದಿ । ಪರ್ತಿಸು
ತಕೆಮಲಾಕ್ಷಿರುಕ್ಮಿಣಿಸಹಿತನಲವಿನಲಿ ॥ ಉತ್ತರಿಸಿನರ್ಮದೆಯನಾಪುರು । ಷೋತ್ತಮನುನಿಜಬಲಸಹಿತ । ವಾದ್ಯೋತ್ಕರದಬಹ
ಳೋತ್ಸವದಲ್ಯೆದಿದನುನಿಜಪುರವ ॥ ೪೦ ॥ ಕೇಳಿಕೃಷ್ಣಾಗಮನವನುನೃಪ । ಜಾಲವಿಜಯಾವಾಪ್ತಿಕನ್ಯಾ । ಮಾಳಿರತ್ನದಲಾಭ

ರುಕ್ಮಿಣೀವಿವಾಹ.

ವನುವಸುದೇವಮೊದಲಾದ ॥ ಪೀಳಿಗೆಯಯದುವೃದ್ಧರೆದ್ದುದು । ಹೇಳಲೇನುತ್ಸವದಸಮ್ಮದ । ದೇಳಿಗೆಯಲಂದಖಿಳಪುರಜನ
ಸಹಿತವಿಭವದಲಿ ॥ ೪೧ ॥ ಕಳಸಕನ್ನಡಿಗಳಲಿಬಹುಮಂ । ಗಳಸುವಾದ್ಯಂಗಳಲಿಬಹುವಿಧ । ಲಲನೆಯರಶೋಭನಮಹಾಸಂಗೀ
ತಸೂಕ್ತಿಯಲಿ ॥ ಉಲಿವಮಾಗಧವಂದಿಸೂತರ । ಕಳಕಳದಲಂದಖಿಳಪುರಜನ । ಜಲಧಿಬರಲಿದಿರಾಗಿಕಾಣಿಸಿಕೊಂಡನುಚಿತ
ದಲಿ ॥ ೪೨ ॥ ಹೊಕ್ಕನಸುರಾರಾತಿಪುರವನು । ಮಿಕ್ಕುಮೀರುವಜನದಹರುಷದ । ತೆಕ್ಕೆಯಲಿಬಲಭದ್ರಸಾತ್ಯಕಿಯುದ್ಧವಾದಿಗ
ಳು ॥ ಇಕ್ಕೆಲದಮೇಳದಲಿಹಯರಥ । ದಿಕ್ಕರಿಗಳೊಕೊತ್ತೆಯಲಿಪುರ । ಪೊಕ್ಕುವೃತ್ಸವದೇಳಿಗೆಯಜನನಿನಹದೊಸಗೆಯಲಿ ॥ ೪೩ ॥
ಕರೆಸಿದರುಸೃಂಜಯವಿದರ್ಭ । ಶ್ವರರಸಾಕಾಭೋಜಕಾಶೀ । ಶ್ವರರಸಾಪ್ತನೃಪಾಲವರ್ಗವನಖಿಳಬಾಂಧವರ ॥ ಪರಮಹ
ರುಷದಲಾಮುಕುಂದನ । ಪರಿಣಯಕೆಪರುಠಪವನಾವಿ । ಸ್ತರಿಸಿದನುವಸುದೇವನಖಿಳಾಮಾತ್ಯಜನಸಹಿತ ॥ ೪೪ ॥ ಆರುಬಣ್ಣಿ
ಸಬಹುದುಮುದಜಲ । ಧಾರೆಯಲಿಕೆಸರಾಯ್ತುನೆಲನಾ । ಭೂರಿಭೂಪರಗಜಘಟಾವಳಿಗಳಮಹೋತ್ಸವದ ॥ ಭೇರಿಗಳಬಹುಶಂ
ಖಪಟಹಮ । ಜಾರವದಲಂದಖಿಳಬಾಂಧವ । ಭೂರಮಣರ್ಮೈತಂದುಕಂಡುದುಕಾಣಿಕೆಯನಿತ್ತು ॥ ೪೫ ॥ ವರನಲಾಸಾಕ್ಷಾತ್
ವಿಶ್ವಂ । ಭರನುಮದುವೆಲಕ್ಷ್ಮಿರುಬ್ಬಿಣಿ । ಗರುವಿರಿಂಚಿಭವೇಂದ್ರಮುಖ್ಯಾಮರರುಭೂವರರು ॥ ಸಿರಿಯನದನೇನೆಂಬೆನಲ್ಲಿ
ಯ । ಪುರಜನದಪರಿಜನದಹರುಷದ । ಪರಮವಿಭವದವಿಪುಳತೆಯನದನೆಂದನಾಮುನಿಪ ॥ ೪೬ ॥ ವರವಿವಾಹವಿಧಾನವನುವಿ ।
ಸ್ತರಿಸಿದರುವರರುಷಿಗಳಂದಾ । ವರವಧುಗಳೆಂದೆನಿಪಹರಿರಮೆಯುರಿಗೆಮನವೊಲಿದು ॥ ವರಚತುರ್ಥಿಯನಾಗವಲಿವಿ । ಸ್ತರಣವೆ

ಸೆಱಲುಸಭ್ಯರನುಸತು । ಕರಿಸಿದನುವಸುದೇವನಧಿಕಮನೋನುರಾಗದಲಿ ॥೪೭॥ ದಣಿದುದಗಣಿತವಿಪ್ರಕುಲಚಯ । ರಣರು
ವಂದಿವ್ರಾತಬಹುವಿಧ । ಮಣಿಕನಕಭೂಷಣವಸನಗೋಭೂಮಿದಾನದಲಿ ॥ ತೃಣವೊದಲುಚತುರಾಸ್ಯಕಡೆಯಾದ । ಲೆಣಿಸಲೇ
ಕೋಲಾಡಿದರುಮ । ನ್ನಣೆಯುಮಧುರೋಕ್ತಿಯುಮಹಾವಿಭವದಲಿಮೂಲೋಕ ॥೪೮॥ ನೆರೆದನಾರೀಪುರುಷಜನವಾ । ವರ
ವಧುಗಳನುನೋಡಿದಣಿದರು । ಮರಳುದಲೆಯನುಕಂಗಳಿಗೆವಿಷಯಾಂತರಂಗಳಿಗೆ ॥ ನೆರೆಸಮಸ್ತೇಂದ್ರಿಯದಸೌಖ್ಯದ । ಸರ
ಣಿಯಾದವುಕಂಗಳೆಂತುಟೊ । ಪರಮಮಂಗಳಮೂರ್ತಿಯಹಗೋವಿಂದನೀಧರೆಗೆ ॥೪೯॥ ಜನ್ಮಫಲಸೇರಿದವುಕಂಗಳು ।
ಜನ್ಮದಲಿಜೀವರಿಗೆನೆರೆನಿರ । ಹಮ್ಮಮರುಸೇರಿದರುಸೋಹಮ್ಮಮತೆಗಳಗತಿಗೆ ॥ ಸಮ್ಮತವಿದಾಯ್ತಖಿಳಲೋಕದ । ಕರ್ಮನಿ
ರ್ಮೂಲನಕೆನಿಜಗುಣ । ರಮ್ಯತರನಿತ್ಯಾತ್ಮಕೃಷ್ಣವಿವಾಹವಿಸ್ತಾರ ॥ ... ... ॥೫೦॥

೬೦ಕೆ ಸಂಧಿ ೬೦ಕ್ಕಂ ಪದನು ೨೮೭೭ಕ್ಕಂ ಮಂಗಳಮಸ್ತು

ಅರವತ್ತೊಂದನೆಯ ಸಂಧಿ.

ಸೂ ॥ ಶಂಕರನನಾಶ್ರಿತಜನಾಘಘ । ಯಂಕರನನರ್ಚಿಸಲುಶ್ರೀವ । ತ್ಸಾಂಕನಂದ್ಯೈತರುತಬಂದನು
ಬದರಿಕಾಶ್ರಮಕೆ ॥ ... ...

ಪದನು ॥ ಒಂದುದಿನನಿಜಶಯನದಲಿಗೋ । ವಿಂದನಿರಲೇಕಾಂತದಲಿಪೂ । ರ್ಣೇಂದುಮುಖಿಬೇಡಿದಳುಪುತ್ರನನಾವಿ
ದರ್ಭಸುತೆ ॥ ಇಂದುಧರನಲಲಾಟಶಿಖಿಯಲಿ । ಬೆಂದಕಾಮನಬೇಡಲಾತಹೆ । ನೆಂದುಹರಿಮರುದಿವಸಕರೆಸಿದನಾಪ್ತಬಾಂಧವರ ॥
ಕರೆಸಿದನುವಸುದೇವನನುಸಂ । ಕರುಷಣೋದ್ಧವಸಾತ್ಯಕಿಪ್ರಮು । ಖರನುಕೃತವರ್ಮೋಗ್ರಸೇನನೃಪಾಲಮುಖ್ಯರನು ॥ ಪುರದ
ರಕ್ಷೆಗೆನೀವಿಹುದುತಾ । ನುರಗಭೂಷಣನಂಘ್ರಿಗಳನುಪ । ಚರಿಸಿಬಹೆನೆಂದಸುರರಿಪುಹೇಳಿದನುನಿಜಮತವ ॥೨॥ ಪುರವ
ಹೊರವಂಟಖಿಳಬಾಂಧವ । ಪರಿಜನವನಿಲಿಸುತ್ತಸೆನೆದನು । ಗರುಡನನುತತ್ಪುರದಬಾಹ್ಯೋಪವನಸೀಮೆಯಲಿ ॥ ನೆರವಿನೋ
ಡುತ್ತಿರಲುನಿಮಿಷಾಂ । ತರಕೆಬಂದನುಬಾಲಸೂರ್ಯೋ । ತ್ಕರವನೇಳಿಸುವಂಗಕಾಂತಿಯಲಂದುಖಗರಾಜ ॥೩॥ ಬಂದುನಿಜ
ದಾತಾರನಂಘ್ರಿ । ದ್ವಂದ್ವದಲಿತಲೆವಾಗಿವಿನತಾ । ನಂದನನುವಿನಯದಲಿಮುಕುಳಿತಕರಸರೋಜದಲಿ ॥ ನಿಂದುಬಿನ್ನಹಮಾಡಿ
ದನುತಾ । ಬಂದೆನಾವುದುಕಾರ್ಯವದನೆನ । ಗಿಂದುಬೆಸಸೂದೊಡೆಯರೆಂದನುಭಾವಭಕುತಿಯಲಿ ॥೪॥ ಎನಲುನಗುತಸುರಾರಿ
ವಿನತಾ । ತನಯನನುತಲೆಗಡವಿಕರುಣಾ । ವನಧಿನುಡಿದನುಮಗನೆರಜತಾಚಲನಿವಾಸಿಯನು ॥ ಅನುಪಮನಕಾಂಬರ್ಥಿಯ
ಲಿನಿ । ನ್ನನುನೆನೆದೆನೇಳೆನುತಹೆಗಲಲಿ । ದನುಜರಿಪುಕುಳ್ಳಿರಲುಹಾಯ್ದನುಗಗನಮಂಡಲಕೆ ॥೫॥ ಅತ್ತಲಾದ್ವಾರಕಿಯಜನ
ವೊದ । ವೆತ್ತಿನೋಡುತ್ತಿರಲುವಿಸ್ಮಯ । ಚಿತ್ತದಲಿವಿಹಗೇಂದ್ರನಿತ್ತಲುಗಗನಮಾರ್ಗದಲಿ ॥ ಉತ್ತರಿಸಿನಡದನುಸಮಸ್ತಸು ।
ರೋತ್ತಮರುಮುನಿವರರುಗಂಧ । ರ್ವೋತ್ತಮರುಪರಿವರಿಸಿಬರೆಸುರಸೂತಮಾಗಧರು ॥೬॥ ನೃತ್ಯಗೀತಂಗಳಲಿವಿವಿಧ ।
ಸ್ತೋತ್ರಪಾಠಂಗಳಲಿಚಾಮರ । ಸತ್ತಿಗೆಗಳಲಿಯಧಿಕನಿಜವಿಭವೋಪಚಾರದಲಿ ॥ ಸುತ್ತಿಸುರರೋಲಗಿಸುತ್ತೈತರ । ಲುತ್ತಮ
ಶ್ಲೋಕನನುವರವಿಹ । ಗೋತ್ತಮನುವಹಿಸಿದನುಗಗನಾಂಗಣದಮಾರ್ಗದಲಿ ॥೭॥ ಇಳಿದನನ್ನೆಗಸೂರ್ಯನಸ್ತಾ । ಚಲಕೆಗರು
ಡನಕಾಂತಿಗಳುಬೆಂ । ಬಲಕೆಬಾರದೆಮಾಣದೆನೆಲರುಣಚ್ಛವಿಗಳೆಸೆಯೆ ॥ ಬಳಿಕಭುವನಾನಂದನಿಧಿಮುನ । ವೊಲಿದುಸಾಯಂಕಾಲ
ಸಮಯದ । ಲಿಳಿದುಗರುಡನನಂದುಹೊಕ್ಕನುಬದರಿಕಾಶ್ರಮಕೆ ॥೮॥ ಅಮಹರ್ಷಿಗಳಧಿಕತೀವ್ರತ । ಪೋಮಹೋಗ್ರವ್ರಾತ
ನಿರಶನ । ಕ್ಷಮಗಾತ್ರರುಬಹುವಿಧದವನ್ಯೋಪಜೀವಿಗಳು ॥ ಅಮುಕುಂದನನೋಜ್ಞಪದಯುಗ । ತಾಮರಸದರುಶನದಲಾ
ಯ್ತು । ದ್ಧಾಮಪೂರ್ಣಮನೋರಥರುಬದರೀನಿವಾಸಿಗಳು ॥೯॥ ಇದಿರುಗೊಂಡರ್ಘ್ಯಾದಿಘನಸಂ । ಪದದಲಾಮುನಿನಿಕರ
ಘನಹರು । ಷದಲಿಪೂಜಿಸಿದರುಮನೋತ್ಸವವೆಸೆಯಲಚ್ಯುತನ ॥ ಪದುಮನಾಭನುಪರಮಖುಷಿಸಂ । ಗದಲಿಸುಖದಿಂದಿರಲಿರಲು

ಘಂಟಾಕರ್ಣನ ಕಥೆ.

ನೂ । ಕಿದುದುಕತ್ತಲೆಕಂಗಳಿಗೆವಿಘ್ನಂಗಳಂದದಲಿ ॥೧೦॥ ಅನ್ನೆಗಾಸಮಯದಲಿಘಂಟಾ । ಕರ್ಣರೆಂಬವರಧಿಕಸತ್ವರು । ಪನ್ನ
ಗೇಂದ್ರವಿಭೂಷಣನಪಾರ್ಶ್ವದಲೊಳುತ್ತಮರು ॥ ಉನ್ನತಾಮಳಕೀರ್ತಿಕೃಷ್ಣನ । ಸನ್ನಿಧಿಗೆನಡೆತಂದರಾಶ್ರಮ । ಸನ್ನಿವೇಶನ
ರಂಗಳಲಿವಿಹರಿಸುತಭುವನದಲಿ ॥೧೧॥ ಅವರಬರವಿನಲಾಯ್ತುಘನವಿ । ಘ್ನವೃತದಾಶ್ರಮವಾಸಿಗಳಖಗ । ಮೃಗನಿವಹಕೋ
ಲಂತೆಮೃಗಯಾವ್ಯಸನಲೋಲುಪರು ॥ ಕವಿಸಿದರುನಾಯ್ಗಳನುಮುನಿಪುಂ । ಗವರದಳನಂದಿರಗಳಲಿಸಾ । ವಿರಂಗಕುಳದರಾದ್ರದ
ಘಷಾವಣೆಫಲಿಸಿತಾಶ್ರಮವ ॥೧೨॥ ಎಲವೊಬಿಡುಬಿಡುನಾಯ್ಗಳನುತೆಗೆ । ಬಲೆಗಳನುಬಾಣಂಗಳಲಿಮೃಗ । ಕುಲವಕೆಡೆಯೆಸು
ಬೇಳಹೊಯಿಹಂದಿಗಳನಡಹಾಯ್ದು ॥ ಹುಲಿಯನೆಸುಕಾಡ್ಕೋಣನಸುವನು ॥ ತೊಲಗಿಸೋಕೋಹಿನಲೆನುತಕಳ । ಕಳದ

ಮಿದಲ್ಲಲ್ಲಿಮೊಸುಕಿತುಬಹಳಭೂತಗಣ ॥೧೩॥ ಬೆಳಗಿದವ್ರುವನದೊಳಗೆದೀವಿಗೆ । ಗಳುದಿಗಂತವನಳ್ಳಿರಿವಹೊಗೆ । ಗಳಲಿಮೆಳೆ
ಗೊಂಡೊಂಡೆನಲುಶತಲಕ್ಷಸಂಖ್ಯೆಯಲಿ ॥ ಕಳವಳಿಸಿಮೃಗನಿಕರವಾಮುನಿ । ಕುಲದಪುಣ್ಯಾಶ್ರಮದಮನೆಗಳ । ತುಳಿದುಹೊಕ್ಕವು
ಹುಂಡುಹುಂಡುಗಳಾಗಿಭೀತಿಯಲಿ ॥೧೪॥ ಅಟ್ಟಿತುಡುಕುವನಾಯ್ಗಳಲಿಬೆ । ನ್ನಟ್ಟಿತುಡುಕಿಸುವಾಮರುಳ್ಗಳ । ಥಟ್ಟುಗಳತನಿ
ರೌದ್ರಘನಗರ್ಜನೆರವಂಗಳಲಿ ॥ ಅಟ್ಟುಳಿಗೆಸೈರಿಸದೆಋಷಿಗಳು । ಕೆಟ್ಟೆವೆನುತೈತಂದುದನುಜಘ । ರಟ್ಟನನುಮರೆಯೊಕ್ಕುದೇನೆಂ
ಬೆನುಮಹಾದ್ಭುತವ ॥೧೫॥ ಬಿಸಿವಸ್ತ್ರಗಳನೆತ್ತರಿನನಾಯಿ । ಮುಸುಡುಗಳಸೆರೆಯೆದ್ದುಬತ್ತಿದ । ಬಸುರಹೊರಡಿನಬೆನ್ನನೀ
ಡಿದಕಿತ್ತನಾಲಗೆಯ ॥ ಉಸುರಹೊಗೆಗಳಕಂಣಕುಳಿಗಳ । ನೊಸಲಡೋರಿಯಜೋಲ್ವವ್ಯಗಳ । ವಿಷಮನಯನನಪಡೆಪರಾ
ಭವಿಸಿತುಮಹಾವನವ ॥೧೬॥ ಬಿಗಿದಬಿಲ್ಲಿನಬೆನ್ನಬತ್ತಳಿ । ಕೆಗಳಕಿವಿಗಡಿಗುಗಿದಬಾಣದ । ಜಗಬೆದರಲುಘ್ಘಡಿಪಹಾಹಾಹೀ
ಹಿಗಳರವದ ॥ ಮೃಗಗಣದಮೃತ್ಯುಗಳುಕಪಿದುದು । ಝಗಝಗಿಪದೀವಿಗೆಯಬೆಳಗಿನ । ಲಗಡಿಪಿದರಡವಿಯನುಬರಿಕೈದರು
ಮಹಾವನವ ॥೧೭॥ ಶ್ರೀಯುವಲ್ಲಭನಿಂತಿದುವೆನಾ । ರಾಯಣನುನರಸಿಂಹಹರಿಯುರು । ಗಾಯನಿದೆಕೇಶವನುರುಕ್ರಮವಿಷ್ಣು
ವೆಂದೆನುತ ॥ ನಾಯಬಿಡುವರುಮೃಗಕೆಹೆಸರಿನ । ಸಾಯಕಂಗಳನದನುಕೇಳುತ । ಮಾಯೆಯರಸನುಮುಗುಳನಗೆಯಲಿದೇನೆ
ಸುತ್ತಿರ್ದ ॥೧೮॥ ಎನ್ನಹೆಸರಿನನಾಯಿಗ್ಳಾರಿಗೆ । ಯನ್ನಹೆಸರಂಬುಗಳಹರಹರ । ವರ್ಣಿಸುವೆವ್ರೋಲಿದೆಮದೀಯಗುಣಾಭಿಮಾ
ನವನು ॥ ಕರ್ಣಕರ್ಕಶನುಡಿಯಿದೆತ್ತಲು । ತನ್ನಸಂಸ್ತುತಿಮಾಳ್ಪದೆತ್ತಲು । ಧನ್ಯರಾರೋಯೆನುತವಿಸ್ಮಿತನಾದನಸುರಾರಿ ॥೧೯॥
ಎನುತಿರಲುನಡೆತಂದರಿಬ್ಬರು । ದನುಜಹರನಿದ್ದೆಡೆಗೆವಿಕಟಾ । ನನರುದೀರ್ಘಶರೀರಿಗಳುತ್ರಿಭುವನಭಯಂಕರರು ॥ ಘನತರ
ಧ್ವಾಂತದಲಿಹಾಹಾ । ಯೆನುತಹೀಹೀಯೆನುತತಮ್ಮೊಳಿ । ದನುವಿನಲಿಚೇಷ್ಟಿಸುವಘಂಟಾಕರ್ಣಸಂಜ್ಞಕರು ॥೨೦॥ ಹೊರ
ಳುವರುವನವನದಲಾರ್ದಂ । ಬರಕೆಹಾರುವರಿರದೆಬೀಳುವ । ರರವರಾಗಿಡಮರನೆನಂಡಲವ್ರುತ್ತತೋಳ್ಗಳಲಿ ॥ ಹರಿವರತ್ತಿತ್ತ
ಲುಮಹಾವೀ । ರರುಮೆಲುವರಾಮಾಂಸವನುಕುಡಿ । ದರುಣಜಲವನುತ್ತೇಗುವರುಗಹಗಹಿಸುವರುನಗುತ ॥೨೧॥ ಸುತ್ತಿಸ
ರ್ಪಂಗದಲಿಕರುಳನು । ಮೆತ್ತಿಮೃಗಮಾಂಸವನುಬಿಸಿನೊರೆ । ನೆತ್ತರಿನಸರ್ವಾವಯವದಾಸಾರಧಾರೆಯಲಿ ॥ ಮತ್ತರವರೈತಂ
ದುಮುನಿಗಳ । ನೆತ್ತಿಬಿಸುಟರುಹೋಗಿನೀವಾ । ರೆತ್ತಣವರೇಕಿಲ್ಲಿಕಾರಿಯವೇನುನಿವಗೆನುತ ॥೨೨॥ ಎಂದನೊಬ್ಬನುಹೋ
ಗೆನುತಗೋ । ವಿಂದನನುಮತ್ತೊಬ್ಬಹೋದಿದಿ । ರೆಂದುಕೈಗಳಮುಗಿದುವಂದಿಸಿದನುಪದಾಬ್ಜದಲಿ ॥ ಎಂದನೇಕಿವನೇಕೆದಿಟನ ।
ಮ್ಮಂದವತಿಕೃಶಗಾತ್ರರಿವರೇ । ರೆಂದುಮಾಡಿದರಟ್ಟಹಾಸವನಾಮಹಾಭುಜರು ॥೨೩॥ ಏಕೆನಡೆನಮಗಿವರಚಿಂತೆಪಿ । ನಾಕಿ
ಮುನಿಯನೆಹೋಹೆವಾಜಗ । ದೇಕನಾಥಮುಕುಂದನಿದ್ದಾದ್ವಾರಕಾಪುರಕೆ ॥ ಸೋಕಿಸುಕೃತಿಗಳಹೆವ್ರುನಿಗಮಾ । ನೀಕನುತನಂ
ಘ್ರಿಯನೆನುತ್ತಾ । ವ್ಯಾಕುಳರುನುಡಿಯಲ್ಕೆನಗುತಿಂತೆಂದನಸುರಾರಿ ॥೨೪॥ ಆರುನೀವೆಲವೆಲವ್ರೊವಿಕೃತಾ । ಕಾರರಿರಹೇಳು
ಪಿರಿನಿಗಮದ । ಸಾರಸರಹಸ್ಯವನುಬಂದಿರಿದೇಕೆನೀವಿದಕೆ ॥ ಆರುಕಳುಹಿದರಿಲ್ಲಿಗಾವ್ರುದು । ಕಾರಿಯವ್ರುನಿಮಗೆನಲುನುಡಿದರು ।
ಘೋರವಿಕೃತದಲಟ್ಟಹಾಸವಮಾಡಿಕಲಿಘಂಟ ॥೨೫॥ ಹೇಳುನೀನಾರೆಂದುಹೆಸರನು । ಕೇಳುವಾತನುಮರ್ತ್ಯಲೋಕದ ।
ಮೌಳಿರತ್ನವೆನಿನ್ನಹೆತ್ತವರಾರುಹೆಸರೇನು ॥ ನೀಲಮೇಘಶ್ಯಾಮಲಕ್ಷ್ಮೀ । ಲೋಲನಾಕೃತಿನಿನಗಿದೆಂತೈ । ಹೇಳೆನಲುಹರಿನು
ಡಿದನೆಂದುಪಿಶಾಚಗುತ್ತರವ ॥೨೬॥ ದುಷ್ಟನಿಗ್ರಹಕೆಂದುಧರೆಯಲಿ । ಹುಟ್ಟಿದೆನುಯದುವಂಶದಲಿನೃಪ । ವಿಷ್ಟರಕ್ಷಾನರುಹ
ನೆಂಬರುತನ್ನನೀದ್ವಿಜರು ॥ ನೆಟ್ಟನಾವಿದಕೋಸುಗವೆಕಾ । ಲಿಟ್ಟೆವಿತ್ತಲುನೀವಿದೇತಕೆ । ದುಷ್ಟತನವನುಮಾಳ್ಪರೀಮೃಗಕುಲದ
ಹತ್ಯೆಯಲಿ ॥೨೭॥ ಋಷಿಗಳಾಶ್ರಮವಿದಕೆಮೃಗಯಾ । ವ್ಯಸನಯೋಗ್ಯವೆಯಾಜ್ಞೆಕರುತಾ । ಪಸರುವರ್ತಿಸುವೆಡೆಗಳಿವ್ರುಬರಲೇಕೆ
ನೀವಿದಕೆ ॥ ಅಸಮಪುಣ್ಯಮೃಗಂಗಳನುಬಾ । ಧಿಸುವಿರಿದರೊಳಗೇಕೆನೀವಾ । ರುಸುರುವ್ರುದುನಿಮ್ಮಂತರಂಗವನೆಂದನಸುರಾರಿ ॥
ಎನಲುಹೇಳುವೆನೆನುತಪಿಶಿತಾ । ಶನನುಕೆಂಗಳಮುಚ್ಚಿಭದ್ರಾ । ಸನದಲಾದ್ವಾರಾವತಿಗೆಮುಂದಾಗಿಕೈಮುಗಿದು ॥ ಮನದೊಳ
ಗೆಪುರುಷೋತ್ತಮಜನಾ । ರ್ದನನಮೋನಾರಾಯಣಾಯೆಂ । ದೆನುತನಿಜವೃತ್ತಾಂತವನುಕಂಡೆರೆದುವಿವರಿಸಿದ ॥೨೯॥ ಘಂಟ
ನಾನೆಲೆದುರ್ವಿನೀತಾ । ಕಂಟಕನೆಕೇಳಾಮಹೇಶನ । ಭಂಟನಧಿಕಪ್ರಿಯನುತನಗಾಬಾಲ್ಯಶಶಿಮೌಳಿ ॥ ಎಂಟೊಡಲಹರನೊಡ
ನೆನಸುಮುನಿ । ಸುಂಟುಗಡಕೃಷ್ಣಂಗೆನೆಗಳಲು । ನೆಂಟತನವನುಬಂದೆವೀಮಾರ್ಗದಲಿನಾವೆಂದ ॥೩೦॥ ಕಾದುತಿರಲಾಹಂಸ
ನೊಡನೆವು । ಹಾದಯಾಸಿಧಿಕೃಷ್ಣನಲಿಸಂ । ಪಾದಿಸಿದರೊಂದಘಾಪನ ಮಾಹಾತ್ಮರೀಶ್ವರನ ॥ ಪಾದಶೇವಕಕರ್ಣಧಾರನು ।
ಹೋದರಾಬ್ಬರುಸಂಪ್ರಿಯವಸಂ । ಪಾದಿಸಲುಕಳುಹಿದದೆತಾವೀಬಂದೆವಿದೆಯಂದ ॥೩೧॥ ಬರುತತಾವೀಬಂದೆವಿಲ್ಲಿಗೆ । ಹರ
ಸಸಂದೇಶದಲಿಮೃಗಕುಲ । ಹರಣವಿದುತವಗೋಸುಗಲ್ಲಿಲಿವೀರಪರಿಪದಕೆ ॥ ನಿರುತನೈವೇದ್ಯಾರ್ಥವೆಮ್ಮನು । ದುರಿತಮುಟ್ಟ
ದುತತ್ಪ್ರಸಾದ । ಸ್ಥಿರಶರೀರಿಗಳಾಗಬೆತ್ತಣಹಿಂಸೆಹೇಳೆಂದ ॥೩೨॥ ಮುನ್ನಮಾಡಿದಪಾಪದಿಂದು । ತ್ಪನ್ನವಾದೆವುಕಷ್ಟಜನ್ಮದ ।

ಲಿನ್ನುವಾಳ್ವವಬೆಂತು ತಾವಿದನರಿದುದುಷ್ಕೃತವ ॥ ಧನ್ಯರಹವೀಂಗಳೆವುಕುಂದನ । ಸನ್ನಿಧಿಗೆಪೋಗಿಂದುಪರಮಕೃ । ಪಾರ್ಣವನಲಾಕೃಷ್ಣನೆಂದನುಘಂಟಸಚ್ಯುತಗೆ ॥ ೩೩ ॥ ಕೇಳುದಿಯುಬಾತನ್ನಕಥನವ । ದೇಳುನಡೆನಡೆವಿಪ್ರಕುಲವೇ । ತಾಳರಿವರಿಲ್ಲಿಂದಹೊರವಶನೆನುತಕೆಲಸಾರ್ದು ॥ ಕೋಲವನುಹೊರಗಿರಿಪಿತೊಳದನು । ಕಾಲುವೊಗವನುಸೆತ್ತರಲಿಪ್ರ । ಕ್ಷಾಳಿಸಿದನವನಿಯನುಮತ್ತಾರುಧಿರವಾರಿಯುಲಿ ॥ ೩೪ ॥ ನೂಕಿದನುನಾಯಿಳನುಕೆಲಕೆನಿ । ರಾಕುಳನುಕುಲ್ಲದುರ್ನೆತ್ತರ । ನೋಕರಿಪಕೃಷ್ಣಾಜಿನದವೋಲಿಸೆಯುಲಾಘಂಟ ॥ ಆಕರಿಸಿನಿಖಿಳೇಂದ್ರಿಯುವನಂ । ದೇಕಚಿತ್ತದಲಾಂತ್ರವಾಲಾಂ । ಗೀಕೃತಾಂಗದಲಚ್ಯುತಾಂಘ್ರಿಧ್ಯಾನಪರನಾದ ॥ ೩೫ ॥ ಮುಕುಟಕುಂಡಲಹಾರಮಣಿಮಾ । ಕ್ತಿಕದತೊಳಗುವಚಾರುಭೃಂಗಾ । ಳಕವ್ಯದುಸ್ಮಿತರಂಜಿತಾಬ್ಜದಳಾಯತೇಕ್ಷಣದ ॥ ಮುಕುರನಿಭಗಂಡಸ್ಥಳದನಾ । ಸಿಕದಚಲುವಿನಬೆಸವದಂತ । ಪ್ರಕರನವಕುಟ್ಮಳದಹರಿಯನುಬಿಡದೆಭಾವಿಸಿದ ॥ ೩೬ ॥ ಗಳದವೂರೇಖೆಗಳಕಾಂಸ್ತುಭ । ಲಲಿತಕಾಂತಿಯುವಿಪುಳವಕ್ಷ । ಸ್ಥಳದಕಂಕಣಮುದ್ರಿಕೆಯುಲೊಪ್ಪವಚತುರ್ಭುಜದ ॥ ನಳಿನನಾಭಿಯುಪೀತವಸ್ತ್ರ । ಜ್ವಲನಿತಂಬದವುನಿಹೃದಯುವಂ । ಗಳವುಸೋಜ್ಞಾಂಘ್ರಿಯನುನಿಜಮನದೊಳಗೆ ಭಾವಿಸಿದ ॥ ೩೭ ॥ ಚಕ್ರಶಂಖಗದಾಬ್ಜಧಾರಿಯು । ರುಕ್ಮಮನೆತ್ರಿಣಯುನಕ್ಶತಾಂಘ್ರಿಪ । ರಿಕ್ರಮನೆಪರಮೇಷ್ಠಿವಂದ್ಯನೆಪರಮಗುಣನಿಧಿಯೆ ॥ ವಿಕ್ರಮಿತತ್ರಿಭುವನನೆಸಂಸ್ಕೃತಿ । ಚಕ್ರಭಾವಾಭಾವಲೀಲಾ । ಚಕ್ರನೇಶರಣಾಗೆನುತಲಿರ್ದನುಸವಾಧಿಯಲಿ ॥ ನೀನಲಾತ್ರಿಭುವನವನಿಚ್ಛಾ । ಧೀನವಾಯಾಶಕ್ತಿಗಳಪರಿ । ಧಾನದಲಿರಕ್ಷಿಸುವೆನೀನೇವುರಳಸೇರಿಸುವೆ ॥ ಹಾನಿಗೆಲಿಗೋವಿಂದವರಗೋ । ಪೀನಯುನಪೂಜಿತನೆರಕ್ಷಿಸು । ದೀನನನುನಿಜಚರಣಶರಣನಕಿಂಕರನನೆಂದ ॥ ೩೯ ॥ ಎಂದುಕಾಂಬೆನೊಕೃಷ್ಣಮುನಿಜನ । ವೃಂದಚಿಂತಿತವೂರ್ತಿಯುನುತಾ । ನೆಂದುನಿಜದಾಸಾನುದಾಸನೆನಿಪ್ಪನೀತನ್ನ ॥ ನಿಂದ್ಯವಹಜನ್ಮಕ್ಕೆಕಡೆಯಿ । ನ್ನೆಂದಹುದೊಕನಗೆನುತದೃಗುಜಲ । ಬಿಂದುಗಳಲೋಲಾಡುತಿರ್ದನುಘಂಟನಡಿಗಡಿಗೆ ॥ ೪೦ ॥ ಇರಲುಹರಿನಿಜಮೂರ್ತಿಯನುಸಂ । ದರಿಸಿದನುಕಾಣುತ್ತಕಾಣದೆ । ಭರದಲೆದ್ದನುಘಂಟನಾಕ್ಷಣದೊಳಗೆಕಂಡೆರದು ॥ ಕರಣಸಾಕ್ಷಿಕನಾದಕೃಷ್ಣನ । ಪರಮಮಂಗಳಮೂರ್ತಿಯನುವುಂ । ದಿರಲುಕಂಡನುಭುಜಚತುಷ್ಟಯುಗಳಲಿರಂಜಿಸಲು ॥ ೪೧ ॥ ಅರರೆಭಾಪುರೆಬಹೇಭಾಪ್ಯದ । ಧೊರೆಯಲಾತಾನೆನುತಚಿಗಿದಂ । ಬರಕೆನೆಗರಿದತೋಳ ಳಲಿಮುಕುಳಿತಕರಾಬ್ಜದಲಿ ॥ ಹರಹರಾಯನವೋಸ್ತುವಿಶ್ವಂ । ಭರಹರಾಯನವೋಸ್ತುಜಯಜಯ । ಪರಮಪುರುಷಯೆನುತ್ತವೈಮಿಕ್ಕಿದನುಹರಿಪದಕೆ ॥ ೪೨ ॥ ದಂಡದಂತಿರೆಧರೆಯಲೊಡಲನು । ದಿಂಡುಗೆಡಹುತ್ತೇಳುತಭ್ರದ । ಮಂಡಲಕೆಲಂಘಿಸುತಮಿಗೆಜಾಡುತ್ತಹೊಗಳುತ್ತ ॥ ಮಂಡೆಯನುಧರೆಗೂರಿಧರೆಯಲಿ । ತಾಂಡವವನಾಡುತ್ತವಾಂಸದ । ಖಂಡವನುಅರ್ಪಿಸುತಲುಪಹಾರವನುಕೃಷ್ಣಂಗೆ ॥ ೪೩ ॥ ಇರಲವನಭಕುತಿಯನುಕಾಣುತ । ಪರಮಕರುಣಾಸಿಂಧುತರಳನೆ । ಪರಮಪರಿತೋಷವನುಭಕ್ತಿಪ್ರಿಯದಲಾಸುರರು ॥ ಮರುಳೆಮೆಚ್ಚಿದೆನೇಳುಕೊಟ್ಟೆನು । ವರವನೆಂದರಿಬೇಡಿಕೊಳ್ಳೆನೆ । ಕರಪುಟದಭಾರದಲಿಬಿನ್ನಹವಾಡಿದನುಘಂಟ ॥ ೪೪ ॥ ತುಷ್ಟನಾದ್ಯೆದೇವಸನ್ನುತ । ವಿಷ್ಟಪಾಧೀಶ್ವರನೆಬೇಡುವೆ । ನಿಷ್ಟವರವನುಹಂಸನಾಹವದೊಳಗೆಶಂಕರನ ॥ ನಿಷ್ಠರಿಂದಾದಘನವಪುರವುದ । ಭೀಷ್ಟವೆಂಪಾಳ್ದಂಗೆತಾನಿದು । ದೃಷ್ಟಿಗೋಚರವಾದಿರದರಲಿಧನ್ಯರಾವೆಂದ ॥ ೪೫ ॥ ಎಂದಡಾತನನುಡಿಗೆನಗುತಿಂ । ತೆಂದನಿಲ್ಲಿಮಹಾಋಷೀಜನ । ವೃಂದಸಾಕ್ಷಿಗಳಿದಕೆಮರೆದೆನುಮಾಡಿದವಗುಣವ ॥ ಇಂದುಧರನಲಿತತ್ಸವಸ್ತ್ರಿತ । ವೃಂದಲಿತಪ್ಪಿಲ್ಲಬೇಡಿ । ನ್ನೊಂದುವರವನುಬೇಡೆನಲುಕೈಮುಗಿವುತಿಂತೆಂದ ॥ ೪೬ ॥ ಈವುದೆನಗೆಲೆದೇವವರವನು । ಭಾವದಲಿನಿಸ್ಸಂಘ್ರಿಕಮಲದ । ಭಾವನೆಯನನವರತನಿಜಭಕ್ತಾಂಘ್ರಿಪಂಕಜದ ॥ ಸೇವೆಯನುಭವಭವಸಹಸ್ರದ । ಲೀವುದೆನಗೆಂದಡಿಗೆರಗಿಕರು । ಣಾವನಧಿಕಾರುಣ್ಯದಲಿವೈದಡವಿದನುಭಟನ ॥ ೪೭ ॥ ಏಳೆನುತವೈದಡವಿಪರಮಕೃ । ಪಾಳುಕಾರುಣ್ಯದಲಿನೋಡಲು । ಬೇಳುಕೊಂಡುದುಘಂಟನೊಡಲಪಿಶಾಚಜನ್ಮವಿದು ॥ ಬಾಲಸೂರ್ಯಸಹಸ್ರತೇಜವ । ತಾಳ್ದನುದಿವ್ಯಾಂಗದಲಿಘನ । ತಾವೆಯುಘೇಯನೆಯಿಸದನತಿರೂಪವಿಭವದಲಿ ॥ ೪೮ ॥ ಹೀನರಿವರುತ್ತಮರಿವರ್ಗಳು । ವಾನನೀಯುರೆನುತ್ತಪರಮಕೃ । ಪಾನಿಧಿಯು ಲಾಕಾಣಲರಿವನೆಕೃಷ್ಣನಖಿಳದಲಿ ॥ ಏನನೆಂಬೆನುಭೂಪಭಕ್ತಾ । ಧೀನವಿಗ್ರಹನೆಂಬುದನುಸಕ । ಲಾನುಮತವೆನೆತೋರಿಸಿದನೆಂದಾಪಿಶಾಚನಲಿ ॥ ೪೯ ॥ ಆಸಕಲಮುನಿನಿಕರಜನವಾ । ರೈಸಿಕೇಳುತ್ತಿರಲುವರಪರಿ । ತೋಷವನುಪ್ರಸರಿಪವಿಕುಂಠಾಧೀಶನಂಘ್ರಿಯುಲಿ ॥ ಹಾಸಿಬಿದ್ದನುತನುವನವನತ । ಭಾಸುರಾಂಗನುಬಹಳಹರುಷಾ । ವೇಶದಲಿಮಗಮುಗಿಬಿನ್ನಹವಾಡುತಿಂತೆಂದ ॥ ೫೦ ॥ ಧನ್ಯನಾದೆನುದೇವದೇವರ । ಸನ್ನಿಧಿಯುದರುಶನದಲತಿಶಯ । ಮಾನ್ಯನಾದೆನುಕೃಷ್ಣಕರುಣಾನಿಧಿಯಲಾನೀನು ॥ ನಿನ್ನಪದಕಮಲೈಕಭಕ್ತನು । ಕರ್ಣನೆಂಬವನನುಜನೆನಗಿವ । ನಿನ್ನದೇವರೆಬಲ್ಲಿರುಚಿತವವೆಂದನಾಘಂಟ ॥ ೫೧ ॥ ಎನಲುಚರಣದಲೆರಗಿದಾಕ । ರ್ಣನನುಕಾರುಣ್ಯದಲಿಕರುಣಾ । ವನಧಿವೈದಡವಿದನುಸಕಲಾಪುನರುಭೀಷಿಸಲು ॥ ತನುವವೇಪ್ಪಿಶಾಚಯೋನಿಯು । ಜನನವದೆಹರಹರನಿಜಾಂಗನ । ಘನತರದತೇಜದಲಿಮೆರೆದನುಕರ್ಣನಾಕ್ಷಣಕೆ ॥ ೫೨ ॥ ದಿವ್ಯಗಂಧವಿಭೂಷಣಾಂಬರ । ದಿವ್ಯವನಮಾಲಾವಿಭೂಷಿತ । ದಿವ್ಯ

ಗಾತ್ರರುರೂಪಜಿತಕಂದರ್ಪರೆಂದೆನಿಸಿ || ದಿವ್ಯಸಂಸ್ತುತಿಪಾಠಜಯರವ | ದಿವ್ಯಸಂಗೀತದಲಿಭಜಿಸಿದ | ರವ್ಯಯನನಂದಾಪಿಶಾಚೋಪಮರುಭಕತಿಯಲಿ || ೫೩ || ಇಂತುಪೂರ್ಣಮನೋರಥರುಮೇ | ದಾಂತವಿಶ್ರುತಕೀರ್ತಿಯನುಮಿಷಿ | ನಾಂತರದಿನೆರೆಭಜಿಸಿಬಹುವಿಧಭಾವಭಕತಿಯಲಿ || ಅಂತವಿರಹಿತನಾಳ್ಗಳರಾ | ಸ್ವಾಂತದಲಿನಿತ್ಯಾತ್ಮಲಕ್ಷ್ಮೀ | ಕಾಂತಕಳುಹಲುಹೋದರಾಕೈಲಾಸಪರ್ವತಕೆ || ... ... || ೫೪ ||

ಇಂತು ಸಂಧಿ ೬೧ಕ್ಕಂ ಪದನು ೫೪ಕ್ಕಂ ಮಂಗಳಮಸ್ತು

ಅರವತ್ತೆರಡನೆಯ ಸಂಧಿ.

ಹರಿಹರರ ಸಂದರ್ಶನ.

ಸೂಚನೆ || ಕಂಡನಸುರಾರಾತಿಭುವನೋ | ದ್ದಂಡದೈವದದೈವಶಿವನನು | ಕಂಡನಾಖಂಡೇಂದುಮೌ
ಳಿಮುಕುಂದನಂಘ್ರಿಗಳ || ... ...

ಪದನು || ಅರಸಕೇಳಿಷ್ಟಾರ್ಥಸಿದ್ಧಿಯ | ನುರುದಯಾನಿಧಿಕರುಣಿಸಿದನಾ | ಮರುಳುಗಳಿಗೋಲೈಸಿದನಿಜಭಾವಭಕತಿಯಲಿ || ಕರುಣಿಸನೆನಿಜಚರಣಭಕತಿಯ | ನಿರದೆತನಗೆಂದೆಂಬವೋಲಂ | ಬುರುಹಸಖನೈತಂದನುದಯಾಚಲದಮಸ್ತಕಕೆ || ೧ || ಅರಳಿದವುಕಮಲಾವಳಿಗಳಂ | ಬುರುಹದೃಶನಕ್ಷಿಗಳೊಡನೆಮಧು | ಭರಿತವಾದುವುಕಮಲದಲಿಕಮಲಾಕ್ಷನಕ್ಷಿಗಳ || ಪರಮಕರುಣಾಮೃತದೊಡನೆಮಧು | ಕರನಿಕರವದನುಂಡುದಣಿದವು | ವರಮುನಿಗಳಕ್ಷಿಗಳೊಡನೆಯನಲಾಯ್ತುರವಿಯುದಯ || ೨ || ಬಳಿಕಕರುಣಾಸಿಂಧುನಿರ್ಮಳ | ಸಲಿಲದಲಿನಿತ್ಯೋಕ್ತವಿಧಿಗಳ | ನೊಲಿದುವಿರಚಿಸಿವಿವಿಧನಿಯಮತಪೋವ್ರತಂಗಳನು || ಬಳಲುವರಿಗಿಷ್ಟಾರ್ಥವನುನೆರೆ | ಸಲಿಸಿದನುಋಷಿಗಳಿಗೆತತ್ಫಲ | ಗಳನುಸಾರೋದಾರವೃತ್ತಿಯಲಂದುಮುರವೈರಿ || ೩ || ಬಂದುನಿಜಚರಣಾರವಿಂದ | ದ್ವಂದ್ವದಲಿತಲೆವಾಗಿವಿನತಾ | ನಂದನನುಮುಕುಳಿತಕರಾಬ್ಜದಲಾಭಿಮುಖ್ಯದಲಿ || ನಿಂದಿರಲುಬದರೀನಿವಾಸದ | ಮಂದಿಯನುಬೀಳ್ಕೊಟ್ಟುಮುನಿಜನ | ವಂದ್ಯನೇರಿದನಾವಿಹಂಗಾಧಿಪನನಲವಿನಲಿ || ೪ || ಏರಿಹರಿಕುಳ್ಳಿರಲುಖಗಪತಿ | ಜಾರಿದನುಹರಗಿರಿಯಸಮ್ಮುಖ | ಕೋರಗುಡಿಸಿದುದವನಿಖಗಾಧಿಪನಪದಹತಿಗೆ || ಜಾರಿದವುತಾರೆಗಳುನೆಲೆಯನು | ಮೀರಿದವುಗ್ರಹನಿಕರರವಿರಥ | ದೋರಿಯೋಡುದುಪಕ್ಷಪುಟನಿರ್ಘಾತಪವನನಲಿ || ೫ || ಜಯಜಯತುಜಯಜೀಯಯನೆಹರಿ | ಹಯಹುತಾಶನಯಮನಿಋತಿವಾ | ರಿಯಪವನಧನದನುಪಶುಗಳೊಡೆಯನುಪ್ರಜೇಶ್ವರರ || ಜಯಗಳಾಗಂಧರ್ವಯಕ್ಷಾ | ಹ್ವಯರುಕಿಂಪುರುಷೋತ್ತಮರುಮಹಿ | ಮೆಯನುಪೊಗಳುತ್ತೋಲಗಿಸುತೈತಂದರಚ್ಯುತನೆ || ೬ || ಬಂದುದೋಲಗಿಸುತ್ತಪನ್ನಗ | ವೃಂದವಾವಿದ್ಯಾಧ್ಯಚಾರಣ | ವೃಂದವೀಣಾವೇಣುಪಟಹಮೃದಂಗನಾದದಲಿ || ಮುಂದೆಸುರನಾರಿಯರಕಳರವ | ದಿಂದೆಸೆವಸಂಗೀತತಾಂಡವ | ವಂದವಡೆದುದುಪಯಣದಲಿಪರಮೇಷ್ಠಿವಂದಿತನ || ೭ || ಅಜನಿಳಿದನಂದಪ್ರಮೇಯನ | ಭಜನೆಗಾನಿಜಕಲ್ಪವಾಸಿ | ವ್ರಜಮುನೀಂದ್ರಸಮಸ್ತವೇದಪುರಾಣಮೂರ್ತಿಗಳ || ಭಜನೆಗಳುರಂಜಿಸಲುಕುಮುದಾಂ | ಬುಜಸಖರುಸಹಿತೊಲವಿನಲಿಸುರ | ಸುಜನಸೇವಿತಪಾದಪೀಠನಚರಣಸನ್ನಿಧಿಗೆ || ೮ || ಪದದಲರ್ಚಿಸಿವಂದಿಸುವರಾ | ಯಿದಿರುಗೊಂಡೀಕ್ಷಿಸುವಸಂಸ್ತುತಿ | ಪದವಮಾಡುವಪೊಗಳುವಭಿವರ್ಣಿಸುವಕೀರ್ತಿಸುವ || ತ್ರಿದಶಗಣದಲಿಪರಮಋಷಿಸಾ | ಧ್ವರ್ಗದಲಿವರಸುರಸೂತಮಾಗಧ | ಸುದತಿಯರಸೇವೋತ್ಸವದಲಂದೆಸೆದನಸುರಾರಿ || ೯ || ಸತ್ತಿಗೆಯಚಾಮರದವ್ಯಜನದ | ಲೆತ್ತುಗುಡಿಗಳಗಢಣದಲಿನಭ | ಕೆತ್ತುಚಕ್ಕಳಿಸಿದವುದೆಸೆಗಳಸುರಮುನೀಶ್ವರರ || ಮೊತ್ತದಲಿವಂದಿಗಳಮಾಗಧ | ರೊತ್ತುಗಳಕಳಕಳರವಂಗಳ | ನೆತ್ತಿಬಿಸುಟವುಜಯರವಂಗಳುಸಕಲಋಷಿವರರ || ೧೦ || ಮೊಳಗಿಸಿದರತಿಗೆಡಿಗೆಸಿದ್ಧಾ | ವಳಿಗಳುನ್ನತಶಂಖಪಟಹಾ | ವಳಿಗಳನುಸುರದುಂದುಭಿಸ್ವನದೊಡನೆವೀಣೆಗಳು || ಕಳರವಂಗಳುಮೊಳಗಿದವುಮು | ಕ್ಕಳಿಸಿದವುದೆಸೆಗಳನುಘನನಿ | ಸ್ಸಳಮಹಾನಕಗೋಮುಖಾದಿಸುವಾದ್ಯನಿರ್ಘೋಷ || ೧೧ || ದಟ್ಟವಿಸಿದುದುಮೇಘಘಟೆಮೇ | ಲ್ಕಟ್ಟನಂತಿರೆಅಭ್ರದಲಿಹುರಿ | ಗಟ್ಟದೆಳಮಿಂಚಿನಲಿಮೃದುದುಂದುಭಿರವಂಗಳಲಿ || ವಿಷ್ಟರಶ್ರವನಡಿಗೆಸುಮನೋ | ವೃಷ್ಟಿಯನುಕರವೃತ್ತಸೇವೆಗೆ | ನೆಟ್ಟನಿನ್ನಾರಕಟಬಾರದವರ್ಗಳಚ್ಯುತನ || ಬೀಸಿದವುತಂಗಾಳಿದೆಸೆಗಳು | ವಾಸನಿಸೆಸೌರಭ್ಯಮಾಂದ್ಯಮ | ಹಾಸಮಗ್ರಗುಣಂಗಳಲಿಸಂಪನ್ನವಿಭವದಲಿ || ಆಸಕಲಸುರವರಮುನೀಂದ್ರರ | ಬೀಸಿನೆಯಬಹುಜನನಿಕರವಾ | ರಾಶಿಯಲಿಹರಗಿರಿಗೆಬಿಜಯಂಗೈದನಸುರಾರಿ || ೧೩ || ಬಂದುಮಾನಸವರಸರೋವರ | ದಿಂದದಿಗುಭಾಗದಲಿಸುರತರು | ವೃಂದಶೋಭಿತಶೋಭನಾರಣ್ಯದಲಿಹರಿಯಿರಲು || ಇಂದುಧರನದನರಿದುಮನದಲಿ | ಬಂದುಘಂಟಾಕರ್ಣರಿಂದವೆ | ನಂದಿಯನುಬಿಗಿಬೇಗಮಾಡೆಂದೆನುತನಿಂದಿರ್ದ || ೧೪ || ಜಡೆಗಳನುಕಟ್ಟಿದನುಭಾ

ಳದ । ಲೆಪಿಸಿದುವಶಶಿಕಳೆಯುಕೌಮುದಿ । ಯೆಡರಿಸಲುಶಾಂತಿಯುನುಪಾವಕನಯುನದುಗ್ರಗೆ ॥ ಹೆಡೆವಣಿಯುನಾಗೇಂದ್ರನಿಕ
ರದ । ತೊಡಿಗೆಗಳುರಂಜಿಸಲುಕೊಂಡನು । ಖಡುಗಶೂಲಕಪಾಲಬಿಟ್ಟಂಗಂಗಳನುನಲಿದು ॥ ೧೫ ॥ ತೋರಿಕರತಳಸಂಜ್ಞೆ
ಯನುಪರಿ । ಪಾರಪಾರ್ಶ್ವದಮುಖ್ಯರಿಗೆನಗು । ತೇರಿದನುನಂದಿಯುನುನಡೆತರೆದೇವಿಯರುಸಹಿತ ॥ ವೀರಗುಹಗಣಪತಿಗಳದ್ದ
ಸೆ । ಗೋರಣಿಸಲೆಡಬಲದಲಹಿಕುಲ । ವೈರಿಮೂಷಕವಾಹನಂಗಳಬಹಳರಭಸದಲಿ ॥ ೧೬ ॥ ನೂಕಿನಡದುದುಕೂಡೆವಿಕೃತಾ ।
ನೇಕವದನಕರಾಳದಂಷ್ಟ್ರಾ । ನೀಕದುರ್ಧರಭೂತಗಣವೇತಾಳಕೋಟಿಗಳು ॥ ಓಕರಿಸಿದವುದೆಸೆಗಳೆಂಬುವು । ಹಾಕಡಂಗವ
ನೆನಲುಕವಿದುಪಿ । ನಾಕಿಯೆಡವಂಕದಲಿಸಂದಣಿಸಿದುದುನಿಜಕಟಕ ॥ ೧೭ ॥ ಮೇಲೆಮೊಳಗುವಯಕ್ಷಕಿನ್ನರ । ಜಾಲದಲಿಜಗ
ವದಿರಲಾಧನ । ಪಾಲನೆಡಬಲವಂಕದಲಿನಿಧಿನಿಕರವಾಸ್ಯೈಸೆ ॥ ಆಳುವೋರಿದರೆಂಟುದೆಸೆಗಳ । ಮೂಲೆಬಿರಿಯಲುಬ್ರಹ್ಮರಾಕ್ಷಸ ।
ಜಾಲಕವಿತರುತಿರ್ದುದಾಜಗದೀಶ್ವರನಹೊರೆಗೆ ॥ ೧೮ ॥ ನಂದಿಯುನುಹರನೇರಿಮೊಳಗುವ । ದುಂದುಭಿಯುಕಹಳೆಗಳವಾರ್ಶ್ವ ।
ದ್ವಂದ್ವಸಂಸ್ತುತಿಪಾಠಜಯಜಯಜಯರವಂಗಳಲಿ ॥ ಬಂದನಭಿಮುಖವಾಗಿಸುರಮುನಿ । ವೃಂದಸೇವಿತಪಾದಪೀಠವು ।
ಕುಂದನಿದ್ಧಸಳಕೆಬಹಳವನೋನುರಾಗದಲಿ ॥ ೧೯ ॥ ಬರುತ್ತಕಂಡನುದೂರದಲಿಮುರ । ಹರನವಂಗಳಮೂರ್ತಿಯುನು
ಸುರ । ವರಮಹಾಮಣಿಮಕುಟಕಿರಣವಿರಾಜಿತಾಂಘ್ರಿಯುನು ॥ ಗರುಡಭುಜಮೂಲಾಂತರಿತಮೇ । ದುರನಿತಂಬವಿನೀತಪೀ
ತಾಂ । ಬರವಿಲಂಬಿತರತ್ನಕಾಂಚೀಗುಣಮಣಿದ್ಯುತಿಯು ॥ ೨೦ ॥ ಎಸವನಾಭಿಯುಕಂಬುಕಂಠದ । ನೊಸಲತಿಲಕದಚಾರುಕುಂ
ತಳ । ವಿಸರರಂಜಿತಮಕುಟಮಣಿಗಳಮಕರಕುಂಡಲದ ॥ ಮಿಸುಪಕದಪಿನದಂತಪಜ್ತಿಯು । ನಸುನಗೆಯುನಾಸಾಪ್ರುಟದಮೆರ ।
ನೆಸಳುಗಂಗಳಮಂಗಳಾನನಕಮಲವನುಕಂಡ ॥ ೨೧ ॥ ಕೊರಳಮಣಿಕೌಸ್ತುಭದಚಂದನ । ಪರಿಮಳದಪೇರುರದರಂಜಿತ ।
ತರುಣತುಳಸೀದಂಡೆಗಳವರವೈಜಯಂತಿಗಳ ॥ ಸಿರಿಯುಸಿರಿವತ್ಸದಮಹಾಮಣಿ । ಕಿರಣವಿಲಸಚ್ಚನ್ನವೀರ । ಸ್ಫುರಿತಜಠರದಜಗ
ದುದರನಾಕಾರವನುಕಂಡ ॥ ೨೨ ॥ ಕಂಕಣದಕರಯುಗದಮಣಿಮು । ದ್ರಾಂಕಿತಾಂಗುಲಿದಳದರತ್ನ । ಲಂಕೃತೋರುಭುಜ
ದ್ವಯುದಸೀನಾಂಸಮಂಡಲದ ॥ ಶಂಖಚಕ್ರಗದಾವಿರಾಜಿತ । ಪಂಕಜಂಗಳಲೆಸವಹರಿಯುನು । ಶಂಕರನುಕಾಣುತ್ತಜಯಜಯಯೆ
ನುತಕೈಮುಗಿದ ॥ ೨೩ ॥ ಸುರರಜಯರವವೊಂದೆಸೆಗೆಮುನಿ । ವರರಸಂಸ್ತುತಿಯೊಂದೆಸೆಗೆ ಭಾ । ಸುರಸುರಸ್ತ್ರೀನೃತ್ಯಗೀತ
ವಿನೋದವೊಂದೆಸೆಗೆ ॥ ನೆರದುಭಜಿಸುವಸಿದ್ಧವಿದ್ಯಾ । ಧರಮಹೋರಗನಿಕರದೋಲಗ । ದುರವಣೆಯದೊಂದೆಸೆಗೆಸೆಯಲಸು
ರಾಂತಕನಕಂಡ ॥ ೨೪ ॥ ಭೂರಿಭುವನಾನಂದಪಾರಾ । ವಾರವೋಐಶ್ವರ್ಯಸಿದ್ಧಿಯು । ಸಾರಸಂಗ್ರಹವೋಸಮಸ್ತಚಾರ್ಯಸಂ
ಪುಟವೊ ॥ ಪಾರಮೇಷ್ಠ್ಯದಪರಮವಿಭವದ । ಮೇರೆಯೋಮಜಭಾವನುತಮದ । ನಾರಿಮುಳುಗಿದನಧಿಕತರಹರುಷಾಮೃತಾ
ಬ್ಧಿಯುಲಿ ॥ ೨೫ ॥ ಅಹಹಕಾಣುತಕಾಣುತವೆಘನ । ಮಹಿಮನಿಳಿದನುನಂದಿಯುನುಕರ । ನಿಹಿತಪುಷ್ಪಾಂಜಲಿಯುಲಾಗಿರಿರಾಜಸುತೆಸ
ಹಿತ ॥ ಗುಹನಿಳಿದನಹರಿಪುವನಾಗಳೆ । ಮಹಿಗೆಕಾಲಿರಿದನುಗಜಮುಖ । ಸಹಿತಸಕಲಧನೇಶಮುಖ್ಯರುಪಾರ್ಶ್ವಗೋತ್ತಮರು ॥
ನಂದಿಯುನುಹರನಿಳಿದುದನುಗೋ । ವಿಂದನೀಕ್ಷಿಸುತಾಕ್ಷಣವೆಖಗ । ವಂದ್ಯನಂಸಾಸನವನಿಳದನುಸಕಲಸುರವರರ ॥ ವೃಂದವಿಳಿ
ದುದುವಾಹನವನಾ । ನಂದಮೂರ್ತಿಗಳಂದುಕಾಲ್ನಡೆ । ಯಿಂದನಡೆತರುತಿರ್ದರಧಿಕಮನೋನುರಾಗದಲಿ ॥ ೨೭ ॥ ಬೆರಸಿದುದು
ಪರಿವಾರವೆರಡು । ಬ್ಬರದಬಹುವಿಧವಾದ್ಯದಲಿಸಾ । ಗರವೆರಡುತವೊಳಗೆಬೆರಸುವವೋಲುವೋಹರಿಸಿ ॥ ಹರಿಹರರುನಡೆತಂದ
ರೋರೆಣ । ಬ್ಬರನುನೋಡುತಮುಗಿದಕರಪುಟ । ಸರಸಿಜದಮುಕುಳಂಗಳಲಿಮುನಿಜನಸಭಾಜಿತರು ॥ ೨೮ ॥ ಬಂದುಹರನ
ಸುರಾರಿಯಂಘ್ರಿ । ದ್ವಂದ್ವದಲಿಮೈಯಿಕ್ಕುತರ್ಘ್ಯವಿ । ದೆಂದುಪುಷ್ಪಾಂಜಲಿಯುನಿತ್ತನುಪಾದಯುಗಳದಲಿ ॥ ತಂದೆಸಾಕೆನೆನೀನ
ದಾರಿಂ । ಗೆಂದುಕೈಯುನುಹಿಡಿದುತೆಗೆದುವು । ಕುಂದನಪ್ಪಿದನೆರಗಿನಾಲ್ಕುಭುಜಂಗಳಲಿಹರನ ॥ ೨೯ ॥ ಸ್ತುತಿಸಿದನುಕೈಮುಗಿದು
ಹರನ । ಚ್ಯುತನನಖಿಳಾಮ್ನಾಯವಾಗ್ವಿ । ಶ್ರುತನನಖಿಳಮುನೀಂದ್ರಹೃದಯಸರೋಜಸಂಭೃತನ ॥ ಕ್ರತುಮುಖನನವ್ಯಾಕೃ
ತಾವ । ಸ್ಥಿತನನವಿನಾಶಿಯುನಗವ್ಯಾನ । ನತಿಗಮಿತ್ರಮಾಯಾಮಹಿಮವಿಶ್ರುತನಮನವೊಲಿದು ॥ ೩೦ ॥ ಜಯನಮೋದೇವೇಶ
ದೇವ । ತ್ರಯಸಮಾಶ್ರಿತರೂಪವೇದ । ತ್ರಯವಿಶೇಷಿತತತ್ವವಿಶ್ವಾಧಾರಜಿತಪಾರ ॥ ಜಯಸುರೇಂದ್ರಾನಲಯಮಾತ್ಮಕ । ಜಯ
ನಿರುತಿವರುಣಾನಿಲಾತ್ಮಕ । ಜಯಕುಬೇರಗಣೇಶಗುಹಮೂರ್ತಿಯೆನಮೋಯೆಂದ ॥ ೩೧ ॥ ಬ್ರಹ್ಮರೂಪನೆನಾಭಿಕಮಲ ।
ಬ್ರಹ್ಮಯೋಗಿಯೆಪದನಮಿಹಿತ । ಬ್ರಹ್ಮಬಾಹುಕ್ಷತ್ರವೈಶ್ಯೋರ್ವ್ಯಂಘ್ರಿಶೂದ್ರಜನೆ ॥ ಬ್ರಹ್ಮಚಾರಿಗೃಹಸ್ಥವನಗ । ಬ್ರಹ್ಮತದ್ವಿಪ
ರೀತಪೇತುವೆ । ಬ್ರಹ್ಮವಾಗ್ವ್ಯಕ್ತಿಯುಜಗತ್ಕರ್ತೃವೆನವೋಯೆಂದ ॥ ೩೨ ॥ ಜಯನಮೋಸ್ತುಸಹಸ್ರಮೂರ್ತಿಯೆ । ಜಯನ
ಮೋಸ್ತುಸಹಸ್ರಕೀರ್ತಿಯೆ । ಜಯನಮೋಸ್ತುಸಹಸ್ರಬಾಹುಸಹಸ್ರಪಾದಾಕ್ಷ ॥ ಜಯನಮೋಸ್ತುಸಹಸ್ರಜಿಹ್ವನೆ । ಜಯ
ನಮೋಸ್ತುಸಹಸ್ರನಾಮನೆ । ಜಯನಮೋಸ್ತುಸಹಸ್ರಗುಣಧಾರಿಯೆನಮೋಯೆಂದ ॥ ೩೩ ॥ ಅನುಮೊದಲಜಶಕ್ರರವಿಪವ ।
ಮಾನಸಖಶೀತಾಂಶುಗ್ರಹ । ರೀನಿವಿಳಸುರಪರರುನಿಮ್ಮಂಶಾಂಶಸಂಭವರು ॥ ನೀನಿದೇನೆಲೆದೇವಬಂದೆನಿ । ಜಾನುಚರನಾನಂ

ಮನೋ೦ಡದೆ । ದಾನವಾಂತಕತನ್ನದರುಶನಕೇನುಹೇಳೆಂದ ॥೩೪॥ ಕೃತ್ಯವಾವುದುತನಗೆದೇವರು । ಚಿತ್ತದಸುವುದುಬರವಿದೇ
ಕೆ । ಭೃತ್ಯನಾನೆನಿನಿವಾಸವೆನಿಪ್ಪಗಿವರಕೆ ॥ ಅತ್ಯಧಿಕವಿಸ್ಮಯದಬೀಜವ । ಬಿತ್ತಿದೆಯಲಾತನ್ನಸದಮಳ । ಚಿತ್ತದಲಿನಿತ್ಯಾ
ತ್ಮಸುಖವಿಗ್ರಹನೆಹೇಳೆಂದ ॥ ... ... ॥ ೩೫ ॥

ಅಂತು ಸಂಧಿ ೬೩ಕ್ಕಂ ಪದನು ೨೫೪೪ಕ್ಕಂ ಮಂಗಳಮಸ್ತು

ಅರವತ್ಮೂರನೆಯ ಸಂಧಿ.

ಸೂಚನೆ ॥ ಒಂದೆನಿಜವೆರಡೆನಿಸಿಹರಿಹರ । ರೆಂದುಪಾಧಿವಿಭೇದದಲಿತೋ । ರ್ಕೆಂದುಸುರಮುನಿವರರಿ
ಗಸುರಾರಾತಿನೇಮಿಸಿದ ॥ ... ...

ಪದನು ॥ ಅರಸಕೇಳದುಭುತವನೀಪರಿ । ಹರನಸಂಸ್ತುತಿಗೇಳುತವೆಮುರ । ಹರನುವಮಾಪತಿಯಂಘ್ರಿಯಲಿತಲೆವಾಗಿ
ಕೈಮುಗಿದು ॥ನೆರದಸುರಮುನಿವರರುಕೇಳಲು । ಪರಕೆಪರತರವೆನಿಪದೈವದ । ಪರಮತತ್ವರಹಸ್ಯವನುವರ್ಣಿಸಿದನೊಲವಿನಲಿ ॥
ಜಯಸಮಗ್ರಾಶೇಷಭುವನ । ಕ್ಷಯವಿಹಾರವರೇಣ್ಯವರದಾ । ಕ್ಷಯವಿಶುಧಜ್ಞಾನವಿಗ್ರಹವಿಶ್ವಮೂರುತಿಯೆ ॥ ಜಯ
ಸದಾನಂದಸ್ವರೂಪನೆ । ಜಯಸದಾಸತ್ಯಸ್ವರೂಪನೆ । ಜಯಸದಾನಂದಾಶ್ರಯನೆಸತ್ಯಾತ್ಮಕನೆಯೆಂದ ॥೧॥ ಘೋರರೂಪನೆ
ಘೋರಘೋರಾ । ಘೋರಸಾಕ್ಷಿಯೆಘೋರನಯನನೆ । ಘೋರಸತ್ವನಿಷೇವಿತನೆಘೋರಾಂತರಾತ್ಮಕನೆ ॥ ಘೋರತರಸಂಸಾರ
ನಿಯಸಂ । ಹಾರಕನೆಜಿತಘೋರರೂಪನೆ । ಘೋರಭಯಹೇತುವೆಮಹಾದೇವನೆನಮೋಯಂದ ॥೨॥ ಜ್ಞಾನರೂಪನೆವಿದಿತ
ವಿಮಲ । ಜ್ಞಾನಗಮ್ಯನೆಪಾಲಿತಾತ್ಮ । ಜ್ಞಾನನಿಷನೆನಿರುಪಮಿತ್ರವಿಜ್ಞಾನಸಾಧಕನೆ ॥ ಜ್ಞಾನಮಾರ್ಗನಿವೇಶಕನೆತತ್ ।
ಜ್ಞಾನಸಾಧನವಿಗ್ರಹನೆಅ । ಜ್ಞಾನಗುಣಹರನಾಮಧೇಯನೆಜಯನಮೋಯಂದ ॥೩॥ ಶಕ್ತಿರೂಪನೆವಿಜಿತಮಾಯಾ । ಶಕ್ತಿ
ಗುಣಸಂಸ್ಥಿತನೆಪರಿಣತ । ಶಕ್ತಿಸೇವ್ಯನೆಶಕ್ತಿಭಾವ್ಯನೆಶಕ್ತಿಸಂಸ್ಥಿತನೆ ॥ ಶಕ್ತಿನಿರ್ವರ್ತಿತಜಗತ್ರಯ । ಶಕ್ತಿನಿರ್ಭಾಷಿತಗುಣತ್ರ
ಯ । ಶಕ್ತಿನಿತ್ಯಾತೀತನೆಸದಾಶಿವನೆಜಯಯೆಂದ ॥೪॥ ನಾದರೂಪನೆನಾದಗಮ್ಯನೆ । ನಾದಸಂಶ್ರುತಿಸೃಷ್ಟಿಹೇತುವೆ । ನಾದಬಿಂ
ದುಕಳಾವಿಹೀನನೆನಾದಗೋಚರನೆ ॥ ನಾದಮಯವಿಗ್ರಹನೆನಾದಾಂ । ತಾದಿಲಕ್ಷಿತಚಿತ್ಸರೂಪನೆ । ನಾದಸಂಸ್ತುತಿಭೇದತುಷ್ಟನೆ

ಹರಿಹರಸ್ತುತಿ.

ಜಯನಮೋಯೆಂದ ॥೫॥ ಆನುನೀನಜನೀನುಸುರಪತಿ । ನೀನುಪಾವಕಯಮಕುಬೇರನು । ನೀನುನಿಋಋತಿವರುಣವಾ
ಯುಗಳೆಂಬವರುನೀನು ॥ ಭಾನುಶಶಿತಾರಾಗ್ರಹಾವಳಿ । ನೀನುಗುಹಗಣಪತಿಗಳೆಂಬರು । ನೀನುನೀನೇನಾಳ್ಪದೀಸಚರಾ
ಚರವಿದೇದ ॥೬॥ ನೀನುತಾನೆಂದೇನುಭೇದವಿ । ಹೀನವಲ್ಲೈನಾವುನಮ್ಮೊಳ । ಗಾನುನೀನೆಂಬೆರಡಿನವುಪಾಧಿಕವಿಭೇದದ
॥ ನೀನಲಾಶ್ರೀಯೆನಿಸಿನಿಜವ । ಕ್ಷೋನಿವಾಸಿಯೆನಿಪ್ಪೆನಿಜಗಾ । ತ್ರಾನುಮತಗೌರೀಸ್ವರೂಪನುತಾನಲಾಯೆಂದ ॥೭॥
ಒಂದೆನಿಜಮುನಿವಂದ್ಯರಿರಸುರ । ವಂದ್ಯರಿರನೀವರಿವುದಿದುತಾ । ಕಂದಲೊಳಗಣಹಾಲುಜೂಳಿಗೆಯರಡಾಬಹುದೆನಲು ॥ ಇಂದು
ಧರನೆನ್ನೊಳಗೆಭೇದವ । ನಿಂದುಮೊದಲೀಕ್ಷಿಸಿದರಾದರೆ । ಕೊಂದುಕೊಂಡಿರಿನಿಮ್ಮನೇನೀವೆಂದನಸುರಾರಿ ॥೮॥ ಮುಕುತಿಗಿ
ರೆವೊಡೆಯರಾವಿದ । ನಕಟತಿಳಿಯದೆಬರಿದೆಮಾಯಾ । ವಿಕಳಮತಿಗಳುಶೈವವೈಷ್ಣವವೆಂಬಭೇದವನು ॥ ಸುಕೃತಹೀನರು
ಮಾಡಿಘನನಾ । ರಕದೊಳಾಳುವರಜ್ಞರಾರೆಂ । ಬುಕುತಿಯನುಕೇಳದುರಾತ್ಮರುಶಿವಶಿವಾಯೆಂದ ॥೯॥ ನಿಂದಿಸಿದಡೆನ್ನುವ
ಶಿವನನು । ನಿಂದಿಸಿದರಹರೀತನನುದಿಟ । ನಿಂದಿಸಿದರೆನ್ನುವನುನಿಂದಿಸಿದವರುಭಾವಿಸಲು ॥ ವಂದಿಸಿದಡೆನ್ನುವನುಶಿವನನು ।
ವಂದಿಸಿದರಹರೀತನನುನೆರೆ । ವಂದಿಸಿದರಭಿವಂದನೆಯಮಾಡಿದವರೆನಗೆಂದ ॥೧೦॥ ಎನ್ನಭಕತಿಗೆಶಿವಭಕತಿಸಂ । ಪನ್ನಸಾಧ
ವೆನಿಸುವುದುಶಿವ । ನುನ್ನತೋನ್ನತಭಕತಿಗೆನ್ನಯಭಕತಿಯೇಬೀಜ ॥ ಎನ್ನನೊಲುವಡೆಶಿವನಭಜಿಸುವು । ದೆನ್ನನೇಭಜಿಸೊದು
ವನಕ್ಕ । ಪೂರ್ಣವದಲೋಲಾಡುವರೆನೀವೆಂದನಸುರಾರಿ ॥೧೧॥ ಎನಲದನುಕೇಳುತ್ತಸುರಮುನಿ । ಜನಮಹಾಹರುಷದ
ಜೇಯ್ಯೆಂ । ದೆನುತಕೈಗಳಮುಗಿದುಮುದದಲಿಕೃಷ್ಣಶಂಕರರ ॥ ವಿನುತಗುಣಚಾರಿತ್ರವನುವ । ರ್ಣನೆಗಳನುಮಾಡಿದರುಸಂ
ಗಟ । ವೆನಲುಸಕಲಶ್ರುತಿಮನೋಹರದಿವ್ಯಸೂಕ್ತಿಯಲಿ ॥೧೨॥ ಜಯನಮೋನಿತ್ಯಾತ್ಮಶಿವಮಯ । ಜಯನಮೋವಿಶ್ವೇಶಹರಿ
ಜಯ । ಜಯನಮೋಮುರವೈರಿಜಯಜಯಜಯತುಪುರವೈರಿ ॥ ಜಯಗದಾಚಕ್ರಾಬ್ಜಧರಜಯ । ಜಯತ್ರಿಶೂಲಕಪಾಲಧ
ಜಯ । ಜಯರಮೇಶಮಹೇಶಗೌರೀವರನಮೋಜಯತು ॥೧೩॥ ಜಯಸರೋರುಹಲೋಚನನೆಜಯ । ಜಯವಿರೂಪ
ಲೋಚನನೆಜಯ । ಜಯಮಹಾಮಣಿಕಂಧರನೆಜಯನೀಲಕಂಧರನೆ ॥ ಜಯನಮೋಸ್ತುರಥಾಂಗಧಾರಿಯೆ । ಜಯನಮೋ
ಖಟ್ವಾಂಗಧಾರಿಯೆ । ಜಯವಿಸರುಹಾಂಬಕನೆಜಯಜಯಜಯತ್ರಿಯಂಬಕನೆ ॥೧೪॥ ಜಯನಮೋವೈಕುಂಠಜಯಜಯ ।

ಜಯನಮೋಶ್ರೀಕಂಠಗೌರೀ । ಪ್ರಿಯನುಮಾಕಾಂತನುಮಹೇಶನಾರಾಯಣಜಗನ್ಮಯನೆ ॥ ಜಯಕನಕಮಣಿಶಿರೋಮಣಿವಿಭೂಷಣ । ಜಯಮಹೋರಗಮಣಿವಿಭೂಷಣ । ಜಯತುಶ್ರೀವತ್ಸಾಂಕಶೇಖರಿತಾರ್ಧಹರಿಣಾಂಕ ॥೧೬॥ ಇಂತುಸುರಮುನಿವರಮಹೋರಗೆ । ಸಂತತಿಗಳಾಸಿದ್ಧಚಾರಣ । ರಂತರಿಕ್ಷನಿವಾಸಿಗಳುಶಂಕರಸಮಾಶ್ರಿತರು ॥ ಶಾಂತಮಗೆಹೊಗಳುತ್ತಲಿರಲಂ । ದಂತರಾತ್ಮಕನೊಲಿದುಲಕ್ಷ್ಮೀ । ಕಾಂತನೊಡನಿಂತೆಂದನಧಿಕಮನೋನುರಾಗದಲಿ ॥೧೭॥ ದೇವನೀನಿಂದೀಮಹರ್ಷಿಸು । ರಾವಳಿಗಳೀಸಕಲಪರಿಜನ । ನೀವಿಳಾಸದಲೈತರಲುತಾನೀವನಾಂತರಕೆ ॥ ಅವುದಿದುಕರ್ತವ್ಯವೀವಿಬು । ಧಾವಳಿಗೊಮುನಿಗಳಿಗೊಪರಿವಾ । ರಾಳಿಗೊತನಗೇನುಬೆಸನಾಜ್ಞಾಪಿಸುವುದೆಂದ ॥೧೮॥ ಬಂದೆನಾನೀನಿನ್ನಚರಣ । ದ್ವಂದ್ವದರುಶನದರ್ಥಿಯಲಿನೀ । ನಿಂದದಕೆವಿಸ್ಮಯವಮಾಡಲದೇಕೆಪುತ್ರನನು ॥ ತಂದೆಪಡವರ್ಥಿಯಲಿತಪದಲಿ । ನಿಂದೆನೇತಕೆಮುಚ್ಚುಮರೆಕೊಡು । ಕಂದನನುಕಾಮನನುತನಗೆಂದನುಮುರಧ್ವಂಸಿ ॥೧೯॥ ಇತ್ತೆನಂದೇಕೃಷ್ಣನಿನಗಾ । ಪುತ್ರನನುನೀಬೇಡಿಕೊಳಲೇ । ಕುತ್ತಮನೆತಗವೇಕೆತನ್ನನುನಾಚಿಸಲದೇಕೆ ॥ ಮತ್ತೆರುಕ್ಮಿಣಿಯುದರಭವನಹ । ಸತ್ಯಧಿಕಸಾಹಸಿಕನುನ್ನತ । ಕೀರ್ತಿಯಲಿಪ್ರದ್ಯುಮ್ನಸಂಜ್ಞಿಕನೆಂದನಖಿಳೇಶ ॥೨೦॥ ಆತನಾನಿನ್ನಂತೆವೈರಿ । ವ್ರಾತದುಸ್ಸಹವೀರ್ಯಶೌರ್ಯೋ । ಪೇತನಹನೀತ್ರಿಜಗದಲಿಗುಣರೂಪವಿಭವದಲಿ ॥ ಖ್ಯಾತನಹನಾರುಕ್ಮಿಣೀಸಂ । ಜಾತನಲಿಯದುವಂಶಲತೆಸಕ । ಲಾತುಮನೆಕಲ್ಪಾಂತಪರಿಯಂತೆಂದನಖಿಳೇಶ ॥೨೧॥ ಒಂದುನೆವವನುಮಾಡಿತನ್ನಯ । ಮಂದಿರಕೆಮನವೊಲಿದುದೇವಮು । ಕುಂದಬಿಜಯಂಗೈದೆಭಕ್ತಾನುಗ್ರಹಾರ್ಥದಲಿ ॥ ಕಂಡೆಣಿಯೆನಿನ್ನಂಘ್ರಿಕಮಲ । ದ್ವಂದ್ವವನುತಾಕಾಣಪಡದೆನು । ಕುಂದದೀಸಂಸಾರಸ್ವಾರ್ಥಕವಾಯ್ತುತನಗೆಂದ ॥೨೨॥ ಧನ್ಯನಾದೆನುನಿನ್ನಚರಣದ । ಸನ್ನಿಧಿಯಸಂದರುಶನದಲತಿ । ಮಾನ್ಯರಾದರುಗುಹಗಣಾಧೀಶ್ವರದದೇವಿಯರು ॥ ಧನ್ಯರೀಸುರವರರುಋಷಿಗಳು । ಧನ್ಯರೀವನಖಗಮೃಗಂಗಳು । ಧನ್ಯರೀಗಿರಿತರುನದೀಗುಲ್ಮಾದಿಕವಿದೆಂದ ॥ ವೇಣುಮರಂಗಳುತಳಿರುತಿವೆಹೂ । ದೊಣೆಕೆಣಂಗಳುಹೆಚ್ಚುತಿವೆಮೃಗ । ಗಣಗಳಿವೆನಿರ್ವೈರದಲಿತಮ್ಮೊಳಗೆಭೂಮಿಯಿದು ॥ ತೃಣಜಲಾದಿಸಮಗ್ರವಾಗಿದೆ । ಯೆಣಿಸಲೇಕಿಂತಿದನುನಾರಾ । ಯಣನೆನಿನ್ನಂಘ್ರಿಯಸಕಾಶದಲೆಂದನಖಿಳೇಶ ॥೨೪॥ ಹೇಳದಿರುಮರದಾಗಿತಪದಲಿ । ಶೂಲಪಾಣಿಯುಭಜಿಸಿಪಡವೆನು । ಬಾಲಕನನೆಂಬೊಂದುಬಳಕೆಯನಾಚಿಕೆಯಮಾತ ॥ ಶೂಲಪಾಣಿಗಳೇಸುಮೇಣುವು । ರಾಳವಾಹನರೇಸುನಿನ್ನಯ । ಲೀಲೆಯಲಿಸಂಭವಿಸಿರಳಿಯರಸಂಖ್ಯೆಲೀಲೆಯಲಿ ॥೨೫॥ ಬೀಳುಕೊಡುತನೆಗಿಂನುನೀನಿ । ನ್ನಾಲಯಕೆನಡೆಭೂಮಿಭಾರವ । ಬೇಳುಭುಜಬಲವನ್ನಿಯಲಿಹೋಗೆನುತಬೀಳ್ಕೊಡಲು ॥ ನೀಲಲೋಹಿತನೆಂದನುಡಿಗಳ । ನಾಲಿಸುತ್ತಕೈವಿಡಿದುಲಕ್ಷ್ಮೀ । ಲೋಲನುಚಿತೋಕ್ತಿಗಳಲೀಶನನೆಂದುಬೀಳ್ಕೊಂಡ ॥೨೬॥ ಆಸಕಲಪರಿವಾರನಿಕರಗ । ಣೇಶಗುಹಗೌರೀಸಮಸ್ತಧ । ನೇಶಕಿನ್ನರಯಕ್ಷರಾಕ್ಷಸಭೂತಗಣಸಹಿತ ॥ ಈಶನಂತರ್ಧಾನವೆಂಬಾ । ವಾಸವನುಗಮಿಸಿದನುನೆರೆದವ । ಹಾಸುರಾಸುರಮುನಿನಿಕರವೀಕ್ಷಿಸಲುನಿಮಿಷದಲಿ ॥೨೭॥ ಮರಳಿದನುಬಳಿಕಿತ್ತನಿಖಿಳಾ । ಮರರಜಯರವವಾದ್ಯಗೀತೋ । ತ್ಕರದಘನವಿಭವದಲಿಶಂಖಮೃದಂಗರವಗಳಲಿ ॥ ಗರುಡವಾಹನನಾಗಿಮುನಿವರ । ವಿರಚಿತಸ್ತುತಿಪಾಠವೆಸೆಯಲು । ಪರಮಮಂಗಳಮೂರ್ತಿಬಂದನುಬದರಿಕಾಶ್ರಮಕೆ ॥೨೮॥ ಸೇವೆಯನುಮಾಡುತ್ತಬಹುಭೂ । ತಾವಳೀನಾಥರನುಪರಮಾಕೃ । ಪಾವಲೋಕನದಿಂದಕಳುಹಿದನಿಷ್ಟವರಗಳನು ॥ ಈವ್ರತವೆಮ್ಮಂಮಾರ್ಗದಲಿರಾ । ಜೀವಭವನನುಬೀಳುಕೊಟ್ಟನು । ರಾವಳೀಸೇವಿತನುಬಂದನುಬದರಿಕಾಶ್ರಮಕೆ ॥೨೯॥ ಕಳುಹಿಮರಳಿದನಂನಿಗಸ್ತಾ । ಚಲಕೆರವಿರಾಜೀವನಾಭನ । ಲಲಿತಚರಣಸರಾಗರಾಗಾನ್ವಿತನುತಾನಾಗಿ ॥ ಹಲವುಕಾಲಾಧ್ಯಾಯದಿಸತ್ಕೃತಿ । ಗಳನೆಮಾಡಿದಮುನಿಗಳೆಡೆಯಲಿ । ನಿಲಿಸುವೆನುಕೃಷ್ಣನನುತಾನೆಂಬಂತೆಮನವೊಲಿದು ॥೩೦॥ ಮರಳಿಬಂದನುಮೂರನೆಯದಿನ । ಕಿರದೆಮುನಿವರರಾಶ್ರಮಕೆಮುರ । ಹರನುಮಂನಿಸುತಖಿಳದಿಕುಪಾಲರನುಬೀಳ್ಕೊಳಿಸಿ ॥ ಹರುಷವಿಂಗಿಲಾಸಕಲಭೂಮಿಾ । ಸುರರಮಂತ್ರಾಕ್ಷತೆಯುರವದ । ಬ್ಬರಣೆಯಲಿನಿತ್ಯಾತ್ಮನೆಸೆದನುಪರ್ಣಶಾಲೆಯಲಿ ॥ ... ... ॥೩೧॥

ಅಂತು ಸಂಧಿ ೬೩ಕ್ಕಂ ಪದನು ೨೯೭೪ಕ್ಕಂ ಮಂಗಳಮಸ್ತು.

ಅರವತ್ನಾಲ್ಕನೆಯ ಸಂಧಿ.

ಪೌಂಡ್ರಕನ ಯುದ್ಧ.

ಸೂಚನೆ ॥ ವಾಸುದೇವನಪುರಕೆಪೌಂಡ್ರಕ । ವಾಸುದೇವನೆನಿಪ್ಪನೃಪನ । ತ್ಯಾಸುರದಲೈತಂದುಮುತ್ತಿ
ದನಿರುಳುವೇಗ್ರಹರಿಸಿ ॥ ... ...

ಪದನು ॥ ಕ್ಷಿತಿಪಕೇಳ್ಕಾಶೀರಾಜನ । ಸುತೆಸುತನುನೆಂಬವಳುರೂಪಾ । ನ್ವಿತೆಗುಣಾನ್ವಿತೆಯಾಗಿರಲುವಸುದೇವನಾಕೆಯನು । ಕೃತವಿವಾಹದಲೋಲಿಸಿದಮಸಂ । ತತಿವಿಹೀನನುಕಾಶೀರಾಜನು । ಸುತೆಯಗಂಡಂಗಿತ್ತನಾನಿಜರಾಜಸಂಪದವ ॥೧॥

ಇರಲುಜನಿಸಿದನಾಕೆಯಲಿಭೂ | ಸ್ಕರಸಮಾನನುಪೌಂಡ್ರಕಾಹ್ವಯ | ಪರತನಯನಾತನಲಿರಾಜ್ಯವನಿರಿಸಿವಸುದೇವ || ಬರುತಕಂಪನತಂಗಿಯನುಮತ್ತೆ | ರತಿಮದುವೆಯನುಮಾಡಿಕೊಂಡಂ | ಬುರುಹಮುಖಿದೇವಕಿಯಲಿರ್ದನುಸಂದುಸೆರೆವನೆಗೆ || ೨ || ಮತ್ತೆಬಾರದೆಹೋಗದಿರದೆಂ | ಬತ್ಯಧಿಕಸಂತಾಪವಾಭ್ರೂ | ಣತ್ವವದರಿಂಮೇಲಿದೇವಕಿದೇವಿಯುದ್ವಾಹ || ಹೆತ್ತತಾಯಿಗೆಸವತಿಯುಹಮ | ಸ್ಥಿತೆಯುಮಲ್ಲಂತದರಶಿಖಿಯಲಿ | ಹೊತ್ತಿದುದುಪೌಂಡ್ರಕನಹೃದಯಮಹಾನುತಾಪದಲಿ || ೩ || ವಾಸುದೇವಾಖ್ಯೆಯಲಿಜನಿಸಿದ | ನೀಶನಾದೇವಕಿಗೆತಾನೂ | ವಾಸುದೇವನಲಾತದುದ್ಭವನಾಗಿಪೌಂಡ್ರಕನು || ವಾಸಿಗನುಸಂಗ್ರಹಿಸಿಮತ್ಸರ | ದೋಷವನುತಾನೊಬ್ಬನೇದಿಟ | ವಾಸುದೇವನುಮತ್ತೆಬ್ಯಾರಿಲ್ಲೆಂದುಸಾರಿಸಿದ || ೪ || ಖ್ಯಾತನಾದನುಕೃಷ್ಣನೆಂಬೀ | ಮಾತನೇಕೇಳುತ್ತಘನರೋ | ಷಾತಿರೇಕವತಳೆದುಹರಿವಿರಹಿತವಿದೆಂದರಿದು || ಭೂತಳಾಧಿಪನಿರುಳುಯಾವ | ಜಾತನಿದ್ರಾಪುರಜಘನಬಲ | ಜಾತದಲಿನಡೆತಂದುಮುತ್ತಿದನೆಂಟುದಿಕ್ಕಿನಲಿ || ೫ || ಏಕಲವ್ಯಾಹ್ವಯನಿಷಾದಾ | ನೀಕಪತಿಯುಸಹಾಯವನುಮಾ | ತಾಶುಮತಿಗಾಚರಿಸುತೆಂಭತ್ತೆಂಟುಸಾವಿರದ || ಭೀಕರಾಕಾರದನಿಷಾದಾ | ನೀಕದಲಿನಡೆತಂದುಯಿರುಳಲಿ | ನೂಕಿದರುದೆಸೆದೆಸೆಗೆಕೈದೀವಿಗೆಯಬೆಳಕಿನಲಿ || ೬ || ಬಂದುಪೂರ್ವದ್ವಾರದಲಿಪಡೆ | ಸಂದಣಿಸಿಬಿಟ್ಟುದುದುರಾತ್ಮರು | ನಿಂದರಾಕರ್ಣಾಯತಾಸ್ತ್ರರುಬಿಗಿದಬಿಲ್ಲಿನಲಿ || ಬೆಂದುದೋಜಗವೆನಲುಮೈಗೊಂ | ಡಂದುದೀವಿಗೆಬೆಳಗಿದವುನಡೆ | ತಂದನಾಪೌಂಡ್ರಕನುರಾಜದ್ವಾರದಭಿಮುಖಕೆ || ೭ || ಏವೊಕರೆಕರೆಕಾಳಗಕೆಗೋ | ವಳನಕರೆಬರಹೇಳುಬರಹೇ | ಳೊಳಗೆತನಗಿರಲೀಕೆಪೌಂಡ್ರಕವಾಸುದೇವನಲಾ || ಕೊಳುಗುಳಕೆಬಂದವನುನಿಜಭುಜ | ಬಲವತೋರದೆಯಂನೊಡನೆಹೆಂ | ಗೊಳೆಯುಹಸುವಿನಕೊಲೆಯುಹಸೇಣಲ್ಲೆನುತಗರ್ಜಿಸಿದ || ೮ || ಮುರಿದುಹೊಗಿಕೋಟೆಯನುಸಮರಕೆ | ಹೊರವಡದಡೆಮಾಗೇನುಹಿಡಿತುರು | ಶರೆಗಳನುಥಳಕೋಶವನಿತಾವಾಹನಾದಿಕವ || ಹೊರವಡಿಸಿನೂಕೆನುತನೃಪನ | ಬ್ಬರಿಸಲೆದಬಲವಂಕದವರೀ | ಡಿರಿದುಹೊಕ್ಕರುಹಾರೆಗುದ್ದಲಿಕಾರರುರವಣಿಸಿ || ೯ || ಕಡಿಕಡಿದುಕೆಡಹಿದರುಗುದ್ದಲಿ | ಗಡಿತದವರೋರಂತೆಕೋಟೆಯ | ನೊಡದುಪ್ರಾಕಾರವನುವೀರರೊಲಕ್ಷಸಂಖ್ಯೆಯಲಿ || ಬಿಡದೆತತ್ಪುರವಾಸಿಗಳಕಿವಿ | ಗಡಿಸಿದರುಕಟಕಟಕಟಧ್ವನಿ | ಜಡಿದುದೋರಂತಬುಜಜಾಂಡಕಟಾಹಮಂಡಲವ || ೧೦ || ಘೋರರೆನಲುಮೊಳಗಿದವುಘನಗಂ | ಭೀರಭೇರೀಪಟಹಮಾತಾ | ಳೋರಗಂಗಳುಕಂದೆರದುಕಡೆಗಂಣಲಾಲಿಸಲು || ಮೇರೆದಪ್ಪಿದುದಹಿತಬಲಯದು | ವೀರರದನಾಲಿಸುತಬಂದವ | ರಾರನುತರೋಷದಲಿನೆರೆದರುಭಟರುಬೊಬ್ಬಿರಿದು || ೧೧ || ಬಂದವನುಪೌಂಡ್ರಕನುಗಡಗೋ | ವಿಂದನಿಲ್ಲದಹೊತ್ತನರಿದೈ | ತಂದನೀತಪ್ಪೇನೆನುತಸಾತ್ಯಕಿಹಲಾಯುಧರು || ಸ್ಯಂದನವನೇರಿದರುಕಂಸನ | ತಂದೆಯುದ್ಧವಶೌರಿಮುಖ್ಯರು | ಸಂದಣಿಸಲೆದಬಲದಲಾಗದಸಾರಣಾದಿಗಳು || ೧೨ || ಏರಿಸಿದಬಿಲ್ಲಿನಲಿತುರಗವ | ನೇರಿದರುರಾವುತರುರಥವನು | ಹೇರಿಸಿದರಸ್ತ್ರದಲಿರಥಿಕರುಗಜಘಟಾವಳಿಯ || ಏರಿದರುಮಾವಂತರಂಕೆಯ | ಮೀರಿದರುಪಟುಭಟರುಬಿರಿದನು | ಸಾರಿದವುಕಹಳೆಗಳುಗಡಬಡಿಸಿದವುನಿಸ್ಸಾಳ || ೧೩ || ಬಿಗಿದಕವಚದಬೆಂನಬತ್ತಳಿ | ಕೆಗಳತಿರುವೊಡೆಸೀಸಕಂಗಳ | ಬಿಗಿದರತ್ನದಕಾಲಕಡೆಯದಮುಕುಟಕುಂಡಲದ || ವಿಗಡರೇರಿದರಾಹವಕೆಧಗಧಗಿಪಕೈದೀವಿಗೆಯಬೆಳಗಿನ | ಲೊಗುಮಿಗೆಯಕೋಪದಲಿಪೂರ್ವದ್ವಾರದಲಿಜಡಿದು || ೧೪ || ಸಾರೆಲವೊಪೌಂಡ್ರಕನೆನಿಪ್ಪವ | ನಾರುಯವನನುತ್ತೋರಿರೈ | ವಾರಿಸಲಬೇಕಿನ್ನುತೋರಿಸುಮೀದುರಾತ್ಮಕನ || ಕಾರಿರುಳುಕಾಳಗದಕಾರ್ಯದ | ಚೋರನನುನೃಪಕುಲದಸುದುರಾ | ಚಾರನನುತ್ತೋರೆನುತಸಾತ್ಯಕಿಜರಿದುಗರ್ಜಿಸಿದ || ೧೫ || ಐದೆನಾಸೆಲವೆಲವೊಬಾರದೆ | ಮಾಧವನೊನೀನಾರುರೋಷ | ವ್ಯಾಧಿತನೆತೊಲಗೆಲವೊಸಾಯದಮುನ್ನತನ್ನೊಡನೆ || ಸಾಧುವಲ್ಲಿದುಸಮರಮಾತಿನ | ಬಾಧೆಯನುಸೈರಿಸೆನುತೋರಾ | ರಾಧೆಯುಳಮಿಂಡನನುತನಗೆನುತೆಚ್ಚನಾಭೂಪ || ೧೬ || ಅರುತಾನೆಂದೆಂಬಡದರವಿ | ಚಾರನಿನಗೇಕೆಲವೊಮಾಳ್ಪೆನು | ಕೂರಲಗಿನಕ್ಷರದಲಿಪಿಯಲಿನಿನ್ನಗಾತ್ರದಲಿ || ಸಾರುಮಾಧವನೇಕೆನಿನ್ನಯ | ಬೇರುಗೊಲೆಗಾನಿರಲುಸಾತ್ಯಕಿ | ವೀರಗಜಪಂಚಾಸ್ಯನರಿಯಾಯೆನುತತೆಗೆದೆಚ್ಚ || ೧೭ || ನಿಪುಣನಹಲಿಪಿಗಾರರಂದದ | ಲಪಶದನೆಹೋಗೆನುತಪೌಂಡ್ರಕ | ನೃಪತಿಹೊಳ್ಳದನಸ್ತ್ರದಲಿಸಾತ್ಯಕಿಯುಹಯರಥವ || ಅಪಹರಿಸಿಸಾತ್ಯಕಿನೃಪೋತ್ತಮ | ನಪರಿಮಿತಬಾಣೌಘವನುಸಿಸ್ಕ್ರ | ಪೆಯಲೆಚ್ಚನುನಿಶಿತಶರನಿಕರಂಗಳಲಿನೃಪನ || ೧೮ || ಅತ್ತಲೊಂದೆಸೆಗೇಕಲವ್ಯನು | ತ್ರೆತ್ತಿದನಂಬಿನಲಿಮೊಳಗುವ | ಮತ್ತಗಜರಥಹಯಪದಾತಿಗಳೊಡನೆತುಳಿತುಳಿದು || ಇತ್ತಲಾಯದುವೀರರಿಗೆನಿ | ವರ್ತಿಸಿದುದಾಹವನೃಪಾಲರ | ಮೊತ್ತದೊಡನೇನೆಂಬೆನಾಹವದುರುಭಯಾನಕವ || ೧೯ || ದೀವಿಗೆಯಬೆಳಗಿನಲಿಹಳಚಿದು | ದಾವುಭಯಬಲಜಲಧಿನಿಸ್ಸಾ | ಳಾವಳಿಯನಿಸ್ಸಾಳರವವಳ್ಳಿರಿಯಿದಿಗುತಟವಾ || ಜಾವವಿರಲುದಯಕ್ಕೆಸುಪ್ರ | ಸ್ಥಾನವಡದುದುಸಮರಕೊಂಡರು | ಜೀವನನುಜಗದೇಕವೀರರುಸಕಲರೊಗ್ಗಿನಲಿ || ೨೦ || ನೇಗಿಲಲಿತೆಗೆತೆಗೆದುಮುಸಲದ | ಲಾಗಿನಲಿನೈಷಧಬಲದಷ್ಟೈನ | ಸಾಗರವನೊರಸಿದನುಗಜರಥತುರಗಪತ್ತಿಗಳ || ಜಾಗರವಮಾಡಿಸಿದನಿಜಜನ | ಮಾಗಣಿಸುಬಾಳ್ಗರಕಟ್ಟೆಯ | ನಾಗಿಸಿದನೊಂದೇಮುಹೂರ್ತದಲಂದುಬಲಭದ್ರ ||

ಅತ್ತಲಾಸಾತ್ಯಕಿಯುಶರಗಳ | ಗುತ್ತರಿಸಿಧೈರ್ಯವನುಬಾಯಲಿ | ನೆತ್ತರನುಕಾರುತ್ತಪೌಂಡ್ರಕನೆದ್ದುಹಲುಮೊರೆದು || ಸತ್ತುಹೋ
ಗಿಂನೇನೆನುತಲಾ | ಮೃತ್ಯುವಿನಪರಿವಾರವೆನುತಯು | ದೊತ್ತಮನಭಟಾಳವನುನಾರಾಚದಲಿಕೀಲಿಸಿದ ||೨೨|| ಹಾಮುರಾಂ
ತಕಯುನುತಸಾತ್ಯಕಿ | ಭೂಮಿಗಿಳಿದನುಮೂರ್ಛೆಯಲಿಸಂ | ಗ್ರಾಮಧೀರನುಪೌಂಡ್ರಕನಶರಹತಿಗೆವಸವಳಿದು || ತಾಮಸನು
ನುಗುಳ್ದೆಚ್ಚನಶ್ವ | ಸ್ತೋಮವನುಸಾರಥಿಯನಾತನ | ವೈಮನಸ್ಯದನಿಷ್ಠೆಯನುಕ್ಷಣಾತ್ತಕಡುಮುಳಿದು ||೨೩|| ಎದ್ದ
ನೆಂಬದೇಹಿಗಳಿಗೆಗಾಹವ | ನಿದ್ರಿತನುನಾರಾಚಮುದ್ರಾ | ಮುದ್ರಿತನುನೋಡಿದನುತುರಗಂಗಳನುಸೂತನನು || ಅದ್ರಿಧರ
ನಾಳ್ಪದತನಗಿದು | ಭದ್ರವಾಪ್ತುಕಟಿನುತತಾಂಡವ | ರುದ್ರನಾದನುರೋಷದುದ್ರೇಕದಲಿಯದುವೀರ ||೨೪|| ಅದಟಿನ
ಕೋಗಿಲೆಯಿದಗರ್ವವು | ಜೋದಧಿಗೆವಡಬಾಗ್ನಿಯಿದೆಯೆನುತಲಿ | ಯಾದವೋತ್ತಮನಧಿಕಕೋಪಾಟೋಪದಲಿಜಡಿದು ||
ಸೇದಿಬಿಡಲಸ್ತ್ರವನುಪೌಂಡ್ರಕ | ಮೇದಿನೀಶನವಕ್ಷದಲಿತೆರೆ | ಹಾದುದಸುವಿಂಗುಗುವಘನರುಧಿರಾಬುಪೂರದಲಿ ||೨೫||
ಹಾರಿಬಿದ್ದನುಧರೆಗೆನೆತ್ತರು | ಕಾರುತಡಿಗಡಿಗಪನಿಪತಿಬಾ | ಯಾರಿದನುವಸವಳಿದುಕಂಗಳುತಿರುಗಿಮೂರ್ಛೆಯಲಿ || ಮಾರಿದ
ನುಪಾತಿನ್ನತ್ತಿಯನುಮಿಗೆ | ಡೋರಿಯೋದುದುಕೊರಳುದೀವಿಗೆ | ಗಾರರಸುವನುನೋಡುತಿರ್ದುದುಬೆರಳಮೂಗಿನಲಿ ||೨೬||
ಮತ್ತೆನಿಮಿಷಾಂತರಕೆಮೂರ್ಛೆಯ | ನೊತ್ತಿರಥದಲಿನಿಂದುತರಹರಿ | ಸುತ್ತಕೊಂಡನುಧನುವನೊರಸುತ್ತುಧುರರಕರ್ಕಶನು ||
ಇತ್ತಲಿತ್ತಲುವೀರನಿಲ್ಲೆನು | ತೆತ್ತಣದುರಣಭಂಗವೆನಗೆನು | ತತ್ಯಧಿಕರೋಷದಲಿತೆಗೆದನುನಿಶಿತಮಾರ್ಗಣವ ||೨೭|| ಎಸೆದ
ಮುಂನವೆಚಾಪವನಾಖಂ | ಡಿಸಿದನಾಶಿನಿವೀರನೆಲವೋ | ಹುಸಿಯೆನುತಮತ್ತೊಂದಕೊಂಡನುಶೂರನಂದನನು || ಕುಸುರಿದರಿ
ದನುಸೂತನನುಹಯ | ವಿಸರವನುಸಾತ್ಯಕಿಕೃತಾಂತನ | ವಸತಿಯನುಹೊಗಿಸಿದನುಮೊಳಗಿದನಟ್ಟಹಾಸದಲಿ ||೨೮|| ವಿರಥ
ನಾದನುವೀರಪೌಂಡ್ರಕ | ಧರಣಿಪತಿಹಾಯೆನುತಬಲವ | ಬಬ್ಬಿಸೆಕಾಲಾಳಾಗಿನಿಂದನುಚಾಪವನುಶೆಳದು || ಸರಳಮಳೆಗರವು
ತ್ತಲಿರಲದ | ನಿರದೆತರಿಬಿಟ್ಟನುಸಾತ್ಯಕಿ | ಧರಣಿಪಾಲರಯುದ್ಧವದುಘಾತವಾಯ್ತುಮಾಜಗಕೆ ||೨೯|| ಮತ್ತೆಸಾತ್ಯಕಿ
ಪೌಂಡ್ರಕನನೆಸೆ | ಪ್ಪತ್ತುಸಾಸಿರಬಾಣನಿಕರದ | ಮೊತ್ತದಲಿಮುಳುಗಿಸಿದನೊಂದೇನಿಮಿಷಮಾತ್ರದಲಿ || ಕತ್ತಿಸಿದನಾಪಾದತಳ
ಮಣಿ | ಮಸ್ತಕಾಂತವೆನಲ್ಕೆಧೈರ್ಯದ | ಸತ್ವವೆಂತುಟೊಹಳಚುತಿರ್ದನುಬಿಡದೆಯದುವರನ ||೩೦|| ಕಡಿದನಾತನಚಾಪವನು
ಕೈ | ಯ್ಯಡೆಯಲಿಕ್ಕಡಿಯಾಗಲವನಿಗೆ | ಕೆಡಹಿಹಯನಿಕರವನಾಮಿಗೆಸೂತನನುನೋಯಿಸಿದ || ಪೊಡವಿಗಿಳಿದನುಬಳಿಕಸಾ
ತ್ಯಕಿ | ಕಡಿದನಾತನಧನುವನಿಬ್ಬರ | ಕಡುಹುಕೈಮನದಳತೆಯನುವಿಾರಿದುದುಸಮರದಲಿ ||೩೧|| ಕೊಂಡರಿಬ್ಬರುಭಟರು
ಯಾದವ | ಪೌಂಡ್ರಕರುಗದೆಗಳನುಧುರದಲಿ | ಮಂಡಲವನಾವರಿಸಿಹೊಯಿದಾಡಿದರುಕೈದಣಿಯೆ || ಕಂಡರಾಗದೆಗಳ್ಗೆಕಡೆಯು
ನು | ಗಂಡುಗಲಿಗಳುಮುಷ್ಟಿಯುದ್ಧವ | ಕೊಂಡರೊಬ್ಬರನೊಬ್ಬರಸುಗೊಂಬಧಿಕರೋಷದಲಿ ||೩೨|| ಹಳಚಿಹೊಯ್ದಾಡಿದರುಕ
ತ್ತಲೆ | ಯೊಳಗೆಕಲಿಪೌಂಡ್ರಕಯದೂತ್ತಮ | ರಿಳೆರಸಾತಳಕಿಳಿಯಬಗದುದುಚರಣಹತಿಗಳಿಗೆ || ನಿಳಿನಿಟಿಲುಶಬ್ದಂಗಳನುಜನ |
ವೊಲಿದುಕೇಳುತಭೂಪ್ರಭುವನ | ಪ್ರಳಯಮೇಘದಶಿಡಿಲಘಾಯವೊಯೆನುತಬೆರಗಾಯ್ತು ||೩೩|| ಅತ್ತಲಾಯ್ತುನಿಷಾದಪ
ತಿಯಲಿ | ಚಿತ್ರವಾಹಲಧರನೆಹಲಧರ | ನತ್ತಲಾದುದುವೈರಬುದ್ಧಿನಿಷಾದಬಲಪತಿಗೆ || ಕೆತ್ತುದಂತಹೃದಯರೋಷದ | ಮುತ್ತಿ
ಗೆಯಲಂತಕನಕೈಜ್ವಾಲಿ | ಗುತ್ತಿಗೆಯುಕೊಂಡಂತೆಬಿಡದಾಂಕಿಕರುಪಟುಭಟರು ||೩೪|| ಎಚ್ಚರೊಬ್ಬರನೊಬ್ಬರಂಬನು |
ಕೊಚ್ಚಿದರುಕೈಮನದಕಡುಹನು | ಬಿಚ್ಚಿದರುಬೀರಿದರುಭೀತಿಯನಹಿತಸಂತತಿಗೆ || ಮೆಚ್ಚಿದರುಮಮತೆಯಲಿಮದದಲಿ | ಹೆಚ್ಚಿ
ದರುನೋಟಕರಕಂಗಳಿ | ಗಚ್ಚರಿಯತೋರಿದರುಕೈದೋರಿದರುಕಳನೊಳಗೆ ||೩೫|| ಕಡಿದನಹಿತನಚಾಪವನುಹಲ | ದೊಡೆ
ಯನದನೀಡಾಡಿಬಡುಗವ | ತುಡುಕಿದನುಕೈವರ್ತಿಸಿದನಂಬಿಂಗೆಬಲಭದ್ರ || ಹಿಡಿದನಾತನುಪರಿಘವನುಕೈ | ಯ್ಯೊಡನೆಕಡಿದ
ನುರಾಮನಂತದ | ನೊಡನೆನೊಡನೆಕಡಿದೊಟ್ಟುತಿರ್ದನುಖಳನಕೈದುಗಳ ||೩೬|| ಮತ್ತೆಕೊಂಡನುರಣದಲಿನಿಷಾ | ದೋತ್ತ
ಮನುಮಣಿಘಂಟಿಚೇರಿಗ | ಳೊತ್ತರಿಸಲಭ್ರದಲಿತೊಳತೊಳತೊಳಪಶಕ್ತಿಯನು || ಇತ್ತನೋಡೆಲೆರಾಮಕಡಿಕಡಿ | ಸತ್ವವುಳ್ಳಡೆ
ತೋರುನಿಂದಿರೆ | ಸುತ್ತಹಲಧರನೆಡೆಯನಿದೆಕೊಳ್ಳೆನುತತೆಗೆದಿಟ್ಟ ||೩೭|| ವಿಗಾರಿಗಗನಾಂಗಣದತಮವನು | ಕೀರಿಸಡೆತಹ
ಶಕ್ತಿಬರಿವ್ಯ | ದೋರೆಹೋಗದಿರೆನುತಯದುನಾಯಕನುಕಳವಳಿಸಿ || ಹಾರಿಹಲಧರನಂಬರಾಗ್ರವ | ನೇರಿತಪ್ಪಿಸಿಕೊಂಡುಧರ
ಣಿಗೆ | ಮಾರಿದನುಶಕ್ತಿಯನುಭಾಪೆನುತಿರ್ದುದಖಿಳಜನ ||೩೮|| ಇಟ್ಟನಾಶಕ್ತಿಯಲಿಹಲಧರ | ನಿಟ್ಟವನಪೇರುರವನೆದೆಯಲಿ |
ಒಟ್ಟಿದೆಗಡುದುಶಕುತಿನೆಡುವೆಂನಿಂಗೆಖಳನೊಡಲು || ಥಟ್ಟುಗೆಡದುದುಧರೆಗೆವಜ್ರದ | ಲಿಟ್ಟಪತ್ರನವೋಲುಸುಭಟರು | ಕೆಟ್ಟ
ನೆನುತನಿಷಾದಪಡೆಮುಸುಕಿತ್ತುಹಲಧರನ ||೩೯|| ಅಸಿಮುಸಲಮುದ್ಗರಮುಸುಂಡಿ | ಪ್ರಸರದಲಿಬಹಳಾಸ್ತ್ರಶಸ್ತ್ರದ | ವಿಸರ
ದಲಿನೆಟ್ಟಣಿಸಿಬಿಡದಾವರಿಸಿಮೋಹರಿಸಿ || ಮುಸುಕುವರಿಬಲಜಲಧಿಯನುಕೋ | ಪಿಸದೆಕೊಂಡನುನೇಗಿಲಿಘನ | ಮುಸಲನ
ಲಿನೊಳಗುತ್ತಘನತರಸಿಂಹನಾದದಲಿ ||೪೦|| ಉರುಳಿದವುಗಜಘಟೆಗಳವನಿಗೆ | ಹೊರಳಿದವುಕುದುರೆಗಳುಕಾಲಾ | ಳರೆಗಡಿದ

ತಲೆತೋಳುತೊಡೆಬಸುರುಗಳಲೊರಗಿದುದು ॥ ತೆರಳದವುತೇರುಗಳುರಥಿಕರು । ವಿರಹಿತದಲೇನೆಂಬೆನಾಹವ । ದುರುಭಯಾನ
ಕರಸದಲದ್ದು ದುರುಧಿರಜಲಧಿಯಲಿ ॥೪೧॥ ಕುಣಿವಮಾಂಸಾಶನದಬಹುಶಾ । ಕಿನಿಯರುರುವೇತಾಳಕೋಟಿಯು । ಗಣನೆಗೆಟ್ಟ
ವಲಾಕಬಂಧನಿಹಂಗಸಂಕುಲದ ॥ ಹೆಣನನೆಳದೆಳದೊಯ್ವ ಮಿಗೆಪಾ । ರಣೆಯುಮಾಡುವಯಕ್ಷರಾಕ್ಷಸ । ಗಣದಹರಕೆಗಳೆಸದ
ವಾರಣದಲಿಹಲಾಯುಧನ ॥೪೨॥ ಇರಲಿರಲುಸಂಗ್ರಾಮಕೇಳಿಗೆ । ನೆರವನಟ್ಟಿದನೋಮುರಾಂತಕ । ತೆರಳುವನುತನಗೆಂದು
ಕಳದನೊಕತ್ತಲೆಯುಮರೆಯ ॥ ತರಣಿಯನೆಬೆಳಗಾಯ್ತು ಪೌಂಡ್ರಕ । ಧರಣಿಪಾಲಾಥಮನುತನ್ನಯ । ಪುರವಹೊಕ್ಕನುಕಡ
ಲನುದ್ಯನನಾನಿಶಾಧೀಶ ॥೪೩॥ ಮನೆಳಮಂಗಳವಾಯ್ತು ಯಾದವ । ಪುರಕೆಬಂದರುರಾಮಸಾತ್ಯಕಿ । ವರಮಹಾರಥಗದನು
ವಸುದೇವಾದಿಯಾದವರು ॥ ಪುರಜನಾವಳಿಪರಮಹರುಷೋ । ತ್ಕರುಷದಿಂದಿದಿರಾಗಿಬರೆಜಯ । ಶಿರಿಸಮಾಹಿತವಾಯ್ತುನಿತ್ಯಾ
ತ್ಮಕನಪುರಜನಕೆ ॥ ... ... ॥೪೪॥

ಅಂತು ಸಂಧಿ ೬೪ಕ್ಕಂ ಪದನು ೪೦೯೮ಕ್ಕಂ ಮಂಗಳಮಸ್ತು.

ಅರವತ್ತೈದನೆಯ ಸಂಧಿ.

ಪೌಂಡ್ರಕನನು ಜಯಿಸಿದ ಕಥೆ.

ಸೂಚನೆ ॥ ಶೌರಿಸಂಗ್ರಾಮದಲಿಪೌಂಡ್ರಕ । ಧಾರುಣೀಶನಸೇನೆಯಸುವನು । ಸೇರಿಸಿದನಂತಕನಪು
ರಕೆಸುದರ್ಶನಾಸ್ತ್ರದಲಿ ॥ ... ...

ಪದನು ॥ ಅರಸಕೇಳಿನನುದಯವಾಗಲು । ಪರಮಪುರುಷೋತ್ತಮನುಬದರೀ । ವರವನನಿವಾಸಿಮುನಿಗಳಿಗಿಷ್ಟಾ
ರ್ಥಸಿದ್ಧಿಯನು ॥ ಕರುಣಿಸುತಬೀಳ್ಕೊಂಡುವಹಿಲದ । ಲಿರದೆಗರುಡನನೇರಿತನ್ನಯ । ಪುರಕೆಬಂದನುಹರುಷವನುಬೀರುತ್ತಪು
ರಜನಕೆ ॥೧॥ ಕಳಸಕನ್ನಡಿವಾದ್ಯರವಮಂ । ಗಳದಲೆಸೆಯಲುಸಾಷ್ಟ್ರರ್ಯಪಾದ್ಯಾ । ದ್ಯಲಘುಸತ್ಕಾರದಲಿಗುಡಿತೋರಣಪತಾಕೆ
ಯಲಿ ॥ ಒಲಿದುಪುರಜನವಿದಿರುಗೊಳ್ಳಲಾ । ಕಳಕಳದವರಸೂತಮಾಗಧ । ಲಲಿತಸಂಸ್ತುತಿಪಾಠವೆಸೆಯಲುಹೊಕ್ಕನರಮನೆಯ ॥
ಬಂದನಸುರಾರಾತಿಯಾದವ । ನೃಂದವೈತರಲಾಸುಧರ್ಮೆಯ । ಲಂದೆಸವಸಿಂಹಾಸನಕೆಸಾತ್ಯಕಿಹಲಾಯುಧರು ॥ ಸಂದಸಾತ್ವತ
ವೃಷ್ಣಿಮುಖ್ಯರು । ಸಂದಣಿಸಲೆಡಬಲದಲುದ್ಧವ । ಗಾಂದಿನೀಸುತಪೃಥುವಿಪೃಥುಗದಸಾರಣಾದಿಗಳು ॥೨॥ ಹೇಳಿದರುವೃತ್ತಾಂ
ತವನುಬಲು । ಗಾಳಗವನಾಪೌಂಡ್ರಕಾಖ್ಯನೃ । ಪಾಲನಲಿಮಾಡಿದುದನಾತನಸೈನ್ಯಸಾಗರವ ॥ ಕೋಲವಡಬಾಗ್ನಿಯಲಿಸಲೆ
ಕ್ಕೆ । ಮೇಳವಿಸಿದುದನದನುಮುರರಿಪು । ಕೇಳಿತಲೆದೂಗಿದನುಹರಹರಯೆನುತಬೆರಗಿನಲಿ ॥೪॥ ಆಗಲದಕೇನಾಯ್ತುವೀರನೃ ।
ಪಾಗಮಕ್ರಮನೈಸಲೇನರಿ । ಕಾಗೆಹದ್ದುಗಳಿಂಗೆಹಬ್ಬವಮಾಡಿದನೆಕುಮತಿ ॥ ಲಾಗಿನಲಿನವ್ಮೊಡನೆಧುರದಲಿ । ತಾಗಿಮರಳಿದನೆ
ನುತಮುರರಿಪು । ಮೂಗಿನಲಿಬೆರಳಿಟ್ಟುಚಿಂತಿಸಿತೂಗಿದನುಶಿರವ ॥೫॥ ಇರಲುಬಂದನುದೂತನೊಬ್ಬನು । ಹೊರಗೆಬಾಗಿಲ
ಮುಂದೆನಿಂದವ । ಸರದವರಬೆಸಗೊಂಡುಹೊಗಿಸಲುಹೊಕ್ಕನೋಲಗವ ॥ ನೆರದಯದುರಾಯರಮಹಾಸಭೆ । ಯಿರವನೀಕ್ಷಿಸುತೊ
ಡಲುಕಂಪಿಸಿ । ಕರಯುಗವಮುಗಿದೆರಗಿಬಿನ್ನಹಮಾಡಿಕೆಲಸಾರ್ದ ॥೬॥ ಆರೆಲವ್ರೊನೀನಾರುಕಳುಹಿದ । ರಾರಭೃತ್ಯನುಹೇಳೆನೆ
ಲುದ್ಧೈ । ತ್ಯಾರಿಬಿನ್ನಹಚಿತ್ತವಿಸುಕಾಶೀಶನೆಂದೆನಿಪ ॥ ಭೂರಿಭುಜಬಲಪೌಂಡ್ರಕಾಖ್ಯಮ । ಹೀರಮಣನಟ್ಟಿದನುದೇವರ ।
ಚಾರುಚರಣಾಂಬುಜದಸನ್ನಿಧಿಗೆಂದನಾದೂತ ॥೭॥ ವಾಸುದೇವನುಗಂಡುತಾನೇ । ದೇಶದಲಿವಿಖ್ಯಾತನೆನಲಿದು । ವಾಸುದೇ
ವನೆನಿಪ್ಪಹೆಸರಿದುನಿನಗಿದೆತ್ತಣದು ॥ ಪಾಶುಪಾಲ್ಯವಲಾನಿನಗೆರಾ । ಜಾಸನಕೆನೀನಾರುಬಯಲಭಿ । ಲಾಷೆಯುಲ್ಲದೆಕಾರ್ಯಸಿ
ದ್ಧಿಗಳಿಲ್ಲನಿನಗೆಂದ ॥೮॥ ಅರಿಯದವರಜ್ಞಾನಿಗಳುನೀ । ನುರುವದೈವವುವಿಷ್ಣುಧರೆಗವ । ತರಿಸಿದನೆಮತ್ತೊಲಿದುಕೊಂಡಾಡಿ
ದರೆಬೆರತೆಯಲ ॥ ನೆರೆವಿಚಾರಿಸಿನೋಡಲೀಜಗ । ಕುರುವದೈವವೆತಾನುಜಗವಿದ । ನರಿಯದಾಡುವೆದಿದಕೆನೀಮುಯ್ಯಾನಬೇ
ಡೆಂದ ॥೯॥ ಅವತರಿಸಿದೆನುತಾನುಭೂಭಾ । ರವನುಕಳೆಯಲುಬೇಡಿಕೊಂಡರು । ದಿವಿಜರೆಲ್ಲರುಸಕಲಭೂತಂಗಳಲಿನೆ
ಲೆಕ್ಕೈಪೆಯು ॥ ಸವನಿಸಲುನೀನಾರುಬಿಡುನಾ । ಮವನುಮೂಢಾರೋಪಿತವನಾ । ಹವವಕೊಡುಬಿಡಲಾರದಿರ್ದಡೆಮರೆಯೊ
ಗುವುದೆಂದ ॥೧೦॥ ಎಂನಚಿಹ್ನವೆನಿಪ್ಪಚಕ್ರವ । ನೆಂನದೆನಿಸಃಪ ಗದೆಯುಶಾರ್ಙವ । ನೆಂನಪನುನೀನೇಕೆಧರಿಸಿದೆಪಾಂಚಜನ್ಯ
ವನು ॥ ಎಂನನುಜ್ಞೆಯುಲಜ್ಜದವನಿಯ । ಲನ್ಯರಿದಕಾರರುಪರೇತಕೆ । ಪಂನಗಾರಿಧ್ವಜಗಿಜಂಗಳವಿಭವನಿನಗೆಂದ ॥೧೧॥
ಕಕ್ಕುಲಿತೆಬೇಡಿಲ್ಲವನುಬಿಡು । ಮಕ್ಕಳಾಟಕೆಯಾಕೆಮಾಣ್ಮೊರೆ । ಯೊಕ್ಕನೆಂದೇನೆಂನದಿವ್ಯಪದಾಬ್ಜವಿಷ್ಟರವ ॥ ಸೊಕ್ಕಿನೀ
ನೆಂನೊಡನೆಸಮರಕೆ । ಹೊಕ್ಕೆಯಾದಡೆಬದುಕುವುದುಹುಸಿ । ಯೊಕ್ಕತುಪ್ಪದಗಾದೆಯುಹುದೆಂದೆಂದನಾಭೂಪ ॥೧೨॥ ಎಂದಡಾತ
ನನುಡಿಗೆಮಿಗೆಘೋ । ಳೆಂದುದಾಸಭೆಸೂಸಿದವುಬಾ । ಯಿಂದತಂಬುಲಗಳುಮಹಾಯದುವೀರಮುಖ್ಯರಿಗೆ ॥ ಮಂದಹಾಸದಲಸುರ

ರಿಪುನಗು | ತೆಂದನಾತನನೋಡಿಪೇಳೆಲೆ | ತಂದೆಹೇಳಂನೊಂಮೆಮಗುಳಂನೊಂಮೆಹೇಳೆನುತ ||೧೩|| ಬಾಕಿನೆಗುವಿರಿಕಂಪ
ನಾನವಿ | ವೇಕಿಯೇತಂನೊಡೆಯನಂತೆನೆ | ರಾಕುಳನುತವಗಂಜದಟ್ಟಿದನೆಂನನಿಂದಿದಕೆ || ಸಾಕುತಾನೇನೆಂಬೆನೊಡೆಯಂ |
ಗೇಕಮತ್ಯದಲಡನುಬೆಸಸೂ | ದಾಕೆವಾಳರೆನಲ್ಕೆನಗುತಿಂತೆಂದನಸುರಾರಿ ||೧೪|| ಅರಿಯದವನೇಪೌಂಡ್ರಕನುನೀ | ಪರಿಜದಿ
ರಿತಾವಿಷ್ಣುವೆಂದಿದ | ನರಿಯದವರಾಡುವರುತನಗಾನೆಂಬಹುಕೃತಿಯು || ಹೊರಿಗೆಯಲ್ಲದರಿಂದನಿರಹಂ | ಮರಿಪಡೆಂಸಯಸಹಜ
ವದರಲಿ | ತೆರಹುಹುಗದೀನಾಮರೂಪಕ್ರಿಯೆಗಲ್ಲಂಗೆಂದ ||೧೫|| ತಪ್ಪಿನುಡಿವನೆಪೌಂಡ್ರಕನುತನ | ಗೊಪ್ಪಲೀವ್ರುಸೆಪಾಸುದೇ
ವನೆ | ನಿಪ್ಪಹೆಸರಿದುಸಹಜಚಕ್ರಾದ್ಯಾಯುಧಂಗಳಲಿ || ಒಪ್ಪವಪೆಹೆಸೆಯಲ್ಲಬೇರೆನಿ | ಪಿಪ್ಪವಸ್ತುವೆಯಲ್ಲಿಬಿಡುವೆನು | ತಪ್ಪದಾ
ತನಮೇಲೆಸಕಲವನೆಂದನಸುರಾರಿ ||೧೬|| ಬಹೆವ್ರುನಡೆನಡೆನಿಂನೊಡೆಯನೇ | ನಹಪವೇಳ್ದನದೆದಿಟಕೆತಾ | ನಹೆನುಸಂಶಯು
ವಿಲ್ಲಬಲ್ಲವರಿಲ್ಲತಂನೊಂದು | ಸಹಜವನುನೀಹೋಗೆನುತಘನ | ಮಹಿಮನಾತನಕಳುಹಿರಥಸಂ | ನಹಿತವಾಗಲೆನುತ್ತದಾರುಕ
ನೊಡನೆನೇಮಿಸಿದ ||೧೭|| ಬಂದುದಾಕ್ಷಣದಲಿಮಹಾರಥ | ಒಂದೆಸೆಗೆಗಜಘಟೆಗಳೊಡ್ಡಿದ | ವಂದವಡದಶ್ವಾವಳಿಗಳೊಡನೊ
ಡನೆರಥನಿಕರ || ಸಂದಣಿಸಲಡರಿದನುರಥವನು | ದುಂದುಭಿಯಕಹಳೆಗಳನಾಗಧ | ವಂದಿಗಳಕಳಕಳದಲಸುರಾರಾತಿವಹಿಲದಲಿ||
ಭೂರಿಭುಜಬಲಶೌರ್ಯಯುತರ | ಕ್ರೂರಸಾತ್ಯಕಿಪೃಥುವಿಪೃಥುಗದ | ಸಾರಣೋದ್ಧವಮುಖ್ಯವರಯಾದವಮಹಾಭಟರು ||
ಮೇರೆದಪ್ಪಲುಬಹಳಸೇನಾ | ಭಾರದಲಿಕಲ್ಪಾಂತಪಾರಾ | ವಾರವೆನೆನಡೆತಂದುಬಿಟ್ಟುದುವಾರಣಾಸಿಯಲಿ ||೧೯|| ಪುರದಹೊರ
ಬಾಹೆಯಲಿಶಂಖವ | ನಿರದೆಮೊಳಗಿಸಿಪೌಂಡ್ರಕನಕರೆ | ಕರೆಮಹಾವಿಷ್ಣುವನುಕಾಂಬೆವೆನುತ್ತದೂತರನು || ಭರದಲಟ್ಟಿದರವ
ರುನೃಪನನು | ಕರದರೇಳೇಳಾಹವಕೆನಿಂ | ದಿರುಮನದಧೃತಿಯುಳ್ಳಡೆಂದರುಚರರುಕೈನೆಗಹಿ ||೨೦|| ಕೇಳುತವೆಹೊಸಹೊ
ನ್ನಗರುಡನ | ಮೇಳವಿಸಿರಥದೊಳಗಿರಿಸಿತಾ | ಡೇಳ್ದನುಕೃತ್ರಿಮದರಾರಿಗದಾಬ್ಜವೆಂಬಿವನು || ಮೇಲುಕಪ್ಪಿನಮೈಸಿರಿಯ
ಭೂ | ಪಾಲನೆದ್ದನುತುರಗರಥಕಾ | ಲಾಳುಗಜಘಟೆಯುಸವಬಹಳಾಕ್ಷೋಹಿಣಿಗಳೊಡನೆ ||೨೧|| ಹೊಡವಭೇರಿಯನಿಸ್ಸಳದ
ಗಡ | ಬಡೆಯಕೈವಾರಿಗಳಬಿಡದು | ಘ್ಗಡಿಪಬಿರುದಿನಕಹಳೆಗಳಸುಭಟರಮಹಾರಥದ || ಖಡುಗಶರಶೂಲಾದಿಶಸ್ತ್ರದ | ಗಡಣ
ಗಗನವನಳ್ಳಿರಿಯಲಾ | ಪೊಡವಿಪತಿಕಡುಬಿಂಕದಲಿನಡೆತಂದನಾಹವಕೆ ||೨೨|| ದೂರದಿಂದಾಪೌಂಡ್ರಕಾಖ್ಯನು | ಹೀರವಣ
ಣನಾಗವಮನವನುದ್ಯೆ | ತ್ಯಾರಿಕಂಡನುಭುಜಚತುಷ್ಟಯುಗಳಲಿರಂಜಿಸುವ || ಭಾರಿಗದೆಯನುಶಂಖಚಕ್ರೋ | ದಾರಶಾರ್ಙ್ಗಂಗ
ಳನುಕೌಸ್ತುಭ | ಪೇರುರದಶಿರಿವತ್ಸಪೀತಾಂಬರಗಳೆಸದಿರಲು ||೨೩|| ಕೃತ್ರಿಮವೆನಿಪ್ಪೊಂದುಗರುಡನ | ಪುಥ್ಥಳಿಯನಿರದೇ
ರಿಕೈಗಳ | ನೆತ್ತಿಕೆಲದವರಿಂಗೆಕೈವಾರಿಸುವುದೆಂದೆನುತ || ಮತ್ತೆತನ್ನನುತಾನೆನೋಡಿನ | ಗುತ್ತಬಹಭೂಪಾಧಮನಕಾ | ಣುತ್ತ
ಗಹಗಹಿಸಿದನುದನುಜಾರಾತಿಕೈವ್ರೊಯಿದು ||೨೪|| ನಟ್ಟವಿಗನೋನೃಪನೊಮರ್ಝಯೆನು | ತಟ್ಟಹಾಸವಮಾಡಿಕೈವರೆ |
ಗುಟ್ಟನಗುವಯದುಪ್ರವೀರರಬಹಳನಿರ್ಘೋಷ || ಪುಟ್ಟಿಸಿತುಭುವನವನುಕಾಣುತ | ದುಷ್ಟಮನದನೃಪಾಲನೆಡಬಲ | ಕಿಟ್ಟ
ಣಿಸಿಕ್ಕೈವೀಸಿದನುಕೈಸಂನೆಯಲಿಭೂಪ ||೨೫|| ಸಿಡಿಲುಗಳುಸಹಿತಭ್ರಚಯವವ | ಗಡಿಸಿರವಿತಾರಾಗ್ರಹಾವಳಿ | ಯಡಸಿಕ
ವಿವಂದದಲಿಪೌಂಡ್ರಕರಾಜಭಟನಿಕರ || ಖಡುಗಪಟ್ಟಿಸಪರಶುಶೂಲದ | ಗಡಣದಲಿಮುಸುಕಿದರುಬಾಣದ | ಕಡಲಕವಿಸಿದ
ನೊಂದುನಿಮುಷಾರ್ಧಾರ್ಧಮಾತ್ರದಲಿ ||೨೬|| ಆಟಗಾರನಪಡೆಯಲಾನಿಂ | ಮಾಟವಿದುಲೇಸಾಯ್ತುಕಾಲನ | ನೋಟವಿ
ದುನಿಮಗೆನುತಕ್ರೆಗದುಮಹಾಸ್ತ್ರಸಂಚಯವ || ನಾಟಿಸಿದನವರವರಕಾಯದ | ಕೋಟಿರದಕುಹರದಲಿಕಾಲನ | ಚೀಟುಗಳುಕ
ವಿವಂತೆಕವಿದವುಹರಿಶರವ್ರಾತ ||೨೭|| ತೋಲಗಿರೈಬಣಗುಗಳುನೀವೆಲ | ವೇಪ್ರೊತ್ರೋರಿರೆನಿಮ್ಮವಿಷ್ಣುವ | ನೋಲಿದುಕಾಣಿ
ಸಿಕೊಂಬುದೆನ್ನನುಬಾಣಪ್ರೌಢೆಯಲಿ || ಸಲಿಸುವೆವ್ರುತವೆನುತಲಾನೃಪ | ಬಲವನದನೊಡೆತುಳಿದುಹಾಯ್ದನು | ಕೊಳಗುಳದಲಾ
ಪೌಂಡ್ರಕಾಖ್ಯನೃಪಾಲನಿದ್ದೆಡೆಗೆ ||೨೮|| ಎಲವ್ರೊಬರಿದೇದೂಷಮುಖದಲಿ | ಗಳಹಿದೆಯಲಾಸಮರಮುಖದಲಿ | ತೊಲಗಿನಿ
ಲ್ಲದೆಕೊಂಬುದೆನ್ನಮಹಾಸ್ತ್ರಸಂತತಿಯ || ಛಲವಬಿಟ್ಟರೆಮರಳುಜಳ್ಳದ | ಡಳವಿಗೊಡುಅಲ್ಲಡಡೆನಿಂನನು | ಮಲಗಿಸುವೆನಸಾ
ಘೆಶಯನದಲೆಂದನಸುರಾರಿ ||೨೯|| ಎನುತಕ್ರೆಗದಾಪೌಂಡ್ರಕನತನು | ನನೆಯಲೆಚ್ಚನುಬಾಣನಿಕರದ | ಲನಿತುವನುಕಡಿದೆ
ಚ್ಚನಾನೃಪನಸುರವೈರಿಯನು || ದನುಜರಿಪುಬಳಿಕವನರಥವನು | ಧನುವನಶ್ವಾವಳಿಮಣಿಧ್ವಜ | ಕನಕಚಮರಚ್ಛತ್ರನಿಕರಂ
ಗಳನುಖಂಡಿಸಿದ ||೩೦|| ಉಡಿದರಥವನುಬಿಸುಟುಖಡುಗವ | ತುಡುಕಿಘಸಘಡನಿಲ್ಲುನಿಲ್ಲೆನು | ತಡರಿದಾಟೋಪದಲಿಬರು
ತಿರಲವನಮಸ್ತಕವ || ಕಡುಗಿಚಕ್ರದಲಿಡಲುತಲೆಯನು | ಕಡಿದುಹಾರಿದುದಂಬರಕೆಸುರ | ರೊಡನೆಜಯಜಯಕೃಷ್ಣಜಯಯೆ
ನುತಿರ್ದರಭ್ರದಲಿ ||೩೧|| ಕಾಶಿರಾಜನಮಕುಟಮಣಿಗಳ | ಭಾಸುರದ್ಯುತಿಯೆನಿಪತಲೆಯನು | ಕೇಶಿಕೂರಲಗಿನಲಿಕೆಡಹಿದನ
ವನಪುರದೊಳಗೆ || ಆಸಕಲಪುರಜನಸತೀಜನ | ದೇಶಜನಗಳುಕಂಡುತಲೆಯನು | ಹಾಸಿಕೆಡದರುಧರೆಗೆಪತಿಯಳವಿನಲಿಹಳವಿ
ಸುತ ||೩೨|| ಇಂತುಪೌಂಡ್ರಕಕಾಶಿರಾಜನ | ನಂತಕನಪುರಕಟ್ಟಿದನುಜಕು | ಲಾಂತಕನುಮರಳಿದನುಜಯರವಪುಷ್ಪವೃಷ್ಟಿ

ಯಲಿ ॥ ಅಂತರಿಕ್ಷದಲಮರಜಯವೋ । ರಂತೆಹೊಗಳುತ್ತಿರಲುಲಕ್ಷ್ಮೀ । ಕಾಂತನಂದೈತಂದುಹೊಕ್ಕನುದ್ವಾರಕಾಪುರಿಯ ॥ ಅತ್ತಲಾಪೌಂಡ್ರಕನೃಪಾಲನ । ಹೆತ್ತಮಗನುಸುದಕ್ಷಿಣನುಪಿತೃ । ಕೃತ್ಯವನುನೆರೆಮಾಡಿಶೋಕಾತುರನುಬೇಗದಲಿ ॥ ಹೊತ್ತವಂತಸ್ತಾಪದಲಿಮರು । ಗುತ್ತುಪಾಧ್ಯರುಸಹಿತಹೊಕ್ಕನು । ಕೃತ್ತಿವಾಸನಮರೆಯನಧಿಕತಪಸ್ಸಮಾಧಿಯಲಿ ॥ ೩೪ ॥ ದಕ್ಷಮಖವಿಧ್ವಂಸಿಬಳಿಕಸು । ದಕ್ಷಿಣಗೆವೈದೋರಿನುಡಿದನು । ದಕ್ಷಿಣಾಗ್ನಿಯವೇದಿಕೋನಿಂನಿಷ್ಟಸಿದ್ಧಿಯನು ॥ ಲಕ್ಷಿಸಲುಬ್ರಹ್ಮಣ್ಯವೆನಿಪವಿ । ಪಕ್ಷದಲಿಯಾಜಿಸಿದಡಹುದೆನು । ತಕ್ಷರಲಿತಮುಕ್ತನಂತರ್ಧಾನದಲಿನಿಂದ ॥ ೩೫ ॥ ಬಳಿಕಹರನಾದೇಶದಲಿನೃಪ । ಕುಲವಿನಾಶನಮೂರ್ತಿಕೃಷ್ಣನ । ಕೊಲುವಭರದಲಿಬೇಳ್ವಚಿದನಂದಾಭಿಚಾರವನು ॥ ನಿಲುಕಿಹವಿಯನುಮೆಲುವಕೊಂಡದ । ತಳವಬಗಿದುಹುತಾಶನನುಘೂಳು । ಘೂಳಿಸುತೆದ್ದನುಘೋರತರಮೂರ್ತಿಯನುನೆರೆತಳದು ॥ ೩೬ ॥ ಕಂಗಳಲಿರವಿರಥದತೇಜವ । ನುಂಗುವಂತಿರೆನೆಗದುನಡವುತ । ಜಂಗಮಾಚಲಗುಹೆಯವೋಲುಗ್ರಾಸ್ಯವಿವರದಲಿ ॥ ಹಿಂಗದಾವಳಿಸುತ್ತನಭನನು । ಜಂಗಮಾರುತತಾಳಮರಗಳ । ಭಂಗಿಸುವಕಾಲ್ಗಳಲಿನಿಂದನುವೀರನಭಿಮುಖಕೆ ॥ ೩೭ ॥ ಉಗ್ರಮುಖದಂಷ್ಟ್ರವನುಬಹಳೋ । ದಗ್ರಭ್ರುಕುಟೀಬದ್ಧನಿಕಟ । ವ್ಯಗ್ರಜಿಹ್ವನನಾಸುದಕ್ಷಿಣನೇರಿಕ್ಕೈಮುಗಿದು ॥ ನಿಗ್ರಹಿಸುಯಾದವರನೆಂದಾ । ವ್ಯಗ್ರಮತಿಬೆಸಸಿದಡೆನಡದನ । ಭಗ್ರಜಾವಳಿಗಳನುಮೆಲುವಂದದಲಿಬಾಯ್ದೆರದು ॥ ೩೮ ॥ ಚಂಡಭೂತಪ್ರಕರನಿಕರದ । ತಂಡದಲಿಮೋಹರಿಸಿದನುದಿಗುಮಂಡಲವನಂಡಲವೃತ್ತೈತಹಕೃತ್ತಿಪುರವಣೆಯ ॥ ಕಂಡುದಾದ್ವಾರಕಿಯಜನಭಯ । ಗೊಂಡುಕೆಟ್ಟೆವೆನುತ್ತಹರಿದಾ । ಪುಂಡರೀಕಾಕ್ಷನನುಮರೆಯೊಗುತಂದರಾಳಿಗವ ॥ ೩೯ ॥ ದೇವರಕ್ಷಿಸುರಕ್ಷಿಸೆಂಮನು । ದಾವುದೆಂದಾವರಿಯೆಪುರಿಯಲಿ । ಜೀವೃತಿದೆಜಗದರಿಯೆಭುವನಪ್ರಳಯದಂದದಲಿ ॥ ಓಪೊನೋಡುವಡಂಜುವೆವುಗತ । ಜೀವರಾದೆವುಕೃಷ್ಣನೀನೇ । ಕಾವುದೆಂಮನುನಿಂಮಭಕತರನೆಂದುದಖಿಳಜನ ॥ ೪೦ ॥ ನೆತ್ತಪನುಜಗದೀಶನಾಡುತ । ಚಿಕ್ತವಿಸುತುದ್ಧವನೊಡನೆನಗು । ತತ್ತಲಾಡುತ್ತಾಡುತವೆನೀವಂಜಬೇಡೆನುತ ॥ ಎತ್ತಿನಿಜವಾಮೋಂನತಾಮಳ । ಹಸ್ತಪಂಕಜದಳವನಭಯವ । ನಿತ್ತನಾಪರಿಜನಕೆಬೆಸಸಿದನಾಸುದರ್ಶನನ ॥ ೪೧ ॥ ಭಾನುಕೋಟಿಪ್ರಭೆಯಜನ್ಮ । ಸ್ಥಾನವೋಕಲ್ಪಾಂತಕಾಲಕೃ । ಶಾನುವಿನತಾಯ್ಮನೆಯೊಮೇಣ್ಪ್ರಜ್ವಲಿಸುವಂತಕನ ॥ ಆನನವೊಹರಹರಯೆನುತಭ । ಗ್ನಾನನಾಕ್ಷಿಗಳಾಯ್ತುಪುರಜನ । ಜಾನಪದಜನನಿಕರನೋಡಿಮಹಾಸುದರ್ಶನವ ॥ ಲನನಾಕಾಶವನುದಶದಿಗು । ವಳಯವನುಪಾತಾಳಲೋಕಂ । ಗಳನುತಾರಾಗ್ರಹನಿಕರಕಲ್ಪಾಂತವಾಪಿಗಳ ॥ ನಿಳಯವನುತಾಜ್ವಲ್ಯಮಾನೋ । ಜ್ವಲಮಹಾನಿಜತೇಜದಲಿಮು । ಕ್ಕಳಿಸಿದುದುಹರಿಚಕ್ರವೊಂದೇನಿಮಿಷಮಾತ್ರದಲಿ ॥ ೪೩ ॥ ಉರಿದದೋಜಗವೆನುತಸುರರಂ । ಬರದಲುಲಿಯಲುಜಯಜಯಖಿಳೇ । ಶ್ವರಹರಿತ್ರಾಹೀಶರಕ್ಷಿಸುರಕ್ಷಿಸೆಂದೆನುತ ॥ ಸುರಿಯೆಸುಮನೋವೃಷ್ಟಿಯನುಖೇ । ಚರರುಭಯದಲಿವಿಹಾರಿನಡದುದು । ಪರಮಪುರುಷಮಹಾಸ್ತ್ರನಾಕೃತ್ಯಾಭಿಮುಖವಾಗಿ ॥ ೪೪ ॥ ತ್ತಲಾಗಮಹೇಶ್ವರಾಹ್ವಯ । ಕೃತ್ತಿಯದುಚಕ್ರಾನಲಾಹತ । ವೃತ್ತಿದಲಿತಿರುಗಿತ್ತುಮಗುಳೆಸುದಕ್ಷಿಣನಪುರಕೆ ॥ ತುತ್ತುಗೊಂಡುದುಮೊದಲಲವನನೆ । ಮೃತ್ಯುವಾದುದುಪುರಜನಕೆಪುರ । ಹೊತ್ತಿಹೊಗದದುಕೊಂದುದಲ್ಲಿಯಕೊಂಡವನುಬಗಿದು ॥ ೪೫ ॥ ಚಕ್ರರಾಜನುಹರಿದುಕೃತ್ಯೆಯ । ನಾಕ್ರಮಿಸಿಜಯಿಸುತ್ತಮೊಳಗು । ತ್ತುತ್ಕ್ರಮಿತಕೋಪದಲಿನೆರೆಸುಟ್ಟುರುಹಿಮುರಿಮುರಿದು ॥ ಕ್ರಮಾತ್ಮನಪುರವನಾಪರ । ಚಕ್ರವನುನಿರ್ಧಾಮಧೂಮೋ । ಪಕ್ರಮವನೆರೆಮಾಡಿಮರಳಿದುದೊಡೆಯನಂಸಕಕೇ ॥ ೪೬ ॥ ದುಶುಭೋದಯವಖಿಳಲೋಕ । ಕ್ಕಿದುಮನೋರಥಸಿದ್ಧಿಕರವಿಂ । ತಿದುಮಹಾಘವ್ಯೂಹನಾಶನವಿದನುಕೇಳಿದಡೆ ॥ ಮುದದಭಿವರ್ಣಿಸಿದಡಚ್ಯುತ । ಪದವನೀವುದುದೇಹಸಂತ್ಯಾ । ಗದಲಿಹರಿಗುಣಗಣಪರಾಕ್ರಮವರ್ಣನವಿದೆಂದ ॥ ೪೭ ॥ ಕೇಳುವುದುಸಶ್ರದ್ಧೆಯಲಿನೆರೆ । ಹೇಳುವುದುಹರಿಬುದ್ಧಿಯಲಿಹರಿ । ಲೀಲೆಯನುಸಲೆಭುಕ್ತಿಮುಕ್ತಿಫಲಪ್ರದವನಿದನು ॥ ಪಾಲುಮದ್ದಾಂತೆಕರ್ಣವಿ । ಶಾಲಸುಖಭವದುಃಖಹರಕರು । ಣಾಳುನಿತ್ಯಾನಂದಮುಕುಂದಚರಿತ್ರವಿದುಧರೆಗೆ ॥ ॥ ೪೮ ॥

ಅಂತು ಸಂಧಿ ೬೫ ಕ್ಕಂ ಪದನು ೧೦೬೭ ಕ್ಕಂ ಮಂಗಳಮಸ್ತು

ಅರವತ್ತಾರನೆಯ ಸಂಧಿ.

ಮನ್ಮಥನು ಶಂಬರಾಸುರನಂ ಗೆದ್ದು ರತಿಸಹಿತ ದ್ವಾರಕೆಗೆ ಬಂದ ಕಥೆ.

ಸೂಚನೆ ॥ ಶಂಬರನತಲೆಗೊಂಡುಸಮರದ । ಲಂಬುಜಾನನೆಸಹಿತಕಮಲದ । ಳಾಂಬಕನಹೆಂಮಗನು
ಬಂದನುದ್ವಾರಕಾಪುರಿಗೆ ॥ … … … …

ಪದನು ॥ ಅರಸಕೇಳಬುಜಾಕ್ಷಿಗರ್ಭವ । ಧರಿಸಿದಳುರುಕ್ಮಿಣಿಮುಕುಂದನ । ಪರಮತೇಜವಧರಿಸುವಂತಿರಲಿರಲುನವಮಾಸ ॥ ಭರಿತವಾದುದುಬಳಿಕಪಡೆದಳು । ವರಕುಮಾರನನೊಯ್ದನಾಶಂ । ಬರನುತನಗೆವಿರೋಧಿಯೆಂಬುದನರಿದುಬಾಲಕನ ॥ ೧ ॥

ಜಲಧಿಯಲಿಬೀಸಾಡಿಹೊಕ್ಕನು | ನಿಳಯವನುಸುರನ್ವರಿಹಸುಳಿಯ | ಳಳಲಳಲುನುಂಗಿತ್ತುಮತ್ಸ್ಯವದೊಂದುಬಾಲಕನ || ಬಳಿ
ಕವಿಹಾನಗ್ರಾಹಿಗಳುಬಲು | ಮಳೆಗಳನುಬೀಸುತ್ತಮತ್ಸ್ಯ | ವಳ್ಳಯೊಡನೆಹಿಡಿದರುಮಹಾಮತ್ಸ್ಯವನುಧೀವರರು ||೨|| ಹಿಡಿದು
ತೋಳತೋಳತೋಳಗುವಾಹೇ | ರೊಡಲಮತ್ಸ್ಯವಪ್ರಯೋಗ್ಯವಿದುತಂ | ಮೊಡೆಯಶಂಬರಗೆನುತದೂತರುದಾನವೇಶ್ವರಗೆ || ಕೊ
ಡಲದನುಕೊಡಿಸಿದನುಬಾಣಸಿ | ಯಡಿಗೆತರಲದಶೀಳುತೊಬ್ಬಳು | ಮಡದಿಕಂಡಳುಮತ್ಸ್ಯದುದರದಲೆಸೆವಬಾಲಕನ ||೩||
ಆಲಿಗಳುಕೋರವಿಸುತಿವೆನರ | ಬಾಲಕನುಶಿಶುವೆನುತತೆಗೆದಾ | ಬಾಲೆಮಾಯಾವತಿಯಕೈಯ್ಯಲಿಕೊಟ್ಟಳರ್ಭಕನ || ಲೋಲಲೋ
ಚನೆನೋಡಿದರೆಗನ | ಲಾಲಿಸುತ್ತಿರೆವಿಷ್ಣುಭಕುತಿಯು | ಭಾಳನೇತ್ರನುಬಂದನಲ್ಲಿಗೆನಾರದವ್ರತಿಪ ||೪|| ಗಂಡನೀತನುನಿನ
ಗೆಸಾಶಯು | ಗೊಂಡುನೋಡದಿರಬಲೆಪೂರ್ವದ | ಹೆಂಡತಿಯಲಾನೀನುಕಾಮನಸತಿರತೀದೇವಿ || ಖಂಡಪರಶುವಿನಕ್ಷಿಶಿಖಿಕ್ಕೆ |
ಕೊಂಡಕಾಮನುಜನಿಸಿದನೆಲಾ | ಪುಂಡರೀಕಾಕ್ಷಂಗೆರುಕ್ಮಿಣಿದೇವಿಯರಲೆಂದ ||೫|| ತನಗೆಹಗೆಯೆಂದೊಲಿದುಶಂಬರ | ನೆನೆ
ದೆಮನನಿದಿಕಿದನುಶಿಶುವನು | ವನಧಿಯಲಿತಪ್ಪೆತ್ಯೈರೈತಂದಿತ್ತರೀತಂಗೆ || ದನುಜನರಿಯದಪ್ರೋಲುರಕ್ಷಿಸು | ಮನುಮಥನನೆಂ
ದೇರದುನಾರದ | ಮುನಿನೆನೋನಾರಾಯಣಾಯೆನುತಡರಿದನುನಭವ ||೬|| ಮುನಿಪಬಿಜಯಂಗೈದನತ್ತಲು | ವನಿತೆಮಾ
ಯಾವತಿಮುಕುಂದನ | ತನಯನನುಪತಿಬುದ್ಧಿಯಲಿಸಲಹಿದಳುಬಾಲಕನ || ಅನುಪಮಾಮೃತಪಾನವರಭೋ | ಜನಗಳಲಿಬೆಳ
ವೃತ್ತಲಿರ್ದನು | ದನುಜನಂತರ್ಗೃಹದಲಾಬಾಣಸಿಯಮನೆಯೊಳಗೆ ||೭|| ವೀರಬೆಳದನುರತಿಯಮನದವಿ | ಕಾರವೇಬೆಳವಂತೆ
ಸೊಬಗಿನ | ವಾರಿಧಿಯಲಾಕಾಮನೀನೆಂಬೆನುಮಹಾದ್ಭುತವ || ಚಾರುತರಸರ್ವಾಂಗಲಕ್ಷ್ಮಿಯು | ಭೂರಿತೇಜದಸೌಕುಮಾ
ರ್ಯೋ | ದಾರಗುಣನಿಧಿಹರಿಸಿದನುನೋಡುವರಕಣ್ಮನವ ||೮|| ಮಾತೃಬುದ್ಧಿಯಲಿಹನುಬಾಲಕ | ನಾತಳೋದರಿಯಲಿಸತಿಗೆ
ಸಾ | ಜ್ಞಾತನಿಜಪತಿಯೆಂಬಬುದ್ಧಿಯೆಬಲಿದುದಾತನಲಿ || ಮಾತಿನಲಿಚೇಷ್ಟೆಯಲಿನಯನ | ಪ್ರೀತಿಯಲಿಸಂಕರುಹಮುಖಿವಿಪ |
ರೀತಭಾವದಲಿರಲುಕಂಡನುಕಾಮನಂಗನೆಯ ||೯|| ತಾಯೆಹೇಳೇನೌಮನೋಭಿ | ಪ್ರಾಯವಿದುಸಂಪ್ರತಿವಿಪರ್ಯಯ |
ದಾಯತಾತ್ಮಜನಾದತಂನಲಿಯನ್ಯಥಾಬುದ್ಧಿ || ಹೇಯವಲೌವಾತಕಕೆದಿಟ | ಬೀಯವಾಳ್ವರೆಮನವನೇತಕೆ | ಜಾಯೆಯಂತಿ
ರೆವೆಹಳ್ಳಿತಂನನುಶಿವಶಿವಾಯೆಂದ ||೧೦|| ಯೆಂದಡಲ್ಲಲ್ಲಲ್ಲತಂನವನು | ಕೊಂದೆವಾಪಿವ್ರಥಾಭಿಯೋಗವ | ನಿಂದುಶಂನಲಿಸಾಚಿದೆ
ಯಲಾತಂನಮಗನೆಂದು || ಸುಂದರಾನನನಿನಗೆತಾನಾ | ರೆಂದುಕಂಡೆವ್ರಥಾಶಿಶುತ್ವದ | ಮಂದಮತಿಯನುಮರೆಯಬೇಡೆಂದಳು
ಸರೋಜಮುಖಿ ||೧೧|| ನೀಸಲಾಪೂರ್ವದಲಿಕಾಮನು | ತಾನಲಾರತಿನಿಂನಸತಿಮುನಿ | ದಾನಿಟಲಲೋಚನನುಸುಟ್ಟಡೆ
ಬೆಂದುಮತ್ತಿಂದು || ಮಾನನಿಧಿಜನಿಸಿದೆಮುಕುಂದನ | ಮಾನಿನಿಗೆಮಗನಾಗಿಬಲ್ಲಕಿದ | ನೀನಹೇಳುವೆಮಾನಭಂಗವನೆಂದಳಬು
ಜಾಕ್ಷಿ ||೧೨|| ಕೊಂದೆತಲೆಯನುನೀನೆನುತ್ತೀ | ಶಂಬರನುಜನಿಸಿದಶಿಶುವನೊ | ಯ್ದಂಬುಧಿಗೆಬೀಸಾಡಿಬರೆನುಂಗಿದುದು
ವರಮತ್ಸ್ಯ || ಶಂಬರಗೆಬಂದುದಗುಶೀಳದ | ರಂಬುಚರರಲಿನಿಂನಕಂಡೆನು | ನಂಬದೆನುನಾರದನಮಾತಿನಲೆಂದಳಬುಜಾಕ್ಷಿ ||
ಕೊಲ್ಲಹಗೆಯನುನೀಗವಾಡೆಲೆ | ವಲ್ಲಭನೆಸಂಶಯವಮಾಡದಿ | ರೆಲ್ಲನಿತನಿದರೊಳಗೆಮರುಗುವರಿಲ್ಲನಿಂನವರು || ಬಲ್ಲಿ
ದನುಮಾಯಿಯಲಿಸುರರಿಗೆ | ತಲ್ಲಣವಮಾಡುವನುದಾನವ | ಮಲ್ಲನೀತನುಬಡವನಲ್ಲೆಂದಳುಸರೋಜಮುಖಿ ||೧೪|| ಅತು
ಳಬಲನಮರಾರಿನಾಯಿರಾ | ಶತವಿದನುನೀನಾಶನನುತ | ತ್ಪ್ರತಿವಿದಿತಮಾಯೆಗಳಲೇಕೊಲ್ಲೆನುತನಿಜಪತಿಗೆ || ಸತಿಶಿರೋಮಣಿ
ಕಲಿಸಿದಳುಸಂ | ಮತವೆನಿಪತದ್ವಿದಿತಮಾಯಾ | ಶತವನಾಮಾಯಾವಿನಾಶನವಿದ್ಯೆಗಳುಸಹಿತ ||೧೫|| ಏಳುಕರೆಕರೆದುಸ್ಟರಿಪು
ವೆನು | ಕಾಳಗಕೆಹಿಡಿಗದೆಯನೆನುತಾ | ಬಾಳೆಕೊಟ್ಟಳುಗದೆಯನೊಪ್ಪುವಕವಚಸೀಸಕವ || ಬಾಳೆನುತನವರತ್ನಭೂಷಣ |
ಜಾಲವನುಕೈಕೊಂಡುಮಿಗೆಬಿ | ಲ್ಲಾಳುಗಳನಾತಾರಹೊರವಂಟನುಮಹಾಹವಕೆ ||೧೬|| ಹೊಯ್ದುಭುಜನನುನಿಂದನಿದಿ
ರಲಿ | ಕೈದುಕಾರರದೇವನೊಪ್ಪಿದಕೈದುಹಿಣಿಲಲಿಬೆಂಗಲವಗೊಂಡೆಯದತೊಂಗಲಲಿ || ಐದೆಯನುಕಡೆಗಣಿಸುತಸುರನ | ಬ್ಬೆ
ದುಕದನುಬಾರದಿರ್ದಡೆ | ಕೆಯ್ದುಬಂಟನವುಗನಸುರನನಾತನಿದ್ದೆಡೆಗೆ ||೧೭|| ಅರೆಲಪ್ರೊಕರಪವನುತಂನನು | ವಾರಿಧಿ
ಯಮನೆಯವನೊಬೆಟ್ಟದ | ಧಾರಣಿಯಮುಕ್ಕಣನೋವ್ಯೈಗಂಣಶತಮುಖನೊ || ಅರೆನಲುಕಲ್ಪಾಂತಕಾಲದ | ಭೈರವನಹೆತ್ತೈ
ಯ್ಯನೆಲಮ | ರಾರಿತಳದನುಕಂಗಳಲಿಘನರೌದ್ರಮಯರಸವ ||೧೮|| ಕೊಂಡುಗದೆಯನುಜಗಪನುರುಹುವ | ದಂಡಧರ
ನೆಂದದಲಿಕಂಣಲಿ | ಕೆಂಡವನುಕಾರುತ್ತಗರ್ಜಿಸಿಕೆದರಿಮಿಸೆಗಳ || ದಿಂಡುದಿರುಹುತ್ತುಗಿದುಸಮರಕೆ | ಗಂಡುಗಲಿಹೊರವಂಟ
ನಬುಜಭ | ವಾಂಡಮುಂಡಲಬಿರಿಯಲುಬ್ಬುವಸಿಂಹನಾದದಲಿ ||೧೯|| ಆರುನೀನೆಲವೆಲವೊನೆಟ್ಟನ | ನೇರಿವ್ಯಾತ್ಯುವಕರವೆ
ನೀಹೇ | ಳಾರಶಿಶುವಸುತಂದುಬೀಸಾಡಿದೆಮಹಾಬ್ಧಿಯಲಿ || ವೀರನೀನೆಂತುಳಿದೆದೈವವ | ದಾರರಕ್ಷಿಸದೆಲವ್ರೊತಂದವ | ನಾರು
ದೇಗನೆತಂದಮತ್ಸ್ಯವಕೇಳುಮೋಗೆಂದ ||೨೦|| ರಕ್ಷಿಸಲಿನೋಡುವೆನುನಿಂನನು | ರಕ್ಷಿಸುವದೈವವನೆನುತರೋ | ಷಾಕ್ಷಿಬ
ದ್ಧಭ್ರುಕುಟಿಭೀಷಣವದನನಬ್ಬರಿಸಿ || ಅಕ್ಷಯನಹೆಂಮಗನದೃಥಕರ | ವಕ್ಷವನುತೆಗೆದಾರ್ದುಗದೆಯಲಿ | ರಕ್ಷಿಸುವದಿದೆಕೊಳ್ಳೈ

ಸುತತಿರುಹಿಟ್ಟನಮುರಾರಿ ॥೨೧॥ ಏನನೋಡುನೆಪಾಪಿಸ್ಯೈವವಿ | ಹೀನರಿಗೆಜಯವುಂಟೆಸೈವಾ | ಧೀನವೆಲ್ಲಾಜೀವಜಾತದಯಾ
ಪಯುಂಗಳಲಿ ॥ ನೀನೆಕಂಡೆಯಲಾದುರಾತ್ಮಕ | ಮೀನಜಠರದಲುಳಿದತಂನಪೆ | ಘಾನವನುನೋಡೆನುತಗದೆಯಲಿಕೆಡಹಿದನುಗ
ದೆಯ ॥೨೨॥ ಇಟ್ಟನಾತನಶೂಲದಲಿಕಡಿ | ದೊಟ್ಟಿದನುಖಡುಗದಲಿಬಳಿಕೀ | ದುಷ್ಟಮರ್ದನನಸುರರಿಪುಬೆರಗಾಗಿಕಡುಮು
ಳಿದು ॥ ಪಟ್ಟಸವನಪಮುಸಲಪರಶುಗ | ಳಿಟ್ಟಸಬಳನೆನಿಪ್ಪವನುಮೊಗ | ದಿಟ್ಟಶನಿತುವೆನವರಬಳ್ಳಿಯಲಿಕಳುಹಿದನುಕಾಮ ॥
ತೀರ್ದವೇಕೈದುಗಳುನೋಡಿಂ | ನಾದಡಿದೆಕೊಳ್ಳೆನುತಗದೆಯಲಿ | ಭೇದಿಸಿದನವನುರವನುರುವಿಕ್ರಮನುಕಡುಮುಳಿದು ॥ ಮೇ
ದಿನಿಗೆಬೀಳುತ್ತಬೀಳು | ತ್ತಾದುರಾತ್ಮಕನಡುಗಿನಿಂದನು | ವ್ಯಾದೆಗದುಮಾಯೆಯಲಿಸಮರೋದ್ಯೋಗಪರನಾದ ॥೨೪॥ ಸರ
ಳಮಳೆಯನುಕರೆದನಖಿಳೇ | ಶ್ವರನಮಗನಲಿಧರನೆಡುಗಲಾ | ಮರಿಸಿದುದುಕೆಂಧೂಳಿಮುಸುಗಿತುಕೂಡೆದೆಸೆದೆಸೆಗೆ ॥ ಉರುಳಿದ
ವುಹೆಂಮರಸಹಿತಕುಲ | ಗಿರಿಗಳುದಿರಲಿನೂಕಿದವುಸಾ | ಗರಗಳೇಳೊಂದಾಗಿಕತ್ತಲೆಕವಿದುದಾಕ್ಷಣಕೆ ॥೨೫॥ ಕೊಲ್ಲುಕಡಿತಿ
ನ್ನೆನುತದೆಸೆಗಳು | ತಲ್ಲಣಿಸಲಾಮರಿಸಿರಾಕ್ಷಸ | ಮಲ್ಲರುರುಬಿದರುರಭಯಂಕರವದನಭೀಷಣರು ॥ ಶಲ್ಯಯುದಸಬಳದಕಠಾರಿಯ |
ಥಳ್ಳುರಿಯನುಗುಳುವಮಹಾಸ್ತ್ರದ | ಗಲ್ಲಣೆಯಗಜರಿನಮಹಾಭಟರೆಂಟುದಿಕ್ಕಿನಲಿ ॥೨೬॥ ಬೀಸಿದುದುಬಿರುಘಾಳಿಕಂಣಲಿ |
ಸೂಸಿದುದುಮುಂಣ್ಮಳಲನಭ್ರದ | ಬೀಸಿಗೆಯಬಲುಮಳೆಗಳಾದವುಮಾಂಸಶೋಣಿತದ ॥ ಘಾಸಿಯಾದನುಹರಹರೆಂತಿದ | ನೀಸು
ವನೋಮಾಯಾಮಹಾಮಾ | ರೀಶಿಯನುಬಾಲಕನೆನುತಬಾಯಿಬಿಟ್ಟದಮರಗಣ ॥೨೭॥ ಒಲಧಿಯಲಿಬಿದ್ದವನುಪುಣ್ಯದ |
ಲುಳಿದನಿಂದೀದೈತ್ಯಮಾಯಾ | ಜಲಧಿಯಲಿಮುಳುಗಿದನಲಾಹಾಯೆನುತಜನಬೆದರೆ ॥ ಘಳಿಲನಾಪ್ರದ್ಯುಮ್ನನಾನಿಜ | ಲಲನೆಕ
ಲಿಪಿದಸಕಲಮಾಯಾ | ಬಲವಿನಾಶನವಿದ್ಯೆಯನುನೆನೆದನುರಣಾಗ್ರದಲಿ ॥೨೮॥ ಇನನುದಯದೆಸಮಂಧಕಾರದ | ಘನತೆಯೋ
ಹರಿನಾಮಸಂಕೀ | ರ್ತನದಿದಿರಪಾತಕವೊತತ್ವಜ್ಞಾನಮನೋಭ್ರಮೆಯೊ ॥ ಮಸುಮಥನಮಾಯಾವಿನಾಶನ | ವಿನುತವಿದ್ಯೆಯ
ಮುಂದೆಮೆರವಾ | ದನುಜಮಾಯೆಯೊಮಾಯೆನಲುಬಯಲಾಯ್ತುನಿಮಿಷದಲಿ ॥೨೯॥ ಘಡತೊಲಗುತ್ತೊಲಗೆನುತಬಾಣದ | ಗಡ
ಣದಲಿಮುಸುಕಿದನುಮಾಯೆಯು | ಕೆಡಿಪಿದಡೆಕೆಡುವುದೆನಿಜೋಂನತಬಾಹುಬಲವೆನುತ ॥ ತೊಡರಿತಾಗುವಭಟನತಲೆಯನು |
ಕಡಿದುಬಿಸುಟನುವೀರನಮರರು | ಕಡುಗಲಿಯಹೊಗಳುತ್ತಕರೆದರುಪುಷ್ಪವೃಷ್ಟಿಗಳ ॥೩೦॥ ಶಂಬರನತಲೆಗೊಂಡುಬಳಿಕನಿ |
ಜಾಂಬುಜಾನೆಸಹಿತದಿವಿಜಕ | ದಂಬಕೈವಾರಿಸಲುಜಯರವಪುಷ್ಪವೃಷ್ಟಿಯಲಿ ॥ ಅಂಬುಜಾಕ್ಷನಕುವರಸೈತಂ | ದಂಬರದಮಾ
ರ್ಗದಲಿಮಿಂಚೆಸೆ | ವಂಬುದದವೋಲಿಳಿದನಂದಾದ್ವಾರಕಾಪುರಕೆ ॥೩೧॥ ಚಲದಳಕದೀಧಿತಿಯಮಣಿಕುಂ | ಡಲದತಾಂಡವವೆ
ಸೆವಗಂಡ | ಸ್ಥಳದಚಾರುಲಲಾಟಕಾಂತಿಯರಾಜಿತಾನನದ ॥ ತೊಳಪವದನದಮೌಕ್ತಿಕದಮಂ | ದೊಳಮೃದುಸ್ಮಿತಮುದ್ರಿತಾನನ |
ನಳಿನದಳಲೋಚನದಚಲುವರದೈವಸೈತಂದ ॥೩೨॥ ನೀಲಮೇಘನಿಭದ್ಯುತಿಯನಿಡಿ | ದೋಳುಗಳಕಂಕಣದವಿಪುಳವಿ |
ಶಾಲವಕ್ಷಸ್ಥಳದಮುಕ್ತಾಹಾರಭೂಷಣದ ॥ ಸ್ಥೂಲರತ್ನಾಂಗದಕಿರೀಟಗು | ಡಾಳಕಾಲಂಕೃತದಲಂದಾ | ಬಾಲೆಸಹಿತಿಳಿತಂದನಂ
ದಾದ್ವಾರಕಾಪುರಿಗೆ ॥೩೩॥ ದೂರದಿಂದಂಬರದಲಿಳಿದಕು | ಮಾರನನುದಿವ್ಯಾಂಗನೆಯನಾ | ದ್ವಾರಕಾಪುರವಾಸಿಗಳುಕಾಣು
ತ್ತತವತವಗೆ ॥ ಆರಿವನುನೋಡೀತನಭದಲಿ | ನಾರಿಯೊಡನಿಳಿವವನುರವಿಯೊಸ | ಮೀರಸಖನೋಚಂದ್ರನೋಯೆನುತಿರ್ದ
ದಖಿಳಜನ ॥೩೪॥ ಈತನಾರಿವಳಾರುಸತಿಸಾ | ಕ್ಷಾತಮುರಹರನಂಗಲಕ್ಷ್ಮಿಯೋ | ಲ್ಲಾತಶೋಭೆಯಹೋಲುತಿದೆಸದಮ
ಳನತನುಲಕ್ಷ್ಮಿ ॥ ಈತನಲಿಸಂಭವಿಸಿತೆಂದಿದು | ಕೌತುಕವೆನುತ್ತಖಿಳಪುರಜನ | ಜಾತವೀಕ್ಷಿಸುತಿರ್ದಖಿಳಮನೋನುರಾ
ಗದಲಿ ॥೩೫॥ ಕೆಲರುಸಾಕ್ಷಾತ್ಕೃಷ್ಣನೆಂದೇ | ಕೆಲಕೆಲರುಸಾರಿದರುಸತಿಯರು | ಲಲನೆರುಕ್ಮಿಣಿದೇವಿಮಗನಾಗಮಸವನು
ಕಂಡು ॥ ಹಳಹಳಿಸಿನೋಡುತ್ತಕೃಷ್ಣನ | ಚಲುವಮೂರ್ತಿಯಸಾಮ್ಯವೆಂತಿದು | ಸುಲಭವಾಯಿತ್ತಂಗನುತಬೆರಗಾದಳಬು
ಜಾಕ್ಷಿ ॥೩೬॥ ನೆನೆದಳಂದುವಿದರ್ಭನೃಪನಂ | ದನೆಮಹಾತ್ಮನಕಾಣುತವೆನಿಜ | ತನಯನನುಸೂತಿಕಗೃಹಾಶ್ಮಕವಿನಷ್ಟ
ನಶು ॥ ಇನಿತುಹರಯದವೀರನಹನೆಂ | ನನುಪಮನುಬದುಕಿರ್ದನಾದರೆ | ಯೆನುತಕಂಬನಿದುಂಬಿದಳುಸುಕುಮಾರನನುಕಂ
ಡು ॥೩೭॥ ನೆರದುಸತಿಯರುನೋಡುತಿರೆಪೆಂ | ಕರುಹಮುಖಿಬೆರಗಾಗಿಮೊಲೆಗಳು | ತೊರೆದುಪುಳುಕಿತಗಾತ್ರೆಯಾದಳುಕಂ
ಡುಮನದೊಳಗೆ ॥ ಹರುಷವನುತಳೆದಬಳಿವಿಶ್ವಂ | ಭರನಸಾರೂಪ್ಯವನುಹರಹರ | ಹರಮಹಾತ್ಮನುತಳೆದನೆಂತೆಂತಳಲಿದಳುತ
ರಳೆ ॥೩೮॥ ಕೆತ್ತುತಿದೆತಂನೆಡದತೋಳ್ಗಳು | ಚಿತ್ತದಲಿಸಂತೋಷತಳತಿದೆ | ಮತ್ತಿವನಮೇಲಧಿಕತರಸಂಪ್ರೀತಿಬೆಳವುತಿದೆ ॥
ಎತ್ತಲಿಂದೈತಂದತಂನಯ | ಹೆತ್ತಬಾಲಕನಾಗದಿರನೆಂ | ದತ್ಯಧಿಕಸಂಪ್ರೀತಿಯಲಿಮುಳುಗಾಡಿದಳುತರಳೆ ॥೩೯॥ ಅರಮಗಳೇ
ನಹಳುನುತ್ತೀ | ನಾರಿನರಸಿಯಿಸ್ಲಿನರರ | ಲ್ಲೀರುಚಿರಗುಣಮೂರ್ತಿತಂನಕುಮಾರನಲ್ಲದಿರೆ ॥ ಚಾರುಗಮನಸ್ವರಗಳವುದೈ |
ತ್ಯಾರಿಯನುಹೋಲುವವೆನುತಸುಕು | ಮಾರರತ್ನವನೋಡಿಧಣಿಯಳುಕಾಂತೆಕಂಗಳಲಿ ॥೪೦॥ ಇರಲಿರಲುದೈತ್ಯಾರಿನಿಜ
ಮಂ | ದಿರದೊಳಗೆವಸುದೇವದೇವಕಿ | ಯರುಸಹಿತಯದುವೃಷ್ಣಿವೀರನೃಪಾಲಕರುಸಹಿತ ॥ ಪರಮಋಷಿನಾರದನೊಡನೆನಗೆ |

ನೆರಪಿವಾತಾಡುತ್ತ ಸುರರಂ । ಬರದಲಾರಾಧಿಸಲುಬಿಜಯಂಗೈದನಾಕ್ಷಣಕೆ ॥೪೧॥ ಅರಿದುನೈತ್ಯಾರಾತಿನಾರದ । ನರಿಯದನ ನಂದನಲಿಕುಳ್ಳಿರ । ಲರುಹಿದನುನಾರದನುಬಳಿಕಕುವಾರನುದುಭವವ ॥ ಅರಿತುಶಂಬರನೊಯ್ದುದನುಬೇ । ಸರದೆಮುಕ್ತಿವ ಕೊಂಡುಬಂದುದ । ನರಿಪಪ್ರೋಲ್ವಿಸ್ತರಿಸಿದನುವೃತ್ತಾಂತಸಂಗತಿಯ ॥೪೨॥ ಕೇಳುತವೆವಸುದೇವನೊಡಲಿ । ತೋಳದುದು ಸಂತೋಷದೇವಕಿ । ಯಾಲಿಗಳುನೀರೇರಿದವ್ರುರುಕ್ಮಿಣಿಯುಮನದಳಲು ॥ ಹೊಳದುದುಹುರಿಗೊಂಡುದುರುರೋ । ಮಾಳಿರಾ ನಾಹ್ಯತರಿಗದನೇ । ವೇಳುವೆನುಸಂಭ್ರಮಿಸುತಿರ್ದುದುಸಕಲಜನನಿವಹ ॥೪೩॥ ಎತ್ತಿತೊಡೆಯಲಿಕುಳ್ಳಿರಿಸಿಕೊಂ । ಡುತ್ತ ಮಾಂಗನೆತ್ತೊರದವೊಲೆಗಳ । ಲೊತ್ತಿತರ್ಕೈಸಿದಳುಸುರಿವಾನಂದಬಾಷ್ಪಗಲಿ ॥ ನೆತ್ತಿಯನುನಾದಿದಳುಕನುಪ್ರಳ । ಕೋತ್ತರದಪ ರನಕತೆಯಲಿನೆನೆ । ದತ್ತಳಬಲೆಕುಮಾರನಾಯಾಸದಪರಂಪರೆಯ ॥೪೪॥ ಅಪ್ಪಿದರುತವತವಗೆತೆಗದಾ । ದರ್ಪಕನನಡಿಗಡಿಗೆ ಬಾಂಧವ । ರುಪ್ಪರದಹರುಷಾಶ್ರುಪುಳಕಾಲಂಕೃತಾಂಗದಲಿ ॥ ಒಪ್ಪಿಸಿತೆವಿಧಿಹಗೆಗೆಮಗಳವ । ತಪ್ಪಿಸಿತೆಹರಹರಯೆನುತಜನ । ಫೊಪ್ಪತಿರ್ದುದುಕಂಗಳಲಿಕೈಗಳಲಿಬಾಲಕನ ॥೪೫॥ ಹೊಂದಿದಂದಿನರುಕ್ಮಿಣೀಯನು । ಬಂದಗಡನೋಡುವೆನೆನುತಜನ । ವೃಂದವಾಪುರವಾಸವೃದ್ಧರುಬಾಲವನಿತೆಯರು ॥ ಸಂದಣಿಸಿನಡೆತಂದುದಧಿಕಾ । ನಂದದಲಿಕಂದರ್ಪನಾಕೃತಿ । ಯಂದವನುನಡೆ ನೋಡುತಿರ್ದುದುಬಿಗಿದಬೆರಗಿನಲಿ ॥೪೬॥ ಏನನೆಂಬೆನುಪುರಜನದಸುಂ । ಮಾನವನುಸಂತಸದಬಹಳಾಂ । ಬೋನಿಧಿಯ ಲೋಲಾಡುತಿರ್ದುದುಕಂಡುರುಕುಮಿಣಿಯ ॥ ಸೂನುವನುಯದುಕುಲಕುಶೀಕಯ । ಭಾನುವನುನಡೆನೋಡಿನಿತ್ಯಾ । ತ್ಮಾನುಭಾವದಮಹಿಮೆಗಚ್ಚರಿವಟ್ಟದಖಿಳಜನ ॥ ... ... ॥೪೭॥

ಅಂತು ಸಂಧಿ ೬೬ಕ್ಕಂ ಪದನು ೧೧೧೪ಕ್ಕಂ ಮಂಗಳಮಸ್ತು.

ಅರವತ್ತೇಳನೆಯ ಸಂಧಿ.

ಸ್ಯಮಂತಕೋಪಾಖ್ಯಾನ—ಸತ್ಯಭಾಮಾಪರಿಣಯ.

ಸೂಚನೆ ॥ ಹೊತ್ತುದುರಿತವಪರಿಹರಿಸಲೆಂ । ದಿತ್ತನಾಸತ್ರಾಜಿತಾಖ್ಯನು । ಸತ್ಯಭಾಮಾದೇವಿಯನುನಿ
ತ್ಯಾತ್ಮಕಂಗೊಲಿದು ॥ ... ...

ಪದನು ॥ ಅರಸಕೇಳಾದ್ವಾರಕಾಪುರ । ವರದಲಾಸತ್ರಾಜಿತಾಖ್ಯನು । ತರಣಿಯನುಭಜಿಸಿದನುತತ್ಪದಭಾವಭಕುತಿಯ ಲಿ ॥ ಕರುಣಿಸಿದನಾತಂಗೆರತ್ನವ । ನಿರದೆನಿಜಭಕ್ತಂಗೆಬಳಿಕಾ । ಪರಮಗುಣನಿಧಿಬಂದನಂದಾದ್ವಾರಕಾಪುರಕೆ ॥೧॥ ತರಣಿ ತನಗಿತ್ತಮಳರತ್ನವ । ನಿರದೆಕೊರಳಲಿಧರಿಸಿಕೊಂಡಂ । ಬರುಹಮಿತ್ರನಭಕತಸತ್ರಾಜಿತನುಪುರವರಕೆ ॥ ಬರುತಿರಲುಪುರವಾಸ ಜನಕಂ । ಧಿರದೆನೋಡುವೆವೆನುತಹರಿತಂ । ಧಿರದೆಬಿಂನಹವಾಡಿದರುಕೃಷ್ಣಂಗೆಕೈಮುಗಿದು ॥೨॥ ಕೃಷ್ಣಜಯುಸಾಂಬ್ಯೋ ಪಲಾಲಿತ । ಕೃಷ್ಣಜಯನೀಲೋತ್ಪಲದ್ಯುತಿ । ಕೃಷ್ಣಜಯನಿಜಭಕ್ತದುರಿತಧ್ವಾಂತನಾಶನದ ॥ ಕೃಷ್ಣಕರಜಯನತವಿಪದ್ವನ । ಕೃಷ್ಣವರ್ತ್ಮನೆವಿಷ್ಣುಸಂಸ್ತುತಿ । ಕೃಷ್ಣಜೀಯಯೆನುತ್ತಬಿಂನಹವಾಡಿದರುಹದನ ॥೩॥ ದೇವದೇವರಚರಣಕಮಲಯು । ಗಾವ ಲೋಕನಕೆಂದಿದೇರಾ । ಜೀವಸಖನಿದೆಬಂದನೀಕ್ಷಿಸುವವರದೃಷ್ಟಿಗಳು ॥ ಶೀವ್ರುತಿವೆರಕ್ಷಿಸುವ್ರುದಧಿಕಕ್ಕೆ । ಪಾವಲೋಕನದಿಂದೆ ನಲುರಾ । ಜೀವನಾಭನುನೋಡಿನಗುತಿಂತೆಂದನವರೊಡನೆ ॥೪॥ ಕಂಜಸಖನಲ್ಲಲ್ಲಬೆದರದಿ । ರಂಜದಿರಿಅಂಜದಿರಿಬರಿದೇ । ಗುಂ ಜಿಮಾಣಿಕವೆಂಬಮರುಳುಗಳಂತೆಮತಿಗೆಟ್ಟು ॥ ಅಂಜದಿರಿಸತ್ರಾಜಿತನುವರ । ಕಂಜಸಖನಿತ್ತಮಳರತ್ನಸು । ರಂಜಿತನುಬರುತ್ತೈ ಧನೆಂದನುನಗುತಮುರವೈರಿ ॥೫॥ ಎನುತಿರಲುಜನನಿಕರತನ್ನಯ । ಮನೆಯಹೊಕ್ಕನುಮಣಿರಥನುಸಂ । ಜನಿಸಿದನುಧನವಂತ ನಾದನುಪೂಜಿಸುತ್ತಿರಲು ॥ ದಿನದಿನದಲೆಂಟೆಂಟುಭಾರದ । ಕನಕವನುಮಣಿಕೊಡುವ್ರುದದರೊಳು । ಜನಿಸದಾಧಿವ್ಯಾಧಿದುರ್ಭಿ ಕ್ಷಾದಿಭಯವೆಂದ ॥೬॥ ಒಂದುದಿನತದ್ರತ್ನವನುಗೋ । ವಿಂದನಾಸತ್ರಾಜಿತನಕರ । ದೆಂದನೀವ್ರುಗುಯದುನೃಪಾಲಂಗೆಂದಡೆಮು ಕೊಡದೆ ॥ ಮಂದಮತಿಧನಲೋಭದಲಿನಿಜ । ಮಂದಿರದಲೇಪೂಜಿಸುತ್ತಮು । ಕುಂದನಾಜ್ಞೆಯಮಿರಾರಿಲೆಕ್ಕಿಸದಿರ್ದನುಬ್ಬಿನಲಿ ॥ ಇರಲುಸತ್ರಾಜಿತನತಮ್ಮನು । ಧರಿಸಿಮಣಿಯನುಹೋದನಡವಿಗೆ । ತುರಗದಲಿಮೃಗಯಾವಿಹಾರವಿನೋದದಿಂದಿರಲು ॥ ಕೆರಳಿ ಕೊಂದುದುಸಿಂಹವಾಕೇ । ಸರಿಯಕೊಂಡನುಜಾಂಬವನುಬಳಿ । ಕರಸಕೇಳಾಮಣಿಸಹಿತಹೊಕ್ಕನುಮಹಾಬಿಲವ ॥೮॥ ಅತ್ತಲರಸಿದರಾಪ್ರಸೇನನ । ತೆತ್ತಿಗರುಸತ್ರಾಜಿತಾದ್ಯರು । ಸತ್ತತಂಮನಕಂಡುಕೃಷ್ಣನಮೇಲೆಶಂಕಿಸಲು ॥ ಅತ್ತಲಾವಾರ್ತೆಯ ನುನಿರ್ಮಳ । ಮೂರ್ತಿಕೇಳಿದುತನ್ನಮೇಲಣ । ಹೊತ್ತವಿಲಗವಕಳೆಯಲಸುರಾಂತಕನುಹೊರವಂಟ ॥೯॥ ಅರಸಿಮುರಹರ ನಾಪ್ರಸೇನನ । ಮರಣಸಿಂಹದಲಾದುದನುಕಂ । ಡಿರದೆಬೆಂಬತ್ತಿದನುಸಿಂಹದಹಜ್ಜೆಯನುಬಿಡದೆ ॥ ಉರವಣಿಸಿಸಿಹ್ಮನದುಪಿಪಿ ನಾಂ । ತರದಲಡಗೆಡದಿರಲುಕಂಡನು । ಕರಡಿಯುಗರಿನಘಾಯದಲಿಬೆರಗಾದನಸುರಾರಿ ॥೧೦॥ ಸಿಹ್ಮವನುಕೊಲುವಂತೆಕರ

ಡಿಯ । ಸಿಹ್ಮವಿಕ್ರಮನೆಂತೆನುತನರ । ಸಿಹ್ಮನೈದಿದನದಂಹೆಜ್ಜೆಗೆಹೆಜ್ಜೆಯನುನಿಲಿಸಿ ॥ ಗಹ್ವರವನಪವಾದಶಿಖಿದಂ । ದಹ್ಯಮಾ
ನಾಂತರನುಹೊಕ್ಕನ । ಸಹ್ಯತಾಪತ್ರಯವಿದೂರನುಋಕ್ಷಕನಬಿಲವ ॥೧೧॥ ನಿಲಿಸಿನಿಜಪರಿವಾರವನುಬಾ । ಗಿಲಲಿದಿನಹಂ
ನೆರಡುನೀಕ್ಷಿಸಿ । ತೊಲಗುವುದುನೀವೆನುತತದೃಕ್ಷಾಧಿಪನಬಿಲವ॥ ಜಲಜನಾಭನುಹೊಕ್ಕುಬಲುಗ । ತ್ತಲೆಯಮಾರ್ಗವಕಳೆದು
ಕಂಡನು । ಲಲಿತರತ್ನವನರ್ಭಕನುಕೊಂಡಾಡುತಿರಲಲ್ಲಿ ॥೧೨॥ ನಿಂದನವನಸಮೀಪದಲಿಗೋ । ವಿಂದನಾರತ್ನಾಭಿಲಾಷೆಗೆ ।
ಸಂದುಸುಳಿವುತ್ತಿರಲುಕಂಡಾಧಾತ್ರೆಯುಮುರಹರನ ॥ ಬಂದರಾರಿವರೆನುತಮೊರೆಯಿಡ । ಲಂದದನುಕೇಳುತ್ತಮಿಗೆಹರಿ । ತಂದನ ಋ
ಕ್ಷಾಧಿಪತಿಜಾಂಬವನುಕಡುಮುಳಿದು ॥೧೩॥ ಅರಿಯದಾತ್ಮಸ್ವಾಮಿಯೆಂಬುದ । ನೆರೆವಿಚಾರವಿಹೀನನಾಗಿಯೆ । ಶರಬಿಕಾಸು
ದಿದನಾಯುಧಂಗಳಲಸ್ತ್ರಶಸ್ತ್ರದಲಿ ॥ ಮುರಿದುತರುನಿಕರದಲಿಮತ್ತೆಯು । ಕರದಮುಷ್ಟಿಯಲೊಬ್ಬರೊಬ್ಬರು । ಜರಿದುಮಾಡಲಿ
ಸುತ್ತಮುರರಿಪುಋಕ್ಷಪತಿಮುಳಿದು ॥೧೪॥ ಮುಷ್ಟಿಯುದ್ಧವನಾಡುತಿರಲಂ । ದಷ್ಟವಿಂಶತಿದಿವಸಪರಿಯಂ । ತಿಷ್ಟಭಕ್ತನಕೂಡೆ
ಲೀಲೆಯಲಾಡುವಂದದಲಿ ॥ ನಷ್ಟವಾದುದುಸತ್ವವಾತನ । ರಿಷ್ಟವೈರಿಯಕರಹತಿಗೆನಿ । ಷ್ಪಿಷ್ಟಗಾತ್ರನುಜಾಂಬವಂತನುಬಳಲುತಿಂ
ತೆಂದ ॥೧೫॥ ಆರುನೀನೆಲೆವೀರಜೀವರ । ಭೂರಿಸತ್ವಾತ್ಮಕನುಕೌಸ್ತುಭ । ಧಾರಿಯೋಶಂಕರನೋಮೇಣ್ಸರಸೀರುಹೋದ್ಭವ
ನೊ ॥ ಆರುತಂನೊಡನಕಟಕಾದುವ । ವೀರರೀಯುಗದೊಳಗೆವಿಸ್ಮಯ । ಕಾರಿಯಾದೆನಲಾಯೆನುತನೋಡಿದನುಮನದೊಳ
ಗೆ ॥೧೬॥ ಮತ್ತೆಹರಿಕರುಣಿಸಲುಕಂಡನು । ಚಿತ್ತದಲಿರಘುನಾಥನೆಂಬುದ । ನತ್ಯಧಿಕಭಕುತಿಯಲಿಮೈಯಿಕ್ಕಿದನುಚರಣ
ದಲಿ ॥ ಸತ್ಯಸಂಧನೆತನಗೆಮರವೆಯು । ನಿತ್ತನಿತುದಿನಕಾದಿದೆಯೆನು । ತತ್ತನಾಜಾಂಬವನುಕೃಷ್ಣನಕಾಲ್ಗಳನುಹಿಡಿದು ॥೧೭॥
ಏಳನುತನೆಗಹಿದನುಪರಮಕೃ । ಪಾಳುತಕ್ಕೈಸಿದನುಭಕುತನ । ಮೌಳಿಯನುತಂನಸುಕರತಳದಿಂದಮೈದಡವಿ ॥ ಹೇ
ಳಿದನುಕಾರ್ಯವನುತನ್ನಯ । ಮೇಲೆಮಣಿಕೃತದೋಷವನುಜನ । ಜಾಲವಾವಿರ್ಭವಿಸಿದನಾಜಾಂಬವಂತಂಗೆ ॥೧೮॥
ಇತ್ತನಾತನುಬಳಿಕತನ್ನಯ । ಪುತ್ರಿಯನುಜಾಂಬವತಿಯೆಂಬಳ । ನತ್ಯಧಿಕಗುಣರೂಪಸಂಪನ್ನೆಯನುಮಣಿಸಹಿತ ॥ ಮತ್ತೆ
ಬಹುವಿಧವಸ್ತುಗಳನೊಲಿ । ದಿತ್ತುಪೂಜಿಸಿದನುಪರಾಪರ । ವಸ್ತುವನುವೇದಾಂತವಿಶ್ರುತಕೀರ್ತಿಯಾತನಲಿದು ॥೧೯॥ ಇ
ತ್ತಲೀಪರಿಕಳೆವುದಿನಸಂ । ವೃತ್ತವಾಗಲುಬಳಿಕಬಿಲಮುಖ । ದತ್ತಲಾಡುದುಸಕಲಬಾಂಧವಭೃತ್ಯಪರಿಜನಕೆ ॥ ಚಿತ್ತದಂತಸ್ತಾ
ಪದಯುಶೋ । ಕೋತ್ತರದದುಂಮಾನದಲಿಪುರ । ದತ್ತಲೈದಿದರಿತ್ತದಿನದವಧಿಯನುನರೆನೋಡಿ ॥೨೦॥ ಕೇಳಿವಸುದೇವಾದಿಬಾಂ
ಧವ । ಜಾಲವಾದೇವಕಿಸಹಿತವರ । ಬಾಲೆಯರುಬಸವಳಿದುಕೃಷ್ಣವಿನಾಶದುಃಖದಲಿ ॥ ಜ್ವಾಲೆಯಲಿನಿಂದಂತೆಶೋಕ ।
ವ್ಯಾಳವಿಷಮೂರ್ಛಿತರುಹೊಕ್ಕರು । ಶೈಲನಂದನೆಯಂಘ್ರಿಕಮಲದಮರೆಯನಖಿಳಜನ ॥೨೧॥ ತಾಯೆಕರುಣಿಸುತವಗೊ
ಲಿದುನಾ । ರಾಯಣನಜೀವವನುರಕ್ಷಿಸು । ಮಾಯೆಭುವನಾಧಾರೆಶೋಕಭಯಾಬ್ಧಿತಸ್ತರನೂ ॥ ಕಾಯಬಲ್ಲವರಾರುನಿನ್ನಂ ।
ತೀಯಶೇಷಸುರಾವಳಿಯೊಳೆಂ । ದಾಯುವತಿಜನವೃದ್ಧಜನಮರೆಯೊಕ್ಕುದಂಬಿಕೆಯ ॥೨೨॥ ಅಂಬಿಕೆಯನಿಂತಖಿಳಪೌರಕ ।
ದಂಬಜನವಾರಾಧಿಸಲುಪುರ । ವಿಂಬಿನಲಿತೋರ್ಪಂತೆಬಿಲವಾಸವನುಹೊರವಂಟು ॥ ನಂಬಬಲ್ಲಡೆದೈವವನುಜಯ । ವೆಂಬವೋ
ಲಸುರಾರಿಬಂದನು । ಜಾಂಬವತಿಸಹಿತಾಕುಶಸ್ಥಲಿಗಧಿಕಹರುಷದಲಿ ॥೨೩॥ ರತ್ನವರವನುಕೊಟ್ಟುಕಂನ್ಯಾ । ರತ್ನಸಹಿತಾ
ನಂದದಲಿಗುಣ । ರತ್ನಮೂರುತಿಪುರಕೆಬಿಜಯಂಗೈವುತಿರೆಕಂಡು ॥ ಯತ್ನದಲಿಪುರವಾಸಜನನವ । ರತ್ನಮಣಿತೋರಣದಲೆಸೆ
ಯಲು । ನೂತನವೆನೆನದಿದಿರುಗೊಂಡರುವಿದಿತವಿಭವದಲಿ ॥೨೪॥ ಹೋದಜೀವವಪಡೆದೆವೆನುತ । ತ್ತಾದರದಲಂದಖಿಳಜನ
ಹರು । ಷೋದಧಿಯಲೋಲಾಡುತಿರ್ದುದುಸಕಲಬಂಧುಜನ ॥ ಮೇದಿನೀಪತಿಕೇಳುವಸುದೇ । ವಾದಿಗಳುತಂತಮಗೆಹರಿತಂ ।
ದಾದಿಮೂರ್ತಿಯನಪ್ಪಿಮರೆದರುಲೋಕವಿಭ್ರಮವ ॥೨೫॥ ಕರೆದುಸತ್ರಾಜಿತನನಾಮುರ । ಹರನುಸಭೆಯಲಿನೆರೆದಪೃಥ್ವೀ ।
ಶ್ವರರಬಾಂಧವನಿಕರದೊಡ್ಡೋಲಗದಮಧ್ಯದಲಿ ॥ ಹರುಷಮಿಗಲಾದಂಶಮಂತಕ । ವರನುಹಾರತ್ನವನುಕೊಟ್ಟನು । ಪರಮ
ಧಾರ್ಮಿಕಯೆನುತಕರುಣಾವನಧಿಕೈಮುಗಿದು ॥೨೬॥ ಬರಿದೆಹೇಳಿದೆನಕಟಲೋಕ । ಕ್ಕರುಹದೈವದಮೇಲೆದೋಷವ । ನರಿ
ಯದಜ್ಞಾನಿಗಳದಾರೆಂನಂತೆಭುವನದಲಿ ॥ ಕೊರತೆಹೊತ್ತುದುತನ್ನಮೇಲೆನು । ತೆರಗಿಲಜ್ಜಾಭಾರದಲಿಕೈ । ಮರೆಯನೊಗದಲಿ
ಕೊಂಡನಾಸತ್ರಾಜಿತನುಮಣಿಯ ॥೨೭॥ ತನತನಗೆಜನನಿವಹಬಳಿಕಾ । ತನನುಬೈದುದುಬರಿದೆತ್ರಿಜಗ । ಜ್ಜನಕನಲಿದೋ
ಷವನುಸಾಚಿದೆಪಾಪಿನೀನೆನುತ ॥ ಜನರಪರಿವಾದವನುಕೃಷ್ಣನ । ಮನಕತಪನಾಲಿಸುತತಂನನು । ವಿನಯನನಾಮಿಗೆ ಮೈದು
ಕೊಂಡನುಮಾಡಿದಪಮತಿಗೆ ॥೨೮॥ ಕಂದುಕಸರಿಕೆಪೋಕೆಬೇಕುಮು । ಕುಂದನಲಿತನಗೆಂದುತನ್ನಯ । ನಂದನೆಯನಾಸ
ತ್ಯಭಾಮಾದೇವಿಯೆಂಬಳನು ॥ ತಂದುಕೊಟ್ಟನುರತ್ನಸಹಿತಾ । ನಂದಮೂರುತಿಗೊಲಿದುಕೊಡಲಿಂ । ತೆಂದನಾಮುರಾರಾತಿಕನ್ಯಾ
ರತ್ನವನುಕೊಂಡು ॥೨೯॥ ಇರಲಿಮಣಿನಿಂನಲ್ಲಿದಿವಸೇ । ಶ್ವರನಭಕ್ತನೆನುತ್ತಕೊಟ್ಟನು । ಮರಳಿಮಣಿಯನಮಗೆಫಣಿಭೋ
ಗಿಗಳನಾವೆನುತ ॥ ಮರಳಿದನುಬಳಿಕವನುನಿಜಮಂ । ದಿರಕೆಬಂದುದುವಾರ್ತೆಕೃಷ್ಣನ । ಹೊರೆಗೆಕೌರವಭವನದಾಹವಿಸಂನ

ಪಾಂಡವರ ||೪೦|| ಶೌರಿಬಿಜಯಂಗೈದನತ್ತಲು | ಕೌರವನಪಟ್ಟಣಕೆಸಾತ್ಯಕಿ | ವೀರಹಲಧರಗೂಡಿಬಾಂಧವವಿಹಿತಕೃತ್ಯದೆಲಿ || ದ್ವಾರಕಿಯಲೀಹೃದಿಕನಯನ | ಕ್ರೂರನಿರೆಶತಧನ್ವನನುವಿ | ಚಾರಿಸುತ್ತಾಮಣಿಯಕೊಡಬೇಕೆಂದನುರೆಜರದು ||೪೧|| ಕಂನಿಕೆಯನೆನಗೀವೆನೆಂದು | ತ್ವನ್ನವಿಶ್ವಾಸದಲಿನಂಬಿಸಿ | ಮಾನಿಸದೆಕೃಷ್ಣಂಗೆಕೊಟ್ಟನ್ನೈಮಹಾಸತಿಯ || ತನ್ನತಮ್ಮನಗತಿಗೆದುರ್ಮತಿ | ನಂನಿಗವಿಸೆಪೆನಲುಮಿಗೆಸಂ | ಭಿಸಮತಿಸತ್ರಾಜಿತನವಧಿಸಿದನುರಾತ್ರಿಯಲಿ ||೪೨|| ಕೊಂದುಮಣಿಯನುಕೊಂಡುಘೋಳಿಡು | ವಿಂದುಮುಖಿಯರಬ್ಬೆದುಹಾಬ್ದನು | ಮಂದಿರಕೆಶತಧನ್ವನತ್ತಲುಕೇಳಿಪಿತೃವಧೆಯ || ಕೊಂದವನಕೊಂದಲ್ಲದೈಶ್ಯಂ | ಗೊಂದುವನುಮಾಡದಿರೆನುತ್ತಮಾ | ಕುಂದನರ್ಥಿಶರೀರೆಹೋದಳುಹಸ್ತಿನಾಪುರಕೆ ||೪೩|| ಕೇಳಿದಾಗಳೆಮುರಅದನುಭೂ | ಪಾಲರನುಬೀಳ್ಕೊಟ್ಟುಲಕ್ಷ್ಮೀ | ಲೋಲನಂದ್ಯೆತಂದನಂದಾದ್ವಾರಕಾಪುರಕೆ || ಕೇಳಿಶತಧನ್ವನುಪಾಕಾಂದನ | ಭೀಲರೋಷಾಗವನವಾರ್ತೆಯ | ಹೇಳಿದನುಮಾತಿಗೆಟ್ಟುಭಯದಲಿಗಾಂದಿನೀಸುತಗೆ ||೪೪|| ಸಮರಸಹಾಯ್ಯವನುಬೇಡಿದ | ಡವುಳಮತಿಶಿವಶಿವಯೆನುತಸಂ | ಗಮಿತಕರ್ಣಕೆರಾಗ್ರದಲಿಶತಧನ್ವನನುಬೈದು || ಅಮಿತನಿಜಮಾಯಾವಿಳಾಸ | ಕ್ರಮಿತಭವನನವ್ಯಯನನ | ಕ್ರಮನತ್ರೊಡರುವತೋಟಿತನಗೇಕೆಂದನಕ್ರೂರ ||೪೫|| ಯರಗುವರುಗಡಸೆಕಲಭುವನೇ | ಶ್ವರರದಾವನಪದಕೆಕಾಣವು | ನಿರುಗೆಯನುವೇದಾಂತಕೋಟಿಗಳಾವನಂಘ್ರಿಗಳ || ಮರೆಯಹೊಗುವುದುಮಾಯೆಭೂಮಿಯ | ಹೊರೆಯಕಳೆಯಲುಜನಿಸಿದೀಧರೆ | ಗುರುವದ್ವೈವದದ್ವೈವಕೃಷ್ಣನಕೆದನಬೇಡೆಂದ ||೪೬|| ಹಸುಳೆತನದಲಿಘೋರರಾಕ್ಷಸಿ | ಯಸುವಕೊಳ್ಳೆನೆಹೆಂಮರಂಗಳು | ವಸುಧೆನಡುಗಲುಕಿತ್ತುಕೆಡಹನೆಬಾಲಕೇಳಿಯಲಿ || ವಿಷಧರೇಂದ್ರನನುದಧಿಗಿಡುಕನೆ | ವೃಷಭಧೇನುಕೆನಕ್ರಬಕರೆಂ | ಬಸುರರನುಕೊಂದವನಕೂಡಣಕಲಹಬೇಡೆಂದ ||೪೭|| ಏಳುವರುಷದಬಾಲಕನುತಾ | ನೇಳುದಿನಪರಿಯಂತಧರಿಸನೆ | ಲೀಲೆಯಲಿಗೋವರ್ಧನಾಚಲವನುಕರಾಗ್ರದಲಿ || ಮೇಳೆಮಾಗಧಯವನಸಾಲ್ವನೃ | ಪಾಲರನುಸದದಾವಪಾತ್ಮನ | ಹೇಳನವನೆಸುವರೆಮಹಾಪಾತಕಿಯೆಹೋಗೆಂದ ||೪೮|| ಎಂದಡಾಕೃತವರ್ಮನಲ್ಲಿಗೆ | ಬಂದುಸಮರಸಹಾಯವೆನುಗೋ | ವಿಂದನೊಡವರ್ತಿಸಲುಮುಗುಳಕ್ರೂರನಂದಂತೆ || ಎಂದುಜರೆದುನಿರಾಕರಿಸಿಬಿಡೆ | ಲಂದುಜೀವವಿನಾಶಭಯದಲಿ | ಮುಂದುಗೆಟ್ಟಳವಳಿದುಕಳವಳಿಸಿದನುಶತಧನ್ವ ||೪೯|| ಅಸಮಯದಲಿಯಾಜ್ಞಸೇನನ | ಹೀಶನಟ್ಟದಪೂತರಾಲ | ಪ್ಮೇಶನನುಕೆರದರುನೃಪಾತ್ಮಜೆಯಸ್ವಯಂವರಕೆ || ವಾಸುದೇವಾನಂತರಾನೃಪ | ದೇಶವನುಗಮಿಸಿದರುಕಂಡರು | ಭೂಸುರಪ್ರಭರೆನಿಶಪಾಂಡುನೃಪಾಲನಂದನರ ||೫೦|| ಅವನಿಸುರವೇಷದಲಿರಲುಪಾಂ | ಡವರನಾಪಾಂಚಾಲದೇಶ | ಪ್ರವರದಲಿಜಿತಲಕ್ಷ್ಯಲಬ್ಧಮಾಸೋರಥರನಂದು || ದಿವಿಜನುತನಾಕುಂಭಕಾರನ | ಭವನದಲಿತಾಯಿಸಹಿತಲಿರಲು | ತ್ಸವದಲಪ್ಪಿದನನಿಬರನುಸುಪ್ರೇಮಭಾವದಲಿ ||೫೧|| ಅಂದೆಕಳುಹಿಸಿಕೊಂಡುಕುಂತೀ | ನಂದನರನಲ್ಲಿಂದದೇವನು | ಕುಂದನಾನಿಜಸತಿಯತಂದೆಯಕೊಂದವನಕೊಲುವ || ಬಾದುಮನದುತ್ಸಾಹದಲಿಬರ | ಲಾದವನುಕೇಳುತ್ತಭಯದಲಿ | ಮಂದಮತಿಶತಧನ್ವನೊಳಕೊಂಡನುಲಾಯುಸವ || ಮರಣಭಯಸಂತಾಪದಿಂದಾ | ದುರುಳನಕ್ರೂರನಲಿತನ್ನವ | ನಿರಿಸಿಹಾಯ್ದನುನೂರುಯೋಜನದಿನದಿನಕೆನಡವ | ತುರುಗದಲಿಬಲವದ್ವಿರೋಧಾ | ಕುರನುದೇಶಂತರಕೆಬಳ್ಳಿಕಾ | ಹರಿಬಲರುಬೆಂಬತ್ತಿದರುರಥದಲಿದುರಾತ್ಮಕನ ||೫೩|| ತುಟ್ಟಿಸಿದನಾತುರಗಹರಿಬಲ | ರಟ್ಟಬರೆಮಿಥಿಲೋಪವನದಲಿ | ಬಿಟ್ಟನ್ಯತತುರಗವನುಕಾಲಾಳಾಗಿಭೀತಿಯಲಿ | ಬಿಟ್ಟುಕೊಂಡನುಮುಂದೆಮುರರಿಪು | ದುಷ್ಟನನುಬೆಂಬತ್ತಲೀಕನು | ತಿಟ್ಟುಕೆಡಹಿದನವನತಲೆಯನುಚಕ್ರದಲಿಮುನಿದು ||೫೪|| ದನುಜರಿಪುರತ್ನವನುಶತಧ | ನ್ವನಲಿಕಾಣದೆರಾಮನೊಡನೆಂ | ದನುವೃಥಾವಧೆಯಾಯ್ತುಲಾಕೊಂಡವರುಬೇರದನು || ಎನಲುಶಂಕಿಸಿರಾಮಮೈಥಿಲ | ಜನಪನನುತಾಕಂಡುಬಹೆನೀ | ಮನೆಗೆನಡೆಯೆಂದೆನುತಹೊಕ್ಕನುಮಿಥಿಲನೃಪಪುರವ ||೫೫|| ಆಹಲಾಯುಧಬರಲುಬಹಳೋ | ತ್ಸಾಹದಲಿಬಂದಿದಿರುಗೊಂಡುವಿ | ದೇಹನೃಪನುಪಚರಿಸಿದನುನಿಜಗೃಹದಲುಚಿತದಲಿ | ಸಾಹಸಿಕಧೃತರಾಷ್ಟ್ರಸುತನಾ | ಬಾಹುಬಲಯಾತನಲಿಗದಾಭ್ಯಾ | ಸಾಹಿತಾಂಗದವಿದ್ಯೆಯನುಕಲಿತನುಸರಾಗದಲಿ ||೫೬|| ಅತ್ತಲಾಶತಧಂನ್ವನನುಬೆಂ | ಬತ್ತಿಕೊಂದುಸರಾಗದಲಿಪುರು | ಷೋತ್ತಮನುಬರುತಿರಲುತದ್ವಾರ್ತೆಯನುನೆರೆಕೇಳಿ | ಮೃತ್ಯುಭಯದಲಿಹಾಯ್ದರಾತನ | ಸತ್ತಿಗರುಕೃತವರ್ಮಗಾಂದಿನಿ | ಪುತ್ರರಾದ್ವಾರಾವತಿಯಹೊರವಂಟುವಹಿಲದಲಿ ||೫೭|| ಸಾರಿದುರ್ಭಿಕ್ಷಂಗಳಾಯ್ತು | ಕ್ರೂರನಡಗಮನದಲಿಬಳಿಕಾ | ದ್ವಾರಕಿಯಲದನರಿತುವೃದ್ಧವಚೋವಿಶೇಷದಲಿ || ಶೌರಿಕರಸಿದನಾತ್ಮವಿದ್ಯಾ | ಪಾರದರ್ಶಿಯನೊಲಿದುಪಾಂನಿಸಿ | ಸೀರಧರಸಹಿತಾತನೊಡನಿಂತೆಂದನುಚಿತದಲಿ ||೫೮|| ನಂನಿಹೇಳೆಲೆಕಂದದೇಶಾ | ಪಂನನಾಡೆಯದೇಕೆನಂಮನು | ಮಂನಿಸದೆನೀನಿಲ್ಲದೆಂವಿಭಾಜೀವನವಿದೇಕೆ || ಭಿಂನಭಾವವಿದೇಕೆಮಣಿಯದು | ನಿಂನಲಿಹುದೇನಿರಿಸಿದಡೆಶತ | ಧನ್ವನಾವುದುತಪ್ಪನಿನಗೆಂದನುಮುರಧ್ವಂಸಿ ||೫೯|| ಆರಲಿಹುದೇನೆನಗೆಮಣಿಯವಿ | ಚಾರದಲಿಫಲವೇನುಕೇಳ್ಳೈ | ಕಾರಣವನೀಬಾಂಧವರಿಗಾಯ್ತೆಂನಲಭಿಶಂಕೆ || ಸೇರಿದೆನುದೇಶಾಂತರಕ್ಕೀ | ಸೀರಧರನಂತೆಗತದರ್ಪವೆ | ತೋರಿಸಾನಂಬುಗೆಸರ್ವರಿ

ಗೆಂದನಸುರಾರಿ ॥೫೦॥ ಎನಲುನಗುತಾಗಾಂದಿನೀನಂ । ದನನುಮುದ್ರಿತರತ್ನಕರವನು । ವಿನಯದಲಿಗೋವಿಂದನಂಘ್ರಿಯು ಲಿರಿಸಿಪೊಡವಡಲು ॥ ದನುಜಹರನಾರತ್ನವನುಜನ । ಜನಿತಶೋರಿಸಲೆಲ್ಲರಿಗೆತನ । ತನೆಗೆಕಾಮಿಸಿದರುಮಹಾರತ್ನವನುಬಾಂಧವರು ॥೫೧॥ ಕಂನದೆಂದಳುಜಾಂಬವತಿಮಣಿ । ಕಂನದೆಂದಳುಸತ್ಯಭಾಮೆಯು । ದೆಂನದೆಂದನಪುತ್ರಿಕದಧನವೆನುತಯದು ರಾಜ ॥ ನಂನಿರುಕ್ಮಿಣಿಬಯಸಿದಳುಬಲ । ನಸ್ಯರಂರಿದಕರುಹನೆಂದನು । ಭಿಂನವಾದುದುಮತಿಮಹಾಮಣಿಯಲಿಮಹಾಜನಕೆ ॥ ಇರಲಿನಿಂನಲಿಧರಿಸಲರಿದ । ನ್ಯರಿಗೆಮಣಿಯಿದೆನುತ್ತಕೊಟ್ಟನು । ಕರದುಮಗುಳಕ್ರೂರಹಸ್ತದಲಾಮಹಾಮಣಿಯ ॥ ಅರಸಕೇಳ ಸುರಾರಿನೆರೆಪರಿ । ಹರಿಸಿಬಂದಕ್ರೂತಾಭಿಶಂಕೆಯು । ಉರುದಯಾನಿಧಿಸಂತವಿಟ್ಟನುಸಕಲಬಾಂಧವರ ॥೫೩॥ ಕೇಳುವನುತಾನಾವನೀಹರಿ । ಲೀಲೆಯನುಸಶ್ರದ್ಧೆಯಿಂದಲಿ । ಹೇಳುವನುತಾನಾವನೀನಿರುಪಮಪವಿತ್ರವನು ॥ ಹೇಳುತಾಕೇಳುವಮಹಾತ್ಮರ । ಪಾಲಿಸುವನಚ್ಯುತನುಪಾತಕ । ಜಾಲವನುಜಗದೀಶನಿತ್ಯಾತುಮನುಪರಿಹರಿಸಿ ॥ ... ॥೫೪

ಅಂತು ಸಂಧಿ ೬೭ಕ್ಕಂ ಪದನು ೪೦೬೮ಕ್ಕಂ ಮಂಗಳಮಸ್ತು.

ಅರವತ್ತೆಂಟನೆಯ ಸಂಧಿ.

ಸ್ವಾಮಿಗೆ ಕಾಳಿಂದಿ–ಮಿತ್ರವಿಂದೆ–ಭದ್ರೆವಿವಾಹಗಳು.

ಸೂಚನೆ.॥ ಇಂದ್ರಸಂಜ್ಞಪ್ರಸ್ಥದಲಿಕೃತ । ಮಂದಿರರೆನಿಪ್ಪಮಳಕುಂತೀ । ನಂದನರನೀಕ್ಷಿಸಲುಬಿಜಯಂ ಗೈದನಸುರಾರಿ ॥ ... ...

ಪದನು ॥ ಒಂದುದಿನಮುರವೈರಿಕುಂತೀ । ನಂದನರನೀಕ್ಷಿಸಲುಸಾತ್ಯಕಿ । ಗಾಂದಿನೀತನಯಾದಿಯಾದಯದೂತ್ತಮರು ಸಹಿತ ॥ ಸ್ಯಂದನದಲೈದಿದರುಪರಮಾ । ನಂದಮೂರುತಿಪರಮವಿಭವದ । ಉಂದುಶಕ್ರಪ್ರಸ್ಥವನುಸುರರಂಬರದಲುಲಿಯೆ ॥ ೧ ॥ ಹರಿದುದೂತರುಮುಂದೆಕೌಂತೇ । ಯರಿಗೆಕೃಷ್ಣಾಗಮನವಾರ್ತೆಯ । ಪರಮಸಂತೋಷವನುಬಿನ್ನಹಮಾಡಲುರವಣಿಸಿ ॥ ನೆರೆದಸಭೆಸಂಪಂನಹರುಷೋ । ತ್ಕರುಷದಲಿಹಾರೈಸಲೆದ್ದರು । ಧರಣಿಪಾಲಕುಮಾರಕರುಕೃಷ್ಣಾಂಘ್ರಿದರುಶನಕೆ ॥೨॥ ಇದಿರು ಗೊಂಡರುಕಳಸಕನ್ನಡಿ । ವಿದಿತಮಂಗಳಘೋಷವೆಸೆಯಲು ; ಸದಮಳರುಸಂಪನ್ನಕರುಣಾಸಿಂಧುವಿನಪದಕೆ ॥ ಮೃದುಮಧುರ ಮಂದಸ್ಮಿತಾಮೃತ । ಮದನವನುಕಾಣುತ್ತಮುಳುಗಾ । ಡಿದವುಕಂಗಳುಹರುಷರಸಪೂರದಲಿಪಾಂಡವರ ॥೩॥ ಅದ್ದವಾಲಿಗ ಳಾಮುಕುಂದನ । ವೃದ್ಧವದನವಿಳಾಸಹಾಸನು । ಧಾರ್ಪ್ರನಯನಪ್ರೇಮಕರುಣಾಮೃತಸಮುದ್ರದಲಿ ॥ ಇದ್ದವಿತರೇಂದ್ರಿಯ ಗಳೊಂದೇ । ಬುದ್ಧಿಯಲಿತತ್ತತ್ಸುಖಂಗಳ । ಮುದ್ದೆಯಾದುದುಕೃಷ್ಣಮೂರ್ತಿಸಮಸ್ತಜನಗಳಿಗೆ ॥೪॥ ಬರವಕಾಣುತರಥವ ನಿಳಿದಂ । ಬುರುಹನಾಭನುನಮಿಸಿದನುನೃಪ । ವರಯುಧಿಷ್ಠಿರಭೀಮರಿಗೆತಕ್ಕೈಸಿದನುನರನ ॥ ಎರಗಲಪ್ಪಿದನೊಲಿದುಮಾದ್ರೇ । ಯರನುಮುದದಲಿಹರುಷಮಯಸಾ । ಗರದಲೋಲಾಡಿಸಿದನಾಕುಂತೀಕುಮಾರಕರ ॥೫॥ ನುಡಿಸಿಕೇಳುತಕುಶಲವನುಕೈ । ವಿಡಿದುನಡದನುಕೂಡೆಪಾರ್ಥಿವ । ಗಡಣದೆಡಬಲಮಂಕದಲಿಹೊಕ್ಕನುನೃಪಾಲಯವ ॥ ಇಡಿದರತುನದಮಂಚದಲಿಜಗ । ದೊಡೆಯನೊಪ್ಪಿರೆಕುಳ್ಳಿರಲುಬಂ । ದಡಿಗಳಿಗೆಲಜ್ಜಿಸುತತಲೆವಾಗಿದಳುದ್ರುಪದಸುತೆ ॥ ೬ ॥ ಬಳಿಕಸಾತ್ಯಕಿಮುಖ್ಯರಾಸನ । ಗಳಲಿ ಪೂಜಿತರಾಗಿಕುಳ್ಳಿರ । ಲಲಘುಮಹಿಮನಹೊರೆಗೆಕುಂತೀದೇವಿನಡೆತರಲು ॥ ಘಳಿಲನೆದ್ದತಿವಿನಯದಿಂದಡಿ । ಗಳಿಗೆತಲೆವಾಗಿದನು ಮುದದಲಿ । ಸೆಳದುಬಿಗಿಯಪ್ಪಿದಳುಸೌಹಾರ್ದದಲಿಮುರಹರನ ॥ ೭ ॥ ಕುಶಲವಾರ್ತೆಗಳೆಸೆಯಲಂದಾ । ಕುಸುಮನಾಭನ ಚಾರುಹಾಸೋ । ಚ್ಚಸಿತಕರುಣಾಪಾಂಗರಂಜಿತವದನಲಪ್ರೆಮೆಯನು ॥ ಶಶಿವದನೆನೋಡುತ್ತಮುಳುಗಿದ । ಳಸಮಸುಖಜಲ ಪೂರ್ಣಪುಳಕ । ಪ್ರಸರಪರಿತೋಷಾಬ್ಧಿಯಲಿತಲೆವಾಗಿಹರಿಪದಕೆ ॥ ೮ ॥ ॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ॥ ತನಗೆಬಂದವಿಪತ್ಪರಂಪರೆ । ಯನುಭವವನದನೆಲ್ಲವನುನೆನೆ । ನೆನದುಕುಂತೀದೇವಿಬಾಷ್ಪನಿರುದ್ಧಕಂಠದಲಿ ॥ ಜನಿಕಕೈವಲ್ಯದಲಿ ನೆರೆಕಂ । ಬನಿಯಕಡಲೊಳಗಾಳುತೇಳುತ । ಲನುಪಮಂಗಿಂತೆಂದಳತಿಗದುಗದಿತವಚನದಲಿ ॥೯॥ ಅಂದುಕುಶಲಿಗಳಾದೆವಾವೆಲೆ । ತಂದೆನಾವಂದೇಸನಾಥರ । ದೆಂದುನೆನದರೆದೇವಕಳುಹಿದೆಗಾಂದಿನೀಸುತನ ॥ ಬಂದುಪಾಂಚಾಲದಲಿನಾವಿರ । ಲಂದುಕರುಣಿಸಿಕುಂಭಕಾರರ । ಮಂದಿರದಲಿತ್ರೈಭವತ್ಪದಯುಗಳದರುಶನವ ॥ ೧೦ ॥ ಆದೆವಂದೇಸುಖಿನಿವಾಸಿಗ । ಳಾದೆವಂದೇವಡೆಯರುಕ್ಷ್ಮಪ । ರಾದೆವಂದೇಕೃಷ್ಣಕರುಣಾನಿಧಿಯೆನಿಂನೆಸೆವ ॥ ಪಾದಕಮಲಪರಾಗದರುಶನ । ವಾದುದೆನಗಂದಂತೆನಿರ್ಭಯ । ರಾದೆವೆಂದಳು ಕುಂತಿಕಂಬನಿಗಡಲಲೋಲಾಡಿ ॥ ೧೧ ॥ ಅರಿದುಮರದಾವನಪದಾಬ್ಜ । ಸ್ಮರಣೆಯನುಮಾಡಿದಡೆಭವಭಯ । ಹರಿವುದೀಸಂಸಾರಿಗಳಿಗೆಂದರೆಭವತ್ಪದವ ॥ ಕರುಷದನುಭವಪುಣ್ಯವೆಂತಿದು । ದೊರಕಿದುದುತವಗೆನುತಹರುಷೋ । ತ್ಕರುಷದಲಿಹೊಗಳುತ್ತಲಿರ್ದಳುಕುಂತಿಮುರಹರನ ॥ ೧೨ ॥ ಎಂದಡೆಂದನುನಗುತಮುರರಿಪು । ಮಂದಹಾಸದಲಂದುನಿಸ್ನಯ । ನಂದನರಿಗೀದೃಪದ

ನಂದನೆಯುಸ್ವಯಂವರಕೆ ॥ ಬಂದುಕಂಡೆವುಕುಂಭಕಾರಕ । ಮಂದಿರದಲಾದಿನವೆಮೋದೆವ । ದೊಂದುಕಾರ್ಯವಿಶೇಷಸಾಧಕರಾ
ಗಿನಿಜಪುರಕೆ ॥೧೩॥ ಸತ್ಯಭಾಮೆಯುತಂದೆಯುನುಕಿಡೆ । ಕುತ್ತಿದಾಶತಧನ್ವನೆನುಕೊಲ । ಲುತ್ತಮಾಂಗನೆಹೋದೆವಾಪುರ್ಕ್ತಿ
ಯುಬೆಂಬೊತ್ತಿ । ಮೃತ್ಯುವನುಕಾಣಿಸಲುಶಂಕಿತ । ಚಿತ್ತನಾದನುರಾಮನೆಂಬಲಿ । ಮತ್ತೆಕೇಳುವಿದೇಹನಗರವ ನೈದಿದನುಬಳಿ
ಕ ॥೧೪॥ ಅನಿತುದಿನಪರಿಯಂತಬಾರದೆ । ಮನೆಯುಮಂನೆಮರಾದೆವಗ್ರಜ । ನನುನಯುವನಸುಸಲಿಸಲಾರಸ್ಣವನುಕಾಣಿಸ
ಲು ॥ ಜನಪರೊಳಗೆವಿರೋಧಸಲೆಸಂ । ಜನಿಸಿಹೋದೆವುಕಿರಿದುದಿನನಿಂ । ಮಿನಿಬರನುಸಂಭಾವಿಸುವಡರಿದಾಯ್ತು ತನಗೆಂದ ॥
ಪ್ರಾಣವೈವರುತನಗೆನೀವೆ । ಪ್ರಾಣಚೇತನರೂಪುನಿಮ್ಮ । ಕ್ಷೋಣಿತಳವನುನಿಮಗೆಸಾಧಿಸಿಕೊಡುವೆನೆಂದೆಂಬ ॥ ಕೇಣತಂನ
ನುತಾಯೆಚಿಂತೆಯು । ಮಾಣುನೀನೆಂದೊಲಿದುಮೃದುತರ । ಪಾಣಿತಳದಲಿತ್ರೊಡದುವ್ಯೆದಡವಿದನುಗೃರುಜಲವ ॥೧೬॥
ಶ್ರೀರಮಣನಿಂತೆನಲುನುಡಿದಳು । ದಾರಮತಿಗೋವಿಂದಸರ್ವಾ । ಧಾರಸರ್ವಾತ್ಮಕನೆಸರ್ವಜಗತ್ಪ್ರವರ್ತಕನೆ ॥ ಆರುನಿನಗಾ
ತ್ಮೀಯುಶನ್ಸರ । ದಾರುರಿಪುಗಳುನಿಸ್ನಮಹಿಮೆಯು । ನಾರರಿವರೆಂದೆರಗಿದಳುಮುರಹರನಚರಣದಲಿ ॥೧೭॥ ಇಂತುಸತ್ಸ್ಪ್ರೀ
ಮದಲಿಲಕ್ಷ್ಮೀ । ಕಾಂತನಾಬಾಲಕರುಸಹಿತಾ । ಕುಂತಿಯಾರಸಂಭಾವಿಸುತಸಸ್ನೇಹಸೂಕ್ತಿಯಲಿ ॥ ಸಂತಸವಮಾಡುತ್ತಸಜ್ಜನ ।
ಸಂತತಿಗೆತತ್ಪುರಜನಕೆಸೀ।ಮಂತಿನೀಜನಗಳಿಗೆಹರುಷವನಿತ್ತನೊಲವಿನಲಿ ॥೧೮॥ ಪರಮಸುಖಸಪ್ರೇಮಸಂಭೃತ । ಪರವಶತೆ
ಯಲಿಸಂದವಂದಿನ । ವರುಷರುತುಮಾಸಂಗಳಿಂದ್ರಪ್ರಸ್ಥವಾಸದಲಿ ॥ ಸರಸನಯನಾಪಾಂಗಸಸ್ಮಿತ । ಚರಿತಮಂಗಳಸೂಕ್ತಿಗಳಲಪ ।
ಹರಿಸುದಿರ್ದನುಸಕಲಪುರವಾಸಿಗಳಕಣ್ಮನವ ॥ ದಣಿದುದಣಿಯುವುಕಂಗಳಿಂದ್ರಿಯು । ಗಣಕೆದಳಪತಿಯಾದವಕ್ಷಿಗ । ಳೆಣಿಸಲೇ
ಕೆಂದ್ರಿಯುವೃತಜ್ಞನನಿವಹವೆಂದೆನುತ ॥ ಗುಣನಿಧಿಯುಸೌಂದರ್ಯಲಕ್ಷ್ಮಿಯು । ಕಣಿಯೆನಿಪಕೃಷ್ಣನಮುಖಾಬ್ಜೀ । ಕ್ಷಣದಸುಖ
ಸಾಮ್ರಾಜ್ಯಪದವನುಪಡೆದುದಖಿಳಜನ ॥೨೦॥ ವಾಲಗಿಸಿಮೈದಣಿಯಲೀಕ್ಷಿಸು । ತಾಲಿಗಳುಮಿಗೆದಣಿಯುವದ್ಭುತ । ಲೀಲೆ
ಯನುಕೇಳುತ್ತದಣಿಯುವುಕಿವಿಗಳನವರತ ॥ ನಾಲಿಗೆಗಳನುಪಮಚರಿತ್ರವ । ಹೇಳಿದಣಿಯುವುಸಲೆಪರಸ್ಪರ । ವಾಳಿಗೊಂಡುದು
ಕೃಷ್ಣಮೂರ್ತಿಸಮಸ್ತಜನಮನವ ॥೨೧॥ ಒಂದುದಿನಫಲುಗುಣಸಹಿತಗೋ । ವಿಂದನೊಪ್ಪುವರಥದಲೈದಿದ । ನೊಂದುವಿಪಿ
ನಾಂತರಕೆಮೃಗಯಾವ್ಯಸನಲಾಲಸರು ॥ ವೃಂದದಲಿನಾನಾಮೃಗೌಘವ । ಕೊಂದುಮಾಂಸದಹೊರೆಗಳನುಯುವ । ನಂದನನ
ಹೊರೆಗಟ್ಟಿದರುಕೆಂಬಿಗಳುತನಿಜಡಿಯೆ ॥೨೨॥ ಕಳುಹಿಪಾರ್ಬಣಯೋಗ್ಯಮಾಂಸಂ । ಗಳನುರಾಜಾಲಯಕೆವನದಲಿ । ಸುಳಿ
ದುಮೃಗಯಾವ್ಯಸನದಲಿವರನೃತ್ಯಗೀತದಲಿ ॥ ಬಳಲಿಬಸವಳಿವುತ್ತಹೋದನು । ಫಲುಗುಣನುಯುಮುನಾಜಲಾಂತಿಕ । ಕಲಘು
ತೃಷ್ಣಾತುರನುಬೀಳ್ಕೊಂಡನುಮುರಾಂತಕನ ॥೨೩॥ ತೊಳೆದುಕರಚರಣಂಗಳನುಮು । ಕ್ಕುಳಿಸಿಜಲವನುತಿರುಗಿಕಂಡನು ।
ಲಲನೆಯೊಬ್ಬಳನಾನದೀತೀರದಲಿಸುರಪತಿಯು ॥ ಹೊಳಲರಂಭೆಯುಮೇಣುಲಕ್ಷ್ಮಿಯೊ । ಲಲಿತವನದೇವತೆಯೊಧರೆಯಲಿ ।
ಸುಳಿವತೇಜೋಮೂರ್ತಿಗಳತೇಜಸ್ವಿಯೋಯೆನಲು ॥೨೪॥ ಆರುನೀನೆಲೆಕಾಂತೆಹೇಳೆನ । ಗಾರವಧುಹೆಸರೇನುಹೆತ್ತವ ।
ರಾರುಘೋರಾರಣ್ಯವಾಸವಿದೇಕೆನಿನಗಿಂತು ॥ ಕಾರಣವಹೇಳೆನಲುಪಾರ್ಥನು । ದಾರವಚನವನಾಲಿಸುತಮಧು । ರಾರವದ
ಲಿಂತೆಂದಳಂಗನೆನಿಜಮನೋರಥವ ॥೨೫॥ ತಂದೆಕೇಳಾದರೆತನಗೆಕಾ । ಳಿಂದಿಯುಂಬುದುಹೆಸರುಪತಿಗೋ । ವಿಂದನಿನನೆಂ
ಮೈಯ್ಯನಾತನನೇಮದಲಿತಪಕೆ ॥ ನಿಂದೆನಿಪರೊಳುಸಕಲಮುನಿಜನ । ವಂದ್ಯಪಾವನಚರಣಕಮಲ । ದ್ವಂದ್ವದರುಶನದರ್ಥಿ
ಯಲಿಕೇಳೆಂದಳಬುಜಾಕ್ಷೆ ॥೨೬॥ ಆಸೆಗೊಂಡುದುಚಿತ್ತವೆನಗಾ । ವಾಸುದೇವನಚರಣಕಮಲದ । ದಾಸಿಯುಹೆನೆಂಬೊಂದು
ಭಾಗ್ಯೋದಯುದಬೆಳಸಿರಿಗೆ ॥ ಶ್ರೀಸತಿಯುಲಾಲಿತಪದಾಬ್ಜಪ್ರಿ । ಳಾಸವನುಕಾಂಬಂನವೆನಗುಪ । ವಾಸವೆಂದಳುಕಾಂತೆಕೆಂಬನಿ
ನುಂಬಿಪಾರ್ಥಂಗೆ ॥೨೭॥ ಎಂದಡಾಸತಿಯಿರವನಾಗೋ । ವಿಂದನಲ್ಲಿಗೆಹರಿದುಕೌಂತೀ । ನಂದನನುಕೈಮುಗಿದುಬಿಂನಹ
ಮಾಡಿದನುಹದನ ॥ ಮಂದಹಾಸದಲಸುರರಿಪುಸಾ । ನಂದದಲಿಕೇಳುತ್ತನಡೆತಾ । ಳಿಂದಿಯುಂಬಳದಾರುನೋಳ್ಪೆವೆನುತ್ತನಡೆತಂ
ದ ॥೨೮॥ ಬರವಕಾಣುತಮುಕುಳಕರಪುಟ । ಸರಸಿಜದಲಂದಬುಲೆಸಂತತ । ಶಿರದಲಾಂತಬುಜಾಕ್ಷಿಯುಂತಃಕರಣದಭಿನುತನ ॥
ಮುರಮಥನನಾಲಿಸುತರಥದಲಿ । ತರುಣಿಯುನುಕುಳ್ಳಿರಿಸಿಕೊಂಡಂ । ಬುರುಹದೃಶತೈತಂದನಿಂದ್ರಪ್ರಸ್ಥಪುರವರಕೆ ॥೨೯॥
ವಿಶ್ವಕರ್ಮನಕರೆಸಿಬಳಿಕಾ । ವಿಶ್ವತೋಮುಖನೊಲಿದುಪಾಂಡುಮ । ಹೀಶ್ವರನಸುಕ್ಷಿತಿಗಳಿಗೆಸಂಪನ್ನಪುರವರವ ॥ ವಿಶ್ವವಿಸ್ಮ
ಯಕರವೆನಲುವಿ । ಶ್ವೇಶ್ವರಾರ್ಚಿತಚರಣನುದನು । ರೇಶ್ವರನಪುರಕಧಿಕವೆನೆನಿರ್ಮಾಣಿಸಿದನರಮನೆಯು ॥೩೦॥ ಕನಕರತುನ
ದ್ವಾರಗೋಪುರ । ಜನಿತಬಹಳಟ್ಟಾಲಶೋಭಾ । ವಿನುತಹರ್ಮ್ಯಾವಳಿಯುರತ್ನಾವಳಿಯುಭವನದಲಿ ॥ ಘನಪತಾಕಾತೋರಣಂ
ಗಳ । ಲಸಿಮಿಷರಪುರಲಕ್ಷ್ಮಿಗತಿಶಯು । ವೆನಲುಮಿಗೆರಂಜಿಸಿದುದಿಂದ್ರಪ್ರಸ್ಥಪುರಲಕ್ಷ್ಮಿ ॥೩೧॥ ಬಳಿಕಪಾಂಡುಕುಮಾರಕರ
ಮನ । ದೊಲವಿನಭಿಮತಸಿದ್ಧಿಯನುನೆರೆ । ಸಲಿಸಿಹಲವುದಿನಂಗಳನುತತ್ಪುರದಲನುಸರಿಸಿ । ಅಲಘುವಿರಹವಿನೋದಜಲಪರಿ ।
ಲುಳಿತನಯನಸರನಪ್ಪಿಹರಿಬೀ । ಳ್ಕೊಳಿಸಿಮತಳಿದುಬಂದುಹೊಕ್ಕನುದ್ವಾರಕಾಪುರಿಯ ॥೩೨॥ ಮಿತ್ರಸುತೆಯುವಿವಾಹಸನ

ಸುಮು । ಹೂರ್ತದಲಿವಿರಚಿಸಿಸುಯೋಧನ । ನತ್ತಲಿಪವಿಂದಾನುವಿಂದರತಂಗಿಯನುತನನೆ ॥ ಅತ್ತೆಯಹರಾಧಾದಿದೇವಿಯ । ಪುತ್ರಿಯನುನಾನ್ಯಪಾಲರ । ಮೊತ್ತವನುಪರಿಭವಿಸಿತಂದನುಮಿತ್ರವಿಂದೆಯನು ॥ ೩೩ ॥ ಅರಸಕೇಳ್ಕೈಕೋಸಲಾಧೀ । ಶ್ವರಗೆನಗ್ನಜಿದಾಖ್ಯನೃಪತಿಗೆ । ಪರಮಕನ್ಯಕೆಲೀಲೆಯಿಂದೂನಗ್ನಜಿತೆಯೆಂದು ॥ ಧರೆಯುಲೆಸೆದಳುರೂಪಗುಣಬಂ । ಧುರಮಹಾತ್ರೇಜದಲಿವಿಜಿತಾ । ಪ್ಸರೆಯೆನಿಸಿವಿಖ್ಯಾತೆಯಾದಳುಭುವನಭವನದಲಿ ॥ ೩೪ ॥ ಏಳುಬಸವಂಗಳನುಕಟ್ಟಿದ । ಡೇಳ್ದಿದಿಪವಳ್ಳೀವೆನೆಂನೆಯ । ಬಾಲಕಿಯನೆಂದವನಿಪತಿಹೊಯ್ಸಿದನುಡಂಗುರವ ॥ ಕೇಳುತವನಿಯನೃಪಕುಮಾರರು । ತೋಳಬಲುಹನುಮೆರೆದುಹೊಕ್ಕರು । ಕಾಲನೂರನುಕಟ್ಟಲರಿಯದೆವೃಷಭಸಂತತಿಯು ॥ ೩೫ ॥ ಕೇಳಿದನುಬಳಿಕದನುಲಕ್ಷ್ಮೀ । ಲೋಲನಾನೃಪವಿಜಯಲಭ್ಯವಿ । ಶಾಲನೇತ್ರೆಯಲಾಭವನುಚತುರಂಗಬಲಸಹಿತ ॥ ಮೇಲೆಚಲಿಸುವಛತ್ರಚಾಮರ । ದೇಳ್ಗೆಯಘನವಿಭವದಲಿಭೂ । ಪಾಲಕೋಸಲನರಮನೆಗನಡೆತಂದನೊಲವಿನಲಿ ॥ ೩೬ ॥ ಬರವಕಾಣುತಕೋಸಲಾಧೀ । ಶ್ವರನುಬಹುಮಂಗಳಸುವಾದ್ಯೋ । ತ್ಕರಮಹಾವಿಭವದಲಿಗುಡಿತೋರಣಪತಾಕೆಗಳ ॥ ಪರಮವಿಭವದಲಿದಿರುಗೊಂಡಂ । ಬುರುಹನಾಭನನಧಿಕಹರುಷೋ । ತ್ಕರುಷದಲಿಪೂಜಿಸಿದನಾತ್ಮಧನಾನುಸಾರದಲಿ ॥ ೩೭ ॥ ಅಸಕಲಪುರವಧುಗಳಂದಾ । ವಾಸುದೇವನದಿವ್ಯಮೂರ್ತಿವಿ । ಳಾಸಹಾಸೋಪಾರಸುಧೆಯನುನಲಿದುಕುಡಿಕುಡಿದು ॥ ಅಸರುವಕಂಗಳಲಿಮನದಲಿ । ಹಾಸುಹೊಕ್ಕಾಗುತ್ತಸುಖಮಾ । ರಾಶಿಯಲಿಮುಳುಗಾಡುತ್ತಿರ್ದುದುಬಿಗಿದಬೆರಗಿನಲಿ ॥ ೩೮ ॥ ವೀರರಾಜಕುಮಾರಿಕಂಡಾ । ಶ್ರೀರಮಣನಮಳಾಂಗಲಕ್ಷ್ಮಿಯ । ಚಾರುಸೌಂದರ್ಯವನುಬಿದ್ದಳುಕಾಮಮೂರ್ಛೆಯಲಿ ॥ ಸಾರತರಜನ್ಮಾಂತರಾರ್ಜಿತ । ಭೂರಿಸುಕೃತಫಲಂಗಳುಳ್ಳರೆ । ಸೇರಲೀತನದಾಸ್ಯವೆಂದಳುಕಾಂತೆಮರುಕೊಳಿಸಿ ॥ ೩೯ ॥ ಧನ್ಯರಾರೆಂನಂತಜಗದಲಿ । ಮಾನ್ಯರಾರೆಲೆಕೃಷ್ಣಬಹಳಕ್ಕೆ । ಪೂರ್ಣವನೆನಿಂನಂಘ್ರಿಕಮಲಪರಾಗದರುಶನಕೆ ॥ ತಂನಮಾಂಸಾಕ್ಷಿಗಳವೆಂತುಪ । ಸಂನವಾದಪುನಿಗಮಕೋಟಿಯ । ವರ್ಣನೆಗೆಮ್ಯಗುಡದೆನುತಮೈಯಿಕ್ಕಿದನುಭೂಪ ॥ ೪೦ ॥ ಆರುತೊಳೆದರುದೇವನಿಂನಯ । ಚಾರುಚರಣನಖಾಗ್ರವನುಮ । ತ್ತಾರುಧರಿಸಿದರಮಳನಖನಿರ್ನೇಜನದಜಲವ ॥ ವಾರಿಜಾಸನರುದ್ರನುತಚರ । ಣಾರವಿಂದನೆತಂನಹೋಲುವ । ಭೂರಿಭಾಗ್ಯರದಾರೆನುತಪೂಜಿಸಿದನಚ್ಯುತನ ॥ ೪೧ ॥ ದೇವಬಿಜಯಂಗೈದಿರಿತ್ತಲ । ದಾವುದೆನಗೆಭವತ್ಪದಾಂಬುಜ । ಸೇವಕಂಗೇಂವಿಧಿಯನೆಂಬುದಬೆಸಸಬೇಹುದೆನೆ ॥ ದೇವರೆನೆನಸುನಗುತದೇವರ । ದೇವನಾಕೋಸಲನೃಪಾಲನ । ಭಾವಭಕುತಿಗೆಮೆಚ್ಚಿಮುಗುಳ್ನಂತೆಂದನೊಲವಿನಲಿ ॥ ಬಂದೆವಾವೆಲೆಭೂಪನಿಂನಯ । ನಂದನೆಯನಭ್ಯರ್ಥಿಸಲುಮನ । ಸಂದುನೋಳ್ಪಡೆನಿಂನಸಂಬಂಧವನುನೆರೆಬಯಸಿ ॥ ನಿಂದೆಯಲ್ಲಾಯಾಚ್ಞೆನೃಪರಿಂ । ಗೆಂದುನೋಡದೆಕರಸಿಕೊಳ್ಳದೆ । ಬಂದೆವೀವೆಯದೇನನೆಂದನುನಗುತಮುರವೈರಿ ॥ ೪೩ ॥ ಆರೊಡೆಯನೀನಲ್ಲದೆಂಮಕು । ಮಾರಿಗತಿಶಯಯೋಗ್ಯರನ್ಯರ । ದಾರವಕ್ಷಸ್ಥಳವಮನೆಮಾಡಿಯೆಮಹಾಲಕ್ಷ್ಮಿ ॥ ಚಾರುಚರಣನಿವಾಸಲಬ್ಧಿಗೆ । ಹೋರುವಳುಗಡತುಳಸಿಯೊಡನೆನೆ । ಲಾರುತಂನಂದದಸನಾಥರುಭುವನದೊಳಗೆಂದ ॥ ೪೪ ॥ ಆಡಲಂಮೆನುತಂನಬುದ್ಧಿಯ । ಕೇಡನೆಲೆಶ್ರೀಕೃಷ್ಣಸಮಯವ । ಮಾಡಿದೆನುಮಗಳ್ಗೆಪತಿಸಾಮರ್ಥ್ಯಸಂಪದವ ॥ ನೋಡಲಂದೇಬರಿದೆಭಂಗವ । ಮಾಡಿದೆನುನೃಪರಿಂಗೆಬಸವನ । ಬೀಡಕಟ್ಟದಡೀವೆನೆಂನಯಮಗಳನೆಂದೆನುತ ॥ ೪೫ ॥ ಹೇಳಿದೆನುತಾಮುಂನಮಾಡಿದ । ಖೂಳತನವನುಕೃಷ್ಣನೀನೇ । ಪಾಲಿಸುವುದೆಂನಿಪ್ರತಿಜ್ಞೆಯನೆಂದುಬಿಂನೈಸೆ ॥ ಏಳುಬಸವಂಗಳನುತೋರಿಸು । ಪಾಲಿಸಿದೆನಿಷ್ಟವನೆನುತಶಿರಿ । ಲೋಲನೆದ್ದನುಬಿಗಿದುಪರಿಕರಗಳಲಿಕೈಗೈದು ॥ ೪೬ ॥ ಬೇಡಮಗಳವಿವಾಹನಿನಗಿದು । ಕೇಡತಂದುದುಪಲಬರಿನೆಕ್ಕೆ । ಮಾಡಲರಿದಿವರೊಡನೆನಿಂನೀಮೂರ್ತಿಬಡುಕಿರಲು ॥ ನೋಡಿಸಂತಸಬಡುವೆವೇತಕೆ । ಕೇಡಕಡುನಿರ್ಬಂಧವೆನುತವೆ । ರೂಢಿಯಲಿಮೈಯಿಕ್ಕಿದನುಕೋಸಲಮಹೀಪಾಲ ॥ ೪೭ ॥ ಅಂಜದಿರುನೀನೆನುತವಿಗೆಕರ । ಕಂಜದಲಿಮೈದಡವಿನೆಕಪವಿ । ಪಂಜರನುಪೀತಾಂಬರವಗಂಟಿಕ್ಕಿಬಿಗಿದುಟ್ಟು ॥ ಮಂಜರಗಸಂಮರಿಸಿಭವಭಯ । ಭಂಜನನುಮುಂನೈಯ್ಯಕಂಕಣ । ರಂಜಿಸಲುಹೊರಮಂಟನಾಸೆಳ್ಳೆಟಿಸುತನಿಜಭುಜವ ॥ ೪೮ ॥ ಸುರರುನಭದಲಿಜಯತುಜಯಜಯ । ಪರಮಪುರುಷಯೆನುತ್ತಹೊಗಳು । ತ್ತಿರಲುಪುರವನಿತೆಯರುಹಾಹಾಯೆನುತವಸವಳಿಯೆ ॥ ವರಕುಮಾರಿಮನೋವಿಷಾದದ । ಲಿರದೆಹೊಗಳುತ್ತಿರಲುಹೊರಮಂ । ಟುರವಣಿಸಿದೈತ್ಯಾರಿಕರದನುವೃಷಭಸಪ್ತಕವ ॥ ೪೯ ॥

॥ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ॥

ಬೆರಳಚಿಟುಕಿಸಿಕರವಕೃಷ್ಣನ । ನಿರುಪಮಾಕ್ಷೇಪವನುಕೇಳುತ । ಕೆರಳಿಕಂಗಳುಕಿಡಿಯನುಗುಳಲುಖುರಖುರಾಗ್ರದಲಿ ॥ ಧರೆಯನಪ್ಪಳಿಸುತ್ತಬಾಲದ । ಲಿರದೆಮುಗಿಲನುಕೆದರುತಗಿದ । ಬ್ಬರಿಸಿಕವಿತಂದವುವೃಷಂಗಳುಕೃಷ್ಣನಭಿಮುಖಕೆ ॥ ೫೦ ॥ ಕೆರಳಿಸಪ್ತಕುಲಾಚಲಂಗಳು । ಧರೆಗೆವೃಷಭಾಕಾರದಲಿಮೈ । ಗರದಪೊಲುಖುರಖುರವಿಷಾಣಾಗ್ರಂಗಳಲಿನೆಲನ ॥ ಇರದೆಗಗನವನಳ್ಳಿರಿವುತ್ತೈ । ತರಲುಸಪ್ತಾಕಾರವನುನೆರೆ । ಧರಿಸಿಘನಮಾಯಾವಿಹಿಡಿದನುವೃಷಭಸಪ್ತಕವ ॥ ೫೧ ॥ ಹಿಡಿದುಕರುಗಳನೆಳವಪ್ಪೋಲವ । ಘಡಿಸಿಕಟ್ಟಿದನೇಳನೊಂದೇ । ಬಡಹುರಿಯನೇಣಿನಲಿಗಗನದಲಮರರುಘೆಯೆನಲು ॥ ಪ್ರೌಢವಿಸಂತಸವಟ್ಟುದೆಸವು ।

ಗ್ರಡದಜಯಜಯಜಯರವಂಗಳ । ಗಡಣವೇಣ್ದೆಸೆಗೆಸದುದೊಂದೇನಿಮಿಷಮಾತ್ರದಲಿ ||೫೨|| ನೊಳಗಿದವುಭೇರಿಗಳುಘೋ
ಷನಿ । ಸ್ಸಳದೊಡನೆಕೋಸಲನೃಪಾಲನ । ನಿಳಯದಲಿತಳಿತುದುಮಹೋತ್ಸವದುಬ್ಬರದರಭಸ ॥ ಪುಳಕಪಸರಿಸಿಪರಮಪುರುಷ
ನ । ತಳದುನೃಪನಚ್ಯುತನಪದವನು । ತೊಳೆದುಧಾರೆಯನೆರೆದುಕೊಟ್ಟನುಪ್ರೊಲಿದುನಿಜಸುತೆಯ ||೫೩|| ಹತ್ತುಸಾವಿರಧೇ
ನುಗಳನಂ । ಭತ್ತುಸಾವಿರಕರಿಗಳನುತ್ತೊಂ । ಭತ್ತುಸಾವಿರರಥಗಳನುಮತ್ತಾರಥಂಗಳಿಗೆ ॥ ಹತ್ತುಮಡಿತುರುಗವನುತುರುಗ
ಕೆ । ಹತ್ತುಮಡಿಕಾಲಾಳನವನಿಪ । ನಿತ್ತನಾನಿಜನಂದನೆಗೆಬಳುವಳಿಯನೊಲವಿನಲಿ ||೫೪|| ಇತ್ತನಖಿಳಾಭರಣಭೂಷಿತ ।
ಗಾತ್ರೆಯರನುರುಜವ್ವನಾನ್ವಿತ । ಮತ್ತಕಾಶಿನಿಯರನುಮಗಳಿಗೆಮೂರುಸಾವಿರವ ॥ ತೊತ್ತಿರನುದಿವ್ಯಾಂಬರಂಗಳ । ನುತ್ತ
ಮಾಮಳರತ್ನನಿಕರವ । ನಿತ್ತುಮಂನಿಸುತಿರ್ದನಧಿಕಮನೋನುರಾಗದಲಿ ||೫೫|| ರಾಜಮಹಿಷಿಯರಾಮುಕುಂದನ । ರಾ
ಜಮಾನಮನೋಜ್ಞಚರಣಾಂ । ಭೋಜಸೇವೆಗೆಸೇರಿದಾನಿಜಸುತೆಯನೀಕ್ಷಿಸುತ ॥ ಮೂಜಗದಲೆಮಿಂದಮಿಗಿಲುಸ । ಭಾಜ
ನೀಯುತದಾರೆಸುತನಿ । ರ್ವ್ಯಾಜಸುಖಸಾಗರದಲೋಲಾಡಿದರುತವತವಗೆ ||೫೬|| ಹರುಷಮಿಗೆದಂಪತಿಗಳನುಕು । ಳ್ಳಿರಿಸಿ
ರಥದಲಿಕೋಸಲಾಧೀ । ಶ್ವರನುನೆರವನುಕೊಟ್ಟುಕರಿರಥತುರಗಪತ್ತಿಗಳ ॥ ಮೊರವನಿಸ್ಸಳಭೇರಿಗಳಭೂ । ಸುರರಮಂಗಳ
ಘೋಷದಲಿಸತು । ಕರಿಸಿಕಳುಹಿದನುಚಿತದಲಿಸಂಪನವಿಭವದಲಿ ||೫೭|| ಗಳಿತನಯನಾನಂದಬಾಷ್ಪಾ । ಕುಳಿತನೆಸೆದನುಕ
ಳುಹಿದಂಪತಿ । ಗಳನುಮರಳಿದನಧಿಕತರವೈಕಲ್ಯಹೃದಯದಲಿ ॥ ಚಲಪತಾಕಾಛತ್ರಚಮರಾ । ವಳಿಯುಗಡಣದಲಭ್ರವಡಗಲು ।
ನಳಿನನಾಭನುವಿಭವದಲಿಪುರವರವಹೊರನಂಟ ||೫೮|| ಪಾರಿಬರ್ಹಂಗಳನುಕೊಂಡಸು । ರಾರಿಮಾಗಧವಂದಿಗಳಕ್ಕೈ । ವಾ
ರನೆಸೆಯಲುಬಂದುಹೊಕ್ಕನುದ್ವಾರಕಾಪುರಿಯ ॥ ಭೂರಿಮಂಗಳಘೋಷದಲಿಪರಿ । ವಾರವಿದಿರ್ಗೊಳಲಖಿಳಯಾದವ । ನೀರಜ
ನಸಹಿತಂದುಬಂದನುದ್ವಾರಕಾಪುರಕೆ ||೫೯|| ಮತ್ತೆಕೇಳೆಲೆಭೂಪಮುರಹರ । ನತ್ತೆಕೇಕಯರಾಜಸತಿಶ್ರುತ । ಕೀರ್ತಿಯಂಬ
ಳಾಮಗಳನಿತ್ತಳುಭದ್ರೆಯೆಂಬಳನು ॥ ಅತ್ತಲಾಮಾದ್ರಾವನೀಶನ । ಪುತ್ರಿಲಕ್ಷ್ಮಣೆಯೆಂಬಳನುಸುಚ । ರಿತ್ರೆಯನುತಂದನುವಿಭೂ
ಷಿಸಿಸಕಲನೃಪಕುಲವ ||೬೦|| ಸಕಲಲೋಕೇಶ್ವರಗೆಲಲನಾ । ಷ್ಟಕವಿವಾಹೋತ್ಕರದಲಾದುದು । ಮುಕುತಿನಾಥಂಗವನಿಸುತ
ವಿಜಯದಲಿತತ್ಪುರದ ॥ ವಿಕಟರುದ್ಧನೃಪಾಲಕನ್ಯಾ । ಪ್ರಕರದಷ್ಟಸಹಸ್ರವೈವಾ । ಹಿಕಮಹೋತ್ಸವರಚನೆಗಳುನಿತ್ಯಾತ್ಮಕೃ
ಷ್ಣಂಗೆ ॥ ... ... ||೬೧||

ಅಂತು ಸಂಧಿ ೬೮ಕ್ಕಂ ಪದನು ೪೨೯೯ಕ್ಕಂ ಮಂಗಳಮಸ್ತು.

ಅರವತ್ತೊಂಭತ್ತನೆಯ ಸಂಧಿ.

ನರಕಾಸುರನ ಸಂಹಾರ.

ಸೂಚನೆ ॥ ಸುರರುಭಾಪೆನೆಸಂಹರಿಸಿಮುರ । ನರಕನನುಭಗದತ್ತನನುತ । ದ್ಧರಣಿಪತಿಯನುಮಾಡಿಸಂ
ತೈಸಿದನುಮುರವೈರಿ ॥ ... ...

ಪದನು ॥ ಕರುಣಿಸೈಮುನಿನಾಥನರಕಾ । ಸುರನವಧೆಯನುತತ್ಸಮಾಹಿತ । ಧರಣಿಪಾಲಕದಂಬಕನ್ಯಾವರವಿವಾಹವ
ನು ॥ ಪರಮಪುರುಷಚರಿತ್ರವನುವಿ । ಸ್ತರದಲೆನಗೆನಲಧಿಕಹರುಷೋ । ತ್ಕರುಷದಲಿಕರುಣಿಸಿದನಾಮುನಿನಾಥನವನಿಪಗೆ ||೧||
ಅರಸಕೇಳೊಂದುದಿನದಿವಿಜೇ । ಶ್ವರನುಬಂದನುಸಕಲಲೋಕೇ । ಶ್ವರನೆನಿಪಗೋವಿಂದನಂಘ್ರಿಸರೋಜದರುಶನಕೆ ॥ ಕೊರ
ಗಿದಾನನಕಮಲದಲಿನಿಜ । ಪರಿಭವವನೆಲ್ಲವನುಹರಿಪದ । ಸರಸಿಜಕೆತಲೆವಾಗಿಬಿಂನಹಮಾಡಿದನುನಮಿಸಿ ||೨|| ದೇವನರ
ಕಾಸುರನದೆಸೆಯಲಿ । ಜೀವಿಸುವಡರಿದಾಯ್ತುನಿಜಪರಿ । ಸೇವಕರಿಗವಧರಿಸುವುದುತಂನೊಂದುಬಿನ್ನಪವ ॥ ದೇವವಧುಗಳಗಾ
ಯ್ತುತಪ್ಪದ । ಸೇವೆತಾಮೊದಲಾಗಿಸುರರುಪ । ಟೀಜಿಗಳುಲೋಕಾಧಿಪರುಸಹಿತೆಂದನಮರೇಂದ್ರ ||೩|| ಅರಿದುತನಗಾದಾನ
ವೇಂದ್ರನ । ಪುರವನದನೀಕ್ಷಿಸಡೆಶಸ್ತ್ರ । ವರಣೆಗಳುಬಲುದುರ್ಗಮುರಪಾಶಾವಳಿಯದುರ್ಗ ॥ ಉರಿಪವಾವಕದುರ್ಗದುಸ
ರೆ । ಭರಿತಪರಿಘಾದುರ್ಗದೇವರು । ಕರುಣಿಸೂದೆನಗೇನುಬೆಸನಿಂನೆಂದನಮರೇಂದ್ರ ||೪|| ಲಲಿತನಿಜಮಣಿಪರ್ವತವನಾ ।
ಜಲಧಿಯಮಳಚ್ಛತ್ರವನುಪಿಂ । ಗಳನೃಶನನಿಧಿಗಳನುದಿಗಧೀಶ್ವರರಸಂಪದವ ॥ ಹಲವುಮಾತೇನಂಮಜನನಿಯ । ವಿಳಸದನು
ಪಮರತ್ನಮಯಕುಂ । ಡಲಗಳನುಕಿವಿಗಳಲಿರಲುಕೊಂಡೊಯ್ದನವನೆಂದ ||೫|| ಅರ್ಥದಿಂದಭಿಮಾನದಿಂದನಿ । ರರ್ಥರಾಪೆ
ಪ್ರಕೃಷ್ಟಕಾರು । ಣ್ಯಾರ್ಥಿಗಳನಾವೆನುತಮಣಿಮಕುಟಪ್ರದೇಶದಲಿ ॥ ತೀರ್ಥಪಾದಪದಾಬ್ಜಯುಗಳವ । ನರ್ಥಿಸಲುನಸುನ
ಗುತನಿಜಪರ । ಮಾರ್ಥರೂಪನುನಗೆಹಿಕರುಣೇಕ್ಷಣದಲಿಂತೆಂದ ||೬|| ಏಳುಮರುಳೆಮನೋವಿಷಾದವ । ಬೀಳುಕೊಡು
ನಾಸಿರಲುಭಕತರ । ಮೇಲೆಬೀಸುವಘಾಳಿಬರುಸಹುದ್ಯೆನಿದಾನಿಸಲು ॥ ಶೀಲವನುನೀನರಿಯೆಖಳನನು । ನಾಳನಲಿತೋರಿಸುವೆ

ನಂತಕೆ । ನಾಲಯಪಲೆಂದಸುರರಿಪುಕೆಳಿಹಿದನುಸುರಪತಿಯು ॥ ೭ ॥ ಅತ್ತಲಮರಾಧೀಶ್ವರನಕಳು । ಹುತ್ತನೆನೆದನುಮನದೊಳ
ಗವಿಹೆ । ಗೋತ್ರನುನವಾಕ್ಷಣವೆಬಂದನುಗರುಡನಾಳ್ದನ ॥ ಚಿತ್ತವೃತ್ತಿಯನನುಸರಿಸಿನತ । ಪುಸ್ತಕದಲಿರಲೇರಿನಡದನು । ಸತ್ಯ
ಭಾಮಾದೇವಿಸಹಿತಸುರಾಂತಕನಪುರಕೆ ॥ ೮ ॥ ಕಾಡನಾಹಿಮಗಿರಿಯುಬಹಳೋ । ದ್ದಂಡಶಿಖರಾಗ್ರದಲಿಮೆರವಾ । ಖಂಡಲಾರಿ
ಯುಪುರವನಾಪ್ರಾಗ್ಜ್ಯೋತಿಷಾಖ್ಯಯುವ ॥ ಚಂಡಗಿರಿಜಲಪಾವಕಾಸ್ತ್ರ । ಖಂಡಮುರಪಾಶಾವಳೀಕ್ಷುರ । ಮಂಡಿತಪ್ರಾಕಾರವ
ನುರಿಪುಭಟಸುದುರ್ಗನನು ॥ ೯ ॥ ಉರಗನಿಕರಾವೇಷ್ಟಿತದ್ರುಮ । ವರಪ್ರೊಲೋಭಿಯಧನಪ್ರೊನಕ್ರಾಂ । ತರಿತಜಲಪ್ರೋಹೀ
ನವನಿತಾರೂಪವಿಭ್ರಮಪ್ರೋ ॥ ವಿರತಿಯಿಲ್ಲದಮೋಕ್ಷಧರ್ಮ । ಚರಣೆಯೋಕ್ರೋಧಾನ್ವಿತರಶಮ । ದಿರಪ್ರೊಹೇಳೆನಲೆಸದುದಸು
ರನಪುರಮಹಾವಿಭವ ॥ ೧೦ ॥ ಉರವಣಿಸಿಕಾವೋದಕಿಯಲಿ । ಟ್ಟರಸಿಪ್ರಾಕಾರವನುಹೊಕ್ಕನು । ಪುರವನಸುರಾರಾತಿಗಿರಿ
ಮಯಮುದುರ್ಗವನುಕಳೆದು ॥ ಉರುಳಿಸಿದನಸ್ತ್ರೌಘದಲಿದು । ರ್ಧರವಮಹಾಶಸ್ತ್ರಾವಳಿಗಳ । ಬ್ಬರವನಾಗ್ನೇಯಾಸ್ತ್ರದಲಿಸೇದಿದನು
ತಜ್ಜಲವ ॥ ೧೧ ॥ ಚಕ್ರದಲಿಮುರಪಾಶವನುತರಿ । ದಿಕ್ಕಿದನುವಾರುಣದಲಗ್ನಿಯ । ಹೊಕ್ಕಮದುರಿಸಿಪರಿಘದಲಿಕ್ಷುರವಾಲೆಗ
ಳತರಿದು ॥ ಹೊಕ್ಕನಾದಾನವನಕೃತಕವ । ಮಿಕ್ಕನಿಮುಷಾರ್ಧದಲಿಪುರದಲಿ । ಜಕ್ಕುಲಿಸಿವೊಳಗಿದನುಶಂಖೋತ್ತಮವನಡಿಗ
ಡಿಗೆ ॥ ೧೨ ॥ ಸಿಡಿಲುವಡಪಂಗದಲಿಖಳಸೆದೆ । ವಡವಪ್ರೋಲುಬ್ಬರದಶಂಖದ । ಕಡುಕತೋರಧ್ವನಿಯನಾಲಿಸುತ್ರೆದ್ದುವೈಮುರಿ
ದು ॥ ಕಡುಗಿಘುರನೆಂಬವನುಕಲ್ಪದ । ಕಡೆಯರುದ್ರನಪ್ರೋಲುಕಂಗಳು । ಕಿಡಿಗೆದರೆಘನಸಿಂಹನಾದವಮಾಡಿಹೊರವಂಟ ॥ ೧೩ ॥
ಐದುಮುಖದಲಿಗಜರಿಗರ್ಜಿಸಿ । ಕೈದುವನುಬರಸೆಳದುಭುಜವನು । ಹೊಯ್ದುಮಲವವರಾರುತಂನೊಡನಮರದೈತ್ಯರಲಿ ॥ ಕೈ
ದುಕೊಳ್ಳೆಳೆನುತಹರಿಯನು । ಬೈದುಸವಡುದುನಿಂನಹೆಂಡತಿ । ಗೈದೆತನವೆನುತಿಟ್ಟನಾಶೂಲದಲಿಖಗಪತಿಯ ॥ ೧೪ ॥ ಉರಿ
ಯನುಗುಳುತಗರುಡದೇವನ । ಶಿರದಬೆರಗುವಶೂಲವನುಕ । ತ್ತರಿಸಿಕೆಡಹಿದನೆರಡುಬಾಣದಲಸುರರಿಪುನಗುತ ॥ ಕೆರಳಿಮುರನ
ಬ್ಬರಿಸಿಗದೆಯನು । ತಿರುಹಿತೀವ್ರಕ್ರೋಧದಲಿತನು । ಬಿರಿಯಲಿಟ್ಟನುದುಷ್ಟಮರ್ದನನುರವನುರವಣಿಸಿ ॥ ೧೫ ॥ ಎದೆಯಲೆರ
ಗುವವೈರಿಸುಭಟನ । ಗದೆಯಗದೆಯಲಿಹೊಯ್ದುನುಗ್ಗೊ । ತ್ತಿದನುಸಾವಿರಹೋಳೆನಲುಬಿದ್ದುದುಧರಿತ್ರಿಯಲಿ ॥ ತ್ರಿದಶರಿಪು
ಬ್ರಹ್ಮಾಂಡಬಿರಿವೆಂ । ತೊದೆದುಧರೆಯನುಬೊಬ್ಬಿರಿದುಬಹು । ವದನದಲಿಕಲ್ಪಾಂತಭೈರವನಂತೆಖತಿಗೊಂಡ ॥ ೧೬ ॥ ಅಬ್ಬರಿ
ಸಿತೋಳ್ಗಳಲಿನಭವನು । ಗಬ್ಬರಿಸುತ್ತೈತರಲುಚಕ್ರವ । ತುಬ್ಬಿದನುತುದಿವೆರಳಸನ್ನೆಯಲವನತಲೆಗಳಿಗೆ ॥ ಸರ್ಬಲೋಕೇಶ್ವರ
ನುಸಕಲಸು । ಪರ್ಬಜನಘೇಯೆನಲುತಲೆಗಳ । ನೊರ್ಬಿಗಿಳುಹಿದನೊಂದುನಿಮುಷಾರ್ಧಾರ್ಧಮಾತ್ರದಲಿ ॥ ೧೭ ॥ ಲೇಸೆ
ನುತಮಲ್ಲಿಗೆಯಮಳೆಗಳು । ಸೂಸಿದವ್ರುಸುರವರವಿಮಾನದ । ಬೀಸಿಗೆಯಬಲುಮುಗಿಲವೋಹರದಿಂದಭೂತಳಕೆ ॥ ಮೀಸಲಳಿದು
ದುಮುರನಜೀವವಿ । ನಾಶದಲಿದುರ್ಜಯನೆನಿಪನರ । ಕಾಸುರನಸಾಮರ್ಥ್ಯವೆನುತಿರ್ದುದುಸುರಸ್ತೋಮ ॥ ೧೮ ॥ ತಂದೆಯಳಿ
ವನುಕಾಣುತಾಮುರ । ನಂದನರುಧ್ರವಮುಖ್ಯರೇಳ್ವರು । ಬೆಂದಪ್ರೋಲ್ಬಸವಳಿದುಶೋಕೋದ್ರೇಕವಹ್ನಿಯಲಿ ॥ ಸಂದಣಿ
ಸುಬೇರಿದರುರಥವನು । ಕೊಂದವನತೋರೆನುತದೇವಮು । ಕುಂದನನುಮುಸುಕಿದರುಬಹಳಮಹಾಸ್ತ್ರವರುಷದಲಿ ॥ ೧೯ ॥
ಇಟ್ಟಿಮುಸಲಮುಸುಂಡಿಮುದ್ಗರ । ಪಟ್ಟಸಂಗಳಮಳೆಗರವ್ರುತಗಿ । ದಿಟ್ಟಣಿಸಿಕವಿತಹದುರಾತ್ಮಕರನುರಣಾಗ್ರದಲಿ ॥ ತೊಟ್ಟಸು
ತಸರಳುಗಳತೊಡಲೊಳ । ಗಿಟ್ಟುಬಳ್ಳಕಂತಕನಕ್ಕೈಲೆಡೆ । ಗೊಟ್ಟನವರನುಘನಮಹಿಮನೊಂದೇಮುಹೂರ್ತದಲಿ ॥ ೨೦ ॥
ಸಾಯೆನುತಹರಿಬೈದಿದೂತನಿ । ಕಾಯವಾಮುರವಧೆಯಲಾತರು । ವಾಯಲಾತತ್ಪುತ್ರವಧೆಯವಿಚಿತ್ರಸಂಗತಿಯ ॥ ಜೀಯೆಮತ
ವಿಂನೈಸೆದೈತ್ಯರ । ರಾಯನೆದ್ದನುಬಿಗಿದರೋಷದ । ಬೀಯಿಗವನೊಡೆಮುರಿದುಕಂಗಳರೌದ್ರಕೋಪದಲಿ ॥ ೨೧ ॥ ಹೊಂಕ
ಸುತಡಿಗಡಿಗೆರೋಷಭ । ಯಂಕರಾನನನೆದ್ದಯಡಬಲ । ದಂಕದವರನುನೋಡಿಬಹಳಾಟೋಪದಲಿಜಡಿದು ॥ ಝಂಕೆಮಿಗಲೇ
ದನುಮದನಿ । ಶೃಂಕೆಗಜವನುಬದ್ಧಕವಚಾ । ಲಂಕೃತದಲಮರರಿಗೆರಿಪುಹೊರವಂಟನಾಹವಕೆ ॥ ೨೨ ॥ ಎಡಬಲದಲ್ಲೈದಿದರುರ
ಕರ । ಗಡಣತುರಗಾರೋಹಕರುಮಂ । ಗಡದಕಲಿಮಾವೆಂತರೇರಿದರಭ್ರಮಂಡಲವ ॥ ತುಡುಕುವಿಭಘಟೆಗಳನುಹಿಮಗಿರಿ ।
ಸಿಡಿದುಸೂಸುವಪ್ರೋಲುಕಾಲಾ । ಳಡಿಸಿನಡದುದುಕೊಡೆನರಕಾಸುರನಪಾರ್ಶ್ವದಲಿ ॥ ೨೩ ॥ ನುಂಗುವಂತಿರೆಗಗನವನುಮಾ ।
ಂಗಮಲ್ಲನನೇರಿದಾನವ । ಪುಂಗವನುಬರುತಾಗರುತ್ಮನಮೂಲಪಕ್ಷದಲಿ ॥ ರಂಗನಾಥನನೆಸೆವಶಂಖರ । ಥಾಂಗಗದೆಶಾರ್ಙ
ಳೆಸವಭು । ಜಂಗಳಲಿನಂಡಕಸಮನ್ವಿತವಾಗಿರಲುಕಂಡ ॥ ೨೪ ॥ ತೊಟ್ಟಮುಕ್ತಾಹಾರಕೌಸ್ತುಭ । ವಿಟ್ಟಮಣಿಕುಂಡ
ದಮಕುಟನಿ । ವಿಷ್ಟರಶ್ನಿಪ್ರಕರಕಂಕಣವರಚತುರ್ಭುಜದ ॥ ಉಟ್ಟಪೀತಾಂಬರದಮೇಲೆ । ವಟ್ಟಮಣಿಮೇಖಲೆಯದನು
ಘ । ರಟ್ಟನೊಪ್ಪುವದಿವ್ಯಮೂರ್ತಿಯಕಂಡನಸುರೇಂದ್ರ ॥ ೨೫ ॥ ಬಾಲಸೂರ್ಯಸಹಸ್ರದೀಪ್ತಿಯ । ಮೇಲೆಸೆವಮಕುಟಪ್ರ
ಾನ್ವಿತ । ನೀಲಮೇಘದಗರುಡದೇವನಮೇಲೆರಾಜಿಸುವ ॥ ಲೋಲಲೋಚನೆವೆರಸಿದಾಶ್ರೀ । ಲೋಲನೊಪ್ಪಿರಲೆಸೆವಮಾ

ತಿರ್ಗಿ | ಶೂಲಶೋಭಾಭರಿತವಿಭವವಕಂಡನಸುರೇಂದ್ರ || ೨೬ || ಅತ್ತಲಸುರಾರಾತಿಬಹದೈ | ತ್ಯೋತ್ತಮನಕಾಣುತ್ತನಿಟಿ
ಶಂ | ಖೋತ್ತಮವನೊಳಗಿಸಿದನುಂನತಸಿಂಹನಾದದಲಿ || ಹತ್ತುದೆಸೆಗಳುಮಾರ್ಮೊಳಗಲು | ದೈತ್ಯದನುಜೇಶ್ವರನಪಡೆಗಪ |
ಮೃತ್ಯುವಾಯ್ತೆನೆಭೀತಿಯನುಬೀರಿದನುಪರಬಲಕೆ || ೨೭ || ಕೇಳುತವೆಖಳನದನುಕಿಡಿಗಳ | ನಾಲಿಗಳಲುಗುಳುತ್ತಲಕ್ಷ್ಮೀ |
ಲೋಲನನುಕೊಳ್ಳೆನುತತಿರುಹಿಟ್ಟನುಶಕ್ತಿಯಲಿ || ಬೀಳಲಿಟ್ಟನುಬೊಬ್ಬಿರಿದುಪಡೆ | ಮೇಲೆಕವಿದೆಸಲೊಂದುನಿಮಿಷಕೆ | ಕಾ
ಳಗದಕ್ಕೈಮಾಟಕಂಗೆಡಿಸಿತುಜಗತ್ರಯವ || ೨೮ || ಅದ್ದನಸುರಾರಾತಿಬಾಣಸ | ಮುದ್ರದಲಿನಿಮಿಷಾರ್ಧಮಾತ್ರದ | ಲೆದ್ದನಾ
ವಾರ್ನಲನವೋಲೇನೆಂಬೆನದುಭುತವ || ಮುದ್ರಿಸಿದನನಿಬರಶರೌಘವ | ನದ್ರಿಧರನಸುವಿಸಲಿಭಟನನು | ಮುದ್ರಿಸಿದನಿಭತುರಗ
ರಥಪತ್ತಿಗಳುಕಡಿವಡೆಯೆ || ೨೯ || ಓರ್ಬನೊಂದೇಚಾಪದಲಿರಿಪು | ವರ್ಗಭೇದನನೆನಿಸುತಿರ್ದನು | ಸರ್ಬರನುಸಮರದಲಿಕವಿ
ವಸುರಾರಿಯೂಥವರ || ಪರ್ಬತಂಗಳಪಕ್ಷವಮುಶತ | ಪರ್ಬದಲಿಕಡಿದೊಟ್ಟವಾಶತ | ಪರ್ಬಧರನಂದದಲಿಚಿತ್ರವದಾಯ್ತುಮೂ
ಜಗಕೆ || ೩೦ || ಹಿಂಗಿದವುಗಜಘಟೆಗಳಸುಗಳು | ಭಂಗವಡೆದವುತೇರ್ಗಳಳುವಿಂ | ಗಂಗವಿಸಿದವುತುರಗತತಿಕಾಲಾಳುಕಡಿವ
ಡೆದು || ಸಂಗವಡೆದವುಧರೆಯುಳಹಿತರ | ಮುಂಗುಡಿಯುಮೋಹರವಮುರಿದುಚತು | ರಂಗಬಲಬಯಲಾಯ್ತುಬಲಬಲಿಮಥನನಾ
ಹವಕೆ || ೩೧ || ಇರಿದಿರಿದುತುಂಡದಲಿನಖದಲಿ | ಜರಿದುಪಕ್ಷಗಳಲಿಪಕ್ಷಿಗ | ಳೆರೆಯನರದನುಬಹಳಗಜಘಟೆಗಳನುತುರಗ
ವನು || ಮರಗಿಸಿದನರುಣಾಂಬುಗಳಹೆ | ದ್ದೊರೆಯಲದ್ದಿದನಂಭ್ರಚಾರಿಗ | ಳುರುವಬಲವನುಬೀದಿವರಿವರಿದಾಹವಾಗ್ರದಲಿ ||
ತುಂಗವಿಕ್ರಮಖಗಪತಿಯುಪ | ಕ್ಷಂಗಳಲಿನಖಮುಖಗಳಲಿಚತು | ರಂಗಬಲಕಡಿವಡದುಮೇಲೆಮುಕುಂದನಸ್ತ್ರದಲಿ || ಕಂಗೆ
ಡುತ್ತಿರೆಕಂಡುದಾನವ | ಪುಂಗವನುನಿಲಿಸುವೆನುಗರುಡನ | ಸಂಗರವನೆನುತಿಟ್ಟನುರುತರತೀವ್ರಶಕ್ತಿಯಲಿ || ೩೩ || ಮೇರು
ಗಿರಿಯನುವಜ್ರದಲಿಬಲ | ವೈರಿಯಿಡುವಂದದಲಿಸುರಕುಲ | ವೈರಿಶಕ್ತಿಯಲಿಡಲುಗರುಡನಮೇಲೆಹೂಮಾಲೆ || ವಾರಣೇಂದ್ರ
ನಮೇಲೆಬಿದ್ದಂ | ತೋರೆಗೆಡದುರುಳುತ್ತುಧರಣಿಗೆ | ಮೇರೆಯನುಮೀರಿತ್ತುವಿಹಗಾಧಿಪನಬಲವಾರ್ಧಿ || ೩೪ || ಮತ್ತೆಕೊಂ
ಡನುಕಾರ್ಮುಕವನು | ದೈತ್ಯನಾದಡೆನೋಡೆನುತಪುರು | ಷೋತ್ತಮನಸೆಚ್ಚನುಮಹಾಶರಜಾಲದಲಿಜಡಿದು || ಹೊತ್ತುಹೋ
ಗದಸಮರವೇತಕೆ | ನುತ್ತಬಹಶರಜಾಲವನುಕಡಿ | ದತ್ತಲೇಬೀಸಾಡಿದನುನಸುನಗುತಮುರವೈರಿ || ೩೫ || ನೆಗುವೆನೀನೆಂ
ಮುವನುಹರಹರ | ನಗುವಡಜಹರಮುಖ್ಯರಂಜುವ | ರುಗುಳಿಸುವೆನುಬ್ಬಾಳುತನವನೆನುತ್ತಕಡುಮುಳಿದು || ತೆಗೆದನರ್ಧೇಂ
ದ್ವಾಕೃತಿಯಹೊಗ | ರೊಗುವಬಾಣವನದನುತೊಡಲಾ | ಜಗದುಪತಿಕಡಿಗಳದನಸುರನಕೈಯ್ಯಕಾರ್ಮುಕವ || ೩೬ || ಅಧಟ
ನಬ್ಬರಿಸುತ್ತಕೊಂಡನು | ಗದೆಯಸುರಗಿರಿಶೃಂಗದಂತಿರ | ಲುದುರಿಸಿದನದನೊಂದುಬಾಣದಲಸುರರಿಪುನಗುತ || ಬದುಕಿದೈಹೋ
ಗೆನುತಮತ್ತಾ | ತ್ರಿದಶರಿಪುಪರಶುವಿನಲಿಡಲ | ಭ್ರದಲಿಮತ್ತದಭಾಗವನುಮಾಡಿಯೆವಿಭಾಡಿಸಿದ || ೩೭ || ಮೂದಲಿಸಿಖಳನಿ
ಟ್ಟನಿಪ್ಪ | ತ್ತೈದುತೋಮರಗಳಲಿಜೀವವ | ಕಾಯ್ದುಕೊಳ್ಳೆನುತಗಧರನಘನಸಿಂಹನಾದದಲಿ || ಮಾದಗುಟ್ಟಲದೇಕೆನುತಕಮ |
ಲೋದರನುಬಹತೋಮರಂಗಳ | ಹಾದಿಯನುಹತ್ತಿಸಿದನೊಂದೇಬಾಣದಲಿಕಡಿದು || ೩೮ || ಅಕ್ಕಟೀಗೋಪನಲಿನಿಜಬಲ |
ವಿಕ್ರಮಕೆಹಾನಿಯೆಯೆನುತಕೈ | ಯಿಕ್ಕಿದನುಕೃಷ್ಣನನುಕೊಲಲುಮಹಾತ್ರಿಶೂಲದಲಿ || ನಕ್ಕನಸುರಾರಾತಿನಿನಗಿದೆ | ತಕ್ಕುದೆಲ
ವೋಯೆನುತತಲೆಯನು | ಚಕ್ರದಲಿತಡೆಗಡಿದನಭ್ರದಲಮರರಾಯೆನಲು || ೩೯ || ಬಿದ್ದನವನಿಗೆತಾಯಪದದಲಿ | ಬಿದ್ದುಕಳು
ಹಿಸಿಕೊಂಬವೊಲುತಲೆ | ಹೃದ್ಯಮಣಿಕುಂಡಲಮಕುಟಮಣಿಕಿರಣಥಳಥಳಿಸೆ || ಭದ್ರವಾಯ್ತೆನಲಮರರಭ್ರದ | ಲಿರ್ದುವೀಕ್ಷಿ
ಸಿಹರುಷದಿಂದನ | ವದ್ಯನನುಹೊಗಳುತ್ತಕರೆದರುಪುಷ್ಪವೃಷ್ಟಿಗಳ || ೪೦ || ನೃತ್ತಗೀತಸ್ತುತಿಗಳಲಿವಿಬು | ಧೋತ್ತಮರುತ
ಮತಮಗೆಗಂಧ | ರ್ವೋತ್ತಮರುಸುರಸಿದ್ಧವಿದ್ಯಾಧರಮಹೋರಗರು || ಉತ್ತಮಾಂಗನೆಯರುಸಹಿತಪುರು | ಷೋತ್ತಮನನಾ
ನಾಂಕಿತೋರುಚ | ರಿತ್ರವನುಪಾಡುತಭಜಿಸುತ್ತಿರ್ದರೊಲವಿನಲಿ || ೪೧ || ಅಮಹಾಸುರನಿಕರಸಹಿತಾ | ಭೂಮಿಜಾತನವೈಭ
ವದಲ | ಕ್ಷ್ಮೀಮನೋರಮನೀಕ್ಷಿಸುತಲಾಪುರವಜನಸಹಿತ || ಕ್ಷೇಮಧಾಮನುಹೊಕ್ಕನಮರ | ಸ್ತೋಮಕೈವಾರಿಸಲುಪೌರ |
ಪ್ರೇಮದತ್ತಾರ್ಘ್ಯಾದಿಸತ್ಕಾರವನುಕೈಕೊಳುತ || ೪೨ || ಕಂಡನದರೊಳುಕಮಲಗೃಹನು | ದ್ದಂಡಮಣಿಪರ್ವತವನಿದಿರಲಿ | ಕಂ
ಡನಮೃತಸ್ರಾವಿವರುಣಛತ್ರಮಂಡಲವ || ಕೊಂಡುಹೋಗಿದನೆನುತತೆಗದಾ | ಖಂಡಲಂಗಾರಕ್ಷಗಿರಿಯನು | ಚಂಡವಿಮಳ
ಛತ್ರವನುವರುಣಂಗೆನೇಮಿಸಿದ || ೪೩ || ಕಳುಹಿಸುರರನುಹೊಕ್ಕನಸುರರ | ನಿಳಯವನುತ್ರೈಲೋಕ್ಯವೈಭವ | ನಿಳಯವನು
ಬಳಿಕಲ್ಲಿಕಂಡಳುಬಂದುಮುರಹರನ || ಲಲಿತಪದವನುಭೂಲಲನೆತ | ಲ್ಲಳಿಸುವಾನಿಜಪುತ್ರನನುಕಂ | ಡಳಘಮತಿಕೆಡಹಿದಳುಪ
ದದಲಿಕಮಲಲೋಚನನ || ೪೪ || ಸಾಲರತುನದಕುಂಡಲಂಗಳ | ನಾಲಸಿತವರವೈಜಯಂತಿಯ | ಮಾಲೆಯನುತಂದಿತ್ತುಪದದಲಿ
ನಮಿಸಿಕೈಮುಗಿದು || ಪಾಲಿಸೆಂನನುಕೃಷ್ಣಪರಮಕೃ | ಪಾಲಯನೆನಿಜಚರಣದಾಸಿಯು | ನೇಳದಿಟವನುಮಾತಳೆಂಪಳುಚರಣ
ವನುಹಿಡಿದು || ೪೫ || ಹಲವುಪರಿಯಲಿಕೀರ್ತಿಸಿದಳಂ | ದಲಘುಮಹಿಮನಮಹಿಮೆಯನುಭೂ | ಲಲನೆಭಜಿಸುತಬಹಳತರನಿಜ

ಭಾವಭಕುತಿಯಲಿ ॥ ಪುಳಕಭಾವೋದ್ಭಿಂನನಯನೋ | ಚ್ಚಲಿತಜಲಧಾರೆಯಲಿಕೃಷ್ಣನ | ಲಲಿತಪದವನುಸಾರುತಿಂತೆಂದಳುಮನೋಗತವ ॥ ೪೬ ॥ ನೀನೊಲಿದುತನಗಿತ್ತೆಮುಂನೀ | ಸೂನುವನುಮತ್ತಿಂದುಕೊಂದರೆ | ಹಾನಿಯಾವುದುತನಗೆಸುರಸುಜನೈಕರಕ್ಷಕನೆ ॥ ಮಾನನಿಂನದುನಿಂನಭಕ್ತರ | ಹಾನಿನಿಂನದುರಕ್ಷಿಸೀತ | ತ್ಸೂನುವನುಕಾರುಣ್ಯಚಿತ್ತದೊಳೆಂದಳಬುಜಾಕ್ಷಿ ॥೪೭॥ ದೇವಿಸಾಕೇಳಂಜದಿರುನಿಜ | ಭಾವಭಕುತಿಗೆಮೆಚ್ಚಿದೆನುಕೈ | ಗಾವನೇಳೆನುತೆತ್ತಿದನುಭಗದತ್ತನನುಬಿಡದೆ ॥ ಸೇವಕನೆನೀನಂಜಬೇಡೆನು | ತೋವಿಮೈದಡವಿದನುಕೊಟ್ಟನು | ದೇವರಿಪುರಾಜ್ಯವನುಪಟ್ಟವಕಟ್ಟಿಪತಿಕರಿಸಿ ॥ ೪೮ ॥ ಬಳಿಕಭೌಮನಿರುದ್ಧಕನ್ಯಾ | ನಿಳಯವನುದೈತ್ಯಾರಿಹೊಕ್ಕನು | ಬಳಲುವುತ್ಪಲವನಕೆಪೂರ್ಣಶಶಾಂಕನಂದದಲಿ ॥ ಲಲನೆಯರುದೂರದಲಿಕೃಷ್ಣನ | ಚೆಲುವಮೂರ್ತಿಯನೀಕ್ಷಿಸುತ್ತವೆ | ಫಳ್ಳನೆದ್ದರುಕಾಣುತಸುವನುತನುಗಳಂದದಲಿ ॥ ೪೯ ॥ ಪರಮಮಂಗಳಮೂರ್ತಿಯನುಪಮ | ಕರುಹಮುಖಿಯರುನೋಡಿಮನದಲಿ | ಮರುಳುಗೊಂಡರುಮನುಮಥನಮಸೆದಲಗಿನುಪಟಳಕೆ ॥ ವರಿಸಿದರುತವತವಗೆಲಕ್ಷ್ಮೀ | ವರನೆವರನೆಂದೆವಗೆತವಗೆಮ | ತುರುತರಪ್ರೇಮಾನುಬಂಧದಪಾರವಶ್ಯದಲಿ ॥ ೫೦ ॥ ಮುಂದೆಚಿತ್ರದವೋಲುಸತಿಯರು | ಸಂದಣಿಸಿಕಂಗಳಲಿನೆರೆಕುಡಿ | ವಂದದಲಿಕಮನೀಯಮೂರ್ತಿಯಮಾಣದೀಕ್ಷಿಸುತ ॥ ನಿಂದಿರಲುಕಮಲಾಕ್ಷಿಯರಮನ | ದಂದವನುಕಾಣುತ್ತಕಳುಹಿದ | ನಂದಣಂಗಳೊಳನಿಬರನುನಿಜಪುರಕೆವಹಿಲದಲಿ ॥ ೫೧ ॥ ನೀರೆಯರತನುರಕ್ಷೆಗೋಲೆಯ | ಕಾರರನುಕಳುಹಿದನುಧನವನು | ಹೇರಿಸಿದರೆತ್ತುಗಳಲೋರಂತಃಪುರಾಂತರದ ॥ ಸಾರಿಸಿದನೊಲಿದಭಯಹಸ್ತವ | ತೋರಿದನುಪರಿಜನಕೆಹರುಷವ | ಬೀರಿದನುನಿತ್ಯಾತ್ಮಕೃಷ್ಣನಶೇಷಸುರಕುಲಕೆ ॥ ॥ ೫೨ ॥

ಅಂತು ಸಂಧಿ ೬೯ಕ್ಕಂ ಪದನು ೩೩೮೨ಕ್ಕಂ ಮಂಗಳಮಸ್ತು.

ಎಪ್ಪತ್ತನೆಯ ಸಂಧಿ.

ಸ್ವಾಮಿ ಸ್ವರ್ಗಕ್ಕೆ ಹೋಗಿಬಂದ ಕಥೆ–ಪಾರಿಜಾತ ವರ್ಣನೆ.

ಸೂಚನೆ ॥ ಕುಂಡಲವನಿಜಜನನಿಗಿತ್ತಾ | ಖಂಡಲನಪುರಲಕ್ಷ್ಮಿಯನುನೆರೆ | ಕಂಡುಕಳುಹಿಸಿಕೊಂಡ
ನಸುರಾರಾತಿನಿಜಪುರಕೆ ॥ ... ...

ಪದನು ॥ ಅರಸಕೇಳಸುರಾರಿದೈತ್ಯನ | ನೊರಸಿಕನ್ಯಾರತ್ನಗಳನಿಜ | ಪುರಕೆಕಳುಹಿಸುರಾರಿಪುರವರದಿಂದಹೊರವಂಟು ॥ ಗರುಡವಾಹನನಾಗಿಗಗನೇ | ಚರರಪಥದಲಿಸತ್ಯಭಾಮಾ | ಸರಸಿಜಾನನೆಸಹಿತನಡದನುಬಳಿಕಸುರಪುರಕೆ ॥೧॥ ನಿಂದುಪೂರ್ವದ್ವಾರದಲಿಗೋ | ವಿಂದನಾಸುರಲೋಕಪಾಲರ | ವೃಂದಕೇಳಲುಮೊಳಗಿಸಿದನುರುಪಾಂಚಜನ್ಯವನು ॥ ಬಂದನೈದಾತಾರನೆನುತಾ | ನಂದದಲಿಸುರನಾಥನೆದ್ದನು | ದುಂದುಭಿಯುಕಹಳೆಗಳಕೋಳಾಹಳದರಭಸದಲಿ ॥೨॥ ನಾರಿಯರಕರಲಲಿತದರ್ಪಣ | ಚಾರುಕಲಶಂಗಳಲಿನಿಜಪರಿ | ವಾರಸಹಿತುತ್ಸವದಲಂದಮರೇಂದ್ರನೈತರಲು ॥ ಮೇರುಶಿಖರವಮುಗಿಲುಮಿಂಚುಗ | ಳೋರಣದಲಿಳಿವಂತೆದಾನವ | ವೈರಿಸತಿಸಹಿತಿಳಿದನಾನಾಗಾರಿವಾಹನವ ॥೩॥ ಮುಂದೆಮಾತಲಿದಿವ್ಯರಥವನು | ತಂದುಚಾಚಲುಕೈವಿಡಿದುಗೋ | ವಿಂದನೇರಿದನಬುಜಮುಖಿಸಹಿತಾಮಹಾರಥವ ॥ ಸಂದಣಿಸಿಬಲವಂಕೆದಲ್ಲಿಪು | ರಂದರಾದ್ಯರುವಾಮಭಾಗದ | ಲಂದುವರುಣಕುಬೇರಮುಖ್ಯಾಮರರುನಡೆತರಲು ॥೪॥ ಭೂತಳದಭಾರವನುಕಳೆಯಲು | ಜಾತನಾದನುಗಂಡದಿಟಸಾ | ಕ್ಷಾತಲಕ್ಷ್ಮೀಕಾಂತನೇಕೃಷ್ಣಾಭಿಧಾನದಲಿ ॥ ಮಾತುಬೇಡಿಂನೆನುತಹರ್ಮ್ಯ | ವ್ರಾತವನುಹತ್ತಿದರುಹರುಷರ | ಸಾತಿರೇಕದಲಬಲೆಯರುಹರಿಗಾಂಬತವಕದಲಿ ॥೫॥ ಸತ್ತಿಗೆಯಚಾಮರದನೆಳಲೊಳ | ಗುತ್ತಮೋತ್ತಮನಖಿಳವಿಬುಧರ | ಮೊತ್ತದಲಿಬರೆಸತ್ಯಭಾಮಾದೇವಿಯರುಸಹಿತ ॥ ಮತ್ತಕಾಶಿನಿಯರುಮುಕುಂದನ | ಮೂರ್ತಿಯನುನೋಡುತ್ತಹರುಷರ | ಸೋತ್ತರದಪುಳಕದಲಿಮುಳುಗಾಡಿದರುತವತವಗೆ ॥೬॥ ಉದಧಿಯನುತೆರೆಬೆರಸಿಮರಳದ | ನದಿಗಳಂತಿರಲಾಮುಕುಂದನ | ವದನಕಮಲವನೀಕ್ಷಿಸುತರೂಪಾಂತರಂಗಳಿಗೆ ॥ ಪದವನಿಡದಕ್ಷಿಗಳುಪಂಕಜ | ವದನೆಯರತನುಡಿಂಬದಂತೊ | ಪ್ಪಿದವುಮಲಗಿಗವಾಕ್ಷನಿಕರಂಗಳನುಪಸವಳಿದು ॥೭॥ ನೋಡಿನೋಡಿಮುಕುಂದನನುಮಿಗೆ | ಬಾಡಿಬಳಲಿಸಲಿಸಿದವುಕಂಗಳು | ಕೂಡೆಮನುಮಥನಿಕ್ಕಿದಡಿಗಿಚ್ಚಿನಲಿತನುಬೆಂದು ॥ ನೋಡಲನಿಮಿಷತೆಯನುವಿಧಿಸೆರೆ | ಮಾಡಿದುದಕಿಂದಿನಲಿಫಲಕೈ | ಗೂಡಿತೆನುತಿರ್ದುದುತದೀಕ್ಷಣಸುಖದಲಬಲೆಯರು ॥೮॥ ಹೊಕ್ಕನಸುರಾರಾತಿಸುರವರ | ರಿಕ್ಕಿರಿಸಲಮರೇಂದ್ರಭವನವ | ನಕ್ಕಜದಲಮರಾಧಿಪತಿಪರಮೋತ್ಸವಂಗಳಲಿ ॥ ಇಕ್ಕಿಕಾಣಿಕೆಯನುಪದಾಬ್ಜದೊ | ಳಕ್ಕನೊಡಲನುನರಕನೆಂಬನ | ನಿಕ್ಕಿದೈತ್ಯಶಳಿಗಾದೆತಂನನೆನುತಶಚಿಸಹಿತ ॥೯॥ ದಿವ್ಯರತ್ನಾಭರಣನಿಕರವ | ದಿವ್ಯವನಮಾಲಾಂಬರಂಗಳ | ದಿವ್ಯಗಂಧವರಾನುಲೇಪನಗಳನುತನಗುಳ್ಳ ॥ ದಿವ್ಯಭೋಗಂಗಳನುಕೊಟ್ಟನು | ದಿವ್ಯಮಂಗಳಪುಣ್ಯಮೂರ್ತಿಗೆ | ದಿವ್ಯಚಿತ್ತಕೃತಾನುರಾಗದಲಂದುಸುರನಾಥ ॥೧೦॥

ಬಳಿಕಹೊಕ್ಕನುಕೃಷ್ಣನದಿತಿಯು । ನಿಳಯವನುಸತಿಸಹಿತಮಣಿಕೆಂ । ಡಲಗಳನುಕೊಟ್ಟರದೆಸಂಭಾವಿಸಲುಮನವೊಲಿದು ॥
ನಳಿನನಾಭನಬರವನಾವರ । ಲಲನೆಕಾಣುತದೂರದಿಂದೆ । ದ್ದಳುಮಹಾಸನದಿಂದಮಗನನುಕಾಂಬತವಕದಲಿ ॥೧೧॥ ವಂದಿ
ಸಿದನಖಿಳಾನತಾಂಘ್ರಿ । ದ್ವಂದ್ವನಾಸುರಜನನಿಯಂಘ್ರಿ । ದ್ವಂದ್ವದಲಿತಲೆವಾಗಿಸಪ್ರೇಮಾರ್ದ್ರನಯನದಲಿ ॥ ಇಂದುಮುಖಿ
ತೆಗೆದಪ್ಪಿದಳುಗೋ । ವಿಂದನನುಹರಸುತ್ತಪರನಾ । ನಂದರಸಪುಳಕದಲಿಮೂರ್ಧ್ನ್ಯಾಘ್ರಾಣವನುಮಾಡಿ ॥೧೨॥ ಎಲೆಬಾ
ಪ್ರೌಢವಡೆವುದಕ್ತೆಯು । ರಘುಪಚರಣಕ್ಕೆನುತಕರುಣಾ । ಜಲಧಿಬೆಸಸಲುಸತ್ಯಭಾಮಾದೇವಿಹರುಷದಲಿ ॥ ಲಲಿತಪದಕವ
ಲಗಲಿಮಣಿಕೆಂ । ದಲಗಳನುಕಂದಿರಿಸಿಪದಯುಗ । ಜಲಜದಲಿತಲೆವಾಗಿಪೊಡವಂಟಳುಸರಾಗದಲಿ ॥೧೩॥ ತಾಯೆಬಾರೆಂ
ನಾತ್ಮಬಂಧು । ಪ್ರಿಯನರಪಿಯೆಸದಮಳಾಭಿ । ಪ್ರಾಯೆಬಾಭುವನಾಧಿಪತಿಯರ್ಧಾಂಗಿಬಾಯೆನುತ ॥ ಮಾಯೆಬಿಗಿಲಪ್ಪಿದಳುಕ
ನಲದ । ಛಾಯತಾರ್ಕ್ಷ್ಯೆಯನೊಲಿದುಕಾಶ್ಯಪ । ಜಾಯೆಕೈಗಳುಗಣಿಯಲಧಿಕಮನೋನುರಾಗದಲಿ ॥೧೪॥ ಬಳಿಕಮಣಿಕುಂಡಲ
ಗಳನುಕಿವಿ । ಗಳಲಿತೊಡಿಸಲುಸತ್ಯಭಾಮೆಯು । ನೊಲಿದುಹರಸುತ್ತಿದಳನುರಾಗಾಶ್ರುನಯನದಲಿ ॥ ಪಲಿತಜರೆವೈರೂಪ್ಯರುಜೆ
ಕುಂ । ದಲಸುಲಂಘನೆಯೆಂಬಿವಿಪ್ಪೊಂದೂ । ಲಲನೆಸಂಭವಿಸದಿರಲಿನಿನಗಿತ್ತವರದಿಂದ ॥೧೫॥ ಹೂಗಳನುಮುಡಿಸಿದಳುನೀರಸ
ವಾಗದಿರಲಿವುನಿನಗೆನುತತನು ಭೋಗವನುಮಾಡಿಸಿದಳನುಲೇಪನವಿಧಾನದಲಿ ॥ ಆಗಲಿದನಿದಕೆಂದುವೃತ್ತವು । ರಾಗದಲಿದಿವ್ಯಾಂ
ಬರವನಾ । ಭೋಗಿಶಯನನವನಿತೆಗಿತ್ತಳುಮಾಸದಿರಲೆಂದು ॥೧೬॥ ಇಂತುಸಂಭಾವಿಸಲುಲಕ್ಷ್ಮೀ । ಕಾಂತನಾಸುರಜನನಿಯ
ನುಸರೆ । ಸಂತವಿಸಿಬೀಳ್ಕೊಂಡಲುಬಳಿಕಮರೇಂದ್ರಮುಖ್ಯರನು ॥ ಅಂತಕಾಂತಕನೇರಿನಾಗಕು । ಲಾಂತಕನನಾಸತ್ಯಭಾಮಾ ।
ಕಾಂತೆಸಹಿತಮರಾವತಿಯಪುರದಿಂದಹೊರವಂಟ ॥೧೭॥ ಬರುತಕಂಡರುಸತ್ಯಭಾಮಾ । ಹರಿಗಳಾಸುರಲೋಕಲಕ್ಷ್ಮಿಗೆ । ಪರ
ಮಭವನವೆನಿಪ್ಪವನವನುನಂದನಾಹ್ವಯವ ॥ ಭರಿತಪುಷ್ಪಾಮೋದಗುಣಬಂ । ಧುರಿತಪವನೋದ್ಧತಭೃಂಗ । ಸ್ಫುರಿತಬಹಳ
ದಿಗಂತವೆನುಸಂತತಸುರದ್ರುಮವ ॥೧೮॥ ದೇವವನವನುಸತ್ಯಭಾಮಾ । ದೇವಿಕಾಣುತಮರಗಳಾರಾ । ಜೀವನಾಭನಕೈವಿಡಿ
ದುಮೊಗನೋಡಿನಸುನಗುತ ॥ ಈವನದಹೆಸರೇನುಕರುಣಿಸು । ದೇವಬಿಂನಹನೋಳ್ಪವಿದರವು । ಹಾವಿಭವಕೆಂಗೊಳಿಸುತಿದೆಯಂ
ದಳುಸರೋಜಮುಖಿ ॥೧೯॥ ಎರಡುಘಳಿಗೆವಿಳಂಬವಾಗಲಿ । ಸುರವನಕ್ರೀಡೆಯಲಿದೇವರು । ಕರುಣಿಸುವುದೆನಲಿಳಿದನಾಗರು
ಡನನುಗುಣವನಧಿ ॥ ಸರಸಿಜಾಸನೆಸಹಿತಕಾಹಿನ । ಚರರನಂಬಿಸಿಕೈವಿಡಿದುಸುರ । ತರುಗಳನುನೋಡುತ್ತಹೊಕ್ಕನುಸುರಪತಿ
ಯವನವ ॥೨೦॥ ತೋರಿದನುತದ್ವನದಸಿರಿಯನು । ನೀರೆಗಾತರುಗುಲ್ಮಲತೆಗಳ । ತಾರುಘಟ್ಟನೆಲೆಸವಶುಕಪಿಕನಾದನಿರ್ಭರ
ರವ ॥ ವಿಗಾರುವಳಿಕುಲಗೀತಮನವನು । ಮಾರುಗೊಳಲಾಲೋಲಪಲ್ಲವ । ದೋರುಗುಡಿಸುವಫಲಭರದಶಾಖೆಗಳಶೋಭೆ
ಯಲಿ ॥೨೧॥ ಸುಳಿಸುಳಿದುಸುಮನೋರಜಂಗಳು । ನಿಲುಕಿಗಗನಾಂಗಣಕೆಪರಿವಂ । ಚಲಿಸಿಪವನಾವೇಶದಲಿಭೃಂಗಾನುಗ
ತವಾಗಿ ॥ ತೊಳಲುತಿರೆಕೋರಂತೆದೆಸೆದೆಸೆ । ಗಳಲಿತದ್ವನಲಕ್ಷ್ಮಿಯನುನಿಜ । ಲಲನೆನೋಡೆಂದೆನುತನದನುಕೂಡೆಕೈವಿ
ಡಿದು ॥೨೨॥ ಕಂಡಳಂಗನೆಮುಂದೆಮವಾ । ಖಂಡಲನಸರ್ವಸ್ವವೆನಿಪು । ದ್ದಂಡಕಲ್ಪದ್ರುಮವನೊಪ್ಪವಪಾರಿಜಾತವನು ॥
ಕಂಡುಕರದಳುಕೃಷ್ಣನನುಕೈ । ಕೊಂಡುಮನದಲಿಕಳವಳಿಸಿಬೆಸ । ಗೊಂಡಳೀಮರನಾವುದದುಭುತವಿತ್ತನೋಡೆಂದು ।೨೩।
ಅವುದೀತರುವಿದರಫಲದುಪ । ಜೀವಿಗಳುಮೂಲೋಕದಲಿಮೇ । ಣಾವಧನ್ಯರೊಭಾಗ್ಯವಂತರೊಶಿವಮಹಾದೇವ ॥ ದೇವಕ
ರುಣಿಸುತಂನಕಂಗಳಿ । ಗವಜನ್ಮಾಂತರದಸುಕೃತಫ । ಲಾವಳಿಯೊನೆರೆಫಲಿತವಾಯ್ತೆಂದಳುಸರೋಜಮುಖಿ ॥೨೪॥ ಎಲೆ
ಗಳಿವೆಹಸನೀಲಮಯವಾ । ಗಲಘುಕನಕಪ್ರಚಯಮಯಬೇ । ರ್ಗಳುಮೊದಲುವಿಲಸತ್ಪ್ರವಾಳಪ್ರವರರತ್ನಮಯ ॥ ಫಲನಿಕರ
ನೇಸ್ಥೂಲಮುಕ್ತಾ । ವಳಿಯವಯಕಿಂಜಲ್ಕವಜ್ರೋ । ತ್ಪಲಮಯವಿದೆಲೆದೇವನೋಡೆಂದಳುಸರೋಜಮುಖಿ ॥೨೫॥ ಸ್ಥ
ಗಿತವರವೈಡೂರ್ಯಮಯವೇ । ದಿಗಳುಮರಕತರತ್ನಮಯಶಾ । ಖೆಗಳುಮೃದುಮಾಣಿಕ್ಯಮಣಿಪುಷ್ಪಗಳುರಂಜಿಸುವ ॥ ಅಗಧ
ರನಮರನೆಂನಕಂಗಳ । ತಗವುತಿದೆನೋಡಿತ್ತಲಿದೆಸೋ । ಜಿಗದಮರನಿದೆದೇವಹೆಸರೇನೆಂದಳಬುಜಾಕ್ಷಿ ॥೨೬॥ ಎಂದಡೆಲೆಕ
ಮಲಾಕ್ಷಿಸುರತರು । ವೃಂದದಲಿಮಿಗಿಲಮರದಾನವ । ವೃಂದಮಥಿತಮಹಾಬ್ಧಿಜಾತವುಪಾರಿಜಾತವಿದು ॥ ಇಂದ್ರನಿದಕಾಳಿದನು
ನವಮಣಿ । ವೃಂದಮಯವಿದನೋಡಿದರೆಬಾ । ಮುಂದೆವರಲಕ್ಷ್ಮಿಯನುನೋಡುವೆನೆಂದನಸುರಾರಿ ॥೨೭॥ ದೇವತರುಗಳಿ
ಗೆಲ್ಲಮಿಗಿಲಗ । ಡೀವನದ್ರುಮವಿಂದುತನಗಿಂ । ನಾವುದನುದಿಟಕಾಣಬೇಕೆಲೆದೇವವನಸಿರಿಯ ॥ ಜೀವಹಿದರಲಿಕಂಗಳಿದರಲಿ ।
ಲಾವಣಿಗೆಗೊಂಡಿನೆನಿರೂಪವ । ನೀವುದಿದರಡಿಗೊಳುವರವಿಹುದೆಂದಳಬುಜಾಕ್ಷಿ ॥೨೮॥ ಕಂಡೆಸಾಕಿಂನೇನುನಡೆವರ ।
ಬಂದಲಿಮನಪಥಿಕರಿಗೆಭೂ । ಮಂಡಲದಲೇನುಂಟುಕಾರ್ಯವಿಶೇಷವೆಂದೆನಲು ॥ ಪುಂಡರೀಕಾಕ್ಷನನುಬಿಗೆಹಿಡ । ಮಂಡಿಯ
ನುತ್ತರಿಸುತ್ತಕರಪುಟ । ಪುಂಡರೀಕದಮುಕುಳದಲಿಬಿಂನವಿಸಿದಳುಕರಳೆ ॥೨೯॥ ದೇವಬಹುಮತವಹಡೆಚಿತ್ತನ । ನೀವುದೆಂ
ದಬುಬಿಂನಹಕೆನಿನ । ಗಾವುದರಿದೆಲೆಕಾಂತಕಲ್ಪದ್ರುಮಪತಿಯನಿದನು ॥ ಓವದೊಯ್ಯುವುದುಧರೆಗೆನಿಂನಯ । ಸೇವಕಿಯಲನು

ಲುಕಳಿದವು । ಮೂರುತಿಂಗಳುಮುನಿನೃಪಾಲರ । ತಾರುಥಟ್ಟಿನಜನನಿಕರದುತ್ಸವದಭಾರದಲಿ ॥ ಆರೆರಡುಗುಣಗಳಲಿಮೆರ
ವಾ । ಶ್ರೀರಮಣರಾಮರನುನೋಡುತ । ಸಾರತರಸತ್ಕೀರ್ತಿಗುಣಗಣಗಳನುವರ್ಣಿಸುತ ॥೨೬॥ ಕಳುಹಲಾರದೆರಾಮಕೃ
ಷ್ಣರು । ಕಳವಳಿಸಿದರುಬಂಧುಜನಸಹಿ । ತಲಘುವಿರಹವಿಷಾದಘೋರದತೀವ್ರತಾಪದಲಿ ॥ ಕಳುಹಬೇಕೆಂದೆಂಬಮಾತ । ಕ್ಕು
ಳಿಸಿದುದುನಂದಾದ್ಯರಿಗೆಮಂ । ಗಳಮಹಿಮನಂಘ್ರಿಯನುಬಿಡಲಾರದೆವಿಷಾದದಲಿ ॥೨೭॥ ಬಳಿಕಕೃಷ್ಣಾರ್ಜುನಯುಧಿಷ್ಠಿರ ।
ಹಲಧರಾದ್ಯರುನಂದಮುಖ್ಯರು । ಪುಳಕಜಲಗಲಿತವಕ್ಷರೊಬ್ಬೊಬ್ಬರನುಬಿಗಿಯಪ್ಪಿ ॥ ಅಲಘುಮಣಿಮಯಭೂಷಣಾಂಬರ ।
ಗಳನುತುಂಬಿಸಿಭಂಡಿಗಳನಾ । ಕುಳಿತಹೃದಯರುಕಳುಹಿದರುಗೋಪರನುಗೋಕುಲಕೆ ॥೨೮॥ ಕೊರಳೊಳಪ್ಪಿಮುಕುಂ
ದನನುತನು । ಜರಿದುಜೋಲಿದುಬಸವಳಿದುಬಾ । ಯರಳಿದನುಬೆಂಡೆದ್ದಕಂಗಳಬಿಗಿದಶಿರೆಗಳಲಿ ॥ ಕರಗಿದನುಮನಗುಂದಿಕಂದಿ
ದ । ನುರುತರದಕೃಷ್ಣಾಂಘ್ರಿವಿರಹಾ । ತುರನುಬಿರಿಬಿರಿದಳುತಬಿದ್ದನುಮೂರ್ಛೆಯಲಿನಂದ ॥೨೯॥ ಆರುಗತಿತನಗಿನ್ನುನಿಂ
ನೀ । ಚಾರುಮೂರ್ತಿಯಕಾಣದೆನ್ನಸು । ಸೇರಲರಿವುದೆಕೃಷ್ಣಕರುಣಾನಿಧಿಯೆತನಗೆನುತ ॥ ಶಾರದುಳಿಗರವಂತೆಕಂಬನಿ ।
ಧಾರೆಗಡಲಿಡಲಾಯಶೋದೆರ । ಮಾರರಮಣನಂಗದಲಿಕೆಡಹಿದಳಂಗವನುತರಳೆ ॥೩೦॥ ಥಟ್ಟುಗೆಡದರುಗೋಪಿಯರುಕಂ ।
ಣಿಟ್ಟುಕೃಷ್ಣನಮೇಲೆಮನದೊಳ । ಗಿಟ್ಟಣಿಸಿದುದುತಾಪವಿರಹಕೃಶಾನುವನುನೆನೆದು ॥ ನಟ್ಟಡವಿಯೊಕ್ಕಂತ್ರೆಮಿಗೆಕಂ । ಗೆಟ್ಟು
ಕಳವಳಿಸಿದರುಹರಣವ । ಬಿಟ್ಟರದರೊಳುಕೆಲರುಕೃಷ್ಣಪದಾಬ್ಜವನುಬೆರಸಿ ॥೩೧॥ ಇರಲುನೆಗಹಿದನನಿಬರನುಕಡು । ಗರು
ಣಿತಕೈಸುತ್ತನಂದಾ । ದ್ಯರನುತಾಯಮಸಕಲಗೋಪೀಜನವನೊಲವಿನಲಿ ॥ ಪರಮತತ್ವವಿವೇಕಬುದ್ಧಿಯ । ಕರುಣಿಸಿದ
ನೆಲ್ಲರಿಗೆವಿರಹಾ । ತುರರಮನದಲಿತೋರಿನಿಜವನುತಿಳುಹಿಬೀಳ್ಕೊಟ್ಟ ॥೩೨॥ ಬೀಳುಕೊಂಡರುತನುಗಳಲಿಹಾನ । ಬೀಳು
ಕೊಳ್ಳದುಕೃಷ್ಣಮೂರ್ತಿಯ । ನಾಲಿಗಳುಮುಕ್ಕುಳಿಸಿಮುಳುಗಿದವಶ್ರುಜಲದೊಳಗೆ ॥ ತೋಳಿದುದುತನುವಿನಲಿಕಂಪಭ್ರಡಾಳಿಸಿ
ತುಮ್ಮೆಕಣ್ಬ್ಯಮಾಗೋ । ಪಾಲರಿಗೆಗೋವಿಂದನಂಘ್ರಿಯವಿರಹದುಃಖದಲಿ ॥೩೩॥ ಆರುಬಿಡಬಹುದರಸಕೃಷ್ಣನ । ಚಾರು
ಮೂರ್ತಿಯಕಂಡುಮರ್ತ್ಯರಿಶ । ರೀರಿಗಳುಮುಕ್ತರಿಗೆಮುನಿಗಳಿಗರಿದುಚಿಂತಿಸಲು ॥ ಸ್ಮರಿಸಿದುದಂತವರಮನವೈ । ತ್ಯಾರಿವಿರಹ
ವನಕಟಧೈರ್ಯದ । ಸಾರವೆಂತುಟೊಗಮಿಸಿದರುಗೋವಳರುಗೋಕುಲಕೆ ॥೩೪॥ ಮನವಕೃಷ್ಣನಲಿರಿಸಿಹೋದರು । ಮನೆಗೆ
ಳಗೆಡಿಂಬದಲಿಮೇಣಾ । ಮನದೊಳಗೆತೋರಿದನೊನಿಜಮೂರ್ತಿಯನುಗೋಪರಿಗೆ ॥ ಜನಪಕೇಳಲ್ಲದಡೆಜೀವಿಸು । ವನುವ
ದೆಂತೋಶಿವಶಿವಾತ । ದ್ವನಿತೆಯರುಗೋವಿಂದನಂಘ್ರಿಸರೋಜವಿರಹದಲಿ ॥೩೫॥ ಆಡಿಸಿದವೋಖಿಳಲೋಕವಿ । ದಾ
ಡುವುದುಸಚರಾಚರಂಗಳ । ನಾಡಿಸುವನೊಬ್ಬನುಮುರಾಂತಕನಖಿಳಜೀವರನು ॥ ಕೂಡಿಸುವನಗಲಿಸುವನಿಚ್ಛೆಯ । ಲಾಡು
ವಳುಗಡಮಾಯೆಕೃಷ್ಣನ । ರೋಧಿಸಿದಲೀಲಾವಿನೋದವನರಿವರಾರೆಂದ ॥೩೬॥ ಕಳುಹಿದನುಪಾಂಡವರನಾಮುನಿ । ಕುಲ
ವನಾಭೂಪಾಲವರ್ಗವ । ನೊಲಿದುಬಾಂಧವವರ್ಗವನುಯಾಚಕರವರ್ಗವನು ॥ ಸಲಿಸಿಕಾಮಿತಸಿದ್ಧಿಗಳವರ । ಗಳನುಸಲೆ
ಪಂಗ್ವಂಧವಾಮನ । ಗಳಬಧಿರಪತಿತಾಂತ್ಯಜರವರ್ಗವನುಕರುಣದಲಿ ॥೩೭॥ ಪೊಡವಿಪತಿಕೇಳಂದಿನವರು । ಘ್ನಡಜಂ
ನ್ಮಾಂತರದಸುಕೃತದ । ಕಡೆಯಕಂಡವರಾರುಯಾತ್ರಾವ್ಯಾಜದಲಿನೆರೆದು ॥ ಪಡೆದುಕರ್ಮಕ್ಷಯವನಚ್ಯುತ । ನಡಿಗಳಿಗೆತ
ಲೆವಾಗಿಸಲೆಬೀ । ಳ್ಕೊಡಲುತೆರಳಿದುದಾಶ್ವಚಂಡಾಲಾದಿಜನಸಹಿತ ॥೩೮॥ ಬೀಳುಕೊಟ್ಟವರವರನಾಜನ । ಜಾಲವನು
ಬಾಂಧವರುತಮತಂ । ಮಾಲಯಂಗಳಿಗೈದಲಸುರಾರಾತಿನಲವಿನಲಿ ॥ ಲೀಲೆಮಿಗೆಜಗದಧಿಕದಲಿನಿ । ಸ್ಸಾಳವನುಮೊಳಗಿಸಿದ
ಯಾದವ । ಜಾಲದಲಿನಿಜಪುರಕೆಗಮನವೆನುತ್ತಡಂಗುರವ ॥೩೯॥ ಎತ್ತಿದುದುಯಾದವರಬೀಡಿಕೆ । ಮೊತ್ತದಲಿಹೊಡಿದವುಭಂ
ಡಿಗೆ । ಮತ್ತಗಜಹಯನಿಕರಹಲ್ಲಣಿಸಿದವುರಥನಿಚಯ ॥ ತೆತ್ತಿಸಿದತುರಗದಲಿಸುಳಿದವು । ಸುತ್ತುವಳೆಯದಲಂಘ್ರಿಚಾರಿಗ ।
ಕೊತ್ತರಿಸಿಬಹುವಿಧದಿಮೊಳಗುವವಾದ್ಯರಭಸದಲಿ ॥೪೦॥ ಭೇರಿಗಳಕಹಳೆಗಳಬಿರುದಿನ । ದಾರವಾಠಕಸೂತಮಾಗಧ । ಚಾ
ರಣರವಂದಿಗಳಕಳಕಳವೆಸೆಯೆದೆಸೆದೆಸೆಗೆ ॥ ಸಾರಸುಮನೋವೃಷ್ಟಿನಭದಲಿ । ಭಾರವಿಸಲ್ಕೈತಂದುಹೊಕ್ಕನು । ದಾರಗುಣನಿ
ತ್ಯಾತ್ಮಕೃಷ್ಣನುನಲಿದುನಿಜಪುರವ॥ ... ... ॥೪೧॥

ಅಂತು ಸಂಧಿ ೭೬ಕ್ಕಂ ಪದನು ೩೨೭೬ಕ್ಕೆ ಮಂಗಳಮಸ್ತು.

ಎಪ್ಪತ್ತೇಳನೆಯ ಸಂಧಿ.

ನಾರದರು ಪರೀಕ್ಷೆ ಮಾಡಿದ ಕಥೆ

ಸೂಚನೆ ॥ ತ್ರಿಭುವನಾದ್ಭುತವೆನಿಪಕೃಷ್ಣನ । ವಿಭವವನುನೆರೆಕಂಡುಮುನಿಕೌಂ । ಸ್ತುಭನುನಾರದನೊಲಿದುಕೈವಾರಿಸಿದನಚ್ಯುತನ ... ...

ಪದನು ॥ ಕರುಣಿಸೈಮುನಿನಾಥಕಲಿಮಲ । ಹರವೆನಿಪಕೃಷ್ಣನಸುಮಂಗಳ । ಚರಿತವನುಷೋಡಶಸಹಸ್ರವಧೂಕದಂಬದಲಿ ॥ ನೆರೆದಪಟ್ಟದರಾಣಿಯರಿಗೆ । ಲ್ಲರಿಗೆತುಷ್ಟಿಯನೆಂತುಹರಿಯಾ । ಚರಿಸಿದನುನರವೇಷದಿಂದೆನಲೆಂದನಾಮುನಿಪ ॥೧॥ ಕೇಳುನೃಪಕಮಲಾಯತಾಕ್ಷನ । ಲೀಲೆಯನುನರಲೋಕವಿಧದನು । ಕೂಲಚಾರಿತ್ರವನುಬೆಸಗೊಳಲುಂಟಲೈನಿನಗೆ ॥ ಶ್ರೀಲಲಾಮಪದಾಬ್ಜದಲಿನೃಪ । ಮೌಳಿರತ್ನವೆಕೇಳೆನುತಮುನಿ । ಮೌಳಿಮಂಡಿತಚರಣನಭಿವರ್ಣಿಸಿದನರಸಂಗೆ ॥೨॥ ಒಂದುದಿನನಾರದಮಹಾಮುನಿ । ಬಂದನಾದ್ವಾರಕೆಗೆಕೌತುಕ । ದಿಂದನೋಡಲುಕೃಷ್ಣನುಂನತಮರ್ತ್ಯಲೀಲೆಗಳ ॥ ಕೊಂದುನರಕಾಸುರನನಲ್ಲಿಂ । ದಿಂದುಮುಖಿಯರನೆಲ್ಲರನುಗೋ । ವಿಂದನೊಬ್ಬನೆಮದುವೆಯಾದಾವಾರ್ತೆಯನುಕೇಳಿ ॥೩॥ ಹೂವನದಲಿಮೊರವಭೃಂಗ । ವ್ರಾತದಲಿಶುಕಪಿಕನಿಕರಸಂ । ಗೀತದಲಿನೆರೆಫಲಿತಕಲ್ಪದ್ರುಮಲತಾಳಿಯಲಿ ॥ ಶೀತಳಾಮಳಸಲಿಲವಿಹಗೋ । ದ್ಧೂತಕಮಲಾಕರಗಳಲಿಶೋ । ಭಾತಿಶಯದಲಿಮೆರವಪುರವನುಕಂಡನಾಮುನಿಪ ॥೪॥ ಉಲಿವಸಾರಸಹಂಸನಿಕರಂ । ಗಳಲಿರಚಿತಸ್ಫಟಿಕಹರ್ಮ್ಯಾ । ವಳಿಗಳಲಿಮರಕತಸುವರ್ಣಪರಿಚ್ಛದಂಗಳಲಿ ॥ ಹೊಳೆವತೋರಣಗುಡಿಪತಾಕಾ । ವಳಿಗಳಲಿನಡುಹಗಲಬಿಸಿಲು । ಬ್ಬಿಳಿಸದತಿಶೀತಳವೆನಿಪಪುರಲಕುಮಿಯನುಕಂಡ ॥೫॥ ಸಾಲರತುನದಲೆಸೆವಗಜಹಯ । ಶಾಲೆಗಳಸಭೆಯಾಮಹಾದೇ । ವಾಲಯದಸಂಸ್ಥಿತದಮಾರ್ಗಾಂಗಣದವೀಥಿಗಳ ॥ ಓಗಲಕೆಬಹರಾಯರಾಯರ । ಪೀಳಿಗೆಯಸಂದಣಿಯುಲೆಸೆವಾ । ಶ್ರೀಲಲಾಮನಪುರವನೊಪ್ಪಿರೆಕಂಡನಾಮುನಿಪ ॥೬॥ ಸಾರಿದನುಹದಿನಾರುಸಾವಿರ । ಸಾರರತುನಾವಳಿಯಭವನದ । ಕೇರಿಗಳಮಧ್ಯದಲಿಮೆರೆವಮುಕುಂದನಾಲಯವ ॥ ಭೂರಿತನುಕಾಂತಿಯಲಿಕಂಗಳು । ಕೋರವಿಸಲೀಕ್ಷಿಸುವಪುರಜನ । ಪೌರಜನದವನತಿಗಳನುನೋಡುತ್ತನಡೆತಂದ ॥೭॥ ಹೊಳೆವಹವಳದಕಂಭವಧಿಕೋ । ಜ್ವಲವೆನಿಪವೈಡೂರ್ಯರತ್ನದ । ಹಲಿಗೆಗಳಹರಿನೀಲರತ್ನದಲೆಸೆವಗೋಡೆಗಳ ॥ ತೊಳಪಹೊಂಜಗುಲಿಗಳಮುಕ್ತಾ । ವಳಿಯಮೇಲ್ಕಟ್ಟುಗಳರಚನೆಯ । ಅಲಘುವಿಭವದಲೆಸೆವಭವನವಕಂಡನಾಮುನಿಪ ॥೮॥ ಹೊಂನಕೊಡಕೊಪ್ಪರಿಗೆಗಳಸಂ । ಪಂನವಿಭವಂಗಳಲಿರತುನಸು । ವರ್ಣವೇಷ್ಟಿತದಂತಮಣಿಮಯಮಂಚನಿಕರದಲಿ ॥ ಮನ್ನಣೆಯದಾಸೀಸಹಸ್ರದ । ಹೊಂನಕಡಗದಕಾಲನೂಪುರ । ದುಂನತಾರವಗಳಲಿಮೆರೆವರಮನೆಗಳನುಕಂಡ ॥೯॥ ಸುಳಿವದಿವ್ಯಾಂಬರದಕಂಚುಕ । ಗಳಲಿವಿಮಳೋಷ್ಣೀಷಮಣಿಕುಂ । ಡಲವಿಭೂಷಿತಪುರುಷರಲಿಗೃಹಕರ್ಮನಿಕರದಲಿ ॥ ಹೊಳೆಹೊಳೆವನವರತ್ನದೀಪಾ । ವಳಿಗಳಲಿಭವನಾಂತರದಕ । ತ್ತಲೆಯತಲೆಯೊತ್ತುಗಳಲೊಪ್ಪುವಭವನವನುಕಂಡ ॥೧೦॥ ಮಘಮಘಿಪನವಧೂಪಧೂಮಾ । ಳಿಗಳನೀಕ್ಷಿಸುತಾಗವಾಕ್ಷದಿ । ಮುಗಿಲಿದೆಂದೋರಂತೆನೃತ್ಯವಮಾಳ್ಪನವಿಲುಗಳ ॥ ಸೊಗಯಿಸುವಭವನದಲಿಕುಳ್ಳಿ । ರ್ದಗಧರನಶಿರಿಮಂಚದೊತ್ತಿನ । ಲಗಲದಬಲೆಯರೋಲಗಿಸುತಿರೆಕಂಡನಾಮುನಿಪ ॥೧೧॥ ಒಸದುಕಡೆಗಂಗಳಲಿನೋಡುತ । ನಸುನಗುತಮನುಮಥನಶರದಲಿ । ಬಸವಳಿದುಕೆಳದಿಯರಕೈಯಲಿಮೆರವಚಾಮರದ ॥ ಶಶಿವದನೆತಾಕೊಂಡುರುಕ್ಮಿಣಿ । ರಸಮಿಗಿಲುನಿಜನಾಥನನುಸೇ । ವಿಸುತಿರಲುಶಿರಿಮಂಚದಲಿಕಂಡನುಮುರಾಂತಕನ ॥೧೨॥ ವಿಶ್ವಕರ್ಮನಶಿಲ್ಪವಿದ್ಯಾ । ವಿಶ್ವವಿಭವದಸಾರವೆನಿಸುವ । ವಿಶ್ವತೋಮುಖನರಮನೆಗೆನಡೆತರಲುದೂರದಲಿ ॥ ವಿಶ್ವವಂದ್ಯನಬರವಕಾಣುತ । ವಿಶ್ವಪತಿವಂದಿತನುಮುದದಲಿ । ವಿಶ್ವಜನಸಹಿತಿದಿರುಗೊಂಡನುನಾರದವ್ರತಿಯ ॥೧೩॥ ಇಳಿದುಶಿರಿಮಂಚವನುಮುನಿಪದ । ಜಲರುಹಕೆತಲೆವಾಗಿಕೈಮುಗಿ । ದಲಘುಮತಿಯನುಕುಳ್ಳಿರಿಸಿಪರ್ಯಂಕಮಧ್ಯದಲಿ ॥ ತೊಳೆದುಮುನಿಚರಣಂಗಳನುತ । ಜ್ಜಲವನಾಂತನುಮಕುಟಮಧ್ಯದ । ಲೊಲವದೆಂತುಟೊಭಕುತರಲಿಭೂಪಾಲಕೇಳೆಂದ ॥೧೪॥ ಅತ್ತಲಾವೆನಚರಣಕಮಲವ । ಚಿತ್ತದಲಿಚಿಂತಿಸುವರನುದಿನ । ಕೃತ್ತಿವಾಸವಿರಿಂಚಿಮುಖ್ಯಾಮರರುಮುನಿವರರು ॥ ಇತ್ತಲಾಪರದೈವವೆರಗಿದು । ದುತ್ತಮನಪದಕಾಗಲರ್ಘ್ಯವ । ನಿತ್ತಜಲಜಾಕ್ಷವಿಯಲಾಜನನಾಥಕೇಳೆಂದ ॥೧೫॥ ಎಂದನವನಕ್ತನಾಗು ತಂಪ್ರಿ । ದ್ವಂದ್ವದಲಿಪಾದ್ಯಾರ್ಘ್ಯಸೂಸ್ತ್ರತ । ದಿಂದಮನ್ನಿಸಿಮುನಿಲಲಾಮನನಧಿಕಭಕುತಿಯಲಿ ॥ ಇಂದುಬಿಜಯಂಗೈದಿರಿತ್ತಲು । ಪಂಕ್ತ್ಯಚರಣರುತನ್ನಪುಣ್ಯದ । ಕಂದೆರವೆಕ್ಕೆಸಾರಿತೆಂದನುವಿನಯಪರನಾಗಿ ॥೧೬॥ ಎಂದಪೆಂದನುಮುನಿಪನಚ್ಯುತ । ನಂದನವನುನದೆನೋಡಿಪರಮಾ । ನಂದದಲಿಮನಮುಳುಗಿತನ್ಮಯನಾಗುತೋವಿನಲಿ ॥ ತಂದೆಚಿತ್ರವೆನಿಸ್ಸವಿಶ್ವ । ಭಂಗಭಕ್ತಪ್ರಿಯನವೆಲೆಗೋ । ವಿಂದಭುವನಾಧಾರಮೂರ್ತಿಯಲನುಳಕೀರ್ತಿಯಲಿ ॥೧೭॥ ಕಂಡೆನಲ್ಲೈಕೃಷ್ಣನಿಜಪದ । ಪುಂಡರೀಕವ

ದನುಮುನಿಹೃ | ತ್ಪುಂಡರೀಕಧ್ಯಾನಮಂಗಳವೆನಿಪಮೂರ್ತಿಯನು || ಕಂಡನೀಭವಕೂಪಪತಿತರ | ತಂಡವೀಡೇರುವಡೆ ಮುಕುತಿಗೆ | ಕಂಡೆವಾವುಕರಾವಲಂಬನವೆಂದನಾಮುನಿಪ || ೧೮ || ತನಗೆಕರುಣಿಸುಕೃಷ್ಣನಿಜಪದ | ವನಜಭಕುತಿಯನೆನುತಕರುಣಾ | ವನಧಿಯನುಬೀಳ್ಕೊಂಡುಸುಮ್ಮನೆಬರುತಮತ್ತೊಂದು || ಮನೆಗೆಬಂದನುಕಂಡನದರೊಳು | ದನುಜಹರನನುನೆತ್ತವನುನಿಜ | ವನಿತೆಯೊಡನಾಡುತ್ತಕುಳ್ಳಿರಲುದ್ಧವನೆನೆಮಲಗಿ || ೧೯ || ಮಂದಿರಕೆಮುನಿನಾಥನೈತರ | ಲಂದುಏನಯದಲಿದಿರುಗೊಂಡಾ | ನಂದದಲಿತಲೆವಾಗಿಮುನ್ನಿನಪೋಲ್ಬಭಕುತಿಯಲಿ || ವಂದಿಸುತನಿಮ್ಮಡಿಗಳತ್ತಲು | ಬಂದಿರಾವಾಗಾಯ್ತುತನ್ನಯ | ಮಂದಿರಕೆಪಾವನತೆಯೆನುತುಪಚರಿಸಿದನುಮುನಿಯ || ೨೦ || ಎಂದಡುಸುರದೆಮುನಿತೆರಳಿದ | ತ್ತೊಂದುಗೃಹದೊಳುಕಂಡನಾಗೋ | ವಿಂದನನುಕುಳ್ಳಿರಲುಕೊಂಡಾಡುತ್ತಶಿಶುಗಳನು || ಒಂದುಗೃಹದಲಿಮಜ್ಜನಕೆಮನ | ಸಂದುಬಿಜಯಂಗೈವುದನುಮ | ತ್ತೊಂದುಗೃಹದಲಿಹೋಮವನುಮಾಡುತ್ತಿರಲುಕಂಡ || ೨೧ || ಒಂದುಗೃಹದಲಿಭೋಜನಕೆಮನ | ಸಂದುಕುಳ್ಳಿರೆಕಂಡನಾಮ | ತ್ತೊಂದುಗೃಹದಲಿವಿಪ್ರಕುಲತುಷ್ಟಿಯನುಮಾಡುತಿರೆ || ಒಂದರಲಿಕುಳ್ಳಿರಲುಸಂಧ್ಯಾ | ವಂದನಕೆಮತ್ತೊಂದುಗೃಹದಲಿ | ಸಂದಶಸ್ತ್ರಾಭ್ಯಾಸವನುಮಾಡುತ್ತಿರಲುಕಂಡ || ೨೨ || ಒಂದುಭವನದಲಾನೆಕುದುರೆಗ | ಳಂದವೈಹಾಳಿಯನುಮಾಳ್ಪುದ | ನೊಂದುಭವನದಲಿರಲುಶಿರಿಮಂಚದಲಿಸತಿಸಹಿತ || ವಂದಿಗಳಕೈವಾರಗಳವ | ತ್ತೊಂದರಲಿಚಿತ್ತವಿಸುತಿಹುದನು | ಮುಂದೆನೋಡುತನಗುತನಡೆತರುತಿರ್ದನಾಮುನಿಪ || ೨೩ || ಒಂದುಗೃಹದಲಿಮಂತ್ರವನುಗೋ | ವಿಂದನುದ್ಧವನೊಡನೆಮಾಳ್ಪುದ | ನೊಂದರಲಿಜಲಕೇಳಿಯೊಳಗೆಸದಿರಲುಸತಿಯರಲಿ || ಒಂದುಗೃಹದಲಲಂಕರಿಸಿಗೋ | ವೃಂದವನುವಿಪ್ರರಿಗೆಕೊಡುವುದ | ನೊಂದುಗೃಹದಲಿಹಾಸ್ಯರಸದೊಳಗಿರಲುಮುನಿಕಂಡ || ೨೪ || ಒಂದೆಡೆಯಲಿತಿಹಾಸಕಥೆಗಳ | ನಂದುಕೇಳುತಪುಣ್ಯಚರಿತವ | ನೊಂದೆಡೆಯಲರ್ಥವನುಕಾಮವನಮಳಧರ್ಮವನು || ಒಂದೆಡೆಯಲಾತ್ಮಾಶ್ರಿತರಿಗಾ | ನಂದವನುಮಾಡುತ್ತಲಿರೆಮ | ತ್ತೊಂದೆಡೆಯಲಿರೆಕಂಡನಾತ್ಮಜ್ಞಾನರತನಾಗಿ || ೨೫ || ಒಂದೆಡೆಯಲಿರೆಕಂಡನಾನಿಜ | ನಂದನರಗುರುಸೇವೆಯಲಿಮ | ತ್ತೊಂದೆಡೆಯಲಿರೆಸಂಧಿಯಲಿವಿಗ್ರಹವನನ್ಯರಲಿ || ಒಂದೆಡೆಯಲುತ್ಸಾಹಿಸುತನಿಜ | ನಂದನರವೈವಾಹಿಕವಮ | ತ್ತೊಂದೆಡೆಯಕನ್ಯಾವಿವಾಹವಕಂಡನಾಮುನಿಪ || ೨೬ || ಒಂದೆಡೆಯೊಳೊಪ್ಪಿರಲುಗಜರಥ | ದಿಂದವಧುವರಗಳನುಪೂಜಿಸಿ | ಸಂದವಿಭವಂಗಳಲಿಚಮರಛತ್ರನಿಕರದಲಿ || ದುಂದುಭಿಯಕಹಳೆಗಳಘನರವ | ದಿಂದಸತ್ಪ್ರೇಮದಲಿಕಳುಹುವ | ಸಂದಣಿಯಸಂಭ್ರಮದಲೆಸದಿರೆಕಂಡನಾಮುನಿಪ || ೨೭ || ಅರಿಯದಂತೊಂದೆಡೆಯಲಂಗವ | ಮರಸಿನಗರಪರೀಕ್ಷೆಯಲಿಸಂ | ಚರಿಸುತಿರಲೊಬ್ಬನೆಗೃಹಾಂತರಗಳಿಗೆಗುಪ್ತದಲಿ || ಇರಲುಕಂಡನಶೇಷಮಾಯೇ | ಶ್ವರನನಿರುಪಮಯೋಗಮಾಯಾ | ಪರಮವಿಭವಂಗಳನುವಿಸ್ಮಿತನಾಗುತಿಂತೆಂದ || ೨೮ || ಮರಸಲೇತಕೆನಿಜವನಿದನಾ | ರರಿಯಲರಿವರುಕೃಷ್ಣನಿಂನಯ | ನಿರುಗೆಯನುನಿಗಮೌಘವೆತ್ತಲುಯೋಗಿಮನದೊಡನೆ || ಅರಸಿಕಾಣವುಯೋಗಮಾಯೆಯ | ನರಿಯಲೀಲೋಕಕ್ಕೆಹಿತವನು | ಮೆರವನಿಜಲೀಲಾವಿಧಾನವನರಿವರಾರೆಂದ || ೨೯ || ಕಂಡೆನಾನೆಲೆದೇವನಿಂನ | ದ್ದಂಡಮಾಯಾಶಕ್ತಿಯನುನೆರೆ | ಕಂಡೆನುರುಲೀಲಾವಿಹಾರವಿಚಿತ್ರಚೇಷ್ಟಿತವ || ಕಂಡೆನೆಂನಯಜನ್ಮಫಲವನು | ಕಂಡೆನೆಂನಯಸ್ವಾಮಿಪದಯುಗ | ಪುಂಡರೀಕದಸಿರಿಯನೆನುತೆರಗಿದನುಹರಿಪದಕೆ || ೩೦ || ಎತ್ತಿದನುನಸುನಗುತಮುನಿಪನ | ಮುತ್ತಿಕವನೇಳೆನುತತರ್ಕೈ | ಸುತ್ತಭಕುತಿಯದೊರೆಯನಧಿಕಮನೋನುರಾಗದಲಿ || ಕರ್ತೃವಾಗೀಜಗಕೆಧರ್ಮದ | ಕರ್ತೃವಾಗೆಲೆಮುನಿಪತತ್ಪದ | ಭೋಕ್ತೃವಾಗಿದಕೇಕೆವಿಸ್ಮಯವೆಂದನಸುರಾರಿ || ೩೧ || ಎಂದಡಚ್ಯುತನಂಘ್ರಿಕಮಲ | ದ್ವಂದ್ವದಲಿತಲೆವಾಗಿಪರಮಾ | ನಂದರಸದಲಿಮುಳುಗಿ ಕರುಣಿಸುಕೃಷ್ಣನಿಜಪದವ || ಕುಂದದಚಲಿತಭಕುತಿಯನುತನ | ಗಿಂದುದೇವರಕೀರ್ತಿಯನುಸುರ | ವೃಂದದಲಿವಿಸ್ತರಿಸುವೆನುತಾನೆನುತಬೀಳ್ಕೊಂಡ || ೩೨ || ಹಾಯಿದನುಗಗನಾಂಗಣಕೆನಾ | ರಾಯಣಾರವವೆಸೆಯೆವೈಷ್ಣವ | ರಾಯಚೂಡಾಮಣಿಭವಾಂಧತಮೋಹರದ್ಯುಮಣಿ || ನಾಯಿಯರಸನಮಹಿಮೆಗೋರಂ | ತಾಯೆನುತತಲೆದೂಗುತಮುರನಿ | ಕಾಯಕೈವಾರಿಸಲುನಾರದಮುನಿನಿಜೇಚ್ಛೆಯಲಿ || ೩೩ || ಅರಸಕೇಳಂತಖಿಳಜಗಕ | ಚ್ಚರಿಯನಿಸನರಲೀಲೆಯನುವಿ | ಸ್ತರಿಸುತವನಿತೆಪರಮಪಾವನವೆನಿಪತನುವಿಡಿದು || ಪರಮಸುಖಮಯಮೂರ್ತಿಷೋಡಶ | ವರಸಹಸ್ರಸತೀನಿಕಾಯವ | ನೆರದುದಿಟವಿಟನಂತೆಮೆರದನುಲೋಕಸಂಗ್ರಹವ || ೩೪ || ನೋಡಿದಣಿಯರುಕಂಗಳಲಿಮಿಗೆ | ಪಾಡಿದಣಿಯರುನಾಲಿಗೆಗಳಲಿ | ಕೂಡಿದಣಿಯರುತನುಗಳಲಿಮನಗಳಲಿಮಹಿಳೆಯರು || ಬಾಡಿಬಳುಕುತಮುನಿದುಮರುಕವ | ಮಾಡಿವನವನುಹರಿಸಲರಿಯರು | ಕೂಡಿಸಿದಸವ್ರೀಳಹಾಸನಿರೀಕ್ಷಣಂಗಳಲಿ || ೩೫ || ಕೂಗಿದಪೆಕೋಳಿಯನುಬೈಯ್ವರು | ಬೇಗಬೆಳಗಾಯ್ತಕಟೆನುತ್ತವಿ | ಯೋಗಚಿಂತಾತುರೆಯರಪ್ಪಿಮುರಾಂತಕನಕೊರಳ || ರಾಗವಿಗೆಮಂದಾರಸುಮನೋ | ರಾಗಿಗಳುತುಂಬಿಗಳುಪಾಡಲು | ಬೇಗೆಯಲಿಬಿದ್ದಂತೆಬಸವಳಿವರುಮೃಗಾಕ್ಷಿಯರು || ೩೬ || ಕೊರಳನಪ್ಪಿಮುಕುಂದಮುಖಪಂ | ಕರುಹವನುಚುಂಬಿಸುತತನ್ನ

ಖ । ಪರಿಮಳವನಾಘ್ರಾಣಿಸುತ್ತ ವಿದರ್ಭರಾಜಸುತೆ ॥ ಎರಡುಘಳಿಗೆವಿಯೋಗವನುತರ । ಹರಿಸಲರಿಯಳು ಪ್ರಿಯನ ಬಾಹ್ಯಾಂ ।
ತರವನುರದಲಿ ಬಿಗಿದು ಬಿಡಲಾರದೆ ಮನೋರಮನ ॥ ೪೭ ॥ ಕಾಲುಮೊಗವನು ತೊಳೆದು ಲಕ್ಷ್ಮೀ । ಲೋಲನಾಶಿರಿಮಂಚದಲಿ
ನಿಜ । ಬಾಲೆಯನು ಸುಮಲಗಿಕುಳ್ಳಿರ್ದ ಪರಮಾವದಲಿ ॥ ಆಲಿಸಿದನಾತ್ಮಸ್ವರೂಪವ । ನಾಲಿಗಳುನಾಸಾಗ್ರದಲಿ ಸಂ । ಮೇಳನ
ದೆಯುಲು ಸಕಲ ಮಾಯಾಭ್ರಾಂತಿಯನು ಜರದು ॥ ೪೮ ॥ ಜಲಧಿಫೇನತರಂಗಬುದ್ಬುದ । ಗಳಿಗೆನೆಲೆಯಾದಂತೆ ಭುವನಾ । ವಳಿ
ಯು ತೋರ್ಕೆಗೆ ತಾನೆ ನೆಲೆಯೆಂದೆನಿಪ ನಿಜಪದವ ॥ ಒಲಿದು ತನಲಿ ತಾನೆ ತಾನಾ । ಗಲಘು ಸುಖಸಂವಿತ್ಸ್ವರೂಪದ । ಲಳಿದಮನದ
ಲಿಮುಂಕೊಳಿಸುತಿರ್ದನು ಸಮಾಧಿಯಲಿ ॥ ೪೯ ॥ ಎರಡೊಡಲನೊಡೆಮೆಟ್ಟಿ ತೋರ್ಕೆಯು । ನೆರಪಿತದ್ವಾಸನೆಯು ತುರಿಯದ ।
ತೆರಪರದ ಸತ್ಯಾನುಭವದಲಿ ನಿಂದು ನಿಜದೊಳಗೆ ॥ ಬೆರಸಿ ಬೇರೆಂದೆನಿಸದಖಿಳರೋ । ತ್ತರವೆನಿಪ್ಪಾನಂದರಸನಾ । ಗರವೆ ತಾನೆಂದ
ರಿದುಮರದಿರ್ದನು ಸಮಾಧಿಯಲಿ ॥ ೫೦ ॥ ಅತುಮಮಾತುಮ ಸಜಾತಿವಿ । ಜಾತಿವಿದಿತಸ್ವಪರಭೇದ । ಭ್ರಾಂತಿಯನು ಹೊದ್ದದ
ಸದಾಸಂದ್ರೈಕವಿಗ್ರಹದ ॥ ಭೂತವಿಲಯಸ್ಥಾಪಕಕರ್ತೃ । ತ್ವಾತಿಶಯಗುಣರಹಿತನಹನಿ । ತ್ಯಾತುಮನು ತಾನಾಗೆ ತಾನೇ ತಂ
ನಲೆಸದಿರ್ದ ॥ ... ... ॥ ೫೧ ॥

ಅಂತು ಸಂಧಿ ೭೭ಕ್ಕಂ ಪದನು ೪೪೦೨ಕ್ಕಂ ಮಂಗಳಮಸ್ತು.

ಎಪ್ಪತ್ತೆಂಟನೆಯ ಸಂಧಿ.

—— ಸ್ವಾಮಿಯ ನಿತ್ಯಕರ್ಮದ ಒಡ್ಡೋಲಗ. ——

ಸೂಚನೆ ॥ ರಾಯಪಾಂಡವಪಕ್ಷಪಾತ್ರೋ । ಪಾಯನಾರಾಯಣನು ಯಾದವ । ರಾಯಬಿಜಯಂಗೈದ
ನಿಂದ್ರಪ್ರಸ್ಥಪುರವರಕೆ ॥ ... ...

ಪದನು ॥ ಅರಸಕೇಳುದಯಾದ್ರಿಶಿರದಲಿ । ತರಣಿರಥವನು ನೂಕಲೆಂದಂ । ಬುರುಹನಾಭನು ಮಜ್ಜನವ ಮಾಡಿದನು ಸಲ
ವಿಸಲಿ ॥ ಪರಮಮಂಗಳಮೂರ್ತಿ ದಿವ್ಯಾಂ । ಬರವನುಟ್ಟನು ವಿಹಿತನಿಯಮೋ । ತ್ಕರಗಳನು ಮಾಡಿದನು ಸಂಧ್ಯಾವಂದನಾದಿಕವ ॥
ದೇವಋಷಿಪಿತೃತರ್ಪಣವನಾ । ದೇವದೇವನು ಮಾಡಿ ಧರಣೀ । ದೇವರನು ಸತ್ಕರಿಸಿ ತಿಲಭೂರತ್ನರುಕ್ಮದಲಿ ॥ ಧಾವಳಿಯ ಸುರ
ಭಿಗಳನಖಿಳಮ । ಹಾವಿಭವಸಹಿತೊಲಿದು ಧಾರೆಯ । ನಾವರಾಂಬುಧಿಯಿತ್ತನಧಿಕಮನೋನುರಾಗದಲಿ ॥ ೧ ॥ ನಮಿಸಿದನು
ಬಲವಂದು ಗೋದ್ವಿಜ । ಸುಮನಸರನಾಚಾರ್ಯವೃದ್ಧ । ಕ್ಷಮರನಾಪಿತೃಮಾತೃಗುರುವರ್ಗವನು ಸತ್ಕರಿಸಿ ॥ ವಿಮಳನಸುಸ್ಪರ್ಶ
ನವನಾ । ಕಮಲನಾಭನು ಮಾಡಿ ಬಳಿಕು । ತ್ತಮವಿಭೂಷಣದಿವ್ಯವಸ್ತ್ರಂಗಳಲಿ ರಂಜಿಸಿದ ॥ ೨ ॥ ಉಟ್ಟಪೀತಾಂಬರವನಳವಡೆ ।
ಕಟ್ಟಮಣಿಮೇಖಲೆಯನೊಪ್ಪಿರೆ । ತೊಟ್ಟ ಕುಂಡಲಹಾರಮಣಿಕೇಯೂರಕಂಕಣದ ॥ ದೃಷ್ಟಿಗಳು ಕೋರೈಸೆ ಮುಕುಟನಿ । ವಿಷ್ಟ
ಮಣಿಕಿರಣದಲಿ ದನುಜಘ್ನ । ರಟ್ಟನೆಸೆದನು ನಿಶಿತಮಣಿಭೂಷಣದ ಕಾಂತಿಯಲಿ ॥ ೩ ॥ ದಿವ್ಯಗಂಧವರಾನುಲೇಪನ । ದಿವ್ಯವನ
ಮಾಲ್ಯಾಂಬರಂಗಳು । ದಿವ್ಯರತ್ನಪ್ರಕರ ದಿವ್ಯಾಭರಣನಿಕರವನು ॥ ದಿವ್ಯಮೂರುತಿ ಧರಿಸಿ ಮುನಿಜನ । ಸೇವ್ಯನೆಸೆಯಲು ನೋ
ಡಿದನು ನಿಜ । ದಿವ್ಯಮುಖಕಮಲವನು ದರ್ಪಣವನು ದಯಾವನಧಿ ॥ ೪ ॥ ಪೌರಜನರಾಷ್ಟ್ರಜನನಿಜಪರಿ । ವಾರಜನಯಾಚ
ಕಜನಾಶ್ರಿತ । ವೀರದಾಸೀದಾಸಜನವೆಂಬಿವರನಾರೈದು ॥ ಶ್ರೀರಮಣನವರವರಭೀಷ್ಟವ । ನೋರಥಂಗಳನಿತ್ತು ಬಹಳೋ ।
ದಾರಮತಿ ಮನ್ನಿಸುತಲಿರ್ದನು ಸಕಲಬಾಂಧವರ ॥ ೫ ॥ ದಣಿಯಲಿತ್ತನು ವಿಪ್ರರಿಗೆ ಬಹು । ಗುಣವೆನಿಪ ದಿವ್ಯಾಂನಮಣಿಭೂ ।
ಷಣವಸನತಾಂಬೂಲವನ ಮಾಲ್ಯಾನುಲೇಪನವ ॥ ಗುಣವನಧಿ ನಿಜಭೃತ್ಯವನಿತಾ । ಗಣದ ಸಮನಂತರದಲಾರೋ । ಗಣೆಯ
ಮಾಡಿದನೊಲಿದು ಪುತ್ರಸಪೌತ್ರಜನಸಹಿತ ॥ ೬ ॥ ಓಲಗಕೆ ಹೊಂದೇರನಂನೆಗ । ಮೇಳವಿಸಿ ಸುಗ್ರೀವಮುಖ್ಯಹ । ಯಾಳಿಯ
ಲಿದಾರುಕನು ಕೈಮುಗಿದಿರಲು ಬಾಗಿಲಲಿ ॥ ವೀಳೆಯವ ಚಿತ್ತೈಸಿ ಲಕ್ಷ್ಮೀ । ಲೋಲನಾತನ ಕೈವಿಡಿದ ಜನ । ಜಾಲದೊಳಗೇರಿದ
ನುರಥವನು ವಿದಿತ ವಿಭವದಲಿ ॥ ೭ ॥ ಇಂದುನಿಕರದ ಪ್ರೋಲುಸತ್ತಿಗೆ । ಸಂದಣಿಸಿದ ಪ್ರಮೋಲೆ ಚಾಮರ । ವೃಂದವಾಡಿದ ವಿದ್ದೆಸೆಗೆ ಹಂ
ಸಾಪಳಿಗಳಂತೆ ॥ ವಂದಿಗಳ ಮಾಗಧರ ಸೂತರ । ಸಂದಣಿಯ ಕಳಕಳದಲಂದೈ । ತಂದನೋಲಗಶಾಲೆಗಸುರಾರಾತಿನೇವಿನಲಿ ॥ ೮ ॥
ಒಪಲಲಾದುದು ತಾಪವಿರಹವ । ತಡೆಯಲಾರದೆ ನಿಮಿಷಮಾತ್ರಕೆ । ಮಡದಿಯರು ಮುಕ್ಕುಳಿಸಿ ಮುರಹರನಂಗಲಕು ವಿಯನು ॥
ಬಿಡಲರಿಯ ಪಕ್ಷಿಗಳದೆಂತುಟೊ । ಕಡುಚಲುವ ಮೂರುತಿಯ ಮೂರ್ತಿಯ । ಕುಡಿಗುತೇಗಿದವವರ ಮನವನು ಮಥನಶರಹತಿಗೆ ॥
ಬಂದನಸುರಾರಾತಿ ಪಾರ್ಶ್ವ । ದ್ವಂದ್ವದಲಿ ಬರಲುದ್ಧವಾದ್ಯರು । ಸಂದಣಿಸಿ ರಥದೊಳಗೆ ತೊಡೆಸೋಂಕಿನಲಿ ಕುಳ್ಳಿರ್ದ ॥ ಇಂದುಮು
ಖಿಯು ತುಚಮುರಸೀಗುರಿ । ಯಿಂದ ಬರೆ ಬೆಂಭಾಗದಲಿ ಯದು । ವೃಂದಸೇವಿತ ವರಸುಧರ್ಮಿಕಸಭೆಗೆ ನಲವಿನಲಿ ॥ ೧೦ ॥ ಇಳಿದು
ರಥವನು ರತ್ನಮಯಮಂ । ಗಳಮಹಾಸನಮಧ್ಯದಲಿ ಮುನಿ । ಕುಲಮನೋಂಬುಜಹಂಸ ಹರಿ ಕುಳ್ಳಿರ್ದನೊಲವಿನಲಿ ॥ ಇಳೆಯರಾ

ಘುರಮುಕುಟಮಣಿಕುಂ | ಡಲಮುಖಾಪ್ರಭೆಗಳಲಿಕಿರಣಾ | ಜಲಧಿಮಿಗೆರಂಜಿಸಿದನಮರಾಧಿಪನನತಿಶಯಿಸಿ ||೧೨|| ಹೊಳೆ ವವಿಮಳಛತ್ರಚಮರಾ | ವಳಿಯುಲಿರದೋಲಗಿಪಲಲನಾ | ವಳಿಯಕರುಣಾಪಾಂಗನೀರಾಜನದಬೆಳಗಿನಲಿ || ಬಳಸಿಕುಳ್ಳಿ ರೆಯಾದವಾನ್ವಯ | ತಿಲಕನಾಸಭೆಯೊಳಗೆತಾರಾ | ವಳಿಪರೀತಮಹೇಂದುವಿನವೊಲೆಸೆದನಸುರಾರಿ ||೧೩|| ಮುಂದೆಪೌ ರಾಣಿಕಕಥಾರಸ | ದಿಂದಬಹುಶಾಸ್ತ್ರಗಮದಮತ | ದಿಂದಕೆಲರುವಿಚಿತ್ರಹಾಸ್ಯವಚೋವಿಶೇಷದಲಿ || ಸಂದನಳನಹುಷಾದಿಚ ರಿತಗ | ಳಿಂದಕೆಲವವತಾರಸಂಗತಿ | ಯಿಂದಕೆಲರೋಲಗಿಸುತಿರ್ದರುಕೃಷ್ಣನಂಘ್ರಿಗಳ ||೧೪|| ತಾಳಮದ್ದಳೆಶಂಖಪಟಹವಿ| ಶಾಲವೀಣಾವೇಣುವಾದ್ಯಸ | ಮೇಳವೆಸೆಯಲುನಾಟ್ಯವಿದ್ಯಾಚಾರ್ಯರೈತರಲು || ಓಲಗಿಸುತಿರ್ದುದುನಟಾಂಗದ | ಲೀಲೆಯ ಲಿನರ್ತಕಿಯರುತ್ಸವ | ದೇಳಿಗೆಯಸಂಗೀತನೃತ್ಯಾಡಂಬರಂಗಳಲಿ ||೧೫|| ಇರಲುಬಂಡನುದೂತನೊಬ್ಬನು | ವರಗಿರಿವ್ರಜ ದಿಂದಪಡಿಪಾ | ರರಿಗೆಬಿನ್ನಹಮಾಡಲವರೈತಂದರೋಲಗಕೆ || ಕರಪುಟವಮುಗಿದೆರಗಿಚರಣಾಂ | ಬುಜಹದಲಿಬಿನ್ನೈಸಲಾತನ| ಕರೆಸಿಕಾಣಿಸಿಕೊಂಡನಸುರಾರಾತಿನಲವಿನಲಿ ||೧೬|| ಬಂದನೋಲಗದೊಪ್ಪವನುಸಾ | ನಂದದಲಿನೋಡುತ್ತಮಜಭಾ | ಪಿಂದು ಧರಕಮಲಜಮಹೇಂದ್ರರಿಗುಂಟೆಯೀವಿಭವ || ಎಂದುತಲೆದೂಗುತ್ತಚರಣ | ದ್ವಂದ್ವದಲಿಮೈಯಿಕ್ಕಿಕೆಲದಲಿ | ನಿಂದುಹಾರುತ್ತಿ ರ್ದನೊಲವನುದೂತನಚ್ಯುತನ ||೧೭|| ಆರುನೀನೆಲ್ಲಿಂದಬಂದೆಯ | ದಾರುಕಳುಹಿದರೇನುಕಾರಿಯ | ವಾರದೂತನೆನುತ್ತಕ ರುಣಾವನಧಿಬೆಸಗೊಳಲು || ಚಾರುಚರಣದಹೊರೆಯಲಟ್ಟದ | ಚಾರುಲಿಖಿತವನಿರಿಸಿಚಿತ್ತವ | ಧಾರೆನುತಕೈಮುಗಿದುಬಿನ್ನಹ ಮಾಡಿದನುಹದನ ||೧೮|| ಬಂದೆನಾನುಗಿರಿವ್ರಜಾಹ್ವಯ | ದಿಂದದೇವರಚರಣಹರುಶನ | ಕಿಂದುಕಳುಹಿದರಖಿಳಪೃಥ್ವೀಶ್ವ ರರುವಿನಯದಲಿ || ಮುಂದೆಚಿತ್ತವಿಸೂದುದೇವರು | ಬಂದಹದನನೆನಲ್ಕೆಕೇಳ್ದ | ನಂದುಕರುಣಾವನಧಿಕಳುಹಿದಬಿಂನವತ್ತ ಲೆಯ ||೧೯|| ಯುಕ್ತತುಳದಲಿಕಾದಿಮಾಗಧ | ನಿಕ್ಕಿದನುಸಂಕಲೆಯನಂಮನು | ಸಿಕ್ಕಿದನಲೈಕೃಷ್ಣಬಲವಂತನವಿರೋಧದಲಿ || ಲೆಕ್ಕವಿಲ್ಲದನೃಪರದಾರಿಗೆ | ಕಕ್ಕುಲಿತೆಪಡಲೇನಹುದುಮರೆ | ಯೊಕ್ಕವಾವೆಲೆದೇವಭವದೀಯಾಂಘ್ರಿರೇಣುಗಳ ||೨೦|| ಹಾನಿಯವಗಿಲ್ಲಿನ್ನುನಿನ್ನಾ | ಧೀನವೆಮ್ಮೊಡಲುಗಳುತವಗಿಂ | ನೇನುತಾಯಿಗೆಮಕ್ಕಳೇಮೈದೋರಿಶುದ್ಧವಲ || ಜ್ಞಾನವಿಲ್ಲದೆ ಬರಿದೆಮಾಯಾ | ಮಾನಿನಿಯಕಾಲ್ಗಳಿಗೆಕೆರಹನು | ದಾನವಾಂತಕಹಿಡಿದೆವಿನ್ನೆಗಭವಸಹಸ್ರದಲಿ ||೨೧|| ಅಂಜೆವೀಮಾಗಧನ ಮುನಿಸಿಂ | ಗಂಜೆವೀಸೆರೆಸಂಕಲೆಯದೆಶೆ | ಗಂಜೆವಾವೆಲೆದೇವದಿಟಕೆಮ್ಮಸುವಿನಳವಿಯಲಿ || ಅಂಜಿಸಿತಲೈಕಾಲಕರ್ಮದ| ಜಂ ಜಡದಬಲುಬಾಧೆನತಪವಿ | ಪಂಜರನೆಪರಮೇಷ್ಠಿವಂದ್ಯನೆಭವಭವಂಗಳಲಿ ||೨೨|| ಆವನಂಘ್ರಿಸರೋಜಯುಗಳವ | ಭಾ ವಿಸುತಕಮಲಜಭವಾದ್ಯರು | ಜೀವಿಸುವರಾಸನಕನಾರದಮುಖ್ಯಮುನಿವರರು || ದೇವನೀನೀಧರೆಯಲಿರಲಾ | ವಾವಪಾಪ ವಮಾಡಿದೆವೊಚರ | ಣಾವಲೋಕನಭಾಗ್ಯವಿರಹಿತರಾದೆವಿಂದಿನಲಿ ||೨೩|| ಈವುದೆವಗೆಲೆಕೃಷ್ಣನಿಜಚರ | ಣಾವಲೋಕನ ವೆಂಬಸುದೃಢಕ | ರಾವಲಂಬನವೊಲಿದುಭವಭಯಕೂಪಪತಿತರಿಗೆ || ಕಾವುದೆಮ್ಮನುಕರುಣದಲಿನಿಜ | ಸೇವಕರನೆನುತಿರಲುನ ಭದಲಿ | ದೇವಋಷಿನಾರದನುಮೈದೋರಿದನುಯದುಸಭೆಗೆ ||೨೪|| ಹೊಳಹೊಳವತನುಕಾಂತಿಯಲಿದಿಗು | ವಳಯವನುಬೆ ಳಗುತ್ತವೈಷ್ಣವ | ಕುಲಶಿರೋಮಣಿಭವಭಯಾಂಧತಮೋಹರದ್ಯುಮಣಿ || ಇಳಿದನವನಿಗೆವಿಷ್ಣುಭಕುತಿಯ | ಸುಳಿವವೊಲುತ ನುವಿಡಿದನಾವಮಾ | ವಳಿಯಬೆಳೆಸಿರಿವಂತನಮರವ್ರಾತಕೈಮುಗಿಯೆ ||೨೫|| ಕಂಜಜೆಯನಾರದನಬರವನು | ಕಂಜನಾಭನು ಕಂಡುನಿಜಕರ | ಕಂಜಮುಕುಳವಮುಕುಟದಲಿಧರಿಸುತ್ತಜಯಯೆನುತ || ರಾಜಿಸುವಸುಂಗಣಿಯಸಭ್ಯರ | ಪುಂಜದಲಿನಡೆದಿದಿ ರುಗೊಂಡುನಿ | ರಂಜನನುಕುಳ್ಳಿರಿಸಿದನುನಿಜಪೀಠದಲಿಮುನಿಯ ||೨೬|| ನೆರವಿಸಹಿತರ್ಚಿಸುತಮುನಿಪನ | ಸರಸಿಜಕೆತಲೆವಾ ಗಿಮುಕುಳಿತ | ಕರಸರೋರುಹನಾಗಿಬಿನ್ನವಿಸಿದನುಮುನಿಪನಿಕೆ || ಧರೆಯಬೆಮಗಿತ್ತಲುಮಹಾತ್ಮರೆ | ದರುಶನಕೆಗೋಚರ ವೆನಿಮ್ಮಡಿ || ಚರಿಸುತಿಹುದುಜಗದ್ಧಿತಾರ್ಥದಲೆಂದನಸುರಾರಿ ||೨೭|| ಸುಳಿದುಸುರನರನಾಗಲೋಕಂ | ಗಳನುನೆರೆಪಾವನ ವಮಾಡುವ | ಸುಲಭಸಜ್ಜನಮೌಳಿರತ್ನವದಾರುನಿನ್ನಂತೆ || ನಳಿನಸಖನೀಬಾಹ್ಯದಲಿಕ | ತ್ತೆಯುಕಳವನುನೀನಲಾವೊಳ | ಹೊರಗೆಜೀವರತನುವಕೆಡಿಸುವಕಮಲಸಖನೆಂದ ||೨೮|| ಧಾರುಣಿಯಲೇನುಂಟುಸಂಪ್ರತಿ | ಧಾರುಣೀಪತಿಗಳಲಿಪಾಂಡು ಕು | ಮಾರರೆಂತಿಹರದನುಕರುಣಿಸಬೇಹುದೆನಗೆನಲು || ನಾರದನುನಸುನಗುತನುಡಿದನು | ಪಾರಗುಣನಿಧಿಸಕಲಜೀವಾ | ಧಾ ರಚೇತನಸಾಕ್ಷಿನಿನಗಜ್ಞಾನವೇಕೆಂದ ||೨೯|| ಯಜಿಸುವನುಯಮನಂದನನುನಿಜ | ಭುಜದಲಾಶಾಸಿತಮಹೀಪತಿ | ವಿಜಯ ದಲಿವರರಾಜಸೂಯಮಹಾಧ್ವರಂಗಳಲಿ || ಅಜಭವಾಮರವಂದ್ಯಚರಣಾಂ | ಬುಜನೆನಿನ್ನನುಕರೆಯಬಂದೆನು | ಭಜಕರಲ್ಲಿಗೆ ದೇವಬಿಜಯಂಗೈಯ್ಯಬೇಕೆಂದ ||೩೦|| ಕಂಡುಸಂತಸವಡಲಿಪೃಥ್ವೀ | ಮಂಡಲದಜನವೈದೆನಿನ್ನಯ | ಖಂಡಚಿನುಮಯ ಚಾರುಮೂರ್ತಿಯಸೌಭಗವನಿದನು || ಖಂಡಿಸುವದುರ್ಧರಕೃತಾಂತನ | ಖಂಡೆಯದಘಾಯವನುಗೆಲಲಾ | ಕಂಡುಪಾಯ

ವಿದಖಿಳಲೋಕಕ್ಕೆಂದನಾಮುನಿಪ ॥೩೧॥ ಕೇಳಿದರೆಮುರದೊಮ್ಮೆನಿನ್ನವಿ । ಶಾಲಗುಣಗಣಗಳನುಮನದೊಳ । ಗಾಲಿಸಿದವಿದನಾಶ್ವಚಂಡಾಲಾದಿಜೀವರಿಗೆ ॥ ನಾಲಿಗೆಯುಲುಚ್ಚರಿಸೆಕೆಡುವವು । ಕಾಲಕರ್ಮಭಯಂಗಳದನೇ । ವೇಳುವೆನುಕಂತವರಭಾಗ್ಯವನೆಂದನಾಮುನಿಪ ॥೩೨॥ ಕಾಣಬೇಹುದುತನಗಖಿಳಗೀ । ರ್ವಾಣಮಣಿಮುಕುಟಂಗಳೊಡನೀ । ಕ್ಷೋಣಿಪತಿಗಳಮುಕುಟಮಣಿಗಳುಕಾರುಘಟ್ಟಿಸಿ ॥ ಕೇಣವಿಲ್ಲದೆಸುಜನಬಂಧು । ಶ್ರೀಣಿಸಿನಗೆರಗುವದನೆಲೆಗೀ । ರ್ವಾಣನಾಥನೆಕರುಣಿಸೆಂದಪ್ಪಿದನುಮುನಿನಾಥ ॥೩೩॥ ಪರೆಯುಬೇಹುದುಕೀರ್ತಿಭುವನಾಂ । ತರಗಳಲಿದೆಸೆಗಳಲಿಧರೆಯಲಿ । ಪರಮಮಂಗಳವೆನಲಘಸ್ವಯಕರವಿದೆಂದೆನಲು॥ ಚರಣರಜವನುಸೋಂಕಿಜಗಕಘ। ಹರವಮಾಡಳೆಗಂಗೆನಿನ್ನಯ। ಪರಮಚರಿತವಕೇಳಸುಖಿಸುವೆನೆಂದನಾಮುನಿಪ ॥೩೪॥ ಆರರಿವರೆಲೆಕೃಷ್ಣನಿಂನವಿ । ಹಾರಮಾಯಾತಂತ್ರವನುಸಂ । ಸಾರಚಕ್ರವನಿದನುಸೃಜಿಸುವಕಾವಖಂಡಿಸುವ ॥ ಕಾರಣತ್ರಿತಯವನುಜೊದ್ದದ । ಪಾರಮಹಿಮನೆನಿಂನಚರಣಸ । ರೋರುಹವೆಗತಿತನಗೆನುತತಲೆವಾಗಿದನುಮುನಿಪ ॥೩೫॥ ಎನಲುನಗುತಶುದ್ಧವಸವೊಗವನು । ದನುಜಹರನೀಕ್ಷಿಸಲುನುಡಿದನು । ವಿನಯದಲಿತಲೆವಾಗಿಬಿಂನಹವೆನುತಕೈಮುಗಿದು ॥ ಮುನಿಯುವಚನವಭೀಷ್ಟವೀದೂ । ತನವಚನಕರ್ತವ್ಯವೆರಡರೊ । ಳನುಪಮಾಮಳಕೀರ್ತಿವಿಶ್ರುತವಹುದುನಮಗೆಂದ ॥೩೬॥ ಅವಧರಿಸುಕರ್ತವ್ಯಮರೆಯೊ । ಕ್ಕವರಕಾವುದುರಾಯರಿಗೆಪೆಂ । ಡವರುಮಾಡುವಮಖಮಹೋದಯಹೇತುವದುನಿಮಗೆ ॥ ಅವನಿಪರುಸಹಿತಖಿಳದಿಕ್ಚ । ಕ್ರವನುಜಯಿಸದೆರಾಜಸೂಯದ । ಸವನವದುಸಂಪನ್ನವಾಗದುಕೃಷ್ಣ ಕೇಳೆಂದ॥ ಅದರೊಳಗೆಮಾಗಧನಜೀವದ । ಸದದುನೃಪರನುಬಿಡಿಸಿಬಹುದಿಂ । ತಿದುವೆಮತವೆಮಗುಭಯತ್ರೋಭದ್ರಾವಹವುನಿಮಗೆ ॥ ವಿದಿತವದರಿಂದಹುದುಮುನಿಯು । ಭ್ಯುದಯವೆಂಮಿಷ್ಟಾರ್ಥನಿಂನಯು । ಸದಮಳಾತುಳಕೀರ್ತಿಸಲೆಸಂಪನ್ನವಹುದೆಂದ ॥೩೮॥ ದ್ರೋಹಿಜನುಗೆಲಲರಿದುಬಹಳ । ಕ್ಷೋಹಿಣಿಯುಬಲಗಳಲಿಭೀಮನ । ಬಾಹುಬಲಸಮವಹುದುನಾಗಾಯುತಬಲಾನ್ವಿತಗೆ ॥ ರೂಹುಗಳದಿಳೆಯುಮರರಂಡದ । ಲಾಹವವಬೇಡುವುದುಕೊಲುವುದು । ಬೇಹಮುಖವನುಬೆಳಸಬಹುದಲ್ಲೆಂದಮೋಲೆಂದ ॥೩೯॥ ಕರ್ತವಾಗಲಿಕ್ಷ್ಮಪನುನೀನುನಿ । ಮಿತ್ತನಹುದೆಲೆಕೃಷ್ಣತ್ರಿಜಗಕೆ । ಕರ್ತನೆನಿಸುವಕಮಲಜಾದ್ಯರದಾರನೇಮದಲಿ ॥ ವರ್ತಿಸುವರೀಲೋಕಪಾಲರು । ಮರ್ತ್ಯಪತಿಗಳುಸಕಲಶಕ್ತಿನಿ । ಮಿತ್ತವಲ್ಲೆಕೃಷ್ಣನಿಂಮಡಿಜೀವಜಯಕೆಂದ ॥೪೦॥ ಅರಸಿಯರುನಿಜನಗರರಾಷ್ಟ್ರಂ । ತರಗಳಲಿದೇವಿಯರುಭುವನಾಂ । ತರಗಳಲಿಮಾಡುತ್ತಲಿರಲಾಗೌರಿದೇವಿಯರು ॥ ಧರಣಿಯಲಿಗಜಪತಿಯಮೋಕ್ಷವ । ನೊರೆದಪ್ರೋಲ್ಲೀನೃಪರಮೋಕ್ಷವ । ನೊರೆಯಲ್ಕೆಗೋಪಿಯರುಮುನಿಗಳುನಾವುಸಹಿತೆಂದ ॥೪೧॥ ಹಲವುಮಾತೇಕಾಮಗಧನೃಪ । ಕುಲಕುಠಾರನವಧೆಜಗನ್ಮಂ । ಗಳವದಾಕ್ರತುಹೇತುವಹಸತ್ಕೃತ್ಯವಿದುಕಡೆಗೆ ॥ ಬೆಳಸುವದುಕಾಲಾಂತರಕೆನಿಂ । ನೊಲವನದುವೇಭೂಮಿಭಾರವ । ಕಳೆಯಲಾನಿಮಿತ್ತವಹುದೆಲೆತಂದೆಕೇಳೆಂದ ॥೪೨॥ ಎನಲುಭಾಷೆನುತಪ್ಪಿದನುಮುನಿ । ಜನಪದೇಲೇಸೆಂದುದುದ್ಧವ । ನನುಪಮೋಕ್ತಿಗೆಮೆಚ್ಚಿದನುಮುರವೈರಿಮನ್ನಿಸುತ ॥ ಮನಕೆಬಂದುದುಸಕಲಯಾದವ । ಜನಪರಿಗೆಸೆಂನದ್ಧವಾಗಲಿ । ವಿನುತಯಾದವಸೈನ್ಯಸಾಗರವೆಂದನಸುರಾರಿ ॥೪೩॥ ಅಂತದಿರುಹೇಳೆಲ್ಲರಿಗೆರಿಪು । ಭಂಜನವಮಾಡುವೆನುನೀನಿದ । ಕಂಜಲಿಸದಿರುಮನದೊಳಗೆಸಂಶಯವನೆಂದೆನುತ ॥ ಕಂಜನಾಭನುನಗುತನಿಜಕರ । ಕಂಜದನುನೆಗಹಿದನುನತಪವಿ । ಪಂಜರನುಕಳುಹಿದನುನೃಪದೂತನನುಸತ್ಕರಿಸಿ ॥೪೪॥ ಹೂಡಿದವುರಥನಿಚಯಗಜಘಟೆ । ಜೋಡಿಸಿತುಹಯನಿಕರಪಲ್ಲಣ । ಜೋಡುಹಕ್ಕರಿಕೆಗಳಲೆಸೆದವುಪಾಯದಳಸಹಿತ ॥ ಕೊಡೆಕಟ್ಟಿಕೈದುವನುತೂ । ಗಾಡಿದವುಚವುರಿಗಳುನಾಯಕ । ವಾಡಿಗಳುಹೊರವಂಟುದಸುರಾಂತಕನನೇಮದಲಿ ॥೪೫॥ ದನುಜಹರನೇರಿದನುರಥವನು । ಮುನಿಸಹಿತಹೊರವಂಟನೊಪ್ಪಿರೆ । ವನಿತೆಯರುದಂಡಿಗೆಗಳೊಡನೈತರಲುಸಂದಣಿಸಿ ॥ ಕನಕಮಯಶಿಬಿಕೆಗಳಲರ್ಘಕೆ । ರಸುಸರಿಸಿಪ್ರದ್ಯುಮ್ನಸಾಂಬಾ । ದ್ಯನಘವೀರನಿಕಾಯಬರೆಕರಿತುರಗನಿಕರದಲಿ ॥೪೬॥ ಕಿತ್ತಕೈದುಗಳಿಂದಸುಭಟರು । ಮುತ್ತಿಮುಸುಕಿತುರಾಣಿವಾಸದ । ಮೊತ್ತದಂದಣಗಳನುಕಂಚುಕಿನಿಕರಕೈನೆಗಹಿ ॥ ಸುತ್ತಿಸುಳಿದುದುಸೂತಮಾಗಧ । ರೊತ್ತರಿಸಿಕೈವಾರಿಸಲುದಿಗು । ಭಿತ್ತಿಗಳನಾಕ್ರಮಿಸಿನಡೆದುದುಕೊಡೆಯುಡುಸೇನೆ ॥೪೭॥ ಮೊಳಗಿದವುನಿಸ್ಸಾಳಭೇರಿಗ । ಳಕೆಯಿಲ್ಲದಶಂಖಕಾಹಳಾ । ವಳಿಮೃದಂಗಮುಖಾನಕಂಗಳುಕೂಡಿಧರೆಬಿರಿಯೆ ॥ ಜಲಪತಾಕಚ್ಛತ್ರಚಮರಾ । ವಳಿಯಲಂಬರವಿಂಬುಗೆಡೆ । ಜ್ವಾಲಮಹಾವಿಭವದಲಿದನುಜಾರಾತಿಹೊರವಂಟ ॥೪೮॥ ನೂಕಿದವುದಂಡಿಗಳುಬಹಳಾ । ನೇಕಪಟಕುಟಿಕಂಬಟಂಗಳು । ಜೋಕೆಯಿಂದದಿವ್ಯಾಂಬರಾಭರಣಂಗಳಲಿಜತೆಯಿ ॥ ಲೋಕಮೋಹನಮದನಮಂತ್ರಾ । ನೀಕದೇವತೆಯರ್ನಪ್ರೌಢಬಲಾ । ನೀಕವಿದ್ದುದುಪಾರದರಿಜನದೊಡನೆವಿಭವದಲಿ ॥೪೯॥ ಹೊಳಹೊಳವದೊಂಬಿಸಿಲದೀಪ್ತಿಗೆ । ಥಳಥಳಪಕೈದುಗಳತೋಂನಲಿ । ಬಳದಹರಿಗೆಗಳೊಪ್ಪಗಳವ್ಹಣಿಮುಕುಟಕಾಂತಿಗಳ ॥ ಕಳಕಳದಬಹುಭದ್ರವಾದ್ಯಾ । ಗಳಲಿಮಿಗೆಕಲ್ಪಾಂತಕಾಲದ । ಜಲಧಿಮಸಗುವವೊಲುನಡದುದುಬಹಳದಸೇನೆ ॥೫೦॥ ಮಾಳಿಯನುತಾಗುತ್ತಮುನಿಹಿ । ಹಾಸುತಪರಿಜಾಗನುನವನು । ಪೇ

ಳುವೆನುಪಾಂಡವರಿಗಿದನಾನೆನುತಹರುಷದಲಿ || ಬೀಳುಕೊಂಡನುಕೃಷ್ಣನಂಘ್ರಿಯ | ಸಾಲಿಸುತಹೃದಯದಲಿನಿರ್ಜರ | ಜಾಲಕೈವಾರಿಸಲುಗಗನೇಚರರಮಾರ್ಗದಲಿ ||೫೧|| ಇತ್ತಲಸುರಾರಾತಿಕಳುಹಿದಾ | ನರ್ತಸೌರಾನೂಪದೇಶವ | ನುತ್ತರಿಸಿವಿಷಸನವನುಂನತಗಿರಿನದೀವನವ || ಮತ್ತೆವರಪಾಂಚಾಲಮತ್ಸ್ಯವ | ನತ್ತಲೇಹಿಂದಿರಿಸಿಬಂದನು | ತತ್ವನಿಧಿನಿತ್ಯಾತ್ಮನಿಂದ್ರಪ್ರಸ್ಥಪುರವರಕೆ || ... ... ||೫೨||

ಅಂತು ಸಂಧಿ ೭೮ಕ್ಕಂ ಪದನು ೩೩೫೮ಕ್ಕಂ ಮಂಗಳಮಸ್ತು.

ಎಪ್ಪತ್ತೊಂಭತ್ತನೆಯ ಸಂಧಿ.

———○() ರಾಜಸೂಯಾಧ್ವರ ಪ್ರಯತ್ನ. ()○———

ಸೂಚನೆ|| ರಾಜಸೂಯಮಖಾಗ್ರಪೂಜಾ | ರಾಜಿತಾಂಘ್ರಿಸರೋಜನೆಸದನು | ರಾಜರಾಜಾಧಿಕಮ
ಹಾವಿಭವದಲಿಮುರವೈರಿ || ... ...

ಪದನು || ತಂದೆಕೇಳೆಲೆಭೂಪನಿಂನವ | ರೊಂದುಭಾಗ್ಯದಬೆಳೆಶಿರಿಯನೇ | ನೆಂದುಬಂಣಿಸಬಹುದುಬಹಳವನೋಸುರಾಗದಲಿ || ಬಂದನಸುರಾರಾತಿದೂತರ | ವೃಂದಸುಳಿದುದುಮುಂದೆಕುಂತೀ | ನಂದನರನಗರಿಯನುಕೃಷ್ಣಾಗಮನವಾರ್ತೆಯಲಿ ||೧|| ಕೇಳಿದರುಪಾಂಡವರುಲಕ್ಷ್ಮೀ | ಲೋಲನಾಗಮನವನುಮುಳುಗಿದ | ವಾಲಿಗಳುತದ್ದರುಶನೋತ್ಸವದಧಿಕಹರುಷದಲಿ || ಓಲಗದಜನವೈದೆದೂತರ | ಮೇಲೆಬಿಸುಟರುವಸನಭೂಷಣ | ಜಾಲವನುನೃಪವಿಹಿತಸತ್ಕೃತಿಹೇಳಲರಿದಾಯ್ತು ||೨|| ಅರಸಿರಾಣಿಯರುಮುನಿಗಳಾವನ | ಚರಣನಖವನುನಿರ್ಮಳಾಂತಃ | ಕರಣದಲಿನಿಯಮೋತ್ಕರಾನ್ವಿತವರಸಮಾಧಿಯಲಿ || ಅರಸಿಬಂದನೆಳಂಮನಕಟಾ | ಕರುಣಿಗಳದಾತಾರನೆನುತಾ | ಧರಣಿಪತಿಪರಿಜನಸಹಿತಹೊರವಂಟನರಮನೆಯ ||೩|| ಮೊಳಗಿದವುಭೇರಿಗಳುಕಂನಡಿ | ಕಳಶರತುನದಸೊಡರತಳಿಗೆಯ | ಲಲನೆಯರುಕರಿತುರಗರಥಪತ್ತಿಗಳಸಂಕುಲದ || ಉಲಿವಮಾಗಧಸೂತವಂದಿಗ | ಳೊಳುನುಡಿಯುಗಾಯಕರಪಾಠಕ | ರೊಳಗೆವೈಯಿಕ್ಕುತ್ತಯಮನಂದನನುನಡೆತಂದ ||೪|| ದೂರದಿಂದಸುರಾಂತಕನಹೊಂ | ದೇರನೀಕ್ಷಿಸುತಶ್ರುಜಲದಲಿ | ಮೇರೆದಪ್ಪಿದವಕ್ಷಿಗಳುತನುಪುಳಕಭಾರದಲಿ || ಭಾರಿಸಿತುಮುಕುಳಿತಕರಾಂಜಲಿ | ಸೇರಿದವುಮಸ್ತಕಕೆಪಾಂಡವ | ಧಾರುಣೀಪತಿಬಂದುಕಂಡನುಕೃಷ್ಣನಂಘ್ರಿಗಳ ||೫|| ಇಕ್ಕಿದರುಕಾಣಿಕೆಗಳನುವೈ | ಯಿಕ್ಕಿದರುಪಾಂಡವರುಭೂಪರು | ಮಿಕ್ಕಮತ್ಸ್ಯನೃಪದಕೈಕೆಯಸೃಂಜಯಾದಿಗಳು || ಹೊಕ್ಕರೊಡಲನುಸಾಕಿದೇತಕೆ | ಮಕ್ಕಳಾಟಿಕೆಯೆನುತಮುರಹರ | ತೆಕ್ಕೆಗಳುತನುಜಡಿಯೆತೆಗದಪ್ಪಿದನುಪಾಂಡವರ ||೬|| ಉರದಲಪ್ಪಿಮುಕುಂದನಂಗದ | ಪರಿಮಳವನಾಘ್ರಾಣಿಸುತವೈ | ಮರೆದರಾಪಾಂಡವರುಪರಮಾಹ್ಲಾದಭಾರದಲಿ || ಶಿರಿಮೊಗವನೋಡುತ್ತಕಂಗಳು | ಕರಗಿದವುಬೇರೊಂದುವಿಷಯಾಂ | ತರವನರಿಯದೆಚಿತ್ತವೃತ್ತಿಮಹಾಮಹೀಶ್ವರರ ||೭|| ನೋಡಿನೋಡಿಮುಕುಂದನನುಮಿಗೆ | ಬಾಡಿದರುವನಿತೆಯರುಕಾಮನ | ಮೂಡಿಗೆಯಮುಸದಲಗಿನಂತಸ್ತಾಪವನ್ನಿಯಲಿ || ಬೇಡಿಕೊಂಡವತಾರವನುಸೆರೆ | ಮಾಡಿಸಿದಕಮಲಜನಸುಕೃತವ | ನಾಡಲೇಕದನೆನುತಲಿರ್ದುದುಕೋಡಿತಳತಂತ್ರ ||೮|| ಬೆರಸಿದರುಯಾದವರುಪಾಂಡವ | ರುರುಬಲಾಂಬುಧಿಮೊಳಗಿದವುದು | ರ್ಧರಮಹಾನಕಶಂಖಭೇರಿಮೃದಂಗಕಹಳೆಗಳು || ಸುರರುಸುರಿದರುಮೇಲೆಪುಷ್ಪದ | ಸರವಳೆಯಘೋರಂತೆಮಾಗಧ | ರುರುವಣಿಸಿಪಾಡಿದರುಪಾವನಚರಿತೆಗಳನೊಲಿದು ||೯|| ಕುಣಿವಹೊಗಳುವಹಾಡುವರತಿಂ | ಥಿಣಿನವೋಜಯವೆಂಬರವತಿಂ | ಥಿಣಿಮಹಾಸ್ತುತಿಪಾಠಕರತಿಂಥಿಣಿಜನಾಬ್ಧಿಯಲಿ || ಎಣಿಸಲರಿಯದಾಯ್ತಂಘ್ರಿಯುಗದಲಿ | ಮಣಿದುವೈಯಿಕ್ಕುವಜನದತಿಂ | ಥಿಣಿಮಹಾದ್ಭುತವಾಯ್ತುನೋಡುವಡಂದುಮೂಜಗಕೆ || ಬಂದುರಥದಲಿಬಳಿಕಕುಂತೀ | ನಂದನರಸಂಮೇಳದಲಿನಡೆ | ತಂದನಸುರಾರಾತಿಯುದ್ಧವಸಾತ್ಯಕಿಯಸಹಿತ || ವಂದಿಗಳಮಾಗಧರಸೂತರ | ವೃಂದದೊತ್ತೊತ್ತುಗಳಮುಂದಿಯ | ಸಂದಣಿಯಸಂಭ್ರಮದಲಿಂದ್ರಪ್ರಸ್ಥಪುರವರಕೆ ||೧೧|| ಹೊಳವಗುಡಿತೋರಣದಕಂನಡಿ | ಕಳಶದೀಪಾಂಕುರಫಲಾಕ್ಷತೆ | ಗಳಫಲಾನ್ವಿತಪೂಗಕದಳೀಪಲ್ಲವೇಕ್ಷುಗಳ || ಚಲುಪತಾಕಾನ್ವಿತವಿತಾನಾ | ವಳಿಯನಡೆಮುಡಿರಂಗವಲ್ಲಿಗಳ | ಹಲವುರಚನೆಯನೀಕ್ಷಿಸುತನಡೆತಂದನಸುರಾರಿ ||೧೨|| ಸಂದಣಿಸಿದುದುಮುಂದೆಹೊಸಹೊಂ | ನಂದಣಂಗಳನಿಖಿಳಯಾದವ | ವೃಂದವನಿತಾನಿವಹದಲಿಗೋವಿಂದನರಸಿಯರ || ಗೊಂದಣದದಂಡಿಗೆಗಳೈದಲು | ಮುಂದೆಪರಿಜನವಿದಿರುಗೊಳಲಾ | ನಂದದಲಿದನುಜಾರಿಹೊಕ್ಕನುಪಾಂಡವರಪುರವ ||೧೩|| ಬೀದಿಯಲಿತೆರಹಿಲ್ಲಜರಿದವು | ವೇದಿಗಳುಮನೆಗಳಲಿಸಂದಣಿ | ಯಾದುದಲ್ಲಿಯದಲ್ಲಿಮುಕುಳಿತಕರಸರೋಜದಲಿ || ಆದರಿಸುತಿರ್ದುದುದುರಂತದ | ಲೋದಧಿಜದರುಶನದಸರಮಾ | ಹ್ಲಾದದಲಿಮುಳುಗಾಡುತಿರ್ದುದುಸಕಲಜನನಿಕರ ||೧೪|| ಮಡದಿಯರುಕವಕದಲಿಮನೆಗಳ | ಸದರಿದರುಮಣಿ

ಮಾಡವದಿರಲು । ಗಡಣದಲಿಥರವಡದುನಿಂದುಗವಾಕ್ಷನಿಕರದಲಿ ॥ ಕುಡಿಕುಡಿದುಕಂಗಳಲಿಕೃಷ್ಣನ । ಕಡುಚೆಲುವಕಮ
ನೀಯಮೂರ್ತಿಯ । ಲೊಡಲಮರದರುಬಹಳಹರುಷೋತ್ಸವದಭಾರದಲಿ ॥ ೧೫ ॥ ಆಮಹಾವಿಭವವನುವನಿತಾ । ಸ್ತೋ
ಮವನುಗೋವಿಂದನೆಸವಮ । ಹಾಮಹತ್ವವನಖಿಳಲೋಕವಿಮೋಹನಾಕೃತಿಯು ॥ ಭಾಮೆಯರುನೋಡುತ್ತವರಸುವ ।
ನೋಮಹಾನ್ಸೃಷ್ಟಿಯನುಕರವ್ರತ । ಕಾಮಪರವಶತೆಯಲಿಮರದರುಲೋಕವಿಭ್ರಮವ ॥ ೧೬ ॥ ಮುತ್ತುಮಾಣಿಕಗಳನು
ಕಾಣಿಕೆ । ಇತ್ತುಮಿಗೆಕಾಲ್ಗೆರಗಿಜೀಯೆನು । ತ್ತೊತ್ತರಿಸಿಕೆಲಸರಿವಪಟ್ಟಣಗಾರರೋಲಗಡ ॥ ಮೊತ್ತದಾಪುರಜನದದರುಶನ ।
ದತ್ಯಧಿಕಪೂಜೆಯನುಕೈಕೊಳು । ತುತ್ತಮಾಮಳಕೀರ್ತಿಬಿಜಯಂಗೈದನರಮನೆಗೆ ॥ ೧೭ ॥ ಪುರಜನವಪರಿಜನವನಾಕಡು ।
ಗರುಣಿಕಾಣಿಸಿಕೊಳುತಸತಿಯರ । ನೆರವಿಯನುನೋಡುತ್ತಸುಸ್ಮಿತಮೃದುಕಟಾಕ್ಷದಲಿ ॥ ಹರಿಸುತವರಮನಂಗಳನುಮಂ ।
ದಿರದಲಿಳಿದನುರಥವನರಸಿಯ । ರುರುನಿವಾಳಿಯಕೈಕೊಳುತಹೊಕ್ಕನುನೃಪಾಲಯವ ॥ ೧೮ ॥ ನಿಲಿಸಿನಿಜಪರಿವಾರವನು
ನೃಪ । ಕುಲವನಾಪರಿಜನವನೊಪ್ಪುವ । ನಿಳಯದಲಿಬೀಡಾರವನುಸಂವರಣೆಯನುಕೊಡಿಸಿ ॥ ಬಳಿಕಮುರರಿಪುರಾಣಿವಾ
ಸದ । ಲಲನೆಯರುಸಹಿತಾಯುಧಿಷ್ಠಿರ । ನಲಘುಮಣಿಮಯ ಮಂದಿರಂಗಳಹೊಕ್ಕನಸುರಾರಿ ॥ ೧೯ ॥ ಹೊಳವರತ್ನ
ಸ್ತಂಭಮುಕ್ತಾ । ವಳಿಯಮೇಲ್ಕಟ್ಟುಗಳಹರಿತೋ । ಪಲದನೆಲಗಟ್ಟುಗಳಗೋಮೇಧಿಕದಗೋಡೆಗಳ ॥ ತೊಳಪವಜ್ರ
ಕವಾಟಶೃಂಖಲೆ । ಗಳಮಹಾದ್ಯುತಿರತ್ನದೀಪಾ । ವಳಿಯಕಾಂತಿಯಲೆಸೆವಭವನವಹೊಕ್ಕನಸುರಾರಿ ॥ ೨೦ ॥ ಮನೆಗೆ
ಬಿಜಯಂಗೈಸಿತಂದಾ । ದನುಜಹರನನುನೃಪತಿಪೂಜಿಸು । ವನುಪಮರದನುಬಹಳನಿಜಕೃತಕೃತ್ಯಭಾವದಲಿ ॥ ನೆನವಸನಕ
ಸನಂದನಾದ್ಯರ । ಮನಕೆಮೈಗೊಡದಾಮಹಾಮಹಿ । ಮನನದಾವಂಗದಲಿಪೂಜಿಪೆನೆನುತಸಂಭ್ರಮಿಸಿ ॥ ೨೧ ॥ ಬಂದುಕುಂತೀದೇ
ವಿಪರಮಾ । ನಂದದಲಿತೆಗದಪ್ಪಿದಳುಗೋ । ವಿಂದನನುಕಾಲ್ಗೆರಗಲಧಿಕಮನೋನುರಾಗದಲಿ ॥ ಇಂದುಮುಖಿದ್ರೌಪದಿಸುಭ
ದ್ರೆಯು । ರಂದುಕಳೆವಾಗಿದರುಕೃಷ್ಣನ । ವಂದ್ಯಚರಣಂಗಳಿಗೆಸಂಭಾವಿಸಿದರರಸಿಯರು ॥ ೨೨ ॥ ಏನನೆಂಬೆನುಪಾಂಡವರಸಂ ।
ಮಾನವನುತದ್ವನಿತೆಯರುಹರು । ಷಾನುರಂಜಿತಮನದಹರುಷೋತ್ಸವದಸಂಭ್ರಮವ ॥ ದಾನವಾಂತಕನನಿಬರನುಸ । ನ್ಮಾನಿ
ಸುತಕರಕರದುದಿವ್ಯವ । ರಾನುಲೇಪನವಸನಭೂಷಣಗಳಲಿಮನ್ನಿಸಿದ ॥ ೨೩ ॥ ನೋಡಿದಣಿಯರುಕೃಷ್ಣನನುನೆರೆ । ಮಾಡಿ
ದಣಿಯರುಸೇವೆಯನುಮಾ । ತಾಡಿದಣಿಯನುನೃಪತಿಮಧುರಪ್ರೇಮಸೂಕ್ತಿಯಲಿ ॥ ಮಾಡಿದಣಿಯನುತನುಮನಂಗಳ । ಜೋ
ಡಿಗಳರೆಯಂಮಿನಲಿಮಿಗೆತೂ । ಗಾಡಿದಣಿಯನುಮೌಳಿಮಣಿಯನುನಿಜಕೃತಾರ್ಥತೆಗೆ ॥ ೨೪ ॥ ಸೊಸೆಯರೊಡನಾಕುಂತಿ
ಕೃಷ್ಣನ । ಶಶಿಮುಖೀನಿವಹವನುಸಂಭಾ । ವಿಸಲುದಿವ್ಯಾಂಬರವಿಭೂಷಣಗಂಧಮಾಲ್ಯದಲಿ ॥ ಬೆಸಸಿದಳುಪರಿಜನವನೆಲ್ಲರ ।
ನೊಸದುಸರ್ವಾಂಗದಲಿಪಾಂಡವ । ವಸುಮತೀಪತಿಮನ್ನಿಸುತ್ತಿರ್ದನುಸರಾಗದಲಿ ॥ ೨೫ ॥ ದಿನದಿನಕೆಹೊಸಪರಿಗಳಲಿಭೋ ।
ಜನವಸನಮಣಿಭೂಷಣಂಗಳ । ಲನುಪಮನಸತ್ಕರಿಸಿದಣಿಯರುಯಾದವೋತ್ತಮರ ॥ ದನುಜಹರನಂತಾಯುಧಿಷ್ಠಿರ । ಜನ
ಪನನುರಾಗೋಪಲಾಲಿತ । ಘನತರಪ್ರೀತಿಯನುಸಲಿಸುತ್ತಿರ್ದನೊಲವಿನಲಿ ॥ ೨೬ ॥ ಸಂದವೀಪರಿಕೆಲವುದಿನಸಾ । ನಂದದಲಿ
ಮೈಮರದಪ್ರೋಲುಮು । ಕುಂದನೊಡನೆಯಖೇಳಮೇಳದಲಾನೃಪಾಲರಿಗೆ ॥ ಒಂದುದಿನನೆರೆಖಿಳರಾಯರ । ವೃಂದದೊಡ್ಡೋ
ಲಗದಲೇನೈ । ತಂದೆಕರಸಿದೆತನ್ನನೆಂದನುನಗುತಮುರವೈರಿ ॥ ೨೭ ॥ ಕೇಳುತೆದ್ದನುನೃಪತಿಮುಕುಟದ । ಮೇಲೆಕರಪುಟವೆಸೆ
ಯೆಲಕ್ಷ್ಮೀ । ಲೋಲನಂಘ್ರಿಗೆನಮಿಸಿವಿನಯದಲಂದುಕೈಮುಗಿದು ॥ ಹೇಳಲರಿಯೆನುಕೃಷ್ಣಪೂರ್ವನೃ । ಪಾಲರಿಂಗಿಲ್ಲದಮ
ನೋರಥ । ಮಾಳಿಗೊಂಡುದಲೈನಿಜಾಂತರ್ಮನವನಿದನೆಂದ ॥ ೨೮ ॥ ಕರಸಿದೆನುಬಪ್ಪಂಗೆಸೇರದು । ಸುರಪನೋಲಗದಿರವು

ಧರ್ಮಜನ ರಾಜಸೂಯ — ಜರಾಸಂಧ ವಧೆ.

ಗಡಮುನಿ । ವರನನುಡಿದಿಬರಾಜಸೂಯಾಧ್ವರವಮಾಡಿದರೆ ॥ ದೊರಕುವುದುಗಡಮವದಲಂಗೀ । ಕರಿಸಿದೆನುಸಂಕಲ್ಪನಿಂಮ
ಡಿ । ಕರುಣಿಸೂದೆನಗೆನುತತಲೆವಾಗಿದನುಹರಿಪದಕೆ ॥ ೨೯ ॥ ಅವುದರಿದೆಲೆಕೃಷ್ಣನಿಜಪದ । ಸೇವಕರಿಗಿದುಘನವೆನೋಡಲಿ ।
ದೇವದಾನವಮಾನವರುನಿಂನವರಸಾಹಸವ ॥ ದೇವಕರುಣಿಸಬೇಹುದೆನುತಾ । ಭೂವರನುತಲೆವಾಗಿರಲುರಾ । ಜೀವನಾಭ
ನುನಗುತನೆಗಹಿದನವನಿಪನಶಿರವ ॥ ೩೦ ॥ ತಂದೆಕೇಳೆಂನಸುಮಯೇಳೇ । ನೆಂದುನುಡಿದೆವೃಥಾಪೃಥಙ್ಮತಿ । ಯಿಂದಿದೇನುಪ
ಚಾರವೇಸಾಕೆನುತತೆಗದಪ್ಪಿ ॥ ಸಂದುದೀಸಂಕಲ್ಪವೆಂನಾ । ನಂದನಿಧಿಗಾನಿಹೆನುಸಾಕದ । ನೆಂದುಬೊಳ್ಳೈಸಿದನುಭೂಪನನೊಲಿ
ದುಮೈದಡವಿ ॥ ೩೧ ॥ ಎಂನಭಕ್ತರನಭಿಭವಿಸುವಧಿ । ಕೋಂನತಿಯದಾರಿಂಗೆಬಹಳಗು । ಣಾರ್ಣವನೆತೇಜೋವಿಶೇಷಯ
ಶೋವಿಭೂತಿಯಲಿ ॥ ನಿಂನವಶವರ್ತಿಗಳಮಾಳ್ಪನು । ಪಂನಗಾಭರಣಾದಿದಿವಿಜರ । ನಿಂನುಳಿದಪಾರ್ಥಿವರಮಾತ್ರೇಕೆಂದನಸು
ರಾರಿ ॥ ೩೨ ॥ ಏನರಿದುನಿನಗರಸನಿಂನಾ । ಧೀನದಲಿತಾನಿರಲುಕಳುಹುನಿ । ಜಾನುಚರರೆಲ್ಲರನುದಿಗ್ವಿಜಯಕ್ಕೆಬೇಗದಲಿ ॥
ಆನಲಿರಿಪುದುನಯಗುಣಗಸಂ । ಧಾನವೃಕ್ಷದಿಧನವನವರ । ಸ್ಥಾನಮಾನವನುಳುಹಿಕೊಂಬುದುನೀತಿನೆನುಗೆಂದ ॥ ೩೩ ॥

ಎನೆಹಸಾದವೆನುತ್ತಕರಸಿದ । ನನುಜರನುಸಹದೇವಸೃಂಜಯು । ರನುಸರಾಗದಲಟ್ಟಿದನುದಕ್ಷಿಣದಿಶಾವರಕೆ ॥ ವಿನುತನಕುಲನ
ಪಡುವದೆಸೆಗೆ । ರ್ಜುನನನುತ್ತರದೆಸೆಗೆಭೀಮನ । ನನಿಮಿಷೇಂದ್ರನದೆಸೆಗೆಕೇಕಯಮಾದ್ರಯರುಸಹಿತ ॥೩೪॥ ಗೆಲಿದುದಿಕ್ಚ
ಕ್ರವನುತೋರಿದ । ರಲಘುಧನವನುನೃಪತಿಗೊಂದಾ । ಯ್ತಳಬುಮಗಧನೃಪಾಲನನುಗೆಲಲರಿಯದವನಿಪಗೆ ॥ ಬಳಿಕಕೃಷ್ಣಾ
ರ್ಜುನವೃಕೋದರ । ರೊಳಗುವಮಾಡಿಧರಾಮರಾಂಗದ । ಬಳಿಕೆಯಲಿಬೇಡಿದರುರಣವನುಕಾದಿದನುಭೀಮ ॥೩೫॥ ಕೊಂದ
ನವನನುಭೀಮನಾಗೋ । ವಿಂದನಂಘ್ರಿಯಸನ್ನಿಧಿಯಬಲ । ದಿಂದತೋರಿದಸಂಜ್ಞೆಯಲಿಸಹದೇವನನುನೃಪನ ॥ ನಂದನನನಲ್ಲಿ
ರಿಸಿಭೂಪರ । ವೃಂದನಾಯಕನನುನೋಡಲು । ಮಾದಿರವನಸುರಾರಿಹೊಕ್ಕನುಮಗಧಭೂಮಿಪನ ॥೩೬॥ ಮಲಿನದೇಹದ
ಮಾಸಿಕೆದರಿದ । ತಲೆಯಜೀರ್ಣಾಂಬರದಬೀಣಿದ । ಗಳದಕೃಶತರಗಾತ್ರದ ತಗಿದಹಸಿವುತೃಷೆಗಳಲಿ ॥ ಜ್ವಲಿಸುವೊಡಲಿನಜೋಲ್ವ
ವ್ಯಗಳ । ಸುಲಿವಡದಕಾಂತಿಗಳಮುಸಡಿನ । ಲಿಳಿವನಯನಾಂಬುಗಳನೃಪರನುಕಂಡನಸುರಾರಿ ॥೩೭॥ ನೋಡಿತಲೆದೂಗಿ
ದನಿದೆತ್ತಣ । ಕೇಡುನೃಪರಿಂಗಾಯ್ತುಹರಹರ । ರೂಢಿಗಚ್ಚರಿಯೆನುತಮಿಗೆಕಾರುಣ್ಯದೃಷ್ಟಿಯಲಿ ॥ ಮಾಡಿದನನುಗ್ರಹವನರ್ಥಿ
ಸಿ । ಬೇಡಿಮುನಿಗಳುಕಾಣಲರಿಯದ । ಗೂಢನಿರ್ಜರಮೂರ್ತಿಯನುತೋರಿದನೃಪಾಲರಿಗೆ ॥೩೮॥ ಲಲಿತಮುಕ್ತಾಹಾರ
ಮಣಿಕುಂ । ಡಲಕಿರೀಟಮಣಿಪ್ರಭಾಮಂ । ಡಲಮನೋಜ್ಞಾಂಗದಲಿರಾಜಿತವರಚತುರ್ಭುಜದ ॥ ಹೊಳವನಯನಾಪಾಂಗ
ಭಂಗೋ । ಜ್ವಲಕಟಾಕ್ಷದಸುಸ್ಮಿತಾಮೃತ । ಕಲಿತವದನದಕಮಲನಯನನಕಂಡರವನಿಪರು ॥೩೯॥ ಧಟ್ಟಗೆಡದರುನೃಪವ
ರರುಸಾ । ಲಿಟ್ಟಸಾಷ್ಟಾಂಗದಲಿಹರಿಪದ । ವಿಷ್ಟರಕೆಜಯಜಯನವೋಜಯಕೃಷ್ಣಜಯಯೆನುತ ॥ ದೃಷ್ಟಿಗಳುನೆರೆದಣಿಯೆ
ನೋಡಿದ । ರಷ್ಟಭೂತಿಗಳೊಡೆಯನನುಮರ । ವಿಟ್ಟರೋಲಂತಾಲಿಸುತತನ್ಮೂರ್ತಿಗುಣಗಣವ ॥೪೦॥ ಬಾಡಿದುತ್ಪಲವನದೆ
ಡೆಗೆಶಶಿ । ಮೂಡಿಬಂದಂತಾಯ್ತುಸೆರೆವನೆ । ಕೂಡೆಮಂಗಳವಾಯ್ತುನಿರ್ಬಂಧನದಸಂಕ್ಲೇಶ ॥ ಓಡಿದುದುನೃಪರಿಂಗೆತನುಬಲ ।
ಕೂಡಿದುದುಬಡತನವಿಗಳಿಂಗಾ । ಷಾಢಕಾಲನವೃಷ್ಟಿಪುಷ್ಟಿಯನೀವತೆರನಾಯ್ತು ॥೪೧॥ ಧನ್ಯರಾದೆವುಕೃಷ್ಣಬಹಳಕೃ । ಪಾರ್ಣ
ವನೆನಿನ್ನೀಸುರಾವಳಿ । ದುರ್ನಿರೀಕ್ಷ್ಯವೆನಿಪ್ಪಚರಣಾಂಭೋಜವನುಕಂಡು ॥ ಮಾನ್ಯನೆಮಗೀಮಗಧನೃಪತಿದು । ರನ್ವಯವೆ
ನಿಪ್ಪೀಭವತ್ಪದ । ಸನ್ನಿಧಿಯತೋರಿಪದನೆಂದರುನೃಪರುಕೈಮುಗಿದು ॥೪೨॥ ಅಲ್ಲದಡೆರಾಜ್ಯಾಂಧರೆತ್ತಲು । ವಲ್ಲಭನೆನಿನ್ನಮಳ
ಪದಯುಗ । ಪಲ್ಲವದದರುಶನವಿದೆತ್ತಲುಮೂಢಮತಿಗಳಿಗೆ ॥ ಬಲ್ಲೆವಿನ್ನೀರಾಜ್ಯಪದವಿಯು । ನೊಲ್ಲೆವಮರಾಧೀಶಪದವಿಯು ।
ನೊಲ್ಲೆವೇನುವನೀವುದೀನಿಜದಾಸ್ಯವನುತಮಗೆ ॥೪೩॥ ಎಂದುನಿಜಚರಣಾರವಿಂದ । ದ್ವಂದ್ವದಲಿಮೈಯಿಕ್ಕಿಭೂಪರ । ವೃಂದ
ಹೊಗಳುತ್ತಿರಲುಜಯರವಸಂಸ್ತವಂಗಳಲಿ ॥ ಮಂದಹಾಸದಲನಿಬರನುಗೋ । ವಿಂದನೆತ್ತಿದನಾಮಗಧನೃಪ । ನಂದನಗೆನೇಮಿಸಿ
ದನುಪಚರಿಸೆಂದುಭೂಮಿಪರ ॥೪೪॥ ಎನೆಹಸಾದವೆನುತ್ತವರನು । ಜ್ಜನವಿಭೂಷಣವಿನಯದನುಲೇ । ಪನವರಾಂಬರದಿವ್ಯರ
ತ್ನಾವಳಿಯನೊಲಿದಿತ್ತು ॥ ಜನಪರನುಸತ್ಕರಿಸಿದನುಸದು । ವಿನಯದಲಿಸಹದೇವನೊಪ್ಪಿರೆ । ದನುಜಹರನಾಜ್ಞೆಯಲಿರಾಜೋ
ಚಿತವಿಹಾರದಲಿ ॥೪೫॥ ಬಳಿಕಮಣಿಮಯರಥಗಳನುನೃಪ । ಕುಲವನೇರಿಸಿಸತ್ಕರಿಸಿಮುನಿ । ಕುಲಮನೋಂಬುಜಹಂಸ
ನೊಲಿದುಮನೋನುರಾಗದಲಿ ॥ ವಿಳಸದಮಳಛತ್ರಚಮರಾ । ವಳಿಸಹಿತವಿಭವದಲಿಕರುಣಾ । ಜಲಧಿತಾಮುಂದಿಟ್ಟುಕಳುಹಿ
ದನಾಮಹೀಶ್ವರರ ॥೪೬॥ ಅಂಜದಿರಿನಾವಿರಿಸಿದಂತಿಹು । ದೇಂಜಲಿಸಬೇಕೆಕಟಭವಮನು । ಮಂಜಿನುರವಣೆಯೆಂದುಮನದೊ
ಳಗರಿತಿಹುದುಸಿರಿಯು ॥ ರಂಜಿಸುವರಾಜ್ಯೋಪಭೋಗಕೆ । ಮಂಜರಗಹಾಸದಿರಿನತಪವಿ । ಪಂಜರನುತಾನೆನ್ನಭಕ್ತರಿಗಿಲ್ಲಭ
ಯವೆಂದ ॥೪೭॥ ಒಡಲುತಾನೆಲ್ಲಿರ್ದಡೇನಿದು । ಜಡವಲಾಮನದೊಳಗೆತನ್ನನು । ಬಿಡದೆಭಾವಿಸುತಿಹುದುಕೀರ್ತಿಸುತೆನ್ನಗು
ಣಗಣವ ॥ ಒಡನಿಹೆನುತಾನವರಿಗೆನುತಾ । ಪ್ಪುಡದಕಾರುಣ್ಯದಲಿತಾಕಿರಿ । ದೆಡೆಯಕಳುಹಿಕೃಪಾಜಲಧಿಮರಳಿದನುನೃಪಕು
ಲವ ॥೪೮॥ ಅತ್ತಲಾನೃಪಕಟಕಧರೆಕೆ । ತ್ತಿತ್ತಿನಡೆದಂದದಲಿನಡದುದು । ಮತ್ತಗಜರಥತುರಗನಿಕರಂಗಳಲಿಮನದೊಳಗೆ ॥ ಉ
ತ್ತಮಶ್ಲೋಕನನುಬಿಡದಿ । ಪ್ಪತ್ತುಸಾವಿರದೆಂಟುನೂರ್ವರು । ಕೀರ್ತಿಸುತತಂತಮ್ಮರಾಜ್ಯಂಗಳಿಗೆನಲವಿನಲಿ ॥೪೯॥ ಬಳಿಕ
ಮಾಗಧರಾಜ್ಯವನುಕೈ । ಗೊಳಿಸಿಸಹದೇವಂಗೆಪವನಜ । ಫಲುಗುಣರುಸಹಿತೊಲಿದುಶಕ್ರಪ್ರಸ್ಥಪುರವರಕೆ ॥ ನಳಿನನಾಭನುಬ
ರುತಶಂಖವ । ಮೊಳಗಿಸಿದನಾಧರ್ಮನಂದನ । ನಳಲನಾರಿಸುವಂತೆಭುವನಾವಳಿಗಳಚ್ಚರಿಯೆ ॥೫೦॥ ಕೇಳಿಶಂಖಧ್ವನಿಯನವನೀ ।
ಪಾಲಮುಖ್ಯರುಮಗಧಪೃಥ್ವೀ । ಪಾಲನವಸಾನವನುನಿಶ್ಚೈಸಿದರುಮನದೊಳಗೆ ॥ ತೂಗಿದುದುತನುಪುಳಕಸಮ್ಮದ । ದೇಳಿ
ಗೆಯುಬ್ಬೆಬಂದುತನ್ನಯ । ಕಾಲಿಗೆರಗಿಹಲಪ್ಪಿದನುಕೃಷ್ಣಾರ್ಜುನಾನುಜರ ॥೫೧॥ ಅವನಿಪತಿಗರುಹಿದರುಬಳಿಕಾ । ಹವದಹದನ
ನುಕೇಳುತದ್ದನು । ನವರಸಾಮೃತಪುಳಕಪೂರದಲರಸನಡಿಗಡಿಗೆ ॥ ವಿವರಿಸುವಡರಿದಾಯ್ತುನೃಪನು । ತ್ಸವದಭಾರಣೆನುಡಿಗಳ
ಡಗಿದ । ವನಿತಳಾಶ್ರುನಿರೂಢಕಂಠದಲರಸಕೇಳೆಂದ ॥೫೨॥ ನೆರಹಿದಧನವನುಧರಾಧೀ । ಶ್ವರರುತಲೆಯೊರೆಯಿತ್ತುಭಂ

ಡಿಗೆ । ಳುರವಣಿಸಿನೂಕಿದವ್ರುಪುರದಲಿಪಾಂಡುನಂದನರೆ ॥ ನೆರದುದಗಣಿತಭೂಪರಗಣಿತ । ಧರಣಿಯುಮರರುವೈಶ್ಯಶೂದ್ರೋ । ತ್ತರಜನಸಂದೋಹವಿಂದ್ರಪ್ರಸ್ಥಪುರವರಕೆ ॥ ೫೩ ॥ ಋತ್ವಿಜರುಯಜ್ಞಾಂಗಭೂಮಿಯು । ನುತ್ತರಿಸವಸುವರ್ಣಹಲದಲಿ । ವಿಸ್ತರಿಸಿವೈದಿಕವಿಧಾನದಲಗ್ನಿಹೋತ್ರವನು ॥ ಉತ್ತಮಾಧ್ವರದೀಕ್ಷೆಯನುಕೈ । ವರ್ತಿಸಿದರವನಿಪಸರರಿಗೆ । ತುತ್ತನೀಡಿದ ರನಲಮುಖದಲಿಮಂತ್ರಕೋವಿದರು ॥ ೫೪ ॥ ಬಂದರಜಭವಸುರಮುನೀಂದ್ರರು । ರಂದರಾದ್ಯರುಸನಕಭೃಗುಸಾ । ನಂದ ನಾದಿಸಮಸ್ತಕಲ್ಪನಿವಾಸಿಗಳುಸಹಿತ ॥ ಸಂದವಿದ್ಯಾಧರಮಹೋರಗ । ವೃಂದವರಗಂಧರ್ವಕಿಂನರ । ವೃಂದಪೂರ್ವಶಿರಂಭೆಮೊ ದಲಾದಪ್ಸರೋನಿಕರ ॥ ೫೫ ॥ ಕೌರವರುಸೃಂಜಯರುಕೇಕಯ । ವೀರಮತ್ಸ್ಯದ್ರುಪದಮಾದ್ರಮ । ಹೀರಮಣಕೌಸಲವಿ ದರ್ಭವಂತಿಚೇದಿಪರು ॥ ಧಾರುಣೀಪತಿಗಳುತದೀಯಕು । ಮಾರರಾಣೀವಾಸದಂದಣ । ಪೋರಣಿಸಿದವುಯಜ್ಞಶಾಲೆಯುಲಿ ಮಹೀಶ್ವರನ ॥ ೫೬ ॥ ಚ್ಯವನಗಾರ್ಗ್ಯವಶಿಷ್ಠಕುಂಭೋ । ದ್ಭವಪರಾಶರಗಾಧಿತನುಸಂ । ಭವಪುಲಸ್ತ್ಯಕ್ರತುಶತಾನಂದಾ ಸಿತವ್ರತರು ॥ ಕವಶಮುದ್ಗಲಕಣ್ವಭೃಗುಗಾ । ಲವಸುಮಂತಸುಹೋತ್ರಪೈಲ । ಪ್ರವರಮುನಿಕುಲಸಂಗಣಿಸಿದುದುಯಜ್ಞಶಾ ಲೆಯುಲಿ ॥ ೫೭ ॥ ರಾಯಭಾರ್ಗವರಾಮಮಾರ್ಕಂ । ಡೇಯನಾರದರೇಕತದ್ವೈ । ಪಾಯನಾಸಿತಮುನಿಭರದ್ವಾಜಾಂಗಿರಾ ದಿಗಳು ॥ ಆಯಶೋನಿಧಿಧೌಮ್ಯವೈಶಂ । ಪಾಯನಾತ್ರಿಯುಕಾಶ್ಯಪಾದ್ಯರು । ರಾಯನಧ್ವರದೊಳಗೆರಂಜಿಸಿದರುಮಹತ್ತ ಮರು ॥ ೫೮ ॥ ಆಮಹಾಸಭೆಯೊಳಗೆಪಾಂಡವ । ಭೂಮಿಪತಿಕೊಡಲಗ್ರಪೂಜೆಯ । ನಾಮಹಾವರಮಾನಿನ್ನೃಪಾಲರೊಳ್ಯಾ ರುಯೋಗ್ಯರೆನೆ ॥ ಶ್ರೀಮನೋರಮಕೃಷ್ಣನಮರ । ಸ್ತೋಮವಂದಿತನಿರಲುಭುವನ । ಸ್ತೋಮಪಾಲಿಬೇರಾರೆನುತಸಾರಿ ದನುಸಹದೇವ ॥ ೫೯ ॥ ಅಹುದಲೈಸಹದೇವಯೆನುತಾ । ಬಹಳಸುರವರನಿವಹವರಸಂ । ನಿಹಿತಬಹಳಸಾಧ್ವಜನಕೊಂಡಾ ಡಿದರುಬಿಡದೆ ॥ ವಿಹಿತಸತ್ಕಾರದಲಿಕೃಷ್ಣನ । ಮಹಿತಚರಣವತೊಳೆದುಪಾಂಡವ । ಮಹಿಪನಿತ್ತನುಪೂಜೆಯನುನಿತ್ಯಾತ್ಮ ನಂಪ್ರಿಯಲಿ ॥ ... ... ॥ ೬೦ ॥

ಅಂತು ಸಂಧಿ ೭೯ಕ್ಕಂ ಪದನು ೪೪೬೪ಕ್ಕಂ ಮಂಗಳಮಸ್ತು

ಎಂಭತ್ತನೆಯ ಸಂಧಿ.

—o() ಶಿಶುಪಾಲನ ಮುಕ್ತಿ. ()o—

ಸೂಚನೆ ॥ ಶರಣಸಂಸಾರಿಕನುತಾನೆಂ । ಬುರುತರಾಶ್ಚರ್ಯವನುಗುಣವಿ । ಸ್ತರವಮೆರದನುಪಾಂಡುಸು
ತರಲಿದಾನವಧ್ವಂಸಿ ॥ ... ...

ಪದನು ॥ ಅರಸಕೇಳಾರಾಜಸೂಯಾ । ಧ್ವರದಖಿನಿಯೋಗವನುಪಾಂಡವ । ಧರಣಿಪಾಲರುಮಾಳ್ಪಪರಿಪರಿಯಾವಿಧಾ ನವನು ॥ ವರವಿಭೂಷಣಗಂಧದಿವ್ಯಾಂ । ಬರವನೀವಧಿಕಾರದ್ರುಪದನ । ಪುರುಮಹಾಸನದೊಡೆತನವದಾಭೀಮಸೇನನದು ॥ ಕನಕಗೃಹದೀಶತ್ವದುರ್ಯೋ । ಧನಗೆಸಭ್ಯರಪೂಜೆಸಹದೇ । ವನದುಬಹಳದ್ರವ್ಯಸಾಧಕಕರ್ಮನಕುಲನದು ॥ ಮುನಿವರರಶು ಶ್ರೂಷೆಯಿರವ । ರ್ಜುನಗೆವಿಪ್ರವರಾಂಘ್ರಿಯುವನೇ । ಜನದಕೆಲಸಕೆಕೃಷ್ಣನಾದನುಭೂಪಕೇಳೆಂದ ॥ ೧ ॥ ಮಾನಿಸುತದಾನವ ನುಮಾಳ್ಪುದು । ಕರ್ಣನದುಃಶಾಸನಾದಿವಿ । ಕರ್ಣಮುಖ್ಯರುವಿದುರಕೃತವರ್ಮಾದಿಯಾದವರು ॥ ಮುಂನವೇತವತವೆಗೆನೃ ಪವರ । ರುಂನತಾಧ್ವರಕೃತ್ಯದಲಿಸಂ । ಪಂನಸೌಹಾರ್ದದಲಿವರ್ತಿಸುತಿರ್ದುದಖಿಳಜನ ॥ ೨ ॥ ಆವಿಬುಧಮುನಿವರಸಹಸ್ರಜ । ನಾವಳಿಯನುಚಿತೋಕ್ತಿಯಲಿಸಂ । ಭಾವಿಸಿದನುರುಕನಕವಸನಾಭರಣನಿಕರದಲಿ ॥ ಭೂವರನಬಹಳಾಧ್ವರಾಂಗಕೆ । ಜೀವ ಭೂತನುಕೃಷ್ಣನೆನಲಿ । ಸ್ನಾಪುದರಿದೆನುತಿರ್ದುದಖಿಳಾಮರಮುನಿಸ್ತೋಮ ॥ ೩ ॥ ಭದ್ರಮುಖವಿಭವದಲಿಭುವನಜ । ತುರ್ದ ಶದಜನದಣಿದುದೊಲಿದುಜ । ನಾರ್ದನನೆಕೊಡಲಗ್ರಪೂಜೆಯನದನುಕಾಣುತ್ತ ॥ ಎದ್ದನಾಶಿಶುಪಾಲನೇರಿದ । ಗದ್ದುಗೆಯನೊಡೆ ಹೆಯ್ದುವಿಸಾಸೆಯು । ಶಿದ್ದಿನಿಂದನುನುಡಿದಸಾಸಭೆಯೊಳಗೆಕೈನೆಗಹಿ ॥ ೫ ॥ ಕೇಳದಿರೆನೆರದಖಿಳಪೃಥ್ವೀ । ಪಾಲರೀಸಹದೇವ ನಾಡಿದ । ಬಾಲಭಾಷಿತವನುಯುಧಿಷ್ಠಿರನೃಪನಮುಷ್ಕೃತವ ॥ ಆಲಿಸಿದಿರ್ದವರಮುಖಕೆಗೋ । ಪಾಲನಾದನುಪೂಜ್ಯನಿದಕನು । ಕೂಲರಾದಿರೆನೀವೆನುತನಿಂದಿಸಿದನಾಚೈದ್ಯ ॥ ೬ ॥ ತರಳನೀಸಹದೇವನೊಲಿದಾ । ದರಿಸಿದರೆಗೋಪನನುಹರಹರ । ಹಿರಿಯರಿ ಗೆಮತಿಗೇಕೆಪಲ್ಲಟವಾಯ್ತುಕೃಷ್ಣನಲಿ ॥ ಹರಿಕೊಳುತಿದೆಜನನಿಕರಕಾ । ಹುರದನೇವಿಯದಂತಿರಲಿಮುನಿ । ಪರರುಮುಗ್ಧರೆ ನೀವಿದಕೆನಂಕೈಸಲೇಕೆಂದ ॥ ೭ ॥ ಈರುಷಿಗಳೀವಿಪ್ರವರರೀ । ಭೂರಮಣರೀಸಕಲವಿದ್ಯಾ । ಪಾರದರುಶಿಗಳೀಸಮಾಗತ ಲೋಕಪಾಲಕರು ॥ ಸಾರತರಸಂಯಮತಪೋವ್ರತ । ಧಾರಿಗಳುನೆರದಿರಲುಗೋಪೀ । ಜಾರನಲಿವಂದ್ಯಾಭಿಮಾನವಿಶಿಷ್ಟತಾ ಯುಂದ ॥ ೮ ॥ ಧರೆಯಪುಣ್ಯಸ್ಥಳಗಳನುಪರಿ । ಹರಿಸಿಪುಣ್ಯಕ್ಷೇತ್ರವನುಸಾ । ಗರದೊಳಗೆಮನೆಮಾಡಿಕೊಲುವನುದಸ್ಯು

ಮರ್ಗದಲಿ || ಧರಣಿಪರನಭಿಭವಿಸಿಪಾಪಾ | ಚರಿತದಲಿನಡೆವವನುರಾಜಾ | ಧ್ವರಕೆಯೋಗ್ಯನೆಹರಹರಾದ್ಭುತವಾಯ್ತು ತನ
ಂದ ||೯|| ಹೀನಕುಲಸಂಜಾತನಾಶ್ರಮ | ಹೀನನಮಳಕ್ಷತ್ರಧರ್ಮವಿ | ಹೀನನಿಹಪರಲೋಕಗತಿಮತಿಹೀನಗುಣಹೀ
|| ಹೀನನಾಚಾರದಲಿಸುಕೃತವಿ | ಹೀನನುರುತರಬಾಹುಸತ್ವವಿ | ಹೀನಗೇನೆಂದಿತ್ತರಗ್ರಾರ್ಪಣವನಿದನೆಂದ ||೧೦||
ನುತಿರಲುಶಿವಶಿವಯೆನುತಚೈ | ದ್ಯನನುಚ್ಚೈವ್ರುತನೆರದಸುರಮುನಿ | ಜನವಿರಲುಮೌನದಲಿಕಿವಿಗಳಮುಚ್ಚಿಕೈಗಳಲಿ || ತನತ
ೆಗುಜುಗುಜಿಸಿಸಭೆಯಲಿ | ಕನಲಿದಾಸಹದೇವನೆದ್ದನು | ದನುಜಹರನಾಕ್ಷೇಪವನುಕೇಳುತ್ತ ಕಡುಮುಳಿದು ||೧೧|| ಏನೆ
ಪ್ರೊದುಷ್ಟನೆಗೃಹೀತ | ಶ್ವಾನಬಗುಳುವೆಕೃಷ್ಣನತುಳಮ | ಹಾನುಭಾವವನರಿವರಾರೊಳಗಾರುನೀನಿದಕೆ || ಜ್ಞಾನಸಂಯಮ
ರತಪ್ರೋನು | ಷ್ಠಾನವಂತರಿಗರಿದುಮಾಯಾ | ಮಾನಿನಿಯುಮೈವಳಿಯುಮತಿಗಿದುಗವ್ಯಾಕರವೆಂದ ||೧೨|| ಆರದೆಸೆಯಿಂದಾ
ಯ್ತುಋಷಿಗಳ | ಗೀಋಷಿತ್ವದಹಂಮೆಯಿದುಮೇ | ಣಾರುಕೊಡಲಾಯ್ತಾವಿಭವವೀಲೋಕಪಾಲರಿಗೆ || ಆರುಬೆಸದಲಿಜಗವ
ಾಳ್ವನು | ವಾರಿಜಾಸನಚಂದ್ರಸೂರ್ಯರ | ದಾರತೇಜದಲಖಿಳಜಗವನುಬೆಳಗುತಿಹರೆಂದ ||೧೩|| ತೊಳಲುತಿದೆಜಗವಾವನಂ
್ರಯು | ನೊಲಿಸಲರಿಯದೆಹಲವುಮಂತ್ರಂ | ಗಳಲಿವೈದಿಕಕರ್ಮನಿಕರಂಗಳಲಿದಾನದಲಿ || ಜಲಹುತಾಶನಸೂರ್ಯಮೊದಲಾ | ದ
ಘುದೈವಂಗಳಿಗೆದಾಸ್ಯವ | ನಲಸದೊಡರಿಸಿಪಡೆಯರಾವನದರುಶನವನೆಂದ ||೧೪|| ಒಲಿದುನೋಡಿದಡಬುಜಜಾವಳಿ | ಗೆ
ಂದಿಸುವನಾವನಲಿಮಿಗೆಮುಗು | ಳಲಸಿದಡೆಸಂಹಾರವಾವನಹುಬ್ಬಿನಾಟದಲಿ || ಸಲೆಜಗವಶಾಸಿಸುವನಿಗಮಾ | ವಳಿಗಳಾವನ
್ವಸದಿಂದು | ಜ್ವಲಿಸಿದವುನೀನಾರುಕೃಷ್ಣನನರಿವಡಕಟೆಂದ ||೧೫|| ಹುರುಡಿಸುವಡೆಲೆಹೊಹೆನೀನು | ತ್ತರವನರಿಯೆವ್ರಥಾ
ಯೋಗ | ಜ್ವರಗೃಹೀತನಲಾವಿವೇಕದಮಾತುನಿನಗೇಕೆ || ಬೆರಸಿಜಗವನುಕೊಲುವಕಾಲನ | ಚರಣರಜದಲಿನಿರ್ಮಿಸುವವು
| ಹರನನಾರೆಂದೆಲವೊಬಗುಳುವೆಪಾಪಿನೀನೆಂದ ||೧೬|| ಅರಿವರೇಮುನಿವರರುಸುರವರ | ರರಿವರೇಕಮಲಜಭವಾದಿಗ |
ರಿಯರೀರಾಜರ್ಷಿದೇವಋಷಿಪ್ರವರರರಿವರು || ಅರಿತೆನೀನೀಕೃಷ್ಣನಲಿಜಗ | ಕುರುವದೈವದಲಕಟಭಾರಿಯ| ಕೊರತೆಯನು
ರುಪಾಲನೀಸರ್ವಜ್ಞನಹೆಯೆಂದ ||೧೭|| ಏಕೆನಿನಗೀಕೃಷ್ಣನಾನಿದೆ | ಸಾಕುಳಸದಿರುಧುರಕೆತಾನೇ | ಸಾಕುಸೈರಿಸುಬಗುಳ
ರುಬಾಯುಂಟುನಿನಗೆಂದು || ಓಕರಿಸುತಿದೆಕಿವಿಗಳೀಜಗ | ದೇಕದೈವಹನಿಂದೆಯನುಕಡಿ | ದೋಕುಳಿಯನಾಡಿಸುವೆನಿದುಹೊ
ಲ್ಲತನಗೆಂದ ||೧೮|| ಹೊರವಡುವಡಲ್ಲಿಂದಪಾಪಿಯ | ನಿರಿವುದಾವಡೆಮೇಣುಜೀವವ | ತೊರದಪಕಟಕಟಾಯ್ತು ಪುಣ್ಯಾ
ವಣವಿದುತನಗೆ || ಉರುವದೈವದನಿಂದೆನರಕಕೆ | ನೆರೆಯಲಾಪೆವೆನಾಪೆನುತಮುಂ | ಜರಗಸಂವರಿಸುತ್ತನಿಂದನುವೀರಸಹ
ದೇವ ||೧೯|| ಲೇಸೆನುತನೆರದಖಿಳಜನವಾ | ರಾಶಿಕೊಂಡಾಡಿದುದುಸುರರಾ | ಕಾಶದಲಿಮಸಗಿದುದುದಾಗಲುಜಯಜಯ
ಧ್ವಾನ || ಸೂಸಿದವುಧರೆಗೆರಳಮಳೆಗಳು | ನೇಸರಿಳಿಹಂದದಲಿವಿದುರನ | ದೀಸುತದ್ರೋಣಾದ್ಯರಿದ್ದರುಸಾಧುವಾದದಲಿ ||೨೦||
ೀಳುತೆದ್ದು ಮಸಕಲಯಾಹವ | ಜಾಲಪಾಂಡವರುವರಭೂ | ಪಾಲತತಿಹಲ್ಲಣಿಸಿದವುಹಯರಥಗಜವ್ರಾತ || ಶೀಳುಶಿಶುಪಾ
ಕನಬಗುಳುವ | ನಾಲಗೆಯನಕಟಕಟನಿಂದೆಯ | ಕೇಳುವರೆಹರಹರಮಹಾಪಾತಕವನಿದನೆಂದ ||೨೧|| ಬಗುಳುವರೆಮ
್ರದನಾಯಸು | ಬಗವುದೇಕಲಿಸಿಂಹಕರುಣಾ | ಳುಗಳದೇವನುಕೇಳುತಿರ್ದನುಖಳದುರುಕ್ತಿಗಳ || ಬಗವನೇಸರ್ವಾತ್ಮಕನು
ೃ | ದೆಗೆಯದಾತ್ಮಾರಾಮಪರಯೋ | ಗಿಗಳಕುಲದಧಿದೈವವಿದ್ದನುಬಿಗಿದಮೌನದಲಿ ||೨೨|| ಕೆರಳ್ಪಿದರುಪಾಂಡವರುಸ್ಯಂ
ಯು | ರುರವಣಿಸಿದರುಯಾದವರಬಲ | ವಿರದೆಮೋಹರಿಸಿದುದುಕೇಕಯಭೂಮಿಪಾಲಕರು || ಬರಸೆಳದರಾಯುಧವಘನ
ಾ | ಗರದವ್ರೋಲ್ಗರ್ಜಿಸುತಸುಭಟರ | ಕರಿತುರಗನಿಕರದಲಿಸಂಕುಲವಾಯ್ತುನಿಮಿಷದಲಿ ||೨೩|| ಇರಲುಕಾಣುತಮೋ
ರದಪರ | ಬಲದಸಂಸಾಹವನುಘನಸಂ | ಗರಕೆಕೊಂಡನುಹರಿಗೆಕಡಿತಲೆಗಳನುಶಿಶುಪಾಲ || ಉರುಳಗಡಿವೆನುವೈನತೇಯನ |
ರಕೆಕದ್ರುಕುಮಾರಕರುಮೋ | ಹರಿಸಿತೇತಪ್ಪೇನೆನುತಕೆಲಬಲನನೀಕ್ಷಿಸಿದ ||೨೪|| ಏಳತೆದ್ದು ದುಚೈದ್ಯನೊಡನೆನೃ | ಪಾ
ಕರುಕೆಲರೊಂದೆಸೆಗೆಭೂ | ಪಾಲಕರುಕೆಲರಿದ್ದು ದುಭಯವಿರೋಧಭೀತಿಯಲಿ || ಕಾಳಗದಕಲಿಮನದಸುಭಟರ | ಜಾಲವನು
ಲಿಸುತ್ತಲಕ್ಷ್ಮೀ | ಲೋಲನೆದ್ದನುತುಡುಕಿತೀವ್ರಮಹಾಸುದರ್ಶನವ ||೨೫|| ಸಿಡಿಲವ್ರೋಲುರವಣಿಪಖಳನನು | ಕೆಡೆಯೆಸುತ
ುರವೈರಿಚಕ್ರದ | ಲಿಡಲುಬಿದ್ದುದುತಲೆಧರಿತ್ರಿಗೆಸುರರುಘೇಯೆನಲು || ಎಡಬಲದಮಂನೆಯರುಹರದರು | ಪೊಡವಿಪತಿಗಳು
ೀವದಾಸೆಗೆ | ವೊಡನೆಬೆರಸಿದುದಾತನಾತ್ಮಜ್ಯೋತಿಕೃಷ್ಣನಲಿ ||೨೬|| ಬೆಳಬೆಳಗುತಭ್ರದಲಿಭುವನಾ | ವಳಿಗಳೀಕ್ಷಿಸಲಾ
ುರಾಂತಕ | ನೊಳಗೆಬೆರಸಿತುಶಾಪವನುಮೂರನೆಯಜನ್ಮದಲಿ || ಸಲೆತದಂಘ್ರಿಧ್ಯಾನಬಲದಲಿ | ಮುಳಿದುಮೇಣೊಲಿದಚ್ಯು
ತಂಘ್ರಿಗೆ | ಸಲಿಸಬಲ್ಲಡೆಭಾವವೇವರಮೋಕ್ಷಕರವೆಂದ ||೨೭|| ಅಂಜದಿರಿನೃಪರೆಂದಭಯಕರ | ಕಂಜವನುನೆಗಹುತ್ತನತ
ವಿ | ಪಂಜರನುಪುರವೈರಿಸಂತೈಸಿದನುಪರಿಜನವ || ರಂಜಿಸಿದುದಾಸ್ಥಾನಭೀತಿಯು | ಮಂಜುಹರದುದುಮತ್ತೆಭೂಪರೆ ; ಪ್ರಾಂ
ವೆಸೆದುಹುವಿಪ್ರಋಷಿದೇವರ್ಷಿಜನಸಹಿತ ||೨೮|| ಸಭೆಯಪೂಜಿಸಿದನುಮಹೀಪತಿ | ವಿಭವದಲಿಸಂತುಷ್ಟಿನಡದುದು | ತ್ರಿ

ಭುವನದಜನವನಿರನಸನ್ಮಾನದಾನದಲಿ ॥ ಪ್ರಭುತನವನೇನೆಂಬೆಧೃತರಾಷ್ಟ್ರಂ | ಸ್ತುಭನದಾಸರಿಗೆನಲೆಸದುದು|೨೯ಭವದಾಪ್ರ
ಪಂಚಿಕ್ರಮಾಯು ಧ್ವರಮುಖವಿಭವ ॥೨೯॥ ಮುಂನನಳನಸುಷ್ವದಿಧರಣಿಪ | ರಾಂಸತಿಕೆಪೋಲುವದೆಧ್ವಜ | ನಾಂನ ...
ವನುನಮಾತಿದರುಂಟೆವರಮುಖನ ॥ ಧನ್ಯರಾರೀಪಾಂಡುಸುತರಿಂ | ದನ್ಯರೀತ್ರಿಜಗದೊಳೆಮ್ಮ ಪು | ಜನ್ಮದಭೂಷದಲಿತಂಗ
ಳಾತ್ತಿದರ್ಗದಖಿಳಜನ ॥೩೦॥ ಬಳಿಕನುಡಿದರವಭೃಥದವಂ | ಗಳನುಮಾಮುಜ್ಜಸನನಾಮುನಿ | ಕಾಲನ್ಯದಾಲಕರಂಬಬಾಂ
ಧವಧ್ವ್ಯಜನಸಹಿತ ॥ ಉಲಿವದುಂದುಭಿರಂಖಕಹಳಂ | ವಡ್ವನ್ಯದಂಗೋಕ್ಷರವಾಪಾರವ | ದೊಳಗೆಸುರನದಿ ಸುಮಳಪುಣ್ಯ
ಪವಿತ್ರಜಲದೊಳಗೆ ॥೩೧॥ ಸಂದಣಿಸಿದುದುಕೋದಿನೂಪರ | ನೃಂದವಾಭೂಪಾಲರತಪಿಯು | ರಂದಣಂಗಳುಕೂಡಿಸುಭಜವಾಸ
ಪ್ರತಪಣಿಸಿ ॥ ಸಂದಗಜರಥತುರಗಪತ್ತಿಗ | ಳಂದಸೇಲನಿಟ್ಟದೆಯುನಲುಜನ | ವೃಂದಕವಿದುದುವಸ್ತ್ರಭೂಷಣಸಿತರರಂಜಿಸಲು ॥
ಕಾಣಿವದಾನುದಿಮೊಗಳುವರಸಂ | ದಣಿಸುಗಾಯಕವೇತಕರರಸಂ | ದಣಿಗಳತ್ತಿದಕ್ಕೆಗುಟಿಯನಪೆತಿರೋರಣಪವಳಿಯು ॥ ಅಣಿವ
ನದಿತಪ್ಪರದಗಗನಂ | ಗಣಕಿನೆಗಪಿಸನತ್ತಿಗೆಯುಸಂ | ದಣಿಮುಖಾಬ್ಧತವೆನಲುನೆರೆದುದುಯಾತ್ರೆನೃಪವರರ ॥೩೨॥ ಮುತ್ತಿ ...
ವಿದುಮವೇಲೆಸುಭಟರ | ಮುತ್ತಿಗೆಯುನುಡಿಸಿಯುಲಾಪುರು | ಷೆತ್ತನುನರಾಣಿಯರದಂಡಿಗೆಗಳುಸರಾಗದಲಿ ॥ ಕಿತ್ತ ...
ರೆನಪವಂತ್ರಿದಶವಿಗು | ಭಿತ್ತಿಗಳನಾಕ್ರಮಿಕಿಪಯುರಥ | ಮುತ್ತಗಜಘಟೆಗಳಲಿವಾರಾಂಗನೆಯರುಪವಣಿಸಿ ॥೩೩॥ ನೊಕಿದಪ್ರ
ದಂಡಿಗೆಗಳಕಂ | ತೀಕುಮಾರರವುತ್ಸ್ಯವುಳನ | ಕೇಕಯದ್ರುಪದನಾದಿಪೃಥ್ವೀಶ್ವರರರಾಣಿಯರ|ಲೋಕಸುದಿನಾಲ್ಕರಜನವನ
ದ | ನೇಕವೇಶನಲಾಯುತ್ತುಲಕ್ಷ್ಮಿಯು | ರೋಕುಳಿಯನಾಡಲಿಕೆನೆರದುದುನೃಪವಧೂನಿವಹ ॥೩೪॥ ಬಾಲೆಯರುತವ್ಯೊಳಗೆ
ಗೋರಸೆ | ತ್ಯಲಕುಂಕುಮಗಂಧಜಲದಲಿ | ಮೇಲೆವೆಡೆಯಪ್ಪಾಡಿದರುಸಾಂದ್ರಪರಿಪ್ರದಲ್ಲಿನರ ॥ ಲೀಲೆವಿಗೆಸ್ವೈದುನರಸತಿಯರ|
ಮೇಲೆಸಂಬಂಧಿನಿಯುಪೃಥ್ವೀ | ಪಾಲರರಸಿಯರೆಡಸನೆಯುದುಪಾಂಡವಸತೀನಿವಹ ॥೩೫॥ ವಲಯನೂಪುರಹಾರಮಣಿಕುಂ|
ಡಲನರಾಂಬರಕಲಿತಮಣಿಮೇ | ಖಲೆಗಳಲಿದಿವ್ಯಾನುಲೇಪನವಿದಿತವಿಭವದಲಿ ॥ ಚಲದಳಕನಿಕರದಲಿಘನಕುಚ | ಕಳಶಭಾ
ರಂಗಳಲಿಬಡನಡು | ಬಳುಕಲಾಡಿದರೋಕುಳಿಯುಲೊಪ್ಪಿರೆವಧೂನಿವಹ ॥೩೬॥ ಒಡನೆಪೊಯಪ್ಪಾಡಿದರುನಗುತಾ | ಮಡದಿ
ಯರುಸುದಿನಾರುಸಾವಿರ | ಬೆಡಗಲುನೆನೆಯಲುಸಾಂದ್ರಕಾಕುಮಗಂಧತೈಲದಲಿ ॥ ಬಿಡದೆಸುರರಥದಲಿಪೊಗಳಲು | ಪೊಡವಿ
ಪತಿಗಳವೇಲೆಮಾಜಗ | ದೊಡೆಯನಾಮುರವೈರಿಪಾಂಡುಕುಮಾರಕರುಸಹಿತ ॥೩೭॥ ಭಾಪೆನುತಸುರಸತಿಯರೀಕ್ಷಿಸು |
ತಾಪರನುಪೂರುಷನನರಗುಣ | ರೂಪಲೀಲಾವಿಭವವನುನುನುಮಘನಸರಹತಿಗೆ ॥ ಧೂಪಿಸುತವ್ಯಾಮರದರೆನಲೆಲಿ | ಭೂಪ
ವಿಕ್ಷಮುನುಷ್ಯಸತಿಯರ | ತಾಪವನುತಾನೇನಬಂಣಿಪಬಹುದುಕೇಳೆಂದ ॥೩೮॥ ನನದಪೀರೆಗಳೂಡಲಹತ್ತಿದ | ವನುಪಮಾಂ
ಗನೆಯರಿಗೆಮೆರವನ್ರ | ಘನಕುಚಕೋರುನಿತಂಬಬಿಬಂಗಳುವಿವಸ್ತ್ರದಲಿ ॥ ವನಿತೆಯರುನೋಡುವದುರಾತ್ಮರ | ಮನಕೆಸಂ
ಷೋಭನನುಮಾಡುತ | ಜನಿತವರನೋಕ್ಸವದಲಾಡಿದರೆಸೆಯಲೋಕುಳಿಯ ॥೪೦॥ ಜನನಿವಹಸಹಿತಮುರನದಿಯಲಿ | ಜನಪ
ನಾಚರಿಸಿದನುವರನು | ಜ್ಞನವನಾಯಾದವನ್ನಪಾಲಕದಂಬದುಬ್ಬರದ ॥ ಜನಸಹಿತಮುಕಾಂಭಜನವಾ | ಮನನುಹಾಪಾತ್ರ
ಗಳಿತರಾ | ವನತೆಯಲಿಸಂಪಂನಸುಕೃತಿಗಳಾದುದಾಕ್ಷಣಕೆ ॥೪೧॥ ವಿಂದುದಿವ್ಯಾಂಬರವಿಭೂಷಣ | ವೃಂದವನುನೆರೆಧರಿ
ಸಮಾಗಧ | ವಂದಿಗಳಿಗೊಲಿದಿತ್ತರತ್ನಾಂಬರವಿಭೂಷಣವ ॥ ಇಂದುಮುಖಿಯರುಸಕಲಯಾದವ | ನೃಂದವೇನೆಂಬೆನುಮುದ
ಭೃತ | ದಂಡವನುಸೂಪಾನವಾದುದುಸಕಲಜನನಿವಹ ॥೪೨॥ ಬಂದರರಮನೆಗಿರಪಿವೊಳಗುವ | ದುಂದುಭಿಯುಕಹಳೆಗಳ
ಸೂತರ | ವಂದಿಗಳಮಾಗಧರವೀಣಾವೇಣಾರವದೊಳಗೆ ॥ ಸಂದಸುರಗಂಧರ್ವಕಿಂನರ | ವೃಂದಕೈವಾರಿಸಲುಕುಂತೀ | ನಂದನ
ರುನಿಜವಿಭವದಲಿಭೂಪಾಲಜನಸಹಿತ ॥೪೩॥ ಬಳಿಕಕಳುಹಿಸಿಕೊಂಡುದಾಸಂ | ಕುಲದಜನಸನ್ಮಾನದಾನಂ | ಗಳಲಿಪೂಜಿತ
ರಾಗಿಕೃಷ್ಣಪದಾಬ್ಜಯುಗಳವನು ॥ ಒಲಿದುಮನದಲಿಭಾವಿಸುತವಂ | ಗಳಮಹೋಪರಮೂರ್ತಿಯಲಿಮನ | ನಿಲಲುಸುರ
ಮುನಿಪಿತೃನಿಕರಗಂಧರ್ವಜನಸಹಿತ ॥೪೪॥ ಪೊಗಳುತ್ತೈದುದುದಾಲಯಕೆಮೂ | ಜಗದಜನತವತವಗೆಹರಿಪದ | ಯುಗ
ದಾಪದೆನಿಸ್ಪಪಾಂಡುಕುಮಾರಕರಪಿರಿಯು ॥ ವಿಗಜ ರ್ದಶಭೂಪನದಲಿಕೀ | ರ್ತಿಗೆನಿವಾಸಕವಾಯು ಪರಪರ | ಬಗವದಾವ್ರ
ಚಿತ್ರನಾಗೋವಿಂದನೊಲಿದರಿಗೆ ॥೪೫॥ ಬಳಿಕೆಧರ್ಮಜನಖಿಳಬಾಂಧವ | ಬಲಸ್ವಪಾಲರನೊತ್ತವನುನೆರೆ | ಕಳುಹಿದಾಕಾರ
ರನಾವಾರಾಂಚಿಸ್ವಂಜಯರ ॥ ಬಳಗವನುಕೃಷ್ಣಾಬ್ಧಿವಿರಹಾ | ಕುಳಿತಹೃದಯುನುವಿನಹಲವನತಿ | ಗಳವ್ರುತಿರ್ದನುಬಿಡಲರಿ
ದಧಿಕಾನುರಾಗದಲಿ ॥೪೬॥ ಬಾದುದಿನಕಾರವನುಕುಂತೀ | ನಂದನನವರನ್ನಿರ್ಮಿತ | ಮಂದಿರದಲಸುರಾರಿಯಿರೆಪದಿನಾ
ಸಾವಿರದ ॥ ಇಂದುಮುಖಿಯರನೇಳದಲಿಯುವು | ನಂದನನುನಿಜಸತಿಸಹಿತಸಾ | ನಂದದಲಿಕುಳ್ಳಿರಲುಕಂಡನುಬಹಳವಿಭ
ದಲಿ ॥೪೭॥ ಕ್ಷಿತಿಪವಂದಿತಚರಣನಿರಲ | ಚ್ಯುತನಬಲವಂಕದಲಿವಾಮದ | ಲತುಳಬಲಭೀಮಾರ್ಜುನಾವುಳಯನುಳಿರಲಿ
ಲಿದು | ಸತಿಕಿರೋವಮಣಿಸ್ತ್ರಪದಸುಭೂ | ಪತಿಯುವಾವನಾಂಕದಲಿಕರತಳ | ಗತಸಿತವ್ಯಜನದಲಿಭಜಿಸುತ್ತಿರಲುನೆರೆಕಂಡ ॥೪೮

ಮುಂದೆದ್ರುಪದವಿರಾಟಸೃಂಜಯ | ವೃಂದವಾಕೈಕಯವಿದರ್ಭನೃ | ಪೇಂದ್ರರಿರಲೋಲಗದಲಾಪ್ತಪಸಾಯ್ತಮಂತ್ರಿಗಳ || ಸಂದಣಿಯಲೋಲಗಿಸಿಕೊಳುತಮು | ಕುಂದದಾಸವಶೇಷಬಾಂಧವ | ವೃಂದದಲಿರಂಜಿಸಿದನವಮರಾಧಿಪನನತಿಶಯಿಸಿ ||೪೯|| ಸುಳಿಗುರುಳಸೊಬಗಿಯರುನಿಡುಗಂ | ಗಳನಿತಂಬಿನಿಯರುಕುಚದ್ವಯ | ಕಲಶಭಾರದಕಾಂತೆಯರುಸುಸ್ಮಿತಮುಖಾಬ್ಜೆಯರು | ಸೆಳೆನಡುವಿನಬಳೆಯರುನೂಪುರ | ವಳಯಹಾರಾವಳಿಯರಚನೆಯ | ಲಲನೆಯರುರಂಜಿಸಿದರವನೀಶ್ವರನಬಳಿಯಲಿ ||೫೦|| ಎತ್ತಿದಛತ್ರಂಗಳನವಮುತ್ತಿನ | ಸತ್ತಿಗೆಯಸಂದಣಿಯಚಾಮರ | ದೊತ್ತುಗಳಮಣಿಕನಕದಂಡದಜಡಿವಧ್ವಜಾಳಿಯ || ಮುತ್ತಿಗೆಯಮೊಡಿಗೆಯಬೆಸನವಿ | ಯತ್ತಳದರವಿಕಿರಣಕಾಂತಿಯ | ನೆತ್ತಿಬೆಸುಡುವರತುನಕಾಂತಿಯಬೆಸದಿರಲುಕಂಡ ||೫೧|| ಸಾರಸಂಗ್ರಹಪ್ರೋಚ್ಚತುರ್ದಶ | ಭೂರಿಭುವನಾವಳಿಯಲಕ್ಷ್ಮಿಯ | ವಾರಿಧಿಯೆನಿಪ್ಪಾಮರಾಧೀಶ್ವರರವೈಭವದ || ಪಾರಮೇಷ್ಠ್ಯದಪರಮತೇಜದ | ಮೇರೆಯೊಮರುಯಿಸುತಬಂದನು | ದೂರದಿಂದೀಕ್ಷಿಸುತಮಯನಿರ್ಮಿತಮಹಾಸಭೆಯ ||೫೨|| ಸಕಲಪೃಥ್ವೀಶ್ವರರಮಣಿಮಯ | ಮುಕುಟಕಾಂತಿಯಬೆಸೆಯಲಭುಜಾಂ | ಬಕನದಕ್ಷಿಣವಾಮಭಾಗಂಗಳಲಿಸಂದಣಿಸಿ || ಪ್ರಕಟಕೀರ್ತಿಗಳರಲುಧವರ್ಗ | ತ್ಮಕನವರಪನಿತಾಪ್ತನಾಯಕ | ನಿಕರವಿರಲೀಕ್ಷಿಸುತಬಂದನುಕೌರವನುಸಭೆಗೆ ||೫೩|| ಪಾಡುವರಸ್ತ್ರೀಗಳುವರನೃತ್ಯವ | ನಾಡುವಪ್ಸರಸೆಯರವರಾಗರ | ಬೇಡುಗಳಬಹುದೇಶಭೂಪಾನ್ವೀಕ್ಷಜನಾವಳಿಯ || ರೂಢಿಸುವಸುರಪತಿಯವಿಭವವ | ನೀಡಿಸುವಸಂಪನ್ನವಿಭವವ | ನೋಡುತನುಜರುಸಹಿತವಿಸ್ಮಿತನಾಗುತಿಂತೆಂದ ||೫೪|| ರಾಜಸೂಯಕ್ರತುವರವನಾ | ರಾಜವಾನ್ಯೈಶ್ವರ್ಯವನುಸುರ | ರಾಜತೇಜದಘನತೆಯಮರಾಜಾಧಿರಾಜನಲಿ || ಆಜನಾರ್ದನನೊಲವನೀಕ್ಷಿಸು | ತ್ತೋಜೆಗೆಟ್ಟುಮನೋವಿಷಾದಕೆ | ಭಾಜನನುತನಾಗುತ್ತೈತಂದನುಸುಯೋಧನನು ||೫೫|| ಅವ್ರುದರಿದೇಲೆಭೂಪಪರಿಷದ | ಸೇವಕರಿಗಿಡುಘನವೆತ್ತಣವ | ಲ್ಲಾವಿರಿಂಚಿಮಹೇಂದ್ರಮುಖ್ಯಾಮರರಪದವಿಗಳು || ಜೀವಭೂತರುಪಾಂಡವರುರಾ | ಜೀವಲೋಚನನಗೆನಲುಬಣ್ಣಿಸ | ನಾಪನಾನಿತ್ಯಾತ್ಮಕೃಷ್ಣನುದಾರಲೀಲೆಗಳ || ... ... ||೫೬||

ಅಂತು ಸಂಧಿ ೮೦ಕ್ಕಂ ಪದನು ೪೭೮೦ಕ್ಕಂ ಮಂಗಳಮಸ್ತು.

ಎಂಭತ್ತೊಂದನೆಯ ಸಂಧಿ.

ದುರ್ಯೋಧನನ ಮಾನಭಂಗ

ಸೂಚನೆ || ರಾಜಸೂಯಾಧ್ವರವಿಭವವ | ಭ್ರಾಜಮಾನೈಶ್ವರ್ಯದಲಿನತ | ರಾಜಮೌಳಿಯುಧಿಷ್ಠಿರನು
ರಂಜಿಸಿದನವನಿಯಲಿ ... ...

ಪದನು || ಜನಪಕೇಳಂತೆಸೆವಯಮನಂ | ದನನಸಭೆಯೊಪ್ಪವನುನೋಡು | ತ್ತನುಜಶತಪರಿವಾರದಲಿಸಂಪನ್ನವಿಭವದಲಿ || ಮನದೊಳಲಮಿಗಲಂದುದುರ್ಯೋ | ಧನನುನಡೆತರುತಾಸಭಾಗತ | ಜನದನೆಗೆಡೆಯಾದಪರಿಯನುಮತ್ತೆ ಕೇಳೆಂದ ||೧|| ಇಂದ್ರನೀಲದಬೆಸವನೆಲಗಟ್ಟೆಂದೆಡೆಯಲಿರೆಸಹಜಸಲಿಲವ | ದೆಂದುಸಂವರಿಸಿದನುಸೆರಗನುತಕ್ಕದಖಿಳಜನ || ಮುಂದೆಪುಷ್ಕರಣಿಯಮನೆಲಗ | ಟ್ಟೆಂದುಬಿದ್ದನುತೋರದವಸನದ | ಲಂದನಗೆಗೆಡೆಯಾದನಾನೋಡುವಸಭಾಸದರ ||೨|| ಜರೆದುನಗುತಿರಲಾಯುಧಿಷ್ಠಿರ | ಧರಣಿಪತಿದಿವ್ಯಾಂಬರಂಗಳ | ತರಿಸಿಕೊಡಿಸಿದನವಿಳರತ್ನವಿಭೂಷಣಾದಿಕವ || ಕುರುಪತಿಗೆಸಾಮದಲಿಬಳಿಕಾ | ದುರುಳದುರ್ಯೋಧನನುಮನದಲಿ | ಪರಿಭವದಭವಣಿಗೆಯಭಾವವಿಭೇದವನುತಳೆದ || ೩ || ಬಿದ್ದನೋಯನುನೃಪತಿನೀರಲಿ | ಬಿದ್ದನೊಂದನುಧರ್ಮನಂದನ | ನಿದ್ದೆಸೆಯವನಿತೆಯರಹಾಸ್ಯಮಹಾರವಂಗಳಿಗೆ || ಉದ್ಬಿದನುಮನದುತ್ಸವದಸೌ | ಹಾರ್ದವನುಬಾಂದವರಹೊರೆಯನು | ಹೊಡ್ಡದತ್ತಲೆಮರಳಿಕೌರವನೃಪತಿತೊರವಂಟ ||೪|| ಅಕ್ಕಟಕ್ಕಟನೃಪತಿರೋಷಮಣಿ | ಮಕ್ಕಳಾಟಿಕೆನಿನ್ನಘನತೆಗೆ | ತಕ್ಕುದಲ್ಲವೆನುತ್ತಭೂಪನಮುಂಜರಗಹಿಡಿದು || ನಕ್ಕವನುತಾನೇತಕೀಹಂ | ಮಕ್ಕಳಲಿಗುಣದೋಷಸಂಗ್ರಹ | ಸಿಕ್ಕದಿರನೀನೆನುತಧರ್ಮಜಕರದನವನಿಪನ ||೫|| ಧರಣಿಪನನುಡಿಗೇಳದತಿದು | ರ್ಮರುಷದಲಿನೃಪನಿರಲುಮುರರಿಪು | ಕರೆಸಿದನುಕೃತವರ್ಮಸಾತ್ಯಕಿಮುಖ್ಯರನುಕಳುಹಿ || ಉರಿವುತತಿರೋಷದಲಿಕೌರವ | ಧರಣಿಪತಿಕೈಕೊಳ್ಳದನಿಬರ | ಸುರವಣಿಸಿಹೊರವಂಟನೋಲಗದಿಂದನಿಜಗೃಹಕೆ ||೬|| ಅಕಟಕಟವಿಪರೀತವೆನುತಾ | ಸಕಲಜನಮರುಗಿದುದುನೃಪಕುಲ | ವಿಕೃತಿಗಿದುವೊಪಲಾಯ್ತುರಾಹಾಯೆನುತತನುತಮಗೆ || ವಿಕರಿಸುತಮನದೊಳಗೆದುಗುಡವ | ಮಕರಿಶಿರ್ದರ್ಪಕಾಣುತಬುಜಾಂ | ಬಕನುನಸುನಗುತಸುರದಿರ್ದನುಗೂಢಭಾವದಲಿ ||೭|| ಅರಸಕೇಳ್ಕಕ್ಷಣದಲಿಳಿದುದು | ಪರಮತೇಜದಪುಂಜವಾಭೂ | ಪರನಸಭೆಯುಗ್ರದಲಿನಾರಾಯಣನಮಹಾಧ್ವಾನ || ನಿರುತಕೇಳಲುಬಂದುದೆದ್ದುದು | ನೆರವಿನಾರದಮುನಿಪನೆಂದರಿ | ದಿರದೆಸಿಂಹಾಸನ

ವನಿಳಿದುದುಸಕಲನೃಪನಿವಹ ॥೮॥ ಇದಿರುಗೊಂಡನುಪಾಂಡುಪುತ್ರರ | ವಿದಿತಸಂಮೇಳದಲಿಮುರರಿಪು | ಮೊದಲಾಮುನಿ
ಕುಲಮಹೋತ್ತಮಮಿಹಿರಸನ್ನಿಭನ ॥ ಪದದಲೆರಗಿಪರಾರ್ಧ್ಯಮಣಿಪೀ| ಠದಲಿಪಾವನಕೀರ್ತಿಕುಳ್ಳಿರಿ| ಸಿದನುಭಕ್ತಸ್ನೇಹಸಂ
ಸಾರಿಕನುನಲವಿನಲಿ ॥೯॥ ಹರವಿರಿಂಚಿಮುನೀಂದ್ರವಂದಿತ | ಚರಣನಾಮುನಿವರನಚರಣಾಂ | ಬುರುಹದಲಿಮೈಯಿಕ್ಕಿಪುನ
ರಪಿಪಾಂಡವರುಸಹಿತ ॥ ಪರಮಸಂತೋಷದಲಿಪೂಜಿಸಿ | ಪರಮಭಾಗವತೋತ್ತಮನನಾ | ನೆರೆದಸಭ್ಯರುಸಹಿತಸತ್ಕರಿಸಿದನು
ಮುರವೈರಿ ॥೧೦॥ ಬಳಿಕಧರ್ಮಜನಾಮುನೀಂದ್ರನ | ಲಲಿತಪಾವನಚರಣಯುಗದಲಿ | ಕಳೆವರವನೀಡಾಡಿಸ್ವಾಷ್ಟ್ಯಸ್ವಾಗ
ತೋಕ್ತಿಯಲಿ ॥ ಒಲಿದುಪೂಜಿಸಿಪುಳಕಜಲದಲಿ | ಮುಳುಗಿಭಾಗವತಾಂಗಸಂಗದ | ಸುಲಭಸುಖಸಾಮ್ರಾಜ್ಯಸಂಪ್ಲುತನಾಗುತಿಂ
ತೆಂದ ॥೧೧॥ ಧನ್ಯರಾರೆನ್ನಂತೆಜಗದಲಿ | ಮಾನ್ಯರಾರೆಲೆಮುನಿಪಬಹಳಕ್ಕೆ | ಪೂರ್ಣವನೆಸುರವರಸಮಾರಾಧಿತಪದಾಬ್ಜವಿದು ॥
ತನ್ನಮಾಂಸಾಕ್ಷಿಗಳಗತಿಸಂ | ಪನ್ನವಾದುದುದರುಶನಕೆಮೈ | ದುನ್ನಿರೀಕ್ಷಾವಿಧಿಮನುಷ್ಯರಿಗೆಂದನಾಭೂಪ ॥೧೨॥ ಮು
ನಿಪನಿಮ್ಮಡಿಯಾಜ್ಞೆಯಲಿಸಂ | ಜನಿತವಾದುದುರಾಜಸೂಯದ | ಘನತರಾಧ್ವರವಿಭವವಲ್ಲದಡಾರುತಾನಿದಕೆ ॥ ಘನಕೃಪಾನಿ
ಧಿನೀನಲಾಯೆನು | ತನುಪಮಾಮಳಮುನಿಯಪದಯುಗ | ವನಜವನುಮಕುಟದಲಿಧರಿಸಿದನಧಿಕವಿನಯದಲಿ ॥೧೩॥ ಅರು
ಮತ್ತೀವರ್ತಮಾನವ | ಹೀರಮಣರೊಳಗಗ್ಗಳೆಯರತಿ | ವೀರರೆಂದೆನಿಸಿದಮಹೀಪತಿಗಳುಧರಿತ್ರಿಯಲಿ ॥ ಭೂರಿಕೀರ್ತಿಭು
ಜಾಬಲಾನ್ವಿತ | ರಾರುಕರುಣಿಸುಮುನಿಪಸಲೆಸಂ | ಚಾರಿಗಳಲಾನೀವುಭುವನಚತುರ್ದಶದಲೆಂದ ॥೧೪॥ ಎಂದಡುರುಗು
ಣಕುಮುದಕುಲಪೂ | ರ್ಣೇಂದುವಿನವರವಾಕ್ಸುಧೆಯನಿ | ಷ್ಯಂದವನುಸವಿಸವಿದುಕರ್ಣಪುಟಂಗಳಲಿನಲಿದು ॥ ಕಂಡೆರಗುಮು
ನಿನಾಥನೊಯ್ಯನೆ | ಮಂದಹಾಸದಲಚ್ಯುತಾಂಘ್ರಿ | ದ್ವಂದ್ವಗತಚಿತ್ತದಲಿಮಾತಾಡಿದನುನೃಪನೊಡನೆ ॥೧೫॥ ಕೇಳುಧರ್ಮಜ
ಕೌರವಾನ್ವಯ | ಮೌಳಿರತ್ನವೆಪೂರ್ವಪೃಥ್ವೀ | ಪಾಲರಲಿನಿನ್ನಂತೆಧನ್ಯರನಾರುಸುರವರರ ॥ ಓಲಗಕೆನ್ನೊಡೆಯಲಕ್ಷ್ಮೀ |
ಲೋಲನೇಂನಿಂನಂಘ್ರಿಯುಗಳವ | ನೋಲಗಿಸುವನಲಾನಿರಂತರವೆಂದನಾಮುನಿಪ ॥೧೬॥ ಧಾರುಣೀಪತಿಗಳಲಿಶೌರ್ಯೋ |
ದಾರರಾರೆಲೆತಂದೆಸಂಗರ | ಧೀರಧೀರರುಕೃಷ್ಣವಿಕ್ರಮದಾವದಗ್ಧರಲೆ ॥ ಭೂರಿಭೂಭಾರಾಘಕಾಲಸಂ | ಹಾರರಲ್ಲೆಕೃಷ್ಣಪ
ದಯುಗ | ಚಾರುಲೀಲಾಚರಿತರೆಂದನುಮುನಿಮಹೀಪತಿಗೆ ॥೧೭॥ ಓರ್ವನೇಭೂಪರೊಳುವಿಕ್ರಮ | ಗರ್ವಿತನುಸಾಲ್ವಾವ
ನೀಪತಿ | ದುರ್ವಿನೀತರದೇವನೀಭೂತಳದರಾಯರಿಗೆ ॥ ಸರ್ವರಿಗೆಬಲುಗೈಸಮುದ್ಧಚ | ತುರ್ಬಲಾನ್ವಿತನುರುಕೃಪಾನಿಧಿ |
ಶರ್ವನನುಭಜಿಸಿದನುಕಾಮಿಸಿಯಾದವರಜಯವ ॥೧೮॥ ಬ್ರಹ್ಮದತ್ತತನೂಜನತಿದು | ಷ್ಕರ್ಮರತನಾಹಂಸಡಿಬಿಕರ | ತಾನು
ನಾತ್ಮಭ್ರಾತೃಪಿತೃಮಣದಲಿಕಳವಳಿಸಿ ॥ ಬ್ರಹ್ಮಮೂರುತಿಕೃಷ್ಣನಲ್ಲಿವಿ | ಕರ್ಮನನುನಿಶ್ಚೈಸಿನಾರಣ | ಕರ್ಮನನುತೊಡಗಿ
ದನುಯಾದವವೆನಿಸಲೀಜಗವ ॥೧೯॥ ಮಾಸಹಂನೆರಡಾಯ್ತುಮಾಯು | ಗ್ರಾಸದಲಿದುರ್ಮತಿಗೊಲಿದುಕೈ | ಲಾಸವಾಸಿಮ
ಹೇಶನಿತ್ತನುವರವನವನಿಪಗೆ ॥ ಭಾಸುರವೆನಿಪ್ಪೊಂದುಸೌಭವ | ಹಾಸನವನೀಯಾದವಾನ್ವಯ | ಭೀಷಣವೆನಿಪ್ಪದನುಕಾಮ
ಗವೆನಿಪಪುಷ್ಕರವ ॥೨೦॥ ತಕ್ಕವರವನುಸೆರೆಪಡೆದುಹುಡಿ | ಮುಕ್ಕನೆದ್ದನುಹರನಡಿಗೆಮೈ | ಯಿಕ್ಕಿವಿಶಾಲವಶೌರ್ಯಸಾಹಸ
ದುಬ್ಬಿನಲಿನಲಿದು ॥ ಸೊಕ್ಕಿಯಾದವರೊಡನೆಸಂಗ್ರಾ | ಮಕ್ಕೆಜೋಡಿಸಿಬಲವನವನೀ | ಚಕ್ರದಲಿಸಂನದ್ಧನಾಗಿಹನೆಂದನಾಮು
ನಿಪ ॥೨೧॥ ಎಂದಡಾಯಮಸೂನುಮನದಲಿ | ನೊಂದುಶಂಕಿಸಿನೋಡಿದನುಗೋ | ವಿಂದನಾನನಕಮಲವನುಕಡೆಗಣ್ಣಲ
ದನರಿದು ॥ ಮಂದಹಾಸದಲಸುರರಿಪುಯಮ | ನಂದನನಮೊಗನೋಡಿತಪ್ಪೇ | ನೆಂದುಬಗೆಯದೆಸುಂಮನಿದ್ದನುಲೆಕ್ಕಿಸದೆಖಳನ ॥
ಈತೆರದಲಿರುವರುಮಹಾತ್ಮರು | ನೀತಿಯಿಂದವಿಪತ್ತಿನಲಿನಿ | ರ್ಭೀತರಾಗಿಹುದಧಿಕತರದುಃಖದಲಿಲೆಕ್ಕಿಸದೆ ॥ ಪ್ರೀತಿಯನುಮಾ
ಡದೆಮಹಾವಿ | ಖ್ಯಾತವಿಷಯಸುಖೋಪಭೋಗದ | ರೀತಿಸಂಪತ್ತಿನಲಿಸನುಮತಿಯಹುದುಕೇಳೆಂದ ॥೨೨॥ ಇಂತುಭಕ್ತ
ಪ್ರೇಮಕರುಣಾ | ಕ್ರಾಂತಮತಿಸುರಮುನಿನಿಕರಸಂ | ಚಿಂತಿತಾಂಘ್ರಿಸರೋಜನಿರೆಕುಂತೀಕುಮಾರಕರ ॥ ಅಂತಿಕದಲಾಸಾ
ಲ್ವನತ್ತಲು | ಚಿಂತಿಸಿದನಾಚೈದ್ಯಮಾಗಧ | ರಂತ್ಯವನುವರರಾಜಸೂಯದಸಂಪದವಕೇಳಿ ॥೨೩॥ ಯಾದವರುಪಾಂಡ
ವರವಿಭವ | ಕ್ಕಾದಿಭೂತರುರಾಜಸೂಯಮ | ಹೋದಯಕೆಮೇಣಾರುಪಾಂಡುಕುಮಾರರಾಗಿಸಲು ॥ ತೀದುದಿಂನೀನವರಶಿರಿ
ಮಂ | ಸಾದುದಾಗಲಿಕೃಷ್ಣನಸುವನು | ಸೇದುವೆನುಬಳಿಕೆನುತನಿಶ್ಚೈಸಿದನುಮನದೊಳಗೆ ॥೨೪॥ ಕೇಳುಖಳನಾಕೃಷ್ಣನಿಲ್ಲ
ದ | ವೇಳೆಯಲಿಗೆಲಬಹುದೆನುತ್ತವೆ | ಧಾಳಿಯಿಟ್ಟನುಸಾಲ್ವನೃಪನಾದ್ವಾರಕಾಪುರಕೆ ॥ ಸಾಲತೋರಣನಿಕರವನುವನ | ಜಾಲ
ವನುಮುರಿಮುರಿದುಪುರವನು | ಧೂಳಿಪಟವನುಮಾಡಿದನುನಿಮಿಷಾರ್ಧಮಾತ್ರದಲಿ ॥೨೫॥ ಕಂಡುಸಾಲ್ವನೃಪಾಲಸೇನಾ |
ಮಂಡಲವನವಸಾನದಂದಿನ | ಖಂಡಸಾಗರದಂತೆಮೊಳಗುವಸುಭಟನಿಕರದಲಿ ॥ ಗಂಡುಗೆಡುವಭಟಾಳಿಯನುಗೊ | ಳ್ಮಂಡಿ
ಗೊಂಚಿಪಿನಕಫಯಕರ | ಪುಂಡರೀಕವಕ್ತ್ರೋರಿಶಂಬರವೈರಿಮಾರಾಂತ ॥೨೬॥ ಭಾರಿಸಿದುಪೆಡಬಲಕೆಸಾಂಬಾ | ಕ್ರೂರಸಾ
ತ್ಯಕಿಭಾನುವಿಂದಸು | ವೀರಗದಕೃತವರ್ಮಪೃಥುವಿಪೃಥುಪ್ರವೀರಕರು ॥ ಚಾರುದೇಷ್ಣಸುಧಾಮವರಶುಕ | ಸಾರಣಾಕ್ರ

ರುವೀರರಸೆದಲಿ । ಮೇರೆಯನುಮೀರಿಡರುಗಜರಥತುರಗನಿಕರದಲಿ ॥ ೨೮ ॥ ಕವಿಸಿದನುಖಳನಭ್ರದಲಿನಿಂ । ದಿವರಮೇಲೆ
ಮಹಾಸ್ತ್ರಶಸ್ತ್ರದ । ನಿವಹಧಾರಾವೃಷ್ಟಿಯನುತರುಗಿರಿಶಿಲಾದಿಕವ ॥ ಪವನವೇಗೋದ್ಧೂತಧೂಳೀ । ನಿವಹವೇಷ್ಟಿತವಾಯ್ತು
ದಶದಿಗು । ವಿವರವೆರಗಿದವಡಿಗಡಿಗೆಸಿಡಿಲುಗಳುಧರೆಯೊಳಿಯೆ ॥ ೨೯ ॥ ಕತಗಿಕಾದುವಖಿಳನವಮಾಯೆಯ । ಕಡುನಿರೋಧದ
ಲಖಿಳಜನಕಂ । ಗೆಡಲುಕಾಣುತ್ತೆಲ್ಲರಿಗೆಪ್ರದ್ಯುಮ್ನನಭಯ ವನು ॥ ಕೊಡುತರಥದಲಿನಿಂದುಚಾಪವ । ತುಡುಕಿಸಾಲ್ವನಮೇಲೆ
ಬಾಣದ । ಕಡಲಕವಿಸಿದನರಿಭಟನಶಸ್ತ್ರಾಸ್ತ್ರವನುಕಡಿದು ॥ ೩೦ ॥ ತೀದುದಾತನಮಾಯೆಯುಬ್ಬಟೆ । ಯಾದವೋತ್ತಮಸಾ
ಲ್ವಭಟರಿಗೆ । ಬೀದಿಗಾಳಗವಾಯ್ತು ಹೊಯ್ದಾಡಿದರು ತಂಮೊಳಗೆ ॥ ಆದಿಯಲಿದೇವಾಸುರರುಸಂ । ಪಾದಿಸಿದರಣದಂತೆಭೀಕರ ।
ಮಾದುದುಭಯದುರಬಲದಸಂಗ್ರಾಮವೆದುಮಾಳಿಗಕೆ ॥ ೩೧ ॥ ಶಂಬರಾರಿಯುನಾಪ್ಯನೂನೆಂ । ದೆಂಬಸಾಲ್ವಾಮಾತ್ಯನರಿಭಟ ।
ನಂಬಿನೆಲಿಕಡುನೊಂದುಬೊಬ್ಬಿರಿದಾರ್ದುಯದುವರನ ॥ ಬೆಂಬಿಡದೆಗದೆಯಿಂದವಕ್ಷದ । ತುಂಬನೆರೆಗಲುಮರಡನಿತ್ತಣ । ಹಂಬಲ
ನುಪ್ರದ್ಯುಮ್ನನುರುತರಗದೆಯಘಾಯದಲಿ ॥ ೩೨ ॥ ಕಾಣುತೊಡೆಯನಮೂರ್ಛೆಯನುತ । ತ್ರಾಣರಕ್ಷೆಗೆದಾರುಕಾತ್ಮಜ । ನೂ
ಣಯವನೀಕ್ಷಿಸಿಪರಥವನುಹಿಂದುಮುಂದಾಗಿ ॥ ಜಾಣತನದಲಿತೆಗವುತಿರೆಸ । ತ್ರಾಣವಾದನುವೀರಸಮರ । ಕ್ಷೋಣಿಯಿಂದಪ
ಗಮಿಸುವನನಿಂತೆಂದನುರೆಮುಳಿದು ॥ ೩೩ ॥ ಅರುಕಲಿಸಿದರೆಲಪ್ರಸಂಗರ । ಭೀರುತನವನುನಿನಗೆಯಾದವ । ವೀರರಲಿಮುನ್ನಿ
ಲ್ಲದಪಯಶವಾಯ್ತು ತನಗಿಂದು ॥ ಸೇರಲಾಗದೆಮರಣತಂನಶ । ರೀರವಿದುಶಾಶ್ವತವೆಮಾಡಿದ । ಘೋರದುಷ್ಕೃತಕೇನನೆಂಬೆ
ನೆನುತ್ತಬಿಸುಸುಯ್ದ ॥ ೩೪ ॥ ಪಾತಕಿಯೆನಾನೇನನೆಂಬೆನು । ತಾತನೊಡನಾಹವದಲಧಿಕ । ವ್ರಾತವನುನೆರೆಗೆಲಿದೆನೆಂಬೆನೊಶ
ತೃಕರಹತಿಗೆ ॥ ಸೋತೆನೆಂಬೆನೊವೀರವರಸಂ । ಜಾತರೊಳುತನ್ನಂತ್ರೆದುರ್ಮತಿ । ಸೂತಕೃತಕಲುಷಾತ್ಮರಾರೆಂದಳಲಿದನು
ವೀರ ॥ ೩೫ ॥ ಇಲ್ಲತಂನಲಿಕೊರತೆಧರ್ಮವ । ಬಲ್ಲೆನಾಹವನೊಳಗೆವೀರರ । ಬಲ್ಲಹನೆಬಸವಳಿದರಧಿಕರುರಕ್ಷೆಣೀಯುರ
ಲ ॥ ಬಲ್ಲಸಾರಥಿಗಳಿಗೆಕಲಿತನ । ವುಳ್ಳಡಿದುನೋಡೆನುತರಿಪುಭಟ । ನಲ್ಲಿಗಭಿಮುಖನಾಗಿಬಿಟ್ಟನುಸೂತನಾರಥವ ॥ ೩೬ ॥
ಬರವಕಾಣುತ್ತಾದ್ಯುಮಾನ । ಬ್ಬರಿಸಿಮೂರಂಬಿನಲಿಮನುಮಥ । ನುರವನೆಚ್ಚನುಮೆಚ್ಚಿದನುಯದುವೀರನರಿಭಟನ ॥ ಭ
ರವಸಕೆಬಳಿಕವನರಥವನು । ತುರಗಕೇತುಶರಾಸನಂಗಳ । ನುರುಳಿಗಡಿದನುನೋಯಿಸಿದನಾತನಶರೌಘದಲಿ ॥ ೩೭ ॥
ಮೊಳಗಿದನುಶಂಖವನುಪರಬಲ । ಜಲಧಿಯನುಬಾಣೌಘವಡಬಾ । ನಲನವದನಕೆತುತ್ತುಮಾಡಿದನೆಂದುನಿಮಿಷದಲಿ ॥ ಬಳಿ
ಕಸಾತ್ಯಕಿಸಾಂಬಮೊದಲಾ । ದಲಘುಭುಜಬಲರಸ್ತ್ರಶಸ್ತ್ರ । ವಳಿಯಬಿರುಘಾಳಿಯಲಿತೂರಿದರರಿಭಟಾವಳಿಯ ॥ ೩೮ ॥
ಘಟ್ಟಗೆಡದವ್ರುಕಳನೊಳನೆಖಿಳ । ರಟ್ಟೆಗಳುಕಡಿಕಡಿದುಕಾಲನ । ಪಟ್ಟಣವತುಂಬಿದರುತುತುಕಿದರಮರನಾರಿಯರ ॥ ಮುಟ್ಟ
ಮುಂದಲೆಗಳನುಮಿಗೆಕಂ । ಗೆಟ್ಟುಸಾಲ್ವಬಲೌಘಭಯದಲಿ । ಬಿಟ್ಟುಕೊಂಡುದುದೆಸೆದೆಸೆಗೆಜೀವಾಭಿಲಾಷೆಯಲಿ ॥ ೩೯ ॥ ಕೆಗ
ದುನಿಂದನುಸಾಲ್ವನವನೊಗು । ಮಿಗೆಯಘನವಿಕ್ರಮದಶೌರ್ಯದ । ಸೆಗಳಿಕೆಗೆತೆಗದೋಡಿದುದುಪರಿವಾರವೇಣ್ವಸೆಗೆ ॥ ಜಗು
ಳಿದರುಪಟುಭಟರುಖಳರನು । ತಗುಳಿಮಿಗೆಬೆಂಬೊತ್ತಿಕಾಲನ । ನಗರಿಯನುಹೊಗಿಸಿದರುಕಾಪುಮಾದಿಗಳುಪರಬಲವ ॥ ೪೦ ॥ ಮ
ತ್ತೆಸಾಂಬನುಸೆದದುಸಾಲ್ವಾ । ಮಾತ್ಯನನುಕಾಲಂಗೆಸಲೆಕೈ । ವರ್ತಿಶಿದನಡೆವಟ್ಟೆಯಲಿತಕ್ಷೇಮಧೂರ್ತಿಯನು ॥ ಕುತ್ತಿಕೆಡಹಿ
ದನಾವಿವಿಧ್ವನ । ನತ್ತಲಾಪ್ರದ್ಯುಮ್ನನೊಂದೆಸೆ । ಗತ್ಯಧಿಕರೋಷದಲಿಬಹುಯೋಜನವಬೆಂಬತ್ತಿ ॥ ೪೧ ॥ ಕೆರಳಿದನುಸಾಲ್ವಾವ
ನೀಶನ । ಭರವಸಿಕೆಬಯಲಾಯ್ತು ಸುಭಟೋ । ತ್ತರದಶೌರ್ಯಾರಣ್ಯಯದುವರವಿಕ್ರಮಾಗ್ನಿಯಲಿ ॥ ಮರಳಿದರುಯದುವೀರ
ರಾನಿಜ । ಪುರಕೆನಿತ್ಯಾತ್ಮಕನವರ್ಗವ । ಪರಿಭವಿಸಲವರಳವೆಭೂಪೋತ್ತಮನೆಕೇಳೆಂದ ॥ … … ॥ ೪೨ ॥

ಅಂತು ಸಂಧಿ ೭೨ಕ್ಕಂ ಪದನು ೩೬೭೨ಕ್ಕಂ ಮಂಗಳಮಸ್ತು

ಎಂಭತ್ತೆರಡನೆಯ ಸಂಧಿ.

—c() ಸಾಲ್ವ ಸಂಹಾರ ಕಥೆ. ()c—

ಸೂಚನೆ ॥ ವೀರಸ್ಯೈತ್ಯಾಭ್ಯುದಯಘನಕಾಂ । ತಾರದಾವಾನಲನುಕೊಂದನು । ದಾರಭುಜಬಲ
ಸಾಲ್ವನನುಸಂಗ್ರಾಮದಲಿಶೌರಿ ॥ … … …

ಪದನು ॥ ಅರಸಕೇಳಾಪಾಂಡುನಂದನ । ರುರೆತರಸ್ನೇಹಾನುಗುಣಿತ್ರೋ । ತೃರುಷಭಕ್ತಿಪ್ರಣಯಪಾಶಪರೀತನೆಂದೆನಿ
ಸಿ ॥ ಇರಲುಶಕ್ರಪ್ರಸ್ಥದಲಿಮುರ । ಹರನನಗಲಿಸುವಂತೆಮಿಗೆಮೋ । ಹರಿಸಿತವಶಕುನಂಗಳವನಿಯಲಭ್ರಮಾರ್ಗದಲಿ ॥ ೧ ॥
ಬಳಿಕಕಳುಹಿಸಿಕೊಂಡುಕರುಣಾ । ಜಲಧಿಬಂದನುಪರಮವಿರಹಾ । ಕುಳರನಪ್ಪಿಸುಹೂರದಲಿಬೀಳ್ಕೊಂಡುಬಾಂಧವರ ॥
ಮೊಳಗುವುರುನಿಸ್ಸಾಳಭೇರಿಯ । ಕಳಕಳಡವಂದಿಗಳಚಾತು । ರ್ಬಲದಬಹಳತೆಯಸೆಯಲಂದಾದ್ವಾರಕಾಪುರಕೆ ॥ ೨ ॥

ಮುರಿದಬಹಳಾಟ್ಟಾಳಪುರಗೋ | ಪುರದಚೈತ್ಯದ್ರುಮನಿಕಾಯದ | ವರಮಹೋದ್ಯಾನದಪತಾಕಾತೋರಣಾವಳಿಯ || ಜರಿದಮಣಿಮಯಭಿತ್ತಿಗಳಸಾ | ಗರದಪೂರಿತದೀರ್ಘಿಕಾಪ್ರ | ಸ್ತರದನಿಜಪುರವಿಭವವನುನೋಡುತ್ತನಡೆತಂದ || ೩ || ಕರಮುಕ್ತವರ್ಮನನಿದೇನೆನ | ಲೊರದನವನಚ್ಯುತನ ಚರಣಾಂ | ಬುರುಹದಲಿ ತಲೆವಾಗಿಸಾಲ್ವನ ದುಶ್ಚರಿತ್ರವನು || ಮರುಳನನುಕೊಂದಲ್ಲಿದಿಂನೀ | ಪುರವಹೊಗೆನೆಂದಸುರರಿಪುಸಂ | ಗರಕೆಸಾಲ್ವನೃಪಾಲನನುಬೆಂಬೊತ್ತಿದನುಬಿಡದೆ || ೪ || ಕತಲಮಧ್ಯದಲಭ್ರಮಾರ್ಗವ | ನಡರಿಸೌಭದಲಖಿಳಸುಭಟರ | ಗಣಣದಲಿಖಳನಿರಲು ಹೊಗಳುವಸೂತಮಾಗಧರ || ಗಡಬಡಿಮಘನರವದಲಾಜಗ | ದೊಡೆಯನೀಕ್ಷಿಸುತೆಲವೆಲವೊಕುಲ | ಗೆಡಿಕನಿಲುನಿಲ್ಲೆನುತಹಳಚಿದನಸ್ತ್ರಪರುಷದಲಿ || ೫ || ಕಂಡನಾಖಳನಸುರಹರನು | ದ್ದಂಡತೀವ್ರಾಗಮನವನುಖತಿ | ಗೊಂಡನೆಲ್ಲಿಗೆಗಮನದುರ್ಭರಕಾರ್ಯವೇನೆನುತ || ಕೊಂಡುಬಡೆನೀಸೂತನಿಪನನು | ದಿಂಡುಗರಿದಡೆಸೆರೆಯೆನುತದೋ | ರ್ದಂಡದಲಿತಿರುಹಿಟ್ಟನುರುಶಕ್ತಿಯಲಿದಾರುಕನ || ೬ || ಭುಗಿಭುಗಿಲುಭುಗಿಲೆಂದುಕಿಡಿಗಳ | ನುಗುಳುತಧಿಕಜ್ವಾಲೆಗಳಲಿಳೆ | ಹೊಗೆಯದಶದಿಕ್ಕುಗಳನಾವರಿಸುತ್ತನಿಜಶಕ್ತಿ || ಗಗನದಲಿಬರುತಿರೆಲುಮುರರಿಪು | ನಗುತಬಾಣಂಗಳಲಿಹಿಂದಕೆ | ತೆಗಸಿದನುಶತಖಂಡವೆನಲದುಭೂತಮಹಾಯುಧವ || ೭ || ಮೀರುವರಿಭಟನುಮುಗುಳ್ಕಿಡಿ | ನಾರರಲಿಸೌಭವನುಹರಿಯಡೆ | ಯಾರಬೆಚ್ಚನುಕೊಚ್ಚಿದನುಖಳನೆಡಬಲದಭಟರ || ಓರುಗುಡಿಸಿತುಸಮರಸಂಭ್ರಮ | ಸೇರೆಯೋದುದುಶೌರ್ಯರಸಕಾ | ಹೇರಿದುದುಕೃಷ್ಣಾಸ್ತ್ರವನ್ನಿಯಲಾದುರಾತ್ಮಕನ || ೮ || ಅಕ್ಷಿಗಳುಕಿಡಿಗೆದರಿಜಗವನು | ಭಕ್ಷಿಸುವವೋಲ್ಕನಲಿಖಳಶರ | ಲಕ್ಷದಲಿಶಾಶ್ವತನಹಯರಥಸೂತಸಂತತಿಯ || ಪಕ್ಷಿರಾಜಧ್ವಜನನಾಕವ | ಲಾಕ್ಷನನುಮುಸುಕಿದನುನಿಮಿಷನಿ | ರೀಕ್ಷಿಸುವನಾಯಿತಸ್ತ್ರಜಲಧಿಯಲಖಿಳಯದುಸೇನೆ || ೯ || ಬಿಡದೆಖಳನಬ್ಬರಿಸೆಮುರಹರ | ನೆಡದಕೈಯಲಿಮೆರೆವಶಾರ್ಙವ | ಕೆಡೆಯಬೆಚ್ಚನುತೀವ್ರಶರನಿಕರದಲಿಕಡುಮುಳಿದು || ಪೊಡವಿಪತಿಕೇಳಾವುದೋಜಗ | ದೊಡೆಯನಂತಭುಜಾವವವನಿಗೆ | ಕೆಡೆದುದುನ್ನತಶಾರ್ಙಧನುಬೆರಗಾಯ್ತುಜನನಿವಹ || ೧೦ || ಶ್ರೀಯರಸನಂಗೈಯ್ಯಶಾರ್ಙವ | ಹಾಯುಧದಪತನದಲಿಬಿಟ್ಟುದು | ಬಾಯನಮರಕದಂಬಕಳವಳಿಸಿದರುದಿಗಧಿಪರು || ಹಾಯೆನುತಹಂಮ್ಮೈಸಿದುದುಯದು | ರಾಯಬಲಭೀತಿಯಲಿವೈರಿನಿ | ಕಾಯದಲಿಸಂಮಾನತಳೆತುದುನಿಮಿಷಮಾತ್ರದಲಿ ||೧೧|| ಅಟ್ಟಹಾಸವಮಾಡಿನುಡಿದನು | ದುಷ್ಟನೀಮಹುಹಿದೆಯಲೆಂನೊಡ | ಹುಟ್ಟದರನಾಹಂಸಡಿಬಿಕರನಂನೆತಂಡೆಯನು || ಮುಟ್ಟದಿಹುದೇಪರರವಧೆಕೈ | ಯಿಟ್ಟತಿದೆಲಾಚೈದ್ಯನನುಬಲಿ | ಗೊಟ್ಟತಂನಯಸಖನನೆಂದಬ್ಬರಿಸಿದನುಸಾಲ್ವ || ೧೨ || ಮಾಗಧನುಸಖತನಗೆಭಿಕ್ಷುಕ | ನಾಗಿಕೊಲಿಸಿದೆಪಾಪಿಮರವೆಯ | ಲಾಗಲದಕೇನಾಯ್ತುಸಾಯರೆವೀರರಾದವರು || ಹೋಗಲೀವೆನೆಕೃಷ್ಣತೆಗವೆನು | ಮೂಗಿನಲಿತಂನವರಹರಿಬವ | ಬೇಗವಾಡದಿರೆಂದೆನುತಮೂದಲಿಸಿದನುಸಾಲ್ವ ||೧೩|| ಹಂದೆನೀನಿದಿರಾಗಿಧುರದಲಿ | ನಿಂದೆಯಾದರೆಬಳಿಕಕಾಲನ | ಮಂದಿರವನೀಕ್ಷಣವೆತೋರುವೆನಂಜದೆಂನೊಡನೆ || ಮಂದಮತಿನಿಲುನಿಲ್ಲೆನುತಕಿಡಿ | ಲಂದದಲಿಗರ್ಜಿಸಲುನಗುತಮು | ಕುಂದನಾಶಾರ್ಙವನುಕೊಂಡಿಂತೆಂದನವರೊಡನೆ || ೧೪ || ತೋರಿಸಾದರೆನಿಂನಸತ್ವದ | ಸಾರವನುತಂನಿದಿರಲೇಪೋ | ವೀರರಿಗೆಬಲುಬಾಯಗಾಳಗವಿದುವೆಭಂಡತನ || ಅರುಭಟೆಯಂತಿರಲೆನುತದೈ | ತ್ಯಾರಿಜರದರಿಭಟನಕೊರಳಿಗೆ | ಕೂರಲಗಕೊಟ್ಟಿಗಿದನಾಕರ್ಣಾಂತವೆನೆಸೆಳದು || ೧೫ || ಏನಸೆಂಬೆನುತೀವ್ರಶರಸಂ | ಧಾನದಿಂದವೆಮುಂನವಂತ | ರ್ಧಾನಗತಿಯಲಿನಿಂದನಾಖಳನಂದುಪುರಸಹಿತ || ಏನಿದೇನಾಯ್ತೆನುತನಿಜಕ | ರ್ಣಾನುಗತಬಾಣದಲಿಕಂಡನು | ದಾನವರನಾಚೆಯಲಿಬೆಂಭಾಗದಲಿಗಿರಿನಿಭರ || ತಿರುಗಿಕಂಡನುತೀವ್ರಬಾಣೋ | ತ್ಕರಗಳನುದಾನವರಕೊಬ್ಬಿದ | ಕೊರಳಕದಳೀವನಕೆಜಗದಾಧಾರನುರೆಮುನಿದು || ಉರುಳಿದವುಶರಹತಿಗಳಲಿಸಾ | ಗರದೊಳಗೆದಾನವರಶಿರಗಳು | ಹೊರಳಿದವುಘನತರಕಬಂಧದನಿಕರದೊಡ್ಡಿನಲಿ || ೧೭ || ಕೆರಳಿನಿಜಬಲಭಂಗವನುಕಂ | ಡುರುತರಕ್ರೋಧದಲಿಖಳನ | ಬ್ಬರಿಸಿಬೆಂನಲಿಮತ್ತೆಸುರಿದನುಸರಳಬಲುಮಳೆಯ || ಉರುಪರಶ್ವಧಶೂಲಪಟ್ಟಸ | ಪರಿಘಮುಸಲಮುಸುಂಡಿಗಳುಮೋ | ಹರಿಸಿದವುಯಾದವಮಹಾಭಟನಿಕರದೊಡ್ಡಿನಲಿ || ೧೮ || ಆರುಬಂಣಿಸಬಹುದುಸಾಲ್ವನ | ಘೋರಸಂಗ್ರಾಮವನುನೊಂದನು | ದಾರುಕನುಮಾಶಿವಡದುದಶ್ವಂಗಳುರಥಾಗ್ರದಲಿ || ಕಾರಮಳೆಗರವಂತೆಬಾಣಾ | ಸಾರಧಾರಾವೃಷ್ಟಿಯಲಿಯದು | ವೀರಬಲಕಾನೆಟ್ಟದೇನೆಂಬೆನುಮಹಾದ್ಭುತವ || ೧೯ || ತಿರುಗಿನಿಂದನುಮತ್ತೆಮುರರಿಪು | ಪರಬಲಾರ್ಜಿತನಿಜಬಲಾಬ್ಧಿಯ | ಪರಿಭವವನೀಕ್ಷಿಸುತಕೋಪಾಟೋಪದಲಿಜರದು || ತಿರುವನೊದರಿಸಿತೀವ್ರಶಸ್ತ್ರೋ | ತ್ಕರದಬಿರುಘಾಳಿಯನುಬೀಸಿದ | ನರಿಭಟನಬಾಹಾಘಮೇಘವ್ರಾತದಲಿಬಿಡದೆ ||೨೦|| ಒಂದುನೂರೈನೂರುಸಾವಿರ | ಮುಂದೆನಮೆಯಲುಲಕ್ಷಕೋಟಿಗ | ಳೆಂದವಡದಭ್ರವನುಹೊಳೆದವಂಬುಗಳುಕವಿದು || ಸಂದಣಿಸಿದವುಸಾಲ್ವನೊಡಲಲಿ | ಸಂದಹಯರಥಸೂತಸೇನಾ | ವೃಂದದಲಿದೆಸೆಗಳಲಿಬಾಣವ್ರಾತಮಯವಾಗೆ || ೨೧ || ಬೆಳದಹೆಬ್ಬಳವನಕೆಕಾಲಾ | ನಳನುಕವಿದಂದದಲಿಮುರಹರ | ನಲಘುಬಾಣವ್ರಾತಕವಿದುದುಸಾಲ್ವನೆಡಬಲದ || ಖಳನಿಕರಬಾಯ್ಬಿರದುಬೀಳುವ | ತಲೆಗಳಲಿದೆಸೆದೆಸೆಗೆಭೀತಿಯ |

ಬಲುಹುಮಿರದುದುನೋಳ್ಪಸುರಖೇಚರರಕಂಗಳಿಗೆ ||೨೨|| ಕುಲಗಿರಿಯುಮೋಹರಕೆಕವಿದುದೊ | ಕುಲಿಶಜಯುವೆಂಬಂತೆಸಾ
ಲ್ವನ | ಬಲವಕವಿಕವಿದಟ್ಟಕಡಿದಟ್ಟದವುಖಳನೊಳಗೆ || ನಳಿನನಾಭನತೀವ್ರಬಾಣಾ | ವಳಿಗಳಹಮುಹುವಿುಕೆಯುಲರಿಭಟ |
ರೊಳಗೆಸುಳಿದಾಡಿದವುಕೋಡಿದವಹಿತಬಲದಸುವ ||೨೩|| ತೆಬ್ಬನೊದರಿಸುತಡಿಗಡಿಗೆಹರಿ | ಯುಬ್ಬರಿಸುತುರುಸಿಂಹರವದಲಿ|
ಸರ್ಬಸುರರಿಗೆಪರಮಸಂತೋಷವನುಮಾಡುತ್ತ || ಪರ್ಬಶಶಿಯಂತೆಸಪಶಂಖವ | ನುಬ್ಬಿಸುತಪರಬಲಕೆಭೀತಿಯ | ಹಬ್ಬುಗೆ
ಯುಮಾಡಿದನುಮುರದನುಭುರಿಭುಜಬಲವ ||೨೪|| ಹರಿಯುಹರಿವರಶಾರ್ಙರವದು | ರ್ಧರಮಹಾಶಂಖಘೋಷರವದಲಿ | ಬಿರಿ
ದುದಾಖಳರೆದೆಕರತೋರಶ್ರವಣವೇದನೆಗೆ || ಮರಳಿನಿಂದನುಯೋಜನಾರ್ಧಾಂ | ತರದಲಧಿಕಕ್ರೋಧದಲಿಸಂ | ಗರಕೆರವಿಯಂ
ತೆಸನಗಗನದಸೌಭಮಧ್ಯದಲಿ ||೨೫|| ಕವಿಸಿದನುಮಾಯೆಯನುಮೋಹಿಸ | ಲವಿರಳಾತ್ಮಜ್ಞಾನನಿಧಿಯನು | ತವಕದಲಿನಿಜ
ಯೋಗಮಾಯಾಧೀಶ್ವರನಮೇಲೆ || ಜವವಳಿವುತಕ್ರೂರನುಗ್ರಾ | ಹವಕೆಬಂದನುಚೇತಬೇಡಾ | ಹವವಿದಾರಿಗೆಹಿತವೆನುತ
ಬಿನ್ನವಿಸಿದನುಹದನ ||೨೬|| ಆಹುಕನನಿಕ್ಕಿದನುಹಿಡಿದದು | ಬೇಹವಸುದೇವನನುಬಹುವಿಧ | ವಾಹನಂಗಳುಶಿಲುಕಿದವುಗಜ
ವಾಜಿರಥನಿಕರ | ಆಹವದಲಿಂನೇನುಫಲನಿ | ರ್ವಾಹಿಸಿತುಪುರಲಕ್ಷ್ಮಿಪರರಿಗೆ|ಮೋಹವುಳ್ಳರೆಮರಳಿಮಾತಿಂಗಿಲ್ಲತೆರಹೆಂಡ|೨೭||
ಎಂದೆನುತ್ತಿರಲಸುರವೈರಿಯು | ಮುಂದೆಬಿದ್ದನುಬಿಗಿದಹೆಡಗುಡಿ | ಯಿಂದಬಳಲುತಬಿಟ್ಟಮಂಡೆಯುಲಂದುವಸುದೇವ || ನಿಂದುನ್ಯೆ
ವೆರಗಾಗಿದೇವಮು | ಕುಂದನೀಕ್ಷಿಸುತಿರಲುದಾನವ | ವೃಂದಕವಿದುದುಶೂಲದಿಂದಿರಿವುತ್ತಯದುವರನ ||೨೮|| ಅಲಿಸುತಮು
ರವೈರಿಮಾನುಷ | ಲೀಲೆಯಲಿಮತಿವಿಳುಹಿಕರಣ | ವ್ಯಾಳವಿಷಮೂರ್ಛೆಯಲಿವಿಹ್ವಲನಾಗುತಡಿಗಡಿಗೆ || ಹೇಳಿದೇನೈತಂದೆಮು
